UNIVERSAL
LIBRARY
OU_200952
UNIVERSAL
LIBRARY

**OSMANIA UNIVERSITY LIBRARY**

Call No. K 294.4/594 B Accession No. K 5291

Author [illegible]

Title [illegible] Vol. I. 1946

This book should be returned on or before the date last marked below.

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಶ್ರೀ ಶಂಕರಾಚಾರ್ಯರವರ ಗ್ರಂಥಗಳು

# ಶ್ರೀಮದ್ಭಗವದ್ಗೀತಾಭಾಷ್ಯ

## ಸಂಪುಟ ೧

(೧—೮ ಅಧ್ಯಾಯಗಳು)

ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ

ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ
೧೯೪೬

ಕರ್ನಾಟಕ ಸಾಹಿತ್ಯ ಮಂದಿರ,
ಧಾರವಾಡ.

# ಪ್ರಕಾಶಕರ ಬಿನ್ನಹ

ಶ್ರೀ ಶಂಕರಾಚಾರ್ಯರವರ ಅಮೋಘವಾದ ಕೃತಿಗಳನ್ನೆಲ್ಲ ಕನ್ನಡಿಸಿ ಮಹಾಜನರ ಮುಂದೆ ಇಡುವ ಸುಯೋಗವು ಕಾರ್ಯಾಲಯಕ್ಕೆ ಇದೀಗ ಲಭಿಸಿರುತ್ತದೆ. ನಮ್ಮನ್ನಾಳುವ ಶ್ರೀಮತ್ಕರ್ಣಾಟಕಸಿಂಹಾಸನಾಧೀಶ್ವರರಾದ ಶ್ರೀ ಜಯಚಾಮ **ರಾಜೇಂದ್ರ ಒಡೆಯರ್ ಬಹದ್ದೂರ್**, ಜಿ.ಸಿ.ಬಿ., ಜಿ.ಸಿ.ಎಸ್.ಐ., ಮಹಾಸ್ವಾಮಿಯವರು ಜಗತ್ಪ್ರಸಿದ್ಧರಾದ ಆಚಾರ್ಯರವರ ಗ್ರಂಥಗಳೆಲ್ಲವನ್ನೂ ಪರಿಶೋಧಿಸಿ ಸಮೂಲವಾಗಿ ಕನ್ನಡಿಸಿ ಪ್ರಕಟಿಸಬೇಕೆಂದು ಕೊಡಿಸಿರುವ ಉದಾರಾಜ್ಞೆಯನ್ನು ಶಿರಸಾವಹಿಸಿ ಈ ಮಹಾಕಾರ್ಯವನ್ನು ನಾವು ಕೈಗೊಂಡಿರುತ್ತೇವೆ.

ಇದುವರೆಗೆ ನಾವು ಪ್ರಕಟಿಸಿದ್ದ ಕೆಲವು ಗ್ರಂಥಗಳನ್ನು ಈ ಸಲ ಸಂಪೂರ್ಣವಾಗಿ ಪರಿಷ್ಕರಿಸಿ ಸಂಸ್ಕೃತಮೂಲ, ಕನ್ನಡ ಅನುವಾದ, ಮುಖ್ಯವಿಷಯಗಳನ್ನು ವಿಶದೀಕರಿಸುವ ಟಿಪ್ಪಣಿಗಳು, ಆಚಾರ್ಯರ ಮಿಕ್ಕ ಗ್ರಂಥಗಳಲ್ಲಿರುವ ವಿಷಯವಿವೇಚನೆಯ ಹೋಲಿಕೆಯನ್ನು ಸುಲಭಗೊಳಿಸುವ ಗ್ರಂಥಪರಾಮರ್ಶಿಕೆಗಳು, ಆಯಾ ಗ್ರಂಥದ ಸಾರ, ಮಂತ್ರಗಳ ಅಥವಾ ಶ್ಲೋಕಗಳ ಅಕ್ಷರಾನುಕ್ರಮಣಿಕೆ, ಶಬ್ದಾನುಕ್ರಮಣಿಕೆ-ಇಷ್ಟನ್ನೂ ಸೇರಿಸಿ ಪರಿಪೂರ್ತಿಗೊಳಿಸಿರುತ್ತದೆ. ಉಳಿದ ಗ್ರಂಥಗಳನ್ನು ಮೊದಲನೆಯ ಸಲಕ್ಕೆ ಕನ್ನಡಿಸಿ ಇದೇ ರೀತಿಯ ಸಲಕರಣೆಗಳೊಡನೆ ಹೊರಕ್ಕೆ ತರಲಾಗಿದೆ. ಗ್ರಂಥದ ಪೀಠಿಕೆಯಲ್ಲಿ ಕಾಣುವ ವಿಷಯವಿವೇಚನೆಯು ವಿಚಾರಪ್ರಚೋದಕವಾಗಿರುವಂತೆ ಏರ್ಪಡಿಸಲಾಗಿದೆ. ಮೂಲಭಾಷ್ಯವನ್ನು ತಕ್ಕಂತೆ ಪ್ರಘಟ್ಟಗಳಾಗಿ ವಿಂಗಡಿಸಿ ತಲೆಬರಹಗಳನ್ನು ಸೇರಿಸಿರುವದು, ಮುಖ್ಯ ಪಾಠಭೇದಗಳನ್ನು ಸೂಚಿಸಿರುವದು, ಪ್ರಮಾಣವಚನಗಳ ಸ್ಥಾನವನ್ನು ಅಲ್ಲಲ್ಲಿಯೇ ತೋರಿಸಿರುವದು; ಭಾಷ್ಯ, ಅನುವಾದ, ಟಿಪ್ಪಣಿಗಳು—ಮುಂತಾದವುಗಳು ವಿಂಗಡವಾಗಿ ಕಾಣುವಂತೆ ಬೇರೆಬೇರೆಯ ತರದ ಅಚ್ಚಿನ ಅಕ್ಷರಗಳನ್ನು ಆರಿಸಿಕೊಂಡಿರುವದು—ಇವಿಷ್ಟೂ ಈ ಗ್ರಂಥರತ್ನಮಾಲೆಯ ವಿಶೇಷಗಳು

ಈ ಗ್ರಂಥಾವಳಿಯ ಪ್ರಯೋಜನವು ಕನ್ನಡನಾಡಿನ ಮಹಾಜನರಿಗೆ ಸತತವಾಗಿ ಲಭಿಸುವಂತೆಯೂ, ಇದಕ್ಕೆ ಉದಾರಹಸ್ತಾವಲಂಬನವನ್ನಿತ್ತಿರುವ ಮಹಾಪ್ರಭುಗಳವರಿಗೆ ಇತೋಽಪ್ಯತಿಶಯವಾದ ಆಯುರಾರೋಗ್ಯೈಶ್ವರ್ಯವಿಜಯಕೀರ್ತಿವಂಶಾಭಿವೃದ್ಧ್ಯಾದಿಗಳನ್ನು ಸುರಿಮಳೆಗೈಯುವಂತೆಯೂ, ಅನುಗ್ರಹಿಸಬೇಕೆಂದು ಅಖಿಲಾತ್ಮನೂ ಲೋಕಶಂಕರನೂ ಆದ ಭಗವಂತನನ್ನು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ ೩೫

ಶ್ರೀ ಶಾಂಕರಭಾಷ್ಯಸಮೇತ

# ಶ್ರೀಮದ್ಭಗವದ್ಗೀತಾಭಾಷ್ಯ

ಗೀತೆಯ ಮತ್ತು ಭಾಷ್ಯದ ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ
ಮುಂತಾದವುಗಳೊಡನೆ

ಬರೆದವರು :
ಅಧ್ಯಾತ್ಮಗ್ರಂಥಾವಳಿಯ ಸಂಪಾದಕ
**ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ**

ಎರಡನೆಯ ಸಂಸ್ಕರಣ

ಅಧ್ಯಾತ್ಮಗ್ರಂಥಾವಳಿ ಕ್ರಮಾಂಕ ೧೫

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**
**ಹೊಳೆನರಸೀಪುರ**
**೧೯೪೬**

ಮೊದಲನೆಯ ಸಂಸ್ಕರಣ : ೧೯೩೦–೩೪
ಎರಡನೆಯ ಸಂಸ್ಕರಣ : ೧೯೪೬

(೧,೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
*All Rights Reserved*

ಮುದ್ರಣಕಾರರು :

ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

*

# ಹೊಸಸಂಸ್ಕರಣದ ಮೊದಲ ಮಾತು

ಭಗವದ್ಗೀತಾಭಾಷ್ಯವನ್ನು ಈಗ ಸುಮಾರು ಹದಿನಾರು ವರ್ಷಗಳ ಕೆಳಗೆ ಪ್ರಕಟಿಸುವದಕ್ಕೆ ಪ್ರಾರಂಭಿಸಿ ಬೇರೆಬೇರೆಯ ಕಾಲದ ಅಂತರದಿಂದ ಗ್ರಂಥವನ್ನು ಪೂರ ಹೊರಕ್ಕೆ ತರಲಾಗಿತ್ತು. ಮೊದಲನೆಯ ಮೂರು ಅಧ್ಯಾಯಗಳನ್ನು ಹೊಳೆ ನರಸೀಪುರದ ಪ್ಲೀಡರುಗಳಾದ **ಶ್ರೀಯುತ ಆರ್. ರಾಮಸ್ವಾಮಯ್ಯನವರು ದಿವಂಗತ ಶ್ರೀನಿವಾಸಯ್ಯನವರು** ಮತ್ತು ಆಗ್ಗೆ ಸಬ್ ಓವರ್ಸಿಯರಾಗಿದ್ದ **ಶ್ರೀಯುತ ಪಿ. ಎಸ್. ಸೂರ್ಯನಾರಣಪ್ಪನವರು**–ಈ ಮೂವರು ಮಹನೀಯರುಗಳ ಸಹಾಯದಿಂದ ಪ್ರಕಟಿಸಲಾಗಿತ್ತು, ಉಳಿದ ಭಾಗವನ್ನು ಕಾರ್ಯಾಲಯದಲ್ಲಿಯೇ ಸ್ವಲ್ಪಸ್ವಲ್ಪವಾಗಿ ಬೆಳಕಿಗೆ ಹಿಡಿಯಲಾಗಿತ್ತು. ಹೀಗೆ ಖಂಡಖಂಡವಾಗಿ ಹೊರತೋರಿಕೊಂಡ ಈ ಗ್ರಂಥವು ಈಗ ಸಂಪೂರ್ಣವಾಗಿ ಒಂದೇ ಸಲಕ್ಕೆ ಸರ್ವಾಂಗಸುಂದರವಾಗಿ ಕಾಣಿಸಿಕೊಂಡಿರುವದು ನಮ್ಮನ್ನಾಳುವ ಮಹಾಪ್ರಭುಗಳವರ ಕೃಪಾಕಟಾಕ್ಷದ ಫಲವಾಗಿರುತ್ತದೆ.

ಈ ಸಂಸ್ಕರಣದಲ್ಲಿ ಗ್ರಂಥವನ್ನು ಅಷ್ಟೇಕರ್ ಕಂಪೆನಿಯಲ್ಲಿ ಪ್ರಕಾಶವಾಗಿರುವ ಪುಸ್ತಕದ ಆಧಾರದಿಂದಲೇ ಬರೆದುಕೊಂಡಿದೆಯಾದರೂ ನಿರ್ಣಯಸಾಗರದಲ್ಲಿ ಮುದ್ರಿತವಾದ ಅನೇಕ ವ್ಯಾಖ್ಯಾನಸಮೇತವಾದ ಗೀತಾಭಾಷ್ಯಪಾಠ, ಗುಜರಾತಿ ಪ್ರೆಸ್ಸಿನಲ್ಲಿ ಹಾಗೆಯೇ ಮುದ್ರಿತವಾಗಿರುವ ಗೀತಾಭಾಷ್ಯಪಾಠ, ಶ್ರೀರಂಗಂ ವಾಣೀವಿಲಾಸ ಮುದ್ರಣಾಲಯದಲ್ಲಿ ಪ್ರಕಟಿತವಾಗಿರುವ ಭಾಷ್ಯಪಾಠ, ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ದಿವಂಗತ ಮಹಾದೇವಶಾಸ್ತ್ರಿಗಳು ಪ್ರಕಟಿಸಿರುವ ಭಾಷ್ಯಪಾಠ, ಮದರಾಸಿನಲ್ಲಿ ಮುದ್ರಿತವಾಗಿರುವ ಒಂದು ಹಳೆಯ ತೆಲುಗುಲಿಪಿಯ ಭಾಷ್ಯಪಾಠ–ಇಷ್ಟನ್ನೂ ಹೋಲಿಸಿಕೊಂಡು ಭಾಷ್ಯಪಾಠವನ್ನು ನಿರ್ಣಯಿಸಿಕೊಂಡಿರುತ್ತೇನೆ ಈ ಪಾಠಗಳಲ್ಲಿ ಮುಖ್ಯವಾಗಿ ಮೈಸೂರುಮದ್ರಾಸಿನ ಪಾಠಗಳು ಒಂದು ರಾಶಿ, ಮಿಕ್ಕ ಪಾಠಗಳು ಒಂದು ರಾಶಿ–ಹೀಗೆ ಎರಡು ರಾಶಿಗಳಾಗಿ ವಿಂಗಡಿಸಬಹುದಾಗಿದೆ. ಗೀತಾಭಾಷ್ಯದಲ್ಲಿ ಮಿಕ್ಕ ಎಲ್ಲಾ ಭಾಷ್ಯಗಳಿಗಿಂತಲೂ ಹೆಚ್ಚು ಪಾಠಾಂತರಗಳಿರುವವೆಂಬುದು ವಿದ್ವಾಂಸರುಗಳು ಮನಸ್ಸಿಗೆ ಹತ್ತಿಸಿಕೊಳ್ಳತಕ್ಕ ವಿಷಯವಾಗಿದೆ ಶಬ್ದಗಳು, ವಾಕ್ಯಗಳು, ಅವುಗಳ ಅನುಕ್ರಮ–ಹೀಗೆ ಎಲ್ಲಾ ರೀತಿಯಿಂದಲೂ ಪಾಠಭೇದಗಳು ಹೇರಳವಾಗಿ ಇಲ್ಲಿ ಕಂಡುಬರುತ್ತವೆ. ನನಗೆ ಹೊಸದಾಗಿ ಕೈಪ್ರತಿಗಳನ್ನು ಶೋಧಿಸುವದಕ್ಕೆ ಕಾಲದ ಅವಕಾಶವಿಲ್ಲದ್ದರಿಂದ ಸದ್ಯಕ್ಕೆ ಅಚ್ಚಿನಲ್ಲಿ ಸಿಕ್ಕುವ ಪಾಠಭೇದಗಳಲ್ಲಿ ಉಪಾದೇಯವಾಗಿ ಕಂಡದ್ದನ್ನೇ ಅಂಗೀಕರಿಸಿ ಮಿಕ್ಕ ಪಾಠಗಳನ್ನು ಕೆಳಗೆ ಟಿಪ್ಪಣಿಯಲ್ಲಿ ತೋರಿಸಿರುತ್ತೇನೆ ಈ ಭಾಗದಲ್ಲಿ ಮದರಾಸಿನ ತೆಲುಗು ಪ್ರತಿಯಿಂದ ನನಗೆ ತುಂಬ ಸಹಾಯವಾಗಿರುತ್ತದೆ.

ಗೀತಾಭಾಷ್ಯದ ಪ್ರಥಮಸಂಸ್ಕರಣದಲ್ಲಿ ವ್ಯಾಖ್ಯಾನಕಾರರುಗಳ ಭಿನ್ನಾಭಿಪ್ರಾಯಗಳನ್ನೂ ಮಿಕ್ಕ ಭಾಷ್ಯಕಾರರ ಬೇರೆಬೇರೆಯ ಹೇಳಿಕೆಗಳನ್ನೂ **ಪರಿಶಿಷ್ಟದಲ್ಲಿ** ಸವಿಮರ್ಶವಾಗಿ ಬರೆಯಬೇಕೆಂದು ಉದ್ದೇಶಪಟ್ಟು ಆ ಕೆಲಸಕ್ಕೆ ಹೆಚ್ಚಿನ ಶ್ರಮವೂ ದ್ರವ್ಯಾನುಕೂಲ್ಯವೂ ಬೇಕಾಗುವದೆಂಬ ಕಾರಣದಿಂದ ಅದರ ಪ್ರಯತ್ನವನ್ನು ಕೈಬಿಟ್ಟಿದ್ದಾಯಿತು  ಈ ಸಂಸ್ಕರಣದಲ್ಲಿಯೂ ಅನೇಕ ಕಾರಣಗಳಿಂದ ಆ ಉದ್ದೇಶವು ನೆರವೇರದೆ ನಿಂತಿರುತ್ತದೆ. ಭಗವದ್ಗೀತೆಯಲ್ಲಿ ಚರ್ಚಾಸ್ಪದವಾಗಿರುವ ವಿಷಯಗಳನ್ನೆಲ್ಲ ಪ್ರತಿಪಾದನೆಮಾಡುವ "**ಗೀತಾರ್ಥಸರ್ವಸ್ವ**"ವೆಂಬ ಒಂದು ವಿಸ್ತಾರವಾದ ಗ್ರಂಥವನ್ನೇ ಹೊರಕ್ಕೆ ತರಬೇಕೆಂದು ನನಗೆ ತೋರಿದ್ದರಿಂದ ಅಂಥ ವಿಷಯಗಳನ್ನು ಮೊದಲನೆಯ ಸಂಸ್ಕರಣದ ಟಿಪ್ಪಣಿಯಲ್ಲಿ ಅಲ್ಲಲ್ಲಿ ತೋರಿಸುತ್ತಾ ಹೋಗಿದ್ದೆನು  ಹಲವು ಕಾರಣಗಳಿಂದ ಆ ಗ್ರಂಥವೂ ಇನ್ನೂ ಬೆಳಕನ್ನು ಕಾಣದೆ ನಿಂತಿದೆ  ಗ್ರಂಥದ ರೂಪರೇಖೆಯು ಸಿದ್ಧವಾಗಿದ್ದರೂ ಅದಕ್ಕೆ ಸರಿಯಾದ ವೇಷವನ್ನು ತೊಡಿಸಿ ವಾಚಕರ ಮುಂಗಕ್ಕೆ ತರುವದು ಸದ್ಯಕ್ಕೆ ಆಗುವ ಸೂಚನೆಗಳಿಲ್ಲದ್ದರಿಂದ ಅಂಥ ಪರಾಮರ್ಶಿಕೆಗಳನ್ನೆಲ್ಲ ಈಗ ತೆಗೆದುಹಾಕಿರುತ್ತೇನೆ. ಭಗವಂತನ ಅನುಗ್ರಹವಾದರೆ ಮೇಲೆ ಹೇಳಿರುವ ಎಲ್ಲಾ ವಿಷಯಗಳನ್ನೂ ಅಡಕಮಾಡಿದ "**ಗೀತಾರ್ಥಸರ್ವಸ್ವ**" ಗ್ರಂಥವು ಕಾಲಾನುಕಾಲದಲ್ಲಿ ಮೈದೋರಲೂಬಹುದು  ಆದರೆ ಈ ಸಂಸ್ಕರಣದಲ್ಲಿ ಹೊಸದಾಗಿ ಸೇರಿಸಿರುವ **ಪೀಠಿಕೆ**ಯೊಂದರಿಂದಲೇ ವಾಚಕರು ಸದ್ಯಕ್ಕೆ ತೃಪ್ತರಾಗಿ ವಾಗ್ದಾನವನ್ನು ಈಗಲೆ ನೆರವೇರಿಸದೆ ಇರುವ ತಪ್ಪನ್ನು ಮನ್ನಿಸಬೇಕೆಂದು ಪ್ರಾರ್ಥಿಸುತ್ತೇನೆ

ಶ್ರೀ ಚಾಮರಾಜೇಂದ್ರಗ್ರಂಥರತ್ನಮಾಲೆಗೆ ಒಪ್ಪಾಗುವಂತೆ ಇಡಿಯ ಗ್ರಂಥವನ್ನು ಇನ್ನೊಮ್ಮೆ ಪರಿಷ್ಕರಿಸುತ್ತೇನೆ. ಇದು ಹಿಂದಿನ ಸಂಸ್ಕರಣದ ಬರಿಯ ಪುನರ್ಮುದ್ರಣವಲ್ಲವೆಂಬುದು ಓದುಗರಿಗೆ ಮನದಟ್ಟಾಗದೆ ಇರದು  ಗ್ರಂಥವನ್ನು ಅಚ್ಚಿಗೆ ಸಿದ್ಧಪಡಿಸುವದರಲ್ಲಿ ಸಹಾಯಮಾಡಿರುವ **ಶ್ರೀಯುತ ಪಿ. ಎನ್. ನರಸಿಂಹಯ್ಯ, ಪ್ಲೀಡರ್, ಹೊಳೆನರಸೀಪುರ**–ಇವರಿಗೂ ಪಾಠಾಂತರಗಳನ್ನು ಶೋಧಿಸಿರುವ **ಹೊಳೆನರಸೀಪುರದ ಅಧ್ಯಾತ್ಮಕಾಲೇಜಿನ ಉಪಾಧ್ಯಾಯರಾದ ಸಾಹಿತ್ಯವೇದಾಂತ ವಿದ್ವಾನ್** ಬ್ರ॥ ಶ್ರೀ॥ **ಕೊಡೂರು ಕೃಷ್ಣಜೋಯಿಸರವರಿಗೂ** ನಾನು ಕೃತಜ್ಞನಾಗಿರುತ್ತೇನೆ.

ಗ್ರಂಥಶೋಧನೆಯಲ್ಲಿ ಅಥವಾ ಅನುವಾದದಲ್ಲಿ ಕಂಡುಬರುವ ಕುಂದುಕೊರತೆಗಳನ್ನು ತಿಳಿಸಿಕೊಟ್ಟು ಹೊಸಸಂಸ್ಕರಣದಲ್ಲಿ ಅವುಗಳನ್ನು ಸರಿಪಡಿಸುವದಕ್ಕೆ ಸಹಾಯಮಾಡುವ ಮಹನೀಯರಿಗೆ ನಾನು ಚಿರಋಣಿಯಾಗಿರುವೆನು.

**ಅಧ್ಯಾತ್ಮಕುಟೀರ,**
**ವ್ಯಯ, ಆಷಾಢ ಶುದ್ಧ ಏಕಾದಶಿ**

**ಯ. ಸುಬ್ರಹ್ಮಣ್ಯಶರ್ಮ**

# ಪೀಠಿಕೆ

## ಪ್ರಸ್ಥಾನತ್ರಯದಲ್ಲಿ ಗೀತೆಯ ಸ್ಥಾನ

ಶ್ರೀ ಶಂಕರಾಚಾರ್ಯರವರು ಅನುಗ್ರಹಿಸಿರುವ ಭಾಷ್ಯಗಳನ್ನು ಪ್ರಸ್ಥಾನತ್ರಯ ಭಾಷ್ಯವೆಂಬ ಹೆಸರಿನಿಂದ ಮೂರು ರಾಶಿಗಳಾಗಿ ವಿಂಗಡಿಸುವ ವಾಡಿಕೆಯುಂಟು. **ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ**–ಇವುಗಳಿಗೆ **ಪ್ರಸ್ಥಾನತ್ರಯುವೆಂದು** ವಿದ್ವಾಂಸರು ನಾಮಕರಣಮಾಡಿರುವರು. ಪ್ರಸ್ಥಾನವೆಂದರೆ ತತ್ತ್ವವನ್ನು ತಿಳಿಸುವದಕ್ಕೆ ಹೊರಟಿರುವ ಮಾರ್ಗವು. ಈ ಮಾರ್ಗವು ಈ ಮೂರರಲ್ಲಿಯೂ ಒಂದೊಂದು ಬಗೆಯಾಗಿರುವದರಿಂದ ಇವಕ್ಕೆ ಪ್ರಸ್ಥಾನತ್ರಯ ಎಂಬ ಹೆಸರು ಬಂದಿರುತ್ತದೆ. ವೇದದ ಆರಣ್ಯಕವೆಂಬ ಭಾಗದಲ್ಲಿಯೇ ಬಲುಮಟ್ಟಿಗೆ ಕಂಡುಬರುವ **ಉಪನಿಷತ್ತುಗಳು** ಉತ್ತಮಾಧಿಕಾರಿಗಳಿಗೆ ಆತ್ಮಜ್ಞಾನವನ್ನೂ ಮಧ್ಯಮಾಧಿಕಾರಿಗಳಿಗೆ ಉಪಾಸನೆಯನ್ನೂ ಮೋಕ್ಷಸಾಧನವಾಗಿ ಪ್ರತಿಪಾದಿಸುತ್ತವೆ ಭಗವದ್ಗೀತೆಯು ಉಪನಿಷತ್ತುಗಳ ಆಧಾರವನ್ನೇ ಇಟ್ಟುಕೊಂಡು ಕರ್ಮ, ಯೋಗ, ಭಕ್ತಿ–ಎಂಬ ಸಾಧನಗಳಿಗೂ ಜ್ಞಾನವೆಂಬ ಸಾಧ್ಯಕ್ಕೂ ಇರುವ ಸಂಬಂಧವನ್ನು ವಿಶದಗೊಳಿಸುವದು. **ಬ್ರಹ್ಮಸೂತ್ರವು** ಉಪನಿಷತ್ತುಗಳು, ಭಗವದ್ಗೀತೆ–ಇವುಗಳೆರಡರಲ್ಲಿ ಪ್ರತಿಪಾದಿತವಾಗಿರುವ ತತ್ತ್ವವನ್ನು ನ್ಯಾಯಪೂರ್ವಕವಾಗಿ ಗೊತ್ತುಪಡಿಸುವದು ಹೀಗೆ ಉಪನಿಷತ್ತುಗಳಲ್ಲಿ ಸಾಮಾನ್ಯವಾಗಿ ಪ್ರತಿಪಾದಿಸಿರುವ ವಿಷಯುವನ್ನು ಭಗವದ್ಗೀತೆ, ಬ್ರಹ್ಮಸೂತ್ರ–ಇವುಗಳಲ್ಲಿ ವಿಶೇಷರೀತಿಯಿಂದ ನಿರ್ಧರಿಸಿರುವದರಿಂದ ವೇದಾಂತಸಿದ್ಧಾಂತವನ್ನು ಸಂಪೂರ್ಣವಾಗಿ ತಿಳಿಯಬೇಕೆನ್ನುವವರು ಈ ಮೂರನ್ನೂ ಕ್ರಮಕ್ರಮವಾಗಿ ಶ್ರವಣಮಾಡಬೇಕಾದದ್ದು ಅವಶ್ಯವಾಗಿರುತ್ತದೆ. ಈ ಕ್ರಮದಲ್ಲಿ ಗೀತಾಪ್ರಸ್ಥಾನವು ಎರಡನೆಯದಾಗಿದೆ.

## ಭಗವದ್ಗೀತಾಭಾಷ್ಯದ ಹೆಚ್ಚುಗಾರಿಕೆ

ಭಗವದ್ಗೀತೆಯು ಸಾಧನಸಿದ್ಧಾಂತಗಳ ಸಾಮರಸ್ಯವನ್ನು ಸ್ಫುಟವಾಗಿ ತೋರಿಸಿಕೊಡುವ ಅಮೃತಪುಷ್ಕರಿಣಿಯಂತಿರುವದರಿಂದ ಆಕಾರದಲ್ಲಿ ಬಹು ಚಿಕ್ಕದಾಗಿದ್ದರೂ ಮುಮುಕ್ಷುಗಳಿಗೆ ಅಮೂಲ್ಯವಾಗಿರುತ್ತದೆ. ಶ್ರೀ ಶಂಕರಭಗವತ್ಪಾದರವರ ಭಾಷ್ಯವು ಇದಕ್ಕೆ ಕಟ್ಟಿದ ಸ್ಫಟಿಕದ ಸೋಪಾನವಾಗಿರುತ್ತದೆ ಗೀತೆಯಲ್ಲಿ ಏಳುನೂರೇ ಶ್ಲೋಕಗಳಿದ್ದು ಗ್ರಂಥವೂ ಬಹು ಲಲಿತವಾಗಿರುವದರಿಂದ ಇದರ ಪ್ರಸನ್ನತೆಗೆ ಮನಸೋತು ಹಲವರು ಇದಕ್ಕೆ ವ್ಯಾಖ್ಯಾನವನ್ನು ಬರೆಯುವದಕ್ಕೆ ಪ್ರಯತ್ನಮಾಡಿರುತ್ತಾರೆ. ಈಗ

ನಮಗೆ ಸಿಕ್ಕಿರುವ ಗೀತಾಭಾಷ್ಯಗಳಲ್ಲಿ ಶ್ರೀ ಶಂಕರಾಚಾರ್ಯರ ಭಾಷ್ಯವೇ ಪುರಾತನ ವಾದದ್ದಾದರೂ ಅವರಿಗಿಂತಲೂ ಹಿಂದೆ "ಅನೇಕರು ಇದಕ್ಕೆ ವಿವರಣೆಯನ್ನು ಬರೆದಿದ್ದರೆಂದೂ ಆದರೂ ಜನರಿಗೆ ಗೀತೆಯ ಅರ್ಥವು ನಿಶ್ಚಿತವಾಗಿ ತಿಳಿದಿರಲಿಲ್ಲವೆಂದೂ" (ಭಾ.ಭಾ ೩) ಅವರೇ ಹೇಳಿರುವದರಿಂದ ಭಗವದ್ಗೀತೆಯ ಅಸಾಧಾರಣೋಪದೇಶವು ಯಾವದೆಂದು ಈ ಆಚಾರ್ಯರು ಭಾವಿಸಿರುತ್ತಾರೆಂಬುದನ್ನೂ ಮಿಕ್ಕ ವಿವರಣೆಗಳಲ್ಲಿ ಯಾವ ದೋಷಗಳನ್ನು ಅವರು ತೋರಿಸಿರುತ್ತಾರೆಂಬುದನ್ನೂ ಜಿಜ್ಞಾಸುಗಳು ತಿಳಿಯಬೇಕಾಗಿದೆ.

ಆಚಾರ್ಯರಿಗಿಂತಲೂ ಹಿಂದಿನವ್ಯಾಖ್ಯಾನಗಳು ದೊರೆಯುವದಿಲ್ಲವಾದ್ದರಿಂದ ಗೀತಾಭಾಷ್ಯದಲ್ಲಿ ಅವರು ಖಂಡನೆಗಾಗಿ ಮಾಡಿಕೊಂಡಿರುವ ಅನುವಾದಗಳಿಂದಲೇ ಅವುಗಳಸ್ವಭಾವವನ್ನು ನಾವು ಊಹಿಸಬೇಕಾಗಿರುತ್ತದೆ ಅವರಿಂದೀಚೆಗೆ ಬಂದಿರುವ ಭಾಷ್ಯಗಳನ್ನು ನೇರಾಗಿ ನಾವೇ ನೋಡಿ ಪರಸ್ಪರತಾರತಮ್ಯವನ್ನು ಗೊತ್ತುಮಾಡಿಕೊಳ್ಳುವದಕ್ಕೆ ಅವಕಾಶವಿದೆ. ಹೀಗೆ ದೊರೆತಷ್ಟು ಆಧಾರಗಳಿಂದ ನಾವು ಈ ಭಾಷ್ಯವನ್ನು ಮಿಕ್ಕವರ ಭಾಷ್ಯಗಳಿಗೆ ಹೋಲಿಸಿದರೆ ಮೇಲಕ್ಕೆದ್ದು ಕಾಣುವ ಒಂದು ಮುಖ್ಯ ತಾರತಮ್ಯವೇನೆಂದರೆ ಭಗವದ್ಗೀತೆಯಲ್ಲಿ ಪ್ರತಿಪಾದಿತವಾಗಿರುವ ಮೋಕ್ಷಸಾಧನವಾದ ಪರಮಾತ್ಮಜ್ಞಾನವು ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಜ್ಞಾನದಂತೆಯೇ ವಸ್ತುತಂತ್ರವಾಗಿರುತ್ತದೆ ಎಂದು ಶಂಕರಾಚಾರ್ಯರು ಅಭಿಪ್ರಾಯಪಡುತ್ತಾರೆ; ಆ ಜ್ಞಾನವು ಉಪಾಸನಾರೂಪವಾಗಿರುವದೆಂದು ಮಿಕ್ಕ ಆಚಾರ್ಯರುಗಳು ಅಭಿಪ್ರಾಯಪಟ್ಟಿರುತ್ತಾರೆ. ಶಂಕರಾಚಾರ್ಯರವರು ಹೇಳುವ ಸ್ವರೂಪದ ಜ್ಞಾನವನ್ನು ಅವರು ಒಪ್ಪುವದೇ ಇಲ್ಲ. ಈ ಕಾರಣದಿಂದ ಕರ್ಮ, ಯೋಗ, ಭಕ್ತಿ, ಜ್ಞಾನ–ಇವುಗಳಿಗಿರುವ ಸಂಬಂಧದ ವಿಷಯದಲ್ಲಿಯೂ ಅತ್ಯಂತವಿರುದ್ಧವಾದ ಮತಭೇದವುಂಟಾಗುವದಕ್ಕೆ ಕಾರಣವಾಗಿರುತ್ತದೆ. ಎಲ್ಲಾ ಭಾಷ್ಯಗಳನ್ನೂ ವಿಮರ್ಶೆಗೆ ತೆಗೆದುಕೊಳ್ಳುವ ಸ್ಥಲವು ಇದಲ್ಲ; ಆದ್ದರಿಂದ ಆಚಾರ್ಯರು ಅನುವಾದಮಾಡಿಕೊಂಡಿರುವ ವೃತ್ತಿಕಾರರ ಮತವನ್ನು ಮಾತ್ರ ಪರಾಮರ್ಶಿಸಿಕೊಂಡು ಪ್ರಕೃತಭಾಷ್ಯದ ಅಸಾಧಾರಣಪ್ರಕ್ರಿಯೆಯನ್ನು ಇಲ್ಲಿ ಸಂಗ್ರಹವಾಗಿ ತಿಳಿಸುವೆವು.

## ವೃತ್ತಿಕಾರರು ಯಾರು ?

ಶಂಕರಾಚಾರ್ಯರಿಗಿಂತ ಹಿಂದೆಯೇ ಭಗವದ್ಗೀತೆಗೆ ವಿವರಣವನ್ನು ಬರೆದ **ವೃತ್ತಿಕಾರರೊಬ್ಬರು** ಜ್ಞಾನಕರ್ಮಗಳೆರಡನ್ನೂ ಸಮವಾಗಿ ಸೇರಿಸಿಕೊಂಡು ಅನುಷ್ಠಾನಮಾಡುವದರಿಂದ ಕೈವಲ್ಯಪ್ರಾಪ್ತಿಯಾಗುವದೆಂದು ಪ್ರತಿಪಾದಿಸಿದ್ದರು. ಈ

ವೃತ್ತಿಕಾರರು ಯಾರೆಂಬುದು ನಮಗೆ ತಿಳಿಯದು. ಅವರು ಶ್ರೀರಾಮಾನುಜಾಚಾರ್ಯರ ಸೂತ್ರಭಾಷ್ಯಾರಂಭದಲ್ಲಿ ಪರಾಮರ್ಶಿಸಿರುವ ಬೋಧಾಯನರೆಂದು ಕೆಲವರ ನಂಬಿಕೆಯಿದೆ. ಆದರೆ ಶಾಂಕರಭಾಷ್ಯದಲ್ಲಿ ವೃತ್ತಿಕಾರರು ವಿಶಿಷ್ಟಾದ್ವೈತಿಗಳಾಗಿದ್ದರೆಂಬುದಕ್ಕೆ ಯಾವ ಆಧಾರವೂ ಸಿಕ್ಕುವದಿಲ್ಲ. ವೃತ್ತಿಕಾರರು ಕರ್ಮಜ್ಞಾನಗಳ ಸಮುಚ್ಚಯವನ್ನು ಮುಕ್ತಿಸಾಧನವೆಂದು ಹೇಳಿದ್ದರೆಂಬ ಒಂದೇ ಕಾರಣದಿಂದ ಅವರು ವಿಶಿಷ್ಟಾದ್ವೈತಿಗಳೆಂದು ಕಲ್ಪಿಸುವದಕ್ಕೆ ಬರುವದಿಲ್ಲ. ಏಕೆಂದರೆ ಬ್ರಹ್ಮಸಿದ್ಧಿಯನ್ನು ಬರೆದಿರುವ **ಮಂಡನಮಿಶ್ರರು** ಅದ್ವೈತಿಗಳಾದರೂ ಜ್ಞಾನಕರ್ಮಸಮುಚ್ಚಯವನ್ನು ಒಪ್ಪಿರುತ್ತಾರೆ. ಬೃಹದಾರಣ್ಯಕಭಾಷ್ಯದಲ್ಲಿ ಆಚಾರ್ಯರು ಮತ್ತೆಮತ್ತೆ ಖಂಡಿಸಿರುವ ಸಮುಚ್ಚಯವಾದಿಗಳಾದ **ಭರ್ತೃಪ್ರಪಂಚರು** ಭೇದಾಭೇದವಾದಿಗಳಾಗಿರುತ್ತಾರೆ. ಶಂಕರಾಚಾರ್ಯರ ಕಾಲಕ್ಕೆ ಮುಕ್ತಿಯಲ್ಲಿ ಅದ್ವೈತವನ್ನು ಒಪ್ಪದ ವೇದಾಂತಿಗಳು ಇದ್ದರೆಂಬುದೇ ವಾದಗ್ರಸ್ತವಾಗಿರುವದರಿಂದ ಈ ಗೀತಾಭಾಷ್ಯೋಕ್ತ ವೃತ್ತಿಕಾರರು ಬೋಧಾಯನರೋ ಅಲ್ಲವೋ ನಿರ್ಧಾರವಾಗಿ ಹೇಳುವದಕ್ಕೆ ಬರುವಂತಿಲ್ಲ ಗೀತಾಭಾಷ್ಯದ (೧೩-೨೮)ಲ್ಲಿ "ಕ್ಷೇತ್ರಜ್ಞನಾದ ಈಶ್ವರನನ್ನು ಧ್ಯಾನಮಾಡಿ ಸಾಕ್ಷಾತ್ಕಾರ ಮಾಡಿಕೊಂಡು ಆತನ ಸ್ವರೂಪದಲ್ಲಿದ್ದುಕೊಳ್ಳುವದರಿಂದ ಸಂಸಾರವು ತೊಲಗುತ್ತದೆ" ಎಂದು ಹೇಳುತ್ತಿದ್ದ ಕೆಲವು ಪೂರ್ವಪಕ್ಷಿಗಳನ್ನು ಉದಾಹರಿಸಿರುತ್ತದೆ. ಜ್ಞಾನಕರ್ಮಸಮುಚ್ಚಯವಾದಿಗಳೆಂದು ಇಲ್ಲಿ ಹೇಳಿರುವ ವೃತ್ತಿಕಾರರೂ ಅವರೂ ಒಬ್ಬರೋ ಅಥವಾ ಇಬ್ಬರೂ ಬೇರೆಬೇರೆಯೋ ತಿಳಿಯದು

## ವೃತ್ತಿಕಾರರ ಮತ

ಇದು ಹೇಗಾದರೂ ಇರಲಿ. ಈ ವೃತ್ತಿಕಾರರು **ಜ್ಞಾನಕರ್ಮಗಳ ಸಮುಚ್ಚಯದಿಂದಲೇ** ಕೈವಲ್ಯವಾಗುವದೆಂದು ಹೇಳುತ್ತಿದ್ದರು. ಕರ್ಮವೆಂದರೆ ಅಗ್ನಿಹೋತ್ರವೇ ಮುಂತಾದ ಶ್ರೌತಸ್ಮಾರ್ತಕರ್ಮಗಳು ; ಆ ಕರ್ಮಗಳು ಬದುಕಿರುವವರೆಗೂ ಮಾಡಬೇಕಾದವೇ ಎಂದು ಶ್ರುತಿಯ ಆಧಾರದಿಂದ ಅವರು ಮೀಮಾಂಸಕರಂತೆಯೇ ಒಪ್ಪಿರುತ್ತಿದ್ದರು (ಭಾ. ಭಾ. ೮),[1] ಅವರು ಸಂನ್ಯಾಸಾಶ್ರಮವನ್ನೂ ಒಪ್ಪಿದ್ದರಿಂದ ತಮ್ಮ ಸಂಬಂಧಗ್ರಂಥಕ್ಕೆ ವಿರೋಧವಾಗಿ ಹೇಳಿದಂತಾಗಿದೆ ಎಂದು ಶಂಕರಾಚಾರ್ಯರು ದೂಷಿಸಿರುವದನ್ನು (ಭಾ ಭಾ. ೭) ನೋಡಿದರೆ ಸಂನ್ಯಾಸಾಶ್ರಮವು ಗಾರ್ಹಸ್ಥ್ಯಕ್ಕೆ ಯೋಗ್ಯತೆ ಇಲ್ಲದವರಿಗಾಗಿ ವಿಹಿತವಾದದ್ದು ಎಂದು

1. ಈ ಪೀಠಿಕೆಯಲ್ಲಿರುವ ಕಂಸಾಂತರ್ಗತಸಂಖ್ಯೆಗಳು ಸಂಸ್ಕೃತಭಾಷ್ಯದ ಭಾಗವನ್ನೂ ಎರಡು ಸಂಖ್ಯೆಗಳು ಗೀತೆಯ ಅಧ್ಯಾಯ ಶ್ಲೋಕಗಳನ್ನೂ ಸೂಚಿಸುವವು.

ವೃತ್ತಿಕಾರರು ಮೀಮಾಂಸಕರಂತೆಯೇ ಅಭಿಪ್ರಾಯಪಟ್ಟಿದ್ದರೆಂದು ಕಲ್ಪಿಸುವದಕ್ಕೆ ಬರುತ್ತದೆ. ಮಿಕ್ಕ ಆಶ್ರಮದವರಿಗೂ ಅವರವರ ಆಶ್ರಮಕ್ಕೆ ವಿಹಿತವಾಗಿರುವ ಕರ್ಮಗಳೊಡನೆ ಸಮುಚ್ಚಿತವಾದ ಜ್ಞಾನವು ಅವರವರಿಗೆ ಮೋಕ್ಷಕ್ಕೆ ಸಾಧನವೆಂದು ಅವರು ತಿಳಿದಿದ್ದರೆಂದೂ ಕಲ್ಪಿಸುವದಕ್ಕೆ ಅವಕಾಶವಿದೆ. (ಭಾ ಭಾ. ೧೩೮-೧೪೧). ಹೇಗೇ ಆಗಲಿ, ಗೃಹಸ್ಥನಾದವನು ಕರ್ಮವನ್ನು ಮಾಡದೆ ಇದ್ದರೆ ಅವನಿಗೆ ಪ್ರತ್ಯವಾಯವುಂಟಾಗುತ್ತದೆಯಾದ್ದರಿಂದ ಕರ್ಮವನ್ನು ಬಿಡಬಾರದು; ಮುಮುಕ್ಷುಗಳಾದವರು ಕರ್ಮವನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡಿದರೆ ಕರ್ಮವು ಬಂಧಕವಾಗುವದಿಲ್ಲ. (ಭಾ. ಭಾ. ೨೪೯) ಎಂದು ಅವರು ಅಭಿಪ್ರಾಯಪಡುತ್ತಿದ್ದರೆಂಬುದು ನಿಶ್ಚಯ. "ಬ್ರಹ್ಮಾರ್ಪಣಂ ಬ್ರಹ್ಮಹವಿಃ" ಎಂಬ (೪-೨೪) ಶ್ಲೋಕಕ್ಕೆ ಅವರು ಮಾಡಿರುವ ವ್ಯಾಖ್ಯಾನದಿಂದ ಅರ್ಪಣಾದಿಗಳಲ್ಲಿ ಬ್ರಹ್ಮಬುದ್ಧಿಯನ್ನು ಮಾಡುವದೇ ಜ್ಞಾನಯಜ್ಞವೆಂದು ಅವರು ಭಾವಿಸಿದ್ದಾರೆಂದು (ಭಾ. ಭಾ. ೨೭೯) ಕಲ್ಪಿಸಬೇಕಾಗಿದೆ ಹೀಗೆ ಅವರ ಮತದಲ್ಲಿ ಜ್ಞಾನವೆಂದರೆ ಉಪಾಸನೆಯೇ ಆಗುವದರಿಂದ ಜ್ಞಾನಕರ್ಮಸಮುಚ್ಚಯದಿಂದ ಮೋಕ್ಷವೆಂಬ ಅವರ ವಾದವು ಕರ್ಮೋಪಾಸನೆಗಳನ್ನು ಸೇರಿಸಿ ಅನುಷ್ಠಾನಮಾಡುವದರಿಂದ ಮೋಕ್ಷವು ದೊರಕುತ್ತದೆ ಎಂದೇ ಆಗಿತ್ತೆಂದು ಏರ್ಪಡುತ್ತದೆ.

ವೃತ್ತಿಕಾರರು ಹೀಗೆ ಕರ್ಮದೊಡಗೂಡಿದ ಜ್ಞಾನಕ್ಕೇ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದರಿಂದ "ಕರ್ಮಸಂನ್ಯಾಸಕ್ಕಿಂತ ಕರ್ಮವು ಮೇಲು" (೫-೨) ಎಂಬ ಶ್ಲೋಕಕ್ಕೆ ಅವರು ಯಥಾಶ್ರುತವಾಗಿಯೇ ಅರ್ಥವನ್ನು ಮಾಡಿದ್ದರೆಂದು ನಾವು ಸುಲಭವಾಗಿ ಊಹಿಸಬಹುದು. ಆರನೆಯ ಅಧ್ಯಾಯದಲ್ಲಿ (ಭಾ. ಭಾ. ೩೭೧) ಆರುರುಕ್ಷುವಾದವನಿಗೆ ಕರ್ಮ, ಆರೂಢನಾದವನಿಗೆ ಶಮ–ಎಂಬ ಉಪದೇಶವನ್ನು ಕರ್ಮಿಗಳಿಗೇ ಅನ್ವಯಿಸುವದಕ್ಕೆ ಅವರು ಪ್ರಯತ್ನಿಸುತ್ತಿದ್ದರೆಂಬುದೂ (೩೭೧) ಸ್ವಾಭಾವಿಕವಾಗಿರುತ್ತದೆ.[1] ಹೀಗೆ ಜ್ಞಾನವೆಂದರೆ ಅವರ ಮತದಲ್ಲಿ ಉಪಾಸನೆ ಅಥವಾ ಧ್ಯಾನಯೋಗವೇ ಆಗಿರುವದರಿಂದ ಜ್ಞಾನದ ಫಲವಾದ ಮೋಕ್ಷವು ದೇಹಪಾತವಾದ ಬಳಿಕವೇ ಕಾಲಾಂತರದಲ್ಲಿ ಆಗತಕ್ಕದ್ದೆಂದು ಅವರ ಅಭಿಪ್ರಾಯವಿದ್ದಿರಬೇಕು. ಎಂಟನೆಯ ಅಧ್ಯಾಯದಲ್ಲಿ ವರ್ಣಿಸಿರುವ ಶುಕ್ಲಗತಿಯೆಂಬುದು ಯೋಗಿಗಳಿಗೇ ಆಗಿರುವದರಿಂದಲೂ ಆ ಯೋಗಿಗಳು ಸುಷುಮ್ನಾನಾಡಿಯ ಮಾರ್ಗವಾಗಿ

1. ಛಾಂದೋಗ್ಯಭಾಷ್ಯದಲ್ಲಿ "ಬ್ರಹ್ಮಸಂಸ್ಥಃ" ಎಂಬ ವಿಶೇಷಣವನ್ನು ನಾಲ್ಕು ಆಶ್ರಮದವರಿಗೂ ಅನ್ವಯಿಸಿರುವ ವೃತ್ತಿಕಾರರ ಮತವನ್ನು (ಭಾ. ಭಾ. ೨-೨೩-೧) ಇದಕ್ಕೆ ಹೋಲಿಸಿರಿ.

ಹೊರಟು ಬ್ರಹ್ಮಲೋಕವನ್ನು ಸೇರಿ ಮುಕ್ತಿಯನ್ನು ಪಡೆಯುವರೆಂದು ಅಲ್ಲಿ ಹೇಳಿರುವದರಿಂದಲೂ ಜ್ಞಾನಕರ್ಮಸಮುಚ್ಚಯದಿಂದ ಮುಕ್ತಿಯಾಗುವದೆಂಬ ತಮ್ಮ ಮತಕ್ಕೆ ಅಲ್ಲಿಯೂ ಪುಷ್ಟಿಯು ದೊರೆಯುತ್ತದೆ ಎಂದು ಅವರು ಭಾವಿಸಿರಬೇಕು. ಜ್ಞಾನ, ವಿಜ್ಞಾನ–ಎಂದು ಗೀತೆಯಲ್ಲಿ ವಿಂಗಡಿಸಿರುವದನ್ನು ಅವರು ಹೇಗೆ ಅರ್ಥ ಮಾಡುತ್ತಿದ್ದರೆಂಬುದಕ್ಕೆ ಭಾಷ್ಯದಲ್ಲಿ ನಮಗೆ ಗಮಕವಾಗಿ ಯಾವ ವಾಕ್ಯಗಳೂ ಇರುವದಿಲ್ಲವಾದರೂ ಜ್ಞಾನವು ಉಪಾಸನೆಗೆ ಅಂಗವಾದ ಪರಮಾತ್ಮಜ್ಞಾನವು, ವಿಜ್ಞಾನವೆಂದರೆ ಅದರಿಂದಾದ ಸಾಕ್ಷಾತ್ಕಾರವು ಎಂದು ಅವರು ವಿವರಿಸಿರಬೇಕು. ಏಕೆಂದರೆ ಉಪಾಸನೆಗೆ ಸಾಕ್ಷಾತ್ಕಾರದ ಮೂಲಕವಾಗಿಯೇ ಫಲವಾಗುವದೆಂಬುದು ಎಲ್ಲಾ ವಾದಿಗಳಿಗೂ ಸಮಾನವಾಗಿರುತ್ತದೆ ಆದ್ದರಿಂದ ಎಲ್ಲೆಲ್ಲಿ ವಸ್ತುನಿರ್ದೇಶಕವಾಕ್ಯಗಳಿರುತ್ತವೆಯೋ ಅಲ್ಲೆಲ್ಲ ಉಪಾಸ್ಯ ಸ್ವರೂಪವನ್ನು ತಿಳಿಸಿದೆಯೆಂದೂ, ಎಲ್ಲೆಲ್ಲಿ ಪ್ರತ್ಯಕ್ಷವಾದ ಜ್ಞಾನಫಲವನ್ನು ಹೇಳಿದೆಯೋ ಅಲ್ಲೆಲ್ಲ ಸಾಕ್ಷಾತ್ಕಾರವನ್ನು ತಿಳಿಸಿದೆಯೆಂದೂ, ಎಲ್ಲಿ ಶರೀರಪಾತವಾದ ಬಳಿಕ ಮುಕ್ತಿರೂಪಫಲವನ್ನು ಹೇಳಿದೆಯೋ ಅಲ್ಲಿ ಮುಖ್ಯಮುಕ್ತಿಯನ್ನೇ ಹೇಳಿದೆಯೆಂದೂ ವೃತ್ತಿಕಾರರ ಮತವಿತ್ತೆಂದು ಕಲ್ಪಿಸಿದರೆ ತಪ್ಪಾಗದು.

## ಭಾಷ್ಯಕಾರರ ಮತ: ಜ್ಞಾನಕರ್ಮಗಳ ಸಂಬಂಧ

ಶ್ರೀ ಶಂಕರಭಗವತ್ಪಾದರವರು ಗೀತಾತಾತ್ಪರ್ಯವೆಂದು ಹೇಳಿರುವ ಮತವು ಈ ವೃತ್ತಿಕಾರರ ಮತಕ್ಕೆ ಅತ್ಯಂತ ವಿರುದ್ಧವಾಗಿರುತ್ತದೆ. ಅವರ ಮತದಲ್ಲಿ ಜ್ಞಾನದಿಂದಲೇ ಮುಕ್ತಿ; ಆ ಮುಕ್ತಿಯೆಂಬುದು ಶರೀರವು ಬಿದ್ದುಹೋದಬಳಿಕ ಆಗುವದಲ್ಲ, ಜ್ಞಾನವಾದಕೂಡಲೆ ಬದುಕಿರುವಾಗಲೇ ದೊರಕತಕ್ಕದ್ದು. ಜ್ಞಾನಕ್ಕೆ ತನ್ನ ಫಲವಾದ ಮುಕ್ತಿಯನ್ನು ಕೊಡುವದಕ್ಕೆ ಕರ್ಮದ ನೆರವೇನೂ ಬೇಕಿರುವದಿಲ್ಲ. ಸರ್ವಕರ್ಮಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯನ್ನು ಸಂಪಾದಿಸಿಕೊಳ್ಳುವದರಿಂದಲೇ ಸಂಸಾರವು ಸಮೂಲವಾಗಿ ನಾಶವಾಗುತ್ತದೆ (೪, ವರ್ಣಾಶ್ರಮಧರ್ಮರೂಪವಾಗಿರುವ ಕರ್ಮವು ಅಭ್ಯುದಯವನ್ನು ಕೊಡುತ್ತದೆ, ದೇವಾದಿಸ್ಥಾನವನ್ನು ಪಡೆಯುವದಕ್ಕೆ ಸಾಧನವಾಗಿರುತ್ತದೆ, ಆದರೆ ಈಶ್ವರಾರ್ಪಣಬುದ್ಧಿಯಿಂದ ಮಾಡಿದರೆ ಸತ್ತ್ವಶುದ್ಧ್ಯಾದಿಗಳ ಮೂಲಕವಾಗಿ ಮುಕ್ತಿಗೂ ಪರಂಪರಾಸಾಧನವಾಗುತ್ತದೆ. (೫) ಕರ್ಮವೆಂಬ ಪ್ರವೃತ್ತಿಧರ್ಮ, ಜ್ಞಾನವೆಂಬ ನಿವೃತ್ತಿಧರ್ಮ, ವಾಸುದೇವನೆಂಬ ಹೆಸರಿನ ಪರಬ್ರಹ್ಮ-ಇವುಗಳನ್ನು ತಿಳಿಸುವದೇ ಗೀತೆಯ ಉದ್ದೇಶವು (೧, ೨, ೬); ಸಮಸ್ತವೇದಾರ್ಥದ ಸಾರವೇ ಇದು, ಇದನ್ನು ಇಲ್ಲಿ ಸಂಗ್ರಹವಾಗಿ ಹೇಳಿರುತ್ತದೆ (೩).

## ಕರ್ಮ, ಕರ್ಮಯೋಗ, ಕರ್ಮಸಂನ್ಯಾಸ

ಕರ್ಮಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯಿಂದಲೇ ಮೋಕ್ಷವಾಗುವದೆಂಬ ಆಚಾರ್ಯರು ಕರ್ಮವನ್ನು ಮತ್ತೆ ಮತ್ತೆ ಉಪದೇಶಿಸುತ್ತಿರುವ ಗೀತಾಶಾಸ್ತ್ರವನ್ನು ಮೋಕ್ಷಗ್ರಂಥವೆಂದು ಹೇಗೆ ಹಿಡಿದರೆಂಬುದು ಅನೇಕರಿಗೆ ತಿಳಿಯದ ಒಗಟಾಗಿರುತ್ತದೆ. ಆದರೆ ಗೀತಾಭಾಷ್ಯವನ್ನು ಮನನಮಾಡಿದವರಿಗೆ ಇದರಲ್ಲೇನೂ ಆಶ್ಚರ್ಯವುಂಟಾಗುವದಿಲ್ಲ. ಏಕೆಂದರೆ ಕರ್ಮಸಂನ್ಯಾಸವೆಂದರೆ ಸುಮ್ಮನೆ ಕರ್ಮಗಳನ್ನು ಬಿಡುವದಲ್ಲ. ಕಾಯಕ್ಲೇಶದ ಅಂಜಿಕೆಯಿಂದ ಕರ್ಮವನ್ನು ತ್ಯಜಿಸಿದವರಿಗೆ ತ್ಯಾಗದ ಫಲವು ದೊರಕುವದಿಲ್ಲವೆಂದು ಗೀತೆಯಲ್ಲಿಯೇ (೧೮-೮) ಹೇಳಿರುತ್ತದೆ. ಯಜ್ಞಾದಿಕರ್ಮಗಳಲ್ಲಿಯೂ ದೋಷವುಂಟಾದ್ದರಿಂದ ಅವನ್ನು ತ್ಯಜಿಸಬೇಕೆಂಬ ಸಾಂಖ್ಯಾದಿಗಳ ಮತವಾಗಲಿ ಕರ್ಮದಿಂದಲೇ ಮೋಕ್ಷವಾಗುವದೆಂಬ ಮೀಮಾಂಸಕರ ಮತವಾಗಲಿ ಗೀತೆಗೆ ಒಪ್ಪಾಗಿರುವದಿಲ್ಲ. ಯಜ್ಞದಾನತಪಸ್ಸುಗಳನ್ನು ಫಲಾಭಿಸಂಧಿಯಿಲ್ಲದೆ ಈಶ್ವರಾರ್ಪಣಬುದ್ಧಿಯಿಂದ ಮಾಡಿದರೆ ಅದು ಚಿತ್ತಶುದ್ಧಿಯ ಮೂಲಕ ಜ್ಞಾನೋತ್ಪತ್ತಿಗೆ ಕಾರಣವಾಗುವದೆಂದು ಬೃಹದಾರಣ್ಯಕವೇ (೪-೪-೨೨) ಮುಂತಾದ ಶ್ರುತಿವಚನಗಳಲ್ಲಿ ಹೇಳಿರುವಂತೆ ಇಲ್ಲಿಯು ಈ ಕರ್ಮಗಳಿಂದ ಚಿತ್ತಶುದ್ಧಿಯಾಗುವದೆಂದು ಹೇಳಿರುತ್ತದೆ (೧೨, ೧೮-೫) ಜ್ಞಾನನಿಷ್ಠೆಯೂ ಕರ್ಮನಿಷ್ಠೆಯೂ ಸಾಂಖ್ಯಬುದ್ಧಿ, ಯೋಗಬುದ್ಧಿ-ಎಂಬ ಎರಡು ಬುದ್ಧಿಯ ಬೇರೆಬೇರೆಯ ಅಧಿಕಾರಿಗಳಿಗೇ ಎಂಬುದು ಉಪನಿಷತ್ತಿನಂತೆಯೇ ಗೀತೆಯಲ್ಲಿ ವಿಂಗಡಿಸಿ ಉಪದಿಷ್ಟವಾಗಿರುತ್ತದೆ (೯, ೩೯, ೭೫). **ಯೋಗಬುದ್ಧಿ**ಯೆಂದರೆಈಶ್ವರಾರಾಧನಾರ್ಥವಾಗಿ ಕರ್ಮವನ್ನು ಮಾಡುವ **ಕರ್ಮಯೋಗದ** ಮತ್ತು ಆದರಿಂದ ದೊರೆಯುವ **ಧ್ಯಾನಯೋಗದ** ದೃಷ್ಟಿಯಿಂದ ಕೂಡಿದ ಬುದ್ಧಿಯು (೭೬); ಆ ದೃಷ್ಟಿಯುಳ್ಳವರಿಗೇ ಮೊದಲು ಕರ್ಮವು ಅವಶ್ಯವೆಂದು ಗೀತೆಯಲ್ಲಿ ಬೋಧಿಸಿರುತ್ತದೆ (೧೫೨, ೩೬೯) **ಸಾಂಖ್ಯಬುದ್ಧಿ**ಯೆಂದರೆ ಆತ್ಮಸ್ವರೂಪದ ವಿವೇಕವುಳ್ಳವರ ಬುದ್ಧಿ. ಅಂಥವರಿಗೆ ಕರ್ಮದಿಂದ ಆಗಬೇಕಾದದ್ದೇನೂ ಇರುವದಿಲ್ಲವಾದ್ದರಿಂದ ಪರಮಾತ್ಮಜ್ಞಾನದಲ್ಲಿಯೇ ನಿಷ್ಠೆಯನ್ನು ಅವರಿಗೆ ಹೇಳಿದ್ದಾಗಿರುತ್ತದೆ (೯, ೭೬, ೧೫೦). ಜ್ಞಾನನಿಷ್ಠೆಗೆ ಸರ್ವಕರ್ಮವನ್ನೂ ಸಂನ್ಯಾಸಮಾಡಿರುವವರೇ ಅಧಿಕಾರಿಗಳಾದರೂ ಆ ನಿಷ್ಠೆಗೆ ತಕ್ಕ ಯೋಗ್ಯತೆಯು ಬರುವದಕ್ಕೆ ಮೊದಲು ಕರ್ಮಯೋಗವನ್ನೇ ಮಾಡಬೇಕು. ಏಕೆಂದರೆ ಕರ್ಮಯೋಗವೇ ನೈಷ್ಕರ್ಮ್ಯರೂಪವಾದ ಜ್ಞಾನಯೋಗಕ್ಕೆ ಸಾಧನವಾಗಿರುತ್ತದೆ (೮೫, ೧೫೩, ೧೫೪). ಆದ್ದರಿಂದ ಕರ್ಮಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯೇ ಮೋಕ್ಷಕ್ಕೆ ನೇರಾದ ಸಾಧನವಾದರೂ ಆ ನಿಷ್ಠೆಗೆ ತಕ್ಕ ಯೋಗ್ಯತೆಯನ್ನು ಕೊಡುವ ಮೂಲಕ ಕರ್ಮಯೋಗವೂ ಮೋಕ್ಷಕ್ಕೆ ಪರಂಪರೆಯ ಸಾಧನವೆಂಬುದು (೧೩) ಭಾಷ್ಯಕಾರರ ಮತವಾಗಿರುತ್ತದೆ.

ಇನ್ನು **ಕರ್ಮಸಂನ್ಯಾಸವೆಂದರೇನು**?—ಎಂಬುದನ್ನು ವಿಚಾರಿಸುವದು ಅವಶ್ಯವಾಗಿರುತ್ತದೆ. "ಸಂನ್ಯಾಸದಿಂದಲೇ ಸಿದ್ಧಿಯನ್ನು ಹೊಂದುವದಿಲ್ಲ" (೩-೪) ಪರಮ ನೈಷ್ಕರ್ಮ್ಯಸಿದ್ಧಿಯನ್ನು ಸಂನ್ಯಾಸದಿಂದ ಪಡೆದುಕೊಳ್ಳುತ್ತಾನೆ" (೧೮-೪೯), "ಕಾಮ್ಯಕರ್ಮಗಳನ್ನು ಬಿಡುವದೇ ಸಂನ್ಯಾಸವೆಂದು ಕವಿಗಳು ಹೇಳುತ್ತಾರೆ" (೧೮-೨)-ಎಂಬುದೇ ಮುಂತಾದ ಗೀತಾವಚನಗಳು ಪರಸ್ಪರವಿರುದ್ಧವಾಗಿರುವಂತೆ ತೋರುವದರಿಂದ ಈ ವಿಷಯದಲ್ಲಿ ಗೀತೆಯ ಅಭಿಪ್ರಾಯವೇನೆಂಬುದು ಎಂಥಾ ಪ್ರಜ್ಞಾವಂತರಿಗೂ ಭ್ರಾಂತಿಯನ್ನುಂಟುಮಾಡುವಂತಿರುತ್ತವೆ. ಈ ವಿಷಯದಲ್ಲಿ ಭಾಷ್ಯಕಾರರು ಕೊಟ್ಟಿರುವ ಅಭಿಪ್ರಾಯವೇನೆಂದರೆ "ಆತ್ಮನಲ್ಲಿ ಜನ್ಮಾದಿವಿಕಾರಗಳು ಯಾವವೂ ಇರುವದಿಲ್ಲ, ಅವನು ಸರ್ವವ್ಯಾಪಕನು, ನಾಶರಹಿತನು, ಅವನೇ ನಮ್ಮಗಳ ಆತ್ಮನು" ಎಂಬ ತಿಳಿವಳಿಕೆಯ ರೂಪದ ಅತ್ಮಜ್ಞಾನವು ಯಾವನಿಗಿರುವದೋ ಅಂಥವನಿಗೆ ಯಾವ ಕರ್ಮವೂ ಸಂಭವಿಸುವದಿಲ್ಲ (೩೭, ೩೮). ಏಕೆಂದರೆ ಆತ್ಮನಲ್ಲಿ ಕರ್ತೃತ್ವವಿರುವದೆಂಬುದು ಅಜ್ಞಾನದಿಂದ ಹುಟ್ಟುಗಟ್ಟಿದ್ದಾಗಿದೆ (೨೫೭, ೧೮-೧೩ರ ಅವತರಣಿಕೆ). ಆದ್ದರಿಂದ ಆತ್ಮಜ್ಞಾನದಿಂದ ಅವಿದ್ಯಾಕೃತವಾಗಿರುವ ಕರ್ಮಗಳನ್ನು ಬಿಡುವದೇ **ಪರಮಾರ್ಥಸಂನ್ಯಾಸವು**. ಆ ಸಂನ್ಯಾಸದಲ್ಲಿ ಯಾವದೊಂದು ಕರ್ಮವೂ ಉಳಿದಿರುವದಿಲ್ಲ (೧೨೬, ೧೨೮, ೩೩೫) ಆದರೆ ಇಂಥ ಸಂನ್ಯಾಸವು ದಕ್ಕುವದಕ್ಕಿಂತ ಮುಂಚೆ ಸಮ್ಯಗ್ದರ್ಶನಕ್ಕೆ ಅಂಗವಾಗಿ ಶ್ರುತಿಸ್ಮೃತಿಪುರಾಣಗಳಲ್ಲಿ ವಿಹಿತವಾಗಿರುವ ನಾಲ್ಕನೆಯ ಆಶ್ರಮರೂಪವಾದ ಸಂನ್ಯಾಸವೊಂದುಂಟು (೩೭೩). ಕರ್ತೃತ್ವಬುದ್ಧಿಯು ಇರುವಾಗಲೇ ಗೃಹಸ್ಥಾಶ್ರಮಕರ್ಮಗಳನ್ನು ಮಟ್ಟಿಗೆ ಪರಿತ್ಯಜಿಸಿ ಯಮನಿಯಮಾದಿಗಳಿಂದ ಕೂಡಿ ಯೋಗಾನುಷ್ಠಾನವನ್ನು ಮಾಡುತ್ತಿರುವ ಸಂನ್ಯಾಸವದು (೩೧೮). ಅದನ್ನು **ಮುಮುಕ್ಷುಗಳ ಆಶ್ರಮಸಂನ್ಯಾಸ**ವೆಂದು ಕರೆಯಬಹುದು. ಮುಮುಕ್ಷುಗಳಲ್ಲದವರೂ ಮಾಡಬಹುದಾದ ಸಂನ್ಯಾಸಾಶ್ರಮವೊಂದುಂಟೆಂದು ಬೃಹದಾರಣ್ಯಕಭಾಷ್ಯದಲ್ಲಿ ಹೇಳಿರುತ್ತದೆ. ಯಜ್ಞೋಪವೀತಾದಿಗಳನ್ನು ಧರಿಸಿರುವ ಪಾರಿವ್ರಾಜ್ಯವೂ ಉಂಟೆಂದೂ ಆ ಆಶ್ರಮಧರ್ಮವನ್ನು ಕಾಪಾಡಿಕೊಂಡು ಬಂದರೆ ಬ್ರಹ್ಮಲೋಕವೇ ಮುಂತಾದವುಗಳ ಪ್ರಾಪ್ತಿಯಾಗುವದೆಂದೂ ಅಲ್ಲಿ ಹೇಳಿದೆ (ಬೃ.ಭಾ.೩-೫-೧). ಆದರೆ ಗೀತಾಭಾಷ್ಯದಲ್ಲಿ ಅದರ ವಿಚಾರವಿಲ್ಲ, ಏಷಣಾಪರಿತ್ಯಾಗಪೂರ್ವಕವಾಗಿ ಆತ್ಮಜ್ಞಾನಕ್ಕೆ ಅಂಗವಾಗಿ ಸ್ವೀಕರಿಸಿರುವ ಪಾರಿವ್ರಾಜ್ಯವೇ ಇಲ್ಲಿ ಹೇಳಿರುವ ಸಂನ್ಯಾಸ. (೧೪೦, ೧೪೧). ಈ ಮುಮುಕ್ಷುಗಳ ವಿವಿದಿಷಾಸಂನ್ಯಾಸವು ಅಂತರ್ಮುಖಿಯಾಗಿ ಯಮನಿಯಮಾದಿಗಳೊಡನೆ ಧ್ಯಾನಯೋಗವನ್ನು ಅನುಷ್ಠಾನ ಮಾಡಬಲ್ಲ ಅಧಿಕಾರಿಗೆ ಮಾತ್ರ ತಕ್ಕದ್ದಾಗಿರುತ್ತದೆ. ಹಾಗಿಲ್ಲದವನಿಗೆ ಆ ಯೋಗ್ಯತೆಯು ಬರುವವಕ್ಕಾಗಿ ಕರ್ಮಯೋಗವನ್ನೇ ಗೀತಾಶಾಸ್ತ್ರದಲ್ಲಿ ವಿಧಿಸಿರುತ್ತದೆ.

(೩೧೮). ಕರ್ಮಸಂನ್ಯಾಸವೂ ಧ್ಯಾನಯೋಗವೂ ದಕ್ಕುವವರೆಗೆ ಕರ್ಮಯೋಗವೇ ಸಾಧನವು, ಅದೇ ಆತ್ಮಜ್ಞಾನವಿಲ್ಲದವನಿಗೆ ಸಂನ್ಯಾಸಕ್ಕಿಂತಲೂ ಉತ್ತಮವಾದದ್ದು (೩೧೮); ಅಂಥ ಕರ್ಮಯೋಗವನ್ನು ಅನುಷ್ಠಾನಮಾಡುವವನೂ ಒಂದು ಬಗೆಯ ಸಂನ್ಯಾಸಿಯೇ ಆಗಿರುತ್ತಾನೆ; ಏಕೆಂದರೆ ಅವನು ಕರ್ಮಫಲದ ಸಂಗವನ್ನು ತ್ಯಾಗ ಮಾಡಿರುತ್ತಾನೆ (೩೨೪) ಎಂದು ಗೀತೆಯಲ್ಲಿ ಕರ್ಮಯೋಗವನ್ನು ಹೊಗಳಿರುತ್ತದೆ. ಇದು **ಫಲತ್ಯಾಗರೂಪವಾದ ಸಂನ್ಯಾಸವು**; ಇದರಂತೆ ಕಾಮ್ಯಕರ್ಮಗಳನ್ನು ಬಿಡುವದೆಂಬುದು ಕಾಮಗಳಲ್ಲಿ ಕೆಲವನ್ನು ಬಿಡುವದೆಂಬ **ಕಾಮಸಂನ್ಯಾಸವಾಗಿರು**ತ್ತದೆ. ಇವೆರಡೂ ಗೌಣವೃತ್ತಿಯಿಂದ ಸಂನ್ಯಾಸಗಳೆನಿಸಿರುತ್ತವೆ.

## ಸಮುಚ್ಚಯವಾದನಿರಾಕರಣೆ

ಜ್ಞಾನಕರ್ಮಸಮುಚ್ಚಯವನ್ನು ಭಾಷ್ಯಕಾರರು ನಿರಾಕರಣೆಮಾಡಿರುವದರ ತತ್ತ್ವವನ್ನು ಈಗ ವಾಚಕರು ಸುಲಭವಾಗಿ ಮನವರಿಕೆಮಾಡಿಕೊಳ್ಳಬಹುದಾಗಿದೆ. ಈ ಆಚಾರ್ಯರು ಹೇಳುವ ಪರಮಾರ್ಥಸಂನ್ಯಾಸವೆಂಬುದು ಒಂದು ಬಗೆಯ ಸಾಧನವಲ್ಲ; ಆತ್ಮನಲ್ಲಿ ಕ್ರಿಯಾಕಾರಕಫಲಗಳ ಸಂಬಂಧವಿಲ್ಲವೆಂಬ ಪರಮಾರ್ಥವನ್ನು ಕಂಡುಕೊಳ್ಳುವ ಜ್ಞಾನವಿಶೇಷವಾಗಿದೆ ಆದ್ದರಿಂದ ಅಲ್ಲಿ ಜ್ಞಾನಕ್ಕೂ ಕರ್ಮಕ್ಕೂ ಯಾವ ಸಮುಚ್ಚಯವೂ ಸಂಭವಿಸುವ ಹಾಗೆಯೇ ಇರುವದಿಲ್ಲ (೩೬). ಜನಕಾದಿಗಳೂ ಕರ್ಮವನ್ನು ಮಾಡುತ್ತಿದ್ದರೆಂದು ಗೀತೆಯಲ್ಲಿ ಹೇಳಿರುವದರಿಂದಲೂ ಜ್ಞಾನಿಗಳಾದವರು ಕೆಲವರು ಗೃಹಸ್ಥಾಶ್ರಮದಲ್ಲಿಯೇ ಇರುವದು ಕಂಡುಬರುವದರಿಂದಲೂ ಜ್ಞಾನಕರ್ಮಸಮುಚ್ಚಯವಾದಕ್ಕೂ ಬೆಂಬಲವಿಲ್ಲದೆ ಇಲ್ಲ ಎಂದು ಕೆಲವರು ಭ್ರಾಂತರಾಗುವರು. ಆದರೆ ನಿಜವಾಗಿ ಜ್ಞಾನಿಗಳಾದವರಿಗೆ ಕರ್ಮವುಂಟೆಂದು ಶಾಸ್ತ್ರದಲ್ಲಿ ಎಲ್ಲಿಯೂ ಹೇಳಿಲ್ಲ. ಅವರು ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿದ್ದರೆಂದು ಇತಿಹಾಸಪುರಾಣಗಳಲ್ಲಿ ವರ್ಣಿತವಾಗಿರುತ್ತದೆ. ಆದ್ದರಿಂದ ಜ್ಞಾನಿಯ ದೃಷ್ಟಿಯಿಂದ ಕರ್ಮವಾಗಲಿ ಅದರ ಪ್ರಯೋಜನವಾಗಲಿ ಇಲ್ಲದಿರುವದರಿಂದ ಉಳಿದವರ ದೃಷ್ಟಿಯಿಂದ ಅವನು ಕರ್ಮವನ್ನು ಮಾಡುವಂತೆ ತೋರಿದರೂ ಲೋಕಸಂಗ್ರಹಾರ್ಥವಾಗಿ ಮಾಡುವ ಅಂಥ ಕರ್ಮವು ನಿಜವಾಗಿ ಕರ್ಮವೇ ಅಲ್ಲ; ಅದೆಲ್ಲವೂ ಅವನ ದೃಷ್ಟಿಯಿಂದ ಬ್ರಹ್ಮವೇ ಆಗಿರುತ್ತದೆ (೨೭೬). ಆ ಕರ್ಮಾಭಾಸದಲ್ಲಿ ಅವನಿಗೆ ಕರ್ತೃತ್ವಬುದ್ಧಿಯಾಗಲಿ ಫಲಾಭಿಸಂಧಿಯಾಗಲಿ ಇರುವದೇ ಇಲ್ಲ. ಆದ್ದರಿಂದ ಶ್ರೀಕೃಷ್ಣಾವತಾರವನ್ನು ಮಾಡಿದ ಭಗವಂತನು ಕ್ಷಾತ್ರಧರ್ಮವನ್ನು ಅನುಸರಿಸಿದಂತೆ ಲೀಲೆಯಿಂದ ತೋರಿಸುತ್ತಿದ್ದರೂ ಆ ಕರ್ಮವು ಕರ್ಮವೆಂದಾಗಲಿ ಆತನಿಗೆ ಮೋಕ್ಷಕ್ಕೆ

ಸಾಧನವೆಂದಾಗಲಿ ಹೇಗೆ ಆಸ್ತಿಕರು ಯಾರೂ ಭಾವಿಸುವದಿಲ್ಲವೋ ಅಕರ್ತ್ರಾತ್ಮ ಜ್ಞಾನದಿಂದ ಕೂಡಿದ ಜೀವನ್ಮುಕ್ತರಿಗೂ ಹಾಗೆಯೇ ಜ್ಞಾನಕರ್ಮಗಳ ಸಮುಚ್ಚಯವಿದೆ ಎಂದು ವಿವೇಕಿಗಳು ಯಾರೂ ಭಾವಿಸಲಾರರು (೧೨, ೧೭೯, ೧೮೩, ೧೮೮, ೨೬೬, ೨೬೭, ೨೭೩, ೨೭೪). ಕರ್ಮಸಂನ್ಯಾಸವನ್ನು ಮಾಡಿರುವ ಜ್ಞಾನಿಗಂತೂ ಅಭಿಮಾನರಹಿತವಾಗುವದರಿಂದ ಶರೀರಸ್ಥಿತಿಗಾಗಿ ಅವಶ್ಯವಾಗಿ ಮಾಡಬೇಕಾಗಿರುವ ಕರ್ಮಗಳುಕೂಡ ಸಂಬಂಧಿಸಿರುವದಿಲ್ಲ (೨೭೦) ಎಂಬುದು ಸಿದ್ಧವಾಗಿಯೇ ಇದೆ. ಆದ್ದರಿಂದ ಜ್ಞಾನಿಯಾದವನಿಗೆ ಕರ್ಮದ ಗೋಜು ಬೇಕೇ ಇಲ್ಲವೆಂದು ಸಿದ್ಧವಾಯಿತು.

ಇನ್ನು ಜ್ಞಾನಿಯಲ್ಲದಿದ್ದರೂ ಜ್ಞಾನಾಂಗವಾಗಿ ಸಂನ್ಯಾಸವನ್ನು ಶಾಸ್ತ್ರೋಕ್ತ ರೀತಿಯಿಂದ ಸ್ವೀಕರಿಸಿದವನಿಗೂ ಅಗ್ನಿಹೋತ್ರಾದಿಗಳ ಸಂಬಂಧವಿಲ್ಲವೆಂಬುದು ಸ್ಪಷ್ಟವಾಗಿದೆ. ಅವನಿಗೆ ಸ್ಮಾರ್ತಕರ್ಮದಿಂದೊಡಗೂಡಿದ ಜ್ಞಾನವು ಮುಕ್ತಿಗೆ ಹೇತುವಾಗುವದು ಎನ್ನುವದಾದರೆ ಶ್ರೌತಕರ್ಮಗಳೂ ಇರುವ ಗೃಹಸ್ಥನಿಗೆ ಹೆಚ್ಚಾದ ಹೊರೆಯನ್ನು ಶ್ರುತಿಯು ಹೊರಿಸಿದಂತೆ ಆಗುತ್ತದೆ; ಹಾಗಿಲ್ಲದೆ ಹೆಚ್ಚಿನ ಕರ್ಮಗಳು ಇರುವದರಿಂದ ಗೃಹಸ್ಥನಿಗೇ ಮೋಕ್ಷವೆಂದು ಕಲ್ಪಿಸಿದರೆ ಜ್ಞಾನಾಂಗವಾಗಿ ಸಂನ್ಯಾಸವನ್ನು ಶ್ರುತಿಸ್ಮೃತಿಪುರಾಣೇತಿಹಾಸಗಳಲ್ಲಿಯೂ ಯೋಗಶಾಸ್ತ್ರಗಳಲ್ಲಿಯೂ ವಿಧಿಸಿರುವದಕ್ಕೆ ವಿರುದ್ಧವಾಗಿ ವಾದಿಸಿದಂತೆ ಆಗುತ್ತದೆ. ಆದ್ದರಿಂದ ಮುಮುಕ್ಷುವಿಗೆ ಸರ್ವಕರ್ಮಸಂನ್ಯಾಸವನ್ನು ವಿಧಿಸಿರುವದರಿಂದಲೂ ಮೋಕ್ಷವು ಕಾರ್ಯವಲ್ಲದ್ದರಿಂದಲೂ ಕರ್ಮದ ಗೋಜು ಜ್ಞಾನಕ್ಕೆ ಸರ್ವಥಾ ಇಲ್ಲವೆಂದು ತಿಳಿಯಬೇಕು (೧೩೯ರಿಂದ ೧೪೨).

ಕರ್ಮವನ್ನು ಸರ್ವಥಾ ಬಿಡುವದಾದರೆ ಪ್ರತ್ಯವಾಯವುಂಟಾಗುವದೆಂಬ ಮತವು ಸಂನ್ಯಾಸವಿಧಾನಶಾಸ್ತ್ರಕ್ಕೆ ವಿರುದ್ಧವಾಗಿರುತ್ತದೆ. ಆದ್ದರಿಂದ ಸಂನ್ಯಾಸಿಗೆ ಪ್ರತ್ಯವಾಯವನ್ನು ಕಲ್ಪಿಸುವದಕ್ಕೆ ಬರುವದಿಲ್ಲ ಇದೂ ಅಲ್ಲದೆ ಕರ್ಮಗಳನ್ನು ಮಾಡದೆ ಇರುವದೆಂಬ ಅಭಾವದಿಂದ ಪ್ರತ್ಯವಾಯವೆಂಬ ಭಾವವು ಉಂಟಾಗುವದೆಂಬುದು ಯುಕ್ತಿವಿರುದ್ಧವೂ ಆಗಿರುತ್ತದೆ (೧೪೨) ಆದ್ದರಿಂದಲೂ ಸಮುಚ್ಚಯವಾದವು ಸರಿಯಲ್ಲ–ಎಂದು ಭಾಷ್ಯಕಾರರು ಅಭಿಪ್ರಾಯಪಟ್ಟಿರುತ್ತಾರೆ

## ಯೋಗವೂ ಅದರ ಫಲವೂ

ವೃತ್ತಿಕಾರರೇ ಮುಂತಾದವರು ಜ್ಞಾನವನ್ನು ಉಪಾಸನೆಯೆಂದು ಭಾವಿಸಿ ಆ ಉಪಾಸನೆಯನ್ನೇ ಗೀತೋಕ್ತಯೋಗವೆಂದು ಭಾವಿಸಿರುತ್ತಾರೆಂದೂ ಇದರಿಂದ ಅವರಿಗೆ ಜ್ಞಾನಕರ್ಮಸಮುಚ್ಚಯದಿಂದ ಆಗುವ ಮೋಕ್ಷವು ಪರೋಕ್ಷವಾಗಿ ಶರೀರ

ಪಾತಾನಂತರದಲ್ಲಿ ಆಗುವದೆಂಬ ಸಿದ್ಧಾಂತವು ಏರ್ಪಟ್ಟಿರುವದೆಂದೂ ಹಿಂದೆ ಹೇಳಿರುತ್ತೀವಷ್ಟೆ. ಆತ್ಮಯಾಥಾತ್ಮ್ಯಜ್ಞಾನದಿಂದ ಅಜ್ಞಾನಕೃತವಾದ ಕ್ರಿಯಾಕಾರಕಫಲರೂಪವಾದ ಸಂಸಾರವು ಬಾಧಿತವಾಗಿ ಆತ್ಯಂತಿಕವಾಗಿ ಇಲ್ಲವಾಗುವದೇ ಮೋಕ್ಷವೆಂದು ಹೇಳುವ (೪-೭) ಭಾಷ್ಯಕಾರರ ಮತದಲ್ಲಿ ಎಂಟನೆಯ ಅಧ್ಯಾಯುವೇ ಮುಂತಾದ ಕಡೆಯಲ್ಲಿ ಹೇಳುವ ಶರೀರಪಾತಾನಂತರದ ಫಲವಾದ ಮೋಕ್ಷವು ಮುಖ್ಯ ಮೋಕ್ಷವಾಗಲಾರದೆಂಬುದು ತಾನೇ ಏರ್ಪಡುತ್ತದೆ. ಆದ್ದರಿಂದ ಓಂಕಾರಪ್ರತೀಕವೇ ಮುಂತಾದವುಗಳಿಂದ ನಿರ್ಗುಣೋಪಾಸನೆಯನ್ನು ಮಾಡುವವರಿಗೆ ಕಾಲಾಂತರದಲ್ಲಿ ಬ್ರಹ್ಮಲೋಕದಲ್ಲಿ ಜ್ಞಾನವಾಗಿ ಮುಕ್ತಿಯಾಗುವದೆಂದು ಶ್ರುತಿಯಲ್ಲಿ ಹೇಳಿರುವದನ್ನೇ ಎಂಟನೆಯ ಅಧ್ಯಾಯದಲ್ಲಿ ಹೇಳಿದೆಯೆಂದೂ ಪರಬ್ರಹ್ಮೋಪಾಸನೆಯನ್ನೇ ಇಲ್ಲಿ **ಅಭ್ಯಾಸಯೋಗ**ವೆಂಬ ಹೆಸರಿನಿಂದ ಕರೆದಿರುತ್ತದೆ (೮-೮) ಎಂದೂ ಈ ಆಚಾರ್ಯರ ಮತವಾಗಿರುತ್ತದೆ

ಆದರೆ ಯೋಗವೆಂಬ ಮಾತಿಗೆ ಉಪಾಸನೆ ಎಂಬ ಅರ್ಥವೇ ಅಲ್ಲದೆ 'ನಿದಿಧ್ಯಾಸನ' ಎಂದರೆ ಸಮ್ಯಗ್ದರ್ಶನಕ್ಕಾಗಿ ಮಾಡುವ ಆತ್ಮಚಿಂತನೆ ಎಂಬರ್ಥವನ್ನೂ ಮಾಡಿರುವದು ಭಾಷ್ಯಕಾರರ ವಿವರಣೆಯಲ್ಲಿ ಕಂಡುಬರುವ ಒಂದು ವಿಶೇಷವಾಗಿರುತ್ತದೆ. ಆರನೆಯ ಅಧ್ಯಾಯದಲ್ಲಿ ಹೇಳಿರುವ ಯೋಗವು ಕ್ಷೇತ್ರಜ್ಞನಾದ ಜೀವನಿಗೂ ಸರ್ವಭೂತಗಳಿಗೂ ಆತ್ಮನಾಗಿರುವ ಈಶ್ವರನಿಗೂ ಐಕ್ಯವನ್ನು ಕಂಡುಕೊಳ್ಳುವ ಫಲವನ್ನು ಕೊಡುವದೆಂದು (೬-೨೯) ಹೇಳಿರುವದರಿಂದ ಈ ಎರಡು ಅರ್ಥಗಳನ್ನು ಆಚಾರ್ಯರು ಯೋಗಶಬ್ದಕ್ಕೆ ಮಾಡಿರುತ್ತಾರೆಂದು ನಿಶ್ಚಯವಾಗುತ್ತದೆ.

ಇದೂ ಅಲ್ಲದೆ "ಸಂನ್ಯಾಸ" ಎಂಬ ಶಬ್ದಕ್ಕೆ ಬೇರೆಬೇರೆಯ ಅಂತಸ್ತಿನ ಅರ್ಥಗಳನ್ನು ಹೇಳಿರುವಂತೆಯೇ ಗೀತೆಯಲ್ಲಿ **ಯೋಗವೆಂಬ ಮಾತಿಗೂ ಅರ್ಥಭೇದವನ್ನು** ತೋರಿಸಿದೆ ಎಂದು ಶಂಕರಾಚಾರ್ಯರವರು ತಿಳಿಸಿರುವದನ್ನು ನಾವು ಲಕ್ಷ್ಯದಲ್ಲಿಡಬೇಕು. ಅವರ ಮತದಲ್ಲಿ ಗೀತೋಕ್ತಯೋಗವೆಂದರೆ ನಿಜವಾಗಿ **ಸಮ್ಯಗ್ದರ್ಶನವೇ** (೨೨೧), ಅದಕ್ಕೆ ಸಾಧನವಾಗಿರುವದರಿಂದ ಧ್ಯಾನಯೋಗವೂ, ಧ್ಯಾನಯೋಗಕ್ಕೆ ಸಾಧನವಾಗಿರುವದರಿಂದ ಕರ್ಮಯೋಗವೂ ಗೌಣಾರ್ಥದಲ್ಲಿ ಯೋಗವೆನಿಸಿರುತ್ತವೆ (೩೬೯, ೩೭೩), ಈ ಯೋಗಗಳಲ್ಲಿ ಧ್ಯಾನಯೋಗವನ್ನು ಯೋಗವೆಂದು ಆರನೆಯ ಅಧ್ಯಾಯದಲ್ಲಿಯೂ ಕ್ರಮಮುಕ್ತಿಯನ್ನು ಕೊಡುವ ಉಪಾಸನೆಯನ್ನು ಯೋಗವೆಂದು ಎಂಟನೆಯ ಅಧ್ಯಾಯದಲ್ಲಿಯೂ ಕರೆದಿರುತ್ತದೆ. ಈ ಎರಡು ಪ್ರಕರಣಗಳಲ್ಲಿಯೂ ಯೋಗದರ್ಶನದಲ್ಲಿ ಬಳಕೆಯಾಗಿರುವ ಪಾರಿಭಾಷಿಕಶಬ್ದಗಳನ್ನು ಭಾಷ್ಯದಲ್ಲಿ ಉಪಯೋಗಿಸಿರುವದನ್ನು ಕಂಡು ಅನೇಕರು ಚಿತ್ತವೃತ್ತಿನಿರೋಧರೂಪ

ವಾದ ಯೋಗವನ್ನೇ ಇಲ್ಲಿಯೂ ಹೇಳಿದೆಯೆಂದು ತಪ್ಪಾಗಿ ತಿಳಿದುಕೊಂಡಿರುತ್ತಾರೆ. ಆದರೆ "ಸಾಂಖ್ಯರೂ ಯೋಗಿಗಳೂ ದ್ವೈತಿಗಳಾದ್ದರಿಂದ ವೇದನಿರಪೇಕ್ಷವಾದ ಯೋಗವಾಗಲಿ ಸಾಂಖ್ಯವಾಗಲಿ ಮೋಕ್ಷಕ್ಕೆ ಮಾರ್ಗವನ್ನು ತಿಳಿಸಲಾರದು ; ಸಾಂಖ್ಯ ಯೋಗಗಳಿಂದ ತತ್ತ್ವದರ್ಶನವುಂಟಾಗುವದೆಂದು ಶ್ರುತಿಯಲ್ಲಿ ಹೇಳಿರುವದು ವೈದಿಕವಾದ ಜ್ಞಾನಧ್ಯಾನಗಳನ್ನೇ" ಎಂದು ಬ್ರಹ್ಮಸೂತ್ರಭಾಷ್ಯದಲ್ಲಿ (೨-೧-೩) ಆಚಾರ್ಯರು ಹೇಳಿರುವದನ್ನು ಮನದಂದವರಿಗೆ ಇಂಥ ಭ್ರಾಂತಿಯಾಗುವದಕ್ಕೆ ಕಾರಣವಿರುವದಿಲ್ಲ. ವೇದಕ್ಕೆ ವಿರುದ್ಧವಲ್ಲದ ಅಂಶದಲ್ಲಿ ಸಾಂಖ್ಯಯೋಗಗಳನ್ನೂ ವೇದಾಂತಿಗಳು ಉಪಯೋಗಿಸಿಕೊಳ್ಳುವದು ತಪ್ಪಲ್ಲ ಎಂದು ಅದೇ ಸೂತ್ರಭಾಷ್ಯದಲ್ಲಿ ಆಚಾರ್ಯರು ಅಪ್ಪಣೆಕೊಡಿಸಿರುವದನ್ನು ಲಕ್ಷ್ಯದಲ್ಲಿಟ್ಟರೆ ಗೀತಾಭಾಷ್ಯದಲ್ಲಿ ಕಂಡುಬರುವ ಯೋಗದ ಪ್ರಕ್ರಿಯೆಯು ವೈದಿಕರಿಗೂ ಅಂಗೀಕಾರ್ಯವಾಗಿದೆ ಎಂಬುದು ಮನದಟ್ಟಾಗುತ್ತದೆ.

ಮೀಮಾಂಸಕರೂ ಮೀಮಾಂಸಕರ ಬೆಂಬಿಡಿದು ವೇದಾಂತವಿಚಾರವನ್ನು ಮಾಡುವವರೂ ಹೇಳುವ ಕರ್ಮಕ್ಕಿಂತ **ಗೀತೋಕ್ತಕರ್ಮಯೋಗವು** ಯಾವ ಭಾಗದಲ್ಲಿ ವಿಲಕ್ಷಣವಾಗಿದೆ ಎಂಬುದನ್ನೂ ಯೋಗದರ್ಶನದಲ್ಲಿ ಹೇಳಿರುವ ಯೋಗಕ್ಕಿಂತ **ಗೀತೋಕ್ತಧ್ಯಾನಯೋಗವು** ಯಾವ ಭಾಗದಲ್ಲಿ ವಿಲಕ್ಷಣವಾಗಿದೆಯೆಂಬುದನ್ನೂ ಈ ಪೀಠಿಕಾಭಾಗದಲ್ಲಿ ಶಾಂಕರಭಾಷ್ಯಾನುಸಾರವಾಗಿ ನಾವು ವಿವೇಚಿಸಿರುತ್ತೇವೆ. ಎರಡನೆಯ ಸಂಪುಟದ ಪೀಠಿಕಾಭಾಗದಲ್ಲಿ ಗೀತೋಕ್ತವಾದ ಭಕ್ತಿಜ್ಞಾನಗಳ ತತ್ತ್ವವನ್ನೂ ಸಾಂಖ್ಯವೈಶೇಷಿಕಾದಿಗಳು ಹೇಳುವ ಜ್ಞಾನಕ್ಕೂ ಗೀತೋಕ್ತಜ್ಞಾನಕ್ಕೂ ಇರುವ ವೈಲಕ್ಷಣ್ಯವನ್ನೂ ವಿವೇಚನೆಮಾಡಿ ಭಗವದ್ಗೀತೆಯು ಸರ್ವಸಮ್ಮತವಾದ ಸಿದ್ಧಾಂತದ ಆಧಾರದ ಮೇಲೆ ವಿಶ್ವವ್ಯಾಪಕಧರ್ಮವನ್ನು ಹೇಗೆ ಪ್ರತಿಪಾದಿಸುವದೆಂದು ತೋರಿಸಿಕೊಡುವೆವು.

**ಯ. ಸುಬ್ರಹ್ಮಣ್ಯಶರ್ಮ.**

# ಸಂಕ್ಷೇಪಾಕ್ಷರಗಳ ವಿವರಣೆ

ಈ ಗ್ರಂಥರತ್ನಮಾಲೆಯ ಉಳಿದ ಸಂಪುಟಗಳಂತೆ ಇಲ್ಲಿಯೂ ಆಯಾ ಗ್ರಂಥಗಳನ್ನು ಮೊದಲನೆಯ ಅಕ್ಷರದಿಂದ ಸೂಚಿಸಿದೆ. ಭಾಷ್ಯಭಾಗಗಳನ್ನು ಒಂದೊಂದು ಸಂಖ್ಯೆಯಿಂದಲೂ ಗೀತೆಯ ಅಧ್ಯಾಯ, ಶ್ಲೋಕ-ಇವನ್ನು ಎರಡು ಸಂಖ್ಯೆಗಳಿಂದಲೂ ತಿಳಿಸಿದೆ. ಸ್ಪಷ್ಟವಾಗಿ ತಿಳಿಯಬರುವ ಸಂಕೇತಗಳನ್ನು ಬಿಟ್ಟು ಕೆಲವು ಹೊಸ ಸಂಕೇತಗಳನ್ನು ಮಾತ್ರ ಇಲ್ಲಿ ವಿವರಿಸಿದೆ.

| | |
|---|---|
| ಅ॥ | ಪೂನಾನಗರಿಯ ಆಷ್ಟೇಕರ್ ಕಂಪೆನಿಯಲ್ಲಿ ಮುದ್ರಿತವಾದ ಗೀತಾ ಭಾಷ್ಯ. |
| ಆ॥ | ಆನಂದಗಿರಿಯ ವ್ಯಾಖ್ಯಾನ |
| ಗು॥ | ಗುಜರಾತಿ ಪ್ರೆಸ್ಸಿನಲ್ಲಿ ಪ್ರಕಟವಾಗಿರುವ ಗೀತಾಭಾಷ್ಯ |
| ಗೌ.ಧ. | ಗೌತಮಧರ್ಮಸೂತ್ರ |
| ನಿ॥ | ನಿರ್ಣಯಸಾಗರಮುದ್ರಣಾಲಯದಲ್ಲಿ ಅಚ್ಚಾಗಿರುವ ಗೀತಾಭಾಷ್ಯ |
| ಬೃ.ವಾ. | ಬೃಹದಾರಣ್ಯಕೋಪನಿಷದ್ಭಾಷ್ಯವಾರ್ತಿಕ, ಸುರೇಶ್ವರಾಚಾರ್ಯಕೃತ |
| ಭಾ. | ಭಾಷ್ಯ |
| ತೈ.ಭಾ. | ತೈತ್ತಿರೀಯ ಭಾಷ್ಯ. ಹೀಗೆಯೇ ಮಿಕ್ಕ ಭಾಷ್ಯಗಳನ್ನೂ ಸೂಚಿಸಿದೆ. |
| ಭಾ.ಭಾ. | ಭಾಷ್ಯಭಾಗ. |
| ಮ॥ | ಮದರಾಸಿನಲ್ಲಿ ಅಚ್ಚಾಗಿರುವ ಹಳೆಯ ತೆಲುಗು ಲಿಪಿಯ ಪುಸ್ತಕ. |
| ಮೈ॥ | ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿ ಅಚ್ಚಾಗಿರುವ ಗೀತಾ ಭಾಷ್ಯ. |
| ಮೋ.ಧ. | ಮೋಕ್ಷಧರ್ಮ. |
| ಯೋ.ಸೂ. | ಯೋಗಸೂತ್ರ, ಪತಂಜಲಿಕೃತ. |
| ವಾ॥ | ಶ್ರೀರಂಗಂ ವಾಣೀವಿಲಾಸಮುದ್ರಣಾಲಯದಲ್ಲಿ ಅಚ್ಚಾಗಿರುವ ಗೀತಾ ಭಾಷ್ಯ. |

# ವಿಷಯಾನುಕ್ರಮಣಿಕೆ

## ಭಾಷ್ಯಕಾರರ ಅವತರಣಿಕೆ

ಗೀತೆಯಲ್ಲಿ ಉಪದಿಷ್ಟವಾಗಿರುವ ಧರ್ಮದ್ವಯ (ಭಾ ಭಾ ೧-೩)—ಗೀತಾಶಾಸ್ತ್ರದ ಅನುಬಂಧಗಳು (೪-೬) ಪುಟಗಳು ೧-೧೦

## ಒಂದನೆಯ ಅಧ್ಯಾಯ

ಕಥೆಯ ಸಂಬಂಧ (ಶ್ಲೋ. ೧-೨)—ದುರ್ಯೋಧನನು ದ್ರೋಣನಿಗೆ ಹೇಳಿದ್ದು (ಶ್ಲೋ, ೩-೧೧)—ಯುದ್ಧದ ಆರಂಭದಲ್ಲಿ ಆದ ಶಂಖಧ್ವನಿ (ಶ್ಲೋ ೧೨-೧೯)—ಅರ್ಜುನನು ಶತ್ರುಗಳನ್ನು ನೋಡಿದ್ದು (ಶ್ಲೋ ೨೦-೨೭)—ಅರ್ಜುನನ ವಿಷಾದೋಕ್ತಿ (ಶ್ಲೋ ೨೮-೪೭)

ಪುಟ ೧೧-೨೧

## ಎರಡನೆಯ ಅಧ್ಯಾಯ

### (ಸಾಂಖ್ಯಯೋಗ)

ಶ್ರೀಕೃಷ್ಣನು ಅರ್ಜುನನ ದೌರ್ಬಲ್ಯವನ್ನು ನಿಂದಿಸಿದ್ದು (ಶ್ಲೋ ೧-೩)—ಅರ್ಜುನನ ಉತ್ತರ (ಶ್ಲೋ ೪-೯)—ಶ್ರೀಕೃಷ್ಣನ ಉತ್ತರದ ಪ್ರಾರಂಭ (ಶ್ಲೋ ೧೦) ಇಲ್ಲಿಯವರೆಗಿನ ಗ್ರಂಥದ ತಾತ್ಪರ್ಯ (ಭಾ ಭಾ ೭)—ಕರ್ಮಜ್ಞಾನಸಮುಚ್ಚಯದಿಂದ ಮೋಕ್ಷವೆಂಬ ವಾದ (೮)—ಸಮುಚ್ಚಯವಾದದಲ್ಲಿ ದೋಷಗಳು (೯-೧೧)—ಸಮುಚ್ಚಯವೆಂದು ಭ್ರಾಂತಿಯಿಂದ ತೋರುವ ಸ್ಥಲಗಳು (೧೨-೧೩)—ಉಪಸಂಹಾರ (೧೪)—ಆತ್ಮನು ನಿತ್ಯನು ಮತ್ತು ನಿರ್ವಿಕಾರಿ (೧೫-೩೭)—ಜ್ಞಾನಿಯು ಆತ್ಮಸ್ವರೂಪನೇ (೩೮)—ಅಜ್ಞಾನಿಗೇ ಕರ್ಮಗಳು ವಿಹಿತವಾಗಿರುತ್ತವೆ (೩೯)—ಅಕರ್ತ್ರಾತ್ಮಜ್ಞಾನವು ಉಂಟಾಗುವದಿಲ್ಲವೆಂಬುದು ಸರಿಯಲ್ಲ (೪೦)—ಜ್ಞಾನದ ಪ್ರಯೋಜನ (೪೧)—ಜ್ಞಾನಿಯ ಸರ್ವಕರ್ಮ ಸಂನ್ಯಾಸ (೪೨)—ಆತ್ಮನು ಅವಿಕ್ರಿಯನಾದ್ದರಿಂದ ಶೋಕಕ್ಕೆ ಕಾರಣವಿಲ್ಲ (೪೩-೫೦)—ಲೌಕಿಕದೃಷ್ಟಿಯಿಂದ ನೋಡಿದರೆ ಶೋಕಕ್ಕೆ ಕಾಸಣವಿಲ್ಲ (೫೧-೫೬)—ಆತ್ಮನನ್ನು ಯಥಾರ್ಥವಾಗಿ ಅರಿಯುವದು ಬಲು ಕಷ್ಟ (೫೭-೫೮)—ಆತ್ಮನ ನಿತ್ಯತ್ವದ ಉಪಸಂಹಾರ (೫೯-೬೦)—ಸ್ವಧರ್ಮದೃಷ್ಟಿಯಿಂದಲೂ ಶೋಕಕ್ಕೆ ಕಾರಣವಿಲ್ಲ (೬೧-೬೪)—ಕರ್ಮಯೋಗದ ಮಹಿಮೆ (೭೫-೭೮)—ಕಾಮಿಗಳಿಗೆ ಕರ್ಮಯೋಗವು ದಕ್ಕದು (೭೯-೮೩)—ಕರ್ಮಯೋಗದ ಫಲವು (೮೪-೯೪)—ಜ್ಞಾನಿಯಾಗುವದು ಯಾವಾಗ (೯೬-೯೯)—ಸ್ಥಿತಪ್ರಜ್ಞನ ಲಕ್ಷಣ (೧೦೦-೧೨೫)—ಸ್ಥಿತಪ್ರಜ್ಞನಿಗೆ ಯಾವ ವ್ಯವಹಾರವೂ ಇಲ್ಲ (೧೨೬-

೧೨೭)–ಜ್ಞಾನಿಗೆ ಕರ್ಮವು ವಿಹಿತವಾಗಿಲ್ಲ (೧೨೮)–ಆತ್ಮಜ್ಞಾನವಾದ ಬಳಿಕ ಪ್ರಮಾಣ ವ್ಯವಹಾರವಿರುವದಿಲ್ಲ(೧೨೯)–ಜ್ಞಾನನಿಷ್ಠೆಯಿಂದಲೇ ಮುಕ್ತಿ (೧೩೦-೧೩೫) ಪುಟ ೨೨-೧೫೨

ಎರಡನೆಯ ಅಧ್ಯಾಯದ ಸಾರ ಪುಟ ೧೫೩-೧೫೪

## ಮೂರನೆಯ ಅಧ್ಯಾಯ

### (ಕರ್ಮಯೋಗ)

ಅಧ್ಯಾಯದ ಸಂಬಂಧ (೧೩೬)–ವೃತ್ತಿಕಾರರು ಹೇಳಿರುವ ಅಧ್ಯಾಯಸಂಬಂಧವು ಪೂರ್ವಾಪರವಿರುದ್ಧ (೧೩೭-೧೪೦)–ಸಂನ್ಯಾಸವಿಧಿಯ ವಚನಗಳಿಗೂ ಸಮುಚ್ಚಯವಾದವು ವಿರುದ್ಧ (೧೪೧)–ಮೋಕ್ಷಕ್ಕೆ ಕರ್ಮದ ಹಂಗೇ ಇಲ್ಲ (೧೪೨)–ಸಮುಚ್ಚಯವಾದವು ಇಲ್ಲಿರುವ ಪ್ರಶ್ನೋತ್ತರಗಳಿಗೆ ಅನುಗುಣವಲ್ಲ (೧೪೩-೧೪೮)–ಭಗವಂತನ ಉತ್ತರ: ಜ್ಞಾನಕರ್ಮಗಳು ಬೇರೆಬೇರೆಯ ಜನರಿಗೆ (೧೪೯-೧೫೭)–ಆತ್ಮಜ್ಞಾನಿಯಲ್ಲದವನು ಕರ್ಮವನ್ನು ಬಿಡುವದು ಸರಿಯಲ್ಲ (೧೫೮-೧೬೧)–ಕರ್ಮವು ಯಾವಾಗಲೂ ಬಂಧಕವೆನ್ನುವದು ಸರಿಯಲ್ಲ (೧೬೨-೧೬೩)–ದೇವತೆಗಳಿಗೂ ಮನುಷ್ಯರಿಗೂ ಇರುವ ಕರ್ಮಸಂಬಂಧ (೧೬೪-೧೬೮)–ಜಗಚ್ಚಕ್ರವು ನಡೆಯುವದಕ್ಕೂ ಕರ್ಮವನ್ನು ಮಾಡಬೇಕು (೧೬೯-೧೭೨)–ಕರ್ಮಯೋಗವು ಅನಾತ್ಮಜ್ಞರಿಗೇ, ಜ್ಞಾನಿಗಳಿಗಲ್ಲ (೧೭೩-೧೭೭)–ಜ್ಞಾನಿಯು ಲೋಕಸಂಗ್ರಹಕ್ಕಾಗಿ ಮಾಡುವ ಕರ್ಮ (೧೭೮-೧೯೪)–ಪರಮೇಶ್ವರನ ಮತವನ್ನು ಅನುಸರಿಸಿದರೆ ಅಥವಾ ಅನುಸರಿಸದಿದ್ದರೆ ಆಗುವ ಫಲ (೧೯೫-೧೯೯)–ಜಾಣನಾದವನು ಪ್ರಕೃತಿಯ ವಶನಾಗದೆ ಸ್ವಧರ್ಮವನ್ನು ಮಾಡಬೇಕು (೨೦೦-೨೦೫)–ಕಾಮವೇ ಅಧರ್ಮಕ್ಕೆ ಮೂಲ (೨೦೬-೨೧೪)–ಕಾಮವನ್ನು ಗೆಲ್ಲುವನಿಗೆ (೨೧೫-೨೨೦) ಪುಟ ೧೫೫-೨೨೪

ಮೂರನೆಯ ಅಧ್ಯಾಯದ ಸಾರ ಪುಟ ೨೨೫-೨೨೬

## ನಾಲ್ಕನೆಯ ಅಧ್ಯಾಯ

### (ಜ್ಞಾನಯೋಗ)

ಭಾಗವತಮತದ ಗುರುಪರಂಪರೆ (೨೨೧-೨೨೫)–ಈಶ್ವರನ ಅವತಾರ (೨೨೬-೨೩೧)–ಅವತಾರದ ಉದ್ದೇಶ (೨೩೨-೨೩೪)–ಪರಮಾತ್ಮಜ್ಞಾನದ ಫಲ (೨೩೫-೨೩೭)–ಈಶ್ವರನು ಸಾಧಕರಿಗೆ ತಕ್ಕ ಫಲವನ್ನೇ ಕೊಡುತ್ತಾನೆ (೨೩೮-೨೪೧)–ಕರ್ಮಗಳು ಪರಮಾತ್ಮನಿಗೆ ಅಂಟುವದಿಲ್ಲ (೨೪೨-೨೪೮)–ಕರ್ಮಾಕರ್ಮಗಳ ತತ್ತ್ವ (೨೪೯-೨೫೪)–ಕರ್ಮಾಕರ್ಮಗಳ ವಿಷಯಕ್ಕೆ ಜನರ ತಪ್ಪುತಿಳಿವಳಿಕೆ (೨೫೫-೨೫೬)–ಪ್ರಕೃತವಾಗಿರುವ ಕರ್ಮಾಕರ್ಮಗಳ ಅಧ್ಯಾರೋಪ (೨೫೭-೨೫೮)–ಶ್ಲೋಕವ್ಯಾಖ್ಯಾನದ ಉಪಸಂಹಾರ (೨೫೮—ವೃತ್ತಿಕಾರರ ತಪ್ಪುವ್ಯಾಖ್ಯಾನ(೨೫೯)–ವೃತ್ತಿಕಾರರ ಮತದಲ್ಲಿ ದೋಷಗಳು (೨೬೦-೨೬೨)—ಉಪಸಂಹಾರ (೨೬೩) —ಜ್ಞಾನಿಗೆ ಯಾವ ಕರ್ಮದ ಬಾಧವೂ ಇಲ್ಲ(೨೬೪-೨೬೯)—ಶಾರೀರಕರ್ಮದ ವಿಷಯಕ್ಕೆ ಚರ್ಚೆ

(೨೭೦) ಜ್ಞಾನಿಗೆ ಯಾವ ಕರ್ಮದ ಬಂಧವೂ ಇಲ್ಲ (೨೭೧-೨೭೪)-ಜ್ಞಾನಯಜ್ಞ (೨೭೫-೨೭೮) ವೃತ್ತಿಕಾರರ ತಪ್ಪು ವ್ಯಾಖ್ಯಾನ (೨೭೯)-ವೃತ್ತಿಕಾರರ ಮತದಲ್ಲಿ ದೋಷಗಳು (೨೮೦)-ಬಗೆ ಬಗೆಯ ಯಜ್ಞಗಳು (೨೮೧-೨೯೧)-ಜ್ಞಾನದ ಸ್ತುತಿ (೨೯೨-೨೯೩)-ಜ್ಞಾನಕ್ಕೆ ಸಾಧನ ಮತ್ತು ಫಲ (೨೯೪-೨೯೭)-ಜ್ಞಾನದ ಹೆಚ್ಚುಗಾರಿಕೆ (೨೯೮-೩೦೩)-ಜ್ಞಾನಕ್ಕೆ ಗೊತ್ತಾದ ಉಪಾಯ (೩೦೪-೩೦೮)-ಜ್ಞಾನದಿಂದ ಸಂಶಯವನ್ನು ತೊಲಗಿಸಿಕೊಳ್ಳಬೇಕು (೩೦೯-೩೧೨)

ಪುಟ ೨೨೭-೩೧೧

ನಾಲ್ಕನೆಯ ಅಧ್ಯಾಯದ ಸಾರ ಪುಟ ೩೧೨-೩೧೪

## ಐದನೆಯ ಅಧ್ಯಾಯ

### (ಸಂನ್ಯಾಸಯೋಗ)

ಅಧ್ಯಾಯದ ಸಂಬಂಧ, ಅರ್ಜುನನ ಪ್ರಶ್ನೆ (೩೧೩)-ಈ ಪ್ರಶ್ನೆಯಲ್ಲಿ ಅರ್ಜುನನ ಅಭಿಪ್ರಾಯ (೩೧೪)-ಪ್ರಶ್ನೆಯು ಜ್ಞಾನಿಯ ವಿಷಯವಲ್ಲವೆಂಬುದಕ್ಕೆ ಉತ್ತರದ ಬೆಂಬಲ (೩೧೫) ಜ್ಞಾನಿಗೆ ಕರ್ಮಯೋಗವೆಂಬುದೇ ಇಲ್ಲ (೩೧೬)-ಜ್ಞಾನಿಗೂ ಕರ್ಮವನ್ನು ಹೇಳಿದೆ ಎಂಬುದು ಸರಿಯಲ್ಲ (೩೧೮)-ಶ್ಲೋಕದ ಸಂಬಂಧ (೩೧೯)-ಆತ್ಮಜ್ಞಾನಲ್ಲದವನಿಗೆ ಕರ್ಮಯೋಗವೇ ಹೆಚ್ಚಿನದು (೩೨೧-೩೨೪)-ಸಾಂಖ್ಯಯೋಗಗಳಿಗೆ ಇರುವ ಸಂಬಂಧ (೩೨೫-೩೩೨)-ಕರ್ಮ ಯೋಗಿಗಾಗಲಿ ಜ್ಞಾನಿಗಾಗಲಿ ಕರ್ಮದ ಲೇಪವಿಲ್ಲ (೩೩೩-೩೪೦)-ಜ್ಞಾನಿಗೆ ಯಾವ ಕರ್ಮವೂ ಇಲ್ಲ (೩೪೧-೩೪೪)-ಜ್ಞಾನಿಗೂ ಅಜ್ಞಾನಿಗೂ ಭೇದ (೩೪೫-೩೪೭)-ಜ್ಞಾನಿಗಳ ವ್ಯವಹಾರ (೩೪೮-೩೬೪)-ಜ್ಞಾನಯೋಗಕ್ಕೆ ಧ್ಯಾನಯೋಗವು ಅಂತರಂಗ ಸಾಧನ (೩೬೫-೩೬೭).

ಪುಟ ೩೧೫-೩೬೯.

ಐದನೆಯ ಅಧ್ಯಾಯದ ಸಾರ ಪುಟ ೩೭೦-೩೭೧.

## ಆರನೆಯ ಅಧ್ಯಾಯ

### (ಧ್ಯಾನಯೋಗ)

ಕರ್ಮಕ್ಕೂ ಧ್ಯಾನಕ್ಕೂ ಸಂಬಂಧ (೩೬೯)-ಧ್ಯಾನಯೋಗವನ್ನು ಕರ್ಮಿಗೆ ಹೇಳಿಲ್ಲ (೩೭೦-೩೭೨)-ಕರ್ಮಿಯನ್ನು ಯೋಗಿಯೆಂದು ಕರೆದಿರುವದೇಕೆ ? (೩೭೩)-ಕರ್ಮಫಲ ತ್ಯಾಗವು ಧ್ಯಾನಯೋಗಕ್ಕೆ ಸಾಧನ(೩೭೪-೩೭೬)-ಯೋಗದ ಫಲಕ್ಕೆ ಉಪರತಿಯು ಸಾಧನ(೩೭೭-೩೭೮)-ಯೋಗಾರೂಢನ ಲಕ್ಷಣ (೩೭೯-೩೮೭)-ಯೋಗವನ್ನು ಮಾಡುವ ಕ್ರಮ (೩೮೮-೩೯೮)-ಯೋಗಕ್ಕೆ ಆಹಾರಾದಿಗಳ ನಿಯಮ (೩೯೯-೪೦೨)-ಯುಕ್ತನಾದದ್ದರ ಗುರುತು (೪೦೩-೪೧೨)-ಯೋಗಕ್ಕೆ ಮಾಡಬೇಕಾದ ಪ್ರಯತ್ನ (೪೧೩-೪೧೫)-ಯೋಗದ ಫಲ (೪೧೬-೪೨೪)-ಮನೋನಿಗ್ರಹಕ್ಕೆ ಸಾಧನ (೪೨೫-೪೨೯)-ಯೋಗಭ್ರಷ್ಟನ ಗತಿ (೪೩೦-೪೪೦)-ಯೋಗಿಯ ಹೆಚ್ಚುಗಾರಿಕೆ (೪೪೧-೪೪೩).

ಪುಟ ೩೭೨-೪೪೬

ಆರನೆಯ ಅಧ್ಯಾಯದ ಸಾರ ಪುಟ ೪೪೭-೪೪೮

## ಏಳನೆಯ ಅಧ್ಯಾಯ

### (ವಿಜ್ಞಾನಯೋಗ)

ಪರಮಾತ್ಮಜ್ಞಾನದ ಹೆಚ್ಚಿಗೆ (೪೪೫-೪೪೯)–ಭಗವಂತನ ತತ್ತ್ವ (೪೫೦-೪೫೪)–ಭಗವಂತನ ವಿಭೂತಿಗಳು (೪೫೫-೪೬೦)–ಮಾಯೆಯೇ ಜ್ಞಾನಕ್ಕೆ ಅಡ್ಡಿ (೪೬೧-೪೬೬)–ಜ್ಞಾನಿಯು ಪಠಮಾತ್ಮನನ್ನೇ ಹೊಂದುವನು (೪೬೭-೪೭೩)–ಕಾಮಿಗಳು ಮಾಡುವ ಅನ್ಯದೇವತೆಯ ಪೂಜೆ (೪೭೪-೪೮೦)–ಅಜ್ಞರಿಗೆ ಪರಮಾತ್ಮತತ್ತ್ವವು ಗೋಚರಿಸದೆ ಇರಲು ಕಾರಣ (೪೮೧-೪೮೭)–ಪುಣ್ಯವಂತರು ಭಗವಂತನನ್ನು ಭಜಿಸುವರು (೪೮೮-೪೯೨). ಪುಟ ೪೩೯-೪೭೪.

ಏಳನೆಯ ಅಧ್ಯಾಯದ ಸಾರ ಪುಟ ೪೭೫

## ಎಂಟನೆಯ ಅಧ್ಯಾಯ

### (ಅಭ್ಯಾಸಯೋಗ)

ಅರ್ಜುನನ ಪ್ರಶ್ನೆ, ಭಗವಂತನ ಉತ್ತರ (೪೯೩-೪೯೭)–ಮರಣಕಾಲದ ನೆನಪಿಗಾಗಿ ಅಭ್ಯಾಸ (೪೯೮-೫೦೧)–ಅಭ್ಯಾಸಯೋಗದ ಫಲ (೫೦೨-೫೦೫)–ಉಪಾಸನೆಗೆ ಓಂಕಾರದ ಸಹಾಯ (೫೦೬-೫೧೦)–ಪರಮಾತ್ಮನನ್ನು ಪಡೆದವರಿಗೆ ಮತ್ತೆ ಸಂಸಾರವಿಲ್ಲ (೫೧೧-೫೧೩)–ಯಾವ ಲೋಕಕ್ಕೆ ಹೋದರೂ ಸಂಸಾರವು ತಪ್ಪಿದ್ದಲ್ಲ (೫೧೪-೫೨೧)–ಪರಮಪದವು ಅವ್ಯಕ್ತಕ್ಕಿಂತ ವಿಲಕ್ಷಣವಾದದ್ದು (೫೨೨-೫೨೪)–ಪರಮ ಪುರುಷನ ಪ್ರಾಪ್ತಿಗೆ ಭಕ್ತಿಯೇ ಸಾಧನ (೫೨೫-೫೨೬)–ಯೋಗಿಗಳಿಗೂ ಕರ್ಮಿಗಳಿಗೂ ಆಗುವ ಶುಕ್ಲ ಕೃಷ್ಣ ಗತಿಗಳು (೫೨೭-೫೩೨)–ಯೋಗಿಯ ಹೆಚ್ಚುಗಾರಿಕೆ (೫೩೩-೫೩೪). ಪುಟ ೪೭೬-೫೧೨.

ಎಂಟನೆಯ ಅಧ್ಯಾಯದ ಸಾರ ಪುಟ ೫೧೩-೫೧೪.

॥ ಓಂ ॥

### ಶಾಂಕರಭಾಷ್ಯಸಮೇತವಾದ

# ಶ್ರೀಮದ್ಭಗವದ್ಗೀತೆ

## ಭಾಷ್ಯಕಾರರ ಅವತರಣಿಕೆ

### ಓಂ ನಮೋ ಭಗವತೇ ವಾಸುದೇವಾಯ[1]

**ನಾರಾಯಣಃ ಪರೋಽವ್ಯಕ್ತಾದಣ್ಡಮವ್ಯಕ್ತಸಂಭವಮ್ ।**
**ಅಣ್ಡಸ್ಯಾನ್ತಸ್ತ್ವಿಮೇ ಲೋಕಾಃ ಸಪ್ತದ್ವೀಪಾ ಚ ಮೇದಿನೀ[2]॥ ೧ ॥**

೧. ಶ್ರೀಮನ್ನಾರಾಯಣನು ಅವ್ಯಕ್ತಕ್ಕಿಂತಲೂ[3] ಮಿಗಿಲಾದವನು. ಬ್ರಹ್ಮಾಂಡವು[4] ಈ ಅವ್ಯಕ್ತದಿಂದ ಹುಟ್ಟಿರುವದು ಅಂಡದ ಒಳಗೇ ಈ ಲೋಕಗಳಿರುವವು, ಏಳು ದ್ವೀಪಗಳಿಂದಾಗಿರುವ ಈ ಭೂಮಿಯೂ (ಇದರಲ್ಲಿಯೇ ಇರುವದು)[5].

---

1. ಈ ವಾಕ್ಯವನ್ನು ಅನೇಕ ಮುದ್ರಿತಭಾಷ್ಯಗಳ ಆದಿಯಲ್ಲಿ ಇಟ್ಟಿರುತ್ತದೆ. ಆಚಾರ್ಯರು ಭಾಷ್ಯದಲ್ಲಿ ಇದನ್ನು ಸೇರಿಸಿದ್ದರೋ ಇಲ್ಲವೋ ಹೇಳುವದಕ್ಕೆ ಬರುವದಿಲ್ಲ. ಆ॥ ವ್ಯಾಖ್ಯಾನದಲ್ಲಿ ಇದರ ಪರಾಮರ್ಶವಿಲ್ಲ

2 ಇಲ್ಲಿ ಕೊಟ್ಟಿರುವ ಶ್ಲೋಕವು ಬ್ರಹ್ಮಾಂಡಪುರಾಣದಲ್ಲಿರುವದಾಗಿ ತಿಳಿಯಬಂದಿದೆ. ಆದರೆ ಇದು ಭಾರತದಲ್ಲಿಯೇ ಇದ್ದರೂ ಇರಬಹುದು ವಾರ್ತಿಕದಲ್ಲಿ ಇದನ್ನು ಕೃಷ್ಣದ್ವೈಪಾಯನವಾಕ್ಯವೆಂದು ಉದಾಹರಿಸಿದೆ. ಅಲ್ಲಿ "ತಸ್ಮೈ ನಮೋಽಸ್ತು ದೇವಾಯ" ಎಂಬ ಇದರ ಮುಂದಿನ ಶ್ಲೋಕವನ್ನೂ ಉದಾಹರಿಸಿದೆ (ಬೃ. ವಾ. ೩-೭-೪೦,೪೧).

3 ಜಗತ್ತಿನ ಅವ್ಯಾಕೃತಸ್ಥಿತಿಗಿಂತಲೂ. ಇದನ್ನು ಬೀಜ, ಅವ್ಯಕ್ತ, ಆಕಾಶ, ಮಾಯೆ, ಮುಂತಾದ ಹೆಸರುಗಳಿಂದಲೂ ಕರೆಯುವರು. ಮುಂ ಭಾ. ೨-೧-೨, ಸೂ. ಭಾ. ೧-೪-೩, ೨-೧-೧೪ ನೋಡಿ.

4. ಬ್ರಹ್ಮಾಂಡವು ಹುಟ್ಟುವ ಬಗೆಯನ್ನು ಬೃ. ೧-೨-೨ ರಲ್ಲಿಯೂ ಲೋಕಗಳ ಸೃಷ್ಟಿಯನ್ನು ಐ. ೧-೧ ರಲ್ಲಿಯೂ ಕಾಣಬಹುದು. ಅವ್ಯಕ್ತ, ಹಿರಣ್ಯಗರ್ಭ, ಭೂತಗಳು, ಅಂಡ, ಲೋಕಗಳು ವಿರಾಟ್, ದೇವತೆಗಳು—ಈ ಕ್ರಮದಲ್ಲಿ ಸೃಷ್ಟಿಯಾಗುತ್ತದೆ. ಮುಂ. ೧-೧-೮ ನ್ನು ನೋಡಿ

5. ವ್ಯಕ್ತಾವ್ಯಕ್ತಪ್ರಪಂಚಗಳ ಸೋಂಕಿಲ್ಲದೆ ಪರಿಶುದ್ಧವಾಗಿರುವ ಬ್ರಹ್ಮವೇ ಗೀತೆಯಲ್ಲಿ ಹೇಳಿರುವ ಶ್ರೀಕೃಷ್ಣಭಗವಂತನು ಎಂಬುದನ್ನು ಈ ಶ್ಲೋಕದಿಂದ ಆಚಾರ್ಯರವರು ಸೂಚಿಸಿರುತ್ತಾರೆ.

# ಗೀತೆಯಲ್ಲಿ ಉಪದಿಷ್ಟವಾಗಿರುವ ಧರ್ಮದ್ವಯ

(ಭಾಷ್ಯ)

೧. ಸ ಭಗವಾನ್ ಸೃಷ್ಟ್ವೇದಂ ಜಗತ್ ತಸ್ಯ ಚ ಸ್ಥಿತಿಂ **ಚಿಕೀರ್ಷುಃ** ಮರೀಚ್ಯಾದೀನ್ ಅಗ್ರೇ ಸೃಷ್ಟ್ವಾ ಪ್ರಜಾಪತೀನ್, ಪ್ರವೃತ್ತಿಲಕ್ಷಣಂ ಧರ್ಮಂ ಗ್ರಾಹಯಾಮಾಸ ವೇದೋಕ್ತಮ್ । ತತೋಽನ್ಯಾಂಶ್ಚ ಸನಕಸನನ್ದನಾದೀನ್ ಉತ್ಪಾದ್ಯ ನಿವೃತ್ತಿಲಕ್ಷಣಂ ಧರ್ಮಂ[1] ಜ್ಞಾನವೈರಾಗ್ಯಲಕ್ಷಣಂ[2] ಗ್ರಾಹಯಾಮಾಸ । ದ್ವಿವಿಧೋ ಹಿ ವೇದೋಕ್ತೋ ಧರ್ಮಃ ಪ್ರವೃತ್ತಿಲಕ್ಷಣೋ ನಿವೃತ್ತಿಲಕ್ಷಣಶ್ಚ[3] ಜಗತಃ ಸ್ಥಿತಿಕಾರಣಮ್ । ಪ್ರಾಣಿನಾಂ ಸಾಕ್ಷಾತ್ ಅಭ್ಯುದಯನಿಃಶ್ರೇಯಸಹೇತುರ್ಯಃ ಸ ಧರ್ಮೋ ಬ್ರಾಹ್ಮಣಾದ್ಯೈರ್ವರ್ಣಿಭಿಃ ಆಶ್ರಮಿಭಿಶ್ಚ ಶ್ರೇಯೋರ್ಥಿಭಿರನುಷ್ಠೀಯಮಾನಃ[4] ದೀರ್ಘೇಣ ಕಾಲೇನ ಅನುಷ್ಠಾತೄಣಾಂ ಕಾಮೋದ್ಭವಾತ್ ಹೀಯಮಾನವಿವೇಕವಿಜ್ಞಾನಹೇತುಕೇನ[5] ಅಧರ್ಮೇಣ ಅಭಿಭೂಯಮಾನೇ ಧರ್ಮೇ, ಪ್ರವರ್ಧಮಾನೇ ಚ ಅಧರ್ಮೇ, ಜಗತಃ ಸ್ಥಿತಿಂ ಪರಿಪಿಪಾಲಯಿಷುಃ ಸ ಆದಿಕರ್ತಾ ನಾರಾಯಣಾಖ್ಯೋ ವಿಷ್ಣುಃ ಭೌಮಸ್ಯ ಬ್ರಹ್ಮಣೋ ಬ್ರಾಹ್ಮಣತ್ವಸ್ಯ[6] ರಕ್ಷಣಾರ್ಥಂ ದೇವಕ್ಯಾಂ ವಸುದೇವಾತ್ ಅಂಶೇನ ಕೃಷ್ಣಃ[7] ಕಿಲ ಸಂಬಭೂವ । ಬ್ರಾಹ್ಮಣತ್ವಸ್ಯ ಹಿ ರಕ್ಷಣೇನ ರಕ್ಷಿತಃ ಸ್ಯಾತ್ ವೈದಿಕೋ ಧರ್ಮಃ । ತದಧೀನತ್ವಾದ್ ವರ್ಣಾಶ್ರಮಭೇದಾನಾಮ್ ॥

(ಭಾಷ್ಯಾರ್ಥ)

ಆ ಭಗವಂತನು ಈ ಜಗತ್ತನ್ನು ಸೃಷ್ಟಿಸಿ ಇದರ ವ್ಯವಸ್ಥೆಯನ್ನು ಮಾಡಬೇಕೆಂದು **ಮರೀಚಿಯೇ** ಮೊದಲಾದ **ಪ್ರಜಾಪತಿಗಳನ್ನು** ಮೊದಲು ಸೃಷ್ಟಿಸಿ (ಅವರಿಗೆ) ವೇದದಲ್ಲಿ ಹೇಳಿರುವ **ಪ್ರವೃತ್ತಿಲಕ್ಷಣವಾದ** ಧರ್ಮವನ್ನು ತಿಳಿಸಿ

---

1. "ನಿವೃತ್ತಿಧರ್ಮಂ" ಸಿ॥
2. "ಜ್ಞಾನವೈರಾಗ್ಯಸ್ವರೂಪಂ" ಮ॥
3. ಇಲ್ಲಿಗೆ ಸಿ॥ ಪಾಠದಲ್ಲಿ ವಾಕ್ಯಸಮಾಪ್ತಿ.
4. "ಶ್ರೇಯೋಽರ್ಥಿಭಿಃ" ಎಂಬ ಮಾತು ವ್ಯೈ॥ಮ॥ ಪಾಠಗಳಲ್ಲಿಲ್ಲ; 'ಆಶ್ರಮಿಭಿಶ್ಚ' ಎಂಬಲ್ಲಿ ಚಕಾರವೂ ಅಲ್ಲಿಲ್ಲ.
5. "ಹೀಯಮಾನವಿಜ್ಞಾನಹೇತುಕೇನ" ಮ॥ ವ್ಯೈ॥ ಪಾಠ.
6. "ಬ್ರಾಹ್ಮಣತ್ವಸ್ಯ ಚ" ಎಂಬ ಮ॥ ಪಾಠದಲ್ಲಿ ಚ ಹೆಚ್ಚು.
7. "ಕೃಷ್ಣಃ" ಎಂಬ ಮಾತು ಮ॥ ಪಾಠದಲ್ಲಿಲ್ಲ.

ಕೊಟ್ಟನು. ಆಮೇಲೆ[1] **ಸನಕ, ಸನಂದನ–ಮೊದಲಾದ** ಬೇರೆ (ಕೆಲವರನ್ನು) ಉಂಟುಮಾಡಿ ಜ್ಞಾನವೈರಾಗ್ಯರೂಪವಾದ **ನಿವೃತ್ತಿಲಕ್ಷಣವಾದ**[2] ಧರ್ಮವನ್ನು ತಿಳಿಸಿಕೊಟ್ಟನು.

ವೇದದಲ್ಲಿ ಹೇಳಿರುವ ಪ್ರವೃತ್ತಿಲಕ್ಷಣ, ನಿವೃತ್ತಿಲಕ್ಷಣ–ಎಂಬ (ಈ) ಎರಡು ಬಗೆಯ **ಧರ್ಮವೇ ಜಗತ್ತಿನ ಸ್ಥಿತಿಗೆ ಕಾರಣ**[3] ಪ್ರಾಣಿಗಳ **ಅಭ್ಯುದಯಕ್ಕೂ ನಿಃಶ್ರೇಯಸಕ್ಕೂ** ನೇರಾಗಿ ಕಾರಣವಾಗಿರುವ ಅಂಥ ಈ ಧರ್ಮವು ಒಳ್ಳೆಯದನ್ನು ಕೋರುವ ಬ್ರಾಹ್ಮಣರೇ ಮೊದಲಾದ ವರ್ಣಗಳಿಂದಲೂ (ಬ್ರಹ್ಮಚಾರಿಗಳೇ ಮೊದಲಾದ) ಆಶ್ರಮಿಗಳಿಂದಲೂ ಅನುಷ್ಠಾನಮಾಡಲ್ಪಡುತ್ತಿದ್ದು, ಬಹುಕಾಲವಾದ ಮೇಲೆ[4] ಇದನ್ನು ಅನುಷ್ಠಾನಮಾಡುವವರಿಗೆ ಕಾಮವುಂಟಾಗಿ ವಿವೇಕವಿಜ್ಞಾನವು ಹೋದದ್ದರಿಂದ ಉಂಟಾದ ಅಧರ್ಮದಿಂದ ಧರ್ಮವು ಮುಚ್ಚಿಹೋಗಿ ಅಧರ್ಮವು ಹೆಚ್ಚುತ್ತಾ ಬರಲಾಗಿ ಜಗತ್ತಿನ ವ್ಯವಸ್ಥೆಯನ್ನು ಕಾಪಾಡಬೇಕೆಂಬ ಇಚ್ಛೆಯಿಂದ **ಆದಿಕರ್ತನಾದ ನಾರಾಯಣನೆಂಬ ಹೆಸರಿನ ಆ ವಿಷ್ಣುವು ಭೂಮಿಯ**

---

1 ಮರೀಚಿ, ಅತ್ರಿ, ಅಂಗಿರಸ್ಸು, ಪುಲಸ್ತ್ಯ ಪುಲಹ, ಕ್ರತು, ವಸಿಷ್ಠ–ಇವರಿಗೆ ಪ್ರವೃತ್ತಿಧರ್ಮವನ್ನೂ ಸನಕ, ಸನತ್ಸುಜಾತ, ಸನಕ, ಸನಂದನ, ಸನತ್ಕುಮಾರ, ಕಪಿಲ-ಇವರಿಗೆ ನಿವೃತ್ತಿಧರ್ಮವನ್ನೂ ಬೋಧಿಸಿದನು (ಮೋ. ಧ ೩೪೦-೬೯, ೭೨). ಸನಕಾದಿಗಳು ಸೃಷ್ಟಿ ಮಾಡಲು ಒಪ್ಪದೆಹೋದ್ದರಿಂದ ಬೇರೆಯ ಪ್ರಜಾಪತಿಗಳಿಂದ ಪರಮಾತ್ಮನು ಸೃಷ್ಟಿಯನ್ನು ಮಾಡಿಸಿದನೆಂದು ಪುರಾಣಗಳಲ್ಲಿದೆ. ಆದ್ದರಿಂದ "ತತಃ" ಎಂದರೆ ಆಮೇಲೆ ಎನ್ನುವದರ ಬದಲು "ಅವರಿಗಿಂತ ಬೇರೆಯಾದ" ಎಂದು ಕನ್ನಡಿಸಿದರೆ ಈ ಅಭಿಪ್ರಾಯಕ್ಕೆ ಹೊಂದುತ್ತದೆ. ಆಗ "ಅಗ್ರೇ" ಎಂದರೆ ಸೃಷ್ಟಿಯ ಮೊದಲು ಎಂದರೆ ಎರಡು ಪಂಗಡದ ಪ್ರಜಾಪತಿಗಳನ್ನೂ ಸೃಷ್ಟಿಸಿದನು ಎಂದು ಅರ್ಥಮಾಡಿಕೊಳ್ಳಬೇಕಾಗುವದು.

2. ಪ್ರವೃತ್ತಿಯಿಂದ ತಿಳಿಯಬರುವ ಧರ್ಮ, ನಿವೃತ್ತಿಯಿಂದ ತಿಳಿಯಬರುವ ಧರ್ಮ ಎಂದು ಎರಡು ಬಗೆ. ಶಾಸ್ತ್ರವಿಹಿತವಾದ ಕರ್ಮವೂ ಜ್ಞಾನವೈರಾಗ್ಯಗಳೂ ಈ ಎರಡು ಜಾತಿಯವು.

3. ಈ ಎರಡರಲ್ಲಿ ಒಂದೇ ಸ್ಥಿತಿಗೆ ಕಾರಣವೆಂಬ ಅರ್ಥವು ಬರುವ ನಿ॥ ಪಾಠವು ಭಾಷ್ಯಸಮ್ಮತವಲ್ಲ.

4. ಈ ವಿಶೇಷಣವು ಮುಂದಿನ ವಾಕ್ಯಭಾಗಕ್ಕೇ ಸೇರಿದ್ದೆಂಬ ಬಗ್ಗೆ ೪-೨, ೩ ಈ ಶ್ಲೋಕಗಳ ಭಾಷ್ಯವನ್ನು ನೋಡಿ.

**ಬ್ರಹ್ಮವಾದ**[1] **ಬ್ರಾಹ್ಮಣ್ಯದ ರಕ್ಷಣೆಗಾಗಿ ದೇವಕಿಯಲ್ಲಿ ವಸುದೇವನಿಂದ ಕೃಷ್ಣನಾಗಿ ತನ್ನ ಒಂದಂಶದಿಂದ**[2] ಸಂಭವಿಸಿದನೆಂಬುದು ಪ್ರಸಿದ್ಧವಾಗಿದೆ.[3] **ಬ್ರಾಹ್ಮಣ್ಯವನ್ನು ಕಾಪಾಡಿದರೇ ವೈದಿಕಧರ್ಮವನ್ನು ಕಾಪಾಡಿದಂತಾಗುವದು; ಏಕೆಂದರೆ ವರ್ಣಾಶ್ರಮಭೇದಗಳು ಅದರ ಅಧೀನವಾಗಿವೆ**[4]

(ಭಾಷ್ಯ)

೨. ಸ ಚ ಭಗವಾನ್ ಜ್ಞಾನೈಶ್ವರ್ಯಶಕ್ತಿಬಲವೀರ್ಯತೇಜೋಭಿಃ ಸದಾ ಸಂಪನ್ನಃ ತ್ರಿಗುಣಾತ್ಮಿಕಾಂ ವೈಷ್ಣವೀಂ ಸ್ವಾಂ ಮಾಯಾಂ ಮೂಲಪ್ರಕೃತಿಂ ವಶೀ ಕೃತ್ಯ ಅಜೋಽವ್ಯಯೋ ಭೂತಾನಾಮೀಶ್ವರೋ ನಿತ್ಯಶುದ್ಧಬುದ್ಧಮುಕ್ತಸ್ವಭಾವೋಽಪಿ ಸನ್ ಸ್ವಮಾಯಯಾ ದೇಹವಾನಿವ ಜಾತ ಇವ ಚ ಲೋಕಾನುಗ್ರಹಂ ಕುರ್ವನ್ ಲಕ್ಷ್ಯತೇ । ಸ್ವಪ್ರಯೋಜನಾಭಾವೇಽಪಿ ಭೂತಾನುಜಿಘೃಕ್ಷಯಾ ವೈದಿಕಂ[5] ಧರ್ಮದ್ವಯಮ್ ಅರ್ಜುನಾಯ ಶೋಕಮೋಹಮಹೋದಧೌ ನಿಮಗ್ನಾಯ ಉಪದಿದೇಶ । ಗುಣಾಧಿಕೈರ್ಹಿ ಗೃಹೀತೋಽನುಷ್ಠೀಯಮಾನಶ್ಚ ಧರ್ಮಃ ಪ್ರಚಯಂ ಗಮಿಷ್ಯತೀತಿ । ತಂ ಧರ್ಮಂ ಭಗವತಾ ಯಥೋಪದಿಷ್ಟಂ ವೇದವ್ಯಾಸಃ ಸರ್ವಜ್ಞೋ ಭಗವಾನ್ ಗೀತಾಖ್ಯೈಃ ಸಪ್ತಭಿಃ ಶ್ಲೋಕಶತೈಃ ಉಪನಿಬಬನ್ಧ ॥

(ಭಾಷ್ಯಾರ್ಥ)

ಮತ್ತು ಆ ಭಗವಂತನು ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ,

---

1. **ಭೂಮಿಯಮೇಲೆ** ಇರುವವೆಲ್ಲಕ್ಕಿಂತ ಬ್ರಾಹ್ಮಣ್ಯವೇ ಹೆಚ್ಚಾದದ್ದು, ಆದ್ದರಿಂದ **ಇದು ಭೂಮಿಯ** ಬ್ರಹ್ಮವು ಶಾಂ. ರಾ. ಧ. ೪೭-೨ನ್ನು ನೋಡಿ.

2. ಒಂದಂಶದಿಂದ ಎಂದರೆ "ತನ್ನ ಇಚ್ಛೆಯಿಂದ ನಿರ್ಮಿತವಾದ ಮಾಯಾಮಯ ಸ್ವರೂಪದಿಂದ" ಎಂದು ಆ॥ ವ್ಯಾಖ್ಯಾನ. ಲೋಕದೃಷ್ಟಿಯಲ್ಲಿ ಕೃಷ್ಣನಾಗಿ ಅವತರಿಸಿದರೂ ತನ್ನ ಪೂರ್ಣರೂಪವನ್ನು ಬಿಡಲಿಲ್ಲ ಎಂಬುದು ಇಲ್ಲಿ ತಾತ್ಪರ್ಯವೆಂದು ತೋರುವದು. ಮೋ. ಧ. ೨೮೦-೬ನ್ನು ನೋಡಿ.

3. **ಪುರಾಣೇತಿಹಾಸಗಳಿಂದ ತಿಳಿದುಬರುತ್ತದೆ.**

4. ಮಿಕ್ಕ ವರ್ಣದವರು ಮಾಡುವ ಅಧ್ಯಯನ, ಯಾಗ, ದಾನ_ಮುಂತಾದವುಗಳಿಗೆ ಬ್ರಾಹ್ಮಣನೇ ಮೂಲವಾದ್ದರಿಂದ ಬ್ರಾಹ್ಮಣ್ಯಕ್ಕೆ ವರ್ಣಾಶ್ರಮಧರ್ಮವು ಅಧೀನ.

5. "ವೈದಿಕಂ ಹಿ" ನಿ॥ ಗು॥

ತೇಜಸ್ಸು[1]–ಇವುಗಳಿಂದ ಯಾವಾಗಲೂ[2] ಕೂಡಿಕೊಂಡಿದ್ದು ತ್ರಿಗುಣಸ್ವರೂಪವಾದ[3] ತನ್ನ **ವೈಷ್ಣವಮಾಯೆಯೆಂಬ ಮೂಲಪ್ರಕೃತಿಯನ್ನು**[4] ತನ್ನ ವಶದಲ್ಲಿಟ್ಟುಕೊಂಡು (ನಿಜವಾಗಿ ತಾನು) ಜನ್ಮರಹಿತನೂ ನಾಶರಹಿತನೂ ಪ್ರಾಣಿಗಳಿಗೆ ಒಡೆಯನೂ[5] ನಿತ್ಯಶುದ್ಧಬುದ್ಧಮುಕ್ತಸ್ವಭಾವದವನೂ[6] ಆಗಿದ್ದರೂ–**ತನ್ನ ಮಾಯೆಯಿಂದ**[6] **ದೇಹವುಳ್ಳವನಂತೆಯೂ ಹುಟ್ಟಿದವನಂತೆಯೂ ಲೋಕಾನುಗ್ರಹವನ್ನು ಮಾಡುವವನಾಗಿ ಕಂಡುಬರುತ್ತಾನೆ.**[7] ತನಗೆ (ಯಾವ) ಪ್ರಯೋಜನವೂ

---

1. ಜ್ಞಾನಮುಂತಾದ ಆರು ಗುಣಗಳು ಯಾವಾಗಲೂ ಇರುವವನು **ಭಗವಂತನು.** ವಿ ಪು ೬-೫-೭೯. ಐಶ್ವರ್ಯ-ಸ್ವಾತಂತ್ರ್ಯ, ಶಕ್ತಿ-ಬೇಕಾದದ್ದನ್ನುಮಾಡುವ ಸಾಮರ್ಥ್ಯ, ಬಲ-ಸಹಾಯಸಂಪತ್ತು, ವೀರ್ಯ-ಪರಾಕ್ರಮ, ತೇಜಸ್ಸು-ಯಾವದಕ್ಕೂ ಜಗ್ಗದಿರುವದು ಎಂದು ಈ ಗುಣಗಳನ್ನು ಆ॥ ವ್ಯಾಖ್ಯಾನದಲ್ಲಿ ವಿವರಿಸಿದೆ. ಅಪ್ಪಯ್ಯದೀಕ್ಷಿತರ ಕ ತ ಪ. ದಲ್ಲಿ (೧) ಎಲ್ಲಾವಸ್ತುಗಳನ್ನೂ ಒಂದೊಂದಾಗಿಯೂ ಒಟ್ಟಾಗಿಯೂ ತಿಳಿಯುವದು ಜ್ಞಾನವು; (೨) ತನ್ನ ಇಚ್ಛೆಗೆ ಅಡ್ಡಿಯಿಲ್ಲದಿರುವದು ಐಶ್ವರ್ಯವು; (೩) ಜಗತ್ತಿಗೆಲ್ಲ ಉಪಾದಾನಕಾರಣವಾಗಿರುವದು ಶಕ್ತಿ, (೪) ಜಗತ್ತನ್ನು ಆಯಾಸವಿಲ್ಲದೆ ಸೃಷ್ಟಿಸಿ ಕಾಪಾಡುವದು ಬಲವು; (೫) ಉಪಾದಾನಕಾರಣವಾಗಿದ್ದರೂ ಮಾರ್ಪಡದಿರುವದು ವೀರ್ಯವು, (೬) ಸೃಷ್ಟಿಮಾಡುವದರಲ್ಲಿ ಸಹಕಾರಿಸಾಮಗ್ರಿಯನ್ನು ಬಯಸದಿರುವದೂ ತನಗಿಂತ ಬೇರೆಯಾವದ್ದೆಲ್ಲವನ್ನೂ ಜಯಿಸುವ ಸಾಮರ್ಥ್ಯವೂ ತೇಜಸ್ಸು ಎಂದು ವರ್ಣಿತವಾಗಿದೆ.

2 ಈ ಆರು ಗುಣಗಳೂ ಯಾವಾಗಲೂ ಭಗವಂತನ ಸ್ವರೂಪವೇ ಆಗಿರುವವು. ವಿ ಪು. ೬-೫-೭೯ನೋಡಿ.

3. ಸತ್ತ್ವ, ರಜ, ತಮ-ಎಂಬ ಗುಣಗಳು. ಗುಣಗಳನ್ನುಳ್ಳ ಪ್ರಧಾನವನ್ನು ಸೂ.ಭಾ. ೧-೪-೯ರಲ್ಲಿ ಖಂಡಿಸಿದ್ದರೂ ಗುಣತ್ರಯಸ್ವರೂಪವನ್ನೇ ಖಂಡಿಸುವದರಲ್ಲಿ ಅಲ್ಲಿ ತಾತ್ಪರ್ಯವಿಲ್ಲವಾದ್ದರಿಂದ ಇಲ್ಲಿ ಅದನ್ನು ಒಪ್ಪಿದ್ದು ವಿರುದ್ಧವಲ್ಲ.

4. ಹಿಂದೆ ಹೇಳಿದ ಅವ್ಯಾಕೃತವು ಜಗತ್ತಿಗೆಲ್ಲ ಮೂಲಪ್ರಕೃತಿಯಾಗಿದೆ, ಮಿಕ್ಕವು ಅವಾಂತರಪ್ರಕೃತಿಗಳು. ಇದು ಈಶ್ವರನ ಅಧೀನವು, ಸಾಂಖ್ಯರು ಹೇಳುವಂತೆ ಸ್ವತಂತ್ರವಲ್ಲ ಎಂಬುದನ್ನು 'ತನ್ನ ವಶದಲ್ಲಿಟ್ಟುಕೊಂಡು' ಎಂಬ ವಿಶೇಷಣವು ಹೇಳುತ್ತದೆ. ಸೂ.ಭಾ. ೧-೪-೩, ೧-೨-೨೨ ನೋಡಿ. "ಮೂಲ" ಎಂಬ ಮಾತು ಮ|| ಪಾಠದಲ್ಲಿಲ್ಲ.

5. ಮುಂದೆ ೪-೬ರಲ್ಲಿ ಹೇಳಿರುವದರ ಸೂಚನೆಯಿದು.

6. ಇತರ ಪ್ರಾಣಿಗಳಂತೆ ಧರ್ಮಾಧರ್ಮಗಳಿಂದಾಗುವ ಜನ್ಮಾದಿಗಳು ಇಲ್ಲದವನೆಂದು ಭಾವ. ೪-೬ ರ ಭಾಷ್ಯವನ್ನು ನೋಡಿ.

7. ಅಂತೆ ಎಂದದ್ದರಿಂದ ನಿಜವಾಗಿಯೂ ದೇಹವಿಲ್ಲ, ಜನ್ಮವೂ ಇಲ್ಲ ಎಂದಂತಾಯಿತು.

ಇಲ್ಲದಿದ್ದರೂ ಪ್ರಾಣಿಗಳಿಗೆ ಅನುಗ್ರಹಮಾಡಬೇಕೆಂಬ ಇಚ್ಛೆಯಿಂದ, ಶೋಕಮೋಹಗಳೆಂಬ ಮಹಾಸಮುದ್ರದಲ್ಲಿ ಮುಳುಗಿದ್ದ ಅರ್ಜುನನಿಗೆ, ಸದ್ಗುಣಗಳಿಂದ ದೊಡ್ಡವರೆನಿಸಿಕೊಂಡಿರುವವರು ಗ್ರಹಿಸಿ ಅನುಷ್ಠಾನಮಾಡಿದ ಧರ್ಮವೇ ಪ್ರಚಾರವಾಗುವದೆಂಬ ಕಾರಣದಿಂದ, (ಈ) ವೈದಿಕಧರ್ಮಗಳೆರಡನ್ನೂ ಉಪದೇಶಮಾಡಿದನು ಆ ಧರ್ಮವನ್ನು ಭಗವಂತನು ಉಪದೇಶಮಾಡಿದಂತೆಯೇ ಸರ್ವಜ್ಞರೂ ಭಗವದ್ರೂಪರೂ ಆದ **ವೇದವ್ಯಾಸರು**[1] **ಗೀತೆಗಳು** ಎಂಬ ಹೆಸರಿನ ಏಳು ನೂರು ಶ್ಲೋಕಗಳಿಂದ ಗ್ರಂಥ ರೂಪವಾಗಿಟ್ಟರು.

(ಭಾಷ್ಯ)

೩. ತದಿದಂ ಗೀತಾಶಾಸ್ತ್ರಂ ಸಮಸ್ತವೇದಾರ್ಥಸಾರಸಙ್ಗ್ರಹಭೂತಂ ದುರ್ವಿಜ್ಞೇಯಾರ್ಥಮ್ ! ತದರ್ಥಾವಿಷ್ಕರಣಾಯ ಅನೇಕೈರ್ವಿವೃತಪದಪದಾರ್ಥ (ವಾಕ್ಯ)[2] ವ್ಯಾಕ್ಯಾರ್ಥನ್ಯಾಯಮಪಿ ಅತ್ಯನ್ತವಿರುದ್ಧಾನೇಕಾರ್ಥತ್ವೇನ ಲೌಕಿಕೈರ್ಗೃಹ್ಯಮಾಣಮುಪಲಭ್ಯ ಅಹಂ ವಿವೇಕತೋಽರ್ಥನಿರ್ಧಾರಣಾರ್ಥಂ ಸಂಕ್ಷೇಪತೋ ವಿವರಣಂ ಕರಿಷ್ಯಾಮಿ ||

(ಭಾಷ್ಯಾರ್ಥ)

ಅಂಥ ಈ **ಗೀತಾಶಾಸ್ತ್ರವು ಸಮಸ್ತವೇದಾರ್ಥಸಾರದ ಸಂಗ್ರಹವಾಗಿರುತ್ತದೆ.** ಇದರ ಅರ್ಥವನ್ನು ತಿಳಿಯುವದು ಕಷ್ಟವಾಗಿರುತ್ತದೆ ಇದರ ಅರ್ಥವನ್ನು ಹೊರಪಡಿಸುವದಕ್ಕಾಗಿ ಅನೇಕರು[3] ಪದ, ಪದಾರ್ಥ, (ವಾಕ್ಯ), ವಾಕ್ಯಾರ್ಥ,

---

1. ವ್ಯಾಸರೂ ನಾರಾಯಣನ ಅಂಶಸಂಭೂತರೇ, ಆದ್ದರಿಂದಲೇ ಅವರು ಶ್ರೀಕೃಷ್ಣನು ಹೇಳಿದ್ದನ್ನೆಲ್ಲ ತಿಳಿದುಕೊಳ್ಳುವದಕ್ಕೂ ಸಂಜಯನಿಗೂ ಅದನ್ನು ತಿಳಿದುಕೊಂಡು ಧೃತರಾಷ್ಟ್ರನಿಗೆ ಹೇಳುವ ದಿವ್ಯದೃಷ್ಟಿಯನ್ನು ಅನುಗ್ರಹಿಸುವದಕ್ಕೂ ಶಕ್ತರಾದರು ಎಂಬುದನ್ನು ಸರ್ವಜ್ಞರಾದ ಭಗವದ್ರೂಪರಾದ ಎಂಬ ವಿಶೇಷಣಗಳು ಸೂಚಿಸುತ್ತವೆ.

2. "ವಾಕ್ಯ" ಎಂಬ ಮಾತು ಮೈ॥ಗು॥ ಪಾಠಗಳಲ್ಲಿ ಮಾತ್ರ ಇದೆ ಅದು ಇಲ್ಲದಿದ್ದರೂ ಸಾಗುತ್ತದೆ.

3. ಭಾಷ್ಯಕಾರರಿಗಿಂತ ಮೊದಲು ಗೀತೆಗೆ ಅರ್ಥವನ್ನು ಬರೆದಿದ್ದವರಲ್ಲಿ ಜ್ಞಾನವಾದಿಗಳೇ ಅಲ್ಲದೆ ಜ್ಞಾನಕರ್ಮಸಮುಚ್ಚಯವಾದಿಗಳೂ ಸೇರಿದ್ದರು, ಅವರುಗಳ ವ್ಯಾಖ್ಯಾನಗಳು ಪರಸ್ಪರವಿರುದ್ಧವಾಗಿದ್ದದ್ದರಿಂದ ಜನರಿಗೆ ನಿರ್ಣಯವಾಗಿ ಅರ್ಥವು ತಿಳಿಯುವಂತಿರಲಿಲ್ಲ.

(ವಾಕ್ಯಾರ್ಥವನ್ನು ನಿಶ್ಚಯಿಸುವದಕ್ಕೆ ಬೇಕಾದ) ಯುಕ್ತಿ[1]–ಇವುಗಳನ್ನು ..ವರವಾಗಿ ತಿಳಿಸಿರುತ್ತಾರಾದರೂ ಲೋಕದಲ್ಲಿ ಜನರು ಅತ್ಯಂತ ವಿರುದ್ಧವಾದ ಅನೇಕಾರ್ಥಗಳನ್ನು (ಇದರ ಅರ್ಥವೆಂದು) ತಿಳಿಯುತ್ತಿರುವದನ್ನು ಕಂಡು ನಾನು (ಇದರ) ಅರ್ಥವನ್ನು ವಿಂಗಡಿಸಿ ಗೊತ್ತುಮಾಡುವದಕ್ಕಾಗಿ (ಇದಕ್ಕೆ) **ಸಂಕ್ಷೇಪವಾಗಿ ವಿವರಣವನ್ನು ಮಾಡುವೆನು.**[2]

# ಗೀತಾಶಾಸ್ತ್ರದ ಅನುಬಂಧಗಳು

## (ಭಾಷ್ಯ)

೪. ತಸ್ಯಾಸ್ಯ ಗೀತಾಶಾಸ್ತ್ರಸ್ಯ ಸಂಕ್ಷೇಪತಃ ಪ್ರಯೋಜನಂ ಪರಂ ನಿಃಶ್ರೇಯಸಂ ಸಹೇತುಕಸ್ಯ ಸಂಸಾರಸ್ಯ ಅತ್ಯನ್ತೋಪರಮಲಕ್ಷಣಮ್ । ತಚ್ಚ ಸರ್ವಕರ್ಮಸಂನ್ಯಾಸಪೂರ್ವಕಾತ್ ಆತ್ಮಜ್ಞಾನನಿಷ್ಠಾರೂಪಾತ್ ಧರ್ಮಾತ್ ಭವತಿ । ತಥಾ ಇಮಮೇವ ಗೀತಾರ್ಥಂ[3] ಧರ್ಮಮ್ ಉದ್ದಿಶ್ಯ ಭಗವತೈವ ಉಕ್ತಮ್–"ಸ ಹಿ ಧರ್ಮಃ ಸುಪರ್ಯಾಪ್ತೋ ಬ್ರಹ್ಮಣಃ ಪದವೇದನೇ" ॥ (ಅಶ್ವ. ೧೬-೧೨) ಇತಿ ಅನುಗೀತಾಸು । ತತ್ರೈವ ಚೋಕ್ತಮ್[4] "ನೈವ ಧರ್ಮೀ ನ ಚಾಧರ್ಮೀ ನ ಚೈವ ಹಿ ಶುಭಾಶುಭೀ ।" (ಅಶ್ವ. ೧೯-೭), "ಯಃ ಸ್ಯಾದೇಕಾಸನೇ ಲೀನಸ್ತೂಷ್ಣೀಂ ಕಿಂಚಿದಚಿನ್ತಯನ್" (ಅಶ್ವ. ೧೯-೧), "ಜ್ಞಾನಂ ಸಂನ್ಯಾಸಲಕ್ಷಣಮ್" (ಅಶ್ವ ೪೩-೨೬) ಇತಿ ಚ । ಇಹಾಪಿ ಚ ಅನ್ತೇ ಉಕ್ತಮ್ ಅರ್ಜುನಾಯ "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" (೧೮-೬೬) ಇತಿ ॥

---

1. ಪದಗಳನ್ನು ಬಿಡಿಸಿ ಪದಾರ್ಥಗಳನ್ನು ತಿಳಿಸಿ ಸಮಾಸಗಳಿಗೆ ವಿಗ್ರಹವಾಕ್ಯವನ್ನು ಹೇಳಿ ಒಟ್ಟು ವಾಕ್ಯಾರ್ಥವನ್ನು ಗೊತ್ತುಪಡಿಸುವದಲ್ಲದೆ ಆ ಅರ್ಥಕ್ಕೆ ಬೆಂಬಲವಾದ ಯುಕ್ತಿಯನ್ನೂ ಹೇಳುವದು ವ್ಯಾಖ್ಯಾನವು. ಹೀಗೆ ಹಿಂದಿನವರು ಮಾಡಿದ್ದರೂ ಗೀತಾರ್ಥವು ನಿರ್ಣಯವಾಗಿರಲಿಲ್ಲ.

2. ಹಿಂದಿನವರು ಹೇಳಿದ್ದರಲ್ಲಿ ಸರಿಯಾದದ್ದನ್ನು ವಿಂಗಡಿಸಿ ಸ್ವಲ್ಪದರಲ್ಲಿ ಹೇಳುವದು ಈ ಭಾಷ್ಯದ ವಿಶೇಷವು.

3. 'ಗೀತಾರ್ಥಧರ್ಮಮ್' ನಿ॥ 4. "ಕಿಂಚಾನ್ಯದಪಿ ತತ್ರೈವೋಕ್ತಮ್" ನಿ॥ ತತ್ರ ಚೈವೋಕ್ತಮ್ ವಾ॥ "ತತ್ರೈವೋಕ್ತಮ್" ನಿ॥

(ಭಾಷ್ಯಾರ್ಥ)

ಸ್ವಲ್ಪದರಲ್ಲಿ ಹೇಳಬೇಕಾದರೆ, ಆ ಈ ಗೀತಾಶಾಸ್ತ್ರಕ್ಕೆ ಹೆಚ್ಚಿನ **ನಿಃಶ್ರೇಯಸವೇ ಪ್ರಯೋಜನವು ;** (ನಿಃಶ್ರೇಯಸ) ವೆಂದರೆ ಕಾರಣಸಹಿತವಾಗಿ[1] ಸಂಸಾರವು ಅತ್ಯಂತವಾಗಿ ಇಲ್ಲವಾಗಿ ಬಿಡುವದು[2] ಇದು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ಆತ್ಮಜ್ಞಾನದಲ್ಲಿಯೇ ನಿಂತುಬಿಡುವದೆಂಬ ಧರ್ಮದಿಂದ ಆಗುತ್ತದೆ ಗೀತೆಯ ಅರ್ಥವಾದ ಈ ಧರ್ಮವನ್ನೇ ಕುರಿತು ಭಗವಂತನೇ **ಅನುಗೀತೆಯಲ್ಲಿ** "ಬ್ರಹ್ಮದ ಸ್ಥಾನವನ್ನು ಅರಿತುಕೊಳ್ಳುವದಕ್ಕೆ ಆ ಧರ್ಮವೇ ಪೂರ್ಣಸಾಮರ್ಥ್ಯವುಳ್ಳದ್ದು" (ಅಶ್ವ ೧೬-೧೨) ಎಂದು ಹೇಳಿರುತ್ತಾನೆ "ಧರ್ಮವನ್ನೂ ಅನುಸರಿಸದೆ, ಅಧರ್ಮವನ್ನೂ ಅನುಸರಿಸದೆ ಪುಣ್ಯಾಪುಣ್ಯಗಳನ್ನೂ ಅನುಸರಿಸದೆ (ಇರುವವನು ಮುಕ್ತನಾಗುವನು)" (ಅಶ್ವ ೧೯-೭), "ಯಾವನು ಒಂದೇ ಆಸನದಲ್ಲಿ (ಕುಳಿತು) ಮನೋಲಯವನ್ನು ಹೊಂದಿ ಏನನ್ನೂ ಚಿಂತಿಸದೆ ಸುಮ್ಮನಿರುವನೋ (ಅವನು ಮುಕ್ತನಾಗುವನು)"[3] (ಅಶ್ವ ೧೯-೧), "ಜ್ಞಾನವು ಸಂನ್ಯಾಸಲಕ್ಷಣವಾದದ್ದು" (ಅಶ್ವ. ೪೩-೨೬) ಎಂದೂ ಅದೇ (ಅನುಗೀತೆ)ಯಲ್ಲಿಯೇ ಹೇಳಿರುತ್ತದೆ. ಇಲ್ಲಿಯೂ ಕೊನೆಯಲ್ಲಿ ಅರ್ಜುನನಿಗೆ "ಎಲ್ಲಾ ಧರ್ಮಗಳನ್ನೂ ಬಿಟ್ಟು ನನ್ನೊಬ್ಬನನ್ನೇ ಶರಣು ಹೊಂದು" (೧೮-೬೬) ಎಂದು ಹೇಳಿರುತ್ತದೆ[4]

(ಭಾಷ್ಯ)

೫ ಅಭ್ಯುದಯಾರ್ಥೋಽಪಿ ಯಃ ಪ್ರವೃತ್ತಿಲಕ್ಷಣೋ ಧರ್ಮೋ ವರ್ಣಾನಾಶ್ರಮಾಂಶ್ಚ ಉದ್ದಿಶ್ಯ ವಿಹಿತಃ ಸ ದೇವಾದಿಸ್ಥಾನಪ್ರಾಪ್ತಿಹೇತುರಪಿ ಸನ್ ಈಶ್ವರಾ

---

1. ಅವಿದ್ಯೆಯ ಸಹಿತವಾಗಿ ಅದರಿಂದಾಗಿರುವ ಸಂಸಾರವು ಜ್ಞಾನದಿಂದ ಹೋಗುತ್ತದೆ.

2. ಸುಷುಪ್ತಿ, ಪ್ರಲಯ ಮುಂತಾದ ಅವಸ್ಥೆಗಳಲ್ಲಿ ಸಂಸಾರವು ಕಾಣದಿದ್ದರೂ ತೀರ ಹೋಗಿರುವದಿಲ್ಲ, ಏಕೆಂದರೆ ಜ್ಞಾನದಿಂದ ಅಜ್ಞಾನವು ಕಳೆದಿರುವದಿಲ್ಲ

3. ಮುದ್ರಿತಭಾರತದಲ್ಲಿ "ನ ಚೈವ ಹಿ ಶುಭಾಶುಭೀ" ಎಂಬುದರ ಬದಲು '**ಪೂರ್ವೋಪಚಿತಹಾಯಕಃ**' (ಹಿಂದಿನ ಕರ್ಮವನ್ನು ಬಿಡಿಸಿಕೊಳ್ಳುವವನು) ಎಂದೂ "**ಯಃ ಸ್ಯಾದೇಕಾಸನೇ ಲೀನಃ**" ಎಂಬುದರ ಬದಲು '**ಯಃ ಸ್ಯಾದೇಕಾಯನೇ ಲೀನಃ**" (ಒಂದೇ ಗತಿಯಾದ ಬ್ರಹ್ಮದಲ್ಲಿ ಮನಸ್ಸನ್ನು ಅಡಗಿಸಿ) ಎಂದೂ ಪಾಠವಿದೆ. **ನೀಲಕಂಠೀಯ ವ್ಯಾಖ್ಯಾನದಲ್ಲಿ** ಭಾಷ್ಯಕಾರರ ಮೇಲಿನ ಪಾಠಗಳನ್ನು ಏಕೆ ಸೂಚಿಸಿಲ್ಲವೋ ತಿಳಿಯದು.

4. ಆದ್ದರಿಂದ ಸರ್ವಕರ್ಮಸಂನ್ಯಾಸಪೂರ್ವಕವಾಗಿ ಜ್ಞಾನನಿಷ್ಠೆಯಲ್ಲಿರುವದೇ ಮುಕ್ತಿಸಾಧನವೆಂಬ ಬಗ್ಗೆ ಗೀತೆಯೂ ಅನುಗೀತೆಯೂ ಒಂದೇ ಅಭಿಪ್ರಾಯವುಳ್ಳವಾಗಿವೆ ಎಂದಾಯಿತು,

ರ್ಪಣಬುದ್ಧ್ಯಾ ಅನುಷ್ಠೀಯಮಾನಃ ಸತ್ತ್ವಶುದ್ಧಯೇ ಭವತಿ ಫಲಾಭಿಸನ್ಧಿವರ್ಜಿತಃ | ಶುದ್ಧಸತ್ತ್ವಸ್ಯ ಚ ಜ್ಞಾನನಿಷ್ಠಾಯೋಗ್ಯತಾಪ್ರಾಪ್ತಿದ್ವಾರೇಣ ಜ್ಞಾನೋತ್ಪತ್ತಿಹೇತುತ್ವೇನ ಚ ನಿಃಶ್ರೇಯಸಹೇತುತ್ವಮಪಿ ಪ್ರತಿಪದ್ಯತೇ। ತಥಾ ಚ ವಕ್ಷ್ಯತಿ[1]–ಬ್ರಹ್ಮಣ್ಯಾಧಾಯ ಕರ್ಮಾಣಿ (೫-೧೦), "ಯೋಗಿನಃ ಕರ್ಮ ಕುರ್ವನ್ತಿ ಸಙ್ಗಂ ತ್ಯಕ್ತ್ವಾತ್ಮಶುದ್ಧಯೇ" (೫-೧೧) ಇತಿ ||

(ಭಾಷ್ಯಾರ್ಥ)

ವರ್ಣಗಳನ್ನೂ ಆಶ್ರಮಗಳನ್ನೂ ಉದ್ದೇಶಿಸಿ ಅಭ್ಯುದಯಕ್ಕಾಗಿ **ಪ್ರವೃತ್ತಿ** ಎಂಬ ಯಾವ ಧರ್ಮವನ್ನು ವಿಧಿಸಿರುತ್ತದೆಯೋ ಅದು ದೇವತೆಗಳೇ ಮುಂತಾದ ಸ್ಥಾನಗಳನ್ನು[2] ಪಡೆಯುವದಕ್ಕೆ ಕಾರಣವಾಗಿರುತ್ತದೆಯಾದರೂ **ಈಶ್ವರಾರ್ಪಣಬುದ್ಧಿಯಿಂದ ಫಲದ ಆಶೆಯಿಲ್ಲದೆ ಅನುಷ್ಠಾನವಾಡಿದರೆ ಸತ್ತ್ವಶುದ್ಧಿಯನ್ನು ಉಂಟುಮಾಡುವದು; ಮತ್ತು ಸತ್ತ್ವಶುದ್ಧಿಯಾದವನಿಗೆ ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆಯನ್ನು ಹೊಂದಿಸುವ ಮೂಲಕವೂ ಜ್ಞಾನವನ್ನು ಉಂಟುಮಾಡುವದಕ್ಕೆ ಕಾರಣವಾಗುವ ಮೂಲಕವೂ ನಿಃಶ್ರೇಯಸಕ್ಕೆ[3] ಕಾರಣವೂ ಆಗುವದು.** ಆದ್ದರಿಂದಲೇ (ಈ ಅಭಿಪ್ರಾಯವನ್ನೇ ಮನಸ್ಸಿನಲ್ಲಿಟ್ಟುಕೊಂಡು)[4] "ಬ್ರಹ್ಮದಲ್ಲಿ ಕರ್ಮಗಳನ್ನು ಇಟ್ಟು ಯಾವನು ಕರ್ಮಗಳನ್ನು ಮಾಡುವನೋ" (೫-೧೦), "ಯೋಗಿಗಳು ಸಂಗವನ್ನು ಬಿಟ್ಟು ಆತ್ಮಶುದ್ಧಿಗಾಗಿ ಕರ್ಮವನ್ನು ಮಾಡುವರು" (೫-೧೧) ಎಂದು ಮುಂದೆ ಭಗವಂತನು ಹೇಳಿರುತ್ತಾನೆ

(ಭಾಷ್ಯ)

೬. ಇಮಂ ದ್ವಿಪ್ರಕಾರಂ ಧರ್ಮಂ ನಿಃಶ್ರೇಯಸಪ್ರಯೋಜನಂ ಪರಮಾರ್ಥತತ್ತ್ವಂ ಚ ವಾಸುದೇವಾಖ್ಯಂ ಪರಂ ಬ್ರಹ್ಮ[5] ಅಭಿಧೇಯಭೂತಂ ವಿಶೇಷತಃ ಅಭಿ

---

1. ಇದು ಮು|| ಮೈ|| ಪಾಠ, "ತಥಾ ಚೇಮಮರ್ಥಮಭಿಸನ್ಧಾಯ" (ಸಿ|| ವಾ||) ತಥಾ ಚೇಮಮೇವಾರ್ಥಮಭಿಸನ್ಧಾಯ" ಅ|| ಗು|| ಎಂದೂ ಪಾಠಗಳಿವೆ

2. ವಿದ್ಯೆಯಿಂದ ದೇವಲೋಕ, ಪುತ್ರನಿಂದ ಮನುಷ್ಯಲೋಕ, ಕರ್ಮದಿಂದ ಪಿತೃಲೋಕ-ಎಂದು ಪ್ರವೃತ್ತಿಧರ್ಮಕ್ಕೆ ಬೇರಬೇರೆಯ ಫಲಗಳುಂಟು, ಅದಕ್ಕೆ **ಅಭ್ಯುದಯ**ವೆಂದು ಹೆಸರು. ಬೃ. ೧-೫-೧೬.

3. ಮುಕ್ತಿಗೆ.

4. ಅ|| ಗು|| ಪಾಠಕ್ಕೆ ಅರ್ಥವಿದು, ಕಂಸದೊಳಗೆ ಇಟ್ಟಿರುವ ಭಾಗವು ಇಲ್ಲದಿದ್ದರೂ ಇದೇ ಅಭಿಪ್ರಾಯವು ಹೊರಡುತ್ತದೆ.

5. 'ಪರಬ್ರಹ್ಮ' ಎಂದು ಸಿ|| ಗು|| ಮೈ|| ಮು|| ಪಾಠ; ಇಲ್ಲಿರುವದು ಅ|| ವಾ|| ಪಾಠ.

ವ್ಯಞ್ಜಯತ್ ವಿಶಿಷ್ಟಪ್ರಯೋಜನಸಮ್ಬನ್ಧಾಭಿಧೇಯವತ್ ಗೀತಾಶಾಸ್ತ್ರಮ್ । ಯತಸ್ತದರ್ಥವಿಜ್ಞಾನೇ[1] ಸಮಸ್ತಪುರುಷಾರ್ಥಸಿದ್ಧಿಃ, ಅತಸ್ತದ್ವಿವರಣೇ ಯತ್ನಃ ಕ್ರಿಯತೇ ಮಯಾ ॥

(ಭಾಷ್ಯಾರ್ಥ)

ನಿಃಶ್ರೇಯಸವೆಂಬ ಪ್ರಯೋಜನವುಳ್ಳ ಈ ಎರಡು ಬಗೆಯ ಧರ್ಮವನ್ನೂ ಪರಬ್ರಹ್ಮವಾದ **ವಾಸುದೇವನೆಂಬ ಹೆಸರಿನ** ಪರಮಾರ್ಥವನ್ನೂ (ತನಗೆ) **ವಿಷಯ**ವೆಂದು ಗೀತಾಶಾಸ್ತ್ರವು ವಿಶೇಷವಾಗಿ ತಿಳಿಸಿಕೊಡುವದರಿಂದ ಇದಕ್ಕೆ ಅಸಾಧಾರಣವಾದ ಪ್ರಯೋಜನವೂ ಸಂಬಂಧವೂ ವಿಷಯವೂ ಇದ್ದಂತಾಯಿತು.[2] ಇದರ ಅರ್ಥವನ್ನು ಅರಿತುಕೊಂಡರೆ ಸಮಸ್ತಪುರುಷಾರ್ಥವೂ ಸಿದ್ಧಿಯಾಗುವದರಿಂದ ಇದನ್ನು ವಿವರಿಸುವದಕ್ಕೆ ನಾನು ಯತ್ನವನ್ನು ಮಾಡುವೆನು.

---

1. "ತದರ್ಥವಿಜ್ಞಾನೇನ" ನಿ॥; "ತದರ್ಥೇ ವಿಜ್ಞಾತೇ" ॥ ಅ॥ ಗು॥ ಮ॥; "ತದರ್ಥ ವಿಜ್ಞಾನೇ" ವಾ॥

2. ಧರ್ಮವು ಸಾಧನ, ನಿಃಶ್ರೇಯಸವು ಪ್ರಯೋಜನ; ಪ್ರಯೋಜನವುಳ್ಳ ಸಾಧನವನ್ನು ತಿಳಿಸುವದರಿಂದ ಗೀತಾಶಾಸ್ತ್ರಕ್ಕೂ ವಿಷಯ, ಪ್ರಯೋಜನ, ಸಂಬಂಧಗಳು ಇದ್ದಂತೆ ಆಯಿತು. ಪ್ರವೃತ್ತಿನಿವೃತ್ತಿತತ್ತ್ವಗಳೂ ಪರಮಾರ್ಥತತ್ತ್ವವೂ ವಿಷಯ, ಮೋಕ್ಷವೇ ಪ್ರಯೋಜನ; ಇವುಗಳನ್ನು ತಿಳಿಸುವದೇ ಗೀತೆಯ ಸಂಬಂಧ. ಈ ಪ್ರಯೋಜನವನ್ನು ಬಯಸುವವನೇ ಅಧಿಕಾರಿ ಎಂಬುದು ಸ್ಪಷ್ಟವಾಗಿರುವದರಿಂದ ಹೇಳಿಲ್ಲ.

# ಒಂದನೆಯ ಅಧ್ಯಾಯ

## (ಅರ್ಜುನನ ವಿಷಾದ)

### ಕಥೆಯ ಸಂಬಂಧ

**ಧೃತರಾಷ್ಟ್ರ ಉವಾಚ—**

**[1] ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।**
**ಮಾಮಕಾಃ ಪಾಣ್ಡವಾಶ್ಚೈವ ಕಿಮಕುರ್ವತ ಸಞ್ಜಯ ॥ ೧ ॥**

೧. ಧೃತರಾಷ್ಟ್ರನು ಹೇಳಿದನೇನೆಂದರೆ: ಎಲೈ ಸಂಜಯನೆ, ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧಮಾಡಬೇಕೆಂದು ಸೇರಿದ್ದ ನಮ್ಮವರೂ ಪಾಂಡವರೂ ಏನು ಮಾಡಿದರು?

**ಸಞ್ಜಯ ಉವಾಚ—**

**ದೃಷ್ಟ್ವಾ ತು ಪಾಣ್ಡವಾನೀಕಂ ವ್ಯೂಢಂ ದುರ್ಯೋಧನಸ್ತದಾ ।**
**ಆಚಾರ್ಯಮುಪಸಙ್ಗಮ್ಯ ರಾಜಾ ವಚನಮಬ್ರವೀತ್ ॥ ೨ ॥**

೨. ಸಂಜಯನು ಇಂತೆಂದನು: ಆಗ ವ್ಯೂಹವಾಗಿ ಒಡ್ಡಿದ್ದ ಪಾಂಡವರ ಸೈನ್ಯವನ್ನು ನೋಡಿ ರಾಜನಾದ ದುರ್ಯೋಧನನು ಆಚಾರ್ಯನಾದ ದ್ರೋಣನ ಬಳಿಗೆ ಬಂದು (ಈ) ಮಾತನ್ನು ನುಡಿದನು.

### ದುರ್ಯೋಧನನು ದ್ರೋಣನಿಗೆ ಹೇಳಿದ್ದು

**ಪಶ್ಯೈತಾಂ ಪಾಣ್ಡುಪುತ್ರಾಣಾಮಾಚಾರ್ಯ ಮಹತೀಂ ಚಮೂಮ್ ।**
**ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ ॥ ೩ ॥**

೩. ಎಲೈ ಆಚಾರ್ಯನೆ, ಬುದ್ಧಿವಂತನಾದ ನಿನ್ನ ಶಿಷ್ಯ ದ್ರುಪದಪುತ್ರನಿಂದ ವ್ಯೂಹವಾಗಿ ರಚಿತವಾಗಿರುವ ಪಾಂಡುಪುತ್ರರ ಈ ದೊಡ್ಡ ಸೈನ್ಯವನ್ನು ನೋಡು.

[1] ಧರ್ಮಕ್ಷೇತ್ರೇ" ಎಂಬ ಶ್ಲೋಕದಿಂದ "ನ ಯೋತ್ಸ್ಯ ಇತಿ ಗೋವಿನ್ದಮುಕ್ತ್ವಾ ತೂಷ್ಣೀಂ ಬಭೂವ ಹ" ಎಂಬವರೆಗಿನ ಗ್ರಂಥಕ್ಕೆ ಆಚಾರ್ಯರು ಭಾಷ್ಯವನ್ನು ಬರೆದಿಲ್ಲ. ವಾಚಕರ ಸೌಕರ್ಯಕ್ಕಾಗಿ ಭಾವಾರ್ಥವನ್ನು ಇಲ್ಲಿ ಕೊಟ್ಟಿರುತ್ತದೆ.

**ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನಸಮಾ ಯುಧಿ ।**
**ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ ॥ ೪ ॥**
**ಧೃಷ್ಟಕೇತುಶ್ಚೇಕಿತಾನಃ ಕಾಶಿರಾಜಶ್ಚ ವೀರ್ಯವಾನ್ ।**
**ಪುರುಜಿತ್ ಕುನ್ತಿಭೋಜಶ್ಚ ಶೈಬ್ಯಶ್ಚ ನರಪುಙ್ಗವಃ ॥ ೫ ॥**
**ಯುಧಾಮನ್ಯುಶ್ಚ ವಿಕ್ರಾನ್ತ ಉತ್ತಮೌಜಾಶ್ಚ ವೀರ್ಯವಾನ್ ।**
**ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ ॥ ೬ ॥**

೪-೬. ಇಲ್ಲಿ ದೊಡ್ಡ ಬಿಲ್ಗಾರರಾಗಿಯೂ ಯುದ್ಧದಲ್ಲಿ ಬೀಮಾರ್ಜುನರಿಗೆ ಸಮಾನರಾಗಿಯೂ ಇರುವ ಶೂರರಾದ ಯುಯುಧಾನ[1], ವಿರಾಟ, ಮಹಾರಥನಾದ[2] ದ್ರುಪದ; ಧೃಷ್ಟಕೇತು[3], ಚೇಕಿತಾನ[4], ವೀರ್ಯವಂತನಾದ ಕಾಶಿರಾಜ, ಪುರುಜಿತ್ತು[5], ಕುಂತಿಭೋಜ[6], ನರಶ್ರೇಷ್ಠನಾದ ಶೈಬ್ಯನು[7], ವಿಕ್ರಮಿಯಾದ ಯುಧಾಮನ್ಯು, ವೀರ್ಯವಂತನಾದ ಉತ್ತಮೌಜಸ್ಸು[8]–ಇವರೂ ಸುಭದ್ರೆಯ ಮಗನೂ[9] ದ್ರೌಪದಿಯ ಮಕ್ಕಳೂ[10] ಇರುವರು. ಇವರೆಲ್ಲರೂ ಮಹಾರಥರೇ.

**ಅಸ್ಮಾಕಂ ತು ವಿಶಿಷ್ಟಾ ಯೇ ತಾನ್ನಿಬೋಧ ದ್ವಿಜೋತ್ತಮ ।**
**ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ ಬ್ರವೀಮಿ ತೇ ॥೭॥**

---

1. ಯದುಕುಲದ ಶಿನಿ ಎಂಬವನ ಮಗನಾದ ಸತ್ಯಕನ ಮಗನಾದ್ದರಿಂದ ಸಾತ್ಯಕಿ ಎಂದು ಪ್ರಸಿದ್ಧನಾದವನು. ಅವನು ಮುಂದೆ ಯುದ್ಧದಲ್ಲಿ ಭೂರಿಶ್ರವಸ್ಸಿನ ಮತ್ತು ಕೃತವರ್ಮನ ತಲೆಯನ್ನು ಕತ್ತರಿಸಿದನು, ದ್ರೋಣಾಚಾರ್ಯರ ನೂರುಬಿಲ್ಲುಗಳನ್ನು ತುಂಡರಿಸಿದನು.

2. ತಾನೊಬ್ಬನೇ ಹತ್ತುಸಾವಿರಬಿಲ್ಗಾಳುಗಳೊಡನೆ ಯುದ್ಧಮಾಡಬಲ್ಲ ಶಸ್ತ್ರಾಸ್ತ್ರ ಪ್ರವೀಣನು ಮಹಾರಥನೆನಿಸುವನು.

3. ಶಿಶುಪಾಲನ ಮಗನು ; ಮುಂದೆ ದ್ರೋಣರಿಂದ ಹತನಾದನು.

4. ವೃಷ್ಣಿವಂಶದ ಕ್ಷತ್ರಿಯನು.

5. ಕುಂತಿಯ ಸಹೋದರನು. ಇವನನ್ನು ಮುಂದೆ ದ್ರೋಣರು ಕೊಂದರು.

6. ಶೂರರಾಜನ ಮಗಳೂ ಪಾಂಡವರ ತಾಯಿಯೂ ಆದ ಕುಂತಿಯ ಸಾಕುತಂದೆ.

7. ಶೈಬ್ಯನೆಂಬ ಹೆಸರಿನವರು ಭಾರತದಲ್ಲಿ ಅನೇಕರು ಕಂಡುಬರುತ್ತಾರೆ; ಇಲ್ಲಿ ಹೇಳಿರುವವನು ವೃಷ್ಣಿವಂಶದ ಒಬ್ಬ ಕ್ಷತ್ರಿಯನೆಂದು ತೋರುತ್ತದೆ.

8. ಯುಧಾಮನ್ಯು ಮತ್ತು ಉತ್ತಮೌಜಸ್ಸು–ಇಬ್ಬರೂ ಪಾಂಚಾಲ್ಯರು ; ಇವರು ಅರ್ಜುನನ ಚಕ್ರರಕ್ಷಕರಾಗಿದ್ದರು, ಅಶ್ವತ್ಥಾಮನಿಂದ ಹತರಾದರು.

9. ಅಭಿಮನ್ಯು.

10. ಪ್ರತಿವಿಂಧ್ಯ, ಸುತಸೋಮ, ಶ್ರುತಕೀರ್ತಿ, ಶತಾನೀಕ, ಶ್ರುತವರ್ಮ–ಎಂಬವರು.

೭. ಎಲೈ ದ್ವಿಜೋತ್ತಮನೆ, ಇನ್ನು ನಮ್ಮ ಸೈನ್ಯದಲ್ಲಿ ಶ್ರೇಷ್ಠರಾದ ನಾಯಕರನ್ನು ನಿನಗೆ ನೆನಪುಕೊಡುವದಕ್ಕಾಗಿ ಹೇಳುತ್ತೇನೆ. ಅವರನ್ನು ಗೊತ್ತುಮಾಡಿಕೊ.

**ಭವಾನ್ ಭೀಷ್ಮಶ್ಚ ಕರ್ಣಶ್ಚ ಸಮಿತಿಞ್ಜಯಃ ।**
**ಅಶ್ವತ್ಥಾಮಾ ವಿಕರ್ಣಶ್ಚ ಸೌಮದತ್ತಿಸ್ತಥೈವ ಚ ॥ ೮ ॥**

೮. ಪೂಜ್ಯನಾದ ನೀನು, ಭೀಷ್ಮನು, ಕರ್ಣನು, ಯುದ್ಧದಲ್ಲಿ ಜಯ ಶೀಲನಾದ ಕೃಪನು, ಅಶ್ವತ್ಥಾಮನು, ವಿಕರ್ಣನು[1], ಮತ್ತು ಸೋಮದತ್ತನ ಮಗನು.[2]

**ಅನ್ಯೇ ಚ ಬಹವಃ ಶೂರಾ ಮದರ್ಥೇ ತ್ಯಕ್ತಜೀವಿತಾಃ ।**
**ನಾನಾಶಸ್ತ್ರಪ್ರಹರಣಾಃ ಸರ್ವೇ ಯುದ್ಧವಿಶಾರದಾಃ ॥ ೯ ॥**

೯. ಇವರಲ್ಲದೆ ನನಗೋಸ್ಕರ ಪ್ರಾಣವನ್ನು ಬಿಡುವದಕ್ಕೆ ಸಿದ್ಧರಾ ಗಿರುವ ಇನ್ನೂ ಬಹುಜನ[3] ಶೂರರಿರುವರು. ಇವರೆಲ್ಲರೂ ನಾನಾವಿಧವಾದ[4] ಶಸ್ತ್ರಗಳನ್ನೂ ಯುದ್ಧಸಾಧನಗಳನ್ನೂ ಧರಿಸಿರುವರು, ಯುದ್ಧದಲ್ಲಿ ಪ್ರವೀಣ ರಾಗಿರುವರು.

**ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್ ।**
**ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಮ್ ॥ ೧೦ ॥**

---

1. ದುರ್ಯೋಧನನ ತಮ್ಮನು, ಪಗಡೆಯಾಟದಲ್ಲಿ ದ್ರೌಪದಿಯನ್ನು ಒತ್ತೆಯಿಟ್ಟದ್ದು ತಪ್ಪೆಂದು ನುಡಿದವನು. ಭೀಮನಿಂದ ಹತನಾದನು.

2. ಭೂರಿಶ್ರವಸ್ಸು. 'ತಥೈವ ಚ' ಎಂಬುದಕ್ಕೆ ಬದಲು 'ಜಯದ್ರಥಃ' ಎಂದು ಪಾಠ.

3. ಶಲ್ಯ, ಕೃತವರ್ಮ-ಮೊದಲಾದವರು.

4. ಮೂವತ್ತೆರಡು ಬಗೆಯ ಆಯುಧಗಳು. ಶಸ್ತ್ರಗಳೆಂದರೆ ಕೊಯ್ಯುವ ಕತ್ತಿ ಮುಂತಾದವುಗಳೆಂದೂ ಪ್ರಹರಣಗಳೆಂದರೆ ಹೊಡೆಯುವ ಗದೆ ಮುಂತಾದವುಗಳೆಂದೂ ನೀಲಕಂಠೀಯವ್ಯಾಖ್ಯಾನ.

೧೦. ಭೀಷ್ಮನಿಂದ ರಕ್ಷಿತವಾಗಿರುವ ಆ ನಮ್ಮ ಬಲವು ಕಡಿಮೆಯಾಗಿಲ್ಲ[1]; ಆದರೆ ಭೀಮನಿಂದ[2] ರಕ್ಷಿತವಾಗಿರುವ ಈ (ಪಾಂಡವರ) ಸೈನ್ಯವಾದರೋ ಪರಿಮಿತವಾಗಿರುತ್ತದೆ.

**ಅಯನೇಷು ಚ ಸರ್ವೇಷು ಯಥಾಭಾಗಮವಸ್ಥಿತಾಃ ।**
**ಭೀಷ್ಮಮೇವಾಭಿರಕ್ಷನ್ತು ಭವನ್ತಃ ಸರ್ವ ಏವ ಹಿ ॥ ೧೧ ॥**

೧೧. "ವ್ಯೂಹವನ್ನು ಹೊಗುವ ಮಾರ್ಗಗಳಲ್ಲೆಲ್ಲ ನೀವೆಲ್ಲರೂ ನಿಮ್ಮ ನಿಮ್ಮ ಭಾಗದ ಕಡೆಗಳಲ್ಲಿದ್ದುಕೊಂಡು ಭೀಷ್ಮನನ್ನೇ ರಕ್ಷಿಸಿಕೊಂಡಿರಿ."

## ಯುದ್ಧದ ಆರಂಭದಲ್ಲಿ ಆದ ಶಂಖಧ್ವನಿ

**ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ ।**
**ಸಿಂಹನಾದಂ ವಿನದ್ಯೋಚ್ಚೈಃ ಶಙ್ಖಂ ದಧ್ಮೌ ಪ್ರತಾಪವಾನ್ ॥ ೧೨ ॥**

೧೨. ಕುರುಕುಲಕ್ಕೆ ಹಿರಿಯನಾಗಿಯೂ ಪ್ರತಾಪಶಾಲಿಯಾಗಿಯೂ ಇದ್ದ ಆತನ ಅಜ್ಜನಾದ ಭೀಷ್ಮನು (ದುರ್ಯೋಧನನಿಗೆ) ಹರ್ಷವುಂಟಾಗುವಂತೆ ಗಟ್ಟಿಯಾಗಿ ಸಿಂಹನಾದವನ್ನು ಮಾಡಿ ಶಂಖವನ್ನು ಧ್ವನಿಗೈದನು.

**ತತಃ ಶಙ್ಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ ।**
**ಸಹಸೈವಾಭ್ಯಹನ್ಯನ್ತ ಸ ಶಬ್ದಸ್ತುಮುಲೋಽಭವತ್ ॥ ೧೩ ॥**

---

1. ಅಪರ್ಯಾಪ್ತಮ್, ಪರ್ಯಾಪ್ತಮ್-ಎಂಬ ಮಾತುಗಳಿಗೆ ನಾವು ಕೊಟ್ಟಿರುವ ಅರ್ಥವು ಬ್ರಹ್ಮಾನಂದಗಿರಿ ಎಂಬ ವ್ಯಾಖ್ಯಾನದಲ್ಲಿದೆ. ಇನ್ನೂ ಕೆಲವು ಅರ್ಥಗಳು ಹೀಗಿವೆ: (೧) ನಮ್ಮ ಸೈನ್ಯವು ಸಮರ್ಥ ಅಥವಾ ಅಪರಿಮಿತ; ಪಾಂಡವರದು ಅಸಮರ್ಥ ಅಥವಾ ಪರಿಮಿತ (ಆನಂದಗಿರಿ) (೨) ನಮ್ಮ ಸೈನ್ಯವು ತಕ್ಕಷ್ಟಿಲ್ಲವಾದರೂ ಭೀಷ್ಮರಕ್ಷಿತ; ಅವರದು ತಕ್ಕಷ್ಟಿದ್ದರೂ ಭೀಮರಕ್ಷಿತವಾಗಿದೆ. ಆದ್ದರಿಂದ ನಮ್ಮದು ಜಯಕ್ಕೆ ಸಾಕು. (ಶಂಕರಾನಂದ) (೩) ನಮ್ಮ ಸೈನ್ಯವನ್ನು ಪಾಂಡವರು ಸುತ್ತುಗಟ್ಟಲಾರರು, ನಾವು ಅವರದನ್ನು ಮುತ್ತಬಹುದು (ನೀಲಕಂಠ). (೪) ಭೀಷ್ಮರು ಉಭಯಪಕ್ಷಪಾತಿಗಳಾದ್ದರಿಂದ ನಮ್ಮ ಸೈನ್ಯವು ಸಮರ್ಥವಲ್ಲ (ಶ್ರೀಧರ) ನಮ್ಮ ಸೈನ್ಯವು ಬಲವಾಗಿದ್ದರೂ ನೀವು ಎಚ್ಚರಿಕೆಯಿಂದಿರಬೇಕು-ಎಂಬುದು ದುರ್ಯೋಧನನ ಮುಖ್ಯಾಭಿಪ್ರಾಯವೆಂದು ತೋರುತ್ತದೆ.

2. ಭೀಮನು ವಜ್ರವ್ಯೂಹದ ಮುಂದಿದ್ದುಕೊಂಡು ಅದನ್ನು ಕಾಪಾಡಿಕೊಂಡಿದ್ದನು. ಪಾಂಡವ ಸೇನೆಗೆ ಈಗ ಧೃಷ್ಟದ್ಯುಮ್ನನೇ ಸೇನಾಪತಿಯಾದರೂ 'ಭೀಮಾಭಿರಕ್ಷಿತಮ್' ಎಂದು ಹೇಳಿದ್ದಕ್ಕೆ ಕಾರಣವಿದು.

೧೪. ಆಮೇಲೆ ಬಿಳಿಯ ಕುದುರೆಗಳನ್ನು ಕಟ್ಟಿದ ದೊಡ್ಡ ರಥದಲ್ಲಿ ಕುಳಿತಿದ್ದ ಶ್ರೀ ಕೃಷ್ಣನೂ ಅರ್ಜುನನೂ ತಮ್ಮ ತಮ್ಮ ಶಂಖಗಳನ್ನು ಊದಿದರು.

**ಪಾಞ್ಚಜನ್ಯಂ ಹೃಷೀಕೇಶೋ ದೇವದತ್ತಂ ಧನಞ್ಜಯಃ ।**
**ಪೌಣ್ಡ್ರಂ ದಧ್ಮೌ ಮಹಾಶಙ್ಖಂ ಭೀಮಕರ್ಮಾ ವೃಕೋದರಃ ॥೧೫॥**
**ಅನನ್ತವಿಜಯಂ ರಾಜಾ ಕುನ್ತೀಪುತ್ರೋ ಯುಧಿಷ್ಠಿರಃ ।**
**ನಕುಲಃ ಸಹದೇವಶ್ಚ ಸುಘೋಷಮಣಿಪುಷ್ಪಕೌ ॥ ೧೬ ॥**
**ಕಾಶ್ಯಶ್ಚ ಪರಮೇಷ್ವಾಸಃ ಶಿಖಣ್ಡೀ ಚ ಮಹಾರಥಃ ।**
**ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚಾಪರಾಜಿತಃ ॥ ೧೭ ॥**
**ದ್ರುಪದೋ ದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ ।**
**ಸೌಭದ್ರಶ್ಚ ಮಹಾಬಾಹುಃ ಶಙ್ಖಾನ್ ದಧ್ಮುಃ ಪೃಥಕ್ ಪೃಥಕ್ ॥ ೧೮ ॥**

೧೫–೧೮. ಹೃಷೀಕೇಶನಾದ ಕೃಷ್ಣನು ಪಾಂಚಜನ್ಯವನ್ನೂ ಧನಂಜಯ(ನಾದ ಅರ್ಜುನ)ನು ದೇವದತ್ತವನ್ನೂ ಶತ್ರುಭಯಂಕರವಾದ ಯುದ್ಧವನ್ನೆಸಗಬಲ್ಲ ವೃಕೋದರ (ಭೀಮ)ನು ಪೌಂಡ್ರವೆಂಬ ಮಹಾಶಂಖವನ್ನೂ ಕುಂತೀಪುತ್ರನಾದ ಯುಧಿಷ್ಠಿರರಾಜನು ಅನಂತವಿಜಯವನ್ನೂ ನಕುಲನೂ ಸಹದೇವನೂ ಸುಘೋಷ, ಮಣಿಪುಷ್ಪಕ-ಎಂಬ (ತಮ್ಮ) ಶಂಖಗಳನ್ನೂ, ಮಹಾಧನುರ್ಧರನಾದ ಕಾಶಿರಾಜನೂ ಮಹಾರಥನಾದ ಶಿಖಂಡಿಯೂ ಧೃಷ್ಟದ್ಯುಮ್ನನೂ ವಿರಾಟನೂ ಯಾರಿಗೂ ಸೋಲದ ಸಾತ್ಯಕಿಯೂ ದ್ರುಪದನೂ ದ್ರೌಪದಿಯ ಮಕ್ಕಳೂ ಎಲೈ ಪೃಥಿವೀಪತಿಯೆ, ಮಹಾ ಬಾಹುಬಲವುಳ್ಳ ಅಭಿಮನ್ಯುವೂ ಎಲ್ಲಾ ಕಡೆಯಿಂದಲೂ ಬೇರೆ ಬೇರೆಯಾಗಿ (ತಮ್ಮ ತಮ್ಮ) ಶಂಖಗಳನ್ನು ಧ್ವನಿಗೈದರು.

**ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್ ।**
**ನಭಶ್ಚ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್ ॥ ೧೯ ॥**

೧೯. ಆ ಗದ್ದಲವು ಬಲು ದೊಡ್ಡದಾಗಿ ಆಕಾಶವನ್ನೂ ಭೂಮಿಯನ್ನೂ (ತುಂಬಿಕೊಂಡು) ಮಾರುದನಿಗೊಡುತ್ತಾ ಧೃತರಾಷ್ಟ್ರನ ಕಡೆಯವರ ಹೃದಯಗಳನ್ನು ಸೀಳುತ್ತಿತ್ತು.

## ಅರ್ಜುನನು ಶತ್ರುಗಳನ್ನು ನೋಡಿದ್ದು

**ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ ।**
**ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಣ್ಡವಃ ॥ ೨೦ ॥**
**ಹೃಷೀಕೇಶಂ ತದಾ ವಾಕ್ಯಮಿದಮಾಹ ಮಹೀಪತೇ ।**

೨೦-೨೧. ಎಲೈ ಭೂಪತಿಯೆ, ಆಮೇಲೆ ಕಪಿಧ್ವಜ(ನಾದ ಅರ್ಜುನ)ನು ಯುದ್ಧಕ್ಕಾಗಿ ಅಲ್ಲಿ ನಿಂತಿದ್ದ ಧೃತರಾಷ್ಟ್ರನ ಕಡೆಯವರನ್ನು ನೋಡಿ ಶಸ್ತ್ರಪ್ರಯೋಗಕ್ಕೆ ಕಾಲವು ಒದಗಿದ್ದರಿಂದ ಗಾಂಡೀವಧನುಸ್ಸನ್ನು ಎತ್ತಿ ಹಿಡಿದುಕೊಂಡು ಹೃಷಿಕೇಶ(ನಾದ ಶ್ರೀ ಕೃಷ್ಣ)ನನ್ನು ಕುರಿತು ಈ ಮಾತನ್ನು ಹೇಳಿದನು :

**ಅರ್ಜುನ ಉವಾಚ—**

**ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ॥೨೧॥**
**ಯಾವದೇತಾನ್ ನಿರೀಕ್ಷೇಽಹಂ ಯೋದ್ಧುಕಾಮಾನವಸ್ಥಿತಾನ್ ।**
**ಕೈರ್ಮಯಾ ಸಹ ಯೋದ್ಧವ್ಯಮಸ್ಮಿನ್ ರಣಸಮುದ್ಯಮೇ ॥ ೨೨ ॥**
**ಯೋತ್ಸ್ಯಮಾನಾನವೇಕ್ಷೇಽಹಂ ಯ ಏತೇಽತ್ರ ಸಮಾಗತಾಃ ।**
**ಧಾರ್ತರಾಷ್ಟ್ರಸ್ಯ ದುರ್ಬುದ್ಧೇರ್ಯುದ್ಧೇ ಪ್ರಿಯಚಿಕೀರ್ಷವಃ ॥೨೩॥**

೨೧-೨೩. ಅರ್ಜುನನಿಂತೆಂದನು : ಎಲೈ ಅಚ್ಯುತನೆ, ಈ ರಣೋದ್ಯೋಗದಲ್ಲಿ ನಾನು ಯಾರೊಡನೆ ಯುದ್ಧಮಾಡಬೇಕೆಂದು ಗೊತ್ತು ಮಾಡುವದಕ್ಕಾಗಿ ನನ್ನ ರಥವನ್ನು ಎರಡೂ ಸೈನ್ಯಗಳ ನಡುವೆ ನಿಲ್ಲಿಸು ; ಇಲ್ಲಿ ಯುದ್ಧಮಾಡಬೇಕೆಂದು ಬಂದು ನಿಂತಿರುವ ಇವರನ್ನು ನೋಡೋಣ. ದುರ್ಬುದ್ಧಿಯಾದ ದುರ್ಯೋಧನನಿಗೆ ಯುದ್ಧದಲ್ಲಿ ಪ್ರಿಯವನ್ನುಂಟು ಮಾಡಬೇಕೆಂದು ಯಾರುಯಾರು ಕಾದಾಟಕ್ಕೆಂದು ಇಲ್ಲಿ ಬಂದು ಸೇರಿರುವರೋ ಅವರನ್ನು ನಾನು ನೋಡಬೇಕು.

**ಸಞ್ಜಯ ಉವಾಚ—**

**ಏವಮುಕ್ತೋ ಹೃಷೀಕೇಶೋ ಗುಡಾಕೇಶೇನ ಭಾರತ ।**
**ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಮ್ ॥ ೨೪ ॥**
**ಭೀಷ್ಮದ್ರೋಣಪ್ರಮುಖತಃ ಸರ್ವೇಷಾಂ ಚ ಮಹೀಕ್ಷಿತಾಮ್ ।**
**ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ ॥ ೨೫ ॥**

೨೪-೨೫. ಸಂಜಯನಿಂತೆಂದನು : ಎಲೈ ಧೃತರಾಷ್ಟ್ರನೆ, ಹೀಗೆಂದು (ಅರ್ಜುನ)ನು ಹೇಳಲು ಹೃಷಿಕೇಶನಾದ ಶ್ರೀ ಕೃಷ್ಣನು ಎರಡು ಸೇನೆಗಳಿಗೂ ನಡುವೆ ಭೀಷ್ಮದ್ರೋಣರ ಮತ್ತು ಎಲ್ಲಾ ರಾಜರ ಮುಂದೆ ಆ ಉತ್ತಮವಾದ ರಥವನ್ನು ನಿಲ್ಲಿಸಿ "ಎಲೈ ಪಾರ್ಥನೆ, ಇಗೋ ಇಲ್ಲಿ ನೆರೆದಿರುವ ಕೌರವರನ್ನು ನೋಡು '' ಎಂದನು.

**ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ ಪಿತೄನಥ ಪಿತಾಮಹಾನ್ ।**
**ಆಚಾರ್ಯಾನ್ಮಾತುಲಾನ್ ಭ್ರಾತೄನ್ ಪುತ್ರಾನ್ ಪೌತ್ರಾನ್ ಸಖೀಂಸ್ತಥಾ**
**ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ ॥ ೨೬ ॥**[1]

೨೬. ಅರ್ಜುನನು ಅಲ್ಲಿ ಎರಡು ಸೈನ್ಯಗಳಲ್ಲಿಯೂ ಇದ್ದ ಚಿಕ್ಕಪ್ಪ ದೊಡ್ಡಪ್ಪಂದಿರನ್ನೂ ಅಜ್ಜಂದಿರನ್ನೂ ಆಚಾರ್ಯರುಗಳನ್ನೂ ಸೋದರ ಮಾವಂದಿರನ್ನೂ ಅಣ್ಣತಮ್ಮಂದಿರನ್ನೂ ಮಕ್ಕಳನ್ನೂ ಮುಮ್ಮಕ್ಕಳನ್ನೂ ಸ್ನೇಹಿತರನ್ನೂ ಮಾವಂದಿರನ್ನೂ ತಮ್ಮ ಮೇಲೆ ಪ್ರೀತಿಯುಳ್ಳ (ಉಳಿದ)ವರನ್ನೂ ಕಂಡನು.

**ತಾನ್ ಸಮೀಕ್ಷ್ಯ ಸ ಕೌನ್ತೇಯಃ ಸರ್ವಾನ್ ಬನ್ಧೂನವಸ್ಥಿತಾನ್ ।**
**ಕೃಪಯಾ ಪರಯಾವಿಷ್ಟೋ ವಿಷೀದನ್ನಿದಮಬ್ರವೀತ್ ॥ ೨೭ ॥**

೨೭. ಆ ಕುಂತೀಪುತ್ರನಾದ ಅರ್ಜುನನು ಅಲ್ಲಿದ್ದ ಆ ಬಂಧುಗಳನ್ನೆಲ್ಲ ಚೆನ್ನಾಗಿ ನೋಡಿ ಹೆಚ್ಚಿನ ಕನಿಕರದಿಂದ ತುಂಬಿ ವಿಷಾದದಿಂದ ಈ (ಮಾತನ್ನು) ನುಡಿದನು.

## ಅರ್ಜುನನ ವಿಷಾದೋಕ್ತಿ

**ಅರ್ಜುನ ಉವಾಚ—**

**ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್ ।**[2]
**ಸೀದನ್ತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ॥ ೨೮ ॥**

---

1. ಇಲ್ಲಿ ಒಂದು ಅರ್ಧ ಶ್ಲೋಕವನ್ನು ಹೆಚ್ಚಿಗೆ ಸೇರಿಸಿಕೊಂಡು ಎಣಿಸಿದೆ; ಮುಂದೆ ೩೨ ನೆಯ ಶ್ಲೋಕದಲ್ಲಿ ಅರ್ಧವನ್ನೇ ಒಂದೆಂದು ಲೆಕ್ಕಮಾಡಿಕೊಂಡಿದೆ ಇದರಿಂದ ವಾಕ್ಯಕ್ಕೆ ಅನುಸಾರವಾಗಿ ಅರ್ಥಮಾಡಿಕೊಳ್ಳುವದಕ್ಕೆ ಅನುಕೂಲಿಸುತ್ತದೆ.

2. "ದೃಷ್ಟ್ವೇಮಾನ್ ಸ್ವಜನಾನ್ ಕೃಷ್ಣ ಯುಯುತ್ಸೂನ್ ಸಮುಪಸ್ಥಿತಾನ್'' ಎಂದು ಮೈ॥.

೨೮. ಎಲೈ ಕೃಷ್ಣನೆ, ಯುದ್ಧಮಾಡಬೇಕೆಂಬ ಅಭಿಲಾಷೆಯಿಂದ ಎದುರಿಗೆ ನಿಂತಿರುವ ಈ ಸ್ವಜನವನ್ನು ನೋಡಿ ನನ್ನ ಅವಯವಗಳು ಸೊರಗುತ್ತಿವೆ, ಬಾಯಿಯೂ ಒಣಗುತ್ತಿದೆ.

**ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ ।**
**ಗಾಣ್ಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ ಪರಿದಹ್ಯತೇ ॥ ೨೯ ॥**

೨೯. ನನ್ನ ಮೈಯಲ್ಲಿ ನಡುಕವೂ ರೋಮಾಂಚವೂ ಉಂಟಾಗುತ್ತಿದೆ. ಕೈಯಿಂದ ಗಾಂಡೀವಧನುಸ್ಸು ಜಗುಳಿಬೀಳುತ್ತಿದೆ, ಮತ್ತು ಮೈಚರ್ಮವು ಸುಡುತ್ತಿದೆ.

**ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ ।**
**ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ ॥ ೩೦ ॥**

೩೦. ನನಗೆ ನಿಂತುಕೊಳ್ಳುವದಕ್ಕೂ ಆಗುವಂತಿಲ್ಲ; ಮತ್ತು ನನ್ನ ಮನಸ್ಸು ತೊಳಲುವಂತೆ ಇದೆ. ಎಲೈ ಕೇಶವನೆ, ನಮಗೆ ವಿರುದ್ಧವಾದ ಶಕುನಗಳೂ ಕಾಣಿಸುತ್ತಿವೆ.

**ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ ।**
**ನ ಕಾಙ್ಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ॥ ೩೧ ॥**
**ಕಿಂ ನೋ ರಾಜ್ಯೇನ ಗೋವಿನ್ದ ಕಿಂ ಭೋಗೈರ್ಜೀವಿತೇನ ವಾ ॥ ೩೨॥**

೩೧-೩೨. ಯುದ್ಧದಲ್ಲಿ ಸ್ವಜನರನ್ನು ಕೊಂದರೆ ಒಳ್ಳೆಯದಾಗುವಂತೆ ನನಗೆ ಕಾಣುವದಿಲ್ಲ. ಎಲೈ ಕೃಷ್ಣನೆ, ನನಗೆ ವಿಜಯವೂ ಬೇಕಿಲ್ಲ, ರಾಜ್ಯವಾಗಲಿ ಭೋಗಗಳಾಗಲಿ (ಯಾವದೂ) ಬೇಕಿಲ್ಲ. ಎಲೈ ಗೋವಿಂದನೆ, ನಮಗೆ ರಾಜ್ಯದಿಂದೇನು, ಭೋಗಗಳಿಂದೇನು, ಅಥವಾ ಬದುಕಿರುವದರಿಂದಲಾದರೂ ಏನು ?

**ಯೇಷಾಮರ್ಥೇ ಕಾಙ್ಕ್ಷಿತಂ ನೋ ರಾಜ್ಯಂ ಭೋಗಾಃ ಸುಖಾನಿ ಚ ।**
**ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ ॥ ೩೩ ॥**
**ಆಚಾರ್ಯಾಃ ಪಿತರಃ ಪುತ್ರಾಸ್ತಥೈವ ಚ ಪಿತಾಮಹಾಃ ।**
**ಮಾತುಲಾಃ ಶ್ವಶುರಾಃ ಪೌತ್ರಾಃ ಶ್ಯಾಲಾಃ ಸಂಬನ್ಧಿನಸ್ತಥಾ ॥ ೩೪ ॥**
**ಏತಾನ್ನ ಹನ್ತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।**
**ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ ॥ ೩೫ ॥**

೩೩-೩೫. ಯಾರಿಗೋಸ್ಕರ ನಮಗೆ ರಾಜ್ಯವೂ ಭೋಗಗಳೂ ಸುಖಗಳೂ ಬೇಕೆನಿಸ(ಬಹುದೋ) ಅಂಥ ಇವರೇ ಪ್ರಾಣವನ್ನೂ ಧನವನ್ನೂ ಕೈಬಿಟ್ಟು ಯುದ್ಧಕ್ಕೆ ನಿಂತಿರುವರು. ಆಚಾರ್ಯರು, ತಂದೆಯ ವಾವೆಯವರು, ಮಕ್ಕಳು, ಮತ್ತು ಅಜ್ಜಂದಿರು, ಸೋದರಮಾವಂದಿರು, ಮಾವಂದಿರು, ಮೊಮ್ಮಕ್ಕಳು, ಭಾವಮೈದುನರು, ನೆಂಟರು (ಇವರೆಲ್ಲ ನಿಂತಿದ್ದಾರೆ). ಇವರು ನನ್ನನ್ನು ಕೊಂದರೂ (ಕೊಲ್ಲಲಿ), ಇವರನ್ನು ಮೂರು ಲೋಕದ ರಾಜ್ಯಭಾರಕ್ಕಾಗಿಯೂ ನಾನು ಕೊಲ್ಲುವದಕ್ಕೆ ಇಚ್ಛಿಸೆನು, ಇನ್ನು ಈ ಭೂಮಿಗಾಗಿ (ಕೊಲ್ಲಲಾರೆನೆಂದು) ಹೇಳುವದೇನಿದೆ?

**ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ ।**
**ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ ॥ ೩೬ ॥**

೩೬. ಎಲೈ ಜನಾರ್ದನನೆ, ಈ ಧೃತರಾಷ್ಟ್ರನ ಕಡೆಯವರನ್ನು ಕೊಂದರೆ ನಮಗೆ ಯಾವ ಸಂತೋಷವಾದೀತು? ಈ ಆತತಾಯಿಗಳನ್ನು[1] ಕೊಂದರೆ ನಮಗೆ ಪಾಪವೇ ಹತ್ತಿಕೊಂಡೀತು!

**ತಸ್ಮಾನ್ನಾರ್ಹಾ ವಯಂ ಹನ್ತುಂ ಧಾರ್ತರಾಷ್ಟ್ರಾನ್ ಸ್ವಬಾನ್ಧವಾನ್ ।**
**ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ ॥ ೩೭ ॥**

೩೭. ಆದ್ದರಿಂದ, ಎಲೈ ಮಾಧವನೆ, ನಮ್ಮ ಬಾಂಧವರಾದ ಈ ಧಾರ್ತರಾಷ್ಟ್ರರನ್ನು ನಾವು ಕೊಲ್ಲುವದು ಸರಿಯಲ್ಲ. ಏಕೆಂದರೆ ಸ್ವಜನವನ್ನು ಕೊಂದು ಹೇಗೆತಾನೆ ಸುಖಿಗಳಾಗಿದ್ದೇವು?

**ಯದ್ಯಪ್ಯೇತೇ ನ ಪಶ್ಯನ್ತಿ ಲೋಭೋಪಹತಚೇತಸಃ ।**
**ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಮ್ ॥ ೩೮ ॥**
**ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಮ್ ।**
**ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ ॥ ೩೯ ॥**

---

1. ಮನೆಗೆ ಬೆಂಕಿಯಿಟ್ಟವನು, ವಿಷವನ್ನು ಹಾಕಿದವನು, ಶಸ್ತ್ರವನ್ನೆತ್ತಿ ಹೊಡೆಯುವದಕ್ಕೆ ಬಂದಿರುವವನು, ಧನವನ್ನು ಸುಲಿದುಕೊಂಡವನು, ತನ್ನ ಭೂಮಿಯನ್ನೂ ಹೆಂಡತಿಯನ್ನೂ ಅಪಹರಿಸಿದವನು—ಇವರು ಆತತಾಯಿಗಳು. (ಮನು. ೮-೩೫೦). ಕೌರವರು ಆತತಾಯಿಗಳಾದರೂ ಅವರನ್ನು ನಾವು ಕೊಲ್ಲಬಾರದು—ಎಂದು ಅರ್ಜುನನ ಅಭಿಪ್ರಾಯ.

೩೮–೩೯. ಎಲೈ ಜನಾರ್ದನನೆ, ಹಿಡಿಯದಾಸೆಯಿಂದ ವಿವೇಕವನ್ನು ಕಳೆದುಕೊಂಡಿರುವ ಇವರು ಕುಲಕ್ಷಯದಿಂದಾಗುವ ದೋಷವನ್ನೂ ಮಿತ್ರದ್ರೋಹದಲ್ಲಿರುವ ಪಾಪವನ್ನೂ ಕಾಣದಿರುವರಾದರೂ ಕುಲದ ನಾಶದಿಂದಾಗುವ ಕೇಡನ್ನು ಬಲ್ಲ ನಾವು ಈ ಪಾಪ(ಕೃತ್ಯ)ದಿಂದ ಹಿಮ್ಮೆಟ್ಟಬೇಕೆಂದು ಏತಕ್ಕೆ ತಿಳಿದುಕೊಳ್ಳಬಾರದು ?

**ಕುಲಕ್ಷಯೇ ಪ್ರಣಶ್ಯನ್ತಿ ಕುಲಧರ್ಮಾಃ ಸನಾತನಾಃ ।**
**ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ ॥ ೪೦ ॥**

೪೦. ಕುಲವು ನಾಶವಾದರೆ ಬಹುಕಾಲದಿಂದ ಬಂದಿರುವ ಕುಲಧರ್ಮಗಳು ನಾಶವಾಗುವವು. ಧರ್ಮವು ಇಲ್ಲವಾದರೆ ಕುಲವೆಲ್ಲವನ್ನೂ ಅಧರ್ಮವು ಮುಸುಕಿಕೊಳ್ಳುವದು.

**ಅಧರ್ಮಾಭಿಭವಾತ್ ಕೃಷ್ಣ ಪ್ರದುಷ್ಯನ್ತಿ ಕುಲಸ್ತ್ರಿಯಃ ।**
**ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಙ್ಕರಃ ॥ ೪೧ ॥**

೪೧. ಎಲೈ ಕೃಷ್ಣನೆ, ಅಧರ್ಮವು ಮುಸುಕಿಕೊಳ್ಳುವದರಿಂದ ಕುಲಸ್ತ್ರೀಯರೆಲ್ಲರೂ ಕೆಡುವರು. ಎಲೈ ವೃಷ್ಣಿಕುಲೋದ್ಭವನೆ, ಸ್ತ್ರೀಯರು ಕೆಟ್ಟರೆ ವರ್ಣಗಳು ಕಲೆಬೆರಕೆಯಾಗುವವು.

**ಸಙ್ಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।**
**ಪತನ್ತಿ ಪಿತರೋ ಹ್ಯೇಷಾಂ ಲುಪ್ತಪಿಣ್ಡೋದಕಕ್ರಿಯಾಃ ॥ ೪೨ ॥**

೪೨. ವರ್ಣಗಳ ಸಂಕರವೆಂಬುದು ಕುಲವನ್ನು ನಾಶಮಾಡಿದವರಿಗೂ ಕುಲಕ್ಕೂ ನರಕವನ್ನುಂಟುಮಾಡುವದು. ಏಕೆಂದರೆ ಇವರ ಪಿತೃಗಳು ಶ್ರಾದ್ಧತರ್ಪಣಕರ್ಮಗಳಿಲ್ಲದೆ (ಪಿತೃಲೋಕದಿಂದ) ಕೆಳಕ್ಕೆ ಬೀಳುವರು.

**ದೋಷೈರೇತೈಃ ಕುಲಘ್ನಾನಾಂ ವರ್ಣಸಙ್ಕರಕಾರಕೈಃ ।**
**ಉತ್ಸಾದ್ಯನ್ತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥ ೪೩ ॥**

೪೩. ವರ್ಣಸಂಕರವನ್ನುಂಟುಮಾಡುವ ಈ ಕುಲನಾಶಕರ ದೋಷಗಳಿಂದ, ಶಾಶ್ವತವಾಗಿ ನಡೆದುಬಂದಿರುವ ಜಾತಿಧರ್ಮಗಳೂ ಕುಲಧರ್ಮಗಳೂ ಹಾಳಾಗಿಹೋಗುವವು.

**ಉತ್ಸನ್ನಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ ।**
**ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ ॥ ೪೪ ॥**

೪೪. ಎಲೈ ಜನಾರ್ದನನೆ, ಕುಲಧರ್ಮಗಳನ್ನು ಹಾಳುಮಾಡಿಕೊಂಡಿರುವ ಜನರಿಗೆ ತಪ್ಪದೆ ನರಕದಲ್ಲಿಯೇ ವಾಸವಾಗುವದು-ಎಂದು (ಶಾಸ್ತ್ರದಲ್ಲಿ ಹೇಳಿರುವದನ್ನು) ಕೇಳಿರುತ್ತೇವಷ್ಟೆ.

**ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಮ್ ।**
**ಯದ್ರಾಜ್ಯಸುಖಲೋಭೇನ ಹನ್ತುಂ ಸ್ವಜನಮುದ್ಯತಾಃ ॥ ೪೫ ॥**

೪೫. ಅಯ್ಯೋ! ರಾಜ್ಯದ ಸುಖವನ್ನು ಬಯಸಿ ಸ್ವಜನವನ್ನೇ ಕೊಲ್ಲುವದಕ್ಕೆ ಪ್ರಯತ್ನಮಾಡುತ್ತಿರುವೆವಲ್ಲ! ನಾವು ದೊಡ್ಡ ಪಾಪವನ್ನು ಮಾಡುವದಕ್ಕೆ ನಿಶ್ಚಯಿಸಿದಂತಾಗಿದೆ.

**ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ ।**
**ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್ ॥ ೪೬ ॥**

೪೬. ನಾನು ಶಸ್ತ್ರವನ್ನು ಕೈಬಿಟ್ಟು ಯಾವ ಪ್ರತೀಕಾರವನ್ನೂ ಮಾಡದೆ ಇರುವಲ್ಲಿ ಶಸ್ತ್ರಪಾಣಿಗಳಾಗಿ ಧಾರ್ತರಾಷ್ಟ್ರರು ನನ್ನನ್ನು ಯುದ್ಧದಲ್ಲಿ ಕೊಂದರೆ ಅದೇ ನನಗೆ ಹೆಚ್ಚಿನ ಕ್ಷೇಮವಾದೀತು!

**ಸಞ್ಜಯ ಉವಾಚ—**
**ಏವಮುಕ್ತ್ವಾರ್ಜುನಃ ಸಙ್ಖ್ಯೇ ರಥೋಪಸ್ಥ ಉಪಾವಿಶತ್ ।**
**ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸಃ ॥ ೪೭ ॥**

೪೭. ಸಂಜಯನಿಂತೆಂದನು :—ಹೀಗೆಂದು ನುಡಿದು ಅರ್ಜುನನು (ಈ) ಯುದ್ಧ(ರಂಗ)ದಲ್ಲಿ ದುಃಖದಿಂದ ಮನಸ್ಸಿನಲ್ಲಿ ಕಳವಳಪಡುತ್ತಾ ಬಾಣವನ್ನೂ ಬಿಲ್ಲನ್ನೂ ಕೈಬಿಟ್ಟು ರಥದ ಮುಂಗಡೆಯಲ್ಲಿ ಕುಳಿತುಕೊಂಡನು.

[ಇತಿ ಶ್ರೀಮಹಾಭಾರತೇ ಶತಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಭೀಷ್ಮಪರ್ವಣಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ] ಅರ್ಜುನವಿಷಾದಯೋಗೋನಾಮ ಪ್ರಥಮೋಽಧ್ಯಾಯಃ*

* [ಇಲ್ಲಿಗೆ ವ್ಯಾಸಮಹರ್ಷಿಗಳಿಂದ ರಚಿತವಾದ ಲಕ್ಷಶ್ಲೋಕಗಳ ಮಹಾಭಾರತಸಂಹಿತೆಯಲ್ಲಿ ಭೀಷ್ಮಪರ್ವದಲ್ಲಿ ಶ್ರೀ ಭಗವಂತನಿಂದ ಗಾನಮಾಡಲ್ಪಟ್ಟ ಬ್ರಹ್ಮವಿದ್ಯೆಯೂ ಯೋಗಶಾಸ್ತ್ರವೂ ಆಗಿರುವ ಈ ಶ್ರೀಕೃಷ್ಣಾರ್ಜುನಸಂವಾದರೂಪವಾದ ಉಪನಿಷತ್ತುಗಳಲ್ಲಿ] ಅರ್ಜುನವಿಷಾದಯೋಗವೆಂಬ ಒಂದನೆಯ ಅಧ್ಯಾಯವು ಮುಗಿಯಿತು_ಎಂದು ಸಮಾಪ್ತಿವಾಕ್ಯಕ್ಕೆ ಅರ್ಥ. ಚೌಕನೆಯ ಕಂಸದಲ್ಲಿ ಅಡಕವಾಗಿರುವ ಭಾಗವು ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿಯೂ ಬರುತ್ತದೆ. ಆಯಾ ಅಧ್ಯಾಯದ ಹೆಸರನ್ನು ಸೇರಿಸಿ ಕೊಂಡು ಈ ಉಪಸಂಹಾರ ವಾಕ್ಯಕ್ಕೆ ಅರ್ಥವನ್ನು ಮಾಡಿಕೊಳ್ಳಬೇಕು. ಭಾಷ್ಯಕಾರರು ಈ ವಾಕ್ಯಕ್ಕೆ ಅರ್ಥವನ್ನು ಬರೆದಿಲ್ಲವಾದ್ದರಿಂದ ಇದು ಅವರ ಕಾಲಕ್ಕೆ ಇದ್ದಿತೊ ಇಲ್ಲವೊ, ತಿಳಿಯದು. ಪೀಠಿಕೆಯನ್ನು ನೋಡಿ. ಇನ್ನು ಮುಂದೆ ನಾವು ಈ ವಾಕ್ಯದ ಸಂಕ್ಷೇಪರೂಪವನ್ನು ಮಾತ್ರ ಕೊಡುವೆವು.

# ಎರಡನೆಯ ಅಧ್ಯಾಯ

## ( ಸಾಂಖ್ಯಯೋಗ )

### ಶ್ರೀಕೃಷ್ಣನು ಅರ್ಜುನನ ದೌರ್ಬಲ್ಯವನ್ನು ನಿಂದಿಸಿದ್ದು

**ಸಞ್ಜಯ ಉವಾಚ—**

**ತಂ ತಥಾ ಕೃಪಯಾವಿಷ್ಟಮಶ್ರುಪೂರ್ಣಾಕುಲೇಕ್ಷಣಮ್ ।**
**ವಿಷೀದನ್ತಮಿದಂ ವಾಕ್ಯಮುವಾಚ ಮಧುಸೂದನಃ ॥ ೧ ॥**

೧. ಸಂಜಯನಿಂತೆಂದನು :—ಹಾಗೆ ಮರುಕಕ್ಕೆ ವಶನಾಗಿ ಕಣ್ಣೀರು ತುಂಬಿ ಮುಂದುಗಾಣದ ಕಣ್ಣುಗಳುಳ್ಳವನಾಗಿ ದುಃಖಪಡುತ್ತಿದ್ದ ಅರ್ಜುನನನ್ನು ಕುರಿತು ಮಧುಸೂದನ(ನಾದ ಶ್ರೀಕೃಷ್ಣನು) ಈ ವಾಕ್ಯವನ್ನು ಹೇಳಿದನು.

**ಶ್ರೀಭಗವಾನುವಾಚ—**

**ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಮ್ ।**
**ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ ॥ ೨ ॥**

೨. ಶ್ರೀ ಭಗವಂತನಿಂತೆಂದನು :—ಎಲೈ ಅರ್ಜುನನೆ, ಇಂಥ ವಿಷಮಸಂದರ್ಭದಲ್ಲಿ ನಿನಗೆ ಈ ಬುದ್ಧಿಮಾಲಿನ್ಯವು ಏಕೆ ಬಂದಿತು ? ಇದು ಅನಾರ್ಯರು (ಮಾತ್ರ) ಹೊಂದತಕ್ಕದ್ದು, ನರಕಸಾಧನವಾದದ್ದು, ಅಪಯಶಸ್ಸನ್ನುಂಟುಮಾಡುವಂಥದ್ದು.

**ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।**
**ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರನ್ತಪ ॥ ೩ ॥**

೩. ಪಾರ್ಥನೆ, ಹೇಡಿತನವನ್ನು ಹೊಂದದಿರು ; ಇದು ನಿನಗೆ ತಕ್ಕದ್ದಲ್ಲ. ಎಲೈ ಶತ್ರುತಾಪನನೆ, ಅತಿ ತುಚ್ಛವಾದ ಈ ಹೃದಯದೌರ್ಬಲ್ಯವನ್ನು ಬಿಟ್ಟು ಏಳು.

## ಅರ್ಜುನನ ಉತ್ತರ

**ಕಥಂ ಭೀಷ್ಮಮಹಂ ಸಙ್ಖ್ಯೇ ದ್ರೋಣಂ ಚ ಮಧುಸೂದನ ।**
**ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿಸೂದನ ॥ ೪ ॥**

೪. ಎಲೈ ಶತ್ರುನಾಶಕನಾದ ಮಧುಸೂದನನೆ, ಪೂಜೆಗೆ ಯೋಗ್ಯರಾಗಿರುವ ಭೀಷ್ಮ, ದ್ರೋಣ–ಇವರೊಡನೆ ನಾನು ಬಾಣಗಳಿಂದ ಹೇಗೆ ಎದುರಿಸಿ ಕಾದಾಡಲಿ !

**ಗುರೂ ನಹತ್ವಾ ಹಿ ಮಹಾನುಭಾವಾನ್**
**ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹ ಲೋಕೇ ।**
**ಹತ್ವಾರ್ಥಕಾಮಾಂಸ್ತು ಗುರೂನಿಹೈವ**
**ಭುಞ್ಜೀಯ ಭೋಗಾನ್ ರುಧಿರಪ್ರದಿಗ್ಧಾನ್ ॥ ೫ ॥**

೫. ಮಹಾನುಭಾವರಾದ ಗುರುಗಳನ್ನು ಕೊಲ್ಲದೆ ಭಿಕ್ಷಾನ್ನವನ್ನು ಮೆಲ್ಲುವದು ಕೂಡ ಈ ಲೋಕದಲ್ಲಿ ಒಳ್ಳೆಯದು. ಆದರೆ ಪ್ರಯೋಜನಾಪೇಕ್ಷಿಗಳಾದ (ಈ) ಗುರುಗಳನ್ನು ಕೊಂದರೆ ರಕ್ತ ಬಳಿದಿರುವ ಭೋಗಗಳನ್ನು, ಈ ಲೋಕದಲ್ಲಿ ಮಟ್ಟಿಗೆ, ಅನುಭವಿಸಿಯೇನು.[1]

**ನ ಚೈತದ್ವಿದ್ಮಃ ಕತರನ್ನೋ ಗರೀಯೋ**
**ಯದ್ವಾ ಜಯೇಮ ಯದಿ ವಾ ನೋ ಜಯೇಯುಃ ।**
**ಯಾನೇವ ಹತ್ವಾ ನ ಜಿಜೀವಿಷಾಮ**
**ಸ್ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ ॥ ೬ ॥**

೬. ಇವೆರಡರಲ್ಲಿ ಯಾವದು ಹೆಚ್ಚಿನದೋ[2] ಇದನ್ನೂ ನಾವರಿಯೆವು; ನಾವು ಜಯಿಸುವೆವೊ, ಅಥವಾ ನಮ್ಮನ್ನೇ (ಇವರು) ಜಯಿಸಿಯಾರೊ ! ಯಾರನ್ನು ಕೊಂದು ಬಾಳಬೇಕೆಂದು ಬಯಸುವಂತಿಲ್ಲವೋ ಆ ಧಾರ್ತರಾಷ್ಟ್ರರೇ ನಮ್ಮೆದುರಿಗೆ ನಿಂತಿರುವರು.

---

1. ಗುರುಗಳನ್ನು ಕೊಂದರಾದರೋ ರಕ್ತ ಬಳಿದಿರುವ ಅರ್ಥಕಾಮಗಳೆಂಬ ಭೋಗಗಳನ್ನು ಈ ಲೋಕದಲ್ಲಿ ಮಟ್ಟಿಗೆ ಅನುಭವಿಸಿಯೇನು–ಎಂದು (ಆನಂದಗಿರಿ, ಬ್ರಹ್ಮಾನಂದಗಿರಿ, ಮಧುಸೂದನ) ವ್ಯಾಖ್ಯಾನಕಾರರು ಬೇರೊಂದು ಅರ್ಥವನ್ನೂ ಕಲ್ಪಿಸಿರುತ್ತಾರೆ.

2. ಭಿಕ್ಷಾಚರ್ಯೆ, ಯುದ್ಧ–ಇವೆರಡರಲ್ಲಿ ಯಾವದು ಹೆಚ್ಚೋ ತಿಳಿಯದು–ಎಂದು (ಅ॥) ವ್ಯಾಖ್ಯಾನದಲ್ಲಿ ಅರ್ಥಮಾಡಿದೆ. ಗುರುಗಳನ್ನು ಕೊಲ್ಲುವ ಜಯಕ್ಕಿಂತ ನಮಗೆ ಪರಾಜಯವೇ ಹೆಚ್ಚೆಂದು ಏತಕ್ಕೆ ಎಣಿಸಬಾರದು?–ಎಂಬ ಭಾವವನ್ನೂ ತೆಗೆಯಬಹುದಾಗಿದೆ.

**ಕಾರ್ಪಣ್ಯದೋಷೋಪಹತಸ್ವಭಾವಃ**
**ಪೃಚ್ಛಾಮಿ ತ್ವಾಂ ಧರ್ಮಸಮ್ಮೂಢಚೇತಾಃ ।**
**ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ**
**ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್ ॥ ೭ ॥**

೭. ದೈನ್ಯವೆಂಬ ದೋಷದಿಂದ ನನ್ನ ಸ್ವಭಾವವು ಮಲಿನವಾಗಿದೆ; ಧರ್ಮವು[1] ಯಾವದೆಂದು ನನ್ನ ಚಿತ್ತಕ್ಕೆ ತಿಳಿಯದೆ ನಿನ್ನನ್ನು ಕೇಳುತ್ತಲಿದ್ದೇನೆ. ಯಾವದು (ನನಗೆ) ಒಳ್ಳೆಯದಾದೀತೋ ಅದನ್ನು ನಿಶ್ಚಯಿಸಿ ನನಗೆ ಹೇಳು. ನಾನು ನಿನ್ನ ಶಿಷ್ಯನು. ನಿನ್ನನ್ನು ಶರಣುಹೊಕ್ಕಿರುವ ನನಗೆ ತಿಳಿವಳಿಕೆಯನ್ನು ಹೇಳು.

**ನ ಹಿ ಪ್ರಪಶ್ಯಾಮಿ ಮಮಾಪನುದ್ಯಾ-**
**ದ್ಯಚ್ಛೋಕಮುಚ್ಛೋಷಣಮಿನ್ದ್ರಿಯಾಣಾಮ್ ।**
**ಅವಾಪ್ಯ ಭೂಮಾವಸಪತ್ನಮೃದ್ಧಂ**
**ರಾಜ್ಯಂ ಸುರಾಣಾಮಪಿ ಚಾಧಿಪತ್ಯಮ್ ॥ ೮ ॥**

೮. ಭೂಲೋಕದಲ್ಲಿ (ಯಾವ) ಶತ್ರುಗಳೂ ಇಲ್ಲದೆ ಸಂಪತ್ಸಮೃದ್ಧವಾಗಿರುವ ರಾಜ್ಯವನ್ನು ಪಡೆದುಕೊಂಡರೂ ಅಥವಾ ದೇವತೆಗಳ ಮೇಲೆ ಕೂಡ ಒಡೆತನವನ್ನು ಪಡೆದರೂ ಇಂದ್ರಿಯಗಳನ್ನು ಸೊರಗಿಸುತ್ತಿರುವ ನನ್ನ ಈ ಶೋಕವನ್ನು ಹೋಗಲಾಡಿಸುವದು ಯಾವದೋ ಕಾಣೆನು.

**ಸಞ್ಜಯ ಉವಾಚ—**
**ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂತಪಃ ।**
**ನ ಯೋತ್ಸ್ಯ ಇತಿ ಗೋವಿನ್ದಮುಕ್ತ್ವಾ ತೂಷ್ಣೀಂ ಬಭೂವ ಹ ॥೯॥**

೯. ಸಂಜಯನಿಂತೆಂದನು:—ಶತ್ರುಸಂತಾಪಕರನಾದ ಗುಡಾಕೇಶನು ಹೀಗೆಂದು ಹೃಷೀಕೇಶನಿಗೆ ಹೇಳಿ ಯುದ್ಧಮಾಡುವದಿಲ್ಲ ಎಂದು (ಆ) ಗೋವಿಂದನಿಗೆ ತಿಳಿಸಿ ಸುಮ್ಮನಾದನು.

---

1. ಧರ್ಮವೆಂದರೆ "ಬ್ರಹ್ಮವು" ಎಂದು ಅ॥ ವ್ಯಾಖ್ಯಾನಕಾರರು ಹೇಳುತ್ತಾರೆ. ಈ ಅರ್ಥವು ಕ್ಲಿಷ್ಟವಾಗಿದೆ.

## ಶ್ರೀಕೃಷ್ಣನ ಉತ್ತರದ ಪ್ರಾರಂಭ

**ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।**
**ಸೇನಯೋ ರುಭಯೋರ್ಮಧ್ಯೇ ವಿಷೀದನ್ತಮಿದಂ ವಚಃ ॥ ೧೦ ॥**

೧೦. ಎಲೈ ಭರತವಂಶದ (ಧೃತರಾಷ್ಟ್ರನೆ), ಎರಡು ಸೇನೆಗಳ ನಡುವೆ ಹೀಗೆ ವಿಷಾದಪಡುತ್ತಿರುವ ಆ ಅರ್ಜುನನನ್ನು ಕುರಿತು ಹೃಷೀಕೇಶನು ನಗುವವನಂತೆ ಈ ಮಾತನ್ನು ಆಡಿದನು.

## ಇಲ್ಲಿಯವರೆಗಿನ ಗ್ರಂಥದ ತಾತ್ಪರ್ಯ

(ಭಾಷ್ಯ)

೭. ಅತ್ರ ಚ[1] "ದೃಷ್ಟ್ವಾ ತು ಪಾಣ್ಡವಾನೀಕಂ" (೧-೨) ಇತ್ಯಾರಭ್ಯ "ನ ಯೋತ್ಸ್ಯ ಇತಿ ಗೋವಿನ್ದಮುಕ್ತ್ವಾ ತೂಷ್ಣೀಂ ಬಭೂವ ಹ" (೨-೯) ಇತ್ಯೇತದನ್ತಃ ಪ್ರಾಣಿನಾಂ ಶೋಕಮೋಹಾದಿಸಂಸಾರಬೀಜ[2] ದೋಷೋದ್ಭವಕಾರಣ ಪ್ರದರ್ಶನಾರ್ಥತ್ವೇನ ವ್ಯಾಖ್ಯೇಯೋ ಗ್ರನ್ಥಃ । ತಥಾ ಹಿ । ಅರ್ಜುನೇನ ರಾಜ್ಯ ಗುರುಪುತ್ರಮಿತ್ರಸುಹೃತ್ಸ್ವಜನಸಂಬನ್ಧಿಬಾನ್ಧವೇಷು 'ಅಹಮ್ ಏತೇಷಾಮ್', 'ಮಮ ಏತೇ' ಇತ್ಯೇವಂ (ಭ್ರಾನ್ತಿ) ಪ್ರತ್ಯಯ[3] ನಿಮಿತ್ತಸ್ನೇಹವಿಚ್ಛೇದನಿಮಿತ್ತೌ[4] ಆತ್ಮನಃ ಶೋಕಮೋಹೌ ಪ್ರದರ್ಶಿತೌ "ಕಥಂ ಭೀಷ್ಮಮಹಂ ಸಙ್ಖ್ಯೇ" (೨-೪) ಇತ್ಯಾದಿನಾ। ಶೋಕಮೋಹಾಭ್ಯಾಂ ಹಿ ಅಭಿಭೂತವಿವೇಕವಿಜ್ಞಾನಃ ಸ್ವತ ಏವ ಕ್ಷತ್ರ ಧರ್ಮೇ ಯುದ್ಧೇ ಪ್ರವೃತ್ತೋಽಪಿ ತಸ್ಮಾದ್ ಯುದ್ಧಾತ್ ಉಪರರಾಮ, ಪರ ಧರ್ಮಂ ಚ ಭಿಕ್ಷಾಜೀವನಾದಿ ಕರ್ತುಂ ಪ್ರವವೃತೇ । ತಥಾ ಚ ಸರ್ವಪ್ರಾಣಿನಾಂ ಶೋಕಮೋಹಾದಿದೋಷಾವಿಷ್ಟಚೇತಸಾಂ ಸ್ವಭಾವತ ಏವ ಸ್ವಧರ್ಮಪರಿತ್ಯಾಗಃ ಪ್ರತಿಷಿದ್ಧಸೇವಾ ಚ ಸ್ಯಾತ್ । ಸ್ವಧರ್ಮೇ ಪ್ರವೃತ್ತಾನಾಮಪಿ ತೇಷಾಂ ವಾಙ್ಮನಃ ಕಾಯಾದೀನಾಂ ಪ್ರವೃತ್ತಿಃ ಫಲಾಭಿಸನ್ಧಿಪೂರ್ವಿಕೈವ ಸಾಹಂಕಾರಾ ಚ ಭವತಿ । ತತ್ರ ಏವಂ ಸತಿ ಧರ್ಮಾಧರ್ಮೋಪಚಯಾತ್ ಇಷ್ಟಾನಿಷ್ಟಜನ್ಮಸುಖದುಃಖ

---

1. ಅತ್ರ ಚ [ಧೃತರಾಷ್ಟ್ರ ಉವಾಚ ಧರ್ಮಕ್ಷೇತ್ರೇ ಇತ್ಯಾದಿ] ಎಂದು ಚೌಕನೆಯ ಕಂಸದಲ್ಲಿರುವ ಭಾಗವು ಹೆಚ್ಚಾಗಿ ಅ॥ ಪಾಠದಲ್ಲಿದೆ.
2. "ಬೀಜಭೂತ" ಅ॥ನಿ॥ಗು॥
3. ಮು॥ಮೈ॥ವಾ॥ ಪಾಠದಲ್ಲಿ 'ಭ್ರಾನ್ತಿ' ಎಂಬ ಮಾತಿಲ್ಲ.
4. ವಿಚ್ಛೇದಾದಿನಿಮಿತ್ತೌ" ಎಂದು ಅ॥ನಿ॥ಗು॥ ಪಾಠ.

ಪ್ರಾಪ್ತಿಲಕ್ಷಣಃ[1] ಸಂಸಾರೋಽನುಪರತೋ ಭವತಿ । ಇತ್ಯತಃ ಸಂಸಾರಬೀಜಭೂತೌ ಶೋಕಮೋಹೌ । ತಯೋಶ್ಚ ಸರ್ವಕರ್ಮಸಂನ್ಯಾಸಪೂರ್ವಕಾತ್ ಆತ್ಮಜ್ಞಾನಾತ್ ನಾನ್ಯತೋ ನಿವೃತ್ತಿಃ ಇತಿ ತದುಪದಿದಿಕ್ಷುಃ ಸರ್ವಲೋಕಾನುಗ್ರಹಾರ್ಥಮ್ ಅರ್ಜುನಂ ನಿಮಿತ್ತೀಕೃತ್ಯ ಆಹ ಭಗವಾನ್ ವಾಸುದೇವಃ "ಅಶೋಚ್ಯಾನ್" ಇತ್ಯಾದಿ ॥

(ಭಾಷ್ಯಾರ್ಥ)

ಇಲ್ಲಿ "ದೃಷ್ಟ್ವಾತು ಪಾಣ್ಡವಾನೀಕಂ" (೧-೨) ಎಂಬ ಶ್ಲೋಕದಿಂದ "ನ ಯೋತ್ಸ್ಯ ಇತಿ ಗೋವಿನ್ದಮುಕ್ತ್ವಾ ತೂಷ್ಣೀಂ ಬಭೂವ ಹ" (೨-೯) ಎಂಬವರೆಗಿನ ಗ್ರಂಥವು ಪ್ರಾಣಿಗಳಿಗೆ ಶೋಕ, ಮೋಹ-ಮುಂತಾದ ಸಂಸಾರಬೀಜವಾಗಿರುವ ದೋಷಗಳು ಉಂಟಾಗುವದಕ್ಕೆ ಕಾರಣವನ್ನು[2] ತೋರಿಸುವದಕ್ಕೆ ಬಂದಿದೆ ಎಂತ ವಿವರಿಸಬೇಕು. ಹೇಗೆಂದರೆ: ಅರ್ಜುನನು ರಾಜ್ಯ, ಗುರುಗಳು, ಪುತ್ರರು, ಗೆಳೆಯರು, ಸ್ನೇಹಿತರು, ತಮ್ಮವರು, ಸಂಬಂಧಿಗಳು, ಬಾಂಧವರು-ಇವರಲ್ಲಿ "ನಾನು ಇವರವನು", "ಇವರು ನನ್ನವರು" ಎಂಬ (ಭ್ರಾಂತಿಯ) ಬುದ್ಧಿಯಿಂದಾದ ಸ್ನೇಹವು ನಿಂತುಹೋಗುವದಲ್ಲ! ಎಂಬ[3] ನಿಮಿತ್ತದಿಂದ "ನಾನು ಭೀಷ್ಮನನ್ನೂ (ದ್ರೋಣನನ್ನೂ) ಯುದ್ಧದಲ್ಲಿ ಹೇಗೆ (ಕೊಲ್ಲಲಿ)?" (೨-೪) ಎಂದು ಮುಂತಾಗಿ (ತನ್ನ) ಶೋಕಮೋಹಗಳನ್ನು ತೋರ್ಪಡಿಸಿಕೊಂಡನು. ಶೋಕಮೋಹಗಳಿಂದ ವಿವೇಕದ ತಿಳಿವನ್ನು ಕಳೆದುಕೊಂಡದ್ದರಿಂದಲೇ ಅಲ್ಲವೆ, ಕ್ಷತ್ರಿಯಧರ್ಮವಾದ ಯುದ್ಧದಲ್ಲಿ ತಾನೇ ತೊಡಗಿದ್ದನಾದರೂ ಆ ಯುದ್ಧವನ್ನು ಕೈಬಿಟ್ಟನು, ಪರಧರ್ಮವಾದ ಭಿಕ್ಷಾಜೀವನವೇ ಮುಂತಾದದ್ದನ್ನು[4] ಮಾಡುವದಕ್ಕೂ ಹೊರಟನು? ಆದ್ದರಿಂದ ಶೋಕ, ಮೋಹ-ಮುಂತಾದ[5] ದೋಷಗಳು ಮನಸ್ಸಿನಲ್ಲಿ ಹೊಕ್ಕಿರುವಾಗ

---

1. "ದುಃಖಾದಿ" ಎಂದು ಆ॥ನಿ॥ಗು॥ವಾ॥ ಪಾಠದಲ್ಲಿದೆ; ಇಲ್ಲಿ ಕೊಟ್ಟಿರುವದು ಮ॥ಮೈ॥ ಪಾಠ.

2. 'ಅಜ್ಞಾನವನ್ನು ಮತ್ತು ಅಹಂಕಾರವನ್ನು'' ಆ॥

3. ಇಲ್ಲಿ 'ಆದಿ'' ಎಂಬ ಪಾಠದಲ್ಲಿ ಅವರನ್ನು ಕೊಂದರೆ ಪಾಪವು ಬರುವದಲ್ಲ, ಜನರು ನಮ್ಮನ್ನು ನಿಂದಿಸುವರಲ್ಲ, ನಮಗೆ ನರಕವಾಸವೇ ಗತಿಯಾಗುವದಲ್ಲ!-ಮುಂತಾದ ಎಂದು ಅರ್ಥಮಾಡಿಕೊಳ್ಳಬೇಕು.

4. ಬ್ರಾಹ್ಮಣಸಂನ್ಯಾಸಿಯ ಧರ್ಮವಾದ ಭಿಕ್ಷಾಟನೆ, ಹೇಡಿಗಳು ಮಾತ್ರ ಸ್ವೀಕರಿಸುವ ಔದಾಸೀನ್ಯ-ಮುಂತಾದದ್ದನ್ನು.

5 ಈ ಗ್ರಂಥಭಾಗದಲ್ಲಿ 'ಆದಿ'' ಎಂಬ ಶಬ್ದಗಳು ಹೇರಳವಾಗಿವೆ, ಭಾಷ್ಯಕಾರರು ಮೂಲದಲ್ಲಿ ಸೇರಿಸಿದ್ದರೋ ಇಲ್ಲವೋ ತಿಳಿಯುವಹಾಗಿಲ್ಲ. ಮುಂದೆ ಶೋಕಮೋಹಗಳೆರಡೂ ಸಂಸಾರಕ್ಕೆ ಬೀಜವೆಂದು ಬರೆದಿರುವದರಿಂದ ಇಲ್ಲಿ 'ಆದಿ'' ಎಂಬುದಿರಲಿಲ್ಲವೆಂದು ತೋರುತ್ತದೆ. ಇದ್ದರೆ ಕ್ರೋಧಲೋಭಾದಿಗಳೆಂದು ಅರ್ಥ.

ತಮ್ಮ ಧರ್ಮವನ್ನು ಬಿಟ್ಟು (ಶಾಸ್ತ್ರದಲ್ಲಿ) ಬೇಡವೆಂದಿರುವ (ಕರ್ಮಗಳನ್ನು) ಅನುಸರಿಸುವದೆಂಬುದೂ ಎಲ್ಲಾ ಪ್ರಾಣಿಗಳಲ್ಲಿಯೂ ಸ್ವಭಾವದಿಂದಲೇ ಆಗುವದು. (ಒಂದು ವೇಳೆ) ತಮ್ಮ ಧರ್ಮದಲ್ಲಿ ಪ್ರವರ್ತಿಸಿದರೂ ಅವರಿಗೆ ವಾಕ್ಕು, ಮನಸ್ಸು, ಶರೀರ–ಮುಂತಾದವುಗಳ[1] ಪ್ರವೃತ್ತಿಯು ಫಲಾಶೆಯುಳ್ಳದ್ದಾಗಿಯೇ ಅಹಂಕಾರದಿಂದ ಕೂಡಿಕೊಂಡೇ ಇರುವದು. ಆಗ ಹೀಗಾಗಿ ಧರ್ಮಾಧರ್ಮಗಳು ಹೆಚ್ಚುತ್ತಿರುವದರಿಂದ ಬೇಕಾದ ಅಥವಾ ಬೇಡವಾದ ಜನ್ಮಗಳನ್ನೂ ಸುಖದುಃಖಗಳನ್ನೂ ಪಡೆಯುವದೆಂಬ ಸಂಸಾರವು[2] ಕೊನೆಮುಟ್ಟುವದೇ ಇಲ್ಲ. ಆದ್ದರಿಂದ ಶೋಕ, ಮೋಹ–ಇವೆರಡೂ ಸಂಸಾರಕ್ಕೆ ಬೀಜವಾಗಿರುತ್ತವೆ. ಅವುಗಳು ತೊಲಗಬೇಕಾದರೆ ಎಲ್ಲಾ ಕರ್ಮಗಳನ್ನೂ ಸಂನ್ಯಾಸಮಾಡಿ ಆತ್ಮಜ್ಞಾನವನ್ನು ಪಡೆಯುವದರಿಂದಲೇ ಹೊರತು ಮತ್ತೊಂದರಿಂದ ಆಗಲಾರದು.[3] ಆದಕಾರಣ ಆ (ಜ್ಞಾನವನ್ನು) ಉಪದೇಶಮಾಡಬೇಕೆಂದು ಎಲ್ಲಾ ಜನರನ್ನೂ ಅನುಗ್ರಹಿಸುವದಕ್ಕಾಗಿ ಅರ್ಜುನನನ್ನು ನೆಪವಾಗಿಟ್ಟುಕೊಂಡು ಭಗವಂತನಾದ ವಾಸುದೇವನು "ಶೋಕಕ್ಕೆ ತಕ್ಕವರಲ್ಲದವರನ್ನು (ಕುರಿತು ನೀನು ಶೋಕಿಸುತ್ತಿರುವೆ)" (೨-೧೧) ಎಂದು ಮುಂತಾಗಿ ಹೇಳುತ್ತಿದಾನೆ.

## ಕರ್ಮಜ್ಞಾನಸಮುಚ್ಚಯದಿಂದ ಮೋಕ್ಷವೆಂಬ ವಾದ

(ಭಾಷ್ಯ)

೮. ಅತ್ರ ಕೇಚಿದಾಹುಃ—ಸರ್ವಕರ್ಮಸಂನ್ಯಾಸಪೂರ್ವಕಾತ್ ಆತ್ಮಜ್ಞಾನನಿಷ್ಠಾಮಾತ್ರಾದೇವ ಕೇವಲಾತ್ ಕೈವಲ್ಯಂ ನ ಪ್ರಾಪ್ಯತೇ ಏವ । ಕಿಂ ತರ್ಹಿ ? ಅಗ್ನಿಹೋತ್ರಾದಿಶ್ರೌತಸ್ಮಾರ್ತಕರ್ಮಸಹಿತಾತ್ ಜ್ಞಾನಾತ್ ಕೈವಲ್ಯಪ್ರಾಪ್ತಿಃ ಇತಿ ಸರ್ವಾಸು ಗೀತಾಸು ನಿಶ್ಚಿತೋಽರ್ಥಃ ಇತಿ । ಜ್ಞಾಪಕಂ ಚ ಆಹುರಸ್ಯಾರ್ಥಸ್ಯ ।

---

1 ಇಂದ್ರಿಯಗಳ.

2. ಧರ್ಮವು ಹೆಚ್ಚಿದಂತೆ ಬ್ರಹ್ಮನವರೆಗಿನ ಇಷ್ಟಜನ್ಮವೂ ಸುಖವೂ ದೊರೆಯುವವು; ಧರ್ಮಾಧರ್ಮಗಳ ಸಾಮ್ಯದಿಂದ ಮನುಷ್ಯಜನ್ಮವೂ ಅದರಿಂದ ಸುಖದುಃಖಗಳೂ ಉಂಟಾಗುವವು. ಅಧರ್ಮವು ಹೆಚ್ಚಿದಂತೆ ಅನಿಷ್ಟವಾದ ಸ್ಥಾವರದವರೆಗಿನ ಜನ್ಮಗಳೂ ದುಃಖವೂ ದೊರೆಯುವವು. ಸೂ. ಭಾ. ೧-೧-೪, ಬೃ. ಭಾ. ೩-೩-೧. ಹೀಗೆ ಮತ್ತೆ ಮತ್ತೆ ಆಗುವದೇ ಸಂಸಾರವು.

3 ಕರ್ಮದಿಂದ ಸಂಸಾರವುಂಟಾಗಿರುವದರಿಂದ ಕರ್ಮಗಳನ್ನು ಬಿಡಬೇಕಾಗಿರುತ್ತದೆ. ಅಜ್ಞಾನವೇ ಕಾಮದಮೂಲಕವಾಗಿ ಕರ್ಮಕ್ಕೆ ಕಾರಣವಾಗಿರುವದರಿಂದ ಜ್ಞಾನದಿಂದ ಅಜ್ಞಾನವು ಹೋದರೆ ಸಂಸಾರವು ತೊಲಗುತ್ತದೆ ಎಂದು ಭಾವ. ಕರ್ಮವನ್ನು ನಿಷ್ಕಾಮವಾಗಿ ಮಾಡಿದರೆ ಚಿತ್ತಶುದ್ಧಿಯಿಂದ ಜ್ಞಾನಕ್ಕೆ ಯೋಗ್ಯತೆಯುಂಟಾಗುವದಾದರೂ ಮುಕ್ತಿಗೆ ನೇರಾದ ಕಾರಣವು ಜ್ಞಾನವೇ ಎಂಬುದನ್ನು ಇಲ್ಲಿ ಪ್ರತಿಪಾದಿಸಿದೆ ಎಂದು ತಿಳಿಯಬೇಕು.

"ಅಥ ಚೇತ್ ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ" (೨-೩೩) "ಕರ್ಮಣ್ಯೇವಾಧಿಕಾರಸ್ತೇ" (೨-೪೭), "ಕುರು ಕರ್ಮೈವ ತಸ್ಮಾತ್ ತ್ವಮ್" (೪-೧೫) ಇತ್ಯಾದಿ । ಹಿಂಸಾದಿಯುಕ್ತತ್ವಾತ್ ವೈದಿಕಂ ಕರ್ಮ ಅಧರ್ಮಾಯ ಇತೀಯಮಪಿ ಆಶಙ್ಕಾ ನ ಕಾರ್ಯಾ । ಕಥಮ್? ಕ್ಷಾತ್ರಂ ಕರ್ಮ ಯುದ್ಧಲಕ್ಷಣಂ ಗುರುಭ್ರಾತೃಪುತ್ರಾದಿಹಿಂಸಾಲಕ್ಷಣಮ್ ಅತ್ಯನ್ತಕ್ರೂರಮಪಿ[1] ಸ್ವಧರ್ಮ[2] ಇತಿ ಕೃತ್ವಾ ನ ಅಧರ್ಮಾಯ । ತದಕರಣೇ ಚ "ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ" (೨-೩೩) ಇತಿ ಬ್ರುವತಾ ಯಾವಜ್ಜೀವಾದಿಶ್ರುತಿಚೋದಿತಾನಾಂ[3] ಪಶ್ವಾದಿಹಿಂಸಾಲಕ್ಷಣಾನಾಂ ಚ ಕರ್ಮಣಾಂ ಪ್ರಾಗೇವ ನಾಧರ್ಮತ್ವಮ್ ಇತಿ ಸುನಿಶ್ಚಿತಮ್ ಉಕ್ತಂ ಭವತಿ ಇತಿ ॥

(ಭಾಷ್ಯಾರ್ಥ)

ಈ (ವಿಷಯ)ದಲ್ಲಿ ಕೆಲವರು[4] ಹೇಳುವದೇನೆಂದರೆ. ಎಲ್ಲಾ ಕರ್ಮಗಳನ್ನೂ ಮೊದಲು ಸಂನ್ಯಾಸಮಾಡಿ ಬರಿಯ ಆತ್ಮಜ್ಞಾನದಲ್ಲಿಯೇ ನಿಂತಮಾತ್ರದಿಂದ ಕೈವಲ್ಯವು[5] ದೊರೆಯುವದೇ ಇಲ್ಲ, ಮತ್ತೇನೆಂದರೆ ಅಗ್ನಿಹೋತ್ರವೇ ಮುಂತಾದ ಶ್ರೌತಸ್ಮಾರ್ತಕರ್ಮಗಳಿಂದೊಡಗೂಡಿದ[6] ಜ್ಞಾನದಿಂದ[7] ಕೈವಲ್ಯವು ದೊರಕುವದೆಂಬುದು ಗೀತೆಗಳಲ್ಲೆಲ್ಲ ನಿಶ್ಚಿತವಾದ ವಿಷಯವು.[8] ಈ ವಿಷಯವನ್ನು ತಿಳಿಸುವ ಪ್ರಮಾಣವು ಯಾವದೆಂದರೆ (ಅವರು) ಹೇಳುವದೇನೆಂದರೆ: "ಹಾಗಲ್ಲದೆ ನೀನು ಈ ಧರ್ಮಕ್ಕೆ ಹೊಂದಿಗೆಯಾಗಿರುವ ಕಾಳಗವನ್ನು ಮಾಡದಿದ್ದರೆ (ಪಾಪವನ್ನು ಹೊಂದುತ್ತೀಯೆ)" (೨-೩೩), "ನಿನಗೆ ಕರ್ಮದಲ್ಲಿಯೇ ಅಧಿಕಾರವು[3] (೨-೪೭), "ಆದ್ದರಿಂದ ನೀನು ಕರ್ಮವನ್ನೇ ಮಾಡು" (೪-೧೫) ಮುಂತಾದವು

1. "ಅತ್ಯನ್ತಕ್ರೂರತರಮಪಿ" ನಿ॥ 'ಅತ್ಯನ್ತಂ ಕ್ರೂರಮಪಿ" ವಾ॥
2. "ಸ್ವಕರ್ಮ" ಮೈ॥
3. ಇದಾದಮೇಲೆ "ಸ್ವಕರ್ಮಣಾಮ್" ಎಂದು ಅ॥ನಿ॥ಗು॥ ಪಾಠದಲ್ಲಿ ಹೆಚ್ಚಾಗಿದೆ.
4. ಇದು ವೃತ್ತಿಕಾರರು ಹೇಳುವ ಮತವೆಂದು ಅ॥ ವ್ಯಾಖ್ಯಾನದಲ್ಲಿದೆ. ಇವರು ಬೋಧಾಯನರೆಂದು ಕೆಲವರ ಅಭಿಪ್ರಾಯವಿದೆ; ಆದರೆ ಇದು ಸರಿಯಲ್ಲ. ಪೀಠಿಕೆಯನ್ನು ನೋಡಿ.
5. ಮುಕ್ತಿಯು.
6. ಅಗ್ನಿಹೋತ್ರಾದಿಗಳು ಶ್ರೌತ, ಪಂಚಮಹಾಯಜ್ಞಾದಿಗಳು ಸ್ಮಾರ್ತ
7. ಸಮುಚ್ಚಯವಾದಿಗಳ ಮತದಲ್ಲಿ ಜ್ಞಾನವೆಂದರೆ ಬಲುಮಟ್ಟಿಗೆ ಉಪಾಸನೆಯೇ. ಪೀಠಿಕೆಯನ್ನು ನೋಡಿ.
8. ಈ ಗ್ರಂಥದಲ್ಲಿರುವ ಗೀತೆಗಳೆಂಬ ಹೆಸರಿನ ಏಳುನೂರು ಶ್ಲೋಕಗಳಿಂದ ಹೊರಡುವ ಒಟ್ಟು ಅರ್ಥವು ಇದೇ—ಎಂದು ಭಾವ.

(ಪ್ರಮಾಣವು). ಹಿಂಸೆಯೇ ಮುಂತಾದವುಗಳಿಂದ[1] ಕೂಡಿರುವದರಿಂದ ವೈದಿಕ ಕರ್ಮವು ಅಧರ್ಮವನ್ನುಂಟುಮಾಡೀತು ಎಂಬೀ ಶಂಕೆಯನ್ನು ಮಾಡಬಾರದು. ಹೇಗೆಂದರೆ: ಯುದ್ಧವೆಂಬ ಕ್ಷತ್ರಿಯ ಕರ್ಮವು ಗುರುಗಳು, ಒಡಹುಟ್ಟಿದವರು, ಮಕ್ಕಳು–ಮುಂತಾದವರನ್ನು ಕೊಲ್ಲುವ ರೂಪವಾಗಿರುವದರಿಂದ ಅತ್ಯಂತ ಕ್ರೂರವಾಗಿದ್ದರೂ (ಅದು) ತನ್ನ ಧರ್ಮವೆಂಬುದರಮೇಲೆ ಅಧರ್ಮವನ್ನುಂಟುಮಾಡಲಾರದೆಂದೂ ಮತ್ತು ಅದನ್ನು ಮಾಡದೆ ಇದ್ದರೆ 'ಅದರಿಂದ ನಿನ್ನ ಧರ್ಮವನ್ನೂ ಕೀರ್ತಿಯನ್ನೂ ಕಳೆದುಕೊಂಡು ಪಾಪವನ್ನು ಹೊಂದುವೆ" (೨-೩೩) ಎಂದೂ (ಭಗವಂತನು) ಹೇಳಿರುವದರಿಂದ ಜೀವವಿರುವವರೆಗೂ ಮಾಡಬೇಕೆಂದು ಶ್ರುತಿಯಲ್ಲಿ ವಿಧಿಸಿರುವ (ಕರ್ಮಗಳೂ)[2] ಪಶುಗಳೇ ಮುಂತಾದವನ್ನು ಕೊಲ್ಲುವ ರೂಪವಾಗಿರುವ ಕರ್ಮಗಳೂ ಮೊದಲೇ ಅಧರ್ಮವಲ್ಲವೆಂದು ತೀರ ನಿಶ್ಚಯವಾಗಿ ಹೇಳಿದಂತೆ ಆಯಿತು[3]–ಎಂದು (ಈ ವಾದಿಗಳ ಮತವು).

## ಸಮುಚ್ಚಯವಾದದಲ್ಲಿ ದೋಷಗಳು

(ಭಾಷ್ಯ)

೯. ತದಸತ್ । ಜ್ಞಾನಕರ್ಮನಿಷ್ಠಯೋರ್ವಿಭಾಗವಚನಾತ್ ಬುದ್ಧಿದ್ವಯಾಶ್ರಯಯೋಃ । "ಅಶೋಚ್ಯಾನ್" (೨–೧೧) ಇತ್ಯಾದಿನಾ[4] ಭಗವತಾ ಯಾವತ್ "ಸ್ವಧರ್ಮಮಪಿ ಚಾವೇಕ್ಷ್ಯ" (೨–೩೧) ಇತ್ಯೇತದನ್ತೇನ ಗ್ರನ್ಥೇನ ಯತ್ ಪರಮಾರ್ಥತತ್ತ್ವನಿರೂಪಣಂ ಕೃತಂ ತತ್ ಸಾಙ್ಖ್ಯಮ್ । ತದ್ವಿಷಯಾ ಬುದ್ಧಿಃ ಆತ್ಮನೋ ಜನ್ಮಾದಿವಿಕ್ರಿಯಾಭಾವಾತ್[5] ಅಕರ್ತಾ ಆತ್ಮಾ ಇತಿ ಪ್ರಕರಣಾರ್ಥನಿರೂಪಣಾತ್ ಯಾ ಜಾಯತೇ ಸಾ ಸಾಙ್ಖ್ಯಬುದ್ಧಿಃ । ಸಾ ಯೇಷಾಂ ಜ್ಞಾನಿನಾಮ್ ಉಚಿತಾ ಭವತಿ ತೇ ಸಾಙ್ಖ್ಯಾಃ । ಏತಸ್ಯಾ ಬುದ್ಧೇರ್ಜನ್ಮನಃ ಪ್ರಾಕ್ ಆತ್ಮನೋ ದೇಹಾದಿವ್ಯತಿರಿಕ್ತಕರ್ತೃತ್ವಭೋಕ್ತೃತ್ವಾದ್ಯಪೇಕ್ಷೋ ಧರ್ಮಾಧರ್ಮವಿವೇಕಪೂರ್ವಕೋ ಮೋಕ್ಷಸಾಧನಾನುಷ್ಠಾನಲಕ್ಷಣೋ[6] ಯೋಗಃ । ತದ್ವಿಷಯಾ ಬುದ್ಧಿ

---

1. ಉಚ್ಛಿಷ್ಟಭಕ್ಷಣವೇ ಮುಂತಾದದ್ದು. ಯಜ್ಞಾದಿಗಳಲ್ಲಿ ಈ ದೋಷವಿರುವದರಿಂದ ಇವು ಅಶುದ್ಧವೆಂದು ಸಾಂಖ್ಯಾದಿಗಳು ಹೇಳುವರು.

2 ಅಗ್ನಿಹೋತ್ರಾದಿಗಳೂ.

3 ಸ್ಮೃತಿಯಲ್ಲಿ ಹೇಳಿರುವ ಯುದ್ಧವೇ ಅಶುದ್ಧವಲ್ಲ; ಹೀಗಿರುವಲ್ಲಿ ಶ್ರುತಿಯಲ್ಲಿ ಹೇಳಿರುವ ಯಜ್ಞಾದಿಗಳು ಅಶುದ್ಧವಲ್ಲವೆಂಬುದನ್ನು ಹೇಳಬೇಕಾದದ್ದೇನು?

4 ಗ್ರಂಥೇನ ಎಂಬ ಮಾತು ಇಲ್ಲಿ ಹೆಚ್ಚಾಗಿ ಕೆಲವು ಪುಸ್ತಕಗಳಲ್ಲಿದೆ.

5 "ಷಡ್ವಿಕ್ರಿಯಾಭಾವಾತ್" ಎಂಬ ಪಾಠಕ್ಕಿಂತ ಈ ಮ॥ಮೈ॥ ಪಾಠವು ಮೇಲು.

6 "ಅನುಷ್ಠಾನನಿರೂಪಣಲಕ್ಷಣೋ" ಎಂದು ನಿ॥ ಗು॥ ಪಾಠ; ಅಲ್ಲಿ ನಿರೂಪಣ ಎಂಬ ಮಾತು ಬರೆದವರ ಕೈತಪ್ಪಿನಿಂದ ಬಿದ್ದಿರಬೇಕು.

ಯೋಗಬುದ್ಧಿಃ । ಸಾ ಯೇಷಾಂ ಕರ್ಮಿಣಾಮ್ ಉಚಿತಾ ಭವತಿ ತೇ ಯೋಗಿನಃ । ತಥಾ ಚ ಭಗವತಾ ವಿಭಕ್ತೇ ದ್ವೇ ಬುದ್ಧೀ ನಿರ್ದಿಷ್ಟೇ "ಏಷಾ ತೇಽಭಿಹಿತಾ ಸಾಙ್ಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು ||" (೨-೩೯) ಇತಿ || ತಯೋಶ್ಚ ಸಾಙ್ಖ್ಯಬುದ್ಧ್ಯಾಶ್ರಯಾಂ ಜ್ಞಾನಯೋಗೇನ ನಿಷ್ಠಾಂ ಸಾಙ್ಖ್ಯಾನಾಂ ವಿಭಕ್ತಾಂ ವಕ್ಷ್ಯತಿ "ಪುರಾ ವೇದಾತ್ಮನಾ ಮಯಾ ಪ್ರೋಕ್ತಾ"[1] (೩-೩) ಇತಿ । ತಥಾ ಚ ಯೋಗಬುದ್ಧ್ಯಾಶ್ರಯಾಂ ಕರ್ಮಯೋಗೇನ ನಿಷ್ಠಾಂ ವಿಭಕ್ತಾಂ ವಕ್ಷ್ಯತಿ "ಕರ್ಮಯೋಗೇನ ಯೋಗಿನಾಮ್" ಇತಿ । ಏವಂ ಸಾಙ್ಖ್ಯಬುದ್ಧಿಂ ಯೋಗಬುದ್ಧಿಂ ಚ ಆಶ್ರಿತ್ಯ ದ್ವೇ ನಿಷ್ಠೇ ವಿಭಕ್ತೇ ಭಗವತಾ ಉಕ್ತೇ ಜ್ಞಾನಕರ್ಮಣೋಃ ಕರ್ತೃತ್ವಾಕರ್ತೃತ್ವಾನೇಕತ್ವೈಕತ್ವಬುದ್ಧ್ಯಾಶ್ರಯಯೋಃ ಯುಗಪತ್[2] ಏಕಪುರುಷಾಶ್ರಯತ್ವಾಸಂಭವಂ ಪಶ್ಯತಾ । ಯಥಾ ಏತದ್ ವಿಭಾಗವಚನಂ ತಥೈವ ದರ್ಶಿತಂ ಶಾತಪಥೀಯೇ[3] ಬ್ರಾಹ್ಮಣೇ । ಏತಮೇವ ಪ್ರವ್ರಾಜಿನೋ ಲೋಕಮಿಚ್ಛನ್ತೋ ಬ್ರಾಹ್ಮಣಾಃ ಪ್ರವ್ರಜನ್ತಿ" ಇತಿ ಸರ್ವಕರ್ಮಸಂನ್ಯಾಸಂ ವಿಧಾಯ ತಚ್ಛೇಷೇಣ "ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾಯಂ ಲೋಕಃ" (ಬೃ. ೪-೪-೨೨) ಇತಿ । ತತ್ರೈವ ಚ[4] ಪ್ರಾಗ್ದಾರಪರಿಗ್ರಹಾತ್ ಪುರುಷ ಆತ್ಮಾ ಪ್ರಾಕೃತೋ ಧರ್ಮಜಿಜ್ಞಾಸೋತ್ತರಕಾಲಂ ಲೋಕತ್ರಯಸಾಧನಂ ಪುತ್ರಂ ದ್ವಿಪ್ರಕಾರಂ ಚ ವಿತ್ತಂ ಮಾನುಷಂ ದೈವಂ ಚ–ತತ್ರ ಮಾನುಷಂ ವಿತ್ತಂ ಕರ್ಮರೂಪಂ ಪಿತೃಲೋಕಪ್ರಾಪ್ತಿಸಾಧನಂ ವಿದ್ಯಾಂ ಚ ದೈವಂ ವಿತ್ತಂ ದೇವಲೋಕಪ್ರಾಪ್ತಿಸಾಧನಮ್–ಸೋಽಕಾಮಯತ' (ಬೃ. ೧-೪-೧೭) ಇತಿ ಅವಿದ್ಯಾಕಾಮವತ ಏವ ಸರ್ವಾಣಿ ಕರ್ಮಾಣಿ ಶ್ರೌತಾನಿ[6] ದರ್ಶಿತಾನಿ । ತೇಭ್ಯೋ[7] ವ್ಯುತ್ಥಾನಮ್ ಆತ್ಮಾನಮೇವ ಲೋಕಮ್

---

1. ಇದು ಗೀತೆಯಲ್ಲಿರುವ ಶ್ಲೋಕದ ತಾತ್ಪರ್ಯವು, ಇಲ್ಲಿ ಶ್ಲೋಕವನ್ನೇ ಉದಾಹರಿಸಿಲ್ಲ.
2. ಈ ಮಾತು ನಿ||ಪಾಠದಲ್ಲಿ ಬಿಟ್ಟಿದೆ; ಆದರೆ ಆವಶ್ಯ.
3. ಈ ಮಾತು ಮ||ಮೈ|| ಪಾಠಗಳಲ್ಲಿಲ್ಲ.
4. "ತತ್ರ ಚ" ಎಂದಿಷ್ಟೇ ವಾ||ಮೈ||ಮ|| ಪಾಠ.
5. ಈ ಮಾತು ವಾ||ಮೈ|| ಪಾಠಗಳಲ್ಲಿಲ್ಲ.
6. ಇಲ್ಲಿ "ಶ್ರೌತಾದೀನಿ" ಎಂದು ಅ|| ನಿ|| ಗು|| ಪಾಠಗಳಲ್ಲಿದ್ದರೂ "ಆದಿ" ಬೇಕಿಲ್ಲ; ಮೈ|| ಪಾಠದಲ್ಲಿ 'ಶ್ರೌತಾನಿ' ಎಂಬ ಮಾತಿಲ್ಲ, ಮ|| ಪಾಠದಲ್ಲಿದೆ.
7. "ವ್ಯುತ್ಥಾಯ ಪ್ರವ್ರಜನ್ತಿ" ಎಂಬ ಮಾತು ಅ||ನಿ||ಗು|| ಪಾಠಗಳಲ್ಲಿ ಹೆಚ್ಚಾಗಿದೆ. ಇಲ್ಲಿ ಬೃಹದಾರಣ್ಯಕವಚನಗಳನ್ನೆಲ್ಲ ಅರ್ಥರೂಪವಾಗಿ ಉದಾಹರಿಸಿದೆಯೇ ಹೊರತು ನೇರಾಗಿ ಉದಾಹರಿಸಿಲ್ಲ.

ಇಚ್ಛತಃ ಅಕಾಮಸ್ಯ ವಿಹಿತಮ್ । ತದೇತದ್ ವಿಭಾಗವಚನಮ್ ಅನುಪಪನ್ನಂ ಸ್ಯಾದ್ ಯದಿ ಶ್ರೌತಕರ್ಮಜ್ಞಾನಯೋಃ ಸಮುಚ್ಚಯಃ ಅಭಿಪ್ರೇತಃ ಸ್ಯಾತ್ ಭಗವತಃ ||

(ಭಾಷ್ಯಾರ್ಥ)

ಇದು ಸರಿಯಲ್ಲ. ಏಕೆಂದರೆ (ಬೇರೆಬೇರೆ) ಎರಡು ಬುದ್ಧಿಗಳ (ದೃಷ್ಟಿಯ) ನ್ನಿಟ್ಟುಕೊಂಡು ಜ್ಞಾನಕರ್ಮನಿಷ್ಠೆಗಳೆರಡನ್ನೂ (ಇಲ್ಲಿ) ವಿಂಗಡಿಸಿ ಹೇಳಿರುತ್ತದೆ. (ಅದು ಹೇಗೆಂದರೆ): "ಅಶೋಚ್ಯಾನ್" (ಶೋಕಕ್ಕೆ ತಕ್ಕವರಲ್ಲದವರನ್ನು ೨-೧೧) ಎಂಬದರಿಂದ ಹಿಡಿದು "ಸ್ವಧರ್ಮಮಪಿ ಚಾವೇಕ್ಷ್ಯ" (ನಿನ್ನ ಧರ್ಮವೆಂಬುದನ್ನು ನೋಡಿದರೂ ೨-೩೧) ಎಂಬವರೆಗಿನ ಗ್ರಂಥದಿಂದ ಪರಮಾರ್ಥವಾಗಿರುವ ಆತ್ಮತತ್ತ್ವದ ನಿರೂಪಣೆಯನ್ನು ಭಗವಂತನು ಮಾಡಿದಾನಷ್ಟೆ, ಅದು **ಸಾಂಖ್ಯವು.** ಅದರ ವಿಷಯವಾದ ಬುದ್ಧಿಯು ಎಂದರೆ ಆತ್ಮನಿಗೆ ಹುಟ್ಟುವದೇ ಮುಂತಾದ (ಯಾವ) ವಿಕಾರಗಳೂ[1] ಇಲ್ಲದ್ದರಿಂದ ಆತ್ಮನು ಅಕರ್ತನು ಎಂದು (ಈ) ಪ್ರಕರಣದ ಅರ್ಥವನ್ನು ಚೆನ್ನಾಗಿ ಪರೀಕ್ಷಿಸಿದರೆ ಯಾವದು ಉಂಟಾಗುವದೋ ಆ (ಬುದ್ಧಿಯು) **ಸಾಂಖ್ಯಬುದ್ಧಿಯು.** ಅದು ಯಾರಿಗೆ ಉಚಿತವಾಗಿರುವದೋ ಆ ಜ್ಞಾನಿಗಳು **ಸಾಂಖ್ಯರು** ಈ ಬುದ್ಧಿಯು ಹುಟ್ಟುವಮುಂಚೆ ಆತ್ಮನು ದೇಹಾದಿಗಳಿಗಿಂತ ಬೇರೆಯಾದವನು, ಕರ್ತೃ, ಭೋಕ್ತೃ[2]–ಮುಂತಾದದ್ದನ್ನಿಟ್ಟುಕೊಂಡು[3] ಧರ್ಮಾಧರ್ಮಗಳನ್ನು ವಿಂಗಡಿಸಿಕೊಂಡು ಮೋಕ್ಷಸಾಧನಗಳನ್ನು ಅನುಷ್ಠಾನಮಾಡುವದೆಂಬುದು **ಯೋಗವು.** ಅದರ ವಿಷಯವಾದ ಬುದ್ಧಿಯೇ **ಯೋಗಬುದ್ಧಿಯು.** ಅದು ಯಾರಿಗೆ ಉಚಿತವಾಗಿರುವದೋ ಆ ಕರ್ಮಿಗಳು **ಯೋಗಿಗಳು.** ಆದ್ದರಿಂದಲೇ ಭಗವಂತನು "ಈವರೆಗೆ ನಿನಗೆ ಹೇಳಿದ್ದು ಸಾಂಖ್ಯಬುದ್ಧಿಯು ; ಆದರೆ ಈ ಯೋಗ(ಬುದ್ಧಿಯ) ವಿಷಯವನ್ನು ಕೇಳು" (೨-೩೯) ಎಂದು ಎರಡು ಬುದ್ಧಿಗಳನ್ನು ವಿಂಗಡಿಸಿ ತೋರಿಸಿರುತ್ತಾನೆ. ಈ ಎರಡರಲ್ಲಿ ಸಾಂಖ್ಯಬುದ್ಧಿಯನ್ನಾಶ್ರಯಿಸಿರುವ

---

1. ಹುಟ್ಟುವದು, ಇರುವದು, ಬೆಳೆವಣಿಗೆ, ಮಾರ್ಪಾಡು, ಸೊರಗುವದು, ಸಾವು– ಈ ಆರು ವಿಕಾರಗಳೂ ವಸ್ತುಮಾತ್ರಕ್ಕೆ ಆಗುವವೆಂದು ಯಾಸ್ಕರು ಹೇಳಿರುತ್ತಾರೆ. ಆದರೆ ಇಲ್ಲಿ ಆತ್ಮನಿಗೆ ಈ ಆರೇ ವಿಕಾರಗಳಿಲ್ಲವೆಂದು ಎಣಿಸಿಲ್ಲ; ನಡುವೆ ಇರುವ ವಿಕಾರಗಳನ್ನೂ ಇಲ್ಲವೆಂದಿದೆ. ಆದ್ದರಿಂದ "ಷಟ್" ಎಂಬ ಪಾಠವನ್ನು ನಾವು ಬಿಟ್ಟುಬಿಟ್ಟದ್ದೇವೆ.

2. ಆತ್ಮನು ದೇಹಾದಿಗಳಿಗಿಂತ ಬೇರೆಯಾದವನು, ಕರ್ತೃಭೋಕ್ತೃ–ಎಂಬ ಜ್ಞಾನವಿದ್ದವನು ಮಾತ್ರ ಕರ್ಮದಲ್ಲಿ ತೊಡಗುತ್ತಾನೆ. ಬೃ. ಸಂಬಂಧಭಾಷ್ಯವನ್ನು ನೋಡಿ.

3. ನಿತ್ಯನು ಎಂದು ಮುಂತಾಗಿರುವದನ್ನು 'ಆದಿ' ಎಂಬ ಮಾತಿನಿಂದ ಗ್ರಹಿಸಬೇಕು.

ಜ್ಞಾನಯೋಗದಿಂದ (ಆಗುವ) ನಿಷ್ಠೆಯನ್ನು[1] ಮುಂದೆ "ಪೂರ್ವದಲ್ಲಿ ವೇದರೂಪನಾದ ನಾನು ಹೇಳಿದೆನು" (೩-೩) ಎಂದು ಸಾಂಖ್ಯರಿಗಾಗಿ ಬೇರೆಯೇ ವಿಂಗಡಿಸಿ ಹೇಳಿರುತ್ತಾನೆ. ಅದರಂತೆ ಯೋಗಬುದ್ಧಿಯನ್ನಾಶ್ರಯಿಸಿರುವ ಕರ್ಮಯೋಗದಿಂದ (ಆಗುವ) ನಿಷ್ಠೆಯನ್ನು "ಕರ್ಮಯೋಗದಿಂದ ಯೋಗಿಗಳಿಗೂ" (೩-೩) ಎಂದು (ಬೇರೆಯಾಗಿ) ವಿಂಗಡಿಸಿಯೇ ಹೇಳಿರುತ್ತಾನೆ. ಹೀಗೆ ಸಾಂಖ್ಯಬುದ್ಧಿಯನ್ನೂ ಯೋಗಬುದ್ಧಿಯನ್ನೂ ಆಶ್ರಯಿಸಿ-ಕರ್ತೃತ್ವ, ಅಕರ್ತೃತ್ವ, ಏಕತ್ವ, ಅನೇಕತ್ವ-ಎಂಬ (ವಿರುದ್ಧವಾದ) ಬುದ್ಧಿಯನ್ನು ಆಶ್ರಯಿಸಿರುವ ಜ್ಞಾನಕರ್ಮಗಳೆರಡೂ ಒಬ್ಬ ಪುರುಷನಲ್ಲಿಯೇ ಒಂದೇ ಕಾಲದಲ್ಲಿ[2] ಇರುವದಾಗಲಾರದೆಂಬುದನ್ನು ಕಂಡು-ಭಗವಂತನು[3] (ಈ) ಎರಡು ನಿಷ್ಠೆಗಳನ್ನೂ ವಿಂಗಡಿಸಿ ಹೇಳಿರುತ್ತಾನೆ[4]

ಇಲ್ಲಿ ವಿಂಗಡಿಸಿ ಹೇಳಿರುವಂತೆಯೇ **ಶತಪಥಬ್ರಾಹ್ಮಣದಲ್ಲಿಯೂ** ತಿಳಿಸಿರುತ್ತದೆ. "ಸಂನ್ಯಾಸಮಾಡುವ ಬ್ರಾಹ್ಮಣರು[5] ಇದೇ ಲೋಕವನ್ನು ಬಯಸಿ ಸಂನ್ಯಾಸ ಮಾಡುತ್ತಾರೆ" ಎಂದು ಸರ್ವಕರ್ಮಸಂನ್ಯಾಸವನ್ನು ವಿಧಾನಮಾಡಿ[6] ಅದಕ್ಕೆ ಶೇಷವಾಗಿ[7] "ಪ್ರಜೆಯಿಂದ ನಮಗೆ ಆಗಬೇಕಾದದ್ದೇನು? ಆ ನಮಗೆ ಈತನೇ ಆತ್ಮವು, ಈತನೇ ಲೋಕವು" (ಬೃ. ೪-೪-೨೨) ಎಂದು (ಹೇಳಿದೆ). ಮತ್ತು ಅದರಲ್ಲಿಯೇ[8] "ಹೆಂಡತಿಯನ್ನು ಸ್ವೀಕರಿಸುವ ಮುಂಚೆ ಪ್ರಾಕೃತನಾದ ಆತ್ಮನು ಎಂದರೆ ಪುರುಷನು[9]

---

1. ಅದರಲ್ಲಿಯೇ ನೆಲೆ ನಿಲ್ಲುವದು ನಿಷ್ಠೆ.

2. ಒಂದೇ ಕಾಲದಲ್ಲಿ ತಾನು ಕರ್ತೃವೆಂದೂ ಅಕರ್ತೃವೆಂದೂ ಒಬ್ಬನೇ ಪುರುಷನು ತಿಳಿದುಕೊಳ್ಳುವನೆಂಬುದು ಎಂದಿಗೂ ಆಗಲಾರದು.

3 "ಭಗವತ್ಯೇವ' ಎಂಬ ಆ||ನಿ||ಗು||ವಾ|| ಪಾಠಕ್ಕೆ ಭಗವಂತನೇ ಎಂದರ್ಥ. ನಾವು ಕೊಟ್ಟಿರುವದು ಮ||ಮೈ||

4 ಆದ್ದರಿಂದ ಕರ್ಮಜ್ಞಾನಗಳ ಸಮುಚ್ಚಯವು ಈ ವಚನಕ್ಕೆ ವಿರುದ್ಧವಾಗಿದೆ.

5 ಈ ಮಾತನ್ನು ಹಿಂದಿನ ವಾಕ್ಯದಿಂದ ಸೇರಿಸಿಕೊಂಡಿದೆ.

6 "ಸಂನ್ಯಾಸಮಾಡಬೇಕು' ಎಂದು ಇಲ್ಲಿ ವಿಧಿಯನ್ನು ಕಲ್ಪಿಸಬೇಕೆಂದು ಭಾವ.

7 ಪ್ರವ್ರಜನ್ತಿ ಎಂಬುದು ವಿಧಿಯೆಂಬುದಕ್ಕೆ ಅದಕ್ಕೆ ಸೇರಿದ ಈ ಅರ್ಥವಾದವೇ—ಎಂದರೆ ಸಂನ್ಯಾಸವನ್ನು ಹೊಗಳುವ ವಾಕ್ಯವೇ—ಆಧಾರವು ಎಂದು ಭಾವ. ಕರ್ಮದಿಂದಲೂ ಉಪಾಸನೆಯಿಂದಲೂ ಪಡೆಯಬಹುದಾದ ಲೋಕಗಳಲ್ಲಿಯೂ ವೈರಾಗ್ಯವುಳ್ಳವರು ಸಂನ್ಯಾಸ ಮಾಡಿ ಆತ್ಮಜ್ಞಾನಕ್ಕೆ ಪ್ರಯತ್ನಿಸುತ್ತಾರೆಂದು ಈ ವಾಕ್ಯದಲ್ಲಿ ಉಕ್ತವಾಗಿದೆ.

8. ಅದೇ ಬೃಹದಾರಣ್ಯಕದಲ್ಲಿಯೇ.

9. ವಿಷಯಾಸಕ್ತನಾದ ಮನುಷ್ಯನು.

ಧರ್ಮಜಿಜ್ಞಾಸೆಯನ್ನು ಮಾಡಿದಬಳಿಕ[1] ಮೂರು ಲೋಕಕ್ಕೆ ಸಾಧಕವಾಗಿರುವ ಮಗನನ್ನು ಮಾನುಷ, ದೈವ-ಎಂದು ಎರಡು ಬಗೆಯಾಗಿರುವ ವಿತ್ತವನ್ನೂ-ಇವೆರಡರಲ್ಲಿ ಮಾನುಷವಿತ್ತವು ಕರ್ಮರೂಪವಾದದ್ದು, ಪಿತೃಲೋಕಪ್ರಾಪ್ತಿಗೆ ಸಾಧನವಾದದ್ದು; ವಿದ್ಯೆಯೆಂಬ[2] ದೈವವಿತ್ತವು ದೇವಲೋಕಗಳ ಪ್ರಾಪ್ತಿಗೆ ಸಾಧನವಾದದ್ದು (ಇವೆರಡನ್ನೂ)-"ಅವನು ಬಯಸಿದನು" (ಬೃ. ೧-೪-೧೭) ಎಂದು ಅವಿದ್ಯೆ, ಕಾಮ-ಇವುಗಳಿರುವಾತನಿಗೇ[3] **ಶ್ರೌತಕರ್ಮಗಳೆಲ್ಲ**[4] ಸಾಧನವಾಗಿರುವವೆಂತ (ತಿಳಿಸಿರುತ್ತದೆ). ಅವುಗಳನ್ನು ಬಿಟ್ಟಿದ್ದು ಸಂನ್ಯಾಸಮಾಡುವದು[5] ಆತ್ಮನೇ ಎಂಬ ಲೋಕವನ್ನು ಬಯಸುವ ಅಕಾಮನಿಗೆ[6] ವಿಹಿತವಾಗಿರುತ್ತದೆ. ಶ್ರೌತಕರ್ಮ, ಜ್ಞಾನ-ಇವೆರಡನ್ನೂ ಸೇರಿಸಿ ಅನುಷ್ಠಾನಮಾಡಬೇಕೆಂಬುದೇ ಭಗವಂತನ ಅಭಿಪ್ರಾಯವಾದರೆ ಹೀಗೆ ವಿಂಗಡಿಸಿ ಹೇಳಿರುವದು[7] ಹೊಂದುಗಡೆಯಾಗಲಾರದು.

(ಭಾಷ್ಯ)

೧೦. ನ ಚಾರ್ಜುನಸ್ಯ ಪ್ರಶ್ನ ಉಪಪನ್ನೋ ಭವತಿ "ಜ್ಯಾಯಸೀ ಚೇತ್ ಕರ್ಮಣಸ್ತೇ" (೩-೧) ಇತ್ಯಾದಿಃ । ಏಕಪುರುಷಾನುಷ್ಠೇಯತ್ವಾಸಂಭವಂ ಬುದ್ಧಿಕರ್ಮಣೋಃ ಭಗವತಾ ಪೂರ್ವಮನುಕ್ತಂ ಕಥಮರ್ಜುನಃ ಅಶ್ರುತಮ್, ಬುದ್ಧೇಶ್ಚ ಕರ್ಮಣೋ ಜ್ಯಾಯಸ್ತ್ವಂ ಭಗವತಿ ಅಧ್ಯಾರೋಪಯೇತ್ ಮೃಷೈವ "ಜ್ಯಾಯಸೀ ಚೇತ್ ಕರ್ಮಣಸ್ತೇ ಮತಾ ಬುದ್ಧಿಃ" (೩-೧) ಇತಿ ॥

---

1 ಕರ್ಮವನ್ನು ಮಾಡುವಮುಂಚೆ ಧರ್ಮಜಿಜ್ಞಾಸೆಯನ್ನು ಮಾಡಿರಬೇಕೆಂಬ ಪೂರ್ವಮೀಮಾಂಸಾಸಿದ್ಧಾಂತದ ಸೂಚನೆಯಿದು ಜೈ ಸೂ. ೧-೧-೧ ಶಾ. ಭಾ. ವನ್ನು ನೋಡಿ.

2. ಉಪಾಸನೆಯೆಂಬ.

3 ಅವಿದ್ಯಾಕಾಮಗಳಿರುವವನಿಗೇ ವಿದ್ಯೆ ಮತ್ತು ಕರ್ಮ-ಇವುಗಳಲ್ಲಿ ಅಧಿಕಾರವೆಂದೆದ್ದರಿಂದ ಗೀತೆಯಲ್ಲಿ ಹೇಳಿರುವ ಸಾಂಖ್ಯಜ್ಞಾನವು, ಬೃಹದಾರಣ್ಯಕದಲ್ಲಿ ಹೇಳಿರುವ ಜ್ಞಾನದಂತೆಯೇ ಉಪಾಸನೆಗಿಂತ ಭಿನ್ನವೆಂದು ಹೇಳಿದಂತೆ ಆಯಿತು

4 ಶ್ರುತಿಯಲ್ಲಿ ಹೇಳಿರುವ ಕರ್ಮಗಳು ಕಾಮಿಗೆ, ಆದ್ದರಿಂದ ಅಜ್ಞಾನಿಗೆ ಎಂದು ಭಾವ ಇಲ್ಲಿ ಸ್ಮಾರ್ತಕರ್ಮದ ಪ್ರಸಕ್ತಿಯಿಲ್ಲದ್ದರಿಂದ 'ಶ್ರೌತಾದಿ' ಎಂಬ ಪಾಠವು ಸರಿಯಲ್ಲ.

5 "ವ್ಯುತ್ಥಾಯ" (ಬಿಟ್ಟಿದ್ದು ಭಿಕ್ಷಾಚರ್ಯೆಯನ್ನು ಮಾಡುವರು), "ಪ್ರವ್ರಜನ್ತಿ" (ಈ ಆತ್ಮಲೋಕವನ್ನು ಬಯಸಿ ಸಂನ್ಯಾಸಮಾಡುವರು)-ಎಂಬ ಎರಡು ಮಾತುಗಳು ಇಲ್ಲಿ ಶ್ರುತಿಯ ಸೂಚಕವಾಗಿ ಕೆಲವು ಪುಸ್ತಕಗಳಲ್ಲಿ ಉದಾಹೃತವಾಗಿವೆ

6 ಆತ್ಮನನ್ನು ಬಯಸುವವನು ಅಕಾಮನು ಬೃ. ೪-೪-೬.

7. ಕರ್ಮಗಳನ್ನು ಅಜ್ಞರಿಗೂ ಸಂನ್ಯಾಸವನ್ನು ಮುಮುಕ್ಷುಗಳಿಗೂ ವಿಂಗಡಿಸಿ ಹೇಳಿರುವದು.

(ಭಾಷ್ಯಾರ್ಥ)

"ಕರ್ಮಕ್ಕಿಂತ (ಜ್ಞಾನವೇ) ಹೆಚ್ಚಿನದೆಂದು ನಿನ್ನ (ಮತವಾದರೆ)" (೩-೧) ಎಂದು ಮುಂತಾಗಿರುವ ಅರ್ಜುನನ ಪ್ರಶ್ನೆಯೂ (ಸಮುಚ್ಚಯವಾದಿಗಳ ಪಕ್ಷದಲ್ಲಿ) ಹೊಂದುವಹಾಗಿಲ್ಲ. ಜ್ಞಾನಕರ್ಮಗಳೆರಡನ್ನೂ ಒಬ್ಬ ಪುರುಷನೇ ಅನುಷ್ಠಾನ ಮಾಡುವದೆಂಬುದು ಆಗಲಾರದೆಂದೂ ಜ್ಞಾನವು ಕರ್ಮಕ್ಕಿಂತ ಹೆಚ್ಚಿನದೆಂದೂ ಭಗವಂತನು ಪೂರ್ವದಲ್ಲಿ ತನಗೆ ಹೇಳದೆ ಇದ್ದರೂ ತಾನು ಕೇಳದೆ ಇದ್ದರೂ ಅರ್ಜುನನು "ಕರ್ಮಕ್ಕಿಂತ ಜ್ಞಾನವು ಹೆಚ್ಚಿನದೆಂದು ನಿನ್ನ ಮತವಾದರೆ" (೩-೧) ಎಂದು ಭಗವಂತನು (ಹೇಳಿದಂತೆ) ಅವನಲ್ಲಿ ಸುಳ್ಳುಸುಳ್ಳಾಗಿಯೇ ಹೇಗೆತಾನೆ ಆರೋಪಣೆ ಮಾಡಿಯಾನು?[1]

(ಭಾಷ್ಯ)

೧೧. ಕಿಂ ಚ ಯದಿ ಬುದ್ಧಿಕರ್ಮಣೋಃ ಸರ್ವೇಷಾಂ ಸಮುಚ್ಚಯ ಉಕ್ತಃ ಸ್ಯಾತ್ ಅರ್ಜುನಸ್ಯಾಪಿ ಸ ಉಕ್ತ ಏವೇತಿ "ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್" (೫-೧) ಇತಿ ಕಥಮ್ ಉಭಯೋರುಪದೇಶೇ ಸತಿ ಅನ್ಯತರವಿಷಯ ಏವ ಪ್ರಶ್ನಃ ಸ್ಯಾತ್? ನ ಹಿ ಪಿತ್ತಪ್ರಶಮನಾರ್ಥಿನಃ ವೈದ್ಯೇನ 'ಮಧುರಂ ಶೀತಲಂ[2] ಚ ಭೋಕ್ತವ್ಯಮ್' ಇತ್ಯುಪದಿಷ್ಟೇ "ತಯೋರನ್ಯತರತ್ ಪಿತ್ತಪ್ರಶಮನಕಾರಣಂ ಬ್ರೂಹಿ" ಇತಿ ಪ್ರಶ್ನಃ ಸಂಭವತಿ[3] ||

ಅಥಾರ್ಜುನಸ್ಯ ಭಗವದುಕ್ತವಚನಾರ್ಥವಿವೇಕಾನವಧಾರಣನಿಮಿತ್ತಃ ಪ್ರಶ್ನಃ ಕಲ್ಪ್ಯೇತ! ತಥಾಪಿ ಭಗವತಾ ಪ್ರಶ್ನಾನುರೂಪಂ ಪ್ರತಿವಚನಂ ದೇಯಮ್ "ಮಯಾ ಬುದ್ಧಿಕರ್ಮಣೋಃ ಸಮುಚ್ಚಯ ಉಕ್ತಃ। ಕಿಮರ್ಥಮ್ ಇತ್ಥಂ ತ್ವಂ ಭ್ರಾನ್ತೋಽಸಿ?" ಇತಿ। ನ ತು ಪುನಃ ಪ್ರತಿವಚನಮ್ ಅನನುರೂಪಂ ಪೃಷ್ಟಾತ್ ಅನ್ಯದೇವ "ದ್ವೇ ನಿಷ್ಠೇ ಮಯಾ ಪ್ರೋಕ್ತೇ" (೩-೩) ಇತಿ ವಕ್ತುಂ ಯುಕ್ತಮ್ ||

ನಾಪಿ ಸ್ಮಾರ್ತೇನೈವ ಕರ್ಮಣಾ ಬುದ್ಧೇಃ ಸಮುಚ್ಚಯೇ ಅಭಿಪ್ರೇತೇ ವಿಭಾಗವಚನಾದಿ ಸರ್ವಮ್ ಉಪಪನ್ನಮ್। ಕಿಂ ಚ ಕ್ಷತ್ರಿಯಸ್ಯ ಯುದ್ಧಂ ಸ್ಮಾರ್ತಂ

---

1. ಸಮುಚ್ಚಯವಾದಿಯ ಮತದಲ್ಲಿ ಒಬ್ಬನೇ ಜ್ಞಾನಕರ್ಮಗಳನ್ನು ಮಾಡಲಾಗುವದಿಲ್ಲವೆಂದಾಗಲಿ ಜ್ಞಾನವು ಕರ್ಮಕ್ಕಿಂತ ಹೆಚ್ಚೆಂದಾಗಲಿ ಹೇಳಿಲ್ಲ, ಹೀಗಿದ್ದರೂ ಅರ್ಜುನನು ಭಗವಂತನು ಹೀಗೆಂದು ಹೇಳಿರುವದಾಗಿ ಕಲ್ಪಿಸಿ ಪ್ರಶ್ನೆಮಾಡಿರುತ್ತಾನೆನ್ನಬೇಕಾಗುತ್ತದೆ

2. ಇದು ಮೈ॥ವಾ॥ ಪಾಠ; ಮಿಕ್ಕ ಪಾಠಗಳಲ್ಲಿ 'ಶೀತಂ' ಎಂದೇ ಇದೆ

3. ಆ॥ವಾ॥ಮೈ॥ ಇವುಗಳನ್ನು ಬಿಟ್ಟರೆ ಮಿಕ್ಕವುಗಳಲ್ಲಿ ಭವತಿ ಎಂದಿಷ್ಟೇ ಇದೆ. ಗಳಲ್ಲೂ ಅರ್ಥವು ಹೀಗೇ ಆಗುತ್ತದೆ.

ಕರ್ಮ[1] ಸ್ವಧರ್ಮ[2] ಇತಿ ಜಾನತಃ "ತತ್ ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ" (೩-೧) ಇತ್ಯುಪಾಲಮ್ಭೋಽನುಪಪನ್ನಃ ||

(ಭಾಷ್ಯಾರ್ಥ)

ಇದಲ್ಲದೆ ಜ್ಞಾನಕರ್ಮಗಳೆರಡನ್ನೂ ಸೇರಿಸಿಕೊಂಡು ಅನುಷ್ಠಾನಮಾಡಬೇಕೆಂದು ಎಲ್ಲರಿಗೂ ಹೇಳಿದೆಯಾದರೆ ಅರ್ಜುನನಿಗೂ ಅದು ಹೇಳಿದ್ದೇ ಆಗಿದೆಯಾಗಿ "ಇವೆರಡರಲ್ಲಿ ಯಾವದು ಹೆಚ್ಚು ಒಳ್ಳೆಯದು? ಅದನ್ನು ನನಗೆ ಸುನಿಶ್ಚಿತವಾಗಿ ಹೇಳು" (೫-೧) ಎಂದು ಇವೆರಡರಲ್ಲಿ ಒಂದರ ವಿಷಯವಾಗಿಯೇ ಪ್ರಶ್ನೆಮಾಡಿರುವದು ಹೇಗೆ (ಸರಿ)ಯಾದೀತು? ಪಿತ್ತವು ಶಮನವಾಗಬೇಕೆಂದು ಬಯಸುತ್ತಿರುವವನಿಗೆ "ಸಿಹಿಯಾಗಿಯೂ ತಂಪಾಗಿಯೂ ಇರುವದನ್ನು ತಿನ್ನಬೇಕು" ಎಂದು ವೈದ್ಯನು ಹೇಳಿದ್ದರೆ "ಇವೆರಡರಲ್ಲಿ ಪಿತ್ತವನ್ನು ಪ್ರಶಮನಮಾಡುವದೊಂದನ್ನೇ ಹೇಳು" ಎಂಬ ಪ್ರಶ್ನೆಯು ಹುಟ್ಟಲಾರದಷ್ಟೆ?

ಒಂದುವೇಳೆ ಭಗವಂತನು ಹೇಳಿದ್ದರ ಅರ್ಥವನ್ನು ವಿಂಗಡಿಸಿ ತಿಳಿದುಕೊಳ್ಳದೆ ಇದ್ದಕಾರಣ ಅರ್ಜುನನು (ಹೀಗೆ) ಕೇಳಿರುವನೆಂದು ಕಲ್ಪಿಸುವದಾದರೆ, ಆಗಲೂ ಭಗವಂತನು "ನಾನು ಬುದ್ಧಿಕರ್ಮಗಳೆರಡನ್ನೂ ಸೇರಿಸಿ ಅನುಷ್ಠಾನಮಾಡಬೇಕೆಂದು ಹೇಳಿದೆನು, ಹೀಗೇಕೆ ನೀನು ಭ್ರಾಂತನಾಗಿರುವೆ?" ಎಂದು ಪ್ರಶ್ನೆಗೆ ತಕ್ಕ ಉತ್ತರವನ್ನು ಕೊಡಬೇಕೇ ಹೊರತು ಅದಕ್ಕೆ ಹೊಂದದಂತೆ ಕೇಳಿದ್ದಕ್ಕಿಂತ ಬೇರೆಯೇ ಆಗಿ "ಪೂರ್ವದಲ್ಲಿ ನಾನು ಎರಡು ನಿಷ್ಠೆಗಳನ್ನು (ಬೇರೆಬೇರೆ) ಹೇಳಿದೆನು" (೩-೩) ಎಂದು ಹೇಳಿರುವದು ಯುಕ್ತವಾಗುವದಿಲ್ಲ.

ಬರಿಯ ಸ್ಮಾರ್ತಕರ್ಮದೊಡನೆ[3] ಜ್ಞಾನವನ್ನು ಸೇರಿಸಿ ಅನುಷ್ಠಾನಮಾಡಬೇಕೆಂಬುದು (ಭಗವಂತನ) ಅಭಿಪ್ರಾಯವೆಂದರೂ (ಮೇಲೆ ವರ್ಣಿಸಿರುವಂತೆ ಕರ್ಮ, ಸಂನ್ಯಾಸ–ಇವುಗಳನ್ನು) ವಿಂಗಡಿಸಿ ಹೇಳಿರುವದೇ ಮುಂತಾದದ್ದು[4]

---

1. 'ಕರ್ಮ' ಎಂಬ ಮಾತು ಮ|| ಮೈ|| ಪಾಠಗಳಲ್ಲಿಲ್ಲ.

2. "ಸ್ವಧರ್ಮಮಿತಿ" ಎಂಬ ನಿ|| ಪಾಠವು ಬೇಕಿಲ್ಲ.

3 ಬೃಹದಾರಣ್ಯಕ ಪ್ರಮಾಣದಿಂದ ಶ್ರೌತಕರ್ಮಸಮುಚ್ಚಯವನ್ನು ನಿರಾಸಮಾಡಿದ್ದಾಯಿತು. ಈಗ ಗೀತಾಪ್ರಾಮಾಣ್ಯದಿಂದಲೇ ಸ್ಮಾರ್ತಕರ್ಮಸಮುಚ್ಚಯವನ್ನು ನಿರಾಸಮಾಡುತ್ತಾರೆ.

4. ಜ್ಞಾನವು ಹೆಚ್ಚೆಂದು ಭಗವಂತನು ಹೇಳಿದಂತೆ ಅರ್ಜುನನು ಭಾವಿಸಿರುವದು, ಇವೆರಡಲ್ಲಿ ಒಂದನ್ನು ನಿಶ್ಚಯಿಸಿ ಹೇಳು ಎಂದು ಕೇಳಿಕೊಂಡಿರುವದು, ಭಗವಂತನ ಉತ್ತರ–ಇವು.

ಯಾವದೂ ಯುಕ್ತವಾಗುವದಿಲ್ಲ. ಮತ್ತು ಕ್ಷತ್ರಿಯನಾದ ತನಗೆ ಯುದ್ಧವೆಂಬ ಸ್ಮಾರ್ತಕರ್ಮವು ಸ್ವಧರ್ಮವೇ ಎಂದು ತಿಳಿದಿರುವ (ಅರ್ಜುನನು) "ಹಾಗಾದರೆ ಕ್ರೂರವಾದ[1] ಕರ್ಮದಲ್ಲಿ ನನ್ನನ್ನು ಏತಕ್ಕೆ ಕಟ್ಟುಮಾಡುತ್ತಿರುವೆ?" (೩-೧) ಎಂದು (ಭಗವಂತನಮೇಲೆ) ತಪ್ಪುಹೊರಿಸಿರುವದೂ ಯುಕ್ತವಾಗುವದಿಲ್ಲ.

## ಸಮುಚ್ಚಯವೆಂದು ಭ್ರಾಂತಿಯಿಂದ ತೋರುವ ಸ್ಥಲಗಳು

(ಭಾಷ್ಯ)

೧೨. ತಸ್ಮಾತ್ ಗೀತಾಶಾಸ್ತ್ರೇ ಈಷನ್ಮಾತ್ರೇಣಾಪಿ ಶ್ರೌತೇನ ಸ್ಮಾರ್ತೇನ ವಾ ಕರ್ಮಣಾ ಆತ್ಮಜ್ಞಾನಸ್ಯ ಸಮುಚ್ಚಯೋ ನ ಕೇನಚಿತ್ ದರ್ಶಯಿತುಂ ಶಕ್ಯಃ । ಯಸ್ಯ ತು ಅಜ್ಞಾನಾತ್ ರಾಗಾದಿದೋಷತೋ ವಾ ಕರ್ಮಣಿ ಪ್ರವೃತ್ತಸ್ಯ ಯಜ್ಞೇನ ದಾನೇನ ತಪಸಾ ವಾ ವಿಶುದ್ಧಸತ್ತ್ವಸ್ಯ ಜ್ಞಾನಮ್ ಉತ್ಪನ್ನಂ ಪರಮಾರ್ಥತತ್ತ್ವವಿಷಯಮ್ "ಏಕಮೇವೇದಂ ಸರ್ವಂ ಬ್ರಹ್ಮ, ಅಕರ್ತೃ ಚ" ಇತಿ, ತಸ್ಯ ಕರ್ಮಣಿ ಕರ್ಮಪ್ರಯೋಜನೇ ಚ ನಿವೃತ್ತೇಽಪಿ ಲೋಕಸಂಗ್ರಹಾರ್ಥಂ ಯತ್ರ ಪೂರ್ವಂ ಯಥಾ ಪ್ರವೃತ್ತಿಃ[2] ತಥೈವ ಪ್ರವೃತ್ತಸ್ಯ[3] ಯತ್ ಪ್ರವೃತ್ತಿರೂಪಂ ದೃಶ್ಯತೇ ನ ತತ್ ಕರ್ಮ, ಯೇನ ಬುದ್ಧೇಃ ಸಮುಚ್ಚಯಃ ಸ್ಯಾತ್ । ಯಥಾ ಭಗವತೋ ವಾಸುದೇವಸ್ಯ ಕ್ಷತ್ರಧರ್ಮಚೇಷ್ಟಿತಂ[4] ನ ಜ್ಞಾನೇನ ಸಮುಚ್ಚೀಯತೇ, ನಾಪಿ ಪುರುಷಾರ್ಥಸಿದ್ಧಯೇ, ತದ್ವತ್ । ಫಲಾಭಿಸನ್ಧ್ಯಹಙ್ಕಾರಾಭಾವಸ್ಯ ತುಲ್ಯತ್ವಾತ್[5] । ತತ್ತ್ವವಿದ್ ಹಿ[6] ನ ಅಹಂ ಕರೋಮಿ ಇತಿ ಮನ್ಯತೇ, ನ ಚ ತತ್ಫಲಮ್ ಅಭಿಸನ್ಧತ್ತೇ । ಯಥಾ ಚ ಸ್ವರ್ಗಾದಿಕಾಮಾರ್ಥಿನಃ ಅಗ್ನಿಹೋತ್ರಾದಿಕಾಮಸಾಧನಾನುಷ್ಠಾನಾಯ[7] ಆಹಿತಾಗ್ನೇಃ ಕಾಮ್ಯೇ ಏವಾಗ್ನಿಹೋತ್ರಾದೌ

---

1. ಯುದ್ಧವು ಶಾಸ್ತ್ರದಲ್ಲಿ ತನಗೆ ವಿಹಿತವಾಗಿರುವದರಿಂದ ಧರ್ಮವೇ ಆಗಿರುತ್ತದೆ, ಘೋರವಾದ ಪಾಪವೆಂದು ಅರ್ಜುನನು ಬಗೆಯುವದಕ್ಕೆ ಕಾರಣವೇ ಇಲ್ಲ.

2. "ಯತ್ನಪೂರ್ವಂ ಯಥಾಪ್ರವೃತ್ತಿಃ" ಶಾ॥ ವಾ॥, "ಯತ್ನಪೂರ್ವಂ ಯಥಾ ಪ್ರವೃತ್ತಃ" ಗು॥ ಎಂಬ ಪಾಠಗಳಿಗಿಂತ ಈ ಮು॥ಮೈ॥ ಪಾಠವೇ ಮೇಲು.

3. ಕರ್ಮಣಿ ಪ್ರವೃತ್ತಸ್ಯ ಅ॥ನಿ॥ಗು॥

4. "ಕ್ಷಾತ್ರಕರ್ಮಚೇಷ್ಟಿತಂ" ನಿ॥ "ಕ್ಷಾತ್ರಧರ್ಮಚೇಷ್ಟಿತಂ" ಗು॥

5. "ವಿದುಷಃ" ಎಂದು ನಿ॥ಗು॥ಅ॥ ಪಾಠಗಳಲ್ಲಿ ಹೆಚ್ಚಾಗಿದೆ.

6. ತತ್ತ್ವವಿತ್ ತು ಅ॥ನಿ॥ಗು॥

7. "ಅಗ್ನಿಹೋತ್ರಾದಿಕರ್ಮಲಕ್ಷಣಧರ್ಮಾನುಷ್ಠಾನಾಯ" ವಾ॥ಅ॥ ಈ ಮಾತೇ ಭಾಷ್ಯದಲ್ಲಿಲ್ಲದಿದ್ದರೂ ಸಾಗುತ್ತದೆ.

ಪ್ರವೃತ್ತಸ್ಯ ಸಾಮಿ ಕೃತೇ ವಿನಷ್ಟೇಽಪಿ ಕಾಮೇ ತದೇವ ಅಗ್ನಿಹೋತ್ರಾದಿ ಅನುತಿಷ್ಠತೋಽಪಿ ನ ತತ್ ಕಾಮ್ಯಮ್ ಅಗ್ನಿಹೋತ್ರಾದಿ ಭವತಿ । ತಥಾ ಚ ದರ್ಶಯತಿ ಭಗವಾನ್ "ಕುರ್ವನ್ನಪಿ ನ ಲಿಪ್ಯತೇ" (೫-೭), "ನ ಕರೋತಿ ನ ಲಿಪ್ಯತೇ" (೧೩-೩೧) ಇತಿ ತತ್ರ ತತ್ರ ||

(ಭಾಷ್ಯಾರ್ಥ)

ಆದ್ದರಿಂದ ಗೀತಾಶಾಸ್ತ್ರದಲ್ಲಿ ಶ್ರೌತವಾದ ಒಂದಿಷ್ಟು ಕರ್ಮದೊಡನೆಯೂ ಆತ್ಮಜ್ಞಾನಕ್ಕೆ ಸಮುಚ್ಚಯವನ್ನು (ಹೇಳಿದೆಯೆಂದು) ಯಾರಿಂದಲೂ ತೋರಿಸಿ ಕೊಡುವದಕ್ಕೆ ಆಗುವಂತಿಲ್ಲ

ಆದರೆ ಅಜ್ಞಾನದಿಂದಲೋ ರಾಗವೇ ಮುಂತಾದ ದೋಷದಿಂದಲೋ (?)[1] ಕರ್ಮದಲ್ಲಿ ಪ್ರವರ್ತಿಸಿದ್ದು ಯಜ್ಞದಿಂದಲಾಗಲಿ ದಾನದಿಂದಲಾಗಲಿ ತಪಸ್ಸಿನಿಂದಲಾಗಲಿ ಸತ್ತ್ವವು ಚೆನ್ನಾಗಿ ಶುದ್ಧಿಯಾಗಲು ಯಾವಾತನಿಗೆ "ಇದೆಲ್ಲವೂ ಕರ್ತೃವಲ್ಲದ ಒಂದೇ ಆಗಿರುವ ಬ್ರಹ್ಮವೇ" ಎಂಬ ಪರಮಾರ್ಥತತ್ತ್ವವಿಷಯಕವಾದ ಜ್ಞಾನವು ಉಂಟಾಗಿರುವದೋ ಆತನಿಗೆ ಕರ್ಮವೂ ಕರ್ಮದಿಂದಾಗಬೇಕಾದ ಪ್ರಯೋಜನವೂ ಹೋಗಿಬಿಟ್ಟಿರುವದಾದರೂ, (ಅವನು) ಯಾವ (ಕರ್ಮ)ದಲ್ಲಿ ಮೊದಲು ಹೇಗೆ ಪ್ರವರ್ತಿಸುತ್ತಿದ್ದನೋ ಹಾಗೆಯೇ (ಅದರಲ್ಲಿ) ಲೋಕಸಂಗ್ರಹಕ್ಕಾಗಿ[2] ಪ್ರವರ್ತಿಸುತ್ತಿರುವಾಗ ಪ್ರವೃತ್ತಿಯಂತೆ ಯಾವದು ಕಾಣುತ್ತಿರುವದೋ, ಅದು (ನಿಜವಾಗಿ) ಕರ್ಮವಲ್ಲ[3] ಹಾಗೆ (ಕರ್ಮವಾಗಿ)ದ್ದರೆ ಅದರೊಡನೆ ಜ್ಞಾನದ ಸಮುಚ್ಚಯವಾದಂತೆ ಆಗುತ್ತಿತ್ತು. ಹೇಗೆ ಭಗವಂತನಾದ ವಾಸುದೇವನಿಗೆ ಕ್ಷತ್ರಿಯ ಧರ್ಮವ್ಯಾಪಾರವು ಜ್ಞಾನದೊಡನೆ ಸೇರಿ ಅನುಷ್ಠಾನ)ವಾಗಲಿಲ್ಲವೋ, ಪುರುಷಾರ್ಥಸಿದ್ಧಿಗೂ ಕಾರಣವಾಗಲಿಲ್ಲವೋ[4] ಹಾಗೆಯೇ

---

1. ಇಲ್ಲಿ ಅಜ್ಞಾನದಿಂದುಂಟಾದ ರಾಗಾದಿಗಳಿಂದ ಎಂಬ ಅರ್ಥವು ಬೇಕಾಗಿರುವದರಿಂದ ಮೂಲದಲ್ಲಿ 'ವಾ' || ಎಂಬ ಮಾತು ಹೆಚ್ಚೆಂದು ತೋರುತ್ತದೆ.

2. ಜನರನ್ನು ಸರಿಯಾದ ಹಾದಿಗೆ ತಿರುಗಿಸುವದಕ್ಕಾಗಿ. ಇಲ್ಲಿ "ಕರ್ಮಣಿ" ಎಂಬ ಪಾಠವನ್ನು '(ಆ) ಕರ್ಮದಲ್ಲಿ' ಎಂದು ಕನ್ನಡಿಸಿಕೊಳ್ಳಬೇಕು

3. ಏಕೆಂದರೆ ಕರ್ಮಕ್ಕಿರಬೇಕಾದ ಲಕ್ಷಣವು ಅದರಲ್ಲಿರುವದಿಲ್ಲ

4. ಭಗವಂತನು ನಿತ್ಯಮುಕ್ತನಾದ್ದರಿಂದ ಆವನಿಗೆ ವರ್ಣಾಶ್ರಮಕರ್ಮಗಳು ನಿಜವಾಗಿ ಉಂಟೆಂದಾಗಲಿ ಅದರ ಸಂಬಂಧದಿಂದ ಜ್ಞಾನವು ಅವನಿಗೆ ಮುಕ್ತಿಯನ್ನು ಕೊಡುವದೆಂದಾಗಲಿ ಸಮುಚ್ಚಯವಾದಿಗಳೂ ಒಪ್ಪುವದಿಲ್ಲ "ನಾಪಿ" ಎಂಬುದಿಲ್ಲದ ಆ||ನಿ||ಗು||ವಾ|| ಪಾಠಗಳನ್ನು "ಪುರುಷಾರ್ಥಸಿದ್ಧಿಯಾಗುವದಕ್ಕೆ ಕಾರಣವಾಗುವದಿಲ್ಲವೋ" ಎಂದು ಕನ್ನಡಿಸಬೇಕು.

(ಇದು). ಏಕೆಂದರೆ ಫಲಾಶೆಯಿಲ್ಲದಿರುವದೂ ಅಹಂಕಾರವಿಲ್ಲದಿರುವದೂ (ಇಬ್ಬರಿಗೂ) ಸಮಾನವಾಗಿರುತ್ತದೆ.[1] ತತ್ತ್ವವನ್ನು ತಿಳಿದವನು ನಾನು ಮಾಡುತ್ತೇನೆ ಎಂದು ತಿಳಿಯುವದೂ ಇಲ್ಲ, ಅದರ ಫಲದಲ್ಲಿ ಆಸಕ್ತನಾಗಿರುವದೂ ಇಲ್ಲ (೩-೨೮).[2] ಅಲ್ಲವೆ? (ಇದಕ್ಕೆ) ಮತ್ತೂ (ಒಂದು ಉದಾಹರಣೆ). ಸ್ವರ್ಗವೇ ಮುಂತಾದ ವಿಷಯುಗಳನ್ನು ಬಯಸಿ ಅಗ್ನಿಹೋತ್ರವೇ ಮುಂತಾದ ಕಾಮಸಾಧನವಾದ (ಕರ್ಮವನ್ನು ಮಾಡುವದಕ್ಕೆಂದು) ಅಗ್ನಿಯನ್ನು ಆಧಾನಮಾಡಿಕೊಂಡು ಕಾಮ್ಯವಾದ ಅಗ್ನಿಹೋತ್ರಾದಿಗಳಲ್ಲಿಯೇ ತೊಡಗಿರುವಾತನು (ಆ ಕರ್ಮಗಳನ್ನು) ಅರ್ಧಮಾಡುವಷ್ಟರಲ್ಲಿಯೇ ಕಾಮವು ತೊಲಗಿಬಿಟ್ಟರೂ ಅದೇ ಅಗ್ನಿಹೋತ್ರಾದಿಗಳನ್ನು ಮಾಡುತ್ತಿದ್ದರೂ[3] ಅದು ಹೇಗೆ ಕಾಮ್ಯಾಗ್ನಿಹೋತ್ರವೇ ಮುಂತಾದದ್ದಾಗುವದಿಲ್ಲವೋ (ಹಾಗೆಯೇ ಇದು).[4] ಆದ್ದರಿಂದಲೇ ಭಗವಂತನು "ಮಾಡುತ್ತಿದ್ದರೂ ಅವನಿಗೆ ಅದರ ಅಂಟು ಆಗುವದಿಲ್ಲ" (೫-೭), "(ಆತನು) ಮಾಡುವದೂ ಇಲ್ಲ, (ಅವನಿಗೆ ಅದರ ಅಂಟೂ ಆಗುವದಿಲ್ಲ" (೧೩-೩೧) ಎಂದು ಅಲ್ಲಲ್ಲಿ ತಿಳಿಸಿರುತ್ತಾನೆ.[5]

(ಭಾಷ್ಯ)

೧೩. ಯಚ್ಚ ಪೂರ್ವೈಃ "ಪೂರ್ವತರಂ ಕೃತಮ್" (೪-೧೫), "ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ" (೩-೨೦) ಇತಿ; ತತ್ತು[6] ಪ್ರವಿಭಜ್ಯ ವಿಜ್ಞೇಯಮ್ । ತತ್ ಕಥಮ್?। ಯದಿ ತಾವತ್ ಪೂರ್ವೇ ಜನಕಾದಯಃ ತತ್ತ್ವವಿದೋಽಪಿ ಪ್ರವೃತ್ತಕರ್ಮಾಣಃ ಸ್ಯುಃ, ತೇ ಲೋಕಸಂಗ್ರಹಾರ್ಥಂ "ಗುಣಾ ಗುಣೇಷು ವರ್ತನ್ತೇ" (೩-೨೮) ಇತಿ ಜ್ಞಾನೇನೈವ[7] ಸಂಸಿದ್ಧಿಮ್ ಆಸ್ಥಿತಾಃ ।

---

1 ಇದೇ ಭಗವಂತನ ಮತ್ತು ಜ್ಞಾನಿಯ ಪ್ರವೃತ್ತಿಯು ಕರ್ಮವಲ್ಲವೆಂಬುದಕ್ಕೆ ಕಾರಣವು.

2. ಇದು ಶ್ಲೋಕದ ತಾತ್ಪರ್ಯದ ಸೂಚನೆ.

3. ಕಾಮ್ಯಾಗ್ನಿಹೋತ್ರಕ್ಕೂ ನಿತ್ಯಾಗ್ನಿಹೋತ್ರಕ್ಕೂ ಸ್ವರೂಪದಲ್ಲಿ ಭೇದವಿರುವದಿಲ್ಲ; ಕಾಮವಿದ್ದರೆ ಮಾತ್ರ ಕಾಮ್ಯಾಗ್ನಿಹೋತ್ರವೆನಿಸುತ್ತದೆ ಅಷ್ಟೆ.

4. ಅಜ್ಞಾನದಿಂದಾದ ಅಹಂಕಾರವೂ ಫಲಾಶೆಯೂ ಇದ್ದರೆ ಮಾತ್ರ ಕರ್ಮವು; ಹಾಗಿಲ್ಲದ ಪ್ರವೃತ್ತ್ಯಾಭಾಸವು ಕರ್ಮವಲ್ಲವೇ ಅಲ್ಲ.

5. ಆದ್ದರಿಂದ ಕರ್ಮದಂತೆ ಕಾಣುವ ಪ್ರವೃತ್ತಿಯಿದ್ದಮಾತ್ರದಿಂದ ಜ್ಞಾನಿಗೆ ಸಮುಚ್ಚಯವನ್ನು ಹೇಳುವದಕ್ಕಾಗುವದಿಲ್ಲ.

6. 'ತತ್ರ' ಮು॥ಮ್ಯೈ॥

7. "ಜ್ಞಾನೇನ" ಮು॥ಮ್ಯೈ॥

ಕರ್ಮಸಂನ್ಯಾಸೇ ಪ್ರಾಪ್ತೇಽಪಿ ಕರ್ಮಣಾ ಸಹೈವ ಸಂಸಿದ್ಧಿಮ್ ಆಸ್ಥಿತಾಃ ನ ಕರ್ಮ ಸಂನ್ಯಾಸಂ ಕೃತವನ್ತಃ ಇತ್ಯರ್ಥಃ[1] । ಅಥ ನ ತೇ ತತ್ತ್ವವಿದಃ, ಈಶ್ವರಸಮರ್ಪಿತೇನ ಕರ್ಮಣಾ ಸಾಧನಭೂತೇನ ಸಂಸಿದ್ಧಿಮ್ ಸತ್ತ್ವಶುದ್ಧಿಂ ಜ್ಞಾನೋತ್ಪತ್ತಿಲಕ್ಷಣಾಂ ವಾ ಸಂಸಿದ್ಧಿಮ್ ಆಸ್ಥಿತಾ ಜನಕಾದಯಃ ಇತಿ ವ್ಯಾಖ್ಯೇಯಮ್ । ಏತಮೇವ ಅರ್ಥಂ ವಕ್ಷ್ಯತಿ ಭಗವಾನ್ "ಸತ್ತ್ವಶುದ್ಧಯೇ ಕರ್ಮ ಕುರ್ವನ್ತಿ" (೫-೧೧) ಇತಿ । "ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ" (೧೮-೪೬) ಇತ್ಯುಕ್ತ್ವಾ[2] ಸಿದ್ಧಿಂ ಪ್ರಾಪ್ತಸ್ಯ ಪುನಃ ಜ್ಞಾನನಿಷ್ಠಾಂ ವಕ್ಷ್ಯತಿ "ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ" (೧೮-೫೦) ಇತ್ಯಾದಿನಾ ॥

(ಭಾಷ್ಯಾರ್ಥ)

ಮತ್ತು "ಹಿಂದಿನವರು ಬಲು ಹಿಂದೆ ಮಾಡಿದ (ಕರ್ಮವನ್ನೇ ನೀನು ಮಾಡು)" (೪-೧೫), "ಜನಕನೇ ಮೊದಲಾದವರು ಕರ್ಮದಿಂದಲೇ ಸಿದ್ಧಿಯನ್ನು ಹೊಂದುವದಕ್ಕೆ ಹೊರಟಿದ್ದರು (೩-೨೦) ಎಂದು (ಗೀತೆಯಲ್ಲಿರುವ)ದಷ್ಟೆ, ಅದನ್ನಾದರೆ ಎರಡು ಬಗೆಯಾಗಿ ವಿಂಗಡಿಸಿಕೊಂಡು (ಒಂದೊಂದಕ್ಕೊಂದೊಂದು ಅರ್ಥವನ್ನು) ತಿಳಿದುಕೊಳ್ಳಬೇಕು. ಅದು ಹೇಗೆ? ಎಂದರೆ: ಒಂದನೆಯದಾಗಿ ಹಿಂದಿನವರಾದ(ಆ) ಜನಕಾದಿಗಳು ತತ್ತ್ವವನ್ನು ಅರಿತವರಾದರೂ ಕರ್ಮದಲ್ಲಿ ಪ್ರವರ್ತಿಸಿದ್ದರೆಂದು ಇಟ್ಟುಕೊಂಡರೆ, ಅವರು ಲೋಕಸಂಗ್ರಹಾರ್ಥವಾಗಿ "ಗುಣ(ಗಳಿಂದಾಗಿರುವ ಇಂದ್ರಿಯ)ಗಳು ಗುಣ(ಗಳಿಂದಾಗಿರುವ ವಿಷಯ)ಗಳಲ್ಲಿ ಪ್ರವರ್ತಿಸುತ್ತವೆ" (೩-೨೮) ಎಂಬ ಜ್ಞಾನದಿಂದಲೇ ಸಂಸಿದ್ಧಿಯನ್ನು ಹೊಂದುವದಕ್ಕೆ ಹೊರಟಿದ್ದರು. ಕರ್ಮಸಂನ್ಯಾಸವೇ (ಅವರಿಗೆ) ಯುಕ್ತವಾಗಿದ್ದರೂ ಕರ್ಮದ ಜೊತೆಯಲ್ಲಿಯೇ[3] (ಇದ್ದುಕೊಂಡು) ಸಂಸಿದ್ಧಿಯನ್ನು[4] ಹೊಂದುವದಕ್ಕೆ ಹೊರಟಿದ್ದರು, ಕರ್ಮಸಂನ್ಯಾಸವನ್ನು ಮಾಡಲಿಲ್ಲ ಎಂದರ್ಥ.[5] ಹಾಗಲ್ಲದೆ ಅವರು ತತ್ತ್ವವನ್ನು ಅರಿತವರಲ್ಲ ಎಂದು

---

1. "ಇತ್ಯೇಷೋಽರ್ಥಃ" ಶಿ||

2. ಆ|| ಪಾಠದಲ್ಲಿ 'ಕುರ್ವನ್ತಿ' ಆದಬಳಿಕ ಇತಿ ಬಿಟ್ಟುಹೋಗಿದೆ; 'ಇತಿ ಇತ್ಯುಕ್ತ್ವಾ' ಎಂದು ತಪ್ಪಾಗಿಬಿದ್ದಿದೆ.

3. ಕರ್ಮದಂತೆ ತೋರುವ ಪ್ರವೃತ್ತಿಯೊಡನೆ.

4. ಮುಕ್ತಿಯನ್ನು ಎಂದರ್ಥ.

5. ಆದ್ದರಿಂದ ಈ ಪಕ್ಷದಲ್ಲಿ ಮೇಲೆ ಹೇಳಿದ ಭಗವಂತನ ಅಥವಾ ಕಾಮ್ಯಾಗ್ನಿಹೋತ್ರದ ದೃಷ್ಟಾಂತದಂತೆಯೇ ಸಮುಚ್ಚಯವಿಲ್ಲವೆಂದು ಸಿದ್ಧವಾಯಿತು.

ಇಟ್ಟುಕೊಂಡರೆ ಈಶ್ವರನಲ್ಲಿ ಕರ್ಮವನ್ನು ಸಮರ್ಪಿಸಿ ಆ ಸಾಧನದಿಂದ ಸಂಸಿದ್ಧಿಯನ್ನು ಎಂದರೆ ಸತ್ತ್ವಶುದ್ಧಿಯನ್ನು ಅಥವಾ ಜ್ಞಾನವುಂಟಾಗುವದೆಂಬ ಸಂಸಿದ್ಧಿಯನ್ನು[1] ಜನಕಾದಿಗಳು ಹೊಂದುವದಕ್ಕೆ ಹೊರಟಿದ್ದರು—ಎಂದು ವ್ಯಾಖ್ಯಾನ ಮಾಡಬೇಕು. ಈ ವಿಷಯವನ್ನೇ ಮುಂದೆ ಭಗವಂತನು "ಸತ್ತ್ವಶುದ್ಧಿಗಾಗಿ ಕರ್ಮವನ್ನು ಮಾಡುತ್ತಾರೆ" (೫-೧೧) ಎಂದು ಹೇಳಿರುತ್ತಾನೆ.[2] (ಮತ್ತು) "ತನ್ನ ಕರ್ಮದಿಂದ ಆತನನ್ನು ಅರ್ಚನೆಮಾಡಿದರೆ, ಮನುಷ್ಯನಾದವನು ಸಿದ್ಧಿಯನ್ನು ಹೊಂದುತ್ತಾನೆ" (೧೮-೪೬) ಎಂದು ಹೇಳಿ "ಸಿದ್ಧಿಯನ್ನು ಹೊಂದಿದವನು ಹೇಗೆ ಬ್ರಹ್ಮವನ್ನು ಹೊಂದುವನೋ (ಹೇಳುವೆನು ಕೇಳು)" (೧೮-೫೦) ಎಂದು ಮುಂತಾಗಿರುವ ವಾಕ್ಯದಿಂದ ಸಿದ್ಧಿಯನ್ನು ಹೊಂದಿದವನಿಗೆ ಮತ್ತೂ ಜ್ಞಾನನಿಷ್ಠೆಯನ್ನು ಹೇಳಿರುತ್ತಾನೆ.[3]

## ಉಪಸಂಹಾರ

(ಭಾಷ್ಯ)

೧೪. ತಸ್ಮಾತ್ ಗೀತಾಶಾಸ್ತ್ರೇ[4] ಕೇವಲಾದೇವ ತತ್ತ್ವಜ್ಞಾನಾತ್ ಮೋಕ್ಷಪ್ರಾಪ್ತಿಃ ನ ಕರ್ಮಸಮುಚ್ಚಿತಾತ್ ಇತಿ ನಿಶ್ಚಿತೋಽರ್ಥಃ । ಯಥಾ ಚ ಅಯಮ್ ಅರ್ಥಃ । ತಥಾ ಪ್ರಕರಣಶೋ ವಿಭಜ್ಯ ತತ್ರ ತತ್ರ ದರ್ಶಯಿಷ್ಯಾಮಃ ॥

(ಭಾಷ್ಯಾರ್ಥ)

ಆದ್ದರಿಂದ ಬರಿಯ ತತ್ತ್ವಜ್ಞಾನವೊಂದರಿಂದಲೇ ಮೋಕ್ಷವು ದೊರಕುವದೇ ಹೊರತು ಕರ್ಮದೊಡನೆ ಸೇರಿಕೊಂಡಿರುವ ಜ್ಞಾನದಿಂದ (ದೊರಕು)ವದಿಲ್ಲ

---

1 ಸಂಸಿದ್ಧಿಯೆಂದರೆ ಪರಮಫಲವಾದ ಮುಕ್ತಿಯೆಂದೇ ಅರ್ಥಮಾಡಬೇಕಾದದ್ದಿಲ್ಲ; ಸಂದರ್ಭಕ್ಕೆ ತಕ್ಕಂತೆ ಅರ್ಥವನ್ನು ಮಾಡಿಕೊಳ್ಳಬಹುದು ಎಂದು ಭಾವ.

2. ಸತ್ತ್ವಶುದ್ಧಿಯು ಜ್ಞಾನಪ್ರಾಪ್ತಿಗಾಗಿರುವದರಿಂದ ಇಲ್ಲಿ ಸಂಸಿದ್ಧಿ ಎಂದರೆ ಎರಡರ್ಥವನ್ನೂ ಮಾಡಿಕೊಳ್ಳಬಹುದಾಗಿದೆ

3. ಸಂಸಿದ್ಧಿ ಎಂದರೆ ಕೊನೆಯ ಫಲವೇ, ಆದರಿಂದ ಮುಂದೆ ಪಡೆಯಬೇಕಾದದ್ದೇನಿದೆ? ಎಂಬ ಆಕ್ಷೇಪಕ್ಕೆ ಸಮಾಧಾನವಿದು ಕರ್ಮಫಲ, ಸತ್ತ್ವಶುದ್ಧಿ, ಜ್ಞಾನಪ್ರಾಪ್ತಿ, ಜ್ಞಾನನಿಷ್ಠೆಯಿಂದ ಮುಕ್ತಿ—ಇವುಗಳನ್ನೆಲ್ಲ ಯಥಾಸಂಭವವಾಗಿ ಸಿದ್ಧಿಯೆಂದು ಕರೆಯಬಹುದು. ಪ್ರಕೃತಶ್ಲೋಕದಲ್ಲಿ ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆ ಎಂದು ಅರ್ಥ.

4. "ಗೀತಾಸು" ಪಾ॥

ಎಂಬುದೇ ಗೀತಾಶಾಸ್ತ್ರದಲ್ಲಿ ನಿಶ್ಚಯವಾಗಿ (ಗೊತ್ತಾಗುವ) ಅರ್ಥವು. ಇದೇ (ಗೀತೆಯ) ಅರ್ಥವು ಹೇಗೆಂಬುದನ್ನು (ನಾವು) ಮುಂದೆ ಪ್ರಕರಣಪ್ರಕರಣವಾಗಿ ವಿಂಗಡಿಸಿಕೊಂಡು [1] ಅಲ್ಲಲ್ಲಿ ತೋರಿಸಿಕೊಡುವೆವು.

## ಆತ್ಮನು ನಿತ್ಯನು ಮತ್ತು ನಿರ್ವಿಕಾರಿ

(ಭಾಷ್ಯ)

೧೫. ತತ್ರ ಏವಂ ಧರ್ಮಸಮ್ಮೂಢಚೇತಸಃ [2], ಮಹತಿ ಶೋಕಸಾಗರೇ ನಿಮಗ್ನಸ್ಯ ಅರ್ಜುನಸ್ಯ ಅನ್ಯತ್ರ ಆತ್ಮಜ್ಞಾನಾತ್ ಉದ್ಧರಣಮ್ ಅಪಶ್ಯನ್ ಭಗವಾನ್ ವಾಸುದೇವಃ ತತಃ [3] ಅರ್ಜುನಮ್ ಉದ್ದಿಧಾರಯಿಷುಃ, ಆತ್ಮಜ್ಞಾನಾಯ ಅವತಾರಯನ್ ಆಹ–ಅಶೋಚ್ಯಾನ್ ಇತ್ಯಾದಿ ॥

(ಭಾಷ್ಯಾರ್ಥ)

ಹೀಗಿರುವಲ್ಲಿ ಈ ರೀತಿಯಾಗಿ ಧರ್ಮವನ್ನರಿಯದೆ ಏನೂ ತೋಚದ ಬುದ್ಧಿಯಿಂದ ಕೂಡಿ,[4] ದೊಡ್ಡ ದುಗುಡದ ಕಡಲಿನಲ್ಲಿ ಮುಳುಗಿರುವ ಅರ್ಜುನನಿಗೆ ಆತ್ಮಜ್ಞಾನವನ್ನು ಬಿಟ್ಟರೆ ಬೇರೆ ಏತರಿಂದಲೂ ಉದ್ಧಾರವಾಗಲಾರದೆಂದು ಕಂಡು [5] ಭಗವಂತನಾದ ವಾಸುದೇವನು ಆ (ಕಡಲಿ)ನಿಂದ ಅರ್ಜುನನನ್ನು (ಕೃಪೆಯಿಂದ) ಎತ್ತಬೇಕೆಂದು ಆತ್ಮಜ್ಞಾನಕ್ಕೆ ತಂದು ಬಿಡುವದಕ್ಕಾಗಿ ಅಶೋಚ್ಯಾನ್ ಎಂದು ಮುಂತಾಗಿ ಹೇಳುತ್ತಿದಾನೆ —

---

1. ಇದು ಕರ್ಮದ ಪ್ರಕರಣ, ಇದು ಜ್ಞಾನದ ಪ್ರಕರಣವಾದ್ದರಿಂದ ಕರ್ಮದ ಪ್ರಸಕ್ತಿಯಿಲ್ಲ–ಎಂದು ವಿಂಗಡಿಸಿಕೊಂಡು.

2. ಇದಾದಮೇಲೆ ಮೈ॥ಮ॥ ಹೊರತು ಉಳಿದ ಮುದ್ರಿತಪುಸ್ತಕಗಳಲ್ಲೆಲ್ಲ "ಮಿಥ್ಯಾಜ್ಞಾನವತಃ" ಎಂಬ ಮಾತಿದೆ.

3. ಇದಾದಬಳಿಕ "ಕೃಪಯಾ" ಎಂದು ಆ॥ನಿ॥ಗು॥ವಾ॥; "ತಂ ತತಃ ಅರ್ಜುನಮ್" ಮೈ॥

4. "ತಪ್ಪುತಿಳಿವಳಿಕೆಯುಳ್ಳವನಾಗಿ" ಎಂದು ಆ॥ನಿ॥ಗು॥ವಾ॥ ಪಾಠಗಳಿಗೆ ಒಂದು ಹೆಚ್ಚಿನ ವಿಶೇಷಣವನ್ನು ಹಾಕಿಕೊಳ್ಳಬೇಕು.

5. ಶೋಕಮೋಹಗಳು ತೀರ ಹೋಗಬೇಕಾದರೆ ಆತ್ಮಜ್ಞಾನವೇ ಬೇಕೆಂದು ನಿಶ್ಚಯಿಸಿ.

**ಶ್ರೀ ಭಗವಾನ್ ಉವಾಚ—**

**ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।**
**ಗತಾಸೂನಗತಾಸೂಂಶ್ಚ ನಾನುಶೋಚನ್ತಿ ಪಣ್ಡಿತಾಃ ॥ ೧೧ ॥**

೧೧. ಶ್ರೀ ಭಗವಂತನಿಂತೆನು —ಅಶೋಚ್ಯರನ್ನು ಕುರಿತು ನೀನು ಶೋಕಿಸಿರುತ್ತೀಯೆ, ಪ್ರಜ್ಞಾವಾದಗಳನ್ನೂ ಆಡುತ್ತಿರುವೆ. ಪಂಡಿತರಾದವರು ಗತಾಸುಗಳನ್ನಾಗಲಿ ಅಗತಾಸುಗಳನ್ನಾಗಲಿ ಕುರಿತು ಶೋಕಿಸುವದಿಲ್ಲ-

(ಭಾಷ್ಯ)

೧೨. ನ ಶೋಚ್ಯಾಃ ಅಶೋಚ್ಯಾಃ ಭೀಷ್ಮದ್ರೋಣಾದಯಃ । ಸದ್ವೃತ್ತತ್ವಾತ್ ಪರಮಾರ್ಥಸ್ವರೂಪೇಣ ಚ ನಿತ್ಯತ್ವಾತ್ । ತಾನ್ ಅಶೋಚ್ಯಾನ್ ಅನ್ವಶೋಚಃ ಅನುಶೋಚಿತವಾನಸಿ "ತೇ ಮ್ರಿಯನ್ತೇ ಮನ್ನಿಮಿತ್ತಮ್, ಅಹಂ ತೈರ್ವಿನಾಭೂತಃ ಕಿಂ ಕರಿಷ್ಯಾಮಿ ರಾಜ್ಯಸುಖಾದಿನಾ" ಇತಿ । ತ್ವಂ ಪ್ರಜ್ಞಾವಾದಾನ್[1] ಪ್ರಜ್ಞಾವತಾಂ ಬುದ್ಧಿಮತಾಂ ವಾದಾಂಶ್ಚ ವಚನಾನಿ ಚ ಭಾಷಸೇ । ತದೇತತ್ ಮೌಢ್ಯಂ ಪಾಣ್ಡಿತ್ಯಂ ಚ ವಿರುದ್ಧಮ್ ಆತ್ಮನಿ ದರ್ಶಯಸಿ ಉನ್ಮತ್ತ ಇವ ಇತ್ಯಭಿಪ್ರಾಯಃ । ಯಸ್ಮಾತ್ ಗತಾಸೂನ್ ಗತಪ್ರಾಣಾನ್ ಮೃತಾನ್ ಅಗತಾಸೂನ್ ಅಗತಪ್ರಾಣಾನ್ ಜೀವತಶ್ಚ ನಾನುಶೋಚನ್ತಿ ಪಣ್ಡಿತಾ ಆತ್ಮಜ್ಞಾಃ । ಪಣ್ಡಾ ಆತ್ಮವಿಷಯಾ ಬುದ್ಧಿಃ ಯೇಷಾಂ[2] ತೇ ಹಿ ಪಣ್ಡಿತಾಃ । "ಪಾಣ್ಡಿತ್ಯಂ ನಿರ್ವಿದ್ಯ" (ಬೃ. ೩-೫-೧) ಇತಿ ಶ್ರುತೇಃ । ಪರಮಾರ್ಥತಸ್ತು ತಾನ್[3] ನಿತ್ಯಾನ್ ಅಶೋಚ್ಯಾನ್ ಅನುಶೋಚಸಿ, ಅತೋ ಮೂಢೋಽಸಿ ಇತಿ ಅಭಿಪ್ರಾಯಃ ॥

(ಭಾಷ್ಯಾರ್ಥ)

ಅಶೋಚ್ಯರು ಎಂದರೆ ಶೋಕಕ್ಕೆ ತಕ್ಕವರಲ್ಲದ ಭೀಷ್ಮ, ದ್ರೋಣ-ಮೊದಲಾದವರು. ಏಕೆಂದರೆ (ಅವರು) ಒಳ್ಳೆಯ ನಡತೆಯುವರು, ಮತ್ತು (ತಮ್ಮ) ನಿಜವಾದ ರೂಪದಲ್ಲಿ ನಿತ್ಯರಾಗಿರುತ್ತಾರೆ ಆ ಅಶೋಚ್ಯರನ್ನು ಕುರಿತು ಶೋಕಿಸುತ್ತೀಯೆ, "ಅವರು ನನ್ನ ನಿಮಿತ್ತವಾಗಿ ಸಾಯುವರಲ್ಲ! ಅವರಿಲ್ಲದೆ ನಾನು ರಾಜ್ಯಸುಖಾದಿಗಳನ್ನು ಕಟ್ಟಿಕೊಂಡು ಏನುಮಾಡಲಿ?" ಎಂದು ಶೋಕಮಾಡಿರುತ್ತೀಯೆ. ನೀನು ಪ್ರಜ್ಞಾವಾದಗಳನ್ನು, ಪ್ರಜ್ಞೆಯುಳ್ಳವರ ಬುದ್ಧಿವಂತರ ವಾದಗಳನ್ನೂ ವಚನ

1. ಈ ಮಾತು ಞ॥ ಪಾಠದಲ್ಲಿ ಬಿಟ್ಟುಹೋಗಿದೆ.
2. ಇಲ್ಲಿಯವರೆಗಿನ ಮಾತುಗಳು ಮೈ॥ ಪಾಠದಲ್ಲಿ ಬಿಟ್ಟುಹೋಗಿವೆ.
3. ಆ॥ಞ॥ ಪಾಠಗಳಲ್ಲಿ ಈ ಮಾತಿಲ್ಲ.

ಗಳನ್ನೂ ಆಡುತ್ತಿರುವೆ. ಅಂಥ ಈ ಒಂದಕ್ಕೊಂದು ವಿರುದ್ಧವಾಗಿರುವ ಮೌಢ್ಯವನ್ನೂ ಪಾಂಡಿತ್ಯವನ್ನೂ ನಿನ್ನಲ್ಲಿ ಹುಚ್ಚನಂತೆ ತೋರಿಸಿಕೊಳ್ಳುತ್ತಿರುವೆ ಎಂದು ಅಭಿಪ್ರಾಯ. ಏಕೆಂದರೆ ಪ್ರಾಣವನ್ನು ಕಳೆದುಕೊಂಡವರನ್ನೂ ಎಂದರೆ ಸತ್ತವರನ್ನೂ ಪ್ರಾಣವನ್ನು ಕಳೆದುಕೊಳ್ಳದವರನ್ನೂ ಎಂದರೆ ಬದುಕಿರುವವರನ್ನೂ ಪಂಡಿತರು ಎಂದರೆ ಆತ್ಮಜ್ಞರು ಶೋಕಿಸುವದಿಲ್ಲ ಪಂಡಾ ಎಂದರೆ ಆತ್ಮವಿಷಯದ ಬುದ್ಧಿಯು ಯಾರಿಗೆ ಇರುವದೋ ಅವರೇ ಪಂಡಿತರು "ಪಾಂಡಿತ್ಯವನ್ನು ಚೆನ್ನಾಗಿ ಪಡೆದು" (ಬೃ. ೩-೫-೧) ಎಂಬ ಶ್ರುತಿ ಇದಕ್ಕೆ ಪ್ರಮಾಣವು. ಆದರೆ ನಿಜವಾಗಿ ನೋಡಿದರೆ ನಿತ್ಯರಾಗಿರು(ವದರಿಂದ) ಅಶೋಚ್ಯರಾಗಿರುವ ಅವರನ್ನು ಕುರಿತು ಶೋಕಿಸುತ್ತಿರುವೆ ಯಾದ್ದರಿಂದ ಮೂಢನೇ ಆಗಿರುವೆ [1] ಎಂದು ಅಭಿಪ್ರಾಯ.

(ಭಾಷ್ಯ)

ಕುತಸ್ತೇ ಅಶೋಚ್ಯಾಃ ? ಯತೋಽನಿತ್ಯಾಃ ಕಥಮ್ ?

(ಭಾಷ್ಯಾರ್ಥ)

ಅವರು ಏತಕ್ಕೆ ಅಶೋಚ್ಯರು ? ಎಂದರೆ ನಿತ್ಯರಾಗಿರುವದರಿಂದ.[2] ಅದು ಹೇಗೆ ? ಎಂದರೆ :—

**ನ ತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ ।**
**ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಮ್ ॥ ೧೨ ॥**

೧೨. ನಾನು ಯಾವಾಗಲಾದರೂ ಇರಲಿಲ್ಲವೆಂಬುದೇ ಇಲ್ಲ. ನೀನಾಗಲಿ ಈ ರಾಜರಾಗಲಿ (ಇರಲಿಲ್ಲವೆಂಬುದೇ ಇಲ್ಲ). ಮತ್ತು ನಾವು ಯಾರೂ ಇನ್ನು ಮೇಲೆ ಇರುವದಿಲ್ಲವೆಂಬುದೇ ಇಲ್ಲ.

(ಭಾಷ್ಯ)

೧೩. ನ ತ್ವೇವ ಜಾತು ಕದಾಚಿತ್ ಅಹಂ ನಾಸಮ್। ಕಿಂ ತು ಆಸಮೇವ।

---

1 ಶೋಕಮೋಹಗಳನ್ನು ಅರ್ಜುನನು ತೋರ್ಪಡಿಸಿಕೊಂಡನೆಂಬ ಅವತರಣಿಕೆಗೆ ಆಧಾರವು ಈ ಶ್ಲೋಕದಲ್ಲಿದೆ ಎಂದು ಭಾವ.

2. ಆತ್ಮನು ನಿತ್ಯನಾಗಿರುವದರಿಂದ ಭೀಷ್ಮಾದಿಗಳು ಅಶೋಚ್ಯರು ಎಂದು ಹಿಂದಿನ ಶ್ಲೋಕದಲ್ಲಿ ಕೊಟ್ಟಿರುವ ವ್ಯಾಖ್ಯಾನಕ್ಕೆ ಈ ಮುಂದಿನ ಶ್ಲೋಕದಲ್ಲಿ ಆಧಾರವು ದೊರೆಯುತ್ತದೆ—ಎಂದು ಭಾವ.

ಅತೀತೇಷು ದೇಹೋತ್ಪತ್ತಿವಿನಾಶೇಷು ಘಟಾದಿಷು ವಿಯದಿವ[1] ನಿತ್ಯ ಏವ ಅಹಮಾಸಮ್ ಇತ್ಯಭಿಪ್ರಾಯಃ । ತಥಾ ನ ತ್ವಂ ನ ಆಸೀಃ । ಕಿಂ ತು ಆಸೀರೇವ । ತಥಾ ನೇಮೇ ಜನಾಧಿಪಾಃ ನಾಸನ್ । ಕಿಂ ತು ಆಸನ್ನೇವ । ತಥಾ ನ ಚೈವ ನ ಭವಿಷ್ಯಾಮಃ । ಕಿಂ ತು ಭವಿಷ್ಯಾಮ ಏವ ಸರ್ವೇ ವಯಮ್ ಅತಃ ಅಸ್ಮಾತ್ ದೇಹನಾಶಾತ್ ಪರಮ್ ಉತ್ತರಕಾಲೇಽಪಿ । ತ್ರಿಷ್ವಪಿ ಕಾಲೇಷು ನಿತ್ಯಾ ಆತ್ಮಸ್ವರೂಪೇಣ ಇತ್ಯರ್ಥಃ । ದೇಹಭೇದಾನುವೃತ್ತ್ಯಾ ಬಹುವಚನಮ್, ನಾತ್ಮ ಭೇದಾಭಿಪ್ರಾಯೇಣ ॥

(ಭಾಷ್ಯಾರ್ಥ)

ನಾನು ಯಾವಾಗಲಾದರೂ ಯಾವದಾದರೊಂದು ಕಾಲದಲ್ಲಿ ಇರಲಿಲ್ಲವೆಂಬುದೇ ಇಲ್ಲ, ಮತ್ತೇನೆಂದರೆ ಇದ್ದೇ ಇದ್ದೆನು. ಹಿಂದೆ (ಅನೇಕ) ದೇಹಗಳು ಹುಟ್ಟಿ ಸತ್ತರೂ–ಗಡಿಗೆ ಮುಂತಾದವುಗಳು (ಹುಟ್ಟಿ ನಾಶವಾದರೂ ನಿತ್ಯವಾಗಿರುವ) ಆಕಾಶದಂತೆ[2]–ನಿತ್ಯವಾಗಿಯೇ ನಾನು ಇದ್ದುಕೊಂಡಿದೇನೆ ಎಂದು ಅಭಿಪ್ರಾಯ. ಹಾಗೂ ನೀನೂ ಇರಲಿಲ್ಲವೆಂಬುದಿಲ್ಲ, ಮತ್ತೇನೆಂದರೆ ಇದ್ದುಕೊಂಡೇ ಇದ್ದೆ. ಮತ್ತು ಈ ರಾಜರುಗಳೂ ಇರಲಿಲ್ಲವೆಂಬುದಿಲ್ಲ, ಇದ್ದೇ ಇದ್ದರು ಇದರಂತೆ ನಾವು ಯಾರೂ ಇನ್ನುಮೇಲೆಯೂ ಎಂದರೆ ಈ ದೇಹವು ನಾಶವಾದಮೇಲಿನ ಕಾಲದಲ್ಲಿಯೂ ಇರುವದಿಲ್ಲವೆಂಬುದಿಲ್ಲ, ಮತ್ತೇನೆಂದರೆ ಇದ್ದೇ ಇರುವೆವು.[3] ಮೂರು ಕಾಲಗಳಲ್ಲಿಯೂ[4] ಆತ್ಮಸ್ವರೂಪದಿಂದ ನಿತ್ಯರಾಗಿರುವೆವು ಎಂದರ್ಥ. (ಇಲ್ಲಿ) ಬೇರೆಬೇರೆ ದೇಹಗಳನ್ನು ಅನುಸರಿಸಿ ಬಹುವಚನ(ವನ್ನು ಪ್ರಯೋಗಿಸಿದೆ)ಯೇ[5] ಹೊರತು ಆತ್ಮನಲ್ಲಿ ಭೇದವುಂಟೆಂಬ ಅಭಿಪ್ರಾಯದಿಂದಲ್ಲ.

---

1. ಅ||ವಾ||ಗು||ಗಳಲ್ಲಿ ಮಾತ್ರ ಈ ಮಾತುಗಳು ಇವೆ

2. ವ್ಯಾವಹಾರಿಕನಿತ್ಯವಾಗಿರುವ ಆಕಾಶವನ್ನು ದೃಷ್ಟಾಂತವಾಗಿ ಕೊಟ್ಟಿದೆ; ನಿಜವಾಗಿ ಆಕಾಶವೂ ಕಾರ್ಯವೇ. ಈ ದೃಷ್ಟಾಂತದ ಸ್ವಾರಸ್ಯವನ್ನು ಗೌ.ಕಾ. ೩-೩ ರಿಂದ ೯ ರ ವರಗಿನ ಕಾರಿಕೆಗಳಲ್ಲಿ ವಿವರಿಸಿದೆ.

3. ದೇಹವು ಹುಟ್ಟಿ ಸತ್ತಮಾತ್ರದಿಂದ ಆತ್ಮನು ನಿಜವಾಗಿ ಹುಟ್ಟಿ ಸಾಯುವದಿಲ್ಲ ಎಂದಭಿಪ್ರಾಯ. ಸೂ ಭಾ. ೨-೩-೧೬.

4. ಕಾಲದ ಕಟ್ಟು ಆತ್ಮನಿಗೆ ಇಲ್ಲ ಎಂದರ್ಥ.

5. ಬೇರೆಬೇರೆಯಾಗಿ ವಿಂಗಡಿಸಿಕೊಂಡಿರುವದು ಕಾರ್ಯವೆಂಬ ನ್ಯಾಯವಿದೆ. (ಸೂ. ಭಾ. ೨-೩-೭); ನಾನು, ನೀನು, ಈ ಅರಸರು_ಎಂಬ ವಿಂಗಡವಿರುವದರಿಂದ ಆತ್ಮರೂ ವಿಕಾರಿಗಳೆಂದಾಗುವದಿಲ್ಲವೆ? ಎಂಬ ಶಂಕೆಗೆ ಸಮಾಧಾನವಿದು. ಆತ್ಮನಲ್ಲಿ ಬಹುತ್ವವನ್ನು ಹೇಳಬೇಕೆಂಬ ಅಭಿಪ್ರಾಯದಿಂದ ಬಹುವಚನವನ್ನು ಪ್ರಯೋಗಮಾಡಿಲ್ಲ, ಮುಂದಿನ ಶ್ಲೋಕದಲ್ಲಿ ಏಕವಚನವೂ ಇದೆ. ಆತ್ಮನು ನಿತ್ಯನು, ನಿರ್ವಿಕಾರಿ_ಎಂಬುದೇ ಈ ಪ್ರಕರಣದ ಅರ್ಥವು.

(ಭಾಷ್ಯ)

೧೪. ತತ್ರ ಕಥಮಿವ ನಿತ್ಯ ಆತ್ಮಾ ಇತಿ? ದೃಷ್ಟಾನ್ತಮ್ ಆಹ—

(ಭಾಷ್ಯಾರ್ಥ)

ಇಲ್ಲಿ ಆತ್ಮನು ಏತರಂತೆ ನಿತ್ಯನು ಎಂಬುದಕ್ಕೆ ದೃಷ್ಟಾಂತವನ್ನು ಹೇಳುತ್ತಾನೆ :—

**ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ ।**
**ತಥಾ ದೇಹಾನ್ತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥ ೧೩ ॥**

೧೩. ದೇಹಿಗೆ ಹೇಗೆ ಈ ದೇಹದಲ್ಲಿ ಕೌಮಾರ, ಯೌವನ, ಜರೆ–(ಇವು ಬರುತ್ತಿರುವವೋ) ಹಾಗೆಯೇ ದೇಹಾಂತರವೂ ಬರುವದು. ಹೀಗಿರುವದರಿಂದ ಧೀರನು ಇಲ್ಲಿ ಮೂಢನಾಗನು.

(ಭಾಷ್ಯ)

೧೫. ದೇಹಃ[1] ಅಸ್ಯ ಅಸ್ತೀತಿ ದೇಹೀ । ತಸ್ಯ ದೇಹಿನಃ ದೇಹವತ ಆತ್ಮನಃ ಅಸ್ಮಿನ್ ವರ್ತಮಾನೇ ದೇಹೇ ಯಥಾ ಯೇನ ಪ್ರಕಾರೇಣ ಕೌಮಾರಂ ಕುಮಾರಭಾವಃ, ಬಾಲ್ಯಾವಸ್ಥಾ, ಯೌವನಂ ಯೂನೋ ಭಾವಃ, ಮಧ್ಯಮಾವಸ್ಥಾ, ಜರಾ ವಯೋಹಾನಿಃ, ಜೀರ್ಣಾವಸ್ಥಾ–ಇತ್ಯೇತಾಃ ತಿಸ್ರಃ ಅವಸ್ಥಾಃ ಅನ್ಯೋನ್ಯವಿಲಕ್ಷಣಾಃ । ತಾಸಾಂ ಪ್ರಥಮಾವಸ್ಥಾನಾಶೇ ನ ನಾಶಃ, ದ್ವಿತೀಯಾವಸ್ಥೋಪಜನೇ ನೋಪಜನನಮ್[2] ಆತ್ಮನಃ । ಕಿಂ ತರ್ಹಿ ಅವಿಕ್ರಿಯಸ್ಯೈವ ದ್ವಿತೀಯತೃತೀಯಾವಸ್ಥಾಪ್ರಾಪ್ತಿಃ ಆತ್ಮನೋ ದೃಷ್ಟಾ । ತದ್ವದೇವ ದೇಹಾತ್ ಅನ್ಯೋ ದೇಹೋ[3] ದೇಹಾನ್ತರಮ್ । ತಸ್ಯ ಪ್ರಾಪ್ತಿಃ । ಅವಿಕ್ರಿಯಸ್ಯೈವ ಆತ್ಮನಃ ಇತ್ಯರ್ಥಃ । ಧೀರಃ ಧೀಮಾನ್ ತತ್ರ ಏವಂ ಸತಿ ನ ಮುಹ್ಯತಿ ನ ಮೋಹಮ್ ಆಪದ್ಯತೇ ॥

(ಭಾಷ್ಯಾರ್ಥ)

ದೇಹವು ಈ (ಆತ್ಮನಿಗೆ) ಇರುವದರಿಂದ ದೇಹಿ ಎನಿಸಿಕೊಳ್ಳುತ್ತಾನೆ). ಇಂಥ ದೇಹಿಗೆ, ದೇಹವುಳ್ಳ ಆತ್ಮನಿಗೆ, (ಈಗ) ಇರುವ ಯೌವನವು ಎಂದರೆ ಹರೆಯ

1. "ದೇಹಿನ ಇತಿ" ಎಂಬುದೇ ಮುಂತಾದ ಪ್ರತೀಕಗಳು ಒಂದೊಂದು ಪುಸ್ತಕದಲ್ಲಿ ಒಂದೊಂದು ಬಗೆಯಾಗಿ ಇರುವದರಿಂದಲೂ ಕೆಲವು ಕಡೆಗಳಲ್ಲಿ ಇಲ್ಲದಿರುವದರಿಂದಲೂ ಅವನ್ನು ಬಿಟ್ಟುಬಿಟ್ಟಿದೆ.

2. "ನೋಪಜನನಮ್" ನಿ॥ಗು॥ಅ॥, "ನೋಪಜನಃ" ವಾ॥

3. ಈ ಮಾತು ನಿ॥ ಪಾಠದಲ್ಲಿಲ್ಲ.

ದವನ ಸ್ಥಿತಿಯು, ನಡುವಣ ಅವಸ್ಥೆ; ಜರೆ ಎಂದರೆ ವಯಸ್ಸು ಕಳೆಯುವದು, ಮುಪ್ಪಿನ ಅವಸ್ಥೆ–ಹೀಗೆ ಒಂದಕ್ಕೊಂದು ವಿಲಕ್ಷಣವಾದ[1] ಈ ಮೂರು ಅವಸ್ಥೆಗಳೂ ಹೇಗೆ ಯಾವ ಪ್ರಕಾರದಿಂದ (ಬರುತ್ತಿರುವವೋ), ಇವುಗಳಲ್ಲಿ ಮೊದಲನೆಯ ಅವಸ್ಥೆಯು ನಾಶವಾದರೆ ಆತ್ಮನಿಗೆ (ಹೇಗೆ) ನಾಶವಿಲ್ಲವೋ, ಎರಡನೆಯ ಅವಸ್ಥೆಯು ಹುಟ್ಟಿದರೆ (ಆತ್ಮನಿಗೆ ಹೇಗೆ) ಹುಟ್ಟುವದೆಂಬುದಿಲ್ಲವೋ ಮತ್ತೇನೆಂದರೆ ಯಾವ ವಿಕಾರವೂ ಇಲ್ಲದೆ[2] ಇರುವ ಆತ್ಮನಿಗೇ ಎರಡನೆಯ ಮೂರನೆಯ ಅವಸ್ಥೆಗಳು ಬರುವದು (ಹೇಗೆ) ಕಂಡಿದೆಯೋ, ಹಾಗೆಯೇ ವಿಕಾರವಿಲ್ಲದ ಆತ್ಮನಿಗೇ ದೇಹಾಂತರವು ಎಂದರೆ ಈ ದೇಹಕ್ಕಿಂತ ಬೇರೆಯಾದ ದೇಹವು, ಆ ದೇಹಾಂತರದ ಪ್ರಾಪ್ತಿಯೂ (ಆಗುವದು) ಎಂದರ್ಥ. ಇಲ್ಲಿ ಹೀಗಿರುವದರಿಂದ[3] ಧೀರನು ತಿಳಿವಳಿಕೆಯುಳ್ಳವನು ಮೂಢನಾಗನು, ಮೋಹವನ್ನು ಹೊಂದುವದಿಲ್ಲ.[4]

(ಭಾಷ್ಯ)

೧೬. ಯದ್ಯಪಿ ಆತ್ಮವಿನಾಶನಿಮಿತ್ತೋ ಮೋಹೋ ನ ಸಂಭವತಿ ನಿತ್ಯಃ ಆತ್ಮಾ ಇತಿ ವಿಜಾನತಃ, ತಥಾಪಿ ಶೀತೋಷ್ಣಸುಖದುಃಖಪ್ರಾಪ್ತಿನಿಮಿತ್ತೋ ಮೋಹೋ ಲೌಕಿಕೋ ದೃಶ್ಯತೇ, ಸುಖವಿಯೋಗನಿಮಿತ್ತೋ[5] ದುಃಖಸಂಯೋಗನಿಮಿತ್ತಶ್ಚ[6] ಶೋಕಃ ಇತ್ಯೇತತ್ ಅರ್ಜುನಸ್ಯ ವಚನಮ್ ಆಶಙ್ಕ್ಯ ಭಗವಾನ್ ಆಹ—

(ಭಾಷ್ಯಾರ್ಥ)

ಆತ್ಮನು ನಿತ್ಯನೆಂದು ತಿಳಿದುಕೊಂಡಾತನಿಗೆ ಆತ್ಮನು ನಾಶವಾದಾನೆಂಬ ನಿಮಿತ್ತದಿಂದ ಮೋಹವುಂಟಾಗಲಾರದಾದರೂ ಶೀತ ಉಷ್ಣ, ಸುಖ ದುಃಖ–ಇವುಗಳು ಬರುವ ನಿಮಿತ್ತದಿಂದ ಮೋಹವೂ ಸುಖವು ಹೋಗುವದರಿಂದಲೂ ದುಃಖವು

---

1. ಅವಸ್ಥೆಗಳು ಬೇರೆಬೇರೆಯ ಸ್ವರೂಪವಾಗಿರುವದರಿಂದ ಅವುಗಳಲ್ಲಿ ಒಂದು ಹೋಗಿಯೇ ಇನ್ನೊಂದು ಬರುವದು.

2. ಅವಸ್ಥೆಯ ಸಂಬಂಧವು ಆತ್ಮನಿಗಿಲ್ಲವಾದ್ದರಿಂದ ಅವನಲ್ಲಿ ವಿಕಾರವಿಲ್ಲ.

3. ಆತ್ಮನು ನಿತ್ಯನೂ ನಿರ್ವಿಕಾರನೂ ಆಗಿರುವದರಿಂದ.

4. ಭೀಷ್ಮಾದಿಗಳನ್ನು ನಾನು ನಿಜವಾಗಿಯೂ ಕೊಲ್ಲುವೆನೆಂಬ ತಪ್ಪುತಿಳಿವಳಿಕೆಯಿಂದ ನೀನು ಶೋಕಿಸುವಂತೆ ಶೋಕಿಸುವದಿಲ್ಲ ಎಂದು ಭಾವ.

5. " ಮೋಹಃ " ಎಂಬ ಮಾತು ಅನೇಕ ಅಚ್ಚಿನ ಪುಸ್ತಕಗಳಲ್ಲಿದ್ದರೂ ಬೇಕಿಲ್ಲ. ಇಲ್ಲಿ ಕೊಟ್ಟಿರುವದು ಗು|| ಪಾಠ.

6. " ದುಃಖಸಂಯೋಗಾದಿ " ಎಂಬ ನಿ|| ಪಾಠದಲ್ಲಿ ' ಆದಿ ' ಹೆಚ್ಚು.

ಬರುವ ನಿಮಿತ್ತದಿಂದಲೂ ಶೋಕವೂ (ಆಗುವದು) ಕಂಡಿದೆಯಲ್ಲ!–ಎಂದು ಅರ್ಜುನನು ಹೇಳಿಯಾನೆಂದು[1] ಶಂಕಿಸಿ ಭಗವಂತನು (ಹೀಗೆಂದು) ಹೇಳುತ್ತಾನೆ :

**ಮಾತ್ರಾಸ್ಪರ್ಶಾಸ್ತು ಕೌನ್ತೇಯ ಶೀತೋಷ್ಣಸುಖದುಃಖದಾಃ ।**
**ಆಗಮಾಪಾಯಿನೋಽನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥ ೧೪ ॥**

೧೪. ಎಲೈ ಕೌಂತೇಯನೆ, ಮಾತ್ರಾಸ್ಪರ್ಶಗಳು ಶೀತೋಷ್ಣಗಳನ್ನೂ ಸುಖದುಃಖಗಳನ್ನೂ ಕೊಡುತ್ತಿರುವವು. ಅವು ಆಗಮಾಪಾಯಿಗಳು, ಅನಿತ್ಯಗಳು ; ಅವುಗಳನ್ನು ಸಹಿಸಿಕೊ.

(ಭಾಷ್ಯ)

೧೭. ಮಾತ್ರಾಃ ಆಭಿಃ ಮೀಯನ್ತೇ ಶಬ್ದಾದಯಃ ಇತಿ ಶ್ರೋತ್ರಾದೀನಿ ಇನ್ದ್ರಿಯಾಣಿ । ಮಾತ್ರಾಣಾಂ ಸ್ಪರ್ಶಾಃ ಶಬ್ದಾದಿಭಿಃ ಸಂಯೋಗಾಃ । ತೇ ಶೀತೋಷ್ಣಸುಖದುಃಖದಾಃ ಶೀತಮ್ ಉಷ್ಣಂ ಸುಖಂ ದುಃಖಂ ಚ ಪ್ರಯಚ್ಛನ್ತಿ ಇತಿ । ಅಥವಾ ಸ್ಪೃಶ್ಯನ್ತೇ ಇತಿ ಸ್ಪರ್ಶಾಃ ವಿಷಯಾಃ ಶಬ್ದಾದಯಃ । ಮಾತ್ರಾಶ್ಚ ಸ್ಪರ್ಶಾಶ್ಚ ಶೀತೋಷ್ಣಸುಖದುಃಖದಾಃ । ಶೀತಂ ಕದಾಚಿತ್ ಸುಖಂ ಕದಾಚಿತ್ ದುಃಖಮ್ । ತಥಾ ಉಷ್ಣಮಪಿ ಅನಿಯತಸ್ವರೂಪಮ್ । ಸುಖದುಃಖೇ ಪುನಃ ನಿಯತರೂಪತಾಂ ನ ವ್ಯಭಿಚರತಃ[2] । ಅತಃ ತಾಭ್ಯಾಂ ಪೃಥಕ್ ಶೀತೋಷ್ಣಯೋಃ ಗ್ರಹಣಮ್ । ಯಸ್ಮಾತ್ ತೇ ಮಾತ್ರಾಸ್ಪರ್ಶಾದಯಃ ಆಗಮಾಪಾಯಿನಃ ಆಗಮಾಪಾಯಶೀಲಾಃ ತಸ್ಮಾತ್ ಅನಿತ್ಯಾಃ[3] । ಅತಃ ತಾನ್ ಶೀತೋಷ್ಣಾದೀನ್ ತಿತಿಕ್ಷಸ್ವ ಪ್ರಸಹಸ್ವ । ತೇಷು ಹರ್ಷಂ ವಿಷಾದಂ ವಾ[4] ಮಾ ಕಾರ್ಷೀಃ ಇತ್ಯರ್ಥಃ ॥

---

1. ವಿಷಯಗಳಿಂದ ಶೀತೋಷ್ಣಾದಿವೇದನೆಗಳುಂಟಾಗುವದೂ ಅವುಗಳಿಂದ ಸುಖದುಃಖಗಳುಂಟಾಗುವದೂ ಕಂಡಿದೆ ; ಅದನ್ನು ಸಟೆಯೆನ್ನುವದಕ್ಕಿಲ್ಲ. ಅವುಗಳು ಭೀಷ್ಮಾದಿಗಳಿಗೂ ನನಗೂ ಆಗುವವೆಂದು ಏತಕ್ಕೆ ಶೋಕಿಸಕೂಡದು ?_ಎಂದು ಅರ್ಜುನನ ಶಂಕೆಯ ಭಾವ.

2. " ನಿಯತರೂಪೇ ಯತೋ ನ ವ್ಯಭಿಚರತಃ " ಎಂಬ ಪಾಠಕ್ಕಿಂತ ಈ ಮೈ॥ಮ॥ ಪಾಠವೇ ಮೇಲು.

3. " ಉತ್ಪತ್ತಿವಿಲಯರೂಪತ್ವಾತ್ " ಎಂದು ಆ॥ ಪಾಠದಲ್ಲಿ ಹೆಚ್ಚಾಗಿದೆ.

4. " ಹರ್ಷಂ ವಿಷಾದಂ ಚ " ಮ॥ಮೈ॥, " ಹರ್ಷವಿಷಾದಮ್ '' ನಿ॥ ಎಂದೂ ಪಾಠಗಳು.

(ಭಾಷ್ಯಾರ್ಥ)

ಮಾತ್ರೆಗಳು ಎಂದರೆ ಇವುಗಳಿಂದ ಶಬ್ದಾದಿಗಳು ಅಳೆಯಲ್ಪಡುತ್ತವೆ[1] ಯಾದ್ದರಿಂದ (ಮಾತ್ರೆಗಳೆನಿಸಿರುವ) ಶ್ರೋತ್ರವೇ ಮುಂತಾದ ಇಂದ್ರಿಯಗಳು. ಮಾತ್ರೆಗಳ ಸ್ಪರ್ಶಗಳು ಎಂದರೆ ಶಬ್ದವೇ ಮುಂತಾದವುಗಳೊಡನೆ (ಅವಕ್ಕೆ) ಆಗುವ ಸಂಬಂಧಗಳು. ಇವು ಶೀತೋಷ್ಣಸುಖದುಃಖದಗಳಾಗಿರುವವು, ಶೀತವನ್ನೂ ಉಷ್ಣ ವನ್ನೂ ಸುಖವನ್ನೂ ದುಃಖವನ್ನೂ ಕೊಡುತ್ತವೆಯಾದ್ದರಿಂದ (ಶೀತೋಷ್ಣಸುಖ ದುಃಖದಗಳು). ಅಥವಾ 'ಸ್ಪೃಶ್ಯನ್ತೇ' ಮುಟ್ಟಲ್ಪಡುತ್ತವೆಯಾದ್ದರಿಂದ ಶಬ್ದವೇ ಮುಂತಾದ ವಿಷಯಗಳು ಸ್ಪರ್ಶಗಳೆನಿಸಿರುತ್ತವೆ.[2] ಮಾತ್ರೆಗಳೂ ಸ್ಪರ್ಶಗಳೂ[3] ಶೀತೋಷ್ಣಸುಖದುಃಖಗಳನ್ನು ಕೊಡುತ್ತಿರುವವು. ಶೀತವು ಕೆಲವು ವೇಳೆ ಸುಖವೂ ಕೆಲವು ವೇಳೆ ದುಃಖವೂ ಆಗಿರುವದು, ಉಷ್ಣವೂ ಹಾಗೆಯೇ, (ಅದೂ) ಗೊತ್ತಾದ (ಒಂದು) ರೂಪದಲ್ಲಿರುವದಿಲ್ಲ. ಆದರೆ ಸುಖದುಃಖಗಳು ಗೊತ್ತಾದ (ತಮ್ಮ) ರೂಪವನ್ನು (ಎಂದಿಗೂ) ಮಾರ್ಪಡಿಸಿಕೊಳ್ಳುವದಿಲ್ಲ.[4] ಆದ್ದರಿಂದ ಅವೆರಡಕ್ಕಿಂತ ಬೇರೆಯಾಗಿ ಶೀತೋಷ್ಣಗಳನ್ನು ಹೇಳಿರುತ್ತದೆ. ಹೀಗೆ ಆ ಮಾತ್ರಾಸ್ಪರ್ಶಾದಿಗಳು ಆಗಮಾಪಾಯಿಗಳಾಗಿರುವದರಿಂದ[5] ಬಂದು ಹೋಗುವ ಸ್ವಭಾವವುಳ್ಳವುಗಳಾಗಿರುವ ದರಿಂದ ಅನಿತ್ಯವಾಗಿರುತ್ತವೆ.[6] ಆದ್ದರಿಂದ ಆ ಶೀತೋಷ್ಣಾದಿಗಳನ್ನು ಸಹಿಸಿಕೊ, ತಡೆದುಕೊ. ಅವುಗಳಲ್ಲಿ ಹಿಗ್ಗನ್ನಾಗಲಿ ಕುಗ್ಗನ್ನಾಗಲಿ ಹೊಂದಬೇಡ ಎಂದರ್ಥ.

---

1. ಮಾ ಎಂಬ ಧಾತುವಿಗೆ ಅಳೆಯುವದು ಎಂದರ್ಥ. ಇಂದ್ರಿಯವು ವಿಷಯದ ಯೋಗ್ಯತೆಯನ್ನು ಅಳೆದು ಗೊತ್ತುಪಡಿಸುತ್ತದೆ.

2. 'ಸ್ಪರ್ಶ' ಎಂಬುದಕ್ಕೆ ಮುಟ್ಟುವಿಕೆ ಎಂದರ್ಥವನ್ನು ಮೊದಲು ಮಾಡಿತ್ತು; ಈಗ ಮುಟ್ಟಲ್ಪಡುವ ವಸ್ತು ಎಂಬರ್ಥವನ್ನು ಮಾಡಿದೆ.

3. ಇಂದ್ರಿಯಗಳೂ ವಿಷಯಗಳೂ.

4. ಸುಖವು ಸುಖವೇ ಆಗಿರುತ್ತದೆ; ದುಃಖವು ದುಃಖವೇ ಆಗಿರುತ್ತದೆ. ಶೀತೋಷ್ಣಾದಿಗಳು ನಮ್ಮ ರಾಗದ್ವೇಷಗಳಿಗೆ ಅನುಗುಣವಾಗಿ ಸುಖದುಃಖವನ್ನುಂಟುಮಾಡುವವು. ಅವು ಕೆಲವರಿಗೆ ಸುಖಕರವಾಗಿ ಕೆಲವರಿಗೆ ದುಃಖಕರವಾಗಿ, ಮತ್ತು ಒಬ್ಬನಿಗೇ ಕಾಲಾಂತರದಲ್ಲಿಯೂ ಅವಸ್ಥಾಂತರದಲ್ಲಿಯೂ ಈಗ ಸುಖಕರವಾಗಿದ್ದು ಆಗ ದುಃಖಕರವಾಗಿ ಆಗುವವು. ಆದ್ದರಿಂದ ಅವುಗಳಲ್ಲಿ ಸುಖದುಃಖಗಳು ಗೊತ್ತಾಗುವದಿಲ್ಲ.

5. ಇಂದ್ರಿಯಗಳ ಸಂಬಂಧವೂ, ಶೀತೋಷ್ಣಗಳೂ, ಸುಖದುಃಖಗಳೂ ಬಂದು ಹೋಗುವವಾಗಿರುತ್ತವೆ; ಇವು ಯಾವವೂ ನಿತ್ಯನಾದ ಆತ್ಮನ ಸ್ವರೂಪಕ್ಕೆ ಸಂಬಂಧಪಟ್ಟಿರುವದಿಲ್ಲ ಎಂದರ್ಥ.

6. ಇವು ಅನಿತ್ಯವೆಂದು ಇಲ್ಲಿ ಹೇಳಿದ್ದರೂ ಇವು ಅಸತ್ಯವೇ ಎಂಬುದನ್ನು ೧೬ನೆಯ ಶ್ಲೋಕದಲ್ಲಿ ಹೇಳಿದೆ. ಗೌ. ಕಾ. ೨-೩ ನೋಡಿ.

(ಭಾಷ್ಯ)

೧೮. ಶೀತೋಷ್ಣಾದೀನ್ ಸಹತಃ ಕಿಂ ಸ್ಯಾತ್ ಇತಿ ? ಶೃಣು—

(ಭಾಷ್ಯಾರ್ಥ)

ಶೀತೋಷ್ಣಗಳೇ ಮುಂತಾದವನ್ನು ತಡೆದುಕೊಂಡವನಿಗೆ ಏನಾಗುವದು ? ಎಂದರೆ ಕೇಳು :—

**ಯಂ ಹಿ ನ ವ್ಯಥಯನ್ತ್ಯೇತೇ ಪುರುಷಂ ಪುರುಷರ್ಷಭ ।**
**ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ ॥ ೧೫ ॥**

೧೫. ಎಲೈ ಪುರುಷಶ್ರೇಷ್ಠನೆ, ಸಮದುಃಖಸುಖನಾಗಿರುವ ಧೀರನಾದ ಯಾವ ಪುರುಷನನ್ನು ಇವು ವ್ಯಥೆಗೊಳಿಸುವದಿಲ್ಲವೋ ಆತನು ಅಮೃತತ್ವಕ್ಕೆ ತಕ್ಕವನಾಗುವನು.

(ಭಾಷ್ಯ)

೧೯. ಯಂ ಹಿ ಪುರುಷಂ ಸಮೇ ದುಃಖಸುಖೇ ಯಸ್ಯ ತಂ ಸಮದುಃಖಸುಖಂ ಸುಖದುಃಖಪ್ರಾಪ್ತೌ ಹರ್ಷವಿಷಾದರಹಿತಂ ಧೀರಂ ಧೀಮನ್ತಂ ನ ವ್ಯಥಯನ್ತಿ ನ ಚಾಲಯನ್ತಿ ನಿತ್ಯಾತ್ಮದರ್ಶನಾತ್ ಏತೇ ಯಥೋಕ್ತಾಃ ಶೀತೋಷ್ಣಾದಯಃ ಸಃ ನಿತ್ಯಾತ್ಮಸ್ವರೂಪದರ್ಶನನಿಷ್ಠೋ ದ್ವನ್ದ್ವಸಹಿಷ್ಣುಃ ಅಮೃತತ್ವಾಯ ಅಮೃತಭಾವಾಯ । ಮೋಕ್ಷಾಯ ಇತ್ಯರ್ಥಃ । ಕಲ್ಪತೇ ಸಮರ್ಥೋ ಭವತಿ ॥

(ಭಾಷ್ಯಾರ್ಥ)

ಸಮದುಃಖಸುಖನು ಎಂದರೆ ದುಃಖಸುಖಗಳು ಸಮವಾಗಿರುವವನು ; ಸುಖದುಃಖಗಳು ಬಂದೊದಗಿದರೆ ಹಿಗ್ಗುಕುಗ್ಗುಗಳಾಗದವನು. ಧೀರನು ಎಂದರೆ ಬುದ್ಧಿವಂತನು. (ಹೀಗಿರುವ) ಯಾವ ಪುರುಷನನ್ನು ಇವು ಎಂದರೆ ಮೇಲೆ ಹೇಳಿರುವ ಶೀತೋಷ್ಣಾದಿಗಳು[1] ಆತ್ಮನು ನಿತ್ಯನೆಂಬುದನ್ನು ಮನಗಂಡಿರುವದರಿಂದ ವ್ಯಥೆಗೊಳಿಸುವದಿಲ್ಲವೋ ಎಂದರೆ ಅಲುಗಾಡಿಸದೆ ಇರುವವೋ ನಿತ್ಯನಾದ ಆತ್ಮಸ್ವರೂಪದ ದರ್ಶನದಲ್ಲಿ ನಿಷ್ಠನಾಗಿ ದ್ವಂದ್ವಗಳನ್ನು[2] ಸಹಿಸಿಕೊಂಡಿರುವ ಆತನು

1. ಶೀತೋಷ್ಣಗಳು, ಸುಖದುಃಖಗಳು, ಹರ್ಷವಿಷಾದಗಳು.
2. ಶೀತೋಷ್ಣಾದಿಗಳನ್ನು

ಅಮೃತತ್ವಕ್ಕೆ, ಅಮೃತನಾಗುವದಕ್ಕೆ, ಎಂದರೆ ಮೋಕ್ಷಕ್ಕೆ ಎಂದರ್ಥ. ತಕ್ಕವನಾಗುವನು, (ಅದನ್ನು ಪಡೆಯಲು) ಶಕ್ತನಾಗುವನು.[1]

(ಭಾಷ್ಯ)

೨೦. ಇತಶ್ಚ ಶೋಕಮೋಹೌ ಅಕೃತ್ವಾ ಶೀತೋಷ್ಣಾದಿಸಹನಂ ಯುಕ್ತಮ್। ಯಸ್ಮಾತ್—

(ಭಾಷ್ಯಾರ್ಥ)

ಈ (ಮುಂದಿನ) ಕಾರಣದಿಂದಲೂ ಶೋಕಮೋಹಗಳನ್ನು ಮಾಡಿಕೊಳ್ಳದೆ ಶೀತೋಷ್ಣಗಳೇ ಮುಂತಾದವನ್ನು ಸೈರಿಸುವದು ಯುಕ್ತವಾಗಿರುತ್ತದೆ. ಏಕೆಂದರೆ:

**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।**
**ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ ॥ ೧೬ ॥**

೧೬. ಅಸತ್ತಿಗೆ ಇರುವಿಕೆಯಿಲ್ಲ, ಸತ್ತಿಗೆ ಇಲ್ಲದಿರುವಿಕೆಯಿಲ್ಲ. ಇವೆರಡರ ನೆಲೆಯೂ ತತ್ತ್ವದರ್ಶಿಗಳಿಗೆ ಕಂಡುಬಂದಿರುತ್ತದೆ.

(ಭಾಷ್ಯ)

೨೧. ನ ಅಸತಃ ಅವಿದ್ಯಮಾನಸ್ಯ ಶೀತೋಷ್ಣಾದೇಃ ಸಕಾರಣಸ್ಯ ನ ವಿದ್ಯತೇ ನಾಸ್ತಿ ಭಾವಃ, ಭವನಮ್, ಅಸ್ತಿತಾ । ನ ಹಿ ಶೀತೋಷ್ಣಾದಿ ಸಕಾರಣಂ ಪ್ರಮಾಣೈರ್ನಿರೂಪ್ಯಮಾಣಂ ವಸ್ತುಸದ್ ಭವತಿ । ವಿಕಾರೋ ಹಿ ಸಃ । ವಿಕಾರಶ್ಚ ವ್ಯಭಿಚರತಿ । ಯಥಾ ಘಟಾದಿಸಂಸ್ಥಾನಂ ಚಕ್ಷುಷಾ ನಿರೂಪ್ಯಮಾಣಂ ಮೃದ್ವ್ಯತಿರೇಕೇಣ ಅನುಪಲಬ್ಧೇಃ ಅಸತ್, ತಥಾ ಸರ್ವೋ ವಿಕಾರಃ ಕಾರಣವ್ಯತಿರೇಕೇಣ ಅನುಪಲಬ್ಧೇಃ ಅಸನ್, ಜನ್ಮಪ್ರಧ್ವಂಸಾಭ್ಯಾಂ ಪ್ರಾಕ್ ಊರ್ಧ್ವಂ ಚ ಅನುಪಲಬ್ಧೇಃ[2]। ಮೃದಾದಿಕಾರಣಸ್ಯ ಚ ತತ್ಕಾರಣವ್ಯತಿರೇಕೇಣ ಅನುಪಲಬ್ಧೇರಸತ್ತ್ವಮ್॥

(ಭಾಷ್ಯಾರ್ಥ)

ಅಸತ್ತಿಗೆ ಎಂದರೆ (ನಿಜವಾಗಿ)ಲ್ಲದಿರುವ ಕಾರಣವುಳ್ಳ[3] ಶೀತೋಷ್ಣಗಳಿಗೆ

---

1. ದ್ವಂದ್ವಗಳನ್ನು ಸಹಿಸಿಕೊಳ್ಳಲಾರದೆ ಇರುವವನಿಗೆ ತಾನು ಅನಾತ್ಮನೆಂಬ ಬುದ್ಧಿಯು ಗಟ್ಟಿಯಾಗಿರುವದರಿಂದ ತನಗೆ ಜನ್ಮಮರಣರೂಪವಾದ ಸಂಸಾರವುಂಟೆಂಬ ಮನವರಿಕೆಯಾಗಿರುತ್ತದೆ. ಆದ್ದರಿಂದ ಅವನಿಗೆ ಮುಕ್ತಿಯಿಲ್ಲ.

2. ಇಲ್ಲಿ ‹ ಕಾರ್ಯಸ್ಯ ಘಟಾದೇಃ › ಎಂಬ ಭಾಷ್ಯಭಾಗವು ಬೇಕಿಲ್ಲ.

3. ಆತ್ಮವೊಂದನ್ನು ಬಿಟ್ಟರೆ ಮಿಕ್ಕದ್ದೆಲ್ಲ ಕಾರಣವುಳ್ಳದ್ದೇ ಆಗಿರುತ್ತದೆ.

ಭಾವವು ಎಂದರೆ ಅಸ್ತಿತ್ವವು, ಇರವು, ಇರುವದಿಲ್ಲ. ಕಾರಣವುಳ್ಳ ಶೀತೋಷ್ಣಾದಿಗಳನ್ನು ಪ್ರಮಾಣಗಳಿಂದ[1] ಚೆನ್ನಾಗಿ ಪರೀಕ್ಷೆಮಾಡಿದರೆ ಅವು ನಿಜವಾಗಿಯೂ ಇರುವವೆಂದಾಗುವದಿಲ್ಲವಲ್ಲವೆ? ಏಕೆಂದರೆ ಅವು ಕಾರ್ಯವಾಗಿರುತ್ತವೆ. ಯಾವದು ಕಾರ್ಯವೋ ಅದು ಬೇರ್ಪಡುವ ಸ್ವಭಾವದ್ದಾಗಿರುತ್ತದೆ. ಹೇಗೆ ಗಡಿಗೆಯೇ ಮುಂತಾದ ಆಕಾರವನ್ನು ಕಣ್ಣಿನಿಂದ ಪರೀಕ್ಷೆಮಾಡಿದರೆ ಅದು ಮಣ್ಣಿಗಿಂತ ಬೇರೆಯಾಗಿ ಕಾಣಬರದೆ ಇರುವದರಿಂದ ಅಸತ್ತಾಗಿರುವದೋ[2] ಅದರಂತೆ[3] ಕಾರ್ಯವೆಲ್ಲ (ತನ್ನ) ಕಾರಣಕ್ಕಿಂತ ಬೇರೆಯಾಗಿ ಕಾಣಬರದೆ ಇರುವದರಿಂದ ಅಸತ್ತೇ (ಆಗಿರುತ್ತದೆ). ಹುಟ್ಟುವದಕ್ಕೆ ಮೊದಲೂ ನಾಶವಾದಮೇಲೆಯೂ ಕಾಣಬರದೆ ಇರುವದರಿಂದಲೂ[4] (ಅದು ಅಸತ್ತಾಗಿರುತ್ತದೆ. ಮಣ್ಣು ಮುಂತಾದ ಕಾರಣವುಕೂಡ ತನ್ನ ಕಾರಣಕ್ಕಿಂತ[5] ಬೇರೆಯಾಗಿ ಕಾಣಬರದೆ ಇರುವದರಿಂದ (ಅದೂ) ಅಸತ್ತಾಗಿರುತ್ತದೆ.[6]

(ಭಾಷ್ಯ)

೨೨. ತದಸತ್ತ್ವೇ ಸರ್ವಾಭಾವಪ್ರಸಙ್ಗಃ ಇತಿ ಚೇತ್ । ನ । ಸರ್ವತ್ರ ಬುದ್ಧಿದ್ವಯೋಪಲಬ್ಧೇಃ ಸದ್ಬುದ್ಧಿಃ ಅಸದ್ಬುದ್ಧಿರಿತಿ । ಯದ್ವಿಷಯಾ ಬುದ್ಧಿಃ ನ ವ್ಯಭಿಚರತಿ ತತ್ ಸತ್, ಯದ್ವಿಷಯಾ ವ್ಯಭಿಚರತಿ ತದಸತ್ ಇತಿ ಸದಸದ್ವಿಭಾಗೇ ಬುದ್ಧಿತನ್ತ್ರೇ ಸ್ಥಿತೇ ಸರ್ವತ್ರ ದ್ವೇ ಬುದ್ಧೀ ಸರ್ವೈರುಪಲಭ್ಯೇತೇ ಸಾಮಾನಾಧಿಕರ

---

1 ಪ್ರತ್ಯಕ್ಷ, ಅನುಮಾನ, ಆಗಮ—ಇವುಗಳಿಂದ.

2. ಪ್ರತ್ಯಕ್ಷಪ್ರಮಾಣದಿಂದ ನೋಡಿದರೆ ಕಾರ್ಯವು ಕಾರಣಕ್ಕಿಂತ ಬೇರೆಯಾಗಿರುವದಿಲ್ಲ.

3. ಘಟಾದಿಗಳಂತೆ ಕಾರ್ಯವಾಗಿರುವದರಿಂದ ಎಲ್ಲವೂ ತನ್ನ ಕಾರಣಕ್ಕಿಂತ ಬೇರೆಯಲ್ಲದೆ ಇದೆ ಎಂಬುದು ಅನುಮಾನ.

4. ಗೌ. ಕಾ. ೨-೬ ನೋಡಿ.

5 ನಿಜವಾಗಿ ನೋಡಿದರೆ ಬ್ರಹ್ಮವೊಂದೇ ಕಾರಣವು; ಆದರೂ ವ್ಯಾವಹಾರಿಕವಾದ ಕಾರ್ಯಕಾರಣಭಾವವನ್ನು ಒಪ್ಪಿ ಹೀಗಂದಿದೆ. ಛಾ. ಭಾ. ೬-೨-೪, ಸೂ. ಭಾ. ೨-೪-೧೪, ೧೪. ಕಾರ್ಯವು ಕಾರಣಕ್ಕಿಂತ ಬೇರೆಯಲ್ಲವೆಂಬುದನ್ನು ಸೂ. ಭಾ. ೨-೧-೧೪ ರಿಂದ ೨೦ ರ ವರೆಗಿನ ಭಾಷ್ಯಭಾಗದಲ್ಲಿ ನೋಡಿರಿ.

6. ತೋರಿದರೂ ನಿಜವಾಗಿರುವದಲ್ಲ.

ಣ್ಯೇನ[1] ನೀಲೋತ್ಪಲವತ್ 'ಸನ್ ಘಟಃ' 'ಸನ್ ಪಟಃ' 'ಸನ್ ಹಸ್ತೀ' ಇತ್ಯೇವಂ ಸರ್ವತ್ರ। ತಯೋರ್ಬುದ್ಧ್ಯೋಃ ಘಟಾದಿಬುದ್ಧಿರ್ವ್ಯಭಿಚರತಿ। ತಥಾ ಚ ದರ್ಶಿತಮ್। ನ ತು ಸದ್ಬುದ್ಧಿಃ। ತಸ್ಮಾತ್ ಘಟಾದಿಬುದ್ಧಿವಿಷಯೋಽಸನ್। ವ್ಯಭಿಚಾರಾತ್। ನ ತು ಸದ್ಬುದ್ಧಿವಿಷಯಃ। ಅವ್ಯಭಿಚಾರಾತ್ ॥

(ಭಾಷ್ಯಾರ್ಥ)

(ಆಕ್ಷೇಪ).- ಅದು ಅಸತ್ತಾದರೆ ಯಾವದೂ (ನಿಜವಾಗಿ) ಇಲ್ಲವೆಂದಾಗುವದಲ್ಲ!

(ಸಮಾಧಾನ).—ಹಾಗಲ್ಲ. ಏಕೆಂದರೆ ಇದೆ ಎಂಬ ಬುದ್ಧಿ, ಇಲ್ಲವೆಂಬ ಬುದ್ಧಿ-ಎಂದು ಎಲ್ಲಾ ಕಡೆಯಲ್ಲಿಯೂ ಎರಡು ಬುದ್ಧಿಗಳು ಕಂಡುಬರುತ್ತವೆ. **ಯಾವದರ ವಿಷಯವಾದ ಬುದ್ಧಿಯು ಬೇರ್ಪಡುವದಿಲ್ಲವೋ ಅದು ಸತ್ತು (ನಿಜವಾಗಿರತಕ್ಕದ್ದು); ಯಾವದರ ವಿಷಯವಾದ ಬುದ್ಧಿಯು ಬೇರ್ಪಡುವದೋ ಅದು ನಿಜವಾಗಿರತಕ್ಕದ್ದಲ್ಲ (ಅಸತ್ತು).**[2] ಹೀಗೆ ಸತ್ತು, ಅಸತ್ತು ಎಂಬುದರ ವಿಂಗಡವು (ಆಯಾ) ಬುದ್ಧಿಗೆ ಅಧೀನವಾಗಿರುವದಷ್ಟೆ.[3] (ಅನುಭವದಲ್ಲಿ) ಎಲ್ಲಾ (ವಸ್ತುಗಳ ವಿಷಯ)ದಲ್ಲಿಯೂ 'ಕನ್ನೈದಿಲೆ' ಎಂಬಂತೆ[4] ಸಮಾನಾಧಿ

---

1. "ಸಮಾನಾಧಿಕರಣೇ ನ ನೀಲೋತ್ಪಲವತ್" ಎಂದು ವ್ಯಾಖ್ಯಾನಸಮ್ಮತಪಾಠ.

2. ಸತ್ಯ, ಅನೃತ–ಎಂಬ ವಿಂಗಡವನ್ನು ವಿವರಿಸುವ ತೈ ಭಾ. ೨-೧ (ಭಾ. ಭಾ. ೯೮) ನೋಡಿರಿ.

3. ಇದೆಯೆಂದು ತೋರಿ ಆಮೇಲೆ ಇಲ್ಲವೆಂದಾದರೆ ಸಟೆಯಾದದ್ದು, ಇದೆ ಎಂಬ ಬುದ್ಧಿಯು ಮಾರ್ಪಡದೆ ಹಾಗೆಯೇ ಉಳಿದುಕೊಂಡರೆ ಆ ವಸ್ತು ಸತ್ಯವಾದದ್ದು–ಎಂದರ್ಥ. ವಸ್ತುವು ತನ್ನ ಸ್ವರೂಪವನ್ನು ಬೇರ್ಪಡಿಸಿಕೊಳ್ಳುವದೆಂದರೂ ಅದರ ವಿಷಯವಾದ ಬುದ್ಧಿಯು ಬಾಧಿತವಾಗುವದೆಂದರೂ ಒಂದೇ.

4. "ಸಮಾನಾಧಿಕರಣೇ ನ ನೀಲೋತ್ಪಲವತ್" ಎಂಬ ಪಾಠವನ್ನು ಅಂಗೀಕರಿಸಿ ಗುಣಗುಣಿಗಳಿಗೆ ಸಾಮಾನಾಧಿಕರಣ್ಯವು ಗೌಣವೆಂದೂ ಸಾಮಾನ್ಯವಿಶೇಷಗಳಲ್ಲಿ ಏಕವಸ್ತುನಿಷ್ಠವೆಂದೂ ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ಆದರ ಆ ಅರ್ಥಕ್ಕೆ ಪ್ರಕೃತಭಾಷ್ಯದಲ್ಲಾಗಲಿ ಪ್ರಸ್ಥಾನತ್ರಯದ ಬೇರೊಂದು ಭಾಷ್ಯದಲ್ಲಾಗಲಿ ಬೆಂಬಲವು ದೊರೆಯುವದಿಲ್ಲ ಆದ್ದರಿಂದ ನಾವು ಈ ಪಾಠವನ್ನು ಬಿಟ್ಟು "ಸಾಮಾನಾಧಿಕರಣ್ಯೇನ ನೀಲೋತ್ಪಲವತ್" ಎಂಬ ಪಾಠವನ್ನು ಕಲ್ಪಿಸಿರುತ್ತೇವೆ. ಕನ್ನೈದಿಲೆ ಎಂಬಲ್ಲಿ ಒಂದೇ ವಸ್ತುವಿನಲ್ಲಿ ಕರಿದು, ನೈದಿಲೆ–ಎಂಬ ಎರಡು ಬುದ್ಧಿಗಳು ತೋರುವಂತೆ ಗಡಿಗೆ ಮುಂತಾದವುಗಳ ವಿಷಯದಲ್ಲಿಯೂ ಎರಡೆರಡು ಬುದ್ಧಿಗಳು ತೋರುತ್ತಿರುವವು. ಇವುಗಳಲ್ಲಿ ಗಡಿಗೆ ಎಂಬ ಬುದ್ಧಿಯು ತಪ್ಪಾದದ್ದು; 'ಇರುವ' ಎಂಬುದು ಸರಿ–ಎಂಬುದೇ ಇಲ್ಲಿ ಪ್ರಕೃತ.

ಕರಣವಾಗಿ[1] ಎರಡೆರಡು ಬುದ್ಧಿಗಳು ಎಲ್ಲರಿಗೂ ತೋರಿಬರುತ್ತಿರುವವು. (ಹೇಗೆಂದರೆ) 'ಇರುವ ಗಡಿಗೆ', 'ಇರುವ ಬಟ್ಟೆ', 'ಇರುವ ಆನೆ' ಎಂದೀಪರಿಯಲ್ಲಿ[2] ಎಲ್ಲೆಲ್ಲಿಯೂ (ತೋರಿಬರುತ್ತಿರುವವು). ಈ ಎರಡು ಬುದ್ಧಿಗಳೊಳಗೆ ಗಡಿಗೆಯೇ ಮುಂತಾದದ್ದರ ಬುದ್ಧಿಯು ಬೇರ್ಪಡುತ್ತಿರುವದು[3], ಇದನ್ನು (ಮೇಲೆ) ತೋರಿಸಿ ಕೊಟ್ಟಿರುತ್ತದೆ[4] ಆದರೆ 'ಇರುವ' ಎಂಬ ಬುದ್ಧಿಯು ಬೇರ್ಪಡುವದಿಲ್ಲ.[5] ಆದ್ದರಿಂದ ಗಡಿಗೆ ಮುಂತಾದ ಬುದ್ಧಿಗೆ ವಿಷಯವಾದ (ಅನಾತ್ಮವು) ಬೇರ್ಪಡುತ್ತಿರುವದರಿಂದ ಅಸತ್ತಾಗಿರುತ್ತದೆ, ಆದರೆ 'ಇರುವ' ಎಂಬ ಬುದ್ಧಿಗೆ ವಿಷಯವಾದ (ಆತ್ಮತತ್ತ್ವವು) ಅಸತ್ತಲ್ಲ, ಏಕೆಂದರೆ (ಅದು ಹಾಗೆ) ಬೇರ್ಪಡುವದಿಲ್ಲ.

(ಭಾಷ್ಯ)

೨೩. ಘಟೇ ವಿನಷ್ಟೇ ಘಟಬುದ್ಧೌ ವ್ಯಭಿಚರನ್ತ್ಯಾಂ ಸದ್ಬುದ್ಧಿರಪಿ ವ್ಯಭಿಚರತಿ ಇತಿ ಚೇತ್ । ನ । ಪಟಾದಾವಪಿ ಸದ್ಬುದ್ಧಿದರ್ಶನಾತ್ । ವಿಶೇಷಣವಿಷಯೈವ ಸಾ ಸದ್ಬುದ್ಧಿಃ[6] । ಸದ್ಬುದ್ಧಿವತ್ ಘಟಬುದ್ಧಿರಪಿ ಘಟಾನ್ತರೇ ದೃಶ್ಯತೇ ಇತಿ ಚೇತ್ ನ । ಪಟಾದೌ ಅದರ್ಶನಾತ್ । ಸದ್ಬುದ್ಧಿರಪಿ ನಷ್ಟೇ ಘಟೇ ನ ದೃಶ್ಯತೇ ಇತಿ ಚೇತ್ । ನ । ವಿಶೇಷ್ಯಾಭಾವಾತ್ । ಸದ್ಬುದ್ಧಿಃ ವಿಶೇಷಣವಿಷಯಾ ಸತೀ ವಿಶೇಷ್ಯಾಭಾವೇ ವಿಶೇಷಣಾನುಪಪತ್ತೌ ಕಿಂವಿಷಯಾ ಸ್ಯಾತ್? ನ ತು ಪುನಃ ಸದ್ಬುದ್ಧೇರ್ವಿಷಯಾಭಾವಾತ್ । ಏಕಾಧಿಕರಣತ್ವಂ ಘಟಾದಿವಿಶೇಷ್ಯಾಭಾವೇ ನ ಯುಕ್ತಮ್ ಇತಿ ಚೇತ್ । ನ । "ಇದಮ್ ಉದಕಮ್[7] ಇತಿ ಮರೀಚ್ಯಾದೌ ಅನ್ಯತರಾಭಾವೇಽಪಿ ಸಾಮಾನಾಧಿಕರಣ್ಯದರ್ಶನಾತ್ ॥

---

1. ಒಂದೇ ವಸ್ತುವಿನ ವಿಷಯವಾಗಿ.

2. ಗಡಿಗೆ ಎಂದಿಷ್ಟೇ ತೋರಿದರೂ 'ಇರುವ' ಎಂಬ ಬುದ್ಧಿಯು ಅದರಲ್ಲಿ ಅಡಕವಾಗಿಯೇ ಇರುತ್ತದೆ.

3. ಬಾಧಿತವಾಗುತ್ತಿರುವದು.

4. "ನಾಸತೋ ವಿದ್ಯತೇ ಭಾವಃ" ಎಂಬುದರ ವ್ಯಾಖ್ಯಾನದಲ್ಲಿ.

5. "ನಾಭಾವೋ ವಿದ್ಯತೇ ಸತಃ" ಎಂಬುದರ ಅಭಿಪ್ರಾಯವಿದು. ಅಸತ್ತಾದ ಗಡಿಗೆಯೇ ಮುಂತಾದವುಗಳಲ್ಲಿ ತೋರುವ ಸದ್ಬುದ್ಧಿಯು ಆತ್ಮವಿಷಯಕವಾದದ್ದು; ಏಕೆಂದರೆ ಆತ್ಮನಿಗಿಂತ ಬೇರೆಯಾದ ಸದ್ವಸ್ತುವೇ ಇಲ್ಲ ಎಂದು ಭಾವ.

6. "ಅತೋಽನ ವಿನಶ್ಯತಿ । ಅಥ" ಎಂದು ನಿ॥ ಪಾಠದಲ್ಲಿ ಹೆಚ್ಚಾಗಿದೆ.

7. "ಸದಿದಮ್ ಉದಕಮ್" ನಿ॥

(ಭಾಷ್ಯಾರ್ಥ)

ಆಕ್ಷೇಪ :—ಗಡಿಗೆಯು ವಿನಾಶವಾಗಿ ಗಡಿಗೆ ಎಂಬ ಬುದ್ಧಿಯು ಹೋದಾಗ 'ಇರುವ' ಎಂಬ ಬುದ್ಧಿಯೂ ಹೋಗಿಬಿಡುವದಿಲ್ಲವೆ ?

(ಪರಿಹಾರ) :—ಇಲ್ಲ. ಏಕೆಂದರೆ ಬಟ್ಟೆಯೇ ಮುಂತಾದವುಗಳಲ್ಲಿ [1] 'ಇರುವ' ಎಂಬ ಬುದ್ಧಿ(ಯಿರುವದು) ಕಂಡುಬರುತ್ತದೆ. ಆ 'ಇರುವ' ಎಂಬ ಬುದ್ಧಿಗೆ ವಿಶೇಷಣವೇ [2] ವಿಷಯವು.

(ಆಕ್ಷೇಪ) —'ಇರುವ' ಎಂಬ ಬುದ್ಧಿಯಂತೆ 'ಗಡಿಗೆ' ಎಂಬ ಬುದ್ಧಿಯೂ ಬೇರೊಂದು ಗಡಿಗೆಯಲ್ಲಿ ಕಾಣಬರುತ್ತಿರುವದಲ್ಲ !

(ಪರಿಹಾರ) ಹಾಗಲ್ಲ (ಅದು) ಬಟ್ಟೆಯೇ ಮುಂತಾದವುಗಳಲ್ಲಿ ಕಾಣುವದಿಲ್ಲ [3]

(ಆಕ್ಷೇಪ) — 'ಇರುವ' ಎಂಬ ಬುದ್ಧಿಯೂ ನಷ್ಟವಾದ ಗಡಿಗೆಯಲ್ಲಿ ಕಾಣುವದಿಲ್ಲವಲ್ಲ !

(ಪರಿಹಾರ) —ಹಾಗಲ್ಲ. ಏಕೆಂದರೆ (ಅಲ್ಲಿ) ವಿಶೇಷ್ಯವು ಇರುವದಿಲ್ಲ ಇರುವ ಎಂಬ ಬುದ್ಧಿಗೆ ವಿಶೇಷಣವೇ ವಿಷಯವಾಗಿರುವದು (ಹೀಗಿರುವಲ್ಲಿ) ವಿಶೇಷ್ಯವು ಇಲ್ಲದಿದ್ದರೆ ವಿಶೇಷಣವಿರುವದೆಂಬುದು ಹೊಂದುವದಿಲ್ಲವಾಗಿ (ಆ ಬುದ್ಧಿಯು) ಯಾವ ವಿಷಯದಲ್ಲಾಗಬೇಕು ? (ಹೀಗೆ ವಿಶೇಷ್ಯವಿಲ್ಲದ್ದರಿಂದ

---

1. **ಯಾವ ವಸ್ತು** ತೋರಿದರೂ 'ಇರುವ' ಎಂಬ ಬುದ್ಧಿಯು ಅದಕ್ಕೆ ತಗಲಿಕೊಂಡೇ ಇರುತ್ತದೆ 'ಇರುವ' ಎಂಬ ಬುದ್ಧಿಗೆ ಗೋಚರವಾಗದೆ **ಯಾವದೂ** ತೋರಲಾರದು ವಿಚಾರದೃಷ್ಟಿಯಿಂದ ಎಲ್ಲವೂ ಮಿಥ್ಯೆಯೆಂದಾದಾಗಲೂ ಆತ್ಮನು 'ಇರುವ' ಎಂಬ ಬುದ್ಧಿಗೆ ವಿಷಯನಾಗಿರುತ್ತಾನೆ.

2. 'ಇರುವ' ಎಂಬ ಬುದ್ಧಿಗೆ ವಿಶೇಷಣವು ವಿಷಯವೆಂದದ್ದರಿಂದ ಇರುವಿಕೆಯು ನಿಜವಾಗಿರುವ ಗಡಿಗೆಯೇ ಮುಂತಾದವುಗಳ ಧರ್ಮವೆಂದು ಭಾವಿಸಬಾರದು. ವ್ಯವಹಾರದಲ್ಲಿ ಏನೇನು ತೋರಿಕೊಳ್ಳುವದೋ ಅದರಲ್ಲೆಲ್ಲ ಪರಮಾರ್ಥವಾದ ಆತ್ಮನ ಇರವೂ ತೋರಿಕೊಳ್ಳುತ್ತಿರುವದು ಎಂದೇ ಅಭಿಪ್ರಾಯ.

3. ಗಡಿಗೆ ಎಂಬ ಬುದ್ಧಿಗೆ ಗಡಿಗೆ ನಷ್ಟವಾದರೆ ವಿಷಯವಿಲ್ಲದ್ದರಿಂದ ಅದು ಕಾಲಪರಿಚ್ಛಿನ್ನವಾಗಿದೆ ; ಬಟ್ಟೆ ಎಂಬಲ್ಲಿ ಅದು ತೋರದ್ದರಿಂದ ಅದು ದೇಶಪರಿಚ್ಛಿನ್ನವೂ ಆಗಿದೆ. ಗಡಿಗೆಯನ್ನು ಪರೀಕ್ಷಿಸಿದರೆ ಅದು ಮಣ್ಣಿಗಿಂತ ಬೇರೆಯಾಗಿ ಇಲ್ಲದೆ ಇರುವದರಿಂದ ಅದು ಅಸದ್ವಿಷಯಕವಾದ ಬುದ್ಧಿಯೂ ಆಗಿದೆ.

'ಇರುವ' ಎಂಬ ಬುದ್ಧಿಯಾಗುವದಿಲ್ಲವೇ ಹೊರತು) ಇರುವ ಎಂಬ ಬುದ್ಧಿಗೆ ವಿಷಯವೇ (ಎಲ್ಲಿಯೂ) ಇಲ್ಲದ್ದರಿಂದಲ್ಲ.[1]

(ಆಕ್ಷೇಪ) :—ಗಡಿಗೆಯೇ ಮುಂತಾದ ವಿಶೇಷ್ಯವು (ನಿಜವಾಗಿ) ಇಲ್ಲವಾದರೆ[2] (ಇರುವ ಗಡಿಗೆ ಎಂದು ಎರಡು ಬುದ್ಧಿಗಳು) ಒಂದೇ ವಸ್ತುವಿನ ವಿಷಯದಲ್ಲಿ ತೋರುವದು ಯುಕ್ತವಾಗುವದಿಲ್ಲವಲ್ಲ ![3]

(ಪರಿಹಾರ) :—ಹಾಗಲ್ಲ. ಏಕೆಂದರೆ ಬಿಸಿಲುಕುದುರೆಯೇ ಮುಂತಾದವುಗಳಲ್ಲಿ (ವಿಶೇಷಣವಿಶೇಷ್ಯಗಳಲ್ಲಿ) ಒಂದು (ನಿಜವಾಗಿ) ಇಲ್ಲದಿದ್ದರೂ[4] 'ಇದು ನೀರು' ಎಂದು (ಎರಡು ಬುದ್ಧಿಗಳಿಗೂ) ಸಾಮಾನಾಧಿಕರಣ್ಯ(ವಿರುವದು) ಕಂಡು ಬರುತ್ತದೆ.

(ಭಾಷ್ಯ)

೨೪ ತಸ್ಮಾತ್ ದೇಹಾದೇಃ ದ್ವನ್ದ್ವಸ್ಯ ಚ ಸಕಾರಣಸ್ಯ ಅಸತೋ ನ ವಿದ್ಯತೇ ಭಾವಃ ಇತಿ । ತಥಾ ಸತಶ್ಚ ಆತ್ಮನಃ ಅಭಾವಃ ಅವಿದ್ಯಮಾನತಾ ನ ವಿದ್ಯತೇ । ಸರ್ವತ್ರ ಅವ್ಯಭಿಚಾರಾತ್ ಇತ್ಯವೋಚಾಮ । ಏವಮ್ ಆತ್ಮಾನಾತ್ಮನೋಃ ಸದಸತೋಃ ಉಭಯೋರಪಿ ದೃಷ್ಟಃ ಉಪಲಬ್ಧಃ ಅನ್ತಃ ನಿರ್ಣಯಃ 'ಸತ್ ಸದೇವ, ಅಸತ್ ಅಸದೇವ' ಇತಿ ತು ಅನಯೋಃ ಯಥೋಕ್ತಯೋಃ ತತ್ತ್ವದರ್ಶಿಭಿಃ । ತತ್ ಇತಿ ಸರ್ವನಾಮ । ಸರ್ವಂ ಚ ಬ್ರಹ್ಮ ತಸ್ಯ ನಾಮ ತತ್

1 ಇರುವ ಎಂಬ ಬುದ್ಧಿಗೆ ವಿಷಯವೇ ಇಲ್ಲವೆಂದು ತೋರಿಸುವದಕ್ಕೆ ಯಾರಿಂದಲೂ ಆಗುವದಿಲ್ಲ, ಹಾಗೆ ತೋರಿಸುವದಕ್ಕೆ ಯತ್ನಿಸುವವರ ಸ್ವರೂಪವಾದರೂ ಅದಕ್ಕೆ ವಿಷಯವಾಗಿರುತ್ತದೆ. ಈ ಬುದ್ಧಿಗೆ ನಿಜವಾಗಿಯೋ ಅಥವಾ ಸುಳ್ಳಾಗಿಯೋ ಒಂದು ವಿಶೇಷ್ಯವು ತೋರಿಕೊಳ್ಳುವದು ಮಾತ್ರ ಅವಶ್ಯವಾಗಿರುತ್ತದೆ

2 ಗಡಿಗೆ ಮುಂತಾದವುಗಳಿಲ್ಲದಿದ್ದರೆ ಎಂದರೆ ನಾಶವಾದರೆ ಎಂದರ್ಥವಲ್ಲ, ನೀವು ಹೇಳುವಂತೆ ಪರಮಾರ್ಥವಾಗಿಲ್ಲದಿದ್ದರೆ ಎಂದರ್ಥ.

3. 'ಇರುವ ಗಡಿಗೆ' ಎಂಬ ಎರಡು ಬುದ್ಧಿಗಳಲ್ಲಿ ಒಂದರ ವಿಷಯವು ಸತ್ತು, ನಿಜವಾಗಿರುವದು, ಇನ್ನೊಂದರ ವಿಷಯವಾದ 'ಗಡಿಗೆ' ಎಂಬುದು ಅಸತ್ತು ಎಂಬುದು ಹೇಗೆ ಸರಿ ? ಗಡಿಗೆಯು ನಿಜವಾಗಿರದಿದ್ದರೆ ಎರಡು ಬುದ್ಧಿಗಳಾದದ್ದು ಹೇಗೆ ?– ಎಂದು ಆಕ್ಷೇಪ.

4. ದೃಷ್ಟಾಂತದಲ್ಲಿ ಒಂದು ಬುದ್ಧಿಯು ವ್ಯಾವಹಾರಿಕಸತ್ತಾದ ವಸ್ತುವನ್ನು ತಿಳಿಸುತ್ತದೆ ; ಇನ್ನೊಂದು ಹುಸಿತೋರಿಕೆಯಾದ ಪ್ರಾತಿಭಾಸಿಕವಾದ ನೀರನ್ನು ತಿಳಿಸುತ್ತದೆ. ಇದರಂತೆ ಇರುವ ಎಂಬ ಬುದ್ಧಿಯು ಪರಮಾರ್ಥವಾಗಿರುವ ವಸ್ತುವನ್ನೂ ಗಡಿಗೆ ಮುಂತಾದ ಬುದ್ಧಿಗಳು ಪರಮಾರ್ಥವಾಗಿಲ್ಲದ ಹುಸಿತೋರಿಕೆಯ ಪದಾರ್ಥಗಳನ್ನೂ ತೋರಿಸುತ್ತವೆ ಎಂದು ಭಾವ.

ಇತಿ । ತದ್ಭಾವಃ ತತ್ತ್ವಮ್ । ಬ್ರಹ್ಮಣೋ ಯಾಥಾತ್ಮ್ಯಮ್ । ತತ್ ದ್ರಷ್ಟುಂ ಶೀಲಂ ಯೇಷಾಂ ತೇ ತತ್ತ್ವದರ್ಶಿನಃ । ತೈಃ ತತ್ತ್ವದರ್ಶಿಭಿಃ[1] । ತ್ವಮಪಿ ತತ್ತ್ವದರ್ಶಿನಾಂ ದೃಷ್ಟಿಮ್ ಆಶ್ರಿತ್ಯ ಶೋಕಂ ಮೋಹಂ ಚ ಹಿತ್ವಾ ಶೀತೋಷ್ಣಾದೀನಿ ನಿಯತಾನಿಯತರೂಪಾಣಿ ದ್ವಂದ್ವಾನಿ " ವಿಕಾರೋಽಯಮ್ ಅಸನ್ನೇವ ಮರೀಚಿ ಜಲವತ್ ಮಿಥ್ಯಾವಭಾಸತೇ" ಇತಿ ಮನಸಿ ನಿಶ್ಚಿತ್ಯ[2] ತಿತಿಕ್ಷಸ್ವ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಆದ್ದರಿಂದ ಕಾರಣವುಳ್ಳ (ವಾಗಿರುವದರಿಂದ) ದೇಹಾದಿಗಳು ಮತ್ತು ದ್ವಂದ್ವಗಳು ಎಂಬ ಅಸತ್ತಿಗೆ ಇರುವಿಕೆಯಿಲ್ಲ. ಮತ್ತು ಸತ್ತಿಗೆ ಎಂದರೆ ಆತ್ಮನಿಗೆ ಅಭಾವವು ಇಲ್ಲದಿರುವಿಕೆಯು ಇಲ್ಲ , ಏಕೆಂದರೆ (ಅವನು ಸ್ವರೂಪದಿಂದ) ಎಲ್ಲಿಯೂ ಬೇರ್ಪಡುವದಿಲ್ಲ ಎಂದು (ಆಗಲೆ) ಹೇಳಿರುತ್ತೇವೆ.

ಹೀಗೆ ಆತ್ಮ , ಅನಾತ್ಮ–ಎಂಬ ಸತ್ತು, ಅಸತ್ತು (ಈ) ಎರಡರ ಅಂತವೂ ನಿರ್ಣಯವೂ ' ಸತ್ತು ಇದ್ದೇ ಇರುವದು, ಅಸತ್ತು ಇರುವದೇ ಇಲ್ಲ ' ಎಂದು ಈ ಮೇಲೆ ಹೇಳಿದ ಎರಡರ (ನಿರ್ಣಯವೂ) ತತ್ತ್ವದರ್ಶಿಗಳಿಂದ ದೃಷ್ಟವಾಗಿರುತ್ತದೆ, ಅರಿಯಲ್ಪಟ್ಟಿರುತ್ತದೆ ತತ್ ಎಂಬುದು ಸರ್ವನಾಮವು , ಸರ್ವವೂ ಬ್ರಹ್ಮವಾದ್ದರಿಂದ ಅದಕ್ಕೆ ತತ್ ಎಂದು ಹೆಸರು.[3] ಆ (ಬ್ರಹ್ಮದ) ಸ್ವರೂಪವು ತತ್ತ್ವವು ಎಂದರೆ ಬ್ರಹ್ಮದ ನಿಜವಾದ ಸ್ವರೂಪವು. ಅದನ್ನು ತಿಳಿಯುವ ಸ್ವಭಾವವುಳ್ಳವರು ಯಾರೋ ಅವರು ತತ್ತ್ವದರ್ಶಿಗಳು. ನೀನೂ (ಅಂಥ) ತತ್ತ್ವದರ್ಶಿಗಳ ದೃಷ್ಟಿಯನ್ನು ಆಶ್ರಯಿಸಿಕೊಂಡು ಶೋಕವನ್ನೂ ಮೋಹವನ್ನೂ ಬಿಟ್ಟು ಶೀತೋಷ್ಣಗಳೇ ಮುಂತಾದ ನಿಯತರೂಪವಾಗಿಯೂ ಅನಿಯತರೂಪವಾಗಿಯೂ ಇರುವ[4] ದ್ವಂದ್ವಗಳನ್ನು–' ಇದು ಕಾರ್ಯವಾದ್ದರಿಂದ ಬಿಸಿಲುಕುದುರೆಯ ನೀರಿನಂತೆ ಅಸತ್ತೇ ಆಗಿದ್ದು ಹುಸಿಯಾಗಿ ತೋರುತ್ತಿದೆ " ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ತಡೆದುಕೊ ಎಂದು ಅಭಿಪ್ರಾಯವು.

---

1. " ತೈಃ ತತ್ ತ್ವಮಪಿ " ಎಂದು ನಿ॥

2. ಈ ಅನುವಾದ ಚಿಹ್ನೆಯೊಳಗಿನ ಭಾಗವು ಮ॥ಮೈ॥ ಪಾಠಗಳಲ್ಲಿಲ್ಲ. ' ನಿಯತಾನಿಯತರೂಪಾಣಿ ದ್ವಂದ್ವಾನಿ ' ಎಂಬುದೂ ಇಲ್ಲ.

3. ೧೭–೨೩.

4. ಶೀತೋಷ್ಣಾದಿಗಳು ಅನಿಯತ ; ಸುಖದುಃಖಗಳು ನಿಯತ ; ಈ ಅಧ್ಯಾಯದ ೧೪ನೆಯ ಶ್ಲೋಕದ ಭಾಷ್ಯವನ್ನು ನೋಡಿ.

(ಭಾಷ್ಯ)

೨೫. ಕಿಂ ಪುನಸ್ತತ್ ಯತ್ ಸದೇವ ಸರ್ವದಾ ಅಸ್ತಿ[1] ಇತಿ ? ಉಚ್ಯತೇ–

(ಭಾಷ್ಯಾರ್ಥ)

ಹಾಗಾದರೆ ಯಾವಾಗಲೂ ಇದ್ದುಕೊಂಡಿರುವದರಿಂದ ಸತ್ತೇ ಆಗಿರುವದೆಂಬುದು ಯಾವದು ? ಎಂದರೆ (ಭಗವಂತನು) ಹೇಳುತ್ತಾನೆ.—

**ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್ |**
**ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ || ೧೭ ||**

೧೭. ಯಾವದರಿಂದಲಾದರೆ ಇದೆಲ್ಲವೂ ವ್ಯಾಪ್ತವಾಗಿರುವದೋ ಅದನ್ನು ಅವಿನಾಶಿ ಎಂದು ತಿಳಿದುಕೊ. ಅವ್ಯಯವಾಗಿರುವ ಇದರ ವಿನಾಶವನ್ನು ಯಾವನೂ ಮಾಡಲಾರನು.

(ಭಾಷ್ಯ)

೨೬. ಅವಿನಾಶಿ ನ ವಿನಷ್ಟುಂ ಶೀಲಮ್ ಅಸ್ಯೇತಿ | ತುಶಬ್ದಃ ಅಸತೋ ವಿಶೇಷಣಾರ್ಥಃ | ತತ್ ವಿದ್ಧಿ ವಿಜಾನೀಹಿ | ಕಿಮ್ ? ಯೇನ ಸರ್ವಮಿದಂ ಜಗತ್ ತತಂ ವ್ಯಾಪ್ತಂ ಸದಾಖ್ಯೇನ[2] ಬ್ರಹ್ಮಣಾ ಸಾಕಾಶಮ್ ಆಕಾಶೇನೇವ ಘಟಾದಯಃ | ವಿನಾಶಮ್ ಅದರ್ಶನಮ್ ಅಭಾವಮ್ ಅವ್ಯಯಸ್ಯ | ನ ವ್ಯೇತಿ ಉಪಚಯಾಪಚಯೌ ನ ಯಾತಿ ಇತಿ ಅವ್ಯಯಮ್ ತಸ್ಯ ಅವ್ಯಯಸ್ಯ |[3] ನೈತತ್ ಸದಾಖ್ಯಂ ಬ್ರಹ್ಮ ಸ್ವೇನ ರೂಪೇಣ ವ್ಯೇತಿ ವ್ಯಭಿಚರತಿ। ನಿರವಯವತ್ವಾದ್ ದೇಹಾದಿವತ್ । ನಾಪಿ ಆತ್ಮೀಯೇನ । ಆತ್ಮೀಯಾಭಾವಾತ್ । ಯಥಾ ದೇವದತ್ತೋ ಧನಹಾನ್ಯಾ ವ್ಯೇತಿ ನ ತ್ವೇವಂ ಬ್ರಹ್ಮ ವ್ಯೇತಿ । ಅತಃ ಅವ್ಯಯಸ್ಯ ಅಸ್ಯ ಬ್ರಹ್ಮಣಃ ವಿನಾಶಂ ನ ಕಶ್ಚಿತ್ ಕರ್ತುಮ್ ಅರ್ಹತಿ । ನ ಕಶ್ಚಿತ್ ಆತ್ಮಾನಂ

1 " ಸರ್ವದೈವಾಸ್ತೀತಿ ನಿ॥ ಗು॥ ; " ಸರ್ವದೈವ ಸದಿತಿ " ಮ॥ ; " ಸರ್ವದಾ ಇತಿ " ಮೈ॥

2. " ವಿಷ್ಣ್ವಾಖ್ಯೇನ " ಎಂಬ ಮ॥ ಪಾಠವು ಅಪ್ರಕೃತ.

3. ' ನ ವ್ಯೇತಿ ' ಎಂಬುದರಿಂದ ಹಿಡಿದು ಇಲ್ಲಿಯವರೆಗಿನ ವಾಕ್ಯವು ಮ॥ಮೈ॥ ಪಾಠಗಳಲ್ಲಿಲ್ಲ.

ವಿನಾಶಯಿತುಂ ಶಕ್ನೋತಿ ಈಶ್ವರೋಽಪಿ । ಆತ್ಮಾ ಹಿ ಬ್ರಹ್ಮ । ಸ್ವಾತ್ಮನಿ ಚ ಕ್ರಿಯಾವಿರೋಧಾತ್ । ಯಥಾ ಚಕ್ಷುರ್ಗತರೇಖಾಃ ಚಕ್ಷುರ್ನ ಪಶ್ಯತಿ ||[1]

(ಭಾಷ್ಯಾರ್ಥ)

ಅವಿನಾಶಿ ಎಂದರೆ ವಿನಾಶವಾಗುವ ಸ್ವಭಾವವಿಲ್ಲದ್ದು. (ಮೂಲದಲ್ಲಿರುವ) 'ತು' (ಆದರೆ) ಎಂಬ ಶಬ್ದವು (ಇದು) ಅಸತ್ತಿಗಿಂತ ಬೇರೆ[2] ಎಂದು ತಿಳಿಸುವದಕ್ಕೆ (ಬಂದಿದೆ). ಅದನ್ನು (ನಾಶವಿಲ್ಲದ್ದೆಂದು) ತಿಳಿದುಕೊ, ಅರಿತುಕೊ. ಯಾವದನ್ನು? ಎಂದರೆ ಗಡಿಗೆ ಮುಂತಾದವು ಆಕಾಶದಿಂದ (ಹೇಗೆ ವ್ಯಾಪಿಸಲ್ಪಟ್ಟಿರುವವೋ) ಹಾಗೆ ಆಕಾಶದಿಂದೊಡಗೂಡಿದ[3] ಈ ಜಗತ್ತೆಲ್ಲವೂ ಯಾವ ಸತ್ತೆಂಬ ಬ್ರಹ್ಮದಿಂದ 'ತತಮ್' ವ್ಯಾಪ್ತವಾಗಿರುವದೋ (ಅದರ) ವಿನಾಶವನ್ನು (ಅದು) ಕಾಣದಂತೆ (ಅದರ) ಅಭಾವವನ್ನು (ಮಾಡುವದಕ್ಕೆ). ಅವ್ಯಯವಾದ–ವ್ಯಯವಾಗುವದಿಲ್ಲ, ಎಂದರೆ ಹೆಚ್ಚುಕುಂದುಗಳನ್ನು ಹೊಂದುವದಿಲ್ಲ, ಆದ್ದರಿಂದ (ಇದು) **ಅವ್ಯಯ**ವೆನಿಸಿರುವದು. ಅಂಥ (ಈ) ಅವ್ಯಯದ (ವಿನಾಶವನ್ನು ಯಾರೂ ಮಾಡಲಾರರು). ಈ ಸತ್ತೆಂಬ ಹೆಸರಿನ ಬ್ರಹ್ಮವು ತನ್ನ ರೂಪದಿಂದ ವ್ಯಯವಾಗುವದಿಲ್ಲ, ಎಂದರೆ ಬೇರ್ಪಡುವದಿಲ್ಲ, ಏಕೆಂದರೆ ಇದರಲ್ಲಿ ದೇಹಾದಿಗಳಲ್ಲಿರುವಂತೆ ಅವಯವಗಳಿರುವದಿಲ್ಲ (ಇದು) ತನ್ನದಾದ ಯಾವದಾದರೊಂದು ವ್ಯಯವಾಗುವದರ ಮೂಲಕವೂ ವ್ಯಯವಾಗುವದಿಲ್ಲ, ಏಕೆಂದರೆ (ಇದಕ್ಕೆ) ತನ್ನದೆಂಬುದೇ ಇರುವದಿಲ್ಲ. ಉದಾಹರಣೆಗೆ ದೇವದತ್ತನು (ತನ್ನ) ಧನವು ನಾಶವಾಗುವದರಿಂದ ನಾಶವಾಗುತ್ತಾನೆ, ಆದರೆ ಬ್ರಹ್ಮವು ಹಾಗೆ ನಾಶವಾಗುವದಿಲ್ಲ ಆದ್ದರಿಂದ (ಹೀಗೆ) ಅವ್ಯಯವಾಗಿರುವ–ಈ ಬ್ರಹ್ಮವನ್ನು ನಾಶಮಾಡುವದಕ್ಕೆ ಯಾರಿಂದಲೂ ಆಗಲಾರದು. ಯಾವನೂ–ಈಶ್ವರನುಕೂಡ ಈ ಆತ್ಮನನ್ನು ನಾಶಮಾಡಲಾರನು ಏಕೆಂದರೆ ಬ್ರಹ್ಮವು ಆತ್ಮನೇ[4] ಆಗಿರುತ್ತದೆ. ತನ್ನ ವಿಷಯದಲ್ಲಿ ತನ್ನ ಕ್ರಿಯೆ ನಡೆಯುವದೆಂಬುದು ವಿರುದ್ಧವೂ ಆಗಿರುತ್ತದೆ. ದೃಷ್ಟಾಂತಕ್ಕೆ ಕಣ್ಣು ಕಣ್ಣಿನಲ್ಲಿರುವ ಗೆರೆಗಳನ್ನು ನೋಡಲಾರದು.

---

1. ಈ ವಾಕ್ಯವು ಮು|| ಮೈ|| ಪಾಠಗಳಲ್ಲಿ ಮಾತ್ರ ಇರುತ್ತದೆ.

2. "ಸತೋ ವಿಶೇಷಣಾರ್ಥಃ" ಎಂಬ ಸಿ|| ಪಾಠವು ಸರಿಯಲ್ಲ

3. "ಆಕಾಶದಂತೆ ಸರ್ವಗತನಾಗಿರುತ್ತಾನೆ" ಎಂಬ ಶ್ರುತಿಯ ಅಭಿಪ್ರಾಯವನ್ನು ಸೂಚಿಸಿ ಆಕಾಶದೃಷ್ಟಾಂತವನ್ನು ಕೊಟ್ಟಿದೆ. ಆಕಾಶವು ವ್ಯವಹಾರದಲ್ಲಿ ಸರ್ವಗತವೆಂದು ಪ್ರಸಿದ್ಧ.

4. ಆತ್ಮನೇ ಇಲ್ಲಿ ಪ್ರಕೃತ ಬ್ರಹ್ಮಕ್ಕೆ ನಾಶವಿಲ್ಲವೆಂದರೆ ಆತ್ಮನಿಗೇ ನಾಶವಿಲ್ಲವೆಂದಂತೆ ಆಯಿತು.

(ಭಾಷ್ಯ)

೨೭. ಕಿಂ ಪುನಸ್ತದಸತ್ ಯತ್ ಸ್ವಾತ್ಮಸತ್ತಾಂ ವ್ಯಭಿಚರತಿ ಇತಿ? ಉಚ್ಯತೇ—

(ಭಾಷ್ಯಾರ್ಥ)

ಇನ್ನು ತನ್ನ ಸ್ವರೂಪದ ಇರವನ್ನು ಬೇರ್ಪಡಿಸಿಕೊಳ್ಳುತ್ತಿರುವ ಅಸತ್ತೆಂಬುದು ಯಾವದು ?-ಎಂದರೆ ಹೇಳುತ್ತಾನೆ.—

**ಅನ್ತವನ್ತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।**
**ಅನಾಶಿನೋಽಪ್ರಮೇಯಸ್ಯ ತಸ್ಮಾದ್ ಯುಧ್ಯಸ್ವ ಭಾರತ ॥೧೮॥**

೧೮ ನಿತ್ಯನಾಗಿಯೂ ಅನಾಶಿಯಾಗಿಯೂ ಅಪ್ರಮೇಯನಾಗಿಯೂ ಇರುವ ಶರೀರಿಯ ಈ ದೇಹಗಳು ಅಂತವುಳ್ಳವುಗಳೆನಿಸುತ್ತವೆ. ಆದ್ದರಿಂದ ಎಲೈ ಭರತವಂಶೋತ್ಪನ್ನನೆ, ಯುದ್ಧಮಾಡು.

(ಭಾಷ್ಯ)

೨೮. ಅನ್ತವನ್ತಃ ಅನ್ತಃ ವಿನಾಶಃ ವಿದ್ಯತೇ ಯೇಷಾಂ ತೇ ಅನ್ತವನ್ತಃ । ಯಥಾ ಮೃಗತೃಷ್ಣಿಕೋದಕಾದೌ[1] ಸದ್ಬುದ್ಧಿರನುವೃತ್ತಾ ಪ್ರಮಾಣನಿರೂಪಣಾನ್ತೇ ವಿಚ್ಛಿದ್ಯತೇ ಸ ತಸ್ಯ[2] ಅನ್ತಃ ತಥಾ ಇಮೇ ದೇಹಾಃ ಸ್ವಪ್ನಮಾಯಾದಿದೇಹವಚ್ಚ[3] ಅನ್ತವನ್ತಃ । ನಿತ್ಯಸ್ಯ ಶರೀರಿಣಃ ಶರೀರವತಃ, ಅನಾಶಿನಃ ಅಪ್ರಮೇಯಸ್ಯ ಆತ್ಮನಃ ಅನ್ತವನ್ತಃ ಇತ್ಯುಕ್ತಾಃ ವಿವೇಕಿಭಿಃ ಇತ್ಯರ್ಥಃ । 'ನಿತ್ಯಸ್ಯ', 'ಅನಾಶಿನಃ' ಇತಿ ನ ಪುನರುಕ್ತಮ್ । ನಿತ್ಯತ್ವಸ್ಯ ದ್ವಿವಿಧತ್ವಾತ್ ಲೋಕೇ, ನಾಶಸ್ಯ ಚ। ಯಥಾ ದೇಹೋ ಭಸ್ಮೀಭೂತೋ ಅದರ್ಶನಂ ಗತೋ ನಷ್ಟ ಉಚ್ಯತೇ । ವಿದ್ಯಮಾನೋಽಪಿ ಅನ್ಯಥಾ ಪರಿಣತೋ ವ್ಯಾಧ್ಯಾದಿಯುಕ್ತೋ ಜಾತೋ ನಷ್ಟ ಉಚ್ಯತೇ । ತತ್ರ ಅನಾಶಿನಃ ನಿತ್ಯಸ್ಯ ಇತಿ ದ್ವಿವಿಧೇನಾಪಿ ನಾಶೇನ ಅಸಂಬದ್ಧಸ್ಯ[4] ಇತ್ಯರ್ಥಃ । ಅನ್ಯಥಾ ಪೃಥಿವ್ಯಾದಿವದಪಿ ನಿತ್ಯತ್ವಂ ಸ್ಯಾತ್ ಆತ್ಮನಃ । ತನ್ಮಾ ಭೂತ್ ಇತಿ ನಿತ್ಯಸ್ಯ ಅನಾಶಿನಃ ಇತ್ಯಾಹ ॥

1 "ಮೃಗತೃಷ್ಣಿಕಾದೌ" ಎಂಬ ಪಾಠಕ್ಕಿಂತ ಈ ನಿ॥ ಪಾಠವು ಮೇಲು

2. "ತಸ್ಯಾಃ" ಎಂಬ ಪಾಠಕ್ಕಿಂತ ಈ ಮೈ॥ಮು॥ಗು॥ ಪಾಠವು ಉತ್ತಮ.

3. "ಸ್ವಪ್ನಮಾಯಾದೇಹಾದಿವತ್" ಆ॥ನಿ॥ಗು॥, "ಸ್ವಪ್ನಮಾಯಾದಿದೇಹಾದಿವತ್" ಮೈ॥—ಎಂಬ ಪಾಠಗಳಿಗಿಂತ ಈ ಪಾಠವು ಉತ್ತಮವೆಂದು ಕಲ್ಪಿಸಿದೆ.

4. "ಅಸಂಬನ್ಧೋಽಸ್ಯ" ಆ॥ನಿ॥ ಪಾಠಕ್ಕಿಂತ ಈ ಗು॥ಮು॥ಮೈ॥ ಪಾಠವು ಉತ್ತಮ.

(ಭಾಷ್ಯಾರ್ಥ)

ಯಾವವುಗಳಿಗೆ ಅಂತವು ಎಂದರೆ ವಿನಾಶವು ಇರುವದೋ ಅವು ಅಂತವುಳ್ಳವುಗಳು. ಹೇಗೆಂದರೆ ಬಿಸಿಲುಕುದುರೆಯ ನೀರೇ ಮುಂತಾದದ್ದರಲ್ಲಿ ಇದೆ ಎಂಬ ಬುದ್ಧಿಯು ತೋರಿಕೊಂಡು ಬಂದಿದ್ದು ಪ್ರಮಾಣದಿಂದ (ಪರೀಕ್ಷಿಸಲು ಆ) ಪರೀಕ್ಷೆಯ ಕೊನೆಯಲ್ಲಿ ಕಡಿದುಹೋಗುತ್ತದೆ, ಅದು ಅದರ[1] ಅಂತವು. ಅದರಂತೆಯೂ ಕನಸು, ಮಾಯೆ–ಮುಂತಾದವುಗಳಲ್ಲಿ (ತೋರುವ) ದೇಹದಂತೆಯೂ ಈ ದೇಹಗಳು ಅಂತವುಳ್ಳವುಗಳು[2] ನಿತ್ಯನಾಗಿಯೂ ನಾಶವಿಲ್ಲದವನಾಗಿಯೂ ಅಪ್ರಮೇಯನಾಗಿಯೂ ಇರುವ ಶರೀರಿಯ ಎಂದರೆ ಶರೀರವುಳ್ಳ[3] ಆತ್ಮನ (ಈ ದೇಹಗಳು) ವಿವೇಕಿಗಳಿಂದ ಅಂತವುಳ್ಳವುಗಳು ಎನಿಸಿಕೊಂಡಿರುತ್ತವೆ ಎಂದರ್ಥ.

“ ನಿತ್ಯನಾಗಿಯೂ ನಾಶವಿಲ್ಲದವನಾಗಿಯೂ ” ಎಂದು (ಹೇಳಿದ್ದರಲ್ಲಿ) ಪುನರುಕ್ತಿ (ಎಂಬ ದೋಷವೇನೂ) ಇಲ್ಲ. ಏಕೆಂದರೆ ನಿತ್ಯತ್ವವೂ ನಾಶವೂ ಲೋಕದಲ್ಲಿ ಎರಡು ಬಗೆಯಾಗಿರುತ್ತದೆ ಹೇಗೆಂದರೆ, ದೇಹವು ಬೂದಿಯಾಗಿ ಕಾಣದೆ ಹೋದರೆ ‘ ನಾಶವಾಯಿತು ’ ಎನ್ನುತ್ತಾರೆ, (ಅದು) ಇದ್ದುಕೊಂಡು ರೋಗಾದಿಗಳುಳ್ಳದ್ದಾಗಿ ಬೇರೆ ಮಾರ್ಪಾಡನ್ನು ಹೊಂದಿದರೂ ‘ ನಾಶವಾಯಿತು ’ ಎನ್ನುತ್ತಾರೆ. ಹೀಗಿರುವದರಿಂದ ‘ನಾಶವಿಲ್ಲದವನಾಗಿಯೂ ನಿತ್ಯನಾಗಿಯೂ ’ ಎಂದರೆ (ಈ) ಎರಡು ಬಗೆಯ ನಾಶದ ಸಂಬಂಧವೂ ಇಲ್ಲದವನಾದ ಎಂದರ್ಥ ಹೀಗೆ (ಹೇಳದೆ) ಇದ್ದರೆ ಆತ್ಮನು ಪೃಥ್ವಿ ಮುಂತಾದವುಗಳಂತೆ ನಿತ್ಯನೆಂದೂ (ಅರ್ಥ)ವಾಗಬಹುದಾಗಿತ್ತು.[4] ಹಾಗಾಗದೆ ಇರಲೆಂದು ನಿತ್ಯನಾಗಿಯೂ ನಾಶವಿಲ್ಲದವನಾಗಿಯೂ ’ ಎಂದು ಹೇಳಿರುತ್ತಾನೆ.

---

1. ಬಿಸಿಲುಕುದುರೆಯ ನೀರಿನ ಎಂದರ್ಥ ಏಕೆಂದರೆ ನೀರೇ ನಿಜವಾಗಿದೆ ಎಂದು ತೋರಿ ಆಮೇಲೆ ನಿಜವಲ್ಲವೆಂದಾಗುತ್ತದೆ.

2. ಅಂತವೆಂದರೆ ಬರಿಯ ನಾಶವೆಂದಿಷ್ಟೇ ಅರ್ಥವಲ್ಲ; ಸತ್ಯತ್ವಬುದ್ಧಿ ನಾಶವಾಗುವದು ಎಂದೂ ಅರ್ಥ. ೧೬ನೆಯ ಶ್ಲೋಕದಲ್ಲಿ ‘ ಅಸತ್ ’ ಎಂದು ಪ್ರಾರಂಭಿಸಿರುವದಕ್ಕೆ ಅನುಗುಣವಾಗಿ ಈ ಅರ್ಥವನ್ನು ಮಾಡಿದೆ. ಆತ್ಮನು ಶರೀರಿಯಾಗಿ ತೋರಿದರೂ ಅಶರೀರಿಯೇ ಎಂಬ ಅರ್ಥಸ್ವಾರಸ್ಯವು ಇದರಿಂದ ಹೊರಡುತ್ತದೆ.

3. ಶರೀರಕ್ಕಿಂತ ಬೇರೆಯ ಸ್ವಭಾವವುಳ್ಳ.

4. ಪೃಥ್ವಿ ಮುಂತಾದವು ಮಾರ್ಪಡುತ್ತಿದ್ದರೂ ಅದೇ ಇದು ಎಂಬ ಬುದ್ಧಿಗೆ ವಿಷಯವಾಗಿರುವದರಿಂದ ನಿತ್ಯವೆಂದು ಸಾಂಖ್ಯರೆನ್ನುತ್ತಾರೆ. ಆದರೆ ಆತ್ಮನು ಇಂಥ ನಿತ್ಯನಲ್ಲ.

(ಭಾಷ್ಯ)

೨೯. ಅಪ್ರಮೇಯಸ್ಯ ನ ಪ್ರಮೇಯಸ್ಯ । ಪ್ರತ್ಯಕ್ಷಾದಿಪ್ರಮಾಣೈರಪರಿಚ್ಛೇದ್ಯಸ್ಯ ಇತ್ಯರ್ಥಃ । ನನು ಆಗಮೇನ ಆತ್ಮಾ ಪರಿಚ್ಛಿದ್ಯತೇ, ಪ್ರತ್ಯಕ್ಷಾದಿನಾ ಚ ಪೂರ್ವಮ್ । ನ । ಆತ್ಮನಃ ಸ್ವತಃಸಿದ್ಧತ್ವಾತ್ । ಸಿದ್ಧೇ ಹಿ ಆತ್ಮನಿ ಪ್ರಮಾತರಿ ಪ್ರಮಿತ್ಸೋಃ ಪ್ರಮಾಣಾನ್ವೇಷಣಾ ಭವತಿ । ನ ಹಿ ಪೂರ್ವಮ್ 'ಇತ್ಥಮಹಮ್' ಇತಿ ಆತ್ಮಾನಮ್ ಪ್ರಮಾಯ [1] ಪಶ್ಚಾತ್ ಪ್ರಮೇಯಪರಿಚ್ಛೇದಾಯ ಪ್ರವರ್ತತೇ । ನ ಹಿ ಆತ್ಮಾ ನಾಮ ಕಸ್ಯಚಿತ್ ಅಪ್ರಸಿದ್ಧೋ ಭವತಿ । ಶಾಸ್ತ್ರಂ ತು ಅನ್ತ್ಯಂ ಪ್ರಮಾಣಮ್ ಅತದ್ಧರ್ಮಾಧ್ಯಾರೋಪಣಮಾತ್ರನಿವರ್ತಕತ್ವೇನ ಪ್ರಾಮಾಣ್ಯಮ್ ಆತ್ಮನಃ ಪ್ರತಿಪದ್ಯತೇ, ನ ತು ಅಜ್ಞಾತಾರ್ಥಜ್ಞಾಪಕತ್ವೇನ । ತಥಾ ಚ ಶ್ರುತಿಃ–"ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ" (ಬೃ. ೩-೪-೧) ಇತಿ ॥

(ಭಾಷ್ಯಾರ್ಥ)

'ಅಪ್ರಮೇಯನಾದ' ಎಂದರೆ ಪ್ರಮೇಯನಲ್ಲದ, ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ಗೊತ್ತುಪಡಿಸುವದಕ್ಕೆ ಬರದವನಾದ [2]–ಎಂದರ್ಥ.

(ಆಕ್ಷೇಪ).—ಆತ್ಮನನ್ನು ಆಗಮದಿಂದ ಗೊತ್ತುಪಡಿಸುವದಕ್ಕೆ ಬರುವದಿಲ್ಲವೆ? ಮೊದಲು ಪ್ರತ್ಯಕ್ಷಾದಿಗಳಿಂದಲೂ (ಗೊತ್ತುಪಡಿಸುವದಕ್ಕೆ ಬರುವದಿಲ್ಲವೆ?[3]

(ಪರಿಹಾರ):—ಹಾಗಲ್ಲ. ಏಕೆಂದರೆ ಆತ್ಮನು ಸ್ವತಃಸಿದ್ಧನಾಗಿರುತ್ತಾನೆ. ಆತ್ಮನೆಂಬ **ಪ್ರಮಾತೃವು** [4] ಸಿದ್ಧವಾಗಿದ್ದರೇ ಅಲ್ಲವೆ, ಅರಿತುಕೊಳ್ಳಬೇಕೆಂಬಾತನಿಗೆ ಪ್ರಮಾಣವನ್ನು ಹುಡುಕುವದೆಂಬುದು ಸರಿಯಾಗುತ್ತದೆ? "ನಾನು ಇಂಥವನು"

---

1 'ಅಪ್ರಮಾಯ' ಎಂಬ ಮೈ॥ಮ॥ಗು॥ನಿ॥ ಪಾಠವು ಸಂದರ್ಭಕ್ಕೆ ಹೊಂದುವದಿಲ್ಲವೆಂಬುದು ಹಿಂದುಮುಂದಿನ ವಾಕ್ಯಗಳಿಂದ ಸ್ಪಷ್ಟವು.

2 ಪ್ರಮೇಯ ಎಂದರೆ ಅರಿತುಕೊಳ್ಳಬೇಕಾಗಿರುವ ವಿಷಯ. ಪ್ರತ್ಯಕ್ಷಾದಿಪ್ರಮಾಣಗಳು ಅರಿಯುವ ಸಾಧನಗಳು, ಅವು ಪ್ರಮೇಯವನ್ನು ಮಾತ್ರ ಅರಿಯಬಲ್ಲವು.

3 ಮಾನಸಪ್ರತ್ಯಕ್ಷದಿಂದ ಆತ್ಮನನ್ನು ಅರಿಯಬಹುದೆಂದು ಮೀಮಾಂಸಕರೂ ನೈಯಾಯಿಕರೂ ಹೇಳುವರು; ಪ್ರಾಣನಾದಿಗಳೂ ದೃಷ್ಟಿಶ್ರುತ್ಯಾದಿಗಳೂ ಅನುಮಾನದಿಂದ ಆತ್ಮನನ್ನು ತಿಳಿಯುವದಕ್ಕೆ ಲಿಂಗಗಳೆಂದು ವೈಶೇಷಿಕರು ಹೇಳುವರು. ಆಗಮದಿಂದಲೇ ಆತ್ಮನನ್ನು ಅರಿಯಬೇಕೆಂದು ವೇದಾಂತಿಗಳು ಹೇಳುವರು. ಆತ್ಮನು ಪ್ರತ್ಯಕ್ಷಾದಿವೇದ್ಯನಲ್ಲವೆಂಬುದಕ್ಕೆ ಬೃ. ಸಂಬಂಧಭಾಷ್ಯವನ್ನು ನೋಡಿ.

4 ಅರಿಯಬೇಕೆನ್ನುವವನೇ ಪ್ರಮಾತೃ; ಆತ್ಮನು ಪ್ರಮಾತೃವಿನ ಪರಮಾರ್ಥಸ್ವರೂಪ. ಪ್ರಮಾತೃವು ಮೊದಲೇ ಇದ್ದ ಹೊರತು ಪ್ರಮಾಣಗಳನ್ನುಪಯೋಗಿಸುವದು ಆಗಲಾರದು.

ಎಂದು ಮೊದಲು ತನ್ನನ್ನು ಪ್ರಮಾಣಗಳಿಂದ ಗೊತ್ತುಮಾಡಿಕೊಂಡು ಆಮೇಲೆ ಪ್ರಮೇಯವನ್ನು ಗೊತ್ತುಪಡಿಸುವದಕ್ಕೆಂದು (ಯಾರೂ) ಹೊರಡುವದಿಲ್ಲ. ಏಕೆಂದರೆ ಆತ್ಮನೆಂಬವನು ಯಾರಿಗೂ ಅಪ್ರಸಿದ್ಧವಾಗಿರುವದಿಲ್ಲ.[1] **ಶಾಸ್ತ್ರವಾದರೋ ಅಂತ್ಯಪ್ರಪ್ರಮಾಣವು; (ಅದು) ಅವನದಲ್ಲದ ಧರ್ಮಗಳ ಆರೋಪಣೆಯನ್ನು ತೆಗೆದುಹಾಕುವದರಿಂದ ಮಾತ್ರ**[2] **ಆತ್ಮನ ವಿಷಯದಲ್ಲಿ ಪ್ರಮಾಣತ್ವವನ್ನು ಪಡೆಯುವದೇ ಹೊರತು ತಿಳಿಯದ ವಿಷಯವನ್ನು ತಿಳಿಸಿಕೊಡುವದರಿಂದ (ಪ್ರಮಾಣ)ವೆನಿಸುವದಿಲ್ಲ.** ಆದ್ದರಿಂದಲೇ[3] ಶ್ರುತಿಯು "ಯಾವದು ನೇರಾಗಿಯೂ ಅಪರೋಕ್ಷವಾದ ಬ್ರಹ್ಮವಾಗಿರುವದೋ ಯಾವದು ಎಲ್ಲಕ್ಕೂ ಒಳಗಿರುವ ಆತ್ಮನಾಗಿರುವದೋ (ಅದನ್ನು ಹೇಳು)" (ಬೃ. ೩-೪-೧) ಎಂದು (ಹೇಳುತ್ತದೆ).

(ಭಾಷ್ಯ)

೩೦. ಯಸ್ಮಾತ್ ಏವಂ ನಿತ್ಯೋಽವಿಕ್ರಿಯಶ್ಚ ಆತ್ಮಾ ತಸ್ಮಾತ್ ಯುಧ್ಯಸ್ವ ಯುದ್ಧಾತ್ ಉಪರಮಂ ಮಾಕಾರ್ಷೀಃ ಇತ್ಯರ್ಥಃ । ನ ಹಿ ಅತ್ರ ಯುದ್ಧಕರ್ತವ್ಯತಾ ವಿಧೀಯತೇ ಯುದ್ಧೇ ಪ್ರವೃತ್ತ ಏವ ಹಿ ಅಸೌ ಶೋಕಮೋಹಪ್ರತಿಬದ್ಧಃ ತೂಷ್ಣೀಮ್ ಆಸ್ತೇ । ಅತಃ ತಸ್ಯ (ಕರ್ತವ್ಯ)[4] ಪ್ರತಿಬನ್ಧಾಪನಯನಮಾತ್ರಂ ಭಗವತಾ ಕ್ರಿಯತೇ । ತಸ್ಮಾತ್ 'ಯುಧ್ಯಸ್ವ' ಇತಿ ಅನುವಾದಮಾತ್ರಂ ನವಿಧಿಃ ॥

(ಭಾಷ್ಯಾರ್ಥ)

ಹೀಗೆ ಆತ್ಮನು ನಿತ್ಯನೂ ವಿಕಾರಗಳಿಲ್ಲದವನೂ ಆಗಿರುವದರಿಂದ ಯುದ್ಧಮಾಡು, ಯುದ್ಧವನ್ನು ಬಿಡಬೇಡ ಎಂದರ್ಥ. ಇಲ್ಲಿ ಯುದ್ಧವನ್ನು ಮಾಡಲೇ

1 ಯಾವದು ಮೊದಲೇ ತಿಳಿದಿರುವದಿಲ್ಲವೋ ಅಥವಾ ಸಂದಿಗ್ಧವಾಗಿರುವದೋ ಅದನ್ನು ಅರಿತುಕೊಳ್ಳುವದಕ್ಕೇ ಜನರು ಹೊರಡುತ್ತಾರೆ ಆತ್ಮಸ್ವರೂಪವು ಇಂಥದ್ದಲ್ಲ. ಸೂ. ಭಾ. ೧-೧-೨.

2 'ಅತದ್ಧರ್ಮಾಧ್ಯಾರೋಪಣ' ಎಂದು ಪಾಠವಿದ್ದಂತೆ ಭಾವಿಸಿ ಕನ್ನಡಿಸಿದೆ. ಶಾಸ್ತ್ರವು ಆತ್ಮನಲ್ಲಿ ಅವಿದ್ಯೆಯಿಂದ ಆರೋಪಿತವಾಗಿರುವ ಪ್ರಮಾತೃತ್ವವನ್ನು ಅಲ್ಲಗಳೆಯುವದರಿಂದಲೇ ಪ್ರಮಾಣವು. ಅದರ ಪ್ರವೃತ್ತಿಯಾದಮೇಲೆ ಮತ್ತೆ ಪ್ರಮಾಣವ್ಯವಹಾರವಿಲ್ಲವಾದ್ದರಿಂದ ಅದು ಅಂತ್ಯಪ್ರಮಾಣವು. ಈ ಅಧ್ಯಾಯದ ೬೯ನೆಯ ಶ್ಲೋಕದ ಭಾಷ್ಯ ಸೂ. ಭಾ. ೧-೧-೪, ೨-೧-೧೪ ಇವನ್ನು ನೋಡಿ.

3 ಆತ್ಮನು ಸ್ವತಃಸಿದ್ಧನಾದ್ದರಿಂದಲೇ. ಈ ಚರ್ಚೆಯಲ್ಲಿ ಉಳಿದ ಪ್ರಮೇಯಗಳನ್ನು ತಿಳಿಸುವ ಜ್ಞಾನವು ವಸ್ತುವಿನಲ್ಲಿ ಜ್ಞಾತತ್ವವನ್ನುಂಟುಮಾಡುವದೆಂಬ ಮೀಮಾಂಸಕರ ಪಕ್ಷವನ್ನೊಪ್ಪಿಕೊಂಡಿರುತ್ತದೆ. ಪ್ರಮಾಣವು ಪ್ರಮೇಯದ ಅಜ್ಞಾನವನ್ನು ಕಳೆಯುವದಲ್ಲದೆ ಅದನ್ನು ಅರಿಯುವದೆಂಬ ಮತ್ತೊಂದು ವ್ಯಾಪಾರವನ್ನೂ ಮಾಡುವದೆಂಬ ಅಭಿಪ್ರಾಯವನ್ನು ಮಾಂ. ಭಾ. ೭ರಲ್ಲಿ ಖಂಡಿಸಿರುತ್ತದೆ.

4. ಈ ಮಾತು ಮು॥ ಮೈ॥ ಪಾಠಗಳಲ್ಲಿಲ್ಲ

ಬೇಕೆಂದು ವಿಧಿಸಿರುವದಿಲ್ಲ. ಏಕೆಂದರೆ ತಾನೇ ಯುದ್ಧಕ್ಕೆ ಹೊರಟಿರುವ ಈ (ಅರ್ಜುನನು) ಶೋಕಮೋಹಗಳು ಅಡ್ಡಲಾಗಿ ಸುಮ್ಮನೆ ಕೂತಿದ್ದಾನೆ. ಅವನು (ಮಾಡಬೇಕೆಂದಿರುವ ಯುದ್ಧಕ್ಕೆ) ಅಡ್ಡಿಯನ್ನು ಹೋಗಲಾಡಿಸುವದಷ್ಟನ್ನೇ ಭಗವಂತನು ಮಾಡುತ್ತಿದಾನೆ. ಆದ್ದರಿಂದ 'ಯುದ್ಧಮಾಡು' ಎಂಬುದು **ಅನುವಾದವೇ**[1] ಹೊರತು ವಿಧಿಯಲ್ಲ.

(ಭಾಷ್ಯ)

೩೧. ಶೋಕಮೋಹಾದಿಸಂಸಾರಕಾರಣನಿವೃತ್ತ್ಯರ್ಥಂ ಗೀತಾಶಾಸ್ತ್ರಂ ನ ಪ್ರವರ್ತಕಮ್ ಇತ್ಯೇತಸ್ಯಾರ್ಥಸ್ಯ ಸಾಕ್ಷಿಭೂತೇ ಋಚೌ ಆನಿನಾಯ ಭಗವಾನ್ । ಯತ್ತು ಮನ್ಯಸೇ ಯುದ್ಧೇ ಭೀಷ್ಮಾದಯೋ ಮಯಾ ಹನ್ಯನ್ತೇ ಅಹಮೇವ ತೇಷಾಂ ಹನ್ತಾ ಇತಿ । ಏಷಾ ಬುದ್ಧಿಃ ಮೃಷೈವ ತೇ । ಕಥಮ್ ?

(ಭಾಷ್ಯಾರ್ಥ)

**ಗೀತಾಶಾಸ್ತ್ರವು ಶೋಕ, ಮೋಹ–ಮುಂತಾದ ಸಂಸಾರಕಾರಣಗಳನ್ನು ಕಳೆಯುವದಕ್ಕೆ (ಹುಟ್ಟಿರುವದೇ) ಹೊರತು (ಕರ್ಮದಲ್ಲಿ) ತೊಡಗಿಸುವದಕ್ಕಲ್ಲ**[2] ಎಂಬೀ ಅಭಿಪ್ರಾಯಕ್ಕೆ ಸಾಕ್ಷಿಯಾಗಿ ಭಗವಂತನು (ಈಗ) **ಎರಡು ಋಕ್ಕುಗಳನ್ನು**[3] ತಂದು ಹೇಳುತ್ತಾನೆ. "ಭೀಷ್ಮನೇ ಮುಂತಾದವರು ಯುದ್ಧದಲ್ಲಿ ನನ್ನಿಂದ ಹತರಾಗುವರು, ನಾನೇ ಅವರನ್ನು ಕೊಲ್ಲುವವನು" ಎಂದು ತಿಳಿದಿರುವೆಯಷ್ಟೆ, ಈ ನಿನ್ನ ಬುದ್ಧಿಯು ತಪ್ಪೇ ಏಕೆಂದರೆ —

**ಯ ಏನಂ ವೇತ್ತಿ ಹನ್ತಾರಂ ಯಶ್ಚೈನಂ ಮನ್ಯತೇ ಹತಮ್ ।**
**ಉಭೌ ತೌ ನ ವಿಜಾನೀತೋ ನಾಯಂ ಹನ್ತಿ ನ ಹನ್ಯತೇ ॥ ೧೯ ॥**

೧೯. ಈತನು ಕೊಲ್ಲುವವನೆಂದು ಯಾವನು ತಿಳಿಯುತ್ತಾನೋ ಮತ್ತು ಈತನು ಕೊಲ್ಲಲ್ಪಡತಕ್ಕವನೆಂದು ಯಾವನು ತಿಳಿಯುತ್ತಾನೋ ಅವರಿಬ್ಬರೂ ಅರಿಯರು ಇವನು ಕೊಲ್ಲುವದೂ ಇಲ್ಲ, ಕೊಲ್ಲಲ್ಪಡುವದೂ ಇಲ್ಲ.

---

1 ಮೊದಲೇ ಸಿದ್ಧವಾಗಿರುವದನ್ನು ಹೇಳಿರುವದು. ಊಟಮಾಡುವದಕ್ಕೆ ಹೊರಟಿರುವವನಿಗೆ "ಕಾಲು ತೊಳೆದುಕೊಂಡು ಊಟಮಾಡು" ಎಂದು ಹೇಳಿದರೆ ಅಥವಾ ಊಟಮಾಡುತ್ತಿದ್ದವನು ಅನ್ನದ ವಿಷಯದ ಶಂಕೆಯಿಂದ ಊಟವನ್ನು ನಿಲ್ಲಿಸಿದ್ದರೆ ಆಗ "ಅನ್ನದಲ್ಲಿ ಯಾವ ವಿಷವೂ ಸೇರಿಲ್ಲ, ಊಟಮಾಡು" ಎಂದರೆ ಊಟಮಾಡು ಎಂಬುದು ಅನುವಾದವಾಗುವದೇ ಹೊರತು ವಿಧಿಯಾಗಲಾರದು.

2 ಗೀತಾಶಾಸ್ತ್ರವು ಪ್ರವರ್ತಕವಲ್ಲವೆಂಬುದಕ್ಕೆ ಪೀಠಿಕೆಯನ್ನು ನೋಡಿರಿ.

3 ಕ. ೧-೨-೧೮, ೧೯.

೩೨. ಯ ಏನಂ ಪ್ರಕೃತಂ ದೇಹಿನಂ ವೇತ್ತಿ (ವಿ)ಜಾನಾತಿ[1] ಹನ್ತಾರಂ ಹನನಕ್ರಿಯಾಯಾಃ ಕರ್ತಾರಮ್, ಯಶ್ಚ ಏನಮ್ ಅನ್ಯೋ ಮನ್ಯತೇ ಹತಂ ದೇಹಹನನೇನ "ಹತೋಽಹಮ್" ಇತಿ ಹನನಕ್ರಿಯಯಾಃ ಕರ್ಮಭೂತಮ್, ತೌ ಉಭೌ ನ ವಿಜಾನೀತಃ ನ ಜ್ಞಾತವನ್ತೌ ವಿವೇಕೇನ[2] ಆತ್ಮಾನಮ್ । 'ಹನ್ತಾ ಅಹಮ್' 'ಹತೋಽಸ್ಮಿ ಅಹಮ್' ಇತಿ ದೇಹಹನನೇನ ಆತ್ಮಾನಮ್ ಅಹಂ ಪ್ರತ್ಯಯವಿಷಯಂ[3] ಯೌ ವಿಜಾನೀತಃ, ತೌ ಆತ್ಮಸ್ವರೂಪಾನಭಿಜ್ಞೌ ಇತ್ಯರ್ಥಃ । ಯಸ್ಮಾತ್ ನಾಯಮ್ ಆತ್ಮಾ ಹನ್ತಿ ನ ಹನನಕ್ರಿಯಾಯಾಃ ಕರ್ತಾ ಭವತಿ । ನ ಹನ್ಯತೇ ನ ಚ ಕರ್ಮ ಭವತಿ ಇತ್ಯರ್ಥಃ । ಅವಿಕ್ರಿಯತ್ವಾತ್ ॥

(ಭಾಷ್ಯಾರ್ಥ)

ಈ ಪ್ರಕೃತನಾದ ದೇಹಿಯು ಕೊಲ್ಲುವವನು, ಕೊಲ್ಲುವದೆಂಬ ಕ್ರಿಯೆಗೆ ಕರ್ತನು ಎಂದು ಯಾವನು ತಿಳಿಯುತ್ತಾನೋ ಅರಿತುಕೊಳ್ಳುತ್ತಾನೋ, ಮತ್ತು ಯಾವ ಇನ್ನೊಬ್ಬನು ಇವನನ್ನು ಹತನೆಂದು ಎಂದರೆ ದೇಹವನ್ನು ಕೊಂದದ್ದರಿಂದ ನಾನೇ ಕೊಲ್ಲಲ್ಪಡುವೆನು ಎಂದು ಕೊಲ್ಲುವ ಕ್ರಿಯೆಗೆ (ಆತ್ಮನು) ಕರ್ಮವಾಗಿರುವ ನೆಂದು ತಿಳಿಯುತ್ತಾನೋ, ಅವರಿಬ್ಬರೂ ಅರಿಯರು ಆತ್ಮನನ್ನು ವಿಂಗಡಿಸಿ ತಿಳಿದು ಕೊಳ್ಳದೆ ಇರುವರು.[4] ದೇಹವನ್ನು ಕೊಂದದ್ದರಿಂದ "ನಾನು ಕೊಲ್ಲುವೆನು, ಕೊಲ್ಲಲ್ಪಡುವೆನು" ಎಂದು ಆತ್ಮನನ್ನು **ಅಹಂಪ್ರತ್ಯಯಕ್ಕೆ ವಿಷಯನೆಂದು**[5] ಯಾರು ತಿಳಿದುಕೊಳ್ಳುವರೋ ಅವರು ಆತ್ಮನ ಸ್ವರೂಪವನ್ನು ಅರಿಯದವರು ಎಂದರ್ಥ. ಏಕೆಂದರೆ ಈ ಆತ್ಮನು ಕೊಲ್ಲುವದೂ ಇಲ್ಲ, ಕೊಲ್ಲುವದೆಂಬ ಕ್ರಿಯೆಗೆ ಕರ್ತನೂ ಅಲ್ಲ; ಕೊಲ್ಲಲ್ಪಡುವದೂ ಇಲ್ಲ, ಎಂದರೆ (ಆ ಕ್ರಿಯೆಗೆ) ಕರ್ಮವೂ ಅಲ್ಲ. ಏಕೆಂದರೆ ಇವನು ಯಾವ ವಿಕಾರಗಳೂ ಇಲ್ಲದವನಾಗಿರುತ್ತಾನೆ.

(ಭಾಷ್ಯ)

೩೩. ಕಥಮ್ ಅವಿಕ್ರಿಯ ಆತ್ಮಾ ಇತಿ? ದ್ವಿತೀಯೋ ಮನ್ತ್ರಃ—

---

1 'ವಿ' ಎಂದು ಮ॥ಮ್ಯೆ॥ ಪಾಠಗಳಲ್ಲಿ ಹೆಚ್ಚಾಗಿದೆ.

2. ಅಚ್ಚಾದ ಪುಸ್ತಕಗಳಲ್ಲಿ 'ಅವಿವೇಕೇನ' ಎಂದೇ ಇದೆ; 'ವಿವೇಕೇನ' ಎಂದು ತಿದ್ದಿಕೊಂಡಿದೆ.

3. "ಅಹಂಪ್ರತ್ಯಯವಿಷಯಮ್" ಎಂದು ಎರಡು ಸಲ ಇರುವ ನಿ॥ ಪಾಠವು ಸರಿಯಲ್ಲ.

4. 'ಅವಿವೇಕೇನ' ಎಂಬ ಮುದ್ರಿತಪುಸ್ತಕಪಾಠವನ್ನು 'ವಿವೇಕವಿಲ್ಲದ್ದರಿಂದ ಆತ್ಮನನ್ನು ಅರಿಯದೆ ಇರುವರು' ಎಂದು ಹೇಗೋ ಕನ್ನಡಿಸಿಕೊಳ್ಳಬೇಕಾಗುವದು.

5 ಕರ್ತೃಭೋಕ್ತೃಸ್ವರೂಪನೆಂದು ಎಂದರ್ಥ. ಆತ್ಮನು ಅಹಂಪ್ರತ್ಯಯವಿಷಯನೆಂಬ ಮೀಮಾಂಸಕರ ಪಕ್ಷವು ಸರಿಯಲ್ಲವೆಂದು ಬೃ. ಭಾ. ದಲ್ಲಿ ತಿಳಿಸಿಕೊಟ್ಟಿದೆ.

(ಭಾಷ್ಯಾರ್ಥ)

ಆತ್ಮನು ಯಾವ ವಿಕಾರಗಳೂ ಇಲ್ಲದವನೆಂಬುದು ಹೇಗೆ? ಎಂದರೆ (ಅದನ್ನು ತಿಳಿಸುವದಕ್ಕೆ (ಈ) ಎರಡನೆಯ **ಮಂತ್ರವು**[1] (ಬಂದಿರುತ್ತದೆ) :—

**ನ ಜಾಯತೇ ಮ್ರಿಯತೇ ವಾ ಕದಾಚಿ-**
**ನ್ನಾಯಂ ಭೂತ್ವಾಽಭವಿತಾ ವಾ ನ ಭೂಯಃ ।**
**ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ**
**ನ ಹನ್ಯತೇ ಹನ್ಯಮಾನೇ ಶರೀರೇ ॥ ೨೦ ॥**

೨೦. ಈತನು ಎಂದಿಗೂ ಹುಟ್ಟುವದಿಲ್ಲ, ಸಾಯುವದೂ ಇಲ್ಲ. ಇವನು (ಮೊದಲು) ಇದ್ದು ಆಮೇಲೆ ಇಲ್ಲವಾಗುವದೂ ಇಲ್ಲ. ಇವನು ಅಜನು, ನಿತ್ಯನು, ಶಾಶ್ವತನು, ಪುರಾಣನು ; ಶರೀರವು ಹತವಾಗುತ್ತಿದ್ದರೂ ಹತನಾಗುವದಿಲ್ಲ.

(ಭಾಷ್ಯ)

೩೪. ನ ಜಾಯತೇ ನೋತ್ಪದ್ಯತೇ ಜನಿಲಕ್ಷಣಾ ವಸ್ತುವಿಕ್ರಿಯಾ ನಾತ್ಮನೋ ವಿದ್ಯತೇ ಇತ್ಯರ್ಥಃ । ತಥಾ[2] ನ ಮ್ರಿಯತೇ ವಾ । ವಾ ಶಬ್ದಶ್ಚಾರ್ಥೇ । ನ ಮ್ರಿಯತೇ ಚ ಇತಿ ಅನ್ತ್ಯಾ ವಿನಾಶಲಕ್ಷಣಾ ವಿಕ್ರಿಯಾ ಪ್ರತಿಷಿಧ್ಯತೇ । ಕದಾಚಿಚ್ಛಬ್ದಃ ಸರ್ವವಿಕ್ರಿಯಾಪ್ರತಿಷೇಧೈಃ ಸಂಬಧ್ಯತೇ 'ನ ಕದಾಚಿತ್ ಜಾಯತೇ', 'ನ ಕದಾಚಿತ್ ಮ್ರಿಯತೇ'–ಇತ್ಯೇವಮ್ । ಯಸ್ಮಾತ್ ಅಯಮ್ ಆತ್ಮಾ ಭೂತ್ವಾ ಭವನಕ್ರಿಯಾಮ್ ಅನುಭೂಯ ಪಶ್ಚಾತ್ ಅಭವಿತಾ ಅಭಾವಂ ಗನ್ತಾ ನ ಭೂಯಃ ಪುನಃ, ತಸ್ಮಾತ್ ನ ಮ್ರಿಯತೇ । ಯೋ ಹಿ ಭೂತ್ವಾ ನ ಭವಿತಾ[3] ಸ ಮ್ರಿಯತೇ ಇತ್ಯುಚ್ಯತೇ ಲೋಕೇ । ವಾ ಶಬ್ದಾತ್ ನ ಶಬ್ದಾಚ್ಚ ಅಯಮಾತ್ಮಾ ಅಭೂತ್ವಾ ವಾ ಭವಿತಾ ದೇಹವತ್ ನ ಭೂಯಃ[4] । ತಸ್ಮಾತ್ ನ ಜಾಯತೇ । ಯೋ ಹಿ ಅಭೂತ್ವಾ ಭವಿತಾ ಸ ಜಾಯತೇ ಇತ್ಯುಚ್ಯತೇ । ನೈವಮ್ ಆತ್ಮಾ । ಅತೋ ನ ಜಾಯತೇ । ಯಸ್ಮಾದೇವಮ್, ತಸ್ಮಾತ್ ಅಜಃ । ಯಸ್ಮಾನ್ನ ಮ್ರಿಯತೇ ತಸ್ಮಾನ್ನಿತ್ಯಶ್ಚ । ಯದ್ಯಪಿ ಆದ್ಯನ್ತಯೋರ್ವಿಕ್ರಿಯಯೋಃ ಪ್ರತಿಷೇಧೇ ಸರ್ವಾ

---

1. ಇಲ್ಲಿ ಮಂತ್ರಾರ್ಥವನ್ನು ಕೊಟ್ಟಿದೆಯೇ ಹೊರತು ಮಂತ್ರದ ಮಾತುಗಳೆಲ್ಲವನ್ನೂ ಕೊಟ್ಟಿಲ್ಲ.

2. ಮು|| ಮೈ|| ಪಾಠಗಳಲ್ಲಿ ಈ ಮಾತು ಹೆಚ್ಚಾಗಿದೆ.

3. 'ನ ಭವತಿ' ಮು|| ಮೈ||

4. 'ಭೂಯಃ ಪುನಃ' ಆ|| ನಿ|| ಗು||

ವಿಕ್ರಿಯಾಃ ಪ್ರತಿಷಿದ್ಧಾ ಭವನ್ತಿ, ತಥಾಪಿ ಮಧ್ಯಭಾವಿನೀನಾಂ ವಿಕ್ರಿಯಾಣಾಂ ಸ್ವಶಬ್ದೈರೇವ ಪ್ರತಿಷೇಧಃ ಕರ್ತವ್ಯಃ, ಅನುಕ್ತಾನಾಮಪಿ ಯೌವನಾದಿಸಮಸ್ತವಿಕ್ರಿಯಾಣಾಂ ಪ್ರತಿಷೇಧೋ ಯಥಾ ಸ್ಯಾತ್ ಇತ್ಯಾಹ–ಶಾಶ್ವತಃ ಇತ್ಯಾದಿನಾ ।[1] ಶಾಶ್ವತಃ ಇತಿ ಅಪಕ್ಷಯಲಕ್ಷಣಾ ವಿಕ್ರಿಯಾ ಪ್ರತಿಷಿಧ್ಯತೇ । ಶಶ್ವತ್ ಭವಃ ಶಾಶ್ವತಃ । ನಾ ಪಕ್ಷೀಯತೇ ಸ್ವರೂಪೇಣ । ನಿರವಯವತ್ವಾತ್ । ನಾಪಿಗುಣಕ್ಷಯೇಣ ಅಪಕ್ಷಯಃ । ನಿರ್ಗುಣತ್ವಾತ್ ।[2] ಅಪಕ್ಷಯವಿಪರೀತಾಪಿ ವೃದ್ಧಿಲಕ್ಷಣಾ ವಿಕ್ರಿಯಾ ಪ್ರತಿಷಿಧ್ಯತೇ ಪುರಾಣಃ ಇತಿ । ಯೋ ಹಿ ಅವಯವಾಗಮೇನ ಉಪಚೀಯತೇ ಸ ವರ್ಧತೇ, ಅಭಿನವಃ ಇತಿ ಚ ಉಚ್ಯತೇ । ಅಯಂ ತು ಆತ್ಮಾ ನಿರವಯವತ್ವಾತ್ ಪುರಾಪಿ ನವ ಏವ ಇತಿ ಪುರಾಣಃ । ನ ವರ್ಧತೇ ಇತ್ಯರ್ಥಃ । ತಥಾ ನ ಹನ್ಯತೇ ನ ವಿಪರಿಣಮ್ಯತೇ ಹನ್ಯಮಾನೇ ವಿಪರಿಣಮ್ಯಮಾನೇಽಪಿ ಶರೀರೇ । 'ಹನ್ತಿಃ' ಅತ್ರ ವಿಪರಿಣಾಮಾರ್ಥೇ ದ್ರಷ್ಟವ್ಯಃ, ಅಪುನರುಕ್ತತಾಯೈ । ನ ವಿಪರಿಣಮ್ಯತೇ[3] ಇತ್ಯರ್ಥಃ ॥

(ಭಾಷ್ಯಾರ್ಥ)

(ಈ ಆತ್ಮನು) ಹುಟ್ಟುವದಿಲ್ಲ, ಎಂದರೆ ಉತ್ಪತ್ತಿಯಾಗುವದಿಲ್ಲ, ಆತ್ಮನಿಗೆ ಹುಟ್ಟುವದೆಂಬ ವಸ್ತುವಿಕಾರವು ಇಲ್ಲ ಎಂದರ್ಥ ಮತ್ತು ಸಾಯುವದೂ ಇಲ್ಲ. ಇಲ್ಲಿ ವಾ ಎಂಬ ಮಾತು 'ಮತ್ತು' ಎಂದರ್ಥದಲ್ಲಿ (ಬಂದಿರುತ್ತದೆ). ಸಾಯುವದೂ ಇಲ್ಲ ಎಂಬುದರಿಂದ ವಿನಾಶ ಎಂಬ ಕೊನೆಯ ವಿಕಾರವು[4] (ಆತ್ಮನಲ್ಲಿ) ಇಲ್ಲವೆಂದಂತೆ ಆಯಿತು. 'ಕದಾಚಿತ್' (ಎಂದೆಂದಿಗೂ) ಎಂಬ ಮಾತನ್ನು 'ಎಂದೆಂದಿಗೂ ಹುಟ್ಟುವದಿಲ್ಲ', 'ಎಂದೆಂದಿಗೂ ಸಾಯುವದಿಲ್ಲ' ಎಂದೀ ರಿತಿಯಲ್ಲಿ ಎಲ್ಲಾ ವಿಕಾರಪ್ರತಿಷೇಧಗಳಿಗೂ ಸೇರಿಸಿಕೊಳ್ಳಬೇಕು (ಹುಟ್ಟು, ಸಾವುಗಳು ಇವನಿಗೆ) ಏಕೆ

---

1 ಇದು ವಾ॥ ಪಾಠ; 'ಸ್ವಶಬ್ದೈರೇವ ತದರ್ಥೈಃ ಪ್ರತಿಷೇಧಃ ಕರ್ತವ್ಯಃ ಇತ್ಯನುಕ್ತಾನಾಮಪಿ ಯೌವನಾದಿಸಮಸ್ತವಿಕ್ರಿಯಾಣಾಂ ಪ್ರತಿಷೇಧೋ ಯಥಾ ಸ್ಯಾದಿತ್ಯಾಹ'' ಅ॥ನಿ॥ಗು॥; ''ಸ್ವಶಬ್ದೈರೇವ ಪ್ರತಿಷೇಧಃ ಕರ್ತವ್ಯ ಇತ್ಯಾಹ–ಶಾಶ್ವತ ಇಃ ಅನುಕ್ತಾನಾಮಪಿ ಗಮನಾದಿಸಮಸ್ತವಿಕ್ರಿಯಾಣಾಂ ಪ್ರತಿಷೇಧೋ ಯಥಾ ಸ್ಯಾದಿತಿ'' ಮ॥ಮೈ॥ ಎಂಬ ಪಾಠಗಳೂ ಇವೆ.

2. ''ನಿರ್ಗುಣತ್ವಾಚ್ಚ ನಾಪಿ ಗುಣಕ್ಷಯೇಣ ಅಪಕ್ಷಯಃ'' ಮ॥ಮೈ॥

3. 'ನ ವಿಪರಿಣಮತೇ' ಅ॥ ಎಂಬ ಪಾಠವು ಸರಿಯಲ್ಲ. ಈ ವಾಕ್ಯದ ಪಾಠವು ಸ್ವಲ್ಪ ಬೇರೆಯಾಗಿದೆ.

4. ಈ ವಾಕ್ಯದ ವಾ॥ ಪಾಠವು ಸ್ವಲ್ಪ ಬೇರೆಯಾಗಿದೆ.

(ಇಲ್ಲ) ? ಎಂದರೆ, ಈ ಆತ್ಮನು (ಮೊದಲು) ಇದ್ದು ಆಮೇಲೆ ಇಲ್ಲವಾಗುವದೂ ಇಲ್ಲ ; ಎಂದರೆ (ಮೊದಲು) ಇರುವಿಕೆ ಎಂಬ ವಿಕಾರವನ್ನು ಅನುಭವಿಸಿ ಆಮೇಲೆ ಮತ್ತೆ ಅಭಾವವನ್ನು ಹೊಂದುವದಿಲ್ಲ , ಆದ್ದರಿಂದ (ಇವನು) ಸಾಯುವದಿಲ್ಲ ಯಾವನು ಮೊದಲು ಇದ್ದು ಆಮೇಲೆ ಇಲ್ಲವಾಗುವನೋ ಅವನನ್ನಲ್ಲವೆ, ಲೋಕದಲ್ಲಿ ' ಸಾಯುವನು ' ಎನ್ನುವದು ? [1] (ಇಲ್ಲವಾಗುವದೂ ಇಲ್ಲ) ಎಂಬಲ್ಲಿ(ಮೂಲದಲ್ಲಿ) ವಾ ಶಬ್ದವಿರುವದರಿಂದಲೂ ನಶಬ್ದವು ಇರುವದರಿಂದಲೂ ಈ ಆತ್ಮನು ದೇಹದಂತೆ ಮೊದಲು ಇಲ್ಲದಿದ್ದು ಬಳಿಕ ಉಂಟಾಗುವವನೂ ಅಲ್ಲ (ಎಂದೂ ಇಟ್ಟುಕೊಳ್ಳಬೇಕು). ಆದ್ದರಿಂದ ಹುಟ್ಟುವದಿಲ್ಲ. ಯಾವನು ಮೊದಲು ಇಲ್ಲದೆ ಇದ್ದು ಆಮೇಲೆ ಉಂಟಾಗುವನೋ ಅವನನ್ನಲ್ಲವೆ, ' ಹುಟ್ಟುತ್ತಾನೆ ' ಎನ್ನುವದು ? ಆತ್ಮನು ಹೀಗಿಲ್ಲ, ಆದ್ದರಿಂದ ಅವನು ಹುಟ್ಟುವದಿಲ್ಲ.

ಹೀಗಿರುವದರಿಂದ (ಇವನು) **ಅಜನು** , ಸಾಯುವದಿಲ್ಲವಾದ್ದರಿಂದ **ನಿತ್ಯನೂ** (ಆಗಿರುವನು). ಮೊದಲಿನ ಮತ್ತು ಕೊನೆಯ ವಿಚಾರಗಳೆರಡನ್ನೂ ಇಲ್ಲವೆಂದರೆ ಎಲ್ಲಾ ವಿಕಾರಗಳನ್ನೂ ಇಲ್ಲವೆಂದಂತೆಯೇ ಆಗುತ್ತದೆಯೆಂಬುದು ನಿಜ , ಆದರೂ (ಇಲ್ಲಿ) ಹೇಳದೆ ಇರುವ ಯೌವನವೇ ಮುಂತಾದ ಎಲ್ಲಾ ವಿಕಾರಗಳನ್ನೂ ಇಲ್ಲವೆಂದಂತೆ ಆಗಲೆಂದು ನಡುವಣ ವಿಕಾರಗಳನ್ನೂ ಅವುಗಳನ್ನು (ಹೇಳುವ) ಮಾತುಗಳಿಂದಲೇ ನಿರಾಕರಣೆಮಾಡಬೇಕೆಂದು ' ಶಾಶ್ವತಃ ' ಎಂದು ಮುಂತಾಗಿ ಹೇಳಿರುತ್ತಾನೆ.[2] **ಶಾಶ್ವತ** ಎಂಬುದರಿಂದ ಅಪಕ್ಷಯವೆಂಬ ವಿಕಾರವನ್ನೂ ಇಲ್ಲವೆಂದಿರುತ್ತದೆ ಶಾಶ್ವತನೆಂದರ ಎಂದೆಂದಿಗೂ ಇರುವವನು. (ಆತ್ಮನಿಗೆ) ಅವಯವಗಳಿಲ್ಲದ್ದರಿಂದ (ಇವನು) ತನ್ನ ರೂಪದಿಂದ ಕ್ಷಯವಾಗುವದಿಲ್ಲ , ಗುಣಗಳಿಲ್ಲದ್ದರಿಂದ ಗುಣಗಳ ಕ್ಷಯದಿಂದಲೂ ಕ್ಷಯವಾಗುವದಿಲ್ಲ. ಕ್ಷಯಕ್ಕೆ ವಿರುದ್ಧವಾದ ' ವೃದ್ಧಿ ' ಎಂಬ ವಿಕಾರವನ್ನೂ ' ಪುರಾಣಃ ' ಎಂಬ (ಮಾತಿನಿಂದ) ನಿರಾಕರಿಸಿರು

1 ಇರುವದಕ್ಕೆ ನಾಶವಿಲ್ಲ, ಇಲ್ಲದ್ದು ಉಂಟಾಗಲಾರದು-ಎಂದು ಹೇಳಿದ್ದು ಪರಮಾರ್ಥದೃಷ್ಟಿಯಿಂದ, ಸಾವು ಮುಂತಾದವುಗಳನ್ನು ಇಲ್ಲಿ ಅಲ್ಲಗಳೆದಿರುವದು ಲೌಕಿಕರ ದೃಷ್ಟಿಯಿಂದ.

2. ಸಾವು ಕೊನೆಯ ವಿಕಾರವು, ಹುಟ್ಟು ಮೊದಲನೆಯದು, ಇವೆರಡೂ ಇಲ್ಲದ ವಸ್ತುವಿಗೆ ಈ ವಿಕಾರಗಳೆರಡರ ನಡುವ ಆಗುವ ವಿಕಾರಗಳೂ ಇಲ್ಲವೆಂದು ತಾನೇ ಆಗುತ್ತಿರುವಲ್ಲಿ ಮತ್ತೆ ಶಾಶ್ವತಃ, ಪುರಾಣಃ—ಎಂದು ಮುಂತಾಗಿ ಬಾಯಿಬಿಟ್ಟು ಹೇಳಿದ್ದೇಕೆ ?—ಎಂದರೆ ಇಲ್ಲಿ ಹೇಳಿರುವ ವಿಕಾರಗಳೇ ಅಲ್ಲದೆ ಮಿಕ್ಕ ಯಾವ ವಿಕಾರಗಳೂ ಇಲ್ಲವೆಂದು ಸ್ಪಷ್ಟಪಡಿಸುವದಕ್ಕೆ. ನಡುವಿನ ವಿಕಾರಗಳನ್ನು ನಿಷೇಧಮಾಡಿರುವದೆಂಬುದರ ಅರ್ಥಾಪತ್ತಿಪ್ರಮಾಣದಿಂದ ಹೀಗೆಂದು ಏರ್ಪಡುತ್ತದೆ ಎಂದರ್ಥ.

ತ್ತದೆ. ಯಾವನು ಅವಯುವಗಳು ಬಂದು ಸೇರುವದರಿಂದ ಹೆಚ್ಚಿಕೊಳ್ಳುತ್ತಿರುವನೋ ಅವನು ಬೆಳೆಯುತ್ತಾನೆ, ಹೊಸಬನು ಎಂದೂ ಎನ್ನಿಸಿಕೊಳ್ಳುತ್ತಾನೆ; ಆದರೆ ಈ ಆತ್ಮನು ಅವಯುವಗಳಿಲ್ಲದವನಾದ್ದರಿಂದ ಹಿಂದೂ ಹೊಸಬನೇ (ಆಗಿದ್ದನು). ಆದ್ದರಿಂದ (ಇವನು) ಪುರಾಣನು, ಎಂದರೆ ಇವನು ವೃದ್ಧಿಯನ್ನು ಹೊಂದುವದಿಲ್ಲ[1] ಎಂದರ್ಥ. ಮತ್ತು ಶರೀರವು ಹತವಾಗುತ್ತಿದ್ದರೂ ಎಂದರೆ ಪರಿಣಾಮವನ್ನು ಹೊಂದುತ್ತಿದ್ದರೂ (ತಾನು) ಹತನಾಗುವದಿಲ್ಲ, ಪರಿಣಾಮವಾಗುವದಿಲ್ಲ. ಇಲ್ಲಿ (ನ ಹನ್ಯತೇ ಎಂಬಲ್ಲಿ) ಹನ್ ಧಾತುವು ವಿಪರಿಣಾಮವೆಂಬ ಅರ್ಥದಲ್ಲಿಯೇ (ಪ್ರಯುಕ್ತವಾಗಿದೆ) ಎಂದು ಪುನರುಕ್ತಿಯಾಗದೆ ಇರುವದಕ್ಕಾಗಿ ಕಲ್ಪಿಸಿಕೊಳ್ಳಬೇಕು.[2] (ನ ಹನ್ಯತೇ) ಎಂದರೆ ಪರಿಣಾಮವಾಗುವದಿಲ್ಲ ಎಂದರ್ಥ

(ಭಾಷ್ಯ)

೩೫. ಅಸ್ಮಿನ್ ಮನ್ತ್ರೇ ಷಟ್ ಭಾವವಿಕಾರಾಃ ಲೌಕಿಕವಸ್ತುವಿಕ್ರಿಯಾಃ ಆತ್ಮನಿ ಪ್ರತಿಷಿಧ್ಯನ್ತೇ । ಸರ್ವಪ್ರಕಾರವಿಕ್ರಿಯಾರಹಿತಃ ಆತ್ಮಾ ಇತಿ ವಾಕ್ಯಾರ್ಥಃ । ಯಸ್ಮಾದೇವಂ ತಸ್ಮಾತ್ "ಉಭೌ ತೌ ನ ವಿಜಾನೀತಃ" ಇತಿ ಪೂರ್ವೇಣ ಮನ್ತ್ರೇಣ ಅಸ್ಯ ಸಂಬನ್ಧಃ ॥

(ಭಾಷ್ಯಾರ್ಥ)

ಈ ಮಂತ್ರದಲ್ಲಿ ಲೋಕದ ವಸ್ತುಗಳಿಗಾಗುವ ಆರು ಭಾವವಿಕಾರಗಳು[3] ಆತ್ಮನಲ್ಲಿರುವದಿಲ್ಲವೆಂದು ಹೇಳಿರುತ್ತದೆ. ಆತ್ಮನು ಯಾವ ವಿಧವಾದ ವಿಕ್ರಿಯೆಯೂ ಇಲ್ಲದವನು ಎಂದು ವಾಕ್ಯದ (ಒಟ್ಟು) ಅರ್ಥವು. ಹೀಗಿರುವದರಿಂದ "ಅವರಿಬ್ಬರೂ ಅರಿಯರು" (೨-೧೯) ಎಂದು ಹಿಂದೆ (ಹೇಳಿರುವ) ಮಂತ್ರಕ್ಕೆ (ಇದರ) ಸಂಬಂಧವನ್ನು (ಮಾಡಿಕೊಳ್ಳಬೇಕು).

೩೬. "ಯ ಏನಂ ವೇತ್ತಿ ಹನ್ತಾರಮ್" (೨-೧೯) ಇತ್ಯನೇನ ಮನ್ತ್ರೇಣ ಹನನಕ್ರಿಯಾಯಾಃ ಕರ್ತಾ ಕರ್ಮ ಚ ನ ಭವತಿ ಇತಿ ಪ್ರತಿಜ್ಞಾಯ 'ನ

---

1 ಬಗೆಬಗೆಯ ಅನುಭವಗಳಿಂದ ಆತ್ಮನು ಬೆಳೆಯುತ್ತಿರುವನೆಂಬ ತಿಳಿವಳಿಕೆ ತಪ್ಪು ಎಂದು ಭಾವ.

2 ಧಾತುಗಳಿಗೆ ಅನೇಕಾರ್ಥಗಳುಂಟು, ಹನ್ ಧಾತುವಿಗೆ ಇಲ್ಲಿ ಪರಿಣಾಮವೇ ಅರ್ಥ.

3 ಜಾಯತೇ (ಹುಟ್ಟುತ್ತದೆ), ಅಸ್ತಿ (ಇರುತ್ತದೆ), ವರ್ಧತೇ (ಬೆಳೆಯುತ್ತದೆ) ಪರಿಣಮತೇ (ಮಾರ್ಪಡುತ್ತದೆ), ಅಪಕ್ಷೀಯತೇ (ಸವೆಯುತ್ತದೆ), ವಿನಶ್ಯತಿ (ಹಾಳಾಗುತ್ತದೆ). ಎಂದು ಆರು ಭಾವವಿಕಾರಗಳುಂಟೆಂದು ಯಾಸ್ಕರ ನಿರುಕ್ತದಲ್ಲಿದೆ.

ಜಾಯತೇ ’ ಇತ್ಯನೇನ ಅವಿಕ್ರಿಯತ್ವಂ [1] ಹೇತುಮ್ ಉಕ್ತ್ವಾ, ಪ್ರತಿಜ್ಞಾತಾರ್ಥಮ್ ಉಪಸಂಹರತಿ—

(ಭಾಷ್ಯಾರ್ಥ)

“ ಈತನು ಕೊಲ್ಲುವವನೆಂದು ಯಾವನು ತಿಳಿಯುತ್ತಾನೋ ” (೨-೧೯) ಎಂಬ ಮಂತ್ರದಿಂದ ಕೊಲ್ಲುವದೆಂಬ ಕ್ರಿಯೆಗೆ ಆತ್ಮನು ಕರ್ತೃವೂ ಅಲ್ಲ, ಕರ್ಮವೂ ಅಲ್ಲ–ಎಂದು ಹೇಳಿ ‘ ಹುಟ್ಟುವದೂ ಇಲ್ಲ’ ಎಂಬೀ (ಮಂತ್ರದಿಂದ) ಯಾವ ವಿಕ್ರಿಯೆಯೂ (ಆತ್ಮನಲ್ಲಿಲ್ಲ)ವೆಂಬುದು (ಇದಕ್ಕೆ) ಹೇತುವೆಂದು ತಿಳಿಸಿ (ಮೊದಲು) ಹೇಳಿದ್ದ ವಿಷಯವನ್ನು (ಈಗ) ಉಪಸಂಹಾರಮಾಡುತ್ತಾನೆ:—

**ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಮ್ ।**
**ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹನ್ತಿ ಕಮ್ ॥ ೨೧ ॥**

೨೧. ಎಲೈ ಪಾರ್ಥನೆ, ಈತನು ಅವಿನಾಶಿಯು ನಿತ್ಯನು ಎಂದೂ ಅಜನು ಅವ್ಯಯನು ಎಂದೂ ಯಾವನು ಅರಿತುಕೊಂಡಿರುತ್ತಾನೋ ಆ ಪುರುಷನು ಯಾವನನ್ನು ಹೇಗೆ ಕೊಲ್ಲಿಸುತ್ತಾನೆ, (ಹೇಗೆ) ಕೊಲ್ಲುತ್ತಾನೆ?

(ಭಾಷ್ಯ)

೩೭. ವೇದ ವಿಜಾನಾತಿ ಅವಿನಾಶಿನಮ್ ಅನ್ತ್ಯಭಾವವಿಕಾರರಹಿತಂ ನಿತ್ಯಂ ವಿಪರಿಣಾಮರಹಿತಂ ಯೋ ವೇದ ಇತಿ ಸಂಬನ್ಧಃ । ಏನಂ ಪೂರ್ವೇಣ ಮನ್ತ್ರೇಣ ಉಕ್ತಲಕ್ಷಣಮ್ ಅಜಮ್ ಜನ್ಮರಹಿತಮ್ ಅವ್ಯಯಮ್ ಅಪಕ್ಷಯರಹಿತಂ [2] ಕಥಂ ಕೇನ ಪ್ರಕಾರೇಣ ಸ ವಿದ್ವಾನ್ ಪುರುಷಃ ಅಧಿಕೃತಃ ಹನ್ತಿ ಹನನಕ್ರಿಯಾಂ ಕರೋತಿ ಕಥಂ ವಾ ಘಾತಯತಿ ಹನ್ತಾರಂ ಪ್ರಯೋಜಯತಿ । ನ ಕಥಂಚಿತ್ ಕಂಚಿದ್ [3] ಹನ್ತಿ ನ ಕಥಂಚಿತ್ ಕಂಚಿದ್ ಘಾತಯತಿ ಇತಿ ಉಭಯತ್ರ ಆಕ್ಷೇಪ ಏವಾರ್ಥಃ । ಪ್ರಶ್ನಾರ್ಥಾಸಂಭವಾತ್ । ಹೇತ್ವರ್ಥಸ್ಯ ಅವಿಕ್ರಿಯತ್ವಸ್ಯ [4] ಚ ತುಲ್ಯತ್ವಾತ್, ವಿದುಷಃ ಸರ್ವಕರ್ಮಪ್ರತಿಷೇಧ ಏವ ಪ್ರಕರಣಾರ್ಥೋಽಭಿಪ್ರೇತೋ ಭಗವತಃ [5] । ಹನ್ತೇಸ್ತು ಆಕ್ಷೇಪಃ ಉದಾಹರಣಾರ್ಥತ್ವೇನ ಕಥಿತಃ [6] ॥

---

1. “ ಅವಿಕ್ರಿಯತ್ವೇ ” ಎಂಬ ನಿ॥ಗು॥ಆ॥ಮ॥ ಪಾಠವು ಸರಿಯಲ್ಲ.
2. “ ಅಜಮವ್ಯಯಮ್ ಉಪಜನಾಪಕ್ಷಯರಹಿತಮ್ ” ಮೈ॥ಮ॥
3. ‘ ಕಶ್ಚಿತ್ ’ ಎಂಬ ಮೈ॥ ಪಾಠವು ತಪ್ಪು; ಕಥಂಚಿತ್ ಎಂಬುದು ಮ॥ ಪಾಠದಲ್ಲಿ ಬಿಟ್ಟುಹೋಗಿದೆ.
4. ಈ ಮಾತು ಮೈ॥ಮ॥ ಪಾಠಗಳಲ್ಲಿಲ್ಲ.
5. ‘ ಭಗವತಾ ’ ಮೈ “ ಮ ”
6. “ ಕಥಿತಃ” ಎಂಬ ಮಾತು ನಿ॥ ಪಾಠದಲ್ಲಿಲ್ಲ.

(ಭಾಷ್ಯಾರ್ಥ)

ವೇದ ಎಂದರೆ ಅರಿತುಕೊಂಡಿರುವನು. (ಈತನು) ಅವಿನಾಶಿ ಎಂದರೆ ಕೊನೆಯದಾದ (ವಿಕಾರವೆಂಬ) ಭಾವವಿಕಾರವು ಇಲ್ಲದವನೆಂದೂ ನಿತ್ಯನು ಎಂದರೆ ವಿಪರಿಣಾಮವಿಲ್ಲದವನು ಎಂದೂ ಯಾವನು ಅರಿತುಕೊಂಡಿರುವನೋ ಎಂದು ಅನ್ವಯವು. ಈತನು ಎಂದರೆ ಹಿಂದೆ (ಹೇಳಿದ) ಮಂತ್ರದಲ್ಲಿ ಹೇಳಿದ ಸ್ವರೂಪವುಳ್ಳ (ಆತ್ಮನು) ಅಜನು ಹುಟ್ಟಿಲ್ಲದವನು, ಅವ್ಯಯನು ಅಪಕ್ಷಯವಿಲ್ಲದವನು–ಎಂದು (ಯಾವನು ಅರಿತುಕೊಂಡಿರುವನೋ) ಆ ಪುರುಷನು ಎಂದರೆ ಪ್ರಕೃತನಾಗಿರುವ ಆ ಜ್ಞಾನಿಯು ಹೇಗೆ ಯಾವ ಪ್ರಕಾರದಿಂದ ಕೊಲ್ಲುತ್ತಾನೆ, ಕೊಲ್ಲುವದೆಂಬ ಕ್ರಿಯೆಯನ್ನು ಮಾಡುತ್ತಾನೆ? ಮತ್ತು ಹೇಗೆ ಕೊಲ್ಲಿಸುತ್ತಾನೆ? ಎಂದರೆ ಕೊಲ್ಲುವಾತನನ್ನು ಪ್ರೇರಿಸುತ್ತಾನೆ? ಹೇಗೂ ಯಾರನ್ನೂ ಕೊಲ್ಲುವದಿಲ್ಲ, ಹೇಗೂ ಯಾರನ್ನೂ ಕೊಲ್ಲಿಸುವದಿಲ್ಲ ಎಂದು ಎರಡು ಕಡೆಯಲ್ಲಿಯೂ ಆಕ್ಷೇಪಾರ್ಥವನ್ನೇ ಮಾಡಿಕೊಳ್ಳಬೇಕು, ಏಕೆಂದರೆ ಪ್ರಶ್ನಾರ್ಥವು (ಇಲ್ಲಿ) ಹೊಂದುವದಿಲ್ಲ. ಅವಿಕ್ರಿಯನಾಗಿರುವದೆಂಬ ಹೇತುವು (ಎಲ್ಲಾ ಕ್ರಿಯೆಗಳ ನಿಷೇಧಕ್ಕೂ) ಸಮಾನವಾಗಿರುವದರಿಂದ ಜ್ಞಾನಿಗೆ ಯಾವ ಕರ್ಮವೂ[1] ಇಲ್ಲ ಎಂಬುದೇ ಈ ಪ್ರಕರಣದ ಅರ್ಥವೆಂದು ಭಗವಂತನ ಅಭಿಪ್ರಾಯವು. (ಹೀಗಿರುವಲ್ಲಿ ಹೇಗೆ ಕೊಂದಾನು?' ಎಂದು) ಕೊಲ್ಲುವಕ್ರಿಯೆಯನ್ನು ಮಾತ್ರ ಆಕ್ಷೇಪಿಸಿರುವದು ಉದಾಹರಣೆಗಾಗಿ ಹೇಳಿದ್ದೆಂದು (ತಿಳಿಯಬೇಕು).

## ಜ್ಞಾನಿಯು ಆತ್ಮಸ್ವರೂಪನೇ

(ಭಾಷ್ಯ)

೩೮. ವಿದುಷಃ ಕಂ ಕರ್ಮಾಸಂಭವಹೇತುವಿಶೇಷಂ[2] ಪಶ್ಯನ್ ಕರ್ಮಾಣಿ ಆಕ್ಷಿಪತಿ ಭಗವಾನ್ "ಕಥಂ ಸ ಪುರುಷಃ" ಇತಿ? ನನು ಉಕ್ತ[3] ಏವ ಆತ್ಮನೋಽವಿಕ್ರಿಯತ್ವಂ ಸರ್ವಕರ್ಮಾಸಂಭವಕಾರಣವಿಶೇಷಃ। ಸತ್ಯಮ್ ಉಕ್ತಃ। ನ ತು ಸ ಕಾರಣವಿಶೇಷಃ। ಅನ್ಯತ್ವಾತ್ ವಿದುಷಃ, ಅವಿಕ್ರಿಯಾದಾತ್ಮನಃ। ನ ಹಿ ಅವಿಕ್ರಿಯಂ

---

1. ಕೆಲಸಕ್ಕೆ ಕರ್ತೃವಾದವನು ಆ ಕೆಲಸದಿಂದ ವಿಕಾರವನ್ನು ಹೊಂದುವನು; ಆದ್ದರಿಂದ ನಿರ್ವಿಕಾರನಾದವನಿಗೆ ಯಾವ ಕರ್ಮವೂ ಇಲ್ಲ.

2. ಕರ್ಮಸಂಭವೇ ಹೇತುವಿಶೇಷಂ' ಆ॥ಸಿ॥ಗು॥

3. "ಉಕ್ತಮೇವ ಸರ್ವಕರ್ಮಾಸಂಭವಹೇತುಃ ಕಾರಣವಿಶೇಷಃ" ಎಂಬ ಸಿ॥ಗ॥ ಪಾಠವು ಸರಿಯಲ್ಲ; "ನನೂಕ್ತಮಾತ್ಮನೋಽವಿಕ್ರಿಯತ್ವಂ ಸರ್ವಕರ್ಮಾಸಂಭವಕಾರಣವಿಶೇಷಃ" ಎಂಬ ಮು॥ಮೈ॥ ಪಾಠವೂ ಆಗಬಹುದು.

ಸ್ಥಾಣುಂ ವಿದಿತವತಃ ಕರ್ಮ ನ[1] ಸಂಭವತಿ ಇತಿ ಚೇತ್ । ನ ವಿದುಷಃ ಆತ್ಮತ್ವಾತ್ । ನ ದೇಹಾದಿಸಙ್ಘಾತಸ್ಯ ವಿದ್ವತ್ತಾ । ಅತಃ ಪಾರಿಶೇಷ್ಯಾತ್ ಅಸಂಹತಃ ಆತ್ಮಾ ವಿದ್ವಾನ್ ಅವಿಕ್ರಿಯಃ ಇತಿ ತಸ್ಯ ವಿದುಷಃ ಕರ್ಮಾಸಂಭವಾತ್ ಆಕ್ಷೇಪೋ ಯುಕ್ತಃ " ಕಥಂ ಸ ಪುರುಷಃ " ಇತಿ। ಯಥಾ ಬುದ್ಧ್ಯಾದ್ಯಾಹೃತಸ್ಯ ಶಬ್ದಾದ್ಯರ್ಥಸ್ಯ ಅವಿಕ್ರಿಯ ಏವ ಸನ್ ಬುದ್ಧಿವೃತ್ತ್ಯಾ[2] ಅವಿವೇಕವಿಜ್ಞಾನೇನ ಅವಿದ್ಯಯಾ ಉಪಲಬ್ಧಾ ಆತ್ಮಾ ಕಲ್ಪ್ಯತೇ, ಏವಮೇವ ಆತ್ಮಾನಾತ್ಮವಿವೇಕಜ್ಞಾನೇನ ಬುದ್ಧಿವೃತ್ತ್ಯಾ ವಿದ್ಯಯಾ[3] ಅಸತ್ಯರೂಪಯೈವ ಪರಮಾರ್ಥತ ಅವಿಕ್ರಿಯ ಏವ ಆತ್ಮಾ ವಿದ್ವಾನ್ ಉಚ್ಯತೇ ॥

(ಭಾಷ್ಯಾರ್ಥ)

(ಆಕ್ಷೇಪ) : ಜ್ಞಾನಿಗೆ ಕರ್ಮವು ಹೊಂದಲಾರದೆಂಬುದಕ್ಕೆ ಯಾವ ಕಾರಣವಿಶೇಷವನ್ನು[4] ಕಂಡು ಭಗವಂತನು "ಆ ಪುರುಷನು ಹೇಗೆ (ಕೊಂದಾನು)?" ಎಂದು ಕರ್ಮಗಳನ್ನು ಆಕ್ಷೇಪಿಸಿರುತ್ತಾನೆ?

(ಪರಿಹಾರ) :—ಆತ್ಮನು ಅವಿಕ್ರಿಯನು ಎಂಬುದೇ ಯಾವ ಕರ್ಮಗಳೂ (ಜ್ಞಾನಿಗೆ) ಹೊಂದಲಾರವೆಂಬುದಕ್ಕೆ (ಸಾಕಾದ) ಕಾರಣವಿಶೇಷವೆಂದು ನಾವು (ಮೊದಲೇ) ಹೇಳಿರುವೆವಲ್ಲ ?

(ಆಕ್ಷೇಪ) . ಹೌದು, ಹೇಳಿದಿರಿ. ಆದರೆ ಅದು (ಸರಿಯಾದ) ಕಾರಣ ವಿಶೇಷವಲ್ಲ. ಏಕೆಂದರೆ ಅವಿಕ್ರಿಯನಾದ ಆತ್ಮನಿಗಿಂತ ಜ್ಞಾನಿಯು ಬೇರೆಯಾಗಿರುತ್ತಾನೆ. ಮೋಟುಮರದಲ್ಲಿ ಯಾವ ವಿಕ್ರಿಯೆಯೂ ಇಲ್ಲವೆಂದು ತಿಳಿದವನಿಗೆ (ಯಾವ) ಕರ್ಮವೂ ಸಂಭವಿಸುವದಿಲ್ಲ ಎನ್ನುವದಕ್ಕೆ ಆಗಲಾರದಷ್ಟೆ ?[5]

(ಪರಿಹಾರ) —ಹಾಗಲ್ಲ. ಏಕೆಂದರೆ ಜ್ಞಾನಿಯು ಆತ್ಮನೇ ಆಗಿರುತ್ತಾನೆ

---

1 ಈ ಮಾತು ಅ॥ ಪಾಠದಲ್ಲಿ ಬಿಟ್ಟುಹೋಗಿದೆ.

2. " ಬುದ್ಧಿವೃತ್ತ್ಯವಿವೇಕವಿಜ್ಞಾನೇನ" ಎಂದೇ ಮುದ್ರಿತಪುಸ್ತಕಗಳ ಪಾಠ ; ಆದರೆ ನಾವು ಇಟ್ಟುಕೊಂಡಿರುವ ಪಾಠವೇ ಪ್ರಕೃತಕ್ಕೆ ಬೇಕಾದದ್ದು.

3 " ಅವಿದ್ಯಯಾ " ಎಂಬ ಮೈ॥ ಪಾಠವು ಸರಿಯಲ್ಲ.

4. ಗೊತ್ತಾದ ಹೇತುವನ್ನು.

5. " ಈ ಮರವು ಚಲಿಸುವದಿಲ್ಲ " ಎಂದು ಅರಿತುಕೊಂಡವನು ತಾನೂ ಚಲಿಸುವದಿಲ್ಲವೆನ್ನುವದಕ್ಕೆ ಆಗಲಾರದು.

ದೇಹವೇ ಮುಂತಾದವುಗಳ ಸಂಘಾತಕ್ಕೆ ಜ್ಞಾನಿತ್ವವೆಂಬುದು (ಸಂಬಂಧಿ)ಸಿರುವದೇ ಇಲ್ಲ; ಆದ್ದರಿಂದ ಪರಿಶೇಷನ್ಯಾಯದಿಂದ[1] (ಅವುಗಳಿಂದ) ಸಂಹತನಾಗದ ಆತ್ಮನೇ ಜ್ಞಾನಿಯು, (ಅವನೇ) ಅವಿಕ್ರಿಯನು, ಆದ್ದರಿಂದ ಅಂಥ ಜ್ಞಾನಿಗೆ ಕರ್ಮವು ಸಂಭವಿಸುವಹಾಗಿಲ್ಲವಾಗಿ "ಆ ಪುರುಷನು ಹೇಗೆ ಕೊಂದಾನು?" ಎಂದು ಆಕ್ಷೇಪಿಸಿದ್ದು ಸರಿಯೇ (ಆಗಿರುತ್ತದೆ). **ಆತ್ಮನು ಅವಿಕ್ರಿಯನೇ ಆಗಿದ್ದರೂ ಬುದ್ಧಿಯೇ ಮುಂತಾದವುಗಳು ತಂದುತೋರಿಸಿದ ಶಬ್ದವೇ ಮುಂತಾದ ವಿಷಯುವನ್ನು ಅರಿಯುುವವನೆಂದು (ಆತ್ಮಾನಾತ್ಮಗಳನ್ನು) ವಿಂಗಡಿಸಿಕೊಳ್ಳದ ಜ್ಞಾನವೆಂಬ ಬುದ್ಧಿವೃತ್ತಿಯಾದ ಅವಿದ್ಯೆಯಿಂದ ಹೇಗೆ ಕಲ್ಪಿಸಲ್ಪಡುತ್ತಾನೋ, ಹಾಗೆಯೇ ನಿಜವಾಗಿ ಅವಿಕ್ರಿಯನೇ ಆಗಿರುವ ಆತ್ಮನು ಆತ್ಮಾನಾತ್ಮಗಳನ್ನು ವಿಂಗಡಿಸುವ ಜ್ಞಾನವೆಂಬ ಬುದ್ಧಿವೃತ್ತಿಯಾದ ಅಸತ್ಯರೂಪವಾಗಿಯೇ ಇರುವ ವಿದ್ಯೆಯಿಂದ ಜ್ಞಾನಿ ಎನ್ನಿಸಿಕೊಳ್ಳುತ್ತಾನೆ.**[2]

## ಅಜ್ಞಾನಿಗೇ ಕರ್ಮಗಳು ವಿಹಿತವಾಗಿರುತ್ತವೆ

(ಭಾಷ್ಯ)

೩೯. ವಿದುಷಃ ಕರ್ಮಾಸಂಭವವಚನಾತ್ ಯಾನಿ ಕರ್ಮಾಣಿ ಶಾಸ್ತ್ರೇಣ ವಿಧೀಯನ್ತೇ ತಾನಿ ಅವಿದುಷೋ ವಿಹಿತಾನಿ ಇತಿ ಭಗವತೋ ನಿಶ್ಚಯೋಽವಗಮ್ಯತೇ। ನನು ವಿದ್ಯಾಪಿ ಅವಿದುಷ ಏವ ವಿಧೀಯತೇ ವಿದಿತವಿದ್ಯಸ್ಯ ವಿಷ್ಟಪೇಷಣವತ್ ವಿದ್ಯಾವಿಧಾನಾನರ್ಥಕ್ಯಾತ್। ತತ್ರ ಅವಿದುಷಃ ಕರ್ಮಾಣಿ ವಿಧೀಯನ್ತೇ ನ ವಿದುಷಃ ಇತಿ ವಿಶೇಷೋ ನೋಪಪದ್ಯತೇ ಇತಿ ಚೇತ್। ನ। ಅನುಷ್ಠೇಯಸ್ಯ ಭಾವಾಭಾವವಿಶೇಷೋಪಪತ್ತೇಃ। ಅಗ್ನಿಹೋತ್ರಾದಿವಿಧ್ಯರ್ಥಜ್ಞಾನೋತ್ತರಕಾಲಮ್ ಅಗ್ನಿಹೋತ್ರಾದಿಕರ್ಮ ಅನೇಕಸಾಧನೋಪಸಂಹಾರಪೂರ್ವಕಮ್ ಅನುಷ್ಠೇಯಮ್ "ಕರ್ತಾ ಅಹಮ್, ಮಮ ಕರ್ತವ್ಯಮ್" ಇತ್ಯೇವಂಪ್ರಕಾರ

---

1. ಸಂಹತವಾಗಿರುವ ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ– ಇವುಗಳಲ್ಲಿ ಯಾವದೊಂದೂ ಜ್ಞಾನಿಯೆನ್ನಿಸಿಕೊಳ್ಳಲಾರದು; ಏಕೆಂದರೆ ಇವುಗಳೆಲ್ಲ ಜಡ. ಆದ್ದರಿಂದ ಉಳಿದಿರುವ ಚೇತನನಾದ ಸ್ವತಂತ್ರನಾಗಿರುವ ಆತ್ಮನೇ ಜ್ಞಾನಿಯು.

2. ಆತ್ಮನು ಸ್ವರೂಪದಿಂದ ಜ್ಞಾನಿಯೂ ಅಲ್ಲ, ಅಜ್ಞಾನಿಯೂ ಅಲ್ಲ; ಆಯಾ ಬುದ್ಧಿವೃತ್ತಿರೂಪವಾದ ಉಪಾಧಿಯಿಂದ ಜ್ಞಾನಿಯೆಂದೂ ಅಜ್ಞಾನಿಯೆಂದೂ ವ್ಯವಸ್ಥಿತನಾಗುತ್ತಾನೆ. ವಿದ್ಯಾವಿದ್ಯೆಗಳು ನಿಜವಾಗಿ ಆತ್ಮನ ಧರ್ಮಗಳಲ್ಲವೆಂಬುದಕ್ಕೆ ೧೩-೨, ತೈ.ಭಾ. ೨-೮ (ಭಾ.ಭಾ. ೨೧೬) ನೋಡಿ.

ವಿಜ್ಞಾನವತಃ ಅವಿದುಷಃ ಯಥಾ ಅನುಷ್ಠೇಯಂ ಭವತಿ ನ ತು ತಥಾ "ನ ಜಾಯತೇ" ಇತ್ಯಾದ್ಯಾತ್ಮಸ್ವರೂಪವಿಧ್ಯರ್ಥಜ್ಞಾನೋತ್ತರಕಾಲಭಾವಿ ಕಿಂಚಿತ್ಕ್ರಿಯಾ ಅನುಷ್ಠೇಯಂ ಭವತಿ । ಕಿಂ ತು "ನಾಹಂ ಕರ್ತಾ ನಾಹಂ ಭೋಕ್ತಾ" ಇತ್ಯಾದ್ಯಾತ್ಮೈಕತ್ವಾಕರ್ತೃತ್ವಾದಿವಿಷಯಜ್ಞಾನಾನ್ನಾನ್ಯದುತ್ಪದ್ಯತೇ[1] ಇತ್ಯೇಷ ವಿಶೇಷ ಉಪಪದ್ಯತೇ । ಯಃ ಪುನಃ "ಕರ್ತಾಹಮ್" ಇತಿ ವೇತ್ತ್ಯಾತ್ಮಾನಮ್, ತಸ್ಯ "ಮಮೇದಂ ಕರ್ತವ್ಯಮ್" ಇತಿ ಅವಶ್ಯಂಭಾವಿನೀ ಬುದ್ಧಿಃ ಸ್ಯಾತ್। ತದಪೇಕ್ಷಯಾ ಸೋಽಧಿಕ್ರಿಯತೇ ಇತಿ ತಂ ಪ್ರತಿ ಕರ್ಮಾಣಿ ಸಂಭವನ್ತಿ[2] । ಸ ಚ ಅವಿದ್ವಾನ್ । "ಉಭೌ ತೌ ನ ವಿಜಾನೀತಃ" (೨-೧೯) ಇತಿ ವಚನಾತ್ । ವಿಶೇಷಿತಸ್ಯ ಚ ವಿದುಷಃ ಕರ್ಮಾಕ್ಷೇಪವಚನಾಚ್ಚ "ಕಥಂ ಸ ಪುರುಷಃ" ಇತಿ । ತಸ್ಮಾತ್ ವಿಶೇಷಿತಸ್ಯ ಅವಿಕ್ರಿಯಾತ್ಮದರ್ಶಿನೋ ವಿದುಷೋ[3] ಸರ್ವಕರ್ಮಸಂನ್ಯಾಸ ಏವಾಧಿಕಾರಃ । ಅತ ಏವ ಭಗವಾನ್ ನಾರಾಯಣಃ ಸಾಙ್ಖ್ಯಾನ್ ವಿದುಷಃ, ಅವಿದುಷಶ್ಚ ಕರ್ಮಿಣಃ ಪ್ರವಿಭಜ್ಯ ದ್ವೇ ನಿಷ್ಠೇ ಗ್ರಾಹಯತಿ "ಜ್ಞಾನಯೋಗೇನ ಸಾಙ್ಖ್ಯಾನಾಂ ಕರ್ಮಯೋಗೇನ ಯೋಗಿನಾಮ್" (೩-೩) ಇತಿ । ತಥಾ ಚ ಪುತ್ರಾಯ ಆಹ ಭಗವಾನ್ ವ್ಯಾಸಃ "ದ್ವಾವಿಮಾವಥ ಪನ್ಥಾನೌ" (ಶಾಂ. ೨೪೧-೬) ಇತ್ಯಾದಿ । ತಥಾ ಚ "ಕ್ರಿಯಾಪಥಶ್ಚೈವ ಪುರಸ್ತಾತ್ ಪಶ್ಚಾತ್ ಸಂನ್ಯಾಸಶ್ಚ" (?)[4] ಇತಿ । ಏತಮೇವ ವಿಭಾಗಂ ಪುನಃ ಪುನರ್ದರ್ಶಯಿಷ್ಯತಿ ಭಗವಾನ್—ಅತತ್ತ್ವವಿತ್ "ಅಹಙ್ಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ" (೩-೨೭) ಇತಿ, ತತ್ತ್ವವಿತ್ತು "ನಾಹಂ ಕರೋಮೀತಿ" (೩-೨೮, ೫-೮) (ಇತಿ)[5] । ತಥಾ ಚ "ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ" (೫-೧೩) ಇತ್ಯಾದಿ ॥

(ಭಾಷ್ಯಾರ್ಥ)

ಜ್ಞಾನಿಗೆ ಕರ್ಮವು ಸಂಭವಿಸುವದಿಲ್ಲವೆಂದು ಹೇಳಿರುವದರಿಂದ ಶಾಸ್ತ್ರದಲ್ಲಿ

1. "ಜ್ಞಾನಾದನ್ಯನ್ನೋತ್ಪದ್ಯತೇ" ಎಂದು ಆ||ನಿ||ಗು||

2. "ಸಂಭವನ್ತಿ" ಎಂದು ಮೈ||ಮು|| ಪಾಠಗಳಲ್ಲಿಲ್ಲ.

3. 'ಮುಮುಕ್ಷೋಶ್ಚ' ಎಂಬ ಮಾತು ಮುದ್ರಿತಪುಸ್ತಕಗಳಲ್ಲೆಲ್ಲ ಇದೆಯಾದರೂ ಬೇಕಿರುವದಿಲ್ಲ.

4. ಇದು ಯಾವ ಶ್ರುತಿಯೆಂಬುದು ತಿಳಿಯದು. ಈ.ಬೃ. ಭಾಷ್ಯಗಳಲ್ಲಿಯೂ ಇದರ ಅರ್ಥವನ್ನು ಅನುವಾದಮಾಡಿಕೊಂಡಿರುತ್ತಾರೆ.

5. ಇಲ್ಲಿ 'ಇತಿ' ಎಂಬ ಒಂದು ಶಬ್ದವು ಹೆಚ್ಚಾಗಿ ಬೇಕೆಂದು ತೋರುತ್ತದೆ.

ಯಾವ ಕರ್ಮಗಳನ್ನು ವಿಧಿಸಿದೆಯೋ ಅವು ಅಜ್ಞಾನಿಗಾಗಿ ವಿಹಿತವಾಗಿವೆ ಎಂಬುದು ಭಗವಂತನ ನಿಶ್ಚಯವೆಂದು ಗೊತ್ತಾಗುತ್ತದೆ.

(ಆಕ್ಷೇಪ) :—ಜ್ಞಾನವೂ ಅಜ್ಞಾನಿಗೋಸ್ಕರವಾಗಿಯೇ ವಿಹಿತವಾಗಿರುತ್ತದೆಯಲ್ಲವೆ? ಏಕೆಂದರೆ ವಿದ್ಯೆಯನ್ನು ಅರಿತುಕೊಂಡವನಿಗೆ ಜ್ಞಾನವನ್ನು ವಿಧಿಸುವದು ಅರೆದ (ಹಿಟ್ಟನ್ನೇ) ಅರೆಯುವಂತೆ ವ್ಯರ್ಥವಾಗುತ್ತದೆ. ಹೀಗಿರುವಲ್ಲಿ ಅಜ್ಞಾನಿಗೆ ಕರ್ಮಗಳನ್ನು ವಿಧಿಸಿದೆಯೆಂದೂ ಜ್ಞಾನಿಗೆ (ವಿಧಿಸಿ)ಲ್ಲವೆಂದೂ ವಿಶೇಷವನ್ನು (ಹೇಳುವದು) ಸರಿಯಾಗುವದಿಲ್ಲವಲ್ಲ!

(ಪರಿಹಾರ) :—ಹಾಗಲ್ಲ. ಏಕೆಂದರೆ ಮಾಡಬೇಕಾದದ್ದು ಇರುವದು, ಇಲ್ಲದಿರುವದು ಎಂಬ ವಿಶೇಷ(ವನ್ನು ಹೇಳ)ಬಹುದು. (ಹೇಗೆಂದರೆ) :—**ಅಗ್ನಿಹೋತ್ರವೇ ಮುಂತಾದ ವಿಧಿಗಳ ಅರ್ಥವನ್ನು ತಿಳಿದುಕೊಂಡಮೇಲೈ ಅನೇಕ ಸಾಮಗ್ರಿಗಳನ್ನು ಕೂಡಿಹಾಕಿಕೊಂಡು**[1] **(ಅ, ಅಗ್ನಿಹೋತ್ರವೇ ಮುಂತಾದ ಕರ್ಮವನ್ನು ಮಾಡಬೇಕಾಗಿರುವದೆಂದೂ "ನಾನು ಕರ್ತನು, ನಾನು ಮಾಡತಕ್ಕ (ಕರ್ಮ)ವುಂಟು" ಎಂಬೂ ಈ ಪರಿಯಾಗಿ ತಿಳಿವುಳ್ಳ ಅಜ್ಞಾನಿಗೆ ಹೇಗೆ ಅನುಷ್ಠಾನಮಾಡತಕ್ಕದ್ದು (ಇನ್ನೂ) ಇರುವದೋ, ಹಾಗೆ "ಆತ್ಮನು ಹುಟ್ಟುವದಿಲ್ಲ" (೨-೨೦) ಎಂದು ಮುಂತಾಗಿ (ಹೇಳಿರುವ) ಆತ್ಮಸ್ವರೂಪವನ್ನು ತಿಳಿಸುವ ವಾಕ್ಯದ ಅರ್ಥವನ್ನು ತಿಳಿದುಕೊಂಡಮೇಲೆಯೂ ಯಾವದನ್ನೂ ಮಾಡಬೇಕಾದದ್ದು (ಉಳಿದಿ)ರುವದಿಲ್ಲ.**[2] **"ನಾನು (ಕರ್ಮಗಳನ್ನು) ಮಾಡುವವನೂ ಅಲ್ಲ, (ಅವುಗಳ ಫಲವನ್ನು) ಅನುಭವಿಸುವವನೂ ಅಲ್ಲ" ಎಂದು ಮುಂತಾಗಿ ಆತ್ಮನು ಒಬ್ಬನು, ಅಕರ್ತೃ—ಎಂಬುದೇ ಮುಂತಾದ ವಿಷಯಗಳನ್ನು ಅರಿತಿರುವದು ಹೊರತು ಬೇರೆ ಯಾವ (ಜ್ಞಾನವೂ) ಉಂಟಾಗುವದಿಲ್ಲ. ಆದ್ದರಿಂದ ಈ ವಿಶೇಷವನ್ನು (ಹೇಳಿದ್ದು)ಯುಕ್ತವಾಗಿರುತ್ತದೆ.**[3]

---

1. ಕರ್ಮಕ್ಕೆ ಬೇಕಾದ ಸಾಧನಗಳನ್ನು ಕೂಡಿಹಾಕಿಕೊಂಡು.

2. ವಾಕ್ಯಾರ್ಥಜ್ಞಾನದಿಂದಲೇ ಸಾಕ್ಷಾತ್ಕಾರವಾಗುವದಿಲ್ಲವೆಂದೂ ವಾಕ್ಯಾರ್ಥವನ್ನು ತಿಳಿದುಕೊಂಡಬಳಿಕವೂ ಧ್ಯಾನಾದಿಗಳನ್ನು ಮಾಡಬೇಕೆಂದೂ ಹೇಳುವ ವೇದಾಂತಿಗಳ ಮತವು ಆಚಾರ್ಯರಿಗೆ ಒಪ್ಪಿಲ್ಲ. ಈ ವಿಷಯದಲ್ಲಿ ಮುಂ.ಭಾ. ೧-೧-೬, ಛಾ. ಸಂಬಂಧಭಾಷ್ಯ, ಬೃ.ಭಾ. ೧-೪-೭, ಸೂ.ಭಾ. ೧-೧-೧, ೧-೧-೪—ಇವನ್ನು ನೋಡಿ.

3. ಅಜ್ಞಾನಿಗೆ ಕರ್ಮವಿದೆ, ಆತ್ಮಜ್ಞಾನಿಗೆ ಇಲ್ಲ ಎಂದು ಹೇಳಿದ್ದು. ಈ ಸಂದರ್ಭದಲ್ಲಿ ಆತ್ಮನನ್ನರಿಯದೆ ತಪ್ಪಾಗಿ ತಿಳಿದುಕೊಂಡಿರುವದೇ ಅಜ್ಞಾನವು—ಎಂಬುದನ್ನು ನೆನಪಿಡಬೇಕು.

ಯಾವನಾದರೆ 'ನಾನು ಮಾಡುವವನು' ಎಂದು ತನ್ನನ್ನು ತಿಳಿದುಕೊಂಡಿರುವನೋ ಅವನಿಗೆ 'ನಾನು ಇಂಥದ್ದನ್ನು ಮಾಡಬೇಕಾಗಿದೆ' ಎಂಬ ಬುದ್ಧಿಯು ಅವಶ್ಯವಾಗಿ ಹುಟ್ಟಿಯೇ ತೀರುವದು. ಅದರಿಂದ ಅವನು (ಕರ್ಮಕ್ಕೆ) ಅಧಿಕಾರಿಯಾಗುವನು, ಆದ್ದರಿಂದ ಅವನಿಗೆ ಕರ್ಮಗಳು ಸಂಭವಿಸುತ್ತವೆ. ಅವನು ಅಜ್ಞಾನಿಯು, ಏಕೆಂದರೆ "ಅವರಿಬ್ಬರೂ ಅರಿಯರು", (೨-೧೯) ಎಂದು (ಮೊದಲು) ಹೇಳಿರುತ್ತದೆ, ಮತ್ತು ಮೇಲೆ ಹೇಳಿದಂಥ ಜ್ಞಾನಿಗೆ ಕರ್ಮ(ವಿರಬಹು)ದೆಂಬುದನ್ನು "ಆ ಪುರುಷನು ಹೇಗೆ ಕೊಂದಾನು?" (೨-೨೦) ಎಂದು (ಈಗ) ಆಕ್ಷೇಪಿಸಿರುತ್ತದೆ.

ಆದ್ದರಿಂದ ಮೇಲೆ ಹೇಳಿದಂತೆ ವಿಕಾರವಿಲ್ಲದ ಆತ್ಮನನ್ನು ಅರಿತುಕೊಂಡಿರುವ ಜ್ಞಾನಿಗೆ ಸರ್ವಕರ್ಮಸಂನ್ಯಾಸದಲ್ಲಿಯೇ ಅಧಿಕಾರವು. ಆದ್ದರಿಂದ ಭಗವಂತನಾದ **ನಾರಾಯಣನು** ಜ್ಞಾನಿಗಳಾದ ಸಾಂಖ್ಯರನ್ನೂ ಅಜ್ಞಾನಿಗಳಾದ ಕರ್ಮಿಗಳನ್ನೂ ವಿಂಗಡಿಸಿ "ಸಾಂಖ್ಯರಿಗೆ ಜ್ಞಾನಯೋಗದಿಂದಲೂ ಯೋಗಿಗಳಿಗೆ ಕರ್ಮಯೋಗದಿಂದಲೂ" ಎಂದು ಎರಡು ನಿಷ್ಠೆಗಳನ್ನು ಹೇಳಿರುತ್ತಾನೆ. ಆದ್ದರಿಂದಲೇ ಭಗವಂತನಾದ ವ್ಯಾಸ (ಮಹರ್ಷಿಯು) ತನ್ನ ಮಗನಿಗೆ "ಇನ್ನು ಇವೆರಡು ದಾರಿಗಳು(ಂಟು)" (ಭಾ. ೨೪೧-೬) ಎಂದು ಮುಂತಾಗಿ ತಿಳಿಸಿರುತ್ತಾನೆ. ಆದ್ದರಿಂದಲೇ "ಕ್ರಿಯಾಮಾರ್ಗವೇ ಮೊದಲು, ಆಮೇಲೆ ಸಂನ್ಯಾಸವು" (?) ಎಂದು (ಶ್ರುತಿವಚನವಿದೆ). ಈ ವಿಂಗಡವನ್ನೇ "ತತ್ತ್ವವನ್ನರಿಯದೆ ಅಹಂಕಾರದಿಂದ ವಿಮೂಢವಾದ ಮನಸ್ಸುಳ್ಳವನು ನಾನು ಕರ್ತನೆಂದು ಭಾವಿಸಿಕೊಳ್ಳುತ್ತಾನೆ" (೩-೨೭) "ಆದರೆ ತತ್ತ್ವವನ್ನು ಅರಿತವನು ನಾನು ಮಾಡುವದಿಲ್ಲ ಎಂದು (ತಿಳಿಯುತ್ತಾನೆ" (೩-೧೮, ೫-೨೮) ಎಂತಲೂ "ಎಲ್ಲಾ ಕರ್ಮಗಳನ್ನೂ ಮನಸ್ಸಿನಿಂದ ಸಂನ್ಯಾಸಮಾಡಿ ಕುಳಿತಿರುತ್ತಾನೆ" (೫-೧೩) ಎಂದು ಮುಂತಾಗಿಯೂ ಭಗವಂತನು ಮುಂದೆಯೂ ಮತ್ತೆಮತ್ತೆ ತೋರಿಸಿಕೊಟ್ಟಿರುತ್ತಾನೆ.

## ಅಕರ್ತ್ರಾತ್ಮಜ್ಞಾನವು ಉಂಟಾಗುವದಿಲ್ಲವೆಂಬುದು ಸರಿಯಲ್ಲ

(ಭಾಷ್ಯ)

**೪೦. ತತ್ರ ಕೇಚಿತ್ ಪಣ್ಡಿತಂಮನ್ಯಾ ವದನ್ತಿ" ಜನ್ಮಾದಿಷಡ್ಭಾವವಿಕ್ರಿಯಾರಹಿತಃ, ಅವಿಕ್ರಿಯಃ, ಅಕರ್ತಾ, ಏಕಃ, ಅಹಮ್ ಆತ್ಮಾ" ಇತಿ ನ ಕಸ್ಯಚಿತ್ ಜ್ಞಾನಮ್ ಉತ್ಪದ್ಯತೇ, ಯಸ್ಮಿನ್ ಸತಿ ಸರ್ವಕರ್ಮಸಂನ್ಯಾಸ ಉಪದಿಶ್ಯತೇ ಇತಿ । ತನ್ನ । "ನ ಜಾಯತೇ" (೨-೨೦) ಇತ್ಯಾದಿಶಾಸ್ತ್ರೋಪದೇಶಾನರ್ಥಕ್ಯ**

ಪ್ರಸಙ್ಗಾತ್ । ಯಥಾ ಚ ಶಾಸ್ತ್ರೋಪದೇಶಸಾಮರ್ಥ್ಯಾತ್ ಧರ್ಮಾಧರ್ಮಾಸ್ತಿತ್ವ ವಿಜ್ಞಾನಂ [1] ಕರ್ತುಶ್ಚ ದೇಹಾನ್ತರಸಂಬಂಧವಿಜ್ಞಾನಮ್ [2] ಉತ್ಪದ್ಯತೇ ತಥಾ ಶಾಸ್ತ್ರಾತ್ ತಸ್ಯೈವ ಆತ್ಮನೋಽವಿಕ್ರಿಯತ್ವಾಕರ್ತೃತ್ವೈಕತ್ವಾದಿವಿಜ್ಞಾನಂ ಕಸ್ಮಾ ನ್ನೋತ್ಪದ್ಯತೇ ?–ಇತಿ ಪ್ರಷ್ಟವ್ಯಾಸ್ತೇ । ಕರಣಾಗೋಚರತ್ವಾತ್ ಇತಿ ಚೇತ್ । ನ "ಮನಸೈವಾನುದ್ರಷ್ಟವ್ಯಮ್" (ಬೃ. ೪-೪-೧೯) ಇತಿ ಶ್ರುತೇಃ । ಶಾಸ್ತ್ರಾ ಚಾರ್ಯೋಪದೇಶಶಮದಮಾದಿಸಂಸ್ಕೃತಂ [3] ಮನಃ ಆತ್ಮದರ್ಶನೇ ಕರಣಮ್ ತಥಾ ಚ ತದಧಿಗಮಾಯ ಅನುಮಾನೇ ಆಗಮೇ ಚ ಸತಿ ಜ್ಞಾನಂ ನೋತ್ಪದ್ಯತೇ ಇತಿ ಸಾಹಸಮೇತತ್ ॥

(ಭಾಷ್ಯಾರ್ಥ)

ಹೀಗಿರುವಲ್ಲಿ ತಾವೇ ಪಂಡಿತರೆಂದುಕೊಂಡಿರುವ ಕೆಲವರು ಹೇಳುತ್ತಾರೆ ನೆಂದರೆ: ಹುಟ್ಟುವದೇ ಮುಂತಾದ ಆರು ವಿಕಾರಗಳಿಲ್ಲದ ಯಾವ ಮಾರ್ಪಾಡು ಇಲ್ಲದ, ಅಕರ್ತೃವಾದ, ಒಬ್ಬನೇ ಒಬ್ಬನಾದ ಆತ್ಮನು ನಾನು–ಎಂಬ ಜ್ಞಾನವ ಯಾವನಿಗೂ ಉಂಟಾಗುವದೇ ಇಲ್ಲ [4], ಹಾಗೆ ಹುಟ್ಟುವದಾಗಿದ್ದರೆ ಸರ್ವಕರ್ಮ ಸಂನ್ಯಾಸವನ್ನು ಉಪದೇಶಮಾಡಬಹುದಾಗಿತ್ತು !

ಆದರೆ ಇದು ಸರಿಯಲ್ಲ.[5] ಏಕೆಂದರೆ (ಅವರ ಪಕ್ಷದಲ್ಲಿ) "ನ ಜಾಯತೇ" (೨-೨೦) ಮುಂತಾದ ಶಾಸ್ತ್ರೋಪದೇಶವು ವ್ಯರ್ಥವಾಗಬೇಕಾಗುವದು. ಧರ್ಮಾ ಧರ್ಮಗಳುಂಟು ಎಂಬ ಜ್ಞಾನವೂ ಕರ್ತೃವಾದ (ಜೀವನು ಜನ್ಮಾಂತರ ದಲ್ಲಿಯೂ ಲೋಕಾಂತರದಲ್ಲಿಯೂ) ಬೇರೊಂದು ದೇಹಕ್ಕೆ ಸಂಬಂಧಪಟ್ಟ

---

1. "ಧರ್ಮಾಸ್ತಿತ್ವವಿಜ್ಞಾನಮ್" ಎಂಬ ನಿ|| ಗು|| ಪಾಠಗಳಿಗಿಂತ ಇದು ಉತ್ತಮ.

2. "ದೇಹಾನ್ತರಸಂಬನ್ಧಿವಿಜ್ಞಾನಂ ಚ" ಎಂಬ ಆ|| ಪಾಠವು ಸರಿಯಲ್ಲ.

3. "ಶಾಸ್ತ್ರಾಚಾರ್ಯೋಪದೇಶಜನಿತ" ಎಂಬ ನಿ||ಗು||ಮೈ||ಮು|| ಪಾಠಕ್ಕಿಂತ ಈ ಪಾಠವೇ ಉತ್ತಮ.

4 ಯಾವ ಜ್ಞಾನವುಂಟಾದರೂ ದ್ವೈತವಿದ್ದೇ ಇರುತ್ತದೆ, ಕರ್ತೃತ್ವವು ಉಳಿದ ಕೊಂಡೇ ಇರುತ್ತದೆ ಎಂದು ಪೂರ್ವಪಕ್ಷಿಯ ಭಾವ.

5. ಜ್ಞಾನವೇಕೆ ಉಂಟಾಗುವದಿಲ್ಲ? ಪ್ರಮಾಣವಿಲ್ಲದ್ದರಿಂದಲೆ? ಅಥವಾ ಕರಣ ದೋಷದಿಂದಲೆ? ಇದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಜನರು ಇದಕ್ಕಾಗಿ ಹಂ ಬಲಿಸದಿರುವದರಿಂದಲೆ? ಇವು ಮೂರೂ ಪ್ರಕೃತದಲ್ಲಿ ಇಲ್ಲ.

ರುವನೆಂಬ ಜ್ಞಾನವೂ ಶಾಸ್ತ್ರೋಪದೇಶದ ಬಲದಿಂದ ಹೇಗೆ ಉಂಟಾಗುತ್ತದೆಯೋ ಅದರಂತೆ ಅದೇ ಆತ್ಮನು ಯಾವ ವಿಕಾರವೂ ಇಲ್ಲದವನೆಂದೂ ಅಕರ್ತೃವೆಂದೂ ಒಬ್ಬನೇ ಎಂದು ಮುಂತಾಗಿಯೂ ಶಾಸ್ತ್ರದಿಂದ ಏತಕ್ಕೆ ಜ್ಞಾನವು ಉಂಟಾಗುವದಿಲ್ಲ? [1]—ಎಂದು ಅವರನ್ನು ಕೇಳಬೇಕು. ಆತ್ಮನು (ಯಾವ) ಕರಣಕ್ಕೂ ಗೋಚರನಲ್ಲವಾದ್ದರಿಂದ (ಇಂಥ ಜ್ಞಾನವು ಹುಟ್ಟಲಾರದು) ಎಂದರೆ (ಅದು) ಸರಿಯಲ್ಲ; ಏಕೆಂದರೆ "ಮನಸ್ಸಿನಿಂದಲೇ ಕಂಡುಕೊಳ್ಳಬೇಕು" (ಬೃ. ೪-೪-೧೯) ಎಂದು ಶ್ರುತಿಯಲ್ಲಿ (ಹೇಳಿ)ರುತ್ತದೆ. **ಶಾಸ್ತ್ರದ ಮತ್ತು ಆಚಾರ್ಯರ ಉಪದೇಶದಿಂದಲೂ ಶಮದಮಾದಿಗಳಿಂದಲೂ ಸಂಸ್ಕಾರವನ್ನು ಹೊಂದಿರುವ ಮನಸ್ಸು ಆತ್ಮನನ್ನು ಕಂಡುಕೊಳ್ಳುವದಕ್ಕೆ ಕರಣವು.**[2] ಆದ್ದರಿಂದ ಆ (ಆತ್ಮನನ್ನು) ಅರಿತುಕೊಳ್ಳುವದಕ್ಕೆ ಅನುಮಾನವೂ ಆಗಮವೂ[3] ಇದ್ದರೂ (ಆತ್ಮ)ಜ್ಞಾನವು ಹುಟ್ಟುವದಿಲ್ಲ ಎಂದು ಹೇಳುವದು ಸಾಹಸದ ಮಾತು.

## ಜ್ಞಾನದ ಪ್ರಯೋಜನ

(ಭಾಷ್ಯ)

೪೧. ಜ್ಞಾನಂ ಚ ಉತ್ಪದ್ಯಮಾನಂ ತದ್ವಿಪರೀತಮ್ ಅಜ್ಞಾನಮ್ ಅವಶ್ಯಂ ಬಾಧತೇ ಇತಿ ಅಭ್ಯುಪಗನ್ತವ್ಯಮ್ । ತಚ್ಚ ಅಜ್ಞಾನಂ ದರ್ಶಿತಮ್ 'ಹನ್ತಾಹಮ್, ಹತೋಽಸ್ಮಿ" ಇತಿ ಉಭೌ ತೌ ನ ವಿಜಾನೀತಃ ಇತಿ । ಅತ್ರ ಚ ಆತ್ಮನೋ ಹನನಕ್ರಿಯಾಯಾಃ ಕರ್ತೃತ್ವಂ ಕರ್ಮತ್ವಂ ಹೇತುಕರ್ತೃತ್ವಂ[4] ಚ ಅಜ್ಞಾನಕೃತಂ ದರ್ಶಿತಮ್ । ತಚ್ಚ ಸರ್ವಕ್ರಿಯಾಸ್ವಪಿ ಸಮಾನಂ ಕರ್ತೃತ್ವಾದೇರ

---

1. ಅಕರ್ತ್ರಾತ್ಮಬೋಧಕವಾಕ್ಯವು ಜ್ಞಾನವನ್ನುಂಟುಮಾಡುವದಿಲ್ಲವೆನ್ನುವವರು ದೇಹವ್ಯತಿರಿಕ್ತಕರ್ತ್ರಾತ್ಮಬೋಧಕವಾಕ್ಯವನ್ನೂ ಅಪ್ರಮಾಣವೆಂದು ಒಪ್ಪಬೇಕಾಗುವದು. ಸ್ವರ್ಗಾದಿಗಳು ಪರೋಕ್ಷವಾಗಿರುವದರಿಂದ ಅವುಗಳ ವಿಷಯದ ವಾಕ್ಯವು ಸಂದಿಗ್ಧವಾದರೂ ಆದೀತು, ಪರೋಕ್ಷನಾಗಿರುವ ಆತ್ಮವಾಕ್ಯದಲ್ಲಿ ಸಂಶಯವಾದರೂ ಏನು ?

2. ಶುದ್ಧವಾದ ಮನಸ್ಸುಳ್ಳವನಿಗೆ ಆತ್ಮಜ್ಞಾನವುಂಟಾಗಿಯೇ ತೀರುತ್ತದೆ ಎಂದು ಭಾವ. ಮುಂ. ಭಾ. ೩—೧—೮; ಇಲ್ಲಿರುವ ಕರಣವಾಕ್ಯದ ವಿಷಯಕ್ಕೆ ಪೀಠಿಕೆಯನ್ನು ನೋಡಿ.

3. ಅನುಮಾನವು ಆಗಮಕ್ಕೆ ಅನುಗ್ರಾಹಕವಾದ ತರ್ಕವು, ಸ್ವತಂತ್ರಪ್ರಮಾಣವಲ್ಲ.

4. ಈ ಮಾತು ಮೈ॥ಮು॥ ಪಾಠಗಳಲ್ಲಿ ಬಿಟ್ಟುಹೋಗಿವೆ.

ವಿದ್ಯಾಕೃತತ್ವಮ್ । ಅವಿಕ್ರಿಯತ್ವಾತ್ ಆತ್ಮನಃ । ವಿಕ್ರಿಯಾವಾನ್ ಹಿ ಕರ್ತಾ ಆತ್ಮನಃ ಕರ್ಮಭೂತಮ್ ಅನ್ಯಂ ಪ್ರಯೋಜಯತಿ 'ಕುರು' ಇತಿ । ತದೇತತ್ ಅವಿಶೇಷೇಣ ವಿದುಷಃ ಸರ್ವಕ್ರಿಯಾಸು ಕರ್ತೃತ್ವಂ ಹೇತುಕರ್ತೃತ್ವಂ ಚ ಪ್ರತಿಷೇಧತಿ ಭಗವಾನ್ ವಾಸುದೇವಃ ವಿದುಷಃ ಕರ್ಮಾಧಿಕಾರಾಭಾವಪ್ರದರ್ಶನಾರ್ಥಮ್ "ವೇದಾವಿನಾಶಿನಂ . . . ಕಥಂ ಸ ಪುರುಷಃ" ಇತ್ಯಾದಿನಾ ॥

(ಭಾಷ್ಯಾರ್ಥ)

**ಜ್ಞಾನವು ಹುಟ್ಟಿದರೆ ತನಗೆ ವಿರುದ್ಧವಾದ[1] ಅಜ್ಞಾನವನ್ನು ಅವಶ್ಯವಾಗಿ ಹೋಗಲಾಡಿಸಿಯೇ ತೀರುವದು-ಎಂದು ಒಪ್ಪಬೇಕು[2]** ಈ ಅಜ್ಞಾನವನ್ನು ಹಿಂದೆ "ನಾನು ಕೊಲ್ಲುತ್ತೇನೆ, ನಾನು ಕೊಲ್ಲಲ್ಪಡುವೆನು" ಎಂಬವರಿಬ್ಬರೂ ಅರಿಯರು ಎಂದು ತೋರಿಸಿರುತ್ತದೆ.[3] ಇಲ್ಲಿಯೂ ಆತ್ಮನು ಕೊಲ್ಲುವದೆಂಬ ಕ್ರಿಯೆಗೆ ಕರ್ತನೆಂದೂ ಕರ್ಮವೆಂದೂ ಪ್ರೇರಕನೆಂದೂ ತಿಳಿಯುವದು ಅಜ್ಞಾನದ ಫಲವೆಂದು ಮತ್ತೆ ಹೇಳಿರುತ್ತದೆ.[4] ಮತ್ತು **ಕರ್ತೃತ್ವಾದಿಗಳು ಅವಿದ್ಯಾಕೃತವಾಗಿರುವವೆಂಬಿದು ಎಲ್ಲಾ ಕ್ರಿಯೆಗಳಿಗೂ ಸಮಾನವಾಗಿರುತ್ತದೆ, ಏಕೆಂದರೆ ಆತ್ಮನು ಅವಿಕ್ರಿಯನಾಗಿರುತ್ತಾನೆ[5]** ವಿಕ್ರಿಯೆಯಿರುವ ಕರ್ತನೇ ಅಲ್ಲವೆ, ತನಗೆ ಕರ್ಮವಾಗಿರುವ ಮತ್ತೊಬ್ಬನನ್ನು ಮಾಡು ಎಂದು ಪ್ರೇರಿಸುತ್ತಾನೆ? ಆದ್ದರಿಂದ ಭಗವಂತನಾದ ವಾಸುದೇವನು "ವೇದಾವಿನಾಶಿನಂ . . . . .ಕಥಂ ಸ ಪುರುಷಃ" ಅವಿನಾಶಿಯೆಂದು ತಿಳಿದರೆ... ... ಆ ಪುರುಷನು ಹೇಗೆ (ಕೊಂದಾನು, ಕೊಲ್ಲಿಸಿಯಾನು)?

---

1. ಅಜ್ಞಾನವೆಂದರೆ ಜ್ಞಾನದ ಅಭಾವ ಮಾತ್ರವಲ್ಲ, ಅದಕ್ಕೆ ವಿರುದ್ಧವಾಗಿರುವ ತಪ್ಪು ತಿಳಿವಳಿಕೆಯೂ ಆಗಿರುತ್ತದೆ. ಈ ಸಂದರ್ಭದಲ್ಲಿ ಹೇಳಿರುವದು ಉಪಾದಾನಕಾರಣವಾದ ಅನಿರ್ವಚನೀಯಾಜ್ಞಾನವೆಂಬ ವಾದವನ್ನು ಆ॥ ವ್ಯಾಖ್ಯಾನಕಾರನು ತೆಗೆದಿರುತ್ತಾನೆ; ಆದಕ್ಕೆ ಭಾಷ್ಯದ ಆಧಾರವು ಕಾಣುವದಿಲ್ಲ.

2. ಇಲ್ಲದಿದ್ದರೆ ಅದು ಜ್ಞಾನವೆಂಬುದೇ ಸರಿಯಾಗುವದಿಲ್ಲ.

3. ಹನನಕ್ರಿಯಾಕಾರಕಫಲಗಳು ಆತ್ಮನಿಗೆ ಸಂಬಂಧಪಟ್ಟವುಗಳೆಂದು ತಿಳಿಯುವದೇ ಅಜ್ಞಾನವೆಂದು ಸೂಚಿಸಿದಂತೆ ಆಯಿತು.

4. 'ಹೇಗೆ ಕೊಲ್ಲುತ್ತಾನೆ?' ಎಂಬುದರಿಂದ ಕರ್ತೃತ್ವವನ್ನೂ 'ಹೇಗೆ ಕೊಲ್ಲಿಸುತ್ತಾನೆ' ಎಂಬುದರಿಂದ ಪ್ರೇರಕಕರ್ತೃತ್ವವನ್ನೂ ಅಲ್ಲಗಳೆದಂತಾಯಿತು. ಇಲ್ಲಿ ಕರ್ಮವೆಂಬ ಮಾತಿಲ್ಲದಿದ್ದರೂ ಆಗಿತ್ತೆಂದು ತೋರುತ್ತದೆ. 'ಕರ್ಮ' ವೆಂಬ ಮಾತು 'ಅವರಿಬ್ಬರೂ ಅರಿಯರು' ಎಂಬ ಶ್ಲೋಕಕ್ಕೇ ಒಪ್ಪುತ್ತದೆ.

5. ಅವಿಕ್ರಿಯನಾದ್ದರಿಂದ ಪ್ರೇರಕಕರ್ತೃವೂ ಅಲ್ಲ, ಆಕರ್ತೃವೂ|ಅಲ್ಲ-ಎಂಬುದು ಕೊಲ್ಲುವ ಕ್ರಿಯೆಯಂತೆ ಮಿಕ್ಕ ಕ್ರಿಯೆಗಳಿಗೂ ಸಮಾನ.

ಎಂದು ಮುಂತಾದ (ವಾಕ್ಯ)ದಿಂದ ಜ್ಞಾನಿಗೆ ಸಾಮಾನ್ಯವಾಗಿಯೇ ಯಾವ ಕ್ರಿಯೆಗಳಲ್ಲಿಯೂ ಈ ಕರ್ತೃತ್ವವಾಗಲಿ ಪ್ರೇರಕಕರ್ತೃತ್ವವಾಗಲಿ ಇರುವದಿಲ್ಲವೆಂದು (ಎಲ್ಲಾ ಕ್ರಿಯೆಗಳಲ್ಲಿಯೂ ಕರ್ತೃತ್ವವನ್ನು) ನಿವಾರಣೆಮಾಡಿರುತ್ತಾನೆ (ಎಂದಾಯಿತು.[1] ಜ್ಞಾನಿಗೆ ಯಾವ ಕರ್ಮದಲ್ಲಿಯೂ ಅಧಿಕಾರವಿಲ್ಲವೆಂಬುದನ್ನು [2] ತೋರಿಸಿಕೊಡಬೇಕೆಂಬುದೇ (ಹೀಗೆ ನಿವಾರಣೆಮಾಡಿರುವದರ) ಪ್ರಯೋಜನವು.

## ಜ್ಞಾನಿಯ ಸರ್ವಕರ್ಮಸಂನ್ಯಾಸ

೪೨. ಕ್ವ ಪುನರ್ವಿದುಷೋಽಧಿಕಾರಃ ಇತಿ ? ಏತದುಕ್ತಂ ಪೂರ್ವಮೇವ "ಜ್ಞಾನಯೋಗೇನ ಸಾಂಖ್ಯಾನಾಮ್" (೩-೩) ಇತಿ । ತಥಾ ಚ ಸರ್ವಕರ್ಮಸಂನ್ಯಾಸಂ ವಕ್ಷ್ಯತಿ "ಸರ್ವಕರ್ಮಾಣಿ ಮನಸಾ" (೫-೧೩) ಇತ್ಯಾದಿನಾ । ನನು 'ಮನಸಾ' ಇತಿ ವಚನಾತ್ ನ ವಾಚನಿಕಾನಾಂ ಕಾಯಿಕಾನಾಂ ಚ ಸಂನ್ಯಾಸಃ ಇತಿ ಚೇತ್ । ನ । ಸರ್ವಕರ್ಮಾಣಿ ಇತಿ ವಿಶೇಷಿತತ್ವಾತ್ । ಮಾನಸಾನಾಮೇವ ಸರ್ವಕರ್ಮಾಣಾಮ್ ಇತಿ ಚೇತ್ । ನ । ಮನೋವ್ಯಾಪಾರಪೂರ್ವಕತ್ವಾತ್ ವಾಕ್ಕಾಯವ್ಯಾಪಾರಾಣಾಂ ಮನೋವ್ಯಾಪಾರಾಭಾವೇ ಭಾವಾನುಪಪತ್ತೇಃ [3] । ಶಾಸ್ತ್ರೀಯಾಣಾಂ ವಾಕ್ಕಾಯಕರ್ಮಣಾಂ ಕಾರಣಾನಿ ಮಾನಸಾನಿ ಕರ್ಮಾಣಿ ವರ್ಜಯಿತ್ವಾ ಅನ್ಯಾನಿ ಸರ್ವಕರ್ಮಾಣಿ ಮನಸಾ ಸಂನ್ಯಸ್ಯ ಆಸ್ತೇ ಇತಿ ಚೇತ್ । ನ । "ನೈವ ಕುರ್ವನ್ ನ ಕಾರಯನ್" (೫-೨೩) ಇತಿ ವಿಶೇಷಣಾತ್ । ಸರ್ವಕರ್ಮಸಂನ್ಯಾಸಃ ಅಯಂ ಭಗವತಾ ಉಕ್ತಃ ಮರಿಷ್ಯತಃ ನ ಜೀವತಃ ಇತಿ ಚೇತ್ । ನ । "ನವದ್ವಾರೇ ಪುರೇ ದೇಹೇ ಆಸ್ತೇ" (೫-೨೩) ಇತಿ ವಿಶೇಷಣಾನುಪಪತ್ತೇಃ । ನ ಹಿ ಸರ್ವಕರ್ಮಸಂನ್ಯಾಸೇನ ಮೃತಸ್ಯ ತದ್ದೇಹೇ ಆಸನಂ ಸಂಭವತಿ । ಅಕುರ್ವತೋಽಕಾರಯತಶ್ಚ ದೇಹೇ ಸಂನ್ಯಸ್ಯ ಇತಿ ಸಂಬನ್ಧಃ, ನ ದೇಹೇ ಆಸ್ತೇ ಇತಿ (ಇತಿ) [4] ಚೇತ್ । ನ । ಸರ್ವತ್ರ ಆತ್ಮನೋಽವಿಕ್ರಿಯತ್ವಾವಧಾರಣಾತ್ । ಆಸನ

---

1. ಇದು ಯುಕ್ತಿಯಿಂದಲೂ ಪ್ರಕರಣದಿಂದಲೂ ಸಿದ್ಧವಾಗುತ್ತದೆ.

2. ಅವನಿಗೆ ಕರ್ತೃತ್ವವೇ ಇಲ್ಲವಾದ್ದರಿಂದ ಶಾಸ್ತ್ರದಲ್ಲಿ ಕರ್ಮಗಳನ್ನು ಅವನಿಗಾಗಿ ವಿಧಿಸಿಲ್ಲ_ಎಂದರ್ಥ.

3. "ತದನುಪಪತ್ತೇಃ" ಅ||ಶಿ||ಗು||ವಾ||

4. ಒಂದು 'ಇತಿ'ಯು ಬಿಟ್ಟುಹೋಗಿದೆ.

ಕ್ರಿಯಾಯಾಶ್ಚ ಅಧಿಕರಣಾಪೇಕ್ಷತ್ವಾತ್ ತದನಪೇಕ್ಷತ್ವಾಚ್ಚ ಸಂನ್ಯಾಸಸ್ಯ। ಸಂಪೂರ್ವಸ್ತು ನ್ಯಾಸಶಬ್ದೋ[1] ತ್ಯಾಗಾರ್ಥಃ, ನ ನಿಕ್ಷೇಪಾರ್ಥಃ । ತಸ್ಮಾತ್ ಗೀತಾಶಾಸ್ತ್ರೇ ಆತ್ಮಜ್ಞಾನವತಃ ಸಂನ್ಯಾಸೇ ಏವಾಧಿಕಾರಃ, ನ ಕರ್ಮಣಿ ಇತಿ ತತ್ರ ತತ್ರ ಉಪರಿಷ್ಟಾತ್ ಆತ್ಮಜ್ಞಾನಪ್ರಕರಣೇ ದರ್ಶಯಿಷ್ಯಾಮಃ ॥

(ಭಾಷ್ಯಾರ್ಥ)

(ಪ್ರಶ್ನೆ).—ಹಾಗಾದರೆ ಜ್ಞಾನಿಗೆ (ಮತ್ತೇ)ತರಲ್ಲಿ ಅಧಿಕಾರ ?

(ಉತ್ತರ) :— ಇದನ್ನು ಮೊದಲೇ "ಜ್ಞಾನಯೋಗೇನ ಸಾಂಖ್ಯಾನಾಮ್" (ಸಾಂಖ್ಯರಿಗೆ ಜ್ಞಾನಯೋಗದಿಂದ ನಿಷ್ಠೆ) ಎಂಬ (ಶ್ಲೋಕವನ್ನು ಉದಾಹರಿಸಿ) ಹೇಳಿರುತ್ತದೆ.[2] ಆದ್ದರಿಂದಲೇ ಮುಂದೆ "ಸರ್ವಕರ್ಮಾಣಿ ಮನಸಾ" (೫-೧೩) ಮುಂತಾದ ಶ್ಲೋಕದಿಂದ (ಭಗವಂತನು) ಸರ್ವಕರ್ಮಸಂನ್ಯಾಸವನ್ನು ಹೇಳಿರುತ್ತಾನೆ.

(ಆಕ್ಷೇಪ):—(ಆ ಶ್ಲೋಕದಲ್ಲಿ) "ಮನಸ್ಸಿನಿಂದ (ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ)" ಎಂದಿರುವದರಿಂದ ಮಾತಿನ ಮತ್ತು ಶರೀರದ (ಕರ್ಮಗಳ) ಸಂನ್ಯಾಸವನ್ನು (ಅಲ್ಲಿ ಹೇಳಿದಂತಾಗಿರುವ)ದಿಲ್ಲ

(ಪರಿಹಾರ):—ಹಾಗಲ್ಲ ಏಕೆಂದರೆ 'ಎಲ್ಲಾ ಕರ್ಮಗಳನ್ನೂ' (ಸಂನ್ಯಾಸಮಾಡಿ) ಎಂಬ ವಿಶೇಷಣವನ್ನು (ಅಲ್ಲಿ) ಕೊಟ್ಟಿರುತ್ತದೆ.

(ಆಕ್ಷೇಪ)---(ಎಲ್ಲಾ ಕರ್ಮಗಳನ್ನೂ ಎಂದರೆ) 'ಮನಸ್ಸಿನ ಎಲ್ಲಾ ಕರ್ಮಗಳನ್ನೂ (ಸಂನ್ಯಾಸಮಾಡಿ)' ಎಂದೇ (ಅಭಿಪ್ರಾಯ).

(ಪರಿಹಾರ):—ಹಾಗಲ್ಲ. ಏಕೆಂದರೆ 'ವಾಕ್ಕಿನ ಮತ್ತು ಶರೀರದ' ಕೆಲಸಗಳು ಮನೋವ್ಯಾಪಾರಪೂರ್ವಕವಾಗಿಯೇ ನಡೆಯುತ್ತವೆಯಾದ್ದರಿಂದ ಮನಸ್ಸು ಕೆಲಸಮಾಡದಿದ್ದರೆ (ಅವೂ) ಇರಲಾರವು.

---

1. 'ಅತ್ರ' ಎಂದು ಮೈ॥ಮ॥ವಾ॥ಗು॥ ಪಾಠಗಳಲ್ಲಿ ಹೆಚ್ಚಾಗಿದೆ.

2. ಜ್ಞಾನಿಯು ತಾನು ಅಕರ್ತೃ ಎಂಬ ಬುದ್ಧಿಯಿಂದ ಸರ್ವಕರ್ಮಗಳನ್ನೂ ಸಂನ್ಯಾಸಮಾಡುತ್ತಾನೆ. ಶರೀರಯಾತ್ರಾರ್ಥವಾಗಿಮಾಡುವ ಕರ್ಮಗಳೂ ನಿಜವಾಗಿ ಅವನಿಗಿಲ್ಲವೆಂದು ಮುಂದೆ ೪-೨೧; ೫-೮ರಲ್ಲಿ ಹೇಳಿರುತ್ತದೆ.

(ಆಕ್ಷೇಪ) :— ಶಾಸ್ತ್ರದಲ್ಲಿ ವಿಹಿತವಾಗಿರುವ [1] ವಾಕ್ಕಾಯಕರ್ಮಗಳಿಗೆ ಕಾರಣವಾದ ಮಾನಸಕರ್ಮಗಳನ್ನುಳಿದು ಮಿಕ್ಕ ಎಲ್ಲಾ ಕರ್ಮಗಳನ್ನೂ ಮನಸ್ಸಿನಿಂದ ಸಂನ್ಯಾಸಮಾಡಿ ಇರುತ್ತಾನೆ (ಎಂದರ್ಥಮಾಡಿದರೊ) ?

(ಪರಿಹಾರ) :— ಹಾಗಾಗದು. "(ಏನನ್ನೂ) ಮಾಡದೆಯೇ ಮಾಡಿಸದೆಯೇ" ಎಂಬ ವಿಶೇಷಣವೂ (ಆ ಶ್ಲೋಕದಲ್ಲಿದೆ) [2]

(ಆಕ್ಷೇಪ) : –ಭಗವಂತನು ಹೇಳಿರುವ ಸರ್ವಕರ್ಮಸಂನ್ಯಾಸವು ಸಾಯುವವನಿಗೇ ಹೊರತು ಬದುಕಿರುವವನಿಗಲ್ಲ (ಎಂದೇಕೆ ತಿಳಿಯಬಾರದು) ? [3]

(ಪರಿಹಾರ) :—ಅದು ಸರಿಯಲ್ಲ. ಏಕೆಂದರೆ (ಆ ಪಕ್ಷದಲ್ಲಿ) ಒಂಬತ್ತು ಬಾಗಿಲುಗಳ ಪುರವಾದ ದೇಹ)ದಲ್ಲಿ ಇರುತ್ತಾನೆ (೫-೨೩) ಎಂಬ ವಿಶೇಷಣವು ಹೊಂದದೆ ಹೋಗುತ್ತದೆ. ಎಲ್ಲಾ ಕರ್ಮಗಳನ್ನೂ ಬಿಟ್ಟು ಸತ್ತವನು ಅವನ ದೇಹದಲ್ಲಿರುವನೆಂಬುದು ಆಗದ ಮಾತು

ಆಕ್ಷೇಪ) : ("ಸರ್ವಕರ್ಮಾಣಿ ಮನಸಾ ದೇಹೇ ಸಂನ್ಯಸ್ಯ ನೈವ ಕುರ್ವನ್ ನ ಕಾರಯನ್ ಆಸ್ತೇ") ಯಾವ ಕರ್ಮಗಳನ್ನೂ ಮಾಡದೆಯೂ ಮಾಡಿಸದೆಯೂ ಅವುಗಳನ್ನು ದೇಹದಲ್ಲಿಟ್ಟು ಇರುತ್ತಾನೆ ಎಂದು ಸಂಬಂಧ, (ದೇಹದಲ್ಲಿರುತ್ತಾನೆ ಎಂದಲ್ಲ) [4]

(ಪರಿಹಾರ) .— ಹಾಗಲ್ಲ ಆತ್ಮನು ಯಾವಾಗಲೂ [5] ಅವಿಕ್ರಿಯನೆಂದು

---

1. ಶಾಸ್ತ್ರಾಧ್ಯಯನವೇ ಮುಂತಾದ ವಾಕ್ಕರ್ಮಕ್ಕೂ ಯಜ್ಞವೇ ಮುಂತಾದ ಕಾಯಕರ್ಮಕ್ಕೂ ಮನೋವ್ಯಾಪಾರವು ಬೇಕಾದರೂ ಶಾಸ್ತ್ರವು ವಿಧಿಸಿದ ಕರ್ಮಗಳನ್ನು ತಾನೇ ಬಿಟ್ಟುಬಿಡಿರೆಂದು ಉಪದೇಶಮಾಡಲಾರದಾದ್ದರಿಂದ ಲೌಕಿಕಕರ್ಮಗಳನ್ನು ಬಿಟ್ಟು ಶಾಸ್ತ್ರೀಯ ಕರ್ಮಗಳನ್ನು ಮಾಡಬೇಕು ಎಂಬುದು ಭಗವಂತನ ತಾತ್ಪರ್ಯವೆನ್ನಬೇಕಾಗುತ್ತದೆ. ಆದ್ದರಿಂದ ಜ್ಞಾನಕರ್ಮಸಮುಚ್ಚಯವಾದವು ಯುಕ್ತ ಎಂದು ಭಾವ.

2. ಯಾವ ಕರ್ಮಗಳನ್ನೂ ಉಳಿಸದೆ ಸರ್ವಕರ್ಮಸಂನ್ಯಾಸವನ್ನು ಒತ್ತಿ ಹೇಳಿದೆ.

3. ಎಲ್ಲಾ ಕರ್ಮಗಳನ್ನೂ ಬಿಡುವದೆಂಬುದು ಬದುಕಿರುವವನಿಗೆ ಆಗಲೇ ಆರದು ಎಂದು ಪೂರ್ವಪಕ್ಷಿಯ ಅಭಿಪ್ರಾಯ ಸಾಯುವವರೆಗೂ ಕರ್ಮಗಳನ್ನು ಮಾಡುತ್ತಲೇ ಇರಬೇಕೆಂಬ ಶ್ರುತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮಾತನ್ನಾಡಿರುತ್ತಾನೆ ಈ ಅಭಿಪ್ರಾಯದಂತೆ ಕರ್ಮಾಧಿಕಾರಿಯಾದವನು ಸಂನ್ಯಾಸವನ್ನೇ ಮಾಡಕೂಡದು.

4. 'ಸಂನ್ಯಸ್ಯ' ಎಂದರೆ 'ಬಿಟ್ಟು' ಎಂಬರ್ಥವನ್ನು ಒಪ್ಪಿದ್ದ ಪೂರ್ವಪಕ್ಷಿಯು ಈಗ ಅದಕ್ಕೆ 'ಇಟ್ಟು' ಎಂಬರ್ಥವನ್ನು ಕಲ್ಪಿಸಿರುತ್ತಾನೆ ಉಪಸರ್ಗವಿಲ್ಲದ ನ್ಯಸ್ ಧಾತುವಿಗೆ ಇಡು ಎಂಬರ್ಥವಿದೆ.

5. ಸರ್ವತ್ರ ಎಂದರೆ ಎಲ್ಲಾ ಅವಸ್ಥೆಗಳಲ್ಲಿಯೂ ಎಂದರ್ಥ. ಶ್ರುತಿಸ್ಮೃತಿಗಳಲ್ಲೆಲ್ಲ ಎಂಬ ಆ॥ ವ್ಯಾಖ್ಯಾನದ ಅರ್ಥವು ಪ್ರಕೃತಕ್ಕೆ ಅಷ್ಟು ಹೊಂದುವದಿಲ್ಲ. 'ಕಥಂ ಹನ್ತಿ', 'ನೈವ ಕುರ್ವನ್' 'ನೈವ ಕಿಂಚಿತ್ ಕರೋಮೀತಿ'-ಮುಂತಾದ ವಾಕ್ಯಗಳು ಒಂದಾನೊಂದು ಗೊತ್ತಾದ ಅವಸ್ಥೆಯನ್ನೇನೂ ಹೇಳುವದಿಲ್ಲವಾದ್ದರಿಂದ ಬದುಕಿರುವವನಿಗೆ ಸಂನ್ಯಾಸವಿಲ್ಲ ಎಂಬುದು ಭಗವಂತನ ಮತಕ್ಕೆ ವಿರುದ್ಧ ಎಂದು ಭಾವ.

(ಭಗವಂತನು) ಒತ್ತಿ ಹೇಳಿರುತ್ತಾನೆ. ಇದಲ್ಲದೆ ಆಸನ (ಕುಳಿತಿರುವದು) ಎಂಬ ಕ್ರಿಯೆಗೆ ಅಧಿಕರಣವು ಬೇಕಾಗುತ್ತದೆ [1] ಸಂನ್ಯಾಸ (ಬಿಡು ಎಂಬ ಕ್ರಿಯೆಗೆ) ಬೇಕೂ ಇಲ್ಲ. 'ನ್ಯಾಸ' ಶಬ್ದಕ್ಕೆ 'ಸಂ' ಎಂಬ ಉಪಸರ್ಗವನ್ನು ಸೇರಿಸಿದರೆ ಬಿಡುವದು ಎಂಬರ್ಥವಾಗುವದೇ ಹೊರತು ಇಡುವದು ಎಂಬರ್ಥವಾಗುವದಿಲ್ಲ [2]

ಆದ್ದರಿಂದ ಗೀತಾಶಾಸ್ತ್ರದಲ್ಲಿ ಆತ್ಮಜ್ಞಾನಿಗೆ ಸಂನ್ಯಾಸದಲ್ಲಿಯೇ ಅಧಿಕಾರವೇ ಹೊರತು ಕರ್ಮದಲ್ಲಿಲ್ಲ. (ಈ ವಿಷಯವನ್ನು) ಮುಂದೆಯೂ ಆತ್ಮಜ್ಞಾನದ ಪ್ರಕರಣವು ಬಂದಾಗ ಅಲ್ಲಲ್ಲಿ ತೋರಿಸಿಕೊಡುವೆವು. [3]

(ಭಾಷ್ಯ)

೪೩. ಪ್ರಕೃತಂ ತು ವಕ್ಷ್ಯಾಮಃ । ತತ್ರ ಆತ್ಮನೋಽವಿನಾಶಿತ್ವಂ ಪ್ರತಿಜ್ಞಾತಮ್ । ತತ್ ಕಿಮಿವ ಇತಿ ? ಉಚ್ಯತೇ

(ಭಾಷ್ಯಾರ್ಥ)

ಆದರೆ (ಈಗ) ಪ್ರಕೃತವಾಗಿರುವದನ್ನು ಹೇಳುವೆವು: ಇಲ್ಲಿ ಆತ್ಮನು ವಿನಾಶವಿಲ್ಲದವನೆಂದು [4] ಹೇಳಿದೆಯಷ್ಟೆ, ಅದು ಏತರಂತೆ? ಎಂದರೆ ಹೇಳುತ್ತಾನೆ:—

**ವಾಸಾಂಸಿ ಜೀರ್ಣಾನಿ ಯಥಾ ವಿಹಾಯ**
**ನವಾನಿ ಗೃಹ್ಣಾತಿ ನರೋಽಪರಾಣಿ ।**
**ತಥಾ ಶರೀರಾಣಿ ವಿಹಾಯ ಜೀರ್ಣಾ-**
**ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥ ೨೨ ॥**

೨೨. ಮನುಷ್ಯನು ಹರಿದ ಬಟ್ಟೆಗಳನ್ನು ಹೇಗೆ ಬಿಟ್ಟು ಬೇರೆಯ ಹೊಸವನ್ನು ಗ್ರಹಿಸುವನೋ ಹಾಗೆ ದೇಹಿಯು ಜೀರ್ಣವಾದ ಶರೀರಗಳನ್ನು ಬಿಟ್ಟು ಬೇರೆಯ ಹೊಸವುಗಳನ್ನು ಹೋಗಿ ಸೇರುತ್ತಾನೆ.

---

1. ಇಟ್ಟು ಎಂದರೆ ಎಲ್ಲಿ?—ಎಂಬ ಆಕಾಂಕ್ಷೆಯುಂಟಾಗುತ್ತದೆ, ಕರ್ಮಗಳನ್ನು ಬಿಟ್ಟು ಎಂದರೆ ಉಂಟಾಗುವದಿಲ್ಲ. ಬಿಡು ಎಂಬರ್ಥವೇ ಪ್ರಕೃತವಾದ್ದರಿಂದ ಅದನ್ನು ದೇಹದಲ್ಲಿ ಎಂಬದಕ್ಕೆ ಸಂಬಂಧಪಡಿಸಬೇಕಾದದ್ದಿಲ್ಲವೆಂದರ್ಥ.

2. ರೂಢಿಯನ್ನು ಅನುಸರಿಸುವದೇ ಯುಕ್ತವೆಂದು ಭಾವ.

3. ಈ ವಿಷಯದಲ್ಲಿ ಈಗಿನವರು ಕೆಲವರ ಅಭಿಪ್ರಾಯವನ್ನು ಪೀಠಿಕೆಯಲ್ಲಿ ವಿಮರ್ಶಿಸಿದೆ.

4. ಅವಿಕಾರಿಯೆಂದು ಎಂದರ್ಥ. ಏಕೆಂದರೆ ಆತ್ಮನು ಅವಿಕ್ರಿಯನಾದ್ದರಿಂದ ಜ್ಞಾನಿಗೆ ಯಾವ ಕರ್ಮದ ಸಂಬಂಧವೂ ಇಲ್ಲ ಎಂಬುದೇ ಪ್ರಕೃತ.

(ಭಾಷ್ಯ)

೪೪. ವಾಸಾಂಸಿ ವಸ್ತ್ರಾಣಿ ಜೀರ್ಣಾನಿ ದುರ್ಬಲತಾಂ ಗತಾನಿ ಯಥಾ ಲೋಕೇ ವಿಹಾಯ ಪರಿತ್ಯಜ್ಯ ನವಾನಿ ಅಭಿನವಾನಿ ಗೃಹ್ಣಾತಿ ಉಪಾದತ್ತೇ ನರಃ ಪುರುಷಃ ಅಪರಾಣಿ ಅನ್ಯಾನಿ ತಥಾ ತದ್ವದೇವ ಶರೀರಾಣಿ ವಿಹಾಯ ಜೀರ್ಣಾನಿ ಅನ್ಯಾನಿ ಸಂಯಾತಿ ಸಂಗಚ್ಛತಿ ನವಾನಿ ದೇಹೀ ಆತ್ಮಾ । ಪುರುಷವತ್ ಅವಿಕ್ರಿಯ ಏವ ಇತ್ಯರ್ಥಃ ॥

(ಭಾಷ್ಯಾರ್ಥ)

ಹೇಗೆ ಲೋಕದಲ್ಲಿ ನರನು ಎಂದರೆ ಮನುಷ್ಯನು ಹರಿದ ದುರ್ಬಲವಾದ ಬಟ್ಟೆಗಳನ್ನು ಬಿಟ್ಟು ಬೇರೆ ಮತ್ತೆ ಬೇರೆಯ ಹೊಸವನ್ನು ಹೊಸ (ಬಟ್ಟೆಗಳ)ನ್ನು ಗ್ರಹಿಸುವನೋ ತೆಗೆದುಕೊಳ್ಳುವನೋ ಅದರಂತೆಯೇ ದೇಹಿಯು ಎಂದರೆ ಆತ್ಮನು ಹಳೆಯವಾದ ಶರೀರಗಳನ್ನು ಬಿಟ್ಟು ಹೊಸವಾದ ಬೇರೆಯ (ದೇಹಗಳನ್ನು) ಹೋಗಿ ಸೇರುತ್ತಾನೆ, ಸೇರಿಕೊಳ್ಳುತ್ತಾನೆ. (ದೃಷ್ಟಾಂತದ) ಮನುಷ್ಯನಂತೆ ಯಾವ ವಿಕಾರವನ್ನೂ ಹೊಂದದೆಯೇ[1] (ಹೊಸ ದೇಹಗಳನ್ನು ಸೇರಿಕೊಳ್ಳುತ್ತಾನೆ) ಎಂದರ್ಥ.

(ಭಾಷ್ಯ)

೪೫. ಕಸ್ಮಾತ್ ಅವಿಕ್ರಿಯ ಏವ ಇತಿ ?

(ಭಾಷ್ಯಾರ್ಥ)

ಆತ್ಮನು ವಿಕಾರವು ಇಲ್ಲದೆಯೇ (ಬೇರೊಂದು ದೇಹವನ್ನು ಹೊಂದುತ್ತಾನೆಂಬು) ದೇಕೆ ?[2] ಎಂದರೆ ಹೇಳುತ್ತಾನೆ :—

**ನೈನಂ ಛಿಂದನ್ತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।**
**ನ ಚೈನಂ ಕ್ಲೇದಯನ್ತ್ಯಾಪೋ ನ ಶೋಷಯತಿ ಮಾರುತಃ ॥೨೩ ॥**

೨೩. ಈತನನ್ನು ಶಸ್ತ್ರಗಳು ಕತ್ತರಿಸಲಾರವು, ಈತನನ್ನು

---

1. ಬಟ್ಟೆಯ ವಿಕಾರದಿಂದ ಮಾರ್ಪಡದೆ, ಅದರ ನಾಶದಿಂದ ಅಥವಾ ಹೊಸ ಬಟ್ಟೆಯ ಪ್ರಾಪ್ತಿಯಿಂದ ತಾನು ನಾಶವಾಗದೆ ಅಥವಾ ಹೊಸಬನಾಗದೆ ಹೇಗೆ ಮನುಷ್ಯನು ತಾನು ಇದ್ದಂತೆಯೇ ಇರುವನೋ ಹಾಗೆ ದೇಹದ ವಿಕಾರವಿನಾಶಪ್ರಾಪ್ತಿಗಳಿಂದ ಆತ್ಮನು ಯಾವ ರೂಪಾಂತರವನ್ನೂ ಹೊಂದದೆ ಇರುವನು ಎಂದು ಅಭಿಪ್ರಾಯ. ಅವಿಕ್ರಿಯತ್ವವೇ ಇಲ್ಲಿ ಹೋಲಿಕೆಯ ಅಂಶ.

2. ಆತ್ಮನು ನಿರವಯವನೆಂಬುದೇ ಅವನು ವಿಕಾರವನ್ನೈದದಿರುವದಕ್ಕೆ ಕಾರಣವೆಂದು ಭಾವ.

ಬೆಂಕಿಯು ಸುಡಲಾರದು. ಈತನನ್ನು ನೀರು ನೆನೆಯಿಸಲೂ ಆರದು, ಗಾಳಿಯು ಒಣಗಿಸಲೂ ಆರದು.

(ಭಾಷ್ಯ)

೪೬. ಏನಂ ಪ್ರಕೃತಂ ದೇಹಿನಂ ನ ಛಿನ್ದನ್ತಿ ಶಸ್ತ್ರಾಣಿ ನಿರವಯವತ್ವಾತ್ ನ ಅವಯವವಿಭಾಗಂ ಕುರ್ವನ್ತಿ । ಶಸ್ತ್ರಾಣಿ ಅಸ್ಯಾದೀನಿ । ತಥಾ ನ ಏನಂ ದಹತಿ ಪಾವಕಃ ಅಗ್ನಿರಪಿ ನ ಭಸ್ಮೀಕರೋತಿ । ತಥಾ ನ ಚ ಏನಂ ಕ್ಲೇದಯನ್ತಿ ಆಪಃ । ಅಪಾಂ ಹಿ ಸಾವಯವಸ್ಯ ವಸ್ತುನಃ ಆರ್ದ್ರೀಭಾವಕರಣೇ ಅವಯವವಿಶ್ಲೇಷಾಪಾದನೇ ಸಾಮರ್ಥ್ಯಮ್ । ತತ್ ನ ನಿರವಯವೇ ಆತ್ಮನಿ ಸಂಭವತಿ । ತಥಾ ಸ್ನೇಹವದ್ ದ್ರವ್ಯಂ ಸ್ನೇಹಶೋಷಣೇನ ನಾಶಯತಿ ವಾಯುಃ। ಏನಂ ತು ಆತ್ಮಾನಂ ನ ಶೋಷಯತಿ ಮಾರುತೋಽಪಿ ॥

(ಭಾಷ್ಯಾರ್ಥ)

ಈ ಪ್ರಕೃತನಾದ ಆತ್ಮನನ್ನು ಶಸ್ತ್ರಗಳು ಕತ್ತರಿಸಲಾರವು, ನಿರವಯವನಾಗಿರುವದರಿಂದ ಕತ್ತಿ ಮುಂತಾದ ಆಯುಧಗಳು ಇವನ ಅವಯವಗಳನ್ನು ವಿಂಗಡಿಸಲಾರವು (ಎಂದರ್ಥ). ಹಾಗೂ ಇವನನ್ನು ಪಾವಕನು ಎಂದರೆ ಬೆಂಕಿಯು ಕೂಡ ಸುಡಲಾರದು ಬೂದಿಮಾಡಲಾರದು. ಇದರಂತೆ ನೀರು ಇವನನ್ನು ನೆನೆಯಿಸಲೂ ಆರದು. ಅವಯವಗಳಿಂದ ಕೂಡಿದ ವಸ್ತುವನ್ನು ಒದ್ದೆಮಾಡಿ ಅವಯವಗಳನ್ನು ಬೇರ್ಪಡುವಂತೆ ಮಾಡುವ ಶಕ್ತಿಯು ನೀರಿಗೆ ಉಂಟು ; ಇದು ನಿರವಯವನಾದ ಆತ್ಮನ ವಿಷಯದಲ್ಲಿ ಆಗುವ ಹಾಗಿಲ್ಲ. ಇದರಂತೆ ಜಿಡ್ಡುಳ್ಳ ವಸ್ತುವನ್ನು ಜಿಡ್ಡನ್ನು ಹೀರುವುದರ ಮೂಲಕ ವಾಯುವು ನಾಶಗೊಳಿಸುತ್ತದೆ, ಆದರೆ ಈ ಆತ್ಮನನ್ನು[1] ವಾಯುವು ಕೂಡ ನಾಶಮಾಡಲಾರದು.

(ಭಾಷ್ಯ)

೪೭. ಯತ ಏವಂ ತಸ್ಮಾತ್—

(ಭಾಷ್ಯಾರ್ಥ)

ಹೀಗಿರುವದಷ್ಟೆ ; ಆದ್ದರಿಂದ—

---

1. " ಸ್ವಾತ್ಮಾನಂ " ತನ್ನ ಆತ್ಮನನ್ನು ಎಂಬ ಸಿ|| ಗು|| ಪಾಠದಲ್ಲಿ ತನ್ನನ್ನು ತಾನೇ ನಾಶಮಾಡಿಕೊಳ್ಳುವದು ಆಗಲಾರದು ಎಂಬ ವಿಶೇಷಾರ್ಥವು ಹೊರಡುವದಾದರೂ ಅದು ಅಪ್ರಕೃತ.

**ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ ।**
**ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ ॥ ೨೪ ॥**

೨೪. ಇವನನ್ನು ಕತ್ತರಿಸುವುದಕ್ಕಾಗುವದಿಲ್ಲ, ಇವನನ್ನು ಸುಡುವದಕ್ಕಾಗುವದಿಲ್ಲ, ನೆನಸುವದಕ್ಕಾಗುವದಿಲ್ಲ, ಒಣಗಿಸುವದಕ್ಕೂ ಆಗುವದೇ ಇಲ್ಲ. ಇವನು ನಿತ್ಯನು, ಸರ್ವಗತನು, ಸ್ಥಾಣು, ಅಚಲನು ಸನಾತನನು.

(ಭಾಷ್ಯ)

೪೮. ಯಸ್ಮಾತ್ ಅನ್ಯೋನ್ಯ ನಾಶಹೇತೂನಿ ಭೂತಾನಿ[1] ಏನಮ್ ಆತ್ಮಾನಂ ನಾಶಯಿತುಂ ನೋತ್ಸಹನ್ತೇ[2] ತಸ್ಮಾತ್ ನಿತ್ಯಃ । ನಿತ್ಯತ್ವಾತ್ ಸರ್ವಗತಃ । ಸರ್ವಗತತ್ವಾತ್ ಸ್ಥಾಣುಃ[3] । ಸ್ಥಾಣುರಿವ ಸ್ಥಿರಃ ಇತ್ಯೇತತ್ । ಸ್ಥಿರತ್ವಾತ್ ಅಚಲಃ ಅಯಮ್ ಆತ್ಮಾ । ಅತಃ ಸನಾತನಃ ಚಿರನ್ತನಃ । ನ ಕಾರಣಾತ್ ಕುತಶ್ಚಿತ್ ನಿಷ್ಪನ್ನೋಽಭಿನವಃ ಇತ್ಯರ್ಥಃ ॥

(ಭಾಷ್ಯಾರ್ಥ)

(ಹೀಗೆ) ಒಂದಕ್ಕೊಂದು ನಾಶಕ್ಕೆ ಕಾರಣವಾಗಿರುವ ಭೂತಗಳು ಈ ಆತ್ಮನನ್ನು ನಾಶಗೊಳಿಸಲಾರದೆ ಇರುವವಷ್ಟೆ, ಆದ್ದರಿಂದ (ಇವನು) ನಿತ್ಯನು; ನಿತ್ಯನಾಗಿರುವದರಿಂದ ಸರ್ವಗತನು,[4] ಸರ್ವಗತನಾಗಿರುವದರಿಂದ ಸ್ಥಾಣು, (ಸ್ಥಾಣು, ಎಂದರೆ) ಮೋಟುಮರದಂತೆ ಸ್ಥಿರನಾಗಿರುವವನು ಎಂದು ಅಭಿಪ್ರಾಯ. ಸ್ಥಿರನಾಗಿರುವದರಿಂದ ಈ ಆತ್ಮನು ಅಲುಗಾಡದೆ ಇರುವನು. ಆದ್ದರಿಂದ ಸನಾತನನು, ಎಂದರೆ ಹಳಬನು, (ಮತ್ತೆ) ಯಾವ(ದೊಂದು) ಕಾರಣದಿಂದಲೂ ಹುಟ್ಟಿದ ಹೊಸಬನಲ್ಲ ಎಂದರ್ಥ.

---

1. "ಅನ್ಯೋನ್ಯನಾಶಹೇತುಭೂತಾನಿ" ಎಂಬ ವಾ॥ ಮೈ॥ ಮ॥ ಪಾಠವು ಸರಿಯಲ್ಲ.

2. "ನೋತ್ಸಹನ್ತೇಽಸ್ಯಾದೀನಿ" ವಾ॥ ಮೈ॥ "ನೋತ್ಸಹನ್ತೇಽಸ್ಯಗ್ನ್ಯಾದೀನಿ" ಮ ॥ ಎಂಬಲ್ಲಿರುವ ಅಸ್ಯಾದೀನಿ, ಅಸ್ಯಗ್ನ್ಯಾದೀನಿ_ಎಂಬಿವು ಹೆಚ್ಚೆಂದು ತೋರುತ್ತದೆ.

3 'ಸ್ಥಾಣುಃ' ಎಂಬ ಮಾತು ವಾ॥ ಮೈ॥ ಮ॥ ಪಾಠಗಳಲ್ಲಿಲ್ಲವಾದರೂ ಆವಶ್ಯ.

4. ನಿತ್ಯವಾದದ್ದು ಪರಿಚ್ಛಿನ್ನವಾಗಿರಲಾರದು ; ಆದ್ದರಿಂದ ಆತ್ಮನು ಅಣುವೆಂದು ಭಾವಿಸುವದು ಸರಿಯಲ್ಲ. ಜೀವನನ್ನು ಅಣುವೆಂದು ಕರೆಯಬಹುದೆ?_ಎಂಬುದನ್ನು ಸೂ. ಭಾ. ೨-೩-೧೯ರಿಂದ ೨೯ನೆಯವರೆಗಿನ ಗ್ರಂಥದಲ್ಲಿ ಅಂತಃಕರಣಪರಿಣಾಮದಿಂದ ಇವನನ್ನು ಅಣುವೆನ್ನುತ್ತಾರೆಂದೂ ಸ್ವರೂಪದಿಂದ ಪರಮಾತ್ಮನೇ ಆಗಿರುವ ಜೀವನು ಅಣುವಲ್ಲವೆಂದೂ ನಿಶ್ಚಯಿಸಿದೆ.

(ಭಾಷ್ಯ)

೪೯. ನೈತೇಷಾಂ ಶ್ಲೋಕಾನಾಂ ಪೌನರುಕ್ತ್ಯಂ ಚೋದನೀಯಮ್' ಯತಃ ಏಕೇನೈವ ಶ್ಲೋಕೇನ ಆತ್ಮನೋ ನಿತ್ಯತ್ವಮ್ ಅವಿಕ್ರಿಯತ್ವಂ ಚೋಕ್ತಮ್ "ನ ಜಾಯತೇ ಮ್ರಿಯತೇ ವಾ" (೨-೨೦) ಇತ್ಯಾದಿನಾ। ತತ್ರ ಯದೇವ ಆತ್ಮ ವಿಷಯಂ ಕಿಂಚಿತ್ ಉಚ್ಯತೇ ತತ್ ಏತಸ್ಮಾತ್ ಶ್ಲೋಕಾರ್ಥಾತ್ ನಾತಿರಿಚ್ಯತೇ। ಕಿಂಚಿತ್ ಶಬ್ದತಃ ಪುನರುಕ್ತಮ್, ಕಿಂಚಿತ್ ಅರ್ಥತಃ ಇತಿ। ದುರ್ಬೋಧತ್ವಾತ್ ಆತ್ಮವಸ್ತುನಃ ಪುನಃಪುನಃ ಪ್ರಸಙ್ಗಮಾಪಾದ್ಯ ಶಬ್ದಾನ್ತರೇಣ ತದೇವ ವಸ್ತು ನಿರೂಪಯತಿ ಭಗವಾನ್ ವಾಸುದೇವಃ। ಕಥಂ ನು ನಾಮ ಅವ್ಯಕ್ತಂ ತತ್ತ್ವಂ ಸಂಸಾರಿಣಾಂ ಬುದ್ಧಿಗೋಚರತಾಮ್ ಆಪನ್ನಂ ಸತ್ ಸಂಸಾರನಿವೃತ್ತಯೇ ಸ್ಯಾತ್[1] ಇತಿ ||

(ಭಾಷ್ಯಾರ್ಥ)

ಒಂದು ಶ್ಲೋಕದಲ್ಲಿಯೇ (೨-೨೦) "ಹುಟ್ಟುವದಿಲ್ಲ, ಸಾಯುವದೂ ಇಲ್ಲ" ಎಂದು ಮುಂತಾಗಿ ಆತ್ಮನು ನಿತ್ಯನೆಂದೂ ಅವಿಕ್ರಿಯನೆಂದೂ ಹೇಳಿಬಿಟ್ಟಿರುವದರಿಂದ ಈ (೨೧-೨೪) ಶ್ಲೋಕಗಳಲ್ಲಿ ಆತ್ಮವಿಷಯವಾಗಿ ಏನೇನು ಹೇಳಿದೆಯೋ, ಅದು (ಆ) ಶ್ಲೋಕದ ಈ ಅರ್ಥಕ್ಕಿಂತ ಬೇರೆಯಾಗಿರುವದಿಲ್ಲವೆಂದೂ ಸ್ವಲ್ಪಮಟ್ಟಿಗೆ ಶಬ್ದದಿಂದಲೂ ಸ್ವಲ್ಪಮಟ್ಟಿಗೆ (ಅದರ) ಅರ್ಥದಿಂದಲೂ (ಅದನ್ನೇ) ಮತ್ತೆ ಹೇಳಿದಂತೆ (ಆಗಿದೆ) ಎಂದೂ ಈ (೨೧-೨೪) ಶ್ಲೋಕಗಳಲ್ಲಿ ಪುನರುಕ್ತಿದೋಷವನ್ನು ಎಣಿಸಬಾರದು. ಆತ್ಮವಸ್ತುವನ್ನು ತಿಳಿಯುವದು ಕಷ್ಟವಾಗಿರುವದರಿಂದ ಮತ್ತೆ ಮತ್ತೆ (ಬೇರೆಬೇರೆಯ) ಪ್ರಸಂಗವನ್ನು ತಂದು ಭಗವಂತನಾದ ವಾಸುದೇವನು "ಅವ್ಯಕ್ತವಾಗಿರುವ (ಈ) ತತ್ತ್ವವು ಸಂಸಾರಿಗರಿಗೆ ಹೇಗಾದರೂ ಬುದ್ಧಿಗೋಚರವಾಗಿ ಸಂಸಾರನಿವೃತ್ತಿಯನ್ನುಂಟುಮಾಡಲಿ!" ಎಂದು ಅದೇ ವಸ್ತುವನ್ನೇ ಬೇರೆಯ ಮಾತುಗಳಿಂದ ತಿಳಿಸುತ್ತಿದಾನೆ.[2]

---

1. "ಕಥಂ ನು ನಾಮ ಸಂಸಾರಿಣಾಮವ್ಯಕ್ತಂ ತತ್ತ್ವಂ ಬುದ್ಧಿಗೋಚರತಾಮಾಪನ್ನಂ ಸತ್ ಸಂಸಾರನಿವೃತ್ತಯೇ ಸ್ಯಾತ್" ಸಿ|| ಗು|| ; "ಕಥಂ ನು ನಾಮ ಸಂಸಾರಿಣಾಮಸಂಸಾರಿತ್ವಬುದ್ಧಿಗೋಚರತಾಪನ್ನಂ ಸತ್ ಅವ್ಯಕ್ತಂ ತತ್ತ್ವಂ ಸಂಸಾರನಿವೃತ್ತಯೇ ಸ್ಯಾತ್" ವಾ|| "ನಾಮ ಸಂಸಾರಿಣಾಂ ಬುದ್ಧಿಗೋಚರತಾಮಾಪನ್ನಂ ಸತ್ ಸಂಸಾರನಿವೃತ್ತಯೇ ಸ್ಯಾತ್ ಇತಿ" ಮೈ|| ಮು|| ಎಂದು ಈ ವಾಕ್ಯವು ಬಗೆಬಗೆಯಾಗಿದೆ ನಾವು ಕೊಟ್ಟಿರುವದು ಆ|| ಪಾಠ.

2. "ಪುನರುಕ್ತಿ" ಎಂಬುದು ಯಾವಾಗಲೂ ದೋಷವಲ್ಲ; ದುರ್ಬೋಧವಾದ ವಿಷಯಗಳನ್ನು ಮತ್ತೆ ಮತ್ತೆ ಹೇಳಿಕೊಡುವದು ಗುಣವೇ; ಆಗುತ್ತದೆ. ಶಾ. ಭಾ. ೪-೩-೧೩.

**ಅವ್ಯಕ್ತೋಽಯಮಚಿನ್ತ್ಯೋಽಯಮವಿಕಾರ್ಯೋಽಯಮುಚ್ಯತೇ**
**ತಸ್ಮಾದೇವಂ ವಿದಿತ್ವೈವಂ ನಾನುಶೋಚಿತುಮರ್ಹಸಿ ॥ ೨೫ ॥**

೨೫. ಈತನು ಅವ್ಯಕ್ತನು, ಈತನು ಅಚಿಂತ್ಯನು; ಅವಿಕಾರ್ಯ ನೆನಿಸಿರುತ್ತಾನೆ. ಆದ್ದರಿಂದ ಈತನನ್ನು ಹೀಗೆಂದರಿತುಕೊಂಡು ನೀನು ಶೋಕಿಸದಿರು-

(ಭಾಷ್ಯ)

೫೦. ಕಿಂ ಚ । ಅವ್ಯಕ್ತಃ ಇತಿ[1] । ಸರ್ವಕರಣಾವಿಷಯತ್ವಾತ್ ನ ವ್ಯಜ್ಯತೇ ಇತಿ ಅವ್ಯಕ್ತಃ ಅಯಮ್ ಆತ್ಮಾ । ಅತ ಏವ ಅಚಿನ್ತ್ಯಃ ಅಯಮ್ । ಯದ್ ಹಿ ಇನ್ದ್ರಿಯಗೋಚರಂ[2] ತತ್ ಚಿನ್ತಾವಿಷಯತ್ವಮ್ ಆಪದ್ಯತೇ । ಅಯಂ ತು ಆತ್ಮಾ ಅನಿನ್ದ್ರಿಯಗೋಚರತ್ವಾತ್ ಅಚಿನ್ತ್ಯಃ । (ಅತ ಏವ)[3] ಅವಿಕಾರ್ಯಃ ಅಯಮ್ । ಯಥಾ ಕ್ಷೀರಂ ದಧ್ಯಾತಞ್ಚನಾದಿನಾ ವಿಕಾರಿ ನ ತಥಾ ಅಯಮಾತ್ಮಾ । ನಿರವಯವತ್ವಾಚ್ಚ ಅವಿಕ್ರಿಯಃ । ನ ಹಿ ನಿರವಯವಂ ಕಿಂಚಿದ್ ವಿಕ್ರಿಯಾತ್ಮಕಂ ದೃಷ್ಟಮ್ । ಅವಿಕ್ರಿಯತ್ವಾತ್ ಅವಿಕಾರ್ಯಃ ಅಯಮ್ ಆತ್ಮಾ ಉಚ್ಯತೇ । ತಸ್ಮಾತ್ ಏವಂ ಯಥೋಕ್ತಪ್ರಕಾರೇಣ ಏನಮ್ ಆತ್ಮಾನಂ ವಿದಿತ್ವಾ ತ್ವಂ ನ ಅನುಶೋಚಿತುಮ್ ಅರ್ಹಸಿ 'ಹನ್ತಾ ಅಹಮ್ ಏಷಾಮ್, ಮಯಾ ಏತೇ[4] ಹನ್ಯನ್ತೇ" ಇತಿ ॥

(ಭಾಷ್ಯಾರ್ಥ)

ಇದಲ್ಲದೆ ಅವ್ಯಕ್ತನು. ಈ ಆತ್ಮನು ಯಾವ ಕರಣಗಳಿಗೂ ವಿಷಯನಲ್ಲವಾದ್ದರಿಂದ ತೋರುವದಿಲ್ಲವಾದ್ದರಿಂದ ಅವ್ಯಕ್ತನು. ಆದ್ದರಿಂದಲೇ ಇವನು ಅಚಿಂತ್ಯನು. ಯಾವದು ಇಂದ್ರಿಯಗಳಿಗೆ ಗೋಚರವಾಗಿರುವದೋ ಅದು ಯೋಚಿಸುವದಕ್ಕೆ (ತರ್ಕ) ವಿಷಯವಾಗಿರುತ್ತದೆ; ಆದರೆ ಈ ಆತ್ಮನು ಇಂದ್ರಿಯಗಳಿಗೆ ಗೋಚರನಲ್ಲವಾದ್ದರಿಂದ ಅಚಿಂತ್ಯನು ಇವನು[5] ಅವಿಕಾರ್ಯನು. ಹೇಗೆ ಹಾಲು

---

1. 'ಅವ್ಯಕ್ತಃ' ಎಂಬ ಮಾತು ಕೆಲವು ಪುಸ್ತಕಗಳಲ್ಲಿಲ್ಲ ಇಲ್ಲದಿದ್ದರೂ ಸಾಗುತ್ತದೆ.

2. ಇಲ್ಲಿ 'ವಸ್ತು' ಎಂದು ಆ॥ ನಿ॥ ಗಳಲ್ಲಿ ಹೆಚ್ಚಾಗಿದೆ.

3. ಇದು ಗು॥ ಪಾಠದಲ್ಲಿಲ್ಲ.

4. 'ಇಮೇ' ಆ॥ ನಿ॥

5. ಗು॥ ಪಾಠವನ್ನನುಸರಿಸಿ ಕನ್ನಡಿಸಿದೆ. 'ಆದ್ದರಿಂದಲೇ' ಎಂಬುದು ಅವಶ್ಯವಿಲ್ಲವೆಂದು ತೋರುತ್ತದೆ; ಏಕೆಂದರೆ ಅಚಿಂತ್ಯನಾದ್ದರಿಂದಲೇ ಅವಿಕಾರ್ಯನು ಎನ್ನುವದರಿಂದ ಸರಿಯಾದ ಹೇತುವನ್ನು ಹೇಳಿದಂತೆ ಆಗುವದಿಲ್ಲ.

ಮೊಸರಿನ ಹೆಪ್ಪು ಮುಂತಾದದ್ದರಿಂದ ಮಾರ್ಪಡುವದೋ ಹಾಗೆ ಈ ಆತ್ಮನು (ಮಾರ್ಪಡುವ)ದಿಲ್ಲ. (ಇವನು) ಅವಯುವಗಳಿಲ್ಲದವನಾದ್ದರಿಂದಲೂ ಮಾರ್ಪಡುವದಿಲ್ಲ.[1] ಅವಯುವಗಳಿಲ್ಲದೆ (ಇದ್ದರೂ) ವಿಕಾರವುಳ್ಳದ್ದಾಗಿರುವ ವಸ್ತುವನ್ನು (ನಾವು) ಕಂಡದ್ದಿಲ್ಲ. ಹೀಗೆ ಮಾರ್ಪಾಡಿಲ್ಲದವನಾದ್ದರಿಂದ ಈ ಆತ್ಮನು 'ಅವಿಕಾರ್ಯನು' ಎನ್ನಿಸುತ್ತಾನೆ. ಆದ್ದರಿಂದ ಈ ಆತ್ಮನನ್ನು ಮೇಲೆ ಹೇಳಿದ ರೀತಿಯಲ್ಲಿ ತಿಳಿದುಕೊಂಡು ಶೋಕಿಸದಿರು. "ನಾನು ಇವರನ್ನು ಕೊಲ್ಲುವೆನು, ಇವರು ನನ್ನಿಂದ ಹತರಾಗುವರು" ಎಂದು ಶೋಕಿಸಬೇಡ.

## ಲೌಕಿಕದೃಷ್ಟಿಯಿಂದ ನೋಡಿದರೂ ಶೋಕಕ್ಕೆ ಕಾರಣವಿಲ್ಲ.

(ಭಾಷ್ಯ)

೫೧ ಆತ್ಮನಃ ಅನಿತ್ಯತ್ವಮ್ ಅಭ್ಯುಪಗಮ್ಯ ಇದಮುಚ್ಯತೇ--

(ಭಾಷ್ಯಾರ್ಥ)

ಆತ್ಮನು ಅನಿತ್ಯನೆಂದು ಒಪ್ಪಿಕೊಂಡು ಈ (ಮುಂದಿನ) ಮಾತನ್ನು ಹೇಳುತ್ತಾನೆ.—

**ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಮ್ ।**
**ತಥಾಪಿ ತ್ವಂ ಮಹಾಬಾಹೋ ನೈನಂ ಶೋಚಿತುಮರ್ಹಸಿ ॥ ೨೬ ॥**

೨೬. ಹೀಗಿದ್ದರೂ ಈತನು ಯಾವಾಗಲೂ ಹುಟ್ಟುತ್ತಿರುವನೆಂದು ಅಥವಾ ಸಾಯುತ್ತಲೇ ಇರುವನೆಂದು ನೆನೆಯುವೆಯಾದರೆ, ಎಲೈ ಮಹಾಬಾಹುವೆ, ಆಗಲೂ ನೀನು ಹೀಗೆ ಶೋಕಿಸಬಾರದು.

(ಭಾಷ್ಯ)

೫೨ 'ಅಥ ಚ' ಇತ್ಯಭ್ಯುಪಗಮಾರ್ಥಃ. ಏನಂ ಪ್ರಕೃತಮ್ ಆತ್ಮಾನಂ ನಿತ್ಯಜಾತಂ ಲೋಕಪ್ರಸಿದ್ಧ್ಯಾ[1] ಪ್ರತ್ಯನೇಕಶರೀರೋತ್ಪತ್ತಿಂ ಜಾತೋ ಜಾತ ಇತಿ[2]

---

1. ಆತ್ಮನನ್ನು ಮಾರ್ಪಡಿಸುವ ಹೇತುವಿಲ್ಲವಷ್ಟೇ ಅಲ್ಲ, ಅವನಲ್ಲಿ ಮಾರ್ಪಡುವ ಸ್ವಭಾವವೂ ಇಲ್ಲ, ಇಲ್ಲಿ "ಕ್ರುದ್ಧೋ ಜಾತಃ, ತೃಪ್ತೋ ಜಾತಃ ಹೃಷ್ಟೋ ಜಾತಃ. ಇತ್ಯಂತಃಕರಣವಿಕ್ರಿಯಾಭೇದಮನು ವಿಕ್ರಿಯತೇ ಇತಿ ಮನ್ಯಸೇ, ತಥಾ ತತ್ಪ್ರತ್ಯಯವಿನಾಶಮನು ವಿನಶ್ಯತೀತಿ ಲೋಕಪ್ರಸಿದ್ಧ್ಯಾ" ಎಂದು ಕೆಲವು ಕೋಶಗಳಲ್ಲಿರುವವಾಗಿ ಮೈ|| ಪುಸ್ತಕದಲ್ಲಿದೆ; ಆದರೆ ಅಪ್ರಕೃತ.

2. "ವಾ" ಎಂಬ ಮಾತು ಪಲವು ಮುದ್ರಿತಪುಸ್ತಕಗಳಲ್ಲಿದ್ದರೂ ಇಲ್ಲಿ ಬೇಕಿಲ್ಲ.

ಮನ್ಯಸೇ ತಥಾ ಪ್ರತಿ ತತ್ತದ್ವಿನಾಶಂ ನಿತ್ಯಂ ವಾ ಮನ್ಯಸೇ ಮೃತೋ ಮೃತಃ ಇತಿ ತಥಾಪಿ ತಥಾ ಭಾವೇಽಪಿ[1] ಆತ್ಮನಿ ತ್ವಂ ಮಹಾಬಾಹೋ ನೈವಂ ಶೋಚಿತುಮ್ ಅರ್ಹಸಿ ಜನ್ಮವತೋ ನಾಶಃ ನಾಶವತೋ ಜನ್ಮ ಚ ಇತ್ಯೇತೌ[2] ಅವಶ್ಯಂಭಾವಿನೌ ಇತಿ ||

(ಭಾಷ್ಯಾರ್ಥ)

(ಇಲ್ಲಿ) ಅಥ ಚ ಎಂಬ (ಮಾತು) ಅಂಗೀಕಾರವನ್ನು ತಿಳಿಸುವದಕ್ಕೆ (ಬಂದಿದೆ). ಈ ಪ್ರಕೃತನಾದ ಆತ್ಮನನ್ನು ಯಾವಾಗಲೂ ಹುಟ್ಟುತ್ತಿರುವನೆಂದು, ಎಂದರೆ ಅನೇಕ ಶರೀರಗಳಲ್ಲಿ (ಒಂದೊಂದು ಶರೀರವು) ಹುಟ್ಟುವಾಗಲೂ ಹುಟ್ಟಿದನು, ಹುಟ್ಟಿದನು ಎಂಬ ಲೋಕಪ್ರಸಿದ್ಧಿಯಿಂದ (ಇವನು ಹುಟ್ಟುತ್ತಿರುವನೆಂದು) ಅಥವಾ ಅವುಗಳಲ್ಲಿ (ಒಂದೊಂದು) ವಿನಾಶವಾಗಲು, ಸತ್ತನು, ಸತ್ತನು-ಎಂಬ (ಲೌಕಿಕಪ್ರಸಿದ್ಧಿಯಿಂದ) ಸಾಯುತ್ತಿರುವನೆಂದು ಬಗೆಯುವೆಯಾದರೆ, ಎಲೈ ಮಹಾಬಾಹುವೆ, ಆತ್ಮನು (ನೀನು ತಿಳಿದಿರುವ) ಹಾಗೆಯೇ ಇರುವನೆಂದು ಇಟ್ಟುಕೊಂಡರೂ (ಆಗಲೂ) ಹುಟ್ಟಿದವನಿಗೆ ನಾಶವೂ ನಾಶವುಳ್ಳವನಿಗೆ ಜನ್ಮವೂ ಅವಶ್ಯವಾಗಿ ಆಗಿಯೇ ತೀರುವದರಿಂದ ನೀನು ಹೀಗೆ[3] ಶೋಕಿಸಬಾರದು.

(ಭಾಷ್ಯ)

೫೩. ತಥಾ ಚ ಸತಿ—

(ಭಾಷ್ಯಾರ್ಥ)

ಮತ್ತು ಹಾಗಾದರೆ—

**ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ।**
**ತಸ್ಮಾದಪರಿಹಾರ್ಯೇಽರ್ಥೇ, ನ ತ್ವಂ ಶೋಚಿತುಮರ್ಹಸಿ || ೨೭ ||**

೨೭. ಹುಟ್ಟಿದವನಿಗೆ ಮೃತ್ಯು ನಿಶ್ಚಯವಾಗಿರುವದು, ಸತ್ತವನಿಗೆ ಜನ್ಮವೂ ನಿಶ್ಚಯವಾಗಿರುವದು ಅಲ್ಲವೆ? ಹೀಗಿರುವದರಿಂದ ಪರಿಹರಿಸಿಕೊಳ್ಳಲಾಗದ (ಈ) ಅರ್ಥದಲ್ಲಿ ನೀನು ಶೋಕಿಸಬಾರದು.

---

1. "ತಥಾ ಭ್ಯಾವಿನ್ಯಪಿ" ಆ||ನಿ| ಗು||

2. 'ಏತೌ' ಎಂಬ ಮಾತು ಮೈ|| ಮು|| ಪಾಠದಲ್ಲಿಲ್ಲ.

3. "ನೈನಮ್" ಎಂಬ ಪಾಠಕ್ಕೆ ಹೀಗೆ ಎಂಬುದಕ್ಕೆ ಬದಲು 'ಇವನನ್ನು ಕುರಿತು' ಎಂದು ಅರ್ಥವನ್ನು ಮಾಡಿಕೊಳ್ಳಬೇಕು.

(ಭಾಷ್ಯ)

೨೭. ಜಾತಸ್ಯ ಹಿ ಲಬ್ಧಜನ್ಮನಃ ಧ್ರುವಃ ಅವ್ಯಭಿಚಾರೀ ಮೃತ್ಯುಃ ಮರಣಮ್। ಧ್ರುವಂ ಜನ್ಮ ಮೃತಸ್ಯ ಚ। ತಸ್ಮಾತ್ ಅಪರಿಹಾರ್ಯೋಽಯಂ ಜನ್ಮಮರಣಲಕ್ಷಣಃ ಅರ್ಥಃ ಯಸ್ಮಾತ್ ತಸ್ಮಿನ್ ಅಪರಿಹಾರ್ಯೇ ಅರ್ಥೇ ನ ತ್ವಂ ಶೋಚಿತುಮ್ ಅರ್ಹಸಿ[1] ||

(ಭಾಷ್ಯಾರ್ಥ)

ಹುಟ್ಟಿದವನಿಗೆ ಎಂದರೆ ಯಾವನಿಗೆ ಹುಟ್ಟು ಉಂಟಾಗಿರುವದೋ ಅವನಿಗೆ ಮರಣವು ನಿಶ್ಚಯವು ಎಂದರೆ ತಪ್ಪದು. ಸತ್ತವನಿಗೆ ಜನ್ಮವೂ ನಿಶ್ಚಯವು. ಹೀಗೆ ಹುಟ್ಟುಸಾವುಗಳೆಂಬ ಈ ವಿಷಯವು ತಪ್ಪಿಸಿಕೊಳ್ಳುವದಕ್ಕೆ ಆಗದೆ ಇರುತ್ತದೆ ತಪ್ಪಿಸಿಕೊಳ್ಳಲಾಗದ ಈ ವಿಷಯದಲ್ಲಿ ನೀನು ದುಃಖಪಡಬಾರದು.

(ಭಾಷ್ಯ)

೨೮. ಕಾರ್ಯಕರಣಸಙ್ಘಾತಾತ್ಮಕಾನ್ಯಪಿ[2] ಭೂತಾನ್ಯುದ್ದಿಶ್ಯ ಶೋಕೋ ನ ಯುಕ್ತಃ ಕರ್ತುಮ್ ಯತಃ--

(ಭಾಷ್ಯಾರ್ಥ)

ಕಾರ್ಯಕರಣಗಳ ಸಂಘಾತವನ್ನೇ[3] ಪ್ರಾಣಿಗಳೆಂದು (ಇಟ್ಟುಕೊಂಡರೂ ಅವುಗಳನ್ನು) ಕುರಿತು ಶೋಕವನ್ನು ಮಾಡುವದು ಯುಕ್ತವಲ್ಲ. ಏಕೆಂದರೆ:—

**ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ।**
**ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ || ೨೮ ||**

೨೮. ಭೂತಗಳು ಅವ್ಯಕ್ತವೆಂಬ ಆದಿಯುಳ್ಳವುಗಳು, ವ್ಯಕ್ತವಾದ ಮಧ್ಯವುಳ್ಳವುಗಳು, ಅವ್ಯಕ್ತವಾದ ನಾಶವುಳ್ಳಂಥವುಗಳೇ ಆಗಿರುವವು ಈ (ವಿಷಯ) ದಲ್ಲಿ ದುಃಖವೇನು?

---

1. "ಜನ್ಮವತೋ ನಾಶಃ ನಾಶವತೋ ಜನ್ಮ ಇತಿ ಚ ಸ್ವಾಭಾವಿಕಶ್ಚೇತ್ ಅಪರಿಹಾರ್ಯಃ ಸಃ ಅರ್ಥಃ। ತಸ್ಮಿನ್ ಅಪರಿಹಾರ್ಯೇ ಅರ್ಥೇ ನ ತ್ವಂ ಶೋಚಿತುಮರ್ಹಸಿ' ಎಂದು ಮ|| ಮೈ|| ಪಾಠಗಳಲ್ಲಿ ಹೆಚ್ಚಾಗಿದೆ.

2. "ಕಾರ್ಯಕಾರಣ" ಎಂಬ ಮೈ|| ಮ|| ಪಾಠಕ್ಕಿಂತ ಇದು ಉತ್ತಮ.

3. ದೇಹೇಂದ್ರಿಯಗಳ ಗುಂಪನ್ನೇ ಎಂದರ್ಥ. ಹಿಂದೆ ದೇಹಿ ಎಂಬ ಮಾತನ್ನು ಆತ್ಮಪ್ರಧಾನವಾಗಿ ಉಪಯೋಗಿಸಿತ್ತು, ಈಗ ಭೂತ ಎಂಬ ಮಾತನ್ನು ದೇಹಪ್ರಧಾನವಾಗಿ ಉಪಯೋಗಿಸಿದೆ ಎಂದು ಭಾವ. ಆತ್ಮನು ಹುಟ್ಟುಸಾವುಗಳಿಲ್ಲದವನು, ದೇಹಗಳು ಹುಟ್ಟುಸಾವುಗಳುಳ್ಳವು ಆದ್ದರಿಂದ ಎರಡರ ವಿಷಯಕ್ಕೂ ಶೋಕಕ್ಕೆ ಕಾರಣವಿಲ್ಲ.

(ಭಾಷ್ಯ)

೫೬. ಅವ್ಯಕ್ತಾದೀನಿ। ಅವ್ಯಕ್ತಮ್ ಅದರ್ಶನಮ್ ಅನುಪಲಬ್ಧಿಃ ಆದಿಃ ಯೇಷಾಂ ಭೂತಾನಾಂ ಪುತ್ರಮಿತ್ರಾದಿಕಾರ್ಯಕರಣಸಙ್ಘಾತಾನಾಂ ತಾನಿ ಅವ್ಯಕ್ತಾದೀನಿ ಭೂತಾನಿ ಪ್ರಾಗುತ್ಪತ್ತೇಃ। ಉತ್ಪನ್ನಾನಿ ಪ್ರಾಕ್ ಮರಣಾತ್ ವ್ಯಕ್ತಮಧ್ಯಾನಿ। ಅವ್ಯಕ್ತನಿಧನಾನಿ ಏವ ಪುನಃ ಅವ್ಯಕ್ತಮ್ ಅದರ್ಶನಂ ನಿಧನಂ ಮರಣಂ ಯೇಷಾಂ ತಾನಿ ಅವ್ಯಕ್ತನಿಧನಾನಿ। ಮರಣಾದೂರ್ಧ್ವಮಪಿ ಅವ್ಯಕ್ತತಾಮೇವ ಪ್ರತಿಪದ್ಯನ್ತೇ ಇತ್ಯರ್ಥಃ। "ಅದರ್ಶನಾದಾಪತಿತಃ ಪುನಶ್ಚಾದರ್ಶನಂ ಗತಃ। ನಾಸೌ ತವ ನ ತಸ್ಯ ತ್ವಂ ವೃಥಾ ಕಾ ಪರಿದೇವನಾ॥" (ಮೋ ಧ. ೧೭೪-೧೮)[1] ಇತಿ। ತತ್ರ ಕಾ ಪರಿದೇವನಾ ಕೋ ವಾ ಪ್ರಲಾಪಃ ಅದೃಷ್ಟದೃಷ್ಟಪ್ರಣಷ್ಟ ಭ್ರಾನ್ತಿಭೂತೇಷು ಇತ್ಯರ್ಥಃ॥

(ಭಾಷ್ಯಾರ್ಥ)

ಅವ್ಯಕ್ತಾದಿಗಳು ಎಂಬಲ್ಲಿ ಅವ್ಯಕ್ತವು, ಕಾಣದಿರುವದು, ಗೋಚರಿಸದೆ ಇರುವದು ಯಾವ ಮಗ, ಗೆಳೆಯ—ಮುಂತಾದ ಕಾರ್ಯಕರಣಸಂಘಾತಗಳಿಗೆ ಆದಿಯೋ ಆ ಭೂತಗಳು ಹುಟ್ಟುವ ಮೊದಲು ಅವ್ಯಕ್ತಾದಿಗಳು. ಹುಟ್ಟಿದ ಮೇಲೆ ಸಾಯುವ ಮುಂಚೆ-(ನಡುವಿನ ಕಾಲದಲ್ಲಿ) ವ್ಯಕ್ತಮಧ್ಯಗಳಾಗಿರುವವು ಮತ್ತೆ ಅವ್ಯಕ್ತನಿಧನಗಳೇ ಆಗುವವು, ಅವ್ಯಕ್ತವು ಎಂದರೆ ಕಾಣದೆಹೋಗುವದು ನಿಧನವು ಮರಣವು ಯಾವ (ಭೂತ)ಗಳಿಗೆ (ಆಗುವದೋ) ಅವು ಅವ್ಯಕ್ತನಿಧನಗಳು, ಸತ್ತಬಳಿಕ ಅವ್ಯಕ್ತತ್ವವನ್ನೇ (ಕಾಣದಿರುವಿಕೆಯನ್ನೇ) ಹೊಂದುತ್ತವೆ ಎಂದರ್ಥ. ಆದ್ದರಿಂದ "ಅದರ್ಶನಾದಾಪತಿತಃ ಪುನಶ್ಚಾದರ್ಶನಂ ಗತಃ। ನಾಸೌ ತವ ನ ತಸ್ಯ ತ್ವಂ ವೃಥಾ ಕಾ ಪರಿದೇವನಾ" (ಮೋ.ಧ. ೧೭೪-೧೮?) (ಈತನು ಮೊದಲು ಕಾಣದೆ ಇದ್ದು ಹುಟ್ಟಿದನು, ಮತ್ತೆ ಕಾಣದೆ ಹೋಗಿರುತ್ತಾನೆ. ಇವನು ನಿನ್ನವನಲ್ಲ, ನೀನು ಇವನಿಗೆ ಸೇರಿದವನಲ್ಲ ಸುಮ್ಮನೆ ದುಃಖಪಡುವದರಿಂದೇನು?) ಎಂದು (ಭಾರತದಲ್ಲಿ) ಹೇಳಿರುತ್ತದೆ. ಈ (ವಿಷಯ)ವಲ್ಲಿ ದುಃಖವೇನು? (ಮೊದಲು) ತೋರದೆ ಇದ್ದು (ನಡುವೆ) ತೋರಿ (ಆಮೇಲೆ) ತೋರದೆಹೋಗುವ ಭ್ರಾಂತಿಯ ರೂಪದ[2] (ಈ) ಪ್ರಾಣಿಗಳಿಗಾಗಿ ಎಂಥ ಶೋಕವು? ಎಂದರ್ಥ.

---

1. ಸ್ತ್ರೀಪರ್ವದಲ್ಲಿ ಅದರ್ಶನಾದಾಪತಿತಾಃ ಪುನಶ್ಚಾದರ್ಶನಂ ಗತಾಃ। ನೈತೇ ತವ ನ ತೇಷಾಂ ತ್ವಂ ತತ್ರ ಕಾಪರಿದೇವನಾ॥ (೨-೧೫) ಎಂಬ ಶ್ಲೋಕವಿದೆ. ಅಚ್ಚಾಗಿರುವ ಮೋಕ್ಷಧರ್ಮದಲ್ಲಿ "ನ ತ್ವಾಸೌ ವೇದ ನ ತ್ವಂ ತಂ ಕಃ ಸನ್ ಕಿಮನುಶೋಚಸಿ (ಕಸ್ಮಾತ್ತ್ವಮನುಶೋಚಸಿ)" ಎಂದು ಉತ್ತರಾರ್ಧವಿದೆ. ಇಲ್ಲಿರುವ ಶ್ಲೋಕವು ಭಾರತದಲ್ಲಿ ಮತ್ತೆಲ್ಲಿಯಾದರೂ ಇದೆಯೋ ತಿಳಿಯದು. ಮ॥ ಮೈ॥ ಪಾಠಗಳಲ್ಲಿ ಉತ್ತರಾರ್ಧವಿಲ್ಲ.

2. ಭ್ರಾಂತಿಯು ತನ್ನ ಕಾಲದಲ್ಲಿ ತೋರುತ್ತದೆ; ಮೊದಲೂ ತೋರುವದಿಲ್ಲ, ಬಾಧಿತವಾದ ಬಳಿಕವೂ ಕಾಣುವದಿಲ್ಲ. ಆದ್ದರಿಂದ ಹಾಗಿರುವ ಭೂತಗಳೂ ಭ್ರಾಂತಿಯ ತೋರಿಕೆಗಳೇ.

## ಆತ್ಮನನ್ನು ಯಥಾರ್ಥವಾಗಿ ಅರಿಯುವದು ಬಲು ಕಷ್ಟ

(ಭಾಷ್ಯ)

೫೭. ದುರ್ವಿಜ್ಞೇಯೋಽಯಂ ಪ್ರಕೃತ ಆತ್ಮಾ । ಕಿಂ ತ್ವಾಮೇವ ಏಕಮ್ ಉಪಾಲಭೇ ಸಾಧಾರಣೇ ಭ್ರಾನ್ತಿನಿಮಿತ್ತೇ । ಕಥಂ ದುರ್ವಿಜ್ಞೇಯೋಽಯಮಾತ್ಮಾ ಇತಿ? ಅತ ಆಹ—

(ಭಾಷ್ಯಾರ್ಥ)

ಈ ಪ್ರಕೃತನಾದ ಆತ್ಮನನ್ನು ಅರಿಯುವದು ಬಲುಕಷ್ಟ. ಈ ವಿಷಯದಲ್ಲಿ ಭ್ರಾಂತಿಯಾಗುವದಕ್ಕೆ (ಎಲ್ಲರಲ್ಲಿಯೂ) ಸಮಾನವಾದ ಕಾರಣವಿರುವಾಗ[2] ನಿನ್ನೊಬ್ಬನನ್ನೇ ಏಕೆ ದೂರಲಿ? ಈ ಆತ್ಮನನ್ನು ಅರಿಯುವದು ಕಷ್ಟವೆಂಬುದಾದರೂ ಹೇಗೆ? ಎಂದು (ನೀನು ಕೇಳಬಹುದು ಅದನ್ನು ಹೇಳುವೆನು ಕೇಳು ಎಂದು) ಭಗವಂತನು ಹೇಳುತ್ತಾನೆ :—

**ಆಶ್ಚರ್ಯವತ್ ಪಶ್ಯತಿ ಕಶ್ಚಿದೇನ-**
**ಮಾಶ್ಚರ್ಯವದ್ ವದತಿ ತಥೈವ ಚಾನ್ಯಃ ।**
**ಆಶ್ಚರ್ಯವಚ್ಚೈನಮನ್ಯಃ ಶೃಣೋತಿ**
**ಶ್ರುತ್ವಾಪ್ಯೇನಂ ವೇದ ನ ಚೈವ ಕಶ್ಚಿತ್ ॥ ೨೯ ॥**

೨೯. ಒಬ್ಬನು ಈತನನ್ನು ಆಶ್ಚರ್ಯದಂತೆ ಕಾಣುತ್ತಾನೆ, ಮತ್ತು ಇನ್ನೊಬ್ಬನು ಹಾಗೆಯೇ ಆಶ್ಚರ್ಯದಂತೆ ಹೇಳುತ್ತಾನೆ. ಇನ್ನೊಬ್ಬನೂ ಆಶ್ಚರ್ಯದಂತೆಯೇ ಇವನನ್ನು ಕೇಳುತ್ತಾನೆ. (ಹೀಗೆ) ಕೇಳಿದರೂ ಯಾರೊಬ್ಬರೂ ಇವನ್ನು ಅರಿಯುವದೇ ಇಲ್ಲ.

(ಭಾಷ್ಯ)

೫೮. ಆಶ್ಚರ್ಯವತ್ ಆಶ್ಚರ್ಯಮ್ ಅದೃಷ್ಟಪೂರ್ವಮ್[3] ಅದ್ಭುತಮ್ ಅಕಸ್ಮಾದ್ ದೃಶ್ಯಮಾನಮ್, ತೇನ ತುಲ್ಯಮ್ ಆಶ್ಚರ್ಯವತ್ ಆಶ್ಚರ್ಯಮಿವ ಏನಮ್ ಆತ್ಮಾನಂ ಪಶ್ಯತಿ ಕಶ್ಚಿತ್ । ಆಶ್ಚರ್ಯವತ್ ಏನಂ ವದತಿ ತಥೈವ ಚ ಅನ್ಯಃ । ಆಶ್ಚರ್ಯವಚ್ಚ ಏನಮ್ ಅನ್ಯಃ ಶೃಣೋತಿ । ಶ್ರುತ್ವಾ ದೃಷ್ಟ್ವಾ ಉಕ್ತ್ವಾಪಿ ಏನಮ್ ಆತ್ಮಾನಂ ವೇದ ನ ಚೈವ ಕಶ್ಚಿತ್ । ಅಥವಾ ಯೋಽಯಮ್ ಆತ್ಮಾನಂ ಪಶ್ಯತಿ ಸ ಆಶ್ಚರ್ಯತುಲ್ಯಃ । ಯೋ ವದತಿ ಯಶ್ಚ ಶೃಣೋತಿ ಸಃ ಅನೇಕಸಹಸ್ರೇಷು ಕಶ್ಚಿದೇವ ಭವತಿ । ಅತೋ ದುರ್ಬೋಧ ಆತ್ಮಾ ಇತ್ಯಭಿಪ್ರಾಯಃ ॥

---

1. ಲೌಕಿಕದೃಷ್ಟಿಯಿಂದ ನೋಡಿದರೂ ಶೋಕಕ್ಕೆ ಕಾರಣವಿಲ್ಲವೆಂದು ಪ್ರಾಸಂಗಿಕವಾಗಿ ಹೇಳಿದೆಯಾದರೂ ಆತ್ಮನು ನಿತ್ಯನೆಂಬುದೇ ಇಲ್ಲಿ ಪ್ರಕೃತ.

2. ಅಜ್ಞಾನವು ಎಲ್ಲರಿಗೂ ಸಮಾನವಾಗಿದೆ, ಅಜ್ಞಾನವು ತೊಲಗಿದಲ್ಲದೆ ಶೋಕಮೋಹಗಳು ಹೋಗುವಹಾಗಿಲ್ಲ ಎಂದರ್ಥ.

3. "ಅದೃಷ್ಟಮ್" ಮೈ॥ಮು॥

(ಭಾಷ್ಯಾರ್ಥ)

ಆಶ್ಚರ್ಯವೆಂದರೆ ಹಿಂದೆ (ಎಂದೂ) ಕಾಣದೆ ಇದ್ದು ಈಗ ಅಕಸ್ಮಾತ್ತಾಗಿ ಕಾಣಬರುವ ಅದ್ಭುತವು. ಅದಕ್ಕೆ ಸಮಾನವಾಗಿ ಎಂದರೆ ಆಶ್ಚರ್ಯವಾಗಿದ್ದರೆ ಹೇಗೋ ಹಾಗೆ[1] ಈ ಆತ್ಮನನ್ನು ಒಬ್ಬನು ಕಾಣುತ್ತಾನೆ. ಅದರಂತೆಯೇ ಮತ್ತೊಬ್ಬನೂ ಆಶ್ಚರ್ಯದಂತೆಯೇ ಹೇಳುತ್ತಾನೆ. ಇನ್ನೊಬ್ಬನೂ ಆಶ್ಚರ್ಯದಂತೆಯೇ ಈತನನ್ನು ಕೇಳುತ್ತಾನೆ. (ಹೀಗೆ) ಕೇಳಿಯೂ ಕಂಡೂ ಹೇಳಿಯೂ ಈ ಆತ್ಮನನ್ನು ಯಾರೊಬ್ಬರೂ ಅರಿಯರು.[2]

ಅಥವಾ ಯಾವನು ಈ ಆತ್ಮನನ್ನು ಕಾಣುವನೋ ಅವನು ಆಶ್ಚರ್ಯದಂತೆ[3] (ಇರುವನು.) ಯಾವಾತನು ಹೇಳುತ್ತಾನೋ ಮತ್ತು ಯಾವಾತನು ಕೇಳುತ್ತಾನೋ ಅವನು (ಆಶ್ಚರ್ಯದಂತೆ. ಏಕೆಂದರೆ) ಸಾವಿರಾರು ಜನಗಳಲ್ಲಿ ಎಲ್ಲಿಯೋ ಒಬ್ಬನಾಗಿರುತ್ತಾನೆ. ಆದ್ದರಿಂದ ಆತ್ಮನನ್ನು ತಿಳಿಯುವದು ಕಷ್ಟ ಎಂದರ್ಥ.

## ಆತ್ಮನ ನಿತ್ಯತ್ವದ ಉಪಸಂಹಾರ

(ಭಾಷ್ಯ)

೫೯. ಅಥ ಇದಾನೀಂ ಪ್ರಕರಣಾರ್ಥಮ್ ಉಪಸಂಹರತಿ[4]—

(ಭಾಷ್ಯಾರ್ಥ)

ಈಗ ಈ ಪ್ರಕರಣದ ಅರ್ಥವನ್ನು ಉಪಸಂಹಾರಮಾಡುತ್ತಾನೆ:—

**ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ।**
**ತಸ್ಮಾತ್ ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ ॥ ೩೦ ॥**

೩೦. ಎಲೈ ಭರತವಂಶೋತ್ಪನ್ನನೆ, ಎಲ್ಲರ ದೇಹದಲ್ಲಿಯೂ ಇರುವ ಈ ಆತ್ಮನು ಎಂದಿಗೂ ಕೊಲ್ಲುವದಕ್ಕಾಗುವವನಲ್ಲ. ಆದ್ದರಿಂದ ನೀನು ಯಾವ ಪ್ರಾಣಿಗಳನ್ನೂ ಕುರಿತು ಶೋಕಿಸಬಾರದು.

---

1. ಆತ್ಮನನ್ನು ತಾನು ಎಂದೂ ಹಿಂದೆ ಕಾಣದಿದ್ದಂತೆ ತಿಳಿಯುವದೂ ಹೊಸ ಆಶ್ಚರ್ಯವನ್ನು ಹೇಳುವಹಾಗೆ ಆತ್ಮವಿಷಯವನ್ನು ಮಿಕ್ಕವರಿಗೆ ತಿಳಿಸುವದೂ ಎಂದೂ ಕೇಳದೆ ಇದ್ದವನಂತೆ ಆತ್ಮವಿಷಯವನ್ನು ಬೆರಗಾಗಿ ಕೇಳುವದೂ ಅಜ್ಞಾನದ ಕುರುಹುಗಳು. ಏಕೆಂದರೆ ಆತ್ಮನು ನಿತ್ಯಸಿದ್ಧನು

2. ನಿಜವಾದ ಸ್ವರೂಪವನ್ನು ಅರಿಯರು.

3. ಕಠ ೧-೨-೭ನ್ನು ಅನುಸರಿಸಿ ಈ ಅರ್ಥವನ್ನು ಕೊಟ್ಟಿದೆ. ಜ್ಞಾನಿಗಳು ಲೋಕಕ್ಕೆ ಆಶ್ಚರ್ಯರೂಪರು ಎಂದರ್ಥ.

4. ಇದು ಮೈ॥ಗು॥ ಪಾಠ. ಮ॥ ಪಾಠದಲ್ಲಿ "ಪ್ರಕರಣಾರ್ಥಃ ಉಪಸಂಹ್ರಿಯತೇ" ಎಂದು ಆ॥ನಿ॥ವಾ॥ ಪಾಠಗಳಲ್ಲಿ "ಉಪಸಂಹರನ್ ಬ್ರೂತೇ" ಎಂದೂ ಇದೆ.

(ಭಾಷ್ಯ)

೬೦. ದೇಹೀ ಶರೀರೀ ನಿತ್ಯಂ ಸರ್ವದಾ[1] ಸರ್ವಾಸ್ವವಸ್ಥಾಸು ಅವಧ್ಯಃ। ನಿರವಯುವವತ್ತ್ವಾತ್, ನಿತ್ಯತ್ವಾಚ್ಚ । ತತ್ರ (?) ಅವಧ್ಯೋಽಯಂ ದೇಹೇ ಶರೀರೇ ಸರ್ವಸ್ಯ ಸರ್ವಗತತ್ವಾತ್ ಸ್ಥಾವರಾದಿಷು ಸ್ಥಿತೋಽಪಿ[2] । ಸರ್ವಸ್ಯ ಪ್ರಾಣಿಜಾತಸ್ಯ ದೇಹೇ ವಧ್ಯಮಾನೇಽಪಿ ಅಯಂ ದೇಹೀ ನ ವಧ್ಯೋ ಯಸ್ಮಾತ್ ತಸ್ಮಾದ್ ಭೀಷ್ಮಾದೀನಿ ಸರ್ವಾಣಿ ಭೂತಾನಿ ಉದ್ದಿಶ್ಯ ನ ತ್ವಂ ಶೋಚಿತುಮರ್ಹಸಿ ॥

(ಭಾಷ್ಯಾರ್ಥ)

[ಈ ದೇಹಿಯು ಎಂದರೆಶರೀರಿಯಾದ (ಆತ್ಮನು) [ಎಂದಿಗೂ ಎಂದರೆ ಯಾವಾಗಲೂ ಯಾವ ಅವಸ್ಥೆಯಲ್ಲಿಯೂ ಅವಧ್ಯನು. ಏಕೆಂದರೆ ಇವನು ಅವಯುವಗಳಿಲ್ಲದವನಾಗಿರುತ್ತಾನೆ, ನಿತ್ಯನೂ ಆಗಿರುತ್ತಾನೆ. ಎಲ್ಲರ ದೇಹದಲ್ಲಿಯೂ ಸರ್ವಗತನಾದ್ದರಿಂದ ಸ್ಥಾವರಾದಿ (ದೇಹ)ಗಳಲ್ಲಿರುವವನಾದರೂ ಕೊಲ್ಲಲ್ಪಡುವವನಲ್ಲ.][3] ಯಾವ ಪ್ರಾಣಿರಾಶಿಯ ದೇಹವು ಕೊಲ್ಲಲ್ಪಟ್ಟರೂ ಈ ದೇಹಿಯು ವಧ್ಯನಾಗಿರುವದಿಲ್ಲವಷ್ಟೆ. ಆದ್ದರಿಂದ ಭೀಷ್ಮಾದಿಗಳಾದ ಯಾವ ಪ್ರಾಣಿಗಳನ್ನೂ ಕುರಿತು ನೀನು ಶೋಕಿಸಬಾರದು.

## ಸ್ವಧರ್ಮದ ದೃಷ್ಟಿಯಿಂದಲೂ ಶೋಕಕ್ಕೆ ಕಾರಣವಿಲ್ಲ

(ಭಾಷ್ಯ)

೬೧. ಇಹ ಪರಮಾರ್ಥತತ್ತ್ವಾಪೇಕ್ಷಾಯಾಂ ಶೋಕೋ[4] ಮೋಹೋ ವಾ ನ ಸಂಭವತಿ ಇತ್ಯುಕ್ತಮ್ । ನ ಕೇವಲಂ ಪರಮಾರ್ಥತತ್ತ್ವಾಪೇಕ್ಷಾಯಾಮೇವ—

(ಭಾಷ್ಯಾರ್ಥ)

ಪರಮಾರ್ಥತತ್ತ್ವದ ದೃಷ್ಟಿಯಿಂದ ನೋಡಿದರೆ ಶೋಕವಾಗಲಿ ಮೋಹವಾಗಲಿ ಉಂಟಾಗುವಹಾಗಿಲ್ಲ ಎಂದು ಇಲ್ಲಿ ಹೇಳಿದ್ದಾಯಿತು.[5] ಆದರೆ ಬರಿಯ ಪರಮಾರ್ಥತತ್ತ್ವದ ದೃಷ್ಟಿಯಿಂದ ಮಾತ್ರವೇ ಅಲ್ಲ, (ಮತ್ತೇನೆಂದರೆ) :—

---

1. ಈ ಮಾತು ನಿ॥ ಪಾಠದಲ್ಲಿಲ್ಲ
2. ಇಲ್ಲಿಯವರೆಗಿನ ಭಾಷ್ಯವು ಮ॥ಮೈ॥ ಪಾಠಗಳಲ್ಲಿ ಬಿಟ್ಟುಹೋಗಿದೆ.
3. ಮ॥ಮೈ॥ ಪಾಠಗಳ ಹೊರತು ಮಿಕ್ಕಕಡೆಗಳಲ್ಲಿರುವದರ ಅನುವಾದವಿದು. ಇಲ್ಲಿ ತತ್ರ ಎಂಬಮಾತನ್ನು ಕನ್ನಡಿಸಿಲ್ಲ.
4. ' ಶೋಕೋ ವಾ ' ಮೈ॥ಮ॥
5. ' ಇಲ್ಲಿ ಹೇಳಿದ್ದಾಯಿತು ' ಎಂದರೆ ೨-೩೦ರಲ್ಲಿ ಎಂದು ಆ॥ ವ್ಯಾಖ್ಯಾನ ; ಆದರೆ ಈ ಪ್ರಕರಣವೆಲ್ಲ ಆತ್ಮಸ್ವರೂಪವನ್ನು ತಿಳಿಸುವದೇ ಆಗಿರುತ್ತದೆ.

**ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಮ್ಪಿತುಮರ್ಹಸಿ ।**
**ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ॥**

೩೧ ಸ್ವಧರ್ಮವನ್ನು ನೋಡಿದರೂ ನೀನು ಹಿಂದುಮುಂದೆ ನೋಡಬಾರದು. ಏಕೆಂದರೆ ಧರ್ಮ್ಯವಾದ ಯುದ್ಧಕ್ಕಿಂತ ಕ್ಷತ್ರಿಯನಿಗ ಶ್ರೇಯಸ್ಕರವಾದದ್ದು ಮತ್ತೊಂದಿರುವದಿಲ್ಲ.

(ಭಾಷ್ಯ)

೬೨. ಸ್ವಧರ್ಮಮಪಿ ಸ್ವೋ ಧರ್ಮಃ ಕ್ಷತ್ರಿಯಸ್ಯ ಧರ್ಮಃ[1] ಯುದ್ಧಮ್ । ತಮಪಿ ಅವೇಕ್ಷ್ಯ ತ್ವಂ ನ ವಿಕಮ್ಪಿತುಂ ಪ್ರಚಲಿತುಮ್ ಅರ್ಹಸಿ[2] ಕ್ಷತ್ರಿಯಸ್ಯ ಸ್ವಾಭಾವಿಕಾತ್ ಧರ್ಮಾತ್ ಆತ್ಮಸ್ವಾಭಾವ್ಯಾತ್ ಇತ್ಯಭಿಪ್ರಾಯಃ । ತಚ್ಚ ಯುದ್ಧಂ ಪೃಥಿವೀಜಯದ್ವಾರೇಣ ಧರ್ಮಾರ್ಥಂ ಪ್ರಜಾರಕ್ಷಣಾರ್ಥಂ ಚ ಇತಿ ಧರ್ಮಾದನಪೇತಮ್ ಇತಿ ಪರಂ ಧರ್ಮ್ಯಮ್[3] । ತಸ್ಮಾತ್ ಧರ್ಮ್ಯಾತ್ ಯುದ್ಧಾತ್ ಶ್ರೇಯಃ ಅನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ಹಿ ಯಸ್ಮಾತ್ ॥

(ಭಾಷ್ಯಾರ್ಥ)

ಸ್ವಧರ್ಮವನ್ನು (ನೋಡಿದ)ರೂ-(ಸ್ವಧರ್ಮ)ವೆಂದರೆ ಕ್ಷತ್ರಿಯನಾದ ನಿನ್ನ ಧರ್ಮವು, ಯುದ್ಧವು ; ಅದನ್ನು ನೋಡಿದರೂ-ನೀನು ಅಲುಗಾಡುವದಕ್ಕೆ ಚಲಿಸುವದಕ್ಕೆ ಕಾರಣವಿಲ್ಲ. ಕ್ಷತ್ರಿಯನಿಗೆ ಸ್ವಾಭಾವಿಕವಾಗಿರುವ[4] ಧರ್ಮವನ್ನು, ನಿನ್ನ ಸ್ವಾಭಾವ್ಯವನ್ನು ಬಿಟ್ಟು (ಚಲಿಸುವದಕ್ಕೆ ಕಾರಣವಿಲ್ಲ) ಎಂದು ಅಭಿಪ್ರಾಯ. ಈ ಯುದ್ಧವುಕೂಡ ಪೃಥಿವಿಯನ್ನು ಜಯಿಸುವಮೂಲಕ ಧರ್ಮ(ವನ್ನು ಸಂಪಾದಿಸು)ವದಕ್ಕೂ ಪ್ರಜೆಗಳನ್ನು ಕಾಪಾಡುವದಕ್ಕೂ (ಕಾರಣವಾಗುತ್ತದೆ)ಯಾದ್ದರಿಂದ ಇದು ಧರ್ಮವನ್ನು ಬಿಟ್ಟಿರುವದಿಲ್ಲ, ಪರಮಧರ್ಮ್ಯವಾಗಿರುತ್ತದ. ಈ ಧರ್ಮ್ಯವಾದ ಯುದ್ಧಕ್ಕಿಂತ (ಹೆಚ್ಚಿನ) ಬೇರೊಂದು ಶ್ರೇಯಸ್ಕರವಾದ (ಸಾಧನವು) ಕ್ಷತ್ರಿಯನಿಗೆ ಇರುವದಿಲ್ಲ, ಆದ್ದರಿಂದ (ಅದನ್ನು ಬಿಡತಕ್ಕದ್ದಲ್ಲ)

(ಭಾಷ್ಯ)

೬೩. ಕುತಶ್ಚ ತದ್ ಯುದ್ಧಂ ಕರ್ತವ್ಯಮಿತಿ ? ಉಚ್ಯತೇ—

---

1. ಈ ಮಾತು ವಾ॥ಮು॥ ಪಾಠಗಳಲ್ಲಿಲ್ಲ.

2. ಇದರ ಮುಂದೆ ಆ॥ಸಿ॥ಗಳಲ್ಲಿರುವ " ಧರ್ಮ್ಯಾತ್ " ಎಂಬ ಮಾತು ಬೇಕಿಲ್ಲ ; ಹಿಂದುಗಡೆ ಕೆಲವು ಪುಸ್ತಕಗಳಲ್ಲಿ ನ ಎಂದಿದೆ

3. " ಇತಿ ಪರಮಂ ಧರ್ಮ್ಯಮ್ । ಧರ್ಮಾತ್ ಅನಪೇತಂ ಧರ್ಮ್ಯಮ್ ॥" ಎಂದು ಮ॥ಮೈ॥ ಇಲ್ಲಿ ' ಪರಂ ' ಅಥವಾ ' ಪರಮಂ ' ಎಂಬ ಮಾತು ಗೀತೆಯ ಮೂಲದಲ್ಲಿಲ್ಲವಾದ್ದರಿಂದ ಇಲ್ಲದಿದ್ದರೂ ಸಾಗುತ್ತದೆ.

4. ೧೮-೪೩ನ್ನು ನೋಡಿ.

(ಭಾಷ್ಯಾರ್ಥ)

ಆ ಯುದ್ಧವನ್ನು ಮಾಡಬೇಕೆಂಬುದಕ್ಕೆ ಇನ್ನೂ ಒಂದು ಕಾರಣವುಂಟೆಂದು (ಈಗ) ಹೇಳುತ್ತಾನೆ :—

**ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರಮಪಾವೃತಮ್ ।**
**ಸುಖಿನಃ ಕ್ಷತ್ರಿಯಾಃ ಪಾರ್ಥ ಲಭನ್ತೇ ಯುದ್ಧಮೀದೃಶಮ್ ॥೩೨॥**

೩೨. ಎಲೈ ಪಾರ್ಥನೆ, ಯದೃಚ್ಛೆಯಿಂದ ಬಂದಿರುವ ತೆರೆದಿರುವ ಸ್ವರ್ಗದ ಬಾಗಿಲಾದ ಇಂಥ ಯುದ್ಧವು ಸುಖಿಗಳಾದ ಕ್ಷತ್ರಿಯರಿಗೆ(ಮಾತ್ರ) ಸಿಕ್ಕುತ್ತದೆ.

(ಭಾಷ್ಯ)

೬೪ ಯದೃಚ್ಛಯಾ ಚ ಅಪ್ರಾರ್ಥಿತತಯಾ[1] ಉಪಪನ್ನಮ್ ಆಗತಂ ಸ್ವರ್ಗ ದ್ವಾರಮ್ ಅಪಾವೃತಮ್ ಉದ್ಘಾಟಿತಂ ಯೇ ಏತತ್ ಈದೃಶಂ ಯುದ್ಧಂ ಲಭನ್ತೇ ಕ್ಷತ್ರಿಯಾಃ ಹೇ ಪಾರ್ಥ ಕಿಂ ನ ಸುಖಿನಸ್ತೇ ?

(ಭಾಷ್ಯಾರ್ಥ)

ಎಲೈ ಪಾರ್ಥನೆ, ಯದೃಚ್ಛೆಯಿಂದ (ತಾವು) ಬಯಸದೆಯೇ ಉಪಪನ್ನವಾದ ಬಂದಿರುವ ತೆರೆದಿರುವ ಹಾರುಹೊಡೆದಿರುವ ಸ್ವರ್ಗದ ಬಾಗಿಲಾದ ಈ ಬಗೆಯ ಯುದ್ಧವು ಯಾವ ಕ್ಷತ್ರಿಯರಿಗೆ ದೊರೆಯುವದೋ ಅವರು ಸುಖಿಗಳಲ್ಲವೆ ?

೬೫. ಏವಂ ಕರ್ತವ್ಯತಾಪ್ರಾಪ್ತಮಪಿ

(ಭಾಷ್ಯಾರ್ಥ)

ಹೀಗೆ (ನೀನು) ಮಾಡಲೇಬೇಕಾಗಿರುವದಾದರೂ. —

**ಅಥ ಚೇತ್ ತ್ವಮಿಮಂ ಧರ್ಮ್ಯಂ ಸಙ್ಗ್ರಾಮಂ ನ ಕರಿಷ್ಯಸಿ ।**
**ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ ॥ ೩೩ ॥**

೩೩. ಹಾಗಿಲ್ಲದೆ ಈ ಧರ್ಮ್ಯವಾದ ಯುದ್ಧವನ್ನು ನೀನು ಮಾಡದೆ ಹೋಗುವೆಯಾದರೆ, ಅದರಿಂದ ಸ್ವಧರ್ಮವನ್ನೂ ಕೀರ್ತಿಯನ್ನೂ ಕಳೆದು ಕೊಂಡು ಪಾಪವನ್ನು ಹೊಂದುತ್ತೀಯೆ.

(ಭಾಷ್ಯ)

೬೬. ಅಥ ಚೇತ್ ತ್ವಮ್ ಇಮಂ ಧರ್ಮ್ಯಂ ಧರ್ಮಾತ್ ಅನಪೇತಂ ವಿಹಿತಂ ಸಙ್ಗ್ರಾಮಂ ಯುದ್ಧಂ ನ ಕರಿಷ್ಯಸಿ ಚೇತ್ ತತಃ ತದಕರಣಾತ್ ಸ್ವಧರ್ಮಂ ಕೀರ್ತಿಂ ಚ ಮಹಾದೇವಾದಿಸಮಾಗಮನಿಮಿತ್ತಾಂ ಹಿತ್ವಾ ಕೇವಲಂ ಪಾಪಮ್ ಅವಾಪ್ಸ್ಯಸಿ ॥

---

1. "ಅಪ್ರಾರ್ಥಿತಮ್" ಎಂದು ಮ॥ಮೈ॥

ಹಾಗಿಲ್ಲದೆ ನೀನು ಈ ಧರ್ಮ್ಯವಾದ ಧರ್ಮಕ್ಕೆ ಹೊರತಲ್ಲದ (ನಿನ್ನ ಧರ್ಮವೆಂದು) ವಿಹಿತವಾಗಿರುವ (ಈ) ಸಂಗ್ರಾಮವನ್ನು, ಯುದ್ಧವನ್ನು ಮಾಡದೆ ಹೋಗುವೆಯಾದರೆ, ಅದರಿಂದ ಇದನ್ನು ಮಾಡದೆ ಇರುವದರಿಂದ ಸ್ವಧರ್ಮವನ್ನೂ ಮಹಾದೇವನೇ ಮುಂತಾದವರನ್ನು ಕಂಡುಬಂದಿರುವ ನಿಮಿತ್ತದಿಂದ[1] (ಗಳಿಸಿರುವ) ಕೀರ್ತಿಯನ್ನೂ ಕಳೆದುಕೊಂಡು ಬರಿಯ ಪಾಪವನ್ನೇ ಹೊಂದುವೆ.

(ಭಾಷ್ಯ)

೬೭. ನ ಕೇವಲಂ ಸ್ವಧರ್ಮಕೀರ್ತಿಪರಿತ್ಯಾಗಃ—

(ಭಾಷ್ಯಾರ್ಥ)

ಸ್ವಧರ್ಮವನ್ನೂ ಕೀರ್ತಿಯನ್ನೂ ಕಳೆದುಕೊಳ್ಳುವದೊಂದೇ ಅಲ್ಲ:—

**ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯನ್ತಿ ತೇಽವ್ಯಯಾಮ್ ।**
**ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ ॥ ೩೪ ॥**

**೩೪.** ನಿನ್ನ ಅಪಯಶಸ್ಸನ್ನೂ ಜನರು ಎಂದೆಂದಿಗೂ ಆಡಿಕೊಳ್ಳುತ್ತಿರುವರು. ಸಂಭಾವಿತನಾದವನಿಗೆ ಅಕೀರ್ತಿಯೆಂಬುದು ಮರಣಕ್ಕಿಂತ ಹೆಚ್ಚು.

(ಭಾಷ್ಯ)

೬೮. ಅಕೀರ್ತಿಂ ಚಾಪಿ ಯುದ್ಧೇ[2] ಭೂತಾನಿ ಕಥಯಿಷ್ಯನ್ತಿ ತೇ ತವ ಅವ್ಯಯಾಂ ದೀರ್ಘಕಾಲಾಮ್ । 'ಧರ್ಮಾತ್ಮಾ' 'ಶೂರಃ' ಇತ್ಯೇವಮಾದಿಭಿರ್ಗುಣೈಃ ಸಂಭಾವಿತಸ್ಯ ಅಕೀರ್ತಿಃ ಮರಣಾತ್ ಅತಿರಿಚ್ಯತೇ । ಸಂಭಾವಿತಸ್ಯ ಚ ಅಕೀರ್ತೇಃ ವರಂ ಮರಣಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ನಿನಗೆ ಯುದ್ಧದಲ್ಲಿ ಉಂಟಾದ ಅಪಯಶಸ್ಸನ್ನು ಜನರು ಎಂದೆಂದಿಗೂ ಎಂದರೆ ಬಹುಕಾಲದವರೆಗೆ ಆಡಿಕೊಳ್ಳುತ್ತಿರುವರು. 'ಧರ್ಮಾತ್ಮನು', 'ಶೂರನು'

---

1. ಕಿರಾತವೇಷಧಾರಿಯಾದ ಪರಮೇಶ್ವರನೊಡನೆ ಯುದ್ಧವನ್ನು ಮಾಡಿ ಅವನನ್ನು ಮೆಚ್ಚಿಸಿ ಪಾಶುಪತಾಸ್ತ್ರವನ್ನು ತಂದದ್ದು, ದೇವೇಂದ್ರನಿಗೆ ಸಹಾಯಮಾಡಿಬಂದಿರುವದು— ಮುಂತಾದ ಕಾರಣದಿಂದ.

2. ಈ ಮಾತು ಮು॥ ಮೈ॥ ಪಾಠದಲ್ಲಿಲ್ಲ.

ಎಂಬಿವೇ ಮುಂತಾದ ಗುಣಗಳಿಂದ ಗೌರವವನ್ನು ಪಡೆದಿರುವ (ನಿನ್ನಂಥ)ವನಿಗೆ ಅಪಕೀರ್ತಿಯೆಂಬುದು ಮರಣಕ್ಕಿಂತ ಹೆಚ್ಚು, ಅಪಯಶಸ್ಸಿಗಿಂತ ಸಾವೇ ಮೇಲು ಎಂದರ್ಥ.

**ಭಯಾದ್ರಣಾದುಪರತಂ ಮಂಸ್ಯನ್ತೇ ತ್ವಾಂ ಮಹಾರಥಾಃ।**
**ಯೇಷಾಂ ಚ ತ್ವಂ ಬಹುಮತೋ ಭೂತ್ವಾ ಯಾಸ್ಯಸಿ ಲಾಘವಮ್॥**

೩೫. ನೀನು ಅಂಜಿಕೆಯಿಂದ ಯುದ್ಧವನ್ನು ಬಿಟ್ಟೆ ಎಂದು ಮಹಾರಥರುಗಳು ಎಣಿಸುವರು. ಅವರಿಗೆ ಮಾನ್ಯನಾಗಿರುವವನಾಗಿ ನೀನು ಇನ್ನು (ಮುಂದೆ) ಲಾಘವವನ್ನು ಹೊಂದುತ್ತೀಯೆ.

(ಭಾಷ್ಯ)

೬೯. ಕಿಂ ಚ ಭಯಾತ್ ಕರ್ಣಾದಿಭ್ಯಃ ರಣಾತ್ ಯುದ್ಧಾತ್ ಉಪರತಂ ನಿವೃತ್ತಂ ಮಂಸ್ಯನ್ತೇ ಚಿನ್ತಯಿಷ್ಯನ್ತಿ ನ ಕೃಪಯಾ ಇತಿ ತ್ವಾಂ ಮಹಾರಥಾಃ ದುರ್ಯೋಧನಪ್ರಭೃತಯಃ। ಕೇ ಮಂಸ್ಯನ್ತೇ ಇತಿ? ಆಹ—ಯೇಷಾಂ ಚ ತ್ವಂ ದುರ್ಯೋಧನಾದೀನಾಂ ಬಹುಮತಃ ಬಹುಭಿರ್ಗುಣೈರ್ಯುಕ್ತಃ ಇತ್ಯೇವಂ ಮತಃ[1] ಬಹುಮತಃ ಭೂತ್ವಾ ಪುನಃ[2] ಯಾಸ್ಯಸಿ ಲಾಘವಂ ಲಘುಭಾವಮ್॥

(ಭಾಷ್ಯಾರ್ಥ)

ಇದಲ್ಲದೆ ದುರ್ಯೋಧನನೇ ಮುಂತಾದ ಮಹಾರಥರು ಕರ್ಣಾದಿಗಳ ಅಂಜಿಕೆಯಿಂದ ನೀನು ಯುದ್ಧದಿಂದ ಹಿಂಜರಿದೆ, ಹಿಮ್ಮೆಟ್ಟಿದೆ ಎಂದು ಎಣಿಸುವರು, ಭಾವಿಸುವರೇ ಹೊರತು ಕೃಪೆಯಿಂದ (ಹಿಮ್ಮೆಟ್ಟಿದೆಯೆಂದು ಎಣಿಸು) ವದಿಲ್ಲ. ಹಾಗೆ ಎಣಿಸುವವರು ಯಾರು? ಎಂದರೆ ಹೇಳುತ್ತಾನೆ. ಯಾವ ಆ ದುರ್ಯೋಧನಾದಿಗಳಿಗೆ ನೀನು ಬಹುಮತನಾಗಿದ್ದು ಎಂದರೆ ಅನೇಕಗುಣಗಳುಳ್ಳವನೆಂಬೀ ಅಭಿಪ್ರಾಯಕ್ಕೆ ಪಾತ್ರನಾಗಿದ್ದು ಇನ್ನು ಮೇಲೆ ಲಾಘವವನ್ನು ಹೊಂದುತ್ತೀಯೆ, (ಅವರ ದೃಷ್ಟಿಯಲ್ಲಿ) ಹಗುರವಾಗಿಬಿಡುತ್ತೀಯೆ.

**ಅವಾಚ್ಯವಾದಾಂಶ್ಚ ಬಹೂನ್ ವದಿಷ್ಯನ್ತಿ ತವಾಹಿತಾಃ।**
**ನಿನ್ದನ್ತಸ್ತವ ಸಾಮರ್ಥ್ಯಂ ತತೋ ದುಃಖತರಂ ನು ಕಿಮ್॥ ೩೬ ॥**

---

1. ಸಿ॥ ಗು॥ ಮ॥ ಪಾಠಗಳಲ್ಲಿ ಈ ಮಾತಿಲ್ಲ.
2. ಇಲ್ಲಿ 'ತ್ವಂ' ಎಂದು ಮೈ॥ ಪಾಠದಲ್ಲಿ ಹೆಚ್ಚಾಗಿದೆ.

೩೬. ನಿನ್ನ ಅಹಿತರು ನಿನ್ನ ಸಾಮರ್ಥ್ಯವನ್ನು ನಿಂದಿಸುತ್ತಾ ಬಹಳವಾಗಿ ಅವಾಚ್ಯವಾದಗಳನ್ನು ಆಡುವರು. ಅದಕ್ಕಿಂತ ಹೆಚ್ಚು ದುಃಖಕರವಾದದ್ದು ಏನು?

(**ಭಾಷ್ಯ**)

೭೦. **ಕಿಂ ಚ ಅವಾಚ್ಯವಾದಾನ್ ಅವಕ್ತವ್ಯವಾದಾಂಶ್ಚ ಬಹೂನ್ ಅನೇಕಪ್ರಕಾರಾನ್ ವದಿಷ್ಯನ್ತಿ ತವ ಅಹಿತಾಃ ಶತ್ರವಃ ನಿನ್ದನ್ತಃ ಕುತ್ಸಯನ್ತಃ ತವ ತ್ವದೀಯಂ ಸಾಮರ್ಥ್ಯಮ್ ನಿವಾತಕವಚಾದಿಯುದ್ಧನಿಮಿತ್ತಮ್ । ತತಃ ತಸ್ಮಾತ್ ನಿನ್ದಾಪ್ರಾಪ್ತೇಃ ದುಃಖಾತ್ ದುಃಖತರಂ ನು ಕಿಮ್? ತತಃ ಕಷ್ಟತರಂ ದುಃಖಂ ನಾಸ್ತಿ ಇತ್ಯರ್ಥಃ ॥**

(**ಭಾಷ್ಯಾರ್ಥ**)

ಇದಲ್ಲದೆ ನಿನ್ನ ಅಹಿತರು ಎಂದರೆ ಶತ್ರುಗಳು ನಿವಾತಕವಚರೇ ಮುಂತಾದವರೊಡನೆ ಯುದ್ಧಮಾಡಿದ ನಿನ್ನ ನಿನ್ನ ಸಂಬಂಧವಾದ ಸಾಮರ್ಥ್ಯವನ್ನು (ಕೂಡ) ನಿಂದಿಸುತ್ತಾ ಹೀಯಾಳಿಸುತ್ತಾ ಅವಾಚ್ಯವಾದಗಳನ್ನು ಆಡಬಾರದ ಮಾತುಗಳನ್ನು ಬಹುವಾಗಿ ಅನೇಕಪ್ರಕಾರವಾಗಿ ಆಡುವರು. ಅದಕ್ಕಿಂತ ಆ ನಿಂದೆಯನ್ನು ಪಡೆಯುವದಕ್ಕಿಂತ ಹೆಚ್ಚು ದುಃಖಕರವಾದದ್ದು (ಮತ್ತೆ) ಏನು? ಅದಕ್ಕಿಂತ ಹೆಚ್ಚಿನ ಕಷ್ಟವನ್ನುಂಟುಮಾಡುವ ದುಃಖವೇ ಇಲ್ಲ ಎಂದರ್ಥ.

(**ಭಾಷ್ಯ**)

೭೧. **ಯುದ್ಧೇ ಪುನಃ ಕ್ರಿಯಮಾಣೇ—**

(**ಭಾಷ್ಯಾರ್ಥ**)

ಆದರೆ ಯುದ್ಧವನ್ನು ಮಾಡಿದರೊ? ಎಂದರೆ :—

**ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಮ್ ।**
**ತಸ್ಮಾದುತ್ತಿಷ್ಠ ಕೌನ್ತೇಯ ಯುದ್ಧಾಯ ಕೃತನಿಶ್ಚಯಃ ॥ ೩೭ ॥**

೩೭. ಹತನಾದರೆ ಸ್ವರ್ಗವನ್ನು ಪಡೆಯುವೆ, ಅಥವಾ ಜಯಿಸಿದರೆ ಭೂಮಿಯನ್ನು ಭೋಗಿಸುವೆ. ಆದ್ದರಿಂದ ಎಲೈ ಕೌನ್ತೇಯನೆ, ಯುದ್ಧಕ್ಕೆ ನಿಶ್ಚಯವನ್ನು ಮಾಡಿಕೊಂಡು ಏಳು.

(**ಭಾಷ್ಯ**)

೭೨. **ಕರ್ಣಾದಿಭಿಃ ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಹತಃ ಸನ್ ಸ್ವರ್ಗಂ ಪ್ರಾಪ್ಸ್ಯಸಿ । ಜಿತ್ವಾ ವಾ ಕರ್ಣಾದೀನ್ ಶೂರಾನ್ ಭೋಕ್ಷ್ಯಸೇ ಮಹೀಮ್ ।**

ಉಭಯಥಾಪಿ ತವ ಲಾಭ ಏವ ಇತ್ಯಭಿಪ್ರಾಯಃ । ಯತ ಏವಂ ತಸ್ಮಾತ್ ಉತ್ತಿಷ್ಠ ಕೌನ್ತೇಯ ಯುದ್ಧಾಯ ಕೃತನಿಶ್ಚಯಃ "ಜೇಷ್ಯಾಮಿ ಶತ್ರೂನ್ ಮರಿಷ್ಯಾಮಿ ವಾ" ಇತಿ ನಿಶ್ಚಯಂ ಕೃತ್ವಾ ಇತ್ಯರ್ಥಃ ॥

(ಭಾಷ್ಯಾರ್ಥ)

ಕರ್ಣಾದಿಗಳಿಂದ ಹತನಾದರೆ ಸ್ವರ್ಗವನ್ನು ಪಡೆಯುವೆ; (ಅವರಿಂದ) ಸತ್ತರೆ ಸ್ವರ್ಗವನ್ನೇ ಪಡೆಯುವೆ. ಶೂರರಾದ ಕರ್ಣಾದಿಗಳನ್ನೇ (ನೀನೇ) ಜಯಿಸಿದರೆ ಭೂಮಿಯನ್ನು ಅನುಭವಿಸುವೆ. (ಹೀಗೆ) ಎರಡುಬಗೆಯಿಂದಲೂ ನಿನಗೆ ಲಾಭವೇ (ಉಂಟು) ಎಂದಭಿಪ್ರಾಯ. ಹೀಗಿರುವದರಿಂದ ಎಲೈ ಕೌಂತೇಯನೆ, ಯುದ್ಧಕ್ಕೆ ನಿಶ್ಚಯಮಾಡಿಕೊಂಡು "ಶತ್ರುಗಳನ್ನಾದರೂ ಗೆಲ್ಲುವೆನು, (ಯುದ್ಧದಲ್ಲಿ) ಮರಣವನ್ನಾದರೂ ಹೊಂದುವೆನು" ಎಂದು (ನಿಶ್ಚಯವನ್ನು ಮಾಡಿಕೊಂಡು) ಏಳು.

(ಭಾಷ್ಯ)

೨೪. ತತ್ರ ಯುದ್ಧಂ ಸ್ವಧರ್ಮಃ ಇತ್ಯೇವಂ ಯುಧ್ಯಮಾನಸ್ಯ ಉಪದೇಶಮಿಮಂ ಶೃಣು—

(ಭಾಷ್ಯಾರ್ಥ)

ಹೀಗೆ ಯುದ್ಧವು ಸ್ವಧರ್ಮವು ಎಂದೀ ಪರಿಯಲ್ಲಿ (ತಿಳಿದು) ಯುದ್ಧಮಾಡುವದಾದರೆ[1] ಈ ಉಪದೇಶವನ್ನು ಕೇಳು :—

**ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।**
**ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ೩೮ ॥**

೩೮. ಸುಖದುಃಖಗಳನ್ನೂ ಲಾಭಾಲಾಭಗಳನ್ನೂ ಜಯಾಜಯಗಳನ್ನೂ ಸಮವಾಗಿ ಮಾಡಿಕೊಂಡು ಆ ಬಳಿಕ ಯುದ್ಧಕ್ಕೆ ಉದ್ಯುಕ್ತನಾಗು. ಹಾಗಾದರೆ ನೀನು ಪಾಪವನ್ನು ಹೊಂದುವದಿಲ್ಲ.

(ಭಾಷ್ಯ)

೭೪. ಸುಖದುಃಖೇ ಸಮೇ ತುಲ್ಯೇ ಕೃತ್ವಾ ರಾಗದ್ವೇಷೌ ಅಕೃತ್ವಾ ಇತ್ಯೇತತ್ । ತಥಾ ಲಾಭಾಲಾಭೌ ಜಯಾಜಯೌ ಚ ಸಮೌ ಕೃತ್ವಾ ತತೋ ಯುದ್ಧಾಯ ಯುಜ್ಯಸ್ವ ಘಟಸ್ವ । ನೈವಂ ಯುದ್ಧಂ ಕುರ್ವನ್ ಪಾಪಮ್ ಅವಾಪ್ಸ್ಯಸಿ ॥

---

1. ೩೧ನೆಯ ಶ್ಲೋಕದಿಂದ ಇಲ್ಲಿಯವರೆಗೆ ಹೇಳಿದ ಸ್ವಧರ್ಮದೃಷ್ಟಿಯಿಂದ ಕರ್ಮವನ್ನು ಮಾಡುವಾಗ ಮನಸ್ಸು ಹೇಗಿರಬೇಕೆಂದು ಇಲ್ಲಿ ಹೇಳಿರುತ್ತದೆ.

(ಭಾಷ್ಯಾರ್ಥ)

ಸುಖದುಃಖಗಳನ್ನು ಸಮವಾಗಿ ಎಣಿಸಿಕೊಂಡು ಎಂದರೆ (ಅವುಗಳಲ್ಲಿ) ರಾಗ ದ್ವೇಷಗಳನ್ನು ಮಾಡದೆ ಎಂದರ್ಥ.[1] ಇದರಂತೆ ಲಾಭಾಲಾಭಗಳನ್ನೂ ಜಯಾಪಜಯ ಗಳನ್ನೂ ಸಮವಾಗಿ ಎಣಿಸಿ ಆಮೇಲೆ ಯುದ್ಧಕ್ಕೆ ಹೊರಡು. ಹೀಗೆ ಯುದ್ಧಮಾಡಿ ದರೆ ನಿನಗೆ ಪಾಪವು ಬರುವದಿಲ್ಲ.[2]

## ಕರ್ಮಯೋಗದ ಮಹಿಮೆ

(ಭಾಷ್ಯ)

೭೫. ಏಷ ಉಪದೇಶಃ ಪ್ರಾಸಙ್ಗಿಕಃ ಶೋಕಮೋಹಾಪನಯನಾಯ[3] ಲೌಕಿಕೋ ನ್ಯಾಯಃ 'ಸ್ವಧರ್ಮಮಪಿ ಚಾವೇಕ್ಷ್ಯ (೨-೩೧) ಇತ್ಯಾದ್ಯೈಃ ಶ್ಲೋಕೈರುಕ್ತಃ, ನ ತು ತಾತ್ಪರ್ಯೇಣ । ಪರಮಾರ್ಥದರ್ಶನಂ ತು ಇಹ ಪ್ರಕೃತಮ್ । ತಚ್ಚ ಉಕ್ತಮ್ ಉಪಸಂಹ್ರಿಯತೇ "ಏಷಾ ತೇಽಭಿಹಿತಾ' (೨-೩೯) ಇತಿ ಶಾಸ್ತ್ರವಿಷಯವಿಭಾಗಪ್ರದರ್ಶನಾಯ । ಇಹ ಹಿ ಪ್ರದರ್ಶಿತೇ ಪುನಃ ಶಾಸ್ತ್ರವಿಷಯ ವಿಭಾಗೇ ಉಪರಿಷ್ಟಾತ್ "ಜ್ಞಾನಯೋಗೇನ ಸಾಙ್ಖ್ಯಾನಾಂ ಕರ್ಮಯೋಗೇನ ಯೋಗಿನಾಮ್"(೩-೩) ಇತಿ ನಿಷ್ಠಾದ್ವಯವಿಷಯಂ ಶಾಸ್ತ್ರಂ ಸುಖಂ ಪ್ರವರ್ತಿಷ್ಯತೇ, ಶ್ರೋತಾರಶ್ಚ ವಿಷಯವಿಭಾಗೇನ ಸುಖಂ ಗ್ರಹೀಷ್ಯನ್ತಿ ಇತ್ಯತಃ ಆಹ—

(ಭಾಷ್ಯಾರ್ಥ)

"ಸ್ವಧರ್ಮಮಪಿ ಚಾವೇಕ್ಷ್ಯ" (೩೧) ಮುಂತಾದ ಶ್ಲೋಕಗಳಿಂದ (ಇಲ್ಲಿಯವರೆಗೆ) ಶೋಕಮೋಹಗಳನ್ನು ಕಳೆಯುವದಕ್ಕೆ ಲೌಕಿಕನ್ಯಾಯವಾಗಿ ಈ ಉಪದೇಶವನ್ನು ಪ್ರಸಂಗದಿಂದ[4] ಹೇಳಿದೆಯೇ ಹೊರತು ತಾತ್ಪರ್ಯದಿಂದ ಹೇಳಿ

---

1. ಸುಖದಲ್ಲಿ ರಾಗವನ್ನು ಮಾಡದೆ, ದುಃಖದಲ್ಲಿ ದ್ವೇಷವನ್ನು ಮಾಡದೆ ಎಂದರ್ಥ.

2. ರಾಜ್ಯಲಾಭಕ್ಕಾಗಿಯೇ ಸ್ವಜನರನ್ನು ಕೊಂದರೆ ಪಾಪವು ಬರುತ್ತದೆ, ಧರ್ಮದೃಷ್ಟಿಯಿಂದ ಮಾಡಬೇಕಾದ ಯುದ್ಧವನ್ನು ಮಾಡಿದರೆ ಪಾಪವಿಲ್ಲ. ಪಶುಯಜ್ಞವು ಶಾಸ್ತ್ರಚೋದಿತವೆಂದು ಮಾಡುವವನಿಗೆ ಆಗುವಂತೆ ಅದೃಷ್ಟವಾದ ಫಲವುಮಾತ್ರ ಆಗುತ್ತದೆ. ಧರ್ಮವನ್ನು ಮಾಡಿದರೆ ಪುಣ್ಯವು ಬರುವ ಈ ಉಪದೇಶಕ್ಕೂ ಕರ್ಮಯೋಗದಿಂದ ಕರ್ಮಬಂಧವು ತಪ್ಪುವದೆಂಬ ಉಪದೇಶಕ್ಕೂ ಹೆಚ್ಚುಕಡಿಮೆಯುಂಟು.

3. 'ಶೋಕಮೋಹಾಪನಯೇ' ಮ॥ಮೈ॥

4. ಪರಮಾರ್ಥದೃಷ್ಟಿಯಿಂದ ನೋಡಿದರೆ ಶೋಕಕ್ಕೆ ಕಾರಣವಿಲ್ಲವೆಂಬ ಪ್ರಕರಣದಲ್ಲಿ ಯುದ್ಧವು ಸ್ವಧರ್ಮವಾದ್ದರಿಂದಲೂ ಶೋಕಕ್ಕೆ ಕಾರಣವಿಲ್ಲ ಎಂದು ಪ್ರಸಂಗವಶದಿಂದ ಹೇಳಿರುತ್ತದೆ. ಇಲ್ಲಿ ಸ್ವಧರ್ಮವನ್ನು ಕುರಿತ ವಿಚಾರವನ್ನೇ ಮುಖ್ಯವಾಗಿ ಹೇಳುತ್ತಿಲ್ಲ ಎಂದರ್ಥ.

ರುವದಿಲ್ಲ. ಆದರೆ ಇಲ್ಲಿ (ನಿಜವಾಗಿ) ಪ್ರಕೃತವಾಗಿರುವದು ಪರಮಾರ್ಥಜ್ಞಾನವು. ಅದನ್ನು ಹೇಳಿದ್ದಾಯಿತಾದ್ದರಿಂದ (ಈ ಗೀತಾ) ಶಾಸ್ತ್ರದ ವಿಷಯಗಳ ವಿಂಗಡವನ್ನು ತೋರಿಸಿಕೊಡುವದಕ್ಕಾಗಿ "ಏಷಾ ತೇಽಭಿಹಿತಾ" ಎಂದು (ಮುಂದಿನ ಶ್ಲೋಕದಲ್ಲಿ ಅದನ್ನು) ಉಪಸಂಹಾರಮಾಡಿರುತ್ತದೆ.[1] (ಹೀಗೆ) ಶಾಸ್ತ್ರದ ವಿಷಯಗಳ ವಿಂಗಡವನ್ನು ಇಲ್ಲಿ ತೋರಿಸಿಕೊಟ್ಟರೆ ಮುಂದೆ "ಜ್ಞಾನಯೋಗೇನ ಸಾಙ್ಖ್ಯಾನಾಂ ಕರ್ಮಯೋಗೇನ ಯೋಗಿನಾಮ್" (೩-೩) ಎಂದು ಎರಡು ನಿಷ್ಠೆಗಳನ್ನು ಕುರಿತ ಶಾಸ್ತ್ರವು ಸುಲಭವಾಗಿ ಮುಂದಕ್ಕೆ ಸಾಗುವದು.[2] ಮತ್ತು ಕೇಳುವವರೂ (ಇದನ್ನು) ವಿಷಯಗಳನ್ನು ವಿಂಗಡಿಸಿಕೊಂಡೇ ಸುಲಭವಾಗಿ ತಿಳಿದುಕೊಳ್ಳಬಹುದಾಗುವದು. ಆದ್ದರಿಂದ (ಭಗವಂತನು) ಹೀಗೆಂದು ಹೇಳುತ್ತಾನೆ:—

**ಏಷಾ ತೇಽಭಿಹಿತಾ ಸಾಙ್ಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು ।**
**ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬನ್ಧಂ ಪ್ರಹಾಸ್ಯಸಿ ॥೩೯॥**

೩೯. ಇಗೋ ನಿನಗೆ ಹೇಳಿದ ಇದು ಸಾಂಖ್ಯದಲ್ಲಿರುವ ಬುದ್ಧಿಯು. ಯೋಗವಿಷಯದಲ್ಲಿಯಾದರೆ ಇವನ್ನು ಕೇಳು. ಎಲೈ ಪಾರ್ಥನೆ, (ನೀನು) ಈ ಬುದ್ಧಿಯಿಂದ ಕೂಡಿದವನಾದರೆ ಕರ್ಮಬಂಧವನ್ನು ಕಡಿದುಹಾಕುವೆ.

(ಭಾಷ್ಯ)

೭೬. ಏಷಾ ತೇ ತುಭ್ಯಮ್ ಅಭಿಹಿತಾ ಉಕ್ತಾ ಸಾಙ್ಖ್ಯೇ ಪರಮಾರ್ಥವಸ್ತುವಿವೇಕವಿಷಯೇ ಬುದ್ಧಿರ್ಜ್ಞಾನಂ ಸಾಕ್ಷಾತ್ ಶೋಕಮೋಹಾದಿಸಂಸಾರಹೇತುದೋಷನಿವೃತ್ತಿಕಾರಣಮ್ । ಯೋಗೇ ತು ತತ್ಪ್ರಾಪ್ತ್ಯುಪಾಯೇ ನಿಸ್ಸಙ್ಗತಯಾ ದ್ವನ್ದ್ವಪ್ರಹಾಣಪೂರ್ವಕಮ್ ಈಶ್ವರಾರಾಧನಾರ್ಥೇ ಕರ್ಮಯೋಗೇ ಕರ್ಮಾನುಷ್ಠಾನೇ ಸಮಾಧಿಯೋಗೇ ಚ ಇಮಾಮ್ ಅನನ್ತರಮೇವ ಉಚ್ಯಮಾನಾಂ ಬುದ್ಧಿಂ ಶೃಣು । ತಾಂ ಬುದ್ಧಿಂ ಸ್ತೌತಿ ಪ್ರರೋಚನಾರ್ಥಮ್—ಬುದ್ಧ್ಯಾ ಯಯಾ ಯೋಗವಿಷಯಯಾ ಯುಕ್ತಃ ಹೇ ಪಾರ್ಥ ಕರ್ಮಬನ್ಧಂ ಕರ್ಮೈವ ಧರ್ಮಾ

---

1. ಉಪಕ್ರಮದಲ್ಲಿ ಪಂಡಿತರು ಗತಾಸುಗಳನ್ನೂ ಅಗತಾಸುಗಳನ್ನೂ ಕುರಿತು ಶೋಕಿಸುವದಿಲ್ಲ ; ಏಕೆಂದರೆ ಎಲ್ಲರ ಆತ್ಮನು ನಿತ್ಯನು, ನಿರ್ವಿಕಾರನು—ಎಂದು ಪ್ರಾರಂಭಿಸಿದ ಉಪದೇಶವನ್ನು ಇಲ್ಲಿ ಉಪಸಂಹಾರಮಾಡಿರುತ್ತದೆ.

2. ಸಾಂಖ್ಯವು ಬೇರೆ, ಕರ್ಮಯೋಗವು ಬೇರೆ; ಅವೆರಡೂ ಬೇರೆಬೇರೆಯ ಅಧಿಕಾರಿಗಳಿಗೆ ಎಂಬ ಮತದಲ್ಲಿ ಮುಂದೆ ಇದನ್ನು ಹೀಗೆ ಅನುವಾದಮಾಡಿಕೊಂಡು ಹೇಳಿದ್ದು ಸರಿಯಾಗುವದು; ಸಮುಚ್ಚಯವಾದಿಗಳ ಪಕ್ಷದಲ್ಲಿ ಇದು ವಿರುದ್ಧವಾಗುತ್ತದೆ.

ಧರ್ಮಾಖ್ಯಃ[1] ಬನ್ಧಃ ಕರ್ಮಬನ್ಧಃ ತಂ ಪ್ರಹಾಸ್ಯಸಿ ಈಶ್ವರಪ್ರಸಾದನಿಮಿತ್ತಜ್ಞಾನ ಪ್ರಾಪ್ತ್ಯೈವ ಇತ್ಯಭಿಪ್ರಾಯಃ ||

(ಭಾಷ್ಯಾರ್ಥ)

ನಿನಗೆ ನಿನಗಾಗಿ ಹೇಳಿದ (ತಿಳಿಯ) ಹೇಳಿದ, ಇಗೋ ಇದು ಸಾಂಖ್ಯದಲ್ಲಿ ಎಂದರೆ ಪರಮಾರ್ಥವಸ್ತುವನ್ನು ವಿಂಗಡಿಸಿ ಅರಿತುಕೊಳ್ಳುವ ವಿಷಯದ ಬುದ್ಧಿಯು ಎಂದರೆ ಶೋಕ, ಮೋಹ-ಮುಂತಾದ ಸಂಸಾರಕ್ಕೆ ಕಾರಣವಾದ ದೋಷಗಳ ನಿವೃತ್ತಿಗೆ ನೇರಾಗಿ ಕಾರಣವಾದ[2] ಜ್ಞಾನವು. ಇದನ್ನು ಪಡೆಯುವದಕ್ಕೆ ಸಾಧನವಾಗಿರುವ **ಯೋಗವಿಷಯದಲ್ಲಿಯಾದರೆ, ಎಂದರೆ ಯಾವ ಸಂಗವೂ ಇಲ್ಲದೆ ದ್ವಂದ್ವ ಗಳನ್ನು ಬಿಡುವದರ ಮೂಲಕ ಈಶ್ವರನ ಆರಾಧನಕ್ಕಾಗಿ ಮಾಡುವ ಕರ್ಮಾನುಷ್ಠಾನರೂಪವಾದ ಕರ್ಮಯೋಗದ ಮತ್ತು ಸಮಾಧಿಯೋಗದ ವಿಷಯದಲ್ಲಿಯಾದರೆ**[3] **ಈಗ (ನಾನು) ಹೇಳುವ ಈ ಬುದ್ಧಿಯನ್ನು ಕೇಳು**

ಈ ಜ್ಞಾನದಲ್ಲಿ ಆದರವುಂಟಾಗಲೆಂದು (ಈಗ) ಅದನ್ನು ಹೊಗಳುತ್ತಾನೆ: ಎಲೈ ಪಾರ್ಥನೆ, **ಯೋಗವಿಷಯವಾದ ಈ ಬುದ್ಧಿಯಿಂದ ಕೂಡಿದವನಾದರೆ ಕರ್ಮಬಂಧವನ್ನು**—ಧರ್ಮಾಧರ್ಮಗಳೆಂಬ[4] **ಕರ್ಮವೇ ಬಂಧವು. ಈ (ಕರ್ಮಬಂಧವನ್ನು)—ಬಿಡಿಸಿಕೊಳ್ಳುವೆ,** ಈಶ್ವರನ ಪ್ರಸಾದದ ಕಾರಣ ದಿಂದ (ಉಂಟಾಗುವ) ಜ್ಞಾನವನ್ನು ಪಡೆದೇ[5] (ತಪ್ಪಿಸಿಕೊಳ್ಳುವೆ) ಎಂದು ಅಭಿಪ್ರಾಯ.

---

1. " ಧರ್ಮಾಧರ್ಮಾಖ್ಯಃ " ಎಂದೇ ಅಚ್ಚಿನ ಪುಸ್ತಕಗಳಲ್ಲಿ ದೆಯಾದರೂ " ಧರ್ಮಾ ಧರ್ಮಾಖ್ಯಂ ' ಎಂದಿದ್ದರೆ ಚೆನ್ನಾಗಿದ್ದೀತೆಂದು ತೋರುತ್ತದೆ.

2. ಜ್ಞಾನವುಂಟಾದ ಬಳಿಕ ಮಾಡಬೇಕಾದದ್ದೇನೂ ಇಲ್ಲವೆಂಬುದನ್ನು ' ನೇರಾಗಿ ' ಎಂಬ ವಿಶೇಷಣವು ಸೂಚಿಸುತ್ತದೆ. ಸಾಂಖ್ಯವೆಂದರೆ ಜ್ಞಾನವೆಂಬುದನ್ನು ಚೆನ್ನಾಗಿ ನೆನಪಿಡಬೇಕು. ಇದರ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

3 ಯೋಗವೆಂದರೆ ನಿಷ್ಕಾಮಕರ್ಮವೂ ಅದರಿಂದ ದೊರೆಯುವ ಧ್ಯಾನಯೋಗವೂ ಎಂದು ಅರ್ಥ. ಸಾಂಖ್ಯವನ್ನು ಬಿಟ್ಟು ಉಳಿದದ್ದೆಲ್ಲ ' ಯೋಗ 'ವೆಂಬ ಮಾತಿನ ಅರ್ಥದಲ್ಲಿ ಅಡಕವಾಗಿರುವದು. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

4. ಕರ್ಮವೆಂದರೆ ಕ್ರಿಯಾರೂಪವಾದ ಕರ್ಮವಲ್ಲ; ಅದರ ಫಲವಾದ ಪುಣ್ಯಾಪುಣ್ಯ ಗಳು. ಪುಣ್ಯಾಪುಣ್ಯಗಳಿರುವವರೆಗೆ ಜನ್ಮಮರಣಗಳು ತಪ್ಪುವದಿಲ್ಲವಾದ್ದರಿಂದ ಕರ್ಮವು ಬಂಧಕವಾಗಿರುತ್ತದೆ.

5. ಕರ್ಮವನ್ನು ಈಶ್ವರಾರ್ಪಣಮಾಡುವ ಭಕ್ತಿಯಿಂದ ಈಶ್ವರಪ್ರಸಾದವುಂಟಾಗಿ ಜ್ಞಾನವುಂಟಾಗುವದೆಂಬುದನ್ನು ಮುಂದೆ ೧೦-೧೦, ೧೧ ರಲ್ಲಿ ತಿಳಿಸಲಾಗುವದು.

(ಭಾಷ್ಯ)

೭೭. ಕಿಂ ಚಾನ್ಯತ್—

ಮತ್ತೂ ಒಂದೇನೆಂದರೆ :—

**ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।**
**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥ ೪೦ ॥**

೪೦. ಇಲ್ಲಿ ಅಭಿಕ್ರಮನಾಶವಿರುವದಿಲ್ಲ. ಪ್ರತ್ಯವಾಯವಿರುವದಿಲ್ಲ. ಈ ಧರ್ಮದಲ್ಲಿ (ಒಂದು) ಸ್ವಲ್ಪವಾದರೂ ಮಹಾಭಯದಿಂದ ಕಾಪಾಡುತ್ತದೆ.

(ಭಾಷ್ಯ)

೭೮. ನ ಇಹ ಮೋಕ್ಷಮಾರ್ಗೇ ಕರ್ಮಯೋಗೇ ಅಭಿಕ್ರಮನಾಶಃ ಅಭಿಕ್ರಮಣಮ್ ಅಭಿಕ್ರಮಃ ಪ್ರಾರಮ್ಭಃ, ತಸ್ಯ ನಾಶಃ ನಾಸ್ತಿ ಯಥಾ ಕೃಷ್ಯಾದೇಃ । ಯೋಗವಿಷಯೇ ಪ್ರಾರಮ್ಭಸ್ಯ ನ ಅನೈಕಾನ್ತಿಕಫಲತ್ವಮ್ ಇತ್ಯರ್ಥಃ । ಕಿಂ ಚ । ನಾಪಿ ಚಿಕಿತ್ಸಾವತ್ ಪ್ರತ್ಯವಾಯೋ ವಿದ್ಯತೇ ಭವತಿ[1] । ಕಿಂ ತು ಸ್ವಲ್ಪಮಪಿ ಅಸ್ಯ ಧರ್ಮಸ್ಯ ಯೋಗಸ್ಯ[2] ಅನುಷ್ಠಿತಂ ತ್ರಾಯತೇ ರಕ್ಷತಿ ಮಹತೋ ಭಯಾತ್ ಸಂಸಾರಭಯಾತ್ ಜನ್ಮಮರಣಾದಿಲಕ್ಷಣಾತ್ ॥

(ಭಾಷ್ಯಾರ್ಥ)

ಇಲ್ಲಿ ಎಂದರೆ (ಈ) ಮೋಕ್ಷಮಾರ್ಗವಾದ ಕರ್ಮಯೋಗದಲ್ಲಿ ಅಭಿಕ್ರಮನಾಶವು—ಅಭಿಕ್ರಮ ಎಂದರೆ ಉಪಕ್ರಮಿಸುವದು, ಪ್ರಾರಂಭಿಸುವದು ; ಕೃಷಿಮುಂತಾದವುಗಳಲ್ಲಿ (ಪ್ರಾರಂಭಿಸಿದ್ದೂ ನಾಶವಾಗುವಂತೆ ಇಲ್ಲಿ ಅದರ) ನಾಶವಾಗುವದಿಲ್ಲ. ಯೋಗದ ವಿಷಯದಲ್ಲಿ ಮಾಡಿದ್ದಕ್ಕೆ ಫಲವು ಅನಿಯತವಾಗಿ ಆಗುವದಿಲ್ಲ ಎಂದರ್ಥ.[3] ಮತ್ತು ವೈದ್ಯದಲ್ಲಿರುವ ಹಾಗೆ (ಇಲ್ಲಿ) ದೋಷವೂ ಇರುವದಿಲ್ಲ[4]; ಮತ್ತೇ

---

1. ಈ ಮಾತು ಮೈ॥ಮು॥ ಪಾಠದಲ್ಲಿಲ್ಲ.

2. ಯೋಗಧರ್ಮಸ್ಯ' ಎಂದು ಆ॥ನಿ॥ಗು॥

3. ಬೇಸಾಯಮಾಡಿದ್ದರೂ ಮಳೆಯಿಲ್ಲದೆ ಹೋದರೆ ಮಾಡಿದ ಶ್ರಮವು ವ್ಯರ್ಥವಾಗಬಹುದು ; ಆದರೆ ಈ ಯೋಗದಲ್ಲಿ ಮಾಡಿದ ಕರ್ಮಕ್ಕೆ ಫಲವಿಲ್ಲದೆಯೂ ಹೋಗಬಹುದೆಂಬ ಶಂಕೆಯಿರುವದಿಲ್ಲ.

4. ರೋಗಕ್ಕೆ ಮಾಡಿದ ಚಿಕಿತ್ಸೆಯಿಂದ ರೋಗವು ಹೋಗುವ ಬದಲು ಹೆಚ್ಚಾಗಲೂ ಬಹುದು ; ಹಾಗೆ ಕರ್ಮಯೋಗದಿಂದ ಬಂಧವು ಬಲವಾಗಲೂ ಬಹುದು ಎಂಬುದಿಲ್ಲ.

ನೆಂದರೆ, ಈ ಯೋಗವೆಂಬ ಧರ್ಮವನ್ನು ಸ್ವಲ್ಪವನ್ನು ಅನುಷ್ಠಾನಮಾಡಿದರೂ (ಅದು) ಮಹಾಭಯದಿಂದ ಎಂದರೆ ಹುಟ್ಟು, ಹೊಂದು ಮುಂತಾದ ರೂಪದ ಸಂಸಾರದ ಅಂಜಿಕೆಯಿಂದ 'ತ್ರಾಯತೇ' ಕಾಪಾಡುವದು.[1]

## ಕಾಮಿಗಳಿಗೆ ಕರ್ಮಯೋಗವು ದಕ್ಕದು

(ಭಾಷ್ಯ)

೭೯. ಯೇಯಂ ಸಾಙ್ಖ್ಯೇ ಬುದ್ಧಿಃ ಉಕ್ತಾ, ಯೋಗೇ ಚ ವಕ್ಷ್ಯಮಾಣಾ ಸಾ—

(ಭಾಷ್ಯಾರ್ಥ)

ಯಾವ ಈ ಸಾಂಖ್ಯವಿಷಯದ ಬುದ್ಧಿಯನ್ನು (ಹಿಂದೆ) ಹೇಳಿದೆಯೋ[2], ಮತ್ತು ಯೋಗವಿಷಯದ (ಯಾವ ಬುದ್ಧಿಯನ್ನು) ಮುಂದೆ ಹೇಳುವೆನೋ:—

**ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನನ್ದನ ।**
**ಬಹುಶಾಖಾಹ್ಯನನ್ತಾಶ್ಚ ಬುದ್ಧಯೋಽವ್ಯವಸಾಯಿನಾಮ್ ॥ ೪೧ ॥**

೪೧. ಎಲೈ ಕುರುನಂದನನೆ, ಇಲ್ಲಿ ವ್ಯವಸಾಯಾತ್ಮಕವಾದ ಬುದ್ಧಿಯೊಂದೇ (ಇರುತ್ತದೆ). ಅವ್ಯವಸಾಯಿಗಳ ಬುದ್ಧಿಗಳು ಬಹುಶಾಖೆಗಳುಳ್ಳವಾಗಿಯೂ ಅನಂತವಾಗಿಯೂ ಇರುತ್ತವೆ.

(ಭಾಷ್ಯ)

೮೦. ವ್ಯವಸಾಯಾತ್ಮಿಕಾ ನಿಶ್ಚಯಸ್ವಭಾವಾ ಏಕೈವ ಬುದ್ಧಿಃ ಇತರವಿಪರೀತಬುದ್ಧಿಶಾಖಾಭೇದಸ್ಯ ಬಾಧಿಕಾ ಸಮ್ಯಕ್ಪ್ರಮಾಣಜನಿತತ್ವಾತ್ ಇಹ ಶ್ರೇಯೋಮಾರ್ಗೇ ಹೇ ಕುರುನನ್ದನ । ಯಾಃ ಪುನಃ ಇತರಾ ವಿಪರೀತಬುದ್ಧಯಃ[3] ಯಾಸಾಂ ಶಾಖಾಭೇದಪ್ರಚಾರವಶಾತ್ ಅನನ್ತೋಽನುಪರತಃ ಸಂಸಾರೋ ನಿತ್ಯಪ್ರತತೋ ವಿಸ್ತೀರ್ಣೋ ಭವತಿ ಪ್ರಮಾಣಜನಿತವಿವೇಕಬುದ್ಧಿನಿಮಿತ್ತವಶಾಚ್ಚ

---

1. ಜ್ಞಾನವನ್ನುಂಟುಮಾಡಿ ಸಂಸಾರಭಯವನ್ನು ಅತ್ಯಂತವಾಗಿ ನಾಶಮಾಡಿಬಿಡುತ್ತದೆ.

2. ಇಲ್ಲಿ ಕರ್ಮಯೋಗವೊಂದನ್ನೇ ಹೊಗಳುವದಕ್ಕೆ ಪ್ರಾರಂಭಿಸಿದೆಯಾದರೂ ಈ ಯೋಗದಲ್ಲಿರುವ ನಿಶ್ಚಯಾತ್ಮಕಬುದ್ಧಿಯು ಸಾಂಖ್ಯವನ್ನೇ ಅವಲಂಬಿಸಿರುತ್ತದೆ; ಮತ್ತು ಕರ್ಮಯೋಗಕ್ಕೆ ಜ್ಞಾನವೇ ಫಲವಾಗಿದೆ. ಆದ್ದರಿಂದ ಇಲ್ಲಿ ಒಂದೇ ಜ್ಞಾನವೆಂದಿದೆ.

3. 'ವಿಪರೀತ' ಎಂಬ ಮಾತು ಆ||ಸಿ||ಗು||ಮ|| ಪಾಠಗಳಲ್ಲಿಲ್ಲ

ಉಪರತಾಸು ಅನನ್ತಭೇದಬುದ್ಧಿಷು ಸಂಸಾರೋಽಪಿ[1] ಉಪರಮತೇ ತಾ ಬುದ್ಧಯಃ ಬಹುಶಾಖಾಃ ಬಹ್ವ್ಯಃ ಶಾಖಾಃ ಯಾಸಾಂ ತಾಃ ಬಹುಶಾಖಾಃ ಬಹುಭೇದಾಃ ಇತ್ಯೇತತ್ । ಪ್ರತಿಶಾಖಾಭೇದೇನ ಹಿ ಅನನ್ತಾಶ್ಚ ಬುದ್ಧಯಃ । ಕೇಷಾಮ್ ? ಅವ್ಯವಸಾಯಿನಾಂ ಪ್ರಮಾಣಜನಿತವಿವೇಕಬುದ್ಧಿರಹಿತಾನಾಮ್ ಇತ್ಯರ್ಥಃ ।

(ಭಾಷ್ಯಾರ್ಥ)

ಆ ವ್ಯವಸಾಯಾತ್ಮಕವಾದ ಎಂದರೆ ನಿಶ್ಚಯಸ್ವರೂಪವಾದ ಒಂದೇ ಜ್ಞಾನವು ಇರುವದು. (ಇದು) ಕವಲುಕವಲಾಗಿರುವ ಉಳಿದ ತಪ್ಪುತಿಳಿವುಗಳನ್ನು ಬಾಧಿಸುತ್ತದೆ, ಏಕೆಂದರೆ ಇದು ಸರಿಯಾದ ಪ್ರಮಾಣದಿಂದ[2] ಉಂಟಾಗಿರುತ್ತದೆ. ಇಲ್ಲಿ ಎಂದರೆ ಶ್ರೇಯೋಮಾರ್ಗದಲ್ಲಿ, ಎಲೈ ಕುರುನಂದನನೆ, (ಇದೊಂದೇ ಜ್ಞಾನವಿರುತ್ತದೆ). ಆದರೆ ಉಳಿದ ತಪ್ಪುತಿಳಿವಳಿಕೆಗಳು ಯಾವವು ಉಂಟೋ–ಯಾವ ಬುದ್ಧಿಗಳು ಕವಲೊಡೆದು ಹಬ್ಬಿದರೆ ಅನಂತವಾಗಿಯೂ ಅಪಾರವಾಗಿಯೂ ಸಂಸಾರವು ನಾಶವಾಗದಂತೆ ಒಂದೇ ಸಮನೆ ಬೆಳೆಯುತ್ತಾ ಹರಡಿಕೊಳ್ಳುವದೋ, ಮತ್ತು (ಶಾಸ್ತ್ರ) ಪ್ರಮಾಣದಿಂದುಂಟಾದ ವಿವೇಕಜ್ಞಾನದ ಕಾರಣಕ್ಕೆ ವಶವಾಗಿ (ಯಾವ) ಅನಂತವಾದ ಭೇದಬುದ್ಧಿಗಳು ಇಲ್ಲವಾದರೆ ಸಂಸಾರವೂ ಇಲ್ಲವಾಗುವದೋ-ಆ ಬುದ್ಧಿಗಳು ಬಹಳ ಕವಲುಳ್ಳವಾಗಿರುವವು. ಬಹುವಾದ ಶಾಖೆಗಳುಳ್ಳವಾಗಿರುವದರಿಂದ ಬಹುಶಾಖೆಗಳುಳ್ಳವುಗಳಾಗಿರುವವು ಎಂದಿದೆ, ಬಹಳ ಭೇದಗಳುಳ್ಳವುಗಳಾಗಿರುತ್ತವೆ ಎಂದು ಅಭಿಪ್ರಾಯ. ಮತ್ತು (ಆ ಬುದ್ಧಿಗಳಲ್ಲಿ) ಒಂದೊಂದು ಕವಲಿನಲ್ಲಿ (ಒಡೆದಿರುವ ಕವಲುಗಳಾದ) ಭೇದಗಳು ಲೆಕ್ಕವಿಲ್ಲದಷ್ಟು ಇರುವವು. (ಹೀಗೆ ಕವಲಾಗಿರುವವು) ಯಾರ ಬುದ್ಧಿಗಳು? ಎಂದರೆ ನಿಶ್ಚಯಜ್ಞಾನವಿಲ್ಲದವರ ಎಂದರೆ ಪ್ರಮಾಣದಿಂದ ಉಂಟಾಗುವ ವಿವೇಕಜ್ಞಾನವು ಯಾರಿಗಿರುವದಿಲ್ಲವೋ ಅವರ (ಬುದ್ಧಿಗಳು) ಎಂದರ್ಥ

---

1. 'ಅಪಿ' ಎಂಬ ಮಾತು ನಿ॥ಗು॥ಮ॥ ಪಾಠಗಳಲ್ಲಿಲ್ಲ.

2 ವೇದಾಂತವಾಕ್ಯವೆಂಬ ಪ್ರಮಾಣದಿಂದ.

3. ಪರಮಾರ್ಥಜ್ಞಾನದಿಂದ ಭ್ರಾಂತಿಜ್ಞಾನಗಳೆಲ್ಲವೂ ಅಳಿಯುವವು.

4. ಇಲ್ಲಿ ವಿವೇಕಜ್ಞಾನವೆಂದರೆ ಅಸತ್ತಾದ ಅನಾತ್ಮಕ್ಕಿಂತ ಬೇರೆಯಾಗಿರುವ ಸದ್ರೂಪವಾದ ಆತ್ಮನ ಜ್ಞಾನವೆಂದೇ ಅರ್ಥ ಭ್ರಾಂತಿಜ್ಞಾನವು ಹಲವು ಬಗೆ; ಸರಿಯಾದ ತಿಳಿವಳಿಕೆಯು ಒಂದೇ ಬಗೆ ಎಂಬುದು ಸ್ಪಷ್ಟ.

**ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದನ್ತ್ಯವಿಪಶ್ಚಿತಃ ।**
**ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥ ೪೨ ॥**
**ಕಾಮಾತ್ಮಾನಃ ಸ್ವರ್ಗಪರಾ ಜನ್ಮಕರ್ಮಫಲಪ್ರದಾಮ್ ।**
**ಕ್ರಿಯಾವಿಶೇಷಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ ॥ ೪೩ ॥**
**ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಮ್ ।**
**ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥ ೪೪ ॥**

೪೨-೪೪ ವೇದದಲ್ಲಿರುವ (ಅರ್ಥ) ವಾದಗಳಲ್ಲಿಯೇ ರತರಾಗಿಯೂ (ಅವುಗಳು ಹೇಳುವದನ್ನು ಬಿಟ್ಟರೆ) ಮತ್ತೇನೂ ಇಲ್ಲವೆಂದು ವಾದಿಸುವವರಾಗಿಯೂ, ಕಾಮಾತ್ಮರಾಗಿಯೂ, ಸ್ವರ್ಗದಲ್ಲಿಯೇ ತಾತ್ಪರ್ಯವಿಟ್ಟವರಾಗಿಯೂ, ಇರುವ ಅಜ್ಞಾನಿಗಳು ಜನ್ಮಕರ್ಮಫಲಪ್ರದವಾಗಿರುವ ಭೋಗೈಶ್ವರ್ಯಗಳನ್ನು ಪಡೆಯುವದಕ್ಕೆ (ಸಾಧನವಾದ) ಬಗೆಬಗೆಯಾದ ಕರ್ಮಗಳಿಂದ ಕೂಡಿದ ಯಾವ ಬಣ್ಣನೆಯ ಮಾತುಗಳನ್ನು ಗಳಹುತ್ತಿರುವರೋ ಆ ಮಾತಿಗೆ ಮನಸೋತು ಭೋಗೈಶ್ವರ್ಯಗಳಲ್ಲಿಯೇ ಆಸಕ್ತರಾಗಿರುವವರಿಗೆ ಅಂತಃಕರಣದಲ್ಲಿ ನಿಶ್ಚಯಾತ್ಮಕವಾದ ಜ್ಞಾನವು ಎಂದಿಗೂ ಉಂಟಾಗಲಾರದು.[1]

(ಭಾಷ್ಯ)

೮೧. **ಯೇಷಾಂ ವ್ಯವಸಾಯಾತ್ಮಿಕಾ ಬುದ್ಧಿರ್ನಾಸ್ತಿ ತೇ ಯಾಮ್ ಇಮಾಂ ವಕ್ಷ್ಯಮಾಣಾಂ ಪುಷ್ಪಿತಾಂ ಪುಷ್ಪಿತವೃಕ್ಷ ಇವ[2] ಶೋಭಮಾನಾಂ ಶ್ರೂಯಮಾಣರಮಣೀಯಾಂ ವಾಚಂ ವಾಕ್ಯಲಕ್ಷಣಾಂ ಪ್ರವದನ್ತಿ । ಕೇ ? ಅವಿಪಶ್ಚಿತಃ ಅಲ್ಪಮೇಧಸಃ[3] ಅವಿವೇಕಿನಃ ಇತ್ಯರ್ಥಃ । ವೇದವಾದರತಾಃ ಬಹ್ವರ್ಥವಾದಫಲಸಾಧನಪ್ರಕಾಶಕೇಷು ವೇದವಾಕ್ಯೇಷು ರತಾಃ ಹೇ ಪಾರ್ಥ ನ ಅನ್ಯತ್ ಸ್ವರ್ಗಪಶ್ವಾದಿಫಲಸಾಧನೇಭ್ಯಃ ಕರ್ಮಭ್ಯಃ ಅಸ್ತಿ ಇತ್ಯೇವಂವಾದಿನಃ ವದನಶೀಲಾಃ ॥ ೪೨ ॥ ತೇ ಚ ಕಾಮಾತ್ಮಾನಃ ಕಾಮಸ್ವಭಾವಾಃ ಕಾಮಪರಾಃ ಇತ್ಯರ್ಥಃ । ಸ್ವರ್ಗಪರಾಃ**

---

1. ಇಲ್ಲಿ ಕೊಟ್ಟಿರುವದು ಶ್ಲೋಕಗಳ ಅಕ್ಷರಾರ್ಥ. ಇವುಗಳ ಸರಳವಾದ ಭಾವಾರ್ಥವೇನೆಂದರೆ ವೇದದಲ್ಲಿ ಹೇಳಿರುವ ಸ್ವರ್ಗವೇ ಹೆಚ್ಚಿನದೆಂದು ಆದಕ್ಕಾಗಿ ಕಾಮ್ಯಕರ್ಮಗಳನ್ನು ಮಾಡುತ್ತಿರುವವರಿಗೆ ಈಗ ಹೇಳುವ ನಿಷ್ಕಾಮಕರ್ಮರೂಪವಾದ ಕರ್ಮಯೋಗದ ತಿಳಿವಳಿಕೆಯು ಉಂಟಾಗಲಾರದು.

2. " ಪುಷ್ಪಿತ ಇವ ವೃಕ್ಷಃ " ವಾ॥ಮೈ॥ ; " ಪುಷ್ಪಿತವೃಕ್ಷವತ್॥ ಮ॥

3. 'ಅಮೇಧಸಃ' ವಾ॥ ಮೈ॥ ಮ॥

ಸ್ವರ್ಗಃ ಪರಃ ಪುರುಷಾರ್ಥಃ ಯೇಷಾಂ ತೇ ಸ್ವರ್ಗಪರಾಃ ಸ್ವರ್ಗಪ್ರಧಾನಾಃ । ಜನ್ಮ ಕರ್ಮಫಲಪ್ರದಂ ಕರ್ಮಣಃ ಫಲಂ ಕರ್ಮಫಲಂ ಜನ್ಮೈವ ಕರ್ಮಫಲಂ ಜನ್ಮ ಕರ್ಮಫಲಂ[1] ತತ್ ಪ್ರದದಾತಿ ಇತಿ ಜನ್ಮಕರ್ಮಫಲಪ್ರದಾ । ತಾಂ ವಾಚಮ್ । 'ಪ್ರವದನ್ತಿ' ಇತಿ ಅನುಷಜ್ಯತೇ । ಕ್ರಿಯಾವಿಶೇಷಬಹುಲಾಂ ಕ್ರಿಯಾಣಾಂ ವಿಶೇಷಾಃ ಕ್ರಿಯಾವಿಶೇಷಾಃ ತೇ ಬಹುಲಾ ಯಸ್ಯಾಂ ವಾಚಿ ತಾಂ ಸ್ವರ್ಗಪಶು ಪುತ್ರಾದ್ಯರ್ಥಾಃ ಯಯಾ ವಾಚಾ ಬಾಹುಲ್ಯೇನ ಪ್ರಕಾಶ್ಯನ್ತೇ । ಭೋಗೈಶ್ವರ್ಯ ಗತಿಂ ಪ್ರತಿ ಭೋಗಶ್ಚ ಐಶ್ವರ್ಯಂ ಚ ಭೋಗೈಶ್ವರ್ಯೇ ತಯೋಃ ಗತಿಃ ಪ್ರಾಪ್ತಿಃ ಭೋಗೈಶ್ವರ್ಯಗತಿಃ । ತಾಂ ಪ್ರತಿ ಸಾಧನಭೂತಾ ಯೇ ಕ್ರಿಯಾವಿಶೇಷಾಃ ತದ್ಬಹುಲಾಂ ತಾಂ ವಾಚಂ ಪ್ರವದನ್ತಃ ಮೂಢಾಃ ಸಂಸಾರೇ ಪರಿವರ್ತನ್ತೇ ಇತ್ಯಭಿಪ್ರಾಯಃ ॥ ೪೩ ॥ ತೇಷಾಂ ಚ ಭೋಗೈಶ್ವರ್ಯಪ್ರಸಕ್ತಾನಾಂ ಭೋಗಃ ಕರ್ತವ್ಯಃ ಐಶ್ವರ್ಯಂ ಚ ಇತಿ ಭೋಗೈಶ್ವರ್ಯಯೋರೇವ ಪ್ರಣಯವತಾಂ ತದಾತ್ಮಭೂತಾನಾಂ ತಯಾ ಕ್ರಿಯಾವಿಶೇಷಬಹುಲಯಾ ವಾಚಾ ಅಪಹೃತಚೇತಸಾಮ್ ಆಚ್ಛಾದಿತವಿವೇಕಪ್ರಜ್ಞಾನಾಂ ವ್ಯವಸಾಯಾತ್ಮಿಕಾ ಸಾಙ್ಖ್ಯೇ ಯೋಗೇ ವಾ ಬುದ್ಧಿಃ[2] ಸಮಾಧೌ ಸಮಾಧೀಯತೇ ಅಸ್ಮಿನ್ ಪುರುಷೋಪಭೋಗಾಯ ಸರ್ವಮ್ ಇತಿ ಸಮಾಧಿಃ ಅನ್ತಃಕರಣಂ ಬುದ್ಧಿಃ ತಸ್ಮಿನ್ ಸಮಾಧೌ ನ ವಿಧೀಯತೇ ನ ಭವತಿ ಇತ್ಯರ್ಥಃ[3] ॥ ೪೪ ॥

(ಭಾಷ್ಯಾರ್ಥ)

ಯಾರಿಗೆ ನಿಶ್ಚಯರೂಪವಾದ (ಈ) ಬುದ್ಧಿಯು ಇರುವದಿಲ್ಲವೋ ಅವರು ಈ ಮುಂದೆ ಹೇಳುವ ಯಾವ ಪುಷ್ಪಿತವಾದ—ಎಂದರೆ ಹೂಬಿಟ್ಟ ಮರದಂತೆ ಸೊಗಸಾದ, ಕೇಳುವದಕ್ಕೆ (ಮಾತ್ರ)ರಮಣೀಯವಾಗಿರುವ, ವಾಕ್ಯನ್ನು ಎಂದರೆ ವಾಕ್ಯದಂತೆ ತೋರುತ್ತಿರುವದನ್ನು[4] ಆಡುತ್ತಿರುವರು. ಅವರು ಯಾರು ? ಎಂದರೆ ಅವಿಪಶ್ಚಿತರು, ಅಲ್ಪಬುದ್ಧಿಯುಳ್ಳವರು, ಅವಿವೇಕಿಗಳು ಎಂದರ್ಥ. ವೇದವಾದರತರು, ಎಂದರೆ ಬಹು

---

1. ಕರ್ಮಣಃ ಫಲಂ ಕರ್ಮ ಫಲಮ್ । ಜನ್ಮೈವ ಕರ್ಮಣಃ ಫಲಮ್ ॥ ಮೈ॥
2. 'ಯಾ ಬುದ್ಧಿಃ ಸಾ' ಎಂದು ಅ॥ಸಿ॥ ಗಳಲ್ಲಿ ಹೆಚ್ಚಾಗಿದೆ.
3. ಸೌಕರ್ಯಕ್ಕಾಗಿ ಮೂರು ಶ್ಲೋಕಗಳ ಭಾಷ್ಯವನ್ನೂ ಒಟ್ಟಿಗೆ ಬರೆದುಕೊಂಡಿದೆ.
4. ಯಾವದಾದರೊಂದರ್ಥವನ್ನು ಬೋಧಿಸುವ ಮಾತುಗಳ ಗುಂಪು ನಿಜವಾದ ವಾಕ್ಯವು ; ಯಾವದೊಂದು ಸರಿಯಾದ ವಿಷಯವೂ ಇಲ್ಲದೆ ಸುಮ್ಮನೆ ಮಾತುಗಳನ್ನು ಜೋಡಿಸಿರುವದು 'ವಾಕ್ಯಾಭಾಸ' ಎಂದರೆ ವಾಕ್ಯದಂತೆ ಕಾಣುವ ಮಾತುಗಳ ಗುಂಪು.

ವಾಗಿ **ಅರ್ಥವಾದಗಳನ್ನೂ**[1] ಫಲಗಳನ್ನೂ ಸಾಧನಗಳನ್ನೂ ತಿಳಿಸುವ ವೇದವಾಕ್ಯ ಗಳಲ್ಲಿಯೇ ರತರಾಗಿರುವವರು. ಎಲೈ ಪಾರ್ಥನೆ, (ಇವರು)ಸ್ವರ್ಗ, ಪಶು ಮುಂತಾದ ಫಲಗಳಿಗೆ ಸಾಧನವಾದ ಕರ್ಮಗಳನ್ನು ಬಿಟ್ಟರೆ ಬೇರೆಯೇನೂ ಇಲ್ಲ[2] ಎಂದೀ ಪರಿ ಯಾಗಿ (ಹೇಳುವ) ವಾದಿಗಳು, (ಹೀಗೆಂದು) ವಾದಿಸುವ ಸ್ವಭಾವದವರು (೪೨).

ಮತ್ತು ಇವರು ಕಾಮಾತ್ಮರು, ಎಂದರೆ ಕಾಮದ ಸ್ವಭಾವದವರಾಗಿ ಕಾಮ ಗಳಲ್ಲಿಯೇ ತತ್ಪರರಾಗಿರುವವರು ಎಂದರ್ಥ. ಸ್ವರ್ಗಪರರು ಸರ್ಗವೇ ಪರಮ ಪುರುಷಾರ್ಥವು ಯಾರಿಗೋ ಅಂಥವರು, ಎಂದರೆ ಸ್ವರ್ಗವನ್ನೇ ಮುಖ್ಯವೆಂದು ಇಟ್ಟು ಕೊಂಡಿರುವವರು. ಜನ್ಮಕರ್ಮಫಲಪ್ರದವಾಗಿರುವ—ಕರ್ಮದ ಫಲವು ಕರ್ಮ ಫಲವೆನಿಸುವದು, ಜನ್ಮವೆಂಬ ಕರ್ಮಫಲವು ಜನ್ಮಕರ್ಮಫಲವು, ಅದನ್ನು ಕೊಡುವ[3]—ಮಾತನ್ನು 'ಆಡುತ್ತಿರುವರು' ಎಂದು (ಇಲ್ಲಿಯೂ) ಸೇರಿಸಿಕೊಳ್ಳ ಬೇಕು. ಕ್ರಿಯಾವಿಶೇಷಬಹುಲವಾದ—ಕ್ರಿಯೆಯ ಬೇರೆಬೇರೆಯ ಬಗೆಗಳೇ ಕ್ರಿಯಾವಿಶೇಷಗಳು; ಅವು ಯಾವ ಮಾತಿನಲ್ಲಿ ಬಹಳವಾಗಿರುವವೋ ಅಂಥ ಸ್ವರ್ಗ, ದನಕರುಗಳು, ಮಕ್ಕಳುಮರಿಗಳು ಮುಂತಾದವುಗಳನ್ನು ಬೆಳಗುವದಾಗಿರುವ ಮಾತನ್ನು—ಭೋಗೈಶ್ವರ್ಯವೆಂಬ ಗತಿಯನ್ನು ಕೊಡುವ ಭೋಗವೂ ಐಶ್ವ ರ್ಯವೂ ಭೋಗೈಶ್ವರ್ಯಗಳು, ಅವುಗಳ ಗತಿಯು ಎಂದರೆ ಪ್ರಾಪ್ತಿಯು—ಅದಕ್ಕೆ ಯಾವವು ಸಾಧನವಾಗಿರುವವೋ ಅಂಥ ಕ್ರಿಯಾವಿಶೇಷಗಳನ್ನು ಬಹಳವಾಗಿ ಒಳ ಗೊಂಡಿರುವ ಮಾತನ್ನೇ ಆಡುತ್ತಾ[4] (ಯಾವ)ಮೂಢರು ಸಂಸಾರದಲ್ಲಿಯೇ ತೊಳಲು ತ್ತಿರುವರೋ ಎಂದರ್ಥ (೪೩).

(ಹೀಗೆ) ಭೋಗದಲ್ಲಿಯೂ ಐಶ್ವರ್ಯದಲ್ಲಿಯೂ ಪ್ರಸಕ್ತರಾಗಿರುವ ಎಂದರೆ ಭೋಗವನ್ನು ಪಡಬೇಕು, ಐಶ್ವರ್ಯವನ್ನೂ (ಪಡೆಯಬೇಕು) ಎಂದು ಭೋಗೈ ಶ್ವರ್ಯಗಳಲ್ಲಿಯೇ ಪ್ರೇಮವುಳ್ಳವರಾಗಿ ಅವೇ ತಾವಾಗಿ ಈ (ಮೇಲೆ ಹೇಳಿದ) ಕ್ರಿಯಾವಿಶೇಷಗಳಿಂದ ಬಹುವಾಗಿ ಕೂಡಿರುವ ಮಾತಿನಿಂದ ಚೇತಸ್ಸನ್ನು ಕಳೆದು ಕೊಂಡಿರುವ ಎಂದರೆ ವಿವೇಕಜ್ಞಾನವನ್ನು ಮರೆಮಾಡಿಕೊಂಡಿರುವ[5] ಆ (ಜನ)ರಿಗೆ

---

1. ವಿಧಿಗಳನ್ನು ಹೊಗಳುವ ಮಾತುಗಳು:
2. ಈಶ್ವರ, ಶುದ್ಧಬ್ರಹ್ಮ-ಎಂಬುದಿಲ್ಲ.
3. ಕಾಮ್ಯಕರ್ಮವು ಜನ್ಮವನ್ನು ಅವಶ್ಯವಾಗಿ ಕೊಡುತ್ತದೆ.
4. ಕರ್ಮಕಾಂಡದ ಮಾತುಗಳನ್ನೇ ಆಡುತ್ತಾ.
5. ಸಾಧನಫಲಬುದ್ಧಿಯು ಯಾರಿಗೆ ಬಲವಾಗಿರುವದೋ ಅವರಿಗೆ ಸಾಧ್ಯಸಾಧನ ಗಳನ್ನು ಮೀರಿರುವ ಆತ್ಮನ ಜ್ಞಾನವು ಮರೆಯಾಗಿರುವದು. ಕರ್ಮಕಾಂಡಕ್ಕೆ ಸಂಬಂಧಪಟ್ಟ ಮಾತನ್ನೇ ಆಡಿಕೊಂಡಿರುವ ಜನರಿಗೆ ಜ್ಞಾನಕಾಂಡದಲ್ಲಿ ಆದರವಿರುವದಿಲ್ಲವೆಂಬುದು ಸ್ವಾಭಾ ವಿಕ.

ನಿಶ್ಚಯಾತ್ಮಕವಾದ ಸಾಂಖ್ಯವಿಷಯವಾದ ಬುದ್ಧಿಯು ಸಮಾಧಿಯಲ್ಲಿ—ಪುರುಷನ ಉಪಭೋಗಕ್ಕಾಗಿ ಎಲ್ಲವೂ ಅದರಲ್ಲಿಡಲ್ಪಡುವದರಿಂದ ಅಂತಃಕರಣಕ್ಕೆ, ಬುದ್ಧಿಗೆ, **ಸಮಾಧಿ**[1] ಎಂದು ಹೆಸರು. ಆ (ಅಂತಃಕರಣವೆಂಬ) ಸಮಾಧಿಯಲ್ಲಿ (ನಿಶ್ಚಯಾತ್ಮಕ ಬುದ್ಧಿಯು) ಉಂಟಾಗಲಾರದು ಎಂದರ್ಥ.

(ಭಾಷ್ಯ)

೮೨. ಯೇ ಏವಂ ವಿವೇಕಬುದ್ಧಿರಹಿತಾಃ, ತೇಷಾಂ ಕಾಮಾತ್ಮನಾಂ ಯತ್ ಫಲಂ ತದಾಹ—

(ಭಾಷ್ಯಾರ್ಥ)

ಯಾರು ಹೀಗೆ ವಿವೇಕಬುದ್ಧಿಯಿಲ್ಲದೆ ಕಾಮಾತ್ಮರಾಗಿರುವರೋ ಅಂಥವರಿಗೆ ಆಗುವ ಫಲವನ್ನು ಹೇಳುತ್ತಾನೆ —

**ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।**
**ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್**
**॥ ೪೫ ॥**

೪೫. ವೇದಗಳು ತ್ರೈಗುಣ್ಯದ ವಿಷಯವಾದವುಗಳು. ಎಲೈ ಅರ್ಜುನನೆ, (ನೀನು) ನಿಸ್ತ್ರೈಗುಣ್ಯನಾಗು. ನಿರ್ದ್ವಂದ್ವನೂ ನಿತ್ಯಸತ್ತ್ವಸ್ಥನಾಗಿಯೂ ನಿರ್ಯೋಗಕ್ಷೇಮನಾಗಿಯೂ ಆತ್ಮವಂತನಾಗಿಯೂ ಇರು.

(ಭಾಷ್ಯ)

೮೩. ತ್ರೈಗುಣ್ಯವಿಷಯಾಃ ತ್ರೈಗುಣ್ಯಂ ಸಂಸಾರಃ ವಿಷಯಃ ಪ್ರಕಾಶಯಿತವ್ಯಃ ಯೇಷಾಂ ತೇ ವೇದಾಃ ತ್ರೈಗುಣ್ಯವಿಷಯಾಃ । ತ್ವಂ ತು ನಿಸ್ತ್ರೈಗುಣ್ಯಃ ಭವ ಅರ್ಜುನ । ನಿಷ್ಕಾಮೋ ಭವ ಇತ್ಯರ್ಥಃ । ನಿರ್ದ್ವನ್ದ್ವಃ ಸುಖದುಃಖಹೇತೂ ಸಪ್ರತಿಪಕ್ಷೌ ಪದಾರ್ಥೌ ದ್ವನ್ದ್ವಶಬ್ದವಾಚ್ಯೌ । ತತೋ ನಿರ್ಗತಃ ನಿರ್ದ್ವನ್ದ್ವಃ ಭವ[2] । ನಿತ್ಯಸತ್ತ್ವಸ್ಥಃ ಸದಾ ಸತ್ತ್ವಗುಣಾಶ್ರಿತಃ ಭವ। ತಥಾ ನಿರ್ಯೋಗಕ್ಷೇಮಃ ಅನುಪಾತ್ತಸ್ಯ ಉಪಾದಾನಂ ಯೋಗಃ, ಉಪಾತ್ತಸ್ಯ ರಕ್ಷಣಂ ಕ್ಷೇಮಃ । ಯೋಗ

---

1. ಭೋಗವೂ ಮೋಕ್ಷವೂ ಅಂತಃಕರಣದಲ್ಲಿ ಅಡಗಿರುವವು, ಎಂದರೆ ಅದರ ಆಧೀನವಾಗಿರುವವು. ತೈ. ಭಾ. ೨-೧ (ಭಾ. ಭಾ. ೧೦೮ರಲ್ಲಿ) ಗುಹಾ ಎಂಬ ಶಬ್ದದ ವಿವರಣೆಯನ್ನು ನೋಡಿರಿ.

2. ಇದರ ಮುಂದೆ "ತ್ವಮ್" ಎಂದು ಆ॥ ಶಿ॥ ಗು॥ ಪಾಠಗಳಲ್ಲಿ ಹೆಚ್ಚಾಗಿದೆ. ಮ॥ ಪಾಠದಲ್ಲಿ 'ಕಿಂಚ' ಎಂಬ ಮಾತು ಹೆಚ್ಚಾಗಿದೆ.

ಕ್ಷೇಮಪ್ರಧಾನಸ್ಯ ಶ್ರೇಯಸಿ ಪ್ರವೃತ್ತಿಃ ದುಷ್ಕರಾ ಇತ್ಯತಃ ನಿರ್ಯೋಗಕ್ಷೇಮೋ ಭವ। ಆತ್ಮವಾನ್ ಅಪ್ರಮತ್ತಶ್ಚ ಭವ। ಏಷ ತವ ಉಪದೇಶಃ ಸ್ವಧರ್ಮಮ್ ಅನುತಿಷ್ಠತಃ ॥

(ಭಾಷ್ಯಾರ್ಥ)

ತ್ರೈಗುಣ್ಯವಿಷಯಾಃ ಎಂಬಲ್ಲಿ ತ್ರೈಗುಣ್ಯವೆಂದರೆ ಸಂಸಾರವು, ಅದೇ (ತಾವು) ಬೆಳಗಿ (ತಿಳಿಸ) ಬೇಕಾದ ವಿಷಯವು ಯಾವವಕ್ಕೋ ಆ ವೇದಗಳು ತ್ರೈಗುಣ್ಯದ ವಿಷಯವಾದವುಗಳು.[1] ಆದರೆ, ಎಲೈ ಅರ್ಜುನನೆ, ನೀನು ನಿಸ್ತ್ರೈಗುಣ್ಯನಾಗು ಎಂದರೆ ಕಾಮವಿಲ್ಲದವನಾಗಿರು ಎಂದರ್ಥ.[2] ನಿರ್ದ್ವಂದ್ವನಾ(ಗಿರು)—ಸುಖದುಃಖಗಳಿಗೆ ಕಾರಣವಾಗಿ (ಒಂದಕ್ಕೊಂದು) ಪ್ರತಿಪಕ್ಷವಾಗಿರುವ ಪದಾರ್ಥಗಳನ್ನು ದ್ವಂದ್ವ ಎಂಬ ಶಬ್ದದಿಂದ ಕರೆಯುತ್ತಾರೆ, ಅವುಗಳನ್ನು ಬಿಟ್ಟು ಇರುವವನು ನಿರ್ದ್ವಂದ್ವನು-(ಅಂಥವ)ನಾಗಿರು. ನಿತ್ಯಸತ್ತ್ವಸ್ಥನಾಗಿರು ಯಾವಾಗಲೂ ಸತ್ತ್ವಗುಣವನ್ನೇ ಆಶ್ರಯಿಸಿಕೊಂಡಿರು[3] ಹಾಗೂ ನಿರ್ಯೋಗಕ್ಷೇಮ (ನಾಗಿರು) — ಇಲ್ಲದ್ದನ್ನು ಸಂಪಾದಿಸಿಕೊಳ್ಳುವದು ಯೋಗವು, ಸಂಪಾದಿಸಿದ್ದನ್ನು ಕಾಪಾಡಿಕೊಳ್ಳುವದು ಕ್ಷೇಮವು. ಯೋಗಕ್ಷೇಮಗಳನ್ನೇ ಮುಖ್ಯವಾಗಿ ಇಟ್ಟುಕೊಂಡಿರುವವನಿಗೆ ಶ್ರೇಯಸ್ಸಿನಲ್ಲಿ ಪ್ರವೃತ್ತಿಯುಂಟಾಗುವದು ಕಷ್ಟ. ಆದ್ದರಿಂದ ನಿರ್ಯೋಗಕ್ಷೇಮನಾಗಿರು.[4] ಮತ್ತು-ಆತ್ಮವಂತನಾಗಿರು ಎಚ್ಚರಿಕೆತಪ್ಪದವನಾಗಿರು. ಸ್ವಧರ್ಮವನ್ನು ಮಾಡುತ್ತಿರುವಾಗ[5] ನೀನು (ಅನುಸರಿಸಬೇಕಾದದ್ದು) ಈ ಉಪದೇಶವು.

---

1. ಮಂತ್ರಬ್ರಾಹ್ಮಣಗಳಲ್ಲಿ ಹೇಳಿರುವ ಕರ್ಮಫಲಗಳು ಗುಣತ್ರಯಬದ್ಧರಾದವರಿಗಾಗಿ.

2 ಕಾಮವನ್ನು ಗೆಲ್ಲಬೇಕೆಂದು ಇಲ್ಲಿ ಹೇಳಿದೆಯೇ ಹೊರತು ಕರ್ಮವನ್ನು ಬಿಡಬೇಕೆಂದು ಹೇಳಿಲ್ಲ; ಏಕೆಂದರೆ ಫಲಾಸಕ್ತಿಯಿಲ್ಲದೆ ಕರ್ಮವನ್ನು ಮಾಡುವ ಕರ್ಮಯೋಗವನ್ನೇ ಇಲ್ಲಿ ಪ್ರಾರಂಭಿಸಿರುತ್ತದೆ

3. ರಜಸ್ತಮಗಳ ಸಂಪರ್ಕವಿಲ್ಲದ ಶುದ್ಧಸತ್ತ್ವವನ್ನೇ ಆಶ್ರಯಿಸಿರು ಎಂದರ್ಥ. ಸತ್ತ್ವವು ಶುದ್ಧವಾದ ಮೇಲೆಯೇ ಮೂರುಗುಣಗಳನ್ನೂ ಮೀರುವದಕ್ಕೆ ಆಗುತ್ತದೆ.

4. ಹೀಗಿದ್ದರೆ ಲೋಕವ್ಯವಹಾರವು ಹೇಗೆ ಸಾಗುವದೆಂಬುದಕ್ಕೆ ೯-೨೨ನ್ನು ನೋಡಿ.

5. ಕರ್ಮಯೋಗವನ್ನು ಮಾಡುತ್ತಿರುವಾಗ ಎಂದರ್ಥ. ಹಿಂದೆ ೪೦ನೆಯ ಶ್ಲೋಕದಲ್ಲಿ ಹೇಳಿದ ಉಪದೇಶಕ್ಕೂ ಇದಕ್ಕೂ ತಾರತಮ್ಯವಿದೆ.

# ಕರ್ಮಯೋಗದ ಫಲವು

(ಭಾಷ್ಯ)

೮೪. ಸರ್ವೇಷು ವೇದೋಕ್ತೇಷು ಕರ್ಮಸು ಯಾನಿ ಉಕ್ತಾನಿ ಅನನ್ತಾನಿ ಫಲಾನಿ ತಾನಿ ನಾಪೇಕ್ಷ್ಯನ್ತೇ ಚೇತ್ ಕಿಮರ್ಥಂ ತಾನಿ ಈಶ್ವರಾಯ ಇತಿ ಅನುಷ್ಠೀಯನ್ತೇ ಇತಿ ? ಉಚ್ಯತೇ । ಶೃಣು—

(ಭಾಷ್ಯಾರ್ಥ)

ವೇದದಲ್ಲಿ ಹೇಳಿರುವ ಕರ್ಮಗಳಿಗೆಲ್ಲ ಲೆಕ್ಕವಿಲ್ಲದಷ್ಟು ಫಲಗಳನ್ನು ಹೇಳಿದೆಯಷ್ಟೆ, ಅವುಗಳು (ಯಾವ)ವನ್ನೂ ಬಯಸುವದಿಲ್ಲವಾದರೆ ಅಂಥ (ಕರ್ಮ)ಗಳನ್ನು ಈಶ್ವರನಿಗೋಸ್ಕರವೆಂದು ಮಾಡುವದಾದರೂ ಏಕೆ? ಎಂದರೆ ಹೇಳುತ್ತೇನೆ, ಕೇಳು :—

**ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।**
**ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥ ೪೬ ॥**

೪೬ (ಸಣ್ಣ) ಉದಪಾನದಲ್ಲಿ ಎಷ್ಟು ಪ್ರಯೋಜನವಿರುವದೋ ಎಲ್ಲೆಲ್ಲಿಯೂ ನೀರು ತುಂಬಿರುವ (ಜಲಾಶಯದಲ್ಲಿ ಅಷ್ಟು ಇದ್ದೇ ಇರುವದು). ಎಲ್ಲಾ ವೇದಗಳಲ್ಲಿಯೂ (ಎಷ್ಟು ಪ್ರಯೋಜನವಿರುವದೋ) ಅಷ್ಟು (ತತ್ತ್ವವನ್ನು ಬಲ್ಲ ಬ್ರಾಹ್ಮಣನಿಗೆ (ಆಗಿಯೇ ಆಗುವದು).

(ಭಾಷ್ಯ)

೮೫. ಯಥಾ ಲೋಕೇ ಕೂಪತಡಾಗಾದ್ಯನೇಕಸ್ಮಿನ್ ಉದಪಾನೇ ಪರಿಚ್ಛಿನ್ನೋದಕೇ ಯಾವಾನ್ ಯಾವತ್ಪರಿಮಾಣಃ ಸ್ನಾನಪಾನಾದಿಃ ಅರ್ಥಃ ಫಲಂ ಪ್ರಯೋಜನಂ ಸ ಸರ್ವಃ ಅರ್ಥಃ ಸರ್ವತಃ ಸಂಪ್ಲುತೋದಕೇಽಪಿ[1] ತಾವಾನೇವ ತತ್ರ ಅನ್ತರ್ಭವತಿ ಇತ್ಯರ್ಥಃ । ಏವಂ ತಾವಾನ್ ತಾವತ್ಪರಿಮಾಣ ಏವ ಸಂಪದ್ಯತೇ ಸರ್ವೇಷು ವೇದೇಷು ವೇದೋಕ್ತೇಷು ಕರ್ಮಸು ಯೋಽರ್ಥಃ ಯತ್ಕರ್ಮಫಲಮ್ ಸೋಽರ್ಥಃ ಬ್ರಾಹ್ಮಣಸ್ಯ ಸಂನ್ಯಾಸಿನಃ ಪರಮಾರ್ಥತತ್ತ್ವಂ ವಿಜಾನತಃ ಯೋಽರ್ಥಃ ಯತ್ ವಿಜ್ಞಾನಫಲಂ ಸರ್ವತಃಸಂಪ್ಲುತೋದಕಸ್ಥಾನೀಯಮ್ ತಸ್ಮಿನ್ ತಾವಾನೇವ

---

1 'ಅಪಿ' ಎಂಬ ಮಾತು ಮೈ||ಮು|| ಪಾಠಗಳಲ್ಲಿಲ್ಲ. 'ಯಃ ಅರ್ಥಃ' ಎಂದು ಹೆಚ್ಚಾಗಿದೆ.

ಸಂಪದ್ಯತೇ ತತ್ರೈವ ಅನ್ತರ್ಭವತಿ ಇತ್ಯರ್ಥಃ[1] । [ಯಥಾ ಕೃತಾಯ ವಿಜಿತಾಯಾಧರೇಯಾಃ ಸಂಯನ್ತ್ಯೇವಮೇನಂ] [2] ಸರ್ವಂ ತದಭಿಸಮೇತಿ ಯತ್ಕಿಂಚ ಪ್ರಜಾಃ ಸಾಧು ಕುರ್ವನ್ತಿ ಯಸ್ತದ್ವೇದ ಯತ್ ಸವೇದ" (ಛಾ ೪-೧-೪) ಇತಿ ಶ್ರುತೇಃ । "ಸರ್ವಂ ಕರ್ಮಾಖಿಲಮ್" (೪-೩೩) ಇತಿ ಚ ವಕ್ಷ್ಯತಿ । ತಸ್ಮಾತ್ ಪ್ರಾಗ್ ಜ್ಞಾನನಿಷ್ಠಾಧಿಕಾರಪ್ರಾಪ್ತೇಃ ಕರ್ಮಣ್ಯಧಿಕೃತೇನ ಕೂಪತಡಾಗಾದ್ಯರ್ಥಸ್ಥಾನೀಯಮಪಿ ಕರ್ಮ ಕರ್ತವ್ಯಮ್ ॥

(ಭಾಷ್ಯಾರ್ಥ)

ಹೇಗೆ ಲೋಕದಲ್ಲಿ ಭಾವಿ, ಕೆರೆ, ಮುಂತಾದ (ಬೇರೆಬೇರೆಯ) ಅನೇಕ ಉದಪಾನಗಳಲ್ಲಿ (ಸಣ್ಣಸಣ್ಣ) ಗೊತ್ತಾದ ಪರಿಮಾಣದ ನೀರಿರುವ ಜಲಾಶಯಗಳಲ್ಲಿ ಎಷ್ಟು ಎಂದರೆ ಎಷ್ಟರಮಟ್ಟಿನ ಸ್ನಾನಪಾನ ಮುಂತಾದ ಅರ್ಥವು, ಫಲವು, ಪ್ರಯೋಜನವು ಆಗುವದೋ ಅಷ್ಟು ಪ್ರಯೋಜನವೂ[3] ಎಲ್ಲೆಲ್ಲಿಯೂ ನೀರು ತುಂಬಿರುವ (ಜಲಾಶಯದಲ್ಲಿಯೂ) ಆಗಿಬಿಡುವದೋ ಅದರಲ್ಲಿ (ಆಗುವ ಪ್ರಯೋಜನದಲ್ಲಿ) ಅಡಕವಾಗಿರುವದೋ ಎಂದರ್ಥ. ಇದರಂತೆ ಅಷ್ಟೇ, ಅಷ್ಟು ಪರಿಮಾಣದ ಫಲವೂ–ವೇದಗಳಲ್ಲೆಲ್ಲ ಎಂದರೆ ವೇದೋಕ್ತವಾದ ಕರ್ಮಗಳಲ್ಲೆಲ್ಲ ಆಗುವ ಕರ್ಮದ ಫಲವೆಷ್ಟೋ ಅಷ್ಟು ಫಲವೂ ತಿಳಿದಿರುವ ಬ್ರಾಹ್ಮಣನಿಗೆ, ಪರಮಾರ್ಥತತ್ತ್ವವನ್ನು ಬಲ್ಲ ಸಂನ್ಯಾಸಿಗೆ ಆಗುವ ಫಲದಲ್ಲಿ (ಉದಾಹರಣೆಯ) ಎಲ್ಲೆಲ್ಲಿಯೂ ನೀರಿರುವ ಸ್ಥಳದಂತೆ ಇರುವ ವಿಜ್ಞಾನದ ಫಲದಲ್ಲಿ ಅಷ್ಟೇ ಆಗಿಬಿಡುತ್ತದೆ, ಎಂದರೆ ಅದರಲ್ಲಿಯೇ ಅಡಕವಾಗಿ ಬಿಡುತ್ತದೆ ಎಂದರ್ಥ. "[ಹೇಗೆ ಕೃತ ಎಂಬ ಲೆತ್ತವನ್ನು ಗೆದ್ದುಕೊಂಡವನಿಗೆ ಕೆಳಗಿನ (ಲೆತ್ತದ ಗರಗಳೂ) ಬಂದು ಸೇರುವವೋ ಹಾಗೆ] [4] ಪ್ರಜೆಗಳು ಮಾಡುವ ಪುಣ್ಯವೆಲ್ಲ ಆ (ರೈಕ್ವನು) ಅರಿತಿರುವದನ್ನು ಅರಿತುಕೊಂಡವನಿಗೆ ಸೇರಿಹೋಗುವದು" (ಛಾ.

---

1. "ತತ್ರೈವ ಅನ್ತರ್ಭವತಿ" ಎಂಬ ವಾಕ್ಯವು ಮ॥ಮೈ॥ ಪಾಠಗಳಲ್ಲಿಲ್ಲ.

2. ಕಂಸದಲ್ಲಿಹಾಕಿರುವ ಪಾಠವು ಸಿ॥ಗು॥ಮು॥ಮೈ॥ ಪಾಠಗಳಲ್ಲಿಲ್ಲ. ಅರ್ಥಕ್ಕೇನೋ ಬೇಕಾಗಿದೆ.

3. ದೊಡ್ಡ ಜಲಾಶಯದಲ್ಲಿ ಸಣ್ಣಸಣ್ಣ ಕೆರೆ ಕುಂಟೆ ಮುಂತಾದವುಗಳ ಪ್ರಯೋಜನವೆಲ್ಲ ಆಗುವದು, ಹೆಚ್ಚಾಗಿಯೂ ಆಗುವದು-ಎಂದು ಅಭಿಪ್ರಾಯ

4. ಕೃತ (೪), ತ್ರೇತಾ (೩), ದ್ವಾಪರ (೨), ಕಲಿ (೧) – ಈ ಗರಗಳಲ್ಲಿ ಕೃತವು ಬಿದ್ದರೆ ಅದರ ಫಲದ ಜೊತೆಗೆ ಮಿಕ್ಕಫಲಗಳೂ ಬಂದು (೪ + ೩ + ೨ + ೧ = ) ಹತ್ತು ಬಿದ್ದಂತೆ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಒಂದಾನೊಂದು ಪಗಡೆಯಾಟದ ನಿಯಮ. ಇದರಂತೆ ಜ್ಞಾನ ಫಲದಲ್ಲಿ ಕರ್ಮಫಲಗಳೂ ಸೇರುವವು ಎಂದಭಿಪ್ರಾಯ.

೪-೧-೪) ಎಂಬ ಶ್ರುತಿ ಇದಕ್ಕೆ ಪ್ರಮಾಣವು. "ಎಲ್ಲಾ ಕರ್ಮವೂ (ಜ್ಞಾನದಲ್ಲಿ) ಕೊನೆಗಾಣುವದು" (೪-೩೩) ಎಂದೂ (ಭಗವಂತನು) ಮುಂದೆ ಹೇಳಿರುತ್ತಾನೆ. ಆದ್ದರಿಂದ ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆ ಬರುವವರೆಗೂ ಕರ್ಮಕ್ಕೆ ಅಧಿಕಾರಿಯಾದವನು ಭಾವಿ, ಕೆರೆ ಮುಂತಾದದ್ದರಂತೆ ಇರುವ ಕರ್ಮವನ್ನು ಕೂಡ (ಈಶ್ವರಾರ್ಪಣಬುದ್ಧಿಯಿಂದ) ಮಾಡುತ್ತಿರಬೇಕು [1].

(ಭಾಷ್ಯ)

೮೬. ತವ ಚ—

(ಭಾಷ್ಯಾರ್ಥ)

ನಿನ್ನ ವಿಷಯವು (ಹೇಗೆನ್ನುವೆಯೋ) [2].—

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮಫಲಹೇತುರ್ಭೂರ್ಮಾ ತೇ ಸಙ್ಗೋಽಸ್ತ್ವಕರ್ಮಣಿ**
**॥ ೪೭ ॥**

೪೭. ನಿನಗೆ ಕರ್ಮದಲ್ಲಿಯೇ ಅಧಿಕಾರವು, ಫಲದಲ್ಲಿ ಎಂದಿಗೂ ಬೇಡ. ಕರ್ಮಫಲಕ್ಕೆ ಹೇತುವಾಗದೆ ಇರು, ಅಕರ್ಮದಲ್ಲಿ ನಿನಗ ಸಂಗವಾಗದಿರಲಿ.

೮೭. ಕರ್ಮಣ್ಯೇವ ಅಧಿಕಾರಃ ನ ಜ್ಞಾನನಿಷ್ಠಾಯಾಂ ತೇ ತವ । ತತ್ರ ಚ ಕರ್ಮ ಕುರ್ವತಃ ಮಾ ಫಲೇಷು ಅಧಿಕಾರಃ ಅಸ್ತು । ಕರ್ಮಫಲತೃಷ್ಣಾ ಮಾ ಭೂತ್ ಕದಾಚನ ಕಸ್ಯಾಂಚಿದಪಿ [3] ಅವಸ್ಥಾಯಾಮ್ ಇತ್ಯರ್ಥಃ । ಯದಾ ಕರ್ಮಫಲೇ ತೃಷ್ಣಾ ತೇ ಸ್ಯಾತ್ ತದಾ ಕರ್ಮಫಲಪ್ರಾಪ್ತೇರ್ಹೇತುಃ ಸ್ಯಾಃ । ಏವಂ ಮಾ ಕರ್ಮಫಲಹೇತುಃ ಭೂಃ । ಯದಾ ಹಿ ಕರ್ಮಫಲತೃಷ್ಣಾಪ್ರಯುಕ್ತಃ ಕರ್ಮಣಿ ಪ್ರವರ್ತತೇ ತದಾ ಕರ್ಮಫಲಸ್ಯೈವ ಜನ್ಮನೋ ಹೇತುರ್ಭವೇತ್ । ಯದಿ ಸರ್ವಫಲಂ ನ ಇಷ್ಯತೇ ಕಿಂ ಕರ್ಮಣಾ ದುಃಖರೂಪೇಣ ?–ಇತಿ ಮಾ ತೇ ತವ ಸಙ್ಗಃ ಅಸ್ತು ಅಕರ್ಮಣಿ ಅಕರಣೇ ಪ್ರೀತಿಃ ಮಾ ಭೂತ್ ॥

---

1. ಇಲ್ಲಿ ಜ್ಞಾನಫಲವನ್ನು ಹೊಗಳಿರುವದು ಕರ್ಮಯೋಗದಿಂದ ಆ ಫಲವನ್ನು ಹೊಂದಬಹುದೆಂದು ಸೂಚಿಸುವದಕ್ಕೆ.

2. ಅರ್ಜುನನಿಗೆ ಕರ್ಮಯೋಗವನ್ನೇ ಉಪದೇಶಿಸಿದೆ.

3. 'ಅಪಿ' ಮೈ॥ಮ ಪಾಠಗಳಲ್ಲಿಲ್ಲ.

(ಭಾಷ್ಯಾರ್ಥ)

ನಿನಗೆ ಕರ್ಮದಲ್ಲಿಯೇ ಅಧಿಕಾರವೇ ಹೊರತು ಜ್ಞಾನನಿಷ್ಠೆಯಲ್ಲಲ್ಲ. ಅದರಲ್ಲಿಯೂ ಕರ್ಮವನ್ನು ಮಾಡುತ್ತಿರುವಾಗ ಫಲಗಳಲ್ಲಿ ಎಂದಿಗೂ ಯಾವ ಅವಸ್ಥೆಯಲ್ಲಿಯೂ[1] ಅಧಿಕಾರವು ಬೇಡ, ಕರ್ಮಫಲಗಳಲ್ಲಿ ಆಸೆಯುಂಟಾಗದಿರಲಿ ಎಂದರ್ಥ. ಯಾವಾಗ ಕರ್ಮಫಲದಲ್ಲಿ ನಿನಗೆ ಬಯಕೆಯುಂಟಾಗುವದೋ ಆಗ ನೀನು ಕರ್ಮಫಲಕ್ಕೆ ಹೇತುವಾದೀಯೆ ಹಾಗೆ ಕರ್ಮದ ಫಲಕ್ಕೆ ಕಾರಣನಾಗಬೇಡ. ಏಕೆಂದರೆ ಯಾವಾಗ ಕರ್ಮಫಲದ ಆಸೆಯಿಂದ ಪ್ರೇರಿತನಾಗಿ ಕರ್ಮದಲ್ಲಿ ಪ್ರವರ್ತಿಸುತ್ತಾನೋ ಆಗ ಕರ್ಮದ ಫಲವು ಹುಟ್ಟುವದಕ್ಕೇ ಕಾರಣನಾಗಬೇಕಾಗುತ್ತದೆ.[2] "ಕರ್ಮಫಲವೇ ಬೇಕಿಲ್ಲವಾದ ಮೇಲೆ ದುಃಖರೂಪವಾದ ಕರ್ಮವೇತಕ್ಕೆ ? "ಎಂದು ಅಕರ್ಮದಲ್ಲಿಯೂ ನಿನಗೆ ಸಂಗವಾಗದೆ ಇರಲಿ' ಎಂದರೆ ಕರ್ಮವನ್ನು ಮಾಡದೆ ಬಿಡುವದರಲ್ಲಿ ಪ್ರೀತಿಯುಂಟಾಗದೆ ಇರಲಿ.

(ಭಾಷ್ಯ)

೮೮. ಯದಿ ಕರ್ಮಫಲಪ್ರಯುಕ್ತೇನ ನ ಕರ್ತವ್ಯಂ ಕರ್ಮ, ಕಥಂ ತರ್ಹಿ ಕರ್ತವ್ಯಮ್ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಕರ್ಮಫಲದಿಂದ ಪ್ರೇರಿತನಾಗಿ ಕರ್ಮವನ್ನು ಮಾಡಕೂಡದಾದರೆ ಮತ್ತೆ ಹೇಗೆ ಮಾಡಬೇಕು ?—ಎಂದರೆ ಹೇಳುತ್ತೇನೆ :—

**ಯೋಗಸ್ಥಃ ಕುರು ಕರ್ಮಾಣಿ ಸಙ್ಗಂ ತ್ಯಕ್ತ್ವಾ ಧನಞ್ಜಯ ।**
**ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥೪೮॥**

೪೮. ಎಲೈ ಧನಂಜಯನೆ, ಯೋಗದಲ್ಲಿದ್ದುಕೊಂಡು ಸಂಗವನ್ನು ಬಿಟ್ಟು ಸಿದ್ಧಿ, ಅಸಿದ್ಧಿ–ಇವೆರಡರಲ್ಲಿಯೂ ಸಮನಾಗಿದ್ದುಕೊಂಡು ಕರ್ಮಗಳನ್ನು ಮಾಡು. ಸಮತ್ವವು ಯೋಗವೆನಿಸುವದು.

---

1. ಕರ್ಮಕಾಲದಲ್ಲಾಗಲಿ, ಅದಕ್ಕೆ ಮೊದಲಾಗಲಿ, ಆಮೇಲಾಗಲಿ

2. "ಕರ್ಮಫಲಸ್ಯೈವ ಹೇತುರ್ಭವೇತ್" ಎಂಬಲ್ಲಿ ಷಷ್ಠಿಗೆ ವ್ಯಧಿಕರಣದ ಅನ್ವಯಮಾಡಿಕೊಂಡರೆ ಈ ಅರ್ಥ, ಸಮಾನಾಧಿಕರಣವಾಗಿ ಅನ್ವಯ ಮಾಡಿಕೊಂಡರೆ "ಕರ್ಮಫಲವಾದ ಜನ್ಮಕ್ಕೆ ಕಾರಣವಾಗಬೇಕಾಗುತ್ತದೆ" ಎಂದರ್ಥ. ಎರಡು ಪಕ್ಷದಲ್ಲಿಯೂ ಕರ್ಮವ ಫಲವೆಂದರೆ ಮತ್ತೆ ಹುಟ್ಟುವದೇ. (೩-೩೪, ಈಃಸ್ಸೂ ಮುಂ. ೪-೩-೩ನ್ನೂ ನೋಡಿ).

(ಭಾಷ್ಯ)

೪೯. ಯೋಗಸ್ಥಃ ಸನ್ ಕುರು ಕರ್ಮಾಣಿ ಕೇವಲಮ್ ಈಶ್ವರಾರ್ಥಂ ತತ್ರಾಪಿ 'ಈಶ್ವರೋ ಮೇ ತುಷ್ಯತು' ಇತಿ ಸಙ್ಗಂ ತ್ಯಕ್ತ್ವಾ ಧನಞ್ಜಯ । ಫಲ ತೃಷ್ಣಾಶೂನ್ಯೇನ ಕ್ರಿಯಮಾಣೇ ಕರ್ಮಣಿ ಸತ್ತ್ವಶುದ್ಧಿಜಾ ಜ್ಞಾನಪ್ರಾಪ್ತಿಲಕ್ಷಣಾ ಸಿದ್ಧಿಃ, ತದ್ವಿಪರ್ಯಯಜಾ ಅಸಿದ್ಧಿಃ, ತಯೋಃ ಸಿದ್ಧ್ಯಸಿದ್ಧ್ಯೋರಪಿ ಸಮಃ ತುಲ್ಯಃ ಭೂತ್ವಾ ಕುರು ಕರ್ಮಾಣಿ । ಕೋಽಸೌ ಯೋಗಃ ಯತ್ರ ಸ್ಥಿತ್ವಾ ಕರ್ಮ[1] ಕುರು ಇತ್ಯುಕ್ತಮ್ ? ಇದಮೇವ ತತ್ ಸಿದ್ಧ್ಯಸಿದ್ಧ್ಯೋಃ ಸಮತ್ವಂ ಯೋಗಃ ಉಚ್ಯತೇ॥

(ಭಾಷ್ಯಾರ್ಥ)

ಎಲೈ ಧನಂಜಯನೆ, ಯೋಗದಲ್ಲಿದ್ದುಕೊಂಡು ಕೇವಲ ಈಶ್ವರನಿಗಾಗಿಯೇ ಕರ್ಮಗಳನ್ನು ಮಾಡು, ಅದರಲ್ಲಿಯೂ ಸಂಗವನ್ನು ಬಿಟ್ಟು ನನ್ನ ವಿಷಯದಲ್ಲಿ ಈಶ್ವರನು ಸಂತುಷ್ಟನಾಗಲಿ ಎಂದು [2](ಮಾಡು). (ಸಿದ್ಧಿಯಲ್ಲಿಯೂ ಅಸಿದ್ಧಿಯಲ್ಲಿಯೂ ಸಮನಾಗಿಯೇ)—ಫಲದ ಆಸೆಯೇ ಇಲ್ಲದೆ ಕರ್ಮವನ್ನು ಮಾಡುತ್ತಿರಲು ಅಂತಃ ಕರಣಶುದ್ಧಿಯಿಂದ ಉಂಟಾಗುವ ಜ್ಞಾನಪ್ರಾಪ್ತಿಯೆಂಬ ಸಿದ್ಧಿ, ಅದಕ್ಕೆ ವಿಪರೀತ ವಾದ(ಅಶುದ್ಧಿ)ಯಿಂದ(ಜ್ಞಾನಪ್ರಾಪ್ತಿಯಾಗದಿರುವದೆಂಬ)ಅಸಿದ್ಧಿ ಈ ಸಿದ್ಧಿ, ಅಸಿದ್ಧಿ-ಎಂಬೆರಡರಲ್ಲಿಯೂ ಸಮವಾಗಿ (ಒಂದೇ) ಸಮನಾಗಿದ್ದುಕೊಂಡು—ಕರ್ಮಗಳನ್ನು ಮಾಡು. ಯೋಗದಲ್ಲಿದ್ದುಕೊಂಡು ಕರ್ಮಗಳನ್ನು ಮಾಡು ಎಂದು ಹೇಳಿದೆ ಯಷ್ಟೆ, ಈ ಯೋಗವು ಯಾವದು ? ಎಂದರೆ ಇದೇ ಅದು, ಸಿದ್ಧಿ, ಅಸಿದ್ಧಿ-ಎಂದೆರಡರಲ್ಲಿಯೂ ಸಮನಾಗಿರುವದು **ಯೋಗವೆನಿಸುತ್ತದೆ.**

(ಭಾಷ್ಯ)

೫೦. ಯತ್ ಪುನಃ ಸಮತ್ವಬುದ್ಧಿಯುಕ್ತಮ್ ಈಶ್ವರಾರಾಧನಾರ್ಥಂ ಕರ್ಮ ಉಕ್ತಮ್[3] ಏತಸ್ಮಾತ್ ಕರ್ಮಣಃ—

(ಭಾಷ್ಯಾರ್ಥ)

ಸಮತ್ವಬುದ್ಧಿಯುಳ್ಳವನಾಗಿ ಈಶ್ವರಾರಾಧನೆಗಾಗಿ (ಮಾಡುವದೆಂದು) ಹೇಳಿದ ಈ ಕರ್ಮವುಂಟಷ್ಟೆ, ಈ ಕರ್ಮಕ್ಕಿಂತ—

---

1. ಇದು ಮು|| ಪಾಠ. ಮಿಕ್ಕ ಪುಸ್ತಕಗಳಲ್ಲಿ "ಯತ್ರಸ್ಥಃ ಕುರು" ಎಂದಿದೆ.

2 "ಈಶ್ವರನು ಸಂತೋಷಹೊಂದಲಿ ಎಂಬ ಸಂಗವನ್ನು ಬಿಟ್ಟು" ಎಂಬ ಆ|| ವ್ಯಾಖ್ಯಾನವು ಭಾಷ್ಯಸಮ್ಮತವೆಂದು ತೋರುವದಿಲ್ಲ. ಮುಂದಿನ ಶ್ಲೋಕದ ಭಾಷ್ಯವನ್ನೂ ೧೮-೬,೨೨ ನ್ನೂ ನೋಡಿ.

3. "ಉಕ್ತಮ್" ಎಂಬುದು ನಿ|| ಗು|| ಮೈ|| ಮು|| ಪಾಠಗಳಲ್ಲಿಲ್ಲ.

**ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ ಧನಞ್ಜಯ।**
**ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ ॥ ೪೯ ॥**

೪೯. ಎಲೈ ಧನಂಜಯನೆ, ಕೀಳಾದ ಕರ್ಮವು ಬುದ್ಧಿಯೋಗಕ್ಕಿಂತಲೂ ದೂರವಾಗಿರುವದು. ಬುದ್ಧಿಯನ್ನೇ ಶರಣುಹೊಂದು. ಫಲಹೇತುಗಳಾದವರು ಕೃಪಣರು.

(ಭಾಷ್ಯ)

೬೧ ದೂರೇಣ ಅತಿವಿಪ್ರಕರ್ಷೇಣ ಹಿ ಅವರಂ[1] ನಿಕೃಷ್ಟಂ ಕರ್ಮ ಫಲಾರ್ಥಿನಾ ಕ್ರಿಯಮಾಣಂ ಬುದ್ಧಿಯೋಗಾತ್ ಸಮತ್ವಬುದ್ಧಿಯುಕ್ತಾತ್ ಕರ್ಮಣಃ । ಜನ್ಮಮರಣಾದಿಹೇತುತ್ವಾತ್ ಧನಞ್ಜಯ। ಯತ ಏವಂ ತತಃ[2] ಯೋಗವಿಷಯಾಯಾಂ ಬುದ್ಧೌ ತತ್ಪರಿಪಾಕಜಾಯಾಂ ವಾ ಸಾಙ್ಖ್ಯಬುದ್ಧೌ ಶರಣಮ್ ಆಶ್ರಯಮ್ ಅಭಯಪ್ರಾಪ್ತಿಕಾರಣಮ್ ಅನ್ವಿಚ್ಛ ಪ್ರಾರ್ಥಯಸ್ವ। ಪರಮಾರ್ಥಜ್ಞಾನಶರಣೋ ಭವ ಇತ್ಯರ್ಥಃ। ಯತಃ ಅಪರಂ ಕರ್ಮ ಕುರ್ವಾಣಾಃ ಕೃಪಣಾಃ ದೀನಾಃ ಫಲಹೇತವಃ ಫಲತೃಷ್ಣಾಪ್ರಯುಕ್ತಾಃ ಸನ್ತಃ। "ಯೋ ವಾ ಏತದಕ್ಷರಂ ಗಾರ್ಗ್ಯವಿದಿತ್ವಾಸ್ಮಾಲ್ಲೋಕಾತ್ ಪ್ರೈತಿ ಸ ಕೃಪಣಃ" (ಬೃ. ೩-೮-೧೦) ಇತಿ ಶ್ರುತೇಃ" ॥

(ಭಾಷ್ಯಾರ್ಥ)

ಕೀಳು ಕರ್ಮವು ಎಂದರೆ ಕರ್ಮ ಫಲವನ್ನು ಬಯಸುವವನು ಮಾಡುವ ಕರ್ಮವು ಬುದ್ಧಿಯೋಗ (ಕರ್ಮ)ಕ್ಕಿಂತ ಎಂದರೆ ಸಮತ್ವಬುದ್ಧಿಯಿಂದ ಕೂಡಿರುವ ಕರ್ಮಕ್ಕಿಂತಲೂ[3] (ಯೋಗ್ಯತೆಯಲ್ಲಿ) ದೂರವಾಗಿ ಬಹಳ ಆಚೆಗೆಯೇ ಇರುವದು. ಏಕೆಂದರೆ (ಅದು) ಹುಟ್ಟು, ಸಾವು-ಮುಂತಾದದ್ದಕ್ಕೆ ಕಾರಣವಾಗಿರುತ್ತದೆ. ಎಲೈ ಧನಂಜಯನೆ, ಹೀಗಿರುವದರಿಂದ ಬುದ್ಧಿಯಲ್ಲಿ ಎಂದರೆ ಯೋಗವಿಷಯವಾದ ಬುದ್ಧಿಯಲ್ಲಿಯೇ ಅಥವಾ ಅದು ಪರಿಪಕ್ವವಾದ್ದರಿಂದ ಉಂಟಾಗುವ

---

1. " ವಿಪ್ರಕರ್ಷೇಣ ಅತ್ಯನ್ತಮೇವ ಹಿ ಅವರಂ ಅಧಮಂ ನಿಕೃಷ್ಟಮ್ " ವಾ॥ ' ಅತ್ಯನ್ತಮೇವ ' ಎಂಬುದನ್ನು ಬಿಟ್ಟು ವಾ॥ ಪಾಠದಂತೆ ಗು॥ ಮೈ॥

2. ಬುದ್ಧೇಃ ಯೋಗಃ ಯಸ್ಯ ತಸ್ಮಾತ್ (ಕರ್ಮಣಃ) ಎಂಬ ವಿವರಣೆಯನ್ನಿಟ್ಟುಕೊಂಡು ಕರ್ಮಯೋಗಕ್ಕಿಂತಲೂ ಎಂಬ ಅರ್ಥವನ್ನು ಕೊಟ್ಟಿರುತ್ತದೆ. ಇದು ಕರ್ಮಯೋಗದ ಪ್ರಕರಣವಾದ್ದರಿಂದ ಈ ಅರ್ಥವೇ ಯುಕ್ತವಾಗಿದೆ.

3. ' ಅತಃ ' ಮ॥ ' ಯತ ಏವಂ ಯೋಗ '— ನಿ॥

**ಸಾಂಖ್ಯಬುದ್ಧಿಯಲ್ಲಿಯೇ**[1] ಶರಣವನ್ನು ಎಂದರೆ ಆಶ್ರಯವನ್ನು ಅಭಯ ಪ್ರಾಪ್ತಿಗೆ ಕಾರಣವಿದೆಂದು (ಅದನ್ನು) ಹುಡುಕು, ಅದನ್ನೇ ಬಯಸುವವನಾಗು. ಪರಮಾರ್ಥಜ್ಞಾನವನ್ನೇ ಶರಣುಹೊಂದು ಎಂದರ್ಥ. ಏಕೆಂದರೆ ಫಲಹೇತುಗಳಾಗಿ ಎಂದರೆ ಫಲದ ಬಯಕೆಯಿಂದ ಪ್ರೇರಿತರಾಗಿ ಕೇಳು ಕರ್ಮವನ್ನು ಮಾಡುವವರು ಕೃಪಣರು, ದೀನರು. "ಎಲೌ ಗಾರ್ಗಿಯೆ, ಈ ಅಕ್ಷರವನ್ನು ಅರಿತುಕೊಳ್ಳದೆ ಈ ಲೋಕದಿಂದ ಯಾವನು ಹೊರಟುಹೋಗುವನೋ ಅವನು ಕೃಪಣನು" (ಬೃ ೩-೮-೧೦) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.[2]

(ಭಾಷ್ಯ)

೯೨. ಸಮತ್ವಬುದ್ಧಿಯುಕ್ತಃ ಸನ್ ಸ್ವಧರ್ಮಮನುತಿಷ್ಠನ್ ಯತ್ ಫಲಂ ಪ್ರಾಪ್ನೋತಿ ತತ್ ಶೃಣು—

(ಭಾಷ್ಯಾರ್ಥ)

ಸಮತ್ವಬುದ್ಧಿಯಿಂದ ಕೂಡಿದವನಾಗಿ ಸ್ವಧರ್ಮವನ್ನು ಮಾಡುತ್ತಿರುವವನು ಯಾವ ಫಲವನ್ನು ಪಡೆಯುತ್ತಾನೋ ಅದನ್ನು ಕೇಳು .—

**ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ ।**
**ತಸ್ಮಾದ್ ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಮ್**
**॥ ೫೦ ॥**

೫೦. ಬುದ್ಧಿಯಿಂದ ಕೂಡಿದವನು ಸುಕೃತದುಷ್ಕೃತಗಳೆರಡನ್ನೂ ಇಲ್ಲಿ ಬಿಟ್ಟುಬಿಡುತ್ತಾನೆ. ಆದ್ದರಿಂದ ಯೋಗಕ್ಕೆ ಹೊಂದಿಸಿಕೊ. ಯೋಗವು ಕರ್ಮಗಳಲ್ಲಿ ಕೌಶಲವು.

(ಭಾಷ್ಯ

೯೩. ಬುದ್ಧಿಯುಕ್ತಃ ಸಮತ್ವವಿಷಯಯಾ[3] ಬುದ್ಧ್ಯಾ ಯುಕ್ತಃ ಬುದ್ಧಿ

---

1. ಪ್ರಕೃತವಾದದ್ದು ಕರ್ಮಯೋಗದ ಬುದ್ಧಿಯಾದ್ದರಿಂದ ಆ ಬುದ್ಧಿಯಲ್ಲಿಯೇ ಎಂಬುದು ಸರಿಯಾದದ್ದು; ಆ ಬುದ್ಧಿಗೆ ಜನ್ಮಾಂತರವನ್ನು ಕೊಡದಿರುವ ಶಕ್ತಿಯು ಸಾಂಖ್ಯಬುದ್ಧಿಯನ್ನುಂಟುಮಾಡುವ ಮೂಲಕವೇ ಬರುತ್ತದೆಯಾದ್ದರಿಂದ ಸಾಂಖ್ಯಬುದ್ಧಿಯೆಂದೂ ಅರ್ಥವನ್ನು ಮಾಡಬಹುದು.

2. ಫಲವನ್ನು ಬಯಸುವವರು ಕೃಪಣರು, ಆತ್ಮನನ್ನು ಅರಿತುಕೊಳ್ಳುವವರೂ ಅದನ್ನು ಅರಿತುಕೊಳ್ಳುವದಕ್ಕೆ ಯತ್ನಿಸುವ ಮುಮುಕ್ಷುಗಳಾದ ಕರ್ಮಯೋಗಿಗಳೂ ಹಾಗಲ್ಲ ಎಂದು ಭಾವ.

3. ಕರ್ಮಸಮತ್ವವಿಷಯಯಾ ವಾ॥ ಮೈ॥ ಮು॥ ವಾ॥

ಯುಕ್ತಃ ಜಹಾತಿ ಪರಿತ್ಯಜತಿ ಇಹ ಅಸ್ಮಿನ್ ಲೋಕೇ ಉಭೇ ಸುಕೃತದುಷ್ಕೃತೇ ಪುಣ್ಯಪಾಪೇ ಸತ್ತ್ವಶುದ್ಧಿಜ್ಞಾನಪ್ರಾಪ್ತಿದ್ವಾರೇಣ ಯತಃ ತಸ್ಮಾತ್ ಸಮತ್ವಬುದ್ಧಿಯೋಗಾಯ ಯುಜ್ಯಸ್ವ ಘಟಸ್ವ। ಯೋಗೋ ಹಿ ಕರ್ಮಸು ಕೌಶಲಮ್। ಸ್ವಧರ್ಮಾಖ್ಯೇಷು ಕರ್ಮಸು ವರ್ತಮಾನಸ್ಯ ಯಾ ಸಿದ್ಧ್ಯಸಿದ್ಧ್ಯೋಃ ಸಮತ್ವಬುದ್ಧಿಃ ಈಶ್ವರಾರ್ಪಿತಚೇತಸ್ತಯಾ ತತ್ ಕೌಶಲಂ ಕುಶಲಭಾವಃ। ತದ್ ಹಿ ಕೌಶಲಂ ಯದ್ ಬನ್ಧಸ್ವಭಾವಾನ್ಯಪಿ ಕರ್ಮಾಣಿ ಸಮತ್ವಬುದ್ಧ್ಯಾ ಸ್ವಭಾವಾತ್ ನಿವರ್ತನ್ತೇ। ತಸ್ಮಾತ್ ಸಮತ್ವಬುದ್ಧಿಯುಕ್ತಃ ಭವ ತ್ವಮ್ ॥

(ಭಾಷ್ಯಾರ್ಥ)

ಬುದ್ಧಿಯುಕ್ತನಾದವನು ಎಂದರೆ ಸಮತ್ವವಿಷಯವಾದ ಬುದ್ಧಿಯಿಂದ ಕೂಡಿರುವವನು. (ಆ) ಬುದ್ಧಿಯುಕ್ತನು ಇಲ್ಲಿ ಎಂದರೆ ಈ ಲೋಕದಲ್ಲಿಯೇ ಸುಕೃತದುಷ್ಕೃತಗಳೆರಡನ್ನೂ ಬಿಟ್ಟುಬಿಡುತ್ತಾನೆ, ಎಂದರೆ ಸತ್ತ್ವಶುದ್ಧಿಯನ್ನೂ (ಅದರಿಂದ) ಜ್ಞಾನವನ್ನೂ ಹೊಂದುವಮೂಲಕ (ಪುಣ್ಯಪಾಪಗಳೆರಡನ್ನೂ ಪರಿತ್ಯಾಗಮಾಡುತ್ತಾನೆ). ಹೀಗಿರುವದರಿಂದ ಸಮತ್ವಬುದ್ಧಿಯ ಯೋಗಕ್ಕಾಗಿ ಪ್ರಯತ್ನಮಾಡು, ಹೊಂದಿಸಿಕೊ. ಏಕೆಂದರೆ ಯೋಗವೇ ಕರ್ಮಗಳಲ್ಲಿ ಕೌಶಲವು, ಸ್ವಧರ್ಮವೆಂಬ ಕರ್ಮಗಳಲ್ಲಿ ಇದ್ದುಕೊಂಡು ಸಿದ್ಧಿಯಾಗಲಿ ಅಸಿದ್ಧಿಯಾಗಲಿ, (ಎರಡರಲ್ಲಿಯೂ) ಈಶ್ವರನಲ್ಲಿ ಚಿತ್ತವನ್ನು ಅರ್ಪಿಸಿಬಿಟ್ಟಿರುವದರಿಂದ ಸಮತ್ವದ ಬುದ್ಧಿಯಾಗುವದಲ್ಲ, ಅದು ಕೌಶಲವು, ಜಾಣತನವು. ಬಂಧನವನ್ನುಂಟುಮಾಡುವ ಸ್ವಭಾವವುಳ್ಳವುಗಳಾಗಿರುವ ಕರ್ಮಗಳನ್ನುಕೂಡ ಸ್ವಭಾವವನ್ನು ಬಿಟ್ಟುಬಿಡುವಂತೆ ಮಾಡುವದೆಂಬುದು ಜಾಣತನವಲ್ಲವೆ? ಆದ್ದರಿಂದ ನೀನು ಸಮತ್ವಬುದ್ಧಿಯುಳ್ಳವನಾಗು,

(ಭಾಷ್ಯ)

೯೪. ಯಸ್ಮಾತ್ —

(ಭಾಷ್ಯಾರ್ಥ)

ಏಕೆಂದರೆ —

**ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ।**
**ಜನ್ಮಬನ್ಧವಿನಿರ್ಮುಕ್ತಾಃ ಪದಂ ಗಚ್ಛನ್ತ್ಯನಾಮಯಮ್ ॥ ೫೧ ॥**

೫೧. ಏಕೆಂದರೆ ಬುದ್ಧಿಯುಳ್ಳವರು ಕರ್ಮಜವಾದ ಫಲವನ್ನು ಬಿಟ್ಟು ಮನೀಷಿಗಳಾಗಿ ಜನ್ಮಬಂಧದಿಂದ ಬಿಡುಗಡೆಯನ್ನು ಹೊಂದಿ ಅನಾಮಯವಾದ ಪದವನ್ನು ಪಡೆದುಕೊಳ್ಳುತ್ತಾರೆ.

(ಭಾಷ್ಯ)

೯೪. ಕರ್ಮಜಂ 'ಫಲಂ ತ್ಯಕ್ತ್ವಾ' ಇತಿ ವ್ಯವಹಿತೇನ ಸಂಬನ್ಧಃ। ಇಷ್ಟಾನಿಷ್ಟದೇಹಪ್ರಾಪ್ತಿಃ ಕರ್ಮಜಂ ಫಲಮ್। ಕರ್ಮಭ್ಯೋ ಜಾತಂ ಬುದ್ಧಿಯುಕ್ತಾಃ ಸಮತ್ವಬುದ್ಧಿಯುಕ್ತಾಃ[1] ಹಿ ಯಸ್ಮಾತ್ ಫಲಂ ತ್ಯಕ್ತ್ವಾ ಪರಿತ್ಯಜ್ಯ ಮನೀಷಿಣಃ ಜ್ಞಾನಿನಃ ಭೂತ್ವಾ ಜನ್ಮಬನ್ಧವಿನಿರ್ಮುಕ್ತಾಃ ಜನ್ಮೈವ ಬನ್ಧಃ ಜನ್ಮಬನ್ಧಃ ತೇನ ವಿನಿರ್ಮುಕ್ತಾಃ ಜೀವನ್ತ ಏವ ಜನ್ಮಬನ್ಧವಿನಿರ್ಮುಕ್ತಾಃ[2] ಸನ್ತಃ ಪದಂ ಪರಮಂ ವಿಷ್ಣೋಃ ಮೋಕ್ಷಾಖ್ಯಂ ಗಚ್ಛನ್ತಿ ಅನಾಮಯಂ ಸರ್ವೋಪದ್ರವರಹಿತಮ್ ಇತ್ಯರ್ಥಃ ॥

(ಭಾಷ್ಯಾರ್ಥ)

'ಕರ್ಮಜಂ' ಎಂಬ (ಮಾತನ್ನು) 'ಫಲಂ ತ್ಯಕ್ತ್ವಾ' ಎಂದು ಆಚೆಯಿರುವ ಮಾತುಗಳೊಡನೆ ಅನ್ವಯ (ಮಾಡಿಕೊಳ್ಳಬೇಕು). (ತನಗೆ) ಬೇಕಾದ ಅಥವಾ ಬೇಡವಾದ ದೇಹವನ್ನು[3] ಪಡೆಯುವದು ಕರ್ಮಜವಾದ ಫಲವು. ಹಿ = ಏಕೆಂದರೆ ಬುದ್ಧಿಯುಕ್ತರಾದವರು ಎಂದರೆ ಸಮತ್ವಬುದ್ಧಿಯುಳ್ಳವರು (ಕರ್ಮಜವಾದ) ಕರ್ಮದಿಂದ ಉಂಟಾಗುವ ಫಲವನ್ನು ಬಿಟ್ಟು ಒಲ್ಲದೆ ಮನೀಷಿಗಳಾಗಿ ಎಂದರೆ ಜ್ಞಾನಿಗಳಾಗಿ[4] ಜನ್ಮಬಂಧವಿನಿರ್ಮುಕ್ತರಾಗಿ—ಜನ್ಮಬಂಧವೆಂದರೆ ಹುಟ್ಟುವದೆಂಬ ಬಂಧವು, ಅದರಿಂದ ಬಿಡುಗಡೆಯನ್ನು ಹೊಂದಿ **ಬದುಕಿರುವಾಗಲೇ ಜನ್ಮವೆಂಬ ಬಂಧದಿಂದ ಬಿಡುಗಡೆಯನ್ನು ಹೊಂದಿದವರಾಗಿ**[5] ಅನಾಮಯವಾದ ಎಂದರೆ ಯಾವ ಉಪದ್ರವಗಳೂ ಇಲ್ಲದ ಮೋಕ್ಷವೆಂಬ ಹೆಸರಿನ ವಿಷ್ಣುವಿನ ಪರಮಪದವನ್ನು[6] ಪಡೆಯುತ್ತಾರೆ ಎಂದರ್ಥ.

(ಭಾಷ್ಯ)

೯೫. ಅಥವಾ "ಬುದ್ಧಿಯೋಗಾದ್ಧನಞ್ಜಯ" (೨-೪೯) ಇತ್ಯಾರಭ್ಯ ಪರಮಾರ್ಥದರ್ಶನಲಕ್ಷಣೈವ ಸರ್ವತಃಸಂಪ್ಲುತೋದಕಸ್ಥಾನೀಯಾ ಕರ್ಮಯೋಗಜ

---

1. 'ಸನ್ತಃ' ಎಂದು ಒಂದ ಮಾತು ಹೆಚ್ಚಾಗಿ ಮೈ॥ ವಾ ॥ಪಾಠಗಳಲ್ಲಿದೆ.

2. 'ಜನ್ಮಬನ್ಧಾತ್ ವಿನಿರ್ಮುಕ್ತಾಃ' ಮೈ॥ ವಾ ॥

3. ಮನುಷ್ಯದೇವಾದಿದೇಹಗಳು ಇಷ್ಟವಾದವುಗಳು; ಮೂಗಜಂತುಗಳ ಅಥವಾ ಮರಗಿಡಗಳ ದೇಹಗಳು ಬೇಡದವು

4. ಕರ್ಮಫಲತ್ಯಾಗವೇ ಚಿತ್ತಶುದ್ಧಿಯಮೂಲಕ ಜ್ಞಾನಕ್ಕೆ ಕಾರಣವಾಗುತ್ತದೆ; ಆಮೂಲಕ ಮುಕ್ತಿಗೂ ಕಾರಣವಾಗುತ್ತದೆ.

5. ಜೀವನ್ಮುಕ್ತಿಯೇ ಮುಖ್ಯಮುಕ್ತಿಯೆಂದು ಭಾವ. ಸತ್ತಬಳಿಕ ಬ್ರಹ್ಮವನ್ನು ಸೇರುವದೆಂಬ ವಿದೇಹಕೈವಲ್ಯವು ಗೌಣವೆಂಬುದಕ್ಕೆ ಬೃ. ಭಾ. ೪-೪-೬ ನೋಡಿ.

6. ಕ. ಭಾ. ೧-೩-೯.

ತ್ತ್ವಶುದ್ಧಿಜನಿತಾ ಬುದ್ಧಿರ್ದರ್ಶಿತಾ । ಸಾಕ್ಷಾತ್ ಸುಕೃತದುಷ್ಕೃತಪ್ರಹಾಣಾದಿ ಹೇತುತ್ವಶ್ರವಣಾತ್ ॥

(ಭಾಷ್ಯಾರ್ಥ)

ಅಥವಾ "ಬುದ್ಧಿಯೋಗಾದ್ಧನಞ್ಜಯ" (೨-೪೯) ಎಂಬ (ಶ್ಲೋಕ)ದಿಂದ ಹಿಡಿದು ಇಲ್ಲಿಯವರೆಗೂ) ಕರ್ಮಯೋಗದಿಂದುಂಟಾದ ಸತ್ತ್ವಶುದ್ಧಿಯಿಂದ ಹುಟ್ಟುವ, ದೃಷ್ಟಾಂತದಲ್ಲಿ ಹೇಳಿದ) ಎಲ್ಲೆಲ್ಲಿಯೂ ಸೇರಿರುವ (ಜಲಾಶಯ)ದಂತಿರುವ, ಪರಮಾರ್ಥದರ್ಶನರೂಪವಾದ ಜ್ಞಾನವನ್ನೇ ತಿಳಿಸಿರುತ್ತದೆ (ಎಂದೂ ಅರ್ಥಮಾಡಬಹುದು), ಏಕೆಂದರೆ ಪುಣ್ಯಪಾಪಗಳನ್ನು ಕಳೆದುಕೊಳ್ಳುವದೇ ಮುಂತಾದದ್ದಕ್ಕೆ ಇದು) ಸಾಕ್ಷಾತ್ತಾಗಿ ಕಾರಣವೆಂದು (ಇಲ್ಲಿ) ಹೇಳಿರುತ್ತದೆ.[1]

## ಜ್ಞಾನಿಯಾಗುವದು ಯಾವಾಗ ?

(ಭಾಷ್ಯ)

೯೬. ಯೋಗಾನುಷ್ಠಾನಜನಿತಸತ್ತ್ವಶುದ್ಧಿಜಾ ಬುದ್ಧಿಃ ಕದಾ ಪ್ರಾಪ್ಸ್ಯತೇ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಯೋಗದ ಅನುಷ್ಠಾನದಿಂದ ಉಂಟಾಗುವ ಸತ್ತ್ವಶುದ್ಧಿಯಿಂದ ಹುಟ್ಟುವ ಜ್ಞಾನವು ಯಾವಾಗ ಸಿಕ್ಕುವದು ? ಎಂದರೆ ಹೇಳುತ್ತೇನೆ.

**ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ ।**
**ತದಾ ಗನ್ತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ ॥ ೫೨ ॥**

೫೨. ಯಾವಾಗ ನಿನ್ನ ಬುದ್ಧಿಯು ಮೋಹಕಲಿಲವನ್ನು ದಾಟುವದೋ ಆಗ ಮುಂದೆ ಕೇಳಬೇಕಾದದ್ದರ ವಿಷಯದಲ್ಲಿಯೂ ಹಿಂದೆ ಕೇಳಿದ್ದರ ವಿಷಯದಲ್ಲಿಯೂ ನಿರ್ವೇದವನ್ನು ಪಡೆಯುವೆ

(ಭಾಷ್ಯ)

೯೭. ಯದಾ ಯಸ್ಮಿನ್ ಕಾಲೇ ತೇ ತವ ಮೋಹಕಲಿಲಂ ಮೋಹಾತ್ಮಕಮ್ ಅವಿವೇಕರೂಪಂ ಕಾಲುಷ್ಯಮ್, ಯೇನ ಆತ್ಮಾನಾತ್ಮವಿವೇಕಬೋಧಂ

---

1. ನೇರಾಗಿಯೇ ಪುಣ್ಯಪಾಪಗಳನ್ನು ಕಳೆದುಕೊಳ್ಳುತ್ತಾನೆ ಎಂದು ಹೇಳಿದೆ. ಈ ದೃಷ್ಟಿಯಿಂದ (೪೯) ಕೀಳಾದ ಕರ್ಮವು ಸಾಂಖ್ಯಯೋಗಕ್ಕಿಂತಲೂ ದೂರವಾಗಿರುತ್ತದೆ; ಅದ್ದರಿಂದ ಸಾಂಖ್ಯಬುದ್ಧಿಯಲ್ಲಿ ಶರಣುಹೊಂದು. (೫೦) ಸಾಂಖ್ಯಬುದ್ಧಿಯುಳ್ಳವರು ಪುಣ್ಯಪಾಪಗಳನ್ನು ಮೀರುತ್ತಾರೆ. (೫೧) ಸಾಂಖ್ಯಬುದ್ಧಿಯುಳ್ಳವರು ಕರ್ಮಫಲವನ್ನು ಬಿಟ್ಟು ಜನ್ಮದಿಂದ ಬಿಡುಗಡೆಯಾಗಿ ಕೈವಲ್ಯವನ್ನು ಪಡೆಯುವರು—ಎಂದು ಶ್ಲೋಕಗಳಿಗೆ ಅರ್ಥವನ್ನು ಮಾಡಿಕೊಳ್ಳಬೇಕು.

ಕಲಿಷೀಕೃತ್ಯ ವಿಷಯಂ ಪ್ರತಿ ಅನ್ತಃಕರಣಂ ಪ್ರವರ್ತತೇ ತತ್ ತವ ಬುದ್ಧಿಃ ವ್ಯತಿತರಿಷ್ಯತಿ ವ್ಯತಿಕ್ರಮಿಷ್ಯತಿ ಶುದ್ಧಭಾವಮ್ [1] ಆಪತ್ಸ್ಯತೇ ಇತ್ಯರ್ಥಃ। ತದಾ ತಸ್ಮಿನ್ ಕಾಲೇ ಗನ್ತಾಸಿ ಪ್ರಾಪ್ಸ್ಯಸಿ ನಿರ್ವೇದಂ ವೈರಾಗ್ಯಂ ಶ್ರೋತವ್ಯಸ್ಯ ಶ್ರುತಸ್ಯ ಚ। ತದಾ ಶ್ರೋತವ್ಯಂ ಶ್ರುತಂ ಚ ತೇ ನಿಷ್ಫಲಂ ಪ್ರತಿಭಾತಿ [2] ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಯಾವಾಗ ಯಾವ ಕಾಲದಲ್ಲಿ ನಿನ್ನ (ತೇ ತವ) ಮೋಹಕಲಿಲವನ್ನು ಎಂದರೆ ಮೋಹರೂಪವಾದ ಅವಿವೇಕವೆಂಬ ಕಾಲುಷ್ಯವನ್ನು, ಯಾವದು (ಇರುವ)ದರಿಂದ ಆತ್ಮಾನಾತ್ಮವಿವೇಕ(ರೂಪವಾದ) ಜ್ಞಾನವನ್ನು [3] ಕದಡಿ ವಿಷಯದಕಡೆಗೇ ಹರಿಯುವದೋ ಆ (ಕಾಲುಷ್ಯವನ್ನು) ನಿನ್ನ ಬುದ್ಧಿಯು ದಾಟುವದೋ ಮೀರುವದೋ ಶುದ್ಧಸ್ವರೂಪವನ್ನು [4] ಹೊಂದುವದೋ ಎಂದರ್ಥ. ಆಗ ಆಕಾಲದಲ್ಲಿ ಮುಂದೆ ಕೇಳಬೇಕಾದದ್ದರ ವಿಷಯದಲ್ಲಿಯೂ ಹಿಂದೆ ಕೇಳಿದ್ದರ ವಿಷಯದಲ್ಲಿಯೂ ನಿರ್ವೇದವನ್ನು ಎಂದರೆ ವೈರಾಗ್ಯವನ್ನು ಪಡೆಯುವೆ, ಹೊಂದುವೆ ಆಗ ಮುಂದೆ ಕೇಳಬೇಕಾದದ್ದು ಹಿಂದೆ ಕೇಳಿದ್ದೂ ನಿನಗೆ ನಿಷ್ಫಲವಾಗಿ ತೋರುತ್ತದೆ ಎಂದು ಅಭಿಪ್ರಾಯ [5]

(ಭಾಷ್ಯ)

೯೮. ಮೋಹಕಲಿಲಾತ್ಯಯದ್ವಾರೇಣ ಲಬ್ಧಾತ್ಮವಿವೇಕಜಪ್ರಜ್ಞಃ ಕರ್ಮಯೋಗಜಂ ಫಲಂ ಪರಮಾರ್ಥಯೋಗಮ್ ಅವಾಪ್ಸ್ಯಸಿ ಇತಿ (ಚೇತ್), ತತ್ ಶೃಣು—

(ಭಾಷ್ಯಾರ್ಥ)

ಮೋಹವೆಂಬ ಕಲ್ಮಷವನ್ನು ಮೀರುವದರ ಮೂಲಕ ಆತ್ಮವಿವೇಕದಿಂದುಂಟಾದ ಪ್ರಜ್ಞೆಯನ್ನು ಪಡೆದುಕೊಂಡು ಕರ್ಮಯೋಗದ ಫಲವಾದ ಪರಮಾರ್ಥಯೋಗವನ್ನು ಯಾವಾಗ ಪಡೆದುಕೊಳ್ಳುವೆ ಎಂದರೆ ಅದನ್ನು ಕೇಳು :—

---

1. 'ಶುದ್ಧಿಭಾವಮ್' ನಿ॥, 'ಅತಿಶುದ್ಧಭಾವಮ್' ವಾ॥ ಅ॥
2. 'ಪ್ರತಿಪದ್ಯತೇ' ನಿ॥ ಅ॥
3. ಇಲ್ಲಿ ಆತ್ಮಾನಾತ್ಮವಿವೇಕವೆಂದರೆ ಆತ್ಮನೊಬ್ಬನೇ ಸತ್ಯ, ಅನಾತ್ಮವು ಬರಿಯ ತೋರಿಕೆ ಎಂಬ ಸದಸದ್ವಿವೇಕವು ; ಇದರಂತೆ ಅವಿವೇಕವೆಂದರೆ ಆತ್ಮಾನಾತ್ಮಗಳನ್ನು ಕಲೆಬೆರಕೆ ಮಾಡಿಕೊಳ್ಳುವ ತಪ್ಪುತಿಳಿವಳಿಕೆ.
4. ಅತಿಶುದ್ಧಭಾವಮ್ ಎಂಬ ವಾ॥ ಪಾಠದಲ್ಲಿ ಬಹು ಶುದ್ಧಸ್ವರೂಪವನ್ನು ಎಂದರ್ಥ.
5. ಆಗ ಫಲವಿಷಯಕವಾದ ಶಾಸ್ತ್ರವಚನವನ್ನು ಕೇಳುವದಕ್ಕೆ ಮನಸ್ಸು ಒಲಿಯುವದಿಲ್ಲ ಎಂದು ಅರ್ಥ.

**ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ।**
**ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥ ೫೩ ॥**

೫೩. ಶ್ರುತಿವಿಪ್ರತಿಪನ್ನವಾಗಿರುವ ನಿನ್ನ ಬುದ್ಧಿಯು ಯಾವಾಗ ಸಮಾಧಿಯಲ್ಲಿ ನಿಶ್ಚಲವಾಗಿ ಅಲುಗಾಡದೆ ನಿಂತುಕೊಳ್ಳುವದೋ ಆಗ (ಈ) ಯೋಗವನ್ನು ಪಡೆಯುವೆ.

(ಭಾಷ್ಯ)

೯೯. ಶ್ರುತಿವಿಪ್ರತಿಪನ್ನಾ ಅನೇಕಸಾಧ್ಯಸಾಧನಸಂಬನ್ಧಪ್ರಕಾಶನಶ್ರುತಿಭಿಃ ಶ್ರವಣೈಃ [1] ವಿಪ್ರತಿಪನ್ನಾ ನಾನಾಪ್ರತಿಪನ್ನಾ ವಿಕ್ಷಿಪ್ತಾ ಸತೀ ತೇ ತವ ಬುದ್ಧಿಃ ಯದಾ ಯಸ್ಮಿನ್ ಕಾಲೇ ಸ್ಥಾಸ್ಯತಿ ಸ್ಥಿರೀಭೂತಾ ಭವಿಷ್ಯತಿ ನಿಶ್ಚಲಾ ವಿಕ್ಷೇಪ ಚಲನವರ್ಜಿತಾ ಸತೀ ಸಮಾಧೌ ಸಮಾಧೀಯತೇ ಚಿತ್ತಮ್ ಅಸ್ಮಿನ್ ಇತಿ ಸಮಾಧಿಃ ಆತ್ಮಾ ತಸ್ಮಿನ್ ಆತ್ಮನಿ ಇತ್ಯೇತತ್। ಅಚಲಾ[2] ತತ್ರಾಪಿ ವಿಕಲ್ಪವರ್ಜಿತಾ ಇತ್ಯೇತತ್। ಬುದ್ಧಿಃ ಅನ್ತಃಕರಣಮ್ ತದಾ ತಸ್ಮಿನ್ ಕಾಲೇ ಯೋಗಮ್ ಅವಾಪ್ಸ್ಯಸಿ ವಿವೇಕಪ್ರಜ್ಞಾಂ ಸಮಾಧಿಂ ಪ್ರಾಪ್ಸ್ಯಸಿ ॥

(ಭಾಷ್ಯಾರ್ಥ)

ಶ್ರುತಿವಿಪ್ರತಿಪನ್ನವಾಗಿರುವ ಅನೇಕವಿಧವಾದ ಸಾಧ್ಯಸಾಧನಗಳ ಸಂಬಂಧವನ್ನು ಬೆಳಗುವ ಶ್ರುತಿಗಳಿಂದ [3] ಶ್ರವಣಗಳಿಂದ ವಿಪ್ರತಿಪನ್ನವಾಗಿರುವ ಬಗೆಬಗೆಯಾದ ತಿಳಿವಳಿಕೆಯುಳ್ಳದ್ದಾಗಿ ವಿಕ್ಷಿಪ್ತವಾಗಿರುವ (ತೇ = ತವ) ನಿನ್ನ ಬುದ್ಧಿಯು ಎಂದರೆ ಅಂತಃಕರಣವು ಯಾವಾಗ ಯಾವಕಾಲದಲ್ಲಿ ನಿಶ್ಚಲವಾಗಿ ಎಂದರೆ ವಿಕ್ಷೇಪವೆಂಬ ಚಲನೆಯಿಲ್ಲದ್ದಾಗಿ [4] ಸಮಾಧಿಯಲ್ಲಿ—ಆತ್ಮನಲ್ಲಿ ಚಿತ್ತವನ್ನು (ಇಟ್ಟರೆ ಅದು) ಸಮಾಧಾನವನ್ನು ಹೊಂದುವದಾದ್ದರಿಂದ (ಅವನಿಗೆ) **ಸಮಾಧಿಯೆಂದು** ಹೆಸರು. ಆ ಸಮಾಧಿಯಲ್ಲಿ ಎಂದರೆ - ಆತ್ಮನಲ್ಲಿ ಎಂದರ್ಥ. ಅಚಲವಾಗಿ

---

1. "ಶ್ರವಣೈಃ ಪ್ರವೃತ್ತಿನಿವೃತ್ತಿಲಕ್ಷಣೈಃ" ಎಂಬ ಪಾಠವು ಮ॥ ಮೈ॥ ವಾ॥ ಪಾಠಗಳಲ್ಲಿದ್ದರೂ ಪ್ರಕೃತಕ್ಕೆ ಹೊಂದುವದಿಲ್ಲ.

2. "ಸಾಪಿ ಅಚಲಾ" ಮೈ॥ ಮ॥

3. ಸಾಧನವೆಂದರೆ ಜ್ಯೋತಿಷ್ಟೋಮಾದಿಗಳು, ಸಾಧ್ಯವೆಂದರೆ ಸ್ವರ್ಗಾದಿಗಳು. ಮುಖ್ಯವಾಗಿ ಇಲ್ಲಿ ಕಾಮ್ಯಕರ್ಮಗಳನ್ನು ವಿಕ್ಷೇಪಕಾರಣವಾಗಿ ಹೇಳಿದೆ. ಮನುಷ್ಯಲೋಕ, ಪಿತೃಲೋಕ, ದೇವಲೋಕ—ಎಂಬ ಫಲಗಳಿಗೆ ಸಾಧನಗಳನ್ನು ಹೇಳುವ ಶ್ರುತಿಗಳಿಂದ ವಿಕ್ಷಿಪ್ತವಾಗಿರುವ ಬುದ್ಧಿಯು ಆತ್ಮನಲ್ಲಿಯೇ ನಿಲ್ಲಬೇಕೆಂದು ಅರ್ಥಮಾಡಿದರೆ ಹೆಚ್ಚು ಹೊಂದುತ್ತದೆ.

4. ವಿಕ್ಷೇಪವೆಂದರೆ ಅನಾತ್ಮದ ಕಡೆಗೆ ಹರಿಯುವದು.

ಎಂದರೆ ಅಲ್ಲಿಯೂ ವಿಕಲ್ಪಗಳು ಇಲ್ಲದೆ [1] (ಇರುವದೋ) ಎಂದರ್ಥ. ಆಗ ಆಕಾಲದಲ್ಲಿ **ಯೋಗವನ್ನು** ಎಂದರೆ ವಿವೇಕಪ್ರಜ್ಞೆಯೆಂಬ **ಸಮಾಧಿಯನ್ನು** [2] ಪಡೆಯುವೆ. **ಅರ್ಜುನ ಉವಾಚ**—

(ಭಾಷ್ಯ)

೧೦೦. ಪ್ರಶ್ನಬೀಜಂ ಪ್ರತಿಲಭ್ಯ ಲಬ್ಧಸಮಾಧಿಪ್ರಜ್ಞಸ್ಯ ಲಕ್ಷಣಬುಭುತ್ಸಯಾ ಅರ್ಜುನ ಉವಾಚ—

(ಭಾಷ್ಯಾರ್ಥ)

ಪ್ರಶ್ನೆಗೆ ಕಾರಣವು ಸಿಕ್ಕಿದ್ದರಿಂದ ಸಮಾಧಿಪ್ರಜ್ಞೆಯನ್ನು ಪಡೆದುಕೊಂಡಿರುವಾತನ ಲಕ್ಷಣವನ್ನು ತಿಳಿದುಕೊಳ್ಳಬೇಕೆಂದು ಅರ್ಜುನನು ಹೀಗೆಂದು ಕೇಳಿದನು:-

**ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ ।**
**ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಮ್ ॥ ೫೪ ॥**

೫೪. ಅರ್ಜುನನಿಂತೆಂದನು : ಎಲೈ ಕೇಶವನೆ, ಸಮಾಧಿಯಲ್ಲಿರುವ ಸ್ಥಿತಪ್ರಜ್ಞನ ಭಾಷೆ ಯಾವದು? ಸ್ಥಿತಪ್ರಜ್ಞನು ಹೇಗೆ ಕೂತಿರುವನು, ಹೇಗೆ ನಡೆಯುವನು?

(ಭಾಷ್ಯ)

೧೦೧. ಸ್ಥಿತಾ ಪ್ರತಿಷ್ಠಿತಾ 'ಅಹಮಸ್ಮಿ ಪರಂ ಬ್ರಹ್ಮ' ಇತಿ ಪ್ರಜ್ಞಾ, ಯಸ್ಯ ಸಃ ಸ್ಥಿತಪ್ರಜ್ಞಃ । ತಸ್ಯ ಕಾ ಭಾಷಾ ? (ಕಿಂ) [3] ಭಾಷಣಂ ವಚನಮ್ ? ಅಸೌ ಕಥಮ್ ಪರೈಃ ಭಾಷ್ಯತೇ ? ಸಮಾಧಿಸ್ಥಸ್ಯ ಸಮಾಧೌ ಸ್ಥಿತಸ್ಯ ಹೇ ಕೇಶವ? ಸ್ಥಿತಧೀಃ ಸ್ಥಿತಪ್ರಜ್ಞಃ ಸ್ವಯಂ ವಾ ಕಿಂ ಪ್ರಭಾಷೇತ ? ಕಿಮ್ ಆಸೀತ, ವ್ರಜೇತ ಕಿಮ್ ? ಆಸನಂ ವ್ರಜನಂ ವಾ ತಸ್ಯ ಕಥಮ್ ಇತ್ಯರ್ಥಃ । ಸ್ಥಿತಪ್ರಜ್ಞಸ್ಯ ಲಕ್ಷಣಮ್ ಅನೇನ ಶ್ಲೋಕೇನ ಪೃಚ್ಛ್ಯತೇ [4] ॥ ೫೪ ॥

---

1 ಅನಾತ್ಮವನ್ನು ಬಿಟ್ಟು ಆತ್ಮನಲ್ಲಿ ನೆಲೆನಿಂತರೂ ಆತ್ಮನ ಸ್ವರೂಪವು ಹಾಗೆ, ಹೀಗೆ ಎಂದು ವಿಕಲ್ಪಿಸುತ್ತಿರಬಹುದಷ್ಟೆ; ಅಂಥ ವಿಕಲ್ಪವೂ ಇರಬಾರದೆಂಬುದನ್ನು ಅಚಲಾ ಎಂಬ ವಿಶೇಷಣವು ಹೇಳುತ್ತದೆ ಎಂದು ಭಾವ.

2. ಇಲ್ಲಿ ಹೇಳಿರುವದು ಯೋಗಶಾಸ್ತ್ರದಲ್ಲಿ ಹೇಳಿರುವ ಚಿತ್ತವೃತ್ತಿನಿರೋಧರೂಪವಾದ ಸಮಾಧಿಯಲ್ಲ; ಪರಮಾರ್ಥಯೋಗವಾದ ಆತ್ಮದರ್ಶನವು ಇದರಿಂದಲೇ ಮನಸ್ಸು ಸಮಾಧಾನವನ್ನು ಹೊಂದುವದರಿಂದ ಇದಕ್ಕೆ ಸಮಾಧಿಯೆಂದು ಹೆಸರು ಈ ಸಮಾಧಿಯಲ್ಲಿ ಚಿತ್ತವು ಆತ್ಮನಲ್ಲಿ ನಿಲ್ಲುವದರಿಂದ ಆತ್ಮನಿಗೂ ಸಮಾಧಿಯೆಂಬ ಗೌಣನಾಮ.

3 ಈ ಮಾತು ಮೈ॥ ಮ॥ ಪಾಠಗಳಲ್ಲಿಲ್ಲ.

4. 'ಪೃಚ್ಛತಿ' ಮೈ॥ ಮ॥ ನಿ॥

(ಭಾಷ್ಯಾರ್ಥ)

ಎಲೈ ಕೇಶವನೆ, (ಸ್ಥಿತಪ್ರಜ್ಞನ ಭಾಷೆಯಾವದು ?) "ನಾನು ಪರಬ್ರಹ್ಮವಾಗಿರುತ್ತೇನೆ" ಎಂಬ ಪ್ರಜ್ಞೆಯು ಯಾವನಿಗೆ ನಿಲುಗಡೆಯನ್ನು ಹೊಂದಿರುವದೋ ಅವನು **ಸ್ಥಿತಪ್ರಜ್ಞನು.**[1] ಅವನ ಭಾಷೆಯಾವದು ? ಭಾಷಣವು ಎಂದರೆ ಮಾತು ಯಾವದು? ಸಮಾಧಿಯಲ್ಲಿರುವ ಸಮಾಧಿಯಲ್ಲಿ ನಿಂತಿರುವ[2] ಆತನನ್ನು ಮತ್ತೊಬ್ಬರು ಏನೆಂದು ಹೇಳಿಕೊಳ್ಳುತ್ತಾರೆ? ಸ್ಥಿತಧೀಃ ಎಂದರೆ (ಆ) ಸ್ಥಿತಪ್ರಜ್ಞನು ತಾನಾದರೂ ಏನೆಂದು ಹೇಳುವನು? ಏನೆಂದು ಕೂತಿರುವನು, ಏನೆಂದು ನಡೆಯುವನು ? ಆತನ ಇರವು, ನಡೆ–(ಇವು) ಹೇಗಿರುವವು[3] ?–ಎಂದರ್ಥ. ಈ ಶ್ಲೋಕದಲ್ಲಿ ಸ್ಥಿತಪ್ರಜ್ಞನ ಲಕ್ಷಣವನ್ನು ಕೇಳಿರುತ್ತದೆ.

(ಭಾಷ್ಯ)

೧೦೨. ಯೋ ಹಿ ಆದಿತ ಏವ ಸಂನ್ಯಸ್ಯ ಕರ್ಮಾಣಿ ಜ್ಞಾನಯೋಗನಿಷ್ಠಾಯಾಂ ಪ್ರವೃತ್ತಃ, ಯಶ್ಚ ಕರ್ಮಯೋಗೇನ, ತಯೋಃ[4] ಪ್ರಜಹಾತಿ ಇತ್ಯಾರಭ್ಯ ಅಧ್ಯಾಯಪರಿಸಮಾಪ್ತಿಪರ್ಯನ್ತಂ[5] ಸ್ಥಿತಪ್ರಜ್ಞಲಕ್ಷಣಂ ಸಾಧನಂ ಚ ಉಪದಿಶ್ಯತೇ । ಸರ್ವತ್ರೈವ ಹಿ ಅಧ್ಯಾತ್ಮಶಾಸ್ತ್ರೇ ಕೃತಾರ್ಥಲಕ್ಷಣಾನಿ ಯಾನಿ ತಾನ್ಯೇವ ಸಾಧನಾನಿ ಉಪದಿಶ್ಯನ್ತೇ । ಯತ್ನಸಾಧ್ಯತ್ವಾತ್ । ಯಾನಿ ಯತ್ನಸಾಧ್ಯಾನಿ ಸಾಧನಾನಿ ಲಕ್ಷಣಾನಿ ಚ ಭವನ್ತಿ ತಾನಿ ಶ್ರೀಭಗವಾನ್ ಉವಾಚ––

(ಭಾಷ್ಯಾರ್ಥ)

ಯಾವನು ಮೊದಲಿನಿಂದಲೇ ಕರ್ಮಗಳನ್ನು ಸಂನ್ಯಾಸಮಾಡಿ ಜ್ಞಾನಯೋಗದ ನಿಷ್ಠೆಯಲ್ಲಿ ಪ್ರವರ್ತಿಸಿರುವನೋ ಯಾವನು ಕರ್ಮಯೋಗದಿಂದ (ಕರ್ಮಸಂನ್ಯಾಸ

---

1. ಸ್ಥಿತಪ್ರಜ್ಞನೆಂದರೆ ಸಮಾಧಿಯನ್ನು ಹೊಂದಿದ ಯೋಗಿ ಎಂದು ಕೆಲವರು ಹೇಳುವದು ಭಾಷ್ಯಸಮ್ಮತವಲ್ಲ

2 ಪರಮಾರ್ಥಯೋಗದಲ್ಲಿ ಅಥವಾ ಆತ್ಮನಲ್ಲಿ.

3 ಸ್ಥಿತಪ್ರಜ್ಞನ ದೃಷ್ಟಿಯು ಪ್ರಪಂಚವ್ಯವಹಾರದಲ್ಲಿ ಹೇಗಿರುವದು? ಎಂದು ಪ್ರಶ್ನೆ. ಮಿಕ್ಕವರ ದೃಷ್ಟಿಯಲ್ಲಿ ಸ್ಥಿತಪ್ರಜ್ಞನು ಹೇಗಿರುವನು ?– ಎಂದು ಮೊದಲು ಕೇಳಿರುವದು ಸ್ಥಿತಪ್ರಜ್ಞನೆಂಬುದನ್ನು ಮುಮುಕ್ಷುಗಳು ಹೇಗೆ ಗುರುತಿಸಬೇಕು ಎಂಬ ಅಭಿಪ್ರಾಯದಿಂದ.

4. "ತಯೋಃ ಸ್ಥಿತಪ್ರಜ್ಞಸ್ಯ" ಎಂಬ ನಿ॥ ಅ॥ ಪಾಠವು ಸರಿಯಲ್ಲ

5. "ಆ ಅಧ್ಯಾಯಪರಿಸಮಾಪ್ತೇಃ" ಮು॥ ಮೈ॥

ವನ್ನು ಮಾಡಿ ಜ್ಞಾನನಿಷ್ಠೆಯಲ್ಲಿ ಪ್ರವರ್ತಿಸಿರುವನೋ)[1] ಅವರಿಬ್ಬರಿಗೂ ಸ್ಥಿತ ಪ್ರಜ್ಞನ ಲಕ್ಷಣವನ್ನೂ ಸಾಧನವನ್ನೂ[2] "ಪ್ರಜಹಾತಿ" (೨-೫೫) ಎಂಬುದರಿಂದ (ಈ) ಅಧ್ಯಾಯವು ಮುಗಿಯುವವರೆಗೂ ಉಪದೇಶಿಸಿರುತ್ತದೆ. ಅದು ಹೇಗೆ(ಗೊತ್ತೆಂದರೆ) **ಅಧ್ಯಾತ್ಮಶಾಸ್ತ್ರದಲ್ಲೆಲ್ಲ ಯಾವವು ಕೃತಾರ್ಥನಾದವನಿಗೆ ಲಕ್ಷಣಗಳೆನಿಸುವವೋ ಅವನ್ನೇ (ಮುಮುಕ್ಷುಗಳಿಗೆ) ಸಾಧನಗಳಾಗಿ ಉಪದೇಶಮಾಡಿರುತ್ತದೆ. ಏಕೆಂದರೆ ಅವು ಪ್ರಯತ್ನದಿಂದ ಸಾಧಿಸಿಕೊಳ್ಳತಕ್ಕವುಗಳಾಗಿರುತ್ತವೆ.**[3] ಯಾವವು (ಹೀಗೆ) ಯತ್ನದಿಂದ ಸಾಧಿಸಿಕೊಳ್ಳತಕ್ಕ ಸಾಧನಗಳೂ (ಕೃತಾರ್ಥನಾದವನ) ಲಕ್ಷಣಗಳೂ ಆಗಿರುವವೋ ಅಂಥವುಗಳನ್ನು ಶ್ರೀ ಭಗವಂತನು (ಇಲ್ಲಿ) ಹೇಳಿರುತ್ತಾನೆ.—

ಶ್ರೀ ಭಗವಾನುವಾಚ—

**ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್**
**ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥ ೫೫ ॥**

೫೫. ಶ್ರೀ ಭಗವಂತನಿಂತೆಂದನು ; ಎಲೈ ಪಾರ್ಥನೆ, ಮನಸ್ಸಿನಲ್ಲಿರುವ ಕಾಮಗಳನ್ನೆಲ್ಲ ಬಿಟ್ಟು ಯಾವಾಗ ಆತ್ಮನಲ್ಲಿಯೇ ಆತ್ಮನಿಂದಲೇ ತುಷ್ಟನಾಗಿರುವನೋ ಆಗ ಸ್ಥಿತಪ್ರಜ್ಞನೆನಿಸುವನು.

(ಭಾಷ್ಯ)

೧೦೩. ಪ್ರಜಹಾತಿ ಪ್ರಕರ್ಷೇಣ ಜಹಾತಿ ಪರಿತ್ಯಜತಿ ಯದಾ ಯಸ್ಮಿನ್ ಕಾಲೇ ಕಾಮಾನ್ ಇಚ್ಛಾಭೇದಾನ್ ಸರ್ವಾನ್ ಸಮಸ್ತಾನ್ ಹೇ ಪಾರ್ಥ ಮನೋಗತಾನ್ ಮನಸಿ ಪ್ರವಿಷ್ಟಾನ್ ಹೃದಿ ಪ್ರವಿಷ್ಟಾನ್ । ಸರ್ವಕಾಮಪರಿತ್ಯಾಗೇ ತುಷ್ಟಿಕಾರಣಾಭಾವಾತ್ ಶರೀರಧಾರಣನಿಮಿತ್ತಶೇಷೇ ಚ ಸತಿ ಉನ್ಮತ್ತಪ್ರಮತ್ತಸ್ಯೇವ ಪ್ರವೃತ್ತಿಃ ಪ್ರಾಪ್ತಾ ಇತ್ಯತಃ ಉಚ್ಯತೇ—ಆತ್ಮನ್ಯೇವ ಪ್ರತ್ಯಗಾತ್ಮಸ್ವರೂಪೇ ಏವ ಆತ್ಮನಾ ಸ್ವೇನೈವ ಬಾಹ್ಯಲಾಭನಿರಪೇಕ್ಷಃ ತುಷ್ಟಃ ಪರಮಾರ್ಥದರ್ಶನಾಮೃತರಸ

---

1 'ಕರ್ಮಯೋಗೇನ' ಎಂಬಲ್ಲಿರುವ ತೃತೀಯಾವಿಭಕ್ತಿಯು ಈ ಅರ್ಥಕ್ಕೇ ಹೆಚ್ಚು ಹೊಂದುತ್ತದೆ. ಕರ್ಮಯೋಗದಲ್ಲಿ ಪ್ರವೃತ್ತನಾಗಿರುವವನಿಗೆ ಈ ಸಾಧನಗಳನ್ನು ಹೇಳಿದೆ ಎಂಬುದು ಯುಕ್ತವಲ್ಲ

2. ಸ್ಥಿತಪ್ರಜ್ಞನ ಲಕ್ಷಣವನ್ನು ತಿಳಿಸುವ ಮೂಲಕ ಸಾಧನವನ್ನು ಉಪದೇಶಿಸಿರುತ್ತದೆ ಎಂದರ್ಥ.

3. ಈ ಪ್ರಯತ್ನವನ್ನೇ ಜ್ಞಾನಾಭ್ಯಾಸವೆಂದು ಕರೆಯುತ್ತಾರೆ.

ಲಾಭೇನ ಅನ್ಯಸ್ಮಾತ್ ಅಲಂಪ್ರತ್ಯಯವಾನ್ ಸ್ಥಿತಂಪ್ರಜ್ಞಃ ಸ್ಥಿತಾ ಪ್ರತಿಷ್ಠಿತಾ ಆತ್ಮಾನಾತ್ಮವಿವೇಕಜಾ ಪ್ರಜ್ಞಾ ಯಸ್ಯ ಸಃ ಸ್ಥಿತಪ್ರಜ್ಞಃ ವಿದ್ವಾನ್ ತದಾ ಉಚ್ಯತೇ । ತ್ಯಕ್ತಪುತ್ರವಿತ್ತಲೋಕೈಷಣಃ ಸಂನ್ಯಾಸೀ ಆತ್ಮಾರಾಮಃ ಆತ್ಮಕ್ರೀಡಃ ಸ್ಥಿತಪ್ರಜ್ಞಃ ಇತ್ಯರ್ಥಃ ॥

(ಭಾಷ್ಯಾರ್ಥ)

ಎಲೈ ಪಾರ್ಥನೆ, ಮನೋಗತವಾದ ಮನಸ್ಸಿನಲ್ಲಿ ಹೊಕ್ಕಿರುವ ಹೃದಯದಲ್ಲಿ ಸೇರಿಕೊಂಡಿರುವ[1] ಎಲ್ಲಾ ಕಾಮಗಳನ್ನೂ ಎಲ್ಲಾ ಬಗೆಬಗೆಯ ಇಚ್ಛೆಗಳನ್ನೂ ಯಾವಾಗ ಯಾವ ಕಾಲದಲ್ಲಿ (ಪ್ರ) ಸಂಪೂರ್ಣವಾಗಿ[2] (ಜಹಾತಿ) ಬಿಟ್ಟುಬಿಡುವನೋ ಕಾಮಗಳನ್ನೆಲ್ಲ ಬಿಟ್ಟುಬಿಟ್ಟರೆ ತೃಪ್ತಿಗೆ ಕಾರಣವಿರುವದಿಲ್ಲವಾಗಿ ಶರೀರವನ್ನು ಧರಿಸಿರುವದಕ್ಕೆ ನಿಮಿತ್ತವಾದ (ಪ್ರಾರಬ್ಧ ಕರ್ಮವು) ಇನ್ನೂ ಉಳಿದಿದ್ದರೆ ಹುಚ್ಚನಂತೆಯೂ ಮದವೇರಿದವನಂತೆಯೂ ಪ್ರವರ್ತಿಸುತ್ತಾನೆಂದಾಗುವದು, ಅದಕ್ಕೆ (ಪರಿಹಾರವನ್ನು) ಹೇಳುತ್ತಾನೆ: ಆತ್ಮನಲ್ಲಿಯೇ ಎಂದರೆ ಪ್ರತ್ಯಗಾತ್ಮಸ್ವರೂಪದಲ್ಲಿಯೇ[3] ಆತ್ಮನಿಂದ ಎಂದರೆ ತನ್ನಿಂದಲೇ—ಹೊರಗಿನ ವಸ್ತುವನ್ನು ಪಡೆದುಕೊಳ್ಳುವ ಅಪೇಕ್ಷೆಯಿಲ್ಲದೆಯೇ[4] ತುಷ್ಟನಾಗಿರುವನೋ, ಪರಮಾರ್ಥವನ್ನು ಕಂಡುಕೊಂಡದ್ದೆಂಬ ಅಮೃತರಸವು ಸಿಕ್ಕಿರುವದರಿಂದ[5] ಉಳಿದದ್ದೇನೂ (ತನಗೆ) ಬೇಡವೆಂಬ ಭಾವವನ್ನು ಯಾವಾಗ ಹೊಂದಿರುವನೋ ಆಗ ಸ್ಥಿತಪ್ರಜ್ಞನು -- ಯಾವನಿಗೆ ಆತ್ಮಾನಾತ್ಮಗಳ ವಿವೇಕದಿಂದ ಉಂಟಾದ ಪ್ರಜ್ಞೆಯು ನಿಂತಿರುವದೋ ನೆಲೆನಿಂತಿರುವದೋ ಅಂಥವನು **ಸ್ಥಿತಪ್ರಜ್ಞನು**—ಜ್ಞಾನಿಯು ಎನಿಸಿಕೊಳ್ಳುತ್ತಾನೆ ಪುತ್ರ, ವಿತ್ತ, ಲೋಕ—ಎಂಬ (ಮೂರು) **ಏಷಣ**ಗಳನ್ನು ತ್ಯಜಿಸಿ[6] ಸಂನ್ಯಾಸಿಯಾಗಿ ಆತ್ಮಾರಾಮನಾಗಿ ಆತ್ಮಕ್ರೀಡನಾಗಿರುವವನೇ[7] ಸ್ಥಿತಪ್ರಜ್ಞನು ಎಂದರ್ಥ.

---

1 ಆತ್ಮನಲ್ಲಿ ಕಾಮಗಳಿರುವದಿಲ್ಲ, ಹೃದಯದಲ್ಲಿಯೇ ಇರುವವು ಕ. ಭಾ ೨-೩-೧೪, ಬೃ. ಭಾ. ೪-೩-೨೨, ೪-೪-೭ನ್ನು ನೋಡಿ

2. ಕೆಲವು ಉತ್ತಮವಾದ ಇಚ್ಛೆಗಳು ಉಳಿದುಕೊಳ್ಳುವವು ಎಂಬ ಮತವು ಈ ವಾಕ್ಯಕ್ಕೆ ವಿರುದ್ಧವೆಂದು ಭಾವ.

3. ಬಾಹ್ಯವಸ್ತುವನ್ನಪೇಕ್ಷಿಸಿ ಆಗುವ ವಿಷಯಾನಂದದ ತತ್ತ್ವವನ್ನು ತೈ ಭಾ. ೨-೮ (ಭಾ ಭಾ ೧೪)ರಲ್ಲಿ ನೋಡಿರಿ

4 ಇದೇ ಪರಮಾತ್ಮನ ಸ್ವರೂಪವು.

5. ತೈ. ಭಾ ೨-೭ (ಭಾ. ಭಾ. ೧೮೫)ರ ಸೂಚನೆ.

6. ಬೃ. ಭಾ ೩-೫-೧.

7. ಛಾ ಭಾ. ೭-೨೫-೨.

**ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।**
**ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥ ೫೬ ॥**

೫೬. ದುಃಖಗಳಲ್ಲಿ ಉದ್ವಿಗ್ನವಾಗದ ಮನಸ್ಸುಳ್ಳವನೂ ಸುಖಗಳಲ್ಲಿ ಸ್ಪೃಹೆ ಇಲ್ಲದವನೂ ವೀತರಾಗಭಯಕ್ರೋಧನಾದವನೂ ಆದ ಮುನಿಯು ಸ್ಥಿತಿಪ್ರಜ್ಞನೆನಿಸುವನು.

(ಭಾಷ್ಯ)

೧೦೪. ಕಿಂಚ ದುಃಖೇಷು ಆಧ್ಯಾತ್ಮಿಕಾದಿಷು ಪ್ರಾಪ್ತೇಷು [1] ಅನುದ್ವಿಗ್ನಂ ನ ಪ್ರಕ್ಷುಭಿತಂ ದುಃಖಪ್ರಾಪ್ತೌ ಮನಃ ಯಸ್ಯ ಸೋಽಯಮ್ ಅನುದ್ವಿಗ್ನಮನಾಃ । ತಥಾ ಸುಖೇಷು ಪ್ರಾಪ್ತೇಷು ವಿಗತಾ ಸ್ಪೃಹಾ ತೃಷ್ಣಾ ಯಸ್ಯ । ನ ಅಗ್ನಿರಿವ ಇನ್ಧನಾದ್ಯಾಧಾನೇ ಸುಖಾನಿ ಅನು ವರ್ಧತೇ ಸ ವಿಗತಸ್ಪೃಹಃ। ವೀತರಾಗಭಯಕ್ರೋಧಃ ರಾಗಶ್ಚ ಭಯಂ ಚ ಕ್ರೋಧಶ್ಚ ವೀತಾಃ ಯಸ್ಮಾತ್ ಸ ವೀತರಾಗಭಯಕ್ರೋಧಃ ಸ್ಥಿತಧೀಃ ಸ್ಥಿತಪ್ರಜ್ಞಃ ಮುನಿಃ ಸಂನ್ಯಾಸೀ (ತದಾ) [2] ಉಚ್ಯತೇ ॥

(ಭಾಷ್ಯಾರ್ಥ)

ಮತ್ತು ಯಾವನು ಆಧ್ಯಾತ್ಮಿಕವೇ ಮುಂತಾದ [3] ದುಃಖಗಳು ಬಂದೊದಗಿದಾಗ ಉದ್ವಿಗ್ನವಾಗದ ಎಂದರೆ ದುಃಖಬಂದಾಗ ಕಳವಳ ಪಡದಿರುವ ಮನಸ್ಸುಳ್ಳವನಾದ್ದರಿಂದ ಅನುದ್ವಿಗ್ನಮನಸ್ಸಿನವನಾಗಿ, ಮತ್ತು ಸುಖಗಳು ಬಂದರೆ ಸ್ಪೃಹೆಯು ಎಂದರೆ ಬಯಕೆಯು ಉಂಟಾಗದವನಾಗಿ, ಕಟ್ಟಿಗೆ ಮುಂತಾದದ್ದನ್ನು ಹಾಕಿದರೆ ಬೆಂಕಿಯು ಹೆಚ್ಚುವಂತೆ (ಯಾವನ ಬಯಕೆಯು) ಸುಖಗಳು ಬಂದಂತೆ ಬೆಳೆಯುತ್ತಿರುವದಿಲ್ಲವೋ ಅಂಥ ವಿಗತಸ್ಪೃಹನಾಗಿ, ವೀತರಾಗಭಯಕ್ರೋಧನಾಗಿ—ಅನುರಾಗವಾಗಲಿ ಅಂಜಿಕೆಯಾಗಲಿ ಸಿಟ್ಟಾಗಲಿ ಇಲ್ಲದಿರುವಾತನು ವೀತರಾಗಭಯಕ್ರೋಧನು; ಅಂಥವನಾಗಿ –ಇರುವ ಮುನಿಯು ಸಂನ್ಯಾಸಿಯು ಸ್ಥಿತಪ್ರಜ್ಞನೆನಿಸಿಕೊಳ್ಳುವನು.

---

1 ಈ ಮಾತು ಮೈ॥ ಪಾಠದಲ್ಲಿ ಬಿಟ್ಟುಹೋಗಿದೆ.

2 ಈ ಮಾತು ಮೂಲದಲ್ಲಿಲ್ಲ, ಭಾಷ್ಯದಲ್ಲಿಯ ಶ್ಲೋಕದಲ್ಲಿದ್ದ ಮಾತನ್ನು ಬರೆದವರೇ ಸೇರಿಸಿಕೊಂಡಿರಬಹುದೆಂದು ತೋರುತ್ತದೆ

3 ಆಧ್ಯಾತ್ಮಿಕ—ದೇಹದಲ್ಲಾಗುವ ದುಃಖ, ಆಧಿಭೌತಿಕ-ಹೊರಗಿನ ಪ್ರಾಣಿಗಳಿಂದಗುವ ದುಃಖ, ಆಧಿದೈವಿಕ-ಆಕಸ್ಮಿಕವಾದ ಸಿಡಿಲು ಮುಂತಾದವುಗಳಿಂದಾಗುವ ದುಃಖ ಇವು ಬಂದರೂ ಅವುಗಳು ಅನಾತ್ಮ ಅಸತ್ಯ, ಆತ್ಮನ, ಧರ್ಮವಲ್ಲ ಎಂದು ಉದ್ವೇಗಗೊಳ್ಳದೆ ಇರುತ್ತಾನೆಂದರ್ಥ.

**ಯಃ ಸರ್ವತ್ರಾನಭಿಸ್ನೇಹಸ್ತತ್ತತ್ಪ್ರಾಪ್ಯ ಶುಭಾಶುಭಮ್ ।**
**ನಾಭಿನನ್ದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೫೭ ॥**

೫೭. ಯಾವಾತನು ಎತರಲ್ಲಿಯೂ ಆಸಕ್ತಿಯಿಲ್ಲದೆ ಶುಭವನ್ನಾಗಲಿ ಅಶುಭವನ್ನಾಗಲಿ ಆಯಾ (ವಿಷಯವನ್ನು) ಪಡೆದಾಗ ಅಭಿನಂದನೆಮಾಡದಿರುವನೋ, ದ್ವೇಷಮಾಡದೆಯೂ ಇರುವನೋ, ಆತನ ಪ್ರಜ್ಞೆಯು ನಿಲುಗಡೆಗೆ ಬಂದಿರುವದು

(ಭಾಷ್ಯ)

೧೦೫ ಕಿಂ ಚ ಯಃ ಮುನಿಃ ಸರ್ವತ್ರ ದೇಹಜೀವನಾದಿಷ್ವಪಿ[1] ಅನಭಿಸ್ನೇಹಃ ಅಭಿಸ್ನೇಹವರ್ಜಿತಃ ತತ್ತತ್ ಪ್ರಾಪ್ಯ ಶುಭಾಶುಭಂ ತತ್ತತ್ ಶುಭಮ್ ಅಶುಭಂ ವಾ ಪ್ರಾಪ್ಯ ಲಬ್ಧ್ವಾ ನ ಅಭಿನನ್ದತಿ ನ ದ್ವೇಷ್ಟಿ ಶುಭಂ ಪ್ರಾಪ್ಯ । ನ ತುಷ್ಯತಿ ನ ಹೃಷ್ಯತಿ ಅಶುಭಂ ಪ್ರಾಪ್ಯ ನ ದ್ವೇಷ್ಟಿ ಇತ್ಯರ್ಥಃ । ತಸ್ಯ ಏವಂ ಹರ್ಷವಿಷಾದವರ್ಜಿತಸ್ಯ ವಿವೇಕಜಾ ಪ್ರಜ್ಞಾ ಪ್ರತಿಷ್ಠಿತಾ ಭವತಿ[2] ॥

(ಭಾಷ್ಯಾರ್ಥ)

ಮತ್ತು ಯಾವ ಮುನಿಯು ಎತರಲ್ಲಿಯೂ ಎಂದರೆ ದೇಹವು ಬದುಕಿರುವದು-ಮುಂತಾದ ವಿಷಯದಲ್ಲಿಯೂ ಅನಭಿಸ್ನೇಹನಾಗಿರುವನೋ ಎಂದರೆ ಹೆಚ್ಚಿನ ಆಸಕ್ತಿಯಿಲ್ಲದವನಾಗಿರುವನೋ[3] ಆಯಾ ಶುಭಾಶುಭವನ್ನು ಹೊಂದಿ ಎಂದರೆ ಆಯಾ ಒಳ್ಳೆಯದು ಅಥವಾ ಕೆಟ್ಟದು ಬಂದೊದಗಿದರೆ ಅಭಿನಂದನೆಮಾಡದಿರುವನೋ ದ್ವೇಷವನ್ನು ಮಾಡದೆಯೂ ಇರುವನೋ ಎಂದರೆ, ಒಳ್ಳೆಯದು ಬಂದರೆ ಹಿಗ್ಗದೆಯೂ ಕೆಟ್ಟದ್ದು ಬಂದರೆ ದ್ವೇಷಿಸದೆಯೂ ಇರುವನೋ ಎಂದರ್ಥ. ಆತನ ಎಂದರೆ ಹೀಗೆ ಹರ್ಷವಾಗಲಿ ವಿಷಾದವಾಗಲಿ ಉಂಟಾಗದೆ ಇರುವವನ ವಿವೇಕದಿಂದುಂಟಾದ ಪ್ರಜ್ಞೆಯು ನಿಲುಗಡೆಗೆ ಬಂದಿರುವದು.

---

1 'ಜೀವಿತಾದಿಷ್ವಪಿ' ಆ॥ ನಿ॥

2 'ಭವತಿ' ಎಂಬುದು ಮ॥ ಮೈ॥ ಪಾಠದಲ್ಲಿಲ್ಲ

3 ಬದುಕಿರಬೇಕು ಅಥವಾ ಸಾಯಬೇಕು ಎಂಬುದನ್ನು ಬಯಸದೆ ಇರುವನೋ ಎಂದರ್ಥ.

**ಯದಾ ಸಂಹರತೇ ಚಾಯಂ ಕೂರ್ಮೋಽಙ್ಗಾನೀವ ಸರ್ವಶಃ ।**
**ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೫೮ ॥**

೫೮. ಆಮೆಯು ತನ್ನ ಕೈಕಾಲುಗಳನ್ನು ಎಲ್ಲಾ ಕಡೆಯಿಂದಲೂ ಎಳೆದುಕೊಳ್ಳುವಂತೆ ಯಾವಾಗ ಇವನು ಇಂದ್ರಿಯಗಳನ್ನು ಇಂದ್ರಿಯಾರ್ಥಗಳಿಂದ (ಈಚೆಗೆ) ಎಳೆದುಕೊಳ್ಳುವನೋ (ಆಗ) ಇವನ ಪ್ರಜ್ಞೆಯು ಪ್ರತಿಷ್ಠಿತವಾಗಿರುವದು.

(ಭಾಷ್ಯ)

೧೦೬. ಕಿಂ ಚ ಯದಾ ಸಂಹರತೇ ಸಮ್ಯಕ್ ಉಪಸಂಹರತೇ ಚ ಅಯಂ ಜ್ಞಾನನಿಷ್ಠಾಯಾಂ ಪ್ರವೃತ್ತೋ ಯತಿಃ ಕೂರ್ಮಃ ಅಙ್ಗಾನಿ ಇವ ಯಥಾ ಕೂರ್ಮಃ ಭಯಾತ್ ಸ್ವಾನಿ ಅಙ್ಗಾನಿ ಉಪಸಂಹರತಿ ಸರ್ವಶಃ ಸರ್ವತಃ ಏವಂ ಜ್ಞಾನನಿಷ್ಠಃ ಇನ್ದ್ರಿಯಾಣಿ ಇನ್ದ್ರಿಯಾರ್ಥೇಭ್ಯಃ ಸರ್ವವಿಷಯೇಭ್ಯಃ ಉಪಸಂಹರತೇ । ತಸ್ಯ ಪ್ರಜ್ಞಾ ಪ್ರತಿಷ್ಠಿತಾ ಇತ್ಯುಕ್ತಾರ್ಥಂ ವಾಕ್ಯಮ್ ॥

(ಭಾಷ್ಯಾರ್ಥ)

ಮತ್ತು ಜ್ಞಾನನಿಷ್ಠೆಯಲ್ಲಿ ಪ್ರವರ್ತಿಸಿರುವ ಈ ಯತಿಯು, ಕೂರ್ಮವು ತನ್ನ ಅಂಗಗಳನ್ನು (ಎಳೆದುಕೊಳ್ಳುವಂತೆ) ಹೇಗೆ ಆಮೆಯು ಅಂಜಿಕೆಯಿಂದ ತನ್ನ ಅಂಗಗಳನ್ನು ಎಲ್ಲಾ ಕಡೆಯಿಂದಲೂ ಎಲ್ಲಾ ದಿಕ್ಕಿನಿಂದಲೂ ಒಳಸರಿಸಿಕೊಳ್ಳುವದೋ ಹಾಗೆ ಜ್ಞಾನನಿಷ್ಠನಾಗಿ ಇಂದ್ರಿಯಗಳನ್ನು ಇಂದ್ರಿಯಾರ್ಥಗಳಿಂದ ಎಂದರೆ ಎಲ್ಲಾ ವಿಷಯಗಳಿಂದಲೂ ಯಾವಾಗ ಸಂಹರಿಸಿಕೊಳ್ಳುತ್ತಾನೋ ಎಂದರೆ ಚೆನ್ನಾಗಿ ಒಳಸರಿಸಿಕೊಳ್ಳುತ್ತಾನೋ (ಆಗ) 'ಆತನ ಪ್ರಜ್ಞೆಯು ನಿಲುಗಡೆಗೆ ಬಂದಿರುವದು' ಎಂಬ ವಾಕ್ಯದ ಅರ್ಥವನ್ನು ಹಿಂದಿನ (ಶ್ಲೋಕದ ಭಾಷ್ಯದಲ್ಲಿಯೇ) ಹೇಳಿರುತ್ತದೆ

(ಭಾಷ್ಯ)

೧೦೭. ತತ್ರ ವಿಷಯಾನ್ ಅನಾಹರತಃ ಆತುರಸ್ಯಾಪಿ ಇನ್ದ್ರಿಯಾಣಿ ಕೂರ್ಮಾಙ್ಗಾನೀವ[1] ಸಂಹ್ರಿಯನ್ತೇ ನ ತು ತದ್ವಿಷಯೋ ರಾಗಃ । ಸ ಕಥಂ ಸಂಹ್ರಿಯತೇ ಇತಿ ? ಉಚ್ಯತೇ—

---

1. ಈ ಮಾತು ಮ॥ ಮೈ॥ ಪಾಠಗಳಲ್ಲಿಲ್ಲ; 'ನಿವರ್ತನ್ತೇ ಕೂರ್ಮಾಙ್ಗಾನೀವ ಸಂಹ್ರಿಯನ್ತೇ' ನಿ॥

(ಭಾಷ್ಯಾರ್ಥ)

ಇಲ್ಲಿ ವಿಷಯಗಳನ್ನು ನೇವಿಸದೆ ಇರುವ ರೋಗಿಗೂ ಇಂದ್ರಿಯಗಳು (ಆಮೆಯ ಕಾಲುಗಳಂತೆ) ಒಳಸರಿದುಕೊಳ್ಳುತ್ತವೆ, ಆದರೆ ಅವುಗಳಲ್ಲಿರುವ ಆಸೆಯು ಹೋಗಿರುವದಿಲ್ಲ ಅದು ಒಳಸರಿದುಕೊಳ್ಳುವದು ಹೇಗೆ? ಎಂದರೆ ಹೇಳುತ್ತೇನೆ —

**ವಿಷಯಾ ವಿನಿವರ್ತನ್ತೇ ನಿರಾಹಾರಸ್ಯ ದೇಹಿನಃ।**
**ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥ ೫೯ ॥**

೫೯. ನಿರಾಹಾರನಾದ ದೇಹಿಯನ್ನು ಬಿಟ್ಟು ವಿಷಯಗಳು ಹಿಂತಿರುಗುತ್ತವೆ, ಆದರೆ ರಸವು ಹೋಗಿರುವದಿಲ್ಲ. ಪರ(ವಸ್ತು)ವನ್ನು ಕಂಡುಕೊಂಡರೆ ಈತನ ರಸವೂ ಹೋಗಿಬಿಡುವದು

(ಭಾಷ್ಯ)

೧೦೮. ಯದ್ಯಪಿ ವಿಷಯಾಃ ವಿಷಯೋಪಲಕ್ಷಿತಾನಿ ವಿಷಯಶಬ್ದವಾಚ್ಯಾನಿ ಇನ್ದ್ರಿಯಾಣಿ [1] ನಿರಾಹಾರಸ್ಯ ಅನಾಹ್ರಿಯಮಾಣವಿಷಯಸ್ಯ ಕಾಷ್ಠತಪಸಿ [2] ಸ್ಥಿತಸ್ಯ ಮೂರ್ಖಸ್ಯಾಪಿ ವಿನಿವರ್ತನ್ತೇ ದೇಹಿನಃ ದೇಹವತಃ ರಸವರ್ಜಂ ರಸೋ ರಾಗಃ ವಿಷಯೇಷು ಯಃ ತಂ ವರ್ಜಯಿತ್ವಾ। ರಸಶಬ್ದೋ ರಾಗೇ ಪ್ರಸಿದ್ಧಃ । 'ಸ್ವರಸೇನ ಪ್ರವೃತ್ತಃ', 'ರಸಿಕಃ', 'ರಸಜ್ಞಃ' ಇತ್ಯಾದಿದರ್ಶನಾತ್ । ಸೋಽಪಿ ರಸಃ ರಞ್ಜನಾರೂಪಃ [3] ಸೂಕ್ಷ್ಮಃ ಅಸ್ಯ ಯತೇಃ ಪರಂ ಪರಮಾರ್ಥತತ್ತ್ವಂ ಬ್ರಹ್ಮ ದೃಷ್ಟ್ವಾ ಉಪಲಭ್ಯ 'ಅಹಮೇವ ತತ್' ಇತಿ ವರ್ತಮಾನಸ್ಯ ನಿವರ್ತತೇ ನಿರ್ಬೀಜಂ ವಿಷಯವಿಜ್ಞಾನಂ ಸಂಪದ್ಯತೇ ಇತ್ಯರ್ಥಃ । ನಾಸತಿ ಸಮ್ಯಗ್ದರ್ಶನೇ ರಸಸ್ಯ ಉಚ್ಛೇದಃ। ತಸ್ಮಾತ್ ಸಮ್ಯಗ್ದರ್ಶನಾತ್ಮಿಕಾಯಾಃ ಪ್ರಜ್ಞಾಯಾಃ ಸ್ಥೈರ್ಯಂ ಕರ್ತವ್ಯಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ವಿಷಯಗಳು ಎಂದರೆ ವಿಷಯಗಳಿಂದ ಉಪಲಕ್ಷಿತವಾದ ವಿಷಯಶಬ್ದದಿಂದ ಇಲ್ಲಿ ಹೇಳಿರುವ ಇಂದ್ರಿಯಗಳು. (ಅವು) ನಿರಾಹಾರನಾದವನಿಗೆ ಎಂದರ ವಿಷಯಗಳನ್ನು ನೇವಿಸದೆ ಇರುವಾತನಿಗೆ, ಹೆಚ್ಚಿನ ತಪಸ್ಸಿನಲ್ಲಿರುವ ದೇಹಿಗೆ ಎಂದರೆ ದೇಹಾಭಿಮಾನಿ

---

1. '**ಅಥವಾ ವಿಷಯಾ** ಏವ' ಎಂಬ ಅ॥ ನಿ॥ ಪಾಠವು **ಬೇಕಿಲ್ಲ**
2. "**ಕಷ್ಟೇ** ತಪಸಿ" ಅ॥ ನಿ॥ ವಾ॥
3. "ರಞ್ಜನ" ಅ॥ ನಿ॥

ಯಾದ ಮೂರ್ಖನಿಗೆಕೂಡ ಹಿಂತಿರುಗುತ್ತವೆಯಾದರೂ ರಸವನ್ನು ಬಿಟ್ಟು ವಿಷಯ ದಲ್ಲಿರುವ ರಾಗವಿಷಯವಿರುವದಲ್ಲ, ಅದನ್ನು ಬಿಟ್ಟು (ಹಿಂತಿರುಗುತ್ತವೆ), ರಸವೆಂಬ ಶಬ್ದವು ರಾಗವೆಂಬರ್ಥದಲ್ಲಿ ಪ್ರಸಿದ್ಧವಾಗಿರುತ್ತದೆ, ಏಕೆಂದರೆ 'ಸ್ವರಸವಾಗಿ ಪ್ರವರ್ತಿಸಿರುವನು', 'ರಸಿಕನು', 'ರಸಜ್ಞನು'–ಮುಂತಾದ (ಪ್ರಯೋಗಗಳಲ್ಲಿ ಹಾಗೆಂದು) ಕಂಡುಬರುತ್ತದೆ. ಆ (ಮನಸ್ಸನ್ನು) ರಂಜಿಸುವ ರೂಪದ ಸೂಕ್ಷ್ಮವಾದ ರಸವು ಕೂಡ ಈ ಯತಿಗೆ ಪರವಸ್ತುವನ್ನು ಎಂದರೆ **ಪರಮಾರ್ಥತತ್ತ್ವವಾದ ಬ್ರಹ್ಮವನ್ನು 'ನಾನೇ ಅದು' ಎಂದು ಕಂಡುಕೊಂಡು ಅರಿತುಕೊಂಡು ಇರುವದರಿಂದ ಹಿಂತಿರುಗಿಬಿಡುತ್ತದೆ, ವಿಷಯವಿಜ್ಞಾನವು ನಿರ್ಬೀಜವಾಗಿ ಬಿಡುವದು ಎಂದರ್ಥ**[1]. ಸರಿಯಾದ ಜ್ಞಾನವು ಉಂಟಾಗದಿದ್ದರೆ ರಸವು ನಾಶವಾಗದು, ಆದ್ದರಿಂದ ಸಮ್ಯಗ್ದರ್ಶನರೂಪವಾದ ಪ್ರಜ್ಞೆಯನ್ನು ಸ್ಥಿರಗೊಳಿಸಿಕೊಳ್ಳಬೇಕು ಎಂದು ಅಭಿಪ್ರಾಯ.

(ಭಾಷ್ಯ)

೧೦೯. ಸಮ್ಯಗ್ದರ್ಶನಲಕ್ಷಣಪ್ರಜ್ಞಾಸ್ಥೈರ್ಯಂ **ಚಿಕೀರ್ಷತಾ** ಆದೌ ಇನ್ದ್ರಿಯಾಣಿ ಸ್ವವಶೇ ಸ್ಥಾಪಯಿತವ್ಯಾನಿ । ಯಸ್ಮಾತ್ ತದನವಸ್ಥಾನೇ ದೋಷಮ್ ಆಹ—

(ಭಾಷ್ಯಾರ್ಥ)

ಸಮ್ಯಗ್ದರ್ಶನರೂಪವಾದ ಪ್ರಜ್ಞೆಯನ್ನು ಸ್ಥಿರಗೊಳಿಸಿಕೊಳ್ಳಬೇಕೆಂಬಾತನು ಮೊದಲು ತನ್ನ ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಅವುಗಳು ಸಿಲ್ಲದಿದ್ದರೆ ದೋಷವುಂಟು ಎಂದು ಭಗವಂತನು ಹೇಳುತ್ತಾನೆ —

**ಯತತೋ ಹ್ಯಪಿ ಕೌನ್ತೇಯ ಪುರುಷಸ್ಯ ವಿಪಶ್ಚಿತಃ ।**
**ಇನ್ದ್ರಿಯಾಣಿ ಪ್ರಮಾಥೀನಿ ಹರನ್ತಿ ಪ್ರಸಭಂ** ಮನಃ ॥ ೬೦ ॥

೬೦. ಎಲೈ ಕೌಂತೇಯನೆ, ಪ್ರಯತ್ನಮಾಡುತ್ತಿರುವ ಪುರುಷನು ತಿಳಿದವನಾದರೂ ಪ್ರಮಾಥಿಗಳಾದ ಇಂದ್ರಿಯಗಳು (ಅವನ) ಮನಸ್ಸನ್ನು ಬಲಾತ್ಕಾರದಿಂದ ಅಪಹರಿಸುವವು.

(ಭಾಷ್ಯ)

೧೧೦. ಯತತಃ ಪ್ರಯತ್ನಂ ಕುರ್ವತಃ ಹಿ ಯಸ್ಮಾತ್ ಕೌನ್ತೇಯ ಪುರುಷಸ್ಯ ವಿಪಶ್ಚಿತಃ ಮೇಧಾವಿನಃ 'ಅಪಿ' ಇತಿ ವ್ಯವಹಿತೇನ ಸಂಬನ್ಧಃ । ಇನ್ದ್ರಿಯಾಣಿ

---

1. ಅವಿದ್ಯೆಯಿಂದ ಉಂಟಾಗುತ್ತಿರುವ ವಾಸನೆಯು ಇಲ್ಲದಂತಾಗುವದು ಎಂದರ್ಥ.

ಪ್ರಮಾಥೀನಿ ಪ್ರಮಥನಶೀಲಾನಿ ವಿಷಯಾಭಿಮುಖಂ ಹಿ ಪುರುಷಂ ವಿಕ್ಷೋಭಯನ್ತಿ ಆಕುಲೀಕುರ್ವನ್ತಿ । ಆಕುಲೀಕೃತ್ಯ ಚ ಹರನ್ತಿ ಪ್ರಸಭಂ ಪ್ರಸಹ್ಯ ಪ್ರಕಾಶಮೇವ ಪಶ್ಯತೋ ವಿವೇಕವಿಜ್ಞಾನಯುಕ್ತಂ ಮನಃ ॥

(ಭಾಷ್ಯಾರ್ಥ)

ಎಲೈ ಕೌಂತೇಯನೆ, (ಹಿ ಯಸ್ಮಾತ್) ಏಕೆಂದರೆ, ಯತ್ನಿಸುತ್ತಿರುವ ಎಂದರೆ ಪ್ರಯತ್ನವನ್ನು ಮಾಡುತ್ತಿರುವ ಪುರುಷನು ತಿಳಿದವನಾದರೂ ಜ್ಞಾನಿಯಾದರೂ ಎಂದು ಅಪಿ ಶಬ್ದದ (ಅರ್ಥವನ್ನು) ದೂರ ಇರುವ (ವಿಪಶ್ಚಿತಃ ಎಂಬ ಮಾತಿಗೆ) ಅನ್ವಯಮಾಡಿಕೊಳ್ಳಬೇಕು[1] ತಿಳಿದವನಾದರೂ ಅವನ ಪ್ರಮಾಥಿಗಳಾದ ಎಂದರೆ ಕಡೆದುಹಾಕುವ ಸ್ವಭಾವವುಳ್ಳ ಇಂದ್ರಿಯಗಳು ವಿಷಯದ ಕಡೆಗೆ ತಿರುಗದ ಪುರುಷನನ್ನು (ಇಂದ್ರಿಯಗಳು) ಕಳವಳಪಡಿಸಿ ಏನೂ ತೋರದಂತೆ ಮಾಡುತ್ತವೆಯಲ್ಲವೆ ? (ಹಾಗೆ) ಏನೂ ತೋಚದಂತೆ ಮಾಡಿ ಪ್ರಕಾಶವಾಗಿ ತಾನು ನೋಡುತ್ತಿರುವಂತೆಯೇ ವಿವೇಕವಿಜ್ಞಾನದಿಂದ ಕೂಡಿರುವ ಮನಸ್ಸನ್ನು ಜೋರಿನಿಂದ ಬಲಾತ್ಕಾರದಿಂದ ಅಪಹರಿಸುವವು

(ಭಾಷ್ಯ)

೧೧೧. ಯತಸ್ತಸ್ಮಾತ್—

(ಭಾಷ್ಯಾರ್ಥ)

ಹೀಗಿರುವದರಿಂದ—

**ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ।**
**ವಶೇ ಹಿ ಯಸ್ಯೇನ್ದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೬೧ ॥**

೬೧. ಅವುಗಳನ್ನೆಲ್ಲ ಸಂಯಮನಮಾಡಿಕೊಂಡು ಯುಕ್ತನಾಗಿ ಮತ್ಪರನಾಗಿರಬೇಕು. ಯಾವಾತನಿಗೆ ಇಂದ್ರಿಯಗಳು ವಶದಲ್ಲಿರುವವೋ ಅವನ ಪ್ರಜ್ಞೆಯು ನಿಲುಗಡೆಯನ್ನು ಹೊಂದಿರುವದು.

(ಭಾಷ್ಯ)

೧೧೨. ತಾನಿ ಸರ್ವಾಣಿ ಸಂಯಮ್ಯ ಸಂಯಮನಂ ವಶೀಕರಣಂ ಕೃತ್ವಾ ಯುಕ್ತಃ ಸಮಾಹಿತಃ ಸನ್ ಆಸೀತ । ಮತ್ಪರಃ ಅಹಂ ವಾಸುದೇವಃ ಸರ್ವಪ್ರತ್ಯಗಾತ್ಮಾ ಪರಃ ಯಸ್ಯ ಸ ಮತ್ಪರಃ "ನಾನ್ಯೋಽಹಂ ತಸ್ಮಾತ್" ಇತಿ ಆಸೀತ

1. ತಿಳಿದವನಿಗೇ ಹೀಗಾಗುವಾಗ ಮಿಕ್ಕವರ ಪಾಡೇನು ? ಎಂಬ ಅರ್ಥಸ್ವಾರಸ್ಯವು ಈ ಅನ್ವಯದಿಂದ ದೊರಕುತ್ತದೆ.

ಇತ್ಯರ್ಥಃ । ಏವಮ್ ಆಸೀನಸ್ಯ ಯತೇಃ ವಶೇ ಹಿ ಯಸ್ಯ ಇನ್ದ್ರಿಯಾಣಿ ವರ್ತನ್ತೇ ಅಭ್ಯಾಸಬಲಾತ್ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥

(ಭಾಷ್ಯಾರ್ಥ)

ಅವುಗಳನ್ನೆಲ್ಲ ಸಂಯಮಮಾಡಿಕೊಂಡು -ಸಂಯಮನ ಎಂದರೆ ಅಳವಡಿಸಿಕೊಳ್ಳುವದು, (ಹಾಗೆ) ಮಾಡಿಕೊಂಡು ಯುಕ್ತನಾಗಿ ಸಮಾಹಿತನಾಗಿ ಮತ್ಪರನಾಗಿ ಎಲ್ಲರಿಗೂ ಪ್ರತ್ಯಗಾತ್ಮನಾಗಿರುವ **ವಾಸುದೇವನಾದ** ನಾನೇ ಹೆಚ್ಚಿನವನು ಎಂದು ಯಾರಿಗೆ (ಎನಿಸುವದೋ) ಅವನು ಮತ್ಪರನು ಎಂದರೆ 'ನಾನು ಅವನಿಗೆ ಬೇರೆಯಿಲ್ಲ' ಎಂದು (ಅರಿತವ)ನಾಗಿರಬೇಕು[1] ಹೀಗೆ ಇದ್ದುಕೊಂಡಿರುವ ಯಾವ ಯತಿಗೆ ಇಂದ್ರಿಯಗಳು ಅಭ್ಯಾಸಬಲದಿಂದ[2] ವಶದಲ್ಲಿ ಇದ್ದುಕೊಂಡಿರುವವೋ ಅವನ ಪ್ರಜ್ಞೆಯು ನಿಲುಗಡೆಗೆ ಬಂದಿರುವದು.

(ಭಾಷ್ಯ)

೧೧೩ ಅಥ ಇದಾನೀಂ ಪರಾಭವಿಷ್ಯತಃ ಸರ್ವಾನರ್ಥಮೂಲಮ್ ಇದಮುಚ್ಯತೇ--

(ಭಾಷ್ಯಾರ್ಥ)

ಇನ್ನು ಈಗ (ಇಂದ್ರಿಯಗಳಿಗೆ) ಸೋಲುವವನಿಗೆ ಅನರ್ಥಕ್ಕೆಲ್ಲ ಇದು ಮೂಲವೆಂದು ಹೇಳುತ್ತಾನೆ —

**ಧ್ಯಾಯತೋ ವಿಷಯಾನ್ ಪುಂಸಃ ಸಙ್ಗಸ್ತೇಷೂಪಜಾಯತೇ ।**
**ಸಙ್ಗಾತ್ ಸಞ್ಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥ ೬೨ ॥**

೬೨. ವಿಷಯಗಳನ್ನು ಧ್ಯಾನಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಸಂಗವುಂಟಾಗುತ್ತದೆ. ಸಂಗದಿಂದ ಕಾಮವು ಉಂಟಾಗುತ್ತದೆ ಕಾಮದಿಂದ ಕ್ರೋಧವು ಉಂಟಾಗುತ್ತದೆ.

---

1. 'ಮತ್ಪರಃ' ಎಂದರೆ ಸಗುಣರೂಪನಾದ ಭಗವಂತನಲ್ಲಿ ತಾತ್ಪರ್ಯವುಳ್ಳವನು ಎಂದರ್ಥವಲ್ಲ, ಏಕೆಂದರೆ ಇದು ಜ್ಞಾನನಿಷ್ಠನ ಲಕ್ಷಣವು ಮತ್ತು ಆ ನಿಷ್ಠೆಗಾಗಿ ಸಾಧನ ಮಾಡುವವನಿಗೆ ಹೇಳಿದ ಉಪದೇಶವು.

2. ವಿಷಯಗಳಲ್ಲಿ ವೈರಾಗ್ಯದಿಂದ ಆತ್ಮನಲ್ಲಿಯೇ ಮನಸ್ಸನ್ನು ತಂದಿಡುವ ಅಭ್ಯಾಸದಿಂದ,

(ಭಾಷ್ಯ)

೧೧೪. ಧ್ಯಾಯತಃ ಚಿನ್ತಯತಃ ವಿಷಯಾನ್ ಶಬ್ದಾದೀನ್ ವಿಷಯವಿಶೇಷಾನ್ ಆಲೋಚಯತಃ ಪುಂಸಃ ಪುರುಷಸ್ಯ ಸಙ್ಗಃ ಆಸಕ್ತಿಃ ಪ್ರೀತಿಃ ತೇಷು ವಿಷಯೇಷು ಉಪಜಾಯತೇ ಉತ್ಪದ್ಯತೇ । ಸಙ್ಗಾತ್ ಪ್ರೀತೇಃ ಸಂಜಾಯತೇ ಸಮುತ್ಪದ್ಯತೇ ಕಾಮಃ ತೃಷ್ಣಾ । ಕಾಮಾತ್ ಕುತಶ್ಚಿತ್ ಪ್ರತಿಹತಾತ್ ಕ್ರೋಧಃ ಅಭಿಜಾಯತೇ ॥

(ಭಾಷ್ಯಾರ್ಥ)

ವಿಷಯಗಳನ್ನು ಎಂದರೆ ಶಬ್ದವೇ ಮುಂತಾದ ಬಗೆಬಗೆಯ ವಿಷಯಗಳನ್ನು ಧ್ಯಾನಿಸುತ್ತಿರುವ ಚಿಂತಿಸುತ್ತಿರುವ (ಅವುಗಳನ್ನೇ) ಆಲೋಚಿಸುತ್ತಿರುವ 'ಪುಂಸಃ' ಪುರುಷನಿಗೆ ಸಂಗವು ಎಂದರೆ ಆಸಕ್ತಿಯು, ಆ ವಿಷಯಗಳಲ್ಲಿ ಪ್ರೀತಿಯು ಉಂಟಾಗುತ್ತದೆ, ಹುಟ್ಟುತ್ತದೆ ಸಂಗದಿಂದ ಎಂದರೆ ಪ್ರೀತಿಯಿಂದ ಕಾಮವು ಎಂದರೆ ಬಯಕೆಯು ಉಂಟಾಗುತ್ತದೆ, ಹುಟ್ಟುತ್ತದೆ (ಆ) ಕಾಮಕ್ಕೆ ಏತರಿಂದಲಾದರೂ ಅಡ್ಡಿಯುಂಟಾದರೆ (ಅದರಿಂದ) ಕ್ರೋಧವು ಉಂಟಾಗುತ್ತದೆ

**ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।**
**ಸ್ಮೃತಿಭ್ರಂಶಾದ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥ ೬೩ ॥**

೬೩ ಕ್ರೋಧದಿಂದ ಸಂಮೋಹವುಂಟಾಗುತ್ತದೆ, ಸಂಮೋಹದಿಂದ ಸ್ಮೃತಿವಿಭ್ರಮವಾಗುತ್ತದೆ, ಸ್ಮೃತಿಭ್ರಂಶದಿಂದ ಬುದ್ಧಿನಾಶ (ವಾಗುತ್ತದೆ), ಬುದ್ಧಿನಾಶದಿಂದ ಪ್ರಕಾಶವನ್ನು ಹೊಂದುತ್ತಾನೆ.

(ಭಾಷ್ಯ)

೧೧೫ ಕ್ರೋಧಾತ್ ಭವತಿ ಸಂಮೋಹಃ ಅವಿವೇಕಃ ಕಾರ್ಯಾಕಾರ್ಯವಿಷಯಃ । ಕ್ರುದ್ಧೋ ಹಿ ಸಮ್ಮೂಢಃ ಸನ್ ಗುರುಮಪಿ ಆಕ್ರೋಶತಿ । ಸಂಮೋಹಾತ್ ಸ್ಮೃತಿವಿಭ್ರಮಃ ಶಾಸ್ತ್ರಾಚಾರ್ಯೋಪದೇಶಾಹಿತಸಂಸ್ಕಾರಜನಿತಾಯಾಃ ಸ್ಮೃತೇಃ ಸ್ಯಾದ್ ವಿಭ್ರಮಃ ಭ್ರಂಶಃ ಸ್ಮೃತ್ಯುತ್ಪತ್ತಿನಿಮಿತ್ತಪ್ರಾಪ್ತೌ ಅನುತ್ಪತ್ತಿಃ । ತತಃ ಸ್ಮೃತಿಭ್ರಂಶಾತ್ ಬುದ್ಧಿನಾಶಃ ಬುದ್ಧೇಃ ನಾಶಃ । ಕಾರ್ಯಾಕಾರ್ಯವಿಷಯವಿವೇಕಾಯೋಗ್ಯತಾ ಅನ್ತಃಕರಣಸ್ಯ ಬುದ್ಧೇಃ ನಾಶ ಉಚ್ಯತೇ । ಬುದ್ಧಿನಾಶಾತ್ ಪ್ರಣಶ್ಯತಿ । ತಾವದೇವ ಹಿ ಪುರುಷಃ ಯಾವತ್ ಅನ್ತಃಕರಣಂ ತದೀಯಂ ಕಾರ್ಯಾಕಾರ್ಯವಿವೇಕಯೋಗ್ಯಮ್ । ತದಯೋಗ್ಯತ್ವೇ ನಷ್ಟ ಏವ ಪುರುಷೋ ಭವತಿ । ಅತಃ ತಸ್ಯ ಅನ್ತಃಕರಣಸ್ಯ ಬುದ್ಧೇಃ ನಾಶಾತ್ ಪ್ರಣಶ್ಯತಿ ಪುರುಷಾರ್ಥಾಯೋಗ್ಯೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಕ್ರೋಧದಿಂದ ಸಂಮೋಹವಾಗುವದು, ಎಂದರೆ (ಇದು) ಮಾಡಬಹುದಾದದ್ದು (ಇದು) ಮಾಡಬಾರದ್ದು ಎಂಬುದರ ವಿವೇಕವೇ ಇಲ್ಲದಂತಾಗುವದು. ಏಕೆಂದರೆ **ಸಿಟ್ಟು ಬಂದವನು ಸಂಮೋಹದಿಂದ ಗುರುವನ್ನು ಕೂಡ ಬಯ್ಯುವದಕ್ಕೆ ಹೋಗುತ್ತಾನೆ**[1]. (ಈ) ಸಮ್ಮೋಹದಿಂದ ಸ್ಮೃತಿಯು ಭ್ರಂಶವಾಗುವದು ಶಾಸ್ತ್ರದಿಂದಲೂ ಆಚಾರ್ಯರಿಂದಲೂ ಆಗುವ ಉಪದೇಶದಿಂದಾಗಿರುವ ಸಂಸ್ಕಾರದಿಂದ ಹುಟ್ಟುವ ಸ್ಮೃತಿಯು ಭ್ರಂಶವಾಗುವದು, ಎಂದರೆ ಸ್ಮೃತಿಯು ಹುಟ್ಟಬೇಕಾದ ಕಾರಣವಿದ್ದರೂ ಅದು ಹುಟ್ಟದೆ ಹೋಗುವದು[2] ಆ ಸ್ಮೃತಿಭ್ರಂಶದಿಂದ ಬುದ್ಧಿನಾಶವು ಎಂದರೆ ಬುದ್ಧಿಯು ನಾಶವು (ಉಂಟಾಗುವದು). (ಇದು) ಮಾಡತಕ್ಕದ್ದು, (ಇದು) ಮಾಡತಕ್ಕದ್ದಲ್ಲ-ಎಂದು ವಿಷಯಗಳನ್ನು ವಿಂಗಡಿಸಿಕೊಳ್ಳುವ ಯೋಗ್ಯತೆಯು ಅಂತಃಕರಣಕ್ಕೆ ಇಲ್ಲದಿರುವದೇ ಬುದ್ಧಿಯ ನಾಶವೆನಿಸುತ್ತದೆ ಬುದ್ಧಿಯ ನಾಶದಿಂದ ಪ್ರಣಾಶವನ್ನು ಹೊಂದುತ್ತಾನೆ **ಎಲ್ಲಿಯವರೆಗೆ ಪುರುಷನ ಅಂತಃಕರಣವು ಕಾರ್ಯಾಕಾರ್ಯಗಳನ್ನು ವಿಂಗಡಿಸಿಕೊಳ್ಳುವದಕ್ಕೆ ತಕ್ಕದ್ದಾಗಿರುವದೋ ಅಲ್ಲಿಯವರೆಗೇ ಅಲ್ಲವೆ, (ನಿಜವಾಗಿ) ಮನುಷ್ಯನು (ಇದಾನೆನಿಸಿಕೊಳ್ಳುವದು) ?** ಅದು (ಹಾಗೆ) ತಕ್ಕದ್ದಲ್ಲದೆ ಹೋದರೆ ಮನುಷ್ಯನು ನಾಶಹೊಂದಿದಂತೆಯೇ ಆಗುವನು ಆದ್ದರಿಂದ ಆ ಅಂತಃಕರಣವೆಂಬ ಬುದ್ಧಿಯು ನಾಶದಿಂದ ಪ್ರಣಾಶವನ್ನು ಹೊಂದುತ್ತಾನೆ, ಎಂದರೆ ಪುರುಷಾರ್ಥಕ್ಕೆ ತಕ್ಕವನಲ್ಲದೆ ಹೋಗುವನು ಎಂದರ್ಥ.[3]

(ಭಾಷ್ಯ)

೧೧೬. ಸರ್ವಾನರ್ಥಸ್ಯ ಮೂಲಮ್ ಉಕ್ತಂ ವಿಷಯಾಭಿಧ್ಯಾನಮ್ । ಅಥ ಇದಾನೀಂ ಮೋಕ್ಷಕಾರಣಮ್ ಇದಮುಚ್ಯತೇ—

(ಭಾಷ್ಯಾರ್ಥ)

ಅನರ್ಥಕ್ಕೆಲ್ಲ ಮೂಲವಾದ ವಿಷಯಗಳನ್ನು ಅಭಿಮಾನಪೂರ್ವಕವಾಗಿ ಚಿಂತಿಸುವದೆಂಬುದನ್ನು ತಿಳಿಸಿದ್ದಾಯಿತು ಈಗ ಮೋಕ್ಷಕ್ಕೆ ಇದು ಕಾರಣವೆಂದು ಹೇಳುತ್ತಾನೆ—

---

1. ಆದ್ದರಿಂದ ಸಿಟ್ಟು ಮಾಡಬಾರದ್ದನ್ನು ಮಾಡಿಸುತ್ತದೆ ಎಂದಾಯಿತು.

2 ಇದು ಸರಿ, ಇದು ಸರಿಯಲ್ಲ_ಎಂಬ ನೆನಪು ಬಂದರೆ ಮಾತ್ರ ಇದನ್ನು ಮಾಡೋಣವೆಂದು ನಿಶ್ಚಯಿಸುವದಕ್ಕಾಗುತ್ತದೆ ; ಆದರೆ ಸಿಟ್ಟಿನಿಂದ ಸಮ್ಮೋಹವುಂಟಾದವನಿಗೆ ಆ ನೆನಪು ಬರುವದೇ ಇಲ್ಲ

3. ತೈ ಭಾ. ೨-೬ (ಭಾ ಭಾ. ೧೫೦) 'ಅಸನ್' ಎಂಬುದರ ವ್ಯಾಖ್ಯಾನವನ್ನು ನೋಡಿ.

**ರಾಗದ್ವೇಷವಿಯುಕ್ತೈಸ್ತು ವಿಷಯಾನಿನ್ದ್ರಿಯೈಶ್ಚರನ್ ।**
**ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥ ೬೪ ॥**

೬೪ ರಾಗದ್ವೇಷಗಳಿಂದ ಬಿಡುಗಡೆಯಾಗಿ ತನ್ನ ವಶದಲ್ಲಿರುವ ಇಂದ್ರಿಯಗಳಿಂದ ವಿಷಯಗಳನ್ನು ಅನುಭವಿಸುತ್ತಿರುವ ವಿಧೇಯಾತ್ಮನು ಪ್ರಸಾದವನ್ನು ಪಡೆಯುವನು.

(ಭಾಷ್ಯ)

೧೧೭. ರಾಗದ್ವೇಷವಿಯುಕ್ತೈಃ ರಾಗಶ್ಚ ದ್ವೇಷಶ್ಚ ರಾಗದ್ವೇಷೌ । ತತ್ಪುರಃಸರಾ ಹಿ ಇನ್ದ್ರಿಯಾಣಾಂ ಪ್ರವೃತ್ತಿಃ ಸ್ವಾಭಾವಿಕೀ । ತತ್ರ ಯೋ ಮುಮುಕ್ಷುರ್ಭವತಿ ಸ ತಾಭ್ಯಾಂ ವಿಯುಕ್ತೈಃ ಶ್ರೋತ್ರಾದಿಭಿಃ ಇನ್ದ್ರಿಯೈಃ ವಿಷಯಾನ್ ಅವರ್ಜನೀಯಾನ್ ಚರನ್ ಉಪಲಭಮಾನಃ ಆತ್ಮವಶ್ಯೈಃ ಆತ್ಮನೋ ವಶ್ಯಾನಿ ವಶೀಭೂತಾನಿ[1] ಇನ್ದ್ರಿಯಾಣಿ ತೈಃ ಆತ್ಮವಶ್ಯೈಃ ವಿಧೇಯಾತ್ಮಾ ಇಚ್ಛಾತಃ ವಿಧೇಯಃ ಆತ್ಮಾ ಅನ್ತಃಕರಣಂ ಯಸ್ಯ ಸೋಽಯಂ ಪ್ರಸಾದಮ್ ಅಧಿಗಚ್ಛತಿ । ಪ್ರಸಾದಃ ಪ್ರಸನ್ನತಾ ಸ್ವಾಸ್ಥ್ಯಮ್[2] ॥

(ಭಾಷ್ಯಾರ್ಥ)

ರಾಗದ್ವೇಷಗಳಿಂದ ಬಿಡುಗಡೆಯಾಗಿರುವ—ರಾಗವೂ ದ್ವೇಷವೂ ರಾಗದ್ವೇಷಗಳು ಅವೆರಡರಿಂದ ಕೂಡಿಕೊಂಡೇ ಅಲ್ಲವೆ, ಇಂದ್ರಿಯಗಳು ಪ್ರವರ್ತಿಸುವದು ಸ್ವಾಭಾವಿಕವಾಗಿದೆ ? ಹೀಗಿರುವಲ್ಲಿ ಯಾವನು ಮುಮುಕ್ಷುವಾಗಿರುವನೋ ಅವನು ಅವೆರಡರಿಂದಲೂ ಬಿಡಿಸಲ್ಪಟ್ಟ- ಶ್ರೋತ್ರವೇ ಮುಂತಾದ ಇಂದ್ರಿಯಗಳಿಂದ ಬಿಡುವದಕ್ಕಾಗದ(ಷ್ಟು)[3]—ವಿಷಯಗಳನ್ನು ತನಗೆ ವಶ್ಯವಾಗಿರುವ- -ತನಗೆ ವಶವಾಗಿರುವ ಇಂದ್ರಿಯಗಳು ಆತ್ಮವಶ್ಯ(ವೆನಿಸುವವು) , ಅಂಥ ಆತ್ಮವಶ್ಯವಾಗಿರುವ—ಇಂದ್ರಿಯಗಳಿಂದ ' ಚರನ್ ' ಅನುಭವಿಸುತ್ತಿರುವ ವಿಧೇಯಾತ್ಮನು, ಎಂದರೆ ತನ್ನ ಇಚ್ಛೆಯಂತೆ ವರ್ತಿಸುವ ಅಂತಃಕರಣವುಳ್ಳವನು ಯಾವನೋ ಅಂಥ ಇವನು (ವಿಧೇಯಾತ್ಮನು), ಪ್ರಸಾದವನ್ನು ಪಡೆಯುವನು. ಪ್ರಸಾದವೆಂದರೆ ಪ್ರಸನ್ನತೆಯು, ಸ್ವಸ್ಥವಾಗಿರುವದು.

---

1 ' ವಶೀಕೃತಾನಿ ' ಮ॥ ಮೈ॥

2 " ಪ್ರಸಾದಂ ಪ್ರಸನ್ನತಾಂ ಸ್ವಾಸ್ಥ್ಯಮ್ " ಮ॥

3 ತಾನು ಬದುಕಿರುವದಕ್ಕೆ ತೀರ ಅವಶ್ಯವಾಗಿರುವಷ್ಟು ಎಂದರ್ಥ.

(ಭಾಷ್ಯ)

೧೧೮ ಪ್ರಸಾದೇ ಸತಿ ಕಿಂ ಸ್ಯಾದಿತಿ ? ಉಚ್ಯತೇ—

(ಭಾಷ್ಯಾರ್ಥ)

ಪ್ರಸಾದವುಂಟಾದರೆ ಏನಾಗುವದು ? ಎಂದರೆ ಹೇಳುತ್ತೇನೆ. —

**ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।**
**ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥ ೬೫ ॥**

೬೫. ಪ್ರಸಾದವುಂಟಾದರೆ ಈತನಿಗೆ ಸರ್ವದುಃಖಗಳ ಹಾನಿಯು ಉಂಟಾಗುತ್ತದೆ. ಏಕೆಂದರೆ ಪ್ರಸನ್ನಚಿತ್ತನಿಗೆ ಬುದ್ಧಿಯು ಬೇಗನೆ ನಿಲುಗಡೆಗೆ ಬರುತ್ತದೆ.

(ಭಾಷ್ಯ)

೧೧೯. ಪ್ರಸಾದೇ ಸರ್ವದುಃಖಾನಾಮ್ ಆಧ್ಯಾತ್ಮಿಕಾದೀನಾಂ ಹಾನಿಃ ವಿನಾಶಃ ಅಸ್ಯ ಯತೇಃ ಉಪಜಾಯತೇ । (ಕಿಂ ಚ)[1] ಪ್ರಸನ್ನಚೇತಸಃ ಸ್ವಸ್ಥಾನ್ತಃಕರಣಸ್ಯ[2] ಹಿ ಯಸ್ಮಾತ್ ಆಶು ಶೀಘ್ರಂ ಬುದ್ಧಿಃ ಪರ್ಯವತಿಷ್ಠತೇ ಆಕಾಶಮಿವ ಪರಿ ಸಮನ್ತಾತ್ ಅವತಿಷ್ಠತೇ ಆತ್ಮಸ್ವರೂಪೇಣೈವ ನಿಶ್ಚಲೀಭವತಿ ಇತ್ಯರ್ಥಃ । ಏವಂ ಪ್ರಸನ್ನಚೇತಸಃ ಅವಸ್ಥಿತಬುದ್ಧೇಃ ಕೃತಕೃತ್ಯತಾ ಯತಃ ತಸ್ಮಾತ್ ರಾಗದ್ವೇಷವಿಯುಕ್ತೈರಿನ್ದ್ರಿಯೈಃ ಶಾಸ್ತ್ರಾವಿರುದ್ಧೇಷು ಯುಕ್ತಃ ಸಮಾಚರೇತ್ ಇತಿ ವಾಕ್ಯಾರ್ಥಃ ॥

(ಭಾಷ್ಯಾರ್ಥ)

ಪ್ರಸನ್ನತೆಯುಂಟಾದರೆ ಆಧ್ಯಾತ್ಮಿಕವೇ ಮುಂತಾದ ಎಲ್ಲಾ ದುಃಖಗಳ ಹಾನಿಯು ಎಂದರೆ ವಿನಾಶವು ಈ ಯತಿಗೆ ಉಂಟಾಗುತ್ತದೆ. ಏಕೆಂದರೆ ಪ್ರಸನ್ನಚಿತ್ತನಿಗೆ ಎಂದರೆ ಸ್ವಸ್ಥವಾದ ಅಂತಃಕರಣವುಳ್ಳವನಿಗೆ ಬೇಗನೆ ಶೀಘ್ರವಾಗಿ ಬುದ್ಧಿಯು ನಿಲುಗಡೆಗೆ ಬರುತ್ತದೆ. (ಪರ್ಯವತಿಷ್ಠತಿ ಎಂಬಲ್ಲಿ ಪರಿ ಎಂದರೆ) **ಆಕಾಶದಂತೆ ಎಲ್ಲೆ**

---

1. "ಹಿ ಯಸ್ಮಾತ್" ಎಂದಿರುವದರಿಂದ ಕಿಂಚ ಎಂಬುದು ಭಾಷ್ಯದಲ್ಲಿ ಮೊದಲು ಇರಲಿಲ್ಲವೆಂದು ಕಾಣುತ್ತದೆ.

2 "ಶುದ್ಧಾನ್ತಃಕರಣಸ್ಯ" ಮ|| ಮೈ||, 'ಸ್ವಚ್ಛಾನ್ತಃಕರಣಸ್ಯ' ಗು||

ಲ್ಲಿಯೂ (ಅವತಿಷ್ಠತೇ) ಆತ್ಮಸ್ವರೂಪದಿಂದಲೇ ನಿಶ್ಚಲವಾಗಿಬಿಡುವದು ಎಂದರ್ಥ.[1]

ಹೀಗೆ ಪ್ರಸನ್ನಚಿತ್ತನಾಗಿ ಬುದ್ಧಿಯು ನಿಲುಗಡೆಗೆ ಬಂದವನು ಕೃತಕೃತ್ಯನಾಗುವನು, ಆದ್ದರಿಂದ ರಾಗದ್ವೇಷಗಳಿಂದ ಬಿಡುಗಡೆಯಾಗಿರುವ ಇಂದ್ರಿಯಗಳಿಂದ ಶಾಸ್ತ್ರಕ್ಕೆ ವಿರುದ್ಧವಲ್ಲದ ಬಿಡುವದಕ್ಕೆ ಆಗದ (ವಿಷಯಗಳನ್ನು ಮಾತ್ರ) ಯುಕ್ತನಾಗಿ ಅನುಭವಿಸುತ್ತಿರಬೇಕು ಎಂದು (ಒಟ್ಟು) ವಾಕ್ಯದ ಅರ್ಥವು.

(ಭಾಷ್ಯ)

೧೨೦ ಸೇಯಂ ಪ್ರಸನ್ನತಾ ಸ್ತೂಯತೇ—

(ಭಾಷ್ಯಾರ್ಥ)

ಆ ಈ ಪ್ರಸನ್ನತೆಯನ್ನು (ಈಗ) ಹೊಗಳುತ್ತಾನೆ:—

**ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।**
**ನ ಚಾಭಾವಯತಃ ಶಾನ್ತಿರಶಾನ್ತಸ್ಯ ಕುತಃ ಸುಖಮ್ ॥ ೬೬ ॥**

೬೬. ಯುಕ್ತನಲ್ಲದವನಿಗೆ ಬುದ್ಧಿಯಿರುವದಿಲ್ಲ, ಯುಕ್ತನಲ್ಲದವನಿಗೆ ಭಾವನೆಯೂ ಇರುವದಿಲ್ಲ ಭಾವನೆಯನ್ನು ಮಾಡದವನಿಗೆ ಶಾಂತಿಯಿರುವದಿಲ್ಲ; ಶಾಂತಿಯಿಲ್ಲದವನಿಗೆ ಸುಖವೆಲ್ಲಿಂದ (ಬರುವದು) ?

(ಭಾಷ್ಯ)

೧೨೧ ನಾಸ್ತಿ ನ ವಿದ್ಯತೇ ನ ಭವತಿ ಇತ್ಯರ್ಥಃ । ಬುದ್ಧಿಃ ಆತ್ಮಸ್ವರೂಪವಿಷಯಾ ಅಯುಕ್ತಸ್ಯ ಅಸಮಾಹಿತಾನ್ತಃಕರಣಸ್ಯ[2] । ನ ಚ ಅಯುಕ್ತಸ್ಯ ಭಾವನಾ ಆತ್ಮಜ್ಞಾನಾಭಿನಿವೇಶಃ । ತಥಾ ನ ಚ ಅಸ್ತಿ[3] ಅಭಾವಯತಃ ಆತ್ಮಜ್ಞಾನಾಭಿನಿವೇಶಮ್ ಅಕುರ್ವತಃ ಶಾನ್ತಿಃ ಉಪಶಮಃ[4] । ಅಶಾನ್ತಸ್ಯ ಕುತಃ ಸುಖಮ್ ? ಇನ್ದ್ರಿಯಾಣಾಂ ಹಿ ವಿಷಯಸೇವಾತೃಷ್ಣಾತೋ ನಿವೃತ್ತಿರ್ಯಾ ತತ್ ಸುಖಂ[5] ನ

---

1. ಪ್ರಜ್ಞೆಯು ಪ್ರತಿಷ್ಠಿತವಾಗುವದು, ಬುದ್ಧಿಯು ನಿಲುಗಡೆಯಾಗುವದು_ಎಂದರೆ ವಿಕ್ಷೇಪವಿಲ್ಲದೆ ನಿಂತುಕೊಳ್ಳುವದು ಎಂದರ್ಥವಲ್ಲ. ಆತ್ಮರೂಪವನ್ನೇ ಪಡೆಯುವದು. ಮಾ ಕಾ. ೩-೩೨, ೩೫.

2 'ಅಸಮಾಹಿತಸ್ಯ' ಮ|| ವ್ಯೆ||

3. ಈ ಮಾತು ಮ|| ವ್ಯೆ|| ಪಾಠದಲ್ಲಿಲ್ಲ

4. 'ನ ವಿದ್ಯತೇ' ಎಂದು ಹೆಚ್ಚಾಗಿ ನಿ||

5 "ಯಾ ತತ್" ಎಂಬುದು ಮ|| ವ್ಯೆ|| ಪಾಠದಲ್ಲಿಲ್ಲ.

ವಿಷಯವಿಷಯಾ ತೃಷ್ಣಾ । ದುಃಖಮೇವ ಹಿ ಸಾ । ನ ತೃಷ್ಣಾಯಾಂ ಸತ್ಯಾಂ ಸುಖಸ್ಯ ಗನ್ಧಮಾತ್ರಮಪಿ ಉಪಪದ್ಯತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಯುಕ್ತನಲ್ಲದವನಿಗೆ ಎಂದರೆ ಅಂತಃಕರಣವನ್ನು ಸಮಾಧಾನಗೊಳಿಸಿಕೊಳ್ಳದವನಿಗೆ ಭಾವನೆಯೂ ಎಂದರೆ ಆತ್ಮಜ್ಞಾನವನ್ನುಂಟುಮಾಡಿಕೊಳ್ಳಬೇಕೆಂಬ ಹೆಚ್ಚಿನ ಆಸಕ್ತಿಯೂ ಉಂಟಾಗಲಾರದು ಭಾವನೆಯನ್ನು ಮಾಡದವನಿಗೆ ಎಂದರೆ ಆತ್ಮಜ್ಞಾನದಲ್ಲಿ ಹೆಚ್ಚಿನ ಆದರವನ್ನು ಇಟ್ಟುಕೊಳ್ಳದಿರುವವನಿಗೆ ಶಾಂತಿಯು ಹೊಯ್ದಾಡದಿರುವಿಕೆಯೂ ಇರುವದಿಲ್ಲ. ಶಾಂತನಲ್ಲದವನಿಗೆ ಸುಖವೆಲ್ಲಿಯದು ? ಇಂದ್ರಿಯಗಳಿಗೆ ವಿಷಯಗಳನ್ನು ಸೇರಿಸಬೇಕೆಂಬ ಬಯಕೆಯಿಂದ ಹಿಂತಿರುಗುವದೆಂಬುದು ಯಾವದೋ ಅದೇ ಸುಖವೇ ಹೊರತು ವಿಷಯಗಳ ವಿಷಯದ ಹಂಬಲಿಕೆಯು (ಸುಖ)ವಲ್ಲ, ಏಕೆಂದರೆ ಅದು ದುಃಖವೇ ಆಗಿರುತ್ತದೆ. ಹಂಬಲಿಕೆಯಿರುವಲ್ಲಿ ಸುಖದ ವಾಸನೆಯು ಕೂಡ ಇರುವದಿಲ್ಲ ಎಂದರ್ಥ.

(ಭಾಷ್ಯ)

೧೨೨. ಅಯುಕ್ತಸ್ಯ ಕಸ್ಮಾತ್ ಬುದ್ಧಿರ್ನಾಸ್ತೀತಿ ? ಉಚ್ಯತೇ—

(ಭಾಷ್ಯಾರ್ಥ)

ಯುಕ್ತನಲ್ಲದವನಿಗೆ (ಆತ್ಮ)ಬುದ್ಧಿಯು ಏತಕ್ಕೆ ಇರಬಾರದು ? ಎಂದರೆ ಹೇಳುತ್ತೇನೆ :—

**ಇನ್ದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ ।**
**ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಮ್ಭಸಿ ॥ ೬೭ ॥**

೬೭. ಸಂಚರಿಸುತ್ತಿರುವ ಇಂದ್ರಿಯಗಳಿಗೆ ಹಿಂದೆ ಮನಸ್ಸನ್ನು ಬಿಡುವದೆಂಬುದಿದೆಯಲ್ಲ, ಅದು ಗಾಳಿಯು ನೀರಿನಲ್ಲಿರುವ ಹಡಗನ್ನು ಒಯ್ಯುವಂತೆ, ಈತನ ಪ್ರಜ್ಞೆಯನ್ನು ಕೊಂಡೊಯ್ಯುವದು.

(ಭಾಷ್ಯ)

೧೨೩. ಇನ್ದ್ರಿಯಾಣಾಂ ಹಿ ಯಸ್ಮಾತ್ ಚರತಾಂ ಸ್ವಸ್ವವಿಷಯೇಷು ಪ್ರವರ್ತಮಾನಾನಾಂ ಯತ್ ಮನಃ ಅನುವಿಧೀಯತೇ ಅನುಪ್ರವರ್ತತೇ ತತ್ ಇನ್ದ್ರಿಯವಿಷಯವಿಕಲ್ಪನೇನ ಪ್ರವೃತ್ತಂ ಮನಃ ಅಸ್ಯ ಯತೇಃ ಹರತಿ ಪ್ರಜ್ಞಾಮ್

ಆತ್ಮಾನಾತ್ಮವಿವೇಕಜಾಂ ನಾಶಯತಿ । ಕಥಮ್ ? ವಾಯುಃ ನಾಶಮಿವ ಅಮ್ಭಸಿ । ಉದಕೇ ಜಗಮಿಷತಾಂ[1] ಮಾರ್ಗಾತ್ ಉದ್ಧೃತ್ಯ ಉನ್ಮಾರ್ಗೇ ಯಥಾ ವಾಯುಃ ನಾವಂ ಪ್ರವರ್ತಯತಿ ಏವಮ್ ಆತ್ಮವಿಷಯಾಂ ಪ್ರಜ್ಞಾಂ ಹೃತ್ವಾ ವಿಷಯ ವಿಷಯಾಂ ಕರೋತಿ ॥

(ಭಾಷ್ಯಾರ್ಥ)

('ಹಿ') ಏಕೆಂದರೆ ಸಂಚರಿಸುತ್ತಿರುವ ಎಂದರೆ ತಮ್ಮ ತಮ್ಮ ವಿಷಯಗಳಲ್ಲಿ ಪ್ರವರ್ತಿಸುತ್ತಿರುವ ಇಂದ್ರಿಯಗಳ ಹಿಂದೆ ಮನಸ್ಸನ್ನು ಬಿಡುವದೆಂಬುದಿದೆಯಲ್ಲ, ಮನಸ್ಸು (ಅವುಗಳನ್ನು) ಅನುಸರಿಸಿ ಪ್ರವರ್ತಿಸುವದೆಂಬುದಿದೆಯಲ್ಲ, ಅದು ಎಂದರೆ ಇಂದ್ರಿಯವಿಷಯಗಳನ್ನು ವಿಕಲ್ಪಿಸುತ್ತಾ ಪ್ರವರ್ತಿಸುತ್ತಿರುವ ಮನಸ್ಸು ಈ ಯತಿಯ **ಆತ್ಮಾನಾತ್ಮವಿವೇಕದಿಂದುಂಟಾದ ಪ್ರಜ್ಞೆಯನ್ನು**[2] ಕೊಂಡೊಯ್ಯುವದು, ಎಂದರೆ ನಾಶಮಾಡುವದು. ಹೇಗೆ? ಎಂದರೆ ಗಾಳಿಯು ನೀರಿನ ಮೇಲಿನ ಹಡಗನ್ನು ಒಯ್ಯುವಂತೆ ನೀರಿನಮೇಲೆ ಹೋಗಲಿರುವ (ಪ್ರಯಾಣಿಕರ)[3] ಹಡಗನ್ನು ಗಾಳಿಯು ದಾರಿಯಿಂದ (ಹಿಡಿ)ದೆತ್ತಿ ಹೇಗೆ ತಪ್ಪುದಾರಿಯಲ್ಲಿ ಹೋಗುವಂತೆ ಮಾಡುವದೋ ಹಾಗೆ ಆತ್ಮವಿಷಯವಾದ ಪ್ರಜ್ಞೆಯನ್ನು ಅಪಹರಿಸಿ ವಿಷಯಗಳ ವಿಷಯವಾಗಿಯೇ ಇರುವಂತೆ ಮಾಡಿಬಿಡುತ್ತದೆ.

(ಭಾಷ್ಯ)

೧೨೪ "ಯತತೋ ಹ್ಯಪಿ"[4] (೨-೬೦) ಇತಿ ಉಪನ್ಯಸ್ತಸ್ಯಾರ್ಥಸ್ಯ ಅನೇಕಧಾ ಉಪಪತ್ತಿಮ್ ಉಕ್ತ್ವಾ ತಂ ಚಾರ್ಥಮ್ ಉಪಪಾದ್ಯ ಉಪಸಂಹರತಿ—

(ಭಾಷ್ಯಾರ್ಥ)

"ಪ್ರಯತ್ನಮಾಡುತ್ತಿರುವ ಪುರುಷನು (ತಿಳಿದವ)ನಾದರೂ" (೨-೬೦) ಎಂದು ಉಪಕ್ರಮಿಸಿದ್ದ ವಿಷಯವನ್ನು ಅನೇಕ ಉಪಪತ್ತಿಗಳನ್ನು ಕೊಟ್ಟು[5] ಆ

1. 'ಸಾಂಯಾತ್ರಿಕಾಣಾವಮ್' ಎಂದು ಹೆಚ್ಚಾಗಿ ಮು॥ ಮ್ಮೆ॥

2. ಈ ಪ್ರಕರಣದಲ್ಲೆಲ್ಲ 'ಆತ್ಮಾನಾತ್ಮವಿವೇಕ'ವೆಂದರೆ ಆತ್ಮನೊಬ್ಬನೇ ಪರಮಾರ್ಥವೆಂಬ ತಿಳಿವಳಿಕೆ ಎಂಬುದನ್ನು ಮರೆಯಬಾರದು.

3. 'ಸಾಂಯತ್ರಿಕಾಣಾವಮ್' ಎಂಬ ಪಾಠದ ಅರ್ಥವಿದು.

4. 'ಯತತೋ ಹಿ' ಮು॥ ಮ್ಮೆ॥ ವಾ॥

5. "ಧ್ಯಾಯತೋ ವಿಷಯಾನ್" ಎಂಬುದೇ ಮುಂತಾದ ಶ್ಲೋಕಗಳಿಂದ ಉಪಪತ್ತಿಯನ್ನು ಹೇಳಿ.

ವಿಷಯವನ್ನು ಯುಕ್ತಿಯಿಂದ ತಿಳಿಸಿಕೊಟ್ಟು (ಈಗ ಅದನ್ನು) ಉಪಸಂಹಾರಮಾಡುತ್ತಾನೆ[1]: —

**ತಸ್ಮಾದ್ ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ ।**
**ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೬೮॥**

೬೮. ಆದ್ದರಿಂದ, ಎಲೈ ಮಹಾಬಾಹುವೆ, ಯಾವಾತನ ಇಂದ್ರಿಯಗಳು ಎಲ್ಲಾ ಪ್ರಕಾರದಿಂದಲೂ ಇಂದ್ರಿಯಾರ್ಥಗಳಿಂದ ಹಿಡಿದಿಡಲ್ಪಟ್ಟಿರುವವೋ ಅವನ ಪ್ರಜ್ಞೆಯು ನಿಲುಗಡೆಗೆ ಬಂದಿರುವದು.

(ಭಾಷ್ಯ)

೧೨೫. ಇನ್ದ್ರಿಯಾಣಾಂ ಪ್ರವೃತ್ತೌ ದೋಷ ಉಪಪಾದಿತೋ ಯಸ್ಮಾತ್ **ತಸ್ಮಾತ್** ಯಸ್ಯ ಯತೇಃ ಹೇ ಮಹಾಬಾಹೋ ನಿಗೃಹೀತಾನಿ ಸರ್ವಶಃ ಸರ್ವಪ್ರಕಾರೈಃ ಮಾನಸಾದಿಭೇದೈಃ ಇನ್ದ್ರಿಯಾಣಿ ಇನ್ದ್ರಿಯಾರ್ಥೇಭ್ಯಃ ಶಬ್ದಾದಿಭ್ಯಃ **ತಸ್ಯ ಪ್ರಜ್ಞಾ ಪ್ರತಿಷ್ಠಿತಾ** ॥

(ಭಾಷ್ಯಾರ್ಥ)

ಆದ್ದರಿಂದ ಎಂದರೆ ಇಂದ್ರಿಯಗಳು (ವಿಷಯಗಳ ಕಡೆಗೆ) ಮುಂಬರಿಯುತ್ತಿದ್ದರೆ (ಉಂಟಾಗುವ) ದೋಷವನ್ನು ತೋರಿಸಿಕೊಟ್ಟಿರುವದರಿಂದ, ಎಲೈ ಮಹಾಬಾಹುವೆ, ಯಾವ ಯತಿಯ ಇಂದ್ರಿಯಗಳು ಎಲ್ಲಾ ಪ್ರಕಾರದಿಂದಲೂ ಎಂದರೆ ಮಾನಸ ಮುಂತಾದ ಎಲ್ಲಾ ರೀತಿಯಿಂದಲೂ[2] ಶಬ್ದವೇ ಮುಂತಾದ ಇಂದ್ರಿಯಾರ್ಥಗಳಿಂದ (ಜಗ್ಗಿ) ಹಿಡಿದಿಡಲ್ಪಟ್ಟಿರುವವೋ ಅವನ ಪ್ರಜ್ಞೆಯು ನಿಲುಗಡೆಗೆ ಬಂದಿರುವದು.

## ಸ್ಥಿತಪ್ರಜ್ಞನಿಗೆ ಯಾವ ವ್ಯವಹಾರವೂ ಇಲ್ಲ

(ಭಾಷ್ಯ)

೧೨೬. ಯೋಽಯಂ ಲೌಕಿಕೋ ವೈದಿಕಶ್ಚ ವ್ಯವಹಾರಃ ಸ ಉತ್ಪನ್ನವಿವೇಕಜ್ಞಾನಸ್ಯ ಸ್ಥಿತಪ್ರಜ್ಞಸ್ಯ ಅವಿದ್ಯಾಕಾರ್ಯತ್ವಾತ್ ಅವಿದ್ಯಾನಿವೃತ್ತೌ ನಿವರ್ತತೇ । ಅವಿದ್ಯಾಯಾಶ್ಚ ವಿದ್ಯಾವಿರೋಧಾತ್ ನಿವೃತ್ತಿಃ ಇತ್ಯೇತಮ್ ಸ್ಫುಟೀಕುರ್ವನ್ ಆಹ—

1. ಆದ್ದರಿಂದ ಇಲ್ಲಿ ಪುನರುಕ್ತಿಯಿಲ್ಲ.
2. ಹೊರಗೆ ತಮ್ಮ ರೂಪದಿಂದಲೂ ಒಳಗೆ ಮನಸ್ಸು ತಮ್ಮನ್ನನುಸರಿಸಿಕೊಂಡು ನುಗ್ಗುವ ರೂಪದಿಂದಲೂ ಇಂದ್ರಿಯಗಳನ್ನು ಬಿಗಿಹಿಡಿದಿರಬೇಕು. ೪-೬ನ್ನು ನೋಡಿ.

(ಭಾಷ್ಯಾರ್ಥ)

ಈ ಲೌಕಿಕ, ವೈದಿಕ-ಎಂಬ (ಎರಡುಬಗೆಯ) ವ್ಯವಹಾರವು ಅವಿದ್ಯಾಕಾರ್ಯವಾಗಿರುವದರಿಂದ[1] ವಿವೇಕಜ್ಞಾನವುಂಟಾಗಿರುವ ಸ್ಥಿತಪ್ರಜ್ಞನಿಗೆ ಅವಿದ್ಯೆಯು ತೊಲಗುವದರಿಂದ ಹೋಗಿಬಿಟ್ಟಿರುತ್ತದೆ ಅವಿದ್ಯೆಯು ವಿದ್ಯೆಗೆ ವಿರೋಧವಾಗಿರುವದರಿಂದ ಹೋಗಿಬಿಡುತ್ತದೆ[2]-ಎಂಬೀ ವಿಷಯವನ್ನು ಸ್ಪಷ್ಟಗೊಳಿಸುವದಕ್ಕಾಗಿ ಭಗವಂತನು (ಹೀಗೆಂದು) ಹೇಳುತ್ತಿದಾನೆ

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।**
**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥೬೯॥**

೬೯. ಸರ್ವಭೂತಗಳಿಗೂ ಯಾವದು ನಿಶೆಯೋ ಅದರಲ್ಲಿ ಸಂಯಮಿಯು ಎಚ್ಚತ್ತಿರುತ್ತಾನೆ ಯಾವದರಲ್ಲಿ ಭೂತಗಳು ಎಚ್ಚತ್ತಿರುವವೋ ಅದು ನೋಡುತ್ತಿರುವ ಮುನಿಗೆ ನಿಶೆಯಾಗಿರುವದು.

(ಭಾಷ್ಯ)

೧೨೭. ಯಾ ನಿಶಾ ರಾತ್ರಿಃ ಸರ್ವಪದಾರ್ಥಾನಾಮ್ ಅವಿವೇಕಕರೀ ತಮಃಸ್ವಭಾವತ್ವಾತ್[3] ಸರ್ವಭೂತಾನಾಂ ಸರ್ವೇಷಾಂ ಭೂತಾನಾಮ್ । ಕಿಂ ತತ್? ಪರಮಾರ್ಥತತ್ತ್ವಂ ಸ್ಥಿತಪ್ರಜ್ಞಸ್ಯ ವಿಷಯಃ । ಯಥಾ ನಕ್ತಂಚರಣಾಮ್, ಅಹರೇವ ಅನ್ಯೇಷಾಮ್, ನಿಶಾ ಭವತಿ ತದ್ವತ್ ನಕ್ತಂಚರಸ್ಥಾನೀಯಾನಾಮ್ ಅಜ್ಞಾನಾಂ[4] ಸರ್ವಭೂತಾನಾಂ ನಿಶೇವ ನಿಶಾ ಪರಮಾರ್ಥತತ್ತ್ವಮ್ । ಅಗೋಚರತ್ವಾತ್ ಅತದ್ಬುದ್ಧೀನಾಮ್ । ತಸ್ಯಾಂ ಪರಮಾರ್ಥತತ್ತ್ವಲಕ್ಷಣಾಯಾಮ್ ಅಜ್ಞಾನನಿದ್ರಾಯಾಃ[5] ಪ್ರಬುದ್ಧಃ ಜಾಗರ್ತಿ ಸಂಯಮೀ ಸಂಯಮವಾನ್ । ಜಿತೇನ್ದ್ರಿಯಃ

---

1 ಈ ಆತ್ಮಾನಾತ್ಮಗಳನ್ನು ವಿಂಗಡಿಸದೆ ಒಂದನ್ನು ಇನ್ನೊಂದರಲ್ಲಿಯೂ ಒಂದರ ಧರ್ಮವನ್ನು ಮತ್ತೊಂದರಲ್ಲಿಯೂ ಕಾಣುವ ತಪ್ಪುತಿಳಿವಳಿಕೆಯೇ ಅವಿದ್ಯೆ, ಸರಿಯಾಗಿ ತಿಳಿದುಕೊಳ್ಳುವದೇ ವಿದ್ಯೆ. ೨-೨೧ರಲ್ಲಿ ಭಾ ಭಾ ೩೮ ನ್ನು ನೋಡಿ. ವ್ಯವಹಾರವು ಅವಿದ್ಯೆಯಿಂದ ತೋರುತ್ತಿರುವದು ಸೂ ಭಾ. ಅಧ್ಯಾಸ ಭಾಷ್ಯ ಮಾಂ. ಕಾ ಭಾ. ೨-೩೨.

2. ಅವಿದ್ಯೆಯನ್ನೂ ಅದರಿಂದಾಗುವ ಮಿಥ್ಯಾವ್ಯವಹಾರವನ್ನೂ ಕಳೆಯುವದಕ್ಕೇ ವಿದ್ಯೆಯನ್ನು ಶ್ರುತಿಯಲ್ಲಿ ಹೇಳಿದೆ ಸೂ. ಭಾ. ಅಧ್ಯಾಸಭಾಷ್ಯವನ್ನು ನೋಡಿ.

3. ಇದರ ಮುಂದೆ 'ನಿಶಾ' ಎಂಬ ಮಾತು ಹೆಚ್ಚಾಗಿ ನಿ॥

4. 'ಅಜ್ಞಾನಿನಾಮ್' ನಿ॥ಗು॥ಮ॥ವ್ಯ॥

5. 'ಅಜ್ಞಾನನಿದ್ರಾತಃ' ಅ॥ 'ಅಜ್ಞಾನನಿದ್ರಾಯಾಂ' ನಿ॥ಮ॥

ಯೋಗೀ ಇತ್ಯರ್ಥಃ । ಯಸ್ಯಾಂ ಗ್ರಾಹ್ಯಗ್ರಾಹಕಭೇದಲಕ್ಷಣಾಯಾಮ್ ಅವಿದ್ಯಾನಿಶಾಯಾಂ ಪ್ರಸುಪ್ತಾನ್ಯೇವ ಭೂತಾನಿ ಜಾಗ್ರತಿ ಇತಿ ಉಚ್ಯನ್ತೇ ಯಸ್ಯಾಂ ನಿಶಾಯಾಂ ಪ್ರಸುಪ್ತಾ ಇವ ಸ್ವಪ್ನದೃಶಃ ಸಾ ನಿಶಾ ಅವಿದ್ಯಾರೂಪತ್ವಾತ್ ಪರಮಾರ್ಥತತ್ತ್ವಂ ಪಶ್ಯತಃ ಮುನೇಃ ॥

(ಭಾಷ್ಯಾರ್ಥ)

ಯಾವದು ಸರ್ವಭೂತಗಳಿಗೂ ಎಂದರೆ ಎಲ್ಲಾ ಪ್ರಾಣಿಗಳಿಗೂ ನಿಶೆಯಾಗಿರುವದೋ ಮಬ್ಬಿನ ಸ್ವಭಾವವಾಗಿರುವದರಿಂದ ಯಾವ ಪದಾರ್ಥಗಳನ್ನೂ ವಿಂಗಡಿಸಿ ತಿಳಿಯಗೊಡಿಸದೆ ರಾತ್ರಿಯಾಗಿರುವದೋ ಅದು ಯಾವದು? ಎಂದರೆ ಸ್ಥಿತಪ್ರಜ್ಞನ ವಿಷಯವಾದ ಪರಮಾರ್ಥತತ್ತ್ವವು. **ಹೇಗೆ ಉಳಿದವರಿಗೆ ಹಗಲೇ ಆಗಿದ್ದರೂ ರಾತ್ರಿಯಲ್ಲಿ ತಿರುಗುವ (ಪ್ರಾಣಿಗಳಿಗೆ ಅದೇ) ರಾತ್ರಿಯಾಗಿರುವದೋ ಅದರಂತೆ ರಾತ್ರಿಯಲ್ಲಿ ತಿರುಗುವ (ಪ್ರಾಣಿಗ)ಳಂತಿರುವ ಅಜ್ಞರಾದ ಜೀವರುಗಳಿಗೆಲ್ಲ ಪರಮಾರ್ಥತತ್ತ್ವವು ರಾತ್ರಿಯು, ಎಂದರೆ ರಾತ್ರಿಯಂತೆ (ಕತ್ತಲಾ)ಗಿರುವದು.** ಏಕೆಂದರೆ ಅದರ (ವಿಷಯವ) ಜ್ಞಾನವಿಲ್ಲದವರಿಗೆ ಅದು ಗೋಚರವಾಗುವದಿಲ್ಲ. ಅಂಥ ಪರಮಾರ್ಥತತ್ತ್ವವೆಂಬ (ರಾತ್ರಿಯಲ್ಲಿ) ಅಜ್ಞಾನನಿದ್ರೆಯಿಂದ ಚೇತರಿಸಿಕೊಂಡಿರುವ[1] ಸಂಯಮಿಯು ಎಂದರೆ ಸಂಯಮವುಳ್ಳ ಇಂದ್ರಿಯಗಳನ್ನು ಜಯಿಸಿಕೊಂಡಿರುವ **ಯೋಗಿ**ಯು[2] ಎಂದರ್ಥ. (ಅವನು) ಎಚ್ಚರವಾಗಿದ್ದುಕೊಂಡಿರುವನು ಯಾವ ಗ್ರಾಹ್ಯಗಾಹಕಭೇದವೆಂಬ ಅವಿದ್ಯಾರಾತ್ರಿಯಲ್ಲಿ ಪ್ರಾಣಿಗಳು ಎಚ್ಚತ್ತಿರುವವೋ, ಎಂದರೆ ರಾತ್ರಿಯಲ್ಲಿ ನಿದ್ರಿಸುತ್ತಾ ಕನಸು ಕಾಣುತ್ತಿರುವವರಂತೆ ಯಾವ (ರಾತ್ರಿಯಲ್ಲಿ) ನಿದ್ರಿಸುತ್ತಲೇ ಇದ್ದರೂ ಎಚ್ಚರವಾಗಿರುತ್ತವೆ ಎನ್ನಿಸಿಕೊಂಡಿರುವವೋ[3] ಅದು ಪರಮಾರ್ಥತತ್ತ್ವವನ್ನು ಕಂಡುಕೊಂಡಿರುವ ಮುನಿಗೆ ರಾತ್ರಿ(ಯೇ ಆಗಿರುವದು), ಏಕೆಂದರೆ ಅದು ಅಜ್ಞಾನದ ರೂಪವಾಗಿರುತ್ತದೆ.[4]

---

1. ಅಜ್ಞಾನವನ್ನು ಜ್ಞಾನದಿಂದ ಕಳೆದುಕೊಂಡಿರುವ ಎಂದರ್ಥ.

2 ಇಲ್ಲಿ ಯೋಗಿ ಎಂದರೆ ಜ್ಞಾನಿಯು, ಸ್ಥಿತಪ್ರಜ್ಞನು, ಧ್ಯಾನಯೋಗಿಯಲ್ಲ

3. ಗ್ರಾಹ್ಯಗ್ರಾಹಕಭೇದವನ್ನು ಕಾಣುತ್ತಿರುವದು ಅನಾದಿಮಾಯಾನಿದ್ರೆಯ ಕನಸು ಎಂದು ಭಾವ. ಮಾ.ಕಾ.ಭಾ. ೧-೧೬, ಐ.ಭಾ. ೧-೩ (ಭಾ.ಭಾ ೫೬)ರಲ್ಲಿ 'ತ್ರಯಃ ಸ್ವಪ್ನಾಃ' ಎಂಬದರ ಭಾಷ್ಯವನ್ನು ನೋಡಿ.

4. ವಸ್ತುಗಳನ್ನು ಇದ್ದಂತೆ ಕಾಣದೆ ಇರುವದು ಕತ್ತಲೆಯ ಸ್ವಭಾವದ ರಾತ್ರಿಯ ಕಾರ್ಯ. ಅಜ್ಞಾನಿಗಳ ವ್ಯವಹಾರವೂ ಅಂಥದ್ದೇ.

## ಜ್ಞಾನಿಗೆ ಕರ್ಮವು ವಿಹಿತವಾಗಿಲ್ಲ

(ಭಾಷ್ಯ)

೧೨೮. ಅತಃ ಕರ್ಮಾಣಿ ಅವಿದ್ಯಾವಸ್ಥಾಯಾಮೇವ ಚೋದ್ಯನ್ತೇ ನ ವಿದ್ಯಾವಸ್ಥಾಯಾಮ್। ವಿದ್ಯಾಯಾಂ ಹಿ ಸತ್ಯಾಮ್ ಉದಿತೇ ಸವಿತರಿ ಶಾರ್ವರಮಿವ ತಮಃ ಪ್ರಣಾಶಮುಪಗಚ್ಛತ್ಯವಿದ್ಯಾ । ಪ್ರಾಕ್ ವಿದ್ಯೋತ್ಪತ್ತೇಃ ಅವಿದ್ಯಾ ಪ್ರಮಾಣಬುದ್ಧ್ಯಾ ಗೃಹ್ಯಮಾಣಾ ಕ್ರಿಯಾಕಾರಕಫಲಭೇದರೂಪಾ ಚ ಸತೀ ಸರ್ವಕರ್ಮಹೇತುತ್ವಂ ಪ್ರತಿಪದ್ಯತೇ । ನ ಅಪ್ರಮಾಣಬುದ್ಧ್ಯಾ ಗೃಹ್ಯಮಾಣಾಯಾಃ ಕರ್ಮಹೇತುತ್ವೋಪಪತ್ತಿಃ । "ಪ್ರಮಾಣಭೂತೇನ ವೇದೇನ ಮಮ ಚೋದಿತಂ ಕರ್ತವ್ಯಂ ಕರ್ಮ" ಇತಿ ಹಿ ಕರ್ಮಣಿ ಕರ್ತಾ ಪ್ರವರ್ತತೇ । ನ "ಅವಿದ್ಯಾಮಾತ್ರಮ್ ಇದಂ ಸರ್ವಂ ನಿಶೇವ" ಇತಿ । ಯಸ್ಯ ತು ಪುನಃ "ನಿಶೇವ ಅವಿದ್ಯಾಮಾತ್ರಮ್ ಇದಂ ಸರ್ವಂ ಭೇದಜಾತಮ್" ಇತಿ ಜ್ಞಾನಮ್,[1] ತಸ್ಯ ಆತ್ಮಜ್ಞಸ್ಯ ಸರ್ವಕರ್ಮಸಂನ್ಯಾಸೇ ಏವ ಅಧಿಕಾರಃ, ನ ಪ್ರವೃತ್ತೌ । ತಥಾ ಚ[2] ದರ್ಶಯಿಷ್ಯತಿ "ತದ್ಬುದ್ಧಯಸ್ತದಾತ್ಮಾನಃ" (೫-೧೭) ಇತ್ಯಾದಿನಾ ಜ್ಞಾನನಿಷ್ಠಾಯಾಮೇವ ತಸ್ಯ ಅಧಿಕಾರಮ್ ॥

(ಭಾಷ್ಯಾರ್ಥ)

ಹೀಗಿರುವದರಿಂದ ಕರ್ಮಗಳನ್ನೆಲ್ಲ ಅವಿದ್ಯಾವಸ್ಥೆಯಲ್ಲಿ(ರುವವನಿಗೆ ವಿಧಿ)ಸಿರುತ್ತದೆಯೇ ಹೊರತು ವಿದ್ಯಾವಸ್ಥೆಯಲ್ಲಿ(ರುವವನಿಗೆ ವಿಧಿ)ಸಿರುವದಿಲ್ಲ.[3] ಏಕೆಂದರೆ ಜ್ಞಾನವುಂಟಾದರೆ ಸೂರ್ಯನು ಉದಯಿಸುತ್ತಲೂ ರಾತ್ರಿಯ ಕತ್ತಲೆಯು (ನಾಶವಾಗು)ವಂತೆ ಅವಿದ್ಯೆಯು ನಾಶವಾಗಿಬಿಡುತ್ತದೆ.[4] ವಿದ್ಯೆಯು ಹುಟ್ಟುವ ಮೊದಲು ಅವಿದ್ಯೆಯು ಪ್ರಮಾಣವೆಂದು ತೋರುವದರಿಂದಲೂ ಕ್ರಿಯಾಕಾರಕಫಲಗಳೆಂಬ ಭೇದ

---

1. 'ಇದಂ ಜ್ಞಾನಮ್' ಸಿ॥, "ಇತಿ ಬುದ್ಧಿಃ" ಮ॥

2. ಚ ಎಂಬುದು ಮ॥ ವ್ಯೆ॥ ಪಾಠಗಳಲ್ಲಿಲ್ಲ.

3. ಅವಿದ್ಯಾವಸ್ಥೆಯಲ್ಲಿಯೇ ಕರ್ತೃತ್ವಭೋಕ್ತೃತ್ವಬುದ್ಧಿಯಿರುವದರಿಂದ ಆಗಲೇ ಕರ್ಮವಿಧಿಗೆ ಸಾರ್ಥಕ್ಯವೆಂದು ಅರ್ಥ. ೩-೩೧ (ಭಾ. ಭಾ. ೩೯) ನ್ನು ನೋಡಿ.

4. ಜ್ಞಾನಿಗೆ ಒಂದಿಷ್ಟು ಅವಿದ್ಯೆಯಿರುವದೆಂಬ ವಾದವು ಸೂರ್ಯನಿಗೆ ಒಂದಿಷ್ಟು ಕತ್ತಲೆಯುಂಟೆಂಬ ವಾದದಂತೆ ಉಪಹಾಸ್ಯವೆಂದರ್ಥ.

ರೂಪವಾಗಿರುವದರಿಂದಲೂ[1] ಎಲ್ಲಾ ಬಗೆಯ ಕರ್ಮಗಳಿಗೂ ಕಾರಣವಾಗಿರುತ್ತದೆ.[2] (ಅದು) ಅಪ್ರಮಾಣವೆಂಬ ಬುದ್ಧಿಗೆ ಗೋಚರವಾದ (ಅವಿದ್ಯೆಯು) ಕರ್ಮಕ್ಕೆ ಕಾರಣವಾಗಲಾರದು. "ಪ್ರಮಾಣವಾಗಿರುವ ವೇದವು ವಿಧಿಸಿರುವ ಕರ್ಮವು ನನಗೆ ಕರ್ತವ್ಯವಾಗಿರುತ್ತದೆ" ಎಂದು ಕರ್ತೃವಾದವನು ಕರ್ಮದಲ್ಲಿ ಪ್ರವರ್ತಿಸುತ್ತಾನೆಯೇ ಹೊರತು "ಇದೆಲ್ಲವೂ,[3] (ದೃಷ್ಟಾಂತದ) ರಾತ್ರಿಯಂತೆ ಬರಿಯ ಅವಿದ್ಯೆಯೇ"[4] ಎಂದು (ತಿಳಿದುಕೊಂಡಮೇಲೆ) ಪ್ರವರ್ತಿಸುವದಿಲ್ಲ. ಆದರೆ ಯಾವನಿಗೆ "ಈ ಭೇದಸಮೂಹವೆಲ್ಲವೂ ರಾತ್ರಿಯಂತೆ ಅವಿದ್ಯಾಮಾತ್ರವು" ಎಂಬ ಅರಿವು ಉಂಟಾಗಿರುವದೋ ಅಂಥ ಆತ್ಮಜ್ಞಾನಿಗೆ ಸರ್ವಕರ್ಮಗಳನ್ನೂ ಸಂನ್ಯಾಸಮಾಡುವದರಲ್ಲಿಯೇ ಅಧಿಕಾರವೇ ಹೊರತು ಪ್ರವೃತ್ತಿಯಲ್ಲಲ್ಲ. ಆದ್ದರಿಂದಲೇ ಮುಂದೆ (ಭಗವಂತನು) "ತದ್ಬುದ್ಧಯಸ್ತದಾತ್ಮಾನಃ" (೫-೧೭) ಮುಂತಾದ (ಶ್ಲೋಕದಲ್ಲಿ) ಆ (ಜ್ಞಾನಿಗೆ) ಜ್ಞಾನನಿಷ್ಠೆಯಲ್ಲಿಯೇ ಅಧಿಕಾರವನ್ನು ತಿಳಿಸಿರುತ್ತಾನೆ.

## ಆತ್ಮಜ್ಞಾನವಾದಬಳಿಕ ಪ್ರಮಾಣವ್ಯವಹಾರವಿರುವದಿಲ್ಲ

(ಭಾಷ್ಯ)

೧೫ ತತ್ರಾಪಿ ಪ್ರವರ್ತಕಪ್ರಮಾಣಾಭಾವೇ ಪ್ರವೃತ್ತ್ಯನುಪಪತ್ತಿಃ[5] ಇತಿ ಚೇತ್ । ನ । ಸ್ವಾತ್ಮವಿಷಯತ್ವಾತ್ ಆತ್ಮಜ್ಞಾನಸ್ಯ । ನ ಹಿ ಆತ್ಮನಃ ಸ್ವಾತ್ಮನಿ ಪ್ರವರ್ತಕಪ್ರಮಾಣಾಪೇಕ್ಷತಾ । ಆತ್ಮತ್ವಾದೇವ । ತದನ್ತತ್ವಾಚ್ಚ ಸರ್ವಪ್ರಮಾಣಾನಾಂ ಪ್ರಮಾಣತ್ವಸ್ಯ । ನ ಹಿ ಆತ್ಮಸ್ವರೂಪಾಧಿಗಮೇ ಸತಿ ಪುನಃ ಪ್ರಮಾಣಪ್ರಮೇಯವ್ಯವಹಾರಃ ಸಂಭವತಿ । ಪ್ರಮಾತೃತ್ವಂ ಹಿ ಆತ್ಮನೋ ನಿವರ್ತಯತಿ ಅನ್ತ್ಯಂ ಪ್ರಮಾಣಮ್ । ನಿವರ್ತಯದೇವ ಚ ಅಪ್ರಮಾಣೀಭವತಿ ಸ್ವಪ್ನಕಾಲಪ್ರಮಾಣಮಿವ ಪ್ರಬೋಧೇ । ಲೋಕೇ ಚ ವಸ್ತ್ವಧಿಗಮೇ ಪ್ರವೃತ್ತಿಹೇತುತ್ವಾ

---

1. ಅವಿದ್ಯೆಯು ತಪ್ಪು ತಿಳಿವಳಿಕೆಯಾದರೂ ಅವಿದ್ಯಾವಸ್ಥೆಯಲ್ಲಿ ಅದೇ ಸರಿಯಾದ ತಿಳಿವಳಿಕೆಯೆಂದು ತೋರುತ್ತಿರುತ್ತದೆ. ಆದ್ದರಿಂದ ಅದರ ಕಾರ್ಯವಾದ ಕ್ರಿಯಾಕಾರಕಫಲಭೇದವು ಸತ್ಯವೆಂದು ತೋರುತ್ತದೆ.

2. ನಿತ್ಯಕರ್ಮಗಳು ಕೂಡ ಅವಿದ್ಯಾಕಾರ್ಯವೇ, ಇದನ್ನು ಮುಂದೆ ೧೮-೬೬ರ ಭಾಷ್ಯದಲ್ಲಿ ತೋರಿಸಿಕೊಡಲಾಗುವದು.

3. ಕ್ರಿಯಾಕಾರಕಫಲರೂಪವಾಗಿ ಕಾಣುವ ಜಗತ್ತೆಲ್ಲವೂ

4. ತಪ್ಪುತಿಳಿವಳಿಕೆಯಿಂದ ತೋರುವದೇ ಹೊರತು ಪರಮಾರ್ಥವಲ್ಲ.

5. 'ಪ್ರತ್ಯಕ್ತ್ವೇರನುಪಪತ್ತಿಃ' ವಾ|| ಮೈ|| ಮು||

ದರ್ಶನಾತ್ ಪ್ರಮಾಣಸ್ಯ । ತಸ್ಮಾದ್ ನ ಆತ್ಮವಿದಃ ಕರ್ಮಣ್ಯಧಿಕಾರಃ ಇತಿ ಸಿದ್ಧಮ್ ॥

(ಭಾಷ್ಯಾರ್ಥ)

(ಆಕ್ಷೇಪ) :—ಪ್ರವರ್ತಿಸುವಂತೆ ಮಾಡುವ ಪ್ರಮಾಣವಿಲ್ಲದಿದ್ದರೆ[1] ಅದರಲ್ಲಿಯೂ[2] ಪ್ರವೃತ್ತಿಯುಂಟಾಗಲಾರದಲ್ಲ !

(ಪರಿಹಾರ) :— ಹಾಗಲ್ಲ. ಏಕೆಂದರೆ ಆತ್ಮಜ್ಞಾನಕ್ಕೆ ತನ್ನ ಆತ್ಮನೇ ವಿಷಯವಾಗಿರುತ್ತಾನೆ. ಆತ್ಮನಿಗೆ ತನ್ನ ಆತ್ಮನ ವಿಷಯದಲ್ಲಿ ಪ್ರವರ್ತಕವಾದ ಪ್ರಮಾಣವು ಬೇಕಾಗಲಾರದು, ಏಕೆಂದರೆ (ಅವನು ತನ್ನ) ಸ್ವರೂಪವೇ ಆಗಿರುತ್ತಾನೆ.[3] ಇದಲ್ಲದೆ ಸರ್ವ ಪ್ರಮಾಣಗಳೂ ಪ್ರಮಾಣವೆನಿಸಿರುವದು ಅಲ್ಲಿಯವರೆಗೇ ಏಕೆಂದರೆ **ಆತ್ಮಸ್ವರೂಪವನ್ನು ಅರಿತುಕೊಂಡ ಬಳಿಕ ಮತ್ತೂ ಪ್ರಮಾಣ ಪ್ರಮೇಯವ್ಯವಹಾರವು ಇರಲಾರದು ಅಂತ್ಯಪ್ರಮಾಣ(ವಾದ ಶಾಸ್ತ್ರವಚನವು) ಆತ್ಮನಲ್ಲಿರುವ ಪ್ರಮಾತೃತ್ವವನ್ನೇ ಕಳೆದುಬಿಡುತ್ತದೆ.**[4] **ಹಾಗೆ ಕಳೆಯುವಾಗಲೇ ಕನಸಿನ ಕಾಲದ ಪ್ರಮಾಣವು ಎಚ್ಚರವಾಗುತ್ತಲೂ (ಅಪ್ರಮಾಣವಾಗಿ ಬಿಡು)ವಂತೆ (ತಾನೂ) ಅಪ್ರಮಾಣವಾಗಿ ಬಿಡುವದು.**[5] ಇದಲ್ಲದೆ ಲೋಕದಲ್ಲಿಯೂ (ಪ್ರಮೇಯ) ವಸ್ತುವನ್ನು ಅರಿತುಕೊಂಡಬಳಿಕ ಪ್ರಮಾಣವು ಪ್ರವೃತ್ತಿಗೆ ಕಾರಣವಾಗಿರುವದೂ ಕಂಡುಬರುವದಿಲ್ಲ.[6]

ಆದ್ದರಿಂದ ಆತ್ಮಜ್ಞಾನಿಗೆ ಕರ್ಮದಲ್ಲಿ ಅಧಿಕಾರವಿಲ್ಲವೆಂದು ಸಿದ್ಧವಾಯಿತು.

---

1 ‘ ಇದನ್ನು ಮಾಡಬೇಕು ’ ಎಂಬ ಶಾಸ್ತ್ರವಚನವಿಲ್ಲದಿದ್ದರೆ.

2 ಜ್ಞಾನನಿಷ್ಠೆಯಲ್ಲಿಯೂ.

3 ತನ್ನ ಸ್ವರೂಪವು ಅತ್ಯಂತ ಪ್ರಸಿದ್ಧವಾಗಿರುವದರಿಂದ ಅದನ್ನು ಅರಿಯಬೇಕೆಂಬ ಇಚ್ಛೆಯನ್ನುಂಟುಮಾಡುವ ಅಥವಾ ಅರಿತುಕೊಳ್ಳುವದಕ್ಕೆ ಯತ್ನಿಸುವಂತೆ ಮಾಡುವ ಪ್ರಮಾಣವು ಬೇಕಿಲ್ಲ ೨-೧೮ರಲ್ಲಿ (ಭಾ. ಭಾ ೩೯) ‘ ಸಿದ್ಧೇ ಹಿ ’ ಎಂಬ ಭಾಷ್ಯವಾಕ್ಯವನ್ನು ನೋಡಿ.

4. ಶಾಸ್ತ್ರವಚನವು ಪ್ರಮಾತೃತ್ವಾಧ್ಯಾಸವನ್ನು ಕಳೆಯುವದರಿಂದಲೇ ಪ್ರಮಾಣವೆನಿಸುವದು, ೨-೧೮ (ಭಾ. ಭಾ. ೩೯), ಸೂ. ಭಾ. ೧-೧-೪. ಇದು ಪ್ರಮಾಣವ್ಯವಹಾರವನ್ನು ಅವಿದ್ಯೆಯೆಂದು ತಿಳಿಸಿಕೊಡುವದರಿಂದ ಅಂತ್ಯಪ್ರಮಾಣವು. ಸೂ. ಭಾ. ೨-೧-೧೪.

5. ಪ್ರಮಾಣವ್ಯವಹಾರವೆಲ್ಲವೂ ಕನಸಿನ ಪ್ರಮಾಣದಂತೆ ಆತ್ಮಜ್ಞಾನದವರೆಗೇ ಪ್ರಮಾಣವಾಗಿರುವದೆಂಬುದಕ್ಕೆ ಸೂ. ಭಾ. ೨-೧-೧೪, ೪-೩-೧೪ ನೋಡಿ.

6. ಪ್ರಮೇಯವನ್ನು ಅರಿತುಕೊಳ್ಳುವದಕ್ಕೆ ಪ್ರವರ್ತಕವಾದ ವಿಧಿ ಬೇಕಿಲ್ಲವೆಂಬರ್ಥವನ್ನು ಆ॥ ವ್ಯಾಖ್ಯಾನದಲ್ಲಿ ಮಾಡಿದೆ, ಅದೂ ಆಗಬಹುದಾದರೂ ಪ್ರಕೃತಕ್ಕೆ ಆತ್ಮಜ್ಞಾನವಾದ ಬಳಿಕ ಜ್ಞಾನನಿಷ್ಠೆಗೆ ಮತ್ತೆ ಪ್ರಮಾಣವ್ಯಾಪಾರವು ಬೇಕಾಗುವದಿಲ್ಲವೆಂಬ ಅರ್ಥವು ಬೇಕಾಗಿರುವದರಿಂದ ನಾವು ಕೊಟ್ಟಿರುವ ಅನುವಾದವೇ ಸರಿ.

## ಜ್ಞಾನನಿಷ್ಠೆಯಿಂದಲೇ ಮುಕ್ತಿ

(ಭಾಷ್ಯ)

೧೩೦. ವಿದುಷಃ ತ್ಯಕ್ತೈಷಣಸ್ಯ ಸ್ಥಿತಪ್ರಜ್ಞಸ್ಯ ಯತೇರೇವ ಮೋಕ್ಷಪ್ರಾಪ್ತಿಃ ನ ತು ಅಸಂನ್ಯಾಸಿನಃ ಕಾಮಕಾಮಿನಃ ಇತ್ಯೇತಮರ್ಥಂ ದೃಷ್ಟಾನ್ತೇನ ಪ್ರತಿಪಾದಯಿಷ್ಯನ್ ಆಹ—

(ಭಾಷ್ಯಾರ್ಥ)

ಏಷಣೆಗಳನ್ನು ಬಿಟ್ಟು ಜ್ಞಾನಿಯಾಗಿರುವ ಸ್ಥಿತಪ್ರಜ್ಞನಾಗಿರುವ ಯತಿಗೇ ಮೋಕ್ಷವು ಸಿಕ್ಕುವದೇ ಹೊರತು ಸಂನ್ಯಾಸಿಯಲ್ಲದೆ ಕಾಮಗಳನ್ನು ಬಯಸುತ್ತಿರುವವನಿಗೆ (ಸಿಕ್ಕುವ)ದಿಲ್ಲ–ಎಂಬೀ ವಿಷಯವನ್ನು ದೃಷ್ಟಾಂತದಿಂದ ತಿಳಿಸುವದಕ್ಕಾಗಿ ಭಗವಂತನು (ಹೀಗೆಂದು) ಹೇಳುತ್ತಾನೆ -

**ಆಪೂರ್ಯಮಾಣಮಚಲಪ್ರತಿಷ್ಠಂ**
**ಸಮುದ್ರಮಾಪಃ ಪ್ರವಿಶನ್ತಿ ಯದ್ವತ್ ।**
**ತದ್ವತ್ ಕಾಮಾ ಯಂ ಪ್ರವಿಶನ್ತಿ ಸರ್ವೇ**
**ಸ ಶಾನ್ತಿಮಾಪ್ನೋತಿ ನ ಕಾಮಕಾಮೀ ॥ ೭೦ ॥**

೭೦. (ನೀರಿನಿಂದ) ತುಂಬಿಕೊಳ್ಳುತ್ತಿದ್ದರೂ ಅಲ್ಲಾಡದೆ ನಿಂತಿರುವ ಸಮುದ್ರವನ್ನು ಹೇಗೆ (ನದಿಯ) ಪ್ರವಾಹಗಳು ಪ್ರವೇಶಿಸುತ್ತಿರುವವೋ ಹಾಗೆ ಕಾಮಗಳೆಲ್ಲವೂ ಯಾವಾತನನ್ನು ಪ್ರವೇಶಿಸುತ್ತಿರುವವೋ ಅವನಿಗೆ ಶಾಂತಿಯು ಸಿಕ್ಕುವದೇ ಹೊರತು ಕಾಮಗಳನ್ನು ಬಯಸುತ್ತಿರುವವನಿಗೆ ಸಿಕ್ಕಲಾರದು.

(ಭಾಷ್ಯ)

೧೩೧ ಆಪೂರ್ಯಮಾಣಮ್ ಅದ್ಭಿಃ ಅಚಲಪ್ರತಿಷ್ಠಮ್ ಅಚಲತಯಾ ಪ್ರತಿಷ್ಠಾ ಅವಸ್ಥಿತಿಃ ಯಸ್ಯ ತಮ್ ಅಚಲಪ್ರತಿಷ್ಠಂ ಸಮುದ್ರಮ್ ಆಪಃ ಸರ್ವತೋಗತಾಃ ಪ್ರವಿಶನ್ತಿ ಸ್ವಾತ್ಮಸ್ಥಮ್ ಅವಿಕ್ರಿಯಮೇವ ಸನ್ತಂ ಯದ್ವತ್ ತದ್ವತ್ ಕಾಮಾಃ ವಿಷಯಸನ್ನಿಧಾವಪಿ ಸರ್ವತಃ[1] ಇಚ್ಛಾವಿಶೇಷಾಃ ಯಂ ಪುರುಷಂ[2] ಸಮುದ್ರಮಿವ ಆಪಃ ಅವಿಕುರ್ವನ್ತಃ ಪ್ರವಿಶನ್ತಿ ಸರ್ವೇ ಆತ್ಮನ್ಯೇವ ಪ್ರಲೀಯನ್ತೇ[3] ನ

1. " ಸರ್ವೇ " ಮ॥
2. " ಮುನಿಮ್ " ಮೈ॥ " ಯತಿಮ್ " ಮ॥
3. " ಇತ್ಯರ್ಥಃ " ಎಂದು ಮ॥ದಲ್ಲಿ ಹೆಚ್ಚಾಗಿದೆ

ಸ್ವಾತ್ಮವಶಂ ಕುರ್ವನ್ತಿ ಸ ಶಾನ್ತಿಂ ಮೋಕ್ಷಮ್ ಆಪ್ನೋತಿ ನ ಇತರಃ ಕಾಮಕಾಮೀ ಕಾಮ್ಯನ್ತೇ ಇತಿ ಕಾಮಾಃ ವಿಷಯಾಃ ತಾನ್ ಕಾಮಯಿತುಂ ಶೀಲಮ್ ಯಸ್ಯ ಸ ಕಾಮಕಾಮೀ[1] ನೈವ ಪ್ರಾಪ್ನೋತಿ ಇತ್ಯರ್ಥಃ ||

(ಭಾಷ್ಯಾರ್ಥ)

(ನೀರಿನಿಂದ) ತುಂಬಿಕೊಳ್ಳುತ್ತಿದ್ದರೂ ಅಚಲಪ್ರತಿಷ್ಠವಾಗಿ-(ಅತ್ತಿತ್ತ) ಅಲ್ಲಾಡದೆ (ತನ್ನ ಮೇರೆಯಲ್ಲಿಯೇ) ಪ್ರತಿಷ್ಠೆಯು ಎಂದರೆ ನಿಲುಗಡೆಯು ಇರುವದು ಅಚಲಪ್ರತಿಷ್ಠವು ಅಂಥ-ಸಮುದ್ರವನ್ನು ಎಲ್ಲಾ ಕಡೆಯಿಂದಲೂ (ಹರಿದು) ಬರುತ್ತಿರುವ ನೀರು ಹೇಗೆ ಪ್ರವೇಶಿಸುತ್ತಿರುವದೋ (ಆದರೂ) ಅದು ತಾನು ಇದ್ದಂತೆಯೇ ಯಾವ ವಿಕಾರವೂ ಇಲ್ಲದೆ (ಹೇಗೆ) ಇದ್ದುಕೊಂಡಿರುವದೋ ಅದರಂತೆ ವಿಷಯಗಳು ಹತ್ತಿರದಲ್ಲಿದ್ದರೂ ಕಾಮಗಳು ಎಂದರೆ ಆಯಾ ಇಚ್ಛೆಗಳು ಎಲ್ಲಾ ಕಡೆಯಿಂದಲೂ ಸಮುದ್ರವನ್ನು ಹೊಗುವ ನದಿಗಳಂತೆ ಯಾವ ಪುರುಷನನ್ನು ವಿಕಾರಗೊಳಿಸದೆ ಪ್ರವೇಶಿಸುತ್ತಿರುವವೋ, ಎಲ್ಲವೂ (ಯಾವನ) ಆತ್ಮನಲ್ಲಿಯೇ ಅಡಗುವವೇ ಹೊರತು (ಅವನನ್ನು) ತಮ್ಮ ವಶವಡಿಸಿಕೊಳ್ಳುವದಿಲ್ಲವೋ ಅವನು ಶಾಂತಿಯನ್ನು ಎಂದರೆ ಮೋಕ್ಷವನ್ನು ಪಡೆಯುತ್ತಾನೆ (ಅವನಿಗಿಂತ) ಬೇರೆಯಾದ ಕಾಮಕಾಮಿಯು-ಕಾಮಗಳು ಎಂದರೆ ಬಯಸುವ ವಿಷಯಗಳು, ಅವುಗಳನ್ನೇ ಇಚ್ಛಿಸುತ್ತಿರುವ ಸ್ವಭಾವವುಳ್ಳವನು ಯಾವನೋ ಅವನು ಕಾಮಕಾಮಿಯು (ಅವನು)-ಪಡೆಯುವದೇ ಇಲ್ಲ ಎಂದರ್ಥ.

(ಭಾಷ್ಯ)

೧೩೨ ಯಸ್ಮಾದೇವಂ ತಸ್ಮಾತ್—

(ಭಾಷ್ಯಾರ್ಥ)

ಹೀಗಿರುವದರಿಂದ :—

**ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಃಸ್ಪೃಹಃ ।**
**ನಿರ್ಮಮೋ ನಿರಹಂಕಾರಃ ಸ ಶಾನ್ತಿಮಧಿಗಚ್ಛತಿ ॥ ೭೧ ॥**

೭೧. ಯಾವ ಪುರುಷನು ಕಾಮಗಳನ್ನೆಲ್ಲ ಬಿಟ್ಟು ನಿಃಸ್ಪೃಹನಾಗಿ ಚರಿಸುತ್ತಿರುವನೋ ನಿರ್ಮಮನಾಗಿ ನಿರಹಂಕಾರನಾಗಿ (ಇರುವನೋ) ಅವನು ಶಾಂತಿಯನ್ನು ಪಡೆದುಕೊಳ್ಳುವನು.

---

1 "ಸ ನೈವ" ಮೈ|| "ನ ಪ್ರಾಪ್ನೋತಿ" ಮ||

(ಭಾಷ್ಯ)

೧೩೩, ವಿಹಾಯ ಪರಿತ್ಯಜ್ಯ ಕಾಮಾನ್ ಯಃ ಪುಮಾನ್[1] ಸಂನ್ಯಾಸೀ ಸರ್ವಾನ್ ಅಶೇಷತಃ ಕಾರ್ತ್ಸ್ನ್ಯೇನ ಚರತಿ ಜೀವನಮಾತ್ರಚೇಷ್ಟಾಶೇಷಃ ಪರ್ಯಟತಿ ಇತ್ಯರ್ಥಃ । ನಿಃಸ್ಪೃಹಃ ಶರೀರಜೀವನಮಾತ್ರೇಽಪಿ ನಿರ್ಗತಾ ಸ್ಪೃಹಾ ಯಸ್ಯ ಸ ನಿಃಸ್ಪೃಹಃ ಸನ್[2] ನಿರ್ಮಮಃ ಮಮತ್ವವರ್ಜಿತಃ ಶರೀರಜೀವನಮಾತ್ರಾಕ್ಷಿಪ್ತಪರಿಗ್ರಹೇಽಪಿ 'ಮಮೇದಮ್' ಇತ್ಯಭಿನಿವೇಶವರ್ಜಿತಃ, ನಿರಹಂಕಾರಃ ವಿದ್ಯಾವತ್ತ್ವಾದಿನಿಮಿತ್ತಾತ್ಮಸಂಭಾವನಾರಹಿತಃ ಇತ್ಯೇತತ್ ।[3] ಸ ಏವಂಭೂತಃ ಸ್ಥಿತಪ್ರಜ್ಞಃ ಬ್ರಹ್ಮವಿತ್ ಶಾನ್ತಿಂ ಸರ್ವಸಂಸಾರದುಃಖೋಪರಮಲಕ್ಷಣಾಂ ನಿರ್ವಾಣಾಖ್ಯಾಮ್ ಅಧಿಗಚ್ಛತಿ ಪ್ರಾಪ್ನೋತಿ ಬ್ರಹ್ಮಭೂತೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಯಾವ ಪುರುಷನು ಎಂದರೆ ಸಂನ್ಯಾಸಿಯು[4] ಕಾಮಗಳನ್ನೆಲ್ಲ ಒಂದೂ ಬಿಡದೆ ಪೂರ್ಣವಾಗಿ ಬಿಟ್ಟು ಪರಿತ್ಯಾಗಮಾಡಿ ಚರಿಸುತ್ತಿರುವನೋ ಎಂದರೆ ಬದುಕಿರುವದಕ್ಕೆ ಬೇಕಾಗುವಷ್ಟು (ಮಾತ್ರ) ವ್ಯಾಪಾರಗಳಿಂದ ಕೂಡಿ[5] ಅಡ್ಡಾಡುತ್ತಿರುವನೋ ಎಂದರ್ಥ. ನಿಃಸ್ಪೃಹನಾಗಿ ಎಂದರೆ ಶರೀರವು ಬದುಕಿರಬೇಕೆಂಬದರಲ್ಲಿಯೂ ಸ್ಪೃಹೆಯು ಇಲ್ಲದವನಾಗಿ, ನಿರ್ಮಮನಾಗಿ ಮಮತ್ವವಿಲ್ಲದವನಾಗಿ ಶರೀರವು ಬದುಕಿರುವಮಟ್ಟಿಗೆ ಬೇಕಾಗುವ ವಸ್ತುವಿನಲ್ಲಿಕೂಡ ಇದು ನನ್ನದು ಎಂಬ ಅಭಿಮಾನವಿಲ್ಲದವನಾಗಿ, ನಿರಹಂಕಾರನಾಗಿ ತಾನು ಜ್ಞಾನಿ ಎಂಬುದೇ ಮುಂತಾದ ಕಾರಣದಿಂದ ತನ್ನನ್ನು ತಾನೇ ಮೆಚ್ಚಿಕೊಂಡು (ಹಿಗ್ಗದೆ) ಇರುವನೋ ಎಂದರ್ಥ.[6] ಆ ಹೀಗಿರುವ ಸ್ಥಿತಪ್ರಜ್ಞನಾದ ಬ್ರಹ್ಮಜ್ಞಾನಿಯು ಸಂಸಾರದ ಸರ್ವದುಃಖಗಳೂ ನಾಶವಾಗುವರೂಪದ ನಿರ್ವಾಣವೆಂಬ ಶಾಂತಿಯನ್ನು[7] ಪಡೆದುಕೊಳ್ಳುವನು,

---

1. ಅಚ್ಚಿನ ಪುಸ್ತಕಗಳಲ್ಲಿ 'ಸಂನ್ಯಾಸೀ ಪುಮಾನ್' ಎಂದೇ ಇದೆ, ಪುಮಾನ್ ಸಂನ್ಯಾಸೀ' ಎಂದಿದ್ದರೆ ವ್ಯಾಖ್ಯಾನವ್ಯಾಖ್ಯೇಯಭಾವವು ಚೆನ್ನಾಗಿ ತೋರುತ್ತದೆ

2 'ಇತ್ಯಭಿಪ್ರಾಯಃ' ಎಂದು ಹೆಚ್ಚಾಗಿ ಮೈ॥

3 "ಇತ್ಯರ್ಥಃ" ಸ॥ ಅ॥

4 ಮೂಲದಲ್ಲಿ ಪುರುಷನು ಎಂದಿದ್ದರೂ ಇಲ್ಲಿ ಸರ್ವಕರ್ಮಸಂನ್ಯಾಸಿಯನ್ನೇ ಹೇಳಿರುತ್ತದೆ ಎಂಬುದು ಸ್ಪಷ್ಟ.

5 ೪-೨೧ರ ಸೂಚನೆ

6. ಸೂ. ಭಾ ೩-೪-೫೦ರ ಸೂಚನೆ.

7. ಇಲ್ಲಿ ಶಾಂತಿಯೆಂದರೆ ಸರ್ವದುಃಖಗಳ ನಾಶರೂಪವಾದ ಆನಂದರೂಪವಾದ ಮೋಕ್ಷವೇ.

ಹೊಂದುವನು. ಬ್ರಹ್ಮವಾದವನೇ ಆಗುತ್ತಾನೆ ಎಂದರ್ಥ.[1]

(ಭಾಷ್ಯ)

೧೩೪. ಸೈಷಾ ಜ್ಞಾನನಿಷ್ಠಾ ಸ್ತೂಯತೇ—

(ಭಾಷ್ಯಾರ್ಥ)

ಆ ಈ ಜ್ಞಾನನಿಷ್ಠೆಯನ್ನು (ಭಗವಂತನು) ಹೊಗಳುತ್ತಾನೆ.—

**ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ ।**
**ಸ್ಥಿತ್ವಾಸ್ಯಾಮನ್ತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ ॥ ೭೨ ॥**

೭೨. ಎಲೈ ಪಾರ್ಥನೆ, ಇದು ಬ್ರಾಹ್ಮಸ್ಥಿತಿಯು. ಇದನ್ನು ಪಡೆದುಕೊಂಡವನು ಮೋಹವನ್ನು ಹೊಂದುವದಿಲ್ಲ. ಈ ಸ್ಥಿತಿಯಲ್ಲಿ ಅಂತಕಾಲದಲ್ಲಿ (ಮಾತ್ರ) ಇದ್ದರೂ ಬ್ರಹ್ಮನಿರ್ವಾಣವನ್ನು ಪಡೆದುಕೊಳ್ಳುತ್ತಾನೆ.

(ಭಾಷ್ಯ)

೧೩೫ ಏಷಾ ಯಥೋಕ್ತಾ ಬ್ರಾಹ್ಮೀ ಬ್ರಹ್ಮಣಿ ಭವಾ ಇಯಂ ಸ್ಥಿತಿಃ ಸರ್ವಂ ಕರ್ಮ[2] ಸಂನ್ಯಸ್ಯ ಬ್ರಹ್ಮಸ್ವರೂಪೇಣೈವ[3] ಅವಸ್ಥಾನಮ್ ಇತ್ಯೇತತ್ । ಹೇ ಪಾರ್ಥ ನೈನಾಂ ಸ್ಥಿತಿಂ ಪ್ರಾಪ್ಯ ಲಬ್ಧ್ವಾ ವಿಮುಹ್ಯತಿ ಮೋಹಂ ನ ಪ್ರಾಪ್ನೋತಿ[4] । ಸ್ಥಿತ್ವಾ ಅಸ್ಯಾಂ ಸ್ಥಿತೌ ಬ್ರಾಹ್ಮ್ಯಾಂ ಯಥೋಕ್ತಾಯಾಮ್ ಅನ್ತಕಾಲೇಽಪಿ ಅನ್ತೇ ವಯಸ್ಯಪಿ ಬ್ರಹ್ಮನಿರ್ವಾಣಂ ಬ್ರಹ್ಮನಿರ್ವೃತಿಂ ಮೋಕ್ಷಂ ಋಚ್ಛತಿ ಗಚ್ಛತಿ । ಕಿಮು ವಕ್ತವ್ಯಂ ಬ್ರಹ್ಮಚರ್ಯಾದೇವ ಸಂನ್ಯಸ್ಯ ಯಾವಜ್ಜೀವಂ ಯೋ ಬ್ರಹ್ಮಣ್ಯೇವ ಅವತಿಷ್ಠತೇ ಸ ಬ್ರಹ್ಮನಿರ್ವಾಣಮ್ ಋಚ್ಛತಿ ಇತಿ ॥

(ಭಾಷ್ಯಾರ್ಥ)

ಈ ಮೇಲೆ ಹೇಳಿರುವದು ಬ್ರಾಹ್ಮೀಸ್ಥಿತಿಯು 'ಬ್ರಾಹ್ಮೀ' ಎಂದರೆ ಬ್ರಹ್ಮದಲ್ಲಿರುವದು ಈ ಸ್ಥಿತಿಯು, ಎಲ್ಲ ಕರ್ಮವನ್ನೂ ಸಂನ್ಯಾಸಮಾಡಿ ಬ್ರಹ್ಮರೂಪವಾಗಿಯೇ ಇದ್ದುಕೊಂಡಿರುವದು ಎಂದರ್ಥ. ಎಲೈ ಪಾರ್ಥನೆ, ಈ ಸ್ಥಿತಿಯನ್ನು ಪಡೆದವನು

---

1. ಬದುಕಿರುವಾಗ ಕಾಮಗಳನ್ನೆಲ್ಲ ಬಿಟ್ಟವನು ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆಂದು ಕ. ೨-೩-೧೪ ಮುಂತಾದ ಶ್ರುತಿಗಳಲ್ಲಿ ಹೇಳಿರುವದರಿಂದ ಇಲ್ಲಿ ಹೇಳಿರುವ ಬ್ರಹ್ಮನಿರ್ವಾಣವೆಂಬ ವಿದೇಹಕೈವಲ್ಯವು ಮತ್ತೆ ಶರೀರಗ್ರಹಣವಾಗುವದಿಲ್ಲವೆಂಬುದನ್ನು ಸೂಚಿಸುವದಕ್ಕೆ ಬಂದಿದೆ. ಬೃ. ಭಾ. ೪-೪-೬,
2. ಈ ಮಾತು ಮ॥ ಮ್ಯೈ॥ಗಳಲ್ಲಿಲ್ಲ
3. 'ಬ್ರಹ್ಮರೂಪೇಣೈವ' ಆ॥ ನಿ॥ ಗು॥
4. "ನ ಮೋಹಂ ಪ್ರಾಪ್ನೋತಿ" ಮ್ಯೈ॥

ಮೋಹಪಡುವದಿಲ್ಲ, ಮೋಹವನ್ನು ಹೊಂದುವದಿಲ್ಲ.[1] **ಈ ಬ್ರಾಹ್ಮೀಸ್ಥಿತಿಯಲ್ಲಿ** **ಈ ಮೇಲೆ ಹೇಳಿದ ಬ್ರಾಹ್ಮಸ್ಥಿತಿಯಲ್ಲಿ, ಅಂತಕಾಲದಲ್ಲಿ** ಎಂದರೆ **ಕೊನೆಯ ವಯಸ್ಸಿನಲ್ಲಿ ಇದ್ದರೆ ಕೂಡ**[2] **ಬ್ರಹ್ಮನಿರ್ವಾಣವನ್ನು ಪಡೆದುಕೊಳ್ಳುತ್ತಾನೆ, ಬ್ರಹ್ಮಾನಂದವೆಂಬ ಮೋಕ್ಷವನ್ನು ಪಡೆದುಕೊಳ್ಳುತ್ತಾನೆ, ಹೊಂದುತ್ತಾನೆ.** (ಇನ್ನು) ಬ್ರಹ್ಮಚರ್ಯದಿಂದಲೇ ಸಂನ್ಯಾಸಮಾಡಿ ಬದುಕಿರುವವರೆಗೂ ಯಾವನು ಬ್ರಹ್ಮದಲ್ಲಿಯೇ ನಿಂತಿರುವನೋ ಆತನು ಬ್ರಹ್ಮನಿರ್ವಾಣವನ್ನು ಹೊಂದುತ್ತಾನೆಂದು ಹೇಳುವದೇನಿದೆ ?

ಇತಿ ಶ್ರೀಮದ್ಭಗವದ್ಗೀತಾಭಾಷ್ಯೇ ಸಾಂಖ್ಯಯೋಗೋ ನಾಮ
ದ್ವಿತೀಯೋಽಧ್ಯಾಯಃ

---

1 ಅಜ್ಞಾನದ ಕಾರ್ಯವಾಗಿರುವ ಮೋಹವು ಆವನಿಗೆ ಮತ್ತೆ ಉಂಟಾಗುವದಿಲ್ಲ.

2 ಧ್ಯಾನವು ಮರಣಕಾಲದಲ್ಲಿಯೂ ಇರಬೇಕು, ಜ್ಞಾನವು ಯಾವಾಗ ಬಂದರೆ ಆಗಲೇ ಮುಕ್ತನಾಗಿಬಿಡುತ್ತಾನೆ, ಪುನರ್ಜನ್ಮವನ್ನು ಹೊಂದುವದಿಲ್ಲ

# ಎರಡನೆಯ ಅಧ್ಯಾಯದ ಸಾರ

೧-೧೦ ಅರ್ಜುನನು ಶ್ರೀಕೃಷ್ಣನ ಪ್ರೋತ್ಸಾಹಕವಾಕ್ಯಗಳನ್ನು ಕೇಳದೆ " ಗುರುಗಳನ್ನೂ ಹಿರಿಯರನ್ನೂ ಯುದ್ಧದಲ್ಲಿ ಕೊಲ್ಲುವದು ಧರ್ಮವಾದೀತೆ ? ನನಗೆ ಯುದ್ಧವನ್ನು ಮಾಡುವದಕ್ಕೆ ಮನಸ್ಸೊಪ್ಪದೆ ಇದೆ ನಿಜವಾದ ತತ್ತ್ವವನ್ನು ನನಗೆ ತಿಳಿಸು ಎಂದು ಬೇಡಿಕೊಳ್ಳಲು ಭಗವಂತನಿಂತೆಂದನು :—

೧೧-೨೫ ಎಲೈ ಅರ್ಜುನನೆ, ಪರಮಾರ್ಥವಾದ ಆತ್ಮತತ್ತ್ವವನ್ನು ಅರಿಯದ್ದರಿಂದ ನಿನಗೆ ಈ ಶೋಕಮೋಹಗಳುಂಟಾಗಿರುತ್ತವೆ ಆತ್ಮನು ನಿತ್ಯನೂ ನಿರ್ವಿಕಾರಿಯೂ ಆಗಿರುತ್ತಾನೆ; ಆದ್ದರಿಂದ ಭೀಷ್ಮಾದಿಗಳಿಗೆ ಆತ್ಮದೃಷ್ಟಿಯಿಂದ ನಾಶವೇ ಇಲ್ಲದ್ದರಿಂದ ಶೋಕಕ್ಕೆ ಕಾರಣವಿಲ್ಲ. ಜೀವರುಗಳಿಗೆ ಅವರು ಬದುಕಿರುವಾಗ ಶೀತೋಷ್ಣಾದಿದ್ವಂದ್ವಗಳು ಸುಖದುಃಖವನ್ನು ಕೊಡುವವಾದರೂ ಅವು ತೋರಿಹಾರುವ ಅನಿತ್ಯ ವೇದನೆಗಳಾಗಿರುವದರಿಂದ ಅವನ್ನು ಕುರಿತೂ ವಿವೇಕಿಯಾದವನು ಶೋಕಿಸುವದಕ್ಕೆ ಕಾರಣವಿರುವದಿಲ್ಲ. ಇರುವದು ನಾಶವಾಗಲಾರದು, ಇಲ್ಲದ್ದು ಹುಟ್ಟಲಾರದು ಎಂಬ ತತ್ತ್ವವನ್ನು ತಿಳಿದವನು ಏತಕ್ಕೆ ಶೋಕಿಸುವನು ? ಆತ್ಮನು ಸತ್ಯಸ್ವರೂಪನಾದ್ದರಿಂದ ಅವನಿಗೆ ನಾಶವಿಲ್ಲವೆಂದೂ ದೇಹಾದಿಗಳು ಅಸತ್ಯವಾಗಿರುವದರಿಂದ ಅವು ನಾಶವಾಗುವದು ಸ್ವಾಭಾವಿಕವೆಂದೂ ತಿಳಿ ಆತ್ಮಸ್ವರೂಪದಿಂದ ನೋಡಿದಾಗ ನಿನಗೆ ಹನನಕರ್ತೃತ್ವವಿಲ್ಲ, ಭೀಷ್ಮಾದಿಗಳಿಗೆ ವಧ್ಯತ್ವವೂ ಇಲ್ಲ ಆತ್ಮನ ಸ್ವರೂಪವನ್ನು ಸರಿಯಾಗಿ ತಿಳಿದುಕೊಂಡವನು ತಾನೂ ಆತ್ಮನೇ ಆಗಿರುವದರಿಂದ ತಾನು ಕೊಲ್ಲುತ್ತೇನೆಂದಾಗಲಿ ಕೊಲ್ಲಿಸಿಕೊಂಡು ಸಾಯುವೆನೆಂದಾಗಲಿ ಬಗೆಯುವದು ಅಸಂಭವ ಬಟ್ಟೆಗಳು ಹಳೆಯುವಾದಾಗ ಅವುಗಳನ್ನು ತೆಗೆದುಹಾಕಿದರೆ ಅಥವಾ ಹೊಸ ಬಟ್ಟೆಗಳನ್ನು ನಾವು ಧರಿಸಿದರೆ ನಮ್ಮ ಸ್ವರೂಪದಲ್ಲಿ ಯಾವ ಮಾರ್ಪಾಡೂ ಆಗುವದಿಲ್ಲವಷ್ಟೆ ? ಇದರಂತೆ ದೇಹವು ಯಾವ ಮಾರ್ಪಾಡನ್ನು ಹೊಂದಿದರೂ ಆತ್ಮನಲ್ಲಿ ಯಾವ ವಿಕಾರವೂ ಆಗುವಂತಿಲ್ಲ. ಆದ್ದರಿಂದ ಯಾವ ಬಗೆಯಿಂದಲೂ ಮಾರ್ಪಡಿಸಲಾಗದ ಈ ಆತ್ಮನ ವಿಷಯದಲ್ಲಿ ಶೋಕಿಸದಿರು.

೨೬-೩೦ ಆತ್ಮನು ಶರೀರವು ಹುಟ್ಟುವಾಗ ಹುಟ್ಟಿ ಅದು ಸಾಯುವಾಗ ಅದರ ಜೊತೆಯಲ್ಲಿಯೇ ಸಾಯುವನೆಂಬ ಸಾಮಾನ್ಯರ ನಂಬಿಕೆಯನ್ನೇ ನೀನು ಇಟ್ಟುಕೊಂಡರೂ ಶೋಕಕ್ಕೆ ಕಾರಣವಿಲ್ಲ. ಹುಟ್ಟಿ ಸಾಯುವದೇ ಆತ್ಮನ ಸ್ವಭಾವವಾದರೆ ಅದಕ್ಕಾಗಿ ಶೋಕಪಡುವದೇಕೆ ? ಆದರೆ ವಸ್ತುಸ್ಥಿತಿಯು ಹೀಗಿಲ್ಲ ಆತ್ಮನು ಅವಧ್ಯನಾಗಿರುತ್ತಾನೆ. ಆದ್ದರಿಂದ ಶೋಕಕ್ಕೆ ಕಾರಣವೇ ಇಲ್ಲ

೩೧-೩೮. ನಿನಗೆ ಯುದ್ಧವು ಸ್ವಧರ್ಮವೆಂಬ ದೃಷ್ಟಿಯಿಂದ ನೋಡಿದರೂ ಶೋಕಕ್ಕೆ ಕಾರಣವಿಲ್ಲ. ಏಕೆಂದರೆ ನೀನು ಗೆದ್ದರೆ ರಾಜ್ಯಲಾಭವುಂಟು, ಯುದ್ಧದಲ್ಲಿ ಸತ್ತರೆ ವೀರಸ್ವರ್ಗವುಂಟು. ಹೀಗಿದ್ದರೂ ಸ್ವಧರ್ಮವನ್ನು ಬಿಟ್ಟರೆ ನಿನಗೆ ಕೆಟ್ಟ ಹೆಸರು ಬರುತ್ತದೆ, ಪಾಪವೂ ಗಂಟುಬೀಳುತ್ತದೆ. ಸುಖದುಃಖಗಳನ್ನೂ ಲಾಭಾಲಾಭಗಳನ್ನೂ ಜಯಾಪಜಯ

ಗಳನ್ನೂ ಲಕ್ಷ್ಯದಲ್ಲಿಟ್ಟು ಶೋಕಿಸುತ್ತಾ ಕೂರುವದು ಸ್ವಧರ್ಮದೃಷ್ಟಿಯಿಂದಲೇ ಸರಿಯಲ್ಲ; ಇನ್ನು ಪರಮಾರ್ಥದೃಷ್ಟಿಯಿಂದ ಸರಿಯಲ್ಲವೆಂದು ಹೇಳಬೇಕೆ ?

೩೯-೪೫. ಇದುವರೆಗೆ ನಾನು ನಿನಗೆ ಹೇಳಿರುವ ಜ್ಞಾನವು ಸಾಂಖ್ಯವಿಷಯವಾದದ್ದು. ಇನ್ನು ಕರ್ಮಯೋಗವಿಷಯದ ತಿಳಿವಳಿಕೆಯನ್ನು ಹೇಳುವೆನು ಕೇಳು ಈ ಕರ್ಮಯೋಗವು ಕರ್ಮಬಂಧವನ್ನೇ ಕಡಿದುಹಾಕುವದು. ಇದರಲ್ಲಿ ಮಾಡಿದ್ದಕ್ಕೆ ಒಳ್ಳೆಯ ಫಲವು ತಪ್ಪಿದ್ದಲ್ಲ? ಕೆಟ್ಟಫಲದ ಸುಳಿವಿಲ್ಲ; ಎಳ್ಳಷ್ಟು ಇದನ್ನು ಆಚರಿಸಿದರೂ ಕ್ರಮಕ್ರಮವಾಗಿ ಸಂಸಾರಭಯವನ್ನೇ ತಪ್ಪಿಸುವದು. ಕಾಮ್ಯಕರ್ಮಗಳನ್ನೇ ಹೊಗಳುತ್ತಾ ಸ್ವರ್ಗವೇ ಪರಮಪುರುಷಾರ್ಥವೆಂದು ನಂಬಿರುವ ಮೂಢರಿಗೆ ಈ ಯೋಗದ ನಿಶ್ಚಯಬುದ್ಧಿಯು ದಕ್ಕುವದಿಲ್ಲ. ಸಿದ್ಧಿಯಾಗಲಿ, ಆಗದಿರಲಿ, ಬುದ್ಧಿಯನ್ನು ಸಮವಾಗಿಟ್ಟುಕೊಂಡು ಕರ್ಮವನ್ನಾಚರಿಸುತ್ತಿರುವದೇ ಈ ಯೋಗದಲ್ಲಿರುವ ಜಾಣತನವು. ಯಾವ ವಿಹಿತಕರ್ಮವನ್ನೇ ಆಗಲಿ, ಅದರ ಫಲವೇನೆಂದು ವಿಚಾರಿಸದೆ ಸಮತ್ವಬುದ್ಧಿಯಿಂದ ಮಾಡುತ್ತಿರಬೇಕು. ನೀನೂ ನಿನಗೆ ವಿಹಿತವಾಗಿರುವ ಧರ್ಮಯುದ್ಧವನ್ನು ಹೀಗೆ ಮಾಡು

೪೬-೫೩. ಕರ್ಮಯೋಗವನ್ನು ಮಾಡುವವನು ಕಾಮ್ಯಕರ್ಮವನ್ನು ಮಾಡುವವರಿಗಿಂತ ಉತ್ತಮಫಲವನ್ನು ಪಡೆದುಕೊಳ್ಳಬಹುದು. ಹೇಗೆಂದರೆ ಕರ್ಮಯೋಗಿಗಳು ಧರ್ಮಾಧರ್ಮಗಳನ್ನು ಮೀರಿ ಸಾಂಖ್ಯಬುದ್ಧಿಯನ್ನು ಪಡೆಯುವದರ ಮೂಲಕ ಜನ್ಮಬಂಧದಿಂದಲೂ ಬಿಡುಗಡೆಯಾಗಿ ಪರಮಾತ್ಮನ ಸ್ಥಾನವನ್ನೇ ಸೇರುವರು. ಅದು ಹೇಗೆಂದರೆ ಕರ್ಮಯೋಗದಿಂದ ಬುದ್ಧಿಯಲ್ಲಿರುವ ಕಲ್ಮಷವೂ ಚಾಂಚಲ್ಯವೂ ಹೋಗಿ ಆತ್ಮಾನಾತ್ಮಗಳ ವಿವೇಕದಿಂದುಂಟಾದ ಉತ್ಕೃಷ್ಟಜ್ಞಾನವು ನಿಲುಗಡೆಗೆ ಬರುವದು. ಹೀಗೆ ಜ್ಞಾನವು ನೆಲೆನಿಂತವನಿಗೆ ಸ್ಥಿತಪ್ರಜ್ಞನೆಂದು ಹೆಸರು.

೫೪-೬೯. ಸ್ಥಿತಪ್ರಜ್ಞನ ಸ್ವಭಾವವನ್ನೂ ವ್ಯವಹಾರವನ್ನೂ ಹೇಳುವೆನು ಕೇಳು. (೧) ಅವನು ಸಕಲ ಕಾಮಗಳನ್ನೂ ದೂರಮಾಡಿ ಆತ್ಮಸ್ವರೂಪಜ್ಞಾನದಿಂದಲೇ ತೃಪ್ತನಾಗಿರುತ್ತಾನೆ. (೨) ಅವನು ಸುಖವನ್ನು ಬೇಕೆಂತ ಬಯಸುವದಿಲ್ಲ, ದುಃಖದಿಂದ ಕಳವಳಪಡುವದಿಲ್ಲ; ಒಳ್ಳೆಯದಾಗಲಿ ಕೆಟ್ಟದ್ದಾಗಲಿ ರಾಗದ್ವೇಷಗಳಿಲ್ಲದೆ ಬಂದದ್ದನ್ನು ಅನುಭವಿಸಿಕೊಂಡಿರುತ್ತಾನೆ. (೩) ಅವನು ಇಂದ್ರಿಯಗಳನ್ನೆಲ್ಲ ಉಪಸಂಹಾರಮಾಡಿಕೊಂಡು ಆತ್ಮನಿಷ್ಠನಾಗಿರುತ್ತಾನೆ. ರಾಗದ್ವೇಷಗಳಿಲ್ಲದೆ ಸಿಕ್ಕಿದಷ್ಟು ವಿಷಯಗಳನ್ನು ಇಂದ್ರಿಯಗಳಿಂದ ಅನುಭವಿಸಿಕೊಂಡಿರುವದರಿಂದ ಮನಸ್ಸಿನಲ್ಲಿ ಪ್ರಸನ್ನತೆಯೂ ಶಾಂತಿಯೂ ಸುಖವೂ ಅವನಿಗೆ ದೊರಕುತ್ತವೆ. (೪) ಲೌಕಿಕವ್ಯವಹಾರಪ್ರಪಂಚವನ್ನು ಅವನು ಅರಿಯನು, ಅವನು ಅರಿತುಕೊಂಡಿರುವ ಪರಮಾರ್ಥತತ್ತ್ವವನ್ನು ಲೌಕಿಕರು ಅರಿಯರು.

೭೦-೭೨. ಯಾವ ವಿಷಯಭೋಗದಿಂದಲೂ ಉಬ್ಬದೆ, ಯಾವ ಇಚ್ಛೆಗೂ ಒಳಗಾಗದೆ, ಶರೀರಯಾತ್ರೆಗೆ ಬೇಕಾಗುವಷ್ಟು ವಿಷಯಗಳನ್ನು ನಿಃಸ್ಪೃಹನಾಗಿ ನನ್ನದೆಂಬ ಅಭಿಮಾನವುಕೂಡ ಇಲ್ಲದೆ ಅನುಭವಿಸುತ್ತಿರುವ ನಿರಹಂಕಾರಿಯಾದ ಈ ಸ್ಥಿತಪ್ರಜ್ಞನೇ ಕೈವಲ್ಯಕ್ಕೆ ಪಾತ್ರನಾಗಿರುವನು. ಈ ಸ್ಥಿತಿಯನ್ನು ಯಾವನು ಯಾವಾಗ ಪಡೆದುಕೊಂಡರೂ ಅವನಿಗೆ ಬ್ರಹ್ಮನಿರ್ವಾಣವು ಪ್ರಾಪ್ತವಾಗುವದು.

# ಮೂರನೆಯ ಅಧ್ಯಾಯ

## (ಕರ್ಮಯೋಗ)

## ಅಧ್ಯಾಯದ ಸಂಬಂಧ

(ಭಾಷ್ಯ)

೧೩೬. ಶಾಸ್ತ್ರಸ್ಯ ಪ್ರವೃತ್ತಿನಿವೃತ್ತಿವಿಷಯಭೂತೇ ದ್ವೇ ಬುದ್ಧೀ ಭಗವತಾ ನಿರ್ದಿಷ್ಟೇ ಸಾಙ್ಖ್ಯೇ ಬುದ್ಧಿಃ, ಯೋಗೇ ಬುದ್ಧಿಃ ಇತಿ ಚ । ತತ್ರ "ಪ್ರಜಹಾತಿ ಯದಾ ಕಾಮಾನ್" (೨-೫೫) ಇತ್ಯಾರಭ್ಯ ಆ ಅಧ್ಯಾಯಪರಿಸಮಾಪ್ತೇಃ ಸಾಙ್ಖ್ಯಬುದ್ಧ್ಯಾಶ್ರಿತಾನಾಂ ಸಂನ್ಯಾಸಂ ಕರ್ತವ್ಯಮುಕ್ತ್ವಾ ತೇಷಾಂ[1] ತನ್ನಿಷ್ಠತಯೈವ ಚ ಕೃತಾರ್ಥತಾ ಉಕ್ತಾ "ಏಷಾ ಬ್ರಾಹ್ಮೀ ಸ್ಥಿತಿಃ" (೨-೭೨) ಇತಿ । ಅರ್ಜುನಾಯ ಚ "ಕರ್ಮಣ್ಯೇವಾಧಿಕಾರಸ್ತೇ ಮಾ ತೇ ಸಙ್ಗೋಽಸ್ತ್ವಕರ್ಮಣಿ" (೨-೪೭) ಇತಿ ಕರ್ಮೈವ ಕರ್ತವ್ಯಮುಕ್ತವಾನ್ ಯೋಗಬುದ್ಧಿಮ್ ಆಶ್ರಿತ್ಯ, ನ ತತ ಏವ ಶ್ರೇಯಃ ಪ್ರಾಪ್ತಿಮ್ ಉಕ್ತವಾನ್ । ತದೇತದಾಲಕ್ಷ್ಯ ಪರ್ಯಾಕುಲೀಭೂತಬುದ್ಧಿಃ ಅರ್ಜುನ ಉವಾಚ । ಕಥಂ ಭಕ್ತಾಯ ಶ್ರೇಯೋಽರ್ಥಿನೇ ಯತ್[2] ಸಾಕ್ಷಾಚ್ಛ್ರೇಯಃಪ್ರಾಪ್ತಿಸಾಧನಂ[3] ಸಾಙ್ಖ್ಯಬುದ್ಧಿನಿಷ್ಠಾಂ ಶ್ರಾವಯಿತ್ವಾ ಮಾಂ ಕರ್ಮಣಿ ದೃಷ್ಟಾನೇಕಾನರ್ಥಯುಕ್ತೇ ಪಾರಂಪರ್ಯೇಣಾಪಿ ಅನೈಕಾನ್ತಿಕಶ್ರೇಯಃಪ್ರಾಪ್ತಿಫಲೇ ನಿಯುಞ್ಜ್ಯಾತ್ ಇತಿ ಯುಕ್ತಃ ಪರ್ಯಾಕುಲೀಭಾವೋಽರ್ಜುನಸ್ಯ ತದನುರೂಪಶ್ಚ ಪ್ರಶ್ನಃ "ಜ್ಯಾಯಸೀ ಚೇತ್" (೩-೧) ಇತ್ಯಾದಿಃ । ಪ್ರಶ್ನಾಪಾಕರಣವಾಕ್ಯಂ ಚ ಭಗವತೋಕ್ತಂ[4] ಯುಕ್ತಂ ಯಥೋಕ್ತವಿಭಾಗವಿಷಯೇ ಶಾಸ್ತ್ರೇ ॥

(ಭಾಷ್ಯಾರ್ಥ)

ಸಾಂಖ್ಯಬುದ್ಧಿ, ಯೋಗಬುದ್ಧಿ-ಎಂಬ (ಹೆಸರಿನಿಂದ) ಪ್ರವೃತ್ತಿನಿವೃತ್ತಿಗಳಿಗೆ ಸಂಬಂಧಪಟ್ಟಿರುವ ಎರಡು ಬುದ್ಧಿಗಳನ್ನು ಭಗವಂತನು ತಿಳಿಸಿರುತ್ತಾನೆ ಇವುಗಳಲ್ಲಿ "ಪ್ರಜಹಾತಿ ಯದಾ ಕಾಮಾನ್" (೨-೭೨) ಎಂಬ ಶ್ಲೋಕದಿ ದ ಹಿಡಿದು (ಎರಡ

---

1. ಈ ಮಾತು ಕೆಲವು ಪಾಠಗಳಲ್ಲಿಲ್ಲ
2. ಈ ಮಾತು ಇಲ್ಲದಿದ್ದರೂ ಸಾಗುತ್ತದೆ
3. 'ಶ್ರೇಯಃಸಾಧನಮ್' ನಿ॥ ಮು॥
4. 'ಭಗವತಃ ಯುಕ್ತಂ' ವಾ॥

ನೆಯು) ಅಧ್ಯಾಯವು ಮುಗಿಯುವವರೆಗೂ ಸಾಂಖ್ಯಬುದ್ಧಿಯನ್ನಾಶ್ರಯಿಸಿದವರಿಗೆ ಸಂನ್ಯಾಸವು ಕರ್ತವ್ಯವೆಂದು ಹೇಳಿ ಅವರು ಆ ನಿಷ್ಠೆಯಲ್ಲಿರುವದರಿಂದಲೇ ಕೃತಾರ್ಥರಾಗುವರೆಂದು "ಏಷಾ ಬ್ರಾಹ್ಮೀ ಸ್ಥಿತಿಃ" ಎಂಬ (ಶ್ಲೋಕದಲ್ಲಿ) ಹೇಳಿರುತ್ತಾನೆ. ಅರ್ಜುನನಾದರೋ (ಭಗವಂತನು) ಯೋಗಬುದ್ಧಿಯನ್ನು ಆಶ್ರಯಿಸಿಕೊಂಡು "ಕರ್ಮಣ್ಯೇವಾಧಿಕಾರಸ್ತೇ ಮಾ ತೇ ಸಙ್ಗೋಽಸ್ತ್ವಕರ್ಮಣಿ" (೨-೪೭) ಎಂದು ಕರ್ಮವನ್ನೇ ಮಾಡತಕ್ಕದ್ದೆಂದು ಹೇಳಿರುತ್ತಾನೆ (ಆದರೆ) ಅದರಿಂದಲೇ ಮುಕ್ತಿಯಾಗುವದೆಂದು ಹೇಳಿರುವದಿಲ್ಲ[1] ಇದನ್ನು ಕಂಡು ಅಂತಃಕರಣದಲ್ಲಿ ಕಳವಳಗೊಂಡ ಅರ್ಜುನನು (ಈ ಮುಂದಿನ) ಪ್ರಶ್ನೆಯನ್ನು ಕೇಳಿರುತ್ತಾನೆ.

ಮೇಲೆ ನಾವು ಹೇಳಿರುವಂತೆ ವಿಷಯಗಳನ್ನು ವಿಂಗಡಿಸಿಕೊಂಡು ಗೀತಾಶಾಸ್ತ್ರವು ಹೇಳುತ್ತದೆ ಎಂಬ ಪಕ್ಷದಲ್ಲಿ ಮುಕ್ತಿಯನ್ನು ಬಯಸುತ್ತಿರುವ ಭಕ್ತನಾದ ನನಗೆ ಮುಕ್ತಿಯನ್ನು ಪಡೆಯುವದಕ್ಕೆ ನೇರಾದ ಸಾಧನವಾಗಿರುವ ಸಾಂಖ್ಯಬುದ್ಧಿಯು ನಿಷ್ಠೆಯನ್ನು ಹೇಳಿ, ಕಂಡಂತೆ ಅನೇಕ ಅನರ್ಥಗಳಿಂದ ಕೂಡಿರುವ[2], ಪರಂಪರೆಯಿಂದಲಾದರೂ ಮುಕ್ತಿಯನ್ನು ಕೊಡುವದೆಂದು ಗೊತ್ತಾಗಿ ಹೇಳುವದಕ್ಕಾಗದ, ಕರ್ಮದಲ್ಲಿ ನನ್ನನ್ನು ಏತಕ್ಕೆ (ಭಗವಂತನು) ನಿಯಮಿಸುತ್ತಿದ್ದಾನು ?" ಎಂದು ಅರ್ಜುನನು ಕಳವಳಗೊಳ್ಳುವದು ಯುಕ್ತವಾಗಿರುತ್ತದೆ 'ಕರ್ಮಕ್ಕಿಂತ ಜ್ಞಾನವು ಹೆಚ್ಚಿನದಾದರೆ" (೩-೧) ಎಂದು ಮುಂತಾಗಿ ಅವನು ಕೇಳಿರುವ ಪ್ರಶ್ನೆಯೂ ಅದಕ್ಕೆ ಅನುಗುಣವಾಗಿರುತ್ತದೆ ಭಗವಂತನು (ಈ) ಪ್ರಶ್ನೆಗೆ ಹೇಳಿರುವ ಉತ್ತರದ ವಾಕ್ಯವೂ ಯುಕ್ತವಾಗಿರುತ್ತದೆ

## ವೃತ್ತಿಕಾರರು ಹೇಳಿರುವ ಅಧ್ಯಾಯಸಂಬಂಧವು ಪೂರ್ವಾಪರ ವಿರುದ್ಧ

(ಭಾಷ್ಯ)

೧೩೭. ಕೇಚಿತ್ ತು ಅರ್ಜುನಸ್ಯ ಪ್ರಶ್ನಾರ್ಥಮ್ ಅನ್ಯಥಾ ಕಲ್ಪಯಿತ್ವಾ

---

1 "ದೂರೇಣಹ್ಯವರಂ ಕರ್ಮ" ಮುಂತಾದ ಶ್ಲೋಕಗಳಲ್ಲಿ ಕರ್ಮಯೋಗಕ್ಕೂ ಫಲವನ್ನು ಹೇಳಿದೆಯಾದರೂ ಅದು ಸ್ಪಷ್ಟವಾಗಿಲ್ಲ, ಆ ಶ್ಲೋಕಗಳಲ್ಲಿ ಸಾಂಖ್ಯಬುದ್ಧಿಯನ್ನೇ ಹೇಳಿದೆ ಎಂದೂ ಅರ್ಥವನ್ನು ಮಾಡಬಹುದು ಎಂದು ೨_೫೧ (ಭಾ. ಭಾ ೯೫) ಭಾಷ್ಯಕಾರರು ಹೇಳಿರುವದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು 'ಪ್ರಜಹಾತಿ' ಮುಂತಾದ ಶ್ಲೋಕಗಳಲ್ಲಂತೂ ಸಂನ್ಯಾಸಿಗೇ ಸ್ಥಿತಪ್ರಜ್ಞತ್ವವನ್ನು ಸಂಪಾದಿಸುವ ಸಾಧನಯನ್ನು ಹೇಳಿರುತ್ತದೆ

2. ಸ್ವಜನರನ್ನು ಕೊಲ್ಲುವದು ಮುಂತಾದ ಅನರ್ಥಗಳನ್ನು ಅರ್ಜುನನೇ ಹಿಂದೆ ಹೇಳಿದಾನೆ.

ತತ್ಪ್ರತಿಕೂಲಂ ಭಗವತಃ ಪ್ರತಿವಚನಂ ವರ್ಣಯನ್ತಿ । ಯಥಾ ಚ ಆತ್ಮನಾ ಸಂಬನ್ಧಗ್ರನ್ಥೇ ಗೀತಾರ್ಥೋ ನಿರೂಪಿತಃ ತತ್ಪ್ರತಿಕೂಲಂ ಚ ಇಹ ಪುನಃ ಪ್ರಶ್ನಪ್ರತಿವಚನಯೋರರ್ಥಂ ನಿರೂಪಯನ್ತಿ । ಕಥಮ್ ? ತತ್ರ ಸಂಬನ್ಧಗ್ರನ್ಥೇ ತಾವತ್ ಸರ್ವೇಷಾಮ್ ಆಶ್ರಮಿಣಾಂ ಜ್ಞಾನಕರ್ಮಣೋಃ ಸಮುಚ್ಚಯಃ ಗೀತಾಶಾಸ್ತ್ರೇ ನಿಶ್ಚಿತೋಽರ್ಥಃ[1] ಇತ್ಯುಕ್ತಮ್ । ಪುನರ್ವಿಶೇಷಿತಂ ಚ ಯಾವಜ್ಜೀವಶ್ರುತಿಚೋದಿತಾನಿ[2] ಕರ್ಮಾಣಿ ಪರಿತ್ಯಜ್ಯ ಕೇವಲಾದೇವ ಜ್ಞಾನಾತ್ ಮೋಕ್ಷಃ ಪ್ರಾಪ್ಯತೇ ಇತ್ಯೇತತ್ ಏಕಾನ್ತೇನೈವ ಪ್ರತಿಷಿದ್ಧಮ್ ಇತಿ । ಇಹ ತು ಆಶ್ರಮವಿಕಲ್ಪಂ ದರ್ಶಯತಾ ಯಾವಜ್ಜೀವಶ್ರುತಿಚೋದಿತಾನಾಮೇವ ಕರ್ಮಣಾಂ ಪರಿತ್ಯಾಗ ಉಕ್ತಃ । ತತ್ ಕಥಮ್ ಈದೃಶಂ ವಿರುದ್ಧಮರ್ಥಮ್ ಅರ್ಜುನಾಯ ಬ್ರೂಯಾದ್ ಭಗವಾನ್ ? ಶ್ರೋತಾ ವಾ ಕಥಂ ವಿರುದ್ಧಮರ್ಥಮ್ ಅವಧಾರಯೇತ್ ?

(ಭಾಷ್ಯಾರ್ಥ)

ಆದರೆ **ಕೆಲವರು** (ಇಲ್ಲಿ) ಅರ್ಜುನನು ಕೇಳಿರುವ ಪ್ರಶ್ನೆಗೆ ಬೇರೊಂದು (ರೀತಿಯಲ್ಲಿ) ಅರ್ಥವನ್ನು ಕಲ್ಪಿಸಿ ಅದಕ್ಕೆ ವಿರುದ್ಧವಾಗಿರುವಂತೆ ಭಗವಂತನ ಉತ್ತರವನ್ನು ವಿವರಿಸಿರುತ್ತಾರೆ ಮತ್ತು ತಾವು ಸಂಬಂಧಗ್ರಂಥದಲ್ಲಿ ಗೀತಾರ್ಥವೆಂದು ಹೇಗೆ ಗೊತ್ತುಪಡಿಸಿರುತ್ತಾರೋ ಅದಕ್ಕೆ ಪ್ರತಿಕೂಲವಾಗಿಯೇ ಇಲ್ಲಿ ಪ್ರಶ್ನೋತ್ತರಗಳಿಗೆ ಅರ್ಥವನ್ನು ಗೊತ್ತುಪಡಿಸಿದ್ದಾರೆ (ಅದು) ಹೇಗೆಂದರೆ. ಮೊದಲನೆಯದಾಗಿ (ಇವೆರಡು ಸ್ಥಲ)ಗಳೊಳಗೆ ಸಂಬಂಧಗ್ರಂಥದಲ್ಲಿ "ಎಲ್ಲಾ ಆಶ್ರಮಿಗಳವರೂ ಜ್ಞಾನಕರ್ಮಗಳನ್ನು ನೇರಿಸಿಕೊಂಡೇ ಅನುಷ್ಠಾನಮಾಡಬೇಕೆಂಬುದು ಗೀತಾಶಾಸ್ತ್ರದಲ್ಲಿ ನಿಶ್ಚಿತವಾಗಿರುವ ವಿಷಯವು" ಎಂದು ಹೇಳಿರುತ್ತದೆ ಮತ್ತೆ ಅದನ್ನು (ಇನ್ನೂ) ಬಿಚ್ಚಿ "ಬದುಕಿರುವವರಗೂ ಮಾಡುತ್ತಿರಬೇಕೆಂದು ಶ್ರುತಿಯಲ್ಲಿ ವಿಧಿಸಿರುವ ಕರ್ಮಗಳನ್ನು ಪರಿತ್ಯಾಗಮಾಡಿ ಬರಿಯ ಜ್ಞಾನದಿಂದಲೇ ಮೋಕ್ಷವನ್ನು ಹೊಂದಬಹುದೆಂಬುದನ್ನು ಪೂರ್ಣವಾಗಿಯೂ ಅಲ್ಲಗಳೆದಿರುತ್ತದೆ" ಎಂದು (ಹೇಳಿರುತ್ತದೆ). ಆದರ ಇಲ್ಲಿಯೋ ಎಂದರೆ (ಮುಮುಕ್ಷುಗಳಿಗೆ) ಆಶ್ರಮವಿಕಲ್ಪವನ್ನು[3] ಹೇಳಿ ಯಾವಜ್ಜೀವ ಶ್ರುತಿಗಳಲ್ಲಿ[4] ವಿಧಿಸಿರುವ ಕರ್ಮಗಳನ್ನೇ ಬಿಡಬಹುದೆಂದು ಹೇಳಿರುತ್ತದೆ

---

1. 'ನಿರೂಪಿತೋಽರ್ಥಃ'
2. "ಯಾವಜ್ಜೀವಂ ಶ್ರುತಿಚೋದಿತಾನಿ" ಎಂಬ ಪಾಠವು ಬರೆದವರ ಕೈತಪ್ಪಾಗಿರಬೇಕು.
3. ಗೃಹಸ್ಥಾಶ್ರಮದಲ್ಲಿಯೇ ಇರಬೇಕೆಂಬ ನಿಯಮವಿಲ್ಲವೆಂದು.
4. "ಯಾವಜ್ಜೀವಮಗ್ನಿಹೋತ್ರಂ ಜುಹೋತಿ" ಮುಂತಾದ ಶ್ರುತಿಗಳು. ಐ. ಭಾ. ಭಾ. ೧೯, ೨೨. ತೈ ಭಾ ಭಾ. ೮೨.

ಈ ಇಂಥ (ಪೂರ್ವಾಪರ) ವಿರುದ್ಧವಾದ ವಿಷಯವನ್ನು ಅರ್ಜುನನಿಗೆ ಭಗವಂತನು ಹೇಗೆ ಹೇಳಿಯಾನು ? ಕೇಳುವ (ಅರ್ಜುನನು) ತಾನೆ ಹೇಗೆ ವಿರುದ್ಧವಾದ (ಈ) ವಿಷಯವನ್ನು ತಿಳಿದುಕೊಂಡಾನು ?

(ಭಾಷ್ಯ)

೧೩೮. ತತ್ರ ಏತತ್ ಸ್ಯಾತ್–ಗೃಹಸ್ಥಾನಾಮೇವ ಶ್ರೌತ[1]ಕರ್ಮಪರಿತ್ಯಾಗೇನ ಕೇವಲಾದೇವ ಜ್ಞಾನಾತ್ ಮೋಕ್ಷಃ ಪ್ರತಿಷಿಧ್ಯತೇ, ನ ತು ಆಶ್ರಮಾನ್ತರಾಣಾಮ್ ಇತಿ । ಏತದಪಿ ಪೂರ್ವೋತ್ತರವಿರುದ್ಧಮೇವ । ಕಥಮ್ ? ಸರ್ವಾಶ್ರಮಿಣಾಂ ಜ್ಞಾನಕರ್ಮಣೋಃ ಸಮುಚ್ಚಯೋ ಗೀತಾಶಾಸ್ತ್ರೇ ನಿಶ್ಚಿತೋಽರ್ಥಃ ಇತಿ ಪ್ರತಿಜ್ಞಾಯ ಇಹ ಕಥಂ ತದ್ವಿರುದ್ಧಂ ಕೇವಲಾದೇವ ಜ್ಞಾನಾತ್ ಮೋಕ್ಷಂ ಬ್ರೂಯಾತ್ ಆಶ್ರಮಾನ್ತರಾಣಾಮ್ ?

(ಭಾಷ್ಯಾರ್ಥ)

ಇಲ್ಲಿ ಶ್ರೌತಕರ್ಮಗಳನ್ನು ಬಿಟ್ಟು ಬರಿಯ ಜ್ಞಾನದಿಂದಲೇ ಮೋಕ್ಷವನ್ನು (ಪಡೆಯ)ಲಾಗುವದಿಲ್ಲವೆಂದು ಹೇಳಿದ್ದು ಗೃಹಸ್ಥರಿಗೇ ಹೊರತು ಮಿಕ್ಕ ಆಶ್ರಮದವರಿಗಲ್ಲ ಎಂಬೀ (ಅಭಿಪ್ರಾಯವು ಅವರಿಗೆ) ಇರಬಹುದು. (ಆದರೆ) ಇದೂ ಪೂರ್ವೋತ್ತರವಿರುದ್ಧವಾಗಿಯೇ ಇರುತ್ತದೆ. ಹೇಗೆಂದರೆ ಎಲ್ಲಾ ಆಶ್ರಮದವರೂ ಜ್ಞಾನಕರ್ಮಗಳನ್ನು ಸೇರಿಸಿಕೊಂಡು ಅನುಷ್ಠಾನಮಾಡಬೇಕೆಂಬುದು ಗೀತಾಶಾಸ್ತ್ರದಲ್ಲಿ ನಿಶ್ಚಿತವಾಗಿರುವ ವಿಷಯವು ಎಂದು (ಮೊದಲು) ಹೇಳಿ ಇಲ್ಲಿ ಅದಕ್ಕೆ ವಿರುದ್ಧವಾಗಿ ಮಿಕ್ಕ ಆಶ್ರಮದವರಿಗೆ ಬರಿಯ ಜ್ಞಾನದಿಂದಲೇ ಮೋಕ್ಷ(ವಾಗುವ)ದೆಂದು (ಭಗವಂತನು) ಹೇಗೆ ಹೇಳಿಯಾನು ?

(ಭಾಷ್ಯ)

೧೩೯. ಅಥ ಮತಮ್ ಶ್ರೌತಕರ್ಮಾಪೇಕ್ಷಯಾ ಏತದ್ ವಚನಮ್ ಕೇವಲಾದೇವ ಜ್ಞಾನಾತ್ ಶ್ರೌತಕರ್ಮರಹಿತಾತ್ ಗೃಹಸ್ಥಾನಾಂ ಮೋಕ್ಷಃ ಪ್ರತಿಷಿಧ್ಯತೇ ಇತಿ । ತತ್ರ ಗೃಹಸ್ಥಾನಾಂ ವಿದ್ಯಮಾನಮಪಿ ಸ್ಮಾರ್ತಂ ಕರ್ಮ ಅವಿದ್ಯಮಾನವತ್ ಉಪೇಕ್ಷ್ಯ[2] ಜ್ಞಾನಾದೇವ ಕೇವಲಾತ್ ಇತಿ ಉಚ್ಯತೇ ಇತಿ । ಏತದಪಿ ವಿರುದ್ಧಮ್। ಕಥಮ್ ? ಗೃಹಸ್ಥಸ್ಯೈವ ಸ್ಮಾರ್ತಕರ್ಮಣಾ ಸಮುಚ್ಚಿತಾತ್ ಜ್ಞಾನಾತ್ ಮೋಕ್ಷಃ ಪ್ರತಿಷಿಧ್ಯತೇ ನ ತು ಆಶ್ರಮಾನ್ತರಾಣಾಮ್ ಇತಿ ಕಥಂ ವಿವೇಕಿಭಿಃ ಶಕ್ಯಮ್

---

1. ' ಶ್ರೌತಸ್ಮಾರ್ತ ' ಎಂದು ಮ|| ಮೈ|| ಪಾಠಗಳಲ್ಲಿ ತಪ್ಪಾಗಿ ಬಿದ್ದಿದೆ.
2. ' ಅನಪೇಕ್ಷ್ಯ ' ಮ|| ಮೈ||

ಅವಧಾರಯಿತುಮ್ ? ಕಿಂ ಚ ಯದಿ ಮೋಕ್ಷಸಾಧನತ್ವೇನ ಸ್ಮಾರ್ತಾನಿ ಕರ್ಮಾಣಿ ಊರ್ಧ್ವರೇತಸಾಂ ಸಮುಚ್ಚೀಯನ್ತೇ ತಥಾ ಗೃಹಸ್ಥಸ್ಯಾಪಿ ಇಷ್ಯತಾಂ ಸ್ಮಾರ್ತೈರೇವ ಸಮುಚ್ಚಯಃ, ನ ಶ್ರೌತೈಃ । ಅಥ ಶ್ರೌತೈಃ ಸ್ಮಾರ್ತೈಶ್ಚ ಗೃಹಸ್ಥಸ್ಯೈವ ಸಮುಚ್ಚಯೋ ಮೋಕ್ಷಾಯ, ಊರ್ಧ್ವರೇತಸಾಂ ತು ಸ್ಮಾರ್ತಕರ್ಮಮಾತ್ರಸಮುಚ್ಚಿತಾತ್ ಜ್ಞಾನಾತ್ ಮೋಕ್ಷಃ ಇತಿ । ತತ್ರ ಏವಂ ಸತಿ ಗೃಹಸ್ಥಸ್ಯ ಆಯಾಸಬಾಹುಲ್ಯಮ್[1], ಶ್ರೌತಂ ಸ್ಮಾರ್ತಂ ಚ ಬಹುದುಃಖರೂಪಂ ಕರ್ಮ ಶಿರಸಿ ಆರೋಪಿತಂ ಸ್ಯಾತ್ ॥

(ಭಾಷ್ಯಾರ್ಥ)

ಹಾಗಿಲ್ಲದೆ (ಈ ವೃತ್ತಿಕಾರರಿಗೆ) "ಶ್ರೌತಕರ್ಮವನ್ನು ಲಕ್ಷ್ಯದಲ್ಲಿಟ್ಟು ಈ ಮಾತನ್ನು (ಹೇಳುತ್ತೇವೆ) ಶ್ರೌತಕರ್ಮವಿಲ್ಲದ ಬರಿಯ ಜ್ಞಾನದಿಂದ ಗೃಹಸ್ಥರಿಗೆ ಮೋಕ್ಷವಾಗಲಾರದೆಂದು (ನಮ್ಮ ಅಭಿಪ್ರಾಯವು). ಇಲ್ಲಿ ಗೃಹಸ್ಥರಿಗೆ ಸ್ಮಾರ್ತಕರ್ಮವೂ ಇದ್ದರೂ (ಅದು) ಇಲ್ಲದಿದ್ದರೆ ಹೇಗೋ ಹಾಗೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬರಿಯ ಜ್ಞಾನದಿಂದ' ಎಂಬ ಮಾತನ್ನು ಉಪಯೋಗಿಸಿರುತ್ತೇವೆ" ಎಂದು ಅಭಿಪ್ರಾಯವಿರಬಹುದು[2] (ಆದರೆ) ಇದೂ ವಿರುದ್ಧವಾದದ್ದೇ. ಹೇಗೆಂದರೆ, (ಬರಿಯ) ಸ್ಮಾರ್ತಕರ್ಮದಿಂದೊಡಗೂಡಿದ ಜ್ಞಾನದಿಂದ ಮೋಕ್ಷವಾಗುವದಿಲ್ಲವೆಂಬುದು ಗೃಹಸ್ಥನಿಗೊಬ್ಬನಿಗೇ ಹೊರತು ಮಿಕ್ಕ ಆಶ್ರಮದವರಿಗಲ್ಲ ಎಂದು ವಿವೇಕಿಗಳಾದವರು ಹೇಗೆ ನಿಶ್ಚಯಿಸಬೇಕು ? ಇದಲ್ಲದೆ ಊರ್ಧ್ವರೇತಸ್ಕರಿಗೆ[3] (ಬರಿಯ) ಸ್ಮಾರ್ತಕರ್ಮಗಳು ಜ್ಞಾನದೊಡನೆ ಮೋಕ್ಷಕ್ಕೆ ಸಾಧನವಾಗಬಹುದಾದರೆ ಹಾಗೆಯೇ ಗೃಹಸ್ಥನಿಗೂ ಸ್ಮಾರ್ತಕರ್ಮದೊಡನೆ (ಜ್ಞಾನದ) ಸೇರುವೆಯೇ (ಸಾಧನವಾಗಬಹುದೆಂದು) ಒಪ್ಪಿಕೊಳ್ಳೋಣ, ಶ್ರೌತಕರ್ಮಗಳೂ ಸೇರಬೇಕಾದದ್ದೇನೂ ಇರುವದಿಲ್ಲ. ಹಾಗಲ್ಲದೆ ಗೃಹಸ್ಥನಿಗೆ ಮಾತ್ರ ಶ್ರೌತಕರ್ಮಗಳೂ ಸ್ಮಾರ್ತಕರ್ಮಗಳೂ ಸೇರಿದರೆ ಮೋಕ್ಷವಾಗುವದೆಂದೂ ಊರ್ಧ್ವರೇತಸ್ಕರಿಗಾದರೆ ಬರಿಯ ಸ್ಮಾರ್ತಕರ್ಮಗಳಿಂದೊಡಗೂಡಿದ ಜ್ಞಾನದಿಂದಲೇ ಮೋಕ್ಷವಾಗುವದೆಂದೂ ಹೇಳುವ ಪಕ್ಷದಲ್ಲಿ ಗೃಹಸ್ಥನಿಗೇ

---

1. ಆಯಾಸಬಾಹುಲ್ಯಾತ್' ಆ॥ ಸ॥ ವಾ॥

2. ಜ್ಞಾನಕರ್ಮಸಮುಚ್ಚಯದಿಂದಲೇ ಎಲ್ಲಾ ಆಶ್ರಮದವರಿಗೂ ಮೋಕ್ಷವು; ಆದರೆ ಶ್ರೌತಕರ್ಮವು ಗೃಹಸ್ಥನಿಗೆ ವಿಶೇಷವು–ಎಂಬುದು ಪೂರ್ವಪಕ್ಷಿಯ ಭಾವ

3. ಗೃಹಸ್ಥರಲ್ಲದ ಆಶ್ರಮದವರಿಗೆ.

ಹೆಚ್ಚಿನ ಆಯಾಸವಾಗುವದು ; ಶ್ರೌತ, ಸ್ಮಾರ್ತ–ಎಂಬ ಬಹುದುಃಖರೂಪವಾದ ಕರ್ಮವನ್ನು (ಅವನ) ತಲೆಯಮೇಲೆ ಹೊರಿಸಿದಂತಾಗುವದು !

(ಭಾಷ್ಯ)

೧೪೦ ಅಥ ಗೃಹಸ್ಥಸ್ಯೈವ ಆಯಾಸಬಾಹುಲ್ಯಕಾರಣಾತ್ ಮೋಕ್ಷಃ ಸ್ಯಾತ್ ನಾಶ್ರಮಾನ್ತರಾಣಾಮ್ । ಶ್ರೌತನಿತ್ಯಕರ್ಮರಹಿತತ್ವಾತ್ ಇತಿ । ತದಪ್ಯಸತ್ ಸರ್ವೋಪನಿಷತ್ಸು ಇತಿಹಾಸಪುರಾಣಯೋಗಶಾಸ್ತ್ರೇಷು ಚ ಜ್ಞಾನಾಙ್ಗತ್ವೇನ ಮುಮುಕ್ಷೋಃ ಸರ್ವಕರ್ಮಸಂನ್ಯಾಸವಿಧಾನಾತ್ । ಆಶ್ರಮವಿಕಲ್ಪಸಮುಚ್ಚಯ ವಿಧಾನಾಚ್ಚ ಶ್ರುತಿಸ್ಮೃತ್ಯೋಃ ॥

(ಭಾಷ್ಯಾರ್ಥ)

(ವೃತ್ತಿಕಾರ).—ಹಾಗಾದರೆ ಗೃಹಸ್ಥನಿಗ (ಹೀಗೆ) ಆಯಾಸವು ಹೆಚ್ಚಾಗಿರುವ ಕಾರಣದಿಂದ ಅವನಿಗೊಬ್ಬನಿಗೇ ಮೋಕ್ಷವು (ದೊರೆಯುವದೇ) ಹೊರತು ಮಿಕ್ಕ ಆಶ್ರಮದಲ್ಲಿರುವವರಿಗ ಶ್ರೌತನಿತ್ಯಕರ್ಮಗಳು ಇಲ್ಲದ್ದರಿಂದ (ಅವರಿಗೆ ಮೋಕ್ಷವು ದೊರೆಯು)ಲಾರದು [2] ಎನ್ನೋಣ.

(ಸಿದ್ಧಾಂತಿ).—ಅದೂ ಸರಿಯಲ್ಲ ಏಕೆಂದರೆ ಎಲ್ಲಾ ಉಪನಿಷತ್ತುಗಳಲ್ಲಿಯೂ ಇತಿಹಾಸದಲ್ಲಿಯೂ ಪುರಾಣಗಳಲ್ಲಿಯೂ **ಯೋಗಶಾಸ್ತ್ರ**ದಲ್ಲಿಯೂ **ಜ್ಞಾನಕ್ಕೆ ಅಂಗವಾಗಿ ಮುಮುಕ್ಷುವಿಗೆ ಸರ್ವಕರ್ಮಸಂನ್ಯಾಸವನ್ನು ವಿಧಿಸಿರುತ್ತದೆ** [3] ; ಮತ್ತು ಶ್ರುತಿಸ್ಮೃತಿಗಳಲ್ಲಿ ಆಶ್ರಮವಿಕಲ್ಪವನ್ನೂ (ಆಶ್ರಮ) ಸಮುಚ್ಚಯವನ್ನೂ ವಿಧಿಸಿರುತ್ತದೆ.[4]

---

1 ಕರ್ಮವನ್ನು ಮಾಡುವ ಕರ್ತೃತ್ವವೇ ದುಃಖರೂಪವಾಗಿದೆ. ಶ್ರೌತಸ್ಮಾರ್ತ ಕರ್ಮಗಳೆರಡನ್ನೂ ಗೃಹಸ್ಥನು ಮಾಡಲೇಬೇಕೆಂದು ವಿಧಿಸಿದರೆ ಶಾಸ್ತ್ರವು ಪುರುಷಾರ್ಥಕ್ಕೆ ಉಪಾಯವನ್ನು ಬೋಧಿಸುವದನ್ನು ಬಿಟ್ಟು ದುಃಖಸಾಧನವನ್ನೇ ಹೇಳಿಕೊಡುತ್ತದೆ ಎಂದಾಗಿ ಅಪ್ರಮಾಣವಾಗುತ್ತದೆ ಎಂದು ಭಾವ.

2 ಸಂನ್ಯಾಸವನ್ನು ಕರ್ಮಕ್ಕಾಧಾರವಿಲ್ಲದ ಅಂಗಹೀನರೇ ಮುಂತಾದವರಿಗೆ ವಿಧಿಸಿದೆ ಎಂದು ಮೀಮಾಂಸಕರು ಹೇಳುತ್ತಿದ್ದರು ಹೆಚ್ಚಿನ ಸಾಧನವುಳ್ಳ ಗೃಹಸ್ಥನಿಗೇ ಮೋಕ್ಷವೆಂದೂ ಮಿಕ್ಕವರಿಗೆ ಅವರವರ ಕರ್ಮಕ್ಕೆ ತಕ್ಕ ಫಲವೆಂದೂ ಏತಕ್ಕೆ ಹೇಳಬಾರದು ?– ಎಂದು ಪೂರ್ವ ಪಕ್ಷಿಯ ಭಾವ.

3. ಶ್ರುತಿಸ್ಮೃತಿವಾಕ್ಯಗಳನ್ನು ಮುಂದೆ ಭಾಷ್ಯದಲ್ಲಿ ಕೊಟ್ಟಿದೆ.

4 ಬ್ರಹ್ಮಚರ್ಯದಿಂದ ಮುಂದಕ್ಕೆ ಯಾವ ಆಶ್ರಮವನ್ನೂ ಯಾವ ಕ್ರಮದಿಂದಲಾದರೂ ಸ್ವೀಕರಿಸಬಹುದೆಂಬುದು ಆಶ್ರಮವಿಕಲ್ಪ , ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ– ಈ ಕ್ರಮದಲ್ಲಿ ಎಲ್ಲವನ್ನೂ ಸ್ವೀಕರಿಸಬೇಕೆಂಬುದು **ಸಮುಚ್ಚಯ**.

# ಸಂನ್ಯಾಸವಿಧಿಯ ವಚನಗಳಿಗೂ ಸಮುಚ್ಚಯವಾದವು ವಿರುದ್ಧ

(ಭಾಷ್ಯ)

೧೪೧ ಸಿದ್ಧಸ್ತರ್ಹಿ ಸರ್ವಾಶ್ರಮಿಣಾಂ ಜ್ಞಾನಕರ್ಮಣೋಃ ಸಮುಚ್ಚಯಃ । ನ । ಮುಮುಕ್ಷೋಃ ಸರ್ವಕರ್ಮಸಂನ್ಯಾಸವಿಧಾನಾತ್ । [ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ][1] ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರನ್ತಿ (ಬೃ ೩-೫-೧), "ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ" (ತೈ. ನಾ ೭೯), "ನ್ಯಾಸ ಏವಾತ್ಯರೇಚಯತ್" (ತೈ. ನಾ. ೭೮) ಇತಿ । "ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇಽಮೃತತ್ವಮಾನಶುಃ" (ತೈ ನಾ. ೧೨) ಇತಿ ಚ । "ಬ್ರಹ್ಮಚರ್ಯಾದೇವ ಪ್ರವ್ರಜೇತ್" (ಜಾ. ೪) ಇತ್ಯಾದ್ಯಾಃ ಶ್ರುತಯಃ (?)[2] । "ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ । ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತತ್ ತ್ಯಜ ॥" (ಮೋ ಧ. ೩೨೯-೪೦), "ಸಂಸಾರಮೇವ ನಿಃಸಾರಂ ದೃಷ್ಟ್ವಾ ಸಾರದಿದೃಕ್ಷಯಾ। ಪ್ರವ್ರಜನ್ತ್ಯಕೃತೋದ್ವಾಹಾಃ ಪರಂ ವೈರಾಗ್ಯಮಾಶ್ರಿತಾಃ"(?) ಇತಿ ಬೃಹಸ್ಪತಿಃ[3] । "ಕರ್ಮಣಾ ಬಧ್ಯತೇ ಜನ್ತುರ್ವಿದ್ಯಯಾ ಚ ವಿಮುಚ್ಯತೇ । ತಸ್ಮಾತ್ ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ ॥" (ಮೋ. ಧ. ೨೪೧-೭) ಇತಿ **ಶುಕಾನುಶಾಸನಮ್** । ಇಹಾಪಿ "ಸರ್ವಕರ್ಮಾಣಿ ಮನಸಾ ಸಂನ್ಯಸ್ಯ" (೫-೧೩) ಇತ್ಯಾದಿ ॥

(ಭಾಷ್ಯಾರ್ಥ)

(ಪೂರ್ವಪಕ್ಷಿ) :—ಹಾಗಾದರೆ ಎಲ್ಲಾ ಆಶ್ರಮದವರೂ ಜ್ಞಾನಕರ್ಮಗಳನ್ನು ಸೇರಿಸಿಕೊಂಡೇ (ಮೋಕ್ಷಕ್ಕಾಗಿ) ಅನುಷ್ಠಾನಮಾಡಬೇಕೆಂದು ಸಿದ್ಧವಾಯಿತು.[4]

---

1. ಕಂಸದಲ್ಲಿರುವ ಭಾಗವು ಸಾ॥ಗು॥ಮು॥ದಲ್ಲಿಲ್ಲ.

2. ಇಲ್ಲಿ 'ಇತಿ ಚ' 'ಇತ್ಯಾದ್ಯಾ ಶ್ರುತಯಃ' ಎಂದು ಎರಡು ಇತಿಗಳು ಬಂದಿರುವದು ಏತಕ್ಕೆಂಬುದು ತಿಳಿಯುವಹಾಗಿಲ್ಲ.

3. ಯಾವ ಸ್ಮೃತಿಯಲ್ಲಿ ಈ ವಚನವಿದೆ ಎಂಬುದು ತಿಳಿಯಲಿಲ್ಲ.

4. ಶಾಸ್ತ್ರದಲ್ಲಿ ಆಶ್ರಮಗಳಿಗೆ ಕರ್ಮಗಳನ್ನು ವಿಧಿಸಿರುವದರಿಂದ ಜ್ಞಾನಕರ್ಮಸಮುಚ್ಚಯವೇ ಮೋಕ್ಷಕ್ಕೆ ಸಾಧನವೆಂದಾಯಿತು_ಎಂದು ಭಾವ. ಇಲ್ಲಿ ಶ್ರೌತಕರ್ಮಗಳು ಇಲ್ಲದೆ ಮೋಕ್ಷವಾಗಲಾರದು ಎಂಬ ಪಕ್ಷವನ್ನು ಕೈಬಿಟ್ಟಿದೆ.

(ಸಿದ್ಧಾಂತಿ) : --ಹಾಗಲ್ಲ. ಏಕೆಂದರೆ ಮುಮುಕ್ಷುವಾದವನು ಸರ್ವಕರ್ಮಗಳನ್ನೂ ಸಂನ್ಯಾಸಮಾಡಬೇಕೆಂದು ವಿಧಿಸಿರುತ್ತದೆ[1] "(ಪುತ್ರೈಷಣೆಯಿಂದಲೂ ವಿತ್ತೈಷಣೆಯಿಂದಲೂ ಲೋಕೈಷಣೆಯಿಂದಲೂ) ಬಿಟ್ಟೆದ್ದು ಇನ್ನು ಭಿಕ್ಷಾಚರ್ಯೆಯನ್ನು ಮಾಡುವರು" (ಬೃ ೩-೫-೧), "ಆದ್ದರಿಂದ ಈ ತಪಸ್ಸುಗಳಲ್ಲಿ ಸಂನ್ಯಾಸವೇ ಹೆಚ್ಚಿನದೆಂದು ಹೇಳುವರು" (ತೈ.ನಾ ೭೯) "ಸಂನ್ಯಾಸವೇ (ಎಲ್ಲಕ್ಕೂ) ಮಿಗಿಲಾಯಿತು" (ತೈ ನಾ ೭೮), ಕರ್ಮದಿಂದಲಾಗಲಿ ಪ್ರಜಾ(ಸಂತತಿ)ಯಿಂದಲಾಗಲಿ, ಧನದಿಂದಲಾಗಲಿ (ಮುಕ್ತಿಯನ್ನು ಪಡೆಯಲಿಲ್ಲ), ಸಂನ್ಯಾಸದಿಂದಲೇ ಕೆಲವರು ಮುಕ್ತಿಯನ್ನು ಪಡೆದರು" (ತೈ. ನಾ ೧೨), "ಬ್ರಹ್ಮಚರ್ಯದಿಂದಲೇ ಸಂನ್ಯಾಸಿಯಾಗಬಹುದು" (ಜಾ. ೪)--ಎಂದು ಮುಂತಾಗಿ ಶ್ರುತಿಗಳಿವೆ. (ಇನ್ನು ಸ್ಮೃತಿಗಳನ್ನು ಉದಾಹರಿಸುತ್ತೇವೆ). "ಧರ್ಮವನ್ನು ಬಿಡು, ಅಧರ್ಮವನ್ನೂ (ಬಿಡು), ದಿಟಸಟೆಗಳೆರಡನ್ನೂ ಬಿಡು, ಹೀಗೆ ದಿಟಸಟೆಗಳೆರಡನ್ನೂ ಬಿಟ್ಟಬಳಿಕ ಯಾವದರಿಂದ ಅವುಗಳನ್ನು ಬಿಡುತ್ತೀಯೋ ಆ (ಅಹಂಕಾರವನ್ನು) ಬಿಟ್ಟುಬಿಡು" (ಮೋ. ಧ. ೩೨೯-೪೦) ಸಂಸಾರವೇ ನಿಸ್ಸಾರವೆಂದು ಕಂಡುಕೊಂಡು ಸಾರವನ್ನು ಕಾಣಬೇಕೆಂಬ ತವಕದಿಂದ ಹೆಚ್ಚಿನ ವೈರಾಗ್ಯವನ್ನು ಹೊಂದಿದವರು ಮದುವೆಯನ್ನು ಮಾಡಿಕೊಳ್ಳದೆಯೇ ಸಂನ್ಯಾಸಿಗಳಾಗುವರು" (?) ಎಂದು **ಬೃಹಸ್ಪತಿಯ** ವಚನವಿದೆ. "ಜೀವನು ಕರ್ಮದಿಂದ ಕಟ್ಟುವಡೆಯುತ್ತಾನೆ, ವಿದ್ಯೆಯಿಂದ ಬಿಡುಗಡೆ ಹೊಂದುತ್ತಾನೆ, ಆದ್ದರಿಂದ ಕೊನೆಯನ್ನು ಕಾಣುವ ಯತಿಗಳು ಕರ್ಮವನ್ನು ಮಾಡುವದಿಲ್ಲ" (ಮೋ. ಧ. ೨೪೧-೭) ಎಂದು **ಶುಕಾನುಶಾಸನದಲ್ಲಿ**ರುತ್ತದೆ. ಈ (ಗೀತೆ)ಯಲ್ಲಿಯೂ "ಸರ್ವಕರ್ಮಗಳನ್ನೂ ಮನಸ್ಸಿನಲ್ಲಿ ಸಂನ್ಯಾಸಮಾಡಿ" (೫-೧೩) ಎಂದು ಮುಂತಾದ ವಚನವಿದೆ.[2]

## ಮೋಕ್ಷಕ್ಕೆ ಕರ್ಮದ ಹಂಗೇ ಇಲ್ಲ

(ಭಾಷ್ಯ)

೧೪೨. ಮೋಕ್ಷಸ್ಯ ಚ ಅಕಾರ್ಯತ್ವಾತ್ ಮುಮುಕ್ಷೋಃ ಕರ್ಮಾನರ್ಥ

1. ಇಲ್ಲಿ ಸ್ಮಾರ್ತಕರ್ಮವನ್ನಿಟ್ಟುಕೊಂಡಿರುವ ಸಂನ್ಯಾಸಾಶ್ರಮವಲ್ಲದೆ ಸರ್ವಕರ್ಮಸಂನ್ಯಾಸವನ್ನು ಮಾಡಿದ ಸಂನ್ಯಾಸವೂ ಇದೆ--ಎಂಬ ಭಾವವು ಅಡಗಿದೆ ಬೃ ಭಾ. ೩-೫-೧ ರಲ್ಲಿ ಆಶ್ರಮಸಂನ್ಯಾಸವೂ ಏಷಣೆಗಳನ್ನು ಬಿಟ್ಟು ಆತ್ಮಜ್ಞಾನಕ್ಕಾಗಿ ಮಾಡುವ ಸಂನ್ಯಾಸವೂ ಬೇರೆಬೇರೆ ಎಂದು ಹೇಳಿದೆ

2. ಈ ವಚನಗಳಲ್ಲಿ ಮುಮುಕ್ಷುವು ಆಶ್ರಮಕರ್ಮಗಳೆಲ್ಲವನ್ನೂ ಸಂನ್ಯಾಸಮಾಡಬೇಕೆಂದು ವಿಧಿಸಿದೆ ಎಂದು ಭಾವ

ಕ್ಯಮ್ । ನಿತ್ಯಾನಿ ಪ್ರತ್ಯವಾಯಪರಿಹಾರಾರ್ಥಮ್ ಅನುಷ್ಠೇಯಾನಿ ಇತಿ ಚೇತ್ । ನ । ಅಸಂನ್ಯಾಸಿವಿಷಯತ್ವಾತ್ ಪ್ರತ್ಯವಾಯಪ್ರಾಪ್ತೇಃ । ನ ಹಿ ಅಗ್ನಿಹೋತ್ರಾದ್ಯಕರಣಾತ್[1] ಸಂನ್ಯಾಸಿನಃ ಪ್ರತ್ಯವಾಯಃ ಕಲ್ಪಯಿತುಂ ಶಕ್ಯಃ । ಯಥಾ ಬ್ರಹ್ಮಚಾರಿಣಾಮ್ ಅಸಂನ್ಯಾಸಿನಾಮಪಿ[2] । ನ ತಾವತ್ ನಿತ್ಯಾನಾಂ ಕರ್ಮಣಾಮ್ ಅಭಾವಾದೇವ ಭಾವರೂಪಸ್ಯ ಪ್ರತ್ಯವಾಯಸ್ಯ ಉತ್ಪತ್ತಿಃ ಕಲ್ಪಯಿತುಂ ಶಕ್ಯಾ (ಯುಕ್ತಾ ಚ)[3] । "ಕಥಮಸತಃ ಸಜ್ಜಾಯೇತ" (ಛಾಂ. ೬-೨-೨) ಇತಿ ಅಸತಃ ಸಜ್ಜನ್ಮಾಸಂಭವಶ್ರುತೇಃ । ಯದಿ ವಿಹಿತಾಕರಣಾತ್ ಅಸಂಭಾವ್ಯಮಪಿ ಪ್ರತ್ಯವಾಯಂ ಬ್ರೂಯಾತ್ ವೇದಃ, ತದಾ ಅನರ್ಥಕರೋ ವೇದಃ ಅಪ್ರಮಾಣಮ್ ಇತ್ಯುಕ್ತಂ ಸ್ಯಾತ್। ವಿಹಿತಸ್ಯ ಕರಣಾಕರಣಯೋರ್ದುಃಖಮಾತ್ರಫಲತ್ವಾತ್ । ತಥಾ ಚ ಕಾರಕಂ ಶಾಸ್ತ್ರಂ ನ ಜ್ಞಾಪಕಮ್ ಇತಿ ಅನುಪಪನ್ನಾರ್ಥಮ್ ಕಲ್ಪಿತಂ ಸ್ಯಾತ್ । ನ ಚೈತತ್ ಇಷ್ಟಮ್ । ತಸ್ಮಾತ್ ನ ಸಂನ್ಯಾಸಿನಾಂ ಕರ್ಮಾಣಿ । ಅತೋ ಜ್ಞಾನಕರ್ಮಣೋಃ ಸಮುಚ್ಚಯಾನುಪಪತ್ತಿಃ ॥

(ಭಾಷ್ಯಾರ್ಥ)

ಇದಲ್ಲದೆ ಮೋಕ್ಷವು ಕಾರ್ಯವಲ್ಲದ್ದರಿಂದಲೂ[4] ಮುಮುಕ್ಷುವಾದವನಿಗೆ ಕರ್ಮದಿಂದ ಏನೂ ಆಗಬೇಕಾದದ್ದಿರುವದಿಲ್ಲ[5]

(ಆಕ್ಷೇಪ) —ಪ್ರತ್ಯವಾಯವನ್ನು ತಪ್ಪಿಸಿಕೊಳ್ಳುವದಕ್ಕಾಗಿ ನಿತ್ಯ (ಕರ್ಮ) ಗಳನ್ನು ಮಾಡಲೇಬೇಕಲ್ಲವೆ ?[6]

(ಪರಿಹಾರ) —ಹಾಗಲ್ಲ ಏಕೆಂದರೆ ಪ್ರತ್ಯವಾಯವಾಗುವದೆಂಬುದು ಸಂನ್ಯಾಸಿಯಲ್ಲದವನ ವಿಷಯವಾಗಿವ ಅಗ್ನಿಹೋತ್ರವೇ ಮುಂತಾದವುಗಳನ್ನು[7] ಮಾಡದೆ ಇರುವದರಿಂದ ಸಂನ್ಯಾಸಿಗಳಲ್ಲದ ಬ್ರಹ್ಮಚಾರಿಗಳಿಗೆ ಕೂಡ (ಅವರು ಕರ್ಮಿಗಳೇ

---

1. ಅಗ್ನಿಕಾರ್ಯಾದ್ಯಕರಣಾತ್ ಎಂದು ಮ॥ ಹೊರತು ಮಿಕ್ಕ ಪಾಠಗಳಲ್ಲೆಲ್ಲ ಇದೆ.
2. ‹ ಕರ್ಮಿಣಾಮ್ › ಎಂಬ ಮಾತಿಲ್ಲದ ಮೈ॥ಪಾಠವನ್ನೇ ಇಟ್ಟುಕೊಂಡಿದೆ.
3. ‹ ಯುಕ್ತಾ ಚ › ಎಂಬ ಮಾತು ಮೈ॥ವಾ॥ದಲ್ಲಿಲ್ಲ, ಇದ್ದರೆ ಒಳ್ಳೆಯದು.
4. ಕಾರ್ಯವಾದರೆ ಅನಿತ್ಯವಾಗಬೇಕಾಗುವದು ತೈ.ಭಾ.ಭಾ ೮, ೭೧
5. ಏಕೆಂದರೆ ಮೋಕ್ಷವು ಉತ್ಪಾದ್ಯವಲ್ಲ, ಸಂಸ್ಕಾರ್ಯವಲ್ಲ, ವಿಕಾರ್ಯವಲ್ಲ, ಆಪ್ಯವೂ ಅಲ್ಲ, ಉತ್ಪಾದ್ಯಾದಿಗಳಿಗೆಮಟ್ಟಿಗೆ ಕರ್ಮವು ಬೇಕು
6. ಇದು ಪೂರ್ವಮೀಮಾಂಸಕರಲ್ಲಿ ಭಾಟ್ಟರ ಮತವನ್ನು ಅನುಸರಿಸಿ ಹೇಳಿದ ಮಾತು.
7. ಅಗ್ನಿಹೋತ್ರವನ್ನು ಮಾಡದಿದ್ದರೆ ಗೃಹಸ್ಥನಿಗೆ ದೋಷವಾದೀತೇ ಹೊರತು ಬ್ರಹ್ಮಚಾರಿಗಾಗಲಿ ಸಂನ್ಯಾಸಿಗಾಗಲಿ ಆಗಲಾರದು ಬ್ರಹ್ಮಚಾರಿಗೆ ಗುರುಶುಶ್ರೂಷೆ ಮುಂತಾದದ್ದನ್ನು ಬಿಟ್ಟರೆ, ಸಂನ್ಯಾಸಿಗೆ ಶಮಾದಿಗಳ ಅಭ್ಯಾಸವನ್ನು ಬಿಟ್ಟರೆ ಮಾತ್ರ ದೋಷವುಂಟಾದೀತು ಎಂದು ಭಾವ. ಸೂ. ಭಾ. ೩-೪-೨೦

ಆಗಿದ್ದರೂ)[1] ಪ್ರತ್ಯವಾಯುವುಂಟಾಗುವದೆಂದು ಕಲ್ಪಿಸುವದಕ್ಕೆ ಹೇಗೆ ಆಗಲಾರದೋ ಹಾಗೆಯೇ ಸಂನ್ಯಾಸಿಗಳಿಗೂ ಕಲ್ಪಿಸುವದಕ್ಕೆ ಆಗಲಾರದು. (ಯಾರಿಗೇ ಆಗಲಿ) **ನಿತ್ಯಕರ್ಮವನ್ನು ಮಾಡದೆ ಇರುವದೆಂಬ ಅಭಾವದಿಂದ ಭಾವರೂಪವಾದ ಪ್ರತ್ಯವಾಯವುಂಟಾಗುವದೆಂದು ಕಲ್ಪಿಸುವದಕ್ಕೇ ಮೊದಲು ಆಗುವಂತಿಲ್ಲ.** (ಅದು ಯುಕ್ತವೂ ಅಲ್ಲ) ಏಕೆಂದರೆ "ಅಸತ್ತಿನಿಂದ ಸತ್ತು ಹೇಗೆ ಹುಟ್ಟೀತು?" (ಛಾಂ. ೬-೨-೨) ಎಂದು ಶ್ರುತಿಯು ಅಭಾವದಿಂದ ಭಾವವು ಹುಟ್ಟಲಾರದೆಂದು ಹೇಳುತ್ತಿದೆ[2] ವಿಧಿಸಿರುವ ಕರ್ಮವನ್ನು ಮಾಡದೆ ಇದ್ದರೆ ಪ್ರತ್ಯವಾಯವು ಉಂಟಾಗುವ ಸಂಭವವೇ ಇಲ್ಲದಿದ್ದರೂ ಅದು ಆಗುವದೆಂದು ವೇದವು ಹೇಳುವದಾದರೆ ಆಗ ವೇದವು ಅನರ್ಥಕರವೆಂದಾಗಿ ಅಪ್ರಮಾಣವೇ ಎಂದು ಹೇಳಿದಂತಾಗುತ್ತದೆ[3] ಏಕೆಂದರೆ ಆ ಪಕ್ಷದಲ್ಲಿ ವಿಹಿತಕರ್ಮವನ್ನು ಮಾಡಿದರೂ ಮಾಡದೆಬಿಟ್ಟರೂ ದುಃಖವೊಂದೇ ಫಲವೆಂದಾಗುವದು. **ಆಗ ಶಾಸ್ತ್ರವು ಇಲ್ಲದ್ದನ್ನುಂಟುಮಾಡುವ ಶಕ್ತಿಯುಳ್ಳದ್ದು, ಇದ್ದದ್ದನ್ನು ಇದ್ದಂತೆ ತಿಳಿಸುವ (ಪ್ರಮಾಣಮಾತ್ರ)ವಲ್ಲ ಎಂದು ಅಯುಕ್ತವಾದ ಕಲ್ಪನೆಯನ್ನು ಮಾಡಿದಂತಾಗುವದು**[4] ಇದು ಯಾರಿಗೂ ಸಮ್ಮತವಲ್ಲ. ಆದ್ದರಿಂದ ಸಂನ್ಯಾಸಿಗಳಿಗೆ ಕರ್ಮಗಳಿಲ್ಲ, ಆದ್ದರಿಂದ ಜ್ಞಾನಕರ್ಮಗಳ ಸಮುಚ್ಚಯದಿಂದ (ಮೋಕ್ಷವೆಂಬುದು) ಹೊಂದುವದಿಲ್ಲ

## ಸಮುಚ್ಚಯವಾದವು ಇಲ್ಲಿರುವ ಪ್ರಶ್ನೋತ್ತರಗಳಿಗೆ ಅನುಗುಣವಲ್ಲ

### (ಭಾಷ್ಯ)

೧೪೩. 'ಜ್ಯಾಯಸೀ ಚೇತ್ ಕರ್ಮಣಸ್ತೇ ಮತಾ ಬುದ್ಧಿಃ" (೩-೧) ಇತಿ ಅರ್ಜುನಸ್ಯ ಪ್ರಶ್ನಾನುಪಪತ್ತೇಶ್ಚ । ಯದಿ ಹಿ ಭಗವತಾ ದ್ವಿತೀಯೇಽಧ್ಯಾಯೇ

---

1 'ಕರ್ಮಿಣಾಮ್' ಎಂಬ ಪಾಠಕ್ಕೆ ಅನುವಾದವಿದು, ಬ್ರಹ್ಮಚಾರಿಗಳಿಗೆ ಪ್ರತ್ಯವಾಯವಿಲ್ಲದಮೇಲೆ ಸಂನ್ಯಾಸಿಗೆಲ್ಲಿಂದ ಬರಬೇಕು?-ಎಂಬ ಅಭಿಪ್ರಾಯವು ಇದರಲ್ಲಿದೆ.

2 ಇದಕ್ಕೆ ಯುಕ್ತಿಯ ಬೆಂಬಲವೂ ಇದೆ

3. ಅದೃಷ್ಟವಾದ ಪುರುಷಾರ್ಥಕ್ಕೆ ಸಾಧನವನ್ನು ತಿಳಿಸುವದರಿಂದ ವೇದವು ಪ್ರಮಾಣವೆಂದು ಮೀಮಾಂಸಕರು ಹೇಳುತ್ತಾರೆ, ವೇದವು ಅನರ್ಥಕ್ಕೇ ಕಾರಣವಾದರೆ ಅದಕ್ಕೆ ಪ್ರಾಮಾಣ್ಯವು ಬರಲಾರದು.

4. ಶಾಸ್ತ್ರವು ಕಾರಕವಲ್ಲ, ಜ್ಞಾಪಕವು ಎಂಬುದನ್ನು ತೈ.ಭಾ.ಭಾ. ೭೩, ಪ್ರ.ಭಾ. ೬-೨, ಮಾಂ.ಕಾ.ಭಾ. ೨-೩೦, ಬೃ.ಭಾ. ೨-೧-೨೦, ೩-೯ ಉಪಸಂಹಾರ, ಗೀ.ಭಾ. ೧೮-೬೬ ಇವುಗಳಲ್ಲಿಯೂ ತಿಳಿಸಿದೆ.

ಜ್ಞಾನಂ ಕರ್ಮ ಚ ಸಮುಚ್ಚಯೇನ ತ್ವಯಾ[1] ಅನುಷ್ಠೇಯಮ್ ಇತ್ಯುಕ್ತಂ ಸ್ಯಾತ್, ತತಃ ಅರ್ಜುನಸ್ಯ ಪ್ರಶ್ನೋಽನುಪಪನ್ನಃ "ಜ್ಯಾಯಸೀ ಚೇತ್ ಕರ್ಮಣಸ್ತೇ ಮತಾ ಬುದ್ಧಿಃ" (೩-೧) ಇತಿ । ಅರ್ಜುನಾಯ ಚೇತ್ ಬುದ್ಧಿಕರ್ಮಣೀ ತ್ವಯಾ ಅನುಷ್ಠೇಯೇ ಇತ್ಯುಕ್ತೇ, ಯಾ ಕರ್ಮಣೋ ಜ್ಯಾಯಸೀ ಬುದ್ಧಿಃ ಸಾಪಿ ಉಕ್ತೈವ ಇತಿ "ತತ್ ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ" (೩-೧) ಇತಿ ಪ್ರಶ್ನೋ[2] ನ ಕಥಂಚನ ಉಪಪದ್ಯತೇ । ನ ಚ ಅರ್ಜುನಸ್ಯೈವ ಜ್ಯಾಯಸೀ ಬುದ್ಧಿಃ ನಾನುಷ್ಠೇಯಾ ಇತಿ ಭಗವತಾ ಉಕ್ತಂ ಪೂರ್ವಮ್ ಇತಿ ಕಲ್ಪಯಿತುಂ ಯುಕ್ತಮ್। ಯೇನ "ಜ್ಯಾಯಸೀ ಚೇತ್" ಇತಿ ಪ್ರಶ್ನಃ[3] ಸ್ಯಾತ್ । ಯದಿ ಪುನಃ ಏಕಸ್ಯ ಪುರುಷಸ್ಯ ಜ್ಞಾನಕರ್ಮಣೋರ್ವಿರೋಧಾತ್ ಯುಗಪತ್ ಅನುಷ್ಠಾನಂ ನ ಸಂಭವತಿ ಇತಿ ಭಿನ್ನಪುರುಷಾನುಷ್ಠೇಯತ್ವಂ ಭಗವತಾ ಪೂರ್ವಮ್ ಉಕ್ತಂ ಸ್ಯಾತ್, ತತೋಽಯಂ ಪ್ರಶ್ನಂ ಉಪಪನ್ನಃ "ಜ್ಯಾಯಸೀ ಚೇತ್" ಇತ್ಯಾದಿಃ ॥

(ಭಾಷ್ಯಾರ್ಥ)

"ಕರ್ಮಕ್ಕಿಂತ ಬುದ್ಧಿಯೇ ಹೆಚ್ಚಿನದೆಂದು ನಿನ್ನ ಮತವಾದರೆ" ಎಂಬ (೩-೧) ಅರ್ಜುನನ ಪ್ರಶ್ನೆಯು ಅಯುಕ್ತವಾಗಿಬಿಡುವದರಿಂದಲೂ ಸಮುಚ್ಚಯವಾದವು ಸರಿಯಲ್ಲ. ಅದು ಹೇಗೆಂದರೆ:- "ಜ್ಞಾನವನ್ನೂ ಕರ್ಮವನ್ನೂ ಸೇರಿಸಿಕೊಂಡು ನೀನು ಅನುಷ್ಠಾನಮಾಡಬೇಕು" ಎಂದು ಭಗವಂತನು ಅರ್ಜುನನಿಗೆ ಎರಡನೆಯ ಅಧ್ಯಾಯದಲ್ಲಿ ಹೇಳಿರುತ್ತಾನೆಂದು ಇಟ್ಟುಕೊಂಡರೆ "ಕರ್ಮಕ್ಕಿಂತ ಬುದ್ಧಿಯು ಹೆಚ್ಚಿನದೆಂದು ನಿನ್ನ ಮತವಾದರೆ" ಎಂಬ ಪ್ರಶ್ನೆಯು (ಅದಕ್ಕೆ) ಹೊಂದುವದಿಲ್ಲ. ಜ್ಞಾನಕರ್ಮಗಳೆರಡನ್ನೂ ಅರ್ಜುನನಿಗೆ ಹೇಳಿದ್ದರೆ ಕರ್ಮಕ್ಕಿಂತ ಹೆಚ್ಚಿನದಾದ ಬುದ್ಧಿಯನ್ನೂ ಅವನಿಗೆ ಹೇಳಿದಂತೆಯೇ ಆಗುವದರಿಂದ "ಹಾಗಾದರೆ ಎಲೈ ಕೇಶವನೆ, ಘೋರವಾದ ಕರ್ಮವನ್ನು ಮಾಡುವಂತೆ ನನ್ನನ್ನು ಏಕೆ ಕಟ್ಟುಮಾಡುತ್ತಿರುವೆ?" (೩-೧) ಎಂದು (ಭಗವಂತನನ್ನು ದೂರುವದಾಗಲಿ) ಕೇಳುವದಾಗಲಿ ಹೇಗೂ ಹೊಂದುವದಿಲ್ಲ. ಕರ್ಮಕ್ಕಿಂತ ಹೆಚ್ಚಿನದಾದ ಜ್ಞಾನವನ್ನು ಅರ್ಜುನನೊಬ್ಬನು ಮಾತ್ರ ಅನುಷ್ಠಾನ ಮಾಡಲಾಗದೆಂದು ಭಗವಂತನು ಹಿಂದೆ ಹೇಳಿರುವನೆಂದು ಕಲ್ಪಿಸುವದಕ್ಕೂ ಆಗುವದಿಲ್ಲ, ಹಾಗೆ ಆಗಿದ್ದರೆ '(ಅರ್ಜುನನು) ಕರ್ಮಕ್ಕಿಂತ ಬುದ್ಧಿಯೇ ಹೆಚ್ಚಿನದೆಂದು

---

1. 'ತ್ವಯೈವ' ಮು॥
2. "ಉಪಾಲಂಭೋ ವಾ ಪ್ರಶ್ನೋ ವಾ" ಎಂದು ಇರುವ ಪಾಠವು ನಿ॥ಗು॥ಮು॥ ಗಳಲ್ಲಿಲ್ಲ.
3. 'ವಿವೇಕತಃ ಪ್ರಶ್ನಃ' ಎಂಬುದು ನಿ॥ಗು॥ಸ॥ದಲ್ಲಿಲ್ಲ.

(ನಿನ್ನ) ಮತವಾದರೆ” ಎಂದು (ವಿಂಗಡಿಸಿ) ಕೇಳಿದರೂ ಕೇಳಬಹುದಾಗಿತ್ತು. (ಹಾಗಿಲ್ಲವಾದ್ದರಿಂದಲೂ ಪ್ರಶ್ನೆಯು ಹೊಂದುವದಿಲ್ಲ)

ಇದಕ್ಕೆ ಬದಲು (ನಮ್ಮ ಅಭಿಪ್ರಾಯದಂತೆ) ಜ್ಞಾನಕರ್ಮಗಳು ಒಂದಕ್ಕೊಂದು ವಿರುದ್ಧವಾಗಿರುವದರಿಂದ ಒಬ್ಬ ಪುರುಷನೇ ಅವುಗಳನ್ನು ಒಂದೇ ಕಾಲದಲ್ಲಿ ಅನುಷ್ಠಾನಮಾಡುವದೆಂಬುದು ಆಗಲಾರದಾದ್ದರಿಂದ ಬೇರೆಬೇರೆಯ ಅಧಿಕಾರಿಗಳು ಅವುಗಳನ್ನು ಮಾಡತಕ್ಕದ್ದು-ಎಂದು ಭಗವಂತನು ಹೇಳಿದ್ದಾನೆ-ಎಂದಿಟ್ಟುಕೊಂಡರೆ “(ಬುದ್ಧಿಯು) ಹೆಚ್ಚಿನದಾದರೆ” ಎಂದು ಮುಂತಾಗಿರುವ ಈ ಪ್ರಶ್ನೆಯು ಯುಕ್ತವಾಗುತ್ತದೆ

(ಭಾಷ್ಯ)

೧೪೪ ಅವಿವೇಕತಃ ಪ್ರಶ್ನಕಲ್ಪನಾಯಾಮಪಿ ಭಿನ್ನಪುರುಷಾನುಷ್ಠೇಯತ್ವೇನ ಜ್ಞಾನಕರ್ಮನಿಷ್ಠಯೋಃ ಭಗವತಃ ಪ್ರತಿವಚನಂ ನೋಪಪದ್ಯತೇ । ನ ಚ ಅಜ್ಞಾನನಿಮಿತ್ತಂ ಭಗವತ್ಪ್ರತಿವಚನಂ ಕಲ್ಪನೀಯಮ್[1] । ಅಸ್ಮಾಚ್ಚ ಭಿನ್ನಪುರುಷಾನುಷ್ಠೇಯತ್ವೇನ ಜ್ಞಾನಕರ್ಮನಿಷ್ಠಯೋರ್ಭಗವತಃ ಪ್ರತಿವಚನದರ್ಶನಾತ್ ಜ್ಞಾನಕರ್ಮಣೋಃ ಸಮುಚ್ಚಯಾನುಪಪತ್ತಿಃ । ತಸ್ಮಾತ್ ಕೇವಲಾದೇವ ಜ್ಞಾನಾತ್ ಮೋಕ್ಷಃ ಇತ್ಯೇಷೋಽರ್ಥೋ ನಿಶ್ಚಿತೋ ಗೀತಾಸು ಸರ್ವೋಪನಿಷತ್ಸು ಚ ॥

(ಭಾಷ್ಯಾರ್ಥ)

(ಅರ್ಜುನನು) ವಿಂಗಡಿಸಿಕೊಂಡು ಅರಿತುಕೊಳ್ಳದ (ಈ) ಪ್ರಶ್ನೆ(ಯನ್ನು ಹಾಕಿರುತ್ತಾನೆ) ಎಂದು ಇಟ್ಟುಕೊಂಡರೂ ಜ್ಞಾನನಿಷ್ಠೆಯನ್ನೂ ಕರ್ಮನಿಷ್ಠೆಯನ್ನೂ ಬೇರೆಬೇರೆಯ ಜನರು ಆಚರಿಸತಕ್ಕದ್ದೆಂದು ಭಗವಂತನು ಹೇಳಿರುವ ಉತ್ತರವು (ನಿಮ್ಮ ಮತಕ್ಕೆ) ಹೊಂದುವದಿಲ್ಲ ಭಗವಂತನು ತಿಳಿಯದೆ ಉತ್ತರವನ್ನು ಹೇಳಿದನೆಂದಂತೂ ಕಲ್ಪಿಸುವಹಾಗೇ ಇಲ್ಲ.[2] ಹೀಗೆ ಜ್ಞಾನಕರ್ಮನಿಷ್ಠೆಗಳನ್ನು ಬೇರೆಬೇರೆಯ ಜನರು ಅನುಷ್ಠಾನಮಾಡತಕ್ಕದ್ದೆಂದು ಭಗವಂತನು ಉತ್ತರ ಕೊಟ್ಟಿರುವದು ಕಾಣುಬರುವದರಿಂದಲೂ ಜ್ಞಾನಕರ್ಮಗಳನ್ನು ಸೇರಿಸಿಕೊಂಡು ಅನುಷ್ಠಾನಮಾಡಬೇಕೆಂಬುದು ಯುಕ್ತವಾಗುವದಿಲ್ಲ[3]

---

1. ಕಲ್ಪ್ಯಮ್ ’ ಸ॥ಮ॥
2. ಏಕೆಂದರೆ ಭಗವಂತನು ಸರ್ವಜ್ಞನು.
3. ಉಪನಿಷತ್ತುಗಳಲ್ಲಿ ಜ್ಞಾನಕರ್ಮಸಮುಚ್ಚಯವನ್ನು ಹೇಳಿದೆ ಎಂಬ ಮತವನ್ನು ಈ ಭಾ. ಭಾ' ೭, ಉಪಸಂಹಾರ, ಕೇ ಭಾ.ಭಾ. ೫-೬, ಐ.ಭಾ ಸಂಬಂಧಭಾಷ್ಯ; ತೈ. ಭಾ.ಭಾ ೯, ೬೩, ೭೪, ೭೭, ೮೦, ಛಾ ಸಂಬಂಧಭಾಷ್ಯ—ಇವುಗಳಲ್ಲಿ ಖಂಡಿಸಿರುತ್ತದೆ.

ಆದ್ದರಿಂದ ಬರಿಯ ಜ್ಞಾನದಿಂದಲೇ ಮೋಕ್ಷವಾಗುವದು ಎಂಬಿದೇ ಗೀತೆಗಳಲ್ಲಿಯೂ ಎಲ್ಲಾ ಉಪನಿಷತ್ತುಗಳಲ್ಲಿಯೂ ನಿಶ್ಚಯವಾಗಿರುವ ವಿಷಯವಾಗಿರುತ್ತದೆ.

(ಭಾಷ್ಯ)

೧೪೫. ಜ್ಞಾನಕರ್ಮಣೋಃ "ಏಕಂ ವದ ನಿಶ್ಚಿತ್ಯ" (೩-೨) ಇತಿ ಚೈಕವಿಷಯೈವ ಪ್ರಾರ್ಥನಾ ಅನುಪಪನ್ನಾ ಉಭಯೋಃ ಸಮುಚ್ಚಯಸಂಭವೇ ! "ಕುರು ಕರ್ಮೈವ ತಸ್ಮಾತ್ ತ್ವಮ್" (೪-೧೫) ಇತಿ ಚ ಜ್ಞಾನನಿಷ್ಠಾಸಂಭವಮರ್ಜುನಸ್ಯ ಅವಧಾರಣೇನ ದರ್ಶಯಿಷ್ಯತಿ ||

(ಭಾಷ್ಯಾರ್ಥ)

ಜ್ಞಾನಕರ್ಮಗಳೆರಡನ್ನೂ ಸಮುಚ್ಚಯಮಾಡಿಕೊಂಡು (ಅನುಷ್ಠಾನಮಾಡುವದು) ಆಗುವಂತಿದ್ದರೆ "(ಇವೆರಡರಲ್ಲಿ) ಒಂದನ್ನು ನಿಶ್ಚಯಿಸಿ ಹೇಳು" (೩-೨) ಎಂದು (ಅರ್ಜುನನು) ಕೇಳಿರುವದೂ ಸರಿಹೋಗುವದಿಲ್ಲ 'ಆದ್ದರಿಂದ ನೀನು ಕರ್ಮವನ್ನೇ ಮಾಡು" (೪-೧೫) ಎಂಬ (ಶ್ಲೋಕದಲ್ಲಿ) ಅರ್ಜುನನಿಗೆ ಜ್ಞಾನನಿಷ್ಠೆಯು ಸಂಭವಿಸುವದಿಲ್ಲವೆಂದು ಮುಂದೆ (ಭಗವಂತನು) ಒತ್ತಿ ತಿಳಿಸಿಯೂ ಇರುತ್ತಾನೆ. (ಇದೂ ಸಮುಚ್ಚಯಪಕ್ಷಕ್ಕೆ ಸರಿಹೋಗುವದಿಲ್ಲ)

**ಅರ್ಜುನ ಉವಾಚ—**

**ಜ್ಯಾಯಸೀ ಚೇತ್ ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ ।**
**ತತ್ ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ ॥೧॥**

೧. ಅರ್ಜುನನಿಂತೆಂದನು :—ಎಲೈ ಜನಾರ್ದನನೆ, ಕರ್ಮಕ್ಕಿಂತ ಬುದ್ಧಿಯೇ ಹೆಚ್ಚಿನದೆಂದು ನಿನ್ನ ಅಭಿಪ್ರಾಯವಾದರೆ, ಹಾಗಾದರೆ ಎಲೈ ಕೇಶವನೆ, ಘೋರವಾದ ಕರ್ಮದಲ್ಲಿ ನನ್ನನ್ನೇಕೆ ನಿಯಮಿಸುತ್ತಿದ್ದೀಯೆ ?

(ಭಾಷ್ಯ)

೧೪೬. ಜ್ಯಾಯಸೀ ಚೇತ್ ಯದಿ ಕರ್ಮಣಃ ಸಕಾಶಾತ್ ತೇ ತವ ಮತಾ ಅಭಿಪ್ರೇತಾ ಬುದ್ಧಿಃ ಜ್ಞಾನಂ ಹೇ ಜನಾರ್ದನ । ಯದಿ ಬುದ್ಧಿಕರ್ಮಣೀ ಸಮುಚ್ಚಿತೇ ಇಷ್ಟೇ ತದ್ ಏಕಂ ಶ್ರೇಯಃಸಾಧನಮ್ ಇತಿ ಕರ್ಮಣೋ ಜ್ಯಾಯಸೀ ಬುದ್ಧಿಃ ಇತಿ ಕರ್ಮಣೋಽತಿರಿಕ್ತಕರಣಂ ಬುದ್ಧೇಃ ಅನುಪಪನ್ನಂ ಅರ್ಜುನೇನ ಕೃತಂ ಸ್ಯಾತ್। ನ ಹಿ ತದೇವ ತಸ್ಮಾತ್ ಫಲತಃ ಅತಿರಿಕ್ತಂ ಸ್ಯಾತ್ । ತಥಾ ಚ ಕರ್ಮಣಃ ಶ್ರೇಯಸ್ಕರೀ ಭಗವತಾ ಉಕ್ತಾ ಬುದ್ಧಿಃ, ಅಶ್ರೇಯಸ್ಕರಂ ಚ ಕರ್ಮ ಕುರು ಇತಿ ಮಾಂ

ಪ್ರತಿಪಾದಯತಿ ತತ್ ಕಿಂ ನು [1] ಕಾರಣಮ್ ? ಇತಿ ಭಗವತಃ ಉಪಾಲಮ್ಭಮಿವ ಕುರ್ವನ್ ತತ್ ಕಿಂ ಕಸ್ಮಾತ್ ಕರ್ಮಣಿ ಘೋರೇ ಕ್ರೂರೇ ಹಿಂಸಾಲಕ್ಷಣೇ ಮಾಂ ನಿಯೋಜಯಸಿ ಕೇಶವ ಇತಿ ಚ ಯದಾಹ ತಚ್ಚ ನೋಪಪದ್ಯತೇ । ಅಥ ಸ್ಮಾರ್ತೇನೈವ ಕರ್ಮಣಾ ಸಮುಚ್ಚಯಃ ಸರ್ವೇಷಾಂ ಭಗವತಾ ಉಕ್ತಃ, ಅರ್ಜುನೇನ ಚ ಅವಧಾರಿತಶ್ಚೇತ್ "ತತ್ ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ" ಇತ್ಯಾದಿ ಕಥಂ ಯುಕ್ತಂ ವಚನಮ್ ?

(ಭಾಷ್ಯಾರ್ಥ)

ಎಲೈ ಜನಾರ್ದನನೆ, ಕರ್ಮಕ್ಕಿಂತ ಕರ್ಮ(ವನ್ನು ಮಾಡುವದಕ್ಕಿಂತಲೂ) ಬುದ್ಧಿಯು ಎಂದರೆ ಜ್ಞಾನವು ಹೆಚ್ಚಿನದು ಹೆಚ್ಚು ಒಳ್ಳೆಯದು ಎಂದು ನಿನ್ನ ಮತವಾದರೆ ನಿನ್ನ ಅಭಿಪ್ರಾಯವಾಗಿದ್ದರೆ ಬುದ್ಧಿಕರ್ಮಗಳೆರಡನ್ನೂ ನೇರಿಸಿಕೊಂಡು (ಅನುಷ್ಠಾನಮಾಡಬೇಕೆಂಬುದು ಭಗವಂತನ) ಇಷ್ಟವಾಗಿದ್ದರೆ, ಆಗ ಒಂದೇ ಶ್ರೇಯಸ್ಸಿಗೆ ಸಾಧನವಾಗಿಬಿಡುವದರಿಂದ 'ಕರ್ಮಕ್ಕಿಂತ ಬುದ್ಧಿಯು ಹೆಚ್ಚಿನದು' ಎಂದು ಬುದ್ಧಿಯನ್ನು ಕರ್ಮದಿಂದ ಬೇರ್ಪಡಿಸಿ (ಇಲ್ಲಿ) ಅರ್ಜುನನು (ಪ್ರಶ್ನೆಮಾಡಿರುವದು) ಅಯುಕ್ತವಾಗುವದು ಏಕೆಂದರೆ (ಅದು) ತಾನೇ ತನಗಿಂತ ಬೇರೆ ಫಲವನ್ನು ಕೊಡುವ (ಸಾಧನ)ವಾಗಲಾರದು ಹೀಗಿರುವದರಿಂದ ಕರ್ಮಕ್ಕಿಂತ ಜ್ಞಾನವೇ ಶ್ರೇಯಸ್ಕರವೆಂದು [2] ಭಗವಂತನು ಹೇಳಿರುತ್ತಾನೆ, ಶ್ರೇಯಸ್ಕರವಲ್ಲದ ಕರ್ಮವನ್ನು ಮಾಡೆಂದೂ ನನಗೆ ಹೇಳುತ್ತಿರುತ್ತಾನೆ ಇದಕ್ಕೆ ಕಾರಣವೇನಿದ್ದೀತು ?-ಎಂದು ಭಗವಂತನನ್ನು ದೂರುವಂತೆ, "ಎಲೈ ಕೇಶವನೆ, ಹೀಗಿರುವಲ್ಲಿ ಏತಕ್ಕೆ ಯಾವ ಕಾರಣದಿಂದ ಘೋರವಾದ ಕ್ರೂರವಾದ ಹಿಂಸಾರೂಪವಾದ ಕರ್ಮದಲ್ಲಿ ನನ್ನನ್ನು ನಿಯಮಿಸುತ್ತಿರುವೆ ?" ಎಂದು ಹೇಳುತ್ತಿದಾನಲ್ಲ, ಅದೂ ಹೊಂದುವದಿಲ್ಲ ಹಾಗಿಲ್ಲದೆ ಸ್ಮಾರ್ತಕರ್ಮದೊಡನೆ (ಜ್ಞಾನವನ್ನು) ಸೇರಿಸಿಕೊಂಡು ಅನುಷ್ಠಾನಮಾಡಬೇಕೆಂದು ಭಗವಂತನು ಹೇಳಿದ್ದು, ಅರ್ಜುನನೂ ಹಾಗೆಂದು ತಿಳಿದುಕೊಂಡಿರುತ್ತಾನೆಂದು ಇಟ್ಟುಕೊಂಡರೂ "ಹಾಗಾದರೆ ಘೋರವಾದ [3] ಕರ್ಮದಲ್ಲಿ ನನ್ನನ್ನೇಕೆ ನಿಯಮಿಸುತ್ತಿದ್ದೀಯೆ ?" ಎಂದು ಹೇಳಿರುವದು ಹೇಗೆ ಸರಿಯಾದೀತು ?

---

1. ಈ ಮಾತು ಮೈ॥ ಪಾಠದಲ್ಲಿಲ್ಲ

2. ಮುಕ್ತಿಕಾರಣವೆಂದು

3. ಸ್ಮಾರ್ತಕರ್ಮವಾದ ಯುದ್ಧವು ಶಾಸ್ತ್ರೀಯವಾದದ್ದಾಗಿರುವಲ್ಲಿ ಘೋರವಾಗಿರುವ ಕರ್ಮವೆಂದು ಅರ್ಜುನನು ಹೇಳುವದಕ್ಕೆ ಕಾರಣವಿಲ್ಲ

**ವ್ಯಾಮಿಶ್ರೇಣೇವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ ।**
**ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಽಹಮಾಪ್ನುಯಾಮ್ ॥೨॥**

೨. ಕಲೆಬೆರಕೆಯಾದಂತಿರುವ (ಈ) ವಾಕ್ಯದಿಂದ ನನ್ನ ಬುದ್ಧಿಯನ್ನು ಮೋಹಗೊಳಿಸುವಂತೆ (ಕಾಣುತ್ತಿ)ರುವೆ. ಆದ್ದರಿಂದ ಯಾವದೊಂದರಿಂದ ನಾನು ಶ್ರೇಯಸ್ಸನ್ನು ಪಡೆದುಕೊಳ್ಳಬಹುದೋ ಅಂಥ ಒಂದನ್ನು ನಿಶ್ಚಯಿಸಿ ಹೇಳು.

(ಭಾಷ್ಯ)

೧೪೭. ಕಿಂ ಚ ವ್ಯಾಮಿಶ್ರೇಣೇವ ಯದ್ಯಪಿ ವಿವಿಕ್ತಾಭಿಧಾಯೀ ಭಗವಾನ್ ತಥಾಪಿ ಮಮ ಮನ್ದಬುದ್ಧೇರ್ವ್ಯಾಮಿಶ್ರಮಿವ ಭಗವದ್ವಾಕ್ಯಂ ಪ್ರತಿಭಾತಿ । ತೇನ (ಮೇ) ಮಮ ಬುದ್ಧಿಂ ಮೋಹಯಸೀವ । ಮಮ ಬುದ್ಧಿವ್ಯಾಮೋಹಾಪನಯಾಯ [1] ಹಿ ಪ್ರವೃತ್ತಸ್ತ್ವಂ ತು ಕಥಂ ಮೋಹಯಸಿ? ಅತೋ ಬ್ರವೀಮಿ ಬುದ್ಧಿಂ ಮೋಹಯಸೀವ ಮೇ [2] ಇತಿ । ತ್ವಂ ತು ಭಿನ್ನಕರ್ತೃಕಯೋಃ ಜ್ಞಾನಕರ್ಮಣೋಃ ಏಕಪುರುಷಾನುಷ್ಠಾನಾಸಂಭವಂ ಯದಿ ಮನ್ಯಸೇ ತತ್ರ ಏವಂ ಸತಿ ತತ್ ತಯೋರೇಕಂ ಬುದ್ಧಿಂ ಕರ್ಮ ವಾ ಇದಮೇವ ಅರ್ಜುನಸ್ಯ ಯೋಗ್ಯಂ ಬುದ್ಧಿಶಕ್ತ್ಯವಸ್ಥಾನುರೂಪಮ್ ಇತಿ ನಿಶ್ಚಿತ್ಯ ವದ ಬ್ರೂಹಿ ಯೇನ ಜ್ಞಾನೇನ ಕರ್ಮಣಾ ವಾ ಅನ್ಯತರೇಣ ಶ್ರೇಯಃ ಅಹಂ ಆಪ್ನುಯಾಮ್ [3] ॥

(ಭಾಷ್ಯಾರ್ಥ)

ಮತ್ತು ಕಲೆಬೆರಕೆಯಾದಂತಿರುವ (ಈ ವಾಕ್ಯದಿಂದ) [4]–ಭಗವಂತನಾದ (ನೀನೇನೋ) ಬಿಡಿಬಿಡಿಸಿಯೇ ಹೇಳುತ್ತಿರುವೆಯಾದರೂ ಅಲ್ಪಬುದ್ಧಿಯುಳ್ಳ ನನಗೆ ಈ ನಿನ್ನ ವಾಕ್ಯವು ಕಲೆಬೆರಕೆಯಾದಂತೆ ತೋರುತ್ತಿದೆ. ಅದರಿಂದ ನನ್ನ ಬುದ್ಧಿಯನ್ನು ಮೋಹಗೊಳಿಸುವಂತೆ (ಕಾಣು)ತ್ತಿರುವೆ ನನ್ನ ಬುದ್ಧಿಯ ವ್ಯಾಮೋಹವನ್ನು ಕಳೆಯುವದಕ್ಕೇ ಹೊರಟಿರುವ ನೀನು ಹೇಗೆತಾನೆ (ನನ್ನನ್ನು) ಮೋಹಗೊಳಿ

---

1 ಮಮ ಮನ್ದಬುದ್ಧಿ' ಸಾ॥ಮ॥, ' ಮಮ ಮನ್ದಬುದ್ಧೇಃ ' ಮೈ॥

2. ಇಲ್ಲಿ ' ಮಮ ' ಎಂದು ಹೆಚ್ಚಾಗಿ ಕೆಲವು ಪುಸ್ತಕಗಳಲ್ಲಿದೆ ಹಿಂದೆ ತೇನ ಮಮ ಎಂಬಲ್ಲಿ ' ತೇನ ಮೇ ಮಮ ' ಎಂದಿದ್ದರೆ ಉತ್ತಮ

3 ' ಇತಿ ' ಎಂದು ಹೆಚ್ಚಾಗಿ ಮೈ॥, ' ಇತಿ ಯದುಕ್ತಂ ತದಪಿ ನೋಪಪದ್ಯತೇ ' ವಾ।

4. ' ವಾಕ್ಯೇನ' ಎಂಬ ಮಾತು ಭಾಷ್ಯದಲ್ಲಿದ್ದರೆ ಚೆನ್ನಾಗಿತ್ತು

ಸೀಯೆ ? ಆದ್ದರಿಂದ ನನ್ನ ಬುದ್ಧಿಯನ್ನು 'ಮೋಹಗೊಳಿಸುವಂತೆ' (ಕಾಣು)ತ್ತಿರುವೆ ಎಂದು ನನ್ನ ಹೇಳಿಕೆ. ಆದರೆ ನೀನು ಜ್ಞಾನಕರ್ಮಗಳನ್ನು ಬೇರೆಬೇರೆಯವರು (ಅನುಷ್ಠಾನ) ಮಾಡತಕ್ಕದ್ದಾದ್ದರಿಂದ ಒಬ್ಬ ಪುರುಷನೇ ಮಾಡುವದು ಆಗಲಾರದು ಎಂದು ಅಭಿಪ್ರಾಯಪಡುವೆಯಾದರೆ ಆಗ ಹೀಗಿದ್ದರೆ ಅವುಗಳೆರಡರಲ್ಲಿ ಒಂದನ್ನು ಎಂದರೆ ಜ್ಞಾನವನ್ನೋ ಕರ್ಮವನ್ನೋ (ಒಂದನ್ನು) ನಿಶ್ಚಯಿಸಿ "ಇದೇ ಅರ್ಜುನನಿಗೆ ತಕ್ಕದ್ದು, ಅವನ ಬುದ್ಧಿಗೂ ಶಕ್ತಿಗೂ ಸ್ಥಿತಿಗೂ ಅನುಗುಣವಾದದ್ದು" ಎಂದು ನಿಶ್ಚಯಿಸಿ ಹೇಳು, ಜ್ಞಾನವೋ ಕರ್ಮವೋ ಯಾವದೊಂದರಿಂದ ನನಗೆ ಶ್ರೇಯಸ್ಸು ಸಿಕ್ಕೀತೋ ಅದನ್ನು ಹೇಳಿಬಿಡು.

(ಭಾಷ್ಯ)

೧೪೮ ಯದಿ ಹಿ ಕರ್ಮನಿಷ್ಠಾಯಾಂ ಗುಣಭೂತಮಪಿ ಜ್ಞಾನಂ ಭಗವತಾ ಉಕ್ತಂ ಸ್ಯಾತ್ ತತ್ ಕಥಂ "ತಯೋರೇಕಂ ವದ" ಇತಿ ಏಕವಿಷಯೈವ ಅರ್ಜುನಸ್ಯ ಶುಶ್ರೂಷಾ ಸ್ಯಾತ್ ? ನ ಹಿ ಭಗವತಾ ಉಕ್ತಮ್[1] "ಅನ್ಯತರದೇವ ಜ್ಞಾನಕರ್ಮಣೋರ್ವಕ್ಷ್ಯಾಮಿ ನೈವ ದ್ವಯಮ್" ಇತಿ ಯೇನ ಉಭಯಪ್ರಾಪ್ತ್ಯಸಂಭವಮ್ ಆತ್ಮನೋ ಮನ್ಯಮಾನಃ ಏಕಮೇವ ಪ್ರಾರ್ಥಯೇತ್ ॥

(ಭಾಷ್ಯಾರ್ಥ)

ಕರ್ಮನಿಷ್ಠೆಗೆ ಅಂಗವಾಗಿರುವ ಜ್ಞಾನವನ್ನೂ ಭಗವಂತನು ಹೇಳಿದ್ದಾನೆಂದು ಇಟ್ಟುಕೊಂಡರೂ[2] "ಅವೆರಡರಲ್ಲಿ ಒಂದನ್ನು ಹೇಳು" ಎಂದು ಒಂದನ್ನೇ ಅರ್ಜುನನು ಕೇಳಿರುವದು ಹೇಗೆ ಸರಿಯಾದೀತು ? ಏಕೆಂದರೆ (ಆ ಮತದಂತೆ) "ಜ್ಞಾನಕರ್ಮಗಳಲ್ಲಿ ಒಂದನ್ನೇ ಹೇಳುವೆನೇ ಹೊರತು ಎರಡನ್ನೂ ಹೇಳುವದೇ ಇಲ್ಲ" ಎಂದೇನೂ ಭಗವಂತನು (ಹಿಂದೆ) ಹೇಳಿರುವದಿಲ್ಲ ಹಾಗೆ ಹೇಳಿದ್ದರಲ್ಲವೆ, ತನಗೆ ಎರಡೂ ಹೊಂದುವಹಾಗಿಲ್ಲವೆಂದು (ಅರ್ಜುನನು) ತಿಳಿದುಕೊಂಡು ಒಂದನ್ನೇ ಕೇಳಿಕೊಳ್ಳುವದು ಸಾಧ್ಯ ?

---

1. 'ಭಗವತಾ ಪೂರ್ವಮ್ ಉಕ್ತಮ್' ಪಾ॥ ಮು॥

2. ಕರ್ಮಕ್ಕೆ ಸಮಪ್ರಧಾನವಾದ ಜ್ಞಾನದ ಸಮುಚ್ಚಯವನ್ನು ಬಿಟ್ಟು ಇವೆರಡರಲ್ಲಿ ಕರ್ಮವೇ ಮುಖ್ಯವೆಂದು ಇಟ್ಟುಕೊಂಡರೂ ಎಂದರ್ಥ ಇದರಂತೆ ಜ್ಞಾನವೇ ಹೆಚ್ಚಿನದೆಂದು ಇಟ್ಟುಕೊಂಡರೂ ಸಮುಚ್ಚಯವು ಹೊಂದುವದಿಲ್ಲ ತೈ ಭಾ ಶೀಕ್ಷಾವಲ್ಲಿಯ ಉಪಸಂಹಾರವನ್ನು ನೋಡಿ.

# ಭಗವಂತನ ಉತ್ತರ : ಜ್ಞಾನಕರ್ಮಗಳು ಬೇರೆಬೇರೆಯ ಜನರಿಗೆ

(ಭಾಷ್ಯ)

೧೪೯ ಪ್ರಶ್ನಾನುರೂಪಮೇವ ಪ್ರತಿವಚನಂ ಶ್ರೀ ಭಗವಾನ್ ಉವಾಚ—

(ಭಾಷ್ಯಾರ್ಥ)

ಪ್ರಶ್ನೆಗೆ ಅನುಗುಣವಾಗಿಯೇ ಉತ್ತರವನ್ನು ಶ್ರೀ ಭಗವಂತನು ಹೇಳಿರುತ್ತಾನೆ (ಹೇಗೆಂದರೆ) :—

**ಶ್ರೀಭಗವಾನ್ ಉವಾಚ**

**ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।**
**ಜ್ಞಾನಯೋಗೇನ ಸಾಙ್ಖ್ಯಾನಾಂ ಕರ್ಮಯೋಗೇನ ಯೋಗಿನಾಮ್ ॥**

೩. ಭಗವಂತನಿಂತೆಂದನು :—ಎಲೈ ಅನಘನೆ, ಈ ಲೋಕದಲ್ಲಿ ಎರಡು ಬಗೆಯ ನಿಷ್ಠೆಯನ್ನು ನಾನು ಪೂರ್ವದಲ್ಲಿ ಹೇಳಿರುವೆನು ಜ್ಞಾನ ಯೋಗದಿಂದ ಸಾಂಖ್ಯರಿಗೆ, ಕರ್ಮಯೋಗದಿಂದ ಯೋಗಿಗಳಿಗೆ.

(ಭಾಷ್ಯ)

೧೫೦ ಲೋಕೇ ಅಸ್ಮಿನ್ ಶಾಸ್ತ್ರಾರ್ಥಾನುಷ್ಠಾನಾಧಿಕೃತಾನಾಂ ತ್ರೈವರ್ಣಿಕಾನಾಂ ದ್ವಿವಿಧಾ ದ್ವಿಪ್ರಕಾರಾ ನಿಷ್ಠಾ ಸ್ಥಿತಿಃ ಅನುಷ್ಠೇಯತಾತ್ಪರ್ಯಂ ಪುರಾ ಪೂರ್ವಂ ಸರ್ಗಾದೌ ಪ್ರಜಾಃ ಸೃಷ್ಟ್ವಾ ತಾಸಾಮ್ ಅಭ್ಯುದಯನಿಃಶ್ರೇಯಸಪ್ರಾಪ್ತಿಸಾಧನಂ ವೇದಾರ್ಥಸಂಪ್ರದಾಯಮ್ ಆವಿಷ್ಕುರ್ವತಾ ಪ್ರೋಕ್ತಾ ಮಯಾ ಸರ್ವಜ್ಞೇನ ಈಶ್ವರೇಣ ಹೇ ಅನಘ ಅಪಾಪ । ತತ್ರ ಕಾ ಸಾ ದ್ವಿವಿಧಾ ನಿಷ್ಠಾ ಇತಿ? ಆಹ—ಜ್ಞಾನಯೋಗೇನ ಜ್ಞಾನಮೇವ ಯೋಗಃ, ತೇನ ಸಾಂಖ್ಯಾನಾಮ್ ಆತ್ಮಾನಾತ್ಮವಿಷಯವಿವೇಕವಿಜ್ಞಾನವತಾಂ ಬ್ರಹ್ಮಚರ್ಯಾಶ್ರಮಾದೇವ ಕೃತಸಂನ್ಯಾಸಾನಾಂ ವೇದಾನ್ತವಿಜ್ಞಾನಸುನಿಶ್ಚಿತಾರ್ಥಾನಾಂ ಪರಮಹಂಸಪರಿವ್ರಾಜಕಾನಾಂ ಬ್ರಹ್ಮಣ್ಯೇವ ಅವಸ್ಥಿತಾನಾಂ ನಿಷ್ಠಾ ಪ್ರೋಕ್ತಾ । ಕರ್ಮಯೋಗೇನ ಕರ್ಮೈವ ಯೋಗಃ ಕರ್ಮಯೋಗಃ । ತೇನ ಕರ್ಮಯೋಗೇನ ಯೋಗಿನಾಂ ಕರ್ಮಿಣಾಂ ನಿಷ್ಠಾ ಪ್ರೋಕ್ತಾ ಇತ್ಯರ್ಥಃ ॥

(ಭಾಷ್ಯಾರ್ಥ)

ಎಲೈ ಅನಘನೆ, ಪಾಪರಹಿತ (ನಾದ ಅರ್ಜುನ)ನೆ, ಶಾಸ್ತ್ರದಲ್ಲಿ ಹೇಳಿರುವ

ಾಧನಗಳನ್ನು ಅನುಷ್ಠಾನಮಾಡುವದಕ್ಕೆ ಅಧಿಕಾರಿಗಳಾದ ಮೂರು ವರ್ಣದವರಿಗೆ[1] ಈ ಲೋಕದಲ್ಲಿ ಎರಡು ಬಗೆಯು ಎರಡು ಪ್ರಕಾರವಾಗಿರುವ ನಿಷ್ಠೆಯು ಸ್ಥಿತಿಯು ನುಷ್ಠಾನಮಾಡತಕ್ಕ (ಸಾಧನದಲ್ಲಿ)ರಬೇಕಾದ ತತ್ಪರತೆಯನ್ನು ಹಿಂದೆ ಪೂರ್ವದಲ್ಲಿ– ಂದರೆ **ಸೃಷ್ಟಿಯ ಆದಿಯಲ್ಲಿ ಪ್ರಜೆಗಳನ್ನು ಸೃಷ್ಟಿಸಿ ಅವರಿಗೆ ಅಭ್ಯುದಯ ಃಶ್ರೇಯಸಗಳು ದೊರೆಯುವದಕ್ಕೆ ಸಾಧನವಾಗಿ ವೇದಾರ್ಥಸಂಪ್ರದಾಯ ನ್ನು ಪ್ರಕಾಶಗೊಳಿಸಿದಾಗ–ಸರ್ವಜ್ಞನಾದ ಈಶ್ವರನಾದ ನಾನು ಹೇಳಿರು ನು.**[2]

ಇಲ್ಲಿ ಈ ಎರಡು ಬಗೆಯು ಯಾವದು? ಎಂದರೆ ಹೇಳುತ್ತಾನೆ: ಜ್ಞಾನ ೋಗದಿಂದ, ಜ್ಞಾನವೆಂಬ ಯೋಗವಿದೆಯಲ್ಲ,[3] ಅದರಿಂದ **ಸಾಂಖ್ಯರಿಗೆ ಎಂದರೆ ಆತ್ಮಾನಾತ್ಮಗಳ ವಿಷಯವನ್ನು ವಿಂಗಡಿಸಿ ತಿಳಿದುಕೊಂಡು ಬ್ರಹ್ಮಚರ್ಯಾ ್ರಮದಿಂದಲೇ ಸಂನ್ಯಾಸವನ್ನು ಮಾಡಿ ವೇದಾಂತವಿಜ್ಞಾನದಿಂದ ಪರ ಾರ್ಥವನ್ನು ಚೆನ್ನಾಗಿ ನಿಶ್ಚಯಿಸಿಕೊಂಡು[4] ಪರಮಹಂಸಪರಿವ್ರಾಜಕ ಾಗಿ ಬ್ರಹ್ಮದಲ್ಲಿಯೇ** ನೆಲೆಸಿಂತಿರುವವರಿಗೆ (ನಿಷ್ಠೆಯನ್ನು ಹೇಳಿರುತ್ತೇನೆ), ರ್ಮಯೋಗದಿಂದ, ಕರ್ಮವೆಂಬ ಯೋಗವಿದೆಯಲ್ಲ, ಅದರಿಂದ ಯೋಗಿಗಳಿಗೆ ಂದರೆ ಕರ್ಮಿಗಳಿಗೆ ನಿಷ್ಠೆಯನ್ನು ಹೇಳಿದ್ದೇನೆ ಎಂದರ್ಥ.

(ಭಾಷ್ಯ)

೧೫೧. ಯದಿ ಚ ಏಕೇನ ಪುರುಷೇಣ ಏಕಸ್ಮೈ ಪುರುಷಾರ್ಥಾಯ ಜ್ಞಾನಂ ರ್ಮ ಚ ಸಮುಚ್ಚಿತ್ಯ ಅನುಷ್ಠೇಯಂ ಭಗವತಾ ಇಷ್ಟಮ್ ಉಕ್ತಂ ವಕ್ಷ್ಯಮಾಣಂ ಾ ಗೀತಾಸು, ವೇದೇಷು ಚೋಕ್ತಮ್, ಕಥಮಿಹ ಅರ್ಜುನಾಯ ಉಪಸನ್ನಾಯ ್ರಿಯಾಯ ವಿಶಿಷ್ಟಭಿನ್ನಪುರುಷಕರ್ತೃಕೇ ಏವ ಜ್ಞಾನಕರ್ಮನಿಷ್ಠೇ ಬ್ರೂಯಾತ್ ।

---

1 ವೇದದಲ್ಲಿ ಹೇಳಿರುವ ಸಾಧನವನ್ನು ಆಚರಿಸುವದಕ್ಕೆ ದ್ವಿಜರು ಮಾತ್ರ ಅಧಿಕಾರಿ ಳು, ಆದರೆ ಇತಿಹಾಸಪುರಾಣಗಳಿಂದ ಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಶೂದ್ರರಿಗೂ ಧಿಕಾರವುಂಟು. ಸೂ. ಭಾ ೧-೩-೩೮

2 ಹಿಂದಿನ ಅಧ್ಯಾಯದಲ್ಲಿ ಭಗವಂತನು ಈ ಎರಡು ನಿಷ್ಠೆಗಳನ್ನು ಹೇಳಿರುವ ದರೂ ಸೃಷ್ಟಿಯ ಆದಿಯಿಂದಲೂ ಈ ನಿಷ್ಠಾವಿಭಾಗವನ್ನು ಸಂಪ್ರದಾಯಪರಂಪರೆಯಿಂದ ೋಧಿಸುತ್ತಾ ಬಂದಿರುತ್ತಾನೆಂದು ತಿಳಿಸುವದಕ್ಕೆ 'ಪುರಾ' ಎಂಬ ಶಬ್ದಕ್ಕೆ ಈ ವ್ಯಾಖ್ಯಾನ ನ್ನು ಮಾಡಿರುತ್ತದೆ.

3 ಜ್ಞಾನಿಗಳಿಗೆ ಬೇರೆ ಯೋಗವನ್ನು ಮಾಡಬೇಕಾದ ಆವಶ್ಯಕತೆಯಿರುವದಿಲ್ಲ.

4. ಗೃಹಸ್ಥರ ಕರ್ಮಗಳ ಹಂಗೇ ಇಲ್ಲದವರು ಎಂದರ್ಥ. ಮುಂ. ಭಾ ೩-೨-೬.

ಯದಿ ಪುನಃ ಅರ್ಜುನೋ ಜ್ಞಾನಂ ಕರ್ಮ ಚ ದ್ವಯಂ ಶ್ರುತ್ವಾ ಸ್ವಯಮೇವ ಅನುಷ್ಠಾಸ್ಯತಿ, ಅನ್ಯೇಷಾಂ ತು ಭಿನ್ನಪುರುಷಾನುಷ್ಠೇಯತಾಂ ವಕ್ಷ್ಯಾಮಿ ಇತಿ ಮತಂ ಭಗವತಃ ಕಲ್ಪ್ಯೇತ ತದಾ ರಾಗದ್ವೇಷವಾನ್ ಅಪ್ರಮಾಣಭೂತೋ ಭಗವಾನ್ ಕಲ್ಪಿತಃ ಸ್ಯಾತ್ । ತಚ್ಚ ಅಯುಕ್ತಮ್ । ತಸ್ಮಾತ್ ಕಯಾಪಿ ಯುಕ್ತ್ಯಾ ನ ಸಮುಚ್ಚಯೋ ಜ್ಞಾನಕರ್ಮಣೋಃ । ಯತ್ ಅರ್ಜುನೇನ ಉಕ್ತಂ ಕರ್ಮಣೋ ಜ್ಯಾಯಸ್ತ್ವಂ ಬುದ್ಧೇಃ, ತಚ್ಚ ಸ್ಥಿತಮ್ । ಅನಿರಾಕರಣಾತ್ । ತಸ್ಯಾಶ್ಚ ಜ್ಞಾನನಿಷ್ಠಾಯಾಃ ಸಂನ್ಯಾಸಿನಾಮೇವ [1] ಅನುಷ್ಠೇಯತ್ವಮ್ । ಭಿನ್ನಪುರುಷಾನುಷ್ಠೇಯತ್ವವಚನಾತ್ ಭಗವತ ಏವಮೇವ ಅನುಮತಮ್ ಇತಿ ಗಮ್ಯತೇ ॥

(ಭಾಷ್ಯಾರ್ಥ)

ಒಬ್ಬನೇ ಪುರುಷನು ಒಂದೇ ಪುರುಷಾರ್ಥಕ್ಕಾಗಿ [2] ಜ್ಞಾನವನ್ನೂ ಕರ್ಮವನ್ನೂ ಸೇರಿಸಿಕೊಂಡು ಅನುಷ್ಠಾನಮಾಡಬೇಕೆಂಬುದು ಭಗವಂತನಿಗೆ ಇಷ್ಟವೆಂದು **ಗೀತೆಗಳಲ್ಲಿ** ಹಿಂದ ಹೇಳಿದ್ದರೆ ಅಥವಾ ಹೇಳುವವನಾಗಿದ್ದರೆ, ವೇದಗಳಲ್ಲಿಯೂ ಹಾಗೆಂದೇ ಹೇಳಿರುವದಾದರೆ, ತನ್ನಲ್ಲಿಗೆ ಉಪದೇಶಕ್ಕೆಂದು ಬಂದಿರುವ ಪ್ರಿಯನಾದ ಅರ್ಜುನನಿಗೆ ಜ್ಞಾನಕರ್ಮನಿಷ್ಠೆಗಳು ಬೇರಬೇರೆಯ ಆಯಾ ಅಧಿಕಾರಿಗಳೇ ಮಾಡತಕ್ಕವು ಎಂದು ಇಲ್ಲಿ (ಭಗವಂತನು) ಹೇಗ ಹೇಳುತ್ತಿದ್ದನು? [3] ಹಾಗಲ್ಲದೆ ಜ್ಞಾನವೂ ಕರ್ಮವೂ (ಅನುಷ್ಠೇಯವೆಂಬುದನ್ನು ಕೇಳಿ ಅರ್ಜುನನು ತಾನೇ ಅನುಷ್ಠಾನಮಾಡುತ್ತಾನೆ, ಮಿಕ್ಕವರಿಗೆಮಾತ್ರ ಬೇರೆಬೇರೆಯ ಜನರು (ಅವನ್ನು) ಮಾಡತಕ್ಕದ್ದೆಂದು ಹೇಳುವೆನು ಎಂಬುದು ಭಗವಂತನ ಅಭಿಪ್ರಾಯವು ಎಂದು ಕಲ್ಪಿಸುವದಾದರೆ, ಆಗ ಭಗವಂತನು ರಾಗದ್ವೇಷಗಳುಳ್ಳವನಾದ್ದರಿಂದ ಅಪ್ರಮಾಣರೂಪನಾದವನು [4] ಎಂದು ಕಲ್ಪಿಸಿದಂತೆ ಆಗುತ್ತದೆ ಅದೂ ಯುಕ್ತವಲ್ಲ.

---

1. 'ಸಂನ್ಯಾಸಿನ್ಯೇವ' ಮು॥ಪ್ರ॥

2. ಜ್ಞಾನಕರ್ಮಗಳೆರಡನ್ನೂ ಒಟ್ಟಿಗೆ ಅನುಷ್ಠಾನಮಾಡಿದರೆ ಮುಕ್ತಿ ಎಂಬುದು ಗೀತೆಯ ಮತ್ತು ವೇದದ ಉಪದೇಶವೆಂದು ವೃತ್ತಿಕಾರರ ಮತ, ಇವುಗಳು ಬೇರೆಬೇರೆಯವರಿಗೆ ಹೇಳಿದವುಗಳೆಂತಲೂ ಇವುಗಳಿಗೆ ಬೇರೆಬೇರೆಯ ಫಲವೆಂತಲೂ ಸಿದ್ಧಾಂತ.

3. ಭಗವಂತನು ಭಿನ್ನಾಧಿಕಾರಿಗಳಿಗೇ ಈ ನಿಷ್ಠೆಗಳೆಂದು ಭಕ್ತನಾದ ಅರ್ಜುನನಿಗೆ ಹೇಳಿರುವದರಿಂದ ಇದೇ ಭಗವದ್ಗೀತೆಯ ಮತ್ತು ವೇದದ ಉಪದೇಶವೆಂದು ನಿಶ್ಚಯವಾಗುತ್ತದೆ.

4. ರಾಗದ್ವೇಷವುಳ್ಳವನು ಹೇಳಿದ ಮಾತು ಆಪ್ತವಾಕ್ಯರೂಪವಾದ ಪ್ರಮಾಣವಾಗಲಾರದು.

ಆದ್ದರಿಂದ ಯಾವ ಯುಕ್ತಿಯಿಂದಲೂ ಜ್ಞಾನಕರ್ಮಗಳೆರಡನ್ನೂ ಸೇರಿಸಿ ಒಟ್ಟಿಗೆ (ಅನುಷ್ಠಾನ)ಮಾಡತಕ್ಕದ್ದೆಂದು (ಏರ್ಪಡು)ವದಿಲ್ಲ. ಅರ್ಜುನನು ಕರ್ಮಕ್ಕಿಂತ ಜ್ಞಾನವು ಹೆಚ್ಚಿನದೆಂದು (ತಿಳಿದುಕೊಂಡು) ಕೇಳಿದ್ದನಷ್ಟೆ. ಅದೂ ಹಾಗೆಯೇ (ಸರಿ) ಎಂದಾಯಿತು. ಏಕೆಂದರೆ ಭಗವಂತನು ಅದನ್ನು ಅಲ್ಲವೆಂದಿರುವದಿಲ್ಲ ಮತ್ತು ಆ ಜ್ಞಾನನಿಷ್ಠೆಯು ಸಂನ್ಯಾಸಿಗಳೇ[1] ಮಾಡತಕ್ಕದ್ದು ಎಂದೂ ಆಯಿತು, (ಜ್ಞಾನ ಕರ್ಮಗಳನ್ನು) ಬೇರೆಬೇರೆಯವರು ಮಾಡತಕ್ಕದ್ದು ಎಂದು ಹೇಳಿರುವದರಿಂದ ಭಗವಂತನಿಗೆ ಹೀಗೆಂಬುದೇ ಸಮ್ಮತವೆಂದೂ ಆಯಿತು[2]

(ಭಾಷ್ಯ)

೧೧.೨. ಮಾಂ ಚ ಬನ್ಧಕಾರಣೇ ಕರ್ಮಣ್ಯೇವ ನಿಯೋಜಯಸಿ ಇತಿ ವಿಷಣ್ಣಮನಸಮರ್ಜುನಂ ಕರ್ಮ ನಾರಭೇ ಇತ್ಯೇವಂ ಮನ್ವಾನಮ್ ಆಲಕ್ಷ್ಯ ಆಹ ಭಗವಾನ್[3] । ಅಥ ವಾ ಜ್ಞಾನಕರ್ಮನಿಷ್ಠಯೋಃ ಪರಸ್ಪರವಿರೋಧಾತ್ ಏಕೇನ ಪುರುಷೇಣ ಯುಗಪತ್ ಅನುಷ್ಠಾತುಮಶಕ್ಯತ್ವೇ ಸತಿ ಇತರೇತರಾನಪೇಕ್ಷಯೋರೇವ ಪುರುಷಾರ್ಥಹೇತುತ್ವೇ ಪ್ರಾಪ್ತೇ ಕರ್ಮನಿಷ್ಠಾಯಾ ಜ್ಞಾನನಿಷ್ಠಾಪ್ರಾಪ್ತಿಹೇತುತ್ವೇನ ಪುರುಷಾರ್ಥಹೇತುತ್ವಂ ನ ಸ್ವಾತನ್ತ್ರ್ಯೇಣ, ಜ್ಞಾನನಿಷ್ಠಾ ತು ಕರ್ಮನಿಷ್ಠೋಪಾಯಲಬ್ಧಾತ್ಮಿಕಾ ಸತೀ ಸ್ವಾತಂತ್ರ್ಯೇಣ ಪುರುಷಾರ್ಥಹೇತುರನ್ಯಾನಪೇಕ್ಷಾ ಇತ್ಯೇತಮರ್ಥಂ ಪ್ರದರ್ಶಯಿಷ್ಯನ್ ಆಹ ಭಗವಾನ್ ॥

(ಭಾಷ್ಯಾರ್ಥ)

"ನನ್ನನ್ನು ಮಟ್ಟಿಗೆ ಕರ್ಮದಲ್ಲಿಯೇ ನಿಯಮಿಸುತ್ತಿದ್ದೀಯಲ್ಲ!" ಎಂದು ಮನಸ್ಸಿನಲ್ಲಿ ಕುಗ್ಗಿದವನಾಗಿ ಕರ್ಮವನ್ನು ಮಾಡಲೊಲ್ಲೆನೆಂದು ಯೋಚಿಸಿಕೊಳ್ಳುತ್ತಿರುವ ಅರ್ಜುನನನ್ನು ಕಂಡು ಭಗವಂತನು (ಮುಂದಿನ ಮಾತನ್ನು) ಆಡಿರುತ್ತಾನೆ. ಅಥವಾ (ಈ ಶ್ಲೋಕಕ್ಕೆ ಮತ್ತೊಂದು ಬಗೆಯಲ್ಲಿ ಸಂಬಂಧವನ್ನು ಹೇಳಬಹುದು

---

1. ಈ ನಿಯಮಕ್ಕೆ ಒಂದು ಪ್ರತಿಷೇಧವುಂಟು, ೪-೧೯ರ ಭಾಷ್ಯವನ್ನು ನೋಡಿ.

2. ಇದು ಉಪಸಂಹಾರವಾಕ್ಯವು. ಅರ್ಜುನನು ಜ್ಞಾನವು ಕರ್ಮಕ್ಕಿಂತ ಹೆಚ್ಚಿನದಾದರೆ ಎಂದು ಕೇಳಿದ್ದಕ್ಕೆ ಹಾಗಲ್ಲವೆಂದು ಶ್ರೀ ಕೃಷ್ಣನು ಹೇಳಲಿಲ್ಲ, ನನ್ನನ್ನು ಘೋರವಾದ ಕರ್ಮದಲ್ಲಿ ಏತಕ್ಕೆ ನಿಯಮಿಸುತ್ತೀಯೆ? ಎಂದದ್ದಕ್ಕೆ ಭಗವಂತನು ನಿನಗೆ ಕರ್ಮವೇ ಸರಿಯಾದದ್ದು, ಸಾಂಖ್ಯಸಿಗೆಮಾತ್ರ ಜ್ಞಾನನಿಷ್ಠೆ ಎಂದಿರುತ್ತಾನೆ ಆದ್ದರಿಂದ ವೃತ್ತಿಕಾರರ ವ್ಯಾಖ್ಯಾನವು ಸರಿಯಲ್ಲ, ನಾವು ಹೇಳಿರುವದೇ ಸಿದ್ಧಾಂತವು ಎಂದು ಅಭಿಪ್ರಾಯ

3. 'ನ ಕರ್ಮಣಾಮನಾರಮ್ಭಾತ್' ಇತಿ ವಾ॥

ಹೇಗೆಂದರೆ): ಜ್ಞಾನಕರ್ಮನಿಷ್ಠೆಗಳೆರಡೂ ಒಂದಕ್ಕೊಂದು ವಿರುದ್ಧವಾಗಿರುವದರಿಂದ ಒಬ್ಬನೇ ಪುರುಷನು ಒಂದೇ ಕಾಲದಲ್ಲಿ (ಎರಡನ್ನೂ) ಅನುಷ್ಠಾನಮಾಡುವದಕ್ಕೆ ಆಗಲಾರದಾಗಿ (ಅವೆರಡೂ) ಒಂದನ್ನೊಂದು ಬಯಸದೆ (ಸ್ವತಂತ್ರ) ವಾಗಿಯೇ ಪುರುಷಾರ್ಥಕ್ಕೆ ಕಾರಣವಾಗಿರುವವು ಎಂದಾಯಿತು. ಆದ್ದರಿಂದ ಕರ್ಮನಿಷ್ಠೆಯು ಜ್ಞಾನನಿಷ್ಠೆಯು ದೊರಕುವದಕ್ಕೆ ಕಾರಣವಾಗಿರುವದರಿಂದ ಪುರುಷಾರ್ಥಕ್ಕೆ [1] ಕಾರಣವೆನಿಸಿರುವದೇ ಹೊರತು (ಅದು) ಸ್ವತಂತ್ರವಾಗಿ ಕಾರಣವಲ್ಲವೆಂದೂ ಜ್ಞಾನನಿಷ್ಠೆಯು ಮಾತ್ರ ಕರ್ಮನಿಷ್ಠೆಯೆಂಬ ಉಪಾಯದಿಂದ ಹುಟ್ಟಿ (ಆಮೇಲೆ) ಮತ್ತೇನನ್ನೂ ಬಯಸದೆ ಸ್ವತಂತ್ರವಾಗಿ ಪುರುಷಾರ್ಥಕ್ಕೆ ಕಾರಣವಾಗಿರುವದೆಂದೂ ತಿಳಿಸುವದಕ್ಕಾಗಿ ಭಗವಂತನು (ಈ ಮಾತನ್ನು) ಹೇಳಿರುತ್ತಾನೆ [2]:—

**ನ ಕರ್ಮಣಾಮನಾರಮ್ಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।**
**ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥ ೪ ॥**

೪. ಕರ್ಮಗಳನ್ನು ಆರಂಭಿಸದಿರುವದರಿಂದ ಪುರುಷನು ನೈಷ್ಕರ್ಮ್ಯವನ್ನು ಪಡೆಯುವದಿಲ್ಲ. ಸಂನ್ಯಾಸದಿಂದಲೇ ಸಿದ್ಧಿಯನ್ನು ಹೊಂದುವದೂ ಇಲ್ಲ.

(ಭಾಷ್ಯ)

೧೫೩ ನ ಕರ್ಮಣಾಮ್ ಅನಾರಮ್ಭಾತ್ [3] ಕರ್ಮಣಾಂ ಕ್ರಿಯಾಣಾಂ ಯಜ್ಞಾದೀನಾಮ್ ಇಹ ಜನ್ಮನಿ ಜನ್ಮಾನ್ತರೇ ವಾ ಅನುಷ್ಠಿತಾನಾಮ್ ಉಪಾತ್ತದುರಿತಕ್ಷಯಹೇತುತ್ವೇನ ಸತ್ತ್ವಶುದ್ಧಿಕಾರಣಾನಾಂ ತತ್ಕಾರಣತ್ವೇನ ಚ ಜ್ಞಾನೋತ್ಪತ್ತಿದ್ವಾರೇಣ ಜ್ಞಾನನಿಷ್ಠಾಹೇತೂನಾಮ್ । "ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ ಪಾಪಸ್ಯ ಕರ್ಮಣಃ । ಯಥಾದರ್ಶತಲೇ ಪ್ರಖ್ಯೇ [4] ಪಶ್ಯತ್ಯಾತ್ಮಾನ

---

1. ಮುಕ್ತಿಗೆ

2. ಇಲ್ಲಿ ಹೇಳಿರುವ ಎರಡು ಸಂಬಂಧಗಳೂ ಮುಂದಿನ ಶ್ಲೋಕಕ್ಕೆ ಹೊಂದುತ್ತವೆ. ಅಧಿಕಾರಿಯಾದವನು ಕರ್ಮವನ್ನು ಮಾಡಲೂಬೇಕು, ಅದು ಪರಂಪರೆಯಿಂದಲೇ ಮುಕ್ತಿಯನ್ನು ಕೊಡುವದು ಎಂದು ಅಭಿಪ್ರಾಯ

3. ಈ ಮಾತು ಮೈ|| ಪಾಠದಲ್ಲಿಲ್ಲ; ಆ||ನಿ||ಗು|| ಇವುಗಳಲ್ಲಿ "ಅನಾರಮ್ಭಾತ್ ಅಪ್ರಾರಮ್ಭಾತ್" ಎಂದಿದೆ. ವಾ||ದಲ್ಲಿ 'ಅನಾರಮ್ಭಾತ್ ಕರ್ಮಣಾಮ್' ಎಂಬುದಿಲ್ಲ.

4. ಭಾರತದಲ್ಲಿ "ಯಥಾದರ್ಶತಲೇ" "ಅಥಾದರ್ಶತಲ" ಎಂದು ಎರಡು ಪಾಠಗಳಿವೆ. ತೈ. ಭಾ. ಭಾ. ೩೦ ನೋಡಿ.

ಮಾತ್ಮನಿ" (ಮೋ. ಧ. ೨೦೪-೮) ಇತ್ಯಾದಿಸ್ಮರಣಾತ್ । ಅನಾರಮ್ಭಾತ್ ಅನನುಷ್ಠಾನಾತ್ ನೈಷ್ಕರ್ಮ್ಯಂ ನಿಷ್ಕರ್ಮಭಾವಂ ಕರ್ಮಶೂನ್ಯತಾಂ ಜ್ಞಾನಯೋಗೇನ ನಿಷ್ಠಾಂ ನಿಷ್ಕ್ರಿಯಾತ್ಮಸ್ವರೂಪೇಣೈವ ಅವಸ್ಥಾನಮ್ ಇತಿ ಯಾವತ್ । ಪುರುಷಃ ನಾಶ್ನುತೇ ನ ಪ್ರಾಪ್ನೋತಿ ಇತ್ಯರ್ಥಃ ॥

(ಭಾಷ್ಯಾರ್ಥ)

"ಕರ್ಮಗಳನ್ನು ಆರಂಭಿಸದೆ ಇರುವದರಿಂದ" (ಎಂಬಲ್ಲಿ) **ಕರ್ಮಗಳೆಂದರೆ ಈ ಜನ್ಮದಲ್ಲಾಗಲಿ ಬೇರೊಂದು ಜನ್ಮದಲ್ಲಾಗಲಿ**[1] **ಮಾಡಿದವುಗಳಾಗಿದ್ದು (ಹಿಂದೆ) ಪಡೆದಿದ್ದ ಪಾಪಗಳನ್ನು ಸವೆಯಿಸುವದಕ್ಕೆ ಕಾರಣವಾಗಿ (ಆ ಮೂಲಕ) ಅಂತಃಕರಣವು ಶುದ್ಧಿಯಾಗುವದಕ್ಕೆ ಕಾರಣವಾಗಿಯೂ ಆ (ಶುದ್ಧಿಗೆ) ಕಾರಣವಾಗಿರುವದರಿಂದ ಜ್ಞಾನವುಂಟಾಗುವಮೂಲಕ ವಾಗಿ ಜ್ಞಾನನಿಷ್ಠೆಗೂ ಕಾರಣವಾಗಿಯೂ ಇರುವ ಯಜ್ಞವೇ ಮುಂತಾದ ಕ್ರಿಯೆಗಳು.** "ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ ಪಾಪಸ್ಯ ಕರ್ಮಣಃ । ಯಥಾದರ್ಶತಲೇಪ್ರಖ್ಯೇ ಪಶ್ಯತ್ಯಾತ್ಮಾನಮಾತ್ಮನಿ ॥" (ಮೋ ಧ. ೨೦೪-೮) "ಜನರಿಗೆ ಪಾಪಕರ್ಮವು ಸವೆಯುವದರಿಂದ ಜ್ಞಾನವು ಉಂಟಾಗುತ್ತದೆ. ಸ್ವಚ್ಛ ವಾದ ಕನ್ನಡಿಯ ಮೇಲುಭಾಗದಲ್ಲಿ ಹೇಗೋ ಹಾಗೆ ಅಂತಃಕರಣದಲ್ಲಿ ತಮ್ಮ ಆತ್ಮನನ್ನು ಕಂಡುಕೊಳ್ಳುವರು" (ಮೋ ಧ ೨೦೪-೮) ಎಂದು ಮುಂತಾಗಿರುವ ಸ್ಮೃತಿಯು ಇದಕ್ಕೆ ಪ್ರಮಾಣವು. (ಇಂಥ ಕರ್ಮಗಳನ್ನು) **ಆರಂಭಿಸದೆ** ಇರುವದ ರಿಂದ ಎಂದರೆ **ಮಾಡದೆ** (ಕೈ ಬಿಟ್ಟ) ದ್ದರಿಂದ ಮನುಷ್ಯನಿಗೆ ನೈಷ್ಕರ್ಮ್ಯವು **ಎಂದರೆ** ನಿಷ್ಕರ್ಮತ್ವವು, ಕರ್ಮಗಳಿಲ್ಲದ ಇರುವಿಕೆಯು, ಜ್ಞಾನಯೋಗದ ನಿಷ್ಠೆಯು, ಯಾವ ಕ್ರಿಯೆಯೂ ಇಲ್ಲದ ಆತ್ಮಸ್ವರೂಪದಲ್ಲಿ ನಿಲ್ಲುವದು ಎಂದರ್ಥ.[2] (ಅದು) **ಸಿಕ್ಕುವದಿಲ್ಲ, ದೊರಕುವದಿಲ್ಲ** ಎಂದರ್ಥ.

---

1. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳಿಗೂ ಈಗ ಫಲವುಂಟಾಗಬಹುದು. ತೈ.ಭಾ.ಭಾ, ೮೩, ಕೇ ಭಾ ಭಾ. ೮೬, ಸೂ.ಭಾ. ४-೧-೧೫, ४-೧-೧೮.

2. ನೈಷ್ಕರ್ಮ್ಯವೆಂದರೆ ಕರ್ಮವನ್ನು ಮಾಡದೆ ಇರುವದು ಎಂದು ತಪ್ಪರ್ಥವನ್ನು ಮಾಡಿಕೊಂಡು ಅನೇಕರು ಶಂಕರಸಿದ್ಧಾಂತವನ್ನು ತಿಳಿಯಲಾರದೆ ಅದನ್ನು ಹಳಿದಿರುತ್ತಾರೆ ಪೀಠಿಕೆಯನ್ನು ನೋಡಿರಿ.

(ಭಾಷ್ಯ)

೧೫೪. ಕರ್ಮಣಾಮ್ ಅನಾರಮ್ಭಾತ್ ನೈಷ್ಕರ್ಮ್ಯಂ ನಾಶ್ನುತೇ[1] ಇತಿ ವಚನಾತ್ ತದ್ವಿಪರ್ಯಯಾತ್ ತೇಷಾಮ್ ಆರಮ್ಭಾತ್ ನೈಷ್ಕರ್ಮ್ಯಮ್ ಅಶ್ನುತೇ ಇತಿ ಗಮ್ಯತೇ । ಕಸ್ಮಾತ್ ಪುನಃ ಕಾರಣಾತ್ ಕರ್ಮಣಾಮ್ ಅನಾರಮ್ಭಾತ್ ನೈಷ್ಕರ್ಮ್ಯಂ ನಾಶ್ನುತೇ ಇತಿ । ಉಚ್ಯತೇ । ಕರ್ಮಾರಮ್ಭಸ್ಯೈವ ನೈಷ್ಕರ್ಮ್ಯೋಪಾಯತ್ವಾತ್[2] । ನ ಹಿ ಉಪಾಯಮನ್ತರೇಣ ಉಪೇಯಪ್ರಾಪ್ತಿರಸ್ತಿ । ಕರ್ಮಯೋಗೋಪಾಯತ್ವಂ ಚ ನೈಷ್ಕರ್ಮ್ಯಲಕ್ಷಣಸ್ಯ ಜ್ಞಾನಯೋಗಸ್ಯ ಶ್ರುತೌ ಇಹ ಚ ಪ್ರತಿಪಾದನಾತ್ । ಶ್ರುತೌ ತಾವತ್ ಪ್ರಕೃತಸ್ಯ ಆತ್ಮಲೋಕಸ್ಯ ವೇದಸ್ಯ ವೇದನೋಪಾಯತ್ವೇನ "ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ" (ಬೃ. ೪-೪-೨೨) ಇತ್ಯಾದಿನಾ ಕರ್ಮಯೋಗಸ್ಯ ಜ್ಞಾನಯೋಗೋಪಾಯತ್ವಂ ಪ್ರತಿಪಾದಿತಮ್ । ಇಹಾಪಿ ಚ 'ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ" (೫-೬)"ಯೋಗಿನಃ ಕರ್ಮ ಕುರ್ವನ್ತಿ ಸಙ್ಗಂ ತ್ಯಕ್ತ್ವಾತ್ಮಶುದ್ಧಯೇ" (೫-೧೧), "ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್" (೧೮-೫) ಇತ್ಯಾದಿ ಪ್ರತಿಪಾದಯಿಷ್ಯತಿ ॥

(ಭಾಷ್ಯಾರ್ಥ)

ಕರ್ಮಗಳನ್ನು ಮಾಡದೆ ಇರುವದರಿಂದ ನೈಷ್ಕರ್ಮ್ಯವು ದೊರಕುವದಿಲ್ಲವೆಂದು ಹೇಳಿದ್ದರಿಂದ ಅದಕ್ಕೆ ವಿರುದ್ಧವಾಗಿ ಅವುಗಳನ್ನು ಮಾಡುವದರಿಂದ ನೈಷ್ಕರ್ಮ್ಯವು ದೊರಕುವದೆಂದು ನಿರ್ಣಯಿಸಬೇಕಾಗುತ್ತದೆ.

(ಪ್ರಶ್ನೆ) – ಕರ್ಮಗಳನ್ನು ಮಾಡದೆ ಇರುವದರಿಂದ ನೈಷ್ಕರ್ಮ್ಯವು ದೊರಕುವದಿಲ್ಲವೆಂಬುದಕ್ಕೆ ಕಾರಣವಾದರೂ ಏನು ?

(ಉತ್ತರ) —ಏಕೆಂದರೆ **ಕರ್ಮಗಳನ್ನು ಮಾಡುವದೇ ನೈಷ್ಕರ್ಮ್ಯಕ್ಕೆ ಉಪಾಯವಾಗಿರುತ್ತದೆ.** ಸಾಧನವಿಲ್ಲದೆ ಸಾಧ್ಯವು ದೊರಕುವದೇ ಇಲ್ಲ ನೈಷ್ಕರ್ಮ್ಯರೂಪವಾದ ಜ್ಞಾನಯೋಗಕ್ಕೆ ಕರ್ಮಯೋಗವೇ ಸಾಧನವೆಂಬುದು ಶ್ರುತಿಯಲ್ಲಿಯೂ ಈ (ಗೀತೆ)ಯಲ್ಲಿಯೂ ಹಾಗೆಂದು ಹೇಳಿರುವದರಿಂದ (ಗೊತ್ತಾಗುತ್ತದೆ). ಮೊದಲನೆಯದಾಗಿ ಶ್ರುತಿಯಲ್ಲಿ ಅರಿತುಕೊಳ್ಳಬೇಕಾದದ್ದೆಂದು ಪ್ರಕೃತ

1. "ಇಲ್ಲಿ ನ ಕರ್ಮಣಾಮನಾರಮ್ಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ" ಎಂದು ಶ್ಲೋಕಾನುಪೂರ್ವಿಯನ್ನೇ ಮೈ||ಮು|| ಗಳಲ್ಲಿ ಅನುಸರಿಸಿದೆ.

2. "ನೈಷ್ಕರ್ಮ್ಯೋಪಾಯತ್ವಾತ್ ಕರ್ಮಾರಮ್ಭಸ್ಯ" ಮು||ಮೈ||

ವಾಗಿರುವ ಆತ್ಮನೆಂಬ ಲೋಕವನ್ನು ಅರಿತುಕೊಳ್ಳುವದಕ್ಕೆ ಉಪಾಯವೆಂದು "ಆ ಈ (ಆತ್ಮನನ್ನು) ವೇದಾಧ್ಯಯನದಿಂದಲೂ ಯಜ್ಞದಿಂದಲೂ ಅರಿಯಲಿಚ್ಛಿಸುತ್ತಾರೆ'' (ಬೃ. ೪-೪-೨೨) ಎಂದು ಮುಂತಾಗಿರುವ (ವಾಕ್ಯದಲ್ಲಿ ಹೇಳಿರುವದರಿಂದ) ಕರ್ಮಯೋಗವು ಜ್ಞಾನಯೋಗಕ್ಕೆ ಉಪಾಯವೆಂದು ಹೇಳಿದಂತಾಯಿತು. ಇಲ್ಲಿಯೂ "ಎಲೈ ಮಹಾಬಾಹುವೆ, ಸಂನ್ಯಾಸವು ಮಾತ್ರ ಯೋಗವಿಲ್ಲದೆ ದಕ್ಕುವದು ಕಷ್ಟ'' (೫-೬), "ಯೋಗಿಗಳು ಚಿತ್ತಶುದ್ಧಿಗಾಗಿ ಸಂಗವನ್ನು ತ್ಯಾಗಮಾಡಿ ಕರ್ಮವನ್ನು ಮಾಡುತ್ತಾರೆ" (೫-೧೧), "ವಿವೇಕಿಗಳಾದವರಿಗೆ ಯಜ್ಞವೂ ದಾನವೂ ತಪಸ್ಸೂ ಪಾವನಗಳಾಗಿರುವವು'' (೧೮-೫) ಎಂದು ಮುಂತಾಗಿ ಮುಂದೆ ಹೇಳಿರುತ್ತದೆ.

(ಭಾಷ್ಯ)

೧೫೫. ನನು ಚ "ಅಭಯಂ ಸರ್ವಭೂತೇಭ್ಯೋ ದತ್ವಾ ನೈಷ್ಕರ್ಮ್ಯಮಾಚರೇತ್" (ಅಶ್ವ. ೪೬-೧೮) ಇತ್ಯಾದೌ ಕರ್ತವ್ಯಕರ್ಮಸಂನ್ಯಾಸಾದಪಿ ನೈಷ್ಕರ್ಮ್ಯಪ್ರಾಪ್ತಿಂ ದರ್ಶಯತಿ । ಲೋಕೇ ಚ ಕರ್ಮಣಾಮ್ ಅನಾರಮ್ಭಾತ್ ನೈಷ್ಕರ್ಮ್ಯಮ್ ಇತಿ ಪ್ರಸಿದ್ಧತರಮ್ । ಅತಶ್ಚ ನೈಷ್ಕರ್ಮ್ಯಾರ್ಥಿನಃ ಕಿಂ ಕರ್ಮಾರಮ್ಭೇಣ ? ಇತಿ ಪ್ರಾಪ್ತಮ್ । ಅತ ಆಹ "ನ ಚ ಸಂನ್ಯಸನಾದೇವ" ಇತಿ । ನಾಪಿ ಸಂನ್ಯಸನಾದೇವ ಕೇವಲಾತ್ ಕರ್ಮಪರಿತ್ಯಾಗಮಾತ್ರಾದೇವ ಜ್ಞಾನರಹಿತಾತ್ ಸಿದ್ಧಿಂ ನೈಷ್ಕರ್ಮ್ಯಲಕ್ಷಣಾಂ ಜ್ಞಾನಯೋಗೇನ ನಿಷ್ಠಾಂ ಸಮಧಿಗಚ್ಛತಿ ನ ಪ್ರಾಪ್ನೋತಿ ॥

(ಭಾಷ್ಯಾರ್ಥ)

(ಆಕ್ಷೇಪ).—"ಅಭಯಂ ಸರ್ವಭೂತೇಭ್ಯೋ ದತ್ವಾ ನೈಷ್ಕರ್ಮ್ಯಮಾಚರೇತ್" ಸರ್ವಭೂತಗಳಿಗೂ ಅಭಯವನ್ನು ಕೊಟ್ಟು ನೈಷ್ಕರ್ಮ್ಯವನ್ನು ಆಚರಿಸಬೇಕು. (ಅಶ್ವ. ೪೬-೧೮) ಮುಂತಾದ (ವಚನಗಳ)ಲ್ಲಿ ಮಾಡಬೇಕಾದ ಕರ್ಮಗಳನ್ನು ಸಂನ್ಯಾಸಮಾಡುವದರಿಂದಲೂ ನೈಷ್ಕರ್ಮ್ಯವು ದೊರಕುವದೆಂದು ಹೇಳಿದೆಯಲ್ಲ! ಲೋಕದಲ್ಲಿಯೂ ಕರ್ಮಗಳನ್ನು ಮಾಡದೆ ಇರುವದರಿಂದ ನೈಷ್ಕರ್ಮ್ಯವು ಎಂಬುದು ಬಹು ಪ್ರಸಿದ್ಧವಾಗಿರುತ್ತದೆಯಲ್ಲ! ಹೀಗಿರುವದರಿಂದ ನೈಷ್ಕರ್ಮ್ಯವನ್ನು ಬಯಸುವವನಿಗೆ ಕರ್ಮಗಳನ್ನು ಮಾಡುವದರಿಂದೇನು (ಆಗಬೇಕು)[1] ?

---

1. ನೈಷ್ಕರ್ಮ್ಯವೆಂದರೆ ಸುಮ್ಮನೆ ಕೆಲಸಮಾಡದೆ ಇರುವದಲ್ಲ, ಜ್ಞಾನನಿಷ್ಠೆಯೇ ಎಂಬುದನ್ನು ಸ್ಪಷ್ಟಪಡಿಸುವದಕ್ಕಾಗಿ ಈ ಆಕ್ಷೇಪವನ್ನು ತೆಗೆದಿದೆ. ಮುಂದೆ ೪-೧೮, ೧೮-೪೯ ಇವುಗಳ ಭಾಷ್ಯದಲ್ಲಿ ಇದು ಸ್ಪಷ್ಟವಾಗುವದು.

(ಪರಿಹಾರ) .—ಹೀಗೆಂಬ ಆಕ್ಷೇಪವು ಬಂದರೆ ಅದಕ್ಕೆ (ಭಗವಂತನು) '(ಬರಿಯ) ಸಂನ್ಯಾಸದಿಂದಲೇ' (ಮುಂತಾದ ವಾಕ್ಯವನ್ನು) ಹೇಳಿರುತ್ತಾನೆ ಬರಿಯ ಸಂನ್ಯಾಸದಿಂದಲೇ ಎಂದರೆ ಜ್ಞಾನವಿಲ್ಲದೆ ಕರ್ಮವನ್ನು ಕೈಬಿಟ್ಟಮಾತ್ರದಿಂದ ನೈಷ್ಕರ್ಮ್ಯಸಿದ್ಧಿಯನ್ನು ಹೊಂದುವದಿಲ್ಲ' ಜ್ಞಾನಯೋಗದಲ್ಲಿ ನಿಷ್ಠೆಯನ್ನು ಹೊಂದಲಾರನು.

(ಭಾಷ್ಯ)

೧೫೬. ಕಸ್ಮಾತ್ ಪುನಃ ಕಾರಣಾತ್ ಕರ್ಮಸಂನ್ಯಾಸಮಾತ್ರಾದೇವ ಕೇವಲಾತ್ ಜ್ಞಾನರಹಿತಾತ್ ಸಿದ್ಧಿಂ ನೈಷ್ಕರ್ಮ್ಯಲಕ್ಷಣಂ ಪುರುಷಃ ನಾಧಿಗಚ್ಛತಿ ಇತಿ ಹೇತ್ವಾಕಾಂಕ್ಷಾಯಾಮ್ ಆಹ—

(ಭಾಷ್ಯಾರ್ಥ)

ಜ್ಞಾನವಿಲ್ಲದೆ ಸುಮ್ಮನೆ ಕರ್ಮವನ್ನು ಸಂನ್ಯಾಸಮಾಡಿದಮಾತ್ರದಿಂದಲೇ ನೈಷ್ಕರ್ಮ್ಯವೆಂಬ ಸಿದ್ಧಿಯನ್ನು ಮನುಷ್ಯನು ಹೊಂದುವದಿಲ್ಲವೆಂಬುದಕ್ಕೆ ಕಾರಣವಾದರೂ ಏನು? ಎಂದು ಕಾರಣವನ್ನು ಕೇಳಿದರೆ (ಭಗವಂತನು) ಹೇಳುತ್ತಾನೆ—

**ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।**
**ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥ ೫ ॥**

೫. ಕರ್ಮವನ್ನು ಮಾಡದೆ ಯಾವನೂ ಕ್ಷಣವೂ ಎಂದಿಗೂ ಇರುವದಿಲ್ಲ; ಏಕೆಂದರೆ ಪ್ರತಿಯೊಬ್ಬನೂ ಪ್ರಕೃತಿಯಿಂದುಂಟಾಗುವ ಗುಣಗಳಿಂದ ಅವಶನಾಗಿ ಕರ್ಮವನ್ನು ಮಾಡಿಸಲ್ಪಡುತ್ತಲೇ ಇರುವನು.

(ಭಾಷ್ಯ)

೧೫೭. ನ ಹಿ ಯಸ್ಮಾತ್ ಕ್ಷಣಮಪಿ ಕಾಲಂ ಜಾತು ಕದಾಚಿತ್ ಕಶ್ಚಿತ್ ತಿಷ್ಠತಿ ಅಕರ್ಮಕೃತ್ ಸನ್ । ಕಸ್ಮಾತ್? ಕಾರ್ಯತೇ ಪ್ರವರ್ತ್ಯತೇ[1] ಹಿ ಯಸ್ಮಾತ್ ಅವಶ ಏವ ಅಸ್ವತನ್ತ್ರ ಏವ[2] ಕರ್ಮ ಸರ್ವಃ ಪ್ರಾಣೀ ಪ್ರಕೃತಿಜೈಃ ಪ್ರಕೃತಿತೋ ಜಾತೈಃ ಸತ್ತ್ವರಜಸ್ತಮೋಭಿಃ ಗುಣೈಃ । 'ಅಜ್ಞಃ' ಇತಿ ವಾಕ್ಯಶೇಷಃ । ಯತಃ ವಕ್ಷ್ಯತಿ "ಗುಣೈರ್ಯೋ ನ ವಿಚಾಲ್ಯತೇ" (೧೪-೨೩) ಇತಿ । ಸಾಂಖ್ಯಾನಾಂ ಪೃಥಕ್ಕರಣಾತ್ ಅಜ್ಞಾನಾಮೇವ ಹಿ ಕರ್ಮಯೋಗಃ, ನ ಜ್ಞಾನಿನಾಮ್ ।

---

1. ಈ ಮಾತು ಅ|| ನಿ|| ಪಾಠಗಳಲ್ಲಿಲ್ಲ.
2. ವಾ|| ಮು|| ಮೈ||ಗಳಲ್ಲಿ ಈ ಎರಡು ಮಾತುಗಳಿವೆ.

ಜ್ಞಾನಿನಾಂ ತು ಗುಣೈರಚಾಲ್ಯಮಾನಾನಾಂ ಸ್ವತಃ ಚಲನಾಭಾವಾತ್ ಕರ್ಮ ಯೋಗೋ ನೋಪಪದ್ಯತೇ । ತಥಾ ಚ ವ್ಯಾಖ್ಯಾತಂ "ವೇದಾವಿನಾಶಿನಮ್" (೨-೨೧) ಇತ್ಯತ್ರ ॥

(ಭಾಷ್ಯಾರ್ಥ)

'ಹಿ' ಏಕೆಂದರೆ ಯಾವನೂ ಒಂದು ಕ್ಷಣಕಾಲವಾದರೂ ಕರ್ಮವನ್ನು ಮಾಡದವನಾಗಿ ಇರುವದಿಲ್ಲ. ಅದೇಕೆ? ಎಂದರೆ ಪ್ರತಿಯೊಬ್ಬ ಜೀವನೂ ಪ್ರಕೃತಿಜ ವಾದ ಎಂದರೆ ಪ್ರಕೃತಿಯಿಂದ ಹುಟ್ಟಿರುವ[1] ಸತ್ವ, ರಜ, ತಮ-(ಎಂಬ) ಗುಣಗ ಳಿಂದ[2] ತನ್ನ ವಶವಿಲ್ಲದಂತೆಯೇ ಅಸ್ವತಂತ್ರನಾಗಿಯೇ ಕರ್ಮವನ್ನು ಮಾಡಿಸಲ್ಪಡು ತ್ತಾನೆ (ಅದರಲ್ಲಿ) ತೊಡಗಿಸಲ್ಪಡುತ್ತಾನೆ

(ಇಲ್ಲಿ 'ಪ್ರತಿಯೊಬ್ಬನೂ' ಎಂಬಲ್ಲಿ) ಅಜ್ಞನಾದ ಎಂಬ ಮಾತನ್ನು ಸೇರಿಸಿ ಕೊಳ್ಳಬೇಕು ; ಏಕೆಂದರೆ "ಗುಣೈರ್ಯೋ ನ ವಿಚಾಲ್ಯತೇ" (೪-೨೩) "ಯಾವಾ ತನು ಗುಣಗಳಿಂದ ಅಲುಗಾಡಿಸಲ್ಪಡದಿರುವನೋ "(ಅವನು ಗುಣಾತೀತನಾದ ಜ್ಞಾನಿಯು)" ಎಂದು ಮುಂದೆ (ಭಗವಂತನು) ಹೇಳಿರುತ್ತಾನೆ. (ಅಲ್ಲಿ) ಸಾಂಖ್ಯ ರನ್ನು ಬೇರ್ಪಡಿಸಿ (ಹೇಳಿ)ರುವದರಿಂದ ಅಜ್ಞರಿಗೇ ಕರ್ಮಯೋಗವೇ ಹೊರತು ಜ್ಞಾನಿಗಳಿಗಲ್ಲ (ವೆಂದು ನಿಶ್ಚಯವಾಗುತ್ತದೆ). ಗುಣಗಳಿಂದ ಅಲುಗಾಡಿಸಲ್ಪಡದಿರುವ ಜ್ಞಾನಿಗಳಾದರೋ ಸ್ವರೂಪದಲ್ಲಿ[3] ಚಲನೆಯಿಲ್ಲದ್ದರಿಂದ ಕರ್ಮಯೋಗವು ಯುಕ್ತ ವಾಗುವದಿಲ್ಲ ಹೀಗೆಂದು "ವೇದಾವಿನಾಶಿನಮ್" (೨-೨೧) ಎಂಬ ಶ್ಲೋಕದ ಭಾಷ್ಯದಲ್ಲಿ ವಿವರವಾಗಿ ತಿಳಿಸಿಯೂ ಇರುತ್ತೇವೆ

## ಆತ್ಮಜ್ಞಾನಿಯಲ್ಲದವನು ಕರ್ಮವನ್ನು ಬಿಡುವದು ಸರಿಯಲ್ಲ

(ಭಾಷ್ಯ)

೧೫೮ ಯಸ್ತು ಅನಾತ್ಮಜ್ಞಃ ಚೋದಿತಂ ಕರ್ಮ ನಾರಭತೇ ಇತಿ ತತ್ ಅಸತ್ ಇತ್ಯಾಹ—

---

1 ಗುಣಗಳು ಪ್ರಕೃತಿಯಲ್ಲಿ ಅವ್ಯಕ್ತವಾಗಿದ್ದು ಸೃಷ್ಟಿಕಾಲಕ್ಕೆ ವ್ಯಕ್ತವಾಗುವವು ಎಂದು ಭಾವ.

2. ಈ ಗುಣಗಳ ವಿಷಯವನ್ನು ಮುಂದೆ ೧೪ನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ತಿಳಿಸಲಾಗುವದು.

3. ಆತ್ಮ ಸ್ವರೂಪದಲ್ಲಿ ಯಾರಿಗೂ ಉಪಾಧಿಯಿಂದ ಅದರಲ್ಲಿ ಕರ್ತೃತ್ವವಿಲ್ಲ ಕರ್ತೃ ತ್ವವು ಇದೆಯೆಂಬುದು ಅಜ್ಞರಿಗೆ ಮಾತ್ರ.

(ಭಾಷ್ಯಾರ್ಥ)

ಆದರೆ ಆತ್ಮನ (ಸ್ವರೂಪವ)ನ್ನು ಅರಿತುಕೊಳ್ಳದಿರುವವನು (ಶಾಸ್ತ್ರದಲ್ಲಿ) ವಿಹಿತವಾಗಿರುವ ಕರ್ಮವನ್ನು ಮಾಡದೆ ಇರುವದೆಂಬುದು ತಪ್ಪು ಎಂದು (ಭಗವಂತನು) ಹೇಳುತ್ತಿದಾನೆ :—

**ಕರ್ಮೇನ್ದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।**
**ಇನ್ದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ॥೬॥**

೬. ಯಾವನು ಕರ್ಮೇಂದ್ರಿಯಗಳನ್ನು ಸಂಯಮಮಾಡಿಕೊಂಡು ಮನಸ್ಸಿನಲ್ಲಿ ಇಂದ್ರಿಯಾರ್ಥಗಳನ್ನು ಸ್ಮರಿಸುತ್ತಿರುವನೋ ಅಂಥ ವಿಮೂಢಾತ್ಮನು ಮಿಥ್ಯಾಚಾರವುಳ್ಳವನೆನಿಸುವನು.

(ಭಾಷ್ಯ)

೧೫೫ ಕರ್ಮೇನ್ದ್ರಿಯಾಣಿ ಹಸ್ತಾದೀನಿ ಸಂಯಮ್ಯ ಸಂಹೃತ್ಯ ಯ ಆಸ್ತೇ ತಿಷ್ಠತಿ ಮನಸಾ ಸ್ಮರನ್ ಚಿನ್ತಯನ್ ಇನ್ದ್ರಿಯಾರ್ಥಾನ್ ವಿಷಯಾನ್ ವಿಮೂಢಾತ್ಮಾ ವಿಮೂಢಾನ್ತಃಕರಣಃ ಮಿಥ್ಯಾಚಾರಃ ಮೃಷಾಚಾರಃ ಪಾಪಾಚಾರಃ ಸ ಉಚ್ಯತೇ ॥

(ಭಾಷ್ಯಾರ್ಥ)

ಹಸ್ತವೇ ಮುಂತಾದ ಕರ್ಮೇಂದ್ರಿಯಗಳನ್ನು ಸಂಯಮಮಾಡಿಕೊಂಡು ಬಿಗಿಹಿಡಿದುಕೊಂಡು ಯಾವನು ಮನಸ್ಸಿನಲ್ಲಿ ಸ್ಮರಿಸುತ್ತಾ (ಅವುಗಳನ್ನೇ) ಚಿಂತಿಸಿಕೊಳ್ಳುತ್ತಾ ಇರುವನೋ ಇದ್ದುಕೊಂಡಿರುವನೋ ವಿಮೂಢಾತ್ಮನಾದ, ವಿಶೇಷವಾಗಿ ಮೂಢವಾಗಿರುವ ಅಂತಃಕರಣವುಳ್ಳ ಅಂಥವನು ಮಿಥ್ಯಾಚಾರವುಳ್ಳವನು, ತಪ್ಪು ನಡತೆಯುವನು ಪಾಪಾಚರಣೆಯುಳ್ಳವನು [1] ಎನ್ನಿಸಿಕೊಳ್ಳುತ್ತಾನೆ.

**ಯಸ್ತ್ವಿನ್ದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ ।**
**ಕರ್ಮೇನ್ದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ ॥ ೭ ॥**

೭. ಆದರೆ ಎಲೈ ಅರ್ಜುನನೆ, ಯಾವನು ಇಂದ್ರಿಯಗಳನ್ನು ಮನಸ್ಸಿನಿಂದ ತಡೆದುಕೊಂಡು ಕರ್ಮೇಂದ್ರಿಯಗಳಿಂದ ಕರ್ಮಯೋಗವನ್ನು ಅಸಕ್ತನಾಗಿ ಮಾಡುತ್ತಿರುವನೋ ಅವನು ಹೆಚ್ಚಿನವನಾಗಿರುವನು.

---

1 ತನ್ನಲ್ಲಿ ಕರ್ಮವಾಸನೆಯಿದ್ದರೂ ಕರ್ಮವನ್ನು ಮಾಡದೆ ಇರುವದು ಸ್ವಭಾವಕ್ಕೆ ವಿರುದ್ಧವಾಗಿ ತನ್ನನ್ನು ತೋರ್ಪಡಿಸಿಕೊಳ್ಳುವ ನಡತೆಯಾದ್ದರಿಂದ ಅದು ಪಾಪಕರವಾದದ್ದು.

(ಭಾಷ್ಯ)

೧೬೦. ಯಸ್ತು ಪುನಃ ಕರ್ಮಣ್ಯಧಿಕೃತಃ ಅಜ್ಞಃ ಬುದ್ಧೀನ್ದ್ರಿಯಾ ಮನಸಾ ನಿಯಮ್ಯ ಆರಭತೇ ಅರ್ಜುನ ಕರ್ಮೇನ್ದ್ರಿಯೈಃ ವಾಕ್ಪಾಣ್ಯಾದಿಭಿಃ ಕಿಮಾರಭತೇ ಇತಿ ? ಆಹ–ಕರ್ಮಯೋಗಮ್ ಅಸಕ್ತಃ ಸನ್ ಫಲಾಭಿಸನ್ಧಿವರ್ಜಿತಃ ಸ ವಿಶಿಷ್ಯತೇ ಇತರಸ್ಮಾತ್ ಮಿಥ್ಯಾಚಾರಾತ್ ||

(ಭಾಷ್ಯಾರ್ಥ)

ಎಲೈ ಅರ್ಜುನನೆ, ಆದರೆ ಯಾವನು ಎಂದರೆ ಕರ್ಮಕ್ಕೆ ಅಧಿಕಾರಿಯಾ (ಯಾವ) ಅಜ್ಞನು (ತನ್ನ) ಜ್ಞಾನೇಂದ್ರಿಯಗಳನ್ನು [2] ಮನಸ್ಸಿನಲ್ಲಿ ತಡೆದುಕೊಂಡ ವಾಕ್ಕು, ಪಾಣಿ–ಮುಂತಾದ ಕರ್ಮೇಂದ್ರಿಯಗಳಿಂದ ಮಾಡುತ್ತಿರುವನೋ, ಏನನ್ನ ಮಾಡುತ್ತಿರುವನು ? ಎಂದರೆ–ಕರ್ಮಯೋಗವನ್ನು ಆಸಕ್ತನಾಗಿ ಫಲದಲ್ಲಿ ಆಸಕ್ತಿ ಯಿಲ್ಲನವನಾಗಿ (ಮಾಡುತ್ತಿರುವನೋ)–ಅವನು ಮಿಥ್ಯಾಚಾರವುಳ್ಳ ಮತ್ತೊಬ್ಬ ಗಿಂತಲೂ ಹೆಚ್ಚಿನವನಾಗಿರುವನು.

**ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।**
**ಶರೀರಯಾತ್ರಾಪಿ ಚ ತೇ ನ ಪ್ರಸಿಧ್ಯೇದಕರ್ಮಣಃ ॥ ೮ ॥**

೮. ನೀನು ನಿಯತವಾದ ಕರ್ಮವನ್ನು ಮಾಡುತ್ತಿರು ; ಏಕೆಂದ ಕರ್ಮವು ಅಕರ್ಮಕ್ಕಿಂತ ಮೇಲು ಅಕರ್ಮನಾಗಿದ್ದರೆ ನಿನಗೆ ಶರೀ ಯಾತ್ರೆಯೂ ಸಿದ್ಧಿಸಲಾರದು

(ಭಾಷ್ಯ)

೧೬೧. ಯತ ಏವಮ್, ಅತಃ ನಿಯತಂ ನಿತ್ಯಂ ಶಾಸ್ತ್ರೋಪದಿಷ್ಟಂ ಯೋ [4] ಯಸ್ಮಿನ್ ಕರ್ಮಣಿ ಅಧಿಕೃತಃ ಫಲಾಯ ಚ ಅಶ್ರುತಮ್ ತತ್ ನಿಯತ ಕರ್ಮ ತತ್ ಕುರು ತ್ವಂ ಹೇ ಅರ್ಜುನ । ಯತಃ ಕರ್ಮ ಜ್ಯಾಯಃ ಅಧಿಕತರ ಫಲತಃ ಹಿ ಯಸ್ಮಾತ್ ಅಕರ್ಮಣಃ ಅಕರಣಾತ್ ಅನಾರಮ್ಭಾತ್ । ಕಥಮ್ ಶರೀರಯಾತ್ರಾ ಶರೀರಸ್ಥಿತಿರಪಿ ಚ ತೇ ತವ ನ ಪ್ರಸಿಧ್ಯೇತ್ ಪ್ರಸಿದ್ಧಿಂ ನ ಗಚ್ಛೇತ

1 "ಅಸಕ್ತಃ ಸನ್ ಅಫಲಾಕಾಙ್ಕ್ಷಃ ಸನ್" ಮ॥

2 ಕರ್ಮವನ್ನು ಮಾಡುವದೇನೂ ಕೆಟ್ಟದ್ದಲ್ಲ, ಜ್ಞಾನೇಂದ್ರಿಯಗಳ ಮೂಲಕವಾ ಉಂಟಾಗುವ ರಾಗದ್ವೇಷಗಳಿರುವದು ಕೆಟ್ಟದ್ದು ಆದ್ದರಿಂದ ಆ ಇಂದ್ರಿಯಗಳನ್ನು ಬಿ ಹಿಡಿಯಬೇಕು ಎಂದು ಭಾವ

3 ಈ ಮಾತು ನಿ॥ಮೈ॥ಗು॥ ಪಾಠಗಳಲ್ಲಿಲ್ಲ

4 "ಯಸ್ಮಿನ್ ಕರ್ಮಣ್ಯಧಿಕೃತಃ, ಯಚ್ಚ ಫಲಾಯಾಶ್ರುತಮ್" ಎಂದಿದ್ದರೆ ಸುಲಭ ವಾಗಿ ಅನ್ವಯವಾಗುವದು

ಅಕರ್ಮಣಃ ಅಕರಣಾತ್ । ಅತೋ ದೃಷ್ಟಃ ಕರ್ಮಾಕರ್ಮಣೋರ್ವಿಶೇಷೋ ಲೋಕೇ ॥

(ಭಾಷ್ಯಾರ್ಥ)

ಹೀಗಿರುವದರಿಂದ ಎಲೈ ಅರ್ಜುನನೆ, ನೀನು ನಿಯತವಾದ (ಕರ್ಮವನ್ನು) ಎಂದರೆ ಶಾಸ್ತ್ರದಲ್ಲಿ ಉಪದಿಷ್ಟವಾಗಿರುವ ನಿತ್ಯ(ಕರ್ಮವನ್ನು)-ಯಾವನುಯಾವ ದಕ್ಕೆ ಅಧಿಕಾರಿಯಾಗಿರುವನೋ ಯಾವದು (ಇಂಥ) ಫಲಕ್ಕಾಗಿ ಮಾಡತಕ್ಕದ್ದೆಂದು ಶ್ರುತಿಯಲ್ಲಿ ಹೇಳಿಲ್ಲವೋ ಅದು ನಿಯತಕರ್ಮವು. ಅದನ್ನು-ನೀನು ಮಾಡುತ್ತಿರು. ಏಕೆಂದರೆ ಅಕರ್ಮಕ್ಕಿಂತ(ಯಾವ ಕರ್ಮವನ್ನೂ)ಮಾಡದೆ ಇರುವದಕ್ಕಿಂತ, ಆರಂಭಿಸ ದಿರುವದಕ್ಕಿಂತ ಕರ್ಮವು ಮೇಲು, ಫಲದಿಂದ (ನೋಡಿದರೆ) ಹೆಚ್ಚಿನದು. ಹೇಗೆಂ ದರೆ ಅಕರ್ಮದಿಂದ ಎಂದರೆ (ಕರ್ಮವನ್ನು) ಮಾಡದೆ ಇರುವದರಿಂದ ನಿನಗೆ ಶರೀರಯಾತ್ರೆಯು ಶರೀರವನ್ನಿಟ್ಟುಕೊಂಡಿರುವದುಕೂಡ ಸಿದ್ಧಿಸಲಾರದೆ ಆಗದೆ ಹೋದೀತು, ಆದ್ದರಿಂದ ಕರ್ಮಕ್ಕೂ ಅಕರ್ಮಕ್ಕೂ (ಇರುವ) ಹೆಚ್ಚುಕಡಿಮೆಯು ಲೋಕದಲ್ಲಿ ಕಂಡೇ ಇದೆ.

## ಕರ್ಮವು ಯಾವಾಗಲೂ ಬಂಧಕವೆನ್ನುವದು ಸರಿಯಲ್ಲ

(ಭಾಷ್ಯ)

೧೬೨. ಯಚ್ಚ ಮನ್ಯಸೇ ಬನ್ಧಾರ್ಥತ್ವಾತ್ ಕರ್ಮ ನ ಕರ್ತವ್ಯಮ್ ಇತಿ । ತದಪಿ ಅಸತ್ । ಕಥಮ್ ?

(ಭಾಷ್ಯಾರ್ಥ)

ಕರ್ಮವು ಬಂಧವನ್ನುಂಟುಮಾಡುವದಾದ್ದರಿಂದ (ಅದನ್ನು) ಮಾಡತಕ್ಕ ದ್ದಲ್ಲ ಎಂದು ತಿಳಿದಿರುವೆಯಷ್ಟೆ, ಅದೂ ಸರಿಯಲ್ಲ. ಹೇಗೆಂದರೆ :—

**ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬನ್ಧನಃ ।**
**ತದರ್ಥಂ ಕರ್ಮ ಕೌನ್ತೇಯ ಮುಕ್ತಸಙ್ಗಃ ಸಮಾಚರ ॥ ೯ ॥**

೯. ಯಜ್ಞಾರ್ಥವಾಗಿ (ಮಾಡುವ) ಕರ್ಮವನ್ನು ಬಿಟ್ಟರೆ ಮಿಕ್ಕ ಕಡೆಯಲ್ಲಿ ಲೋಕವು ಕರ್ಮಬಂಧನವಾಗಿರುತ್ತದೆ. ಆದ್ದರಿಂದ, ಎಲೈ ಕೌಂತೇಯನೆ, ಅದಕ್ಕಾಗಿ ಕರ್ಮವನ್ನು ಸಂಗರಹಿತನಾಗಿ ಮಾಡು.

(ಭಾಷ್ಯ)

೧೬೩. "ಯಜ್ಞೋ ವೈ ವಿಷ್ಣುಃ" (ತೈ. ಸಂ. ೧-೭-೪) ಇತಿ ಶ್ರುತೇ ರ್ಯಜ್ಞಃ ಈಶ್ವರಃ । ತದರ್ಥಂ ಯತ್ ಕ್ರಿಯತೇ ತದ್ ಯಜ್ಞಾರ್ಥಂ ಕರ್ಮ ।

ತಸ್ಮಾತ್ ಕರ್ಮಣಃ ಅನ್ಯತ್ರ ಅನ್ಯೇನ ಕರ್ಮಣಾ ಲೋಕಃ ಅಯಮ್ ಅಧಿಕೃತಃ ಕರ್ಮಕೃತ್ ಕರ್ಮಬನ್ಧನಃ ಕರ್ಮ ಬನ್ಧನಂ ಯಸ್ಯ ಸೋಽಯಂ ಕರ್ಮಬನ್ಧನಃ ಲೋಕಃ ನ ತು ಯಜ್ಞಾರ್ಥಾತ್ । ಅತಃ ತದರ್ಥಂ ಯಜ್ಞಾರ್ಥಂ ಕರ್ಮ ಕೌನ್ತೇಯ ಮುಕ್ತಸಙ್ಗಃ ಕರ್ಮಫಲಸಙ್ಗವರ್ಜಿತಃ ಸನ್ ಸಮಾಚರ ನಿರ್ವರ್ತಯ ॥

(ಭಾಷ್ಯಾರ್ಥ)

ಯಜ್ಞವೆಂದರೆ (ಇಲ್ಲಿ) ವಿಷ್ಣು (ಎಂದರ್ಥ), "ಯಜ್ಞವೆಂದರೆ ವಿಷ್ಣುವೇ" (ತೈ. ಸಂ. ೧-೭-೪) ಎಂಬ ಶ್ರುತಿಯು ಈ ಅರ್ಥಕ್ಕೆ ಆಧಾರವಾಗಿದೆ ಆ (ವಿಷ್ಣು)ವಿಗಾಗಿ ಯಾವದನ್ನು ಮಾಡುವರೋ ಅದು ಯಜ್ಞಾರ್ಥವಾದ ಕರ್ಮವು, ಅದನ್ನು ಬಿಟ್ಟರೆ ಮಿಕ್ಕ ಕಡೆಯಲ್ಲಿ ಎಂದರೆ ಉಳಿದ ಕರ್ಮದಿಂದ ಈ ಲೋಕವು ಎಂದರೆ ಅಧಿಕಾರಿಗಳಾಗಿ ಕರ್ಮವನ್ನು ಮಾಡುವ (ಜನವು)[1] ಕರ್ಮಬಂಧನವಾಗಿರುತ್ತದೆ ಕರ್ಮವು ಯಾರಿಗೆ ಬಂಧನವಾಗಿರುವದೋ ಅಂಥದ್ದು, ಆ ಜನವು ಕರ್ಮಬಂಧನವು. (ಹೀಗೆ ಮಿಕ್ಕ ಕರ್ಮದಿಂದ ಕಟ್ಟುಬಿದ್ದಿರುವದೇ ಹೊರತು) ಯಜ್ಞಾರ್ಥವಾದ ಕರ್ಮದಿಂದ (ಬಂಧವನ್ನು ಪಡೆಯುವದಿಲ್ಲ) ಆದ್ದರಿಂದ ಅದಕ್ಕಾಗಿ ಎಂದರೆ ಯಜ್ಞಾರ್ಥವಾಗಿ, ಕೌಂತೇಯನೆ, ಮುಕ್ತಸಂಗನಾಗಿ ಎಂದರೆ ಕರ್ಮಫಲದಲ್ಲಿ ಸಂಗವನ್ನು ಬಿಟ್ಟವನಾಗಿ ಕರ್ಮವನ್ನು ಆಚರಿಸು ಮಾಡು.

## ದೇವತೆಗಳಿಗೂ ಮನುಷ್ಯರಿಗೂ ಇರುವ ಕರ್ಮಸಂಬಂಧ

(ಭಾಷ್ಯ)

೧೬೪. ಇತಶ್ಚ ಅಧಿಕೃತೇನ ಕರ್ಮ ಕರ್ತವ್ಯಮ್—

(ಭಾಷ್ಯಾರ್ಥ)

(ಕರ್ಮಕ್ಕೆ) ಅಧಿಕಾರಿಯಾದವನು ಈ ಕಾರಣದಿಂದಲೂ ಕರ್ಮವನ್ನು ಮಾಡಬೇಕು —

**ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।**
**ಅನೇನ ಪ್ರಸವಿಷ್ಯಧ್ವಮೇಷ ವೋಽಸ್ತ್ವಿಷ್ಟಕಾಮಧುಕ್ ॥ ೧೦ ॥**
**ದೇವಾನ್ ಭಾವಯತಾನೇನ ತೇ ದೇವಾ ಭಾವಯನ್ತು ವಃ ।**
**ಪರಸ್ಪರಂ ಭಾವಯನ್ತಃ ಶ್ರೇಯಃ ಪರಮವಾಪ್ಸ್ಯಥ ॥ ೧೧ ॥**

---

1. ಲೋಕವೆಂದರೆ ಜನವೆಂದು ಸಾಮಾನ್ಯವಾದ ಅರ್ಥ; ಆದರೆ ಇದು ಕರ್ಮ ಪ್ರಕರಣವಾದ್ದರಿಂದ ಕರ್ಮಾಧಿಕಾರಿಗಳಾದವರು ಎಂದು ಅರ್ಥವನ್ನು ಮಾಡಬೇಕು.

**ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯನ್ತೇ ಯಜ್ಞಭಾವಿತಾಃ।**
**ತೈರ್ದತ್ತಾನಪ್ರದಾಯೈಭ್ಯೋ ಯೋ ಭುಙ್ಕ್ತೇ ಸ್ತೇನ ಏವ ಸಃ ॥**
**ಯಜ್ಞಶಿಷ್ಟಾಶಿನಃ ಸನ್ತೋ ಮುಚ್ಯನ್ತೇ ಸರ್ವಕಿಲ್ಬಿಷೈಃ ।**
**ಭುಞ್ಜತೇ ತೇ ತ್ವಘಂ ಪಾಪಾ ಯೇ ಪಚನ್ತ್ಯಾತ್ಮಕಾರಣಾತ್ ॥೧೩॥**

೧೦–೧೩. ಪೂರ್ವದಲ್ಲಿ ಪ್ರಜಾಪತಿಯು ಯಜ್ಞಗಳೊಡನೆ ಪ್ರಜೆಗಳನ್ನು ಸೃಷ್ಟಿಸಿ ಹೇಳಿದನೇನೆಂದರೆ:—“ಇದರಿಂದ ಅಭಿವೃದ್ಧಿಯನ್ನು ಹೊಂದಿರಿ. ಇದು ನಿಮಗೆ ಇಷ್ಟಕಾಮಧೇನುವಾಗಲಿ! (೧೦) ಇದರಿಂದ ದೇವತೆಗಳನ್ನು ಭಾವಿಸಿರಿ, ಆ ದೇವತೆಗಳು ನಿಮ್ಮನ್ನು ಭಾವಿಸಲಿ! ಹೀಗೆ ಒಬ್ಬರನ್ನೊಬ್ಬರು ಭಾವಿಸುತ್ತಿದ್ದರೆ ಪರಮಶ್ರೇಯಸ್ಸನ್ನು ಪಡೆಯುವಿರಿ. (೧೧) ಯಜ್ಞಭಾವಿತರಾದ ದೇವತೆಗಳು ನಿಮಗೆ ಇಷ್ಟವಾದ ಭೋಗಗಳನ್ನು ಕೊಡುವರಲ್ಲವೆ? ಅವರು ಕೊಟ್ಟಿರುವವುಗಳನ್ನು ಅವರಿಗೆ ಕೊಡದೆ ಯಾವನು ಭೋಗಿಸುತ್ತಿರುವನೋ ಅವನು ಕಳ್ಳನೇ ಸರಿ. (೧೨) ಯಜ್ಞಶಿಷ್ಟವಾದದ್ದನ್ನು ತಿನ್ನುವವರಾಗಿರುವವರು ಸರ್ವ ಕಿಲ್ಬಿಷಗಳಿಂದಲೂ ಬಿಡುಗಡೆ ಹೊಂದುತ್ತಾರೆ; (ಆದರೆ) ಯಾರು ತಮಗಾಗಿ ಪಾಕಮಾಡಿಕೊಳ್ಳುವರೋ (ಆ) ಪಾಪಿಗಳು ಅಘವನ್ನು ಭೋಗಿಸುವರು. (೧೩)

(ಭಾಷ್ಯ)

೧೬೫. ಸಹ ಯಜ್ಞಾಃ ಯಜ್ಞಸಹಿತಾಃ ಪ್ರಜಾಃ ತ್ರಯೋವರ್ಣಾಃ । ತಾಃ ಸೃಷ್ಟ್ವಾ ಉತ್ಪಾದ್ಯ ಪುರಾ ಪೂರ್ವಂ ಸರ್ಗಾದೌ ಉವಾಚ ಉಕ್ತವಾನ್ ಪ್ರಜಾಪತಿಃ ಪ್ರಜಾನಾಂ ಸ್ರಷ್ಟಾ । ಅನೇನ ಯಜ್ಞೇನ ಪ್ರಸವಿಷ್ಯಧ್ವಂ ಪ್ರಸವಃ ವೃದ್ಧಿಃ ಉತ್ಪತ್ತಿಃ ತಂ ಕುರುಧ್ವಮ್ । ಏಷ ಯಜ್ಞಃ ವಃ ಯುಷ್ಮಾಕಮ್ ಅಸ್ತು ಭವತು ಇಷ್ಟಕಾಮಧುಕ್ ಇಷ್ಟಾನ್ ಅಭಿಪ್ರೇತಾನ್ ಕಾಮಾನ್ ಫಲವಿಶೇಷಾನ್ ದೋಗ್ಧಿ ಇತಿ ಇಷ್ಟಕಾಮಧುಕ್ ॥ ೧೦ ॥

(ಭಾಷ್ಯಾರ್ಥ)

ಪೂರ್ವದಲ್ಲಿ ಎಂದರೆ ಮೊದಲು ಸೃಷ್ಟಿಮಾಡುವಾಗ ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸುವ (ಬ್ರಹ್ಮನು), ಸಹಯಜ್ಞರಾದ ಎಂದರೆ ಯಜ್ಞಗಳೊಡನೆ ಪ್ರಜೆಗಳನ್ನು ಮೂರು ವರ್ಣದವರನ್ನು [1] ಸೃಷ್ಟಿಮಾಡಿ ಹುಟ್ಟಿಸಿ ನುಡಿದನು (ಅವರಿಗೆ

---

1. ವೈದಿಕಕರ್ಮಪ್ರಕರಣವಾದ್ದರಿಂದ ಪ್ರಜೆ ಎಂದರೆ ವರ್ಣತ್ರಯದವರೆಂದು ಅರ್ಥವನ್ನು ಮಾಡಿದೆ.

ಹೀಗೆಂದು) ಹೇಳಿದನು : "ಈ ಯಜ್ಞದಿಂದ 'ಪ್ರಸವಿಷ್ಯಧ್ವಮ್' ಪ್ರಸವ ವೆಂದರೆ ವೃದ್ಧಿಯು, ಉತ್ಪತ್ತಿಯು, ಅದನ್ನು ಮಾಡಿರಿ. ಈ ಯಜ್ಞವು ನಿಮಗೆ ಇಷ್ಟಕಾಮಧುಕ್ಕಾಗಲಿ ! ನಿಮಗೆ ಬೇಕುಬೇಕಾದ ನುನಸ್ಸಿಗೆ ಬರುವ ಕಾಮುಗಳನ್ನು ಆಯಾ ಫಲಗಳನ್ನು ಕರೆಯುವ (ಹಸು)ವಾದ್ದರಿಂದ (ಇದನ್ನು) ಇಷ್ಟಕಾಮಧುಕ್ಕು (ಎಂದು ಕರೆದಿದೆ)

(ಭಾಷ್ಯ)

೧೬೬ ಕಥಮ್ ? ದೇವಾನ್ ಇನ್ದ್ರಾದೀನ್ ಭಾವಯತ ವರ್ಧಯತ ಅನೇನ ಯಜ್ಞೇನ ತೇ ದೇವಾ ಭಾವಯನ್ತು ಆಪ್ಯಾಯಯನ್ತು ವೃಷ್ಟ್ಯಾದಿನಾ ವಃ ಯುಷ್ಮಾನ್ । ಏವಂ ಪರಸ್ಪರಮ್ ಅನ್ಯೋನ್ಯಂ ಭಾವಯನ್ತಃ ಶ್ರೇಯಃ ಪರಂ ಮೋಕ್ಷಲಕ್ಷಣಮ್ ಜ್ಞಾನಪ್ರಾಪ್ತಿಕ್ರಮೇಣ[1] ಅವಾಪ್ಸ್ಯಥ । ಸ್ವರ್ಗಂ ವಾ ಪರಂ ಶ್ರೇಯಃ ಅವಾಪ್ಸ್ಯಥ ॥ ೧೧ ॥

(ಭಾಷ್ಯಾರ್ಥ)

ಹೇಗೆಂದರೆ, ಈ ಯಜ್ಞದಿಂದ ಇಂದ್ರನೇ ಮೊದಲಾದ ದೇವತೆಗಳನ್ನು ಭಾವಿಸಿರಿ, ವೃದ್ಧಿಗೊಳಿಸಿರಿ ಆ ದೇವತೆಗಳು ನಿಮಗೆ ಮಳೆ ಮುಂತಾದ(ದ್ದನ್ನು ಕೊಡುವ)ದರಿಂದ ನಿಮ್ಮನ್ನು (ವಃ ಯುಷ್ಮಾನ್) ಭಾವಿಸಲಿ ತೃಪ್ತಿಗೊಳಿಸಲಿ ! ಹೀಗೆ ಪರಸ್ಪರವಾಗಿ ಒಬ್ಬರನ್ನೊಬ್ಬರು ಭಾವಿಸುತ್ತಾ ಪರಮಶ್ರೇಯಸ್ಸನ್ನು ಮೋಕ್ಷವೆಂಬ (ಹೆಚ್ಚಿನ ಶ್ರೇಯಸ್ಸನ್ನು) ಜ್ಞಾನವನ್ನು ಹೊಂದುವದರ ಮೂಲಕವಾಗಿ ಪಡೆಯುವಿರಿ. ಅಥವಾ ಸ್ವರ್ಗವೆಂಬ ಹೆಚ್ಚಿನ ಶ್ರೇಯಸ್ಸನ್ನು[2] ಪಡೆದುಕೊಳ್ಳುವಿರಿ (ಎಂದಾದರೂ ಅರ್ಥವನ್ನು ಮಾಡಬಹುದು)

(ಭಾಷ್ಯ)

೧೬೭. ಕಿಂ ಚ ಇಷ್ಟಾನ್ ಅಭಿಪ್ರೇತಾನ್ ಭೋಗಾನ್ ಹಿ ವಃ ಯುಷ್ಮಭ್ಯಂ ದೇವಾ ದಾಸ್ಯನ್ತೇ ವಿತರಿಷ್ಯನ್ತಿ ಸ್ತ್ರೀಪಶುಪುತ್ರಾದೀನ್ ಯಜ್ಞಭಾವಿತಾಃ ಯಜ್ಞೈಃ ವರ್ಧಿತಾಃ ತೋಷಿತಾಃ ಇತ್ಯರ್ಥಃ । ತೈರ್ದೇವೈಃ ದತ್ತಾನ್ ಭೋಗಾನ್ ಅಪ್ರದಾಯ ಅದತ್ವಾ ಆನೃಣ್ಯಮ್ ಅಕೃತ್ವಾ ಇತ್ಯರ್ಥಃ । ಏಭ್ಯಃ ದೇವೇಭ್ಯಃ । ಯಃ ಭುಙ್ಕ್ತೇ

---

1. "ಶ್ರೇಯಃ ಪರಂ ಜ್ಞಾನಪ್ರಾಪ್ತಿಕ್ರಮೇಣ" ಸಿ॥ "ಬ್ರಹ್ಮವಿಜ್ಞಾನಪ್ರಾಪ್ತಿಕ್ರಮೇಣ" ಮೈ॥ "ವಿಜ್ಞಾನಪ್ರಾಪ್ತಿಕ್ರಮೇಣ" ಮ॥

2 "ಪರಂ ಶ್ರೇಯಃ" ಎಂಬದರ ಅಕ್ಷರಾರ್ಥವು ಮುಕ್ತಿಯೆಂದೇ ಆಗುತ್ತದೆ ಯಾದರೂ ಕರ್ಮಕ್ಕೆ ಅನುಗುಣವಾದ ಹೆಚ್ಚಿನ ಶ್ರೇಯಸ್ಸು ಸ್ವರ್ಗವೇ ಆಗಿರುತ್ತದೆ.

ಸ್ವದೇಹೇನ್ದ್ರಿಯಾಣ್ಯೇವ ತರ್ಪಯತಿ, ಸ್ತೇನ ಏವ ತಸ್ಕರ ಏವ ಸಃ ದೇವಾದಿಸ್ವಾಪಹಾರೀ ॥ ೧೨ ॥

(ಭಾಷ್ಯಾರ್ಥ)

ಮತ್ತು ಇಷ್ಟವಾದ ಎಂದರೆ (ನಿಮಗೆ) ಮನಸ್ಸಿಗೆ ಬರುವ ಭೋಗಗಳನ್ನು ಎಂದರೆ ಸ್ತ್ರೀಯರು, ಪಶುಗಳು, ಪುತ್ರರು–ಮುಂತಾದವುಗಳನ್ನು ಯಜ್ಞಭಾವಿತರಾದ ಎಂದರೆ ಯಜ್ಞದಿಂದ ವೃದ್ಧಿಹೊಂದಿದ ತೃಪ್ತಿಗೊಳಿಸಲ್ಪಟ್ಟ ದೇವತೆಗಳು ಕೊಡುವರು ಎಂದರ್ಥ. ಆ ದೇವತೆಗಳು ಕೊಟ್ಟಿರುವ ಭೋಗಗಳನ್ನು ಅವರಿಗೆ ಎಂದರೆ ದೇವತೆಗಳಿಗೆ ಕೊಡದೆ, (ಅವರ) ಉಪಕಾರದ ಸಾಲವನ್ನು ಹರಿಸಿಕೊಳ್ಳದೆಯೇ ಎಂದರ್ಥ. ಯಾವನು ಭೋಗಿಸುವನೋ ತನ್ನ ದೇಹ, ಇಂದ್ರಿಯಗಳು–ಇವುಗಳನ್ನೇ ತೃಪ್ತಿಗೊಳಿಸಿಕೊಳ್ಳುತ್ತಿರುವನೋ, ದೇವತೆಗಳು ಮೊದಲಾದವರ [1] ಸ್ವತ್ತನ್ನು ಅಪಹರಿಸುವ(ದರಿಂದ) ಅವನು ಕಳ್ಳನೇ ಸರಿ, ತುಡುಗನೇ ಸರಿ.

(ಭಾಷ್ಯ)

೧೬೮. ಯೇ ಪುನಃ ದೇವಯಜ್ಞಾದೀನ್ ನಿರ್ವರ್ತ್ಯ ತಚ್ಛಿಷ್ಟಮಶನಮ್ ಅಮೃತಾಖ್ಯಮ್ ಅಶಿತುಂ ಶೀಲಂ ಯೇಷಾಂ ತೇ ಯಜ್ಞಶಿಷ್ಟಾಶಿನಃ ಸನ್ತಃ ಮುಚ್ಯನ್ತೇ ಸರ್ವಕಿಲ್ಬಿಷೈಃ ಸರ್ವಪಾಪೈಃ ಚುಲ್ಲ್ಯಾದಿಪಞ್ಚಸೂನಾಕೃತೈಃ, ಪ್ರಮಾದಕೃತಹಿಂಸಾದಿಜನಿತೈಶ್ಚ ಅನ್ಯೈಃ [2] । ಯೇ ತು ಆತ್ಮಂಭರಯಃ ಭುಞ್ಜತೇ ತೇ ತು ಅಘಂ ಪಾಪಂ ಸ್ವಯಮಪಿ ಪಾಪಾ ಯೇ ಪಚನ್ತಿ ಪಾಕಂ ನಿರ್ವರ್ತಯನ್ತಿ ಆತ್ಮಕಾರಣಾತ್ ಆತ್ಮಹೇತೋಃ ॥ ೧೩ ॥

(ಭಾಷ್ಯಾರ್ಥ)

ಯಾರಾದರೆ–**ದೇವಯಜ್ಞವೇ** ಮುಂತಾದವುಗಳನ್ನು [3] ಮಾಡಿ ಉಳಿಯುವ **ಅಮೃತ**ವೆಂಬ ಹೆಸರಿನ[4] ಆಹಾರವನ್ನೇ ಭೋಜನಮಾಡುವ ಸ್ವಭಾವವು ಯಾರದೋ ಅವರು ಯಜ್ಞಶಿಷ್ಟಾಶಿಗಳು. (ಅಂಥವ)ರಾಗಿರುವದರಿಂದ ಸರ್ವಕಿಲ್ಬಿಷಗಳಿಂದಲೂ

---

1. "ದೇವಾದಿ" ಎಂದಿರುವದರಿಂದ ಪಿತೃಗಳು, ಬ್ರಾಹ್ಮಣರು ಮೊದಲಾದವರ ಎಂದು ಅರ್ಥಮಾಡಿಕೊಳ್ಳಬಹುದು ಆದರೆ ದೇವತೆಗಳೇ ಇಲ್ಲಿ ಪ್ರಕೃತರಾಗಿರುತ್ತಾರೆ.

2. ತದ್ಯಥಾ–ಕುಟ್ಟನೀ ಪೇಷಣೀ ಚುಲ್ಲೀ ಉದಕುಂಭೀ ಚ ಮಾರ್ಜನೀ । ಪಞ್ಚಸೂನಾ ಗೃಹಸ್ಥಸ್ಯ ತಾಭಿಃ ಸ್ವರ್ಗಂ ನ ಗಚ್ಛತಿ ॥ ಎಂದು ಮ॥ದಲ್ಲಿ ಹೇಳ್ಪಾಗಿದೆ.

3. ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ, ಭೂತಯಜ್ಞ, ಬ್ರಹ್ಮಯಜ್ಞ–ಎಂಬ ಐದು ಯಜ್ಞಗಳನ್ನು.

4. ೪-೩೧ನ್ನು ನೋಡಿ.

'ಚುಲ್ಲೀ' ಮುಂತಾದ[1] ಐದು ಸೂನಾ(ಸ್ಥಾನ)ಗಳಿಂದಾದ ಎಲ್ಲಾ ಪಾಪಗಳಿಂದಲೂ ಮತ್ತು ಗೊತ್ತಿಲ್ಲದೆ ತಪ್ಪಿಮಾಡಿದ ಹಿಂಸೆಯೇ ಮುಂತಾದವುಗಳಿಂದ ಆಗುವ ಬೇರೆಯ ದೋಷಗಳಿಂದಲೂ ಬಿಡುಗಡೆಹೊಂದುತ್ತಾರೆ. ಆದರೆ ಯಾರು ತಮ್ಮ ಹೊಟ್ಟೆಯನ್ನೇ ಹೊರೆಯುವವರಾಗಿ ತಮಗೋಸ್ಕರವಾಗಿಯೇ ತಮಗೆಂದೇ ಪಾಕಮಾಡಿಕೊಳ್ಳುವರೋ ಅಡಿಗೆಮಾಡಿಕೊಳ್ಳುತ್ತಿರುವರೋ ಅಂಥವರು ತಾವೂ ಪಾಪಿಗಳೇ (ಆಗಿರುತ್ತಾರೆ), ಅಘವನ್ನು ಎಂದರೆ ಪಾಪವನ್ನೇ ಉಣ್ಣುತ್ತಿರುವರು[2]

## ಜಗಚ್ಚಕ್ರವು ನಡೆಯುವದಕ್ಕೂ ಕರ್ಮವನ್ನು ಮಾಡಬೇಕು

(ಭಾಷ್ಯ)

೧೬೯. ಇತಶ್ಚ ಅಧಿಕೃತೇನ ಕರ್ಮ ಕರ್ತವ್ಯಮ್ । ಜಗಚ್ಚಕ್ರಪ್ರವೃತ್ತಿಹೇತು ಹಿ ಕರ್ಮ । ಕಥಮಿತಿ ? ಉಚ್ಯತೇ--

(ಭಾಷ್ಯಾರ್ಥ)

(ಕರ್ಮಕ್ಕೆ) ಅಧಿಕಾರಿಯಾದವನು ಈ ಕಾರಣದಿಂದಲೂ ಕರ್ಮವನ್ನು ಮಾಡಬೇಕು ಏಕೆಂದರೆ ಕರ್ಮವು ಜಗತ್ತಿನ ಚಕ್ರವು ನಡೆಯುವದಕ್ಕೆ ಕಾರಣವಾಗಿರುತ್ತದೆ.[3] ಅದು ಹೇಗೆ? ಎಂದರೆ ಹೇಳುತ್ತಾನೆ.—

**ಅನ್ನಾದ್ಭವನ್ತಿ ಭೂತಾನಿ ಪರ್ಜನ್ಯಾದನ್ನಸಂಭವಃ ।**
**ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥ ೧೪ ॥**
**ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಮ್ ।**
**ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್ ॥ ೧೫ ॥**

---

1. ಚುಲ್ಲೀ (ಒಲೆ), ಪೇಷಣೀ (ಅರೆಯುವ ಕಲ್ಲು) ಉಪಸ್ಕರಃ ಅಥವಾ ಅವಸ್ಕರಃ (ಪೊರಕೆ), ಕಣ್ಡನೀ (ಒರಳು, ಒನಕೆ), ಉದಕುಂಭಃ (ನೀರಿನ ಕೊಡ)_ಇವು ಐದೂ 'ಸೂನಾ' ಸ್ಥಾನಗಳು (ಕೊಲ್ಲುವ ಸ್ಥಳಗಳು), ಗೃಹಸ್ಥನು ತಿಳಿದೋ ತಿಳಿಯದೆಯೋ ಇವುಗಳಲ್ಲಿ ಪ್ರಾಣಿಹಿಂಸೆಯನ್ನು ಮಾಡುತ್ತಾನೆ. ಮನು. ೩-೬೮

2. ಬೃ ೧-೫-೨, ತೈ ಬ್ರಾ. ೨-೮-೮ ಮುಂತಾದ ವೇದವಾಕ್ಯಗಳಲ್ಲಿ ಹೇಳಿರುವವದರ ಅಭಿಪ್ರಾಯವನ್ನು ಇಲ್ಲಿ ತಿಳಿಸಿದೆ ಎಂದು ಭಾವ

3. ಕರ್ಮದಿಂದಲೇ ಪ್ರಾಣಿಗಳು ನಾನಾ ಜನ್ಮಗಳನ್ನು ಪಡೆಯುವವು, ಕರ್ಮದ ಫಲವೇ ಜಗತ್ತು. ಈ ಜಗತ್ತು ಸರಿಯಾದ ಸ್ಥಿತಿಯಲ್ಲಿರಬೇಕೆಂದು ಬಯುಸುವವನು ಕರ್ಮವನ್ನು ಮಾಡಬೇಕು ಎಂದು ಭಾವ. ಕರ್ಮದ ಫಲವು ಅನಿತ್ಯವಾದದ್ದು ; ಆದ್ದರಿಂದ ಅದನ್ನು ಬಯುಸುವವರು ಮತ್ತೆ ಮತ್ತೆ ಕರ್ಮವನ್ನು ಮಾಡುತ್ತಲೇ ಇರಬೇಕಾಗುತ್ತದೆ.

೧೪-೧೫. ಅನ್ನದಿಂದ ಪ್ರಾಣಿಗಳು ಉಂಟಾಗುತ್ತವೆ, ಅನ್ನದ ಉತ್ಪತ್ತಿಯು ಪರ್ಜನ್ಯದಿಂದ (ಆಗುತ್ತದೆ). ಪರ್ಜನ್ಯವು ಯಜ್ಞದಿಂದ ಆಗುತ್ತದೆ. ಯಜ್ಞವು ಕರ್ಮದಿಂದ ಹುಟ್ಟುತ್ತದೆ. ಕರ್ಮವು ಬ್ರಹ್ಮದಿಂದ ಉದ್ಭವಿಸುವದೆಂದು ತಿಳಿ ಬ್ರಹ್ಮವು ಅಕ್ಷರದಿಂದ ಹುಟ್ಟುವದು. ಆದ್ದರಿಂದ ಸರ್ವಗತವಾದ ಬ್ರಹ್ಮವು ನಿತ್ಯವೂ ಯಜ್ಞದಲ್ಲಿ ನಿಂತುಕೊಂಡಿರುವದು.

(ಭಾಷ್ಯ)

೧೭೦. ಅನ್ನಾತ್ ಭುಕ್ತಾತ್ ಲೋಹಿತರೇತಃಪರಿಣತಾತ್ ಪ್ರತ್ಯಕ್ಷಂ ಭವನ್ತಿ ಜಾಯನ್ತೇ ಭೂತಾನಿ । ಪರ್ಜನ್ಯಾತ್ ವೃಷ್ಟೇಃ ಅನ್ನಸ್ಯ ಸಂಭವಃ ಅನ್ನಸಂಭವಃ । ಯಜ್ಞಾತ್ ಭವತಿ ಪರ್ಜನ್ಯಃ । "ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ । ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ ॥" (ಮನು. ೩-೭೬) ಇತಿ ಸ್ಮೃತೇಃ । ಯಜ್ಞಃ ಅಪೂರ್ವಮ್ । ಸ ಚ ಯಜ್ಞಃ ಕರ್ಮಸಮುದ್ಭವಃ ಋತ್ವಿಗ್ಯಜಮಾನಯೋಶ್ಚ ವ್ಯಾಪಾರಃ ಕರ್ಮ । ತತಃ ಸಮುದ್ಭವಃ ಯಸ್ಯ ಯಜ್ಞಸ್ಯ ಅಪೂರ್ವಸ್ಯ ಸ ಯಜ್ಞಃ ಕರ್ಮಸಮುದ್ಭವಃ ॥ ೧೪ ॥

(ಭಾಷ್ಯಾರ್ಥ)

ಉಂಡ ಅನ್ನವು ರಕ್ತವೂ ರೇತಸ್ಸೂ ಆಗಿ ಪರಿಣಮಿಸಲಾಗಿ[1] ಅದರಿಂದ ಪ್ರಾಣಿಗಳು ಉಂಟಾಗುತ್ತವೆ ಎಂಬುದು ಪ್ರತ್ಯಕ್ಷವು[2] ಪರ್ಜನ್ಯದಿಂದ ಎಂದರೆ ಮಳೆಯಿಂದ ಅನ್ನಸಂಭವವು, ಎಂದರೆ ಅನ್ನದ ಉತ್ಪತ್ತಿಯು. ಪರ್ಜನ್ಯವು ಯಜ್ಞದಿಂದ ಆಗುತ್ತದೆ. ಏಕೆಂದರೆ "ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ । ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ ॥" (ಮನು. ೩-೭೬) ಅಗ್ನಿಯಲ್ಲಿ ಸರಿಯಾಗಿ ಹಾಕಿದ ಹೋಮವು ಆದಿತ್ಯನನ್ನು ಹೋಗಿ ಮುಟ್ಟುತ್ತದೆ. ಆದಿತ್ಯನಿಂದ ವೃಷ್ಟಿಯಾಗುತ್ತದೆ, ವೃಷ್ಟಿಯಿಂದ ಅನ್ನವಾಗುತ್ತದೆ, ಅದರಿಂದ ಪ್ರಜೆಗಳು ಉಂಟಾಗುತ್ತವೆ ಎಂದು ಸ್ಮೃತಿಯಲ್ಲಿ ಹೇಳಿರುತ್ತದೆ.[3] **ಯಜ್ಞ**

---

1. ಅನ್ನವು ರಸಾದಿಕ್ರಮದಿಂದ ರೇತಸ್ಸೂ ಲೋಹಿತವೂ ಆಗುತ್ತದೆ. ತೈ.ಭಾ.ಭಾ. ೧೧೯, ಐ.ಭಾ.ಭಾ. ೭೪. ಆದ್ದರಿಂದ ಸ್ತ್ರೀಪುರುಷರ ಶುಕ್ಲಶೋಣಿತಗಳಿಂದ ಹುಟ್ಟುವ ಪ್ರಾಣಿಗಳೂ ಅನ್ನದಿಂದ ಹುಟ್ಟಿದಂತೆಯೇ.

2. ರೇತಸ್ಸು ಉಂಟಾಗುವದೂ ಆದರಿಂದ ಗರ್ಭವುಂಟಾಗುವದೂ ಅನುಭವದಲ್ಲಿದೆ.

3. ಸತ್ಕರ್ಮದಿಂದ ಆದ ಮಳೆಯು ಮಾತ್ರ ಪ್ರಾಣಿಗಳ ಉತ್ಪತ್ತಿಗೆ ಕಾರಣವಾಗುವದು. ಅತಿವೃಷ್ಟ್ಯಾದಿಗಳು ಅಧರ್ಮದ ಫಲವು; ಅವುಗಳಿಂದ ಕೆಡಕೇ ಆಗುವದು.

ವೆಂದರೆ ಇಲ್ಲಿ ಅಪೂರ್ವವು.[1] ಇದು ಕರ್ಮದಿಂದ ಹುಟ್ಟುತ್ತದೆ. ಯಜ್ಞವನ್ನು ಮಾಡುವಾತನು ಮತ್ತು ಋತ್ವಿಕ್ಕರುಗಳು ಮಾಡುವ ವ್ಯಾಪಾರವೇ ಕರ್ಮವು. ಆದರಿಂದ ಯಜ್ಞಕ್ಕೆ ಹುಟ್ಟು ಉಂಟಾಗುವದರಿಂದ[2] ಆ ಯಜ್ಞವು ಕರ್ಮಸಮುದ ವವು (ಎಂದು ಹೇಳಿದೆ).

(ಭಾಷ್ಯ)

೧೭೧. ತಚ್ಚ[3] ಕರ್ಮ ಬ್ರಹ್ಮೋದ್ಭವಂ ಬ್ರಹ್ಮ ವೇದಃ ಸ ಉದ್ಭವಃ ಕಾರಣಂ ಪ್ರಕಾಶಕಃ ಯಸ್ಯ ತತ್ ಕರ್ಮ ಬ್ರಹ್ಮೋದ್ಭವಂ ವಿದ್ಧಿ ಜಾನೀಹಿ ।[4] ಬ್ರಹ್ಮ ಪುನಃ ವೇದಾಖ್ಯಮ್ ಅಕ್ಷರಸಮುದ್ಭವಮ್ । ಅಕ್ಷರಂ ಬ್ರಹ್ಮ ಪರಮಾತ್ಮಾ ಸಮು ದ್ಭವಃ ಯಸ್ಯ ತತ್ ಅಕ್ಷರಸಮುದ್ಭವಂ ಬ್ರಹ್ಮ ವೇದಃ ಇತ್ಯರ್ಥಃ । ಯಸ್ಮಾತ್ ಸಾಕ್ಷಾದ್ ಪರಮಾತ್ಮಾಖ್ಯಾತ್ ಅಕ್ಷರಾತ್ ಪುರುಷನಿಶ್ವಾಸವತ್[5] ಸಮುದ್ಭೂತಂ ಬ್ರಹ್ಮ । ತಸ್ಮಾತ್ ಸರ್ವಾರ್ಥಪ್ರಕಾಶಕತ್ವಾತ್ ಸರ್ವಗತಮಪಿ[6] ಸತ್ ನಿತ್ಯಂ ಸದಾ ಯಜ್ಞವಿಧಿಪ್ರಧಾನತ್ವಾತ್ ಯಜ್ಞೇ ಪ್ರತಿಷ್ಠಿತಮ್ ॥

(ಭಾಷ್ಯಾರ್ಥ)

ಆ ಕರ್ಮವು ಬ್ರಹ್ಮೋದ್ಭವವು ಬ್ರಹ್ಮವು ಎಂದರೆ ವೇದವು ಇದಕ್ಕೆ ಸಮುದ್ಭ ವವು, ಕಾರಣವು ಎಂದರೆ ಇದನ್ನು ತಿಳಿಸತಕ್ಕದ್ದು, ಆದ್ದರಿಂದ ಈ ಕರ್ಮವು ಬ್ರಹ್ಮೋದ್ಭವ(ವಾಗಿರುತ್ತದೆ) ಎಂದು ತಿಳಿ, ಅರಿತುಕೊ.[7] ಆ ವೇದವೆಂಬ ಹೆಸರಿನ

---

1. ಮೀಮಾಂಸಕರು ಹೇಳುವ ಅಪೂರ್ವವನ್ನು ಸೂ.ಭಾ. ೩-೨-೩೮, ಬೃ.ಭಾ. ೩-೮-೯ ಮುಂತಾದವುಗಳಲ್ಲಿ ಖಂಡಿಸಿರುವದು ಈಶ್ವರನಿಲ್ಲದೆ ಬರಿಯ ಅಪೂರ್ವವೇ ಫಲವನ್ನು ಕೊಡಲಾರದೆಂಬ ಭಾವದಿಂದ ಕರ್ಮದಿಂದ, ಅಪೂರ್ವ, ಅದೃಷ್ಟ ಎಂಬ ಹೆಸರಿನಿಂದ ಒಂದು ಕಾರ್ಯವುಂಟಾಗಿ ಕಾಲಾಂತರಫಲವನ್ನು ಕೊಡುವದೆಂಬ ವಾದವನ್ನು ಸರ್ವಥಾ ಖಂಡಿ ಸಿಲ್ಲ. ಸೂ.ಭಾ. ೩-೨-೪೦ ನೋಡಿ.

2. ಯಜ್ಞವೂ ಕರ್ಮವಾಗಿರುವದರಿಂದ ಕರ್ಮದಿಂದ ಯಜ್ಞವುಂಟಾಗುವದು ಎಂಬ ವಾಕ್ಯಕ್ಕೆ ಅಕ್ಷರಾರ್ಥವನ್ನು ಸ್ವೀಕರಿಸುವ ಹಾಗಿಲ್ಲ. ಆದ್ದರಿಂದಲೇ ಯಜ್ಞಶಬ್ದಕ್ಕೆ ಅಪೂರ್ವ ವೆಂಬ ಅರ್ಥವನ್ನು ಮಾಡಿದ್ದು.

3. "ತಚ್ಚ ಏವಂವಿಧಂ ಕರ್ಮ ಕುತೋ ಜಾತಮ್ ಇತಿ ? ಆಹ" ಎಂಬ ಅವ ತರಣಿಕಾವಾಕ್ಯವು ಆ॥ವಾ॥ಗಳಲ್ಲಿ ಮಾತ್ರ ಇದೆ.

4. 'ವಿಜಾನೀ ಹಿ' ಮ॥ಮೈ॥

5. 'ಪುರುಷಾತ್ ನಿಶ್ವಾಸವತ್' ಮ॥ಮೈ॥

6. "ಸರ್ವಗತಮ್ । ಸರ್ವಗತಮಪಿ" ಎಂಬ ಪಾಠದಲ್ಲಿ ಮೊದಲನೆಯ ಮಾತು ಹೆಚ್ಚು.

7. ಈ ಕರ್ಮವು ಈ ಫಲಕ್ಕೆ ಸಾಧನವೆಂಬುದು ವೇದದಿಂದಲೇ ತಿಳಿಯಬೇಕಾಗಿದೆ. ಆದ್ದರಿಂದ ಕರ್ಮವು ವೇದದಿಂದ ಹುಟ್ಟಿರುವದೆಂದು ಹೇಳಿದೆ ಎಂದು ಅರ್ಥ.

ಬ್ರಹ್ಮವೋ ಎಂದರೆ ಅಕ್ಷರಸಮುದ್ಭವವು, ಅಕ್ಷರವೆಂದರೆ ಬ್ರಹ್ಮವು, ಪರಮಾತ್ಮನು, ಆ ಬ್ರಹ್ಮಕ್ಕೆ ಕಾರಣವಾಗಿರುವದರಿಂದ ವೇದರೂಪವಾದ ಆ ಬ್ರಹ್ಮವು ಅಕ್ಷರಸಮುದ್ಭವವಾಗಿರುತ್ತದೆ ಎಂದರ್ಥ ಹೀಗೆ ಪರಮಾತ್ಮನೆಂಬ ಹೆಸರಿನ ಅಕ್ಷರದಿಂದಲೇ ಮನುಷ್ಯನ ಉಸಿರಿನಂತೆ[1] ಬ್ರಹ್ಮ(ವೆಂಬ ವೇದವು) ನೇರಾಗಿ ಹುಟ್ಟಿರುವದರಿಂದ, ಎಲ್ಲವನ್ನೂ ತಿಳಿಸುವದರಿಂದ ಸರ್ವಗತವೆನಿಸಿದ್ದರೂ[2] ನಿತ್ಯವೂ ಯಾವಾಗಲೂ ಯಜ್ಞವನ್ನು ವಿಧಿಸುವದರಲ್ಲಿಯೇ ಮುಖ್ಯತಾತ್ಪರ್ಯವುಳ್ಳದ್ದಾಗಿರುವದರಿಂದ ಯಜ್ಞದಲ್ಲಿ ನೆಲೆನಿಂತಿರುತ್ತದೆ.

**ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।**
**ಅಘಾಯುರಿನ್ದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥೧೬॥**

೧೬. ಎಲೈ ಪಾರ್ಥನೆ, ಹೀಗೆ ಪ್ರವರ್ತಿತವಾಗಿರುವ ಚಕ್ರವನ್ನು ಯಾವನು ಇಲ್ಲಿ ಅನುಸರಿಸುವದಿಲ್ಲವೋ, ಅಘಾಯುವೂ ಇಂದ್ರಿಯಾರಾಮನೂ ಆದ ಅವನು ಬದುಕಿರುವದು ವ್ಯರ್ಥವು

(ಭಾಷ್ಯ)

೧೬.೨. ಏವಮ್ ಇತ್ಥಮ್ ಈಶ್ವರೇಣ ವೇದಯಜ್ಞಪೂರ್ವಕಂ ಜಗಚ್ಚಕ್ರಂ ಪ್ರವರ್ತಿತಂ[3] ನ ಅನುವರ್ತಯತಿ ಇಹಲೋಕೇ ಯಃ ಕರ್ಮಣಿ ಅಧಿಕೃತಃ ಸನ್ ಅಘಾಯುಃ ಅಘಂ ಪಾಪಮ್ ಆಯುಃ ಜೀವನಂ ಯಸ್ಯ ಸಃ ಅಘಾಯುಃ । ಪಾಪಜೀವನಃ ಇತಿ ಯಾವತ್ । ಇನ್ದ್ರಿಯಾರಾಮಃ ಇನ್ದ್ರಿಯೈಃ ಆರಾಮಃ ಆರಮಣಮ್ ಆಕ್ರೀಡಾ ವಿಷಯೇಷು ಯಸ್ಯ ಸಃ ಇನ್ದ್ರಿಯಾರಾಮಃ ಮೋಘಂ ವೃಥಾ ಹೇ ಪಾರ್ಥ ಸ ಜೀವತಿ । ತಸ್ಮಾತ್ ಅಜ್ಞೇನ ಅಧಿಕೃತೇನ ಕರ್ತವ್ಯಮೇವ ಕರ್ಮ ಇತಿ ಪ್ರಕರಣಾರ್ಥಃ ॥

(ಭಾಷ್ಯಾರ್ಥ)

ಎಲೈ ಪಾರ್ಥನೆ, ಹೀಗೆ ಈ ರೀತಿಯಲ್ಲಿ ವೇದಯಜ್ಞಪೂರ್ವಕವಾಗಿ[4] ಈಶ್ವ

---

1. ಯಾವ ಪ್ರಯತ್ನವೂ ಇಲ್ಲದೆ ಎಂದರ್ಥ. ಪ್ರಯತ್ನಪೂರ್ವಕವಾಗಿ ಮಾಡಿದ ಭಾರತಾದಿಗಳು ಪೌರುಷೇಯವಾಗಿರುತ್ತವೆ. ಬೃ.ಭಾ. ೨-೪-೧೦; ಸೂ.ಭಾ. ೧-೧-೩.

2. ಬ್ರಹ್ಮದಿಂದ ಹುಟ್ಟಿರುವದರಿಂದ ವೇದವು ಎಲ್ಲವನ್ನೂ ತಿಳಿಸಬಲ್ಲದು, ವೇದವು ಸರ್ವಗತವೆಂದರೆ ಇಷ್ಟೇ ಅರ್ಥ.

3. "ಪ್ರವರ್ತಿತಂ ಜಗಚ್ಚಕ್ರಮ್" ಎಂದೇ ಭಾಷ್ಯಕಾರರು ಬರೆದಿರಬಹುದೆಂದು ತೋರುತ್ತದೆ.

4. ವೇದ, ಯಜ್ಞ, ವೃಷ್ಟಿ, ಅನ್ನ, ಪ್ರಾಣಿಗಳು–ಹೀಗೆ ಮತ್ತೆ ಮತ್ತೆ ತಿರುಗುತ್ತಿರುವ ಚಕ್ರವು ಜಗತ್ತಿನ ಸ್ಥಿತಿಗೆ ಕಾರಣವಾಗಿರುತ್ತದೆ.

ರನು ಚಾಲನೆಕೊಟ್ಟಿರುವ ಈ ಜಗಚ್ಚಕ್ರವನ್ನು ಈ ಲೋಕದಲ್ಲಿ ಯಾವನು ಕರ್ಮಕ್ಕೆ ಅಧಿಕಾರಿಯಾಗಿದ್ದುಕೊಂಡು ಅನುಸರಿಸದೆ ಇರುವನೋ, ಅಘದ ಆಯುಸ್ಸುಳ್ಳವನಾಗಿ ಅಘವು ಎಂದರೆ ಪಾಪವೇ ಆಯುಸ್ಸು ಜೀವನವು ಯಾವನದೋ ಅವನು ಅಘಾಯು, ಪಾಪದ, ಬಾಳಿನವನು ಎಂದರ್ಥ. (ಅಂಥ) ಇಂದ್ರಿಯಾರಾಮನಾದ- ಇಂದ್ರಿಯಗಳಿಂದ ಆರಾಮವು, ರಮಿಸುತ್ತಿರುವದು ವಿಷಯಗಳಲ್ಲಿ ಆಡುತ್ತಿರುವದು ಯಾವನ (ಸ್ವಭಾವವೋ) ಅವನು ಇಂದ್ರಿಯಾರಾಮನು. (ಹಾಗಿರುವ)-ಆತನು ಮೋಘವಾಗಿ ವ್ಯರ್ಥವಾಗಿ ಬದುಕಿರುತ್ತಾನೆ. **ಆದ್ದರಿಂದ (ಕರ್ಮಕ್ಕೆ) ಅಧಿಕಾರಿಯಾಗಿರುವ ಅಜ್ಞನು ಕರ್ಮವನ್ನು ಮಾಡಲೇಬೇಕು ಎಂದು ಪ್ರಕರಣದ ಅರ್ಥವು.**

## ಕರ್ಮಯೋಗವು ಅನಾತ್ಮಜ್ಞರಿಗೇ, ಜ್ಞಾನಿಗಳಿಗಲ್ಲ

(ಭಾಷ್ಯ)

೧೭೩ ಪ್ರಾಕ್ ಆತ್ಮಜ್ಞಾನನಿಷ್ಠಾಯೋಗ್ಯತಾಪ್ರಾಪ್ತೇಃ ತಾದರ್ಥ್ಯೇನ ಕರ್ಮಯೋಗಾನುಷ್ಠಾನಮ್ ಅಧಿಕೃತೇನ ಅನಾತ್ಮಜ್ಞೇನ ಕರ್ತವ್ಯಮೇವ ಇತ್ಯೇತತ್ "ನ ಕರ್ಮಣಾಮನಾರಮ್ಭಾತ್" (೩-೪) ಇತ್ಯತ ಆರಭ್ಯ "ಶರೀರಯಾತ್ರಾಪಿ ಚ ತೇ ನ ಪ್ರಸಿಧ್ಯೇದಕರ್ಮಣಃ" (೩-೮) ಇತ್ಯೇವಮನ್ತೇನ ಪ್ರತಿಪಾದ್ಯ "ಯಜ್ಞಾರ್ಥಾತ್ ಕರ್ಮಣೋಽನ್ಯತ್ರ" (೩-೯) ಇತ್ಯಾದಿನಾ "ಮೋಘಂ ಪಾರ್ಥ ಸ ಜೀವತಿ" (೩-೧೬) ಇತ್ಯೇವಮನ್ತೇನಾಪಿ ಗ್ರನ್ಥೇನ ಪ್ರಾಸಙ್ಗಿಕಮ್ ಅಧಿಕೃತಸ್ಯ ಅನಾತ್ಮವಿದಃ ಕರ್ಮಾನುಷ್ಠಾನೇ ಬಹು ಕಾರಣಮ್ ಉಕ್ತಮ್। ತದಕರಣೇ ಚ ದೋಷಸಂಕೀರ್ತನಂ ಕೃತಮ್। ಏವಂ ಸ್ಥಿತೇ ಕಿಮ್ ಏವಂ ಪ್ರವರ್ತಿತಂ ಚಕ್ರಂ ಸರ್ವೇಣ ಅನುವರ್ತನೀಯಮ್। ಆಹೋಸ್ವಿತ್ ಪೂರ್ವೋಕ್ತಕರ್ಮಯೋಗಾನುಷ್ಠಾನೋಪಾಯಪ್ರಾಪ್ಯಾಮ್ ಅನಾತ್ಮವಿದಃ, ಜ್ಞಾನಯೋಗೇನ[1] ನಿಷ್ಠಾಮ್ ಆತ್ಮವಿದ್ಭಿಃ ಸಾಙ್ಖ್ಯೈರನುಷ್ಠೇಯಾಮ್ ಅಪ್ರಾಪ್ತೇನೈವ? ಇತ್ಯೇವಮರ್ಥಮ್ ಅರ್ಜುನಸ್ಯ ಪ್ರಶ್ನಮ್ ಆಶಙ್ಕ್ಯ ಸ್ವಯಮೇವ ವಾ ಶಾಸ್ತ್ರಾರ್ಥಸ್ಯ ವಿವೇಕಪ್ರತಿಪತ್ತ್ಯರ್ಥಮ್ "ಏತಂ ವೈ ತಮಾತ್ಮಾನಂ ವಿದಿತ್ವಾ ನಿವೃತ್ತಮಿಥ್ಯಾಜ್ಞಾನಾಃ ಸನ್ತೋ ಬ್ರಾಹ್ಮಣಾಃ ಮಿಥ್ಯಾಜ್ಞಾನವದ್ಭಿರವಶ್ಯಂ ಕರ್ತವ್ಯೇಭ್ಯಃ ಪುತ್ರೈಷಣಾದಿಭ್ಯೋ ವ್ಯುತ್ಥಾಯ ಅಥ ಭಿಕ್ಷಾಚರ್ಯಂ ಶರೀರಸ್ಥಿತಿಮಾತ್ರಪ್ರಯುಕ್ತಂ ಚರನ್ತಿ, ನ ತೇಷಾಮಾತ್ಮಜ್ಞಾನನಿಷ್ಠಾವ್ಯತಿರೇಕೇಣ ಅನ್ಯತ್ ಕಾರ್ಯಮಸ್ತಿ"

---

1. "ಜ್ಞಾನಯೋಗೇನೈವ" ಎಂಬ ಪಾಠದಲ್ಲಿ 'ಏವ' ಹೆಚ್ಚು.

(ಬೃ. ೩-೪-೨) ಇತ್ಯೇವಂ ಶ್ರುತ್ಯರ್ಥಮ್ ಇಹ ಗೀತಾಶಾಸ್ತ್ರೇ ಪ್ರತಿಪಿಪಾದಯಿಷಿತಮ್ ಆವಿಷ್ಕುರ್ವನ್ ಆಹ ಭಗವಾನ್—

(ಭಾಷ್ಯಾರ್ಥ)

**ಆತ್ಮಜ್ಞಾನನಿಷ್ಠೆಗೆ (ತಕ್ಕ) ಯೋಗ್ಯತೆಯುಂಟಾಗುವವರೆಗೆ ಅಂಥ (ಯೋಗ್ಯತೆಯುಂಟಾಗು)ವದಕ್ಕಾಗಿ (ಕರ್ಮಕ್ಕೆ) ಅಧಿಕಾರಿಯಾಗಿರುವ ಆತ್ಮಜ್ಞನಲ್ಲದ (ಮನುಷ್ಯನು) ಕರ್ಮಯೋಗದ ಅನುಷ್ಠಾನವನ್ನು ಮಾಡಲೇಬೇಕು** ಎಂಬುದನ್ನು 'ನ ಕರ್ಮಣಾಮನಾರಮ್ಭಾತ್" (೩-೪) ಎಂಬ ಶ್ಲೋಕವನ್ನು ಮೊದಲುಗೊಂಡು 'ಶರೀರಯಾತ್ರಾಪಿ ಚ ತೇ ನ ಪ್ರಸಿಧ್ಯೇದ ಕರ್ಮಣಃ" (೩-೮) ಎಂಬೀ ವರಗಿನ ಗ್ರಂಥದಲ್ಲಿ ಹೇಳಿ "ಯಜ್ಞಾರ್ಥಾತ್ ಕರ್ಮಣೋಽನ್ಯತ್ರ" (೩-೯) ಎಂದು ಮೊದಲಾಗಿ "ಮೋಘಂ ಪಾರ್ಥ ಸ ಜೀವತಿ" (೩-೧೬) ಎಂಬ ವರೆಗಿನ ಗ್ರಂಥದಲ್ಲಿಯೂ (ಕರ್ಮಕ್ಕೆ) ಅಧಿಕಾರಿಯಾದ ಅನಾತ್ಮಜ್ಞನು ಕರ್ಮವನ್ನು ಮಾಡಲೇಬೇಕೆಂಬುದಕ್ಕೆ ಅನೇಕ ಕಾರಣವನ್ನು ಪ್ರಸಕ್ತಿಯಿಂದ[1] ಹೇಳಿದ್ದಾಯಿತು, ಅದನ್ನು ಮಾಡದೆ ಇದ್ದರೆ ದೋಷವುಂಟೆಂದೂ ಹೇಳಿದ್ದಾಯಿತು

ಹೀಗಿರುವಲ್ಲಿ ಹೀಗೆ ಚಾಲನೆಕೊಟ್ಟಿರುವ ಚಕ್ರವನ್ನು ಪ್ರತಿಯೊಬ್ಬನೂ ಅನುಸರಿಸಬೇಕೆ, ಅಥವಾ ಆತ್ಮವನ್ನು ಅರಿತುಕೊಳ್ಳದಿರುವವನಿಗೆ ಹಿಂದೆ ಹೇಳಿದ ಕರ್ಮಯೋಗದಿಂದಲೇ ದೊರಕತಕ್ಕದ್ದಾಗಿಯೂ ಆತ್ಮನನ್ನು ಅರಿತುಕೊಂಡಿರುವ ಸಾಂಖ್ಯರು ಅನುಷ್ಠಾನಮಾಡತಕ್ಕದ್ದಾಗಿಯೂ ಇರುವ ಜ್ಞಾನಯೋಗದ ನಿಷ್ಠೆಯನ್ನು ಪಡೆಯದೆ ಇರುವಾತನುಮಟ್ಟಿಗೆ ಮಾಡತಕ್ಕದ್ದೊ ಎಂಬೀ ಅರ್ಥದ ಪ್ರಶ್ನೆಯನ್ನು ಅರ್ಜುನನು ಕೇಳಬಹುದೆಂದು ಶಂಕಿಸಿ, ಅಥವಾ ಶಾಸ್ತ್ರಾರ್ಥವನ್ನು ವಿಂಗಡಿಸಿ ತಿಳಿದುಕೊಳ್ಳುವ ಹಾಗೆ ತಾನೇ (ತಿಳಿಸೋಣವೆಂದು[2] ಹೊರಟು) ಭಗವಂತನು "ಆ ಈ ಆತ್ಮನನ್ನೇ ಅರಿತುಕೊಂಡು ಮಿಥ್ಯಾಜ್ಞಾನವನ್ನು ಕಳೆದುಕೊಂಡವರಾಗಿರುವ ಬ್ರಾಹ್ಮಣರು, ಮಿಥ್ಯಾಜ್ಞಾನವುಳ್ಳವರು ಅವಶ್ಯವಾಗಿ ಅನುಸರಿಸಬೇಕಾಗಿರುವ ಪುತ್ರೈಷಣೆ ಮುಂತಾದವುಗಳನ್ನು ಬಿಟ್ಟಿದ್ದು (ಸಂನ್ಯಾಸಿಗಳಾಗಿ) ಇನ್ನು ಶರೀರವು ಇದ್ದುಕೊಂಡಿರುವ ಮಟ್ಟಿಗೆ ಮಾಡಬೇಕಾಗಿರುವ ಭಿಕ್ಷಾಟನವನ್ನು ಮಾಡುತ್ತಿರುವರು, ಅವರಿಗೆ ಆತ್ಮ

1 ಕರ್ಮಯೋಗ, ಜ್ಞಾನಯೋಗ_ಎಂಬ ಎರಡು ನಿಷ್ಠೆಗಳನ್ನು ವಿಂಗಡಿಸಿ ಹೇಳಿ ಕರ್ಮಾಧಿಕಾರಿಗಳು ಕರ್ಮವನ್ನು ಮಾಡಲೇಬೇಕೆಂದು ತಿಳಿಸುವ ಪ್ರಸಕ್ತಿಯಿಂದ ಅದಕ್ಕೆ ಕಾರಣವನ್ನು ಹೇಳಿವೆ

2. ಪ್ರವೃತ್ತಿ, ನಿವೃತ್ತಿ_ಎಂಬ ಧರ್ಮಗಳೆರಡನ್ನೂ ವಿಂಗಡಿಸಿ ತಿಳಿಸುವದಕ್ಕೆ ಭಾಷ್ಯಕಾರರ ಪೀಠಿಕೆಯನ್ನು ನೋಡಿ

ಜ್ಞಾನನಿಷ್ಠೆಯನ್ನು ಬಿಟ್ಟರೆ ಬೇರೆ ಯಾವದೂ ಮಾಡತಕ್ಕದ್ದು ಇರುವದಿಲ್ಲ" (ಬೃ. ೩-೫-೧)[1] ಎಂಬೀ ಶ್ರುತಿಯ ಅರ್ಥವನ್ನು ಈ ಗೀತಾಶಾಸ್ತ್ರದಲ್ಲಿ ಹೇಳಹೊರಟಿದೆ ಎಂಬುದನ್ನು ಹೊರಪಡಿಸುವದಕ್ಕಾಗಿ ಹೀಗೆಂದು ಹೇಳುತ್ತಾನೆ —

**ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।**
**ಆತ್ಮನ್ಯೇವ ಚ ಸನ್ತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥ ೧೭ ॥**

೧೭. ಯಾವ ಮಾನವನು ಆತ್ಮರತಿಯೇ ಆಗಿರುವನೋ ಮತ್ತು ಆತ್ಮನಲ್ಲಿಯೇ ಸಂತುಷ್ಟನಾಗಿರುವನೋ ಅವನಿಗೆ ಕಾರ್ಯವು ಇರುವದಿಲ್ಲ.

(ಭಾಷ್ಯ)

೧೬೪ ಯಸ್ತು ಸಾಙ್ಖ್ಯಃ ಆತ್ಮಜ್ಞಾನನಿಷ್ಠಃ ಆತ್ಮರತಿಃ ಆತ್ಮನ್ಯೇವ ರತಿಃ ನ ವಿಷಯೇಷು ಯಸ್ಯ ಸ ಆತ್ಮರತಿರೇವ ಸ್ಯಾತ್ ಭವೇತ್ । ಆತ್ಮತೃಪ್ತಶ್ಚ ಆತ್ಮನೈವ ತೃಪ್ತಃ ನಾನ್ನರಸಾದಿನಾ । ಸ ಮಾನವಃ ಮನುಷ್ಯಃ ಸಂನ್ಯಾಸೀ । ಆತ್ಮನ್ಯೇವ ಚ ಸಂತುಷ್ಟಃ । ಸಂತೋಷೋ ಹಿ ಬಾಹ್ಯಾರ್ಥಲಾಭೇ ಸರ್ವಸ್ಯ ಭವತಿ[1] ತಮ್ ಅನಪೇಕ್ಷ್ಯ ಆತ್ಮನ್ಯೇವ ಚ ಸಂತುಷ್ಟಃ । ಸರ್ವತೋ ವೀತತೃಷ್ಣಃ ಇತ್ಯೇತತ್ । ಯ ಈದೃಶಃ ಆತ್ಮವಿತ್ ತಸ್ಯ ಕಾರ್ಯಂ ಕರಣೀಯಂ ನ ವಿದ್ಯತೇ ನಾಸ್ತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಆದರೆ ಆತ್ಮಜ್ಞಾನನಿಷ್ಠನಾದ ಯಾವ ಸಾಂಖ್ಯನು ಆತ್ಮರತಿಯಾಗಿ[2] ಎಂದರೆ ಆತ್ಮನಲ್ಲಿಯೇ ರತಿಯೇ ಹೊರತು ವಿಷಯಗಳಲ್ಲಿ (ರತಿ) ಯಾವನಿಗೆ ಇರುವದಿಲ್ಲವೋ ಅಂಥ ಆತ್ಮರತಿಯೇ ಆಗಿರುವನೋ (ಸ್ಯಾತ್ - ಭವೇತ್), ಆತ್ಮತೃಪ್ತನೂ (ಆಗಿರುವನೋ) ಆತ್ಮನಿಂದಲೇ ತೃಪ್ತನಾಗಿರುವನೇ ಹೊರತು ಅನ್ನರಸವೇ ಮುಂತಾದವುಗಳಿಂದ (ತೃಪ್ತನಾಗುವದಿಲ್ಲವೋ)[3], ಆ ಮಾನವನು, ಮನುಷ್ಯನು, ಸಂನ್ಯಾಸಿಯು,[4] ಆತ್ಮನಲ್ಲಿಯೇ ಸಂತುಷ್ಟನಾಗಿರುವನೋ ಹೊರಗಿನ ವಿಷಯವು ದೊರೆತಾಗಲೇ ಅಲ್ಲವೆ, ಎಲ್ಲರಿಗೂ ಸಂತೋಷವು ಆಗುವದು ? ಆದರೆ ಆ (ವಿಷಯಲಾಭ)ವನ್ನು ಕೋರದೆ[5] ಆತ್ಮನಲ್ಲಿಯೇ ಸಂತುಷ್ಟನಾಗಿರುವನೋ ಎತರಲ್ಲಿಯೂ ಆಸೆಯಿಲ್ಲದವನಾಗಿರುವನೋ ಎಂದರ್ಥ ಯಾವನು ಇಂಥ ಆತ್ಮಜ್ಞಾನಿ ಯಾವನೋ ಅವನಿಗೆ ಮಾಡಬೇಕಾದದ್ದೇನೂ ಇರುವದಿಲ್ಲ.

---

1. ಕರ್ಮಿಯು ಕರ್ಮವನ್ನು ಮಾಡಬೇಕು, ಜ್ಞಾನಿಯು ಮಾಡಬೇಕಾದದ್ದಿಲ್ಲ– ಎಂಬುದು ಶ್ರುತಿಯ ಅರ್ಥ. ಇದೇ ಗೀತೆಯ ತಾತ್ಪರ್ಯವು ಎಂದು ಭಾವ.

2 ಛಾ ೭-೨೫-೨೨. 3 ತೈ ೯-೭

4 ಆತ್ಮತೃಪ್ತನಾಗಿರುವ ಮನುಷ್ಯನು ಸಂನ್ಯಾಸಿಯಲ್ಲದ ಮತ್ತೊಬ್ಬನಾಗಲಾರನು

5 ಆತ್ಮಲಾಭಕ್ಕಿಂತ ಹೆಚ್ಚಿನ ಲಾಭವಿಲ್ಲವೆಂಬ ಆಪಸ್ತಂಬಸ್ಮೃತಿಯ ಸೂಚನೆ.

**ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।**
**ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥ ೧೮ ॥**

೧೮. ಆತನಿಗೆ ಮಾಡಿದ್ದರಿಂದ ಅರ್ಥವಿಲ್ಲ, ಮಾಡದ್ದರಿಂದಲೂ ಇಲ್ಲಿ ಯಾವದೂ ಇಲ್ಲ. ಅವನಿಗೆ ಸರ್ವಭೂತಗಳಲ್ಲಿ ಯಾವ ಅರ್ಥದ ಆಶ್ರಯವೂ ಇರುವದಿಲ್ಲ.

(ಭಾಷ್ಯ)

೧೭೫. ನೈವ ತಸ್ಯ ಪರಮಾತ್ಮರತೇಃ[1] ಕೃತೇನ ಕರ್ಮಣಾ ಅರ್ಥಃ ಪ್ರಯೋಜನಮ್ ಅಸ್ತಿ । ಅಸ್ತು[2] ತರ್ಹಿ ಅಕೃತೇನ ಅಕರಣೇನ ಪ್ರತ್ಯವಾಯಾಖ್ಯಃ ಅನರ್ಥಃ । ನ ಅಕೃತೇನ ಇಹ ಲೋಕೇ ಕಶ್ಚನ ಕಶ್ಚಿದಪಿ ಪ್ರತ್ಯವಾಯಪ್ರಾಪ್ತಿರೂಪಃ ಆತ್ಮಹಾನಿಲಕ್ಷಣೋ ವಾ ನೈವಾಸ್ತಿ । ನ ಚ ಅಸ್ಯ ಸರ್ವಭೂತೇಷು ಬ್ರಹ್ಮಾದಿ ಸ್ಥಾವರಾನ್ತೇಷು ಭೂತೇಷು ಕಶ್ಚಿತ್ ಅರ್ಥವ್ಯಪಾಶ್ರಯಃ ಪ್ರಯೋಜನನಿಮಿತ್ತಃ[3] ಕ್ರಿಯಾಸಾಧ್ಯಃ ವ್ಯಪಾಶ್ರಯಃ ವ್ಯಪಾಶ್ರಯಣಮ್ ಆಲಮ್ಬನಮ್[4] । **ಕಂಚಿತ್ ಭೂತವಿಶೇಷಮ್** ಆಶ್ರಿತ್ಯ ನ ಸಾಧ್ಯಃ ಕಶ್ಚಿತ್ ಅರ್ಥಃ ಅಸ್ತಿ ಯೇನ ತದರ್ಥಾ ಕ್ರಿಯಾ ಅನುಷ್ಠೇಯಾ ಸ್ಯಾತ್ ॥

(ಭಾಷ್ಯಾರ್ಥ)

(ಹೀಗೆ) ಪರಮಾತ್ಮನಲ್ಲಿಯೇ ರತಿಯುಳ್ಳ ಆ (ಜ್ಞಾನಿಗೆ) ಕೃತದಿಂದ ಎಂದರೆ ಕರ್ಮವನ್ನು (ಮಾಡಿದ್ದರಿಂದ) ಅರ್ಥವು, (ಆಗಬೇಕಾದ) ಪ್ರಯೋಜನವು ಇರುವದಿಲ್ಲ. ಹಾಗಾದರೆ ಅಕೃತದಿಂದ ಎಂದರೆ (ಕರ್ಮವನ್ನು) ಮಾಡದೆ ಇರುವದರಿಂದ **ಪ್ರತ್ಯವಾಯ**ವೆಂಬ ಅನರ್ಥವಾಗಬಹುದಲ್ಲ!–ಎಂದರೆ ಹಾಗಲ್ಲ. ಅಕೃತದಿಂದ ಈ ಲೋಕದಲ್ಲಿ ಯಾವದೊಂದೂ ಏನೂ (ಆಗುವದಿಲ್ಲ), ಪ್ರತ್ಯವಾಯವು ಬರುವದಾಗಲಿ ಸ್ವರೂಪದ ನಾಶರೂಪವಾಗುವದೆಂಬುದಾಗಲಿ[5] (ಎಂದಿಗೂ) ಆಗುವದೇ ಇಲ್ಲ. ಸರ್ವಭೂತಗಳಲ್ಲಿ ಎಂದರೆ ಬ್ರಹ್ಮನಿಂದ ಸ್ಥಾವರದವರೆಗಿನ ಭೂತ

1 '' ಏವಮಾತ್ಮರತೇಃ '' ವ್ಯಾ॥ಮ॥

2 ಈ ಮಾತು ಮ॥ವ್ಯಾ॥ಗಳಲ್ಲಿಲ್ಲ

3 '' ಪ್ರಯೋಜನನಿಮಿತ್ತಂ ಕ್ರಿಯಾಸಾಧ್ಯಃ ' ವ್ಯಾ॥, '' ಪ್ರಯೋಜನನಿಮಿತ್ತಃ ಕ್ರಿಯಾಸಾಧ್ಯಃ '' ಮ॥

4 ಈ ಮಾತು ನಿ॥ಮ॥ವ್ಯಾ॥ಗಳಲ್ಲಿಲ್ಲ

5 ತಾನೇ ನಾಶವಾಗುವದೆಂಬುದಾಗಲಿ.

ಗಳಲ್ಲಿ ಯಾವ ಅರ್ಥವ್ಯಪಾಶ್ರಯವೂ ಅವನಿಗೆ ಇರುವದಿಲ್ಲ. (ಅರ್ಥವ್ಯಪಾಶ್ರಯ) ವೆಂದರೆ ಯಾವದಾದರೊಂದು ಪ್ರಯೋಜನದ ನಿಮಿತ್ತದಿಂದ ಕರ್ಮವನ್ನು ಮಾಡಿ ಸಾಧಿಸಿಕೊಳ್ಳಬೇಕಾಗಿರುವ ಆಶ್ರಯವು, ಎಂದರೆ ಆಶ್ರಯಿಸಿರುವದು, ಅವಲಂಬಿಸಿರುವದು. ಯಾವನಾದರೊಬ್ಬ ಗೊತ್ತಾದ ಜೀವನನ್ನು ಆಶ್ರಯಿಸಿ[1] ಪಡೆದುಕೊಳ್ಳಬೇಕಾದದ್ದು ಏನೂ ಇರುವದಿಲ್ಲ, ಹಾಗಿದ್ದರೆ ಅದಕ್ಕಾಗಿ ಕರ್ಮವನ್ನು ಅನುಷ್ಠಾನ ಮಾಡಬೇಕಾಗುತ್ತಿತ್ತು.

(ಭಾಷ್ಯ)

೧೭೬. ನ ತ್ವಮ್ ಏತಸ್ಮಿನ್ ಸರ್ವತಃಸಂಪ್ಲುತೋದಕಸ್ಥಾನೀಯೇ ಸಮ್ಯಗ್ದರ್ಶನೇ ವರ್ತಸೇ । ಯತ ಏವಮ್ —

(ಭಾಷ್ಯಾರ್ಥ)

ಆದರೆ ನೀನು ಎಲ್ಲೆಲ್ಲಿಯೂ ನೀರು ತುಂಬಿರುವ (ಜಲಾಶಯದ)ಂತೆ ಇರುವ[2]-(ಈ) ಸಮ್ಯಗ್ದರ್ಶನದಲ್ಲಿ ಇರುವದಿಲ್ಲ. ಹೀಗಿರುವದಷ್ಟೆ :—

**ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।**
**ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥ ೧೯ ॥**

೧೯. ಆದ್ದರಿಂದ ಅಸಕ್ತನಾಗಿ ಸತತವೂ ಕಾರ್ಯವಾದ ಕರ್ಮವನ್ನು ಆಚರಿಸುತ್ತಿರು. ಏಕೆಂದರೆ ಅಸಕ್ತನಾಗಿ ಕರ್ಮವನ್ನು ಆಚರಿಸುತ್ತಿದ್ದರೆ ಪುರುಷನು ಪರವನ್ನು ಪಡೆಯುತ್ತಾನೆ.

(ಭಾಷ್ಯ)

೧೭೭. ತಸ್ಮಾತ್ ಅಸಕ್ತಃ ಸಙ್ಗವರ್ಜಿತಃ ಸತತಂ ಸರ್ವದಾ ಕಾರ್ಯಂ ಕರ್ತವ್ಯಂ ನಿತ್ಯಂ ಕರ್ಮ ಸಮಾಚರ ನಿರ್ವರ್ತಯ । ಅಸಕ್ತಃ ಹಿ ಯಸ್ಮಾತ್ ಸಮಾಚರನ್ ಈಶ್ವರಾರ್ಥಂ ಕರ್ಮ ಕುರ್ವನ್ ಪರಂ ಮೋಕ್ಷಮ್ ಆಪ್ನೋತಿ ಪೂರುಷಃ ಸತ್ತ್ವಶುದ್ಧಿದ್ವಾರೇಣ ಇತ್ಯರ್ಥಃ ॥

(ಭಾಷ್ಯಾರ್ಥ)

ಆದ್ದರಿಂದ ಅಸಕ್ತನಾಗಿ ಎಂದರೆ ಸಂಗವನ್ನು ಬಿಟ್ಟು ಕಾರ್ಯವಾದ ಮಾಡ

---

1 ಅನಾತ್ಮಜ್ಞರು ದೇವತೆಗಳೇ ಮುಂತಾದವರನ್ನು ಆಶ್ರಯಿಸಿ ತಮ್ಮ ಕರ್ಮದ ಫಲವನ್ನು ಪಡೆದುಕೊಳ್ಳಬೇಕಾಗಿರುವದು. ಜ್ಞಾನಿಗೆ ಅಂಥದ್ದೇನೂ ಇರುವದಿಲ್ಲ

2 ೨-೪೬ರ ಸೂಚನೆ.

ಬೇಕಾದ ನಿತ್ಯಕರ್ಮವನ್ನು ಸತತವಾಗಿ ಯಾವಾಗಲೂ ಆಚರಿಸುತ್ತಿರು, ಮಾಡುತ್ತಿರು. ಏಕೆಂದರೆ ಅಸಕ್ತನಾಗಿ ಕರ್ಮವನ್ನು ಈಶ್ವರಾರ್ಪಣವಾಗಿ ಮಾಡುತ್ತಿದ್ದರೆ ಪುರುಷನು ಪರವನ್ನು ಎಂದರೆ ಮೋಕ್ಷವನ್ನು ಪಡೆಯುತ್ತಾನೆ ಅಂತಃಕರಣ ಶುದ್ಧಿಯಮೂಲಕ (ಪಡೆಯುತ್ತಾನೆ)[1] ಎಂದರ್ಥ.

## ಜ್ಞಾನಿಯು ಲೋಕಸಂಗ್ರಹಕ್ಕಾಗಿ ಮಾಡುವ ಕರ್ಮ

(ಭಾಷ್ಯ)

೧೭೮. ಯಸ್ಮಾಚ್ಚ—

(ಭಾಷ್ಯಾರ್ಥ)

ಮತ್ತೂ ಒಂದು ಕಾರಣವೇನೆಂದರೆ :—

**ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।**
**'ಲೋಕಸಙ್ಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥ ೨೦ ॥**

೨೦. ಜನಕನೇ ಮುಂತಾದವರು ಕರ್ಮದೊಡನೆಯೇ ಸಂಸಿದ್ಧಿಯನ್ನು ಪಡೆಯುವದಕ್ಕೆ ಹೊರಟಿದ್ದರಲ್ಲವೆ? ಲೋಕಸಂಗ್ರಹವನ್ನು ಕಂಡಾದರೂ ನೀನು ಕರ್ಮವನ್ನು ಮಾಡಬೇಕು.

(ಭಾಷ್ಯ)

೧೭೯. ಕರ್ಮಣೈವ ಹಿ ಯಸ್ಮಾತ್[2] ಪೂರ್ವೇ ಕ್ಷತ್ರಿಯಾ ವಿದ್ವಾಂಸಃ ಸಂಸಿದ್ಧಿಂ ಮೋಕ್ಷಂ ಗನ್ತುಮ್ ಆಸ್ಥಿತಾಃ ಪ್ರವೃತ್ತಾಃ । ಕೇ ?[3] ಜನಕಾದಯಃ ಜನಕಾಶ್ವಪತಿಪ್ರಭೃತಯಃ । ಯದಿ ತೇ ಪ್ರಾಪ್ತಸಮ್ಯಗ್ದರ್ಶನಾಃ, ತತಃ ಲೋಕಸಙ್ಗ್ರಹಾರ್ಥಂ ಪ್ರಾರಬ್ಧಕರ್ಮತ್ವಾತ್ ಕರ್ಮಣಾ ಸಹೈವ ಅಸಂನ್ಯಸ್ಯೈವ ಕರ್ಮಸಂಸಿದ್ಧಿಮ್ ಆಸ್ಥಿತಾಃ ಇತ್ಯರ್ಥಃ । ಅಥ ಅಪ್ರಾಪ್ತಸಮ್ಯಗ್ದರ್ಶನಾಃ ಜನಕಾದಯಃ ತದಾ ಕರ್ಮಣಾ ಸತ್ತ್ವಶುದ್ಧಿಸಾಧನಭೂತೇನ ಕ್ರಮೇಣ ಸಂಸಿದ್ಧಿಮ್ ಆಸ್ಥಿತಾಃ ಇತಿ ವ್ಯಾಖ್ಯೇಯಃ ಶ್ಲೋಕಃ । ಅಥ ಮನ್ಯಸೇ ಪೂರ್ವೈರಪಿ ಜನಕಾದಿಭಿಃ[4]

1 ಜ್ಞಾನದಿಂದಲೇ ಮೋಕ್ಷವೆಂಬ ಸಿದ್ಧಾಂತಕ್ಕೆ ಅನುಗುಣವಾಗಿ ಹೀಗೆ ಅರ್ಥಮಾಡಬೇಕು.

2 ಈ ಮಾತು ಮೈ॥ ಪಾಠದಲ್ಲಿಲ್ಲ

3 ಆ॥ನಿ॥ ಗಳಲ್ಲಿಲ್ಲ

4. ಮ॥ಮೈ॥ಗಳಲ್ಲಿ ಈ ಮಾತಿಲ್ಲ

ಅಜ್ಞಾನದ್ಭಿರೇವ ಕರ್ತವ್ಯಂ ಕೃತಂ ಕರ್ಮ[1] ತಾವತಾ ನಾವಶ್ಯಮ್ ಅನ್ಯೇನ ಕರ್ತವ್ಯಂ ಸಮ್ಯಗ್ದರ್ಶನವತಾ ಕೃತಾರ್ಥೇನ ಇತಿ ತಥಾಪಿ ಪ್ರಾರಬ್ಧಕರ್ಮಾಯತ್ತಸ್ತ್ವಂ ಲೋಕಸಙ್ಗ್ರಹಮೇವಾಪಿ ಲೋಕಸ್ಯ ಉನ್ಮಾರ್ಗಪ್ರವೃತ್ತಿನಿವಾರಣಂ ಲೋಕಸಙ್ಗ್ರಹಃ । ತಮೇವಾಪಿ ಪ್ರಯೋಜನಂ ಸಂಪಶ್ಯನ್ ಕರ್ತುಮರ್ಹಸಿ ॥

(ಭಾಷ್ಯಾರ್ಥ)

ಹಿಂದಿನವರಾದ ಕ್ಷತ್ರಿಯಜ್ಞಾನಿಗಳು ಕರ್ಮದೊಡನೆಯೇ ಸಂಸಿದ್ಧಿಯನ್ನು ಎಂದರೆ ಮೋಕ್ಷವನ್ನು ಪಡೆಯುವದಕ್ಕೆ ಪ್ರವರ್ತಿಸಿದ್ದರಲ್ಲವೆ? (ಅವರು) ಯಾರು? ಎಂದರೆ ಜನಕಾದಿಗಳು, **ಜನಕ, ಅಶ್ವಪತಿ**[2] ಮೊದಲಾದವರು. ಆ (ಜನಕಾದಿಗಳು) ಸಮ್ಯಗ್ದರ್ಶನವನ್ನು ಪಡೆದುಕೊಂಡಿದ್ದರೆಂದು ಇಟ್ಟುಕೊಂಡರೆ, ಆಗ ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿದ್ದದ್ದರಿಂದ ಕರ್ಮದೊಡನೆಯೇ, ಕರ್ಮವನ್ನು ಸಂನ್ಯಾಸಮಾಡದೆಯೇ, ಸಂಸಿದ್ಧಿಯನ್ನು ಪಡೆದರು ಎಂದರ್ಥವು. ಹಾಗಿಲ್ಲದೆ **ಜನಕಾದಿಗಳು ಸಮ್ಯಗ್ದರ್ಶನವನ್ನು ಪಡೆದುಕೊಂಡಿರಲಿಲ್ಲವೆಂದು ಇಟ್ಟುಕೊಂಡರೆ[3] ಸತ್ತ್ವಶುದ್ಧಿಗೆ ಸಾಧನವಾಗಿರುವ ಕರ್ಮದಿಂದ ಕ್ರಮಕ್ರಮವಾಗಿ[4] ಸಂಸಿದ್ಧಿಯನ್ನು ಹೊಂದಿದರು ಎಂದು ಈ ಶ್ಲೋಕಕ್ಕೆ ಅರ್ಥವನ್ನು ಮಾಡಿಕೊಳ್ಳಬೇಕು.**

ಆದರೆ ಹಿಂದಿನವರಾದ ಜನಕಾದಿಗಳೂ ತಿಳಿಯದೆಯೇ ಕರ್ತವ್ಯಕರ್ಮವನ್ನು ಮಾಡುತ್ತಿದ್ದರೆಂದೂ ಅಷ್ಟುಮಾತ್ರದಿಂದಲೇ ಸಮ್ಯಗ್ದರ್ಶನವುಳ್ಳ ಕೃತಾರ್ಥನಾದ ಮತ್ತೊಬ್ಬನೂ ಅವಶ್ಯವಾಗಿ ಮಾಡಲೇಬೇಕೆಂಬುದೇನೂ ಇಲ್ಲವೆಂದೂ ಯೋಚಿಸಿರುವೆ

---

1 "ಕರ್ಮ ಕೃತಮ್" ಆ॥ನಿ॥ವಾ॥

2 ಛಾ. ೫-೧೧-೫ನ್ನು ನೋಡಿ.

3 ಜನಕಾದಿಗಳು ಎಂಬ ಮಾತಿಗೆ ಜ್ಞಾನಿಗಳಾದ ಜನಕಾದಿಗಳು ಎಂದಾದರೂ ಅರ್ಥವನ್ನು ಮಾಡಿಕೊಳ್ಳಬಹುದು. ಅಥವಾ ಸಮ್ಯಗ್ದರ್ಶನವಿಲ್ಲದ ಜನಕಾದಿಗಳು ಎಂದಾದರೂ ಇಟ್ಟುಕೊಳ್ಳಬಹುದು, ಇಲ್ಲಿ ಸಗುಣವಿದ್ಯೆಯನ್ನು ಬಲ್ಲವರನ್ನುಕೂಡ ಸಮ್ಯಗ್ದರ್ಶಿಗಳಲ್ಲವೆಂದೇ ಲೆಕ್ಕಕ್ಕೆ ಹಿಡಿಯಬೇಕು. ಸೂ ಭಾ ೩-೪-೯

4 ಸತ್ತ್ವಶುದ್ಧಿ, ಜ್ಞಾನಪ್ರಾಪ್ತಿ, ಜ್ಞಾನನಿಷ್ಠೆ—ಈ ಕ್ರಮದಿಂದ ಎಂದರ್ಥ. ಜನಕನು ಅಜ್ಞಾನಿಯಾಗಿದ್ದರೂ ಸಂನ್ಯಾಸವನ್ನು ತೆಗೆದುಕೊಳ್ಳುವದಕ್ಕೆ ಪ್ರಯತ್ನಮಾಡಿದನೆಂದೂ ಆಗ ಅವನ ಹೆಂಡತಿಯ ವಿಜ್ಞಾಪನೆಯಿಂದ ಆ ಪ್ರಯತ್ನವನ್ನು ಕೈಬಿಟ್ಟನೆಂದೂ ಭಾರತದಲ್ಲಿ ಹೇಳಿದೆ. ಆ ಸ್ಥಿತಿಯಲ್ಲಿ ಅವನು ಮಾಡುತ್ತಿದ್ದ ಕರ್ಮವು ಸತ್ತ್ವಶುದ್ಧಿದ್ವಾರವಾಗಿ ಮೋಕ್ಷಕ್ಕೆ ಕಾರಣವಾಗಿತ್ತು. ಜನಕನು ಜ್ಞಾನಿಯಾದ ಬಳಿಕವೂ ರಾಜ್ಯಭಾರವನ್ನು ಮಾಡುತ್ತಿದ್ದನೆಂದೂ

ಯಾದರೆ ಹಾಗಾದರೂ **ಪ್ರಾರಬ್ಧಕರ್ಮಕ್ಕೆ**[1] ಅಧೀನನಾಗಿ ನೀನು ಲೋಕಸಂಗ್ರಹವನ್ನಾದರೂ (ಕಂಡು)-ಜನರು ತಪ್ಪುದಾರಿಗೆ ಹೋಗದಂತೆ ತಡೆಯುವದು **ಲೋಕಸಂಗ್ರಹವು.** ಅದೇ ಪ್ರಯೋಜನವೆಂದು ಕಂಡುಕೊಂಡಾದರೂ ಕರ್ಮವನ್ನು ಮಾಡಬೇಕು.

(ಭಾಷ್ಯ)

೧೮೦. ಲೋಕಸಂಗ್ರಹಃ ಕಿಮರ್ಥಂ ಕರ್ತವ್ಯ ಇತಿ?[2] ಉಚ್ಯತೇ—

(ಭಾಷ್ಯಾರ್ಥ)

ಲೋಕ ಸಂಗ್ರಹವನ್ನು ಏತಕ್ಕೆ ಮಾಡಬೇಕು? ಎಂದರೆ (ಭಗವಂತನು) ಹೇಳುತ್ತಾನೆ:—

**ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।**
**ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ ೨೧ ॥**

೨೧. ಶ್ರೇಷ್ಠನಾದವನು ಯಾವ ಯಾವದನ್ನು ಆಚರಿಸುವನೋ ಅದದನ್ನೇ ಉಳಿದ ಜನವೂ ಮಾಡುವದು. ಆತನು ಯಾವದನ್ನು ಪ್ರಮಾಣವೆನ್ನುವನೋ ಲೋಕವು ಅದನ್ನೇ ಅನುವರ್ತಿಸುವದು

(ಭಾಷ್ಯ)

೧೮೧. ಯದ್ಯತ್ ಕರ್ಮ ಆಚರತಿ ಕರೋತಿ[3] ಶ್ರೇಷ್ಠಃ[4] ಪ್ರಧಾನಃ ತತ್ತದೇವ ಕರ್ಮ ಆಚರತಿ ಇತರಃ ಜನಃ ತದನುಗತಃ । ಕಿಂ ಚ ಸಃ ಶ್ರೇಷ್ಠಃ ಯತ್ ಪ್ರಮಾಣಂ ಕುರುತೇ ಲೌಕಿಕಂ ವೈದಿಕಂ ವಾ ಲೋಕಃ ತತ್ ಅನುವರ್ತತೇ । ತದೇವ ಪ್ರಮಾಣೀಕರೋತಿ ಇತ್ಯರ್ಥಃ ॥

---

ಶುಕನಿಗೆ ಉಪದೇಶಮಾಡಿದನೆಂದೂ ಭಾರತದಲ್ಲಿದೆ. ಆ ಸಂದರ್ಭದಲ್ಲಿ ಕರ್ಮದಿಂದ ಅವನಿಗೆ ಆಗಬೇಕಾದದ್ದು ಏನೂ ಇರಲಿಲ್ಲವಾಗಿ ಅವನು ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿದ್ದನೆಂದು ಹೇಳುವದೇ ಉಚಿತವಾಗುವದು.

1 ಫಲವನ್ನು ಕೊಡದೆ ಸಂಸ್ಕಾರರೂಪದಿಂದ ಚಿತ್ತದಲ್ಲಿ ಉಳಿದ ಕರ್ಮಗಳು ಸಂಚಿತವೆನಿಸುವವು, ಫಲವನ್ನು ಕೊಡುವದಕ್ಕೆ ಪ್ರಾರಂಭಿಸಿರುವ ಕರ್ಮವು ಪ್ರಾರಬ್ಧಕರ್ಮವು.

2 "ಲೋಕಸಂಗ್ರಹಂ ಕಃ ಕರ್ತುಮರ್ಹತಿ ಕಥಂ ಚ ಇತಿ ? ಉಚ್ಯತೇ" ಸಿ|| ಗು|| "ಲೋಕಸಂಗ್ರಹಃ ಕಿಮರ್ಥಮ್" ಮೈ||.

3. ಈ ಮಾತು ಸಿ|| ಮ|| ಗಳಲ್ಲಿಲ್ಲ.

4. "ಯೇಷು ಯೇಷು ಶ್ರೇಷ್ಠಃ" ಸಿ||.

(ಭಾಷ್ಯಾರ್ಥ)

ಶ್ರೇಷ್ಠನು ಎಂದರೆ ಮುಖ್ಯನಾದವನು ಯಾವ ಯಾವ ಕರ್ಮವನ್ನು ಮಾಡುತ್ತಾನೋ ಅವನನ್ನು ಅನುಸರಿಸುವ ಉಳಿದ ಜನವೂ ಆಯಾ ಕರ್ಮವನ್ನೇ ಮಾಡುವದು. ಮತ್ತೆ ಆ ಶ್ರೇಷ್ಠನು ಲೋಕದಲ್ಲಾಗಲಿ ವೇದದಲ್ಲಾಗಲಿ ಯಾವ ಯಾವದನ್ನು ಪ್ರಮಾಣವೆನ್ನುವನೋ ಜನವೂ ಅದನ್ನೇ ಅನುಸರಿಸುವದು ಎಂದರೆ ಅದನ್ನೇ ಪ್ರಮಾಣವೆನ್ನುವದು ಎಂದರ್ಥ.

(ಭಾಷ್ಯ)

೧೮೨. ಯದಿ ಅತ್ರ ತೇ[1] ಲೋಕಸಂಗ್ರಹಕರ್ತವ್ಯತಾಯಾಂ ವಿಪ್ರತಿಪತ್ತಿಃ, ತರ್ಹಿ ಮಾಂ ಕಿಂ ನ ಪಶ್ಯಸಿ ?--

(ಭಾಷ್ಯಾರ್ಥ)

ಲೋಕಸಂಗ್ರಹವನ್ನು ಮಾಡಬೇಕೆಂಬ ಈ ವಿಷಯದಲ್ಲಿ (ನಿನಗೆ) ಬೇರೆಯ ಅಭಿಪ್ರಾಯವಿದ್ದರೆ ಇಗೋ ನನ್ನನ್ನು ಕಾಣೆಯ ?

**ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।**
**ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ ೨೨ ॥**

೨೨. ಎಲೈ ಪಾರ್ಥನೆ, ಮೂರು ಲೋಕದಲ್ಲಿಯೂ ನನಗೆ ಮಾಡಬೇಕಾದ ಕರ್ಮವೇನೂ ಇರುವದಿಲ್ಲ. (ನಾನು) ಪಡೆಯದೆ ಇದ್ದು (ಇನ್ನು) ಪಡೆಯಬೇಕಾದದ್ದೂ ಇರುವದಿಲ್ಲ. (ಆದರೂ) ಕರ್ಮದಲ್ಲಿ ಇದ್ದುಕೊಂಡೇ ಇರುವೆನು.

(ಭಾಷ್ಯ)

೧೮೩. ನ ಮೇ ಮಮ ಪಾರ್ಥ ನಾಸ್ತಿ ನ ವಿದ್ಯತೇ ಕರ್ತವ್ಯಂ ತ್ರಿಷ್ವಪಿ ಲೋಕೇಷು ಕಿಂಚನ ಕಿಂಚಿದಪಿ । ಕಸ್ಮಾತ್ ? ನ ಅನವಾಪ್ತಮ್ ಅಪ್ರಾಪ್ತಮ್ ಅವಾಪ್ತವ್ಯಂ ಪ್ರಾಪಣೀಯಮ್ । ತಥಾಪಿ ವರ್ತೇ ಏವ ಚ ಕರ್ಮಣಿ ಅಹಮ್ ॥

(ಭಾಷ್ಯಾರ್ಥ)

ಎಲೈ ಪಾರ್ಥನೆ, ನನಗೆ ಮೂರು ಲೋಕಗಳಲ್ಲಿಯೂ ಮಾಡಿಕೊಳ್ಳಬೇಕಾದ ಕರ್ಮವು ಯಾವದೊಂದೂ ಇರುವದಿಲ್ಲ. ಏಕೆಂದರ ನಾನು ಪಡೆಯದ ದೊರಕಿಸಿ

---

1. "ಅತ್ರಾಪಿ" ಮೈ॥.

ಕೊಳ್ಳದೆ (ಇನ್ನೂ) ಪಡೆಯಬೇಕಾಗಿರುವದು ದೊರಕಿಸಿಕೊಳ್ಳಬೇಕಾಗಿರುವದು (ಯಾವದೂ) ಇರುವದಿಲ್ಲ.[1] ಆದರೂ ನಾನು ಕರ್ಮದಲ್ಲಿ ತೊಡಗಿಯೇ ಇರುತ್ತೇನೆ.

**ಯದಿ ಹ್ಯಹಂ ನ ವರ್ತೇಯ ಜಾತು ಕರ್ಮಣ್ಯತನ್ದ್ರಿತಃ ।**
**ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ ॥ ೨೩ ॥**

೨೩. ಎಲೈ ಪಾರ್ಥನೆ, ನಾನು ಅತಂದ್ರಿಯಾಗಿ ಕರ್ಮದಲ್ಲಿ ಯಾವಾಗಲಾದರೂ ತೊಡಗದೆ ಇದ್ದುಬಿಟ್ಟೆನೆಂದರೆ ಮನುಷ್ಯರು ಸರ್ವಪ್ರಕಾರ ದಿಂದಲೂ ನನ್ನ ದಾರಿಯನ್ನು ಅನುವರ್ತಿಸುವರು

(ಭಾಷ್ಯ)

೧೮೪ ಯದಿ ಹಿ ಪುನಃ ಅಹಂ ನ ವರ್ತೇಯ ಜಾತು ಕದಾಚಿತ್ ಕರ್ಮಣಿ ಅತನ್ದ್ರಿತಃ ಅನಲಸಃ ಸನ್ ಮಮ ಶ್ರೇಷ್ಠಸ್ಯ ಸತಃ ವರ್ತ್ಮ ಮಾರ್ಗಮ್ ಅನು ವರ್ತನ್ತೇ ಮನುಷ್ಯಾಃ ಹೇ ಪಾರ್ಥ ಸರ್ವಶಃ ಸರ್ವಪ್ರಕಾರೈಃ ॥

(ಭಾಷ್ಯಾರ್ಥ)

ಹೀಗಿಲ್ಲದೆ ಅತಂದ್ರಿಯಾಗಿ ಬೇಸರವಿಲ್ಲದೆ ಕರ್ಮದಲ್ಲಿ ತೊಡಗುವದನ್ನು ನಾನು ಯಾವಾಗಲಾದರೂ ಎಂದಾದರೂ ಬಿಟ್ಟೆನೆಂದರೆ ಶ್ರೇಷ್ಠನೆನಿಸಿಕೊಂಡಿರುವ ನನ್ನ ದಾರಿ ಯನ್ನೇ ಎಲ್ಲೆಲ್ಲಿಯೂ ಎಲ್ಲಾ ಬಗೆಯಿಂದಲೂ ಅನುವರ್ತಿಸುವರು.

(ಭಾಷ್ಯ)

೧೮೪ ತಥಾ ಚ ಕೋ ದೋಷ ಇತಿ ? ಆಹ[2]—

(ಭಾಷ್ಯಾರ್ಥ)

ಹಾಗಾದರೆ ದೋಷವೇನು ? ಎಂದರೆ (ಭಗವಂತನು) ಹೇಳುತ್ತಾನೆ.—

**ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಮ್।**
**ಸಙ್ಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥ ೨೪ ॥**

೨೪. ನಾನು ಕರ್ಮವನ್ನು ಮಾಡದಿದ್ದರೆ ಈ ಲೋಕಗಳು ಹಾಳಾ ದಾವು. ವರ್ಣಸಂಕರಕ್ಕೂ (ನಾನು) ಕರ್ತನಾದೇನು, ಈ ಜನರುಗಳನ್ನು ಹಾಳುಮಾಡಿದವನಾದೇನು !

---

1. ಯಾವನಿಗೆ ಪಡೆಯತಕ್ಕದ್ದು ಒಂದಿಷ್ಟಾದರೂ ಇರುವದೋ ಅವನು ಕೃತಕೃತ್ಯ ನಲ್ಲ.

2. ಇದು ವ್ಯಾ॥ ನಿ॥ ಗು॥ ಗಳಲ್ಲಿದೆ, "ತಥಾ ಚ ಕೋ ದೋಷ ಇತ್ಯತ್ರಾಹ" ಮು॥

(ಭಾಷ್ಯ)

೧೮೫. ಉತ್ಸೀದೇಯುಃ ವಿನಶ್ಯೇಯುಃ ಇಮೇ ಸರ್ವೇ ಲೋಕಾಃ ಲೋಕಸ್ಥಿತಿನಿಮಿತ್ತಸ್ಯ ಕರ್ಮಣಃ ಅಭಾವಾತ್ ನ ಕುರ್ಯಾಂ ಕರ್ಮ ಚೇತ್ ಅಹಮ್ । ಕಿಂಚ ಸಙ್ಕರಸ್ಯ ಚ ಕರ್ತಾ ಸ್ಯಾಮ್ । ತೇನ ಕಾರಣೇನ ಉಪಹನ್ಯಾಮ್ ಇಮಾಃ ಪ್ರಜಾಃ । ಪ್ರಜಾನಾಮ್ ಅನುಗ್ರಹಾಯ ಪ್ರವೃತ್ತಃ ತದುಪಹತಿಂ[1] ಕುರ್ಯಾಮ್ ಇತಿ[2] ಮಮ ಈಶ್ವರಸ್ಯ ಅನನುರೂಪಮ್ ಆಪದ್ಯೇತ ॥

(ಭಾಷ್ಯಾರ್ಥ)

ನಾನು ಕರ್ಮವನ್ನು ಮಾಡದೆ ಇದ್ದರೆ (ಯಾರೂ ಕರ್ಮವನ್ನು ಮಾಡುವದಿಲ್ಲವಾದ್ದರಿಂದ) ಲೋಕಗಳ ಸ್ಥಿತಿಗೆ ಕಾರಣವಾಗಿರುವ ಕರ್ಮವು ಇಲ್ಲದ್ದರಿಂದ ಈ ಲೋಕಗಳು ಎಲ್ಲವೂ ಹಾಳಾಗಿಬಿಟ್ಟಾವು, ನಾಶವಾದಾವು! ಮತ್ತು (ವರ್ಣ) ಸಂಕರವನ್ನು (ನಾನು) ಮಾಡಿದವನಾದೇನು! ಆ ಕಾರಣದಿಂದ ಈ ಜನರನ್ನೂ ಹಾಳುಮಾಡಿದವನಾದೇನು! ಪ್ರಾಣಿಗಳಿಗೆ ಅನುಗ್ರಹವನ್ನು ಮಾಡುವದಕ್ಕಾಗಿ ಹೊರಟಿರುವ ನಾನು · ಅವರಿಗೆ ಕೇಡುಕನ್ನು ಕೇಡನ್ನು ಮಾಡಿದವನಾದೇನು! ಆದ್ದರಿಂದ ಈಶ್ವರನಾದ ನನಗೆ ಅನನುಗುಣವಾಗಿಬಿಟ್ಟೀತು!

(ಭಾಷ್ಯ)

೧೮೬. ಯದಿ ಪುನಃ ಅಹಮಿವ ತ್ವಂ ಕೃತಾರ್ಥಬುದ್ಧಿಃ ಆತ್ಮವಿತ್ ಅನ್ಯೋ ವಾ, ತಸ್ಯಾಪಿ ಆತ್ಮನಃ ಕರ್ತವ್ಯಾಭಾವೇಽಪಿ ಪರಾನುಗ್ರಹ ಏವ ಕರ್ತವ್ಯಃ ಇತ್ಯಾಹ—

(ಭಾಷ್ಯಾರ್ಥ)

ಇನ್ನು ನನ್ನಂತೆ ನೀನು ಅದವಾ ಮತ್ತೆ ಯಾವನಾದರೂ (ಮಾಡಬೇಕಾದದ್ದೇನೂ ಇಲ್ಲದೆ) ನಾನು ಕೃತಾರ್ಥನೆಂಬ ಬುದ್ಧಿಯುಳ್ಳ ಆತ್ಮಜ್ಞಾನಿಯಾಗಿದ್ದರೆ (ಆಗ ನಿನಗೂ) ಅವನಿಗೂ ತನಗಾಗಿ ಮಾಡಿಕೊಳ್ಳಬೇಕಾದದ್ದು ಇಲ್ಲದಿದ್ದರೂ ಮತ್ತೊಬ್ಬರಿಗೆ ಒಳ್ಳೆಯದನ್ನೇ ಮಾಡಬೇಕು ಎಂದು (ಭಗವಂತನು) ಹೇಳುತ್ತಿದಾನೆ —

**ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವನ್ತಿ ಭಾರತ ।**
**ಕುರ್ಯಾದ್ವಿದ್ವಾಂಸ್ತಥಾಸಕ್ತಶ್ಚಿಕೀರ್ಷುರ್ಲೋಕಸಙ್ಗ್ರಹಮ್ ॥**

೨೫. ಭರತವಂಶೋತ್ಪನ್ನನೆ, ತಿಳಿಯದವರು ಹೇಗೆ ಕರ್ಮದಲ್ಲಿ ಸಕ್ತ

1. " ಉಪಹತಿಮ್ ಉಪಸನಸವಮ್ '' ಅ|| ೩|| ಗು||
2. " ಇತ್ಯರ್ಥಃ " ಅ||.

ರಾಗಿ (ಅದನ್ನು) ಮಾಡುತ್ತಿರುವರೋ ಹಾಗೆ ಜ್ಞಾನಿಯು ಅಸಕ್ತನಾಗಿ ಲೋಕಸಂಗ್ರಹವನ್ನು ಮಾಡುವದಕ್ಕಾಗಿ (ಕರ್ಮವನ್ನು) ಮಾಡುತ್ತಿರಬೇಕು.

(ಭಾಷ್ಯ)

೧೮೭ ಸಕ್ತಾಃ ಕರ್ಮಣಿ "ಅಸ್ಯ ಕರ್ಮಣಃ ಫಲಂ ಮಮ ಭವಿಷ್ಯತಿ" ಇತಿ ಕೇಚಿತ್ ಅವಿದ್ವಾಂಸಃ ಯಥಾ ಕುರ್ವನ್ತಿ, ಭಾರತ, ಕುರ್ಯಾತ್ ವಿದ್ವಾನ್ ಆತ್ಮವಿತ್ ತಥಾ ಅಸಕ್ತಃ ಸನ್। ತದ್ವತ್ ಕಿಮರ್ಥಂ ಕರೋತಿ ? ತತ್ ಶೃಣು । ಚಿಕೀರ್ಷುಃ ಕರ್ತುಮ್ ಇಚ್ಛುಃ ಲೋಕಸಙ್ಗ್ರಹಮ್ ॥

(ಭಾಷ್ಯಾರ್ಥ)

'ಈ ಕರ್ಮದ ಫಲವು ನನಗೆ ಆಗಲಿ' ಎಂದು ಕರ್ಮದಲ್ಲಿ ಸಕ್ತರಾಗಿ ಕೆಲವರು ಅಜ್ಞಾನಿಗಳಾದ್ದರಿಂದ ಹೇಗೆ (ಅದನ್ನು) ಮಾಡುತ್ತಿರುವರೋ, ಎಲೈ ಭರತವಂಶೋತ್ಪನ್ನನೆ, ಜ್ಞಾನಿಯು ಎಂದರೆ ಆತ್ಮನನ್ನು ಅರಿತುಕೊಂಡಿರುವವನೂ ಅದರಂತೆಯೇ ಅಸಕ್ತನಾಗಿ (ಕರ್ಮವನ್ನು) ಮಾಡುತ್ತಿರುವನು ಹಾಗೆ ಏಕೆ ಮಾಡುತ್ತಿರುವನು ? ಎಂದರೆ ಅದನ್ನು ಕೇಳು ಲೋಕಸಂಗ್ರಹವನ್ನು ಮಾಡುವ ಇಚ್ಛೆಯಿಂದ (ಹಾಗೆ ಮಾಡುತ್ತಾನೆ)[1]

(ಭಾಷ್ಯ)

೧೮೮ ಏವಂ ಲೋಕಸಂಗ್ರಹಂ ಚಿಕೀರ್ಷೋರ್ನ ಮಮಾತ್ಮವಿದಃ ಕರ್ತವ್ಯಮಸ್ತಿ, ಅನ್ಯಸ್ಯ ವಾ ಲೋಕಸಂಗ್ರಹಂ ಮುಕ್ತ್ವಾ। ತತಃ ತಸ್ಯ ಆತ್ಮವಿದಃ ಇದಮ್ ಉಪದಿಶ್ಯತೇ—

(ಭಾಷ್ಯಾರ್ಥ)

ಹೀಗೆ ಲೋಕಸಂಗ್ರಹವನ್ನು ಮಾಡಬೇಕೆಂಬ ನನಗಾಗಲಿ ಮಿಕ್ಕ ಯಾವ ಆತ್ಮಜ್ಞಾನಿಗೇ ಆಗಲಿ ಲೋಕಸಂಗ್ರಹವೊಂದನ್ನು ಬಿಟ್ಟರೆ ಮತ್ತೇನೂ ಮಾಡತಕ್ಕದ್ದು ಇರುವದಿಲ್ಲ ಆದ್ದರಿಂದ ಅಂಥ ಆತ್ಮಜ್ಞಾನಿಗೆ ಇದನ್ನು ಹೇಳಿರುತ್ತದೆ —

**ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಙ್ಗಿನಾಮ್ ।**
**ಜೋಷಯೇತ್ ಸರ್ವಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್ ॥ ೨೬ ॥**

---

1 ಅಜ್ಞಾನಿಗಳು ತಾವು ಕರ್ತೃಗಳೆಂದೂ ಕರ್ಮವನ್ನು ಮಾಡಿ ಫಲವನ್ನು ಪಡೆಯುಪವೆಂದೂ ತಿಳಿದು ಕರ್ಮದಲ್ಲಿ ತೊಡಗುವರು ಜ್ಞಾನಿಯು ಮಾಡುತ್ತಿರುವ ಕರ್ಮವು ಹಾಗೇ ತೋರುತ್ತಿರುವದಾದರೂ ಅದು ನಿಜವಾಗಿ ಆ ಜಾತಿಯದಲ್ಲ.

೨೬. ಕರ್ಮಸಂಗಿಗಳಾದ ಅಜ್ಞರಿಗೆ ಬುದ್ಧಿಭೇದವನ್ನು ಹುಟ್ಟಿಸಬಾರದು. ಜ್ಞಾನಿಯಾದವನು (ತಾನೂ) ಯುಕ್ತನಾಗಿ (ಕರ್ಮಗಳನ್ನು) ಮಾಡುತ್ತಾ ಎಲ್ಲಾ ಕರ್ಮಗಳನ್ನೂ (ಅವರಿಗೆ) ಸೇರಿಸಬೇಕು.

(ಭಾಷ್ಯ)

೧೮೯. ಬುದ್ಧೇಃ ಭೇದಃ ಬುದ್ಧಿಭೇದಃ । "ಮಯಾ ಇದಂ ಕರ್ತವ್ಯಂ ಭೋಕ್ತವ್ಯಂ ಚ ಅಸ್ಯ ಕರ್ಮಣಃ ಫಲಮ್" ಇತಿ ನಿಶ್ಚಿತರೂಪಾಯಾ ಬುದ್ಧೇಃ ಭೇದನಂ ಚಾಲನಂ ಬುದ್ಧಿಭೇದಃ । ತಂ ನ ಜನಯೇತ್ ನೋತ್ಪಾದಯೇತ್ ಅಜ್ಞಾನಾಮ್ ಅವಿವೇಕಿನಾಮ್ ಕರ್ಮಸಙ್ಗಿನಾಂ ಕರ್ಮಣಿ ಆಸಕ್ತಾನಾಮ್ ಆಸಙ್ಗವತಾಮ್ । ಕಿಂ ನು[1] ಕುರ್ಯಾತ್? ಜೋಷಯೇತ್ ಕಾರಯೇತ್ ಸರ್ವಕರ್ಮಾಣಿ ವಿದ್ವಾನ್ ಸ್ವಯಂ ತದೇವ ಅವಿದುಷಾಂ ಕರ್ಮ ಯುಕ್ತಃ ಅಭಿಯುಕ್ತಃ ಸಮಾಚರನ್ ॥

(ಭಾಷ್ಯಾರ್ಥ)

ಬುದ್ಧಿಯ ಭೇದವೇ ಬುದ್ಧಿಭೇದವು 'ನಾನು ಇದನ್ನು ಮಾಡಬೇಕು, ಈ ಕರ್ಮದ ಫಲವನ್ನು ಅನುಭವಿಸಲೂ ಬೇಕು" ಎಂದು ನಿಶ್ಚಯಮಾಡಿಕೊಂಡಿರುವ ರೂಪದ ಬುದ್ಧಿಯನ್ನು ಭೇದಿಸುವದು, ಅಲುಗಾಡಿಸುವದು ಬುದ್ಧಿಭೇದವು, ಅದನ್ನು ಹುಟ್ಟಿಸಬಾರದು, ಉಂಟುಮಾಡಬಾರದು. ಕರ್ಮಸಂಗಿಗಳಾದ ಕರ್ಮದಲ್ಲಿ ಆಸಕ್ತರಾಗಿರುವ ಅಜ್ಞರ ಅವಿವೇಕಿಗಳ (ಬುದ್ಧಿಯ ಭೇದವನ್ನು ಮಾಡಬಾರದು). ಹಾಗಾದರೆ ಏನುಮಾಡಬೇಕು? ಎಂದರೆ (ಆ) ಅಜ್ಞರು ಮಾಡುವ ಅದೇ ಕರ್ಮವನ್ನು ಯುಕ್ತನಾದ ದೊಡ್ಡವನೆನಿಸಿದ ತಾನೂ ಮಾಡುತ್ತಾ ಎಲ್ಲಾ ಕರ್ಮಗಳನ್ನೂ ಅವರಿಗೆ ಸೇರಿಸಬೇಕು, (ಅವರು) ಮಾಡುವಂತೆ ಮಾಡಬೇಕು.

(ಭಾಷ್ಯ)

೧೯೦ ಅವಿದ್ವಾನ್ ಅಜ್ಞಃ ಕಥಂ ಕರ್ಮಸು ಸಜ್ಜತೇ ಇತಿ? ಆಹ—

(ಭಾಷ್ಯಾರ್ಥ)

(ತತ್ತ್ವವನ್ನು) ಅರಿತುಕೊಳ್ಳದೆ ಇರುವ ಅಜ್ಞನು ಕರ್ಮಗಳಲ್ಲಿ ಹೇಗೆ ಸಕ್ತನಾಗಿರುತ್ತಾನೆ? ಎಂದರೆ (ಭಗವಂತನು) ಹೇಳುತ್ತಾನೆ:—

---

1. ಮೈ॥ಮು॥ವಾ॥

**ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।**
**ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥ ೨೭ ॥**

೨೭. ಪ್ರಕೃತಿಯ ಗುಣಗಳಿಂದ ಎಲ್ಲಾ ರೀತಿಯಿಂದಲೂ ಕರ್ಮಗಳು ಮಾಡಲ್ಪಡುತ್ತಿರುವವು. ಅಹಂಕಾರವಿಮೂಢಾತ್ಮನು ನಾನು ಕರ್ತನು ಎಂದು ತಿಳಿದುಕೊಳ್ಳುತ್ತಿರುತ್ತಾನೆ.

(ಭಾಷ್ಯ)

೧೯೧ ಪ್ರಕೃತೇಃ । ಪ್ರಕೃತಿಃ ಪ್ರಧಾನಂ ಸತ್ತ್ವರಜಸ್ತಮಸಾಂ ಗುಣಾನಾಂ ಸಾಮ್ಯಾವಸ್ಥಾ । ತಸ್ಯಾಃ ಪ್ರಕೃತೇಃ ಗುಣೈಃ ವಿಕಾರೈಃ ಕಾರ್ಯಕರಣರೂಪೈಃ ಕ್ರಿಯಮಾಣಾನಿ ಕರ್ಮಾಣಿ ಲೌಕಿಕಾನಿ ಶಾಸ್ತ್ರೀಯಾಣಿ ಚ ಸರ್ವಶಃ ಸರ್ವಪ್ರಕಾರೈಃ । ಅಹಂಕಾರವಿಮೂಢಾತ್ಮಾ ಕಾರ್ಯಕರಣಸಂಘಾತಾತ್ಮಪ್ರತ್ಯಯಃ ಅಹಂಕಾರಃ । ತೇನ ವಿವಿಧಂ ನಾನಾವಿಧಂ ಮೂಢಃ ಆತ್ಮಾ ಅನ್ತಃಕರಣಂ ಯಸ್ಯ ಸೋಽಯಂ ಕಾರ್ಯಕರಣಧರ್ಮಾ ಕಾರ್ಯಕರಣಾಭಿಮಾನೀ ಅವಿದ್ಯಯಾ ಕರ್ಮಾಣಿ ಆತ್ಮನಿ ಮನ್ಯಮಾನಃ ತತ್ತತ್ಕರ್ಮಣಾಮ್ ಅಹಂ ಕರ್ತಾ ಇತಿ ಮನ್ಯತೇ ॥

(ಭಾಷ್ಯಾರ್ಥ)

ಪ್ರಕೃತಿಯ–**ಪ್ರಕೃತಿ** ಎಂದರೆ ಸತ್ತ್ವ, ರಜಸ್ಸು, ತಮಸ್ಸು–ಇವುಗಳ ಸಾಮ್ಯಾವಸ್ಥೆಯಾದ **ಪ್ರಧಾನವು.**[1] ಆ ಪ್ರಕೃತಿಯ ಗುಣಗಳಿಂದ ಎಂದರೆ ಕಾರ್ಯಕರಣರೂಪವಾಗಿರುವ[2] ವಿಕಾರಗಳಿಂದ ಸರ್ವಶಃ ಎಂದರೆ ಸರ್ವಪ್ರಕಾರಗಳಿಂದಲೂ ಲೌಕಿಕ (ಕರ್ಮಗಳೂ) ಶಾಸ್ತ್ರೀಯ ಕರ್ಮಗಳೂ[3] ಮಾಡಲ್ಪಡುತ್ತಿರುವವು. ಅಹಂಕಾರವಿಮೂಢಾತ್ಮನು–ಕಾರ್ಯಕರಣಗಳ ಸಂಘಾತದಲ್ಲಿ[4] ತಾನೆಂಬ ಅರಿವೇ ಅಹಂ

---

1. ಸೃಷ್ಟಿಕಾಲದಲ್ಲಿ ಗುಣಗಳು ಒಂದೊಂದು ಮುಖ್ಯವಾಗಿ ಮಿಕ್ಕವುಗಳು ಅವುಗಳಿಗೆ ಅಧೀನವಾಗಿರುವದರಿಂದ ಬೇರೆಬೇರೆಯ ವಸ್ತುಗಳಾಗಿರುವವು, ಪ್ರಲಯದಲ್ಲಿ ಅವೆಲ್ಲವೂ ಸಮಬಲವಾಗಿರುತ್ತವೆ ಎಂದು **ಸಾಂಖ್ಯರು** ಹೇಳುತಾರೆ

2 ದೇಹೇಂದ್ರಿಯಗಳ ರೂಪವಾಗಿರುವ

3. ಶಾಸ್ತ್ರೀಯಕರ್ಮಗಳೂ ಗುಣಗಳ ಕಾರ್ಯವೇ ಆದರೂ ಅಜ್ಞಾನಿಗಳು ಅವನ್ನು ತಾವು ಮಾಡುವೆವೆಂದು ತಿಳಿದುಕೊಂಡಿರುವರು ಸೂ.ಭಾ. ಅಧ್ಯಾಸಭಾಷ್ಯವನ್ನು ನೋಡಿ.

4. ಶರೀರವೂ ಇಂದ್ರಿಯಗಳೂ ಒಟ್ಟುಸೇರಿ ತಮಗಿಂತ ಭಿನ್ನನಾದ ಆತ್ಮನಿಗಾಗಿ ಕೆಲಸ ಮಾಡುತ್ತಿರುವವು ಎಂಬುದನ್ನು ತಿಳಿಸುವದಕ್ಕೆ "ಸಂಘಾತ"ವೆಂಬ ಶಬ್ದವನ್ನು ಪ್ರಯೋಗಿಸಿರುತ್ತದೆ

ಕಾರವು.[1] ಅದರಿಂದ ವಿವಿಧವಾಗಿ ಬಗೆಬಗೆಯಾಗಿ ಅನೇಕವಿಧವಾಗಿ ಮೂಢವಾಗಿರುವ ಅಂತಃಕರಣವುಳ್ಳವನು-ಎಂದರೆ ದೇಹೇಂದ್ರಿಯಗಳ ಧರ್ಮಗಳು ತನ್ನವೆಂಬ ಬುದ್ಧಿಯಿಂದ ದೇಹೇಂದ್ರಿಯಗಳೇ ತಾನೆಂದು ತಿಳಿದುಕೊಂಡಿರುವಾತನು (ಈ) ತಪ್ಪು ತಿಳಿವಳಿಕೆಯಿಂದ ಕರ್ಮಗಳು ತನ್ನಲ್ಲಿರುವವೆಂದುಕೊಂಡು ಆಯಾ (ದೇಹೇಂದ್ರಿಯಗಳ) ಕರ್ಮಗಳಿಗೆ " ನಾನೇ ಕರ್ತನು " ಎಂದುಕೊಳ್ಳುತ್ತಿರುತ್ತಾನೆ.

(ಭಾಷ್ಯ)

೧೯೨. ಯಃ ಪುನರ್ವಿದ್ವಾನ್—

(ಭಾಷ್ಯಾರ್ಥ)

ಇನ್ನು ಯಾವನು ಜ್ಞಾನಿಯೋ :—

**ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।**
**ಗುಣಾ ಗುಣೇಷು ವರ್ತನ್ತೇ ಇತಿ ಮತ್ವಾ ನ ಸಜ್ಜತೇ ॥ ೨೮ ॥**

೨೮. ಎಲೈ ಮಹಾಬಾಹುವೆ, ಗುಣಕರ್ಮಗಳ ವಿಭಾಗಗಳ ತತ್ತ್ವಜ್ಞಾನಿಯಾದರೆ ಗುಣಗಳು ಗುಣಗಳಲ್ಲಿ ಪ್ರವರ್ತಿಸುತ್ತಿರುತ್ತವೆ ಎಂದು ತಿಳಿದು ಸಕ್ತನಾಗದೆ ಇರುತ್ತಾನೆ.

(ಭಾಷ್ಯ)

೧೯೩. ತತ್ತ್ವವಿತ್ ತು ಮಹಾಬಾಹೋ ಕಸ್ಯ ತತ್ತ್ವವಿತ್ ? ಗುಣಕರ್ಮವಿಭಾಗಯೋಃ ಗುಣವಿಭಾಗಸ್ಯ ಕರ್ಮವಿಭಾಗಸ್ಯ ಚ ತತ್ತ್ವವಿತ್ ಇತ್ಯರ್ಥಃ। ಗುಣಾಃ ಕರಣಾತ್ಮಕಾಃ ಗುಣೇಷು ವಿಷಯಾತ್ಮಕೇಷು ವರ್ತನ್ತೇ ನಾತ್ಮಾ ಇತಿ ಮತ್ವಾ ನ ಸಜ್ಜತೇ ಸಕ್ತಿಂ ನ ಕರೋತಿ ॥

(ಭಾಷ್ಯಾರ್ಥ)

ಆದರೆ ತತ್ತ್ವವನ್ನು ಬಲ್ಲವನು, ಎಲೈ ಮಹಾಬಾಹುವೆ,—ಏತರ ತತ್ತ್ವವನ್ನು ಬಲ್ಲವನು ? ಎಂದರೆ ಗುಣಕರ್ಮವಿಭಾಗಗಳ (ತತ್ತ್ವವನ್ನು ಬಲ್ಲವನು)-ಗುಣಗಳ ವಿಂಗಡದ ಮತ್ತು ಕರ್ಮಗಳ ವಿಂಗಡದ ತತ್ತ್ವವನ್ನು ಬಲ್ಲವನು ಎಂದರ್ಥ. (ಅವನು)

---

1. ಇದಕ್ಕೇ ಅಧ್ಯಾಸವೆಂದು ಹೆಸರು ; ದೇಹಾದಿಗಳೂ ಅವಿದ್ಯೆಯಿಂದ ತೋರುವ ಅಸತ್ಪದಾರ್ಥಗಳೆಂದು ೨-೧೮ರಲ್ಲಿ ತಿಳಿಸಿದೆ.

ಕರಣರೂಪವಾಗಿರುವ ಗುಣಗಳು ವಿಷಯರೂಪವಾಗಿರುವ ಗುಣಗಳಲ್ಲಿ[1] ಪ್ರವರ್ತಿಸುತ್ತಿರುವವೇ ಹೊರತು ಆತ್ಮನೇನೂ (ಪ್ರವರ್ತಿಸುತ್ತಿರುವ)ದಿಲ್ಲ ಎಂದು ತಿಳಿದಿರುವದರಿಂದ ಸಕ್ತನಾಗದೆ ಇರುತ್ತಾನೆ, ಆಸಕ್ತಿಯನ್ನು ಮಾಡಿಕೊಳ್ಳುವದಿಲ್ಲ.

**ಪ್ರಕೃತೇರ್ಗುಣಸಮ್ಮೂಢಾಃ ಸಜ್ಜನ್ತೇ ಗುಣಕರ್ಮಸು ।**
**ತಾನಕೃತ್ಸ್ನವಿದೋ ಮನ್ದಾನ್ ಕೃತ್ಸ್ನವಿನ್ನ ವಿಚಾಲಯೇತ್ ॥ ೨೯ ॥**

೨೯. ಪ್ರಕೃತಿಯ ಗುಣಗಳಿಂದ ಸಂಮೂಢವಾಗಿರುವವರು ಗುಣಕರ್ಮಗಳಲ್ಲಿ ಸಕ್ತರಾಗುತ್ತಿರುವರು. ಎಲ್ಲವನ್ನೂ ಅರಿಯದ ಆ ಮಂದಬುದ್ಧಿಗಳನ್ನು ಎಲ್ಲವನ್ನೂ ತಿಳಿದಾತನು ಅಲುಗಾಡಿಸಬಾರದು.

(ಭಾಷ್ಯ)

೧೯೪. ಯೇ ಪುನಃ ಪ್ರಕೃತೇಃ ಗುಣೈಃ[2] ಸಮ್ಯಕ್ ಮೂಢಾಃ ಸಂಮೋಹಿತಾಃ ಸನ್ತಃ ಸಜ್ಜನ್ತೇ ಗುಣಾನಾಂ ಕರ್ಮಸು ಗುಣಕರ್ಮಸು ವಯಂ ಕರ್ಮ ಕುರ್ಮಃ ಫಲಾಯ ಇತಿ । ತಾನ್ ಕರ್ಮಸಙ್ಗಿನಃ ಅಕೃತ್ಸ್ನವಿದಃ ಕರ್ಮಫಲಮಾತ್ರದರ್ಶಿನಃ ಮನ್ದಾನ್ ಮನ್ದಪ್ರಜ್ಞಾನ್ ಕೃತ್ಸ್ನವಿತ್ ಆತ್ಮವಿತ್ ಸ್ವಯಂ ನ ವಿಚಾಲಯೇತ್ ಬುದ್ಧಿಭೇದಕರಣಮೇವ ಚಾಲನಮ್ । ತತ್ ನ ಕುರ್ಯಾತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಆದರೆ ಯಾರು ಪ್ರಕೃತಿಯ ಗುಣಗಳಿಂದ (ಸಮ್ಮೂಢರಾಗಿ) ಪೂರ ಮೂಢರಾಗಿ ಭ್ರಾಂತರಾಗಿರುವರೋ ಗುಣಕರ್ಮಗಳಲ್ಲಿ ಎಂದರೆ ಗುಣಗಳ ಕರ್ಮಗಳಲ್ಲಿ "ನಾವು (ಈ) ಕರ್ಮವನ್ನು (ಈ) ಫಲಕ್ಕಾಗಿ ಮಾಡುತ್ತಿರುವೆವು" ಎಂದು ಸಕ್ತರಾಗಿರುವರೋ[3] ಅಂಥ ಕರ್ಮಸಂಗಿಗಳನ್ನು, ಎಲ್ಲವನ್ನೂ ಅರಿಯದೆ ಕರ್ಮಫಲವೊಂದನ್ನೇ ಕಂಡಿರುವ (ಆ) ಮಂದರನ್ನು ಅಲ್ಪಪ್ರಜ್ಞರನ್ನು ಎಲ್ಲವನ್ನೂ ಬಲ್ಲ ಎಂದರೆ ಆತ್ಮನನ್ನು ಅರಿತಿರುವ[4] (ಜ್ಞಾನಿಯು) ತಾನೇ ಅಲುಗಾಡಿಸಬಾರದು. ಅವ

---

1. 'ಈ ಗುಣಗಳೂ ಅವಿದ್ಯಕವಾಗಿರುತ್ತವೆ ಎಂದೂ ಅರಿತುಕೊಂಡಿರುವದರಿಂದ' ಎಂದು ಇಲ್ಲಿ ಸೇರಿಸಿಕೊಳ್ಳಬೇಕು.

2. 'ಸಮ್ಮೂಢಾಃ' ಎಂಬ ಮಾತು ಭಾಷ್ಯದಲ್ಲಿದ್ದು ಬಿಟ್ಟುಹೋಗಿರಬಹುದೆಂದು ತೋರುತ್ತದೆ.

3. ಗುಣಗಳ ಸಂಗವನ್ನು ೧೪ನೆಯ ಅಧ್ಯಾಯದಲ್ಲಿ ವಿವರಿಸಿದೆ.

4. ಆತ್ಮನನ್ನು ಅರಿತವನೇ ಪೂರ್ಣಪ್ರಜ್ಞನು.

ರನ್ನು ಅಲುಗಾಡಿಸುವದೆಂದರೆ ಬುದ್ಧಿಯಲ್ಲಿ ಭೇದವನ್ನು[1] ಹುಟ್ಟಿಸುವದೇ; ಅದನ್ನು ಮಾಡಬಾರದು ಎಂದರ್ಥ.[2]

(ಭಾಷ್ಯ)

೧೯೫. ಕಥಂ ಪುನಃ ಕರ್ಮಣ್ಯಧಿಕೃತೇನ ಅಜ್ಞೇನ ಮುಮುಕ್ಷುಣಾ ಕರ್ಮ **ಕರ್ತವ್ಯಮ್ ಇತಿ? ಉಚ್ಯತೇ—**

(ಭಾಷ್ಯಾರ್ಥ)

ಹಾಗಾದರೆ ಕರ್ಮಕ್ಕೆ ಅಧಿಕಾರಿಯಾಗಿರುವ ಅಜ್ಞನಾದ ಮುಮುಕ್ಷುವು (ಕರ್ಮವನ್ನು) ಹೇಗೆ ಮಾಡಬೇಕು? ಎಂದರೆ (ಭಗವಂತನು) ಹೇಳುತ್ತಾನೆ:—

**ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।**
**ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥ ೩೦ ॥**

೩೦. ನನ್ನಲ್ಲಿ ಸರ್ವ ಕರ್ಮಗಳನ್ನೂ ಅಧ್ಯಾತ್ಮ ಚಿತ್ತದಿಂದ ಸಂನ್ಯಾಸ ಮಾಡಿ ನಿರಾಶೆಯಾಗಿ ನಿರ್ಮಮನಾಗಿ ವಿಗತಜ್ವರನಾಗಿ ಯುದ್ಧಮಾಡು

(ಭಾಷ್ಯ)

೧೯೬. ಮಯಿ ವಾಸುದೇವೇ ಪರಮೇಶ್ವರೇ ಸರ್ವಜ್ಞೇ ಸರ್ವಾತ್ಮನಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯ ನಿಕ್ಷಿಪ್ಯ ಅಧ್ಯಾತ್ಮಚೇತಸಾ ವಿವೇಕಬುದ್ಧ್ಯಾ "ಅಹಂ **ಕರ್ತಾ, ಈಶ್ವರಾಯ ಭೃತ್ಯವತ್** ಕರೋಮಿ" ಇತ್ಯನಯಾ ಬದ್ಧ್ಯಾ। ಕಿಂ ಚ ನಿರಾಶೀಃ ತ್ಯಕ್ತಾಶೀಃ ನಿರ್ಮಮಃ ಮಮಭಾವಶ್ಚ ನಿರ್ಗತಃ ಯಸ್ಯ ತವ ಸ ತ್ವಂ ನಿರ್ಮಮಃ ಭೂತ್ವಾ ಯುಧ್ಯಸ್ವ ವಿಗತಜ್ವರಃ ವಿಗತಸನ್ತಾಪಃ ವಿಗತಶೋಕಃ ಸನ್ ಇತ್ಯರ್ಥಃ ॥

(ಭಾಷ್ಯಾರ್ಥ)

ನನ್ನಲ್ಲಿ ಎಂದರೆ **ಪರಮೇಶ್ವರನೂ ಸರ್ವಜ್ಞನೂ ಸಕಲರ ಆತ್ಮನೂ ಆದ ಪರಮೇಶ್ವರನಾದ ವಾಸುದೇವನಲ್ಲಿ** ಕರ್ಮಗಳನ್ನೆಲ್ಲ **ಅಧ್ಯಾತ್ಮಚಿತ್ತದಿಂದ ಎಂದರೆ ವಿವೇಕಬುದ್ಧಿಯಿಂದ "ನಾನು ಕರ್ಮಗಳನ್ನು ಮಾಡುವವನು' ಈಶ್ವರನಿಗಾಗಿ ಆಳಿನಂತೆ ಕರ್ಮವನ್ನು ಮಾಡುತ್ತಿರುವೆನು" ಎಂಬೀ ಬುದ್ಧಿ**

---

1. ೩-೨೬ ನೋಡಿ.

2. ಕರ್ಮಕ್ಕೆ ಅಧಿಕಾರಿಯಾದವನಿಗೆ ನೀನು ಅಕರ್ತೃ ಎಂದು ಉಪದೇಶಮಾಡಿ. ಕರ್ಮವನ್ನು ಬಿಡಿಸಬಾರದು, ಅಜ್ಞನು ಕರ್ಮವನ್ನು ಬಿಡುವದಕ್ಕಿಂತ ಮಾಡುವದೇ ಉತ್ತಮ.

**ಯಿಂದ**[1] ಸರ್ವಕರ್ಮಗಳನ್ನೂ (ಪರಮೇಶ್ವರನಾದ ನನ್ನಲ್ಲಿ) ಸಂನ್ಯಾಸಮಾಡಿ ಎಂದರೆ ಇಟ್ಟು[2] ಮತ್ತೂ ಏನೆಂದರೆ ನಿರಾಶೆಯಾಗಿ ಎಂದರೆ ಆಶೆಗಳನ್ನು ಬಿಟ್ಟವನಾಗಿ ನಿರ್ಮಮನಾಗಿ ಎಂದರೆ ನನ್ನದೆಂಬ ಭಾವವನ್ನೂ ಕಳೆದುಕೊಂಡವನಾಗಿ ವಿಗತಜ್ವರನಾಗಿ ಎಂದರೆ ಯಾವ ಸಂತಾಪವೂ ಇಲ್ಲದವನಾಗಿ ಶೋಕವನ್ನು ಬಿಟ್ಟವನಾಗಿ ಯುದ್ಧವನ್ನು ಮಾಡು ಎಂದರ್ಥ.[3]

(ಭಾಷ್ಯ)

೧೯೭. ಯದೇತತ್ ಮಮ ಮತಂ ಕರ್ಮ ಕರ್ತವ್ಯಮಿತಿ ಸಪ್ರಮಾಣಮ್ ಉಕ್ತಮ್, ತತ್ ತಥಾ—

(ಭಾಷ್ಯಾರ್ಥ)

ಕರ್ಮವನ್ನು ಮಾಡಲೇಬೇಕೆಂದು ಪ್ರಮಾಣಸಹಿತವಾಗಿ ನಾನು ಯಾವದನ್ನು ಹೇಳಿದೆನೋ ಅದನ್ನು ಹಾಗೆ(ಯೇ)—

**ಯೇ ಮೇ ಮತಮಿದಂ ನಿತ್ಯಮನುತಿಷ್ಠನ್ತಿ ಮಾನವಾಃ ।**
**ಶ್ರದ್ಧಾವನ್ತೋಽನಸೂಯನ್ತೋ ಮುಚ್ಯನ್ತೇ ತೇಽಪಿ ಕರ್ಮಭಿಃ ॥**

೩೧. ಯಾವ ಜನರು ಶ್ರದ್ಧೆಯುಳ್ಳವರಾಗಿ ಅಸೂಯೆಯನ್ನು ಮಾಡದೆ ಯಾವಾಗಲೂ ಅನುಷ್ಠಾನಮಾಡುವರೋ ಅವರು ಕರ್ಮಗಳಿಂದ ಬಿಡುಗಡೆಯನ್ನು ಹೊಂದುವರು.

(ಭಾಷ್ಯ)

೧೯೮. ಯೇ ಮೇ ಮದೀಯಮ್ ಇದಂ ಮತಂ ನಿತ್ಯಮ್[4] ಅನುತಿಷ್ಠನ್ತಿ ಅನುವರ್ತನ್ತೇ ಮಾನವಾಃ ಮನುಷ್ಯಾಃ ಶ್ರದ್ಧಾವನ್ತಃ ಶ್ರದ್ದಧಾನಾಃ ಅನಸೂಯನ್ತಃ ಅಸೂಯಾಂ ಮಯಿ ಪರಮಗುರೌ ವಾಸುದೇವೇ ಅಕುರ್ವನ್ತಃ ಮುಚ್ಯನ್ತೇ ತೇಽಪಿ ಏವಂಭೂತಾಃ ಕರ್ಮಭಿಃ ಧರ್ಮಾಧರ್ಮಾಖ್ಯೈಃ ॥

---

1. ಕರ್ಮಯೋಗಿಗೆ ವಿವೇಕವೆಂದರೆ ಇದೇ; ಜ್ಞಾನಿಯ ವಿವೇಕವು ಅದ್ವಿತೀಯಾತ್ಮಜ್ಞಾನವು.

2. ಅಜ್ಞರಿಗೆ ಸಂಗತ್ಯಾಗವನ್ನು ಮಾಡುವದಕ್ಕೆ ಇದೇ ಉಪಾಯವು.

3. ಇಲ್ಲಿ ಯುದ್ಧವು ಅರ್ಜುನನಿಗೆ ಪ್ರಕೃತವಾಗಿದ್ದ ಸ್ಮಾರ್ತಕರ್ಮವು. ಅವರವರು ಅವರವರ ಕರ್ಮವನ್ನು ಈ ಭಾವನೆಯಿಂದ ಮಾಡಬೇಕು ಎಂದು ಭಾವ.

4. ಈ ಮಾತು ಅ|| ನಿ|| ಗು||ಗಳಲ್ಲಿ ಬಿಟ್ಟುಹೋಗಿದೆ.

(ಭಾಷ್ಯಾರ್ಥ)

ಯಾರು ಈ ನನ್ನ ಮತವನ್ನು ಯಾವಾಗಲೂ ಅನುಷ್ಠಾನಮಾಡುವರೋ, (ಯಾವ) ಮಾನವರು, ಮನುಷ್ಯರು ಶ್ರದ್ಧಾವಂತರಾಗಿ (ನನ್ನ ಮಾತಿನಲ್ಲಿ) ಶ್ರದ್ಧೆಯುಳ್ಳವರಾಗಿ ಅಸೂಯೆಯನ್ನು ಮಾಡದೆ **ಪರಮಗುರುವಾದ ವಾಸುದೇವನಾದ ನನ್ನಲ್ಲಿ** ಅಸೂಯೆಯನ್ನು ಮಾಡದೆ ಇರುವರೋ, ಹೀಗೆ ಇರುವ ಅವರೂ ಧರ್ಮಾಧರ್ಮಗಳೆಂಬ ಕರ್ಮಗಳಿಂದ ಬಿಡುಗಡೆಯನ್ನು ಹೊಂದುವರು.[1]

**ಯೇ ತ್ವೇತದಭ್ಯಸೂಯನ್ತೋ ನಾನುತಿಷ್ಠನ್ತಿ ಮೇ ಮತಮ್ ।**
**ಸರ್ವಜ್ಞಾನವಿಮೂಢಾಂಸ್ತಾನ್ವಿದ್ಧಿ ನಷ್ಟಾನಚೇತಸಃ ॥ ೩೨ ॥**

೩೨ ಆದರೆ ಯಾರು ಅಸೂಯೆಮಾಡುವವರಾಗಿ ಈ ನನ್ನ ಮತವನ್ನು ಅನುಷ್ಠಾನಮಾಡುವದಿಲ್ಲವೋ ಎಂದರೆ ಅನುಷ್ಠಾನಮಾಡದೆ ಇರುವರೋ ಯಾವ ಜ್ಞಾನವೂ ಇಲ್ಲದೆ ವಿಮೂಢರಾಗಿರುವ ಆ ಬುದ್ಧಿಹೀನರನ್ನು ಹಾಳಾದರೆಂದು ತಿಳಿದುಕೊ.

(ಭಾಷ್ಯ)

೧೯೯. ಯೇ ತು ತದ್ವಿಪರೀತಾಃ ಏತತ್(ಮೇ)[2] ಮಮ ಮತಮ್ ಅಭ್ಯಸೂಯನ್ತಃ ನಿನ್ದನ್ತಃ ನ ಅನುತಿಷ್ಠನ್ತಿ ನ ಅನುವರ್ತನ್ತೇ[3] ಸರ್ವೇಷು ಜ್ಞಾನೇಷು ವಿವಿಧಂ ಮೂಢಾಃ ತೇ (ಸರ್ವಜ್ಞಾನವಿಮೂಢಾಃ)[4] । ತಾನ್ ವಿದ್ಧಿ ನಷ್ಟಾನ್ ನಾಶಂ ಗತಾನ್ ಅಚೇತಸಃ ಅವಿವೇಕಿನಃ ॥

(ಭಾಷ್ಯಾರ್ಥ)

ಆದರೆ ಯಾರು ಇದಕ್ಕೆ ವಿರುದ್ಧವಾಗಿದ್ದುಕೊಂಡು ಈ ನನ್ನ ಮತವನ್ನು ಅಸೂಯೆಯನ್ನು ಮಾಡುತ್ತಾ ನಿಂದಿಸುತ್ತಾ ಅನುಷ್ಠಾನಮಾಡದೆ ಇರುವರೋ ಎಂದರೆ ಅನುಸರಿಸದೆ ಇರುವರೋ ಅವರು ಯಾವ ಜ್ಞಾನವೂ ಇಲ್ಲದೆ ವಿಮೂಢರಾಗಿರುವರು, ಬಗೆಬಗೆಯಿಂದ ಮೂಢರಾಗಿರುವರು ಬುದ್ಧಿಯಿಲ್ಲದ ಆ ಅವಿವೇಕಿಗಳನ್ನು ನಷ್ಟರಾದರೆಂದು ನಾಶವನ್ನು ಹೊಂದಿದವರೆಂದೇ ತಿಳಿದುಕೊ.

---

1. ಕರ್ಮಫಲವನ್ನು ಅನುಭವಿಸುವದಕ್ಕಾಗಿ ದೇಹಧಾರಣೆಮಾಡುವದಿಲ್ಲ.
2. ಈ ಮಾತು ಕೆಲವು ಪಾಠಗಳಲ್ಲಿ ಬಿಟ್ಟುಹೋಗಿದೆ.
3. ಇಲ್ಲಿ "ಮೇ ಮತಮ್" ಎಂಬ ಮಾತುಗಳು ಅ॥ ನಿ॥ ಗಳಲ್ಲಿ ಹೆಚ್ಚಾಗಿದೆ.
4. ಇದು ಮೈ॥ ಮ॥ ಗಳಲ್ಲಿ ಮಾತ್ರ ಇದೆ.

# ಜ್ಞಾನಿಯಾದವನು ಪ್ರಕೃತಿಯ ವಶನಾಗದೆ ಸ್ವಧರ್ಮವನ್ನು ಮಾಡಬೇಕು

(ಭಾಷ್ಯ)

೨೦೦. ಕಸ್ಮಾತ್ ಪುನಃ ಕಾರಣಾತ್ ತ್ವದೀಯಂ ಮತಂ ನಾನುತಿಷ್ಠನ್ತಿ[1] ಪರಧರ್ಮಾನ್ ಅನುತಿಷ್ಠನ್ತಿ, ಸ್ವಧರ್ಮಂ ಚ ನಾನುವರ್ತನ್ತೇ ? ತ್ವತ್ಪ್ರತಿಕೂಲಾಃ ಕಥಂ ನ ಬಿಭ್ಯತಿ ತ್ವಚ್ಛಾಸನಾತಿಕ್ರಮದೋಷಾತ್ ? ತತ್ರಾಹ—

(ಭಾಷ್ಯಾರ್ಥ)

ಹಾಗಾದರೆ ನಿನ್ನ ಮತವನ್ನು ಯಾವ ಕಾರಣದಿಂದ ಅನುಸರಿಸುವದಿಲ್ಲ? (ಅವರು) ಪರಧರ್ಮಗಳನ್ನು ಅನುಸರಿಸುವದೂ ಸ್ವಧರ್ಮವನ್ನು ಅನುಸರಿಸದಿರುವದೂ ಏಕೆ? ನಿನಗೆ ವಿರುದ್ಧವಾಗಿ (ಆಚರಿಸುತ್ತಿರುವ ಅವರು) ನಿನ್ನ ಅಪ್ಪಣೆಯನ್ನು ಮೀರಿದ ತಪ್ಪಿಗೆ ಗುರಿಯಾದೇವೆಂದು ಹೆದರುವದಿಲ್ಲವೇಕೆ? ಎಂದರೆ ಅದಕ್ಕೆ ಹೇಳುತ್ತಾನೆ —

**ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।**
**ಪ್ರಕೃತಿಂ ಯಾನ್ತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ ॥ ೩೩ ॥**

೩೩. ತಿಳಿದವನುಕೂಡ ತನ್ನ ಪ್ರಕೃತಿಗೆ ಸಮನಾಗಿ ವರ್ತಿಸುತ್ತಾನೆ. ಭೂತಗಳು ಪ್ರಕೃತಿಯನ್ನೇ ಹೊಂದುತ್ತವೆ, ನಿಗ್ರಹವು ಏನು ಮಾಡೀತು ?

(ಭಾಷ್ಯ)

೨೦೧. ಸದೃಶಮ್ ಅನುರೂಪಂ ಚೇಷ್ಟತೇ ಚೇಷ್ಟಾಂ ಕರೋತಿ[2] । ಕಸ್ಯ ? ಸ್ವಸ್ಯಾಃ ಸ್ವಕೀಯಾಯಾಃ ಪ್ರಕೃತೇಃ । ಪ್ರಕೃತಿರ್ನಾಮ ಪೂರ್ವಕೃತಧರ್ಮಾಧರ್ಮಾದಿ ಸಂಸ್ಕಾರಃ ವರ್ತಮಾನಜನ್ಮಾದೌ ಅಭಿವ್ಯಕ್ತಃ ಪ್ರಕೃತಿಃ[3] । ತಸ್ಯಾಃ ಸದೃಶಮೇವ ಸರ್ವೋ ಜನ್ತುಃ ಜ್ಞಾನವಾನಪಿ ಚೇಷ್ಟತೇ ಕಿಂ ಪುನರ್ಮೂರ್ಖಃ । ತಸ್ಮಾತ್ ಪ್ರಕೃತಿಂ

---

1. " ನಾನುತಿಷ್ಠನ್ತಃ " ಮೈ॥ ಮು॥

2. " ಚೇಷ್ಟಾಂ ಕರೋತಿ " ಎಂಬುದು ಆ॥ ನಿ॥ ಗು॥ ಗಳಲ್ಲಿಲ್ಲ

3. ಈ ಪಾಠವು ಎಲ್ಲಾ ಮುದ್ರಿತಪುಸ್ತಕಗಳಲ್ಲಿಯೂ ಇದೆ. ಇಲ್ಲಿ ' ಆದಿ ' ಎಂಬ ಮಾತು ಬರೆದವರ ಕೈತಪ್ಪಿನಿಂದ ಬಿದ್ದಿರಬೇಕು. ' ಪ್ರಕೃತಿರ್ನಾಮ ' ' ಸಾ ಪ್ರಕೃತಿಃ ' ಎಂಬ ಎರಡರಲ್ಲಿ ಒಂದೇ ಇದ್ದರೂ ಸಾಗುತ್ತದೆ.

ಯಾನ್ತಿ ಅನುಗಚ್ಛನ್ತಿ ಭೂತಾನಿ ಪ್ರಾಣಿನಃ । ನಿಗ್ರಹಃ ನಿಷೇಧರೂಪಃ ಕಿಂ ಕರಿಷ್ಯತಿ ಮಮ ವಾ ಅನ್ಯಸ್ಯ ವಾ ?[1]

(ಭಾಷ್ಯಾರ್ಥ)

ಸಮನಾಗಿಯೇ ಅನುರೂಪವಾಗಿಯೇ ವರ್ತಿಸುತ್ತಾನೆ, ಕೆಲಸವನ್ನು ಮಾಡುತ್ತಾನೆ. ಯಾವದಕ್ಕೆ (ಅನುರೂಪವಾಗಿ)? ಎಂದರೆ ತನ್ನ ಪ್ರಕೃತಿಗೆ **ಪ್ರಕೃತಿಯೆಂದರೆ ಹಿಂದಿನ (ಜನ್ಮ)ದಲ್ಲಿ ಮಾಡಿರುವ ಧರ್ಮಾಧರ್ಮಗಳ[2] ಸಂಸ್ಕಾರವು.** ಅದೇ ಪ್ರಕೃತಿಯು. ಆ (ಪ್ರಕೃತಿಗೆ) ಅನುಗುಣವಾಗಿಯೇ ಪ್ರತಿಯೊಬ್ಬ ಜೀವನೂ ತಿಳಿದವನುಕೂಡ ವರ್ತಿಸುತ್ತಾನೆ, ಇನ್ನು ಮೂಢನು (ಪ್ರಕೃತಿಗೆ ಅನುಗುಣವಾಗಿ ವರ್ತಿಸುತ್ತಾನೆಂದು) ಹೇಳತಕ್ಕದ್ದೇನಿದೆ? ಆದ್ದರಿಂದ ಭೂತಗಳು ಎಂದರೆ ಪ್ರಾಣಿಗಳು ಪ್ರಕೃತಿಯನ್ನೇ (ತಮ್ಮ ತಮ್ಮ) ಪ್ರಕೃತಿಯನ್ನೇ ಅನುಸರಿಸುವವು ನಾನಾಗಲಿ ಮತ್ತೊಬ್ಬನಾಗಲಿ ಹೀಗೆ ಮಾಡಬೇಡಿರೆಂದು ತಡೆಯುವದು ಏನು ಮಾಡೀತು ?

(ಭಾಷ್ಯ)

೨೧೨. ಯದಿ ಸರ್ವೋ ಜನ್ತುಃ ಆತ್ಮನಃ ಸದೃಶಮೇವ ಚೇಷ್ಟತೇ[3] ನ ಚ ಪ್ರಕೃತಿಶೂನ್ಯಃ ಕಶ್ಚಿದಸ್ತಿ, ತತಃ ಪುರುಷಕಾರಸ್ಯ ವಿಷಯಾನುಪಪತ್ತೇಃ ಶಾಸ್ತ್ರಾನರ್ಥಕ್ಯಪ್ರಾಪ್ತೌ ಇದಮ್ ಉಚ್ಯತೇ—

(ಭಾಷ್ಯಾರ್ಥ)

ಪ್ರತಿಯೊಬ್ಬ ಜೀವನೂ ತನ್ನ ಪ್ರಕೃತಿಗೆ ತಕ್ಕಂತೆಯೇ ಕೆಲಸಮಾಡುತ್ತಾನಾದರೆ, ಪ್ರಕೃತಿಯೇ ಇಲ್ಲದವನು ಒಬ್ಬನೂ ಇಲ್ಲದ್ದರಿಂದ ಪೌರುಷಕ್ಕೆ ವಿಷಯವೇ ಇಲ್ಲದಂತಾಗಿ ಶಾಸ್ತ್ರವು ವ್ಯರ್ಥವೆಂದಾಗುವದಲ್ಲ!–ಎಂದರೆ (ಭಗವಂತನು) ಈ (ಉತ್ತರ)ವನ್ನು ಹೇಳುತ್ತಾನೆ –

**ಇನ್ದ್ರಿಯಸ್ಯೇನ್ದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ ।**
**ತಯೋರ್ನ ವಶಮಾಗಚ್ಛೇತ್ ತೌ ಹ್ಯಸ್ಯ ಪರಿಪನ್ಥಿನೌ ॥ ೩೪ ॥**

---

1. " ದುರ್ನಿಗ್ರಹಾ ಪ್ರಕೃತಿಃ ಇತಿ ವಾಕ್ಯಶೇಷಃ " ಎಂದು ಮ|| ಮೈ|| ಗಳಲಿ ಹೆಚ್ಚಾಗಿದೆ.

2. ಅನುವಾದದಲ್ಲಿ ' ಆದಿ ' ಎಂಬ ಮಾತನ್ನು ಬಿಟ್ಟುಬಿಟ್ಟಿದೆ.

3. ' ಯದಿ ಸರ್ವೇ ಆತ್ಮನಃ ಪ್ರಕೃತಿಸದೃಶಮೇವ ಚೇಷ್ಟನ್ತೇ ' ಮ||ಮೈ||

೩೪. ಇಂದ್ರಿಯ ಇಂದ್ರಿಯದ ಅರ್ಥದಲ್ಲಿ ರಾಗದ್ವೇಷಗಳು ವ್ಯವಸ್ಥಿತವಾಗಿರುವವು. ಇವೆರಡಕ್ಕೂ ವಶವನ್ನು ಹೊಂದಬಾರದು, ಏಕೆಂದರೆ ಇವೇ ಇವನಿಗೆ ಶತ್ರುಗಳು.

(ಭಾಷ್ಯ)

೨೦೩ ಇನ್ದ್ರಿಯಸ್ಯೇನ್ದ್ರಿಯಸ್ಯ [1] ಸರ್ವೇನ್ದ್ರಿಯಾಣಾಮ್ ಅರ್ಥೇ ಶಬ್ದಾದಿವಿಷಯೇ ಇಷ್ಟೇ ರಾಗಃ ಅನಿಷ್ಟೇ ದ್ವೇಷಃ ಇತಿ ಏವಂ ಪ್ರತೀನ್ದ್ರಿಯಾರ್ಥಂ ರಾಗದ್ವೇಷೌ ಅವಶ್ಯಂಭಾವಿನೌ । ತತ್ರ ಅಯಂ ಪುರುಷಕಾರಸ್ಯ ಶಾಸ್ತ್ರಾರ್ಥಸ್ಯ ಚ [2] ವಿಷಯಃ ಉಚ್ಯತೇ । ಶಾಸ್ತ್ರಾರ್ಥೇ ಪ್ರವೃತ್ತಃ ಪೂರ್ವಮೇವ ರಾಗದ್ವೇಷಯೋಃ ವಶಂ ನಾಗಚ್ಛೇತ್ । ಯಾ ಹಿ ಪುರುಷಸ್ಯ ಪ್ರಕೃತಿಃ ಸಾ ರಾಗದ್ವೇಷಪುರಸ್ಸರೈವ ಸ್ವಕಾರ್ಯೇ ಪುರುಷಂ ಪ್ರವರ್ತಯತಿ । ತದಾ ಸ್ವಧರ್ಮಪರಿತ್ಯಾಗಃ ಪರಧರ್ಮಾನುಷ್ಠಾನಂ ಚ ಭವತಿ । ಯದಾ ಪುನಃ ರಾಗದ್ವೇಷೌ ತತ್ಪ್ರತಿಪಕ್ಷೇಣ ನಿಯಮಯತಿ ತದಾ ಶಾಸ್ತ್ರದೃಷ್ಟಿರೇವ ಪುರುಷೋ ಭವತಿ ನ ಪ್ರಕೃತಿವಶಃ । ತಸ್ಮಾತ್ ತಯೋಃ ರಾಗದ್ವೇಷಯೋಃ ವಶಂ ನಾಗಚ್ಛೇತ್ । ಯತಃ ತೌ ಹಿ ಅಸ್ಯ ಪುರುಷಸ್ಯ ಪರಿಪನ್ಥಿನೌ ಶ್ರೇಯೋಮಾರ್ಗಸ್ಯ ವಿಘ್ನಕರ್ತಾರೌ ತಸ್ಕರಾವಿವ ಪಥಿ [3] ಇತ್ಯರ್ಥಃ ॥

(ಭಾಷ್ಯಾರ್ಥ)

ಇಂದ್ರಿಯದ ಇಂದ್ರಿಯದ ಎಂದರೆ ಎಲ್ಲಾ ಇಂದ್ರಿಯಗಳ ಅರ್ಥದಲ್ಲಿ ಎಂದರೆ ಶಬ್ದವೇ ಮುಂತಾದ ವಿಷಯದಲ್ಲಿ–ಬೇಕಾದದ್ದಾದರೆ ರಾಗವು, ಬೇಡದ್ದಾದರೆ ದ್ವೇಷವು ಎಂದೀ ಪರಿಯಲ್ಲಿ ಪ್ರತಿಯೊಂದು ಇಂದ್ರಿಯಾರ್ಥದಲ್ಲಿಯೂ–ರಾಗದ್ವೇಷಗಳು ಅವಶ್ಯವಾಗಿ (ವ್ಯವಸ್ಥಿತವಾಗಿರುವವು), ಆಗಿಯೇ ತೀರುವವು. ಹೀಗಿರುವಲ್ಲಿ **ಪುರುಷಪ್ರಯತ್ನಕ್ಕೂ ಶಾಸ್ತ್ರಕ್ಕೂ ವಿಷಯ [4] (ವೇನೆಂಬುದನ್ನು) ಹೇಳುತ್ತೇನೆ (ಕೇಳು)** ಶಾಸ್ತ್ರದ ಅರ್ಥವನ್ನು ತಿಳಿದು ನಡೆಯಬೇಕೆಂದಿರುವವನು ಮೊದಲೇ ರಾಗದ್ವೇಷಗಳನ್ನು (ಗೆದ್ದು ಅವಕ್ಕೆ) ವಶನಾಗದೆ ಇರಬೇಕು. ಏಕೆಂದರೆ **ಪುರುಷನ ಪ್ರಕೃತಿಯೆಂಬುದು ರಾಗದ್ವೇಷಗಳನ್ನು ಮುಂದುಮಾಡಿಕೊಂಡೇ ಮನುಷ್ಯ**

---

1. ' ಅರ್ಥೇ ' ಎಂದು ಹೆಚ್ಚಾಗಿ ಪಾ॥

2. ' ಚ ' ಎಂಬುದು ಮೈ॥ಮ॥ ಗಳಲ್ಲಿಲ್ಲ, ಇರುವ ಪಾಠವೇ ಒಳ್ಳೆಯದು.

3. ' ಪಥಿ ' ಎಂದು ಆ॥ಗು॥ ಗಳಲ್ಲಿಲ್ಲ; ಮ॥ದಲ್ಲಿ ' ಪಥಃ ' ಎಂದಿದೆ.

4. ರಾಗದ್ವೇಷವನ್ನು ಗೆಲ್ಲಬೇಕೆಂಬುದನ್ನೇ ಶಾಸ್ತ್ರಗಳು ಬೋಧಿಸುವವು; ಅದನ್ನೇ ಸಾಧಕನು ಮಾಡಬೇಕಾದದ್ದು. ಹಾಗೆ ಮಾಡುವದು ಅವನ ಕೈಯಲ್ಲಿದೆ.

**ನನ್ನು ತನ್ನ ಕಾರ್ಯದಲ್ಲಿ ತೊಡಗಿಸುವದು.** ಆಗ ಅವನು ತನ್ನ ಧರ್ಮವನ್ನು ಬಿಡುವನು ಮತ್ತು ಪರಧರ್ಮದ ಅನುಷ್ಠಾನವನ್ನು ಮಾಡುವನು[1] ಆದರೆ **ಯಾವಾಗ ರಾಗದ್ವೇಷಗಳನ್ನು ಅವುಗಳ ಪ್ರತಿಪಕ್ಷ (ಭಾವನೆ)ಯಿಂದ ವಶ ಮಾಡಿಕೊಳ್ಳುವನೋ ಆಗ ಮನುಷ್ಯನು ಶಾಸ್ತ್ರದೃಷ್ಟಿಯುಳ್ಳವನೇ ಆಗುವನು, ಪ್ರಕೃತಿಗೆ ವಶನಾಗುವದಿಲ್ಲ.** ಆದ್ದರಿಂದ ಆ ರಾಗದ್ವೇಷಗಳಿಗೆ ವಶನಾಗಬಾರದು ಏಕೆಂದರೆ ಇವೆರಡೇ ಇವನಿಗೆ ಶತ್ರುಗಳು, ಎಂದರೆ ದಾರಿಯಲ್ಲಿ ಅಡ್ಡಗಟ್ಟುವ ಕಳ್ಳರ ಹಾಗೆ ಶ್ರೇಯೋಮಾರ್ಗಕ್ಕೆ ಅಡ್ಡಿ ಮಾಡುತ್ತವೆ ಎಂದರ್ಥ.

(ಭಾಷ್ಯ)

೨೧೪ ತತ್ರ ರಾಗದ್ವೇಷಪ್ರಯುಕ್ತೋ ಮನ್ಯತೇ ಶಾಸ್ತ್ರಾರ್ಥಮಪಿ ಅನ್ಯಥಾ ಪರಧರ್ಮೋಽಪಿ ಧರ್ಮತ್ವಾತ್ ಅನುಷ್ಠೇಯ ಏವ ಇತಿ । ತತ್ ಅಸತ್—

(ಭಾಷ್ಯಾರ್ಥ)

ಇಲ್ಲಿ ರಾಗದ್ವೇಷಗಳ ಪ್ರೇರಣೆಗೆ ಒಳಪಟ್ಟಾತನು ಶಾಸ್ತ್ರಾರ್ಥವನ್ನು ಕೂಡ ತಪ್ಪಾಗಿ ತಿಳಿದುಕೊಂಡು ಪರಧರ್ಮವೂ ಧರ್ಮವೇ ಆಗಿರುವದರಿಂದ ಅದನ್ನು ಮಾಡತಕ್ಕದ್ದೇ ಎಂದು (ಯೋಚಿಸಬಹುದು ಆದರೆ) ಅದು ಸರಿಯಲ್ಲ. (ಏಕೆಂದರೆ)—

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।**
**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥ ೩೫ ॥**

೩೫. ಸ್ವಧರ್ಮವು ವಿಗುಣವಾಗಿದ್ದರೂ ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತ ಒಳ್ಳೆಯದು. ಸ್ವಧರ್ಮದಲ್ಲಿ ನಿಧನವಾದರೂ ಲೇಸು, ಪರಧರ್ಮವು ಭಯಾವಹವಾಗಿರುವದು.

(ಭಾಷ್ಯ)

೨೧೫. ಶ್ರೇಯಾನ್ ಪ್ರಶಸ್ಯತರಃ ಸ್ವೋ ಧರ್ಮಃ ಸ್ವಧರ್ಮಃ ವಿಗುಣೋಽಪಿ ವಿಗತಗುಣೋಽಪಿ ಅನುಷ್ಠೀಯಮಾನಃ ಪರಧರ್ಮಾತ್ ಸ್ವನುಷ್ಠಿತಾತ್ ಸಾದ್ಗುಣ್ಯೇನ ಸಂಪಾದಿತಾತ್ ಅಪಿ । ಸ್ವಧರ್ಮೇ ಸ್ಥಿತಸ್ಯ ನಿಧನಂ ಮರಣಮಪಿ ಶ್ರೇಯಃ

---

1. ಅಜ್ಞಾನಿಗೆ ರಾಗದ್ವೇಷಗಳು ಅವಶ್ಯವಾಗಿ ಆಗುವದರಿಂದ ಅವನು ಪರಧರ್ಮಕ್ಕೆ ಕೈಹಾಕುವದು ಸ್ವಾಭಾವಿಕ.

ಪರಧರ್ಮಸ್ಥಿತಸ್ಯ ಜೀವಿತಾತ್ । ಕಸ್ಮಾತ್ ? ಪರಧರ್ಮಃ ಭಯಾವಹಃ ನರಕಾದಿ ಲಕ್ಷಣಂ ಭಯಮ್ ಆವಹತಿ ಯತಃ [1] ॥

(ಭಾಷ್ಯಾರ್ಥ)

ಸ್ವಧರ್ಮವು ಎಂದರೆ ತನ್ನ ಧರ್ಮವು ವಿಗುಣವಾಗಿದ್ದರೂ ಗುಣವಿಲ್ಲದೆ ಮಾಡಿದ್ದಾದರೂ (ಚಿಂತೆಯಿಲ್ಲ), ಮತ್ತೊಬ್ಬನ ಧರ್ಮವನ್ನು ಚೆನ್ನಾಗಿ ಮಾಡಿದ್ದರೂ ಸರಿಯಾದ ಗುಣಗಳಿರುವಂತೆ ಮಾಡಿದ್ದರೂ (ಅದ)ಕ್ಕಿಂತ (ಸ್ವಧರ್ಮವೇ) ಒಳ್ಳೆಯದು, ಹೊಗಳತಕ್ಕದ್ದು. ತನ್ನ ಧರ್ಮದಲ್ಲಿಯೇ ಇರುವವನ ನಿಧನವೂ ಸಾವಾದರೂ ಪರಧರ್ಮದಲ್ಲಿರುವವನು ಬದುಕಿರುವದಕ್ಕಿಂತ ಲೇಸು ಏಕೆಂದರೆ ಮತ್ತೊಬ್ಬನ ಧರ್ಮವೆಂಬುದು ಭಯಾವಹ(ವಾಗಿರುವದು), ನರಕವೇ ಮುಂತಾದ ಅಂಜಿಕೆಯನ್ನು ತಂದೊಡ್ಡತಕ್ಕಂಥದ್ದು.

## ಕಾಮವೇ ಅಧರ್ಮಕ್ಕೆ ಮೂಲ

(ಭಾಷ್ಯ)

೨೦೬. ಯದ್ಯಪಿ ಅನರ್ಥಮೂಲಂ "ಧ್ಯಾಯತೋ ವಿಷಯಾನ್ ಪುಂಸಃ [2]" (೨-೬೨), "ರಾಗದ್ವೇಷೌ ಹ್ಯಸ್ಯ ಪರಿಪನ್ಥಿನೌ" (೩-೩೪) ಇತಿ ಚ ಉಕ್ತಮ್, ವಿಕ್ಷಿಪ್ತಮ್ ಅನವಧಾರಿತಂ ಚ ತದುಕ್ತಮ್ [3] । ತತ್ ಸಂಕ್ಷಿಪ್ತಂ ನಿಶ್ಚಿತಂ ಚ 'ಇದಮೇವ' ಇತಿ ಜ್ಞಾತುಮಿಚ್ಛನ್ ಅರ್ಜುನ ಉವಾಚ । ಜ್ಞಾತೇ ಹಿ ತಸ್ಮಿನ್ ತದುಚ್ಛೇದಾಯ ಯತ್ನಂ ಕುರ್ಯಾಮ್ ಇತಿ—

(ಭಾಷ್ಯಾರ್ಥ)

"ಧ್ಯಾಯತೋ ವಿಷಯಾನ್ ಪುಂಸಃ" (೨-೬೨) "(ವಿಷಯಗಳನ್ನೇ ಧ್ಯಾನಿಸುತ್ತಿರುವ ಪುರುಷನಿಗೆ)", "ರಾಗದ್ವೇಷಗಳೇ ಇವನಿಗೆ ಶತ್ರುಗಳು"[1] (೩-೩೪) ಎಂಬ (ಶ್ಲೋಕಗಳ)ಲ್ಲಿ ಅನರ್ಥದ ಮೂಲವು (ಕಾಮ)ವೆಂದು ಹೇಳಿಯೇ ಇದೆಯಾದರೂ ಬೇರೆಬೇರೆಯ ಕಡೆಗಳಲ್ಲಿ (ಅದನ್ನೇ) ಒತ್ತದೆ ಆ (ಮಾತನ್ನು) ಹೇಳಿರುತ್ತದೆ.[4] ಆದ್ದರಿಂದ (ಒಕ್ಕಡೆಯಲ್ಲಿ) ಇದೇ ಎಂದು ನಿಶ್ಚಯಿಸಿ ತಿಳಿದುಕೊಳ್ಳಬೇಕೆಂಬ ಇಚ್ಛೆ

---

1 'ಇತಿ' ಮೈ॥ ಮು॥

2 ಮು॥ ಮೈ॥ ಗಳಲ್ಲಿ ಈ ಮಾತಿಲ್ಲ

3. 'ಯದುಕ್ತಮ್' ಮೈ॥ ಮು॥

4. ಆದ್ದರಿಂದ ಇನ್ನೂ ನಿಶ್ಚಿತವಾಗಿ ಅರ್ಜುನನಿಗೆ ತಿಳಿಯದೆ ಇದೆ.

ಯಿಂದ ಅರ್ಜುನನು (ಈ ಮುಂದಿನ ಪ್ರಶ್ನೆಯನ್ನು) ಕೇಳಿರುತ್ತಾನೆ. ಆ (ಮೂಲ ಕಾರಣ) ವನ್ನು ತಿಳಿದುಕೊಂಡರೇ ಅಲ್ಲವೆ, ನಾನು ಅದರ ನಾಶಕ್ಕಾಗಿ ಪ್ರಯತ್ನ ಮಾಡ ಬಹುದು ?- ಎಂಬುದು (ಅವನ ಪ್ರಶ್ನೆಯ ಉದ್ದೇಶವು).

**ಅರ್ಜುನ ಉವಾಚ—**

**ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।**
**ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥ ೩೬ ॥**

೩೬. ಅರ್ಜುನನಿಂತೆಂದನು : ಹಾಗಾದರೆ, ಎಲೈ ವಾರ್ಷ್ಣೇಯನೆ, ಈ ಪುರುಷನು (ತನಗೆ) ಇಚ್ಛೆಯಿಲ್ಲದಿದ್ದರೂ ಪರರಿಂದ ಪ್ರೇರಿತನಾಗಿ ಬಲಾತ್ಕಾರದಿಂದ ಕಟ್ಟು ಮಾಡಲ್ಪಟ್ಟವನಂತೆ ಪಾಪವನ್ನು ಮಾಡುತ್ತಿರುವನು ?

(ಭಾಷ್ಯ)

೨೦೭. ಅಥ ಕೇನ ಹೇತುಭೂತೇನ ಪ್ರಯುಕ್ತಃ ಸನ್ ರಾಜ್ಞಾ ಇವ ಭೃತ್ಯ ಅಯಂ ಪಾಪಂ ಕರ್ಮ ಚರತಿ ಆಚರತಿ ಪೂರುಷಃ ಸ್ವಯಮ್ ಅನಿಚ್ಛನ್ನಪಿ ಹೇ ವಾರ್ಷ್ಣೇಯ, ವೃಷ್ಣಿಕುಲಪ್ರಸೂತ ಬಲಾದಿವ ನಿಯೋಜಿತಃ ರಾಜ್ಞಾ ಇವ ಇತ್ಯುಕ್ತೋ ದೃಷ್ಟಾನ್ತಃ ॥

(ಭಾಷ್ಯಾರ್ಥ)

ಹಾಗಾದರೆ ಅರಸನಿಂದ ಕಟ್ಟುವಡೆದ (ಬಿಟ್ಟಿಯ) ಆಳಿನಂತೆ ಈ ಪುರುಷನು ಯಾವ ಕಾರಣದಿಂದ ಪ್ರೇರಿತನಾಗಿ ಪಾಪಕರ್ಮವನ್ನು ಮಾಡುತ್ತಿರುವನು, ಆಚರಿಸುತ್ತಿರುವನು ? ತಾನೇನೋ ಹಾಗೆ ಮಾಡಬೇಕೆಂದು ಬಯಸದೆ ಇದ್ದರೂ, ಎಲೈ ವಾರ್ಷ್ಣೇಯನೆ, ವೃಷ್ಣಿಕುಲದಲ್ಲಿ ಹುಟ್ಟಿದಾತನೆ, ಮೇಲೆ ಹೇಳಿದ ದೃಷ್ಟಾಂತದಂತೆ ಬಲಾತ್ಕಾರದಿಂದ ಅರಸನಿಂದ ಕಟ್ಟುವಡೆದವನಂತೆ (ಪಾಪವನ್ನು ಮಾಡುತ್ತಿರುವನಲ್ಲ) !

(ಭಾಷ್ಯ)

೨೦೮. ಶೃಣು [1] ತಂ ವೈರಿಣಂ ಸರ್ವಾನರ್ಥಕರಂ ಯಂ ತ್ವಂ ಪೃಚ್ಛಸಿ ಇತಿ ಶ್ರೀ ಭಗವಾನ್ ಉವಾಚ—

---

1. 'ತ್ವಮ್' ಎಂದು ಆ॥ ನಿ॥ ಪಾಠಗಳಲ್ಲಿ ಹೆಚ್ಚು.

(ಭಾಷ್ಯಾರ್ಥ)

ನೀನು ಕೇಳುತ್ತಿರುವ, ಸಕಲ ಅನರ್ಥಗಳಿಗೂ ಕಾರಣನಾಗಿರುವ ಆ ವೈರಿಯನ್ನು (ಹೇಳುತ್ತೇನೆ) ಕೇಳು ಎಂದು ಭಗವಂತನಿಂತೆಂದನು :—

**ಶ್ರೀ ಭಗವಾನುವಾಚ—**

**ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।**
**ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್ ॥ ೩೭ ॥**

೩೭. ಇದೇ ಕಾಮವು, ಇದೇ ಕ್ರೋಧವು; ಇದು ರಜೋಗುಣದಿಂದ ಹುಟ್ಟಿದ್ದು; ಎಷ್ಟಾದರೂ ತಿನ್ನುವದು, ಮಹಾಪಾಪಿಯು. ಇದೇ ಇಲ್ಲಿ ವೈರಿಯೆಂದು ತಿಳಿ.

(ಭಾಷ್ಯ)

೨೧೯. "ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ । ವೈರಾಗ್ಯಸ್ಯಾಥ ಮೋಕ್ಷಸ್ಯ[1] ಷಣ್ಣಾಂ ಭಗ ಇತೀರಣಾ"[2] (ವಿ. ಪು. ೬-೫-೭೪) ಐಶ್ವರ್ಯಾದಿಷಟ್ಕಂ ಯಸ್ಮಿನ್ ವಾಸುದೇವೇ ನಿತ್ಯಮ್ ಅಪ್ರತಿಬದ್ಧತ್ವೇನ[3] ಸಾಮಸ್ತ್ಯೇನ ವರ್ತತೇ, "ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್ । ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ॥" (ವಿ. ಪು. ೬-೫-೭೮) ಉತ್ಪತ್ತ್ಯಾದಿವಿಷಯಂ ಚ ವಿಜ್ಞಾನಂ ಯಸ್ಯ ಸ ವಾಸುದೇವಃ ವಾಚ್ಯೋ ಭಗವಾನ್ ಇತಿ॥

(ಭಾಷ್ಯಾರ್ಥ)

ಸಂಪೂರ್ಣವಾದ ಒಡೆತನವು, ಧರ್ಮವು, ಕೀರ್ತಿಯು, ಸಂಪತ್ತು, ವೈರಾಗ್ಯವು ಮೋಕ್ಷವು– ಈ ಆರು ಗುಣಗಳಿಗೆ ಭಗ ಎಂದು ಹೆಸರು (ಎಂಬ ವಿಷ್ಣುಪುರಾಣೋಕ್ತಿಯಂತೆ) ಐಶ್ವರ್ಯವೇ ಮುಂತಾದ ಆರು ಗುಣಗಳು ಸ್ವಲ್ಪವೂ ಅಡ್ಡಿಯಿಲ್ಲದೆ ಯಾವಾಗಲೂ ಯಾವ **ವಾಸುದೇವ**ನಲ್ಲಿರುವವೋ, ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್ । ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥" (ವಿ ಪು ೬-೫-೭೮) ಪ್ರಾಣಿಗಳ ಉತ್ಪತ್ತಿಯನ್ನೂ ಪ್ರಲಯವನ್ನೂ ಆಗು

---

1. ಜ್ಞಾನವೈರಾಗ್ಯಯೋಶ್ಚೈವ ಎಂದು ಮುದ್ರಿತ ವಿ ಪು. ಪಾಠ.
2. "ಇತೀಙ್ಗನಾ" ಆ॥ ನಿ॥
3. "ಅಪ್ರತಿಬನ್ಧೇನ" ಮ॥ ಮೈ ॥

ಹೋಗುಗಳನ್ನೂ ವಿದ್ಯೆಯನ್ನೂ ಅವಿದ್ಯೆಯನ್ನೂ ಬಲ್ಲವನಿಗೆ ಭಗವಂತನು ಎಂಬ ಹೆಸರು-ಎಂಬ (ವಚನದಂತೆ) ಉತ್ಪತ್ತಿಯೇ ಮುಂತಾದದ್ದರ ವಿಷಯದ ಪೂರ್ಣ ಜ್ಞಾನವು ಯಾವಾತನಿಗೆ ಇರುವದೋ ಆ ವಾಸುದೇವನಿಗೆ **ಭಗವಂತ**ನೆಂದು ಹೆಸರು.[1]

(ಭಾಷ್ಯ)

೨೧೦. **ಕಾಮಃ** ಏಷಃ ಸರ್ವಲೋಕಶತ್ರುಃ ಯನ್ನಿಮಿತ್ತಾ ಸರ್ವಾನರ್ಥ ಪ್ರಾಪ್ತಿಃ ಪ್ರಾಣಿನಾಮ್ । ಸ ಏಷ ಕಾಮಃ ಪ್ರತಿಹತಃ ಕೇನಚಿತ್ ಕ್ರೋಧತ್ವೇನ ಪರಿಣಮತೇ । ಅತಃ ಕ್ರೋಧೋಽಪಿ ಏಷ ಏವ । ರಜೋಗುಣಸಮುದ್ಭವಃ ರಜಶ್ಚ ತತ್ ಗುಣಶ್ಚ ರಜೋಗುಣಃ ಸಮುದ್ಭವಃ ಯಸ್ಯ ಸ ಕಾಮಃ ರಜೋಗುಣ ಸಮುದ್ಭವಃ । ರಜೋಗುಣಸ್ಯ ವಾ ಸಮುದ್ಭವಃ । ಕಾಮೋ ಹಿ ಉದ್ಭೂತಃ ರಜಃ ಪ್ರವರ್ತಯನ್ ಪುರುಷಂ ಪ್ರವರ್ತಯತಿ " ತೃಷ್ಣಯಾ ಹಿ ಅಹಂ ಕಾರಿತಃ " ಇತಿ ದುಃಖಿತಾನಾಂ [2] ರಜಃಕಾರ್ಯೇ ಸೇವಾದೌ ಪ್ರವೃತ್ತಾನಾಂ ಪ್ರಲಾಪಃ ಶ್ರೂಯತೇ । ಮಹಾಶನಃ ಮಹತ್ ಅಶನಂ ಯಸ್ಯ ಇತಿ ಮಹಾಶನಃ । ಅತ ಏವ ಮಹಾಪಾಪ್ಮಾ ಕಾಮೇನ ಹಿ ಪ್ರೇರಿತಃ ಜನ್ತುಃ ಪಾಪಂ ಕರೋತಿ । ಅತಃ ವಿದ್ಧಿ ಏನಂ ಕಾಮಮ್ ಇಹ ಸಂಸಾರೇ ವೈರಿಣಮ್ ॥

(ಭಾಷ್ಯಾರ್ಥ)

(ಆ ವೈರಿಯು ಯಾವದೆಂದರೆ) ಇದೇ ಕಾಮವು (ಇದೇ) ಸಕಲ ಜನರಿಗೂ ಶತ್ರುವು, ಇದರ ನಿಮಿತ್ತದಿಂದಲೇ ಪ್ರಾಣಿಗಳಿಗೆ ಸಕಲ ಅನರ್ಥಗಳೂ ಒದಗುತ್ತಿರುವವು. ಆ ಈ ಕಾಮವು ಏತರಿಂದಲಾದರೂ (ತನಗೆ) ತಡೆಯಾದರೆ ಕ್ರೋಧವಾಗಿ ಪರಿಣಮಿಸುವದು ಆದ್ದರಿಂದ ಕ್ರೋಧವೂ ಇದೇ (ಇದು) ರಜೋಗುಣಸಮುದ್ಭವವು, ರಜಸ್ಸೆಂಬ ಗುಣವು ರಜೋಗುಣವು, ಅದು ಯಾವ ಕಾಮಕ್ಕೆ ಸಮುದ್ಭವ (ಉಂಟಾಗುವ ಕಾರಣ) ವೋ ಅದು ರಜೋಗುಣಸಮುದ್ಭವವು ಅಥವಾ ರಜೋಗುಣಕ್ಕೆ (ಅದು) ಉಂಟಾಗುವ ಕಾರಣವಾಗಿರುವದರಿಂದ ಇದು ರಜೋಗುಣ ಸಮುದ್ಭವವು [3] (ಎಂದಾದರೂ) ಅರ್ಥಮಾಡಬಹುದು ಏಕೆಂದರೆ ಕಾಮವು ಹುಟ್ಟಿ

---

1. ಆದ್ದರಿಂದಲೇ ನಿಷ್ಕಾಮನಾದ ಭಗವಂತನು ಜನನು ಕಾಮದಿಂದ ಪಾಪವನ್ನು ಮಾಡುತ್ತಿರುವರೆಂಬುದನ್ನು ಬಲ್ಲನು.

2. ' ದುಃಖಿನಾಮ್ ' ವಾ|| ಮು|| ಮೈ||

3. ರಜೋಗುಣದ ಕಾರ್ಯವು ಕಾಮವು ಎಂದು ಮೊದಲನೆಯ ಅರ್ಥ, ಕಾಮವು ತಲೆದೋರಿದಾಗ ರಜೋಗುಣವು ಉಕ್ಕೇರಿ ಕ್ರಿಯೆಯನ್ನುಂಟುಮಾಡಿಸುವದು ಎಂದು ಎರಡನೆಯ ಅರ್ಥ.

ದರೆ (ಅದು) ರಜಸ್ಸನ್ನು ಮುಂದುವರಿಸಿ ಮನುಷ್ಯನನ್ನು ಕರ್ಮದಲ್ಲಿ ತೊಡಗಿಸುವದು. "ಆಸೆಯು ನನ್ನಿಂದ ಈ ಕೆಲಸವನ್ನು ಮಾಡಿಸಿತಲ್ಲ!" ಎಂದು ರಜಸ್ಸಿನ ಕಾರ್ಯವಾದ ಸೇವೆಯೇ ಮುಂತಾದದ್ದರಲ್ಲಿ ತೊಡಗಿರುವ ದುಃಖಿಗಳು ಗೋಳಾಡುವದನ್ನು (ನಾವೆಲ್ಲರೂ) ಕೇಳಿರುತ್ತೇವೆ (ಈ) ಕಾಮವು ಮಹಾಶನವು ಎಂದರೆ ಅಶನವು ಎಷ್ಟಾದರೂ ತಿಂದು ತೇಗುವದು ಆದ್ದರಿಂದಲೇ ಇದು ಮಹಾಪಾಪಿಯು, ಕಾಮದ ಪ್ರೇರಣೆಯಿಂದಲ್ಲವೆ, ಜೀವನು ಪಾಪವನ್ನು ಮಾಡುವದು ?[1] ಆದ್ದರಿಂದ ಈ ಕಾಮವೇ ಈ ಸಂಸಾರದಲ್ಲಿ ವೈರಿ ಎಂದು ತಿಳಿ

(ಭಾಷ್ಯ)

೨೧೧. ಕಥಂ ವೈರೀ ಇತಿ ದೃಷ್ಟಾನ್ತೇನ ಪ್ರತ್ಯಾಯಯತಿ—

(ಭಾಷ್ಯಾರ್ಥ)

ಇದು ಹೇಗೆ ವೈರಿ ಎಂಬುದನ್ನು (ಭಗವಂತನು) ದೃಷ್ಟಾಂತದಿಂದ ತಿಳಿಸಿಕೊಡುತ್ತಾನೆ —

**ಧೂಮೇನಾವ್ರಿಯತೇ ವಹ್ನಿರ್ಯಥಾದರ್ಶೋ ಮಲೇನ ಚ ।**
**ಯಥೋಲ್ಬೇನಾವೃತೋ ಗರ್ಭಸ್ತಥಾ ತೇನೇದಮಾವೃತಮ್ ॥**

೩೮. ಬೆಂಕಿಯು ಹೊಗೆಯಿಂದ ಮುಚ್ಚಿಕೊಂಡಿರುವಂತೆಯೂ ಕನ್ನಡಿಯು ಕೊಳೆಯಿಂದ ಮುಚ್ಚಿಕೊಂಡಿರುವಂತೆಯೂ ಗರ್ಭವು ಉಲ್ಬದಿಂದ ಮುಚ್ಚಿಕೊಂಡಿರುವಂತೆಯೂ ಇದು ಅದರಿಂದ ಮುಚ್ಚಿಕೊಂಡಿರುವದು

(ಭಾಷ್ಯ)

೨೧೨. ಧೂಮೇನ ಸಹಜೇನ ಆವ್ರಿಯತೇ ವಹ್ನಿಃ ಪ್ರಕಾಶಾತ್ಮಕಃ ಅಪ್ರಕಾಶಾತ್ಮಕೇನ ಯಥಾ ವಾ ಆದರ್ಶಃ ಮಲೇನ ಚ ಯಥಾ ಉಲ್ಬೇನ ಚ ಜರಾಯುಣಾ ಗರ್ಭವೇಷ್ಟನೇನ ಆವೃತಃ ಆಚ್ಛಾದಿತಃ ಗರ್ಭಃ ತಥಾ ತೇನ ಇದಮ್ ಆವೃತಮ್ ॥

(ಭಾಷ್ಯಾರ್ಥ)

ತನ್ನೊಡನೆ ಹುಟ್ಟಿದ ಪ್ರಕಾಶವಿಲ್ಲದ ಹೊಗೆಯಿಂದ ಪ್ರಕಾಶರೂಪವಾದ ಬೆಂಕಿಯು

---

1 "ಕಾಮೋಽಕಾರ್ಷೀತ್" ಎಂಬ ತೈ. ಆ. ನಾ. (೬೧)ವನ್ನೂ "ಯದ್ಯದ್ಧಿ ಕುರುತೇ ಜನ್ತುಃ" ಎಂಬ ಮನು (೨-೪) ವಚನವನ್ನೂ ಸೂಚಿಸಿದೆ

ಮುಚ್ಚಿಕೊಂಡಿರುವಂತೆಯೂ ಕನ್ನಡಿಯು ಕೊಳೆಯಿಂದ ಮುಚ್ಚಿಕೊಂಡಿರುವಂತೆಯೂ[1] ಉಲ್ಬದಿಂದ ಎಂದರೆ ಜರಾಯುವೆಂಬ ಗರ್ಭದ ಮೇಲುಪೊರೆಯಿಂದ ಗರ್ಭವು ಮುಚ್ಚಿಕೊಂಡಿರುವಂತೆಯೂ ಕವಿದುಕೊಂಡಿರುವಂತೆಯೂ (ಈ ದೃಷ್ಟಾಂತದ) ಹಾಗೆ ಅದರಿಂದ ಇದು ಮುಚ್ಚಿಕೊಂಡಿರುವದು.

(ಭಾಷ್ಯ)

೨೧೩ ಕಿಂ ಪುನಸ್ತತ್ ಇದಂಶಬ್ದವಾಚ್ಯಂ ಯತ್ ಕಾಮೇನ ಆವೃತಮ್ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಕಾಮದಿಂದ ಮುಚ್ಚಿಕೊಂಡಿರುವದೆಂಬ 'ಇದು' ಎಂಬ ಶಬ್ದದಿಂದ (ನೀನು) ಹೇಳಿದ ಆ (ಪದಾರ್ಥವು) ಯಾವದು? ಎಂದರೆ (ಭಗವಂತನು) ಹೇಳುತ್ತಾನೆ.—

**ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ ।**
**ಕಾಮರೂಪೇಣ ಕೌನ್ತೇಯ ದುಷ್ಪೂರೇಣಾನಲೇನ ಚ ॥ ೩೯ ॥**

೩೯. ಎಲೈ ಕೌಂತೇಯನೆ, ಜ್ಞಾನಿಗೆ ನಿತ್ಯವೈರಿಯಾಗಿರುವ ದುಷ್ಪೂರವಾದ ಅನಲವಾದ ಕಾಮರೂಪವಾದ ಇದರಿಂದ ಜ್ಞಾನವು ಮುಚ್ಚಿಕೊಂಡಿರುವದು.

(ಭಾಷ್ಯ)

೨೧೪ ಆವೃತಮ್ ಜ್ಞಾನಮ್ ಏತೇನ ಜ್ಞಾನಿನಃ ನಿತ್ಯವೈರಿಣಾ । ಜ್ಞಾನೀ ಹಿ ಜಾನಾತಿ ಅನೇನ ಅಹಮ್ ಅನರ್ಥೇಣ ಪ್ರಯುಕ್ತಃ ಇತಿ ಪೂರ್ವಮೇವ[2]। ದುಃಖೀ[3] ಚ ಭವತಿ ನಿತ್ಯಮೇವ । ಅತಃ[4] ಅಸೌ ಜ್ಞಾನಿನಃ ನಿತ್ಯವೈರೀ, ನ ತು ಮೂರ್ಖಸ್ಯ । ಸ ಹಿ ಕಾಮಂ ತೃಷ್ಣಾಕಾಲೇ ಮಿತ್ರಮಿವ ಪಶ್ಯನ್ ತತ್ಕಾರ್ಯೇ ದುಃಖೇ ಪ್ರಾಪ್ತೇ

---

1. ಪೂರ್ವದಲ್ಲಿ ಹಿತ್ತಾಳೆ ಮುಂತಾದ ಲೋಹಗಳಿಂದ ಕನ್ನಡಿಯನ್ನು ಮಾಡುತ್ತಿದ್ದರು; ಧೂಳುಕೂರುವದು, ತುಕ್ಕುಹಿಡಿಯುವದು ಮುಂತಾದ ಕಾರಣದಿಂದ ಅದು ಮಸಕಾದಾಗ ಇಟ್ಟಿಗೆಯ ಪುಡಿ ಮುಂತಾದದ್ದನ್ನು ಹಾಕಿ ಉಜ್ಜುತ್ತಿದ್ದರು.

2. "ಪೂರ್ವಮೇವ ಜಾನಾತಿ ಅನೇನ ಪ್ರಯುಕ್ತಃ ಇತಿ"ವ್ಯಾ|| ಮ||, "ಪ್ರಯುಕ್ತಃ ಪೂರ್ವಮೇವ ಇತಿ" ಅ||ಏ||ಗು||, ಇಲ್ಲಿ ಕೊಟ್ಟಿರುವದು ವಾ||

3. "ಅತಃ ದುಃಖೀ" ಮ||ವ್ಯಾ||

4. 'ತೇನ' ಮ||ವ್ಯಾ||

ಜಾನಾತಿ " ತೃಷ್ಣಯಾ ಅಹಂ ದುಃಖಿತ್ವಮ್ ಆಪಾದಿತಃ " ಇತಿ ನ ಪೂರ್ವಮೇವ । ಅತಃ ಜ್ಞಾನಿನ ಏವ ನಿತ್ಯವೈರೀ । ಕಿಂರೂಪೇಣ ? ಕಾಮರೂಪೇಣ ಕಾಮಃ ಇಚ್ಛೈವ ರೂಪಮ್ ಅಸ್ಯ ಇತಿ ಕಾಮರೂಪಃ । ತೇನ । ದುಷ್ಪೂರೇಣ ದುಃಖೇನ ಪೂರಣಮ್ ಅಸ್ಯ ಇತಿ ದುಷ್ಪೂರಃ । ತೇನ । ಅನಲೇನ ನಾಸ್ಯ ಅಲಂ ಪರ್ಯಾಪ್ತಿಃ ವಿದ್ಯತೇ ಇತಿ ಅನಲಃ । ತೇನ ಚ ॥

(ಭಾಷ್ಯಾರ್ಥ)

ಇದರಿಂದ ಜ್ಞಾನವು ಮುಚ್ಚಿಕೊಂಡಿರುವದು[1] ಇದು ಜ್ಞಾನಿಗೆ ನಿತ್ಯವೈರಿಯಾಗಿರುವದು ಏಕೆಂದರೆ ಜ್ಞಾನಿಯು 'ಇದು ನನ್ನನ್ನು ಅನರ್ಥದಲ್ಲಿ ತೊಡಗಿಸುತ್ತದೆ' (ಎಂದು) ಮೊದಲೇ ತಿಳಿದುಕೊಂಡಿರುವನು, (ಅದರಿಂದ ಅವನು) ನಿತ್ಯವೂ ದುಃಖಿಯಾಗಿಯೂ ಇರುತ್ತಾನೆ ಆದ್ದರಿಂದ ಇದು ಜ್ಞಾನಿಗೆ ನಿತ್ಯವೈರಿ. ಆದರೆ (ಅದು) ಮೂರ್ಖನಿಗೆ (ನಿತ್ಯವೈರಿ)ಯಲ್ಲ. ಏಕೆಂದರೆ ಆ (ಮೂರ್ಖ)ನು ಕಾಮವೆಂಬುದನ್ನು ಬಯಕೆಯುಂಟಾದ ಕಾಲದಲ್ಲಿ ಮಿತ್ರನಂತೆ ಕಾಣುತ್ತಾ ಅದರ ಕಾರ್ಯವಾದ ದುಃಖವು ಬಂದೊದಗಿದ ಬಳಿಕ "(ಅಯ್ಯೋ)! ಬಯಕೆಯಿಂದ ನಾನು ಈ ದುಃಖವನ್ನು ಹೊಂದಿದೆನು" ಎಂದು ತಿಳಿದುಕೊಳ್ಳುವನೇ ಹೊರತು ಮೊದಲೇ ತಿಳಿದುಕೊಂಡಿರುವನಿಲ್ಲ. ಆದ್ದರಿಂದ ಇದು ಜ್ಞಾನಿಗೇ ನಿತ್ಯವೈರಿಯು ಯಾವ ರೂಪದ (ವೈರಿಯಿಂದ ಮುಚ್ಚಿಕೊಂಡಿರುತ್ತದೆ)? ಎಂದರೆ ಕಾಮರೂಪವಾದ–ಕಾಮವೆಂದರೆ ಇಚ್ಛೆಯೇ ಅದಕ್ಕೆ ರೂಪವು ಆದ್ದರಿಂದ ಕಾಮರೂಪವಾದದ್ದು–ಅಂಥ ದುಷ್ಪೂರವಾದದ್ದು ಎಂದರೆ ಅದನ್ನು (ಹಿಡಿಯುವಷ್ಟು ವಿಷಯಗಳನ್ನು) ತುಂಬುವದು ಕಷ್ಟ; ಅನಲವಾದ–ಅಲಮ್ (ಸಾಕು) ಬೇಕಾದಷ್ಟಾಯಿತು ಎಂಬುದೇ ಅದಕ್ಕಿಲ್ಲವಾದ್ದರಿಂದ ಅನಲವಾದದ್ದು–(ಅಂಥ ದುಷ್ಪೂರವಾದ ಅನಲವಾದ ಕಾಮರೂಪವಾದ ಇದರಿಂದ ಜ್ಞಾನವು ಮುಚ್ಚಿಕೊಂಡಿರುವದು).

## ಕಾಮವನ್ನು ಗೆಲ್ಲುವ ಬಗೆ

(ಭಾಷ್ಯ)

೨೧೫ ಕಿಮಧಿಷ್ಠಾನಃ[2] ಪುನಃ ಕಾಮೋ ಜ್ಞಾನಸ್ಯ ಆವರಣತ್ವೇನ ವೈರೀ

---

1. ಕಾಮವು ಇರುವಾಗ ವಿವೇಕವು ತೋರಿಕೊಳ್ಳುವದಿಲ್ಲ, ಆದ್ದರಿಂದ ಕಾಮವು ಅವನ್ನು ಮುಸುಕಿಕೊಂಡಿರುತ್ತದೆ ಎಂಬ ರೂಪಕವನ್ನು ಪಯೋಗಿಸಿದೆ.

2. 'ಕಿಮ್ ಅಧಿಷ್ಠಾಯ ಚ' ಪು॥ ಮೈ॥

ಸರ್ವಸ್ಯ ಲೋಕಸ್ಯ ?–ಇತ್ಯಪೇಕ್ಷಾಯಾಮ್ ಆಹ । ಜ್ಞಾತೇ ಹಿ ಶತ್ರೋಃ ಅಧಿಷ್ಠಾನೇ ಸುಖೇನ ನಿಬರ್ಹಣಂ ಕರ್ತುಂ ಶಕ್ಯತೇ ಇತಿ ||

(ಭಾಷ್ಯಾರ್ಥ)

ಹಾಗಾದರೆ ಕಾಮವು ಯಾವದನ್ನು ಆಶ್ರಯಿಸಿಕೊಂಡು ಜ್ಞಾನಕ್ಕೆ ಮುಚ್ಚಿಗೆಯಾಗಿ ಎಲ್ಲಾ ಜನರಿಗೂ ವೈರಿಯಾಗಿರುವದು ?–ಎಂಬುದನ್ನು ಈಗ ಹೇಳುತ್ತಾನೆ. ಏಕೆಂದರೆ ಶತ್ರುವಿನ ಆಶ್ರಯವನ್ನು ತಿಳಿದರೇ (ಅವನನ್ನು) ಸುಲಭವಾಗಿ ಕೊಲ್ಲುವದಕ್ಕೆ ಆಗುತ್ತದೆ -

**ಇನ್ದ್ರಿಯಾಣಿ ಮನೋ ಬುದ್ಧಿರಸ್ಯಾಧಿಷ್ಠಾನಮುಚ್ಯತೇ ।**
**ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಮ್ || ೪೦ ||**

೪೦. ಇಂದ್ರಿಯಗಳು, ಮನಸ್ಸು, ಬುದ್ಧಿ–ಇವೇ ಇದಕ್ಕೆ ಆಶ್ರಯವೆನಿಸಿರುವವು. ಇವುಗಳಿಂದ ಜ್ಞಾನವನ್ನು ಮುಸುಕಿಕೊಂಡು ಇದು ದೇಹಿಯನ್ನು ಮೋಹಗೊಳಿಸುತ್ತಿರುವದು.

( ಭಾಷ್ಯ )

೨೧೬ ಇನ್ದ್ರಿಯಾಣಿ ಮನಃ ಬುದ್ಧಿಶ್ಚ ಅಸ್ಯ ಕಾಮಸ್ಯ ಅಧಿಷ್ಠಾನಮ್ ಆಶ್ರಯಃ ಉಚ್ಯತೇ । ಏತೈಃ ಇನ್ದ್ರಿಯಾದಿಭಿಃ ಆಶ್ರಯೈಃ ವಿಮೋಹಯತಿ ವಿವಿಧಂ ಮೋಹಯತಿ ಏಷ ಕಾಮಃ ಜ್ಞಾನಮ್ ಆವೃತ್ಯ ಆಚ್ಛಾದ್ಯ ದೇಹಿನಂ ಶರೀರಿಣಮ್||

(ಭಾಷ್ಯಾರ್ಥ)

ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ–ಇವೇ ಕಾಮಕ್ಕೆ ಅಧಿಷ್ಠಾನವು ಆಶ್ರಯವು ಎನಿಸಿರುವವು ಈ ಇಂದ್ರಿಯಗಳೇ ಮುಂತಾದ ಆಶ್ರಯಗಳಿಂದ ಜ್ಞಾನವನ್ನು ಮುಚ್ಚಿಕೊಂಡು ಮುಸುಕಿಕೊಂಡು ದೇಹಿಯನ್ನು ಶರೀರಿಯಾದ (ಜೀವನನ್ನು) ಇದು ಎಂದರೆ ಕಾಮವು ವಿಮೋಹಗೊಳಿಸುತ್ತಿರುವದು ವಿಧವಿಧವಾಗಿ ಮೋಹಗೊಳಿಸುತ್ತಿರುವದು

**ತಸ್ಮಾತ್ ತ್ವಮಿನ್ದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।**
**ಪಾಪ್ಮಾನಂ ಪ್ರಜಹಿಹ್ಯೇನಂ ಜ್ಞಾನವಿಜ್ಞಾನನಾಶನಮ್ || ೪೧ ||**

೪೧. ಆದ್ದರಿಂದ, ಎಲೈ ಭರತರ್ಷಭನೆ, ನೀನು ಮೊದಲು ಇಂದ್ರಿಯಗಳನ್ನು ಬಿಗಿಹಿಡಿದು ಜ್ಞಾನವಿಜ್ಞಾನಗಳನ್ನು ನಾಶಗೊಳಿಸುವ ಈ ಪಾಪಿಯನ್ನು ಕಿತ್ತೊಗೆದುಬಿಡು.

(ಭಾಷ್ಯ)

೨೧೭. ಯತ ಏವಂ ತಸ್ಮಾತ್ ತ್ವಮ್ ಇನ್ದ್ರಿಯಾಣಿ ಆದೌ ಪೂರ್ವಮೇವ ನಿಯಮ್ಯ ವಶೀಕೃತ್ಯ ಭರತರ್ಷಭ ಪಾಪ್ಮಾನಂ ಪಾಪಾಚಾರಂ ಕಾಮಂ ಪ್ರಜಹಿಹಿ[1] ಪರಿತ್ಯಜ ಏನಂ ಪ್ರಕೃತಂ ವೈರಿಣಂ ಜ್ಞಾನವಿಜ್ಞಾನನಾಶನಂ ಜ್ಞಾನಂ ಶಾಸ್ತ್ರತಃ ಆಚಾರ್ಯತಶ್ಚ ಆತ್ಮಾದೀನಾಮ್ ಅವಬೋಧಃ, ವಿಜ್ಞಾನಂ ವಿಶೇಷತಃ ತದನುಭವಃ। ತಯೋಃ ಜ್ಞಾನವಿಜ್ಞಾನಯೋಃ ಶ್ರೇಯಃ ಪ್ರಾಪ್ತಿಹೇತ್ವೋಃ ನಾಶನಂ ನಾಶಕರಂ ಪ್ರಜಹಿಹಿ ಆತ್ಮನಃ ಪರಿತ್ಯಜ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗಿರುವದಷ್ಟೆ, ಆದ್ದರಿಂದ ನೀನು ಇಂದ್ರಿಯಗಳನ್ನು ಆದಿಯಲ್ಲಿಯೇ ಮೊದಲೇ ಬಿಗಿ ಹಿಡಿದು ವಶಪಡಿಸಿಕೊ, ಎಲೈ ಭರತಶ್ರೇಷ್ಠನೆ, ಈ ಪ್ರಕೃತನಾದ ವೈರಿಯಾದ ಪಾಪಿಯಾದ ಪಾಪಕೆಲಸವನ್ನು ಮಾಡಿಸುವ ಕಾಮವನ್ನು ಕಿತ್ತೊಗೆದು ಬಿಡು, ಪೂರ ಬಿಟ್ಟುಬಿಡು. (ಇದು) ಜ್ಞಾನವಿಜ್ಞಾನನಾಶನವು, **ಜ್ಞಾನವೆಂದರೆ ಶಾಸ್ತ್ರದಿಂದಲೂ ಆಚಾರ್ಯರಿಂದಲೂ ಆತ್ಮನೇ ಮುಂತಾದವುಗಳನ್ನು**[2] **ತಿಳಿದುಕೊಳ್ಳುವದು, ವಿಜ್ಞಾನವೆಂದರೆ ಇಂಥದ್ದೆಂದು ಅದನ್ನು ಅನುಭವಕ್ಕೆ ತಂದುಕೊಳ್ಳುವದು.** ಈ ಜ್ಞಾನವಿಜ್ಞಾನಗಳೆರಡೂ ಶ್ರೇಯಸ್ಸನ್ನು ಪಡೆಯುವದಕ್ಕೆ ಕಾರಣವಾಗಿರುವವು, ಇವುಗಳನ್ನು ನಾಶಗೊಳಿಸುವ ಹಾಳುಮಾಡುವ ಈ ಕಾಮವನ್ನು ಕಿತ್ತೊಗೆದುಬಿಡು ಬಿಟ್ಟುಬಿಡು ಎಂದರ್ಥ.[3]

(ಭಾಷ್ಯ)

೨೧೮. ಇನ್ದ್ರಿಯಾಣಿ ಆದೌ ನಿಯಮ್ಯ ಕಾಮಂ ಶತ್ರುಂ ಜಹಿಹಿ ಇತ್ಯುಕ್ತಮ್ । ತತ್ರ ಕಿಮಾಶ್ರಯಃ ಕಾಮಂ ಜಹ್ಯಾತ್ ಇತಿ ? ಉಚ್ಯತೇ—

(ಭಾಷ್ಯಾರ್ಥ)

“ ಇಂದ್ರಿಯಗಳನ್ನು ಮೊದಲು ಬಿಗಿಹಿಡಿದುಕೊಂಡು ಕಾಮವೆಂಬ ಶತ್ರು

---

1. ‘ ಪ್ರಜಹೀಹಿ ’ ‘ ಪ್ರಜಹಿಹಿ ’ ಎಂದು ಎರಡು ಪಾಠಗಳಿವೆ ; ಇವುಗಳಲ್ಲಿ ಭಾಷ್ಯಕಾರರು ಯಾವದನ್ನು ಬರೆದಿದ್ದರೋ ಗೊತ್ತಾಗುವದಿಲ್ಲ.

2. ಮುಂತಾದವೆಂದರೆ ಆತ್ಮನಲ್ಲದ ಅನಾತ್ಮವಾದ ದೇಹೇಂದ್ರಿಯಾದಿಗಳು. ಅವುಗಳನ್ನು ತಿಳಿದುಕೊಳ್ಳುವದೆಂದರೆ ಅವುಗಳು ಆತ್ಮನಂತೆ ಸತ್ಯವಲ್ಲವೆಂದು ತಿಳಿಯುವದೇ. ೧೩-೨೬ರ ಭಾಷ್ಯವನ್ನು ನೋಡಿ.

3. ಕಾಮಗಳು ಹೋದರೆ ಜ್ಞಾನವಿಜ್ಞಾನಗಳುಂಟಾಗಿ ಮುಕ್ತಿಯು ದೊರೆಯುವದು. ಬೃ. ೪-೪-೭, ಕ. ೨-೩-೧೪.

ವನ್ನು ಕಿತ್ತೊಗೆದುಬಿಡು" ಎಂದು ಹೇಳಿದೆಯಷ್ಟೆ. ಇಲ್ಲಿ ಯಾವದನ್ನು ಆಶ್ರಯಿಸಿಕೊಂಡು [1] ಕಾಮವನ್ನು ತೆಗೆದುಹಾಕಬೇಕು? ಎಂದರೆ (ಭಗವಂತನು) ಹೇಳುತ್ತಾನೆ :—

**ಇನ್ದ್ರಿಯಾಣಿ ಪರಾಣ್ಯಾಹುರಿನ್ದ್ರಿಯೇಭ್ಯಃ ಪರಂ ಮನಃ ।**
**ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥ ೪೨ ॥**

೪೨. ಇಂದ್ರಿಯಗಳು ಹೆಚ್ಚಿನವು ಎನ್ನುತ್ತಾರೆ; ಇಂದ್ರಿಯಗಳಿಗಿಂತ ಮನಸ್ಸು ಹೆಚ್ಚಿನದು, ಮನಸ್ಸಿಗಿಂತಲೂ ಬುದ್ಧಿಯೇ ಹೆಚ್ಚಿನದು. ಆದರೆ ಬುದ್ಧಿಗಿಂತಲೂ ಯಾವನು ಹೆಚ್ಚಿನವನೆಂದರೆ ಆತನು.

(ಭಾಷ್ಯ)

೨೧೯. ಇನ್ದ್ರಿಯಾಣಿ ಶ್ರೋತ್ರಾದೀನಿ ಪಞ್ಚ ದೇಹಂ ಸ್ಥೂಲಂ ಬಾಹ್ಯಂ ಪರಿಚ್ಛಿನ್ನಂ ಚ ಅಪೇಕ್ಷ್ಯ ಸೌಕ್ಷ್ಮ್ಯಾನ್ತಃಸ್ಥತ್ವವ್ಯಾಪಿತ್ವಾದ್ಯಪೇಕ್ಷಯಾ [2] ಪರಾಣಿ ಪ್ರಕೃಷ್ಟಾನಿ ಆಹುಃ ಪಣ್ಡಿತಾಃ । ತಥಾ ಇನ್ದ್ರಿಯೇಭ್ಯಃ ಪರಂ ಮನಃ ಸಂಕಲ್ಪವಿಕಲ್ಪಾತ್ಮಕಮ್ । ತಥಾ ಮನಸಸ್ತು ಪರಾ ಬುದ್ಧಿಃ ನಿಶ್ಚಯಾತ್ಮಿಕಾ । ತಥಾ ಯಃ ಸರ್ವದೃಶ್ಯೇಭ್ಯೋ ಬುದ್ಧ್ಯನ್ತೇಭ್ಯಃ ಅಭ್ಯನ್ತರಃ ಯಂ ದೇಹಿನಮ್ ಇನ್ದ್ರಿಯಾದಿಭಿಃ ಆಶ್ರಯೈರ್ಯುಕ್ತಃ ಕಾಮಃ ಜ್ಞಾನಾವರಣದ್ವಾರೇಣ ಮೋಹಯತಿ ಇತ್ಯುಕ್ತಮ್ । ಬುದ್ಧೇಃ ಪರತಸ್ತು ಸಃ [3] ಬುದ್ಧೇ ರ್ದ್ರಷ್ಟಾ ಪರ ಆತ್ಮಾ ॥

(ಭಾಷ್ಯಾರ್ಥ)

ಇಂದ್ರಿಯಗಳು ಎಂದರೆ ಶ್ರೋತ್ರವೇ ಮುಂತಾದ ಐದು (ಜ್ಞಾನೇಂದ್ರಿಯಗಳು) ಸ್ಥೂಲವಾಗಿಯೂ ಹೊರಗಿನದಾಗಿಯೂ ಪರಿಚ್ಛಿನ್ನವಾಗಿಯೂ ಇರುವ ದೇಹಕ್ಕೆ ಹೋಲಿಸಿದರೆ ಹೆಚ್ಚು ಸೂಕ್ಷ್ಮವಾಗಿ, ಒಳಗಿನವಾಗಿ, ವ್ಯಾಪಕವಾಗಿ ಇರುವದು ಮುಂತಾದ (ಸ್ವಭಾವ)ವುಳ್ಳವಾಗಿರುವದರಿಂದ (ಅದಕ್ಕಿಂತ) ಹೆಚ್ಚಿನವು ಉತ್ಕೃಷ್ಟವಾದವು ಎಂದು ಬಲ್ಲವರು ಹೇಳುವರು. ಮತ್ತು ಇಂದ್ರಿಯಗಳಿಗಿಂತ ಸಂಕಲ್ಪವಿಕಲ್ಪ

---

1. ಯೋಗವನ್ನೂ ಜ್ಞಾನವನ್ನೂ ಆಶ್ರಯಿಸಿಕೊಂಡು ಕಾಮವನ್ನು ಗೆಲ್ಲಬೇಕು ಎಂಬುದನ್ನು ಹೇಳುತ್ತಾನೆ ಎಂದರ್ಥ. ಇಲ್ಲಿ ಹೇಳಿರುವದು ೬, ೭ನೆಯ ಅಧ್ಯಾಯಗಳಿಗೆ ಬೀಜವಾಗಿ ಹೇಳಿದ್ದು.

2. "ಅನ್ತರಸ್ಥಿತತ್ವ . . ." ಆ॥ "ಅನ್ತರಸ್ಥತ್ವ . . ." ಪಾ॥

3. "ಸಃ ಸ ಬುದ್ಧೇರ್ದ್ರಷ್ಟಾ" ಎಂಬ ಪಾಠದಲ್ಲಿ ಒಂದು ಸಃ ಹೆಚ್ಚು.

ರೂಪವಾಗಿರುವ [1] **ಮನಸ್ಸು** ಹೆಚ್ಚಿನದು, ಆ ಮನಸ್ಸಿಗಿಂತ ನಿಶ್ಚಯಾತ್ಮಕವಾದ **ಬುದ್ಧಿಯು** ಹೆಚ್ಚಿನದು ಬುದ್ಧಿಯವರೆಗಿನ ದೃಶ್ಯಗಳಿಗೆಲ್ಲಕ್ಕಿಂತಲೂ ಯಾವನು ಒಳಗಿರುವನೋ, ಯಾವ ದೇಹಿಯನ್ನು ಇಂದ್ರಿಯಗಳೇ ಮುಂತಾದ ಆಶ್ರಯಗಳಿಂದ ಕೂಡಿಕೊಂಡು ಕಾಮವು ಜ್ಞಾನವನ್ನು ಮುಸುಕಿಕೊಳ್ಳುವ ಮೂಲಕ ಮೋಹಗೊಳಿಸುವನೆಂದು ಹಿಂದೆ (೨-೪೦) ಹೇಳಿದೆಯೋ, ಆ ಬುದ್ಧಿಯನ್ನು ನೋಡುತ್ತಿರುವ [2] ಆತ್ಮನು ಬುದ್ಧಿಗಿಂತ ಹೆಚ್ಚಿನವನು. [3]

**ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।**
**ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥ ೪೩ ॥**

೪೩. ಎಲೈ ಮಹಾಬಾಹುವೆ, ಹೀಗೆ ಬುದ್ಧಿಗಿಂತಲೂ ಹೆಚ್ಚಿನವನನ್ನು ತಿಳಿದುಕೊಂಡು ಆತ್ಮವನ್ನು ಆತ್ಮದಿಂದ ನಿಲ್ಲಿಸಿಕೊಂಡು ಕಾಮರೂಪವಾದ ದುರಾಸದವಾದ ಶತ್ರುವನ್ನು ಕೊಂದುಹಾಕು.

(ಭಾಷ್ಯ)

೨೨೦ ಏವಂ [4] ಬುದ್ಧೇಃ ಪರಮ್ ಆತ್ಮಾನಂ ಬುದ್ಧ್ವಾ ಜ್ಞಾತ್ವಾ ಸಂಸ್ತಭ್ಯ ಸಮ್ಯಕ್ ಸ್ತಂಭನಂ ಕೃತ್ವಾ ಆತ್ಮಾನಂ ಸ್ವೇನೈವ ಆತ್ಮನಾ ಸಂಸ್ಕೃತೇನ ಮನಸಾ [5] ಸಮ್ಯಕ್ ಸಮಾಧಾಯ ಇತ್ಯರ್ಥಃ। ಜಹಿ ಏನಂ ಶತ್ರುಂ ಹೇ ಮಹಾಬಾಹೋ ಕಾಮರೂಪಂ ದುರಾಸದಂ ದುಃಖೇನ ಆಸದಃ ಆಸಾದನಂ ಪ್ರಾಪ್ತಿಃ ಯಸ್ಯ ತಂ ದುರಾಸದಂ ದುರ್ವಿಜ್ಞೇಯಾನೇಕವಿಶೇಷಮ್ ಇತಿ ॥

---

1. ಹೀಗೆ ಮಾಡಬೇಕೆಂದು ಯೋಚಿಸುವ ವೃತ್ತಿಯು **ಸಂಕಲ್ಪವು**; ಹೊರಗಿನ ವಿಷಯದಲ್ಲಿ ಆಗುವ ವಿಧವಿಧವಾದ ಜ್ಞಾನವು **ವಿಕಲ್ಪವು** ಈ ಎರಡು ಬಗೆಯ ವೃತ್ತಿಗಳು ಮನಸ್ಸೆಂಬ ಅಂತಃಕರಣವೃತ್ತಿಯಲ್ಲಿ ಅಡಕವಾಗಿವೆ ಎಂದು ಸಾಂಖ್ಯರ ಕಲ್ಪನೆ.

2 ಬುದ್ಧಿಯು ದೃಶ್ಯ, ಆತ್ಮನು ದ್ರಷ್ಟೃ ಬುದ್ಧ್ಯಾದಿಗಳೆಲ್ಲ ಆತ್ಮನಿಂದ ನೋಡಲ್ಪಡುವ ವಿಷಯಗಳಾಗಿರುವದರಿಂದ ಅನಾತ್ಮಗಳೇ.

3. ಇಲ್ಲಿ ಒಂದಕ್ಕಿಂತ ಒಂದು ಹೆಚ್ಚೆಂದೂ ಆತ್ಮನು ಬುದ್ಧಿಗಿಂತ ಹೆಚ್ಚೆಂದೂ ಎರಡು ವಿಷಯಗಳನ್ನು ಹೇಳಿಲ್ಲ, ಆತ್ಮನು ಇಂದ್ರಿಯಾದಿಗಳೆಲ್ಲಕ್ಕಿಂತಲೂ ಹೆಚ್ಚಿನವನೆಂಬುದೇ ಪ್ರಕೃತ. ಕ. ಭಾ. ೧-೩-೧೦, ೧೧ನ್ನೂ ಸೂ. ಭಾ. ೩-೩-೧೪ನ್ನೂ ನೋಡಿ.

4. ಇದರ ಹಿಂದೆ "ತತಃ ಕಿಮ್ ? " ಎಂಬ ಅವತರಣಿಕೆಯೊಂದು ವಾ॥ ಅ॥ ಪಾಠಗಳಲ್ಲಿದೆ.

5. "ಸಂಸ್ಕೃತೇನ ಮನಸಾ" ಎಂಬುದು ಮ॥ ಮೈ॥ ಗಳಲ್ಲಿಲ್ಲ.

(ಭಾಷ್ಯಾರ್ಥ)

ಹೀಗೆ ಬುದ್ಧಿಗಿಂತಲೂ ಹೆಚ್ಚಿನವನಾದ ಆತ್ಮನನ್ನು ತಿಳಿದುಕೊಂಡು ಆತ್ಮನನ್ನು (ಮನಸ್ಸನ್ನು) ಚೆನ್ನಾಗಿ ಸಂಸ್ಕಾರವನ್ನು ಹೊಂದಿದ ನಿನ್ನ ಮನಸ್ಸಿನಿಂದಲೇ ನಿಲ್ಲಿಸಿಕೊಂಡು ಚೆನ್ನಾಗಿ ಸಮುಸ್ಥಿತಿಯಲ್ಲಿಟ್ಟುಕೊಂಡು, ಎಲೈ ಮಹಾಬಾಹುವೆ, ಈ ಕಾಮದ ರೂಪವಾಗಿರುವ, ದುರಾಸದವಾದ–ಆಸದವೆಂದರೆ ಆಸಾದನವು ಪಡೆಯುವದು; ಯಾವದನ್ನು ಪಡೆಯುವದು ಕಷ್ಟವಾಗಿರುವದೋ (ಅಂಥ), ಇದರ ಅನೇಕವಾದ ವಿಶೇಷ (ರೂಪ)ಗಳನ್ನು ತಿಳಿದುಕೊಳ್ಳುವದು ಕಷ್ಟವಾಗಿರುವದಾದ್ದರಿಂದ (ಇದು ದುರಾಸದವು ಇಂಥ)—(ಈ) ಶತ್ರುವನ್ನು ಕೊಂದುಹಾಕು.

ಇತಿ ಶ್ರೀಮದ್ಭಗವದ್ಗೀತಾಭಾಷ್ಯೇ ಕರ್ಮಯೋಗೋ ನಾಮ ತೃತೀಯೋಽಧ್ಯಾಯಃ

# ಮೂರನೆಯ ಅಧ್ಯಾಯದ ಸಾರ

೧–೨ ಹಿಂದಿನ ಅಧ್ಯಾಯವಲ್ಲಿ ಸಾಂಖ್ಯಬುದ್ಧಿ, ಯೋಗಬುದ್ಧಿ–ಎಂದು ಎರಡು ಬುದ್ಧಿಗಳನ್ನು ಉಪದೇಶಿಸಿದ ಬಳಿಕ ಭಗವಂತನು ಸಾಂಖ್ಯರಿಗೆ ಅಂದರೆ ಜ್ಞಾನಿಗಳಿಗೆ ಸರ್ವ ಕರ್ಮಸಂನ್ಯಾಸಪೂರ್ವಕವಾದ ಜ್ಞಾನನಿಷ್ಠೆಯಿಂದ ಮುಕ್ತಿಯಾಗುವದೆಂದು ಹೇಳಿದನು. ಅರ್ಜುನನಿಗೆ ನೀನು ಕರ್ಮವನ್ನೇ ಮಾಡು ಎಂದು ಹೇಳಿದನು ಆಗ ಅರ್ಜುನನು “ಕರ್ಮಕ್ಕಿಂತ ಜ್ಞಾನವೇ ಹೆಚ್ಚಾದರೆ ನನ್ನನ್ನೇಕೆ ಘೋರವಾದ ಯುದ್ಧವೆಂಬ ಕರ್ಮಕ್ಕೆ ಹಚ್ಚುತ್ತಿರುವೆ? ನಿನ್ನ ಅಭಿಪ್ರಾಯವೇ ಗೊತ್ತಾಗಲಿಲ್ಲವಲ್ಲ!” ಎನ್ನಲು ಭಗವಂತನು ಹೇಳಿದ್ದೇನೆಂದರೆ.—

೩–೩೨ “ಎಲೈ ಅರ್ಜುನನೆ, ಹಿಂದೆ ನಾನು ಜ್ಞಾನಯೋಗವೆಂದೂ ಕರ್ಮಯೋಗವೆಂದೂ ಎರಡು ಬಗೆಯ ನಿಷ್ಠೆಯನ್ನು ಹೇಳಿರುವೆನು ಸರ್ವಕರ್ಮಸಂನ್ಯಾಸವು ಮುಕ್ತಿಗೆ ಹೇತುವೆಂಬುದೇ ನನ್ನ ಅಭಿಪ್ರಾಯವು ಆದರೆ ಸುಮ್ಮನೆ ಕರ್ಮವನ್ನು ಕೈಬಿಟ್ಟಮಾತ್ರದಿಂದ ಆ ಸಂನ್ಯಾಸವು ದಕ್ಕುವದೆಂದು ನನ್ನ ಅಭಿಪ್ರಾಯವಲ್ಲ. ಅಜ್ಞರು ಕರ್ಮವನ್ನು ಎಲ್ಲಾ ವಿಧದಿಂದಲೂ ಬಿಡುವದೆಂಬುದು ಆಗುವಂತೆಯೂ ಇಲ್ಲ. ಒಂದುವೇಳೆ ಅವರು ಕರ್ಮೇಂದ್ರಿಯಗಳನ್ನು ಬಿಗಿಹಿಡಿದರೆ ಮನಸ್ಸಿನಲ್ಲಿ ವಿಷಯಗಳನ್ನು ಚಿಂತಿಸುತ್ತಲೇ ಇರುವರು. ಆದ್ದರಿಂದ ಅಂಥ ಅಕರ್ಮದಿಂದ ಏನೂ ಪ್ರಯೋಜನವಿಲ್ಲ ಅದಕ್ಕಿಂತ ಸಂಗವಿಲ್ಲದೆ ಕರ್ಮಯೋಗವನ್ನು ಮಾಡುವದೇ ಉತ್ತಮ. ಕರ್ಮದಿಂದಲೇ ಶರೀರಯಾತ್ರೆಯು ಸಾಗುವದು, ದೇವತೆಗಳು ಕರ್ಮದಿಂದ ತೃಪ್ತರಾಗಿಯೇ ಮನುಷ್ಯರ ಇಷ್ಟಾರ್ಥವನ್ನು ಈಡೇರಿಸುವರು, ಜಗಚ್ಚಕ್ರವು ಕರ್ಮದಿಂದಲೇ ಸಾಗಿರುವದು. ಕರ್ಮದಿಂದ ಏನು ಕೆಡುಕೂ ಇಲ್ಲ, ಸಂಗದಿಂದಲೂ ಫಲಾಶೆಯಿಂದಲೂ ಕೆಡುಕುಂಟು ಉದಾಹರಣೆಗೆ ನೋಡು ಆತ್ಮಜ್ಞಾನಿಗೆ ಯಾವ ಕರ್ಮದಿಂದ ಏನು ಫಲವೂ ಆಗಬೇಕಾದದ್ದಿರುವದಿಲ್ಲ, ಆಗುವಹಾಗೂ ಇರುವದಿಲ್ಲ, ಆದರೂ ಅವನು ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿರುವನು. ಪರಮೇಶ್ವರನಾದ ನಾನುಕೂಡ ಜಗತ್ತಿನ ಕಲ್ಯಾಣಕ್ಕಾಗಿ ಕರ್ಮವನ್ನು ಮಾಡುತ್ತಿರುವೆನು. ಆದ್ದರಿಂದ ಇದನ್ನು ತಿಳಿದು ನೀನೂ ಈಶ್ವರಾರ್ಪಣಬುದ್ಧಿಯಿಂದ ಅಸಕ್ತನಾಗಿ ಕರ್ಮವನ್ನು ಮಾಡು ಈ ನನ್ನ ಅಭಿಪ್ರಾಯದಂತೆ ಯಾರು ಕರ್ಮಯೋಗವನ್ನು ಮಾಡುವರೋ ಅವರು ಕರ್ಮಗಳಿಂದ ಬಿಡುಗಡೆಯಾಗಿ ನಾನು ಹೇಳಿದ ನೈಷ್ಕರ್ಮ್ಯವನ್ನು ಪಡೆಯುವರು; ಹಾಗೆ ಮಾಡದೆ ಇರುವವರು ದುರ್ಗತಿಯನ್ನು ಪಡೆಯುವರು.

೩೩–೩೯. “ಜನರು ಈ ನನ್ನ ಉಪದೇಶದಂತೆ ನಡೆಯದೆ ಇರುವದಕ್ಕೆ ಕಾಮವೇ ಕಾರಣವು. ಕಾಮದಿಂದಲೇ ಅವರು ಸ್ವಧರ್ಮವನ್ನು ಕೈಬಿಟ್ಟು ಪರಧರ್ಮಕ್ಕೆ ಕೈನೀಡು

ವರು ಕಾಮವುಂಟಾಯಿತೆಂದರೆ ಮನುಷ್ಯನಲ್ಲಿ ರಜೋಗುಣವು ತಲೆಯೆತ್ತಿಕೊಳ್ಳುವದು. ಆಗ ಯುಕ್ತಾಯುಕ್ತವಿವೇಕವು ತೋರದೆ ಹೋಗುವದು. ಹೀಗೆ ಮಾಡಬಾರದ ಕರ್ಮಕ್ಕೆ ಅವಿವೇಕದಿಂದ ಕೈಹಾಕುವ ಕಾಮಿಗೆ ಆತ್ಮಜ್ಞಾನವಾಗಲಿ, ಆತ್ಮಾನುಭವವಾಗಲಿ ಹೇಗೆ ಉಂಟಾದಾವು ?

೪೦_೪೩. " ಇಂದ್ರಿಯ, ಮನಸ್ಸು, ಬುದ್ಧಿ_ಇವುಗಳನ್ನು ಆಶ್ರಯಿಸಿಕೊಂಡೇ ಕಾಮವು ತೋರಿಕೊಳ್ಳುತ್ತಿರುವದು, ಆದ್ದರಿಂದ ಇವನ್ನು ಕ್ರಮಕ್ರಮವಾಗಿ ಜಯಿಸಬೇಕು. ಬುದ್ಧಿಗೂ ಸಾಕ್ಷಿಯಾದ ಆತ್ಮನನ್ನು ಈ ಮೂಲಕ ಅರಿತುಕೊಂಡರೆ ಕಾಮದ ಉಪಟಳವು ಇಲ್ಲವಾಗುವದು

---

# ನಾಲ್ಕನೆಯ ಅಧ್ಯಾಯ

## ( ಜ್ಞಾ ನ ಯೋ ಗ )

## ಭಾಗವತಮತದ ಗುರುಪರಂಪರೆ

(ಭಾಷ್ಯ)

೨೨೧. ಯೋಽಯಂ ಯೋಗಃ ಅಧ್ಯಾಯದ್ವಯೇನ ಉಕ್ತಃ ಜ್ಞಾನನಿಷ್ಠಾ ಲಕ್ಷಣಃ ಸಸಂನ್ಯಾಸಃ [1] ಕರ್ಮಯೋಗೋಪಾಯಃ, ಯಸ್ಮಿನ್ ವೇದಾರ್ಥಃ ಪರಿಸಮಾಪ್ತಃ ಪ್ರವೃತ್ತಿಲಕ್ಷಣಃ ನಿವೃತ್ತಿಲಕ್ಷಣಶ್ಚ । ಗೀತಾಸು ಚ ಸರ್ವಾಸು ಅಯಮೇವ ಯೋಗೋ ವಿವಕ್ಷಿತೋ ಭಗವತಾ । ಅತಃ ಪರಿಸಮಾಪ್ತಂ ವೇದಾರ್ಥಂ ಮನ್ವಾನಃ ತಂ ವಂಶಕಥನೇನ ಸ್ತೌತಿ ಶ್ರೀ ಭಗವಾನ್ [2]—

(ಭಾಷ್ಯಾರ್ಥ)

**(ಹಿಂದಿನ) ಎರಡು ಅಧ್ಯಾಯಗಳಲ್ಲಿ ಕರ್ಮಯೋಗವೆಂಬ ಸಾಧನೆಯಿಂದ ದೊರಕುವ ಸಂನ್ಯಾಸಸಹಿತವಾದ ಜ್ಞಾನನಿಷ್ಠೆಯೆಂಬ ಯಾವ ಈ ಯೋಗವನ್ನು ಹೇಳಿರುತ್ತದೆಯೋ, ಇದರಲ್ಲಿಯೇ ಪ್ರವೃತ್ತಿ, ನಿವೃತ್ತಿ- ಎಂಬ (ಎರಡು) ವೇದಾರ್ಥವೂ [3] ಸೇರಿರುವದು. ಮತ್ತು (ಈ) ಗೀತೆಯ (ಶ್ಲೋಕಗಳ)ಲ್ಲೆಲ್ಲ ಯೋಗವೆಂದು ಭಗವಂತನು ಹೇಳಿರುವದು ಇದನ್ನೇ.** ಆದ್ದರಿಂದ ವೇದಾರ್ಥವು (ಇಲ್ಲಿಗೆ) ಮುಗಿದಂತಾಯಿತೆಂದು ಭಾವಿಸಿ ಶ್ರೀ ಭಗವಂತನು ಈ (ಯೋಗ)ವನ್ನು (ಗುರು) ವಂಶವನ್ನು [4] ತಿಳಿಸುವದರ ಮೂಲಕ ಹೊಗಳುತ್ತಿದ್ದಾನೆ :—

---

1. ' ಸಂನ್ಯಾಸಃ ' ಮ|| ಮೈ||
2. " ಸ್ತೌತಿ । ಶ್ರೀ ಭಗವಾನ್ ಉವಾಚ " ಮ||
3. ಈಶಾವಾಸ್ಯಭಾಷ್ಯದ ಉಪಸಂಹಾರವನ್ನು ನೋಡಿ.
4. ಇದು ಹೊಸದಾಗಿ ಕಲ್ಪಿಸಿದ್ದಲ್ಲ, ಅನಾದಿಯಾಗಿ ದೊಡ್ಡದೊಡ್ಡ ಕ್ಷತ್ರಿಯ ರಾಜರು ಗುರುಶಿಷ್ಯಪರಂಪರೆಯಿಂದ ಅನುಸರಿಸಿದ ಯೋಗವು ಎಂದು ಹೊಗಳುತ್ತಾನೆ.

ಶ್ರೀ ಭಗವಾನ್ ಉವಾಚ—

**ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್ ।**
**ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್ ॥ ೧ ॥**

೧. ಶ್ರೀ ಭಗವಂತನಿಂತೆಂದನು :–ಈ ಅವ್ಯಯವಾದ ಯೋಗವನ್ನು ನಾನು ವಿವಸ್ವಂತನಿಗೆ ಹೇಳಿದೆನು ; ವಿವಸ್ವಂತನು ಮನುವಿಗೆ ಹೇಳಿದನು ; ಮನುವು ಇಕ್ಷ್ವಾಕುವಿಗೆ ತಿಳಿಸಿದನು.

(ಭಾಷ್ಯ)

೨೨೨. ಇಮಮ್ ಅಧ್ಯಾಯದ್ವಯೇನ ಉಕ್ತಂ ಯೋಗಂ ವಿವಸ್ವತೇ ಆದಿತ್ಯಾಯ ಸರ್ಗಾದೌ ಪ್ರೋಕ್ತವಾನ್ ಅಹಂ ಜಗತ್ಪರಿಪಾಲಯಿತೄಣಾಂ ಕ್ಷತ್ರಿಯಾಣಾಂ ಬಲಾಧಾನಾಯ । ತೇನ ಯೋಗಬಲೇನ ಯುಕ್ತಾಃ ಭವನ್ತಿ ಬ್ರಹ್ಮ[1] ಪರಿರಕ್ಷಿತುಮ್ । ಬ್ರಹ್ಮಕ್ಷತ್ರೇ ಪರಿಪಾಲಿತೇ ಜಗತ್ ಪರಿಪಾಲಯಿತುಮ್ ಅಲಮ್ । ಅವ್ಯಯಮ್ । ಅವ್ಯಯಫಲತ್ವಾತ್ । ನ ಹಿ ಅಸ್ಯ ಯೋಗಸ್ಯ ಸಮ್ಯಗ್ದರ್ಶನನಿಷ್ಠಾಲಕ್ಷಣಸ್ಯ ಮೋಕ್ಷಾಖ್ಯಂ ಫಲಂ ವ್ಯೇತಿ । ಸ ಚ ವಿವಸ್ವಾನ್ ಮನವೇ ಪ್ರಾಹ । ಮನುಃ ಇಕ್ಷ್ವಾಕವೇ ಸ್ವಪುತ್ರಾಯ ಆದಿರಾಜಾಯ ಅಬ್ರವೀತ್ ॥

(ಭಾಷ್ಯಾರ್ಥ)

(ಹಿಂದಿನ) ಎರಡು ಅಧ್ಯಾಯಗಳಲ್ಲಿ ಹೇಳಿದ ಈ ಯೋಗವನ್ನು ಸೃಷ್ಟಿಯ ಪ್ರಾರಂಭದಲ್ಲಿ ವಿವಸ್ವಂತನಿಗೆ ಎಂದರೆ ಆದಿತ್ಯನಿಗೆ[2] ಜಗತ್ತನ್ನು ಕಾಪಾಡುವ ಕ್ಷತ್ರಿಯರಿಗೆ ಬಲವನ್ನು ಕೊಡುವದಕ್ಕಾಗಿ ನಾನು ಹೇಳಿದೆನು (ಏಕೆಂದರೆ) ಆ ಯೋಗಬಲದಿಂದ ಕೂಡಿದ್ದರೆ (ಅವರು) ಬ್ರಾಹ್ಮಣ್ಯವನ್ನು ಕಾಪಾಡುವದಕ್ಕೆ ಸಮರ್ಥರಾಗುವರು. ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ಕಾಪಾಡಿದರೆ ಜಗತ್ತನ್ನು ಕಾಪಾಡುವದಕ್ಕೆ (ಅವರು) ಶಕ್ತರಾಗುವರು.[3] ಅವ್ಯಯವಾದ (ಯೋಗವನ್ನು ಹೇಳಿದೆನು ಎಂದು ಹೇಳಿರುವದೇಕೆಂದರೆ ಇದರ) ಫಲವು[4] ಅವ್ಯಯವಾಗಿರುತ್ತದೆ.

---

1. "ಬ್ರಹ್ಮಕ್ಷತ್ರೇ" ಎಂಬ ಮ॥ ಪಾಠವು ಸರಿಯಲ್ಲ,
2. ಕ್ಷತ್ರಿಯರ ರಾಜರು ಹಲವರು ಈ ವಿವಸ್ವಂತನ ವಂಶದವರು.
3. ಗೌ. ಧ ೨-೨-೨೭.
4. ಯೋಗವು ನಷ್ಟವಾಗಿತ್ತೆಂದೂ ಅದನ್ನೇ ಈಗ ಹೇಳಿದೆನೆಂದೂ ಭಗವಂತನು ಮುಂದೆ ಹೇಳುವದರಿಂದ ಯೋಗವು ಅವ್ಯಯವಲ್ಲ; ಅದರ ಫಲವು ಅವ್ಯಯವು. ಯೋಗವೆಂದರೆ ಸಮ್ಯಗ್ದರ್ಶನವೆಂದು ಅರ್ಥವನ್ನು ಮಾಡಿದ್ದಕ್ಕೆ ಇದೊಂದು ಆಧಾರವು.

ಏಕೆಂದರೆ ಸಮ್ಯಗ್ದರ್ಶನದಲ್ಲಿ ನಿಲುಗಡೆಯನ್ನು ಪಡೆಯುವದೆಂಬ ಈ ಯೋಗದ ಮೋಕ್ಷವೆಂಬ ಫಲವು ನಾಶವಾಗುವದೇ ಇಲ್ಲ. (ಹೀಗೆ ಅವ್ಯಯವಾದ ಈ ಯೋಗವನ್ನು ನಾನು **ವಿವಸ್ವಂತನಿಗೆ** ಹೇಳಿದೆನು), ಆ ವಿವಸ್ವಂತನು **ಮನುವಿಗೆ** [1] ಹೇಳಿದನು. ಮನುವು ಮೊದಲನೆಯ ರಾಜನಾದ **ಇಕ್ಷ್ವಾಕು**ವೆಂಬ ತನ್ನ ಮಗನಿಗೆ ತಿಳಿಸಿದನು.

**ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ ।**
**ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ॥ ೨ ॥**

೨. ಹೀಗೆ ಪರಂಪರೆಯಿಂದ ಬಂದಿರುವ ಈ (ಯೋಗ)ವನ್ನು ರಾಜರ್ಷಿಗಳು ಬಲ್ಲವರಾಗಿದ್ದರು. ಎಲೈ ಪರಂತಪನೆ, ಆ ಯೋಗವು ಬಹು ಕಾಲವಾದಮೇಲೆ ಇಲ್ಲಿ ನಷ್ಟವಾಯಿತು.

(ಭಾಷ್ಯ)

೨೨೩. ಏವಂ ಕ್ಷತ್ರಿಯಪರಂಪರಾಪ್ರಾಪ್ತಮ್ ಇಮಂ ರಾಜರ್ಷಯಃ ರಾಜಾನಶ್ಚ ತೇ ಋಷಯಶ್ಚ ರಾಜರ್ಷಯಃ ವಿದುಃ ಇಮಂ ಯೋಗಮ್ । ಸ ಯೋಗಃ ಕಾಲೇನ ಇಹ ಮಹತಾ ದೀರ್ಘೇಣ ನಷ್ಟಃ ವಿಚ್ಛಿನ್ನಸಂಪ್ರದಾಯಃ ಸಂವೃತ್ತಃ ಹೇ ಪರಂತಪ। ಆತ್ಮನಃ ವಿಪಕ್ಷಭೂತಾಃ ಪರಾ ಇತಿ ಉಚ್ಯನ್ತೇ [2] । ತಾನ್ ಶೌರ್ಯತೇಜೋಗಭಸ್ತಿಭಿಃ ಭಾನುರಿವ ತಾಪಯತಿ ಇತಿ ಪರಂತಪಃ ಶತ್ರುತಾಪನಃ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆ ಕ್ಷತ್ರಿಯರ ಪರಂಪರೆಯಿಂದ ಬಂದಿರುವ ಇದನ್ನು ಈ ಯೋಗವನ್ನು **ರಾಜರ್ಷಿಗಳು** [3] ಎಂದರೆ ರಾಜರೂ ಋಷಿಗಳೂ ಆಗಿರುವವರು ಬಲ್ಲವರಾಗಿದ್ದರು.

---

1. ಮನುಗಳು ಹದಿನಾಲ್ಕು ಮಂದಿ; ಒಬ್ಬೊಬ್ಬ ಮನುವಿನ ಕಾಲವು ಎಪ್ಪತ್ತೊಂದು ದಿವ್ಯ ಯುಗಗಳಾಗಿದ್ದು ಒಂದು ಮನ್ವಂತರವೆನಿಸುವದು. ಈಗಿನ ಮನ್ವಂತರವು ವೈವಸ್ವತನೆಂಬ ಏಳನೆಯ ಮನುವಿನದು. ಅವನನ್ನೇ ಈ ಗುರುಪರಂಪರೆಯಲ್ಲಿ ಹೇಳಿದೆ.

2. ‘ ಪರಾ ಉಚ್ಯನ್ತೇ ’ ನಿ॥

3. ಋಷಿಗಳೆಂದರೆ ತತ್ತ್ವವನ್ನು ಕಂಡುಕೊಂಡವರು. ಇಲ್ಲಿ ರಾಜರ್ಷಿಗಳ ಪರಂಪರೆಯನ್ನೇ ಹೇಳಿರುವದು ಅರ್ಜುನನಿಗೆ ಆ ಯೋಗವು ತಕ್ಕದ್ದೆಂದು ತಿಳಿಸುವದಕ್ಕೆ.

ಆ ಯೋಗವು ಎಲೈ ಪರಂತಪನೆ, ಬಹು ದೀರ್ಘವಾದ ಕಾಲವಾದಮೇಲೆ ನಷ್ಟವಾಯಿತು, ಎಂದರೆ (ಅದರ) ಸಂಪ್ರದಾಯವು ಕಡಿದುಹೋಯಿತು. ತನಗೆ ಎದುರಿನ ಪಕ್ಷದವರು ಪರರು ; ಅಂಥವರಿಗೆ ತನ್ನ ಶೂರತನದ ತೇಜಸ್ಸಿನ ಕಿರಣಗಳಿಂದ ಸೂರ್ಯನು (ಜನರಿಗೆ ಸಂತಾಪವನ್ನುಂಟುಮಾಡುವಂತೆ) ಸಂತಾಪವನ್ನುಂಟುಮಾಡುವದರಿಂದ (ಅರ್ಜುನನು) ಪರಂತಪನು, ಶತ್ರುಗಳನ್ನು ಸಂತಾಪಗೊಳಿಸುವವನು (ಎಂದು ಭಗವಂತನೆಂದಿರುತ್ತಾನೆ).

(ಭಾಷ್ಯ)

೨೨೪. ದುರ್ಬಲಾನ್ ಅಜಿತೇನ್ದ್ರಿಯಾನ್ ಪ್ರಾಪ್ಯ ನಷ್ಟಂ ಯೋಗಮ್ ಇಮಮ್ [1] ಉಪಲಭ್ಯ ಲೋಕಂ ಚ ಅಪುರುಷಾರ್ಥಸಂಬನ್ಧಿನಮ್—

(ಭಾಷ್ಯಾರ್ಥ)

ದುರ್ಬಲರಾಗಿ ಇಂದ್ರಿಯಗಳನ್ನು ಗೆದ್ದುಕೊಳ್ಳದೆ ಇದ್ದವರನ್ನು ಸೇರಿದ್ದರಿಂದ ಈ ಯೋಗವು ಕಣ್ಮರೆಯಾದದ್ದನ್ನೂ ಜನರಿಗೆ ಪುರುಷಾರ್ಥವು ದೊರಕದಂತೆ ಆದದ್ದನ್ನೂ ಕಂಡು :—

**ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ ।**
**ಭಕ್ತೋಽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಮ್ ॥ ೩ ॥**

೩. ಆ ಪುರಾತನವಾದ ಯೋಗವೇ ನನಗೆ ಭಕ್ತನೂ ಸಖನೂ ಆಗಿರುವೆಯೆಂದು ಈಗ ನಿನಗೆ ನನ್ನಿಂದ ಪ್ರೋಕ್ತವಾಯಿತು. ಏಕೆಂದರೆ ಇದು ಉತ್ತಮವಾದ ರಹಸ್ಯವು.

(ಭಾಷ್ಯ)

೨೨೫. ಸ ಏವ ಅಯಂ ಮಯಾ ತೇ ತುಭ್ಯಮ್ ಅದ್ಯ ಇದಾನೀಂ [2] ಯೋಗಃ ಪ್ರೋಕ್ತಃ ಪುರಾತನಃ ಭಕ್ತಃ ಅಸಿ ಮೇ ಸಖಾ ಚ ಅಸಿ ಇತಿ ।ರಹಸ್ಯಂ ಹಿ ಯಸ್ಮಾತ್ ಏತತ್ ಉತ್ತಮಂ ಯೋಗಃ [3] ಜ್ಞಾನಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಆ ಪುರಾತನವಾದ ಈ ಯೋಗವನ್ನೇ ನೀನು ನನಗೆ ಭಕ್ತನೂ [4] ಆಗಿದೀಯೆ,

---

1. ಈ ಮಾತು ಮ॥ ಮೈ॥ಗಳಲ್ಲಿಲ್ಲ.
2. ಈ ಮಾತು ಮೈ॥ ಮ॥ಗಳಲ್ಲಿಲ್ಲ.
3. “ ಯೋಗಜ್ಞಾನಮ್ ” ಮ॥ ಮೈ॥
4. ಯೋಗ್ಯರಾದವರಿಗೇ ಈ ಯೋಗವನ್ನು ಹೇಳಿದರೆ ಸಂಪ್ರದಾಯವು ಮುಂದುವರಿಯುವದೆಂದು ನಿನಗೆ ಹೇಳಿದ್ದೇನೆ ಎಂದಭಿಪ್ರಾಯ.

ಗೆಳೆಯನೂ ಆಗಿದೀಯೆ ಎಂಬ ಕಾರಣದಿಂದ ನಾನು ಇಂದು ಈಗ ನಿನಗೆ ನಿನಗೋಸ್ಕರ ಹೇಳಿರುತ್ತೇನೆ. ಏಕೆಂದರೆ ಇದು (ಈ) ಯೋಗವು ಎಂದರೆ ಜ್ಞಾನವು ಉತ್ತಮವಾದ ರಹಸ್ಯವು ಎಂದರ್ಥ.

## ಈಶ್ವರನ ಅವತಾರ

(ಭಾಷ್ಯ)

೨೨೬. ಭಗವತಾ ವಿಪ್ರತಿಷಿದ್ಧಮ್ ಉಕ್ತಮ್ ಇತಿ ಮಾ ಭೂತ್ ಕಸ್ಯಚಿತ್ ಬುದ್ಧಿಃ ಇತಿ ಪರಿಹಾರಾರ್ಥಂ ಚೋದ್ಯಮಿವ ಕುರ್ವನ್ ಅರ್ಜುನ ಉವಾಚ—

(ಭಾಷ್ಯಾರ್ಥ)

ಭಗವಂತನು ಹೇಳಿದ್ದು ವಿರುದ್ಧವಾದದ್ದು ಎಂದು ಯಾರಿಗೂ ತಿಳಿವಳಿಕೆಯುಂಟಾಗದೆ ಇರಲಿ ! ಎಂದು (ಅಂಥ ತಿಳಿವಳಿಕೆಯನ್ನು) ಬರಗೊಡಿಸದೆ ಇರುವದಕ್ಕಾಗಿ ಆಕ್ಷೇಪಣೆಯನ್ನು ಮಾಡುವವನಂತೆ [1] ಅರ್ಜುನನು (ಮುಂದಿನ) ಮಾತನ್ನು ಆಡಿರುತ್ತಾನೆ. —

**ಅರ್ಜುನ ಉವಾಚ—**

**ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ ।**
**ಕಥಮೇತದ್ ವಿಜಾನೀಯಾಂ ತ್ವಮಾದೌ ಪ್ರೋಕ್ತವಾನಿತಿ ॥ ೪ ॥**

೪. ನಿನ್ನ ಜನ್ಮವು ಈಚಿನದು, ವಿವಸ್ವಂತನ ಜನ್ಮವು ಆಚಿನದು. ನೀನು ಮೊದಲು (ಇದನ್ನು) ಹೇಳಿದೆ ಎಂಬುದನ್ನು ನಾನು ಹೇಗೆ ತಿಳಿದುಕೊಳ್ಳಲಿ !

(ಭಾಷ್ಯ)

೨೨೭. ಅಪರಮ್ ಅರ್ವಾಕ್ ವಸುದೇವಗೃಹೇ ಭವತೋ ಜನ್ಮ ಪರಂ ಪೂರ್ವಂ ಸರ್ಗಾದೌ ಜನ್ಮ ಉತ್ಪತ್ತಿಃ ವಿವಸ್ವತಃ ಆದಿತ್ಯಸ್ಯ । ತತ್ ಕಥಮ್ ಏತದ್ ವಿಜಾನೀಯಾಮ್ ಅವಿರುದ್ಧಾರ್ಥತಯಾ ಯಸ್ತ್ವಮೇವ ಆದೌ ಪ್ರೋಕ್ತವಾನ್ ಇಮಂ ಯೋಗಂ ಸ ಏವ ತ್ವಮ್ ಇದಾನೀಂ ಮಹ್ಯಂ ಪ್ರೋಕ್ತವಾನ್ ಅಸಿ ಇತಿ ?॥

---

1. “ನನಗೆ ಸಕಲಕರ್ಮಗಳನ್ನೂ ಅರ್ಪಿಸು” ಎಂಬ (೩-೩೦) ಮಾತಿನಿಂದಲೇ ಶ್ರೀಕೃಷ್ಣನು ಭಗವಂತನೆಂಬುದು ತಿಳಿದಿದೆ; ಭಗವತ್ಸ್ವರೂಪದ ವಿಷಯಕ್ಕೆ ಇನ್ನೂ ಹೆಚ್ಚಿಗೆ ತಿಳಿಯಬೇಕೆಂದು ಅರ್ಜುನನು ಕೇಳಿರುತ್ತಾನೆ. ಇದು ನಿಜವಾದ ಆಕ್ಷೇಪವಲ್ಲ.

(ಭಾಷ್ಯಾರ್ಥ)

ನಿನ್ನ ಹುಟ್ಟು ಈಚಿನದು, ವಸುದೇವನ ಮನೆಯಲ್ಲಿ ಇತ್ತಲಾಗಿ ಆದದ್ದು; ವಿವಸ್ವಂತನ ಎಂದರೆ ಆದಿತ್ಯನ ಜನ್ಮವು ಹುಟ್ಟು ಆಚಿನದು, ಹಿಂದಿನದು, ಸೃಷ್ಟಿಯ ಮೊದಲಿನಲ್ಲಿ (ಆದದ್ದು) ಹೀಗಿರುವದರಿಂದ ಯಾವ ನೀನೇ ಮೊದಲು ಈ ಯೋಗವನ್ನು ಹೇಳಿದ್ದೆಯೋ ಆ ನೀನೇ ಈಗ ನನಗೆ ಹೇಳಿರುವೆ-ಎಂದು ಇದನ್ನು ಯಾವ ವಿರೋಧವಿಲ್ಲದ (ವಾಕ್ಯವೆಂದು) ಹೇಗೆ ತಿಳಿದುಕೊಳ್ಳಲಿ?

(ಭಾಷ್ಯ)

೨೨೮. ಯಾ ವಾಸುದೇವೇ ಅನೀಶ್ವರಾಸರ್ವಜ್ಞಾಶಙ್ಕಾ ಮೂರ್ಖಾಣಾಮ್, ತಾಂ ಪರಿಹರನ್ ಶ್ರೀ ಭಗವಾನ್ ಉವಾಚ। ಯದರ್ಥೋ ಹಿ ಅರ್ಜುನಸ್ಯ ಪ್ರಶ್ನಃ—

(ಭಾಷ್ಯಾರ್ಥ)

**ವಾಸುದೇವನು** ಈಶ್ವರನಲ್ಲವೆಂದೂ ಸರ್ವಜ್ಞನಲ್ಲವೆಂದೂ ಮೂರ್ಖರಿಗೆ ತೋರಬಹುದಷ್ಟೆ; (ಅವರ) ಆ (ಶಂಕೆಯನ್ನು) ಪರಿಹರಿಸುವದಕ್ಕಾಗಿ ಶ್ರೀ ಭಗವಂತನು (ಈ ಮುಂದಿನ ವಾಕ್ಯವನ್ನು) ಹೇಳಿರುತ್ತಾನೆ ಇದಕ್ಕೋಸ್ಕರವೇ ಅರ್ಜುನನ ಪ್ರಶ್ನೆಯು (ಹುಟ್ಟಿರುವದು).—

**ಶ್ರೀ ಭಗವಾನ್ ಉವಾಚ—**

**ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ।**
**ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥ ೫ ॥**

೫. ಶ್ರೀ ಭಗವಂತನಿಂತೆಂದನು:—ಅರ್ಜುನನೆ, ನನಗೂ ನಿನಗೂ ಅನೇಕ ಜನ್ಮಗಳು ಕಳೆದುಹೋಗಿವೆ. ಅವುಗಳೆಲ್ಲವನ್ನೂ ನಾನು ಬಲ್ಲೆನು. ಎಲೈ ಪರಂತಪನೆ, ನೀನು ಅರಿಯೆ

(ಭಾಷ್ಯ)

೨೨೯. ಬಹೂನಿ ಮೇ ಮಮ ವ್ಯತೀತಾನಿ ವ್ಯತಿಕ್ರಾನ್ತಾನಿ ಜನ್ಮಾನಿ ತವ ಚ ಹೇ ಅರ್ಜುನ। ತಾನಿ ಅಹಂ ವೇದ ಜಾನೇ ಸರ್ವಾಣಿ ನ ತ್ವಂ ವೇತ್ಥ ನ ಜಾನೀಷೇ ಧರ್ಮಾಧರ್ಮಾದಿಪ್ರತಿಬದ್ಧಜ್ಞಾನಶಕ್ತಿತ್ವಾತ್। ಅಹಂ ಪುನಃ ನಿತ್ಯಶುದ್ಧಬುದ್ಧಮುಕ್ತಸ್ವಭಾವತ್ವಾತ್ ಅನಾವರಣಜ್ಞಾನಶಕ್ತಿಃ ಇತಿ ವೇದ ಅಹಂ ಹೇ ಪರಂತಪ ॥

(ಭಾಷ್ಯಾರ್ಥ)

ಎಲೈ ಅರ್ಜುನನೆ, ನನಗೂ ನಿನಗೂ ಎಷ್ಟೋ ಜನ್ಮಗಳು ಕಳೆದುಹೋಗಿವೆ,

ಆಗಿಹೋಗಿವೆ ಅವುಗಳೆಲ್ಲವನ್ನೂ ನಾನು ಬಲ್ಲೆನು, ತಿಳಿದುಕೊಂಡಿರುತ್ತೇನೆ. ಧರ್ಮ, ಅಧರ್ಮ-ಮುಂತಾದವುಗಳು [1] (ನಿನ್ನ) ಜ್ಞಾನಶಕ್ತಿಗೆ ಅಡ್ಡಿಯಾಗಿರುವದರಿಂದ (ಅವನ್ನು) ನೀನು ಅರಿಯೆ ; ಆದರೆ ನಾನು ಯಾವಾಗಲೂ ಶುದ್ಧನೂ ಜ್ಞಾನಸ್ವರೂಪನೂ ಮುಕ್ತನೂ ಆಗಿರುವ ಸ್ವಭಾವದವನಾದ್ದರಿಂದ (ನನ್ನ) ಜ್ಞಾನಶಕ್ತಿಗೆ ಯಾವದೊಂದು ಮುಸುಕೂ [2] ಇಲ್ಲ; ಆದ್ದರಿಂದ, ಎಲೈ ಪರಂತಪನೆ, ನಾನು (ಅವನ್ನು) ಬಲ್ಲೆನು.

(ಭಾಷ್ಯ)

೨೩೦. ಕಥಂ ತರ್ಹಿ ತವ ನಿತ್ಯೇಶ್ವರಸ್ಯ ಧರ್ಮಾಧರ್ಮಾಭಾವೇಽಪಿ ಜನ್ಮ ಇತಿ । ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ, ಯಾವಾಗಲೂ ಈಶ್ವರನಾಗಿರುವ ನಿನಗೆ ಧರ್ಮವಾಗಲಿ ಅಧರ್ಮವಾಗಲಿ ಇಲ್ಲವಾದರೂ (ನಿನಗೆ) ಜನ್ಮವುಂಟಾದದ್ದು ಹೇಗೆ? ಎಂದರೆ ಹೇಳುತ್ತೇನೆ:-

**ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।**
**ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥ ೬ ॥**

೬. ಅಜನೂ ಅವ್ಯಯಾತ್ಮನೂ ಆಗಿದ್ದರೂ ಭೂತಗಳಿಗೆ ಈಶ್ವರನಾಗಿದ್ದರೂ ನನ್ನ ಪ್ರಕೃತಿಯನ್ನು ಹಿಡಿತದಲ್ಲಿಟ್ಟುಕೊಂಡು ನನ್ನ ಮಾಯೆಯಿಂದ ಸಂಭವಿಸುತ್ತಿರುವೆನು.

(ಭಾಷ್ಯ)

೨೩೧. ಅಜೋಽಪಿ ಜನ್ಮರಹಿತೋಽಪಿ ಸನ್ । ತಥಾ ಅವ್ಯಯಾತ್ಮಾ ಅಕ್ಷೀಣಜ್ಞಾನಶಕ್ತಿಸ್ವಭಾವೋಽಪಿ ಸನ್ । ತಥಾ ಭೂತಾನಾಂ ಬ್ರಹ್ಮಾದಿಸ್ತಂಬಪರ್ಯನ್ತಾನಾಮ್ ಈಶ್ವರಃ ಈಶನಶೀಲೋಽಪಿ ಸನ್ ಪ್ರಕೃತಿಂ ಸ್ವಾಂ ಮಮ ವೈಷ್ಣವೀಂ

---

1. ಧರ್ಮ, ಅಧರ್ಮ–ಮುಂತಾದವುಗಳಿಗೆ ಅಜ್ಞಾನದಿಂದ ವಶನಾಗಿರುವದೆಂಬುದೇ ಜೀವನ ಜ್ಞಾನಕ್ಕೆ ಅಡ್ಡಿಯಾಗಿರುವದು. ಈಶ್ವರನು ಸಾಕ್ಷಿರೂಪವಾದ ಜ್ಞಾನವೇ ಆಗಿರುವದರಿಂದ ಅವನ ಜ್ಞಾನಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಇಲ್ಲಿ ವ್ಯಾವಹಾರಿಕವಾದ ಜೀವೇಶ್ವರಭೇದವನ್ನು ಒಪ್ಪಿ ಹೀಗೆಂದಿದೆ. ಸೂ. ಭಾ. ೧-೧-೫, ೨-೧-೧೪ ಇವನ್ನು ನೋಡಿ.

2. ತೆರೆಯಿಂದ ವಸ್ತುಗಳು ಮರೆಯಾಗಿರುವಂತೆ ಅಜ್ಞಾನದಿಂದ ಜೀವನಿಗೆ ತತ್ತ್ವವು ತೋರದೆ ಇರುತ್ತದೆ; ಈಶ್ವರನಿಗೆ ಅಜ್ಞಾನವಿಲ್ಲ. ಇಲ್ಲಿ ನಿಜವಾಗಿಯೂ ಒಂದು ಆವರಣವನ್ನೇ ಹೇಳಿದೆ ಎಂದು ಕೆಲವರು ಭ್ರಮಿಸಿರುತ್ತಾರೆ.

ಮಾಯಾಂ ತ್ರಿಗುಣಾತ್ಮಿಕಾಮ್, ಯಸ್ಯಾ ವಶೇ ಸರ್ವಂ ಜಗದ್ ವರ್ತತೇ ಯಯಾ ಮೋಹಿತಂ ಸತ್ ಸ್ವಮಾತ್ಮಾನಂ ವಾಸುದೇವಂ ನ ಜಾನಾತಿ, ತಾಂ ಪ್ರಕೃತಿಂ ಸ್ವಾಮ್ ಅಧಿಷ್ಠಾಯ ವಶೀಕೃತ್ಯ ಸಂಭವಾಮಿ ದೇಹವಾನಿವ [1] ಭವಾಮಿ ಜಾತ ಇವ ಆತ್ಮಮಾಯಯಾ ಆತ್ಮನೋ ಮಾಯಯಾ ನ ಪರಮಾರ್ಥತಃ ಲೋಕವತ್ ||

(ಭಾಷ್ಯಾರ್ಥ)

(ನಾನು) ಅಜನಾಗಿದ್ದರೂ ಎಂದರೆ ಹುಟ್ಟಿಲ್ಲದವನಾದರೂ, ಅವ್ಯಯಾತ್ಮನಾಗಿದ್ದರೂ ಎಂದರೆ ಜ್ಞಾನಶಕ್ತಿಯು ಸವೆದುಹೋಗುವ ಸ್ವಭಾವದವನಲ್ಲವಾದರೂ, ಹಾಗೂ ಭೂತಗಳ ಬ್ರಹ್ಮನು ಮೊದಲಾಗಿ ಸ್ಥಾವರದವರೆಗಿನ (ಪ್ರಾಣಿಗಳ) ಈಶ್ವರನಾಗಿದ್ದರೂ (ಅವುಗಳನ್ನು) ಆಳುತ್ತಿರುವ ಸ್ವಭಾವದವನಾದರೂ ಸ್ವಕೀಯವಾದ ನನ್ನ ಪ್ರಕೃತಿಯನ್ನು ಮೂರು ಗುಣಗಳ **ವೈಷ್ಣವಮಾಯೆಯನ್ನು** [2], ಯಾವದರ ವಶದಲ್ಲಿ ಜಗತ್ತೆಲ್ಲವೂ ಇರುತ್ತದೆಯೋ, ಯಾವದರಿಂದ ಮೋಹಗೊಂಡು ತನ್ನ ಆತ್ಮನಾದ ವಾಸುದೇವನನ್ನು ಅರಿಯದೆ ಇರುವರೋ, ಆ ನನ್ನ ಪ್ರಕೃತಿಯನ್ನು ಹಿಡಿದಿಟ್ಟುಕೊಂಡು ವಶಪಡಿಸಿಕೊಂಡು ಹುಟ್ಟುವೆನು, ಎಂದರೆ ದೇಹವುಳ್ಳವನಾದಂತೆ ಹುಟ್ಟಿದವನಂತೆ ಆಗುವೆನು ಆತ್ಮಮಾಯೆಯಿಂದ ಎಂದರೆ ನನ್ನ ಮಾಯೆಯಿಂದ (ಹುಟ್ಟುವೆನೇ) ಹೊರತು ಮಿಕ್ಕ ಜನರಂತೆ [3] ನಿಜವಾಗಿಯೂ ಹುಟ್ಟುವದಿಲ್ಲ[4].

## ಅವತಾರದ ಉದ್ದೇಶ

(ಭಾಷ್ಯ)

೨೩೨. ತಚ್ಚ ಜನ್ಮ ಕದಾ ಕಿಮರ್ಥಂ ಚ ಇತಿ ? ಉಚ್ಯತೇ—

---

1. 'ದೇಹವಾನ್' ಎಂಬ ಮ|| ಪಾಠವು ಸರಿಯಲ್ಲ.

2. ಪ್ರಧಾನವೆಂಬ ಸ್ವತಂತ್ರವಾದ ಜಗತ್ಕಾರಣವು ಎಲ್ಲಾ ವಿಕೃತಿಗಳಿಗೆ ಮೂಲವಾದ ಪ್ರಕೃತಿ ಎಂದು ಸಾಂಖ್ಯರು ಹೇಳುತ್ತಾರೆ; ಇದನ್ನು ಖಂಡಿಸಿ ಈಶ್ವರನ ಅಧೀನವಲ್ಲಿದ್ದು ಕೊಂಡು ಆವನಿಂದ ಬೇರೆ ಅಥವಾ ಬೇರೆಯಲ್ಲ ಎಂದು ಹೇಳುವದಕ್ಕೆ ಬರುವಂತಿಲ್ಲದ **ಅವ್ಯಾಕೃತ ಅಥವಾ ಮಾಯೆಯೇ** ಆ ಪ್ರಕೃತಿ ಎಂದು ಸೂ. ಭಾ ದಲ್ಲಿ ತೋರಿಸಿದೆ. ಸೂ. ಭಾ. ೧-೪-೩, ೧-೪-೯ ನೋಡಿ.

3. ಕರ್ಮವಶರಾದವರು ಹುಟ್ಟುವಂತೆ.

4. ಹುಟ್ಟುವಂತೆ ತೋರುವೆನು ಎಂದರ್ಥ. ಇತರರ ಜನ್ಮವೂ ಮಾಯವೇ ಆದರೂ ಅಜ್ಞಾನದಿಂದ ಅವರು ಹಾಗೆಂದು ಅರಿಯರು.

(ಭಾಷ್ಯಾರ್ಥ)

ಆ ಜನ್ಮವು (ಆಗುವದು) ಯಾವಾಗ, ಮತ್ತು ಏತಕ್ಕಾಗಿ? ಎಂದರೆ (ಭಗವಂತನು) ಹೇಳುತ್ತಾನೆ :—

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥ ೭ ॥**

೭. ಎಲೈ ಭರತವಂಶೋತ್ಪನ್ನನೆ, ಯಾವಯಾವಾಗ ಧರ್ಮಕ್ಕೆ ಗ್ಲಾನಿಯಾಗುವದೋ ಅಧರ್ಮದ ಏಳುಪಿಕೆಯಾಗುವದೋ ಆಗಾಗ ನಾನು ನನ್ನನ್ನು ಸೃಷ್ಟಿಮಾಡಿಕೊಳ್ಳುವೆನು.

(ಭಾಷ್ಯ)

೨೩೩. ಯದಾ ಯದಾ ಹಿ ಧರ್ಮಸ್ಯ ಗ್ಲಾನಿಃ ಹಾನಿಃ ವರ್ಣಾಶ್ರಮಾದಿಲಕ್ಷಣಸ್ಯ ಪ್ರಾಣಿನಾಮ್ ಅಭ್ಯುದಯನಿಃಶ್ರೇಯಸಸಾಧನಸ್ಯ ಭವತಿ ಭಾರತ । ಅಭ್ಯುತ್ಥಾನಮ್ ಉದ್ಭವಃ ಅಧರ್ಮಸ್ಯ ತದಾ ತದಾ ಆತ್ಮಾನಂ ಸೃಜಾಮಿ ಅಹಂ ಮಾಯಯಾ ॥

(ಭಾಷ್ಯಾರ್ಥ)

ಅಭ್ಯುದಯಕ್ಕೂ ನಿಃಶ್ರೇಯಸಕ್ಕೂ ಸಾಧನವಾಗಿರುವ ವರ್ಣ (ಧರ್ಮ), ಆಶ್ರಮಧರ್ಮವೇ-ಮುಂತಾದ ರೂಪದಲ್ಲಿರುವ ಧರ್ಮದ ಗ್ಲಾನಿಯು ಎಂದರೆ ನಾಶವು ಯಾವ ಯಾವಾಗ ಆಗುವದೋ, ಎಲೈ ಭರತವಂಶೋತ್ಪನ್ನನೆ, ಅಧರ್ಮದ ಏಳುವಿಕೆಯು ತಲೆದೋರುವಿಕೆಯು (ಯಾವಯಾವಾಗ ಆಗುವದೋ), ಆಗಾಗ ನಾನು ಮಾಯೆಯಿಂದ ನನ್ನನ್ನು ಸೃಷ್ಟಿಮಾಡಿಕೊಳ್ಳುವೆನು.

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ ೮ ॥**

೮. ಸಾಧುಗಳ ಪರಿತ್ರಾಣಕ್ಕಾಗಿಯೂ ದುಷ್ಕೃತಿಗಳ ವಿನಾಶಕ್ಕಾಗಿಯೂ ಧರ್ಮವನ್ನು ಸಂಸ್ಥಾಪನೆಮಾಡುವದಕ್ಕಾಗಿಯೂ ಯುಗಯುಗದಲ್ಲಿಯೂ ಹುಟ್ಟುವೆನು.

(ಭಾಷ್ಯ)

೨೩೪. ಕಿಮರ್ಥಮ್? ಪರಿತ್ರಾಣಾಯ ಪರಿರಕ್ಷಣಾಯ ಸಾಧೂನಾಂ ಸನ್ಮಾರ್ಗಸ್ಥಾನಾಂ ವಿನಾಶಾಯ ಚ ದುಷ್ಕೃತಾಂ ಪಾಪಕಾರಿಣಾಮ್ । ಕಿಂಚ ಧರ್ಮ

ಸಂಸ್ಥಾಪನಾರ್ಥಾಯ ಧರ್ಮಸ್ಯ ಸಮ್ಯಕ್ ಸ್ಥಾಪನಂ ಧರ್ಮಸಂಸ್ಥಾಪನಂ । ತದರ್ಥಂ ಸಂಭವಾಮಿ ಯುಗೇ ಯುಗೇ ಪ್ರತಿಯುಗಮ್ ॥

(ಭಾಷ್ಯಾರ್ಥ)

ಏತಕ್ಕೆ (ಸೃಷ್ಟಿಮಾಡಿಕೊಳ್ಳುವೆ)? ಎಂದರೆ ಸಾಧುಗಳನ್ನು ಸರಿಯಾದ ಮಾರ್ಗದಲ್ಲಿರುವವರನ್ನು ಪರಿತ್ರಾಣಮಾಡುವದಕ್ಕಾಗಿಯೂ ಎಂದರೆ ಕಾಪಾಡುವದಕ್ಕಾಗಿಯೂ ದುಷ್ಕೃತಿಗಳನ್ನು ಎಂದರೆ ಪಾಪಕರ್ಮವನ್ನು ಮಾಡುವಂಥವರನ್ನು ವಿನಾಶಗೊಳಿಸುವದಕ್ಕಾಗಿಯೂ ಧರ್ಮವನ್ನು ಸಂಸ್ಥಾಪನೆಮಾಡುವದಕ್ಕಾಗಿಯೂ ಸಂಸ್ಥಾಪನೆ ಎಂದರೆ ಚೆನ್ನಾಗಿ ನೆಲೆನಿಲ್ಲಿಸುವದು, ಅದಕ್ಕಾಗಿಯೂ ಯುಗಯುಗದಲ್ಲಿಯೂ (ಮಾಯೆಯಿಂದ) ಹುಟ್ಟುತ್ತಿರುವೆನು

## ಪರಮಾತ್ಮಜ್ಞಾನದ ಫಲ

ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥ ೯ ॥

೯. ಎಲೈ ಅರ್ಜುನನೆ, ದಿವ್ಯವಾದ ನನ್ನ ಜನ್ಮವನ್ನೂ ಕರ್ಮವನ್ನೂ ಯಾವಾತನು ಹೀಗೆ ತತ್ತ್ವದಿಂದ ತಿಳಿದುಕೊಳ್ಳುವನೋ ಅವನು ದೇಹವನ್ನು ಬಿಟ್ಟ ಬಳಿಕ ಮತ್ತೆ ಜನ್ಮವನ್ನು ಹೊಂದುವದಿಲ್ಲ, ನನ್ನನ್ನೇ ಹೊಂದುತ್ತಾನೆ.

(ಭಾಷ್ಯ)

೨೩೫. ಜನ್ಮ ಮಾಯಾರೂಪಂ ಕರ್ಮ ಚ ಸಾಧುಪರಿತ್ರಾಣಾದಿ[1] ಮೇ ಮಮ ದಿವ್ಯಮ್ ಅಪ್ರಾಕೃತಮ್ ಐಶ್ವರಮ್ ಏವಂ ಯಥೋಕ್ತಂ ಯೋ ವೇತ್ತಿ ತತ್ತ್ವತಃ ತತ್ತ್ವೇನ ಯಥಾವತ್ ತ್ಯಕ್ತ್ವಾ ದೇಹಮ್ ಇಮಂ ಪುನರ್ಜನ್ಮ ಪುನರುತ್ಪತ್ತಿಂ ನೈತಿ ನ ಪ್ರಾಪ್ನೋತಿ । ಮಾಮ್ ಏತಿ ಆಗಚ್ಛತಿ ಸ ಮುಚ್ಯತೇ ಹೇ ಅರ್ಜುನ ॥

---

1. "ಸಾಧೂನಾಂ ಪರಿತ್ರಾಣಾದಿ" ವಾ॥ ಮ॥ ಮೈ॥

(ಭಾಷ್ಯಾರ್ಥ)

ನನ್ನ ದಿವ್ಯವಾದ ಎಂದರೆ ಪ್ರಕೃತಿಗೆ ವಶವಾಗದ[1] ಈಶ್ವರನಾದ (ನನ್ನ) ಮಾಯಾರೂಪವಾದ ಜನ್ಮವನ್ನೂ ಸಾಧುಗಳನ್ನು ಕಾಪಾಡುವದೇ ಮುಂತಾದ ಕರ್ಮವನ್ನೂ ಹೀಗೆ ಮೇಲೆ ಹೇಳಿದಂತೆ ತತ್ತ್ವದಿಂದ ಇದ್ದದ್ದು ಇದ್ದಂತೆ ಯಾವಾತನು ಅರಿತುಕೊಳ್ಳುವನೋ ಅವನು ಈ ದೇಹವನ್ನು ಬಿಟ್ಟು, ಎಲೈ ಅರ್ಜುನನೆ, ಪುನರ್ಜನ್ಮವನ್ನು ಮರುಹುಟ್ಟನ್ನು ಹೊಂದುವದಿಲ್ಲ, ಪಡೆಯುವದಿಲ್ಲ, ನನ್ನನ್ನೇ ಹೊಂದುತ್ತಾನೆ ಎಂದರೆ ಮುಕ್ತನಾಗುತ್ತಾನೆ.

(ಭಾಷ್ಯ)

೨೩೬. ನೈಷ ಮೋಕ್ಷಮಾರ್ಗಃ ಇದಾನೀಂ ಪ್ರವೃತ್ತಃ, ಕಿಂ ತರ್ಹಿ ಪೂರ್ವಮಪಿ—

(ಭಾಷ್ಯಾರ್ಥ)

ಈ ಮೋಕ್ಷಮಾರ್ಗವು ಈಗ ಹೊರಟದ್ದಲ್ಲ. ಹಿಂದೆಯೂ—

**ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ ।**
**ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥ ೧೦ ॥**

೧೦. ರಾಗಭಯಕ್ರೋಧಗಳಿಲ್ಲದವರಾಗಿ ಮನ್ಮಯರಾಗಿ ನನ್ನನ್ನು ಆಶ್ರಯಿಸಿಕೊಂಡು ಅನೇಕರು ಜ್ಞಾನತಪಸ್ಸಿನಿಂದ ಪೂತರಾಗಿ ನನ್ನ ಭಾವವನ್ನು ಹೊಂದಿರುತ್ತಾರೆ.

(ಭಾಷ್ಯ)

೨೩೭ ವೀತರಾಗಭಯಕ್ರೋಧಾಃ ರಾಗಶ್ಚ ಭಯಂ ಕ್ರೋಧಶ್ಚ ವೀತಾಃ ಯೇಭ್ಯಃ ತೇ ವೀತರಾಗಭಯಕ್ರೋಧಾಃ, ಮನ್ಮಯಾಃ ಬ್ರಹ್ಮವಿದಃ ಈಶ್ವರಾಭೇದದರ್ಶಿನಃ । ಮಾಮೇವ ಚ ಪರಮೇಶ್ವರಮ್ ಉಪಾಶ್ರಿತಾಃ । ಕೇವಲಜ್ಞಾನನಿಷ್ಠಾಃ ಇತ್ಯರ್ಥಃ । ಬಹವಃ ಅನೇಕೇ ಜ್ಞಾನತಪಸಾ ಜ್ಞಾನಮೇವ ಚ ಪರಮಾತ್ಮವಿಷಯಂ ತಪಃ ತೇನ ಜ್ಞಾನತಪಸಾ ಪೂತಾಃ ಪರಾಂ ಶುದ್ಧಿಂ ಗತಾಃ ಸನ್ತಃ ಮದ್ಭಾವಮ್ ಈಶ್ವರಭಾವಂ ಮೋಕ್ಷಮ್ ಆಗತಾಃ ಸಮನುಪ್ರಾಪ್ತಾಃ । ಇತರತಪೋನಿರಪೇಕ್ಷಾ[2] ಜ್ಞಾನನಿಷ್ಠಾ ಇತ್ಯಸ್ಯ ಲಿಙ್ಗಂ "ಜ್ಞಾನತಪಸಾ" ಇತಿ ವಿಶೇಷಣಮ್ ॥

---

1. ಅಪ್ರಾಕೃತ ಎಂಬುದಕ್ಕೆ ಪ್ರಕೃತಿಗೆ ಸಂಬಂಧಪಡದ ಎಂಬ ಅರ್ಥವು ಪ್ರಕೃತಕ್ಕೆ ಹೊಂದುವದಿಲ್ಲ; ಏಕೆಂದರೆ ಜನ್ಮವು ಮಾಯಾರೂಪವು ಎಂದಿರುವದರಿಂದ ಪ್ರಕೃತಿಗೆ ಸಂಬಂಧಪಟ್ಟದ್ದೇ ಆಗಿರುತ್ತದೆ. ನಾವು ಮಾಡಿರುವ ಅರ್ಥವು 'ಪ್ರಕೃತಿಂ ಸ್ವಾಮಧಿಷ್ಠಾಯ' ಎಂಬ (೪-೬) ವಾಕ್ಯಕ್ಕೆ ಅನುಗುಣವಾಗುತ್ತದೆ.

2. ಮು॥ ಮೈ॥ ಪಾಠವನ್ನೇ ಇಟ್ಟುಕೊಂಡಿದೆ.

(ಭಾಷ್ಯಾರ್ಥ)

ಆಸೆ, ಹೆದರಿಕೆ, ಸಿಟ್ಟು-ಇವುಗಳು ಯಾರಿಂದ ತೊಲಗಿರುವವೋ ಅವರು ವೀತರಾಗಭಯಕ್ರೋಧರು. ಮನ್ಮಯರು ಎಂದರೆ ಈಶ್ವರನಿಗೂ (ತಮಗೂ) ಅಭೇದವನ್ನು ಕಂಡುಕೊಂಡಿರುವ ಬ್ರಹ್ಮಜ್ಞಾನಿಗಳು. ನನ್ನನ್ನೇ ಆಶ್ರಯಿಸಿರುವವರು ಎಂದರೆ ಪರಮೇಶ್ವರನನ್ನೇ (ಆಶ್ರಯಿಸಿರುವವರು), ಎಂದರೆ ಬರಿಯ ಜ್ಞಾನದಲ್ಲಿಯೇ ನಿಷ್ಠೆಯುಳ್ಳವರು ಎಂದರ್ಥ. (ಇಂಥ) **ಅನೇಕರು ಪರಮಾತ್ಮವಿಷಯವಾದ ಜ್ಞಾನವೆಂಬ ತಪಸ್ಸಿನಿಂದ ಪೂತರಾಗಿ, ಹೆಚ್ಚಿನ ಶುದ್ಧಿಯನ್ನು ಹೊಂದಿ**[1] **ನನ್ನ ಭಾವವನ್ನು ಎಂದರೆ ಈಶ್ವರಸ್ವರೂಪವನ್ನು, ಮೋಕ್ಷವನ್ನು ಹೊಂದಿರುತ್ತಾರೆ, ಪಡೆದಿರುತ್ತಾರೆ,** "ಜ್ಞಾನವೆಂಬ ತಪಸ್ಸಿನಿಂದ" ಎಂದು ತಪಸ್ಸಿಗೆ ವಿಶೇಷಣವನ್ನು ಹಾಕಿರುವದು ಜ್ಞಾನನಿಷ್ಠೆಗೆ ಮತ್ತೆ ಯಾವ ತಪಸ್ಸಿನ ಸಹಾಯವೂ ಬೇಕಿಲ್ಲವೆಂದು ತಿಳಿಸುವ ಗುರುತು[2].

## ಈಶ್ವರನು ಸಾಧಕರಿಗೆ ತಕ್ಕ ಫಲವನ್ನೇ ಕೊಡುತ್ತಾನೆ

(ಭಾಷ್ಯ)

೨೩೮. ತವ ತರ್ಹಿ ರಾಗದ್ವೇಷೌ ಸ್ತಃ ಯೇನ ಕೇಭ್ಯಶ್ಚಿದೇವ ಆತ್ಮಭಾವಂ ಪ್ರಯಚ್ಛಸಿ ನ ಸರ್ವೇಷಾಮ್ ಇತಿ । ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ ಕೆಲವರಿಗೆ ಮಾತ್ರ ನಿನ್ನ ಸ್ವರೂಪಪ್ರಾಪ್ತಿಯನ್ನು ಕೊಡುವೆಯೇ ಹೊರತು ಎಲ್ಲರಿಗೂ ಕೊಡುವದಿಲ್ಲವಾದ್ದರಿಂದ ನಿನಗೆ (ಮಿಕ್ಕವರಂತೆಯೇ) ರಾಗದ್ವೇಷಗಳಿರುತ್ತವೆ ಎಂದಾಯಿತಲ್ಲ! ಎಂದರೆ ಭಗವಂತನು ಹೇಳುತ್ತಾನೆ :—

**ಯೇ ಯಥಾ ಮಾಂ ಪ್ರಪದ್ಯನ್ತೇ ತಾಂಸ್ತಥೈವ ಭಜಾಮ್ಯಹಮ್ ।**
**ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ ॥ ೧೧ ॥**

---

1. ಉಳಿದ ತಪಸ್ಸುಗಳಿಗಿಂತಲೂ ಆತ್ಮಜ್ಞಾನವೇ ಹೆಚ್ಚಿನ ಶುದ್ಧಿಯನ್ನುಂಟುಮಾಡುತ್ತದೆ; ಏಕೆಂದರೆ ಈ ಜ್ಞಾನವು ನಿತ್ಯಶುದ್ಧಬ್ರಹ್ಮಸ್ವರೂಪವೇ ತನ್ನ ಆತ್ಮನೆಂಬ ತಿಳಿವಳಿಕೆಯನ್ನು ತಂದುಕೊಡುತ್ತದೆ.

2. ಜ್ಞಾನದಿಂದ ಮುಕ್ತಿಯನ್ನು ಪಡೆದರು ಎಂದು ಹೇಳುವ ಸಂದರ್ಭದಲ್ಲಿ ಜ್ಞಾನತಪಸ್ಸಿನಿಂದ ಪಡೆದರು ಎಂದದ್ದರಿಂದ ಈ ಅಭಿಪ್ರಾಯವು ಹೊರಡುತ್ತದೆ.

೧೧. ಯಾರು ಹೇಗೆ ನನ್ನನ್ನು ಸೇವಿಸುವರೋ ಅವರನ್ನು ನಾನು ಹಾಗೆಯೇ ಸೇರುವೆನು. ಎಲೈ ಪಾರ್ಥನೆ, ಮನುಷ್ಯರು ಸರ್ವಪ್ರಕಾರ ದಿಂದಲೂ ನನ್ನ ಮಾರ್ಗವನ್ನೇ ಅನುವರ್ತಿಸುತ್ತಿರುವರು.

(ಭಾಷ್ಯ)

೨೩೯. ಯೇ ಯಥಾ ಯೇನ ಪ್ರಕಾರೇಣ ಯೇನ ಪ್ರಯೋಜನೇನ ಯತ್ಫಲಾರ್ಥಿತಯಾ ಮಾಂ ಪ್ರಪದ್ಯನ್ತೇ ತಾನ್ ತಥೈವ ತತ್ಫಲದಾನೇನ ಭಜಾಮಿ ಅನುಗೃಹ್ಣಾಮಿ ಅಹಮ್ ಇತ್ಯೇತತ್ [1] । ತೇಷಾಂ ಮೋಕ್ಷಂ ಪ್ರತಿ ಅನರ್ಥಿತ್ವಾತ್ । ನ ಹಿ ಏಕಸ್ಯ ಮುಮುಕ್ಷುತ್ವಂ ಫಲಾರ್ಥಿತ್ವಂ ಚ ಯುಗಪತ್ ಸಂಭವತಿ । ಅತಃ ಯೇ ಫಲಾರ್ಥಿನಃ ತಾನ್ ಫಲಪ್ರದಾನೇನ, ಯೇ ಯಥೋಕ್ತಕಾರಿಣಸ್ತು [2] ಅಫಲಾರ್ಥಿನಃ ಮುಮುಕ್ಷವಶ್ಚ ತಾನ್ ಜ್ಞಾನಪ್ರದಾನೇನ, ಯೇ ಜ್ಞಾನಿನಃ ಸಂನ್ಯಾಸಿನಃ ಮುಮುಕ್ಷವಶ್ಚ ತಾನ್ ಮೋಕ್ಷಪ್ರದಾನೇನ, ತಥಾ ಆರ್ತಾನ್ ಆರ್ತಿಹರಣೇನ ಇತ್ಯೇವಂ ಯಥಾ ಪ್ರಪದ್ಯನ್ತೇ ಯೇ ತಾನ್ ತಥೈವ ಭಜಾಮಿ ಇತ್ಯರ್ಥಃ [3] । ನ ಪುನಃ ರಾಗದ್ವೇಷನಿಮಿತ್ತಂ ಮೋಹನಿಮಿತ್ತಂ ವಾ ಕಂಚಿದ್ ಭಜಾಮಿ । ಸರ್ವಥಾಪಿ ಸರ್ವಾವಸ್ಥಸ್ಯ ಮಮ ಈಶ್ವರಸ್ಯ ವರ್ತ್ಮ ಮಾರ್ಗಮ್ ಅನುವರ್ತನ್ತೇ ಮನುಷ್ಯಾಃ । ಯತ್ಫಲಾರ್ಥಿತಯಾ ಯಸ್ಮಿನ್ ಕರ್ಮಣಿ ಅಧಿಕೃತಾ ಯೇ ಪ್ರಯತನ್ತೇ [4] ತೇ ಮನುಷ್ಯಾ ಅತ್ರ [5] ಉಚ್ಯನ್ತೇ । ಹೇ ಪಾರ್ಥ ಸರ್ವಶಃ ಸರ್ವಪ್ರಕಾರೈಃ ॥

(ಭಾಷ್ಯಾರ್ಥ)

ಯಾರು ಹೇಗೆ ಯಾವ ಪ್ರಕಾರದಿಂದ ಯಾವ ಪ್ರಯೋಜನಕ್ಕಾಗಿ ಯಾವ ಫಲವನ್ನು ಬಯಸುವವರಾಗಿ ನನ್ನನ್ನು ಬಂದು ಸೇರುವರೋ ಅವರನ್ನು ಹಾಗೆಯೇ ಆ ಫಲವನ್ನು ಕೊಟ್ಟು ಸೇರುವೆನು, ಎಂದರೆ (ಹಾಗೆಯೇ ಅವರಿಗೆ) ಅನುಗ್ರಹ ಮಾಡುವೆನು ಎಂದರ್ಥ. ಏಕೆಂದರೆ ಅವರಿಗೆ ಮೋಕ್ಷವು ಬೇಕಿರುವದಿಲ್ಲ. (ಆದ್ದರಿಂದ ಅವರಿಗೆ ಅದನ್ನು ಕೊಡುವದಿಲ್ಲ). ಒಬ್ಬನೇ ಒಂದೇ ಕಾಲದಲ್ಲಿ ಮೋಕ್ಷವನ್ನು

---

1. ಮ॥ ಮೈ॥ ಪಾಠಗಳಲ್ಲಿಲ್ಲ.
2. "ಯಥೋಕ್ತಾಧಿಕಾರಿಣಸ್ತು" ಮೈ॥
3. ಇಲ್ಲಿ "ತಂ ಯಥಾ ಯಥೋಪಾಸತೇ ತಂ ತಮೇವ ಫಲಂ ಲಭತೇ (?)" ಇತಿ ಶ್ರುತೇಃ—ಎಂದು ಮ॥ ಪಾಠದಲ್ಲಿ ಹೆಚ್ಚಾಗಿದೆ.
4. "ಪ್ರವರ್ತನ್ತೇ" ಮ॥ ಮೈ॥
5. ೩॥ ಮ॥ ಗಳಲ್ಲಿ ಈ ಮಾತಿಲ್ಲ.

ಬಯಸುವವನಾಗಿರುವದೂ (ಕರ್ಮದ) ಫಲಗಳನ್ನು ಬಯಸುವವನಾಗಿರುವದೂ ಆಗುವ ಹಾಗಿಲ್ಲ. ಆದ್ದರಿಂದ **ಯಾರು ಫಲವನ್ನು ಬಯಸುವರೋ ಅವರಿಗೆ (ಆ) ಫಲವನ್ನು ಕೊಡುವದು, ಯಾರು ಶಾಸ್ತ್ರದಲ್ಲಿ ಹೇಳಿರುವಂತೆ ಕರ್ಮವನ್ನು ಮಾಡಿ ಫಲವನ್ನು ಬಯಸದೆ ಮುಮುಕ್ಷುಗಳಾಗಿರುವರೋ**[1] **ಅವರಿಗೆ ಜ್ಞಾನವನ್ನು ಕೊಡುವದು, ಯಾರು ಜ್ಞಾನಿಗಳೂ, ಸಂನ್ಯಾಸಿಗಳೂ, ಮುಮುಕ್ಷುಗಳೂ ಆಗಿರುವರೋ ಅವರಿಗೆ ಮೋಕ್ಷವನ್ನು ಕೊಡುವದು, ಹಾಗೂ ಸಂಕಟದಲ್ಲಿರುವವರ ಸಂಕಟವನ್ನು ಪರಿಹರಿಸುವದು**– ಹೀಗೆ[2] ಯಾರು ಹೇಗೆ ನನ್ನನ್ನು ಬಂದು ಸೇರುವರೋ ಅವರನ್ನು ಹಾಗೆಯೇ ಅನುಗ್ರಹಿಸುವೆನು ಎಂದರ್ಥ ಇಷ್ಟೇ ಹೊರತು ರಾಗದ್ವೇಷಗಳ ಕಾರಣದಿಂದಲಾಗಲಿ ಮೋಹದ ಕಾರಣದಿಂದಲಾಗಲಿ ಯಾವನಿಗೂ ಅನುಗ್ರಹಮಾಡುವದಿಲ್ಲ. ಹೇಗೇ ಆಗಲಿ, ಎಲೈ ಪಾರ್ಥನೆ, ಸಕಲರಲ್ಲಿಯೂ ಇರುವ[3] ಈಶ್ವರನಾದ ನನ್ನ ಮಾರ್ಗವನ್ನೇ[4] ಮನುಷ್ಯರು ಸರ್ವಪ್ರಕಾರಗಳಿಂದಲೂ ಅನುಸರಿಸುತ್ತಿರುವರು, ಯಾರು ಯಾವ ಕರ್ಮಕ್ಕೆ ಅಧಿಕಾರಿಗಳಾಗಿದ್ದು (ಯಾವ ಫಲಕ್ಕಾಗಿ) ಪ್ರಯತ್ನಿಸುತ್ತಿರುವರೋ (ಆ ಸಾಧಕರನ್ನು) ಇಲ್ಲಿ ಮನುಷ್ಯರು[5] ಎಂದು ಕರೆದಿದೆ.

(ಭಾಷ್ಯ)

೨೪೦. ಯದಿ[6] ಈಶ್ವರಸ್ಯ ರಾಗದ್ವೇಷಾಭಾವಾತ್ ಸರ್ವಪ್ರಾಣಿಷು ಅನುಜಿಘೃಕ್ಷಾಯಾಂ ತುಲ್ಯಾಯಾಂ ಸರ್ವಫಲಪ್ರದಾನಸಮರ್ಥೇ ಚ ತ್ವಯಿ ಸತಿ " ವಾಸು

---

1. ಕರ್ಮಯೋಗಿಗಳಾಗಿರುವರೋ.

2. ೭-೧೩ರ ಅಭಿಪ್ರಾಯವಿದು.

3. ಎಲ್ಲಾ ಅವಸ್ಥೆಗಳಲ್ಲಿಯೂ ಇರುವ ಎಂದು ಅರ್ಥವಲ್ಲ; ಏಕೆಂದರೆ ಪರಮಾತ್ಮನಿಗೆ ಬೇರೆಬೇರೆಯ ಅವಸ್ಥೆಗಳಿರುವದಿಲ್ಲ. ೧೮-೬೧ರ ಅಭಿಪ್ರಾಯವು ಈ ವಿಶೇಷಣದಲ್ಲಿದೆ.

4. ಅವರೇ ಕರ್ಮದಿಂದ ಸ್ವತಂತ್ರವಾಗಿ ಫಲವನ್ನು ಪಡೆಯಲಾರರು. ಸೂ. ಭಾ. ೩-೨-೩೮.

5. ಮನುಷ್ಯರು ಶಾಸ್ತ್ರಾಧಿಕಾರಿಗಳೆಂಬುದು ನಿಜವಾದರೂ ಆಯಾ ಅಧಿಕಾರಿಗಳು ಎಂಬರ್ಥದಲ್ಲಿ ಈ ಮಾತನ್ನು ಇಲ್ಲಿ ಉಪಯೋಗಿಸಿದೆ. ಹಾಗಿಲ್ಲದಿದ್ದರೆ ಯಾರಿಗಾದರೂ ಯಾವ ಕರ್ಮದ ಫಲವು ಬೇಕಾದರೂ ಸಿಕ್ಕಬಹುದೆಂದಾಗುವದು. ಅದು ಅನಿಷ್ಟ.

6. ಯದಿ ರಾಗದ್ವೇಷಾಭಾವಾತ್ ಎಂಬ ಪಾಠವು ಅಚ್ಚಿನ ಪುಸ್ತಕಗಳಲ್ಲೆಲ್ಲ ಇದೆ. ಆದರೆ ಯದಿ ಎಂಬ ಪದಕ್ಕೆ ಅನ್ವಯವು ಆಗುವಂತಿಲ್ಲ. ರಾಗದ್ವೇಷಾಭಾವಃ ಎಂದಾದರೂ ಇರಬೇಕು ; ಯದಿ ಎಂಬ ಮಾತಾದರೂ ಇರಬಾರದು ಎಂದು ತೋರುತ್ತದೆ.

ದೇವಃ ಸರ್ವಮ್" ಇತಿ ಜ್ಞಾನೇನೈವ ಮುಮುಕ್ಷವಃ ಸನ್ತಃ ಕಸ್ಮಾತ್ ತ್ವಾಮೇವ ಸರ್ವೇ ನ ಪ್ರತಿಪದ್ಯನ್ತೇ ಇತಿ? ಶೃಣು ತತ್ರ ಕಾರಣಮ್—

(ಭಾಷ್ಯಾರ್ಥ)

ಈಶ್ವರನಾದ ನಿನಗೆ ರಾಗದ್ವೇಷಗಳು ಇಲ್ಲದ್ದರಿಂದ ಸಕಲ ಪ್ರಾಣಿಗಳಿಗೂ ಅನುಗ್ರಹವನ್ನು ಮಾಡಬೇಕೆಂಬ ಇಚ್ಛೆಯು ಸಮನಾಗಿಯೇ ಇರುವಲ್ಲಿ, ಮತ್ತು ಸರ್ವಫಲಗಳನ್ನೂ ಕೊಡುವದಕ್ಕೆ ಸಮರ್ಥನಾದ ನೀನು ಇರುವಾಗ "ವಾಸುದೇವನೇ ಸರ್ವವು" ಎಂಬ ಜ್ಞಾನದಿಂದಲೇ ಮೋಕ್ಷವನ್ನು ಪಡೆಯಲಿಚ್ಛಿಸುವವರಾಗಿ ಎಲ್ಲರೂ ನಿನ್ನನ್ನೇ ಏತಕ್ಕೆ ಹೊಂದದೆ ಇರುವರು? ಎಂದರೆ ಅದಕ್ಕೆ ಕಾರಣವನ್ನು (ಹೇಳುವೆನು), ಕೇಳು: –

**ಕಾಙ್ಕ್ಷನ್ತಃ ಕರ್ಮಣಾಂ ಸಿದ್ಧಿಂ ಯಜನ್ತ ಇಹ ದೇವತಾಃ ।**
**ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ ॥ ೧೨ ॥**

೧೨. ಕರ್ಮಗಳ ಸಿದ್ಧಿಯನ್ನು ಬಯಸಿದವರಾಗಿ ಇಲ್ಲಿ ದೇವತೆಗಳನ್ನು ಪೂಜಿಸುತ್ತಾರೆ. ಏಕೆಂದರೆ ಮನುಷ್ಯಲೋಕದಲ್ಲಿ ಕರ್ಮದ ಸಿದ್ಧಿಯು ಬೇಗನೆ ಆಗುತ್ತದೆ.

(ಭಾಷ್ಯ)

೨೪೧. ಕಾಙ್ಕ್ಷನ್ತಃ ಅಭೀಪ್ಸನ್ತಃ[1] ಕರ್ಮಣಾಂ ಸಿದ್ಧಿಂ ಫಲನಿಷ್ಪತ್ತಿಂ ಪ್ರಾರ್ಥಯನ್ತೋ ಯಜನ್ತೇ ಇಹ ಅಸ್ಮಿನ್ ಲೋಕೇ ದೇವತಾಃ ಇನ್ದ್ರಾಗ್ನ್ಯಾದ್ಯಾಃ "ಅಥ ಯೋಽನ್ಯಾಂ ದೇವತಾಮುಪಾಸ್ತೇಽನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುರೇವಂ ಸ ದೇವಾನಾಮ್" (ಬೃ. ೧-೪-೧೦) ಇತಿ ಶ್ರುತೇಃ। ತೇಷಾಂ ಹಿ ಭಿನ್ನದೇವತಾಯಾಜಿನಾಂ ಫಲಾಕಾಙ್ಕ್ಷಿಣಾಂ ಕ್ಷಿಪ್ರಂ ಶೀಘ್ರಂ ಹಿ ಯಸ್ಮಾತ್ ಮಾನುಷೇ ಲೋಕೇ। ಮನುಷ್ಯಲೋಕೇ ಹಿ ಶಾಸ್ತ್ರಾಧಿಕಾರಃ। 'ಕ್ಷಿಪ್ರಂ ಹಿ[2] ಮಾನುಷೇ ಲೋಕೇ' ಇತಿ ವಿಶೇಷಣಾತ್ ಅನ್ಯೇಷ್ವಪಿ ಕರ್ಮಫಲಸಿದ್ಧಿಂ ದರ್ಶಯತಿ ಭಗವಾನ್। ಮಾನುಷೇ[3] ಲೋಕೇ ವರ್ಣಾಶ್ರಮಾದಿಕರ್ಮಾಣಿ[4] ಇತಿ ವಿಶೇಷಃ। ತೇಷಾಂ ಚ ವರ್ಣಾಶ್ರಮಾದ್ಯಧಿಕಾರಿಣಾಂ[5] ಕರ್ಮಿಣಾಂ ಫಲಸಿದ್ಧಿಃ ಕ್ಷಿಪ್ರಂ[6] ಭವತಿ ಕರ್ಮಜಾ ಕರ್ಮಣೋ ಜಾತಾ ॥

---

1. "ಪ್ರಾರ್ಥಯನ್ತಃ" ಮು॥ ಮೈ॥
2. ಈ ಮಾತು ಮು॥ ಮೈ॥ ಗಳಲ್ಲಿಲ್ಲ
3. "ಮನುಷ್ಯಲೋಕೇ" ಮು॥ ಮೈ॥
4. "ವರ್ಣಾಶ್ರಮಾದಿಕರ್ಮಾಧಿಕಾರಃ" ಮು॥ ಮೈ॥
5. "ವರ್ಣಾಶ್ರಮಾದ್ಯಧಿಕಾರಿಕರ್ಮಣಾಮ್" ವಾ॥
6. ಈ ಮಾತು ಕೆಲವು ಪುಸ್ತಕಗಳಲ್ಲಿಲ್ಲ.

(ಭಾಷ್ಯಾರ್ಥ)

ಕರ್ಮಗಳ ಸಿದ್ಧಿಯನ್ನು ಎಂದರೆ ಫಲವುಂಟಾಗುವಿಕೆಯನ್ನು ಬಯಸಿದವರಾಗಿ ಇಚ್ಛಿಸುವವರಾಗಿ ಇಲ್ಲಿ ಈ ಲೋಕದಲ್ಲಿ (ಜನರು) ಇಂದ್ರ, ಅಗ್ನಿ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. "ಇನ್ನು ಯಾವನು ಈ (ದೇವತೆ) ಬೇರೆ, ನಾನು ಬೇರೆ-ಎಂದು ದೇವತೆಯನ್ನು (ತನಗಿಂತ) ಅನ್ಯವಾಗಿ (ಎಣಿಸಿ) ಪೂಜಿಸುತ್ತಿರುವನೋ ಅವನು ಅರಿಯನು, ಅವನು ದೇವತೆಗಳಿಗೆ ಪಶುವಿನಂತೆ ಇರುವನು" (ಬೃ. ೧-೪-೧೦) ಎಂಬ ಶ್ರುತಿಯು (ಇದಕ್ಕೆ) ಪ್ರಮಾಣವು.[1] (ಹೀಗೆ ತನಗಿಂತಲೂ) ದೇವತೆಗಳು ಬೇರೆ ಎಂದು ತಿಳಿದು ಫಲದ ಆಸೆಯಿಂದ ಯಾಗವನ್ನು ಮಾಡುತ್ತಿರುವ ಅವರಿಗೆ ಕ್ಷಿಪ್ರವಾಗಿ ಬೇಗನೆ[2] ಮನುಷ್ಯಲೋಕದಲ್ಲಿ-ಮನುಷ್ಯಲೋಕದಲ್ಲಿ ತಾನೆ ಶಾಸ್ತ್ರಾಧಿಕಾರವಿರುವದು?[3] "ಕ್ಷಿಪ್ರಂ ಹಿ ಮಾನುಷೇ ಲೋಕೇ" ಎಂದು (ಮನುಷ್ಯಲೋಕದಲ್ಲಿ) ಎಂದು ವಿಶೇಷಣವನ್ನು (ಲೋಕಕ್ಕೆ) ಕೊಟ್ಟಿರುವದರಿಂದ ಬೇರೆಯ ಲೋಕಗಳಲ್ಲಿಯೂ ಕರ್ಮಫಲಕ್ಕೆ ಸಿದ್ಧಿಯುಂಟೆಂದು ಭಗವಂತನು ತಿಳಿಸಿಕೊಟ್ಟಂತಾಯಿತು.[4] ಮನುಷ್ಯಲೋಕದಲ್ಲಿ ವರ್ಣಾಶ್ರಮುವೇ ಮುಂತಾದ ಕರ್ಮಗಳಿವೆ ಎಂಬುದು (ಈ ಲೋಕದ) ವಿಶೇಷವು. ಇಂಥ (ಆಯಾ) ವರ್ಣ, ಆಶ್ರಮ-ಮುಂತಾದವಕ್ಕೆ ಅಧಿಕಾರಿಗಳಾಗಿರುವ ಕರ್ಮಗಳಿಗೆ ಕರ್ಮಜವಾದ ಎಂದರೆ ಕರ್ಮದಿಂದ ಉಂಟಾಗುವ ಸಿದ್ಧಿಯು ಕ್ಷಿಪ್ರವಾಗಿ ಆಗುವದು ಅಲ್ಲವೆ? (ಆದ್ದರಿಂದ ಅವರು ಕರ್ಮಫಲಗಳನ್ನು ಬಯಸಿ ದೇವತೆಗಳನ್ನು ಪೂಜಿಸುತ್ತಾರೆ).

---

1. ದೇವತೆಗಳು ತನಗಿಂತ ಬೇರೆ ಎಂಬ ಭಾವನೆಯಿಂದ ಮಾಡುವ ಕರ್ಮಕ್ಕಿಂತಲೂ ಮುಮುಕ್ಷುತೆಯಿಂದ ಪರಮಾತ್ಮನನ್ನು ಭಜಿಸುವದೇ ಮೇಲೆಂದು ಇಲ್ಲಿ ಸೂಚಿಸಿರುತ್ತದೆ.

2. ಲೋಕಾಂತರಗಳಲ್ಲಿ ಕರ್ಮಫಲವು ತಡವಾಗಿ ಆಗುವದೆಂಬುದನ್ನು 'ಬೇಗನೆ' ಎಂಬ ಮಾತು ಸೂಚಿಸುವದೆಂದು ವ್ಯಾಖ್ಯಾನಕಾರರು ತಿಳಿಸುತ್ತಾರೆ. ಇದು ಪ್ರಕೃತಕ್ಕೆ ಹೊಂದುವಂತೆ ತೋರಲಿಲ್ಲ. ಮನುಷ್ಯಲೋಕದಲ್ಲಿ ಕರ್ಮದ ಫಲವೇ ಬೇಗನೆ ಆಗುವದರಿಂದ ಅಜ್ಞರಾದ ಫಲಕಾಮಿಗಳು ಕರ್ಮದಲ್ಲಿ ತೊಡಗುವರೇ ಹೊರತು ಜ್ಞಾನದಲ್ಲಿ ತೊಡಗುವದಿಲ್ಲ ಎಂಬುದೇ ಪ್ರಕೃತ.

3. ಮನುಷ್ಯನಿಗೆ ಮಾತ್ರ ಯಾಗಾದಿಗಳಲ್ಲಿ ಅಧಿಕಾರವೆಂಬುದನ್ನು ಶಾ. ಭಾ. ೧-೩-೨೫ರಲ್ಲಿ ನಿರ್ಣಯಿಸಿದೆ.

4. ಋಷಿಗಳಿಗೂ ದೇವತೆಗಳಿಗೂ ಉಪಾಸನಾರೂಪವಾದ ಕರ್ಮವುಂಟು. ಸೂ. ಭಾ. ೧-೩-೨೬. ಮನುಷ್ಯರಿಗೆ ಇರುವ ವರ್ಣಾಶ್ರಮಾದಿಗಳು ದೇವತೆಗಳಿಗೆ ಇಲ್ಲ.

# ಕರ್ಮಗಳು ಪರಮಾತ್ಮನಿಗೆ ಅಂಟುವದಿಲ್ಲ

(ಭಾಷ್ಯ)

೨೬೨. ಮಾನುಷೇ ಏವ ಲೋಕೇ ವರ್ಣಾಶ್ರಮಾದಿಕರ್ಮಾಧಿಕಾರಃ ನಾನ್ಯೇಷು ಲೋಕೇಷು ಇತಿ ನಿಯಮಃ ಕಿಂನಿಮಿತ್ತಃ ಇತಿ? ಅಥವಾ ವರ್ಣಾಶ್ರಮಾದಿಪ್ರವಿಭಾಗೋಪೇತಾ ಮನುಷ್ಯಾ ಮಮ ವರ್ತ್ಮಾನುವರ್ತನ್ತೇ ಸರ್ವಶಃ ಇತ್ಯುಕ್ತಮ್। ಕಸ್ಮಾತ್ ಪುನಃ ಕಾರಣಾತ್ ನಿಯಮೇನ ತವೈವ ವರ್ತ್ಮ ಅನುವರ್ತನ್ತೇ ನಾನ್ಯಸ್ಯ ಇತಿ? ಉಚ್ಯತೇ—

(ಭಾಷ್ಯಾರ್ಥ)

ಮನುಷ್ಯಲೋಕದಲ್ಲಿಯೇ ವರ್ಣ, ಆಶ್ರಮ–ಮುಂತಾದ ಕರ್ಮಗಳಲ್ಲಿ ಅಧಿಕಾರವೇ ಹೊರತು ಮಿಕ್ಕ ಲೋಕಗಳಲ್ಲಿಲ್ಲ ಎಂಬ ನಿಯಮಕ್ಕೆ ನಿಮಿತ್ತವು ಯಾವದು ಅಥವಾ ವರ್ಣ, ಆಶ್ರಮ–ಮುಂತಾದ ವಿಂಗಡವುಳ್ಳ ಮನುಷ್ಯರು ನನ್ನ ಮಾರ್ಗವನ್ನೇ ಸರ್ವಪ್ರಕಾರದಿಂದಲೂ ಅನುಸರಿಸುತ್ತಾರೆ (೪-೧೧) ಎಂದಿದೆಯಷ್ಟೆ; ನಿನ್ನ ಮಾರ್ಗವನ್ನೇ ನಿಯಮದಿಂದ ಅನುಸರಿಸುತ್ತಿರುವದಕ್ಕೂ ಮತ್ತೊಬ್ಬರ (ಮಾರ್ಗವನ್ನು ಅನುಸರಿಸದಿರುವದಕ್ಕೂ) ಕಾರಣವೇನು ?–ಎಂದರೆ (ಭಗವಂತನು) ಹೇಳುತ್ತಾನೆ :—

**ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ।**
**ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥ ೧೩ ॥**

೧೩. ಗುಣಕರ್ಮವಿಭಾಗದಿಂದ ಚಾತುರ್ವರ್ಣ್ಯವು ನನ್ನಿಂದ ಸೃಷ್ಟವಾಗಿದೆ. ನಾನು ಅದನ್ನು ಮಾಡಿರುವವನಾದರೂ ಅಕರ್ತೃವೆಂದೂ ಅವ್ಯಯನೆಂದೂ ತಿಳಿ.

(ಭಾಷ್ಯ)

೨೬೩. ಚಾತುರ್ವರ್ಣ್ಯಂ ಚತ್ವಾರ ಏವ ವರ್ಣಾಃ ಚಾತುರ್ವರ್ಣ್ಯಂ ಮಯಾ ಈಶ್ವರೇಣ ಸೃಷ್ಟಮ್ ಉತ್ಪಾದಿತಮ್। "[ಬ್ರಾಹ್ಮಣೋಽಸ್ಯ ಮುಖಮಾಸೀತ್" (ಋ. ೧೦-೯೦-೧೨) ಇತ್ಯಾದಿಶ್ರುತೇಃ।] ಗುಣಕರ್ಮವಿಭಾಗಶಃ ಗುಣವಿಭಾಗಶಃ ಕರ್ಮವಿಭಾಗಶಶ್ಚ। ಗುಣಾಃ ಸತ್ತ್ವರಜಸ್ತಮಾಂಸಿ। ತತ್ರ ಸಾತ್ತ್ವಿಕಸ್ಯ ಸತ್ತ್ವಪ್ರಧಾನಸ್ಯ ಬ್ರಾಹ್ಮಣಸ್ಯ "ಶಮೋ ದಮಸ್ತಪಃ"(೧೮-೪೨) ಇತ್ಯಾದೀನಿ ಕರ್ಮಾಣಿ। ಸತ್ತ್ವೋಪಸರ್ಜನರಜಃಪ್ರಧಾನಸ್ಯ ಕ್ಷತ್ರಿಯಸ್ಯ ಶೌರ್ಯತೇಜಃಪ್ರಭೃತಿನಿ

ಕರ್ಮಾಣಿ। ತಮ ಉಪಸರ್ಜನರಜಃಪ್ರಧಾನಸ್ಯ ವೈಶ್ಯಸ್ಯ ಕೃಷ್ಯಾದೀನಿ। ರಃ ಉಪಸರ್ಜನತಮಃಪ್ರಧಾನಸ್ಯ ಶೂದ್ರಸ್ಯ ಶುಶ್ರೂಷೈವ ಕರ್ಮ[1] ಇತ್ಯೇವಂ ಗುಣ ಕರ್ಮವಿಭಾಗಶಃ ಚಾತುರ್ವರ್ಣ್ಯಂ ನಾನ್ಯೇಷು ಲೋಕೇಷು ಅತಃ ಮಾನುಷೆ ಇತಿ ವಿಶೇಷಣಮ್ ॥

(ಭಾಷ್ಯಾರ್ಥ)

ನಾಲ್ಕು ವರ್ಣಗಳಿಗೆ ಚಾತುರ್ವರ್ಣ್ಯವೆಂದು ಹೆಸರು (ಇದು) ಈಶ್ವರನಾ ನನ್ನಿಂದ ಸೃಷ್ಟವಾಗಿದೆ, ಹುಟ್ಟಿರುತ್ತದೆ. ['ಬ್ರಾಹ್ಮಣನು ಈತನ ಮುಖವಾದನು (ಋ. ೧೦-೯೦-೧೨) ಮುಂತಾದ ಶ್ರುತಿಯು ಇದಕ್ಕೆ ಪ್ರಮಾಣವು] ಗುಣಕರ್ಮ ವಿಭಾಗದಿಂದ ಎಂದರೆ ಗುಣಗಳ ವಿಂಗಡದಿಂದಲೂ ಕರ್ಮಗಳ ವಿಂಗಡದಿಂದಲು (ಎಂದರ್ಥ) (ಇಲ್ಲಿ) **ಗುಣ**ಗಳೆಂದರೆ ಸತ್ತ್ವ, ರಜಸ್ಸು, ತಮಸ್ಸು – ಇವು. ಇವ ಗಳಲ್ಲಿ ಸತ್ತ್ವವು ಮುಖ್ಯವಾಗಿರುವ[2] ಸಾತ್ತ್ವಿಕನಾದ **ಬ್ರಾಹ್ಮಣನಿಗೆ** ಶಮ ದಮ ತಪಸ್ಸು–ಮುಂತಾದ (೧೮-೪೨) ಕರ್ಮಗಳು; ಸತ್ತ್ವವನ್ನು ಎರಡನೆಯದಾ ಮಾಡಿಕೊಂಡಿರುವವನಾಗಿ ರಜೋಗುಣವು ಮುಖ್ಯವಾಗಿರುವ **ಕ್ಷತ್ರಿಯನಿ** ಶೌರ್ಯ, ತೇಜಸ್ಸು–ಮುಂತಾದ ಕರ್ಮಗಳು (೧೮–೪೪), ರಜೋಗುಣವೇ ಎರ ನೆಯದಾಗಿ ತಮಸ್ಸೇ ಮುಖ್ಯವಾಗಿರುವ **ಶೂದ್ರನಿಗೆ** ಶುಶ್ರೂಷೆಯೊಂದೇ ಕರ್ಮವು ಎಂದೀ ಪರಿಯಾಗಿ ಗುಣಕರ್ಮಗಳ ವಿಂಗಡದಿಂದ[3] ಚಾತುರ್ವರ್ಣ್ಯವು ನನ್ನಿಂ ಸೃಷ್ಟವಾಗಿದೆ ಎಂದರ್ಥ[4]. ಈ ಚಾತುರ್ವರ್ಣ್ಯವು ನನ್ನಿಂದ ಆದ್ದರಿಂದ 'ಮನುಷ ಲೋಕದಲ್ಲಿ' (ಕರ್ಮಫಲವು ಬೇಗನೆ ದೊರೆಯುವದು) ಎಂದು ವಿಶೇಷಣವನ್ನು ಹೇಳಿದ್ದು.

(ಭಾಷ್ಯ)

೨೪೪. ಹಸ್ತ ತರ್ಹಿ ಚಾತುರ್ವರ್ಣ್ಯಸರ್ಗಾದೇಃ ಕರ್ಮಣಃ ಕರ್ತೃತ್ವಾತ

---

1. "ಶುಶ್ರೂಷಾ ಏಕಮೇವ ಕರ್ಮ" ಮೈ॥ ಮ॥

2. ಸಾತ್ತ್ವಿಕನೆಂದರೆ ಸತ್ತ್ವಗುಣವು ಅವನಲ್ಲಿ ಮುಖ್ಯವಾಗಿರುವದೆಂದು ಅಭಿಪ್ರಾ ಯವೇ ಹೊರತು ಮಿಕ್ಕ ಗುಣಗಳು ಅವನಲ್ಲಿಲ್ಲವೆಂದಲ್ಲ.

3. ಮೊದಲು ಎಲ್ಲರೂ ಬ್ರಾಹ್ಮಣರೇ ಆಗಿದ್ದರೆಂದೂ ಬೇರೆಬೇರೆಯ ಕರ್ಮದಿಂ ಬೇರೆಬೇರೆಯ ಮತದವರಾದರೆಂದೂ ಮೋಕ್ಷಧರ್ಮದಲ್ಲಿದೆ.

4. ಕರ್ಮಕ್ಕೆ ನಾನೇ ಫಲವನ್ನು ಕೊಡುವನಾದ್ದರಿಂದ ಜನರು ನನ್ನ ಮಾರ್ಗವನ್ನೆ ಅನುಸರಿಸುವರೆಂದು ಹೇಳಿದೆನು ಎಂದು ಭಾವ.

ತತ್ಫಲೇನ[1] ಯುಜ್ಯಸೇ । ಅತಃ ನ ತ್ವಂ ನಿತ್ಯಮುಕ್ತಃ ನಿತ್ಯೇಶ್ವರಶ್ಚ ಇತಿ । ಉಚ್ಯತೇ । ಯದ್ಯಪಿ[2] ಮಾಯಾಸಂವ್ಯವಹಾರೇಣ ತಸ್ಯ ಕರ್ಮಣಃ ಕರ್ತಾರಮಪಿ ಸನ್ತಂ ಮಾಂ ಪರಮಾರ್ಥತಃ ವಿದ್ಧಿ ಅಕರ್ತಾರಮ್ । ಅತ ಏವ ಅವ್ಯಯಮ್ ಅಸಂಸಾರಿಣಂ ಚ ಮಾಂ ವಿದ್ಧಿ ॥

(ಭಾಷ್ಯಾರ್ಥ)

(ಅರ್ಜುನ) :—ಸರಿ, ಹಾಗಾದರೆ ಚಾತುರ್ವರ್ಣ್ಯವನ್ನು ಸೃಷ್ಟಿಸಿದ್ದು ಮುಂತಾದ ಕರ್ಮಕ್ಕೆ ಕರ್ತೃವಾಗಿರುವದರಿಂದ ಅದರ ಫಲಕ್ಕೂ ಭಾಗಿಯಾಗಿರುತ್ತೀಯೆ ; ಆದ್ದರಿಂದ ನೀನು ನಿತ್ಯಮುಕ್ತನೂ ನಿತ್ಯೇಶ್ವರನೂ ಅಲ್ಲವೆಂದಾಯಿತಲ್ಲ!

(ಶ್ರೀಕೃಷ್ಣ) :—(ಇದಕ್ಕೆ ಉತ್ತರವನ್ನು) ಹೇಳುವೆನು (ಕೇಳು) ಮಾಯೆಯ ವ್ಯವಹಾರದ ದೃಷ್ಟಿಯಿಂದ (ನೋಡಿದರೆ) ಆ ಕರ್ಮಕ್ಕೆ ಕರ್ತೃವಾಗಿದ್ದರೂ ನಾನು ನಿಜವಾಗಿ ಕರ್ತೃವಲ್ಲವೆಂದು ತಿಳಿ ಆದ್ದರಿಂದ ನಾನು ಅವ್ಯಯನು, ಸಂಸಾರಿಯಲ್ಲ ಎಂದು ತಿಳಿ.

(ಭಾಷ್ಯ)

೨೪೫ ಯೇಷಾಂ ತು ಕರ್ಮಣಾಂ ಕರ್ತಾರಂ ಮಾಂ ಮನ್ಯಸೇ, ಪರಮಾರ್ಥತಃ ತೇಷಾಮ್ ಅಕರ್ತೈವ ಅಹಮ್ । ಯತಃ—

(ಭಾಷ್ಯಾರ್ಥ)

ಯಾವ ಕರ್ಮಗಳಿಗಾದರೆ ನಾನು ಕರ್ತೃವೆಂದು ಭಾವಿಸಿರುವೆಯೋ, ನಿಜವಾಗಿ ನಾನು ಅವುಗಳನ್ನು ಮಾಡುವದೇ ಇಲ್ಲ. ಏಕೆಂದರೆ :—

**ನ ಮಾಂ ಕರ್ಮಾಣಿ ಲಿಮ್ಪನ್ತಿ ನ ಮೇ ಕರ್ಮಫಲೇ ಸ್ಪೃಹಾ ।**
**ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ ॥ ೧೪ ॥**

೧೪. ನನಗೆ ಕರ್ಮಗಳು ಅಂಟುವದಿಲ್ಲ, ನನಗೆ ಕರ್ಮಫಲದಲ್ಲಿ ಆಸೆಯಿಲ್ಲ. ಹೀಗೆಂದು ಯಾವನು ನನ್ನನ್ನು ಅರಿತುಕೊಳ್ಳುವನೋ ಅವನು ಕರ್ಮಗಳಿಂದ ಕಟ್ಟುವಡೆಯುವದಿಲ್ಲ.

---

1. “ತತ್ಫಲೇಷು” ಪಾ||

2. ೧೨ ನೆಯ ಶ್ಲೋಕದಲ್ಲಿ (ಭಾ. ಭಾ. ೨೪೦ರಲ್ಲಿ)ರುವಂತೆ ಇಲ್ಲಿಯೂ ಯದ್ಯಪಿ ಎಂಬ ಮಾತಿಗೆ ಸರಿಯಾಗಿ ಅನ್ವಯವಾಗಬೇಕಾದರೆ ‘ ತಸ್ಯ ಕರ್ತಾ, ತಥಾಪಿ ’ ಎಂದಿದ್ದರೆ ಚೆನ್ನಾಗಿರುವದು.

(ಭಾಷ್ಯ)

೨೪೬. ನ ಮಾಂ ತಾನಿ ಕರ್ಮಾಣಿ ಲಿಮ್ಪನ್ತಿ ದೇಹಾದ್ಯಾರಮ್ಭಕತ್ವೇನ । ಅಹಂಕಾರಾಭಾವಾತ್ । ನ ಚ ತೇಷಾಂ ಕರ್ಮಣಾಂ ಫಲೇಷು[1] ಮೇ ಮಮ ಸ್ಪೃಹಾ ತೃಷ್ಣಾ । ಯೇಷಾಂ ತು ಸಂಸಾರಿಣಾಮ್ 'ಅಹಂ ಕರ್ತಾ' ಇತಿ ಅಭಿಮಾನಃ ಕರ್ಮಸು, ಸ್ಪೃಹಾ ಚ ತತ್ಫಲೇಷು[2], ತಾನ್ ಕರ್ಮಾಣಿ ಲಿಮ್ಪನ್ತಿ ಇತಿ ಯುಕ್ತಮ್ । ತದಭಾವಾತ್ ನ ಮಾಂ ಕರ್ಮಾಣಿ ಲಿಮ್ಪನ್ತಿ । ಇತಿ ಏವಂ ಯಃ ಅನ್ಯೋಽಪಿ ಮಾಮ್ ಆತ್ಮತ್ವೇನ ಅಭಿಜಾನಾತಿ 'ನಾಹಂ ಕರ್ತಾ, ನ ಮೇ ಕರ್ಮಫಲೇ ಸ್ಪೃಹಾ' ಇತಿ ಸ ಕರ್ಮಭಿಃ ನ ಬಧ್ಯತೇ । ತಸ್ಯಾಪಿ ನ ದೇಹಾದ್ಯಾರಮ್ಭಕಾಣಿ ಕರ್ಮಾಣಿ ಭವನ್ತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಆ ಕರ್ಮಗಳು ನನಗೆ ದೇಹವೇ ಮುಂತಾದವುಗಳನ್ನು[3] ಉಂಟುಮಾಡುವದರ ಮೂಲಕ ಅಂಟಿಕೊಳ್ಳುವದಿಲ್ಲ, ಏಕೆಂದರೆ ನನಗೆ ಅಹಂಕಾರವಿರುವದಿಲ್ಲ.[4] ಆ ಕರ್ಮಗಳ ಫಲಗಳಲ್ಲಿ ನನಗೆ (ಮೇ=ಮಮ) ಆಸೆಯೂ ಎಂದರೆ ಬಯಕೆಯೂ ಇರುವದಿಲ್ಲ ಆದರೆ ಯಾವ ಸಂಸಾರಿಗಳಿಗೆ 'ನಾನು ಕರ್ತನು' ಎಂದು ಕರ್ಮಗಳಲ್ಲಿ ಅಭಿಮಾನ(ವಿರುವದೋ), ಅವುಗಳ ಫಲಗಳಲ್ಲಿ ಆಸೆಯೂ (ಇರುವದೋ), ಅವರಿಗೆ ಕರ್ಮಗಳು ಅಂಟಿಕೊಳ್ಳುವವೆಂಬುದು ಯುಕ್ತವಾಗಿದೆ, ಅದಿಲ್ಲವಾಗಿ ಕರ್ಮಗಳು ನನಗೆ ಅಂಟಿಕೊಳ್ಳುವದಿಲ್ಲ.[5]

ಹೀಗೆಂದು ಮತ್ತೆ ಯಾವನು ತನ್ನ ಸ್ವರೂಪವೇ ಎಂದು ಅರಿತು 'ನಾನು ಕರ್ಮವನ್ನು ಮಾಡುವದಿಲ್ಲ, ನನಗೆ ಕರ್ಮಫಲದಲ್ಲಿ ಆಸೆಯಿಲ್ಲ' ಎಂದು (ಭಾವಿಸಿಕೊಳ್ಳುವನೋ) ಅವನು ಕರ್ಮಗಳಿಂದ ಕಟ್ಟುವಡೆಯುವದಿಲ್ಲ; ಅವನಿಗೂ ಕರ್ಮಗಳು ದೇಹವೇ ಮುಂತಾದದ್ದನ್ನು ಉಂಟುಮಾಡುವದಿಲ್ಲ ಎಂದರ್ಥ.

---

1. 'ಫಲೇ' ಮೈ॥ ಮು॥
2. "ತತ್ಫಲೇಷು ಚ" ಎಂಬ ಪಾಠಕ್ಕಿಂತ ಈ ಮು॥ ಮೈ॥ ಪಾಠವು ಮೇಲು.
3. ದೇಹ, ಕರ್ಮ, ಪಾಪಪುಣ್ಯಗಳು-ಮುಂತಾದವನ್ನು
4. ಕರ್ಮಗಳನ್ನು ನಾನು ಮಾಡುತ್ತೇನೆ ಎಂಬ ಅಭಿಮಾನವಿರುವದಿಲ್ಲ.
5. ಕರ್ಮಗಳು ಮಿಥ್ಯೆಯಾಗಿರುವದರಿಂದ ಅವುಗಳು ಅಂಟುವದಿಲ್ಲವೆಂದು ಹೇಳಬೇಕಾದದ್ದೇನೂ ಇಲ್ಲವೆಂಬ ಆಕ್ಷೇಪವು ಸರಿಯಲ್ಲ; ಕರ್ಮಗಳನ್ನು ವ್ಯವಹಾರದೃಷ್ಟಿಯಿಂದ ನಾನು ಮಾಡುತ್ತಿದ್ದರೂ ಪರಮಾರ್ಥವಾಗಿ ಇವು ಇಲ್ಲವಾದ್ದರಿಂದ ಅವು ನನಗೆ ಅಂಟುವದಿಲ್ಲವೆಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ.

(ಭಾಷ್ಯ)

೨೪೭. ನಾಹಂ ಕರ್ತಾ ನ ಮೇ ಕರ್ಮಫಲೇ ಸ್ಪೃಹಾ ಇತಿ—

(ಭಾಷ್ಯಾರ್ಥ)

ನಾನು ಕರ್ಮವನ್ನು ಮಾಡುವವನಲ್ಲ, ನನಗೆ ಕರ್ಮದ ಫಲದಲ್ಲಿ ಆಸೆಯಿಲ್ಲ ಎಂದು—

**ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಮುಮುಕ್ಷುಭಿಃ ।**
**ಕುರು ಕರ್ಮೈವ ತಸ್ಮಾತ್ ತ್ವಂ ಪೂರ್ವೈಃ ಪೂರ್ವತರಂ ಕೃತಮ್ ॥**

೧೫. ಹೀಗೆ ತಿಳಿದುಕೊಂಡು ಪೂರ್ವದ ಮುಮುಕ್ಷುಗಳೂ ಕರ್ಮವನ್ನು ಮಾಡುತ್ತಿದ್ದರು. ಆದ್ದರಿಂದ ನೀನು ಹಿಂದಿನವರು ಮಾಡಿದ ಬಲು ಹಿಂದಿನದಾದ ಕರ್ಮವನ್ನೇ ಮಾಡು.

(ಭಾಷ್ಯ)

೨೪೮ ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಅತಿಕ್ರಾನ್ತೈಃ ಮುಮುಕ್ಷುಭಿಃ ಕುರು ತೇನ[1] ಕರ್ಮೈವ ತ್ವಂ ನ ತೂಷ್ಣೀಮ್ ಆಸನಮ್ । ನಾಪಿ ಸಂನ್ಯಾಸಃ ಕರ್ತವ್ಯಃ । ತಸ್ಮಾತ್ ತ್ವಂ ಪೂರ್ವೈರಪಿ ಅನುಷ್ಠಿತತ್ವಾತ್ । ಯದಿ ಅನಾತ್ಮಜ್ಞಸ್ತ್ವಂ ತದಾ ಆತ್ಮಶುದ್ಧ್ಯರ್ಥಮ್, ತತ್ತ್ವವಿತ್ ಚೇತ್ ಲೋಕಸಂಗ್ರಹಾರ್ಥಮ್ । ಪೂರ್ವೈಃ ಜನಕಾದಿಭಿಃ ಪೂರ್ವತರಂ ಕೃತಂ ನಾಧುನಾತನಂ ಕೃತಂ ನಿರ್ವರ್ತಿತಮ್ ॥

(ಭಾಷ್ಯಾರ್ಥ)

ಹೀಗೆ ತಿಳಿದುಕೊಂಡು[2] ಹಿಂದಿನ ಆಗಿಹೋಗಿರುವ ಮುಮುಕ್ಷುಗಳುಕೂಡ ಕರ್ಮವನ್ನು ಮಾಡುತ್ತಿದ್ದರು. ಆದ್ದರಿಂದ ನೀನು ಕರ್ಮವನ್ನೇ ಮಾಡು, ಸುಮ್ಮನೆ ಕೂತುಕೊಳ್ಳಬೇಡ, ಕರ್ಮವನ್ನು ಬಿಡಲೂಬಾರದು. ಆದ್ದರಿಂದ ಎಂದರೆ ಹಿಂದಿನವರೂ (ಕರ್ಮವನ್ನು) ಮಾಡಿರುವರಾದ್ದರಿಂದ ನೀನು **ಆತ್ಮನನ್ನು ಅರಿಯದವನಾದರೆ ಚಿತ್ತಶುದ್ಧಿಗಾಗಿಯೂ ತತ್ತ್ವವನ್ನರಿತುಕೊಂಡವನಾದರೆ ಲೋಕ**

---

1. ಮು॥, ಮೈ॥ ಗಳಲ್ಲಿಲ್ಲ.

2. ಮಾಡುವವನು ನಾನಲ್ಲ ಎಂದು ತಿಳಿದು ಮಾಡುವದು ಹೇಗೆ?—ಎಂದು ಆಕ್ಷೇಪಿಸಬಾರದು. ಮುಮುಕ್ಷುಗಳು ‘ಪರಮೇಶ್ವರನೇ ಮಾಡಿಸುತ್ತಾನೆ’ ಎಂಬ ಬುದ್ಧಿಯಿಂದ, ಜ್ಞಾನಿಗಳು ‘ಇದೆಲ್ಲವೂ ವ್ಯವಹಾರ’ ಎಂಬ ಬುದ್ಧಿಯಿಂದ ಮಾಡಬಹುದಾಗಿದೆ.

**ಸಂಗ್ರಹಕ್ಕಾಗಿಯೂ** ಹಿಂದಿನ ಜನಕನೇ ಮೊದಲಾದವರು ಮಾಡಿರುವ ಬಲು ಹಿಂದಿನದಾದ ಈಗಿನದಲ್ಲದ, ಕರ್ಮವನ್ನು ಮಾಡು.

## ಕರ್ಮಾಕರ್ಮಗಳ ತತ್ತ್ವ

(ಭಾಷ್ಯ)

೨೪೯. ತತ್ರ ಕರ್ಮ ಚೇತ್ ಕರ್ತವ್ಯಂ ತ್ವದ್ವಚನಾದೇವ ಕರೋಮ್ಯಹಂ ಕಿಂ ವಿಶೇಷಿತೇನ 'ಪೂರ್ವೈಃ ಪೂರ್ವತರಂ ಕೃತಮ್' ಇತಿ ? ಉಚ್ಯತೇ । ಯಸ್ಮಾತ್ ಮಹದ್ ವೈಷಮ್ಯಂ ಕರ್ಮಣಿ । ಕಥಮ್ ?

(ಭಾಷ್ಯಾರ್ಥ)

ಇಲ್ಲಿ ಕರ್ಮವನ್ನು ಮಾಡಬೇಕೆಂದಾದರೆ ನಿನ್ನ ಮಾತಿನ (ಪ್ರಾಮಾಣ್ಯದಿಂದಲೇ) ನಾನು ಮಾಡುವೆನಲ್ಲ, 'ಹಿಂದಿನವರು ಮಾಡಿದ ಬಲು ಹಿಂದಿನ(ಕರ್ಮ)' ಎಂದು (ಕರ್ಮಕ್ಕೆ) ವಿಶೇಷಣವನ್ನು ಹಾಕಿದ್ದರ ಪ್ರಯೋಜನವೇನು ? ಎಂದರೆ ಹೇಳುತ್ತೇನೆ ಏಕೆಂದರೆ ಕರ್ಮವನ್ನು (ತಿಳಿದುಕೊಳ್ಳುವವರಲ್ಲಿ) ಬಹಳ ಕಷ್ಟವಿದೆ. ಹೇಗೆಂದರೆ —

**ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ ।**
**ತತ್ತೇ ಕರ್ಮ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥೧೬॥**

೧೬. ಕರ್ಮವು ಯಾವದು, ಅಕರ್ಮವು ಯಾವದು ?–ಎಂಬ ವಿಷಯದಲ್ಲಿ ಕವಿಗಳೂ ಮೋಹಿತರಾಗಿರುವರು. ಆದ್ದರಿಂದ ನಿನಗೆ ಕರ್ಮವನ್ನು ಹೇಳುವೆನು ; ಅದನ್ನು ಅರಿತುಕೊಂಡರೆ ಅಶುಭದಿಂದ ಬಿಡುಗಡೆಯನ್ನು ಹೊಂದುವೆ.

(ಭಾಷ್ಯ)

೨೫೦. ಕಿಂ ಕರ್ಮ ಕಿಂ ಚ ಅಕರ್ಮ ಇತಿ ಕವಯಃ ಮೇಧಾವಿನೋಽಪಿ ಅತ್ರ ಅಸ್ಮಿನ್ ಕರ್ಮಾದಿವಿಷಯೇ ಮೋಹಿತಾಃ ಮೋಹಂ ಗತಾಃ । ತತ್ ಅತಃ ತೇ ತುಭ್ಯಮ್ ಅಹಂ ಕರ್ಮ ಅಕರ್ಮ ಚ ಪ್ರವಕ್ಷ್ಯಾಮಿ ಯತ್ ಜ್ಞಾತ್ವಾ ವಿದಿತ್ವಾ ಕರ್ಮಾದಿ ಮೋಕ್ಷ್ಯಸೇ ಅಶುಭಾತ್ ಸಂಸಾರಾತ್ ॥

(ಭಾಷ್ಯಾರ್ಥ)

ಕವಿಗಳು ಎಂದರೆ ಜಾಣರುಕೂಡ ಕರ್ಮವು ಯಾವದು, ಅಕರ್ಮವು ಯಾವದು ?–ಎಂಬ ಈ ಕರ್ಮವೇ ಮುಂತಾದ ವಿಷಯದಲ್ಲಿ ಮೋಹಿತರಾಗಿರುವರು,

ಭ್ರಾಂತಿಯನ್ನು ಹೊಂದಿರುವರು. ಆದ್ದರಿಂದ ನಿನಗೆ (ತೇ=ತುಭ್ಯಮ್) ನಾನು ಕರ್ಮವನ್ನೂ ಅಕರ್ಮವನ್ನೂ (ಸರಿಯಾಗಿ) ಹೇಳಿಕೊಡುವೆನು. (ಅ) ಕರ್ಮವೇ ಮುಂತಾದದ್ದನ್ನು ಅರಿತುಕೊಂಡರೆ ತಿಳಿದುಕೊಂಡರೆ ಅಶುಭದಿಂದ ಎಂದರೆ ಸಂಸಾರ ದಿಂದ ಬಿಡುಗಡೆಯನ್ನು ಹೊಂದುವೆ.

(ಭಾಷ್ಯ)

೨೫೧. ನ ಚ ಏತತ್ [1] ತ್ವಯಾ ಮನ್ತವ್ಯಮ್–ಕರ್ಮ ನಾಮ ದೇಹಾದಿ ಚೇಷ್ಟಾ ಲೋಕಪ್ರಸಿದ್ಧಮ್, ಅಕರ್ಮ ನಾಮ ತದಕ್ರಿಯಾ ತೂಷ್ಣೀಮ್ ಆಸನಮ್। ಕಿಂ ತತ್ರ ಬೋದ್ಧವ್ಯಮ್? ಇತಿ। ಕಸ್ಮಾತ್? ಉಚ್ಯತೇ—

(ಭಾಷ್ಯಾರ್ಥ)

ಕರ್ಮವೆಂದರೆ ದೇಹವೇ ಮುಂತಾದವುಗಳ ಕೆಲಸವೆಂದು ಜನರಿಗೆಲ್ಲ ಗೊತ್ತೇ ಇದೆ, ಅಕರ್ಮವೆಂದರೆ ಅದನ್ನು ಮಾಡದಿರುವದು, ಸುಮ್ಮನೆ ಕೂತಿರುವದು. (ಇದೂ ಗೊತ್ತೇ ಇದೆ). ಇದರಲ್ಲಿ ತಿಳಿದುಕೊಳ್ಳತಕ್ಕದ್ದೇನಿದೆ? ಎಂದು ಹೀಗೆ ನೀನು ಯೋಚಿಸಿಕೊಳ್ಳಬಾರದು ಏಕೆಂದರೆ ಹೇಳುತ್ತೇನೆ:-

**ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ।**
**ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ ॥ ೧೭ ॥**

೧೭. ಕರ್ಮದ ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ. ವಿಕರ್ಮದ ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ. ಅಕರ್ಮದ ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ. ಕರ್ಮದ ಗತಿಯು ಕಷ್ಟವಾಗಿರುವದು.

(ಭಾಷ್ಯ)

೨೫೨. ಕರ್ಮಣಃ ಶಾಸ್ತ್ರವಿಹಿತಸ್ಯ ಹಿ ಯಸ್ಮಾತ್ ಅಪಿ ಅಸ್ತಿ ಬೋದ್ಧವ್ಯಮ್। ಬೋದ್ಧವ್ಯಂ ಚ ಅಸ್ತ್ಯೇವ ವಿಕರ್ಮಣಃ ಪ್ರತಿಷಿದ್ಧಸ್ಯ। ತಥಾ ಅಕರ್ಮಣಶ್ಚ ತೂಷ್ಣೀಂಭಾವಸ್ಯ ಬೋದ್ಧವ್ಯಮ್ 'ಅಸ್ತಿ' ಇತಿ ತ್ರಿಷ್ವಪಿ ಅಧ್ಯಾಹಾರಃ ಕರ್ತವ್ಯಃ। ಯಸ್ಮಾತ್ ಗಹನಾ ವಿಷಮಾ ದುರ್ಜ್ಞೇಯಾ[2] ಕರ್ಮಣಃ ಇತಿ ಉಪಲಕ್ಷಣಾರ್ಥಂ ಕರ್ಮಾದೀನಾಮ್ ಕರ್ಮಾಕರ್ಮವಿಕರ್ಮಣಾಂ ಗತಿಃ ಯಾಥಾತ್ಮ್ಯಂ ತತ್ತ್ವಮ್ ಇತ್ಯರ್ಥಃ ॥

1. 'ಏವಮ್' ಮು॥ ಮೈ॥
2. 'ದುರ್ಜ್ಞಾನಾ' ಶಿ॥ ಗು॥

(ಭಾಷ್ಯಾರ್ಥ)

ಏಕೆಂದರೆ ಶಾಸ್ತ್ರದಲ್ಲಿ (ಮಾಡಬೇಕೆಂದು) ವಿಧಿಸಿರುವದು **ಕರ್ಮವು**; (ಇದರ) ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ. (ಮಾಡಕೂಡದೆಂದು) ನಿವಾರಣೆ ಮಾಡಿರುವದು **ವಿಕರ್ಮವು**: (ಇದರ) ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ. ಸುಮ್ಮನೆ ಇರುವದು **ಅಕರ್ಮವು**, (ಇದರ) ವಿಷಯದಲ್ಲಿಯೂ ತಿಳಿದುಕೊಳ್ಳತಕ್ಕದ್ದಿದೆ. (ಮೂಲದಲ್ಲಿರುವ) ಮೂರು (ವಾಕ್ಯ)ಗಳಲ್ಲಿಯೂ 'ಅಸ್ತಿ' (ಇದೆ) ಎಂದು ಅಧ್ಯಾಹಾರವನ್ನು ಮಾಡಿಕೊಳ್ಳಬೇಕು. "ಏಕೆಂದರೆ ಕರ್ಮದ ಗತಿಯು ಗಹನವಾಗಿರುತ್ತದೆ" ತಿಳಿಯುವದು ಕಷ್ಟವಾಗಿರುತ್ತದೆ (ಎಂಬಲ್ಲಿ) ಕರ್ಮವೆಂಬ (ಮಾತು) ಕರ್ಮವೇ ಮುಂತಾದವುಗಳ ಬಗ್ಗೆ ಉಪಲಕ್ಷಣವಾಗಿರುತ್ತದೆ. ಕರ್ಮ, ಅಕರ್ಮ, ವಿಕರ್ಮ–ಇವುಗಳ ಗತಿಯು ಎಂದರೆ ನಿಜವು, ತತ್ತ್ವವು (ತಿಳಿದುಕೊಳ್ಳುವದಕ್ಕೆ ಕಷ್ಟವಾಗಿರುತ್ತದೆ) ಎಂದರ್ಥ.

(ಭಾಷ್ಯ)

೨೫೩ ಕಿಂ ಪುನಸ್ತತ್ತ್ವಂ ಕರ್ಮಾದೇಃ ಯದ್ ಬೋದ್ಧವ್ಯಂ ವಕ್ಷ್ಯಾಮಿ ಇತಿ ಪ್ರತಿಜ್ಞಾತಮ್? ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ 'ತಿಳಿದುಕೊಳ್ಳತಕ್ಕದ್ದಿದೆ' 'ಹೇಳುತ್ತೇನೆ' ಎಂದು (ನೀನು) ತಿಳಿಸಿದ ಕರ್ಮಾದಿಗಳ ತತ್ತ್ವವು ಯಾವದು? ಎಂದರೆ ಹೇಳುತ್ತೇನೆ—

**ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।**
**ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥ ೧೮ ॥**

೧೮. ಕರ್ಮದಲ್ಲಿ ಅಕರ್ಮವನ್ನೂ ಅಕರ್ಮದಲ್ಲಿ ಕರ್ಮವನ್ನೂ ಯಾವಾತನು ಕಂಡುಕೊಳ್ಳುವನೋ ಮನುಷ್ಯರಲ್ಲಿ ಅವನು ಬುದ್ಧಿವಂತನು, ಅವನು ಯುಕ್ತನು, ಕರ್ಮವನ್ನೆಲ್ಲ ಮಾಡಿದವನು.

(ಭಾಷ್ಯ)

೨೫೪. ಕರ್ಮಣಿ ಕ್ರಿಯತೇ ಇತಿ ಕರ್ಮ ವ್ಯಾಪಾರಮಾತ್ರಂ ತಸ್ಮಿನ್ ಕರ್ಮಣಿ ಅಕರ್ಮ ಕರ್ಮಾಭಾವಂ ಯಃ ಪಶ್ಯೇತ್ ಅಕರ್ಮಣಿ ಚ ಕರ್ಮಾಭಾವೇ ಕರ್ತೃತನ್ತ್ರತ್ವಾತ್ ಪ್ರವೃತ್ತಿನಿವೃತ್ತ್ಯೋಃ । ವಸ್ತ್ವಪ್ರಾಪ್ಯೈವ ಹಿ ಸರ್ವ ಏವ ಕ್ರಿಯಾ

ಕಾರಕಾದಿವ್ಯವಹಾರಃ ಅವಿದ್ಯಾಭೂಮಾವೇವ–ಕರ್ಮ ಯಃ ಪಶ್ಯೇತ್ ಪಶ್ಯತಿ । ಸಃ ಬುದ್ಧಿಮಾನ್ ಮನುಷ್ಯೇಷು, ಸಃ ಯುಕ್ತಃ ಯೋಗೀ ಚ, ಕೃತ್ಸ್ನಕರ್ಮಕೃತ್ ಸಮಸ್ತಕರ್ಮಕೃಚ್ಚ ಸಃ ಇತಿ ಸ್ತೂಯತೇ ಕರ್ಮಾಕರ್ಮಣೋರಿತರೇತರದರ್ಶೀ ॥

(ಭಾಷ್ಯಾರ್ಥ)

ಕರ್ಮದಲ್ಲಿ–ಮಾಡಲ್ಪಡುತ್ತದೆಯಾದ್ದರಿಂದ ಕ್ರಿಯಾಸಾಮಾನ್ಯವು[1] ಕರ್ಮವು. ಅಂಥ ಕರ್ಮದಲ್ಲಿ–ಅಕರ್ಮವನ್ನು ಕರ್ಮದ ಅಭಾವವನ್ನು ಯಾವನು ಕಂಡು ಕೊಳ್ಳುವನೋ, ಮತ್ತು ಅಕರ್ಮದಲ್ಲಿ ಎಂದರೆ ಕರ್ಮದ ಅಭಾವದಲ್ಲಿ–**ಪ್ರವೃತ್ತಿ ನಿವೃತ್ತಿಗಳೆರಡೂ ಕರ್ತೃವಿಗೆ ಅಧೀನವಾಗಿರುವದರಿಂದ**[2] **(ಕರ್ಮಾಭಾವವೂ ಕರ್ಮವೇ). ಕ್ರಿಯೆ, ಕಾರಕ–ಮುಂತಾದವುಗಳ ವ್ಯವಹಾರವೆಲ್ಲವೂ ಅವಿದ್ಯಾಭೂಮಿಯಲ್ಲಿಯೇ ಇರುವದೇ ಹೊರತು (ಪರಮಾರ್ಥ)ವಸ್ತುವಿಗೆ ಸೇರಿರುವದಿಲ್ಲ.** ಆದ್ದರಿಂದ (ಅಕರ್ಮದಲ್ಲಿ) ಕರ್ಮವನ್ನು ಯಾವನು ಕಂಡು ಕೊಳ್ಳುವನೋ, ಅವನು ಮನುಷ್ಯರಲ್ಲಿ ಬುದ್ಧಿವಂತನು, 'ಅವನೇ ಯುಕ್ತನು ; ಯೋಗಿಯು, ಮತ್ತು ಅವನು ಕೃತ್ಸ್ನಕರ್ಮವನ್ನೂ ಮಾಡಿದವನು ಎಂದರೆ ಎಲ್ಲಾ ಕರ್ಮಗಳನ್ನೂ ಮಾಡಿದಾತನು–ಎಂದು ಕರ್ಮಾಕರ್ಮಗಳನ್ನು ಒಂದರಲ್ಲೊಂದನ್ನು ಕಂಡುಕೊಂಡಾತನನ್ನು (ಇಲ್ಲಿ) ಹೊಗಳಿದೆ[3]

## ಕರ್ಮಾಕರ್ಮಗಳ ವಿಷಯಕ್ಕೆ ಜನರ ತಪ್ಪು ತಿಳಿವಳಿಕೆ

(ಭಾಷ್ಯ)

೨೫೫. ನನು ಕಿಮಿದಂ ವಿರುದ್ಧಮುಚ್ಯತೇ "ಕರ್ಮಣ್ಯಕರ್ಮ ಯಃ ಪಶ್ಯೇತ್" ಇತಿ "ಅಕರ್ಮಣಿ ಚ ಕರ್ಮ" ಇತಿ । ನ ಹಿ ಕರ್ಮ ಅಕರ್ಮ

---

1. ಏನೇನು ಮಾಡುತ್ತೇವೋ ಅದೆಲ್ಲ ನೋಡುವದು, ಕೇಳುವದು, ಯೋಚಿಸುವದು ತಿಳಿಯುವದು ಮುಂತಾದದ್ದೆಲ್ಲ, ಕರ್ಮವೇ, ಕೇವಲ ಅಗ್ನಿಹೋತ್ರಾದಿಗಳೇ ಅಲ್ಲ ದೇಹ, ಪ್ರಾಣ, ಮನಸ್ಸು, ಬುದ್ಧಿ–ಇವುಗಳ ವ್ಯಾಪಾರವೆಲ್ಲ ಕರ್ಮವೇ.

2. ಪ್ರವೃತ್ತಿ ಎಂದರೆ ಕೆಲಸದಲ್ಲಿ ತೊಡಗುವದು, ನಿವೃತ್ತಿ ಎಂದರೆ ಕೆಲಸವನ್ನು ಬಿಟ್ಟು ಹಿಂಜರಿಯುವದು. ಇವೆರಡೂ ಕರ್ತೃತಂತ್ರವಾಗಿವೆ, ಕರ್ತೃವು ತನ್ನ ಇಚ್ಛೆಯಂತೆ ಅವುಗಳನ್ನು ಮಾಡಬಹುದಾಗಿದೆ.

3. ಪರಮಾರ್ಥವಸ್ತುವನ್ನು ತಿಳಿದವನು ಮತ್ತೆ ತಿಳಿಯಬೇಕಾದದ್ದಿರುವದಿಲ್ಲವಾದ್ದರಿಂದ ಅವನೇ ಬುದ್ಧಿವಂತನು, ಅವನಿಗೆ ಮನಸ್ಸು ಎಂದೆಂದಿಗೂ ಸಮಾಧಾನವಾಗಿರುವದರಿಂದ ಅವನೇ ಯೋಗಿಯು, ಅವನು ಯಾವ ಫಲವನ್ನು ಪಡೆಯುವದಕ್ಕೂ ಯಾವದೊಂದು ಕರ್ಮವನ್ನೂ ಮಾಡಬೇಕಾದದ್ದು ಇರುವದಿಲ್ಲವಾದ್ದರಿಂದ ಅವನು ಎಲ್ಲಾ ಕರ್ಮವನ್ನೂ ಮಾಡಿದವನು.

ಸ್ಯಾತ್, ಅಕರ್ಮ ವಾ ಕರ್ಮ। ತತ್ರ ವಿರುದ್ಧಂ ಕಥಂ ಪಶ್ಯೇತ್ ದ್ರಷ್ಟಾ? ನ ಅಕರ್ಮೈವ ಪರಮಾರ್ಥತಃ ಸತ್ ಕರ್ಮವತ್ ಅವಭಾಸತೇ ಮೂಢದೃಷ್ಟೇಃ ಲೋಕಸ್ಯ। ತಥಾ ಕರ್ಮೈವ ಅಕರ್ಮವತ್। ತತ್ರ ಯಥಾಭೂತದರ್ಶನಾರ್ಥಮ್ ಆಹ ಭಗವಾನ್ "ಕರ್ಮಣ್ಯಕರ್ಮ ಯಃ ಪಶ್ಯೇತ್" ಇತ್ಯಾದಿ। ಅತೋ ನ ವಿರುದ್ಧಮ್। ಬುದ್ಧಿಮತ್ತ್ವಾದ್ಯುಪಪತ್ತೇಶ್ಚ। 'ಬೋದ್ಧವ್ಯಮ್' (೪-೧೭) ಇತಿ ಚ ಯಥಾಭೂತದರ್ಶನಮ್ ಉಚ್ಯತೇ। ನ ಚ ವಿಪರೀತಜ್ಞಾನಾತ್ ಅಶುಭಾತ್ ಮೋಕ್ಷಣಂ ಸ್ಯಾತ್। "ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್" (೪-೧೬) ಇತಿ ಚೋಕ್ತಮ್। ತಸ್ಮಾತ್ ಕರ್ಮಾಕರ್ಮಣೀ ವಿಪರ್ಯಯೇಣ ಗೃಹೀತೇ ಪ್ರಾಣಿಭಿಃ, ತದ್ವಿಪರ್ಯಯಗ್ರಹಣನಿವೃತ್ತ್ಯರ್ಥಂ ಭಗವತೋ ವಚನಂ "ಕರ್ಮಣ್ಯಕರ್ಮ ಯಃ" ಇತ್ಯಾದಿ। ನ ಚ ಅತ್ರ ಕರ್ಮಾಧಿಕರಣಮ್ ಅಕರ್ಮ ಅಸ್ತಿ ಕುಂಡೇ ಬದರಾಣೀವ। ನಾಪಿ ಅಕರ್ಮಾಧಿಕರಣಂ ಕರ್ಮಾಸ್ತಿ। ಕರ್ಮಾಭಾವತ್ವಾತ್ ಅಕರ್ಮಣಃ। ಅತಃ ವಿಪರೀತಗೃಹೀತೇ ಏವ ಕರ್ಮಾಕರ್ಮಣೀ ಲೌಕಿಕೈಃ ಯಥಾ ಮೃಗತೃಷ್ಣಿಕಾಯಾಮ್ ಉದಕಮ್, ಶುಕ್ತಿಕಾಯಾಂ ವಾ ರಜತಮ್॥

(ಭಾಷ್ಯಾರ್ಥ)

(ಆಕ್ಷೇಪ).—ಇದೇನು, 'ಕರ್ಮದಲ್ಲಿ ಅಕರ್ಮವನ್ನು ಯಾವಾತನು ನೋಡುವನೋ' 'ಅಕರ್ಮದಲ್ಲಿ ಕರ್ಮವನ್ನು (ನೋಡುವನೋ)' ಎಂದು ವಿರುದ್ಧವಾಗಿ ಹೇಳಿದೆಯಲ್ಲ! ಕರ್ಮವು ಅಕರ್ಮವಾಗಿಯಾಗಲಿ ಅಕರ್ಮವು ಕರ್ಮವಾಗಿಯಾಗಲಿ ಇರಲಾರದಷ್ಟೆ? ಹೀಗಿರುವಲ್ಲಿ (ತಿಳಿದು) ನೋಡುವಾತನು (ಹೀಗೆ) ವಿರುದ್ಧವಾದದ್ದನ್ನು (ಹೇಗೆ) ಕಂಡುಕೊಳ್ಳಬೇಕು?

(ಪರಿಹಾರ):—ಹಾಗಲ್ಲ. ನಿಜವಾಗಿ ಅಕರ್ಮವಾಗಿಯೇ ಇರುವದು ತಪ್ಪು ತಿಳಿವಿನ ಜನಕ್ಕೆ ಕರ್ಮದಂತೆ ತೋರುತ್ತಿರುವದು, ಮತ್ತು ಕರ್ಮವೇ ಅಕರ್ಮದಂತೆ ತೋರುತ್ತಿರುವದು. ಆದ್ದರಿಂದ ಇದ್ದದ್ದನ್ನು ಇದ್ದಂತೆ ತಿಳಿದುಕೊಳ್ಳಲೆಂದು ಭಗವಂತನು "ಕರ್ಮಣ್ಯಕರ್ಮ ಯಃ ಪಶ್ಯೇತ್" (ಕರ್ಮದಲ್ಲಿ ಯಾವಾತನು ಅಕರ್ಮವನ್ನು ಕಂಡುಕೊಳ್ಳುವನೋ) ಎಂದು ಮುಂತಾಗಿ ಹೇಳಿರುತ್ತಾನೆ. ಆದ್ದರಿಂದ (ಇದು) ವಿರುದ್ಧವಲ್ಲ. "(ಅವನು) ಬುದ್ಧಿವಂತನು" ಎಂದು ಮುಂತಾಗಿ ಹೇಳಿರುವದು ಹೊಂದುವದರಿಂದಲೂ (ಶ್ಲೋಕಕ್ಕೆ ಇದೇ ಅರ್ಥವೆಂದು ನಿಶ್ಚಯವಾಗುತ್ತದೆ). "ತಿಳಿದುಕೊಳ್ಳತಕ್ಕದ್ದಿದೆ" (೪-೧೭) ಎಂದು ಹೇಳಿರುವದರಲ್ಲಿಯೂ ಇದ್ದದ್ದನ್ನು ಇದ್ದಂತೆ ತಿಳಿದುಕೊಳ್ಳತಕ್ಕದ್ದನ್ನೇ ಹೇಳಿದೆ. ಇದಲ್ಲದೆ ತಪ್ಪಾಗಿ ತಿಳಿದು

ಕೊಂದರೆ ಅಶುಭದಿಂದ ಬಿಡುಗಡೆಯಾಗಲಾರದು ; "ಇದನ್ನು ಅರಿತುಕೊಂಡರೆ ಕೆಟ್ಟದ್ದರಿಂದ ಬಿಡುಗಡೆಯನ್ನು ಹೊಂದುವೆ" (೪-೧೬) ಎಂದು ಹಿಂದೆ ಹೇಳಿರುತ್ತದೆ.[1] ಆದ್ದರಿಂದ ಕರ್ಮ, ಅಕರ್ಮ-ಇವುಗಳನ್ನು ಜೀವರುಗಳು ತಪ್ಪಾಗಿ ತಿಳಿದುಕೊಂಡಿರುತ್ತಾರೆಂದೂ ಆ ತಪ್ಪುತಿಳಿವಳಿಕೆಯನ್ನು ಹೋಗಲಾಡಿಸುವದಕ್ಕಾಗಿ ಭಗವಂತನು "ಕರ್ಮಣ್ಯಕರ್ಮ ಯಃ" ಎಂದು ಮುಂತಾಗಿ ಹೇಳಿರುತ್ತಾನೆಂದೂ (ತಿಳಿಯಬೇಕು). ಇದಲ್ಲದೆ ಇಲ್ಲಿ ಕುಡಿಕೆಯಲ್ಲಿ ಎಗಚೀಕಾಯಿಗಳಿರುವಂತೆ ಕರ್ಮವೆಂಬ ಆಧಾರದಲ್ಲಿ ಅಕರ್ಮವೇನೂ ಇರುವದಿಲ್ಲ, ಅಕರ್ಮವೆಂಬ ಆಧಾರದಲ್ಲಿ ಕರ್ಮವೂ ಇರುವದಿಲ್ಲ ; ಏಕೆಂದರೆ ಅಕರ್ಮವೆಂದರೆ ಕರ್ಮದ ಅಭಾವ (ಮಾತ್ರ)ವಾಗಿರುತ್ತದೆ[2] ಆದ್ದರಿಂದ ಬಿಸಿಲುಕುದುರೆಯಲ್ಲಿ ನೀರನ್ನು ಅಥವಾ ಕಪ್ಪೆಯಚಿಪ್ಪಿನಲ್ಲಿ ಬೆಳ್ಳಿಯನ್ನು ತಪ್ಪಾಗಿ ಕಲ್ಪಿಸಿಕೊಂಡಿರುವಂತೆ ಲೋಕದ ಜನರು ಕರ್ಮಾಕರ್ಮಗಳನ್ನು ತಪ್ಪಾಗಿ ತಿಳಿದುಕೊಂಡಿರುವ(ರೆಂಬುದನ್ನೇ ಭಗವಂತನು ಹೇಳಿರುತ್ತಾನೆಂದಾಯಿತು).

(ಭಾಷ್ಯ)

೨೫೬. ನನು ಕರ್ಮ[3] ಕರ್ಮೈವ ಸರ್ವೇಷಾಂ ನ ಕ್ವಚಿದ್ ವ್ಯಭಿಚರತಿ । ತನ್ನ । ನೌಸ್ಥಸ್ಯ ನಾವಿ ಗಚ್ಛನ್ತ್ಯಾಂ ತಟಸ್ಥೇಷು ಅಗತಿಷು ನಗೇಷು ಪ್ರತಿಕೂಲಗತಿದರ್ಶನಾತ್ । ದೂರೇಷು ಚಕ್ಷುಷಾ ಅಸನ್ನಿಕೃಷ್ಟೇಷು ಗಚ್ಛತ್ಸು ಗತ್ಯಭಾವದರ್ಶನಾತ್ । ಏವಮ್ ಇಹಾಪಿ ಅಕರ್ಮಣಿ ಕರ್ಮದರ್ಶನಂ ಕರ್ಮಣಿ ಚ ಅಕರ್ಮದರ್ಶನಮ್ ಯೇನ ತನ್ನಿರಾಕರಣಾರ್ಥಮ್ ಉಚ್ಯತೇ "ಕರ್ಮಣ್ಯಕರ್ಮ ಯಃ ಪಶ್ಯೇತ್" ಇತ್ಯಾದಿ ॥

(ಭಾಷ್ಯಾರ್ಥ)

(ಆಕ್ಷೇಪ).—ಕರ್ಮವು ಎಲ್ಲರಿಗೂ ಕರ್ಮವೇ. ಎಲ್ಲಿಯೂ (ಅದು) ಬೇರೆಯಾಗುವದಿಲ್ಲವಲ್ಲ !

---

1. ಆದ್ದರಿಂದ ಕ್ರಿಯಾಕಾರಕಫಲರೂಪವಾಗಿರುವ ಸಂಸಾರವು ತಪ್ಪುತಿಳಿವಳಿಕೆಯಿಂದಾಗಿರುವದೆಂದೂ ಆ ತಿಳಿವಳಿಕೆಯನ್ನೇ ಕಳೆದುಕೊಂಡರೆ ಮೋಕ್ಷವೆಂದೂ ಹೇಳಿದಂತೆ ಆಯಿತು.

2. ಅಭಾವರೂಪವಾದ ಅಕರ್ಮವು ಭಾವರೂಪವಾದ ಕರ್ಮಕ್ಕೆ ಆಧಾರವಾಗಲಾರದು.

3. ಈ ಮಾತು ಅ||ನ||ಗು||ಗಳಲ್ಲಿ ಬಿಟ್ಟುಹೋಗಿದೆ.

(ಪರಿಹಾರ) : —ಹಾಗಲ್ಲ. ಏಕೆಂದರೆ ಹಡಗು ಹೋಗುತ್ತಿರುವಾಗ ಹಡಗಿನಲ್ಲಿರುವವನಿಗೆ ದಡದಲ್ಲಿ ಓಡಾಡದೆ ನಿಂತಿರುವ ಮರಗಳು (ಹಡಗಿನ ದಿಕ್ಕಿಗೆ)ವಿರುದ್ಧವಾದ (ದಿಕ್ಕಿಗೆ) ಹೋಗುತ್ತಿರುವಂತೆ ತೋರುತ್ತಿರುತ್ತದೆ. ಚಕ್ಷುರಿಂದ್ರಿಯಕ್ಕೆ (ಪೂರ) ಸಂಬಂಧಪಡದಷ್ಟು[1] ದೂರದಲ್ಲಿ (ಕೆಲವರು) ಹೋಗುತ್ತಿದ್ದರೆ ಅವರು ಚಲಿಸುತ್ತಿಲ್ಲವೆಂದೂ ತೋರುತ್ತದೆ.[2] ಇದರಂತೆ ಇಲ್ಲಿಯೂ ಅಕರ್ಮದಲ್ಲಿ ಕರ್ಮಬುದ್ಧಿಯೂ ಕರ್ಮದಲ್ಲಿ ಅಕರ್ಮಬುದ್ಧಿಯೂ (ಉಂಟಾಗಿರುತ್ತದೆ), ಆದ್ದರಿಂದ ಅದನ್ನು ಹೋಗಲಾಡಿಸುವದಕ್ಕಾಗಿ "ಕರ್ಮಣ್ಯಕರ್ಮ ಯಃ ಪಶ್ಯೇತ್" (ಕರ್ಮವನ್ನು ಯಾವನು ಅಕರ್ಮವೆಂದು ಕಂಡುಕೊಳ್ಳುವನೋ) ಎಂದು ಮುಂತಾಗಿ ಹೇಳಿರುತ್ತದೆ.

## ಪ್ರಕೃತವಾಗಿರುವ ಕರ್ಮಾಕರ್ಮಗಳ ಅಧ್ಯಾರೋಪ

(ಭಾಷ್ಯ)

೨೫೭. ತದೇತತ್ ಉಕ್ತಪ್ರತಿವಚನಮಪಿ ಅಸಕೃತ್ ಅತ್ಯನ್ತವಿಪರೀತದರ್ಶನಭಾವಿತತಯಾ ಮೋಮುಹ್ಯಮಾನೋ ಲೋಕಃ ಶ್ರುತಮಪಿ ಅಸಕೃತ್ ತತ್ತ್ವಂ ವಿಸ್ಮೃತ್ಯ ವಿಸ್ಮೃತ್ಯ ಮಿಥ್ಯಾಪ್ರಸಙ್ಗಮ್ ಅವತಾರ್ಯ ಅವತಾರ್ಯ ಚೋದಯತಿ ಇತಿ ಪುನಃ ಪುನಃ ಉತ್ತರಮ್ ಆಹ ಭಗವಾನ್ ದುರ್ವಿಜ್ಞೇಯತ್ವಂ ಚ ಆಲಕ್ಷ್ಯ ವಸ್ತುನಃ । "ಅವ್ಯಕ್ತೋಽಯಮಚಿನ್ತ್ಯೋಽಯಮ್" (೨-೨೫), "ನ ಜಾಯತೇ ಮ್ರಿಯತೇ" (೨-೨೦) ಇತ್ಯಾದಿನಾ ಆತ್ಮನಿ ಕರ್ಮಾಭಾವಃ ಶ್ರುತಿಸ್ಮೃತಿನ್ಯಾಯಪ್ರಸಿದ್ಧ ಉಕ್ತಃ, ವಕ್ಷ್ಯಮಾಣಶ್ಚ । ತಸ್ಮಿನ್ ಆತ್ಮನಿ ಕರ್ಮಾಭಾವೇ ಅಕರ್ಮಣಿ ಕರ್ಮವಿಪರೀತದರ್ಶನಮ್ ಅತ್ಯನ್ತನಿರೂಢಮ್ । ಯತಃ "ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ" (೪-೧೬) । ದೇಹಾದ್ಯಾಶ್ರಯಂ ಕರ್ಮ ಆತ್ಮನ್ಯಧ್ಯಾರೋಪ್ಯ "ಅಹಂ ಕರ್ತಾ, ಮಮೈತತ್ ಕರ್ಮ, ಮಯಾ ಅಸ್ಯ ಕರ್ಮಣಃ ಫಲಂ ಭೋಕ್ತವ್ಯಮ್" ಇತಿ ಚ, ತಥಾ 'ಅಹಂ ತೂಷ್ಣೀಂ ಭವಾಮಿ ಯೇನ ಅಹಂ ನಿರಾಯಾಸಃ, ಅಕರ್ಮಾ ಸುಖೀ ಸ್ಯಾಮ್' ಇತಿ ಕಾರ್ಯಕರಣಾ

---

1. ಇಂದ್ರಿಯಸನ್ನಿಕರ್ಷವಿಲ್ಲದೆ ವಸ್ತುವು ಕಾಣಿಸುವದೇ ಇಲ್ಲವಾದ್ದರಿಂದ ಇಲ್ಲಿ ಅಸನ್ನಿಕೃಷ್ಟವಾದ ಎಂದರೆ ಪೂರ ಸಂಬಂಧಪಡದ ಎಂದೇ ಅರ್ಥವನ್ನು ಮಾಡಿಕೊಳ್ಳಬೇಕು.

2. ಆದ್ದರಿಂದ ಕರ್ಮ, ಅಕರ್ಮ-ಇವುಗಳು ಅಕರ್ಮ, ಕರ್ಮ ಎಂದು ವಿಪರೀತರೂಪದಿಂದ ತೋರಿಕೊಳ್ಳಬಹುದು ಎಂದಾಯಿತು.

ಶ್ರಯಂ ವ್ಯಾಪಾರೋಪರಮಂ ತತ್ಕೃತಂ ಚ ಸುಖಿತ್ವಮ್ ಆತ್ಮನ್ಯಧ್ಯಾರೋಪ್ಯ ‘ನ ಕರೋಮಿ ಕಿಂಚಿತ್, ತೂಷ್ಣೀಂ ಸುಖಮಾಸೇ’ ಇತ್ಯಭಿಮನ್ಯತೇ ಲೋಕಃ । ತತ್ರ ಇದಂ ಲೋಕಸ್ಯ ವಿಪರೀತದರ್ಶನಾಪನಯಾಯ ಆಹ ಭಗವಾನ್ “ಕರ್ಮಣ್ಯಕರ್ಮ ಯಃ ಪಶ್ಯೇತ್” ಇತ್ಯಾದಿ ॥

(ಭಾಷ್ಯಾರ್ಥ)

ಈ ವಿಷಯದಲ್ಲಿ ಎಷ್ಟೋ ಸಲ ಸಮಾಧಾನವನ್ನು ಹೇಳಿದೆಯಾದರೂ ತೀರ ತಪ್ಪುತಿಳಿವಳಿಕೆಯ ವಾಸನೆಯುಳ್ಳವರಾಗಿರುವದರಿಂದ[1] ಮತ್ತೆ ಮತ್ತೆ ಭ್ರಾಂತರಾಗಿ ಜನವು ಎಷ್ಟೋ ಸಲ ಕೇಳಿದ್ದ ತತ್ತ್ವವನ್ನುಕೂಡ ಮರೆತು ಮರೆತು ಇಲ್ಲದ ಪ್ರಸಕ್ತಿಯನ್ನು[2] ಒಡ್ಡಿ ಒಡ್ಡಿ ಆಕ್ಷೇಪಣೆಯನ್ನು ಮಾಡುತ್ತಿರುವದು. ಆದ್ದರಿಂದ ಪರಮಾರ್ಥವಸ್ತು (ತತ್ತ್ವವು) ತಿಳಿಯುವದಕ್ಕೆ ಬಲು ಕಷ್ಟವೆಂಬುದನ್ನೂ ಲಕ್ಷ್ಯದಲ್ಲಿಟ್ಟು ಭಗವಂತನು ಮತ್ತೆ ಮತ್ತೆ ಉತ್ತರವನ್ನು ಹೇಳುತ್ತಿದಾನೆ. “ಅವ್ಯಕ್ತೋಽಯಮಚಿನ್ತ್ಯೋಽಯಮ್” (೨-೨೫), “ನ ಜಾಯತೇ ಮ್ರಿಯತೇ” (೨-೨೦) ಎಂಬಿವೇ ಮುಂತಾದ ವಾಕ್ಯಗಳಿಂದ ಆತ್ಮನಲ್ಲಿ ಕರ್ಮವು ಇಲ್ಲವೆಂಬ ಶ್ರುತಿಸ್ಮೃತಿನ್ಯಾಯಸಿದ್ಧವಾದ (ವಿಷಯವನ್ನು) ಹಿಂದೆ ಹೇಳಿಯೂ ಇದೆ, ಮುಂದೆ ಹೇಳುವದೂ[3] ಆಗುತ್ತದೆ. ಕರ್ಮಗಳಿಲ್ಲದ ಅಕರ್ಮನಾದ ಆ ಆತ್ಮನಲ್ಲಿ ಕರ್ಮವೆಂಬ ವಿರುದ್ಧ (ಧರ್ಮವನ್ನು) ಕಾಣುವದು[4] (ಜನರಲ್ಲಿ) ತೀರ ರೂಢಿಯಲ್ಲಿರುತ್ತದೆ, ಇದರಿಂದಲೇ “ಕರ್ಮವೆಂದರೇನು, ಅಕರ್ಮವೆಂದರೇನು-ಎಂಬ ವಿಷಯದಲ್ಲಿ ತಿಳಿದವರೂ ಮೋಹಿತರಾಗಿರುತ್ತಾರೆ” (೪-೧೬). ದೇಹವೇ ಮುಂತಾದವುಗಳನ್ನು ಆಶ್ರಯಿಸಿಕೊಂಡಿರುವ ಕರ್ಮವನ್ನು ಆತ್ಮನಲ್ಲಿ ಅಧ್ಯಾರೋಪಮಾಡಿಕೊಂಡು ‘ನಾನು ಕರ್ತನು, ಇದು ನನ್ನ ಕರ್ಮವು, ನಾನು ಈ ಕರ್ಮದ ಫಲವನ್ನು ಅನುಭವಿಸಬೇಕು’ ಎಂದು (ಹುಟ್ಟುಗಟ್ಟಿಕೊಂಡು), ಹಾಗೂ ನಾನು ಸುಮ್ಮನಿರುವೆನು,

---

1 ಮನಸ್ಸಿನ ವಾಸನೆಗನುಗುಣವಾಗಿ ನಮ್ಮ ವಿಚಾರಸರಣಿಯುಂಟಾಗುವದು ಭ್ರಾಂತಿಗಳಿಗೆ ಮನೋವಾಸನೆಯೇ ಕಾರಣವು

2. ಪ್ರಸಕ್ತಿ ಎಂದರೆ ‘ಹೀಗಾದರೆ ಇಂಥ ತೊಂದರೆಯಾಗುವದಲ್ಲ!’ ಎಂದು ಕಲ್ಪಿಸುವ ಅನಿಷ್ಟವು.

3 ೫-೧೩ ಮುಂತಾದ ಕಡೆಗಳಲ್ಲಿ.

4 ‘ಕರ್ಮವಿಪರೀತದರ್ಶನಮ್’ ಎಂಬುದು ‘ವಿಪರೀತದರ್ಶನಮ್’ ಎಂದಿದ್ದಂತೆ ಭಾವಿಸಬೇಕಾಗಿದೆ. ಆ॥ ವ್ಯಾಖ್ಯಾನದಲ್ಲಿರುವದನ್ನನುಸರಿಸಿ ಇಲ್ಲಿ ಕನ್ನಡಿಸಿದೆ.

ಇದರಿಂದ ನಾನು ಯಾವ ಆಯಾಸವೂ ಇಲ್ಲದೆ ಏನೂ ಮಾಡದೆ ಸುಖಿಯಾಗಿರುವೆನು ಎಂದು ' ಎಂದು ಕಾರ್ಯಕರಣಗಳನ್ನು ಆಶ್ರಯಿಸಿಕೊಂಡಿರುವ ಕೆಲಸವನ್ನು ಬಿಡುವಿಕೆಯೆಂಬುದನ್ನೂ ಅದರಿಂದಾಗುವ ಸುಖಿತ್ವವನ್ನೂ ಆತ್ಮನಲ್ಲಿ ಅಧ್ಯಾರೋಪ ಮಾಡಿಕೊಂಡು ' ನಾನು ಏನೂ ಮಾಡುತ್ತಿಲ್ಲ, ಸುಮ್ಮನೆ ಸುಖವಾಗಿ ಕುಳಿತಿದ್ದೇನೆ' ಎಂದು ಜನವು (ತಪ್ಪಾಗಿ) ತಿಳಿದುಕೊಳ್ಳುತ್ತಿರುವದು. ಹೀಗಿರುವದರಿಂದ ಜನರ (ಈ) ತಪ್ಪು ತಿಳಿವಳಿಕೆಯನ್ನು ಕಳೆಯುವದಕ್ಕಾಗಿ ಭಗವಂತನು " ಕರ್ಮಣ್ಯಕರ್ಮ ಯಃ ಪಶ್ಯೇತ್ " ಎಂದು ಮುಂತಾದ ಈ (ವಾಕ್ಯವನ್ನು) ಆಡಿರುತ್ತಾನೆ.

## ಶ್ಲೋಕವ್ಯಾಖ್ಯಾನದ ಉಪಸಂಹಾರ

(ಭಾಷ್ಯ)

೨೫೮. ಅತ್ರ ಚ ಕರ್ಮ ಕರ್ಮೈವ ಸತ್ ಕಾರ್ಯಕರಣಾಶ್ರಯಂ ಕರ್ಮರಹಿತೇ ಅವಿಕ್ರಿಯೇ ಆತ್ಮನಿ ಸರ್ವೈರಧ್ಯಸ್ತಮ್ । ಯತಃ ಪಣ್ಡಿತೋಽಪಿ ' ಅಹಂ ಕರೋಮಿ ' ಇತಿ ಮನ್ಯತೇ । ಅತಃ ಆತ್ಮಸಮವೇತತಯಾ ಸರ್ವಲೋಕಪ್ರಸಿದ್ಧೇ ಕರ್ಮಣಿ ನದೀಕೂಲಸ್ಥೇಷ್ವಿವ ವೃಕ್ಷೇಷು ಗತಿಪ್ರಾತಿಲೋಮ್ಯೇನ, ಅಕರ್ಮ ಕರ್ಮಾಭಾವಂ ಯಥಾಭೂತಮ್, ಗತ್ಯಭಾವಮಿವ ವೃಕ್ಷೇಷು, ಯಃ ಪಶ್ಯೇತ್ । ಅಕರ್ಮಣಿ ಚ ಕಾರ್ಯಕರಣವ್ಯಾಪಾರೋಪರಮೇ ಕರ್ಮವತ್ ಆತ್ಮನ್ಯಧ್ಯಾರೋಪಿತೇ ' ತೂಷ್ಣೀಮ್ ಅಕುರ್ವನ್ ಸುಖಮ್ ಆಸೇ ' ಇತಿ ಅಹಂಕಾರಾಭಿಸನಿಹೇತುತ್ವಾತ್, ತಸ್ಮಿನ್ ಅಕರ್ಮಣಿ ಚ ಕರ್ಮ ಯಃ ಪಶ್ಯೇತ್ । ಯ ಏವಂ ಕರ್ಮಾಕರ್ಮವಿಭಾಗಜ್ಞಃ ಸ ಬುದ್ಧಿಮಾನ್ ಪಣ್ಡಿತಃ ಮನುಷ್ಯೇಷು । ಸ ಯುಕ್ತಃ ಯೋಗೀ । ಕೃತ್ಸ್ನಕರ್ಮಕೃಚ್ಚ ಸಃ । ಅಶುಭಾತ್ ಮೋಕ್ಷಿತಃ ಕೃತಕೃತ್ಯೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಇಲ್ಲಿ ಕರ್ಮವು ಕರ್ಮವೇ ಆಗಿ ದೇಹೇಂದ್ರಿಯಗಳಲ್ಲಿದ್ದುಕೊಂಡಿರುವದಾದರೂ ಯಾವ ಕರ್ಮವೂ ಇಲ್ಲದ ವಿಕಾರವಿಲ್ಲದ ಆತ್ಮನಲ್ಲಿ (ಅದನ್ನು) ಎಲ್ಲರೂ ಅಧ್ಯಾಸಮಾಡುತ್ತಿರುತ್ತಾರೆ, ಆದ್ದರಿಂದಲೇ ಪಂಡಿತನುಕೂಡ ' ನಾನು ಮಾಡುತ್ತೇನೆ ' ಎಂದು ತಿಳಿಯುತ್ತಾನೆ. ಆದ್ದರಿಂದ ಆತ್ಮನಿಗೆ ಸಂಬಂಧಪಟ್ಟಿರುವದೆಂದು ಸಕಲ ಜನರೂ ತಿಳಿದುಕೊಂಡಿರುವ ಕರ್ಮದಲ್ಲಿ ನದಿಯ ದಡದಲ್ಲಿರುವ ಮರಗಳಲ್ಲಿ ಗಮನಕ್ಕೆ ವಿರುದ್ಧವಾಗಿರುವ (ಅಕರ್ಮವನ್ನು ತಿಳಿಯು)ವಂತೆ ಅಕರ್ಮ

ರನ್ನು ಎಂದರೆ ಕರ್ಮದ ಅಭಾವವನ್ನು ಮರಗಳಲ್ಲಿ ಗತ್ಯಭಾವವನ್ನು (ಕಂಡು ಕೊಳ್ಳು) ವಂತೆ ಯಾವನು ಇದ್ದದ್ದು ಇದ್ದಂತೆ ಕಂಡುಕೊಳ್ಳುವನೋ 'ಮತ್ತು ಅಕರ್ಮದಲ್ಲಿ ಎಂದರೆ ಕಾರ್ಯಕರಣಗಳ ವ್ಯಾಪಾರದ ನಿಲುಗಡೆಯಲ್ಲಿ. ಸುಮ್ಮನೆ ಏನನ್ನೂ ಮಾಡದೆ ಸುಖವಾಗಿ ಕುಳಿತಿದ್ದೇನೆ' ಎಂದು ಕರ್ಮದಂತೆಯೇ ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಆ ಅಕರ್ಮದಲ್ಲಿ (ಅದು) ಅಹಂಕಾರದ ಅಭಿಮಾನಕ್ಕೆ ಕಾರಣವಾಗಿರುವದರಿಂದ ಕರ್ಮವನ್ನು ಯಾವನು ಕಂಡುಕೊಳ್ಳುವನೋ, ಯಾವನು ಹೀಗೆ ಕರ್ಮವನ್ನೂ ಅಕರ್ಮವನ್ನೂ ವಿಂಗಡಿಸಿ ತಿಳಿದುಕೊಳ್ಳುವನೋ, ಅವನು ಮನುಷ್ಯರಲ್ಲಿ ಬುದ್ಧಿವಂತನು, ಪಂಡಿತನು, ಅವನು ಯುಕ್ತನು, ಎಂದರೆ ಯೋಗಿಯು, ಮತ್ತು ಅವನು ಎಲ್ಲಾ ಕರ್ಮವನ್ನೂ ಮಾಡಿದವನು, ಎಂದರೆ ಅಶುಭ(ವಾದ ಸಂಸಾರ)ದಿಂದ ಬಿಡುಗಡೆಯನ್ನು ಹೊಂದಿ ಕೃತಕೃತ್ಯನಾಗುವನು ಎಂದರ್ಥ.

## ವೃತ್ತಿಕಾರರ ತಪ್ಪುವ್ಯಾಖ್ಯಾನ.

(ಭಾಷ್ಯ)

೨೫೯. ಅಯಂ ಶ್ಲೋಕಃ ಅನ್ಯಥಾ ವ್ಯಾಖ್ಯಾತಃ ಕೈಶ್ಚಿತ್ । ಕಥಮ್ ? ನಿತ್ಯಾನಾಂ ಕಿಲ ಕರ್ಮಣಾಮ್ ಈಶ್ವರಾರ್ಥೇ ಅನುಷ್ಠೀಯಮಾನಾನಾಂ ತತ್ಫಲಾಭಾವಾತ್ ಅಕರ್ಮಾಣಿ ತಾನಿ ಉಚ್ಯನ್ತೇ ಗೌಣ್ಯಾ ವೃತ್ತ್ಯಾ । ತೇಷಾಂ ಚ ಅಕರಣಮ್ ಅಕರ್ಮ । ತಚ್ಚ ಪ್ರತ್ಯವಾಯಫಲತ್ವಾತ್ ಕರ್ಮೋಚ್ಯತೇ ಗೌಣ್ಯೈವ ವೃತ್ತ್ಯಾ । ತತ್ರ ನಿತ್ಯೇ ಕರ್ಮಣಿ ಅಕರ್ಮ ಯಃ ಪಶ್ಯೇತ್ ಫಲಾಭಾವಾತ್ । ಯಥಾ ಧೇನುರಪಿ ಗೌಃ ಅಗೌಃ ಇತ್ಯುಚ್ಯತೇ ಕ್ಷೀರಾಖ್ಯಂ ಫಲಂ ನ ಪ್ರಯಚ್ಛತಿ ಇತಿ, ತದ್ವತ್ । ತಥಾ ನಿತ್ಯಾಕರಣೇ ತು ಅಕರ್ಮಣಿ ಚ ಕರ್ಮ ಯಃ ಪಶ್ಯೇತ್ ನರಕಾದಿಪ್ರತ್ಯವಾಯಫಲಂ ಪ್ರಯಚ್ಛತೀತಿ ॥

(ಭಾಷ್ಯಾರ್ಥ)

ಈ ಶ್ಲೋಕಕ್ಕೆ ಕೆಲವರು [1] ಬೇರೆಯ ರೀತಿಯಾಗಿ ವ್ಯಾಖ್ಯಾನವನ್ನು ಮಾಡಿದ್ದಾರೆ ಹೇಗೆಂದರೆ ನಿತ್ಯಕರ್ಮಗಳನ್ನು ಈಶ್ವರನ ಪ್ರೀತಿಗೆಂದು ಮಾಡಿದರೆ ಅವುಗಳಿಗೆ ಫಲವಾಗುವದಿಲ್ಲವಾದ್ದರಿಂದ ಅವುಗಳನ್ನು ಅಕರ್ಮ ಎಂದು ಗೌಣವೃತ್ತಿ

1. ಹಿಂದಿನ ಅಧ್ಯಾಯಗಳಲ್ಲಿ ವರ್ಣಿಸಿರುವ ಸಮುಚ್ಚಯವಾದಿಗಳಾದ ವೃತ್ತಿಕಾರರು.

ಯಿಂದ[1] ಕರೆದಿರುತ್ತದೆ. ಮತ್ತು ಅವುಗಳನ್ನು ಮಾಡದೆ ಇರುವದು ಅಕರ್ಮವು, ಅದು ಪ್ರಕೃತವಾಯುವೆಂಬ ಫಲವನ್ನು (ಕೊಡುವ)ದರಿಂದ[2] ಅದನ್ನು ಕರ್ಮವೆಂದಿದೆ, ಇದೂ ಗೌಣವೃತ್ತಿಯಿಂದಲೇ (ಹೇಳಿದ್ದು). ಇವೆರಡರಲ್ಲಿ ನಿತ್ಯಕರ್ಮದಲ್ಲಿ ಫಲವಿಲ್ಲದ್ದರಿಂದ ಅಕರ್ಮವನ್ನು ಯಾವಾತನು ಕಂಡುಕೊಳ್ಳುವನೋ–ಹಸುವಾಗಿದ್ದರೂ ಹಾಲೆಂಬ ಫಲವನ್ನು ಕೊಡುತ್ತಿಲ್ಲವೆಂಬ (ಕಾರಣ)ದಿಂದ ಹಸುವನ್ನೇ ಹಸುವಲ್ಲ (ಅಗೌಃ) ಎಂದು ಹೇಳುತ್ತಾರಲ್ಲವೆ? ಅದರಂತೆಯೇ ಇದು.–ಮತ್ತು ನಿತ್ಯ(ಕರ್ಮವನ್ನು) ಮಾಡದೆ ಇರುವದೆಂಬ ಅಕರ್ಮದಲ್ಲಿಯಾದರೋ ಅದು ನರಕವೇ ಮುಂತಾದ ಪ್ರತ್ಯವಾಯ(ಫಲ)ವನ್ನು ಕೊಡುತ್ತದೆ ಎಂಬ (ಕಾರಣ)ದಿಂದ ಯಾವನು ಕರ್ಮವನ್ನು ಕಂಡುಕೊಳ್ಳುವನೋ (ಅವನು) ಬುದ್ಧಿವಂತನು ಎಂದು ಮುಂತಾಗಿ ಅವರು ವ್ಯಾಖ್ಯಾನಮಾಡಿರುತ್ತಾರೆ.

## ವೃತ್ತಿಕಾರರ ಮತದಲ್ಲಿ ದೋಷಗಳು

(ಭಾಷ್ಯ)

೨೬೦. ನೈತದ್ ಯುಕ್ತಂ ವ್ಯಾಖ್ಯಾನಮ್। ಏವಂ ಜ್ಞಾನಾತ್ ಅಶುಭಾನ್ಮೋಕ್ಷಾನುಪಪತ್ತೇಃ। ‘ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್” (೪-೧೬) ಇತಿ ಭಗವತಾ ಉಕ್ತಂ ವಚನಂ ಬಾಧ್ಯೇತ। ಕಥಮ್? ನಿತ್ಯಾನಾಮ್ ಅನುಷ್ಠಾನಾತ್ ಅಶುಭಾತ್ ಸ್ಯಾನ್ನಾಮ ಮೋಕ್ಷಣಮ್, ನ ತು ತೇಷಾಂ ಫಲಾಭಾವಜ್ಞಾನಾತ್। ನ ಹಿ ನಿತ್ಯಾನಾಂ ಫಲಾಭಾವಜ್ಞಾನಮ್ ಅಶುಭಮುಕ್ತಿಫಲತ್ವೇನ ಚೋದಿತಮ್, ನಿತ್ಯಕರ್ಮಜ್ಞಾನಂ ವಾ। ನ ಚ ಭಗವತೈವ ಇಹ ಉಕ್ತಮ್। ಏತೇನ ಅಕರ್ಮಣಿ ಕರ್ಮದರ್ಶನಂ ಪ್ರತ್ಯುಕ್ತಮ್। ನ ಹಿ ಅಕರ್ಮಣಿ ಕರ್ಮ ಇತಿ ದರ್ಶನಂ ಕರ್ತವ್ಯತಯಾ ಇಹ ಚೋದ್ಯತೇ, ನಿತ್ಯಸ್ಯ ತು ಕರ್ತವ್ಯತಾಮಾತ್ರಮ್। ನ ಚ ಅಕರಣಾತ್ ನಿತ್ಯಸ್ಯ ಪ್ರತ್ಯವಾಯೋ ಭವತಿ ಇತಿ ವಿಜ್ಞಾನಾತ್ ಕಿಂಚಿತ್ ಫಲಂ ಸ್ಯಾತ್। ನಾಪಿ ನಿತ್ಯಾಕರಣಂ ಜ್ಞೇಯತ್ವೇನ ಚೋದಿತಮ್ ನಾಪಿ ಕರ್ಮ

1. ಅಕರ್ಮಕ್ಕೆ ಫಲವಿಲ್ಲ, ಈಶ್ವರಾರ್ಪಣಕ್ಕಾಗಿ ಮಾಡಿದ ನಿತ್ಯಕರ್ಮಕ್ಕೂ ಫಲವಿಲ್ಲ. ಅಕರ್ಮದ ಈ ಗುಣವು ನಿತ್ಯಕರ್ಮಕ್ಕೂ ಇರುವದರಿಂದ ಗೌಣವೃತ್ತಿಯಿಂದ ಅದನ್ನೂ ಅಕರ್ಮವೆನ್ನಬಹುದು–ಎಂದು ವೃತ್ತಿಕಾರರ ಆಶಯ.

2. ನಿತ್ಯಕರ್ಮವನ್ನು ಮಾಡದಿದ್ದರೆ ಪ್ರತ್ಯವಾಯವುಂಟೆಂಬ ಮೀಮಾಂಸಕರ ಪಕ್ಷವನ್ನೇ ವೃತ್ತಿಕಾರರು ಅನುಸರಿಸಿರುತ್ತಾರೆ.

ಅಕರ್ಮ ಇತಿ ಮಿಥ್ಯಾದರ್ಶನಾತ್ ಅಶುಭಾತ್ ಮೋಕ್ಷಣಂ ಬುದ್ಧಿಮತ್ತ್ವಂ ಯುಕ್ತತಾ ಕೃತ್ಸ್ನಕರ್ಮಕೃತ್ತ್ವಾದಿ ಚ ಫಲಮ್ ಉಪಪದ್ಯತೇ ಸ್ತುತಿರ್ವಾ । ಮಿಥ್ಯಾಜ್ಞಾನಮೇವ ಹಿ ಸಾಕ್ಷಾತ್ ಅಶುಭರೂಪಮ್ । ಕುತೋಽನ್ಯಸ್ಮಾತ್ ಅಶುಭಾತ್ ಮೋಕ್ಷಣಮ್? ನ ಹಿ ತಮಸ್ತಮಸೋ ನಿವರ್ತಕಂ ಭವತಿ ॥

(ಭಾಷ್ಯಾರ್ಥ)

ಇದು ಸರಿಯಾದ ವ್ಯಾಖ್ಯಾನವಲ್ಲ. ಏಕೆಂದರೆ ಹೀಗೆಂದು ತಿಳಿದರೆ ಕೆಟ್ಟ (ಸಂಸಾರ)ದಿಂದ ಬಿಡುಗಡೆಯಾಗುವ (ದೆಂಬುದು) ಹೊಂದುವದಿಲ್ಲ. "ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್" (ಇದನ್ನು ತಿಳಿದರೆ ಅಶುಭದಿಂದ ಮೋಕ್ಷವನ್ನು ಹೊಂದುವೆ ೪-೧೬) ಎಂದು ಭಗವಂತನು ಹೇಳಿರುವದು ಸುಳ್ಳಾಗಬೇಕಾಗುವದು. ಹೇಗೆಂದರೆ, ನಿತ್ಯ (ಕರ್ಮಗಳನ್ನು) ಮಾಡುವದರಿಂದ ಅಶುಭದಿಂದ ಒಂದುವೇಳೆ ಬಿಡುಗಡೆಯಾದರೂ ಆಗಬಹುದು [1], ಆದರೆ ಅವುಗಳಿಗೆ ಫಲವಿಲ್ಲವೆಂಬ ಜ್ಞಾನದಿಂದ (ಎಂದಿಗೂ) ಆಗಲಾರದು. ನಿತ್ಯ (ಕರ್ಮಗಳಿಗೆ) ಫಲವಿಲ್ಲವೆಂಬ ಜ್ಞಾನವಾಗಲಿ ನಿತ್ಯಕರ್ಮಗಳ ಜ್ಞಾನವಾಗಲಿ ಅಶುಭದಿಂದ ಬಿಡುಗಡೆಯಾಗುವದೆಂಬ ಫಲವನ್ನು ಕೊಡುವದೆಂದು (ಯಾವ ಶ್ರುತಿಯಲ್ಲಿಯೂ) ಹೇಳಿರುವದೇ ಇಲ್ಲ, ಅಥವಾ ಭಗವಂತನಾದರೂ ಇಲ್ಲಿ ಹೇಳಿರುವದಿಲ್ಲ. ಇದರಿಂದಲೇ ಅಕರ್ಮದಲ್ಲಿ ಕರ್ಮವನ್ನು ಕಾಣಬೇಕೆಂಬ (ವ್ಯಾಖ್ಯಾನವನ್ನೂ) ನಿರಾಕರಿಸಿದಂತೆ ಆಯಿತು. ಏಕೆಂದರೆ ಅಕರ್ಮವನ್ನು ಕರ್ಮವೆಂದು ಕಂಡುಕೊಳ್ಳಬೇಕೆಂಬುದನ್ನು ಈ (ಗೀತೆಯಲ್ಲಿ) ಅನುಷ್ಠಾನಮಾಡತಕ್ಕದ್ದೆಂದು ವಿಧಿಸಿರುವದಿಲ್ಲ, ನಿತ್ಯಕರ್ಮವನ್ನು ಮಾಡಬೇಕೆಂದುಮಾತ್ರ ವಿಧಿಸಿರುತ್ತದೆ. (ನಿತ್ಯ ಕರ್ಮವನ್ನು) ಮಾಡದಿರುವದರಿಂದ ಪ್ರತ್ಯವಾಯವಾಗುವದೆಂದು ತಿಳಿಯುವದರಿಂದ ಯಾವ ಫಲವೂ ಆಗುವಂತೆಯೂ ಇಲ್ಲ. ನಿತ್ಯ (ಕರ್ಮವನ್ನು) ಮಾಡದಿರುವದನ್ನು ತಿಳಿದುಕೊಳ್ಳಬೇಕೆಂದೂ ಇಲ್ಲಿ ವಿಧಿಸಿರುವದಿಲ್ಲ. ಕರ್ಮವನ್ನು ಅಕರ್ಮವೆಂದು ತಿಳಿಯುವ ತಪ್ಪುತಿಳಿವಳಿಕೆಯಿಂದ ಅಶುಭದಿಂದ ಬಿಡುಗಡೆಯಾಗುವದು, ಬುದ್ಧಿವಂತನಾಗುವದು, ಯೋಗಿಯಾಗುವದು, ಎಲ್ಲಾ ಕರ್ಮಗಳನ್ನೂ ಮಾಡಿದಂತಾಗುವದು–ಮುಂತಾದ ಫಲವು ಉಂಟಾಗುವದೆಂದಾಗಲಿ, (ಈ ವಿಶೇಷಣಗಳಿಂದ ಜ್ಞಾನ

---

1. ಕರ್ಮದಿಂದ ಮೋಕ್ಷವಾಗುವದೆಂದು ಒಪ್ಪುವದಕ್ಕಾಗುವದಿಲ್ಲವಾದರೂ ನಿತ್ಯಕರ್ಮವನ್ನು ಮಾಡಿದರೆ ಅಶುಭವಾದ ಪಾಪದಿಂದ ಬಿಡುಗಡೆಯಾಗುವದೆಂದು ಒಪ್ಪಬಹುದು– ಎಂದು ಭಾವ.

ವನ್ನು) ಹೊಗಳಿದೆ ಎಂದಾಗಲಿ ಹೇಳುವದು ಹೊಂದುಗಡೆಯಾಗುವದಿಲ್ಲ.[1] ತಪ್ಪು ತಿಳಿವಳಿಕೆಯೇ ನೇರಾಗಿ ಅಶುಭವಾಗಿರುತ್ತದೆ; (ಹೀಗಿರುವಲ್ಲಿ) ಅದರಿಂದ ಮತ್ತೊಂದು ಅಶುಭದಿಂದ ಬಿಡುಗಡೆಯಾಗುವದೆಂಬುದೆಲ್ಲಿಂದ ಬಂತು? ಕತ್ತಲೆಯು ಕತ್ತಲೆಯನ್ನು ಕಳೆಯಲಾರದಷ್ಟೆ?[2]

(ಭಾಷ್ಯ)

೨೬೧. ನನು ಕರ್ಮಣಿ ಯತ್ ಅಕರ್ಮದರ್ಶನಮ್, ಅಕರ್ಮಣಿ ವಾ ಕರ್ಮದರ್ಶನಮ್, ನ ತತ್ ಮಿಥ್ಯಾಜ್ಞಾನಮ್, ಕಿಂ ತರ್ಹಿ ಗೌಣಂ ಫಲಭಾವಾಭಾವನಿಮಿತ್ತಮ್ । ನ। ಕರ್ಮಾಕರ್ಮವಿಜ್ಞಾನಾದಪಿ ಗೌಣಾತ್ ಫಲಸ್ಯ ಅಶ್ರವಣಾತ್ । ನಾಪಿ ಶ್ರುತಹಾನ್ಯಶ್ರುತಪರಿಕಲ್ಪನಾಯಾಂ ಕಶ್ಚಿದ್ ವಿಶೇಷ ಉಪಲಭ್ಯತೇ[3] । ಸ್ವಶಬ್ದೇನಾಪಿ ಶಕ್ಯಂ ವಕ್ತುಮ್ 'ನಿತ್ಯಕರ್ಮಣಾಂ ಫಲಂ ನಾಸ್ತಿ । ಅಕರಣಾಚ್ಚ ತೇಷಾಂ ನರಕಪಾತಃ ಸ್ಯಾತ್' ಇತಿ । ತತ್ರ ವ್ಯಾಜೇನ ಪರವ್ಯಾಮೋಹರೂಪೇಣ "ಕರ್ಮಣ್ಯಕರ್ಮ ಯಃ ಪಶ್ಯೇತ್" ಇತ್ಯಾದಿನಾ ಕಿಮ್? ತತ್ರ ಏವಂ ವ್ಯಾಚಕ್ಷಾಣೇನ ಭಗವತಾ ಉಕ್ತಂ ವಾಕ್ಯಂ ಲೋಕವ್ಯಾಮೋಹಾರ್ಥಮ್ ಇತಿ ವ್ಯಕ್ತಂ ಕಲ್ಪಿತಂ ಸ್ಯಾತ್ । ನ ಚೈತತ್ ಛದ್ಮರೂಪೇಣ ವಾಕ್ಯೇನ ರಕ್ಷಣೀಯಂ ವಸ್ತು । ನಾಪಿ ಶಬ್ದಾನ್ತರೇಣ ಪುನಃಪುನರುಚ್ಯಮಾನಂ ಸುಬೋಧಂ ಸ್ಯಾತ್ ಇತ್ಯೇವಂ ವಕ್ತುಂ ಯುಕ್ತಮ್ । "ಕರ್ಮಣ್ಯೇವಾಧಿಕಾರಸ್ತೇ" (೨-೪೭) ಇತ್ಯತ್ರ ಹಿ ಸ್ಫುಟತರ ಉಕ್ತೋಽರ್ಥಃ ನ ಪುನರ್ವಕ್ತವ್ಯೋ ಭವತಿ । ಸರ್ವತ್ರ ಚ ಪ್ರಶಸ್ತಂ ಬೋದ್ಧವ್ಯಂ ಚ ಕರ್ತವ್ಯಮೇವ । ನ ನಿಷ್ಪ್ರಯೋಜನಂ "ಬೋದ್ಧವ್ಯಮ್" ಇತ್ಯುಚ್ಯತೇ । ನ ಚ ಮಿಥ್ಯಾಜ್ಞಾನಂ ಬೋದ್ಧವ್ಯಂ ಭವತಿ । ತತ್ಪ್ರತ್ಯುಪಸ್ಥಾಪಿತಂ ವಾ ವಸ್ತ್ವಾಭಾಸಮ್ ॥

---

1. ಅಜ್ಞಾನದಿಂದಾದ ಅಶುಭವು ಜ್ಞಾನದಿಂದ ಬಿಡುಗಡೆಯಾಗುವದೆಂಬುದು ಯುಕ್ತವಾಗಿದೆ. ಜ್ಞಾನದಿಂದ ಮನಸ್ಸಮಾಧಾನವೂ ಸಕಲೇಷ್ಟಪ್ರಾಪ್ತಿಯೂ ಸಕಲಾನಿಷ್ಟನಿವೃತ್ತಿಯೂ ಪ್ರಾಪ್ತವಾಗುವದರಿಂದ ಜ್ಞಾನಿಯನ್ನು ಯೋಗಿಯೆಂದೂ ಕೃತ್ಸ್ನಕರ್ಮಕೃತ್ ಎಂದೂ ಹೊಗಳುವದು ಯುಕ್ತವಾಗಿದೆ. ಅಜ್ಞಾನದಿಂದ ಈ ಯಾವ ಫಲವೂ ಆಗಲಾರದಾದ್ದರಿಂದ ಅಜ್ಞಾನವನ್ನು ಹೀಗೆ ಹೊಗಳುವದು ಸರಿಯಾಗಲಾರದು.

2. ಹಾಗೆಯೇ ತಪ್ಪುತಿಳಿವಳಿಕೆಯಿಂದ ಮತ್ತೊಂದು ತಪ್ಪುತಿಳಿವಳಿಕೆಯು ನಾಶವಾಗಲಾರದು.

3. 'ಲಭ್ಯತೇ' ಎ॥

(ಭಾಷ್ಯಾರ್ಥ)

(ವೃತ್ತಿಕಾರ) :—ಕರ್ಮವನ್ನು ಅಕರ್ಮವೆಂದು ತಿಳಿಯುವದಾಗಲಿ, ಅಕರ್ಮವನ್ನು ಕರ್ಮವೆಂದು ತಿಳಿಯುವದಾಗಲಿ ಮಿಥ್ಯಾಜ್ಞಾನವಲ್ಲ. ಫಲವಿರುವದು, ಇಲ್ಲದಿರುವದು–ಎಂಬ ನಿಮಿತ್ತದಿಂದ ಗೌಣಜ್ಞಾನವು[1] (ಎಂದಲ್ಲವೆ, ನಾವು ವ್ಯಾಖ್ಯಾನ ಮಾಡಿರುವದು)?

(ಸಿದ್ಧಾಂತಿ) :—ಹಾಗಲ್ಲ. ಏಕೆಂದರೆ ಕರ್ಮವು ಅಕರ್ಮವೆಂದು ತಿಳಿಯುವ ಗೌಣಜ್ಞಾನಕ್ಕಾದರೂ ಫಲವನ್ನು ಹೇಳಿರುವದಿಲ್ಲ. ಹೇಳಿರುವದನ್ನು ಬಿಟ್ಟು ಹೇಳದೆ ಇರುವದನ್ನು ಕಲ್ಪಿಸುವದರಿಂದ ಯಾವ ಹೆಚ್ಚುಕಡಿಮೆಯೂ ಆದಂತೆ ಕಂಡುಬರುವದಿಲ್ಲ[2] "ನಿತ್ಯಕರ್ಮಗಳಿಗೆ ಫಲವಿಲ್ಲ, ಅವುಗಳನ್ನು ಮಾಡದೆ ಇದ್ದರೆ ನರಕಕ್ಕೆ ಬೀಳಬೇಕಾಗುವದು" ಎಂದು (ನೇರಾಗಿ) ಅದೇ ಮಾತಿನಿಂದಲೇ (ಈ ವಿಷಯವನ್ನು) ಹೇಳಿಬಿಡಲೂಬಹುದಾಗಿದೆ. ಹೀಗಿರುವಲ್ಲಿ "ಕರ್ಮದಲ್ಲಿ ಅಕರ್ಮವನ್ನು ಯಾವನು ಕಂಡುಕೊಳ್ಳುತ್ತಾನೋ" ಎಂದು ಮತ್ತೊಬ್ಬರಿಗೆ ಭ್ರಾಂತಿಯುಂಟಾಗುವಂತೆ ಮೋಸದ (ಮಾತಿನಿಂದ) ಆಗಬೇಕಾದದ್ದೇನು? ಇಲ್ಲಿ ಹೀಗೆ ಭಗವಂತನು ವಿವರಿಸಿರುವದರಿಂದ ಆತನು ಹೇಳಿರುವದು ಜನರನ್ನು ಮರುಳುಗೊಳಿಸುವದಕ್ಕೆಂದು ಸ್ಪಷ್ಟವಾಗಿ ಕಲ್ಪಿಸಿದಂತೆ ಆಗುವದು.[3] ಇದಲ್ಲದೆ ಇದು ವಕ್ರಗತಿಯಿಂದ ಹೇಳಿ ಕಾಪಾಡತಕ್ಕ ವಸ್ತುವೂ ಅಲ್ಲ.[4] ಅಥವಾ ಬೇರೆಬೇರೆಯ ಮಾತಿನಿಂದ ಮತ್ತೆ ಮತ್ತೆ ಹೇಳಿದರೆ ಸುಲಭವಾಗಿ ತಿಳಿದೀತೆಂದು (ಹೀಗೆ ಹೇಳಿರುತ್ತಾನೆನ್ನುವದೂ) ಸರಿಯಾಗುವದಿಲ್ಲ. "ಕರ್ಮಣ್ಯೇವಾಧಿಕಾರಸ್ತೇ" (ನಿನಗೆ ಕರ್ಮದಲ್ಲಿಯೇ ಅಧಿಕಾರವು ೨-೪೭) ಎಂಬಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಿಬಿಟ್ಟಿದೆಯಾದ್ದರಿಂದ ಅದನ್ನು ಮತ್ತೆ ಹೇಳಬೇಕಾದದ್ದೇನೂ ಇರು

---

1. ಮಿಥ್ಯಾಜ್ಞಾನವು ಅಶುಭವೆಂದಾಗಲಿ, ನಾವು ಹೇಳಿರುವ ಗೌಣಜ್ಞಾನಕ್ಕೆ ಅಡ್ಡಿ ಏನು?–ಎಂದು ವೃತ್ತಿಕಾರರ ಪ್ರಶ್ನೆ.

2. ಕರ್ಮವನ್ನು ಅಕರ್ಮವೆಂದು ತಿಳಿಯಬೇಕೆಂದು ಇಲ್ಲಿ ಸ್ಪಷ್ಟವಾಗಿ ಹೇಳಿದೆ; ಇದು ಗೌಣವೆಂದೇನೂ ಹೇಳಿಲ್ಲ. ಹೇಳದೆ ಇದ್ದದ್ದನ್ನು ಕಲ್ಪಿಸುವದರಿಂದ ಆಗುವ ಲಾಭವೇನು?

3. ಆದ್ದರಿಂದ ಭಗವಂತನು ಆಪ್ತನಲ್ಲವೆಂದಾಗುವದು.

4. ಬಹು ಮುಖ್ಯವಾದ ವಿಷಯವಾದರೆಮಾತ್ರ ಅದನ್ನು ವಿರೋಧಾಭಾಸವೇ ಮುಂತಾದ ಅಲಂಕಾರಿಕಭಾಷೆಯಿಂದ ಮೊದಲು ಅದನ್ನು ಜನರ ಲಕ್ಷ್ಯಕ್ಕೆ ತಂದು ಆಮೇಲೆ ಅದನ್ನು ವಿವರಿಸುವದು ಅವಶ್ಯವಾಗಿರುತ್ತದೆ.

ವದಿಲ್ಲ.[1] (ಶಾಸ್ತ್ರದಲ್ಲಿ) ಎಲ್ಲಿಯೇ ಆಗಲಿ ಯಾವದನ್ನು ಮಾಡಬೇಕೋ ಅದನ್ನೇ ಹೊಗಳಿರುತ್ತದೆ, ಅದನ್ನೇ ತಿಳಿದುಕೊಳ್ಳಬೇಕೆಂದು ಹೇಳಿರುತ್ತದೆಯೇ ಹೊರತು ಯಾವ ಪ್ರಯೋಜನವೂ ಇಲ್ಲದ್ದನ್ನು ತಿಳಿದುಕೊಳ್ಳಬೇಕೆಂದು ಹೇಳಿರುವದಿಲ್ಲ.[2] ಆದರೆ ಮಿಥ್ಯಾಜ್ಞಾನವಾಗಲಿ ಅದರಿಂದ ಕಲ್ಪಿತವಾದ ವಸ್ತ್ವಾಭಾಸವಾಗಲಿ ತಿಳಿದುಕೊಳ್ಳತಕ್ಕದ್ದಾಗಿರುವದಿಲ್ಲ.[3]

(ಭಾಷ್ಯ)

೨೬೨. ನಾಪಿ ನಿತ್ಯಾನಾಮ್ ಅಕರಣಾತ್ ಅಭಾವಾತ್ ಪ್ರತ್ಯವಾಯಭಾವೋತ್ಪತ್ತಿಃ । " ನಾಸತೋ ವಿದ್ಯತೇ ಭಾವಃ " (೨ ೧೬) ಇತಿ ವಚನಾತ್। " ಕಥಮಸತಃ ಸಜ್ಜಾಯೇತ " (ಛಾ. ೬-೨-೨) ಇತಿ ಚ ಅಸತಃ ಸಜ್ಜನ್ಮಪ್ರತಿಷೇಧಾತ್ । ಅಸತಃ ಸದುತ್ಪತ್ತಿಂ ಬ್ರುವತಾ ಅಸದೇವ ಸದ್ ಭವೇತ್ ಸಚ್ಚಾಪಿ ಅಸದ್ಭವೇತ್ ಇತ್ಯುಕ್ತಂ ಸ್ಯಾತ್ । ತಚ್ಚ ಅಯುಕ್ತಮ್ । ಸರ್ವಪ್ರಮಾಣವಿರೋಧಾತ್ । ನ ಚ ನಿಷ್ಫಲಂ ವಿದಧ್ಯಾತ್ ಕರ್ಮ ಶಾಸ್ತ್ರಮ್ । ದುಃಖಸ್ವರೂಪತ್ವಾತ್ । ದುಃಖಸ್ಯ ಚ ಬುದ್ಧಿಪೂರ್ವಕತಯಾ ಕಾರ್ಯತ್ವಾನುಪಪತ್ತೇಃ, ತದಕರಣೇ ಚ ನರಕಪಾತಾಭ್ಯುಪಗಮಾತ್ ಅನರ್ಥಾಯೈವ ಉಭಯಥಾಪಿ ಕರಣೇ ಅಕರಣೇ ಚ ಶಾಸ್ತ್ರಂ ನಿಷ್ಫಲಂ ಕಲ್ಪಿತಂ ಸ್ಯಾತ್ । ಸ್ವಾಭ್ಯುಪಗಮವಿರೋಧಶ್ಚ ನಿತ್ಯಂ ನಿಷ್ಫಲಂ ಕರ್ಮ ಇತ್ಯಭ್ಯುಪಗಮ್ಯ ಮೋಕ್ಷಫಲಾಯ ಇತಿ ಬ್ರುವತಃ ॥

(ಭಾಷ್ಯಾರ್ಥ)

ಇದಲ್ಲದೆ **ನಿತ್ಯ (ಕರ್ಮ)ಗಳನ್ನು ಮಾಡದೆ ಇರುವದೆಂಬ ಅಭಾವದಿಂದ ಪ್ರತ್ಯವಾಯವೆಂಬ ಭಾವವು ಹುಟ್ಟುವಂತೆಯೂ** ಇಲ್ಲ. ಏಕೆಂದರೆ " ಅಸತ್ತಿಗೆ ಹುಟ್ಟು ಇರುವದಿಲ್ಲ " (೨-೧೬) ಎಂದು (ಭಗವಂತನ) ವಚನವಿದೆ "ಅಸತ್ತಿನಿಂದ ಸತ್ತು ಹೇಗೆ ಉಂಟಾದೀತು ? (ಛಾ. ೬-೨-೨) ಎಂದು (ಶ್ರುತಿಯಲ್ಲಿ) ಇಲ್ಲದ್ದರಿಂದ ಇರುವದು ಉಂಟಾಗಲಾರದೆಂದೂ ತಿಳಿಸಿರುತ್ತದೆ ಅಸತ್ತಿನಿಂದ ಸತ್ತು

---

1. ಮತ್ತೆ ಹೇಳಿದರೆ ಪುನರುಕ್ತಿದೋಷವೇ ಉಂಟಾಗುತ್ತದೆ.

2. ಇಲ್ಲಿ ಕರ್ಮ, ಅಕರ್ಮ, ವಿಕರ್ಮ–ಇವುಗಳನ್ನು ತಿಳಿದುಕೊಳ್ಳತಕ್ಕದ್ದೆಂದು ಹೇಳಿರುವದರಿಂದ ಇಲ್ಲಿ ಯಾವದೋ ಒಂದು ಮಹತ್ತ್ವದ ವಿಷಯವನ್ನು ತಿಳಿಸಿದೆ ಎಂದು ಇದರಿಂದಲೇ ವ್ಯಕ್ತವಾಗುತ್ತದೆ.

3. ಏಕೆಂದರೆ ಅದರಿಂದ ಅನರ್ಥವೇ ಆಗುತ್ತದೆ. ಕರ್ಮವನ್ನು ಅಕರ್ಮವೆಂದು ತಿಳಿಯುವದು ಗೌಣವೆಂಧಾದರೂ ಅದರಿಂದ ಯಾವ ಪ್ರಯೋಜನವೂ ಇರುವದಿಲ್ಲ.

ಉಂಟಾಗುವದೆಂದು ಹೇಳಿದರೆ ಅಸತ್ತೇ ಸತ್ತಾದೀತು, ಸತ್ತೂ ಅಸತ್ತಾದೀತು ಎಂದು ಹೇಳಿದಂತೆ ಆಗುವದು. ಅದೂ ಯುಕ್ತವಲ್ಲ, ಏಕೆಂದರೆ (ಅದು) ಸಕಲ ಪ್ರಮಾಣ ಗಳಿಗೂ ವಿರೋಧವಾಗುವದು.[1] ಇದಲ್ಲದೆ **ಶಾಸ್ತ್ರವು ನಿಷ್ಫಲವಾದ ಕರ್ಮವನ್ನು ವಿಧಿಸಲೂ ಆರದು ; ಏಕೆಂದರೆ (ಕರ್ಮವು) ದುಃಖರೂಪವಾಗಿರುತ್ತದೆ.**[2] ದುಃಖವನ್ನು (ಯಾರೂ) ಬುದ್ಧಿಪೂರ್ವಕವಾಗಿ ಮಾಡಿಕೊಳ್ಳುವಹಾಗಿಲ್ಲವಾದ್ದ ರಿಂದಲೂ ಅದನ್ನು ಮಾಡದೆ ಇದ್ದರೆ ನರಕಪಾತವೇ (ಆಗುವದೆಂದು ನೀವು) ಅಂಗೀ ಕರಿಸಿರುವದರಿಂದಲೂ ಅದನ್ನು ಮಾಡಿದರೂ ಮಾಡದೆಬಿಟ್ಟರೂ ಎರಡು ಬಗೆ ಯಿಂದಲೂ ಅನರ್ಥವೇ[3] ಆಗುವದರಿಂದ ಶಾಸ್ತ್ರವು ನಿಷ್ಫಲವೆಂದು ಕಲ್ಪಿಸಿದಂತೆ ಆಗು ವದು ಮತ್ತು ನಿತ್ಯಕರ್ಮಕ್ಕೆ ಫಲವಿಲ್ಲವೆಂದೂ ಒಪ್ಪಿ ಅದರಿಂದ ಮೋಕ್ಷವೆಂಬ ಫಲವಾಗುವದೆಂದು ಹೇಳಿದರೆ (ಅದು) ನಿಮ್ಮ ಅಂಗೀಕಾರಕ್ಕೂ ವಿರುದ್ಧವಾಗುವದು.[4]

## ಉಪಸಂಹಾರ

(ಭಾಷ್ಯ)

೨೬೩ ತಸ್ಮಾತ್ ಯಥಾಶ್ರುತ ಏವಾರ್ಥಃ "ಕರ್ಮಣ್ಯಕರ್ಮ ಯಃ" ಇತ್ಯಾದೇಃ, ತಥಾ ಚ ವ್ಯಾಖ್ಯಾತೋಽಸ್ಮಾಭಿಃ ಶ್ಲೋಕಃ ||

(ಭಾಷ್ಯಾರ್ಥ)

ಆದ್ದರಿಂದ "ಕರ್ಮಣ್ಯಕರ್ಮ ಯಃ" (ಯಾವನು ಕರ್ಮದಲ್ಲಿ ಅಕರ್ಮ ವನ್ನು ಕಾಣುವನೋ) ಎಂದು ಮುಂತಾಗಿರುವ ಈ (ಶ್ಲೋಕಕ್ಕೆ) ಹೇಗೆ ವಾಕ್ಯ ವಿದೆಯೋ ಹಾಗೆಯೇ ಅರ್ಥವು. ಆದ್ದರಿಂದ ಈ ಶ್ಲೋಕಕ್ಕೆ ನಾವು ಹಾಗೆಯೇ ವ್ಯಾಖ್ಯಾನಮಾಡಿರುತ್ತೇವೆ

---

1. ನಿತ್ಯಕರ್ಮವನ್ನು ಮಾಡದಿದ್ದರೆ ಪ್ರತ್ಯವಾಯವಾಗುವದೆಂಬುದನ್ನು ತೈ. ಭಾ. ಭಾ. ೭ ರಲ್ಲಿಯೂ ಖಂಡಿಸಿದೆ. ಇಲ್ಲದ್ದರಿಂದ ಏನಾದರೂ ಉಂಟಾಗುವದು ಪ್ರತ್ಯಕ್ಷದಲ್ಲಿ ಕಂಡಿಲ್ಲ, ಅನುಮಾನದಿಂದ ಊಹಿಸುವದಕ್ಕೆ ಬರುವದಿಲ್ಲ, ಶಾಸ್ತ್ರಕ್ಕೆ ವಿರುದ್ಧ.

2. ಪುರುಷಾರ್ಥವನ್ನು ತಿಳಿಸುವ ಶಾಸ್ತ್ರವು ದುಃಖವನ್ನೇಕೆ ವಿಧಿಸೀತು ?

3. ಮಾಡಿದರೆ ಮಾಡುವ ದುಃಖ, ಬಿಟ್ಟರೆ ಪ್ರತ್ಯವಾಯದ ದುಃಖ.

4. ಜ್ಞಾನಕರ್ಮಗಳೆರಡೂ ಸೇರಿ ಮೋಕ್ಷವೆಂಬುದು ವೃತ್ತಿಕಾರರ ಮತ, ಆದ್ದ ರಿಂದಲೂ ನಿತ್ಯಕರ್ಮಕ್ಕೆ ಫಲವಿಲ್ಲವೆಂಬುದನ್ನು ಅವರು ಹೇಳುವಹಾಗಿಲ್ಲ.

## ಜ್ಞಾನಿಗೆ ಯಾವ ಕರ್ಮದ ಬಂಧವೂ ಇಲ್ಲ

(ಭಾಷ್ಯ)

೨೬೪. ತದೇತತ್ ಕರ್ಮಾದೌ ಅಕರ್ಮಾದಿದರ್ಶನಂ[1] ಸ್ತೂಯತೇ—

(ಭಾಷ್ಯಾರ್ಥ)

ಆ ಈ ಕರ್ಮಾದಿಯಲ್ಲಿ ಅಕರ್ಮಾದಿಯನ್ನು ಕಂಡುಕೊಳ್ಳುವ ತಿಳಿವಳಿಕೆಯನ್ನು (ಭಗವಂತನು) ಹೊಗಳುತ್ತಾನೆ.—

**ಯಸ್ಯ ಸರ್ವೇ ಸಮಾರಮ್ಭಾಃ ಕಾಮಸಙ್ಕಲ್ಪವರ್ಜಿತಾಃ ।**
**ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಣ್ಡಿತಂ ಬುಧಾಃ ॥ ೧೯ ॥**

೧೯. ಯಾವಾತನ ಸಮಾರಂಭಗಳೆಲ್ಲ ಕಾಮಸಂಕಲ್ಪವಿಲ್ಲದವುಗಳಾಗಿರುವವೋ ಜ್ಞಾನಾಗ್ನಿಯಿಂದ ಸುಟ್ಟ ಕರ್ಮಗಳುಳ್ಳ ಆತನನ್ನು ಬುಧರು ಪಂಡಿತನೆಂದು ಕರೆಯುವರು.

(ಭಾಷ್ಯ)

೨೬೫. ಯಸ್ಯ ಯಥೋಕ್ತದರ್ಶಿನಃ ಸರ್ವೇ ಯಾವನ್ತಃ ಸಮಾರಮ್ಭಾಃ ಸರ್ವಾಣಿ ಕರ್ಮಾಣಿ ಸಮಾರಭನ್ತೇ ಇತಿ ಸಮಾರಮ್ಭಾಃ ಕಾಮಸಙ್ಕಲ್ಪವರ್ಜಿತಾಃ ಕಾಮೈಃ ತತ್ಕಾರಣೈಶ್ಚ ಸಙ್ಕಲ್ಪೈಃ ವರ್ಜಿತಾಃ ಮುಧೈವ ಚೇಷ್ಟಾಮಾತ್ರಾ ಅನುಷ್ಠೀಯನ್ತೇ ಪ್ರವೃತ್ತೇನ ಚೇತ್ ಲೋಕಸಂಗ್ರಹಾರ್ಥಮ್, ನಿವೃತ್ತೇನ ಚೇತ್ ಜೀವನಮಾತ್ರಾರ್ಥಮ್, ತಂ ಜ್ಞಾನಾಗ್ನಿದಗ್ಧಕರ್ಮಾಣಂ ಕರ್ಮಾದೌ ಅಕರ್ಮಾದಿದರ್ಶನಂ ಜ್ಞಾನಮ್, ತದೇವ ಅಗ್ನಿಃ, ತೇನ ಜ್ಞಾನಾಗ್ನಿನಾ ದಗ್ಧಾನಿ ಶುಭಾಶುಭಲಕ್ಷಣಾನಿ ಕರ್ಮಾಣಿ ಯಸ್ಯ ತಮ್ ಆಹುಃ ಪರಮಾರ್ಥತಃ ಪಣ್ಡಿತಂ ಬುಧಾಃ ಬ್ರಹ್ಮವಿದಃ ॥

(ಭಾಷ್ಯಾರ್ಥ)

ಮೇಲೆ ಹೇಳಿದಂತೆ (ಕರ್ಮದಲ್ಲಿ ಅಕರ್ಮವನ್ನೂ ಅಕರ್ಮದಲ್ಲಿ ಕರ್ಮವನ್ನೂ) ಕಾಣುವ ಯಾವಾತನ ಎಲ್ಲಾ ಎಷ್ಟಿವೆಯೋ ಅಷ್ಟು ಸಮಾರಂಭಗಳು—ಪ್ರಾರಂಭಿಸಲ್ಪಡುವದರಿಂದ ಕರ್ಮಗಳಿಗೆ ಸಮಾರಂಭಗಳು (ಎಂದು ಹೆಸರು. ಆ ಕರ್ಮಗಳು) ಕಾಮಸಂಕಲ್ಪವಿಲ್ಲದವುಗಳಾಗಿರುವವೋ ಕಾಮಗಳಾಗಲಿ ಅವುಗಳಿಗೆ ಕಾರಣವಾ

---

1. "ಕರ್ಮಣ್ಯಕರ್ಮಾದಿಯಥೋಕ್ತದರ್ಶಿತ್ವಮ್" ನಿ॥ "ಕರ್ಮಣ್ಯಕರ್ಮದರ್ಶನಂ" ವಾ॥ ಗು॥

ಗಿರುವ **ಸಂಕಲ್ಪ**ಗಳಾಗಲಿ [1] ಇಲ್ಲದೆ ಇರುವವೋ, ಸುಮ್ಮನೆ (ಫಲವಿಲ್ಲದ) ವ್ಯಾಪಾರಮಾತ್ರವಾಗಿ ಮಾಡಲ್ಪಡುತ್ತಿರುವವೋ, [2] **(ತಾನು, ಪ್ರವೃತ್ತಿಧರ್ಮವನ್ನು ಮಾಡುತ್ತಿದ್ದರೆ ಲೋಕಸಂಗ್ರಹಕ್ಕಾಗಿ, ನಿವೃತ್ತಿಧರ್ಮವನ್ನು ಅನುಸರಿಸಿದರೆ ಬದುಕಿರುವ ಮಟ್ಟಿಗೆ ಬೇಕಾದವೆಂಬ ಕಾರಣದಿಂದ** (ಯಾವನು ಕರ್ಮವನ್ನು ಮಾಡುತ್ತಿರುವನೋ)[3] ಅಂಥ ಜ್ಞಾನಾಗ್ನಿಯಿಂದ ಸುಟ್ಟ ಕರ್ಮಗಳುಳ್ಳ-(ಮೇಲೆ ಹೇಳಿರುವಂತೆ) ಕರ್ಮದಲ್ಲಿ ಅಕರ್ಮವನ್ನು ಕಾಣುವದೇ ಮುಂತಾದ (ತಿಳಿವಳಿಕೆಯು) ಜ್ಞಾನವು, ಅದೇ ಅಗ್ನಿಯು, ಆ ಜ್ಞಾನಾಗ್ನಿಯಿಂದ ಯಾವ ಪುಣ್ಯಾಪುಣ್ಯರೂಪವಾದ ಕರ್ಮಗಳು ಸುಟ್ಟುಹೋಗಿರುವವೋ [4] ಅಂಥವನನ್ನು ನಿಜವಾದ **ಪಂಡಿತ**ನೆಂದು [5] ಬುಧರು ಎಂದರೆ ಬ್ರಹ್ಮಜ್ಞಾನಿಗಳು ಕರೆಯುತ್ತಾರೆ.

(ಭಾಷ್ಯ)

೨೬೬. ಯಸ್ತು ಕರ್ಮಾದೌ[6] ಅಕರ್ಮಾದಿದರ್ಶೀ ಸಃ ಅಕರ್ಮಾದಿದರ್ಶನಾದೇವ ನಿಷ್ಕರ್ಮಾ ಸಂನ್ಯಾಸೀ ಜೀವನಮಾತ್ರಾರ್ಥಚೇಷ್ಟಃ ಸನ್ ಕರ್ಮಣಿ ನ ಪ್ರವರ್ತತೇ ಯದ್ಯಪಿ ಪ್ರಾಕ್ ವಿವೇಕತಃ ಪ್ರವೃತ್ತಃ। ಯಸ್ತು ಪ್ರಾರಬ್ಧಕರ್ಮಾ ಸನ್ ಉತ್ತರಕಾಲಮ್ ಉತ್ಪನ್ನಾತ್ಮಸಮ್ಯಗ್ದರ್ಶನಃ ಸ್ಯಾತ್ ಸ ಸರ್ವಕರ್ಮಣಿ ಪ್ರಯೋಜನಮ್ ಅಪಶ್ಯನ್ ಸಸಾಧನಂ ಕರ್ಮ ಪರಿತ್ಯಜತ್ಯೇವ। ಸಃ ಕುತಶ್ಚಿತ್ ನಿಮಿತ್ತಾತ್ ಕರ್ಮಪರಿತ್ಯಾಗಾಸಂಭವೇ ಸತಿ ಕರ್ಮಣಿ ತತ್ಫಲೇ ಚ ಸಙ್ಗರಹಿತತಯಾ ಸ್ವಪ್ರಯೋಜನಾಭಾವಾತ್ ಲೋಕಸಂಗ್ರಹಾರ್ಥಂ ಪೂರ್ವವತ್ ಕರ್ಮಣಿ ಪ್ರವೃತ್ತೋಽಪಿ ನೈವ ಕಿಂಚಿತ್ ಕರೋತಿ। ಜ್ಞಾನಾಗ್ನಿದಗ್ಧಕರ್ಮತ್ವಾತ್ ತದೀಯಂ ಕರ್ಮ ಅಕರ್ಮೈವ ಸಂಪದ್ಯತೇ ಇತ್ಯೇತಮರ್ಥಂ ದರ್ಶಯಿಷ್ಯನ್ ಆಹ—

---

1 ವಸ್ತುವಿನ ಅಥವಾ ಕ್ರಿಯೆಯ ವಿಷಯವನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಿರುವದು **ಸಂಕಲ್ಪವು**, ಇದೇ ಕಾಮಕ್ಕೆ ಕಾರಣವು.

2 ಕರ್ತೃತ್ವಬುದ್ಧಿಯಾಗಲಿ ಫಲದ ಬಯಕೆಯಾಗಲಿ ಇಲ್ಲದ್ದರಿಂದ ಬರಿಯ ವ್ಯಾಪಾರವಾಗಿರುವವೋ

3. ಪ್ರವೃತ್ತಿನಿವೃತ್ತಿಗಳೆರಡೂ ಕರ್ಮವೇ ಆಗಿರುವದರಿಂದ ಆತ್ಮಸ್ವರೂಪದಲ್ಲಿ ನೆಲೆನಿಂತಿರುವ ಜ್ಞಾನಿಗೆ ಇವುಗಳ ಸೋಂಕು ಇರುವದಿಲ್ಲ. ಈ ವಿಷಯದಲ್ಲಿ ಪೀಠಿಕೆಯನ್ನು ನೋಡಿ.

4. ಫಲವನ್ನು ಕೊಡದೆ ಇರುವವೋ ಎಂದರ್ಥ.

5. ಪಂಡಿತನೆಂಬ ಶಬ್ದದ ವಿವರವನ್ನು ೨-೧೧ರ ಭಾಷ್ಯದಲ್ಲಿ ನೋಡಿ.

6. ಈ ಮಾತು ಅ॥ ನಿ॥ ಮು॥ಗಳಲ್ಲಿ ಬಿಟ್ಟುಹೋಗಿರುತ್ತದೆ.

(ಭಾಷ್ಯಾರ್ಥ)

**ಯಾವನಾದರೆ ಕರ್ಮದಲ್ಲಿ ಅಕರ್ಮವನ್ನು ನೋಡುವದೇ ಮುಂತಾದ ಜ್ಞಾನವುಳ್ಳವನೋ, ಆತನು (ಹೀಗೆ) ಅಕರ್ಮವೇ ಮುಂತಾದದ್ದನ್ನು ಕಾಣುವದರಿಂದಲೇ ನಿಷ್ಕರ್ಮನಾಗಿ ಸಂನ್ಯಾಸಿಯಾಗಿ ಬದುಕಿರುವಮಟ್ಟಿಗೆ ಬೇಕಾದ ಕೆಲಸವನ್ನು ಮಾಡುತ್ತಿರುವನು, (ಈ) ವಿವೇಕವುಂಟಾಗುವ ಮೊದಲು (ಕರ್ಮದಲ್ಲಿ) ತೊಡಗಿದ್ದನಾದರೂ (ಇನ್ನು ಮುಂದೆ) ಕರ್ಮದಲ್ಲಿ ತೊಡಗುವದಿಲ್ಲ.** ಆದರೆ ಕರ್ಮವನ್ನು ಪ್ರಾರಂಭಿಸಿದವನಾದ ಬಳಿಕ ಯಾವನಿಗೆ ಆತ್ಮನ ವಿಷಯವಾದ ಸರಿಯಾದ ಜ್ಞಾನವು ಉಂಟಾಗುವದೋ ಅವನಿಗೆ ಯಾವ ಕರ್ಮದಲ್ಲಿಯೂ ಯಾವ ಪ್ರಯೋಜನವೂ ತೋರುವದಿಲ್ಲವಾದ್ದರಿಂದ ಕರ್ಮವನ್ನೂ ಅದರ ಸಾಧನಗಳನ್ನೂ (ಅವನು) ಬಿಟ್ಟೇಬಿಡುತ್ತಾನೆ. ಅವನಿಗೆ ಯಾವದಾದರೊಂದು ಕಾರಣದಿಂದ ಕರ್ಮವನ್ನು ಬಿಡುವದಕ್ಕೆ ಆಗದೆ ಇದ್ದರೆ ಕರ್ಮದಲ್ಲಿಯೂ ಅದರ ಫಲದಲ್ಲಿಯೂ ಸಂಗವಿಲ್ಲದ್ದರಿಂದ ತನಗೆ ಯಾವ ಪ್ರಯೋಜನವೂ ಇಲ್ಲವಾಗಿ ಲೋಕಸಂಗ್ರಹಕ್ಕಾಗಿ ಮುನ್ನಿನಂತೆಯೇ ಕರ್ಮದಲ್ಲಿ (ಅವನು) ತೊಡಗಿದ್ದರೂ ನಿಜವಾಗಿ (ಅವನು) ಏನನ್ನೂ ಮಾಡುತ್ತಿರುವದಿಲ್ಲ. ಜ್ಞಾನವೆಂಬ ಬೆಂಕಿಯಿಂದ ಸುಟ್ಟುಹೋಗಿರುವ ಕರ್ಮವುಳ್ಳವನಾದ್ದರಿಂದ ಅವನ ಕರ್ಮವು ಅಕರ್ಮವೇ ಆಗಿರುತ್ತದೆ–ಎಂಬೀ ವಿಷಯವನ್ನು ತಿಳಿಸುವದಕ್ಕಾಗಿ ಭಗವಂತನು (ಈ ಮುಂದಿನ ಮಾತನ್ನು) ಆಡಿರುತ್ತಾನೆ —

**ತ್ಯಕ್ತ್ವಾ ಕರ್ಮಫಲಾಸಙ್ಗಂ ನಿತ್ಯತೃಪ್ತೋ ನಿರಾಶ್ರಯಃ ।**
**ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ ಕರೋತಿ ಸಃ ॥ ೨೦ ॥**

೨೦. ಕರ್ಮಫಲಾಸಂಗವನ್ನು ಬಿಟ್ಟು ನಿತ್ಯತೃಪ್ತನಾಗಿ ನಿರಾಶ್ರಯನಾಗಿರುವ ಆತನು ಕರ್ಮದಲ್ಲಿ ತೊಡಗಿದ್ದರೂ (ನಿಜವಾಗಿ) ಅವನು ಏನೂ ಮಾಡುತ್ತಿರುವದಿಲ್ಲ.

(ಭಾಷ್ಯ)

೨೬೭ ತ್ಯಕ್ತ್ವಾ ಕರ್ಮಸು ಅಭಿಮಾನಂ ಫಲಾಸಙ್ಗಂ ಚ ಯಥೋಕ್ತೇನ ಜ್ಞಾನೇನ ನಿತ್ಯತೃಪ್ತಃ ನಿರಾಕಾಙ್ಕ್ಷಃ ವಿಷಯೇಷು ಇತ್ಯರ್ಥಃ । ನಿರಾಶ್ರಯಃ ಆಶ್ರಯರಹಿತಃ । ಆಶ್ರಯೋ ನಾಮ ಯದಾಶ್ರಿತ್ಯ ಪುರುಷಾರ್ಥಂ ಸಿಸಾಧಯಿಷತಿ । ದೃಷ್ಟಾದೃಷ್ಟೇಷ್ಟಫಲಸಾಧನಾಶ್ರಯರಹಿತಃ ಇತ್ಯರ್ಥಃ । ವಿದುಷಾ ಕ್ರಿಯಮಾಣಂ ಕರ್ಮ ಪರಮಾರ್ಥತಃ ಅಕರ್ಮೈವ । ತಸ್ಯ ನಿಷ್ಕ್ರಿಯಾತ್ಮದರ್ಶನಸಂಪನ್ನತ್ವಾತ್

ತೇನ ಏವಂಭೂತೇನ ಪ್ರಯೋಜನಾಭಾವಾತ್[1] ಸಸಾಧನಂ ಕರ್ಮ ಪರಿತ್ಯಕ್ತವ್ಯಮೇವ ಇತಿ ಪ್ರಾಪ್ತೇ ತತೋ ನಿರ್ಗಮಾಸಂಭವಾತ್ ಲೋಕಸಂಗ್ರಹಚಿಕೀರ್ಷಯಾ ಶಿಷ್ಟವಿಗರ್ಹಣಾಪರಿಜಿಹೀರ್ಷಯಾ ವಾ ಪೂರ್ವವತ್ ಕರ್ಮಣಿ ಅಭಿಪ್ರವೃತ್ತೋಽಪಿ ನಿಷ್ಕ್ರಿಯಾತ್ಮದರ್ಶನಸಂಪನ್ನತ್ವಾತ್ ನೈವ ಕಿಂಚಿತ್ ಕರೋತಿ ಸಃ ||

(ಭಾಷ್ಯಾರ್ಥ)

ಕರ್ಮಗಳಲ್ಲಿ ಅಭಿಮಾನವನ್ನು ಫಲದಲ್ಲಿ ಆಸಕ್ತಿಯನ್ನು ಮೇಲೆ ಹೇಳಿದ ಜ್ಞಾನದಿಂದ ಬಿಟ್ಟು ನಿತ್ಯತೃಪ್ತನಾಗಿ ಎಂದರ ವಿಷಯಗಳಲ್ಲಿ ಯಾವ ಆಶೆಯೂ ಇಲ್ಲದ ಎಂದರ್ಥ. ನಿರಾಶ್ರಯನಾಗಿ ಎಂದರೆ ಆಶ್ರಯವಿಲ್ಲದವನಾಗಿ. ಆಶ್ರಯವೆಂದರೆ ಯಾವದನ್ನು ಅವಲಂಬಿಸಿಕೊಂಡು ಪುರುಷಾರ್ಥವನ್ನು ಪಡೆದುಕೊಳ್ಳಬೇಕೆಂದಿರುತ್ತಾನೋ ಅದು; (ಅದಿಲ್ಲದವನಾಗಿ) ಎಂದರೆ ಕಂಡಿರುವ (ಈ ಲೋಕದಲ್ಲಿ ಅನುಭವಿಸಬೇಕಾಗಿರುವ ಕರ್ಮದ) ಇಷ್ಟ ಫಲಗಳು, ಮತ್ತು ಕಾಣದಿರುವ (ಪರಲೋಕದಲ್ಲಿ ಅನುಭವಿಸಬೇಕಾಗಿರುವ ಕರ್ಮದ) ಇಷ್ಟ ಫಲಗಳು-ಇವುಗಳನ್ನು ಸಾಧಿಸುವದಕ್ಕಾಗಿ ಯಾವದೊಂದನ್ನೂ ಆಶ್ರಯಿಸದವನಾಗಿ ಎಂದರ್ಥ. **ಜ್ಞಾನಿಯಾದವನು ಮಾಡುವ ಕರ್ಮವೆಂಬುದು ನಿಜವಾಗಿ ಕರ್ಮವೇ ಅಲ್ಲ, ಏಕೆಂದರೆ (ಅವನು) ನಿಷ್ಕ್ರಿಯನಾದ ಆತ್ಮನೇ ತಾನೆಂಬ ಜ್ಞಾನದಿಂದ ಕೂಡಿರುತ್ತಾನೆ.**

ಹೀಗೆ ಇರುವ ಆತನಿಗೆ (ಕರ್ಮಗಳಿಂದ) ಆಗಬೇಕಾದ ಪ್ರಯೋಜನವೇನೂ ಇಲ್ಲದ್ದರಿಂದ ಕರ್ಮವನ್ನು (ಅದರ) ಸಾಧನಗಳ ಸಹಿತವಾಗಿ (ಅವನು) ಬಿಡತಕ್ಕದ್ದೇ (ಯುಕ್ತ)ವೆಂದಾಯಿತಷ್ಟೆ. (ಆದರ ಏನೋ ಕಾರಣದಿಂದ ಆ ಕರ್ಮವನ್ನು ಮಾಡುವ ಆಶ್ರಮವನ್ನು) ಬಿಟ್ಟುಹೋಗುವದಕ್ಕೆ ಆಗದೆ ಇರುವಾಗ **ಲೋಕಸಂಗ್ರಹವನ್ನು ಮಾಡಬೇಕೆಂಬ ಇಚ್ಛೆಯಿಂದಲಾಗಲಿ ಶಿಷ್ಟರ ನಿಂದೆಯನ್ನು ಪರಿಹರಿಸಿಕೊಳ್ಳುವದಕ್ಕಾಗಲಿ ಮೊದಲಿನಂತೆಯೇ ಕರ್ಮದಲ್ಲಿ ತೊಡಗಿದ್ದರೂ[2] ನಿಷ್ಕ್ರಿಯನಾದ ಆತ್ಮನೇ ತಾನೆಂಬ ಜ್ಞಾನದಿಂದ ಕೂಡಿರುವದರಿಂದ ಅವನು (ನಿಜವಾಗಿ) ಯಾವದೊಂದು (ಕರ್ಮವನ್ನೂ) ಮಾಡುತ್ತಿರುವದಿಲ್ಲ**[3]

---

1. "ಸ್ವಪ್ರಯೋಜನಾಭಾವಾತ್" ಪಾ|| ಪ್ಯಾ|| ಮು||

2. ತೊಡಗಿರುವಂತ ಲೋಕದ ಜನರಿಗೆ ಕಾಣಿಸುತ್ತಿದ್ದರೂ.

4. ಪರಮಾರ್ಥದೃಷ್ಟಿಯಿಂದ ಕರ್ಮವನ್ನು ಮಾಡುತ್ತಿರುವದಿಲ್ಲವಾದ್ದರಿಂದ ಇಲ್ಲಿ ಜ್ಞಾನಕರ್ಮಗಳ ಸಮುಚ್ಚಯವೇ ಇರುವದಿಲ್ಲ

(ಭಾಷ್ಯ)

೨೬೮. ಯಃ ಪುನಃ ಪೂರ್ವೋಕ್ತವಿಪರೀತಃ ಪ್ರಾಗೇವ ಕರ್ಮಾರಮ್ಭಾತ್ ಬ್ರಹ್ಮಣಿಸರ್ವಾನ್ತರೇ ಪ್ರತ್ಯಗಾತ್ಮನಿ ನಿಷ್ಕ್ರಿಯೇ ಸಂಜಾತಾತ್ಮದರ್ಶನಃ ಸ ದೃಷ್ಟಾದೃಷ್ಟೇಷ್ಟ ವಿಷಯಾಶೀರ್ವಿವರ್ಜಿತತಯಾ ದೃಷ್ಟಾದೃಷ್ಟಾರ್ಥೇ ಕರ್ಮಣಿ ಪ್ರಯೋಜನಮಪಶ್ಯನ್ ಸಸಾಧನಂ ಕರ್ಮ ಸಂನ್ಯಸ್ಯ ಶರೀರಯಾತ್ರಾಮಾತ್ರಚೇಷ್ಟಃ ಯತಿಃ ಜ್ಞಾನನಿಷ್ಠೋ ಮುಚ್ಯತೇ ಇತ್ಯೇತಮರ್ಥಂ ದರ್ಶಯಿತುಮ್ ಆಹ—

(ಭಾಷ್ಯಾರ್ಥ)

ಆದರೆ **ಯಾವನಿಗೆ ಮೇಲೆ ಹೇಳಿದಂತಲ್ಲದೆ ಕರ್ಮವನ್ನು ಪ್ರಾರಂಭಿಸುವ ಮೊದಲೇ** [1] **ನಿಷ್ಕ್ರಿಯನಾದ ಎಲ್ಲಕ್ಕೂ ಒಳಗಿರುವ** [2] **ಬ್ರಹ್ಮದಲ್ಲಿ ಒಳಗಿನ ಆತ್ಮನಲ್ಲಿ, ತಾನೇ ಅವನೆಂಬ ತಿಳಿವಳಿಕೆಯುಂಟಾಗಿರುವದೋ** ಅವನಿಗೆ (ಈ ಲೋಕದಲ್ಲಿ) ಕಂಡಿರುವ ಅಥವಾ ಕಾಣುವ (ಪರಲೋಕದ) ಯಾವದೊಂದು ಇಷ್ಟ ವಿಷಯದ ಆಶೆಯೂ ಇಲ್ಲದಿರುವದರಿಂದ ಇಹಲೋಕದ ಫಲಕ್ಕಾಗಿ ಅಥವಾ ಪರಲೋಕದ ಫಲಕ್ಕಾಗಿ ಮಾಡಬೇಕಾಗಿರುವ **ಕರ್ಮದಲ್ಲಿ (ಅವನಿಗೆ) ಯಾವ ಪ್ರಯೋಜನವೂ ಕಾಣದಿರುವದರಿಂದ ಕರ್ಮವನ್ನು ಅದರ ಸಾಧನಗಳೊಡನೆ ಸಂನ್ಯಾಸಮಾಡಿ ದೇಹದ ಕೆಲಸವು ಸಾಗುವದಕ್ಕೆ ತಕ್ಕಷ್ಟು ಕರ್ಮವನ್ನು ಮಾತ್ರ ಮಾಡುತ್ತಾ** [3] **ಯತಿಯಾಗಿ ಜ್ಞಾನನಿಷ್ಠನಾಗಿದ್ದುಕೊಂಡು ಮುಕ್ತನಾಗುತ್ತಾನೆ** ಎಂಬೀ ವಿಷಯವನ್ನು ತಿಳಿಸುವದಕ್ಕೆಂದು (ಭಗವಂತನು ಮುಂದಿನ ಮಾತನ್ನು) ಆಡಿರುತ್ತಾನೆ —

**ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।**
**ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥೨೧॥**

೨೧. ಆಶೆಯಿಲ್ಲದವನಾಗಿ ಚಿತ್ತಾತ್ಮಗಳನ್ನು ಬಿಗಿಹಿಡಿದುಕೊಂಡು ಸರ್ವಪರಿಗ್ರಹವನ್ನೂ ಬಿಟ್ಟು ಕೇವಲ ಶಾರೀರಕರ್ಮವನ್ನು ಮಾಡುತ್ತಿರುವವನಿಗೆ (ಯಾವ) ಕಿಲ್ಬಿಷವೂ ಬಂದೊದಗುವದಿಲ್ಲ.

(ಭಾಷ್ಯ)

೨೬೯. ನಿರಾಶೀಃ ನಿರ್ಗತಾಃ ಆಶಿಷಃ ಯಸ್ಮಾತ್ ಸಃ ನಿರಾಶೀಃ । ಯತಚಿತ್ತಾತ್ಮಾ ಚಿತ್ತಮ್ ಅನ್ತಃಕರಣಮ್ ಆತ್ಮಾ ಬಾಹ್ಯಃ ಕಾರ್ಯಕರಣಸಙ್ಘಾತಃ ।

---

1. ಬ್ರಹ್ಮಚರ್ಯಾಶ್ರಮದಿಂದಲೇ.
2. ಬೃ. ೩-೪-೧.
3. ಗೃಹಸ್ಥಧರ್ಮವನ್ನು ಕೈಕೊಳ್ಳದೆ.

ತೌ ಉಭಾವಪಿ ಯತೌ ಸಂಯತೌ ಯೇನ ಸ ಯತಚಿತ್ತಾತ್ಮಾ । ತ್ಯಕ್ತಸರ್ವಪರಿಗ್ರಹಃ ತ್ಯಕ್ತಃ ಸರ್ವಃ ಪರಿಗ್ರಹಃ ಯೇನ ಸಃ ತ್ಯಕ್ತಸರ್ವಪರಿಗ್ರಹಃ । ಶಾರೀರಂ ಶರೀರಸ್ಥಿತಿಮಾತ್ರಪ್ರಯೋಜನಂ ಕೇವಲಂ ತತ್ರಾಪಿ ಅಭಿಮಾನವರ್ಜಿತಂ ಕರ್ಮ ಕುರ್ವನ್ ನಾಪ್ನೋತಿ ನ ಪ್ರಾಪ್ನೋತಿ ಕಿಲ್ಬಿಷಮ್ ಅನಿಷ್ಟರೂಪಂ ಪಾಪಂ ಧರ್ಮಂ ಚ । ಧರ್ಮೋಽಪಿ ಮುಮುಕ್ಷೋಃ ಕಿಲ್ಬಿಷಮೇವ ಬನ್ಧಾಪಾದಕತ್ವಾತ್ [1] । ತಸ್ಮಾತ್ ತಾಭ್ಯಾಂ ಮುಕ್ತೋ ಭವತಿ । ಸಂಸಾರಾತ್ ಮುಕ್ತೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ನಿರಾಶಿಯಾಗಿ–ಯಾವನನ್ನು ಆಶೆಗಳನ್ನೆಲ್ಲ ಬಿಟ್ಟು ತೊಲಗಿರುವವೋ ಅವನು ನಿರಾಶಿಯು–(ಅಂಥವನಾಗಿ) ಯತಚಿತ್ತಾತ್ಮನಾಗಿ–ಚಿತ್ತವೆಂದರೆ ಅಂತಃಕರಣವು, ಆತ್ಮವೆಂದರೆ ಹೊರಗಿನ ದೇಹೇಂದ್ರಿಯಗಳ ಗುಂಪು, ಅವುಗಳೆರಡೂ ಯಾವನಿಂದ ಯತವಾಗಿರುವವೋ ಬಿಗಿಹಿಡಿಯಲ್ಪಟ್ಟಿರುವವೋ ಅವನು ಯತಚಿತ್ತಾತ್ಮನು–(ಅಂಥವನಾಗಿ). ತ್ಯಕ್ತಸರ್ವಪರಿಗ್ರಹನಾಗಿ–ತನ್ನದೆಂಬುದೆಲ್ಲವನ್ನು ಬಿಟ್ಟವನು ತ್ಯಕ್ತಸರ್ವಪರಿಗ್ರಹನು, (ಅಂಥವನಾಗಿ) (ಯಾವನು ಇಂಥವನಾಗಿ) ಶಾರೀರಕರ್ಮವನ್ನು ಎಂದರೆ ಶರೀರವು ಇದ್ದುಕೊಂಡಿರುವಮಟ್ಟಿಗೆ ಬೇಕಾಗಿರುವ ಕೇವಲ ಕರ್ಮವನ್ನು ಎಂದರೆ ಅದರಲ್ಲಿಯೂ (ನನ್ನದೆಂಬ) ಅಭಿಮಾನರಹಿತವಾದ ಕರ್ಮವನ್ನು ಮಾಡುತ್ತಿರುವವನು ಕಿಲ್ಬಿಷವನ್ನು ಎಂದರೆ ಅನಿಷ್ಟರೂಪವಾದ ಪಾಪವನ್ನಾಗಲಿ ಧರ್ಮವನ್ನಾಗಲಿ ಹೊಂದುವದಿಲ್ಲ (ಎಂದರ್ಥ). **ಮುಮುಕ್ಷುವಾದವನಿಗೆ ಧರ್ಮವೂ ಕಿಲ್ಬಿಷವೇ, ಏಕೆಂದರೆ (ಅದೂ) ಬಂಧವನ್ನುಂಟುಮಾಡುತ್ತದೆ.** ಆದ್ದರಿಂದ ಈ ಎರಡರಿಂದಲೂ ಮುಕ್ತನಾಗುತ್ತಾನೆ,[2] ಸಂಸಾರದಿಂದ ಬಿಡುಗಡೆಯನ್ನು ಹೊಂದುತ್ತಾನೆ ಎಂದರ್ಥ.

## ಶಾರೀರಕರ್ಮದ ವಿಷಯಕ್ಕೆ ಚರ್ಚೆ

(ಭಾಷ್ಯ)

೨೭೦. "ಶಾರೀರಂ[3] ಕೇವಲಂ ಕರ್ಮ" ಇತ್ಯತ್ರ ಕಿಂ ಶರೀರನಿರ್ವರ್ತ್ಯಂ ಶಾರೀರಂ ಕರ್ಮ ಅಭಿಪ್ರೇತಮ್, ಆಹೋಸ್ವಿತ್ ಶರೀರಸ್ಥಿತಿಮಾತ್ರಪ್ರಯೋಜನಂ

---

1. "ಮುಮುಕ್ಷೋಃ ಅನಿಷ್ಟರೂಪತ್ವಾತ್ ಧರ್ಮೋಽಪಿ ಕಿಲ್ಬಿಷಮೇವ" ಮೈ॥; "ಬನ್ಧಾಪಾದಕತ್ವಾತ್ ಧರ್ಮೋಽಪಿ ಕಿಲ್ಬಿಷಮೇವ" ಮು॥

2. ಸೂ. ಭಾ. ೪-೧-೧೪.

3. ಕಿಂಚ ಎಂಬುದು ಮೈ॥ಮು॥ವಾ॥ಗಳಲ್ಲಿಲ್ಲ; ಬೇಕೂ ಇಲ್ಲ.

ಶಾರೀರಮ್ ಇತಿ? ಕಿಂಚಾತಃ ಯದಿ ಶರೀರನಿರ್ವರ್ತ್ಯಂ ಶಾರೀರಂ ಕರ್ಮ, ಯದಿ ವಾ ಶರೀರಸ್ಥಿತಿಮಾತ್ರಪ್ರಯೋಜನಂ ಶಾರೀರಮ್ ಇತಿ? ಉಚ್ಯತೇ। ಯದಾ ಶರೀರನಿರ್ವರ್ತ್ಯಂ ಕರ್ಮ ಶಾರೀರಮ್ ಅಭಿಪ್ರೇತಂ ಸ್ಯಾತ್ ತದಾ ದೃಷ್ಟಾದೃಷ್ಟ ಪ್ರಯೋಜನಂ ಕರ್ಮ ಪ್ರತಿಷಿದ್ಧಮಪಿ ಶರೀರೇಣ ಕುರ್ವನ್ ನಾಪ್ನೋತಿ ಕಿಲ್ಬಿಷಮ್ ಇತಿ ಬ್ರುವತಃ ವಿರುದ್ಧಾಭಿಧಾನಂ ಪ್ರಸಜ್ಯೇತ। ಶಾಸ್ತ್ರೀಯಂ ಚ ಕರ್ಮ ದೃಷ್ಟಾ ದೃಷ್ಟಪ್ರಯೋಜನಂ ಶರೀರೇಣ ಕುರ್ವನ್ ನಾಪ್ನೋತಿ ಕಿಲ್ಬಿಷಮ್ ಇತ್ಯಪಿ ಬ್ರುವತಃ ಅಪ್ರಾಪ್ತಪ್ರತಿಷೇಧಪ್ರಸಙ್ಗಃ। ಶಾರೀರಂ ಕರ್ಮ ಕುರ್ವನ್ ಇತಿ ವಿಶೇಷಣಾತ್ ಕೇವಲಶಬ್ದಪ್ರಯೋಗಾಚ್ಚ ವಾಙ್ಮನಸನಿರ್ವರ್ತ್ಯಂ ಕರ್ಮ ವಿಧಿಪ್ರತಿಷೇಧವಿಷಯಂ ಧರ್ಮಾಧರ್ಮಶಬ್ದವಾಚ್ಯಂ ಕುರ್ವನ್ ಪ್ರಾಪ್ನೋತಿ ಕಿಲ್ಬಿಷಮ್ ಇತ್ಯುಕ್ತಂ ಸ್ಯಾತ್। ತತ್ರಾಪಿ ವಾಙ್ಮನಸಾಭ್ಯಾಂ ವಿಹಿತಾನುಷ್ಠಾನಪಕ್ಷೇ ಕಿಲ್ಬಿಷಪ್ರಾಪ್ತಿವಚನಂ ವಿರುದ್ಧಮ್ ಆಪದ್ಯೇತ। ಪ್ರತಿಷಿದ್ಧಸೇವಾಪಕ್ಷೇಽಪಿ ಭೂತಾರ್ಥಾನುವಾದಮಾತ್ರಮ್ ಅನರ್ಥಕಂ ಸ್ಯಾತ್। ಯದಾ ತು ಶರೀರಸ್ಥಿತಿಮಾತ್ರಪ್ರಯೋಜನಂ ಶಾರೀರಂ ಕರ್ಮ ಅಭಿಪ್ರೇತಂ ಭವೇತ್ ತದಾ ದೃಷ್ಟಾದೃಷ್ಟಪ್ರಯೋಜನಂ ವಿಧಿಪ್ರತಿಷೇಧಗಮ್ಯಂ ಶರೀರವಾಙ್ಮನಸ ನಿರ್ವರ್ತ್ಯಮ್[1] ಅನ್ಯತ್ ಅಕುರ್ವನ್, ತೈರೇವ ಶರೀರಾದಿಭಿಃ ಶರೀರಸ್ಥಿತಿಮಾತ್ರ ಪ್ರಯೋಜನಮ್ ಕೇವಲಶಬ್ದಪ್ರಯೋಗಾತ್ 'ಅಹಂ ಕರೋಮಿ' ಇತ್ಯಭಿಮಾನ ವರ್ಜಿತಃ ಶರೀರಾದಿಚೇಷ್ಟಾಮಾತ್ರಂ ಲೋಕದೃಷ್ಟ್ಯಾ ಕುರ್ವನ್ ನಾಪ್ನೋತಿ ಕಿಲ್ಬಿಷಮ್। ಏವಂಭೂತಸ್ಯ ಪಾಪಶಬ್ದವಾಚ್ಯಕಿಲ್ಬಿಷಪ್ರಾಪ್ತ್ಯಸಂಭವಾತ್ ಕಿಲ್ಬಿಷಂ ಸಂಸಾರಂ ನಾಪ್ನೋತಿ। ಜ್ಞಾನಾಗ್ನಿದಗ್ಧಸರ್ವಕರ್ಮತ್ವಾತ್ ಅಪ್ರತಿಬನ್ಧೇನ ಮುಚ್ಯತೇ ಏವ ಇತಿ ಪೂರ್ವೋಕ್ತಸಮ್ಯಗ್ದರ್ಶನಫಲಾನುವಾದ ಏವೈಷಃ। ಏವಂ ಶಾರೀರಂ ಕೇವಲಂ ಕರ್ಮ ಇತ್ಯಸ್ಯ ಅರ್ಥಸ್ಯ ಪರಿಗ್ರಹೇ ನಿರವದ್ಯಂ ಭವತಿ ॥

(ಭಾಷ್ಯಾರ್ಥ)

(ಶಂಕೆ) :—"ಶಾರೀರಂ ಕೇವಲಂ ಕರ್ಮ" ಎಂಬಲ್ಲಿ ಶರೀರದಿಂದ ಮಾಡುವ ಕರ್ಮವೆಂದು ಅಭಿಪ್ರಾಯವೊ, ಅಥವಾ ಶರೀರವು ಇದ್ದುಕೊಂಡಿರುವ ಮಟ್ಟಿಗೆ ಬೇಕಾದ ಕರ್ಮವೆಂದು ಅಭಿಪ್ರಾಯವೊ?[2] (ಇದನ್ನು ಇಲ್ಲಿ ವಿಚಾರಿಸಬೇಕಾದದ್ದು ಅವಶ್ಯ).

---

1. 'ಶರೀರವಾಙ್ಮನೋನಿರ್ವರ್ತ್ಯಮ್' ಮು॥ ಪ್ರ॥

2. ಶಾರೀರ ಎಂದರೆ ಶರೀರಕ್ಕೆ ಸಂಬಂಧಪಟ್ಟ ಎಂದರ್ಥವಾಗುತ್ತದೆ; ಇಲ್ಲಿ ಶರೀರಕ್ಕೂ ಕರ್ಮಕ್ಕೂ ಇರುವ ಸಂಬಂಧವು ಯಾವದು?—ಎಂದು ಶಂಕೆ.

(ಪ್ರಶ್ನೆ) :—ಶರೀರದಿಂದ ಮಾಡುವ (ಕರ್ಮವೇ) ಶಾರೀರಕರ್ಮವೆಂದಾದರೇನು, ಶರೀರವು ಇದ್ದುಕೊಂಡಿರುವವರೆಗೆ (ಬೇಕಾದ ಕರ್ಮವು) ಶಾರೀರವೆಂದಾದರೇನು ?

(ಉತ್ತರ) —ಹೇಳುತ್ತೇವೆ, (ಕೇಳಿ) ಶರೀರದಿಂದ ಮಾಡುವ ಕರ್ಮವೇ ಶಾರೀರವು ಎಂದು (ಇಲ್ಲಿ) ಅಭಿಪ್ರಾಯವೆಂದರೆ ಆಗ ಕಂಡ ಮತ್ತು ಕಾಣದ (ಇಹಪರಲೋಕಗಳ) ಫಲವನ್ನು ಕೊಡುವ, ಪ್ರತಿಷಿದ್ಧಕರ್ಮವನ್ನುಕೂಡ ಮಾಡಿದರೆ ಯಾವ ಕಿಲ್ಬಿಷವೂ ಆಗುವದಿಲ್ಲವೆಂದು ಹೇಳಿದಂತಾಗುವದರಿಂದ ವಿರುದ್ಧವಾದ ಮಾತನ್ನು ಹೇಳಿದಂತೆ ಆಗುವದು[1] ಶಾಸ್ತ್ರದಲ್ಲಿ ಹೇಳಿರುವ ದೃಷ್ಟಾದೃಷ್ಟಫಲಗಳುಳ್ಳ ಕರ್ಮವನ್ನು ಶರೀರದಿಂದ ಮಾಡಿದರ ಕಿಲ್ಬಿಷವಾಗುವದಿಲ್ಲ ಎಂದು ಅರ್ಥವನ್ನು ಮಾಡಿದರೆ ಒದಗದ ಇದ್ದದ್ದನ್ನು ಪ್ರತಿಷೇಧಮಾಡಿದಂತಾಗುವದು[2] 'ಶಾರೀರಕರ್ಮವನ್ನು ಮಾಡಿದರೆ' ಎಂದು (ಶಾರೀರವೆಂಬ) ವಿಶೇಷಣವನ್ನು ಹಾಕಿರುವದರಿಂದಲೂ 'ಬರಿಯ (ಕರ್ಮವನ್ನು)' ಎಂದು ಪ್ರಯೋಗಮಾಡಿರುವದರಿಂದಲೂ ವಾಕ್ಕು, ಮನಸ್ಸು–ಇವುಗಳಿಂದ ಆಗುವ ವಿಹಿತಪ್ರತಿಷಿದ್ಧವಾಗಿರುವ ಧರ್ಮಾಧರ್ಮಗಳೆಂಬ ಹೆಸರಿನ ಕರ್ಮವನ್ನು ಮಾಡಿದರೆ ಪಾಪವುಂಟಾಗುವದೆಂದು ಹೇಳಿದಂತೆ ಆಗುವದು.[3] ಆಗಲೂ ವಾಕ್ಕು, ಮನಸ್ಸು–ಇವುಗಳಿಂದ (ಶಾಸ್ತ್ರ) ವಿಹಿತ (ಕರ್ಮ)ವನ್ನು ಮಾಡಿದರೆ ಕಿಲ್ಬಿಷವಾಗುವದೆಂದು ಹೇಳುವ ಭಾಗವು ವಿರುದ್ಧವಾಗುವದು.[4] ಪ್ರತಿಷಿದ್ಧ (ಕರ್ಮವನ್ನು) ಮಾಡಿದರ (ಕಿಲ್ಬಿಷವಾಗುವದೆಂದು ಹೇಳುವ) ಭಾಗದಲ್ಲಿಯೂ ಇದ್ದದ್ದನ್ನೇ ಹೇಳಿದಂತಾಗಿ (ವಾಕ್ಯವು) ವ್ಯರ್ಥವಾಗುವದು[5]

---

1. ಕರ್ಮಕ್ಕೆ ಫಲವಾಗಬೇಕೆಂಬುದು ನಿಯಮವು, ಆದ್ದರಿಂದ ಅದು ಆಗುವದಿಲ್ಲವೆಂಬ ಮಾತು ಈ ನಿಯಮಕ್ಕೆ ವಿರುದ್ಧವಾಯಿತು.

2. ಶಾಸ್ತ್ರೀಯಕರ್ಮವನ್ನು ಮಾಡಿದರೆ ಕಿಲ್ಬಿಷವುಂಟಾಗುವದಕ್ಕೆ ಕಾರಣವೇ ಇಲ್ಲ ಆದ್ದರಿಂದ ಅದು ಉಂಟಾಗುವದಿಲ್ಲವೆಂದು ಹೇಳಬೇಕಾದದ್ದೇ ಇಲ್ಲ

3. 'ಬರಿಯ ಶಾರೀರಕರ್ಮದಿಂದ ಕಿಲ್ಬಿಷವಾಗುವದಿಲ್ಲ' ಎಂದದ್ದರಿಂದ ವಾಕ್ಕು, ಮನಸ್ಸು–ಇವುಗಳೊಡನೆ ಮಾಡಿದ ಕರ್ಮದಿಂದ ಕಿಲ್ಬಿಷವಾಗುವದೆಂದು ಹೇಳಿದಂತೆ ಆಯಿತು.

4. ವಿಹಿತಕರ್ಮವನ್ನು ಮಾಡಿದರೆ ಪುಣ್ಯವುಂಟಾಗಬೇಕು ; ಪಾಪವುಂಟಾಗುವದೆಂದು ಹೇಳಿದರೆ ಈ ನಿಯಮಕ್ಕೆ ವಿರುದ್ಧ.

5. ಗೊತ್ತಿರುವದನ್ನೇ ಹೇಳಿದರೆ ವಾಕ್ಯವು ಅನುವಾದವಾಗುತ್ತದೆ, ಪ್ರಮಾಣವಾಗುವದಿಲ್ಲ.

ಹೀಗಿಲ್ಲದೆ ಶಾರೀರಕರ್ಮವೆಂದರೆ ಶರೀರವು ಇದ್ದುಕೊಂಡಿರುವವುಟ್ಟಿಗೆ ಬೇಕಾಗಿರುವ (ಕರ್ಮವೇ) ಶಾರೀರಕರ್ಮವೆಂದು ಅಭಿಪ್ರಾಯವೆಂದು ಇಟ್ಟುಕೊಂಡರೆ, ಈ ಲೋಕಪರಲೋಕಗಳಲ್ಲಿ ಫಲವನ್ನು ಕೊಡುವ ಶಾಸ್ತ್ರದಲ್ಲಿ **ವಿಧಿಸಿರುವದರಿಂದ ಅಥವಾ ಪ್ರತಿಷೇಧಮಾಡಿರುವದರಿಂದ ತಿಳಿಯುಬರುವ, ಶರೀರ, ವಾಕ್ಕು, ಮನಸ್ಸು**–**ಇವುಗಳಿಂದ ಮಾಡತಕ್ಕ, ಬೇರೆ ಯಾವ ಕರ್ಮವನ್ನೂ ಮಾಡದೆ ಅದೇ ಶರೀರಾದಿಗಳಿಂದ ಶರೀರವು ಇದ್ದುಕೊಂಡಿರುವವುಟ್ಟಿಗೆ ಬೇಕಾಗುವ ಕರ್ಮಗಳನ್ನು**–ಬರಿಯ (ಕರ್ಮವನ್ನು) ಎಂಬ ಮಾತನ್ನು ಪ್ರಯೋಗಿಸಿರುವದರಿಂದ '**ನಾನು ಮಾಡುತ್ತೇನೆ**' **ಎಂಬ ಅಭಿಮಾನವಿಲ್ಲದೆ ಬರಿಯ ಶರೀರಾದಿಗಳ ವ್ಯಾಪಾರಮಾತ್ರವಾಗಿರುವ ಕರ್ಮಗಳನ್ನು ಜನರ ದೃಷ್ಟಿಯಿಂದ ತಾನು ಮಾಡುತ್ತಿದ್ದರೂ**[1] ಕಿಲ್ಬಿಷವನ್ನು ಹೊಂದುವದಿಲ್ಲ, ಹೀಗಿರುವವನಿಗೆ ಪಾಪವೆಂಬ ಹೆಸರಿನ ಕಿಲ್ಬಿಷವು ಬಂದೊದಗುವ ಸಂಭವವೇ ಇಲ್ಲವಾದ್ದರಿಂದ, ಕಿಲ್ಬಿಷವನ್ನು (ಹೊಂದುವದಿಲ್ಲ) ಎಂದರೆ **ಸಂಸಾರವನ್ನು ಹೊಂದುವದಿಲ್ಲ**[2] (ಎಂದರ್ಥವಾಗುವದು.) ಜ್ಞಾನಾಗ್ನಿಯಿಂದ ಸರ್ವಕರ್ಮಗಳನ್ನೂ ಸುಟ್ಟುಕೊಂಡಿರುವದರಿಂದ **ಯಾವ ಅಡ್ಡಿಯೂ ಇಲ್ಲದೆ ಮುಕ್ತನಾಗಿಯೇ ತೀರುತ್ತಾನೆ**–ಎಂದು ಹಿಂದೆ (೪-೧೯) **ಹೇಳಿದ ಸರಿಯಾದ ಜ್ಞಾನದ ಫಲವನ್ನು ಇಲ್ಲಿ ಸುಮ್ಮನೆ ಅನುವಾದವಾಗಿ ಹೇಳಿದೆ (ಎಂದು ತಿಳಿಯಬೇಕು.)** 'ಶಾರೀರಂ ಕೇವಲಂ ಕರ್ಮ' **ಎಂಬುದಕ್ಕೆ** ಹೀಗೆ **ಅರ್ಥವನ್ನು ಮಾಡಿಕೊಂಡರೆ ಯಾವ ದೋಷವೂ ಉಂಟಾಗುವದಿಲ್ಲ**

(ಭಾಷ್ಯ)

೨೭೧. ತ್ಯಕ್ತಸರ್ವಪರಿಗ್ರಹಸ್ಯ ಯತೇಃ ಅನ್ನಾದೇಃ ಶರೀರಸ್ಥಿತಿಹೇತೋಃ ಪರಿಗ್ರಹಸ್ಯ ಅಭಾವಾತ್ ಯಾಚನಾದಿನಾ ಶರೀರಸ್ಥಿತೌ[3] ಕರ್ತವ್ಯತಾಯಾಂ ಪ್ರಾಪ್ತಾಯಾಮ್ "ಅಯಾಚಿತಮಸಂಕ್ಲೃಪ್ತಮುಪಪನ್ನಂ ಯದೃಚ್ಛಯಾ" (ಅಶ್ವ. ೪೬-೧೯) ಇತ್ಯಾದಿನಾ ವಚನೇನ ಅನುಜ್ಞಾತಂ ಯತೇಃ ಶರೀರಸ್ಥಿತಿಹೇತೋಃ ಅನ್ನಾದೇಃ ಪ್ರಾಪ್ತಿದ್ವಾರಮ್ ಆವಿಷ್ಕುರ್ವನ್ ಆಹ—

---

1. ಅಜ್ಞರು ಕರ್ಮವೆಂದೇ ಭಾವಿಸುವ ಈ ವ್ಯಾಪಾರವು ತನಗೆ ಸಂಬಂಧಿಸಿಲ್ಲವೆಂದೇ ಜ್ಞಾನಿಯು ನಿಶ್ಚಯಿಸಿರುತ್ತಾನೆ

2. ಧರ್ಮಾಧರ್ಮಗಳೆರಡೂ ಇಲ್ಲದ ಆತ್ಮನೇ ತಾದೆಂದು ಅರಿತಿರುವದರಿಂದ ಶರೀರಗ್ರಹಣವಾಗಲಿ ಕ್ರಿಯಾಕಾರಕಫಲಗಳ ಸಂಬಂಧವಾಗಲಿ ಜ್ಞಾನಿಗೆ ಇರುವದಿಲ್ಲ. ಈ ಸಂಸಾರವನ್ನೇ ಇಲ್ಲಿ ಕಿಲ್ಬಿಷವೆಂದಿದೆ ಎಂದು ಅಭಿಪ್ರಾಯ

3. "ಶರೀರಸ್ಥಿತಿ ಕರ್ತವ್ಯತಾಯಾಮ್" ಇತಿ ಮೈ॥ ಪಾ॥

(ಭಾಷ್ಯಾರ್ಥ)

ತನ್ನದೆಂಬುದೆಲ್ಲವನ್ನೂ ಬಿಟ್ಟಿರುವ ಯತಿಗೆ ಶರೀರವನ್ನು ಕಾಪಾಡಿಕೊಳ್ಳುವದಕ್ಕೆ ಬೇಕಾದ ಅನ್ನವೇ ಮುಂತಾದದ್ದು [1] (ಕೂಡ) ತನ್ನದಾಗಿ ಇರುವದಿಲ್ಲವಾಗಿ ಯಾಚನೆಯೇ ಮುಂತಾದದ್ದರಿಂದ [2] ಶರೀರವನ್ನು ಕಾಪಾಡಿಕೊಳ್ಳಬೇಕೆಂದಾಯಿತು. ಶರೀರವಿರುವದಕ್ಕೆ ಅವಶ್ಯವಾದ (ಈ) ಅನ್ನಾದಿಗಳನ್ನು ಪಡೆಯುವದಕ್ಕೆ (ಶಾಸ್ತ್ರದಲ್ಲಿ) "ಅಯಾಚಿತಮಸಂಕ್ಲಿಪ್ತಮುಪಪನ್ನಂ ಯದೃಚ್ಛಯಾ" (ಅಶ್ವ. ೪೬-೧೯) (ತಾನು ಬೇಡದೆ ಇದ್ದದ್ದು, ಮೊದಲು ಗೊತ್ತುಮಾಡಿಕೊಳ್ಳದೆ ಇದ್ದದ್ದು, ತಾನೇ ಒದಗಿ ಬಂದದ್ದು) [3] -ಮುಂತಾದ ವಚನದಲ್ಲಿ ಆಗಬಹುದೆಂದು ಹೇಳಿರುವ ಉಪಾಯವನ್ನು ತಿಳಿಸಬೇಕೆಂದು (ಭಗವಂತನು ಈ ಮುಂದಿನ ಮಾತನ್ನು) ಆಡಿರುತ್ತಾನೆ :—

**ಯದೃಚ್ಛಾಲಾಭಸನ್ತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।**
**ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥ ೨೨ ॥**

೨೨. ಯದೃಚ್ಛಾಲಾಭದಿಂದ ಸಂತುಷ್ಟನಾಗಿ ದ್ವಂದ್ವಗಳನ್ನು ಮೀರಿ, ಮತ್ಸರವಿಲ್ಲದೆ, ಸಿದ್ಧಿಯಾದರೂ ಅಸಿದ್ಧಿಯಾದರೂ ಸಮನಾಗಿದ್ದುಕೊಂಡಿರುವ (ಈತನು) ಕರ್ಮವನ್ನು ಮಾಡಿದರೂ ಬದ್ಧನಾಗುವದಿಲ್ಲ.

(ಭಾಷ್ಯ)

೨೭೨. ಯದೃಚ್ಛಾಲಾಭಸನ್ತುಷ್ಟಃ ಅಪ್ರಾರ್ಥಿತೋಪನತೋ ಲಾಭಃ ಯದೃಚ್ಛಾಲಾಭಃ । ತೇನ ಸಂತುಷ್ಟಃ ಸಂಜಾತಾಲಂಪ್ರತ್ಯಯಃ । ದ್ವಂದ್ವಾತೀತಃ ದ್ವಂದ್ವೈಃ ಶೀತೋಷ್ಣಾದಿಭಿಃ ಹನ್ಯಮಾನೋಽಪಿ ಅವಿಷಣ್ಣಚಿತ್ತಃ ದ್ವಂದ್ವಾತೀತ ಉಚ್ಯತೇ । ವಿಮತ್ಸರಃ ವಿಗತಮತ್ಸರಃ ನಿರ್ವೈರಬುದ್ಧಿಃ ಸಮಃ ತುಲ್ಯಃ ಯದೃಚ್ಛಾಲಾಭಸ್ಯ ಸಿದ್ಧೌ ಅಸಿದ್ಧೌ ಚ । ಯ ಏವಂಭೂತೋ ಯತಿಃ ಅನ್ನಾದೇಃ ಶರೀರಸ್ಥಿತಿಹೇತೋಃ ಲಾಭಾಲಾಭಯೋಃ ಸಮಃ ಹರ್ಷವಿಷಾದವರ್ಜಿತಃ ಕರ್ಮಾದೌ ಅಕರ್ಮಾದಿದರ್ಶೀ ಯಥಾಭೂತಾತ್ಮದರ್ಶನನಿಷ್ಠಃ ಸನ್ ಶರೀರಸ್ಥಿತಿಮಾತ್ರಪ್ರಯೋಜನೇ ಭಿಕ್ಷಾಟನಾದಿಕರ್ಮಣಿ ಶರೀರಾದಿನಿರ್ವರ್ತ್ಯೇ "ನೈವ ಕಿಂಚಿತ್ ಕರೋಮಿ" ಅಹಮ್ (೫-೮), "ಗುಣಾ ಗುಣೇಷು ವರ್ತನ್ತೇ" (೩-೨೮) ಇತ್ಯೇವಂ

1. ದಂಡ, ಪಾದುಕೆ, ಕೌಪೀನ, ಹೊದಿಯುವ ಬಟ್ಟೆ-ಮುಂತಾದವು

2. ಸೇವೆ ಮುಂತಾದದ್ದರಿಂದಲೂ ಶರೀರವನ್ನು ಕಾಪಾಡಿಕೊಳ್ಳಬಹುದೆಂದಾಯಿತು. ಇದು ಗೃಹಸ್ಥನಿಗೆ ಆಗಬಹುದಾದರೂ ಯತಿಗೆ ಆಗದು.

3. "ಕೃತ್ವಾ ಪ್ರಾಹ್ಣೇ ಚರೇದ್ಭೈಕ್ಷ್ಯಂ ವಿಧೂಮೇ ಭುಕ್ತವಜ್ಜನೇ ॥" ಎಂದು ಉತ್ತರಾರ್ಧ. ಆ ಅಧ್ಯಾಯದಲ್ಲಿ ಸಂನ್ಯಾಸಿಯ ಧರ್ಮವನ್ನು ವಿಸ್ತಾರವಾಗಿ ಹೇಳಿದೆ.

ಸದಾ ಸಂಪರಿಚಕ್ಷಾಣಃ ಆತ್ಮನಃ ಕರ್ತೃತ್ವಾಭಾವಂ ಪಶ್ಯನ್ ನೈವ ಕಿಂಚಿದ್ ಭಿಕ್ಷಾಟನಾದಿಕಂ ಕರ್ಮ ಕರೋತಿ । ಲೋಕವ್ಯವಹಾರಸಾಮಾನ್ಯದರ್ಶನೇನ ತು ಲೌಕಿಕೈಃ ಆರೋಪಿತಕರ್ತೃತ್ವೇ ಭಿಕ್ಷಾಟನಾದೌ ಕರ್ಮಣಿ ಕರ್ತಾ ಭವತಿ[1] । ಸ್ವಾನುಭವೇನ ತು ಶಾಸ್ತ್ರಪ್ರಮಾಣಾದಿಜನಿತೇನ[2] ಅಕರ್ತೈವ । ಸ ಏವಂ ಪರಾಧ್ಯಾರೋಪಿತಕರ್ತೃತ್ವಃ ಶರೀರಸ್ಥಿತಿಮಾತ್ರಪ್ರಯೋಜನಂ ಭಿಕ್ಷಾಟನಾದಿಕಂ ಕರ್ಮ ಕೃತ್ವಾಪಿ ನ ನಿಬಧ್ಯತೇ ಬನ್ಧಹೇತೋಃ ಕರ್ಮಣಃ ಸಹೇತುಕಸ್ಯ ಜ್ಞಾನಾಗ್ನಿನಾ ದಗ್ಧತ್ವಾತ್ ಇತ್ಯುಕ್ತಾನುವಾದ ಏವೈಷಃ ॥

(ಭಾಷ್ಯಾರ್ಥ)

ಯದೃಚ್ಛಾಲಾಭದಿಂದ ಸಂತುಷ್ಟನಾಗಿ–ಒಬ್ಬನನ್ನು ಕೇಳಿಕೊಳ್ಳದೆ ತಾನೇ ಬಂದೊದಗಿದ್ದು ಯದೃಚ್ಛಾಲಾಭವು ಅದರಿಂದಲೇ ಸಂತುಷ್ಟನಾಗಿ–ಸಾಕೆಂಬ ಬುದ್ಧಿಯುಳ್ಳವನಾಗಿ, ದ್ವಂದ್ವಗಳನ್ನು ಮೀರಿದವನಾಗಿ–ದ್ವಂದ್ವಗಳೆಂದರೆ ಶೀತೋಷ್ಣವೇ ಮುಂತಾದವುಗಳು (ಅವುಗಳ) ಹೊಡೆತಕ್ಕೆ ಸಿಕ್ಕಿದರೂ ಚಿತ್ತದಲ್ಲಿ ಕುಗ್ಗದೆ ಇರುವವನು ದ್ವಂದ್ವಗಳನ್ನು ಮೀರಿದವನೆನಿಸುವನು. (ಹೀಗೆ ದ್ವಂದ್ವಗಳನ್ನು ಮೀರಿ)–ಮತ್ಸರವಿಲ್ಲದೆ, ಮಾತ್ಸರ್ಯವನ್ನು ಕಳೆದುಕೊಂಡು (ಯಾರಲ್ಲಿಯೂ) ಹಗೆತನವಿಲ್ಲದವನಾಗಿ, ಯದೃಚ್ಛಾಲಾಭವು ಆಗಲಿ ಆಗದಿರಲಿ (ಎರಡರಲ್ಲಿಯೂ) ಸಮನಾಗಿ ಯಾವ ಇಂಥ ಯತಿಯು ಶರೀರವಿಟ್ಟುಕೊಂಡಿರುವದಕ್ಕೆ ಬೇಕಾದ ಅನ್ನವೇ ಮುಂತಾದದ್ದು ದೊರೆಯಲಿ ದೊರೆಯದಿರಲಿ, ಹಿಗ್ಗದೆ ತಗ್ಗದೆ ಕರ್ಮಾದಿಗಳಲ್ಲಿ ಅಕರ್ಮಾದಿಗಳನ್ನು ಕಾಣುತ್ತಿರುವ[3] ಆತ್ಮನನ್ನು ಇದ್ದಂತೆ ಅರಿಯುವ (ಜ್ಞಾನ) ದಲ್ಲಿಯೇ ನೆಲೆನಿಂತವನಾಗಿ ಶರೀರವು ಇರುವ ಮಟ್ಟಿಗೆ ಅವಶ್ಯವಾಗಿರುವ ಶರೀರಾದಿಗಳಿಂದ ಆಗಬೇಕಾಗಿರುವ[4] ಭಿಕ್ಷಾಟನವೇ ಮುಂತಾದ ಕರ್ಮದಲ್ಲಿ "ನಾನು (ನಿಜವಾಗಿ) ಏನನ್ನೂ ಮಾಡುತ್ತಿರುವದಿಲ್ಲ" (೫-೮), "ಗುಣಗಳು ಗುಣಗಳಲ್ಲಿ ತೊಡಗು

---

1. "ಭಿಕ್ಷಾಟನಾದಿಚೇಷ್ಟಾಸ್ವಪಿ ಅಕರ್ತೃತ್ವಾದ್ಯನುಸನ್ಧಾನಮೇವ ವಿದುಷಃ" ಎಂದು ಸಿ|| ಪಾಠದಲ್ಲಿ ಹೆಚ್ಚಾಗಿದೆ.

2. 'ಪ್ರಮಾಣಜನಿತೇನ' ಮು|| ವ್ಯೆ||'

3. ಕರ್ಮದಲ್ಲಿ ಅಕರ್ಮವನ್ನೂ ಅಕರ್ಮದಲ್ಲಿ ಕರ್ಮವನ್ನೂ ಕಾಣುತ್ತಿರುವ, ಕರ್ತೃತ್ವ ಬುದ್ಧಿಯು ಒಂದಿಷ್ಟೂ ಇಲ್ಲದ.

4. ಶರೀರ, ವಾಕ್ಕು, ಮನಸ್ಸು–ಇವುಗಳಿಂದ ಮಾಡುವ ಈ ಕರ್ಮಗಳು ಬರಿಯ ವ್ಯಾಪಾರಮಾತ್ರವಾಗಿ ತನಗೆ ಸಂಬಂಧಪಟ್ಟವೇ ಅಲ್ಲವೆಂದು ಜ್ಞಾನಿಯು ತಿಳಿದಿರುತ್ತಾನೆ.

ತ್ತಿರುವವು" (೩-೨೮)[1] ಎಂದೇ ಸರಿಯಾಗಿ ಯಾವಾಗಲೂ ಚಿಂತಿಸಿಕೊಳ್ಳುತ್ತಾ ತನಗೆ ಯಾವ ಕರ್ತೃತ್ವವೂ ಇಲ್ಲವೆಂದು ಅರಿತುಕೊಂಡಿರುವನೋ (ಅವನು) ಭಿಕ್ಷಾಟನೆಯೇ ಮುಂತಾದ ಯಾವ ಕರ್ಮವನ್ನೂ (ನಿಜವಾಗಿ) ಮಾಡುತ್ತಿರುವದಿಲ್ಲ.[2] **ಜನರ ವ್ಯವಹಾರದಂತೆಯೇ ಕಾಣುತ್ತಿರುವದರಿಂದ ಸಾಮಾನ್ಯ ಜನರು (ಇವನು) ಕರ್ತನೆಂದು ಆರೋಪಿಸುವರಾದ್ದರಿಂದ (ಅಷ್ಟುಮಟ್ಟಿಗೆ) ಭಿಕ್ಷಾಟನೆಯೇ ಮುಂತಾದ ಕರ್ಮಕ್ಕೆ ಇವನು ಕರ್ತನಾಗಿರುವನು, ಶಾಸ್ತ್ರ ಪ್ರಮಾಣವೇ (ಮುಂತಾದ)ದ್ದರಿಂದುಂಟಾದ ತನ್ನ ಅನುಭವದಿಂದ ನೋಡಿದರೋ (ಇವನು) ಕರ್ತೃವಲ್ಲವೇ ಅಲ್ಲ.** ಹೀಗೆ ಮತ್ತೊಬ್ಬರು (ತನ್ನಲ್ಲಿ) ಆರೋಪಿಸಿರುವ ಕರ್ತೃತ್ವದಿಂದ ಶರೀರಸ್ಥಿತಿಗೆ ಮಾತ್ರ ಬೇಕಾದ ಭಿಕ್ಷಾಟನವೇ ಮುಂತಾದ ಕರ್ಮವನ್ನು ಮಾಡುತ್ತಿದ್ದರೂ (ಆತನಿಗೆ) ಬಂಧವಾಗುವದಿಲ್ಲ; ಏಕೆಂದರೆ ಬಂಧಕ್ಕೆ ನಿಮಿತ್ತವಾದ ಕರ್ಮವು ತನ್ನ ಕಾರಣದೊಡನೆ ಜ್ಞಾನಾಗ್ನಿಯಿಂದ ಸುಟ್ಟುಹೋಗಿರುತ್ತದೆ-ಹೀಗೆಂಬುದು ಹಿಂದೆ (೪-೧೯, ೨೦) ಹೇಳಿರುವದರ ಅನುವಾದವೇ (ಹೊರತು ಹೊಸದಾಗಿ ಹೇಳಿದ್ದೇನೂ ಅಲ್ಲ)

(ಭಾಷ್ಯ)

೨೭೩. "ತ್ಯಕ್ತ್ವಾ ಕರ್ಮಫಲಾಸಙ್ಗಮ್" (೪-೨೦) ಇತ್ಯನೇನ ಶ್ಲೋಕೇನ ಯಃ ಪ್ರಾರಬ್ಧಕರ್ಮಾ ಸನ್ ಯದಾ ನಿಷ್ಕ್ರಿಯಬ್ರಹ್ಮಾತ್ಮದರ್ಶನಸಂಪನ್ನಃ ಸ್ಯಾತ್ ತದಾ ತಸ್ಯ ಆತ್ಮನಃ ಕರ್ತೃಕರ್ಮಪ್ರಯೋಜನಾಭಾವದರ್ಶಿನಃ ಕರ್ಮಪರಿತ್ಯಾಗೇ ಪ್ರಾಪ್ತೇ ಕುತಶ್ಚಿನ್ನಿಮಿತ್ತಾತ್ ತದಸಂಭವೇ ಸತಿ ಪೂರ್ವವತ್ ತಸ್ಮಿನ್ ಕರ್ಮಣಿ ಅಭಿಪ್ರವೃತ್ತಸ್ಯಾಪಿ "ನೈವ ಕಿಂಚಿತ್ ಕರೋತಿ ಸಃ" (೪-೨೦) ಇತಿ ಕರ್ಮಾಭಾವಃ ಪ್ರದರ್ಶಿತಃ। ಯಸ್ಯ ಏವಂ ಕರ್ಮಾಭಾವೋ ದರ್ಶಿತಃ ತಸ್ಯೈವ[3]—

---

1. ಗುಣಗಳು ಅಸತ್ತಾಗಿರುವದರಿಂದ ಕರ್ಮಗಳೂ ಅವುಗಳ ಫಲಗಳೂ ಅಸತ್ತಾಗಿರುವವು, ಸದ್ರೂಪನಾದ ಆತ್ಮನಿಗೆ ಸೇರಿಲ್ಲ

2. "ಪಶ್ಯನ್ನೇವ" ಎಂದು ಗು|| ಪಾಠದಲ್ಲಿತ್ತು. ಈಗ ಅದರಲ್ಲಿಯೂ 'ಪಶ್ಯನ್ನೈವ' ಎಂದು ತಿದ್ದಿದೆ. "ನೈವ ಕಿಂಚಿತ್ ಕರೋತಿ" ಎಂಬುದು ೪-೨೦ನೆಯ ಶ್ಲೋಕದ ಸೂಚನೆ.

3. "ತಸ್ಯೈವಮ್" ಮ|| ಮೈ||

(ಭಾಷ್ಯಾರ್ಥ)

"ಕರ್ಮಫಲಗಳಲ್ಲಿ ಆಸಕ್ತಿಯನ್ನು ಬಿಟ್ಟು" ಎಂಬೀ (೪-೨೦) ಶ್ಲೋಕದಲ್ಲಿ ಯಾವಾತನು ಕರ್ಮವನ್ನು ಮಾಡುವದಕ್ಕೆ ಮೊದಲುಮಾಡಿ ಯಾವ ಕರ್ಮವೂ ಇಲ್ಲದ ಬ್ರಹ್ಮವೇ ತಾನೆಂಬ ಜ್ಞಾನವನ್ನು ಯಾವಾಗ ಹೊಂದುವನೋ ಆಗ ತನ್ನಲ್ಲಿ ಕರ್ತೃ, ಕರ್ಮ, ಫಲ-(ಈ) ಯಾವವೂ ಇಲ್ಲವೆಂದು ಅರಿತುಕೊಂಡಿರುವದರಿಂದ ಕರ್ಮವನ್ನು ಬಿಡಬೇಕೆಂದೇ ಆಯಿತಾದರೂ ಯಾವದಾದರೊಂದು ನಿಮಿತ್ತದಿಂದ ಹಾಗೆ ಬಿಡುವದು ಆಗದೆ ಇರುವಲ್ಲಿ ಮೊದಲಿನಂತೆ ಆ ಕರ್ಮದಲ್ಲಿ ತೊಡಗಿದ್ದರೂ "ಅವನು ಏನನ್ನೂ ಮಾಡುತ್ತಿರುವದಿಲ್ಲ" (೪-೨೦) ಎಂದು (ಅವನಿಗೆ) ಕರ್ಮದ ಅಭಾವವನ್ನು ಹೇಳಿದ್ದಾಗಿದೆ (ಯಷ್ಟೆ). ಹೀಗೆ ಯಾವಾತನಿಗೆ ಕರ್ಮದ ಅಭಾವ ವನ್ನು ತಿಳಿಸಲಾಯಿತೋ ಅಂಥವನಿಗೇ [1]--

**ಗತಸಙ್ಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।**
**ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥೨೩॥**

೨೩. ಸಂಗವು ಹೋಗಿ ಮುಕ್ತನಾಗಿ ಜ್ಞಾನದಲ್ಲಿ ನಿಂತುಕೊಂಡಿರುವ ಚಿತ್ತವುಳ್ಳವನಾಗಿ ಯಜ್ಞಕ್ಕೋಸ್ಕರವಾಗಿ (ಕರ್ಮವನ್ನು) ಮಾಡುತ್ತಿರುವವನಿಗೆ ಕರ್ಮವು ಸಮಗ್ರವಾಗಿ ಅಡಗಿಹೋಗುವದು.

(ಭಾಷ್ಯ)

೨೮೪. ಗತಸಙ್ಗಸ್ಯ ಸರ್ವತೋ ನಿವೃತ್ತಾಸಕ್ತೇಃ ಮುಕ್ತಸ್ಯ ನಿವೃತ್ತಧರ್ಮಾಧರ್ಮಾದಿಬನ್ಧನಸ್ಯ ಜ್ಞಾನಾವಸ್ಥಿತಚೇತಸಃ ಜ್ಞಾನೇ ಏವ ಅವಸ್ಥಿತಂ ಚೇತಃ ಯಸ್ಯ ಸೋಽಯಂ ಜ್ಞಾನಾವಸ್ಥಿತಚೇತಾಃ ತಸ್ಯ । ಯಜ್ಞಾಯ ಯಜ್ಞನಿರ್ವೃತ್ತ್ಯರ್ಥಮ್ ಆಚರತಃ ನಿರ್ವರ್ತಯತಃ ಕರ್ಮ ಸಮಗ್ರಂ ಸಹ ಅಗ್ರೇಣ ವರ್ತತೇ ಇತಿ ಸಮಗ್ರಂ ಕರ್ಮ ಪ್ರವಿಲೀಯತೇ ವಿನಶ್ಯತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಸಂಗವು ಹೋಗಿ ಎಂದರೆ (ಕರ್ಮದಲ್ಲಿಯೂ) ಯಾವದರಲ್ಲಿಯೂ ಆಸಕ್ತಿಯಿಲ್ಲದೆ, ಮುಕ್ತನಾಗಿ ಎಂದರೆ ಧರ್ಮಾಧರ್ಮಗಳೇ ಮುಂತಾದ ಬಂಧಗಳು ತೊಲಗಿ

---

1. "ಅಂಥ ಹೀಗೆ" ಎಂದು ಮ॥ವ್ಯಾ॥ ಪಾಠಕ್ಕೆ ಅರ್ಥ. ಈ ರೀತಿಯಲ್ಲಿ ಸಂಗವನ್ನು ಕಳೆದುಕೊಂಡು ಮುಕ್ತನಾದ ಜ್ಞಾನಿಗೆ ಕರ್ಮವೆಲ್ಲವೂ ಲಯವಾಗುವದು-ಎಂದು ಮುಂದಿನ ವಾಕ್ಯಕ್ಕೆ ಅದನ್ನು ಅನ್ವಯಿಸಿಕೊಳ್ಳಬೇಕು.

ಹೋಗಿ, ಜ್ಞಾನಾವಸ್ಥಿತಚೇತನಾಗಿ ಎಂದರೆ ಜ್ಞಾನದಲ್ಲಿಯೇ ನೆಲೆನಿಂತುಕೊಂಡಿರುವ ಮನಸ್ಸುಳ್ಳವನಾಗಿ, ಯಜ್ಞಕ್ಕಾಗಿ ಎಂದರೆ **ಯಜ್ಞವಾಗಲೆಂದು ಕರ್ಮವನ್ನು ಮಾಡುತ್ತಿರುವಾತನಿಗೆ**[1] ಕರ್ಮವು ಸಮಗ್ರವಾಗಿ ಅಡಗಿಹೋಗುವದು. ಅಗ್ರ ವೆಂದರೆ ಫಲವು, ಅದರೊಡನೆ ಸೇರಿ ಎಂದರೆ ಫಲಸಹಿತವಾಗಿ ನಾಶವಾಗುವದು ಎಂದರ್ಥ.

## ಜ್ಞಾನಯಜ್ಞ

(ಭಾಷ್ಯ)

೨೭೫. ಕಸ್ಮಾತ್ ಪುನಃ ಕಾರಣಾತ್ ಕ್ರಿಯಮಾಣಂ ಕರ್ಮ ಸ್ವಕಾರ್ಯಾರಂಭಮ್ ಅಕುರ್ವತ್ ಸಮಗ್ರಂ ಪ್ರವಿಲೀಯತೇ ಇತಿ ? ಉಚ್ಯತೇ । ಯತಃ—

(ಭಾಷ್ಯಾರ್ಥ)

(ಆತನು ) ಮಾಡುವ ಕರ್ಮವು ತನ್ನ ಫಲವನ್ನು ಉಂಟುಮಾಡದೆ ಸಮಗ್ರವಾಗಿ ಅಡಗಿಹೋಗುವದಕ್ಕೆ ಕಾರಣವಾದರೂ ಏನು ? ಎಂದರೆ( ಹೇಳುತ್ತೇನೆ ಕೇಳು). ಏಕೆಂದರೆ .—

**ಬ್ರಹ್ಮಾರ್ಪಣಂ ಬ್ರಹ್ಮ ಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।**
**ಬ್ರಹ್ಮೈವ ತೇನ ಗನ್ತವ್ಯಂ ಬ್ರಹ್ಮಕರ್ಮಸಮಾಧಿನಾ ॥೨೪॥**

೨೪. ಅರ್ಪಣವು ಬ್ರಹ್ಮವು, ಹವಿಸ್ಸು ಬ್ರಹ್ಮವು; ಬ್ರಹ್ಮಾಗ್ನಿಯಲ್ಲಿ ಬ್ರಹ್ಮದಿಂದ ಹೋಮಮಾಡಲ್ಪಡುತ್ತದೆ. ಬ್ರಹ್ಮಕರ್ಮದ ಸಮಾಧಿಯಿಂದ ಆತನು ಹೋಗಿ ಪಡೆಯಬೇಕಾದದ್ದು ಬ್ರಹ್ಮವೇ.

(ಭಾಷ್ಯ)

೨೭೬. ಬ್ರಹ್ಮ ಅರ್ಪಣಮ್ । ಯೇನ ಕರಣೇನ ಬ್ರಹ್ಮವಿತ್ ಹವಿಃ ಅಗ್ನೌ ಅರ್ಪಯತಿ ತದ್ ಬ್ರಹ್ಮೈವ ಇತಿ ಪಶ್ಯತಿ, ತಸ್ಯ ಆತ್ಮವ್ಯತಿರೇಕೇಣ ಅಭಾವಂ ಪಶ್ಯತಿ। ಯಥಾ ಶುಕ್ತಿಕಾಯಾಂ ರಜತಾಭಾವಂ ಪಶ್ಯತಿ[2] । ತದುಚ್ಯತೇ ಬ್ರಹ್ಮೈವ ಅರ್ಪ

1. " ಯಜ್ಞವೆಂಬ ಹೆಸರಿನ ನಾರಾಯಣನ ಪ್ರೀತಿಗಾಗಿ " ಎಂಬ ಆ॥ ವ್ಯಾಖ್ಯಾನವು ಪ್ರಕೃತಕ್ಕೆ ಹೊಂದುವದಿಲ್ಲ ; ಜ್ಞಾನವೆಂಬ ಯಜ್ಞವಾಗಲೆಂದು ಎಂಬುದೇ ಸರಿಯಾದ ಅರ್ಥ. ಮುಂದಿನ ಶ್ಲೋಕವನ್ನು ನೋಡಿರಿ.

2. ಮು॥ ಮೈ॥ಗಳಲ್ಲಿ ಈ ವಾಕ್ಯವಿಲ್ಲ.

ಣಮ್ ಇತಿ, ಯಥಾ "ಯದ್ ರಜತಮ್ ತತ್ ಶುಕ್ತಿಕೈವ" ಇತಿ। 'ಬ್ರಹ್ಮ ಅರ್ಪಣಮ್' ಇತಿ ಅಸಮಸ್ತೇ ಪದೇ। ಯತ್ ಅರ್ಪಣಬುದ್ಧ್ಯಾ ಗೃಹ್ಯತೇ ಲೋಕೇ ತತ್ ಅಸ್ಯ ಬ್ರಹ್ಮವಿದಃ ಬ್ರಹ್ಮೈವ ಇತ್ಯರ್ಥಃ। ಬ್ರಹ್ಮ ಹವಿಃ ತಥಾ। ಯತ್ ಹವಿರ್ಬುದ್ಧ್ಯಾ ಗೃಹ್ಯಮಾಣಮ್, ತದ್ ಬ್ರಹ್ಮೈವ ಅಸ್ಯ। ತಥಾ "ಬ್ರಹ್ಮಾಗ್ನೌ" ಇತಿ ಸಮಸ್ತಂ ಪದಮ್। ಅಗ್ನಿರಪಿ ಬ್ರಹ್ಮೈವ ಯತ್ರ ಹೂಯತೇ, ಬ್ರಹ್ಮಣಾ ಕರ್ತ್ರಾ। ಬ್ರಹ್ಮೈವ ಕರ್ತಾ ಇತ್ಯರ್ಥಃ। ಯದ್ ತೇನ ಹುತಂ ಹವನಕ್ರಿಯಾ ತದ್ ಬ್ರಹ್ಮೈವ। ಯತ್ ತೇನ ಗನ್ತವ್ಯಂ ಫಲಂ ತದಪಿ ಬ್ರಹ್ಮೈವ। ಬ್ರಹ್ಮಕರ್ಮಸಮಾಧಿನಾ ಬ್ರಹ್ಮೈವ ಕರ್ಮ ಬ್ರಹ್ಮಕರ್ಮ। ತಸ್ಮಿನ್ ಸಮಾಧಿಃ ಯಸ್ಯ ಸ ಬ್ರಹ್ಮಕರ್ಮಸಮಾಧಿಃ। ತೇನ ಬ್ರಹ್ಮಕರ್ಮಸಮಾಧಿನಾ ಬ್ರಹ್ಮೈವ ಗನ್ತವ್ಯಮ್ ॥

(ಭಾಷ್ಯಾರ್ಥ)

ಅರ್ಪಣವು ಬ್ರಹ್ಮವು. ಬ್ರಹ್ಮಜ್ಞಾನಿಯು ಹವಿಸ್ಸನ್ನು ಅಗ್ನಿಯಲ್ಲಿ ಯಾವ ಕರಣದಿಂದ[1] ಹಾಕುತ್ತಾನೋ ಆ (ಕರಣವು) ಬ್ರಹ್ಮವೇ ಎಂದು (ಅವನು) ಅರಿತಿರುತ್ತಾನೆ, ಅದು ತನ್ನ ಆತ್ಮನಿಗಿಂತ ಬೇರೆಯಾಗಿರುವದಿಲ್ಲವೆಂದು ಕಂಡುಕೊಂಡಿರುತ್ತಾನೆ[2]. ಕಪ್ಪೆಯಚಿಪ್ಪಿನಲ್ಲಿ ಬೆಳ್ಳಿಯಿಲ್ಲವೆಂದು (ಭ್ರಾಂತಿಯನ್ನು ಕಳೆದುಕೊಂಡಾತನು) ಹೇಗೆ ಅರಿತುಕೊಂಡಿರುತ್ತಾನೋ (ಹಾಗೆಯೇ ಇದು). ಆದ್ದರಿಂದ "ಬೆಳ್ಳಿಯೆಂಬುದು ಯಾವದೋ ಅದು ಕಪ್ಪೆಯಚಿಪ್ಪೇ" ಎಂದು (ಜನರು ಹೇಳುವ) ಹಾಗೆ ಬ್ರಹ್ಮವೇ ಅರ್ಪಣವು ಎಂದು (ಇಲ್ಲಿ) ಹೇಳಿರುತ್ತದೆ 'ಬ್ರಹ್ಮ ಅರ್ಪಣಮ್' ಎಂದು ಎರಡು ಸಮಾಸವಾಗದ (ಬೇರೆಬೇರೆಯ) ಪದಗಳು ಯಾವದನ್ನು ಜನರು **ಅರ್ಪಣವೆಂದು ತಿಳಿದುಕೊಂಡಿರುವರೋ ಅದು ಈ ಬ್ರಹ್ಮಜ್ಞಾನಿಗೆ ಬ್ರಹ್ಮವೇ (ಆಗಿರುವದು) ಎಂದರ್ಥ.**[3]

ಇದರಂತೆ ಹವಿಸ್ಸು ಬ್ರಹ್ಮವು, **ಯಾವದನ್ನು (ಜನರು) ಹವಿಸ್ಸು ಎಂಬ ಬುದ್ಧಿಯಿಂದ ಗ್ರಹಿಸುತ್ತಿರುವರೋ ಅದು ಇವನಿಗೆ ಬ್ರಹ್ಮವೇ ಆಗಿರುವದು.** ಮತ್ತು 'ಬ್ರಹ್ಮಾಗ್ನೌ' ಎಂಬುದು ಸಮಸ್ತಪದವು **ಯಾವ ಅಗ್ನಿಯಲ್ಲಿ (ಅವನು)**

---

1. ಇಲ್ಲಿ ಅರ್ಪಣವೆಂದರೆ ಅರ್ಪಿಸುವ ಕ್ರಿಯೆಯಲ್ಲ; ಅರ್ಪಣಕ್ಕೆ ಸಾಧನವಾದ ಸ್ರುಕ್ಕು, ಸ್ರುವ—ಮುಂತಾದವುಗಳು. ಕ್ರಿಯೆಯನ್ನು ಮುಂದೆ 'ಹುತಮ್' ಎಂಬ ಮಾತಿನಿಂದ ಹೇಳಿದೆ.

2 ಬ್ರಹ್ಮಜ್ಞಾನಿಗೆ ಬ್ರಹ್ಮ, ಆತ್ಮ—ಎಂಬ ಎರಡು ಮಾತುಗಳಿಗೂ ಒಂದೇ ಅರ್ಥವಾಗಿರುತ್ತದೆ.

3. ಜ್ಞಾನಿಗೆ ಹೋಮ, ಹೋಮಸಾಧನ, ಅಗ್ನಿ, ಫಲ—ಎಂಬಿವು ಬ್ರಹ್ಮಕ್ಕಿಂತ ಬೇರೆಯಾಗಿ ಕಾಣುವದಿಲ್ಲ ಎಂದರ್ಥ.

**ಹೋಮಮಾಡುತ್ತಾನೋ ಅದೂ ಬ್ರಹ್ಮವೇ.** ಬ್ರಹ್ಮವೆಂಬ ಕರ್ತೃವಿನಿಂದಲೇ (ಆ ಬ್ರಹ್ಮಾಗ್ನಿಯಲ್ಲಿ ಹೋಮವು ಮಾಡಲ್ಪಡುತ್ತಿರುವದು. **ಹೋಮಮಾಡುವ) ಕರ್ತೃವೂ ಬ್ರಹ್ಮವೇ ಎಂದರ್ಥ.** ಅವನು ಹೋಮಮಾಡಿದ್ದು ಎಂದರೆ **ಹೋಮಮಾಡುವದೆಂಬ ಕ್ರಿಯೆಯುಂಟಷ್ಟೆ, ಅದೂ ಬ್ರಹ್ಮವೇ. ಅವನು ಹೋಗಿಪಡೆಯಬೇಕಾಗಿರುವ ಫಲವೆಂಬುದೂ ಬ್ರಹ್ಮವೇ.** ಬ್ರಹ್ಮಕರ್ಮಸಮಾಧಿಯಾದ (ಎಂಬಲ್ಲಿ) **ಬ್ರಹ್ಮವೇ ಕರ್ಮವಾದ್ದರಿಂದ ಬ್ರಹ್ಮಕರ್ಮವೆಂದಿದೆ ;** ಆ (ಕರ್ಮದಲ್ಲಿ) ಮನಸ್ಸನ್ನಿಟ್ಟಿರುವವನು ಬ್ರಹ್ಮಕರ್ಮಸಮಾಧಿಯೆನಿಸುವನು. (ಹೀಗೆ) ಬ್ರಹ್ಮಕರ್ಮಸಮಾಧಿಯಾಗಿರುವ ಆತನು ಹೋಗಿ ಪಡೆಯತಕ್ಕದ್ದೂ ಬ್ರಹ್ಮವೇ (ಆಗಿರುವದು.)

(ಭಾಷ್ಯ)

೨೭೭. ಏವಂ ಲೋಕಸಂಗ್ರಹಂ ಚಿಕೀರ್ಷುಣಾಪಿ ಕ್ರಿಯಮಾಣಂ ಕರ್ಮ ಪರಮಾರ್ಥತಃ ಅಕರ್ಮ । ಬ್ರಹ್ಮಬುದ್ಧ್ಯುಪಮೃದಿತತ್ವಾತ್ । ಏವಂ ಸತಿ ನಿವೃತ್ತಕರ್ಮಣೋಽಪಿ ಸರ್ವಕರ್ಮಸಂನ್ಯಾಸಿನಃ ಸಮ್ಯಗ್ದರ್ಶನಸ್ತುತ್ಯರ್ಥಂ ಯಜ್ಞತ್ವಸಂಪಾದನಂ ಜ್ಞಾನಸ್ಯ ಸುತರಾಮ್ ಉಪಪದ್ಯತೇ । ಯತ್ ಅರ್ಪಣಾದಿ ಅಧಿಯಜ್ಞೇ ಪ್ರಸಿದ್ಧಮ್, ತತ್ ಅಸ್ಯ ಅಧ್ಯಾತ್ಮಂ ಬ್ರಹ್ಮೈವ ಪರಮಾರ್ಥದರ್ಶಿನಃ ಇತಿ । ಅನ್ಯಥಾ ಸರ್ವಸ್ಯ ಬ್ರಹ್ಮತ್ವೇ ಅರ್ಪಣಾದೀನಾಮೇವ ವಿಶೇಷತೋ ಬ್ರಹ್ಮತ್ವಾಭಿಧಾನಮ್ ಅನರ್ಥಕಂ ಸ್ಯಾತ್ ॥

(ಭಾಷ್ಯಾರ್ಥ)

ಹೀಗೆ ಲೋಕಸಂಗ್ರಹವನ್ನು ಮಾಡಬೇಕೆಂಬ ಇಚ್ಛೆಯಿಂದ (ಕರ್ಮವನ್ನು ಮಾಡುವಾತನು) ಮಾಡುತ್ತಿರುವ ಕರ್ಮವುಕೂಡ ನಿಜವಾಗಿ ಅಕರ್ಮವೇ (ಆಗಿರುತ್ತದೆ), ಏಕೆಂದರೆ '(ಇದೆಲ್ಲ) ಬ್ರಹ್ಮವೇ' ಎಂಬ ಬುದ್ಧಿಯಿಂದ ಅದರ ಹುಟ್ಟಡಗಿಹೋಗಿರುತ್ತದೆ[1] **ಹೀಗಿರುವದರಿಂದ ಕರ್ಮವನ್ನು ಬಿಟ್ಟಿರುವ ಸರ್ವಕರ್ಮಸಂನ್ಯಾಸಿಯ ವಿಷಯದಲ್ಲಿಯೂ (ಅವನ) ಸರಿಯಾದ ತಿಳಿವಳಿಕೆಯನ್ನು ಹೊಗಳುವದಕ್ಕಾಗಿ (ಆತನ) ಜ್ಞಾನವನ್ನೇ ಯಜ್ಞವೆಂದು ಕಲ್ಪಿಸಿ[2] ಯಜ್ಞ**

---

1. ಸೂ.ಭಾ. ೩-೪-೧೬.

2. ಲೋಕಸಂಗ್ರಹವನ್ನು ಮಾಡುವವನಿಗೆ ಕರ್ಮವೂ ಬ್ರಹ್ಮ ; ಸಂನ್ಯಾಸಿಗೆ ಜ್ಞಾನವೇ ಸರ್ವಕರ್ಮವೂ ಆಗಿದೆ ಎಂದು ಕಲ್ಪಿಸಿದೆ.

**ವಿಷಯದಲ್ಲಿ ಅರ್ಪಣವೇ ಮುಂತಾದ ಯಾವದು ಪ್ರಸಿದ್ಧವಾಗಿರುತ್ತದೆಯೋ ಅದು ಪರಮಾರ್ಥವನ್ನು ಬಲ್ಲ ಈ (ಜ್ಞಾನಿಗೆ) ತನ್ನೊಳಗಿರುವ ಬ್ರಹ್ಮವೇ ಎಂದು ಹೇಳುವದು ಮತ್ತೂ ಚೆನ್ನಾಗಿ ಹೊಂದುಗೆಯಾಗುತ್ತದೆ.**[1] ಹಾಗಿಲ್ಲದೆ (ಈ ಶ್ಲೋಕಕ್ಕೆ ಬೇರೆಯ ಅರ್ಥವನ್ನು ಮಾಡಿದರೆ) ಎಲ್ಲವೂ ಬ್ರಹ್ಮವೇ ಆಗಿರುವಾಗ ಅರ್ಪಣವೇ ಮುಂತಾದವುಗಳುಮಟ್ಟಿಗೆ ಬ್ರಹ್ಮವೆಂದು ಹೇಳಿರುವದಕ್ಕೆ ಅರ್ಥವಿಲ್ಲದೆಹೋಗುವದು.

(ಭಾಷ್ಯ)

೨೭೮ ತಸ್ಮಾತ್ "ಬ್ರಹ್ಮೈವೇದಂ ಸರ್ವಮ್" ಇತ್ಯಭಿಜಾನತೋ ವಿದುಷಃ[2] ಕರ್ಮಾಭಾವಃ। ಕಾರಕಬುದ್ಧ್ಯಭಾವಾಚ್ಚ । ನ ಹಿ ಕಾರಕಬುದ್ಧಿರಹಿತಂ ಯಜ್ಞಾಖ್ಯಂ ಕರ್ಮ ದೃಷ್ಟಮ್। ಸರ್ವಮೇವ ಅಗ್ನಿಹೋತ್ರಾದಿಕಂ ಕರ್ಮ ಶಬ್ದ ಸಮರ್ಪಿತದೇವತಾವಿಶೇಷಸಂಪ್ರದಾನಾದಿಕಾರಕಬುದ್ಧಿಮತ್ ಕರ್ತೃತ್ವಾಭಿಮಾನ ಫಲಾಭಿಸನ್ಧಿಮಚ್ಚ ದೃಷ್ಟಮ್, ನೋಪಮೃದಿತಕ್ರಿಯಾಕಾರಕಫಲಭೇದಬುದ್ಧಿಮತ್[3] ಕರ್ತೃತ್ವಾಭಿಮಾನಫಲಾಭಿಸನ್ಧಿರಹಿತಂ ವಾ। ಇದಂ ತು ಬ್ರಹ್ಮಬುದ್ಧ್ಯುಪ ಮೃದಿತಾರ್ಪಣಾದಿಕಾರಕಕ್ರಿಯಾಫಲಭೇದಬುದ್ಧಿ ಕರ್ಮ । ಅತಃ ಅಕರ್ಮೈವ ತತ್ । ತಥಾ ಚ ದರ್ಶಿತಮ್–"ಕರ್ಮಣ್ಯಕರ್ಮ ಯಃ ಪಶ್ಯೇತ್" (೪-೧೮) "ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ ಕರೋತಿ ಸಃ" (೪-೨೦), "ಗುಣಾ ಗುಣೇಷು ವರ್ತನ್ತೇ" (೩-೨೮), "ನೈವ ಕಿಂಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್" (೫-೮) ಇತ್ಯಾದಿಭಿಃ। ತಥಾ ಚ ದರ್ಶಯನ್ ತತ್ರ ತತ್ರ ಕ್ರಿಯಾಕಾರಕಫಲಭೇದಬುದ್ಧ್ಯುಪಮರ್ದಂ ಕರೋತಿ । ದೃಷ್ಟಾ ಚ ಕಾಮ್ಯಾಗ್ನಿ ಹೋತ್ರಾದೌ ಕಾಮೋಪಮರ್ದೇನ ಕಾಮ್ಯಾಗ್ನಿಹೋತ್ರಾದಿಹಾನಿಃ। ತಥಾ ಮತಿ ಪೂರ್ವಕಾಮತಿಪೂರ್ವಕಾದೀನಾಂ ಕರ್ಮಣಾಂ ಕಾರ್ಯವಿಶೇಷಸ್ಯ ಆರಮ್ಭಕತ್ವಂ ದೃಷ್ಟಮ್। ತಥಾ ಇಹಾಪಿ ಬ್ರಹ್ಮಬುದ್ಧ್ಯುಪಮೃದಿತಾರ್ಪಣಾದಿಕಾರಕಕ್ರಿಯಾಫಲ ಭೇದಬುದ್ಧೇರ್ಬಾಹ್ಯಚೇಷ್ಟಾಮಾತ್ರೇಣ ಕರ್ಮಾಪಿ ವಿದುಷಃ ಅಕರ್ಮ ಸಂಪದ್ಯತೇ। ಅತ ಉಕ್ತಮ್ "ಸಮಗ್ರಂ ಪ್ರವಿಲೀಯತೇ" (೪-೨೩) ಇತಿ ॥

---

1. ಗೃಹಸ್ಥನಾಗಿ ಕರ್ಮವನ್ನು ಮಾಡುತ್ತಿರುವಂತೆ ತೋರುವ ಜ್ಞಾನಿಗೇ ಕರ್ಮವಿಲ್ಲದಿರುವಾಗ ಸರ್ವಕರ್ಮಸಂನ್ಯಾಸಿಯ ವಿಷಯದಲ್ಲಿ ಹೇಳುವದೇನಿದೆ? ಎಂದರ್ಥ.

2. 'ಜಾನತಃ' ಎಂದಿಷ್ಟೇ ಮ॥ ಮೈ॥

3. 'ಬುದ್ಧಿಮತ್' ಎಂಬುದರ ಬದಲು 'ಬುದ್ಧಿ' ಮ॥ ಮೈ॥

(ಭಾಷ್ಯಾರ್ಥ)

ಆದ್ದರಿಂದ "ಇದೆಲ್ಲವೂ ಬ್ರಹ್ಮವೇ" ಎಂದು ತಿಳಿದಿರುವ ಜ್ಞಾನಿಗೆ ಕರ್ಮವಿರುವದಿಲ್ಲ. ಕಾರಕಗಳು (ಸತ್ಯವೆಂಬ) ಬುದ್ಧಿಯು ಇರುವದಿಲ್ಲವಾದ್ದರಿಂದಲೂ (ಅವನಿಗೆ ಕರ್ಮವಿರುವದಿಲ್ಲ). ಏಕೆಂದರೆ ಕಾರಕಗಳು (ಸತ್ಯವೆಂಬ) ಭಾವನೆಯಿಲ್ಲದೆ ಯಜ್ಞವೆಂಬ ಕರ್ಮವಿರುವದನ್ನು ನಾವು ಕಂಡಿರುವದಿಲ್ಲ. **ಅಗ್ನಿಹೋತ್ರವೇ ಮುಂತಾದ ಕರ್ಮವೆಲ್ಲವೂ ಶಬ್ದ (ಪ್ರಮಾಣವು) ತಿಳಿಸುವ ದೇವತೆಯು, ಸಂಪ್ರದಾನವು-ಎಂದು ಮುಂತಾಗಿರುವ ಕಾರಕಬುದ್ಧಿಯಿಂದ ಕೂಡಿರುವದೂ, (ತಾನು) ಕರ್ತೃವೆಂಬ ಅಭಿಮಾನ, ಫಲದ ಆಶೆ-ಇವುಗಳಿಂದ ಕೂಡಿರುವದೂ ಕಂಡುಬಂದಿರುವದೇ ಹೊರತು ಕ್ರಿಯೆ, ಕಾರಕ, ಫಲ—ಎಂಬ ಭೇದಜ್ಞಾನವು ಹುಟ್ಟಡಗಿದ ಮೇಲಾಗಲಿ (ತಾನು) ಕರ್ತೃವೆಂಬ ಅಭಿಮಾನ, ಫಲದ ಆಶೆ-ಇವುಗಳು ಇಲ್ಲದೆಯಾಗಲಿ (ಆದದ್ದು ಕಂಡು ಬಂದಿರುವದಿಲ್ಲ).**[1] ಈ (ಕರ್ಮವಾದರೋ ಎಲ್ಲವೂ) ಬ್ರಹ್ಮವೆಂಬ ತಿಳಿವಳಿಕೆಯಿಂದ ಅರ್ಪಣವೇ ಮುಂತಾದ ಕಾರಕಗಳು, ಕ್ರಿಯೆ, ಫಲ-ಎಂಬ ಭೇದಬುದ್ಧಿಯು ಹುಟ್ಟಡಗಿಹೋಗಿರುವ ಕರ್ಮವಾಗಿರುತ್ತದೆ. ಆದ್ದರಿಂದ (ನಿಜವಾಗಿ) ಇದು ಅಕರ್ಮವೇ. ಆದ್ದರಿಂದಲೇ "ಕರ್ಮದಲ್ಲಿ ಅಕರ್ಮವನ್ನು ಯಾವನು ಕಂಡುಕೊಳ್ಳುವನೋ" (೪-೧೮), "ಕರ್ಮದಲ್ಲಿ ತೊಡಗಿದ್ದರೂ ಆತನು ಯಾವ (ಕರ್ಮವನ್ನೂ) ಮಾಡುತ್ತಿರುವದಿಲ್ಲ" ( -೨೦), "ಗುಣಗಳು ಗುಣಗಳಲ್ಲಿ ಪ್ರವರ್ತಿಸುತ್ತಿರುವವು" (೩-೨೮), "ತತ್ತ್ವವನ್ನು ಬಲ್ಲವನು (ನಾನು) ಏನೂ ಮಾಡುತ್ತಿಲ್ಲ ಎಂದು ತಿಳಿದಿರುವನು" (೫-೮)—ಮುಂತಾದ ವಾಕ್ಯಗಳಿಂದ (ಭಗವಂತನು) ಹೀಗೆಂದು ತಿಳಿಸಿರುತ್ತಾನೆ ಹಾಗೆ ತಿಳಿಸಿರುವದರಿಂದ ಆಯಾ ಕಡೆಯಲ್ಲಿ ಕ್ರಿಯೆ, ಕಾರಕ, ಫಲ-ಎಂಬ ಭೇದಬುದ್ಧಿಯನ್ನು ಹುಟ್ಟಡಗಿಸಿರುತ್ತಾನೆ. ಕಾಮ್ಯಾಗ್ನಿಹೋತ್ರವೇ ಮುಂತಾದ ಕಡೆಯಲ್ಲಿ ಕಾಮವು ಹುಟ್ಟಡಗಲು (ಅದು) ಕಾಮ್ಯಾಗ್ನಿಹೋತ್ರವೇ ಮುಂತಾದ (ಕರ್ಮ)ವಲ್ಲದೆ ಹೋಗುವದೂ ಕಂಡುಬಂದಿದೆ. ಅದರಂತೆ ಬುದ್ಧಿಪೂರ್ವಕವಾಗಿ ಮಾಡುವ (ಕರ್ಮಗಳಿಗೂ) ಬುದ್ಧಿಪೂರ್ವಕವಾಗಿಲ್ಲದೆ ಮಾಡುವ

---

1 ಅಗ್ನಿಯು ದೇವತೆ, (ಸಂಪ್ರದಾನ) ಹೋಮವು ಕ್ರಿಯೆ; ಹಾಲು, ಮೊಸರು ಮುಂತಾದದ್ದು ಕರ್ಮ; ಸ್ರುಕ್ಕು, ಸ್ರುವ-ಮುಂತಾದದ್ದು ಕರಣ; ಮಂತ್ರಪೂತವಾದ ಅಗ್ನಿಯು ಅಧಿಕರಣ; ನಾನು ಕರ್ತೃ; ಸ್ವರ್ಗವು ಫಲವು-ಎಂದು ಕ್ರಿಯಾಕಾರಕಫಲಗಳಲ್ಲಿ ಸತ್ಯತ್ವ ಬುದ್ಧಿಯಿರುವವನು ಮಾತ್ರ ಕರ್ಮಕ್ಕೆ ಅಧಿಕಾರಿ.

(ಕರ್ಮಗಳಿಗೂ)[1] ಬೇರೆಬೇರೆಯ ಫಲವು ಆಗುವದೂ ಕಂಡಿರುತ್ತದೆ. ಆದರಂತೆ ಇಲ್ಲಿಯೂ (ಇದೆಲ್ಲವೂ) ಬ್ರಹ್ಮವೇ ಎಂಬ ಬುದ್ಧಿಯಿಂದ ಅರ್ಪಣವೇ ಮುಂತಾದ ಕಾರಕಗಳು, ಕ್ರಿಯೆ, ಫಲ–ಎಂಬ ಭೇದಬುದ್ಧಿಯು ಹುಟ್ಟಡಗಿಹೋಗಿರುವ ಜ್ಞಾನಿಯ ಕರ್ಮವೂ ಹೊರಗಿನ ವ್ಯಾಪಾರಮಾತ್ರವಾಗಿರುವದರಿಂದ ಅಕರ್ಮವೇ ಆಗುವದು.[2] ಆದ್ದರಿಂದಲೇ "ಸಮಗ್ರವಾಗಿ ಅಡಗಿಹೋಗುತ್ತದೆ" ಎಂದು (ಹಿಂದಿನ ಶ್ಲೋಕದಲ್ಲಿ) ಹೇಳಿರುತ್ತದೆ

## ವೃತ್ತಿಕಾರರ ತಪ್ಪು ವ್ಯಾಖ್ಯಾನ

(ಭಾಷ್ಯ)

೨೭೯ ಅತ್ರ ಕೇಚಿತ್ ಆಹುಃ । ಯದ್ ಬ್ರಹ್ಮ ತತ್ ಅರ್ಪಣಾದೀನಿ । ಬ್ರಹ್ಮೈವ ಕಿಲ ಅರ್ಪಣಾದಿನಾ ಪಞ್ಚವಿಧೇನ ಕಾರಕಾತ್ಮನಾ ವ್ಯವಸ್ಥಿತಂ ಸತ್ ತದೇವ ಕರ್ಮ ಕರೋತಿ । ತತ್ರ ನಾರ್ಪಣಾದಿಬುದ್ಧಿಃ ನಿವರ್ತ್ಯತೇ, ಕಿಂ ತು ಅರ್ಪಣಾದಿಷು ಬ್ರಹ್ಮಬುದ್ಧಿಃ ಆಧೀಯತೇ । ಯಥಾ ಪ್ರತಿಮಾದೌ ವಿಷ್ಣ್ವಾದಿಬುದ್ಧಿಃ, ಯಥಾ ವಾ ನಾಮಾದೌ ಬ್ರಹ್ಮಬುದ್ಧಿಃ ಇತಿ[3] ॥

(ಭಾಷ್ಯಾರ್ಥ)

ಇಲ್ಲಿ **ಕೆಲವರು** ಹೇಳಿರುವದೇನೆಂದರೆ. ಬ್ರಹ್ಮವೆಂಬುದು ಯಾವದೋ ಅದು ಅರ್ಪಣ ಮುಂತಾದದ್ದು. ಬ್ರಹ್ಮವೇ ಅರ್ಪಣವೇ ಮುಂತಾದ ಐದು ಬಗೆಯ ಕಾರಕಗಳ ರೂಪದಲ್ಲಿದ್ದುಕೊಂಡು ಅದೇ ಕರ್ಮವನ್ನು ಮಾಡುತ್ತದೆಯಂತೆ. ಇಲ್ಲಿ ಅರ್ಪಣವೇ ಮುಂತಾದ(ವುಗಳಲ್ಲಿ ಅರ್ಪಣಾದಿ) ಬುದ್ಧಿಯನ್ನು ತೆಗೆದುಹಾಕಿರುವದಿಲ್ಲ, ಮತ್ತೇನೆಂದರೆ ಅರ್ಪಣವೇ ಮುಂತಾದವುಗಳಲ್ಲಿ ಬ್ರಹ್ಮಬುದ್ಧಿಯನ್ನು (ಮಾಡಿಕೊಳ್ಳಬೇಕೆಂದು) ವಿಧಿಸಿರುತ್ತದೆ. ಹೇಗೆ **ಪ್ರತಿಮೆಯೇ** ಮುಂತಾದದ್ದರಲ್ಲಿ **ವಿಷ್ಣುವೇ**

---

1. "ಮತಿಪೂರ್ವಕಾಮತಿಪೂರ್ವಕಾದೀನಾಮ್" ಎಂಬ ಭಾಷ್ಯವು ವ್ಯಾಖ್ಯಾನಸಮ್ಮತವಾದರೂ ಇಲ್ಲಿ ಆದಿ ಎಂಬ ಮಾತು ಹೆಚ್ಚೆಂದು ತೋರುತ್ತದೆ. ಅಥವಾ ಕರ್ಮಾದೀನಾಮ್' ಎಂದಿರಬೇಕು; ಆಗ ಕರ್ಮ, ಅಕರ್ಮ, ವಿಕರ್ಮ-ಇವುಗಳೆಂದು ಅರ್ಥವಾಗುತ್ತದೆ.

2. ಯಾವ ಫಲವನ್ನೂ ಕೊಡುವದಿಲ್ಲ.

3. "ಏವಮ್, ಇತಿ"

ಮುಂತಾದ ಬುದ್ಧಿಯನ್ನು (ಶಾಸ್ತ್ರದಲ್ಲಿ ವಿಧಿಸಿರುತ್ತದೆಯೋ) ಅಥವಾ **ನಾಮವೇ**
ಮುಂತಾದದ್ದರಲ್ಲಿ ಬ್ರಹ್ಮಬುದ್ಧಿಯನ್ನು(ವಿಧಿಸಿರುತ್ತದೆಯೋ)[1] ಅದರಂತೆಯೇ ಇದು.[2]

## ವೃತ್ತಿಕಾರರ ಮತದಲ್ಲಿ ದೋಷಗಳು

(ಭಾಷ್ಯ)

೨೮೦. ಸತ್ಯಮ್, ಏವಮಪಿ ಸ್ಯಾತ್ ಯದಿ ಜ್ಞಾನಯಜ್ಞಸ್ತುತ್ಯರ್ಥಂ ಪ್ರಕರಣಂ ನ ಸ್ಯಾತ್ । ಅತ್ರ ತು ಸಮ್ಯಗ್ದರ್ಶನಂ ಜ್ಞಾನಯಜ್ಞಶಬ್ದಿತಮ್ ಅನೇಕಾನ್ ಯಜ್ಞಶಬ್ದಿತಾನ್ ಕ್ರಿಯಾವಿಶೇಷಾನ್ ಉಪನ್ಯಸ್ಯ "ಶ್ರೇಯಾನ್ ದ್ರವ್ಯಮಯಾದ್ ಯಜ್ಞಾಜ್ಜ್ಞಾನಯಜ್ಞಃ" (೪-೩೩) ಇತಿ ಜ್ಞಾನಂ ಸ್ತೌತಿ । ಅತ್ರ ಚ ಸಮರ್ಥಮಿದಂ ವಚನಂ 'ಬ್ರಹ್ಮಾರ್ಪಣಮ್' ಇತ್ಯಾದಿ ಜ್ಞಾನಸ್ಯ ಯಜ್ಞತ್ವ ಸಂಪಾದನೇ । ಅನ್ಯಥಾ ಸರ್ವಸ್ಯ ಬ್ರಹ್ಮತ್ವೇ ಅರ್ಪಣಾದೀನಾಮೇವ ವಿಶೇಷತೋ ಬ್ರಹ್ಮತ್ವಾಭಿಧಾನಮ್ ಅನರ್ಥಕಂ ಸ್ಯಾತ್ । ಯೇ ತು ಅರ್ಪಣಾದಿಷು ಪ್ರತಿಮಾಯಾಂ ವಿಷ್ಣುದೃಷ್ಟಿವದ್ ಬ್ರಹ್ಮದೃಷ್ಟಿಃ ಕ್ಷಿಪ್ಯತೇ ನಾಮಾದಿಷ್ವಿವ ಚ ಇತಿ ಬ್ರುವತೇ, ನ ತೇಷಾಂ ಬ್ರಹ್ಮವಿದ್ಯಾ ಉಕ್ತಾ ಇಹ ವಿವಕ್ಷಿತಾ ಸ್ಯಾತ್ । ಅರ್ಪಣಾದಿ ವಿಷಯತ್ವಾತ್ ಜ್ಞಾನಸ್ಯ । ನ ಚ ದೃಷ್ಟಿಸಂಪಾದನಜ್ಞಾನೇನ ಮೋಕ್ಷಫಲಂ ಪ್ರಾಪ್ಯತೇ । "ಬ್ರಹ್ಮೈವ ತೇನ ಗನ್ತವ್ಯಮ್" ಇತಿ ಚ ಉಚ್ಯತೇ । ವಿರುದ್ಧಂ ಚ ಸಮ್ಯಗ್ದರ್ಶನಮನ್ತರೇಣ ಮೋಕ್ಷಫಲಂ ಪ್ರಾಪ್ಯತೇ ಇತಿ । ಪ್ರಕೃತವಿರೋಧಶ್ಚ ಸಮ್ಯಗ್ದರ್ಶನಂ ಚ ಪ್ರಕೃತಮ್ "ಕರ್ಮಣ್ಯಕರ್ಮ ಯಃ ಪಶ್ಯೇತ್" (೪-೧೮) ಇತ್ಯತ್ರ । ಅನ್ತೇ ಚ ಸಮ್ಯಗ್ದರ್ಶನಸ್ಯೈವ[3] ಉಪಸಂಹಾರಾತ್ । "ಶ್ರೇಯಾನ್ ದ್ರವ್ಯಮಯಾದ್ ಯಜ್ಞಾಜ್ಜ್ಞಾನಯಜ್ಞಃ"(೪-೩೩), "ಜ್ಞಾನಂ ಲಬ್ಧ್ವಾ ಪರಾಂ ಶಾನ್ತಿಮ್" (೪-೩೯) ಇತ್ಯಾದಿನಾ ಸಮ್ಯಗ್ದರ್ಶನಸ್ತುತಿಮೇವ ಕುರ್ವನ್ ಉಪಕ್ಷೀಣೋಽಧ್ಯಾಯಃ । ತತ್ರ ಅಕಸ್ಮಾತ್ ಅರ್ಪಣಾದೌ ಬ್ರಹ್ಮದೃಷ್ಟಿಃ ಅಪ್ರಕರಣೇ ಪ್ರತಿಮಾಯಾಮಿವ ವಿಷ್ಣುದೃಷ್ಟಿಃ ಉಚ್ಯತೇ ಇತ್ಯನುಪಪನ್ನಮ್ । ತಸ್ಮಾತ್ ಯಥಾವ್ಯಾಖ್ಯಾತಾರ್ಥ ಏವಾಯಂ ಶ್ಲೋಕಃ ॥

---

1. ಇದು ಪ್ರತೀಕೋಪಾಸನೆ ಛಾ.ಭಾ. ೭-೧-೫ ನೋಡಿ.

2 ಈ ಮತದಲ್ಲಿ ಎಲ್ಲವೂ ಬ್ರಹ್ಮವೆಂಬ ಜ್ಞಾನವನ್ನು ಈ ಶ್ಲೋಕದಲ್ಲಿ ಹೇಳಿಲ್ಲ ಬ್ರಹ್ಮವು ಅರ್ಪಣಾದಿರೂಪದಿಂದ ಇರುವದೆಂದು ಉಪಾಸನೆಮಾಡಬೇಕು ಎಂದು ವಿಧಿಸಿರುತ್ತದೆ.

3 'ಸಮ್ಯಗ್ದರ್ಶನಂ ತಸ್ಯೈವ" ಎಂಬ ಅ॥ನಿ॥ವಾ॥ಗಳಲ್ಲಿ ''ಸಮ್ಯಗ್ದರ್ಶನಂ' ಎಂಬ ಮಾತು ಹೆಚ್ಚು

(ಭಾಷ್ಯಾರ್ಥ)

ನಿಜ, ಈ ಪ್ರಕರಣವು ಜ್ಞಾನಯಜ್ಞದ ಸ್ತುತಿಗಾಗಿ ಹೊರಡದೆ ಇದ್ದಿದ್ದರೆ ಹೀಗೂ ಆಗಬಹುದಾಗಿತ್ತು. ಆದರೆ ಇಲ್ಲಿ ಜ್ಞಾನಯಜ್ಞವೆಂಬ ಹೆಸರಿನ ಸರಿಯಾದ ಜ್ಞಾನವನ್ನೇ ಹೇಳಿರುತ್ತದೆ. ಯಜ್ಞಗಳೆಂಬ ಹೆಸರಿನ ಆಯಾ ಕರ್ಮಗಳನ್ನು ಬಹಳವಾಗಿ ಹೇಳಿ "ದ್ರವ್ಯಮಯವಾದ ಯಜ್ಞಕ್ಕಿಂತ ಜ್ಞಾನಯಜ್ಞವು ಹೆಚ್ಚು ಒಳ್ಳೆಯದು" (೪-೩೩) ಎಂದು ಜ್ಞಾನವನ್ನು (ಭಗವಂತನು) ಹೊಗಳಿರುತ್ತಾನೆ.[1] ಇಲ್ಲಿ "ಬ್ರಹ್ಮಾರ್ಪಣಂ" ಮುಂತಾದ ವಚನವು ಜ್ಞಾನಕ್ಕೆ ಯಜ್ಞದ ರೂಪವನ್ನು ಕೊಟ್ಟು ವರ್ಣಿಸುವದಕ್ಕೆ (ಬಂದಿದೆ ಎಂದು ಇಟ್ಟುಕೊಂಡರೆ) ಸಾರ್ಥಕವಾಗುವದು. ಹಾಗಿಲ್ಲದೆ (ಬೇರೆಯ ಅರ್ಥವನ್ನು ಮಾಡಿದರೆ) ಎಲ್ಲವೂ ಬ್ರಹ್ಮವೇ ಆಗಿರುವಲ್ಲಿ ಅರ್ಪಣಾದಿಗಳು ಬ್ರಹ್ಮವೆಂದು ವಿಶೇಷವಾಗಿ (ಎತ್ತಿ) ಹೇಳಿರುವದು ವ್ಯರ್ಥವಾಗುವದು.

ಆದರೆ ಯಾರು ಪ್ರತಿಮೆಯಲ್ಲಿ ವಿಷ್ಣುದೃಷ್ಟಿಯನ್ನೂ ನಾಮಾದಿಗಳಲ್ಲಿ ಬ್ರಹ್ಮದೃಷ್ಟಿಯನ್ನೂ ಮಾಡಿಕೊಳ್ಳಬೇಕೆಂದು ವಿಧಿಸಿರುವಂತೆ ಅರ್ಪಣವೇ ಮುಂತಾದವುಗಳಲ್ಲಿ ಬ್ರಹ್ಮದೃಷ್ಟಿಯನ್ನು ಮಾಡಿಕೊಳ್ಳಬೇಕೆಂದು ಇಲ್ಲಿ ವಿಧಿಸಿದೆ ಎಂದು ಯಾರು ಹೇಳುತ್ತಾರೋ, ಅವರ (ಮತದಲ್ಲಿ) ಇಲ್ಲಿ ಹಿಂದೆ ಹೇಳಿದ ಬ್ರಹ್ಮವಿದ್ಯೆಯನ್ನು ಹೇಳಬೇಕೆಂಬ ಅಭಿಪ್ರಾಯವಿಲ್ಲವೆಂದಾಗುವದು.[2] ಏಕೆಂದರೆ (ಅವರ ಮತದಂತೆ ಇಲ್ಲಿ ಹೇಳಿರುವ) ಜ್ಞಾನಕ್ಕೆ ಅರ್ಪಣವೇ ಮುಂತಾದದ್ದೇ ವಿಷಯವಾಗಿರುತ್ತದೆ.[3] ಇದಲ್ಲದೆ ಹೀಗೆ (ಒಂದರಲ್ಲಿ ಬ್ರಹ್ಮ) ದೃಷ್ಟಿಯನ್ನು ಮಾಡಿಕೊಳ್ಳುವ (ರೂಪದ) ಜ್ಞಾನದಿಂದ ಮೋಕ್ಷವು ಸಿಕ್ಕಲಾರದು.[4] ಆದರೆ (ಇಲ್ಲಿ) "ಅವನು ಹೋಗಿ ಪಡೆಯತಕ್ಕದ್ದು ಬ್ರಹ್ಮವೇ" ಎಂದು ಹೇಳಿರುತ್ತದೆ. ಸರಿಯಾದ (ಆತ್ಮ) ಜ್ಞಾನವಿಲ್ಲದೆ

---

1. ಕ್ರಿಯಾರೂಪವಾದ ಯಜ್ಞಗಳನ್ನು ಹೇಳಿ ಕ್ರಿಯೆಯಲ್ಲದ ಜ್ಞಾನವನ್ನು ಎಲ್ಲಾ ಯಜ್ಞಗಳಿಗಿಂತಲೂ ಹೆಚ್ಚಿನದು ಎಂದು ಹೇಳಿರುವದು ಜ್ಞಾನವನ್ನು ಹೊಗಳುವದಕ್ಕೆ.

2. ಇಲ್ಲಿಗೆ ಜ್ಞಾನಪ್ರಕರಣವು ಮುಗಿಯಿತೆಂದೂ ಈಗ ದೃಷ್ಟಿಸಂಪಾದನರೂಪವಾದ ಉಪಾಸನೆಯು ಪ್ರಾರಂಭವಾಯಿತೆಂದೂ ಹೇಳಿದಂತೆ ಆಗುವದು

3. ಅರ್ಪಣವೇ ಮುಂತಾದದ್ದು ನಿಜವಾಗಿ ಬ್ರಹ್ಮವು ಎಂಬ ಸಿದ್ಧಾಂತದಲ್ಲಿ ಬ್ರಹ್ಮವನ್ನು ಅರಿತುಕೊಳ್ಳಬೇಕೆಂಬುದು ಶ್ಲೋಕದ ಅರ್ಥ; ಬ್ರಹ್ಮವು ಅರ್ಪಣವೇ ಮುಂತಾದ ರೂಪದಲ್ಲಿರುವದೆಂದು ಭಾವಿಸಬೇಕೆಂಬ ವೃತ್ತಿಕಾರರ ಮತದಲ್ಲಿ ಉಪಾಸನೆಗೆ ವಿಷಯವು ಪ್ರತೀಕವಾದ ಅರ್ಪಣಾದಿಗಳು.

4. ಏಕೆಂದರೆ ಇಂಥ ಉಪಾಸನೆಯು ಯಥಾರ್ಥಜ್ಞಾನವಾಗಲಾರದು.

ಮೋಕ್ಷವೆಂಬ ಫಲವು ಸಿಕ್ಕುತ್ತದೆ ಎಂಬುದು (ಯುಕ್ತಿ) ವಿರುದ್ಧವೂ ಆಗಿರುತ್ತದೆ. (ಈ ವೃತ್ತಿಕಾರರ ಮತವು) ಪ್ರಕರಣಕ್ಕೂ ವಿರುದ್ಧವಾಗಿರುತ್ತದೆ. (ಹೇಗೆಂದರೆ) "ಕರ್ಮಣ್ಯಕರ್ಮ ಯಃ ಪಶ್ಯೇತ್" ಎಂಬಲ್ಲಿಂದ ಸರಿಯಾದ ಜ್ಞಾನವನ್ನು (ತಿಳಿಸುವದಕ್ಕೆ) ಪ್ರಾರಂಭಿಸಿರುತ್ತದೆ. ಕೊನೆಯಲ್ಲಿಯೂ ಸರಿಯಾದ ಜ್ಞಾನವನ್ನೇ ಉಪಸಂಹಾರಮಾಡಿರುವದರಿಂದಲೂ (ಹೀಗೆಂದು ತಿಳಿಯಬೇಕು.) ಶ್ರೇಯಾನ್ ದ್ರವ್ಯಮಯಾದ್ ಯಜ್ಞಾಜ್ಜ್ಞಾನಯಜ್ಞಃ" (ದ್ರವ್ಯಮಯವಾದ ಯಜ್ಞಕ್ಕಿಂತ ಜ್ಞಾನಯಜ್ಞವು ಹೆಚ್ಚಿನದು ೪-೩೩), "ಜ್ಞಾನಂ ಲಬ್ಧ್ವಾ ಪರಾಂ ಶಾನ್ತಿಮ್" ಜ್ಞಾನವನ್ನು ಪಡೆದುಕೊಂಡರೆ ಹೆಚ್ಚಿನ ಶಾಂತಿಯನ್ನು (ತಡವಿಲ್ಲದೆ ಪಡೆದುಕೊಳ್ಳುವನು ೪-೩೯)–ಎಂದು ಮುಂತಾಗಿ ಸರಿಯಾದ ಜ್ಞಾನವನ್ನು ಹೊಗಳುವದರಲ್ಲಿಯೇ (ಈ) ಅಧ್ಯಾಯವು ಕೊನೆಗಂಡಿರುತ್ತದೆ ಹೀಗಿರುವಲ್ಲಿ[1] ಇದ್ದಕ್ಕಿದ್ದಹಾಗೆಯೇ (ಪ್ರಕರಣವನ್ನು ಕೈಬಿಟ್ಟು) ಪ್ರತಿಮೆಯಲ್ಲಿ ವಿಷ್ಣುದೃಷ್ಟಿಯನ್ನಿಡುವಂತೆ ಅರ್ಪಣವೇ ಮುಂತಾದದ್ದರಲ್ಲಿ ಬ್ರಹ್ಮದೃಷ್ಟಿಯನ್ನು (ಮಾಡಿಕೊಳ್ಳಬೇಕೆಂದು) ಹೇಳಿದೆ ಎನ್ನುವದು ಹೊಂದಲಾರದು. ಆದ್ದರಿಂದ ಮೇಲೆ (ನಾವು) ವ್ಯಾಖ್ಯಾನಮಾಡಿರುವಂತೆಯೇ (ಈ) ಶ್ಲೋಕಕ್ಕೆ ಅರ್ಥವು.

## ಬಗೆಬಗೆಯ ಯಜ್ಞಗಳು

(ಭಾಷ್ಯ)

೨೮೧. ತತ್ರ ಅಧುನಾ ಸಮ್ಯಗ್ದರ್ಶನಸ್ಯ ಯಜ್ಞತ್ವಂ ಸಂಪಾದ್ಯ ತತ್ಸ್ತುತ್ಯರ್ಥಮ್ ಅನ್ಯೇಽಪಿ ಯಜ್ಞಾ ಉಪಕ್ಷಿಪ್ಯನ್ತೇ—

(ಭಾಷ್ಯಾರ್ಥ)

ಹೀಗೆ ಸರಿಯಾದ ಜ್ಞಾನಕ್ಕೆ ಯಜ್ಞದ ರೂಪವನ್ನು ಕೊಟ್ಟು (ವರ್ಣಿಸಿ) ಅದನ್ನು ಹೊಗಳುವದಕ್ಕಾಗಿ ಬೇರೆಯ ಯಜ್ಞಗಳನ್ನೂ ಇಲ್ಲಿ ತಿಳಿಸುತ್ತಾನೆ:—

**ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ ।**
**ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ ॥ ೨೫ ॥**

---

1. ಉಪಕ್ರಮ, ಉಪಸಂಹಾರ–ಇವೆರಡರಿಂದಲೂ ಪ್ರಕರಣವು ಆತ್ಮಜ್ಞಾನದ ವಿಷಯವಾದದ್ದೆಂದು ನಿಶ್ಚಿತವಾಗಿರುವಲ್ಲಿ.

೨೫. ಕೆಲವರು ಯೋಗಿಗಳು ದೈವಯಜ್ಞವನ್ನೇ ಉಪಾಸನೆಮಾಡುತ್ತಾರೆ. ಮತ್ತೆ ಕೆಲವರು ಬ್ರಹ್ಮಾಗ್ನಿಯಲ್ಲಿ ಯಜ್ಞದಿಂದಲೇ ಯಜ್ಞವನ್ನು ಹೋಮಮಾಡುತ್ತಾರೆ.

(ಭಾಷ್ಯ)

೨೮೨. ದೈವಮೇವ ದೇವಾಃ ಇಜ್ಯನ್ತೇ ಯೇನ ಯಜ್ಞೇನ ಅಸೌ ದೈವೋ ಯಜ್ಞಃ। ತಮೇವ ಅಪರೇ ಯಜ್ಞಂ ಯೋಗಿನಃ ಕರ್ಮಿಣಃ ಪರ್ಯುಪಾಸತೇ ಕುರ್ವನ್ತಿ ಇತ್ಯರ್ಥಃ। ಬ್ರಹ್ಮಾಗ್ನೌ "ಸತ್ಯಂ ಜ್ಞಾನಮನನ್ತಂ ಬ್ರಹ್ಮ" (ತೈ. ೨-೧), "ವಿಜ್ಞಾನಮಾನನ್ದಂ ಬ್ರಹ್ಮ" (ಬೃ. ೩-೯-೨೮), "ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ" (ಬೃ. ೩-೪-೧) ಇತ್ಯಾದಿವಚನೋಕ್ತಮ್, ಅಶನಾಯಾದಿಸರ್ವಸಂಸಾರಧರ್ಮವರ್ಜಿತಮ್, "ನೇತಿ ನೇತಿ" (ಬೃ. ೪-೪-೨೨) ಇತಿ ನಿರಸ್ತಾಶೇಷವಿಶೇಷಮ್, ಬ್ರಹ್ಮಶಬ್ದೇನ ಉಚ್ಯತೇ। ಬ್ರಹ್ಮ ಚ ತತ್ ಅಗ್ನಿಶ್ಚ। ಸಃ ಹೋಮಾಧಿಕರಣತ್ವವಿವಕ್ಷಯಾ ಬ್ರಹ್ಮಾಗ್ನಿಃ। ತಸ್ಮಿನ್ ಬ್ರಹ್ಮಾಗ್ನೌ ಅಪರೇ ಅನ್ಯೇ ಬ್ರಹ್ಮವಿದಃ ಯಜ್ಞಂ ಯಜ್ಞಶಬ್ದವಾಚ್ಯ ಆತ್ಮಾ। ಆತ್ಮನಾಮಸು ಯಜ್ಞಶಬ್ದಸ್ಯ ಪಾಠಾತ್। ತಮ್ ಆತ್ಮಾನಂ ಯಜ್ಞಂ ಪರಮಾರ್ಥತಃ ಪರಮೇವ ಬ್ರಹ್ಮ ಸನ್ತಮ್ ಬುದ್ಧ್ಯಾದ್ಯುಪಾಧಿಸಂಯುಕ್ತಮ್, ಅಧ್ಯಸ್ತಸರ್ವೋಪಾಧಿಧರ್ಮಕಮ್ ಆಹುತಿರೂಪಂ ಯಜ್ಞೇನೈವ ಆತ್ಮನೈವ ಉಕ್ತಲಕ್ಷಣೇನ ಉಪಜುಹ್ವತಿ ಪ್ರಕ್ಷಿಪನ್ತಿ। ಸೋಪಾಧಿಕಸ್ಯ ಆತ್ಮನಃ ನಿರುಪಾಧಿಕೇನ ಪರಬ್ರಹ್ಮರೂಪೇಣೈವ ಯದ್ ದರ್ಶನಮ್ ಸ ತಸ್ಮಿನ್ ಹೋಮಃ। ತಂ ಕುರ್ವನ್ತಿ ಬ್ರಹ್ಮಾತ್ಮೈಕತ್ವದರ್ಶನನಿಷ್ಠಾಃ ಸಂನ್ಯಾಸಿನಃ ಇತ್ಯರ್ಥಃ ॥

(ಭಾಷ್ಯಾರ್ಥ)

ದೈವ(ವಾಗಿರುವ)–ದೇವತೆಗಳನ್ನು ಕುರಿತು ಯಾಗಮಾಡುವದು ಯಾವ ಯಜ್ಞದಿಂದಲೋ ಅದು 'ದೈವ' ಯಜ್ಞವು. ಆ–ಯಜ್ಞವನ್ನೇ ಕೆಲವರು ಯೋಗಿಗಳು ಎಂದರೆ ಕರ್ಮಿಗಳು ಉಪಾಸನೆಮಾಡುತ್ತಾರೆ, ಮಾಡುತ್ತಾರೆ ಎಂದರ್ಥ. (ಮತ್ತೆ ಕೆಲವರು) ಬ್ರಹ್ಮಾಗ್ನಿಯಲ್ಲಿ "ಸತ್ಯವೂ ಜ್ಞಾನವೂ ಅನಂತವೂ ಆಗಿರುವದು ಬ್ರಹ್ಮವು" (ತೈ. ೨-೧), "ವಿಜ್ಞಾನವೂ ಆನಂದವೂ ಆಗಿರುವದು ಬ್ರಹ್ಮವು" (ಬೃ. ೩-೯-೨೮), "ಯಾವದು ಪರೋಕ್ಷವಲ್ಲದ ನೇರಾಗಿರುವ ಬ್ರಹ್ಮವೋ ಯಾವದು ಎಲ್ಲಕ್ಕೂ ಒಳಗಿನ ಆತ್ಮನೋ" (ಬೃ. ೩-೪-೧)—ಮುಂತಾದ ವಚನಗಳಲ್ಲಿ ಹೇಳಿರುವದಾಗಿಯೂ ಹಸಿವು ಮುಂತಾದ ಯಾವ ಸಂಸಾರಧರ್ಮವೂ ಇಲ್ಲ

ದ್ದಾಗಿಯೂ, "ಇದಲ್ಲ, ಇದಲ್ಲ" (೪-೪-೨೨) ಎಂದು (ಶ್ರುತಿಯು) ಎಲ್ಲಾ ವಿಶೇಷಗಳನ್ನೂ ಅಲ್ಲಗಳೆದಿರುವ (ವಸ್ತುವಾಗಿಯೂ ಇರುವದನ್ನೇ) ಬ್ರಹ್ಮಶಬ್ದವು ಹೇಳುತ್ತದೆ. ಬ್ರಹ್ಮವೆಂಬ ಅಗ್ನಿಯಾದ್ದರಿಂದ (ಇದು ಬ್ರಹ್ಮಾಗ್ನಿ ಎನಿಸುತ್ತದೆ.) ಹೋಮವನ್ನು ಮಾಡುವ ಅಧಿಕರಣವಿದೆಂಬುದನ್ನು ತಿಳಿಸುವದಕ್ಕಾಗಿ (ಇದನ್ನು) 'ಬ್ರಹ್ಮಾಗ್ನಿ' ಎಂದಿದೆ. ಆ ಬ್ರಹ್ಮಾಗ್ನಿಯಲ್ಲಿ ಮತ್ತೆ ಕೆಲವರು ಎಂದರೆ ಬ್ರಹ್ಮ ಜ್ಞಾನಿಗಳು ಯಜ್ಞವನ್ನು-ಯಜ್ಞ ಎಂಬ ಮಾತಿಗೆ ಆತ್ಮನೆಂದು ಅರ್ಥ. ಏಕೆಂದರೆ (ನಿಘಂಟುವಿನಲ್ಲಿ) ಆತ್ಮನ ಹೆಸರುಗಳ ನಡುವೆ 'ಯಜ್ಞ' ಎಂಬುದನ್ನೂ ಹೇಳಿದೆ. **ನಿಜವಾಗಿ ನೋಡಿದರೆ ಬ್ರಹ್ಮವೇ ಆಗಿರುವವನಾಗಿಯೂ ಬುದ್ಧಿಯೇ ಮುಂತಾದ ಉಪಾಧಿಗಳಿಂದ ಕೂಡಿದವನಾಗಿ ಉಪಾಧಿಗಳ ಧರ್ಮಗಳೆಲ್ಲವೂ ಅಧ್ಯಸ್ತನಾಗಿರುವ (ಸ್ವರೂಪ)ನಾಗಿಯೂ ಆಹುತಿರೂಪನಾಗಿಯೂ ಇರುವ ಈ ಆತ್ಮನೆಂಬ ಯಜ್ಞವನ್ನು ಯಜ್ಞದಿಂದಲೇ ಮೇಲೆ ಹೇಳಿದ (ಬ್ರಹ್ಮ ರೂಪ) ಆತ್ಮನಿಂದಲೇ ಹೋಮಮಾಡುತ್ತಾರೆ, (ಹೋಮಕ್ಕಾಗಿ) ಹಾಕು ತ್ತಾರೆ.**[1] **ಉಪಾಧಿಯಿಂದೊಡಗೂಡಿದ ಆತ್ಮನನ್ನು ಯಾವ ಉಪಾಧಿಯೂ ಇಲ್ಲದ ಪರಬ್ರಹ್ಮರೂಪದಿಂದ ಕಾಣುವದೆಂಬುದಿದೆಯಲ್ಲ, ಅದೇ ಆ (ಬ್ರಹ್ಮಾಗ್ನಿಯಲ್ಲಿ ಮಾಡುವ) ಹೋಮವು.** ಬ್ರಹ್ಮಾತ್ಮೈಕತ್ವದರ್ಶನದಲ್ಲಿಯೇ ನೆಲೆನಿಂತಿರುವ ಸಂನ್ಯಾಸಿಗಳು[2] ಅದನ್ನು ಮಾಡುವರು ಎಂದರ್ಥ.

(ಭಾಷ್ಯ)

೨೮೩. 'ಸೋಽಯಂ ಸಮ್ಯಗ್ದರ್ಶನಲಕ್ಷಣಃ ಯಜ್ಞಃ ದೈವಯಜ್ಞಾದಿಷು ಯಜ್ಞೇಷು ಉಪಕ್ಷಿಪ್ಯತೇ "ಬ್ರಹ್ಮಾರ್ಪಣಮ್" ಇತ್ಯಾದಿ ಶ್ಲೋಕೇ[3] ಪ್ರಸ್ತುತಃ "ಶ್ರೇಯಾನ್ ದ್ರವ್ಯಮಯಾದ್ ಯಜ್ಞಾಜ್ಜ್ಞಾನಯಜ್ಞಃ ಪರಂತಪ" (೪-೩೩) ಇತ್ಯಾದಿನಾ ಸ್ತುತ್ಯರ್ಥಮ್—

---

1 ಅಧ್ಯಸ್ತವಾದ ಉಪಾಧಿಧರ್ಮಗಳಿಂದ ಕೂಡಿದ ಆತ್ಮನನ್ನು ನಿರುಪಾಧಿಕವಾದ ಆತ್ಮರೂಪದಿಂದ ಕಾಣುತ್ತಾರೆ ಎಂದರ್ಥ. ಅಗ್ನಿಯಲ್ಲಿ ಹೋಮಮಾಡಿದ ದ್ರವ್ಯವು ಅಗ್ನಿಯೇ ಆಗಿಬಿಡುವಂತೆ ಬ್ರಹ್ಮಾಗ್ನಿಯಲ್ಲಿ ಜ್ಞಾನದಿಂದ ಹೋಮಮಾಡಿದ ಆತ್ಮನು ಬ್ರಹ್ಮರೂಪನೇ ಆಗಿಬಿಡುತ್ತಾನೆ ಎಂಬುದನ್ನು ಈ ರೂಪಕವು ಸ್ಪಷ್ಟಪಡಿಸುತ್ತದೆ.

2 ಇದು 'ಮತ್ತೆ ಕೆಲವರು' ಎಂಬ ಮಾತಿನ ಅರ್ಥ.

3 "ಶ್ಲೋಕೈಃ" ಎಂಬ ಅ॥ನಿ॥ವಾ॥ ಪಾಠವು ಸರಿಯಲ್ಲ "ಇತ್ಯಾದಿನಾ ಪ್ರಸ್ತುತಃ" ಎಂಬ ವಾ॥ ಪಾಠವೂ ಆಗಬಹುದು.

ವ್ಯಾಪಾರಗಳು ಎಂದರೆ ಕುಗ್ಗಿಸುವದು, ಹಿಗ್ಗಿಸುವದು ಮುಂತಾದವುಗಳು. ಅವುಗಳನ್ನು–ಇನ್ನೂ ಕೆಲವರು ಆತ್ಮಸಂಯಮಯೋಗಾಗ್ನಿಯಲ್ಲಿ–ಆತ್ಮನಲ್ಲಿ ಮಾಡುವ ಸಂಯಮವು ಆತ್ಮಸಂಯಮವು. ಆ (ಆತ್ಮಸಂಯಮವೆಂಬುದೇ) ಯೋಗಾಗ್ನಿಯು, ಆ ಆತ್ಮಸಂಯಮಯೋಗಾಗ್ನಿಯಲ್ಲಿ–ಹೋಮಮಾಡುತ್ತಾರೆ. ಜ್ಞಾನದಿಂದ ಹೊತ್ತಿಕೊಂಡುರಿಯುವ ಎಣ್ಣೆಯಿಂದ ದೀಪದುರಿಯು (ಬಲವಾಗುವಂತೆ) ವಿವೇಕರೂಪವಾದ ಅರಿವಿನಿಂದ ಬಲವಾಗಿ ಉರಿಯುವಂತೆ ಆಗಿರುವ–(ಆತ್ಮಸಂಯಮಯೋಗಾಗ್ನಿಯಲ್ಲಿ ಅವುಗಳನ್ನು) ಪ್ರವಿಲಯಮಾಡಿಬಿಡುತ್ತಾರೆ[1] ಎಂದರ್ಥ

**ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ ।**
**ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥ ೨೮ ॥**

೨೮. ಕೆಲವರು ದ್ರವ್ಯಯಜ್ಞವನ್ನು ಮಾಡುವವರು; (ಕೆಲವರು) ತಪೋಯಜ್ಞವನ್ನು ಮಾಡುವವರು; (ಕೆಲವರು) ಯೋಗಯಜ್ಞವನ್ನು ಮಾಡುವವರು, (ಕೆಲವರು) ಸ್ವಾಧ್ಯಾಯಜ್ಞಾನಯಜ್ಞಗಳನ್ನು ಮಾಡುವವರು; (ಇವರೆಲ್ಲರೂ) ಸಂಶಿತವ್ರತರಾದ ಯತಿಗಳು.

(ಭಾಷ್ಯ)

೨೮೬. ದ್ರವ್ಯಯಜ್ಞಾಃ ತೀರ್ಥೇಷು ದ್ರವ್ಯವಿನಿಯೋಗಂ ಯಜ್ಞಬುದ್ಧ್ಯಾ ಕುರ್ವನ್ತಿ ಯೇ ತೇ ದ್ರವ್ಯಯಜ್ಞಾಃ । ತಪೋಯಜ್ಞಾಃ ತಪಃ ಯಜ್ಞಃ ಯೇಷಾಂ ತಪಸ್ವಿನಾಂ ತೇ ತಪೋಯಜ್ಞಾಃ । ಯೋಗಯಜ್ಞಾಃ ಪ್ರಾಣಾಯಾಮಪ್ರತ್ಯಾಹಾರಾದಿಲಕ್ಷಣಃ ಯೋಗಃ ಯಜ್ಞಃ ಯೇಷಾಂ ತೇ ಯೋಗಯಜ್ಞಾಃ । ತಥಾ ಅಪರೇ ಸ್ವಾಧ್ಯಾಯಜ್ಞಾನಯಜ್ಞಾಶ್ಚ ಸ್ವಾಧ್ಯಾಯಃ ಯಥಾವಿಧಿ ಋಗಾದ್ಯಭ್ಯಾಸಃ ಯಜ್ಞಃ ಯೇಷಾಂ ತೇ ಸ್ವಾಧ್ಯಾಯಯಜ್ಞಾಃ । ಜ್ಞಾನಯಜ್ಞಾಃ ಜ್ಞಾನಂ ಶಾಸ್ತ್ರಾರ್ಥಪರಿಜ್ಞಾನಂ ಯಜ್ಞಃ ಯೇಷಾಂ ತೇ ಜ್ಞಾನಯಜ್ಞಾಶ್ಚ । ಯತಯಃ ಯತನಶೀಲಾಃ ಸಂಶಿತವ್ರತಾಃ ಸಮ್ಯಕ್ ಶಿತಾನಿ ತನೂಕೃತಾನಿ ತೀಕ್ಷ್ಣೀಕೃತಾನಿ ವ್ರತಾನಿ ಯೇಷಾಂ ತೇ ಸಂಶಿತವ್ರತಾಃ ॥

---

1 ಹಿಂದಿನ ಶ್ಲೋಕದಲ್ಲಿ ಇಂದ್ರಿಯಗಳನ್ನು ಒಳಕ್ಕೆಳೆದುಕೊಂಡು ಮನಸ್ಸನ್ನು ಏಕಾಗ್ರವಾಗಿಸುವ ಯೋಗವನ್ನು ಹೇಳಿತ್ತು. ಇಲ್ಲಿ ಜ್ಞಾನದಿಂದ ಇಂದ್ರಿಯಪ್ರಾಣಗಳನ್ನು ಆತ್ಮರೂಪವಾಗಿ ಕಂಡುಕೊಂಡು ಅವುಗಳನ್ನು ಗೆಲ್ಲುವ ಕ್ರಮವನ್ನು ಹೇಳಿದೆ. ಇದು ಬಾಧಪೂರ್ವಕಸಮಾಧಿ.

(ಭಾಷ್ಯಾರ್ಥ)

ಇದೇ ಯಜ್ಞವೆಂಬ ಭಾವನೆಯಿಂದ ತೀರ್ಥಗಳಲ್ಲಿ[1] ದ್ರವ್ಯವನ್ನು ಯಾರು ವಿನಿಯೋಗ ಮಾಡುವರೋ ಅವರು **ದ್ರವ್ಯಯಜ್ಞರು**.[2] ತಪಸ್ಸನ್ನೇ ಯಾರು ಯಜ್ಞವೆಂದೆಣಿಸುವರೋ ಆ ತಪಸ್ವಿಗಳು **ತಪೋಯಜ್ಞರು**.[3] ಪ್ರಾಣಾಯಾಮ, ಪ್ರತ್ಯಾಹಾರ–ಮುಂತಾದ ರೂಪದ[4] ಯೋಗವೇ ಯಜ್ಞವೆಂದು ಯಾರು ಭಾವಿಸುವರೋ ಅವರು **ಯೋಗಯಜ್ಞರು**[5]. ಮತ್ತೂ ಕೆಲವರು ಸ್ವಾಧ್ಯಾಯಯಜ್ಞರು ಸ್ವಾಧ್ಯಾಯವೆಂದರೆ ವಿಧಿಯನ್ನು ಮೀರದೆ ಋಗ್ವೇದವೇ ಮುಂತಾದವುಗಳನ್ನು ಅಭ್ಯಾಸಮಾಡುತ್ತಿರುವದು, ಅದನ್ನೇ ಯಜ್ಞವೆಂದು ಯಾರು (ಭಾವಿಸುವರೋ)ಅವರು **ಸ್ವಾಧ್ಯಾಯಯಜ್ಞರು**. ಜ್ಞಾನವು ಎಂದರೆ ಶಾಸ್ತ್ರಾರ್ಥವನ್ನು[6] ತಿಳಿದುಕೊಳ್ಳುವದು; (ಅದನ್ನು) ಯಾರು ಯಜ್ಞವೆಂದೆಣಿಸುವರೋ ಅವರು **ಜ್ಞಾನಯಜ್ಞರು**. (ಇವರೆಲ್ಲರೂ) ಯತಿಗಳು, ಎಂದರೆ (ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವದಕ್ಕೆ) ಯತ್ನವನ್ನು ಮಾಡುತ್ತಿರುವವರು, ಸಂಶಿತವ್ರತರು, ಎಂದರೆ ಚೆನ್ನಾಗಿ ಹರಿತಮಾಡಿದ ಚೂಪಾಗಿ ಮಾಡಿದ ತೀಕ್ಷ್ಣವಾಗಿ ಮಾಡಿಕೊಂಡಿರುವ ವ್ರತಗಳುಳ್ಳವರು

**ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಪರೇ ।**
**ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ ॥೨೯॥**

೨೯. ಕೆಲವರು ಪ್ರಾಣಾಪಾನಗಳ ಗತಿಗಳನ್ನು ತಡೆದುಕೊಂಡು ಪ್ರಾಣಾಯಾಮಪರಾಯಣರಾಗಿ ಅಪಾನದಲ್ಲಿ ಪ್ರಾಣವನ್ನೂ ಹಾಗೂ ಪ್ರಾಣದಲ್ಲಿ ಅಪಾನವನ್ನೂ ಹೋಮಮಾಡುವರು.

(ಭಾಷ್ಯ)

೨೮೭. ಕಿಂಚ ಅಪಾನೇ ಅಪಾನವೃತ್ತೌ ಜುಹ್ವತಿ ಪ್ರಕ್ಷಿಪನ್ತಿ ಪ್ರಾಣಂ ಪ್ರಾಣವೃತ್ತಿಮ್ । ಪೂರಕಾಖ್ಯಂ ಪ್ರಾಣಾಯಾಮಂ ಕುರ್ವನ್ತಿ ಇತ್ಯರ್ಥಃ । ಪ್ರಾಣೇ ಅಪಾನಂ ತಥಾ ಅಪರೇ ಜುಹ್ವತಿ । ರೇಚಕಾಖ್ಯಂ[7] ಪ್ರಾಣಾಯಾಮಂ ಕುರ್ವನ್ತಿ

---

1. ತಕ್ಕ ಪಾತ್ರಗಳಲ್ಲಿ.
2. ಇದು ಹೋಮರೂಪವಲ್ಲ; ದೈವಯಜ್ಞವೆಂಬ ಮಾತಿಗೆ ೨೫ನೆಯ ಶ್ಲೋಕದಲ್ಲಿ ಮಾಡಿರುವ ಭಾಷ್ಯವನ್ನು ಇದಕ್ಕೆ ಹೋಲಿಸಿರಿ
3 ಕೃಚ್ಛ್ರ, ಚಂದ್ರಾಯಣ—ಮುಂತಾದವನ್ನು ಮಾಡುವವರು
4. ಧ್ಯಾನ, ಧಾರಣ, ಸಮಾಧಿಗಳನ್ನು 'ಮುಂತಾದ' ಎಂಬ ಮಾತಿನಿಂದ ಗ್ರಹಿಸಬೇಕು
5 ಪಾತಂಜಲಯೋಗಾಭ್ಯಾಸಿಗಳು
6 ಇದರಲ್ಲಿ ಆತ್ಮಜ್ಞಾನವು ಸೇರಿರುವದಿಲ್ಲ
7. ರೇಚಕಾಖ್ಯಂ ಚ ಎಂಬ ಅ॥ ನಿ॥ ಗಳಲ್ಲಿ ಚ ಹೆಚ್ಚು

ಇತ್ಯರ್ಥಃ। ಪ್ರಾಣಾಪಾನಗತೀ ಮುಖನಾಸಿಕಾಭ್ಯಾಂ ವಾಯೋಃ ನಿರ್ಗಮನಂ ಪ್ರಾಣಸ್ಯ ಗತಿಃ । ತದ್ವಿಪರ್ಯಯೇಣ ಅಧೋಗಮನಮ್ ಅಪಾನಸ್ಯ ಗತಿಃ । ತೇ ಪ್ರಾಣಾಪಾನ ಗತೀ ಏತೇ ರುದ್ಧ್ವಾ ನಿರುಧ್ಯ ಪ್ರಾಣಾಯಾಮಪರಾಯಣಾಃ ಪ್ರಾಣಾಯಾಮ ತತ್ಪರಾಃ । ಕುಮ್ಭಕಾಖ್ಯಂ ಪ್ರಾಣಾಯಾಮಂ ಕುರ್ವನ್ತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಕೆಲವರು ಅಪಾನದಲ್ಲಿ ಎಂದರೆ ‘ ಅಪಾನ ’ವೆಂಬ (ಪ್ರಾಣ)ವೃತ್ತಿಯಲ್ಲಿ ಪ್ರಾಣವನ್ನು ‘ ಪ್ರಾಣ ’ ವೆಂಬ ವೃತ್ತಿಯನ್ನು ಹೋಮಮಾಡುತ್ತಾರೆ ಹಾಕುತ್ತಾರೆ. **ಪೂರಕ**ವೆಂಬ ಪ್ರಾಣಾಯಾಮವನ್ನು ಮಾಡುತ್ತಾರೆ-ಎಂದರ್ಥ ಹಾಗೂ ಪ್ರಾಣ ದಲ್ಲಿ ಅಪಾನವನ್ನು ಹೋಮಮಾಡುತ್ತಾರೆ, **ರೇಚಕ**ವೆಂಬ ಪ್ರಾಣಾಯಾಮವನ್ನು ಮಾಡುತ್ತಾರೆ ಎಂದರ್ಥ. ಪ್ರಾಣಾಪಾನಗತಿಗಳನ್ನು-ಬಾಯಿಯಿಂದಲೂ ಮೂಗಿ ನಿಂದಲೂ ವಾಯು ಹೊರಕ್ಕೆ ಬರುವದು ಪ್ರಾಣದ ಗತಿಯು ಇದಕ್ಕೆ ಬದಲಾಗಿ ಕೆಳ ಗಡೆಗೆ (ವಾಯು) ಹೋಗುವದು ಅಪಾನದ ಗತಿಯು ಆ ಪ್ರಾಣಾಪಾನಗತಿಗಳನ್ನು- ಇವರು ತಡೆದುಕೊಂಡು ಪ್ರಾಣಾಯಾಮಪರಾಯಣರಾಗಿರುವರು, ಎಂದರೆ ಪ್ರಾಣಾ ಯಾಮದಲ್ಲಿಯೇ ತಾತ್ಪರ್ಯವುಳ್ಳವರಾಗಿರುವರು , **ಕುಂಭಕ**ವೆಂಬ ಪ್ರಾಣಾಯಾಮ ವನ್ನು ಮಾಡುತ್ತಾರೆ ಎಂದರ್ಥ.[1]

**ಅಪರೇ ನಿಯತಾಹಾರಾಃ ಪ್ರಾಣಾನ್ ಪ್ರಾಣೇಷು ಜುಹ್ವತಿ ।**
**ಸರ್ವೇಽಪ್ಯೇತೇ ಯಜ್ಞವಿದೋ ಯಜ್ಞಕ್ಷಪಿತಕಲ್ಮಷಾಃ ॥೩೦॥**

೩೦. ಇನ್ನು ಕೆಲವರು ನಿಯತಾಹಾರರಾಗಿ ಪ್ರಾಣಗಳನ್ನು ಪ್ರಾಣ ಗಳಲ್ಲಿ ಹೋಮಮಾಡುತ್ತಿರುವರು. ಇವರೆಲ್ಲರೂ ಯಜ್ಞವನ್ನು ಬಲ್ಲವರು, ಯಜ್ಞಗಳಿಂದ ಕಲ್ಮಷವನ್ನು ಕಳೆದುಕೊಂಡಿರುವವರು.

( ಭಾಷ್ಯ )

ಕಿಂಚ ಅಪರೇ ನಿಯತಾಹಾರಾಃ ನಿಯತಃ ಪರಿಮಿತಃ ಆಹಾರಃ ಯೇಷಾಂ ತೇ ನಿಯತಾಹಾರಾಃ ಸನ್ತಃ ಪ್ರಾಣಾನ್ ವಾಯುಭೇದಾನ್ ಪ್ರಾಣೇಷ್ವೇವ ಜುಹ್ವತಿ । ಯಸ್ಯ ಯಸ್ಯ ವಾಯೋಃ ಜಯಃ ಕ್ರಿಯತೇ ಇತರಾನ್ ವಾಯುಭೇದಾನ್

---

1 ಅಷ್ಟಾಂಗಯೋಗದ ಅಂಗವಾಗಿರುವ ಪ್ರಾಣಾಯಾಮದಲ್ಲಿ ರೇಚಕ, ಪೂರಕ, ಕುಂಭಕಗಳು ಭಾಗಗಳು. ಹಠಯೋಗದಲ್ಲಿ ಇವನ್ನು ವಿಸ್ತರಿಸಿರುತ್ತದೆ.

ತಸ್ಮಿನ್ ತಸ್ಮಿನ್ ಜುಹ್ವತಿ । ತೇ ತತ್ರ ಪ್ರವಿಷ್ಟಾ ಇವ ಭವನ್ತಿ । ಸರ್ವೇಽಪಿ ಏತೇ ಯಜ್ಞವಿದಃ ಯಜ್ಞಕ್ಷಪಿತಕಲ್ಮಷಾಃ ಯಜ್ಞೈಃ ಯಥೋಕ್ತೈಃ ಕ್ಷಪಿತಃ ನಾಶಿತಃ ಕಲ್ಮಷಃ ಯೇಷಾಂ ತೇ ಯಜ್ಞಕ್ಷಪಿತಕಲ್ಮಷಾಃ ॥

(ಭಾಷ್ಯಾರ್ಥ)

ಮತ್ತು ಇನ್ನೂ ಕೆಲವರು ನಿಯತಾಹಾರರಾಗಿ ನಿಯತವಾದ (ಶಾಸ್ತ್ರದಲ್ಲಿ ಇಷ್ಟೆಂದು, ಅಳತೆಮಾಡಿ (ಹೇಳಿರುವಷ್ಟು)[1] ಆಹಾರವುಳ್ಳವರಾಗಿ ಪ್ರಾಣಗಳನ್ನು (ಪ್ರಾಣಗಳೆಂಬ) ವಾಯುವಿಶೇಷಗಳನ್ನು ಪ್ರಾಣಗಳಲ್ಲಿಯೇ ಹೋಮಮಾಡುತ್ತಿರುವರು. ಯಾವ ಯಾವ ವಾಯುವನ್ನು ಗೆದ್ದುಕೊಳ್ಳುವರೋ ಅದರಲ್ಲಿ ಉಳಿದ ವಾಯುವಿಶೇಷಗಳನ್ನು ಹೋಮಮಾಡುತ್ತಿರುವರು. ಅವು ಅದರಲ್ಲಿ ಸೇರಿಕೊಂಡಂತೆ ಆಗಿಬಿಡುತ್ತವೆ ಇವರೆಲ್ಲರೂ ಯಜ್ಞದ (ತತ್ತ್ವವನ್ನು) ಬಲ್ಲವರು. ಯಜ್ಞಕ್ಷಪಿತ ಕಲ್ಮಷರು, ಮೇಲೆ ಹೇಳಿರುವ ಯಜ್ಞಗಳಿಂದ ಕಲ್ಮಷಗಳನ್ನು ಕ್ಷಯಮಾಡಿಕೊಂಡವರು, ನಾಶಗೊಳಿಸಿಕೊಂಡಿರುವವರು

(ಭಾಷ್ಯ)

೨೮೯ ಏವಂ ಯಥೋಕ್ತಾನ್ ಯಜ್ಞಾನ್ ನಿರ್ವರ್ತ್ಯ—

(ಭಾಷ್ಯಾರ್ಥ)

ಹೀಗೆ ಮೇಲೆ ಹೇಳಿರುವ ಯಜ್ಞಗಳನ್ನು ಮಾಡಿ—

**ಯಜ್ಞಶಿಷ್ಟಾಮೃತಭುಜೋ ಯಾನ್ತಿ ಬ್ರಹ್ಮ ಸನಾತನಮ್ ।**
**ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರುಸತ್ತಮ॥೩೧॥**

೩೧. ಯಜ್ಞಶಿಷ್ಟವಾದ ಅಮೃತವನ್ನು ಭೋಗಿಸುವವರಾಗಿ (ಇವರು) ಸನಾತನವಾದ ಬ್ರಹ್ಮವನ್ನು ಪಡೆಯುತ್ತಾರೆ. ಎಲೈ ಕುರುಶ್ರೇಷ್ಠನೆ, ಅಯಜ್ಞನಾದವನಿಗೆ ಈ ಲೋಕವೇ ಇಲ್ಲ, ಮತ್ತೊಂದು ಎಲ್ಲಿ ಬಂತು?

(ಭಾಷ್ಯ)

೨೯೦ ಯಜ್ಞಶಿಷ್ಟಾಮೃತಭುಜಃ ಯಜ್ಞಾನಾಂ ಶಿಷ್ಟಂ ಯಜ್ಞಶಿಷ್ಟಮ್ । ಯಜ್ಞಶಿಷ್ಟಂ ಚ ತತ್ ಅಮೃತಂ ಚ ಯಜ್ಞಶಿಷ್ಟಾಮೃತಮ್ ತತ್ ಭುಞ್ಜತೇ ಇತಿ ಯಜ್ಞಶಿಷ್ಟಾಮೃತಭುಜಃ । ಯಥೋಕ್ತಾನ್ ಯಜ್ಞಾನ್ ಕೃತ್ವಾ ತಚ್ಛಿಷ್ಟೇನ ಕಾಲೇನ ಯಥಾವಿಧಿಚೋದಿತಮ್ ಅನ್ನಮ್ ಅಮೃತಾಖ್ಯಂ ಭುಞ್ಜತೇ

[1] ಯೋಗವನ್ನು ಅಭ್ಯಾಸಮಾಡುವವನು ಇಂತಿಷ್ಟು ಆಹಾರವನ್ನು ತಿನ್ನಬೇಕು, ಇಂಥಿಂಥ ಆಹಾರವನ್ನೇ ತಿನ್ನಬೇಕು-ಎಂಬ ನಿಯಮವುಂಟು.

ಯೇ ತೇ[1] ಯಜ್ಞಶಿಷ್ಟಾಮೃತಭುಜಃ । ಯಾನ್ತಿ ಗಚ್ಛನ್ತಿ ಬ್ರಹ್ಮ ಸನಾತನಮ್ ಚಿರನ್ತನಮ್। ಮುಮುಕ್ಷವಶ್ಚೇತ್, ಕಾಲಾತಿಕ್ರಮಾಪೇಕ್ಷಯಾ ಇತಿ ಸಾಮರ್ಥ್ಯಾದ್ ಗಮ್ಯತೇ। ನಾಯಂ ಲೋಕಃ ಸರ್ವಪ್ರಾಣಿಸಾಧಾರಣೋಽಪಿ ಅಸ್ತಿ ಯಥೋಕ್ತಾನಾಂ ಯಜ್ಞಾನಾಮ್ ಏಕೋಽಪಿ ಯಜ್ಞಃ ಯಸ್ಯ ನಾಸ್ತಿ ಸಃ ಅಯಜ್ಞಃ । ತಸ್ಯ । ಕುತಃ ಅನ್ಯಃ ವಿಶಿಷ್ಟಸಾಧನಸಾಧ್ಯಃ ಕುರುಸತ್ತಮ ॥

(ಭಾಷ್ಯಾರ್ಥ)

'ಯಜ್ಞಶಿಷ್ಟಾಮೃತಭುಜಃ' ಎಂಬಲ್ಲಿ ಯಜ್ಞಗಳಲ್ಲಿ ಉಳಿದದ್ದು ಯಜ್ಞ ಶಿಷ್ಟವು; ಯಜ್ಞಶಿಷ್ಟವಾದ ಅಮೃತವಿದೆಯಲ್ಲ, ಅದನ್ನು ಭೋಜನಮಾಡುವವರು ಯಜ್ಞಶಿಷ್ಟಾಮೃತಭುಜರು ಮೇಲೆ ಹೇಳಿರುವಂಥ ಯಜ್ಞಗಳನ್ನು ಮಾಡಿ ಅದನ್ನು ಳಿದ ಕಾಲದಲ್ಲಿ ಶಾಸ್ತ್ರವಿಧಿಯಲ್ಲಿ ಹೇಳಿರುವಂತೆ ಅಮೃತವೆಂಬ ಅನ್ನವನ್ನು ಯಾರು ಭೋಜನಮಾಡುತ್ತಿರುವರೋ ಆ ಯಜ್ಞಶಿಷ್ಟಾಮೃತಭುಜರಾದ (ಜನರು) ಸನಾತನ ವಾದ ಅನಾದಿಯಿಂದಿರುವ ಬ್ರಹ್ಮವನ್ನು ಪಡೆಯುತ್ತಾರೆ. 'ಮುಮುಕ್ಷುಗಳಾಗಿದ್ದರೆ[2] ಕಾಲಕ್ರಮವನ್ನು ಅನುಸರಿಸಿ'[3] (ಬ್ರಹ್ಮವನ್ನು ಪಡೆಯುತ್ತಾರೆ) ಎಂದು (ಯುಕ್ತಿ) ಸಾಮರ್ಥ್ಯದಿಂದ ನಿಶ್ಚಯಿಸಬೇಕು ಎಲೈ ಕುರುಶ್ರೇಷ್ಠನೆ, (ಈ) ಮೇಲೆ ಹೇಳಿರುವ ಯಜ್ಞಗಳಲ್ಲಿ ಒಂದೂ ಯಾವಾತನಿಗೆ ಇಲ್ಲವೋ ಅವನು ಅಯಜ್ಞನು, ಅಂಥವನಿಗೆ ಎಲ್ಲಾ ಪ್ರಾಣಿಗಳಿಗೂ ಸಾಧಾರಣವಾಗಿರುವ[4] ಈ ಲೋಕವೇ ಇಲ್ಲ, ವಿಶೇಷವಾದ ಸಾಧನವನ್ನು (ಮಾಡಿ) ಪಡೆಯಬೇಕಾಗಿರುವ ಮತ್ತೊಂದು ಎಲ್ಲಿ ಬಂತು ?

1 'ಇತಿ' ಅ॥ ನಿ॥ ಗು॥ ವಾ॥

2 ಇಲ್ಲದಿದ್ದರೆ ಆಯಾ ಯಜ್ಞದ ಯೋಗ್ಯತೆಗೆ ತಕ್ಕಂತೆ ಬೇರೆ ಬೇರೆಯ ಫಲಗಳು ಆಗುವವು.

3 ಜ್ಞಾನದಿಂದ ಮಾತ್ರ ನೇರಾಗಿ ಮೋಕ್ಷವಾಗುವದು, ಏಕೆಂದರೆ ಬಂಧವು ಅಜ್ಞಾನ ದಿಂದ ಆಗಿರುತ್ತದೆ ತಪಸ್ಸು, ದಾನ, ಯೋಗ—ಮುಂತಾದವು ಅಜ್ಞಾನವನ್ನು ಕಳೆಯಲಾರ ವಾದರೂ ಇವುಗಳಿಂದ ಮೋಕ್ಷವಾಗುವದೆಂದು ಹೇಳಿರುವದರಿಂದ ಮುಮುಕ್ಷುಗಳಾಗಿರುವವರಿಗೆ ಚಿತ್ತಶುದ್ಧಿಯುಂಟಾಗುವದರ ಮೂಲಕ ಕಾಲಾನುಕಾಲಕ್ಕೆ ಅವುಗಳಿಂದ ಮೋಕ್ಷವೂ ಆಗುವ ದೆಂದು ಕಲ್ಪಿಸಬೇಕಾಗಿದೆ

4, ಪುಣ್ಯಮಿಶ್ರವಿಲ್ಲದ ಪಾಪದಿಂದ ತಿರ್ಯಕ್ಪ್ರಾಣಿಗಳ ಜನ್ಮವೇ ಮುಂತಾದ ಅಧೋ ಲೋಕದ ಪ್ರಾಪ್ತಿಯಾಗುವದು ಆದ್ದರಿಂದ ಯಜ್ಞಗಳಲ್ಲಿ ಯಾವದಾದರೊಂದನ್ನು ಮಾಡಿ ಪುಣ್ಯವನ್ನು ಸಂಪಾದಿಸಿರುವವರಿಗೆ ಮಾತ್ರ ಈ ಲೋಕವು ಎಂದರೆ ಮನುಷ್ಯಜನ್ಮವು ದೊರಕು ತ್ತದೆ. ಬರಿಯ ಪುಣ್ಯದಿಂದಲೇ ದೊರಕಬೇಕಾಗಿರುವ ದೇವತ್ವಾದಿಗಳನ್ನು ಪಡೆಯುವದಕ್ಕೆ ಈ ಯಜ್ಞಗಳು ಅವಶ್ಯವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಮನುಷ್ಯಜನ್ಮವನ್ನು ಬಹು ಜೀವರು ಪಡೆಯುವರು; ದೇವತ್ವಾದಿಗಳನ್ನು ಎಲ್ಲಿಯೋ ಕೆಲವರು ಪಡೆಯುವರು. ಆದ್ದ ರಿಂದ 'ಸರ್ವಪ್ರಾಣಿಸಾಧಾರಣವಾದ' ಎಂಬ ವಿಶೇಷಣವನ್ನು ಈ ಮನುಷ್ಯಲೋಕಕ್ಕೆ ಕೊಟ್ಟಿ ರುತ್ತದೆ.

**ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।**
**ಕರ್ಮಜಾನ್ ವಿದ್ಧಿ ತಾನ್ ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ ॥**

೩೨. ಹೀಗೆ ಬಹುವಿಧವಾದ ಯಜ್ಞಗಳು ಬ್ರಹ್ಮದ ಮುಖದಲ್ಲಿ ವಿಸ್ತೃತವಾಗಿರುತ್ತವೆ. ಅವುಗಳೆಲ್ಲವನ್ನೂ ಕರ್ಮದಿಂದ ಹುಟ್ಟಿದವುಗಳೆಂದು ತಿಳಿ. ಹೀಗೆಂದು ತಿಳಿದರೆ ಮುಕ್ತಿಯನ್ನು ಹೊಂದುವೆ.

(ಭಾಷ್ಯ)

೨೯೧. ಏವಂ ಯಥೋಕ್ತಾ ಬಹುವಿಧಾಃ ಬಹುಪ್ರಕಾರಾಃ ಯಜ್ಞಾಃ **ವಿತತಾಃ ವಿಸ್ತೀರ್ಣಾಃ ಬ್ರಹ್ಮಣಃ ವೇದಸ್ಯ ಮುಖೇ ದ್ವಾರೇ । ವೇದದ್ವಾರೇಣ ಅವಗಮ್ಯಮಾನಾಃ ಬ್ರಹ್ಮಣೋ ಮುಖೇ ವಿತತಾ ಉಚ್ಯನ್ತೇ । ತದ್ ಯಥಾ "ವಾಚಿ** ಹಿ ಪ್ರಾಣಂ ಜುಹುಮಃ "(ಐ. ಆ. ೩-೨-೬)ಇತ್ಯಾದಯಃ । **ಕರ್ಮಜಾನ್ ಕಾಯಿಕ** ವಾಚಿಕಮಾನಸಕರ್ಮೋದ್ಭವಾನ್ ವಿದ್ಧಿ ತಾನ್ ಸರ್ವಾನ್ ಅನಾತ್ಮಜಾನ್ । ನಿರ್ವ್ಯಾಪಾರೋ ಹಿ ಆತ್ಮಾ। ಅತಃ ಏವಂ ಜ್ಞಾತ್ವಾ ವಿಮೋಕ್ಷ್ಯಸೇ ಅಶುಭಾತ್ । "ನ ಮದ್ವ್ಯಾಪಾರಾ ಇಮೇ, ನಿರ್ವ್ಯಾಪಾರೋಽಹಮ್ ಉದಾಸೀನಃ"ಇತಿ ಏವಂ ಜ್ಞಾತ್ವಾ ಅಸ್ಮಾತ್ ಸಮ್ಯಗ್ದರ್ಶನಾತ್ ಮೋಕ್ಷ್ಯಸೇ ಸಂಸಾರಬನ್ಧನಾತ್ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆ ಮೇಲೆ ಹೇಳಿದ ಬಲು ಬಗೆಯ ಯಜ್ಞಗಳು 'ಬ್ರಹ್ಮದ ಎಂದರೆ ವೇದದ ಮುಖದಲ್ಲಿ ದ್ವಾರದಲ್ಲಿ ವಿತತವಾಗಿರುತ್ತವೆ, ಎಂದರೆ ವಿಸ್ತೃತವಾಗಿರುತ್ತವೆ. ವೇದದ ಮೂಲಕವಾಗಿ ತಿಳಿಯಬರುವದರಿಂದ[1] "ಬ್ರಹ್ಮದ ಮುಖದಲ್ಲಿ ವಿತತವಾಗಿವೆ" ಎಂದು ಹೇಳಿರುತ್ತದೆ. "ವಾಚಿ ಹಿ ಪ್ರಾಣಂ ಜುಹುಮಃ" (ಮಾತಿನಲ್ಲಲ್ಲವೆ, ಪ್ರಾಣವನ್ನು ಹೋಮಮಾಡುತ್ತೇವೆ' ಐ ಆ.) ಎಂದು ಮುಂತಾಗಿರುವ (ವಚನಗಳು ಹೇಳುವ ಯಜ್ಞಗಳು) ಇದಕ್ಕೆ ಉದಾಹರಣೆ. ಇವುಗಳೆಲ್ಲವೂ ಕರ್ಮದಿಂದ ಹುಟ್ಟಿದವುಗಳು, ಎಂದರೆ ಶರೀರದ, ವಾಕ್ಕಿನ ಮತ್ತು ಮನಸ್ಸಿನ ಕರ್ಮದಿಂದ ಆದವುಗಳು ಎಂದರೆ ಅನಾತ್ಮದಿಂದ ಉಂಟಾಗಿರುವವು ಎಂದು ತಿಳಿದುಕೊ. ಏಕೆಂದರೆ ಆತ್ಮನಲ್ಲಿ ಯಾವ ವ್ಯಾಪಾರವೂ ಇರುವದಿಲ್ಲ. ಆದ್ದರಿಂದ ಹೀಗೆಂದು ತಿಳಿದು

---

1. ಕರ್ಮದಿಂದ ಯಜ್ಞಗಳು ಆಗುವವೆಂದು ತಿಳಿದಮಾತ್ರದಿಂದ ಮುಕ್ತಿ ಹೇಗಾದೀತೆಂದು ಸಂಶಯಪಡಬಾರದು ಕರ್ಮಗಳು ತನಗೆ ಸಂಬಂಧಿಸಿಲ್ಲ ಎಂಬ ಜ್ಞಾನವೇ ಸರಿಯಾದ ಆತ್ಮಜ್ಞಾನವಾದ್ದರಿಂದ ಆದರಿಂದ ಅಜ್ಞಾನಕೃತಕರ್ಮಬಂಧವು ತೊಲಗುವದು.

ಕೊಂಡರೆ ಅಶುಭದಿಂದ ಬಿಡುಗಡೆಯನ್ನು ಹೊಂದುತ್ತೀಯೆ. "ಇವು ನನ್ನ ಕೆಲಸಗಳಲ್ಲ, ನಾನು ಯಾವ ವ್ಯಾಪಾರವೂ ಇಲ್ಲದೆ ಸುಮ್ಮನೆ ಇರುತ್ತೇನೆ" ಎಂದೀಪರಿಯಲ್ಲಿ ತಿಳಿದುಕೊಳ್ಳುವದಾದರೆ ಈ ಸರಿಯಾದ ತಿಳಿವಳಿಕೆಯಿಂದ ಸಂಸಾರದ ಬಂಧದಿಂದ ಬಿಡುಗಡೆಯನ್ನು ಹೊಂದುವೆ ಎಂದರ್ಥ.

## ಜ್ಞಾನದ ಸ್ತುತಿ

(ಭಾಷ್ಯ)

೨೯೩ "ಬ್ರಹ್ಮಾರ್ಪಣಮ್" (೪-೨೪) ಇತ್ಯಾದಿಶ್ಲೋಕೇನ ಸಮ್ಯಗ್ದರ್ಶನಸ್ಯ ಯಜ್ಞತ್ವಂ ಸಂಪಾದಿತಮ್ । ಯಜ್ಞಾಶ್ಚ ಅನೇಕೇ ಉಪದಿಷ್ಟಾಃ । ತೈಃ ಸಿದ್ಧಪುರುಷಾರ್ಥಪ್ರಯೋಜನೈಃ ಜ್ಞಾನಂ ಸ್ತೂಯತೇ । ಕಥಮ್ ?

(ಭಾಷ್ಯಾರ್ಥ)

"ಬ್ರಹ್ಮಾರ್ಪಣಮ್" (೪-೨೪) ಎಂದು ಮೊದಲಾಗಿರುವ ಶ್ಲೋಕದಲ್ಲಿ ಸರಿಯಾದ ಜ್ಞಾನಕ್ಕೆ ಯಜ್ಞವೆಂಬ ರೂಪವನ್ನು ಕೊಟ್ಟು ವರ್ಣಿಸಲಾಯಿತು. ಬಗೆಬಗೆಯ ಯಜ್ಞಗಳನ್ನೂ ತಿಳಿಸಿದ್ದಾಯಿತು. ಅವುಗಳಿಗೆ ಪುರುಷಾರ್ಥ(ರೂಪ) ಪ್ರಯೋಜನವು ಉಂಟೆಂದು ಗೊತ್ತಾಗಿರುವದರಿಂದ ಅವುಗಳ ಮೂಲಕ ಜ್ಞಾನವನ್ನು (ಈಗ ಭಗವಂತನು) ಹೊಗಳುತ್ತಾನೆ[1] ಹೇಗೆಂದರೆ. --

**ಶ್ರೇಯಾನ್ ದ್ರವ್ಯಮಯಾದ್ ಯಜ್ಞಾಜ್ಜ್ಞಾನಯಜ್ಞಃ ಪರಂತಪ ।**
**ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥ ೩೩ ॥**

೩೩. ಎಲೈ ಪರಂತಪನೆ, ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನಯಜ್ಞವು ಹೆಚ್ಚು ಒಳ್ಳೆಯದು. ಎಲೈ ಪಾರ್ಥನೆ, ಜ್ಞಾನದಲ್ಲಿ ಎಲ್ಲಾ ಕರ್ಮವೂ ಅಖಿಲವಾಗಿ ಕೊನಗಾಣುತ್ತದೆ.

(ಭಾಷ್ಯ)

೨೯೪. ಶ್ರೇಯಾನ್ ದ್ರವ್ಯಮಯಾತ್ ದ್ರವ್ಯಸಾಧನಸಾಧ್ಯಾತ್ ಯಜ್ಞಾತ್ ಜ್ಞಾನಯಜ್ಞಃ ಹೇ ಪರಂತಪ । ದ್ರವ್ಯಮಯೋ ಹಿ ಯಜ್ಞಃ ಫಲಸ್ಯ ಆರಮ್ಭಕಃ,

---

[1] ಯಜ್ಞಗಳಿಗೆ ಧರ್ಮಾರ್ಥಕಾಮಗಳೆಂಬ ಫಲವುಂಟಾಗುವವಾದರೆ ಅವುಗಳಿಗಿಂತಲೂ ಹೆಚ್ಚಿನವಾದ ಜ್ಞಾನಯಜ್ಞಕ್ಕೆ ಪರಮಪುರುಷಾರ್ಥರೂಪವಾದ ಫಲವುಂಟಾಗುವದು ಸ್ವಾಭಾವಿಕವಾಗಿದೆ ಎಂಬುದು ಸ್ತುತಿಯ ಪ್ರಯೋಜನ

ಜ್ಞಾನಯಜ್ಞಃ ನ ಫಲಾರಮ್ಭಕಃ । ಅತಃ ಶ್ರೇಯಾನ್ ಪ್ರಶಸ್ಯತರಃ । ಕಥಮ್ ? ಯತಃ ಸರ್ವಂ ಕರ್ಮ ಸಮಸ್ತಮ್ ಅಖಿಲಮ್ ಅಪ್ರತಿಬದ್ಧಮ್ ಪಾರ್ಥ ಜ್ಞಾನೇ ಮೋಕ್ಷಸಾಧನೇ ಸರ್ವತಃಸಂಪ್ಲುತೋದಕಸ್ಥಾನೀಯೇ ಪರಿಸಮಾಪ್ಯತೇ ಅನ್ತರ್ಭವತಿ ಇತ್ಯರ್ಥಃ । "ಯಥಾ ಕೃತಾಯ ವಿಜಿತಾಯಾಧರೇಯಾಃ ಸಂಯನ್ತ್ಯೇವಮೇನಂ ಸರ್ವಂ ತದಭಿಸಮೇತಿ ಯತ್ಕಿಂಚ ಪ್ರಜಾಃ ಸಾಧು ಕುರ್ವನ್ತಿ ಯಸ್ತದ್ವೇದ ಯತ್ ಸ ವೇದ" (ಛಾ. ೪-೧-೪) ಇತಿ ಶ್ರುತೇಃ ||

(ಭಾಷ್ಯಾರ್ಥ)

ಎಲೈ ಪರಂತಪನೆ, ದ್ರವ್ಯಮಯವಾದ ಯಜ್ಞಕ್ಕಿಂತ ಎಂದರೆ ದ್ರವ್ಯವೆಂಬ ಸಾಧನದಿಂದ ಆಗುವ ಯಜ್ಞಕ್ಕಿಂತ ಜ್ಞಾನಯಜ್ಞವು ಹೆಚ್ಚು ಒಳ್ಳೆಯದು. ಏಕೆಂದರೆ ದ್ರವ್ಯಮಯವಾದ ಯಜ್ಞವು ಫಲವನ್ನು ಉಂಟುಮಾಡುತ್ತದೆ. ಜ್ಞಾನಯಜ್ಞವು ಫಲಕ್ಕೆ ಕಾರಣವಾಗಿರುವದಿಲ್ಲ.[1] ಆದ್ದರಿಂದ (ಅದು) ಹೆಚ್ಚು ಒಳ್ಳೆಯದು, ಹೆಚ್ಚು ಹೊಗಳತಕ್ಕದ್ದು (ಅದು) ಹೇಗೆ? ಎಂದರೆ (ಹೇಳುತ್ತೇನೆ). ಏಕೆಂದರೆ ಸರ್ವ ಕರ್ಮವೂ ಎಲ್ಲಾ (ಕರ್ಮವೂ) ಅಖಿಲವಾಗಿ ಎಂದರೆ ಯಾವ ಅಡ್ಡಿಯೂ ಇಲ್ಲದೆ, ಎಲೈ ಪಾರ್ಥನೆ, ಮೋಕ್ಷಸಾಧನವಾದ ಜ್ಞಾನದಲ್ಲಿ, ಎಲ್ಲೆಲ್ಲಿಯೂ ನೀರು ತುಂಬಿರುವ ಜಲಾಶಯದಂತಿರುವ (ಜ್ಞಾನದಲ್ಲಿ)[2] ಕೊನೆಗಾಣುತ್ತದೆ, ಅದರೊಳಗೆ ಅಡಕವಾಗುತ್ತದೆ ಎಂದರ್ಥ[3] "ಹೇಗೆ ಕೃತ ಎಂಬ ಲೆತ್ತವನ್ನು ಗೆದ್ದುಕೊಂಡವನಿಗೆ ಕೆಳಗಿನ ಲೆತ್ತದ ಗರಗಳು ಸೇರಿಕೊಂಡು ಹೋಗುವವೋ, ಹಾಗೆ ಪ್ರಜೆಗಳು ಮಾಡುವ ಪುಣ್ಯವೆಲ್ಲ ಆ (ರೈಕ್ವನು) ಅರಿತಿರುವದನ್ನು ಅರಿತುಕೊಂಡವನಿಗೆ ಸೇರಿಹೋಗುವದು" (ಛಾ. ೪-೧-೪) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.

## ಜ್ಞಾನಕ್ಕೆ ಸಾಧನ ಮತ್ತು ಫಲ

(ಭಾಷ್ಯ)

೨೯೪. ತದೇತದ್ ವಿಶಿಷ್ಟಂ ಜ್ಞಾನಂ ತರ್ಹಿ ಕೇನ ಪ್ರಾಪ್ಯತೇ ಇತಿ ? ಉಚ್ಯತೇ—

1 ಅದಕ್ಕೆ ಜನ್ಮಾಂತರಲೋಕಾಂತರರೂಪವಾದ ಫಲವಿಲ್ಲ, ಅದು ತಾನೇ ಫಲವಾಗಿರುತ್ತದೆ.

2 ಹಿಂದೆ ೨-೪೬ನೆಯ ಶ್ಲೋಕದ ಭಾಷ್ಯವನ್ನು ನೋಡಿ.

3. ಎಲ್ಲಾ ಕರ್ಮದ ಫಲವೂ ಆದರ ಫಲವಾದ ಮೋಕ್ಷದಲ್ಲಿ ಅಡಕವಾಗುತ್ತದೆ.

(ಭಾಷ್ಯಾರ್ಥ)

ಹಾಗಾದರೆ ಆ ಇಂಥ ವಿಶೇಷರೂಪವಾದ ಜ್ಞಾನವು ಏತರಿಂದ ದೊರಕುವದು? ಎಂದರೆ ಹೇಳುತ್ತೇನೆ :—

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥ ೩೪ ॥**

೩೪. ಅದನ್ನು ಪ್ರಣಿಪಾತದಿಂದಲೂ ಪರಿಪ್ರಶ್ನೆಯಿಂದಲೂ ಸೇವೆಯಿಂದಲೂ ಅರಿತುಕೊ, ತತ್ತ್ವದರ್ಶಿಗಳಾದ ಜ್ಞಾನಿಗಳು ನಿನಗೆ ಜ್ಞಾನವನ್ನು ಉಪದೇಶಮಾಡುವರು.

(ಭಾಷ್ಯ)

೨೯೫. ತದ್ ವಿದ್ಧಿ ವಿಜಾನೀಹಿ ಯೇನ ವಿಧಿನಾ ಪ್ರಾಪ್ಯತೇ ಇತಿ । ಆಚಾರ್ಯಾನ್ ಅಭಿಗಮ್ಯ ಪ್ರಣಿಪಾತೇನ ಪ್ರಕರ್ಷೇಣ ನೀಚೈಃ ಪತನಂ ಪ್ರಣಿಪಾತಃ ದೀರ್ಘನಮಸ್ಕಾರಃ ತೇನ । 'ಕಥಂ ಬನ್ಧಃ? ಕಥಂ ಮೋಕ್ಷಃ? ಕಾ ವಿದ್ಯಾ? ಕಾ ಚ ಅವಿದ್ಯಾ?" ಇತಿ ಪರಿಪ್ರಶ್ನೇನ ಸೇವಯಾ ಗುರುಶುಶ್ರೂಷಯಾ ಏವಮಾದಿನಾ ಪ್ರಶ್ರಯೇಣ ಆವರ್ಜಿತಾಃ ಆಚಾರ್ಯಾಃ ಉಪದೇಕ್ಷ್ಯನ್ತಿ ಕಥಯಿಷ್ಯನ್ತಿ ತೇ ಜ್ಞಾನಂ ಯಥೋಕ್ತವಿಶೇಷಣಂ ಜ್ಞಾನಿನಃ । ಜ್ಞಾನವನ್ತೋಽಪಿ ಕೇಚಿತ್ ಯಥಾವತ್ ತತ್ತ್ವದರ್ಶನಶೀಲಾಃ, ಅಪರೇ ನ । ಅತಃ ವಿಶಿನಷ್ಟಿ ತತ್ತ್ವದರ್ಶಿನಃ ಇತಿ ॥

(ಭಾಷ್ಯಾರ್ಥ)

ಅದು ಯಾವ ರೀತಿಯಿಂದ ದೊರೆಯುವದೆಂಬುದನ್ನು (ಹೇಳುತ್ತೇನೆ) ತಿಳಿದುಕೊ. ಆಚಾರ್ಯರ ಬಳಿಗೆ ಹೋಗಿ ಪ್ರಣಿಪಾತ (ಮಾಡುವ) ದರಿಂದಲೂ–ಪ್ರಣಿಪಾತವೆಂದರೆ ಪೂರ ಕೆಳಗೆ ಅಡ್ಡಬೀಳುವದು, ಎಂದರೆ ಉದ್ದಕ್ಕೆ ನಮಸ್ಕರಿಸುವದು. ಆ (ನಮಸ್ಕಾರದಿಂದ)ಲೂ–ಪರಿಪ್ರಶ್ನೆಯಿಂದಲೂ ಎಂದರೆ "ಬಂಧವು ಹೇಗಾಯಿತು? ಮೋಕ್ಷವು ಹೇಗಾದೀತು? ವಿದ್ಯೆಯೆಂದರೆ ಯಾವದು? ಅವಿದ್ಯೆಯೆಂದರೆ ಯಾವದು?" ಎಂದು (ಕೇಳುವದರಿಂದಲೂ) ಸೇವೆಯಿಂದಲೂ ಎಂದರೆ ಗುರುಶುಶ್ರೂಷೆಯಿಂದಲೂ ಇದೇ ಮುಂತಾದ ಸಾಧನದಿಂದ (ತಿಳಿದುಕೊ). ವಿನಯದಿಂದ (ಅವರನ್ನು) ಸ್ವಾಧೀನಪಡಿಸಿಕೊಂಡರೆ[1] ಆ ಜ್ಞಾನಿಗಳಾದ ಆಚಾರ್ಯರು

1 ಅವರ ಪ್ರೇಮವನ್ನು ಸಂಪಾದಿಸಿಕೊಂಡರೆ ಎಂದರ್ಥ. ಜ್ಞಾನಿಗಳು ಸ್ವಭಾವದಿಂದಲೇ ಎಲ್ಲರನ್ನೂ ಪ್ರೀತಿಸುವರಾದರೂ ಯಾರು ಜ್ಞಾನವನ್ನು ಬಯಸುವರೋ ಯಾರು ಜ್ಞಾನಕ್ಕೆ ತಕ್ಕವರೋ ಅಂಥ ಶಿಷ್ಯರಲ್ಲಿ ಅವರಿಗೆ ಪ್ರೇಮವು ಹೆಚ್ಚು

ಮೇಲೆ ಹೇಳಿದ ವಿಶೇಷಣಗಳುಳ್ಳ ಜ್ಞಾನವನ್ನು ನಿನಗೆ ಹೇಳಿಕೊಡುವರು. **ಜ್ಞಾನಿಗಳಾದರೂ ತತ್ತ್ವವನ್ನು ಇದ್ದದ್ದು ಇದ್ದ ಹಾಗೆ ಕಂಡುಕೊಳ್ಳುವದರಲ್ಲಿಯೇ ಕೆಲವರು ನಿರತರಾಗಿರುವರು, ಮತ್ತೆ ಕೆಲವರು ಹಾಗಲ್ಲ**[1], ಆದ್ದರಿಂದ 'ತತ್ತ್ವದರ್ಶಿಗಳಾದ' ಎಂದು (ಜ್ಞಾನಿಗಳಿಗೆ) ವಿಶೇಷಣವನ್ನು (ಭಗವಂತನು) ಸೇರಿಸಿರುತ್ತಾನೆ.

(ಭಾಷ್ಯ)

೨೯೬. ಯೇ ಸಮ್ಯಗ್ದರ್ಶಿನಃ ತೈರುಪದಿಷ್ಟಂ ಜ್ಞಾನಂ ಕಾರ್ಯಕ್ಷಮಂ ಭವತಿ ನೇತರತ್ ಇತಿ ಭಗವತೋ ಮತಮ್। ತಥಾ ಚ ಸತಿ ಇದಮಪಿ ಸಮರ್ಥಂ ವಚನಮ್—

(ಭಾಷ್ಯಾರ್ಥ)

**ಯಾರು ಸರಿಯಾಗಿ ತತ್ತ್ವವನ್ನು ಮನಗಂಡಿರುವರೋ ಅವರು ಉಪದೇಶಮಾಡಿದ ಜ್ಞಾನವೇ ಕಾರ್ಯಕಾರಿಯಾಗುವದೇ ಹೊರತು ಮಿಕ್ಕದ್ದು ಆಗಲಾರದು**–ಎಂಬುದು ಭಗವಂತನ ಅಭಿಪ್ರಾಯವು. ಹೀಗೆಂದು ಇಟ್ಟುಕೊಂಡರೆ ಈ ಮುಂದಿನ ಮಾತೂ ಸಾರ್ಥಕವಾಗುವದು[2].—

**ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಣ್ಡವ ।**
**ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥ ೩೫ ॥**

೩೫. ಅದನ್ನು ಅರಿತುಕೊಂಡರೆ, ಎಲೈ ಪಾಂಡವನ, ಮತ್ತೆ ಹೀಗೆ ಮೋಹವನ್ನು ಹೊಂದುವದಿಲ್ಲ. ಅದರಿಂದ ಭೂತಗಳೆಲ್ಲವನ್ನೂ ಆತ್ಮನಲ್ಲಿಯೂ ಮತ್ತು ನನ್ನಲ್ಲಿಯೂ ಕಾಣುವೆ.

(ಭಾಷ್ಯ)

೨೯೭. ಯಜ್ಜ್ಞಾತ್ವಾ ಯತ್ ಜ್ಞಾನಂ ತೈಃ ಉಪದಿಷ್ಟಮ್ ಅಧಿಗಮ್ಯ, ಪ್ರಾಪ್ಯ[3] ಪುನಃ ಭೂಯಃ ಮೋಹಮ್ ಏವಂ ಯಥಾ ಇದಾನೀಂ ಮೋಹಂ

---

1. ಮುಂ ೧-೨-೧೨ರಲ್ಲಿ ಹೇಳಿರುವ ಬ್ರಹ್ಮನಿಷ್ಠರ ಸೂಚನೆ

2. "ಯಜ್ಜ್ಞಾತ್ವಾ" ಎಂಬ ಸಂಬಂಧಸರ್ವನಾಮವನ್ನುಪಯೋಗಿಸಿರುವದರಿಂದ ತತ್ತ್ವನಿಷ್ಠನಾದ ಗುರುವು ಉಪದೇಶಮಾಡಿದರೇ ಅಜ್ಞಾನವು ನಾಶವಾಗುವದೆಂದು ಹೇಳಿದಂತಾಯಿತು

3. ಈ ಮಾತು ಮು॥ಮೈ॥ಗಳಲ್ಲಿಲ್ಲ.

ಗತೋಽಸಿ ಪುನಃ ಏವಂ ನ ಯಾಸ್ಯಸಿ ಹೇ ಪಾಣ್ಡವ । ಕಿಂಚ ಯೇನ ಜ್ಞಾನೇನ ಭೂತಾನಿ ಅಶೇಷೇಣ ಬ್ರಹ್ಮಾದೀನಿ ಸ್ತಮ್ಬಪರ್ಯನ್ತಾನಿ ದ್ರಕ್ಷ್ಯಸಿ ಸಾಕ್ಷಾತ್ ಆತ್ಮನಿ ಪ್ರತ್ಯಗಾತ್ಮನಿ[1] "ಮತ್ಸಂಸ್ಥಾನಿ ಇಮಾನಿ ಭೂತಾನಿ[2]" ಇತಿ ಅಥೋ ಅಪಿ ಮಯಿ ವಾಸುದೇವೇ "ಪರಮೇಶ್ವರೇ ಚ ಇಮಾನಿ" ಇತಿ । ಕ್ಷೇತ್ರಜ್ಞೇಶ್ವರೈಕತ್ವಂ ಸರ್ವೋಪನಿಷತ್ಪ್ರಸಿದ್ಧಂ ದ್ರಕ್ಷ್ಯಸಿ ಇತ್ಯರ್ಥಃ ॥

(ಭಾಷ್ಯಾರ್ಥ)

ಯಾವದನ್ನು ಅರಿತುಕೊಂಡರೆ ಎಂದರೆ ಅವರು ಹೇಳಿಕೊಡುವ ಆ ಜ್ಞಾನವನ್ನು ತಿಳಿದುಕೊಂಡರೆ ಸಂಪಾದಿಸಿಕೊಂಡರೆ, ಮತ್ತೆ ಇನ್ನೂ ಹೀಗೆ ಈಗ ನಿನಗೆ ಭ್ರಾಂತಿಯುಂಟಾಗಿರುವದಷ್ಟೆ, ಇದರಂತೆ ಎಲೈ ಪಾಂಡವನೆ, (ನೀನು) ಮತ್ತೂ (ಮೋಹವನ್ನು) ಹೊಂದುವದಿಲ್ಲ. ಇದಲ್ಲದೆ ಆದರಿಂದ ಎಂದರೆ (ಆ) ಜ್ಞಾನದಿಂದ ಎಲ್ಲಾ ಭೂತಗಳನ್ನೂ ಎಂದರೆ ಬ್ರಹ್ಮನಿಂದ ಹಿಡಿದು ಸ್ಥಾವರದವರೆಗಿನ (ಪ್ರಾಣಿಗಳನ್ನು) ಆತ್ಮನಲ್ಲಿ ನಿನ್ನೊಳಗಿನ ನೇರಾದ ಆತ್ಮನಲ್ಲಿ "ಈ ಪ್ರಾಣಿಗಳು ನನ್ನಲ್ಲಿಯೇ ಇವೆ" ಎಂದು ಕಂಡುಕೊಳ್ಳುವೆ. ಮತ್ತು ವಾಸುದೇವನಾದ ನನ್ನಲ್ಲಿಯೂ "ಪರಮೇಶ್ವರನಲ್ಲಿಯೂ ಇವುಗಳಿವೆ" ಎಂದು (ಕಂಡುಕೊಳ್ಳುವೆ). ಕ್ಷೇತ್ರಜ್ಞ ಮತ್ತು ಈಶ್ವರ-(ಇವೆರಡೂ) ಒಂದೇ ತತ್ತ್ವವೆಂಬ ಸಕಲ ಉಪನಿಷತ್ತುಗಳಲ್ಲಿಯೂ ಪ್ರಸಿದ್ಧವಾಗಿರುವ (ವಿಷಯವನ್ನು) ಕಂಡುಕೊಳ್ಳುತ್ತೀಯೆ ಎಂದರ್ಥ[3].

## ಜ್ಞಾನದ ಹೆಚ್ಚುಗಾರಿಕೆ

(ಭಾಷ್ಯ)

೨೯೮. ಕಿಂಚ ಏತಸ್ಯ ಜ್ಞಾನಸ್ಯ ಮಾಹಾತ್ಮ್ಯಮ್ —

(ಭಾಷ್ಯಾರ್ಥ)

ಮತ್ತು ಈ ಜ್ಞಾನದ ಹೆಚ್ಚುಗಾರಿಕೆ (ಏನೆಂದರೆ) :-

ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥ ೩೬ ॥

---

1 2 ಈ ಮಾತುಗಳು ಮ॥ ವ್ಯಾ। ಗಳಲ್ಲಿಲ್ಲ

3 ಪರಮಾತ್ಮನೇ ಜ್ಞಾನಿಯ ಆತ್ಮನಾದ್ದರಿಂದ ಆತ್ಮನಲ್ಲಿ ಸಕಲವನ್ನೂ ಕಾಣುವದೆಂದರೂ ವಾಸುದೇವನಲ್ಲಿ ಸಕಲವನ್ನೂ ಕಾಣುವದೆಂದರೂ ಒಂದೇ. ಈ ೬; ಗೀ. ೯-೪, ೧೩-೨.

೩೬. ನೀನು ಎಲ್ಲಾ ಪಾಪಿಗಳಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ (ಚಿಂತೆಯಿಲ್ಲ. ಆ) ಪಾಪವನ್ನೆಲ್ಲವನ್ನೂ ಜ್ಞಾನವೆಂಬ ತೆಪ್ಪದಿಂದಲೇ ದಾಟಿಬಿಡುವೆ.

(ಭಾಷ್ಯ)

೨೯. ಅಪಿ ಚೇತ್ ಅಸಿ ಪಾಪೇಭ್ಯಃ ಪಾಪಕೃದ್ಭ್ಯಃ ಸರ್ವೇಭ್ಯಃ ಅತಿಶಯೇನ ಪಾಪಕೃತ್ ಪಾಪಕೃತ್ತಮಃ ಸರ್ವಂ ಜ್ಞಾನಪ್ಲವೇನೈವ ಜ್ಞಾನಮೇವ ಪ್ಲವಂ ಕೃತ್ವಾ ವೃಜಿನಂ ವೃಜಿನಾರ್ಣವಂ ಪಾಪಸಮುದ್ರಂ ಸಂತರಿಷ್ಯಸಿ। ಧರ್ಮೋಽಪಿ ಇಹ ಮುಮುಕ್ಷೋಃ ಪಾಪಮ್ ಉಚ್ಯತೇ ॥

(ಭಾಷ್ಯಾರ್ಥ)

(ನೀನು) ಪಾಪವನ್ನು ಮಾಡಿದವರಿಗೆಲ್ಲರಿಗಿಂತಲೂ ಹೆಚ್ಚಾಗಿ ಪಾಪವನ್ನು ಮಾಡಿದ ಪಾಪಕೃತ್ತಮನಾಗಿದ್ದರೂ (ಚಿಂತೆಯಿಲ್ಲ), ಆ ಪಾಪವೆಲ್ಲವನ್ನೂ ಜ್ಞಾನಪ್ಲವದಿಂದಲೇ ಜ್ಞಾನವನ್ನೇ ತೆಪ್ಪವನ್ನಾಗಿ ಮಾಡಿಕೊಂಡು [1], ಪಾಪದ ಸಮುದ್ರವನ್ನೇ ದಾಟಿಬಿಡುವೆ. ಮುಮುಕ್ಷುವಾದವನಿಗೆ ಧರ್ಮವೂ ಪಾಪವೇ [2] ಎಂದು ಇಲ್ಲಿ ಹೇಳಿರುತ್ತದೆ.

(ಭಾಷ್ಯ)

೩೦೦. ಜ್ಞಾನಂ ಕಥಂ ನಾಶಯತಿ ಪಾಪಮ್ ಇತಿ ದೃಷ್ಟಾನ್ತ ಉಚ್ಯತೇ–

(ಭಾಷ್ಯಾರ್ಥ)

ಜ್ಞಾನವು ಪಾಪವನ್ನು ಹೇಗೆ ನಾಶಮಾಡುತ್ತದೆ? ಎಂಬುದಕ್ಕೆ (ಒಂದು) ದೃಷ್ಟಾಂತವನ್ನು ಹೇಳುತ್ತೇನೆ: --

**ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ಕುರುತೇಽರ್ಜುನ ।**
**ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ॥೩೭॥**

---

1. ಜ್ಞಾನವನ್ನು ಭಾರತದಲ್ಲಿ ಆಗಾಗ್ಗೆ ತೆಪ್ಪಕ್ಕೆ ಹೋಲಿಸಿರುತ್ತದೆ. ಆಳವಾಗಿ ಭಯಂಕರಪ್ರಾಣಿಗಳಿಂದ ತುಂಬಿರುವ ಸಮುದ್ರವನ್ನೂ ಲೆಕ್ಕಿಸದಂತೆ ಜನರನ್ನು ತೆಪ್ಪವು ಅಥವಾ ಹಡಗು ಕಡೆಹಾಯಿಸುವ ಹಾಗೆ ಜ್ಞಾನವು ಸಂಸಾರದಿಂದ ಪಾರುಮಾಡುವದೆಂಬುದು ಇದರಿಂದ ಸೂಚಿತವಾಗುತ್ತದೆ.

2. ಸೂ. ಭಾ. ೪-೧-೧೪

೩೭. ಚೆನ್ನಾಗಿ ಹತ್ತಿಕೊಂಡ ಬೆಂಕಿಯು ಕಟ್ಟಿಗೆಗಳನ್ನು ಹೇಗೆ ಬೂದಿಮಾಡುವದೋ, ಎಲೈ ಅರ್ಜುನನೆ, ಜ್ಞಾನಾಗ್ನಿಯು ಕರ್ಮಗಳೆಲ್ಲವನ್ನೂ ಹಾಗೆಯೇ ಬೂದಿಮಾಡಿಬಿಡುವದು.

(ಭಾಷ್ಯ)

೩೦೧. ಯಥಾ ಏಧಾಂಸಿ ಕಾಷ್ಠಾನಿ ಸಮಿದ್ಧಃ ಸಮ್ಯಕ್ ಇದ್ಧಃ ದೀಪ್ತಃ ಅಗ್ನಿಃ ಭಸ್ಮಸಾತ್ ಭಸ್ಮೀಭಾವಂ ಕುರುತೇ ಹೇ ಅರ್ಜುನ ಜ್ಞಾನಮೇವ ಅಗ್ನಿಃ ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ । ನಿರ್ಬೀಜಂ ಕರೋತಿ ಇತ್ಯರ್ಥಃ । ನ ಹಿ ಸಾಕ್ಷಾದೇವ ಜ್ಞಾನಾಗ್ನಿಃ ಕರ್ಮಾಣಿ ಇನ್ಧನವತ್ ಭಸ್ಮೀಕರ್ತುಂ ಶಕ್ನೋತಿ । ತಸ್ಮಾತ್ ಸಮ್ಯಗ್ದರ್ಶನಂ ಸರ್ವಕರ್ಮಣಾಂ ನಿರ್ಬೀಜತ್ವಕಾರಣಮ್ ಇತ್ಯಭಿಪ್ರಾಯಃ । ಸಾಮರ್ಥ್ಯಾತ್ ಯೇನ ಕರ್ಮಣಾ ಶರೀರಮ್ ಆರಬ್ಧಂ ತತ್ ಪ್ರವೃತ್ತಫಲತ್ವಾತ್ ಉಪಭೋಗೇನೈವ ಕ್ಷೀಯತೇ[1] । ಅತಃ ಯಾನಿ ಅಪ್ರವೃತ್ತಫಲಾನಿ ಜ್ಞಾನೋತ್ಪತ್ತೇಃ ಪ್ರಾಕ್ ಕೃತಾನಿ ಜ್ಞಾನಸಹಭಾವೀನಿ ಚ[2] ಅತೀತಾನೇಕಜನ್ಮಕೃತಾನಿ ಚ ತಾನ್ಯೇವ ಸರ್ವಾಣಿ ಭಸ್ಮಸಾತ್ ಕುರುತೇ ॥

(ಭಾಷ್ಯಾರ್ಥ)

ಹೇಗೆ ಕಟ್ಟಿಗೆಗಳನ್ನು ಸೌದೆಯ (ಕಡ್ಡಿ)ಗಳನ್ನು ಸಮಿದ್ಧವಾದ ಎಂದರೆ ಚೆನ್ನಾಗಿ ಹತ್ತಿಕೊಂಡು ಉರಿಯುತ್ತಿರುವ ಬೆಂಕಿಯು ಭಸ್ಮವಾಗಿ ಬೂದಿಯಾಗಿ ಮಾಡಿಬಿಡುವದೋ, ಎಲೈ ಅರ್ಜುನನೆ, ಹಾಗೆಯೇ ಜ್ಞಾನಾಗ್ನಿಯು ಎಂದರೆ ಜ್ಞಾನವೆಂಬ ಬೆಂಕಿಯು ಕರ್ಮಗಳೆಲ್ಲವನ್ನೂ ಬೂದಿಯಾಗಿ ಮಾಡಿಬಿಡುತ್ತದೆ.[3] ಎಂದರೆ ಅವುಗಳನ್ನು ಬೀಜವಿಲ್ಲದಂತೆ ಮಾಡುತ್ತದೆ ಎಂದರ್ಥ. ಏಕೆಂದರೆ ಬೆಂಕಿಯು ಕಟ್ಟಿಗೆಯನ್ನು (ಹೇಗೆ ನೇರಾಗಿ ಸುಟ್ಟು ಬೂದಿಮಾಡುವದೋ) ಹಾಗೆ ಜ್ಞಾನಾಗ್ನಿಯು ಕರ್ಮಗಳನ್ನು ನೇರಾಗಿ ಬೂದಿಮಾಡಲಾರದು.

---

1. ಈ ವಾಕ್ಯದ ಬಳಿಕ "ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇಽಥ ಸಂಪತ್ಸ್ಯೇ (ಛಾ. ೬-೧೪-೨) ಇತಿ ಶ್ರುತೇಃ" ಎಂಬ ವಾಕ್ಯವೊಂದು ಹೆಚ್ಚಾಗಿ ಮ॥ಪ್ರೈ॥

2. "ವಾ" ಮ॥ಪ್ರೈ॥

3. ಬೆಂಕಿಯು ಕಟ್ಟಿಗೆಯನ್ನು ಸುಟ್ಟು ರೂಪಾಂತರವನ್ನೇ ಮಾಡುವದು. ಆದರೆ ಜ್ಞಾನವು ಇದ್ದದ್ದನ್ನು ತಿಳಿಸುವದೇ ಹೊರತು ಇಲ್ಲದ್ದನ್ನು ಉಂಟುಮಾಡಲಾರದು. ಆದ್ದರಿಂದ ಜ್ಞಾನವು ಸುಡುತ್ತದೆ ಎಂದರೆ ಕರ್ತೃತ್ವದ ಮಿಥ್ಯಾಭಿಮಾನವನ್ನು ಕಳೆದು ಕರ್ಮಗಳಿಗೆ ಫಲವಿಲ್ಲದಂತೆ ಮಾಡುತ್ತದೆ ಎಂದರ್ಥ. ಸೂ.ಭಾ. ೪-೧-೧೫, ೩-೩-೩೨. ಹಿಂದೆ ಹಡಗಿನ ದೃಷ್ಟಾಂತವನ್ನು ಕೊಟ್ಟಿರುವದರಿಂದ ಸಂಸಾರದುಃಖವು ಹಾಗೆಯೇ ಉಳಿದುಕೊಳ್ಳುತ್ತದೆ ಎಂಬ ಶಂಕೆಯನ್ನು ಪರಿಹರಿಸುವಮಟ್ಟಿಗೆ ಬೆಂಕಿಯ ದೃಷ್ಟಾಂತವನ್ನುಪಯೋಗಿಸಬೇಕು.

ಆದ್ದರಿಂದ ಸರಿಯಾದ (ಆತ್ಮ) ಜ್ಞಾನವು ಕರ್ಮಗಳೆಲ್ಲವೂ ನಿರ್ಬೀಜವಾಗುವಂತೆ ಮಾಡುವದಕ್ಕೆ ಕಾರಣವಾಗುವದೆಂದೇ ಅಭಿಪ್ರಾಯವು. ಯಾವ ಕರ್ಮದಿಂದ (ಜ್ಞಾನಿಯ) ಶರೀರವು ಉಂಟಾಗಿರುವದೋ ಅದು ಫಲವನ್ನು ಕೊಡುವದಕ್ಕೆ ಪ್ರಾರಂಭಮಾಡಿಬಿಟ್ಟಿರುವದರಿಂದ[1] ಅನುಭವಿಸುವದರಿಂದಲೇ ಕ್ಷಯವಾಗಿಬಿಡುವದು. ಆದ್ದರಿಂದ ಜ್ಞಾನವುಂಟಾಗುವದಕ್ಕೆ ಮೊದಲು ಯಾವ ಕರ್ಮಗಳನ್ನು ಮಾಡಿದ್ದನೋ[2] ಮತ್ತು ಜ್ಞಾನವಿರುವಾಗ ಯಾವ ಕರ್ಮಗಳನ್ನು ಮಾಡುತ್ತಾನೋ[3] ಹಿಂದೆ ಅನೇಕ ಜನ್ಮಗಳಲ್ಲಿ ಯಾವ ಯಾವ ಕರ್ಮಗಳನ್ನು ಮಾಡಿದ್ದನೋ[4] ಆ ಸರ್ವಕರ್ಮಗಳನ್ನೇ[5] (ಜ್ಞಾನವು) ಬೂದಿಮಾಡುತ್ತದೆ–ಎಂದು (ಯುಕ್ತಿಯ) ಸಾಮರ್ಥ್ಯದಿಂದ (ತಿಳಿಯಬೇಕಾಗಿರುತ್ತದೆ)[6]

(ಭಾಷ್ಯ)

೩೦೨. ಯತ ಏವಮ್ ಅತಃ—

(ಭಾಷ್ಯಾರ್ಥ)

ಹೀಗಿರುವದಷ್ಟೆ, ಆದ್ದರಿಂದ: –

---

1 ಶರೀರವೇ ಪ್ರಾರಬ್ಧಕರ್ಮದ ಫಲವು ಜ್ಞಾನವೂ ಆ ಪ್ರಾರಬ್ಧಕರ್ಮದ ಫಲವೇ ಆಗಿರುವದರಿಂದ ಆಗಿಹೋಗಿರುವ ಫಲವನ್ನು ಅದು ಸಲ್ಲಿಸಲಾರದು

2. ಈ ಜನ್ಮದಲ್ಲಿ.

3. ಇವುಗಳಿಗೆ ಆಗಾಮಿಕರ್ಮಗಳೆಂದು ಹೆಸರು

4. ಇವುಗಳಿಗೂ ಈ ಜನ್ಮದಲ್ಲಿ ಜ್ಞಾನವುಂಟಾಗುವ ಮೊದಲು ಮಾಡಿದ್ದ ಕರ್ಮಗಳಿಗೂ **ಸಂಚಿತಕರ್ಮಗಳೆಂದು** ಹೆಸರು

5. "ಬ್ರಾಹ್ಮಣರೆಲ್ಲರೂ ಬಂದರು'' ಎಂಬರೆ ಪ್ರಕೃತಕ್ಕೆ ಬೇಕಾಗಿದ್ದ ಬ್ರಾಹ್ಮಣರೆಂದೇ ಅರ್ಥವನ್ನು ಮಾಡಿಕೊಳ್ಳಬೇಕಾಗಿರುವಂತೆ ಇಲ್ಲಿಯೂ "ಕರ್ಮಗಳೆಲ್ಲವೂ" ಎಂಬ ಮಾತಿಗೂ ಸಂಕುಚಿತಾರ್ಥವನ್ನು ಮಾಡಬೇಕು ಎಂದರ್ಥ.

6. ಜ್ಞಾನವು ಕರ್ಮವನ್ನು ಅಸತ್ಯವೆಂದು ತೋರಿಸುವ ಮೂಲಕವೇ ನಿರ್ಬೀಜವಾಗಿ ಮಾಡುವದೇ ಹೊರತು ಅದನ್ನು ನಾಶಮಾಡುವದಿಲ್ಲ– ಎಂಬ ಪರಮಾರ್ಥದೃಷ್ಟಿಯನ್ನು ಅವಲಂಬಿಸಿದರೆ ನಿಜವಾಗಿ ಯಾವ ಕರ್ಮವೂ ಉಳಿದಿರುವದೇ ಇಲ್ಲವಾದರೂ ಕರ್ಮವು ಫಲವನ್ನು ಕೊಡುವದೆಂಬ ವ್ಯಾವಹಾರಿಕದೃಷ್ಟಿಯಿಂದ ಈ ವಿಚಾರವನ್ನು ಮಾಡಿರುತ್ತದೆ ಎಂದು ತಿಳಿಯಬೇಕು. ಸೂ. ಭಾ ೪-೧-೧೩.

**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।**
**ತತ್ ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿನ್ದತಿ ॥ ೩೮ ॥**

೩೮. ಜ್ಞಾನಕ್ಕೆ ಸದೃಶವಾದ ಪವಿತ್ರ (ವಸ್ತು) ಇಲ್ಲಿ ಇಲ್ಲವೇ ಇಲ್ಲ. ಅದನ್ನು ಯೋಗಸಂಸಿದ್ಧನಾಗಿ ಕಾಲಾನುಕಾಲಕ್ಕೆ ತನ್ನಲ್ಲಿ ತಾನೇ ಪಡೆದು ಕೊಳ್ಳುವನು.

(ಭಾಷ್ಯ)

೩೦೩. ನ ಹಿ ಜ್ಞಾನೇನ ಸದೃಶಂ ತುಲ್ಯಂ ಪವಿತ್ರಂ ಪಾವನಂ ಶುದ್ಧಿ ಕರಮ್ ಇಹ ವಿದ್ಯತೇ । ತತ್ ಜ್ಞಾನಂ ಸ್ವಯಮೇವ ಯೋಗಸಂಸಿದ್ಧಃ ಯೋಗೇನ ಕರ್ಮಯೋಗೇನ ಸಮಾಧಿಯೋಗೇನ ಚ ಸಂಸಿದ್ಧಃ ಸಂಸ್ಕೃತಃ ಯೋಗ್ಯತಾಮ್ ಆಪನ್ನಃ ಸನ್ ಮುಮುಕ್ಷುಃ ಕಾಲೇನ ಮಹತಾ ಆತ್ಮನಿ ವಿನ್ದತಿ ಲಭತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಜ್ಞಾನಕ್ಕೆ ಸದೃಶವಾದ ಸಮವಾಗಿರುವ ಪವಿತ್ರವಾದ ಪಾವನವಾದ ಶುದ್ಧಿ ಗೊಳಿಸುವ (ವಸ್ತು) ಈ (ಲೋಕ)ದಲ್ಲಿ ಇಲ್ಲವೇ ಇಲ್ಲ. ಈ ಜ್ಞಾನವನ್ನು ಯೋಗ ಸಂಸಿದ್ಧನಾಗಿ **ಯೋಗದಿಂದ ಎಂದರೆ ಕರ್ಮಯೋಗದಿಂದಲೂ ಸಮಾಧಿ ಯೋಗದಿಂದಲೂ ಸಂಸಿದ್ಧನಾಗಿ ಎಂದರೆ ಸಂಸ್ಕಾರವನ್ನು ಹೊಂದಿ (ಜ್ಞಾನಕ್ಕೆ) ಯೋಗ್ಯತೆಯನ್ನು ಹೊಂದಿದವನಾಗಿ**[1] ಮುಮುಕ್ಷುವಾದವನು ಬಹು ಕಾಲದಮೇಲೆ ತನ್ನಲ್ಲಿ ತಾನೇ ಪಡೆದುಕೊಳ್ಳುವನ್ನು, ಹೊಂದುವನು ಎಂದರ್ಥ.

## ಜ್ಞಾನಕ್ಕೆ ಗೊತ್ತಾದ ಉಪಾಯ

(ಭಾಷ್ಯ)

೩೦೪. ಯೇನ ಏಕಾನ್ತೇನ ಜ್ಞಾನಪ್ರಾಪ್ತಿಃ ಭವತಿ ಸ ಉಪಾಯಃ ಉಪ ದಿಶ್ಯತೇ—

(ಭಾಷ್ಯಾರ್ಥ)

ಯಾವದರಿಂದ ನಿಯತವಾಗಿ ಜ್ಞಾನವು ದೊರಕಿಯೇ ದೊರಕುವದೋ ಆ ಉಪಾಯವನ್ನು (ಈಗ ಭಗವಂತನು) ತಿಳಿಸಿಕೊಡುತ್ತಾನೆ :—

---

1. ಕರ್ಮಯೋಗವು ಜ್ಞಾನಕ್ಕೆ ಬಹಿರಂಗವಾದ ಉಪಾಯವು, ಧ್ಯಾನಯೋಗವು ಅಂತರಂಗವಾದ ಉಪಾಯವು. ಎರಡರಿಂದಲೂ ಚಿತ್ತಸಂಸ್ಕಾರವಾದವನಿಗೇ ಜ್ಞಾನವುಂಟಾ ಗುವದು.

**ಶ್ರದ್ಧಾವಾಂಲ್ಲಭತೇ ಜ್ಞಾನಂ ತತ್ಪರಃ ಸಂಯತೇನ್ದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾನ್ತಿಮಚಿರೇಣಾಧಿಗಚ್ಛತಿ ॥ ೩೯ ॥**

೩೯. ಶ್ರದ್ಧೆಯುಳ್ಳವನೂ ತತ್ಪರನೂ ಇಂದ್ರಿಯಸಂಯಮವುಳ್ಳವನೂ ಆಗಿರುವಾತನು ಜ್ಞಾನವನ್ನು ಹೊಂದುವನು. ಜ್ಞಾನವನ್ನು ಪಡೆದರೆ ಹೆಚ್ಚಿನ ಶಾಂತಿಯನ್ನು ಬೇಗನೆ ಪಡೆಯುವನು.

(ಭಾಷ್ಯ)

೩೦೫. ಶ್ರದ್ಧಾವಾನ್ ಶ್ರದ್ಧಾಲುಃ ಲಭತೇ ಜ್ಞಾನಮ್ । ಶ್ರದ್ಧಾಲುತ್ವೇಽಪಿ ಭವತಿ ಕಶ್ಚಿತ್ ಮನ್ದಪ್ರಸ್ಥಾನಃ, ಅತ ಆಹ–ತತ್ಪರಃ ಗುರೂಪಸದನಾದೌ ಅಭಿಯುಕ್ತಃ ಜ್ಞಾನಲಬ್ಧ್ಯುಪಾಯೇ । ಶ್ರದ್ಧಾವಾನ್ ತತ್ಪರೋಽಪಿ ಅಜಿತೇನ್ದ್ರಿಯಃ ಸ್ಯಾತ್ ಇತ್ಯತ ಆಹ–ಸಂಯತೇನ್ದ್ರಿಯಃ ಸಂಯತಾನಿ ವಿಷಯೇಭ್ಯೋ ನಿವರ್ತಿತಾನಿ ಯಸ್ಯ ಇನ್ದ್ರಿಯಾಣಿ ಸ ಸಂಯತೇನ್ದ್ರಿಯಃ । ಯಃ ಏವಂಭೂತಃ ಶ್ರದ್ಧಾವಾನ್ ತತ್ಪರಃ ಸಂಯತೇನ್ದ್ರಿಯಶ್ಚ ಸಃ ಅವಶ್ಯಂ ಜ್ಞಾನಂ ಲಭತೇ । ಪ್ರಣಿಪಾತಾದಿಸ್ತು ಬಾಹ್ಯಃ ಅನೈಕಾನ್ತಿಕೋಽಪಿ ಭವತಿ ಮಾಯಾವಿತ್ವಾದಿಸಂಭವಾತ್ । ನ ತು ತತ್ ಶ್ರದ್ಧಾವತ್ತ್ವಾದೌ ಇತಿ ಏಕಾನ್ತತಃ ಜ್ಞಾನಲಬ್ಧ್ಯುಪಾಯಃ ॥

(ಭಾಷ್ಯಾರ್ಥ)

ಶ್ರದ್ಧೆಯುಳ್ಳವನಿಗೆ ಶ್ರದ್ಧಾಳುವಾದವನಿಗೆ ಜ್ಞಾನವು ದೊರಕುವದು. ಶ್ರದ್ಧಾಳುವಾಗಿದ್ದರೂ ಒಬ್ಬೊಬ್ಬನು (ಸಾಧನವನ್ನು ಮಾಡುವದಕ್ಕೆ) ಮೆಲ್ಲಗೆ ಹೊರಡುವದುಂಟು. ಆದ್ದರಿಂದ ತತ್ಪರನಾಗಿಯೂ ಇರಬೇಕೆಂದು (ಭಗವಂತನು) ಹೇಳಿರುತ್ತಾನೆ. (ತತ್ಪರನೆಂದರೆ) ಗುರುವಿನ ಬಳಿಗೆ (ವಿನಯದಿಂದ) ಹೋಗಿ ಸೇರುವದೇ ಮುಂತಾದ ಜ್ಞಾನವನ್ನು ಪಡೆಯುವದಕ್ಕೆ ಬೇಕಾದ ಸಾಧನಗಳಲ್ಲಿ ಕುಶಲನಾದವನು. (ಹೀಗೆ) ಶ್ರದ್ಧಾವಂತನಾಗಿ ತತ್ಪರನಾಗಿದ್ದರೂ ಅಜಿತೇಂದ್ರಿಯನಾಗಿರಬಹುದು. ಆದ್ದರಿಂದ "ಸಂಯತೇನ್ದ್ರಿಯಃ" ಎಂದು ಹೇಳಿರುತ್ತಾನೆ. ಯಾವನ ಇಂದ್ರಿಯಗಳು ಸಂಯತವಾಗಿರುವವೋ ಎಂದರೆ ವಿಷಯಗಳಿಂದ ಹಿಂದಕ್ಕೆಳೆಯಲ್ಪಟ್ಟಿರುವವೋ ಅವನು ಸಂಯತೇಂದ್ರಿಯನು. **ಯಾವನು ಈ ರೀತಿಯಾಗಿ ಶ್ರದ್ಧಾವಂತನಾಗಿ (ಸಾಧನದಲ್ಲಿ) ತತ್ಪರನಾಗಿ ಸಂಯತೇಂದ್ರಿಯನಾಗಿ ಇರುವನೋ ಅವನಿಗೆ ಅವಶ್ಯವಾಗಿ ಜ್ಞಾನವು ದೊರಕುವದು.** ಆದರೆ (ಹಿಂದಿನ ಶ್ಲೋಕದಲ್ಲಿ ಹೇಳಿರುವ) **ಪ್ರಣಿಪಾತವೇ ಮುಂತಾದದ್ದು ಹೊರಗಿನ ಸಾಧನವು; (ಅದು) ಗೊತ್ತಾಗಿ (ಫಲ)ವನ್ನುಂಟುಮಾಡದೆಹೋದರೂ**

ಹೋಗಬಹುದು. ಏಕೆಂದರೆ (ಆ ಪ್ರಣಿಪಾತವೇ ಮುಂತಾದದ್ದರಲ್ಲಿ) ಮಾಯಾವಿಯಾಗಿರುವದೇ ಮುಂತಾದವುಗಳೂ[1] ಇರಬಹುದು ಆದರೆ ಶ್ರದ್ಧಾವಂತನಾಗಿರುವದೇ ಮುಂತಾದ (ಈ ಶ್ಲೋಕದಲ್ಲಿ ಹೇಳಿದ) ಸಾಧನಗಳಲ್ಲಿ ಇವು (ಇರುವ ಸಂಭವ) ವಿಲ್ಲ, ಆದ್ದರಿಂದ (ಇದು) ಜ್ಞಾನವನ್ನು ಪಡೆಯುವದಕ್ಕೆ ಗೊತ್ತಾದ ಸಾಧನವಾಗಿರುತ್ತದೆ.

(ಭಾಷ್ಯ)

೩೦೬. ಕಿಂ ಪುನರ್ಜ್ಞಾನಲಾಭಾತ್ ಸ್ಯಾತ್ ಇತಿ? ಉಚ್ಯತೇ । ಜ್ಞಾನಂ ಲಬ್ಧ್ವಾ ಪರಾಂ ಮೋಕ್ಷಾಖ್ಯಾಂ ಶಾನ್ತಿಮ್ ಉಪರತಿಮ್ ಅಚಿರೇಣ ಕ್ಷಿಪ್ರಮೇವ ಅಧಿಗಚ್ಛತಿ । ಸಮ್ಯಗ್ದರ್ಶನಾತ್ ಕ್ಷಿಪ್ರಮೇವ ಮೋಕ್ಷೋ ಭವತಿ ಇತಿ ಸರ್ವಶಾಸ್ತ್ರನ್ಯಾಯಪ್ರಸಿದ್ಧಃ ಸುನಿಶ್ಚಿತೋಽರ್ಥಃ ॥

(ಭಾಷ್ಯಾರ್ಥ)

(ಪ್ರಶ್ನೆ) :—ಜ್ಞಾನವು ದೊರೆತರೆ ಆಗುವದಾದರೂ ಏನು ?

(ಉತ್ತರ) :—ಹೇಳುತ್ತೇನೆ (ಕೇಳು). ಜ್ಞಾನವು ದೊರೆತರೆ ಮೋಕ್ಷವೆಂಬ ಹೆಸರಿನ ಹೆಚ್ಚಿನ ಶಾಂತಿಯನ್ನು ಬೇಗನೆ ಕೂಡಲೆ[2] ಪಡೆಯುವನು. ಸರಿಯಾದ (ಆತ್ಮ)ಜ್ಞಾನದಿಂದ ಮೋಕ್ಷವುಂಟಾಗುವದೆಂಬುದು ಸಕಲ ಶಾಸ್ತ್ರಗಳಿಂದಲೂ ಯುಕ್ತಿಯಿಂದಲೂ ಸಿದ್ಧವಾಗಿ[3] ಅತ್ಯಂತವಾಗಿ ನಿಶ್ಚಿತವಾಗಿರುವ[4] ವಿಷಯವು.

(ಭಾಷ್ಯ)

೩೦೭. ಅತ್ರ ಸಂಶಯೋ ನ ಕರ್ತವ್ಯಃ । ಪಾಪಿಷ್ಠೋ ಹಿ ಸಂಶಯಃ । ಕಥಮಿತಿ ? ಉಚ್ಯತೇ—

---

1 ಮೋಸ, ತಟವಟ, ಆಸೆ—ಮುಂತಾದವು

2 ಜ್ಞಾನವಾದಮೇಲೆ ಎಂಬರ್ಥದಿಂದ 'ಬೇಗನೆ' ಎಂಬ ಮಾತನ್ನು ಉಪಯೋಗಿಸಿಲ್ಲ; ಉಪಾಸನೆಯಂತೆ ಕಾಲಾಂತರದಲ್ಲಿ ಫಲವಾಗುದದಿಲ್ಲವೆಂಬುದನ್ನು ತಿಳಿಸುವದಕ್ಕೆ ಈ ಶಬ್ದವನ್ನು ಪ್ರಯೋಗಿಸಿದೆ ಎಂದು ಭಾವ

3 ಛಾ. ೬-೧೪-೨ ಮುಂತಾದ ಶಾಸ್ತ್ರಗಳಿಂದಲೂ ಜ್ಞಾನವಾದರೆ ಅಜ್ಞಾನದಿಂದಾಗಿದ್ದ ಅನರ್ಥವು ಕೂಡಲೆ ಹೋಗಿಬಿಡುವದೆಂಬ ಯುಕ್ತಿಯಿಂದಲೂ ಇದು ಏರ್ಪಡುತ್ತದೆ.

4 ಜ್ಞಾನದಿಂದ ಗೊತ್ತಾಗಿ ಮೋಕ್ಷವು ಸಿಕ್ಕೀತೊ, ಇಲ್ಲವೊ?—ಎಂದು ಸಂಶಯಪಡಲು ಕಾರಣವಿಲ್ಲವೇ ಇಲ್ಲ. ಸೂ.ಭಾ. ೪-೧-೧೩.

(ಭಾಷ್ಯಾರ್ಥ)

ಈ (ವಿಷಯ)ದಲ್ಲಿ ಸಂಶಯುವನ್ನು ಮಾಡತಕ್ಕದ್ದಲ್ಲ. ಏಕೆಂದರೆ ಸಂಶಯವು ಬಹಳ ಕೆಟ್ಟದ್ದು. ಅದು ಹೇಗೆಂದರೆ ಹೇಳುತ್ತೇನೆ —

**ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ ।**
**ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥೪೦॥**

೪೦. ತಿಳಿಯದವನೂ ಶ್ರದ್ಧೆಯಿಲ್ಲದವನೂ ಸಂಶಯಾತ್ಮನೂ ನಾಶ ಹೊಂದುವನು ಸಂಶಯಾತ್ಮನಾದವನಿಗೆ ಈ ಲೋಕವಿಲ್ಲ, ಪರಲೋಕವಿಲ್ಲ, ಸುಖವಿಲ್ಲ.

(ಭಾಷ್ಯ)

೩೦೮. ಅಜ್ಞಶ್ಚ ಅನಾತ್ಮಜ್ಞಶ್ಚ ಅಶ್ರದ್ದಧಾನಶ್ಚ ಗುರುವಾಕ್ಯಶಾಸ್ತ್ರೇಷು ಅವಿಶ್ವಾಸವಾಂಶ್ಚ ಸಂಶಯಾತ್ಮಾ ಚ ಸಂಶಯಚಿತ್ತಶ್ಚ ವಿನಶ್ಯತಿ । ಅಜ್ಞಾಶ್ರದ್ದಧಾನೌ ಯದ್ಯಪಿ ವಿನಶ್ಯತಃ, ತಥಾಪಿ ನ ತಥಾ ಯಥಾ ಸಂಶಯಾತ್ಮಾ । ಸಂಶಯಾತ್ಮಾ ತು ಪಾಪಿಷ್ಠಃ ಸರ್ವೇಷಾಮ್ । ಕಥಮ್ ? ನಾಯಂ ಸಾಧಾರಣೋಽಪ್ತಿ ಲೋಕಃ ಅಸ್ತಿ । ತಥಾ ನ ಪರೋ ಲೋಕಃ । ನ ಸುಖಂ ತತ್ರಾಪಿ ಸಂಶಯೋತ್ಪತ್ತೇಃ ಸಂಶಯಾತ್ಮನಃ ಸಂಶಯಚಿತ್ತಸ್ಯ। ತಸ್ಮಾತ್ ಸಂಶಯೋ ನ ಕರ್ತವ್ಯಃ ॥

(ಭಾಷ್ಯಾರ್ಥ)

ತಿಳಿಯದವನೂ ಎಂದರೆ ಆತ್ಮನನ್ನು ಅರಿತುಕೊಳ್ಳದವನೂ ಶ್ರದ್ಧೆಯಿಲ್ಲದವನೂ ಎಂದರೆ ಗುರುವಾಕ್ಯದಲ್ಲಿಯೂ ಶಾಸ್ತ್ರದಲ್ಲಿಯೂ ವಿಶ್ವಾಸವಿಲ್ಲದವನೂ ಸಂಶಯಾತ್ಮನೂ ಎಂದರೆ ಚಿತ್ತದಲ್ಲಿ ಸಂಶಯವುಳ್ಳವನೂ ನಾಶಹೊಂದುತ್ತಾನೆ ತಿಳಿಯದವನೂ ಶ್ರದ್ಧೆಯಿಲ್ಲದವನೂ ಹಾಳಾಗುವದು ನಿಜ, ಆದರೆ ಸಂಶಯಾತ್ಮನು (ಕೆಡು)ವಷ್ಟು (ಅವರು ಕೆಡು)ವದಿಲ್ಲ.[1] ಇವರಲ್ಲೆಲ್ಲ ಸಂಶಯಾತ್ಮನಾದವನು (ತೀರ) ಕೆಟ್ಟವನು [2] ಹೇಗೆಂದರೆ ಸಂಶಯಾತ್ಮನಿಗೆ ಎಂದರೆ ಸಂಶಯದಿಂದ ಕೂಡಿದ ಚಿತ

---

1. ಅಜ್ಞಾನ, ಅಶ್ರದ್ಧೆ–ಇವುಗಳ ಜೊತೆಗೆ ಸಂಶಯವೂ ಇದ್ದರೆ ಬಹಳ ಕೆಟ್ಟಗತಿಯಾಗುವದು.

2. ಸಂಶಯಾತ್ಮನಿಗಾಗುವ ಗತಿಗೆ ಹೋಲಿಸಿದರೆ ಅವರಿಗೆ ಆಗುವ ಗತಿಯು ಎಷ್ಟೋ ಉತ್ತಮವೆನಬೇಕಾಗುವದು.

ವುಳ್ಳವನಿಗೆ ಈ ಎಲ್ಲರಿಗೂ ಸಮಾನವಾಗಿರುವ ಲೋಕವೇ ಇರುವದಿಲ್ಲ. ಇದರಂತೆ (ಅವನಿಗೆ) ಪರಲೋಕವೂ ಇರುವದಿಲ್ಲ.[1] ಅವನಿಗೆ ಸುಖವೆಂಬುದೂ ಇರುವದಿಲ್ಲ ; ಏಕೆಂದರೆ (ಅವನಿಗೆ) ಅದರಲ್ಲಿಯೂ ಸಂಶಯವುಂಟಾಗುತ್ತದೆ.[2] ಆದ್ದರಿಂದ ಸಂಶಯವನ್ನು ಮಾಡತಕ್ಕದ್ದಲ್ಲ.[3]

## ಜ್ಞಾನದಿಂದ ಸಂಶಯವನ್ನು ತೊಲಗಿಸಿಕೊಳ್ಳಬೇಕು

(ಭಾಷ್ಯ)

೩೦೯. ಕಸ್ಮಾತ್ ?[4]

(ಭಾಷ್ಯಾರ್ಥ)

ಏಕೆಂದರೆ :—

**ಯೋಗಸಂನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂಶಯಮ್ ।**
**ಆತ್ಮವನ್ತಂ ನ ಕರ್ಮಾಣಿ ನಿಬಧ್ನನ್ತಿ ಧನಞ್ಜಯ ॥೪೧॥**

೪೧. ಯೋಗದಿಂದ ಕರ್ಮಗಳನ್ನು ಸಂನ್ಯಾಸಮಾಡಿದವನಾಗಿ ಜ್ಞಾನದಿಂದ ಸಂಶಯವನ್ನು ಕತ್ತರಿಸಿಕೊಂಡಿರುವ ಆತ್ಮವಂತನನ್ನು, ಎಲೈ ಧನಂಜಯನೆ, ಕರ್ಮಗಳು ಕಟ್ಟಿಹಾಕುವದಿಲ್ಲ.

(ಭಾಷ್ಯ)

೩೧೦. ಯೋಗಸಂನ್ಯಸ್ತಕರ್ಮಾಣಂ ಪರಮಾರ್ಥದರ್ಶನಲಕ್ಷಣೇನ ಯೋಗೇನ ಸಂನ್ಯಸ್ತಾನಿ ಕರ್ಮಾಣಿ ಯೇನ ಪರಮಾರ್ಥದರ್ಶಿನಾ ಧರ್ಮಾಧರ್ಮಾಖ್ಯಾನಿ ತಂ ಯೋಗಸಂನ್ಯಸ್ತಕರ್ಮಾಣಮ್ । ಕಥಂ ಯೋಗಸಂನ್ಯಸ್ತಕರ್ಮಾ ಇತಿ ? ಆಹ—ಜ್ಞಾನಸಂಛಿನ್ನಶಂಶಯಮ್ ಜ್ಞಾನೇನ ಆತ್ಮೇಶ್ವರೈಕತ್ವ

---

1. ಕ. ಭಾ. ೧-೨-೬.

2. ಸುಖವು ಸಿಕ್ಕೀತೊ, ಇಲ್ಲವೊ ? ಸಿಕ್ಕರೆ ಅದು ಸುಖವೆನ್ನುವುದಕ್ಕೆ ಪ್ರಮಾಣವೇನು ?–ಎಂದು ಅನುಭವವನ್ನು ಕೂಡ ಸಂಶಯದಿಂದ ಕಾಣುವನು.

3. ಮುಂದಿನ ಶ್ಲೋಕಗಳಲ್ಲಿ ಹೇಳಿರುವಂತೆ ಜ್ಞಾನದಿಂದ ಸಂಶಯಗಳನ್ನು ಬಗೆಹರಿಸಿಕೊಳ್ಳುವದಕ್ಕಾಗಿ ಶ್ರದ್ಧೆಯಿಂದ ಪ್ರಯತ್ನಮಾಡಬೇಕು ಎಂದು ಅಭಿಪ್ರಾಯ. ಏಕೆಂದರೆ ಸಂಶಯವನ್ನು ವಿಧಿಸುವದಕ್ಕಾಗಲಿ ನಿಷೇಧಿಸುವದಕ್ಕಾಗಲಿ ಆಗುವದಿಲ್ಲ.

4. ಇಲ್ಲಿ "ಯಸ್ಮಾತ್" ಎಂಬ ಮಾತು ಮೂಲ ಪ್ರತಿಗಳಲ್ಲಿ ಹೆಚ್ಚಾಗಿದೆ.

ದರ್ಶನಲಕ್ಷಣೇನ ಸಂಛಿನ್ನಃ ಸಂಶಯಃ ಯಸ್ಯ ಸಃ ಜ್ಞಾನಸಂಛಿನ್ನಸಂಶಯಃ । ಯ ಏವಂ ಯೋಗಸಂನ್ಯಸ್ತಕರ್ಮಾ ತಮ್ ಆತ್ಮವನ್ತಮ್ ಅಪ್ರಮತ್ತಂ ಗುಣಚೇಷ್ಟಾರೂಪೇಣ ದೃಷ್ಟಾನಿ ಕರ್ಮಾಣಿ ನ ನಿಬಧ್ನನ್ತಿ ಅನಿಷ್ಟಾದಿರೂಪಂ ಫಲಂ ನಾರಭನ್ತೇ ಹೇ ಧನಞ್ಜಯ ॥

(ಭಾಷ್ಯಾರ್ಥ)

ಯೋಗಸಂನ್ಯಸ್ತಕರ್ಮನು ಎಂದರೆ ಪರಮಾರ್ಥದರ್ಶನವೆಂಬ **ಯೋಗ**[1] ದಿಂದ ಧರ್ಮ, ಅಧರ್ಮ-ಎಂಬ ಹೆಸರಿನ ಕರ್ಮಗಳನ್ನು ಯಾವನು ಸಂನ್ಯಾಸ ಮಾಡಿರುವನೋ ಅವನು, ಅಂಥ ಯೋಗಸಂನ್ಯಸ್ತಕರ್ಮನಾದ. (ಇವನು) ಯೋಗ ಸಂನ್ಯಸ್ತಕರ್ಮನೆಂಬುದು ಹೇಗೆ? ಎಂದರೆ (ಭಗವಂತನು) ಹೇಳುತ್ತಾನೆ: ಜ್ಞಾನ ಸಂಛಿನ್ನಸಂಶಯನಾಗಿರುವದರಿಂದ, ಜ್ಞಾನದಿಂದ ಎಂದರೆ ಆತ್ಮನೂ ಈಶ್ವರನೂ ಒಂದೇ ಎಂಬ ಜ್ಞಾನದಿಂದ ಸಂಶಯವನ್ನು ಕತ್ತರಿಸಿಕೊಂಡವನು ಯಾವನೋ ಅವನು ಜ್ಞಾನಸಂಛಿನ್ನಸಂಶಯನು.[2] ಯಾವನು ಹೀಗೆ[3] ಯೋಗಸಂನ್ಯಸ್ತ ಕರ್ಮನಾಗಿರುವನೋ ಅಂಥ ಆತ್ಮವಂತನನ್ನು ಎಂದರೆ ಎಚ್ಚರಿಕೆಯನ್ನು ಕಳೆದು ಕೊಳ್ಳದೆ ಇರುವವನನ್ನು "ಗುಣಗಳ ವ್ಯಾಪಾರಗಳೇ (ಇವು)" ಎಂದು[4] ಕಂಡು ಕೊಂಡಿರುವದರಿಂದ ಕರ್ಮಗಳು ಕಟ್ಟಿಹಾಕುವದಿಲ್ಲ, ಎಂದರೆ ಅನಿಷ್ಟವಾದದ್ದೇ ಮುಂತಾದ[5] ಫಲವನ್ನು ಉಂಟುಮಾಡದೆ ಇರುವವಯ್ಯ, ಎಲೈ ಧನಂಜಯ.

(ಭಾಷ್ಯ)

೩೧೧. ಯಸ್ಮಾತ್ ಕರ್ಮಯೋಗಾನುಷ್ಠಾನಾತ್ ಅಶುದ್ಧಿಕ್ಷಯಹೇತುಕ ಜ್ಞಾನಸಂಛಿನ್ನಸಂಶಯೋ ನ ನಿಬಧ್ಯತೇ ಕರ್ಮಭಿಃ ಜ್ಞಾನಾಗ್ನಿದಗ್ಧಕರ್ಮತ್ವಾದೇವ, ಯಸ್ಮಾಚ್ಚ ಜ್ಞಾನಕರ್ಮಾನುಷ್ಠಾನವಿಷಯೇ ಸಂಶಯವಾನ್ ವಿನಶ್ಯತಿ—

1 ಯೋಗವೆಂದರೆ ಆತ್ಮಜ್ಞಾನವೇ; ಕರ್ಮಯೋಗಧ್ಯಾನಯೋಗಗಳೂ ಗೌಣಾರ್ಥದಲ್ಲಿ ಯೋಗಗಳು. ೪-೧ ರ ಅವತರಣಿಕೆ (ಭಾ ಭಾ ೨೨೧) ೪-೩೮, ೫-೫ ಈ ಶ್ಲೋಕಗಳ ಭಾಷ್ಯವನ್ನು ನೋಡಿರಿ.

2 ಮುಂ. ಭಾ ೨-೨-೮

3 ಕರ್ಮಫಲವನ್ನು ಬಯಸದೆ ಕರ್ಮಯೋಗವನ್ನು ಮಾಡುವವನು ಯೋಗಸಂನ್ಯಸ್ತಕರ್ಮನು ಎಂಬ ವಿವರಣೆಯು ಪ್ರಕೃತಕ್ಕೆ ಹೊಂದುವದಿಲ್ಲ; ಏಕೆಂದರೆ ಇಲ್ಲಿ ಜ್ಞಾನದ ಸ್ತುತಿಯನ್ನು ಮಾಡುವದಕ್ಕೆ ಹೊರಟಿದೆ.

4. ೩-೨೮ ರ ಭಾಷ್ಯವನ್ನು ನೋಡಿ.

5 ಅನಿಷ್ಟವೆಂದರೆ ಸ್ಥಾವರತಿರ್ಯಗಾದಿಜನ್ಮ, ಇಷ್ಟವೆಂದರೆ ದೇವಾದಿಜನ್ಮವು, ಮಿಶ್ರವೆಂದರೆ ಮನುಷ್ಯಜನ್ಮ. ೧೮-೧೨ ರ ಭಾಷ್ಯವನ್ನು ನೋಡಿ.

(ಭಾಷ್ಯಾರ್ಥ)

ಕರ್ಮಯೋಗವನ್ನು ಮಾಡುವದರಿಂದ (ಚಿತ್ತದ) ಅಶುದ್ಧಿಯು ನಾಶವಾಗುವದರಿಂದುಂಟಾದ ಜ್ಞಾನದಿಂದ ಸಂಶಯವನ್ನು ಕತ್ತರಿಸಿಕೊಂಡವನು (ಕರ್ಮಗಳಿಗೆ) ಕಟ್ಟುಬೀಳುವದಿಲ್ಲ. ಜ್ಞಾನಾಗ್ನಿಯಿಂದ (ಅವನ) ಕರ್ಮಗಳು ಸುಟ್ಟುಹೋಗಿರುವವೆಂಬುದೇ ಇದಕ್ಕೆ ಕಾರಣವಾಗಿರುತ್ತದೆ.[1] ಆದ್ದರಿಂದಲೂ, ಮತ್ತು ಜ್ಞಾನಕರ್ಮಗಳನ್ನು ಮಾಡುವ ವಿಷಯದಲ್ಲಿ ಸಂಶಯವುಳ್ಳಾತನು[2] ಹಾಳಾಗುವನಾದ್ದರಿಂದಲೂ[3]—

**ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾತ್ಮನಃ ।**
**ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ ॥೪೨॥**

೪೨. ಆದ್ದರಿಂದ ಅಜ್ಞಾನದಿಂದ ಉಂಟಾಗಿ ನಿನ್ನ ವಿಷಯದಲ್ಲಿ ಹೃದಯದಲ್ಲಿದ್ದುಕೊಂಡಿರುವ ಸಂಶಯವನ್ನು ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿ ಯೋಗವನ್ನು ಮಾಡು, ಎಲೈ ಭಾರತನೆ, ಏಳು.

(ಭಾಷ್ಯ)

೩೧೨. ತಸ್ಮಾತ್ ಪಾಪಿಷ್ಠಮ್ ಅಜ್ಞಾನಸಂಭೂತಮ್ ಅಜ್ಞಾನಾತ್ ಅವಿವೇಕಾತ್ ಜಾತಂ ಹೃತ್ಸ್ಥಂ ಹೃದಿ ಬುದ್ಧೌ ಸ್ಥಿತಂ ಜ್ಞಾನಾಸಿನಾ ಶೋಕಮೋಹಾದಿದೋಷಹರಂ ಸಮ್ಯಗ್ದರ್ಶನಂ ಜ್ಞಾನಂ ತದೇವ ಅಸಿಃ ಖಡ್ಗಃ[4] ತೇನ ಜ್ಞಾನಾಸಿನಾ ತೇನ ಆತ್ಮನಃ ಸ್ವಸ್ಯ । ಆತ್ಮವಿಷಯತ್ವಾತ್ ಸಂಶಯಸ್ಯ । ನ ಹಿ ಪರಸ್ಯ ಸಂಶಯಃ ಪರೇಣ ಛೇತ್ತವ್ಯತಾಂ ಪ್ರಾಪ್ತಃ, ಯೇನ ಸ್ವಸ್ಯ ಇತಿ ವಿಶೇಷ್ಯೇತ । ಅತಃ ಆತ್ಮವಿಷಯೋಽಪಿ ಸ್ವಸ್ಯೈವ ಭವತಿ । ಛಿತ್ತ್ವಾ ಏನಂ ಸಂಶಯಂ ಸ್ವವಿನಾಶಹೇತುಭೂತಂ ಯೋಗಂ ಸಮ್ಯಗ್ದರ್ಶನೋಪಾಯಂ ಕರ್ಮಾನುಷ್ಠಾನಮ್ ಆತಿಷ್ಠ ಕುರು ಅತ್ಯರ್ಥಃ । ಉತ್ತಿಷ್ಠ ಚ ಇದಾನೀಂ ಯುದ್ಧಾಯ ಭಾರತ ಇತಿ ॥

---

1. ೪-೧೯.

2 ಜ್ಞಾನಕರ್ಮಗಳಿಗೆ ಶಾಸ್ತ್ರೋಕ್ತವಾದ ಫಲವುಂಟೆಂಬುದನ್ನು ನಿಶ್ಚಯಿಸಿಕೊಳ್ಳದೆ ಅಶ್ರದ್ಧೆಯಿಂದಿರುವಾತನು.

3. ಮುಂದಿನ ಶ್ಲೋಕದಲ್ಲಿ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು, ಅದಕ್ಕಾಗಿ ಕರ್ಮಯೋಗಧ್ಯಾನಯೋಗಗಳನ್ನು ಮಾಡಬೇಕು ಎಂಬ ಅಧ್ಯಾಯಾರ್ಥವನ್ನು ಉಪಸಂಹಾರ ಮಾಡಿದೆ ಎಂದು ಭಾವ.

4. ಈ ಮಾತು ಮ॥ ಪ್ರ॥ ಗಳಲ್ಲಿಲ್ಲ.

(ಭಾಷ್ಯಾರ್ಥ)

ಆದ್ದರಿಂದ ಅತ್ಯಂತ ಕೆಟ್ಟದಾಗಿರುವ, ಅಜ್ಞಾನದಿಂದುಂಟಾಗಿರುವ, ಅಜ್ಞಾನದಿಂದ ಎಂದರೆ ಅವಿವೇಕದಿಂದ ಹುಟ್ಟಿರುವ[1] ಹೃತ್ಸ್ಥವಾದ, ಹೃದಯದಲ್ಲಿ ಎಂದರೆ ಬುದ್ಧಿಯಲ್ಲಿರುವ[2], ಆತ್ಮನ ಎಂದರೆ ನಿನ್ನ (ಸ್ವರೂಪವಿಷಯವಾದ ಸಂಶಯವನ್ನು). ಏಕೆಂದರೆ ಸಂಶಯವು ಆತ್ಮವಿಷಯವಾಗಿದೆ. ಜ್ಞಾನಾಸಿಯಿಂದ ಶೋಕ, ಮೋಹ-ಮುಂತಾದ ದೋಷಗಳನ್ನು ತೊಲಗಿಸುವ ಸಮ್ಯಗ್ದರ್ಶನವೇ ಜ್ಞಾನವು. ಆ (ಜ್ಞಾನವೆಂಬುದೇ) ಅಸಿಯು, ಕತ್ತಿಯು. ಆ ಜ್ಞಾನಾಸಿಯಿಂದ (ನಿನ್ನ ಸಂಶಯವನ್ನು ಕತ್ತರಿಸಿಕೊಂಡು ಎಂದರ್ಥ). (ಇಲ್ಲಿ ಆತ್ಮನಃ ಸಂಶಯಮ್ ಎಂದರೆ ತನ್ನ ವಿಷಯವಾದ ಸಂಶಯವನ್ನು ಎಂದೇ ಅರ್ಥ) ; ಏಕೆಂದರೆ ಒಬ್ಬರ ಸಂಶಯವನ್ನು ಮತ್ತೊಬ್ಬರು ಬಗೆಹರಿಸುವ ಹಾಗಿಲ್ಲ. ಹಾಗಿದ್ದರೆ ತನ್ನ (ಸಂಶಯವನ್ನು, ತಾನು ಮಾಡಿಕೊಂಡಿರುವ ಸಂಶಯವನ್ನು)[3] ಎಂದೂ ವಿಶೇಷಣವನ್ನು ಕೊಡಬಹುದಾಗಿತ್ತು. ಆದ್ದರಿಂದ ತನ್ನ ವಿಷಯವಾದ (ಸಂಶಯವನ್ನೂ) ತನ್ನದೆಂದೇ (ಕರೆಯಬಹುದಾ)ಗಿದೆ. ನಿನ್ನ ನಾಶಕ್ಕೆ ಕಾರಣವಾಗಿರುವ ಈ (ನಿನ್ನ ವಿಷಯವಾದ) ಸಂಶಯವನ್ನು ಕತ್ತರಿಸಿಹಾಕಿಕೊಂಡು **ಯೋಗ**ವನ್ನು ಎಂದರೆ ಸಮ್ಯಗ್ದರ್ಶನಕ್ಕೆ ಉಪಾಯವಾಗಿರುವ ಕರ್ಮಾನುಷ್ಠಾನವನ್ನು ಸ್ವೀಕರಿಸು, ಮಾಡು ಎಂದರ್ಥ. ಮತ್ತು ಎಲೈ ಭಾರತನೆ, ಈಗ ಯುದ್ಧಕ್ಕೆ ಏಳು.

ಇತಿ ಶ್ರೀ ಭಗವದ್ಗೀತಾಭಾಷ್ಯೇ ಜ್ಞಾನಸಂಯೋಗೋ ನಾಮ ಚತುರ್ಥೋಽಧ್ಯಾಯಃ

---

1. ಅಜ್ಞಾನವೆಂದರೆ ಜ್ಞಾನಾಭಾವ, ಸಂಶಯ, ವಿಪರೀತಜ್ಞಾನ—ಈ ಮೂರೂ ಆಗಬಹುದು. ಪ್ರಕೃತದಲ್ಲಿ ಜ್ಞಾನಾಭಾವ, ಎಂದರೆ ಅನಾತ್ಮಾನಾತ್ಮರನ್ನು ವಿಂಗಡಿಸಿ ಇದ್ದಂತೆ ತಿಳಿದುಕೊಳ್ಳದಿರುವದು ಎಂದೇ ಅರ್ಥ

2 ಕಾಮಗಳಂತೆ ಸಂಶಯವೂ ಅಂತಃಕರಣದಲ್ಲಿರುತ್ತದೆ ಆತ್ಮನಲ್ಲಿಲ್ಲ

3 ನಿನ್ನ ಎಂದರೆ ನೀನು ಮಾಡಿಕೊಂಡಿರುವ, ನಿನ್ನ ವಿಷಯವಾದ—ಎಂದು ಎರಡು ಅರ್ಥಗಳೂ ಆಗಬಹುದು, ಆದರೆ ಮೊದಲನೆಯ ಅರ್ಥವನ್ನು ಹೇಳಬೇಕಾದದ್ದೇ ಇಲ್ಲ, ಏಕೆಂದರೆ ಪ್ರತಿಯೊಬ್ಬನೂ ತನ್ನ ತನ್ನ ಸಂಶಯವನ್ನು ತಾನೇ ಬಗೆಹರಿಸಿಕೊಳ್ಳಬೇಕು.

# ನಾಲ್ಕನೆಯ ಅಧ್ಯಾಯದ ಸಾರ

೧-೩. ಹಿಂದಿನ ಅಧ್ಯಾಯದಲ್ಲಿ ಕರ್ಮಯೋಗವನ್ನೂ ಅದರಿಂದುಂಟಾಗುವ ಜ್ಞಾನವನ್ನೂ ಸ್ವಲ್ಪದರಲ್ಲಿ ತಿಳಿಸಿದ ಭಗವಂತನು ಈ ಯೋಗವನ್ನುಪದೇಶಿಸಿದ ಆಚಾರ್ಯರ ಪರಂಪರೆಯನ್ನು ಹೇಳಿ ಈ ಉಪದೇಶವನ್ನು ಉಪಸಂಹಾರಮಾಡ್ಡೋಣವೆಂದು “ ಅರ್ಜುನನೆ, ಈ ಕರ್ಮಯೋಗದಿಂದ ದೊರೆಯುವ ಜ್ಞಾನಯೋಗವನ್ನು ನಾನು ಹಿಂದೆ ವಿವಸ್ವಂತನಿಗೆ ಹೇಳಿದೆನು ; ಆತನು ಮನುವಿಗೂ ಮನುವು ಇಕ್ಷ್ವಾಕುವಿಗೂ ತಿಳಿಸಿದ್ದರು. ಹೀಗೆ ರಾಜರ್ಷಿಗಳ ಪರಂಪರೆಯಿಂದ ಬಂದಿದ್ದ ಸಮ್ಯಗ್ದರ್ಶನವನ್ನು ಮುಂದೆ ಸಾಗಿಸುವ ತ್ರಾಣವು ಈಚಿನವರಿಗೆ ಸಾಲದೆಹೋದದ್ದರಿಂದ ಇದು ಬಹುಕಾಲದಿಂದ ಜನರಿಗೆ ದೊರಕದೆ ಇತ್ತು. ನೀನು ನನ್ನ ಭಕ್ತನೂ ಗೆಳೆಯನೂ ಆಗಿರುವೆ ಎಂಬ ಕಾರಣದಿಂದ ಈ ರಹಸ್ಯವಾದ ಉತ್ತಮ ಯೋಗವನ್ನು ನಿನಗೆ ಮತ್ತೆ ಉಪದೇಶಮಾಡಿರುವೆನು ” ಎಂದು ನುಡಿದನು.

೪-೯. ಅರ್ಜುನನು “ ಶ್ರೀಕೃಷ್ಣನೆ, ನೀನು ಈಚೆಗೆ ಹುಟ್ಟಿದವನು, ಹಿಂದೆ ಹುಟ್ಟಿದ್ದ ವಿವಸ್ವಂತನಿಗೆ ಉಪದೇಶವನ್ನು ಮಾಡಿದ್ದು ಹೇಗೆ ? ” ಎನ್ನಲು ಶ್ರೀಕೃಷ್ಣನು ಹೇಳುತ್ತಾನೆ. “ ನಮ್ಮೆಲ್ಲರಿಗೂ ಎಷ್ಟೋ ಜನ್ಮಗಳು ಆಗಿ ಹೋಗಿವೆ. ನಾನು ಸರ್ವಜ್ಞನಾದ ಪರಮೇಶ್ವರನಾದ್ದರಿಂದ ಅದೆಲ್ಲವನ್ನೂ ಬಲ್ಲೆನು, ನೀನರಿಯೆ. ನಿಜವಾಗಿ ನೋಡಿದರೆ ನನಗೆ ಜನ್ಮಗಳೂ ಇಲ್ಲ, ಕರ್ಮದ ಕಟ್ಟೂ ಇಲ್ಲ ; ಆದರೂ ಧರ್ಮವನ್ನು ಉದ್ಧಾರಮಾಡಿ ಸಾಧುಜನರನ್ನು ರಕ್ಷಿಸುವದಕ್ಕಾಗಿ ನನ್ನ ಮಾಯೆಯಿಂದ ಆಗಾಗ್ಗೆ ಅವತರಿಸುತ್ತಿರುವೆನು. ಈ ನನ್ನ ಅವತಾರದ ರಹಸ್ಯವನ್ನು ಯಾವನು ತಿಳಿದುಕೊಳ್ಳುವನೋ ಅವನು ಜನ್ಮರಹಿತವಾದ ನನ್ನ ಸ್ವರೂಪವನ್ನೇ ಪಡೆಯುವನು.

೧೦-೧೫. ಹೀಗೆ ಅನೇಕರು ಜ್ಞಾನವೈರಾಗ್ಯಸಂಪನ್ನರಾಗಿ ನನ್ನ ಸ್ವರೂಪವನ್ನು ಪಡೆದಿರುತ್ತಾರೆ. ಇಂಥ ಸ್ವರೂಪಪ್ರಾಪ್ತಿಯನ್ನು ಎಲ್ಲರಿಗೂ ಕೊಡುವದಕ್ಕೆ ನಾನು ಸಿದ್ಧನಾಗಿದ್ದರೂ ಜನರು ವರ್ಣಾಶ್ರಮಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಪಡೆಯುವದಕ್ಕೇ ಬಹುವಾಗಿ ಯತ್ನಿಸುವರು. ಏಕೆಂದರೆ ಕರ್ಮಫಲವು ಬೇಗ ದೊರೆಯುತ್ತದೆ. ಚಾತುರ್ವರ್ಣ್ಯದ ವಿಭಾಗವೂ ನನ್ನಿಂದಲೇ ಆಗಿರುತ್ತದೆ ; ಆದರೂ ಅದನ್ನು ಸೃಷ್ಟಿಸಿರುವೆನೆಂಬ ಅಭಿಮಾನವು ನನಗಿರುವದಿಲ್ಲವಾದ್ದರಿಂದ ಈ ಸೃಷ್ಟಿಕರ್ಮವು ನನಗೆ ಬಂಧಕವಾಗಿರುವದಿಲ್ಲ. ಹೀಗೆಂದು ತಿಳಿದುಕೊಂಡವರಿಗೂ ಕರ್ಮದ ಬಂಧಗಳು ಆಗುವದಿಲ್ಲ. ಹೀಗೆಂದು ತಿಳಿದುಕೊಂಡೇ ಹಿಂದಿನ ಮುಮುಕ್ಷುಗಳು ಕರ್ಮವನ್ನು ಮಾಡಿರುತ್ತಾರೆ. ಆದ್ದರಿಂದ ನೀನೂ ಈ ತಿಳಿವಳಿಕೆಯಿಂದ ಕೂಡಿ ಕರ್ಮವನ್ನು ಮಾಡು.

೧೬-೧೯. “ ಕರ್ಮವೆಂದರೆ ಯಾವದು, ಅಕರ್ಮವೆಂದರೆ ಯಾವದು ?” ಎಂಬುದನ್ನು ತಿಳಿದುಕೊಳ್ಳುವದು ಪಂಡಿತರಿಗೂ ಸುಲಭವಲ್ಲ. ಇದನ್ನು ತಿಳಿದುಕೊಳ್ಳುವದು ಅತ್ಯವಶ್ಯವಾಗಿದೆ. ಆದ್ದರಿಂದ ಇವರ ತತ್ತ್ವವನ್ನು ಹೇಳುವೆನು, ಕೇಳು. ಜನರು ‘ ನಾವು ಕರ್ಮ

ಗಳನ್ನು ಮಾಡುವವರು' ಎಂದು ತಿಳಿದುಕೊಂಡಿರುತ್ತಾರಷ್ಟೆ. ನಿಜವಾಗಿ ಅವರ ನಿಜವಾದ ಸ್ವರೂಪದಲ್ಲಿ ಯಾವ ಕರ್ತೃತ್ವವೂ ಇರುವದಿಲ್ಲ, ನಾವು ಕರ್ಮವನ್ನು ಮಾಡುತ್ತೇವೆಂದು ತಿಳಿಯುವದು ತಪ್ಪು. ಇದರಂತೆ ಏನೂ ಮಾಡದೆ ಸುಮ್ಮನೆ ಕುಳಿತಿದ್ದರೆ ಅದೇ ಅಕರ್ಮವೆಂದು ಭಾವಿಸುವದೂ ತಪ್ಪು. ಏಕೆಂದರೆ 'ಸುಮ್ಮನೆ ಕುಳಿತಿದ್ದೇನೆ' ಎಂಬ ಭಾವನೆಯಲ್ಲಿ ಅಹಂಕಾರದ ಸಂಬಂಧವಿರುವದರಿಂದ ಸುಮ್ಮನಿರುವದೆಂಬುದೂ ಒಂದು ಬಗೆಯ ಕರ್ಮವೇ ಆಗಿರುತ್ತದೆ. ಹೀಗೆ ಜನರು ಕರ್ಮವನ್ನು ಅಕರ್ಮವೆಂದೂ ಅಕರ್ಮವನ್ನು ಕರ್ಮವೆಂದೂ ತಿಳಿದುಕೊಂಡಿರುವವರಿಂದ ಬುದ್ಧಿವಂತನಾದವನು ಇವನ್ನು ಸರಿಯಾಗಿ ವಿಾರ್ಪಡಿಸಿ ತಿಳಿದುಕೊಳ್ಳಬೇಕು. ಅಂಥವನು ಕೃತಕೃತ್ಯನಾಗುವನು. ಅವನು ಮಾಡುವ ಕರ್ಮಗಳಿಗೆ ಬುಡದಲ್ಲಿ ಕಾಮವಾಗಲಿ ಸಂಕಲ್ಪವಾಗಲಿ ಇರುವದಿಲ್ಲ. ಜ್ಞಾನವೆಂಬ ಅಗ್ನಿಯಿಂದ ಅವನ ಕರ್ಮಗಳು ಸುಟ್ಟುಹೋಗಿರುವದರಿಂದ ಅವು ತಮ್ಮ ತಮ್ಮ ಫಲವನ್ನು ಕೊಡಲಾರವು.

೨೦-೨೪. 'ಯಾವನು ಕರ್ಮವನ್ನು ಮಾಡುತ್ತಿದ್ದು ಈ ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳುವನೋ ಅವನು ಕರ್ಮವನ್ನು ಮೊದಲಿನಂತೆಯೇ ಲೋಕಸಂಗ್ರಹಕ್ಕಾಗಿ ಮಾಡುತ್ತಲೇ ಇದ್ದರೂ ಇರಬಹುದು. ಆ ಸಂದರ್ಭದಲ್ಲಿ ಅವನು ನಿಜವಾಗಿ ಕರ್ಮವನ್ನು ಮಾಡಿದವನಾಗುವದಿಲ್ಲ. ಏಕೆಂದರೆ ಜ್ಞಾನದೃಷ್ಟಿಯಿಂದ ಅವನ ಕರ್ಮವು ಅಕರ್ಮವೇ ಆಗಿರುತ್ತದೆ. ಯಾವನು ಕರ್ಮದಲ್ಲಿ ತೊಡಗುವದಕ್ಕೆ ಮೊದಲೇ ಈ ಜ್ಞಾನವನ್ನು ಸಂಪಾದಿಸಿಕೊಳ್ಳುವನೋ ಅವನಂತು ಯಾವ ಕರ್ಮವನ್ನೂ ಮಾಡುವದಕ್ಕೆ ಬಯಸುವದಿಲ್ಲ. ಅವನು ಸಕಲ ಕರ್ಮಗಳನ್ನೂ ಬಿಟ್ಟು ಶರೀರಸ್ಥಿತಿಗೆ ಬೇಕಾದಷ್ಟುಮಾಟ್ಟಿನ ಕರ್ಮವನ್ನು ಮಾಡಿಕೊಂಡಿರುವನು. ಅವನಿಗೆ ತಾನು ಮಾಡುವ ಕರ್ಮದ ಲೇಪವೂ ಇರುವದಿಲ್ಲ ಜ್ಞಾನಿಯ ದೃಷ್ಟಿಯಿಂದ ಅವನಲ್ಲಿ ಯಾವ ಕರ್ಮವೂ ಇರುವದಿಲ್ಲ, ಉಳಿದವರ ದೃಷ್ಟಿಯಿಂದ ಅವನು ಕರ್ಮವನ್ನು ಮಾಡುವಂತೆ ತೋರಿದರೂ ಅದರಿಂದ ಅವನಿಗೆ ಯಾವ ಫಲವೂ ಆಗುವಂತಿಲ್ಲ. ಏಕೆಂದರೆ ನಿಜವಾಗಿ ಕರ್ಮವು ಬ್ರಹ್ಮವೇ ಆಗಿರುವದು; ಇದೇ ಜ್ಞಾನಿಯ ದೃಷ್ಟಿ.

೨೫-೩೩. ಲೋಕದಲ್ಲಿ ದೇವತೆಗಳನ್ನು ಕುರಿತು ಯಜ್ಞವನ್ನು ಮಾಡುವವರು ಕೆಲವರು, ಬ್ರಹ್ಮವಿಷಯದ ಜ್ಞಾನವೆಂಬ ಯಜ್ಞವನ್ನು ಮಾಡುವವರು ಕೆಲವರು. ಜ್ಞಾನಯಜ್ಞವನ್ನು ಬಿಟ್ಟು ಉಳಿದ ಯಜ್ಞಗಳು ಬಗೆಬಗೆಯಾಗಿರುವವು. ಹೇಗೆಂದರೆ ಕೆಲವರು ಇಂದ್ರಿಯಗಳನ್ನು ಬಿಗಿಹಿಡಿಯುವರು, ಇದು ಸಂಯಮಯಜ್ಞ. ಕೆಲವರು ಯೋಗ್ಯವಾದ ವಿಷಯಗಳನ್ನು ಮಾತ್ರ ಇಂದ್ರಿಯಗಳಿಂದ ಸೇವಿಸುವರು, ಇದು ಇಂದ್ರಿಯಯಜ್ಞ. ಕೆಲವರು ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಂಡು ಇಂದ್ರಿಯಕರ್ಮಗಳನ್ನೂ ಪ್ರಾಣದ ಕರ್ಮಗಳನ್ನೂ ಹಿಡಿತದಲ್ಲಿಡುವರು; ಇದು ಆತ್ಮಸಂಯಮಯಜ್ಞ. ಕೆಲವರು ಕೃಚ್ಛ್ರಚಾಂದ್ರಾಯಣಾದಿಗಳನ್ನು ಮಾಡುವರು; ಇದು ತಪೋಯಜ್ಞ. ಕೆಲವರು ವೇದವನ್ನು ನಿಯಮದಿಂದ ಅಧ್ಯಯನಮಾಡುವರು, ಇದು ಸ್ವಾಧ್ಯಾಯಯಜ್ಞ ಕೆಲವರು ಉಸಿರನ್ನು ಹಿಡಿದು ರೇಚಕ, ಪೂರಕ, ಕುಂಭಕ-ಇವನ್ನು ಮಾಡುವರು; ಇದು ಪ್ರಾಣಾಯಾಮಯಜ್ಞ. ಯಾವ ಯಜ್ಞವನ್ನೇ ಮಾಡಲಿ, ಯಜ್ಞದಿಂದ ಪಾಪನಿವೃತ್ತಿಯಾಗುವದು. ಯಜ್ಞವನ್ನು ಮಾಡುತ್ತಿರುವವರು ತಿನ್ನುವ ಆಹಾರವು ಅಮೃತವೆನಿಸುವದು. ಮನುಷ್ಯನಾದವನು ಯಾವದಾದರೊಂದು ಯಜ್ಞವನ್ನು ಮಾಡುತ್ತಲೇ

ಇರಬೇಕು,-ಇಲ್ಲದಿದ್ದರೆ ಅವನಿಗೆ ಈ ಲೋಕದ ಸುಖವಾಗಲಿ ಪರಲೋಕದ ಸುಖವಾಗಲಿ ದಕ್ಕಲಾರದು. ಆದರೆ ಈ ಯಜ್ಞಗಳೆಲ್ಲ ಕರ್ಮಮಯವಾಗಿರುವವು; ಜ್ಞಾನಯಜ್ಞವೊಂದು ಮಾತ್ರ ಕರ್ಮವನ್ನು ಮೀರಿರುವದು. ಇದನ್ನು ತಿಳಿದವನು ಮುಕ್ತನಾಗುತ್ತಾನೆ. ಮುಕ್ತಿಯ ಆನಂದದಲ್ಲಿ ಎಲ್ಲಾ ಆನಂದಗಳೂ ಸೇರಿರುವದರಿಂದ ಜ್ಞಾನಯಜ್ಞದ ಫಲದಲ್ಲಿ ಎಲ್ಲಾ ಕರ್ಮಗಳ ಫಲಗಳೂ ಅಡಕವಾಗಿರುತ್ತವೆ ಆದ್ದರಿಂದ ದ್ರವ್ಯಮಯವಾದ ಯಜ್ಞಕ್ಕಿಂತ ಜ್ಞಾನಯಜ್ಞವೇ ಹೆಚ್ಚಿನದು.

೩೪-೩೯. " ಈ ಯಜ್ಞವು ದೊರೆಯುವದಕ್ಕೆ ಸಾಧನವೇನೆಂದರೆ ತತ್ತ್ವವನ್ನು ತಿಳಿದು ಅದರಲ್ಲಿಯೇ ನಿಷ್ಠರಾಗಿರುವ ಸದ್ಗುರುಗಳ ಬಳಿಗೆ ಹೋಗಿ ದಂಡಪ್ರಣಾಮವನ್ನು ಮಾಡಿ ಅವರನ್ನು ಶುಶ್ರೂಷೆಮಾಡುತ್ತಾ ತತ್ತ್ವವನ್ನು ಕುರಿತ ಪ್ರಶ್ನೆಯನ್ನು ಮಾಡಿ ಅವರಿಂದ ಸರಿಯಾದ ಉತ್ತರವನ್ನು ಪಡೆದುಕೊಳ್ಳಬೇಕು. ಬರಿಯ ನಮಸ್ಕಾರವೇ ಮುಂತಾದ ಹೊರಗಿನ ಸಾಧನಗಳೇ ಸಾಲದು; ಮುಖ್ಯವಾಗಿ ಶ್ರದ್ಧೆಯೂ ಜ್ಞಾನದಲ್ಲಿಯೇ ತಾತ್ಪರ್ಯವೂ ಇಂದ್ರಿಯನಿಗ್ರಹವೂ ಇರಬೇಕು. ಇವುಗಳಿಂದ ಕೂಡಿದಾತನು ಗುರುಗಳ ಉಪದೇಶದಿಂದ ಪಡೆದುಕೊಂಡ ಜ್ಞಾನದಿಂದ ಭ್ರಾಂತಿಯೆಲ್ಲವೂ ತೊಲಗುವದು. 'ಸರ್ವಭೂತಗಳಿಗೂ ಆತ್ಮನಾಗಿರುವ ಪರಮೇಶ್ವರನೇ ನನ್ನ ಆತ್ಮನು' ಎಂಬ ಉದಾತ್ತವಾದ ಉಪನಿಷತ್ತತ್ತ್ವವು ಮನಸ್ಸಿನಲ್ಲಿ ನಾಟಿ ಸಕಲ ಧರ್ಮಾಧರ್ಮಗಳೂ ಈ ಜ್ಞಾನದಿಂದ ಸುಟ್ಟು ಬೂದಿಯಾಗುವವು. ಸಕಲ ವಿಧವಾದ ಸಂಸಾರಬಂಧದಿಂದಲೂ ಬಿಡುಗಡೆಯಾಗುವದು

೪೦-೪೨. " ತತ್ತ್ವವನ್ನು ತಿಳಿದುಕೊಳ್ಳದೆ, ಗುರುವಾಕ್ಯದಲ್ಲಿಯೂ ಶಾಸ್ತ್ರದಲ್ಲಿಯೂ ಶ್ರದ್ಧೆಯಿಲ್ಲದ ಜ್ಞಾನದಿಂದ ಮೋಕ್ಷವಾದೀತೊ, ಇಲ್ಲವೊ ?_ಎಂದು ಸಂಶಯಪಡುತ್ತಿರುವವನು ಹಾಳಾಗುವನು. ಸಂಶಯವುಳ್ಳವನಿಗೆ ಈ ಲೋಕದ ವ್ಯವಹಾರದ ಫಲವಾದ ಸುಖವೇ ಆಗುವಹಾಗಿಲ್ಲ; ಇನ್ನು ಪರಲೋಕದ ಸುಖವು ಹೇಗೆ ದಕ್ಕೀತು? ಆದರೆ ಜ್ಞಾನದಿಂದ ಸಂಶಯಗಳನ್ನೆಲ್ಲ ತೊಲಗಿಸಿಕೊಂಡು ಪರಮಾರ್ಥದರ್ಶನವೆಂಬ ಯೋಗದಿಂದ ಸಕಲ ಕರ್ಮಗಳನ್ನೂ ಮೀರಿ ಅಜ್ಞಾನವೆಂಬ ನಿದ್ರೆಗೆ ಬೀಳದೆ ಎಚ್ಚರವಾಗಿರುವವನನ್ನು ಕರ್ಮಗಳು ಎಂದಿಗೂ ಬಾಧಿಸಲಾರವು. ನಿನಗೆ ಆತ್ಮನ ವಿಷಯವಾಗಿ ಈಗ ಬಂದಿರುವ ಸಂಶಯವು ಅಜ್ಞಾನದಿಂದ ಉಂಟಾಗಿರುತ್ತದೆ ಆದ್ದರಿಂದ ಜ್ಞಾನವೆಂಬ ಕತ್ತಿಯಿಂದ ಇದನ್ನು ಕತ್ತರಿಸಿ ಹಾಕು; ಆ ಜ್ಞಾನಕ್ಕೆ ಉಪಾಯವಾದ ಯೋಗವನ್ನು ಮಾಡು. ಪ್ರಕೃತಕ್ಕೆ ಯುದ್ಧವನ್ನು ಮಾಡು, ಏಳು "

# ಐದನೆಯ ಅಧ್ಯಾಯ

---

## (ಸಂನ್ಯಾಸ ಯೋಗ)

## ಅಧ್ಯಾಯದ ಸಂಬಂಧ, ಅರ್ಜುನನ ಪ್ರಶ್ನೆ.

(ಭಾಷ್ಯ)

೩೧೩. "ಕರ್ಮಣ್ಯಕರ್ಮ ಯಃ ಪಶ್ಯೇತ್" (೪-೧೮) ಇತ್ಯಾರಭ್ಯ "ಸ ಯುಕ್ತಃ ಕೃತ್ಸ್ನಕರ್ಮಕೃತ್" (೪-೧೮), "ಜ್ಞಾನಾಗ್ನಿದಗ್ಧಕರ್ಮಾಣಮ್" (೪-೧೯), "ಶಾರೀರಂ ಕೇವಲಂ ಕರ್ಮ ಕುರ್ವನ್" (೪-೨೧), "ಯದೃಚ್ಛಾಲಾಭಸನ್ತುಷ್ಟಃ" (೪-೨೨) "ಬ್ರಹ್ಮಾರ್ಪಣಂ ಬ್ರಹ್ಮ ಹವಿಃ" (೪-೨೪), "ಕರ್ಮಜಾನ್ ವಿದ್ಧಿ ತಾನ್ ಸರ್ವಾನ್" (೪೩೨) "ಸರ್ವಂ ಕರ್ಮಾಖಿಲಂ ಪಾರ್ಥ" (೪-೩೩), "ಜ್ಞಾನಾಗ್ನಿಃ ಸರ್ವಕರ್ಮಾಣಿ" (೪-೩೭) "ಯೋಗಸಂನ್ಯಸ್ತಕರ್ಮಾಣಮ್" (೪-೪೧) ಇತ್ಯೇತೈರ್ವಚನೈಃ ಸರ್ವಕರ್ಮಸಂನ್ಯಾಸಮ್ ಅವೋಚದ್ ಭಗವಾನ್ । "ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠ"[1] (೪-೪೨) ಇತ್ಯನೇನ ವಚನೇನ ಯೋಗಂ ಚ ಕರ್ಮಾನುಷ್ಠಾನಲಕ್ಷಣಮ್ ಅನುತಿಷ್ಠ ಇತ್ಯುಕ್ತವಾನ್ । ತಯೋ[2]ರುಭಯೋಶ್ಚ ಕರ್ಮಾನುಷ್ಠಾನಕರ್ಮಸಂನ್ಯಾಸಯೋಃ ಸ್ಥಿತಿಗತಿವತ್ ಪರಸ್ಪರವಿರೋಧಾತ್ ಏಕೇನ ಸಹ ಕರ್ತುಮ್ ಅಶಕ್ಯತ್ವಾತ್ ಕಾಲಭೇದೇನ ಚ ಅನುಷ್ಠಾನವಿಧಾನಾಭಾವಾತ್ ಅರ್ಥಾತ್ ಏತಯೋರನ್ಯತರಕರ್ತವ್ಯತಾಪ್ರಾಪ್ತೌ ಸತ್ಯಾಮ್ ಯತ್ ಪ್ರಶಸ್ಯತರಮ್ ಏತಯೋಃ ಕರ್ಮಾನುಷ್ಠಾನಕರ್ಮಸಂನ್ಯಾಸಯೋಃ ತತ್ ಕರ್ತವ್ಯಮ್ ನೇತರತ್–ಇತ್ಯೇವಂ ಮನ್ಯಮಾನಃ ಪ್ರಶಸ್ಯತರಬುಭುತ್ಸಯಾ ಅರ್ಜುನ ಉವಾಚ—"ಸಂನ್ಯಾಸಂ ಕರ್ಮಣಾಂ ಕೃಷ್ಣ" (೫-೧) ಇತ್ಯಾದಿನಾ ॥

---

1. ಮು॥ದಲ್ಲಿ ಶ್ಲೋಕವು ಪೂರ ಇದೆ
2. ಮು॥ ಮ್ಮ॥ ಗಳಲ್ಲಿ 'ತಯೋಃ' ಎಂಬ ಮಾತಿಲ್ಲ

(ಭಾಷ್ಯಾರ್ಥ)

"ಕರ್ಮದಲ್ಲಿ ಯಾವಾತನು ಅಕರ್ಮವನ್ನು ಕಾಣುವನೋ" (೪-೧೮) ಎಂದು ಪ್ರಾರಂಭಿಸಿ "ಅವನು ಯುಕ್ತನು, ಎಲ್ಲಾ ಕರ್ಮಗಳನ್ನೂ ಮಾಡಿದವನು (೪-೧೮), ಜ್ಞಾನವೆಂಬ ಅಗ್ನಿಯಿಂದ ಸುಟ್ಟ ಕರ್ಮಗಳುಳ್ಳ ಆತನನ್ನು (ಪಂಡಿತನೆನ್ನುವರು) "(೪-೧೯), "ಬರಿಯ ಶಾರೀರಕರ್ಮವನ್ನು ಮಾಡು(ವಾತನಿಗೆ ಯಾವ ಕಿಲ್ಬಿಷವೂ ಇಲ್ಲ) " (೪-೨೧), "ಯದೃಚ್ಛಾಲಾಭದಿಂದ ಸಂತುಷ್ಟನಾಗಿ(ರುವ ಈತನು ಕರ್ಮವನ್ನು ಮಾಡಿದರೂ ಬದ್ಧನಾಗುವದಿಲ್ಲ)" (೪-೨೨,) "ಅರ್ಪಣವು ಬ್ರಹ್ಮವು, ಹವಿಸ್ಸೂ ಬ್ರಹ್ಮವು" (೪-೨೪), "ಅವುಗಳೆಲ್ಲವೂ ಕರ್ಮದಿಂದುಂಟಾದವುಗಳೆಂದು ತಿಳಿ" (೪-೩೨), "ಎಲೈ ಪಾರ್ಥನೆ, ಕರ್ಮವೆಲ್ಲವೂ ಅಖಿಲವಾಗಿ (ಜ್ಞಾನದಲ್ಲಿ ಕೊನೆಗಾಣುತ್ತದೆ ೪-೩೩), "ಜ್ಞಾನಾಗ್ನಿಯು ಕರ್ಮಗಳೆಲ್ಲವನ್ನೂ ಸುಟ್ಟು ಬೂದಿಗೈಯುತ್ತದೆ" (೪-೩೭), "ಯೋಗದಿಂದ ಕರ್ಮಗಳನ್ನು ಸಂನ್ಯಾಸಮಾಡಿರುವವನನ್ನು (ಕರ್ಮಗಳು ಕಟ್ಟಿಹಾಕುವದಿಲ್ಲ ೪-೪೧)"–ಎಂಬೀ ವಚನಗಳಿಂದ ಭಗವಂತನು ಸರ್ವಕರ್ಮಸಂನ್ಯಾಸವನ್ನು ಹೇಳಿರುತ್ತಾನೆ. "ಈ ಸಂಶಯವನ್ನು ಕತ್ತರಿಸಿಹಾಕಿ ಯೋಗವನ್ನು ಮಾಡು" (೪-೪೨) ಎಂಬೀ ವಚನದಿಂದ ಕರ್ಮಾನುಷ್ಠಾನರೂಪವಾದ ಯೋಗವನ್ನು ಮಾಡೆಂದೂ ಹೇಳಿರುತ್ತಾನೆ. ಕರ್ಮವನ್ನು ಮಾಡುವದು, ಕರ್ಮವನ್ನು ಬಿಡುವದು–ಎಂಬೀ ಎರಡೂ ನಿಂತಿರುವದು, ಓಡಾಡುವದು–(ಈ ಕ್ರಿಯೆಗಳ) ಹಾಗೆ ಒಂದಕ್ಕೊಂದು ವಿರುದ್ಧವಾಗಿರುವದರಿಂದ ಒಬ್ಬನೇ ಒಟ್ಟಿಗೆ ಮಾಡುವದು ಅಶಕ್ಯವಾಗಿರುವದರಿಂದಲೂ ಬೇರೆಬೇರೆಯ ಕಾಲದಲ್ಲಿ ಮಾಡತಕ್ಕದ್ದೆಂದೂ (ಶ್ರೀಕೃಷ್ಣನು) ಹೇಳಿರುವದಿಲ್ಲವಾದ್ದರಿಂದಲೂ ಇವೆರಡರಲ್ಲಿ ಒಂದನ್ನು ಮಾಡಬೇಕೆಂದಾಯಿತು ಆದ್ದರಿಂದ ಕರ್ಮಗಳನ್ನು ಮಾಡುವದು, ಕರ್ಮಗಳನ್ನು ಬಿಡುವದು–ಈ ಎರಡರಲ್ಲಿ ಯಾವದು ಹೆಚ್ಚು ಒಳ್ಳೆಯದೋ ಅದನ್ನು ಮಾಡಬೇಕೇ ಹೊರತು ಉಳಿದದ್ದನ್ನು ಮಾಡಬಾರದು ಎಂದೆಣಿಸಿ ಅರ್ಜುನನು (ಇವುಗಳಲ್ಲಿ) ಯಾವದು ಹೆಚ್ಚು ಒಳ್ಳೆಯದೆಂಬುದನ್ನು ತಿಳಿದುಕೊಳ್ಳಬೇಕೆಂದು "ಕೃಷ್ಣನೆ, ಕರ್ಮಗಳ ಸಂನ್ಯಾಸವನ್ನೂ (ಮತ್ತು ಯೋಗವನ್ನೂ ಹೇಳುತ್ತಿದ್ದೀಯೆ)" ಎಂದು ಮುಂತಾದ (ವಾಕ್ಯವನ್ನು) ಆಡಿರುತ್ತಾನೆ

## ಈ ಪ್ರಶ್ನೆಯಲ್ಲಿ ಅರ್ಜುನನ ಅಭಿಪ್ರಾಯ

(ಭಾಷ್ಯ)

೩೧೪. ನನು ಚ ಆತ್ಮವಿದಃ ಜ್ಞಾನಯೋಗೇನ ನಿಷ್ಠಾಂ ಪ್ರತಿಪಾದಯಿಷ್ಯನ್ ಪೂರ್ವೋದಾಹೃತೈರ್ವಚನೈಃ ಭಗವಾನ್ ಕರ್ಮಸಂನ್ಯಾಸಮ್ ಅವೋ

ಚಿತ್, ನ ತು ಅನಾತ್ಮಜ್ಞಸ್ಯ। ಅತಶ್ಚ ಕರ್ಮಾನುಷ್ಠಾನಕರ್ಮಸಂನ್ಯಾಸಯೋಃ ಭಿನ್ನಪುರುಷವಿಷಯತ್ವಾತ್ ಅನ್ಯತರಸ್ಯ ಪ್ರಶಸ್ಯತರಬುಭುತ್ಸಯಾ [1] ಪ್ರಶ್ನೋಽನುಪಪನ್ನಃ। ಸತ್ಯಮ್ ಏವಮು [2] । ತ್ವದಭಿಪ್ರಾಯೇಣ ಪ್ರಶ್ನೋ ನೋಪಪದ್ಯತೇ। ಪ್ರಷ್ಟುಃ ಸ್ವಾಭಿಪ್ರಾಯೆಣ ಪುನಃ ಪ್ರಶ್ನೋ ಯುಜ್ಯತೇ ಏವ ಇತಿ ವದಾಮಃ। ಕಥಮ್? ಪೂರ್ವೋದಾಹೃತೈರ್ವಚನೈಃ ಭಗವತಾ ಕರ್ಮ ಸಂನ್ಯಾಸಸ್ಯ ಕರ್ತವ್ಯತಯಾ ವಿವಕ್ಷಿತತ್ವಾತ್ ಪ್ರಾಧಾನ್ಯಮ್। ಅನ್ತರೇಣ ಚ ಕರ್ತಾರಂ ತಸ್ಯ [3] ಕರ್ತವ್ಯತ್ವಾಸಂಭವಾತ್ ಅನಾತ್ಮವಿದಪಿ ಕರ್ತಾ ಪಕ್ಷೇ ಪ್ರಾಪ್ತೋಽನೂದ್ಯತೇ। ನ ಪುನಃ ಆತ್ಮವಿತ್ಕರ್ತೃಕತ್ವಮೇವ ಸಂನ್ಯಾಸಸ್ಯ ವಿವಕ್ಷಿತಮ್ ಇತ್ಯೇವಂ ಮನ್ವಾನಸ್ಯ ಅರ್ಜುನಸ್ಯ ಕರ್ಮಾನುಷ್ಠಾನಕರ್ಮಸಂನ್ಯಾಸಯೋಃ ಅವಿದ್ವತ್ಪುರುಷಕರ್ತೃಕತ್ವಮಪಿ ಅಸ್ತಿ ಇತಿ ಪೂರ್ವೋಕ್ತೇನ ಪ್ರಕಾರೇಣ ತಯೋಃ ಪರಸ್ಪರವಿರೋಧಾತ್ ಅನ್ಯತರಸ್ಯ ಕರ್ತವ್ಯತ್ವೇ ಪ್ರಾಪ್ತೇ ಪ್ರಶಸ್ಯತರಂ ಚ [4] ಕರ್ತವ್ಯಂ ನೇತರತ್ ಇತಿ ಪ್ರಶಸ್ಯತರವಿವಿದಿಷಯಾ ಪ್ರಶ್ನಃ ನಾನುಪಪನ್ನಃ ॥

(ಭಾಷ್ಯಾರ್ಥ)

(ಆಕ್ಷೇಪ) :—ಆತ್ಮಜ್ಞಾನಿಗೆ ಜ್ಞಾನಯೋಗದ ನಿಷ್ಠೆಯನ್ನು ಹೇಳುವದಕ್ಕಾಗಿ ಭಗವಂತನು ಮೇಲೆ ಉದಾಹರಿಸಿರುವ ವಚನಗಳಲ್ಲಿ ಕರ್ಮಸಂನ್ಯಾಸವನ್ನು ಹೇಳಿದಾನೆಯೇ ಹೊರತು ಆತ್ಮಜ್ಞನಲ್ಲದವನಿಗೆ ಹೇಳಿರುವದಿಲ್ಲ. ಹೀಗಿರುವದರಿಂದ ಕರ್ಮವನ್ನು ಮಾಡುವದು, ಮತ್ತು ಕರ್ಮವನ್ನು ಬಿಡುವದು–ಇವೆರಡೂ ಬೇರೆ ಬೇರೆಯ ಜನರಿಗೆ ಹೇಳಿದವುಗಳಾಗಿರುವದರಿಂದ ಇವೆರಡರಲ್ಲಿ ಯಾವದು ಹೆಚ್ಚು ಒಳ್ಳೆಯದೆಂದು ತಿಳಿದುಕೊಳ್ಳುವದಕ್ಕೆ ಪ್ರಶ್ನೆಯನ್ನು ಹಾಕುವದೆಂಬುದು ಸರಿಯಾಗುವದಿಲ್ಲವಲ್ಲ!

(ಪರಿಹಾರ).—ಹೀಗೆಯೇ ಸರಿ. ನಿಮ್ಮ ಅಭಿಪ್ರಾಯದಂತೆ ಪ್ರಶ್ನೆಯು ಹೊಂದುಗಡೆಯಾಗುವದಿಲ್ಲ.[5] ಆದರೆ ಪ್ರಶ್ನೆಯನ್ನು ಕೇಳುತ್ತಿರುವ (ಅರ್ಜುನ)ನ

1. "ಅಯಂ ಪ್ರಶ್ನಃ" ವಾ॥ ಅ॥ ಮ॥ ಪ್ಯ॥
2. 'ಏವ' ನಿ॥ ಅ॥ ಗು॥ ವಾ॥
3 'ತಸ್ಯ ಕರ್ತಾರಮ್' ಮ॥ ಮೈ॥
4 ಇಲ್ಲಿ ಚ ಇಲ್ಲದಿದ್ದರೂ ಸಾಗುತ್ತಿತ್ತೆಂದು ತೋರುತ್ತದೆ
5. ಸಾಂಖ್ಯಬುದ್ಧಿ, ಯೋಗಬುದ್ಧಿ–ಎಂಬ ವಿಭಾಗವನ್ನು ಹೀಗೆಯೇ ಎರಡನೆಯ ಅಧ್ಯಾಯದಲ್ಲಿ ಮಾಡಿದೆ ಎಂದು ಮೂರನೆಯ ಅಧ್ಯಾಯದ ಸಂಬಂಧದ ಭಾಷ್ಯದಲ್ಲಿ ಭಾಷ್ಯಕಾರರೂ ಒಪ್ಪಿರುತ್ತಾರೆ.

ಅಭಿಪ್ರಾಯದಂತೆ ಹೊಂದುಗಡೆಯಾಗಿಯೇ ಆಗುತ್ತದೆಯೆಂದು ನಾವೆನ್ನುತ್ತೇವೆ. ಅದು ಹೇಗೆ? ಎಂದರೆ, ಮೇಲೆ ಹೇಳಿದ ವಚನಗಳಲ್ಲಿ ಕರ್ಮಸಂನ್ಯಾಸವನ್ನು ಮಾಡಬೇಕೆಂದೇ ಭಗವಂತನ ತಾತ್ಪರ್ಯವಿರುವದರಿಂದ (ಅದಕ್ಕೇ) ಪ್ರಾಧಾನ್ಯವಿರುತ್ತದೆ. ಕರ್ತೃವಿಲ್ಲದೆ ಅದನ್ನು ಮಾಡುವದು ಆಗಲಾರದಾದ್ದರಿಂದ ಅನಾತ್ಮಜ್ಞನಾದ ಕರ್ತೃವೂ ಒಂದು ಪಕ್ಷದಲ್ಲಿ ಆಗಬಹುದಾದ್ದರಿಂದ (ಅವನನ್ನು) ಅನುವಾದಮಾಡಿರುತ್ತದೆಯೇ ಹೊರತು ಸಂನ್ಯಾಸಕ್ಕೆ ಆತ್ಮಜ್ಞಾನಿಯೇ ಕರ್ತೃ ಎಂಬುದರಲ್ಲಿ ಭಗವಂತನ ತಾತ್ಪರ್ಯವಿರುವದಿಲ್ಲ. ಹೀಗೆಂದು ಅರ್ಜುನನು ತಿಳಿದುಕೊಂಡಿರುತ್ತಾನಾಗಿ (ಅವನ ಅಭಿಪ್ರಾಯದಂತೆ) ಕರ್ಮವನ್ನು ಮಾಡುವದು, ಕರ್ಮವನ್ನು ಬಿಡುವದು–ಎಂಬುದು ಅಜ್ಞಾನಿಯಾದ ಕರ್ತೃವಿಗೂ ಉಂಟು.[1] ಆದ್ದರಿಂದ ಹಿಂದೆ ಹೇಳಿರುವ ಪ್ರಕಾರದಿಂದ ಅವೆರಡಕ್ಕೂ ಒಂದೊಂದಕ್ಕೆ ವಿರೋಧವಿರುವದರಿಂದ ಅವುಗಳಲ್ಲಿ ಒಂದನ್ನೇ ಮಾಡಬೇಕೆಂದಾಗುವದಷ್ಟೆ. ಇವೆರಡರಲ್ಲಿ ಯಾವದು ಉತ್ತಮವಾದದ್ದೋ ಅದನ್ನೇ ಮಾಡಬೇಕು, ಮತ್ತೊಂದನ್ನು ಮಾಡಬಾರದು–ಎಂಬ (ಅಭಿಪ್ರಾಯದಿಂದ) ಇವೆರಡರಲ್ಲಿ ಹೆಚ್ಚು ಉತ್ತಮವಾದದ್ದು ಯಾವದೆಂಬುದನ್ನು ತಿಳಿದುಕೊಳ್ಳುವದಕ್ಕಾಗಿ ಪ್ರಶ್ನೆಯನ್ನು ಕೇಳಿರುವದು ಅಯುಕ್ತವಾಗುವದಿಲ್ಲ.

## ಪ್ರಶ್ನೆಯು ಜ್ಞಾನಿಯ ವಿಷಯವಲ್ಲವೆಂಬುದಕ್ಕೆ ಉತ್ತರದ ಬೆಂಬಲ

೩೧೫. ಪ್ರತಿವಚನವಾಕ್ಯಾರ್ಥನಿರೂಪಣೇನಾಪಿ ಪ್ರಷ್ಟುರಭಿಪ್ರಾಯಃ ಏವಮೇವ ಇತಿ ಗಮ್ಯತೇ । ಕಥಮ್ ? ಸಂನ್ಯಾಸಕರ್ಮಯೋಗೌ ನಿಃಶ್ರೇಯಸಕರೌ ತಯೋಸ್ತು ಕರ್ಮಯೋಗೋ ವಿಶಿಷ್ಯತೇ (೫-೨) ಇತಿ ಪ್ರತಿವಚನಮ್ । ಏತತ್

---

1. ಹಿಂದಿನ ವಾಕ್ಯಗಳಲ್ಲಿ ಜ್ಞಾನಿಯು ಕರ್ಮಸಂನ್ಯಾಸವನ್ನು ಮಾಡಿರುತ್ತಾನೆಂದು ಹೇಳಿ ಕರ್ಮಸಂನ್ಯಾಸದ ಫಲವನ್ನೂ ಮತ್ತೆ ಮತ್ತೆ ಹೇಳಿರುವದರಿಂದ ಕರ್ಮಸಂನ್ಯಾಸವನ್ನು ವಿಧಾನಮಾಡುವದಕ್ಕೇ ಆ ವಚನಗಳು ಬಂದಿವೆ ಎಂದಾಗುತ್ತದೆ. ವಿಧಿಗೆ ಕರ್ತೃ ಆವಶ್ಯವಾಗಿರುವದರಿಂದ ಕರ್ತೃತ್ವಬುದ್ಧಿಯಿರುವ ಅನಾತ್ಮಜ್ಞನಿಗೆ ಕರ್ಮಸಂನ್ಯಾಸವನ್ನು ವಿಧಿಸಿದೆ ಎಂದಾಗುತ್ತದೆ. ಅಧ್ಯಾತ್ಮಶಾಸ್ತ್ರಗಳಲ್ಲಿ ಕೃತಾರ್ಥನ ಲಕ್ಷಣವು ಮುಮುಕ್ಷುವಿಗೆ ಸಾಧನವಾಗಿರುತ್ತದೆ ಎಂಬ (೨-೫೫) ಭಾಷ್ಯೋಕ್ತನ್ಯಾಯದಿಂದ ಇಲ್ಲಿಯೂ ಜ್ಞಾನಿಯ ಕರ್ಮಸಂನ್ಯಾಸರೂಪವಾದ ಲಕ್ಷಣವನ್ನು ಸಂನ್ಯಾಸವನ್ನು ವಿಧಿಸಿದೆಯೆಂದೇ ಆಗುತ್ತದೆ ಆದ್ದರಿಂದ ಅಜ್ಞರಿಗೂ ಕರ್ಮಸಂನ್ಯಾಸವುಂಟೆಂದಾಯಿತು–ಎಂದು ಭಾವ. ವಿಧಿಸಿರುವ ಈ ಸಂನ್ಯಾಸವನ್ನು ವಿವಿದಿಷಾಸಂನ್ಯಾಸವೆಂದು ಕರೆಯುತ್ತಾರೆ.

ನಿರೂಪ್ಯಮ್ । ಕಿಮ್ ಅನೇನ ಆತ್ಮವಿತ್ಕರ್ತೃಕಯೋಃ ಸಂನ್ಯಾಸಕರ್ಮಯೋಗಯೋಃ ನಿಃಶ್ರೇಯಸಕರತ್ವಂ ಪ್ರಯೋಜನಮ್ ಉಕ್ತ್ವಾ ತಯೋರೇವ ಕುತಶ್ಚಿತ್ ವಿಶೇಷಾತ್ ಕರ್ಮಸಂನ್ಯಾಸಾತ್ ಕರ್ಮಯೋಗಸ್ಯ ವಿಶಿಷ್ಟತ್ವಮ್ ಉಚ್ಯತೇ? ಆಹೋಸ್ವಿತ್ ಅನಾತ್ಮವಿತ್ಕರ್ತೃಕಯೋಃ ಸಂನ್ಯಾಸಕರ್ಮಯೋಗಯೋಃ ತದುಭಯಮ್ ಉಚ್ಯತೇ? ಇತಿ । ಕಿಂಚಾತಃ ಯದಿ ಆತ್ಮವಿತ್ಕರ್ತೃಕಯೋಃ ಕರ್ಮಸಂನ್ಯಾಸಕರ್ಮಯೋಗಯೋಃ ನಿಃಶ್ರೇಯಸಕರತ್ವಮ್, ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗಸ್ಯ ವಿಶಿಷ್ಟತ್ವಮ್ ಉಚ್ಯತೇ, ಯದಿ ವಾ ಅನಾತ್ಮವಿತ್ಕರ್ತೃಕಯೋಃ ಸಂನ್ಯಾಸಕರ್ಮಯೋಗಯೋಃ ತದುಭಯಮ್ ಉಚ್ಯತೇ ಇತಿ? ಅತ್ರ ಉಚ್ಯತೇ।ಆತ್ಮವಿತ್ಕರ್ತೃಕಯೋಃ ಸಂನ್ಯಾಸಕರ್ಮಯೋಗಯೋಃ ಅಸಮ್ಭವಾತ್ ತಯೋಃ ನಿಃಶ್ರೇಯಸಕರತ್ವವಚನಮ್ ತದೀಯಾಚ್ಚ ಕರ್ಮಸಂನ್ಯಾಸಾತ್ ಕರ್ಮಯೋಗಸ್ಯ ವಿಶಿಷ್ಟತ್ವಾಭಿಧಾನಮ್ ಇತ್ಯೇತದುಭಯಮ್ ಅನುಪಪನ್ನಮ್ । ಯದಿ ಅನಾತ್ಮವಿದಃ[1] ಕರ್ಮಸಂನ್ಯಾಸಃ ತತ್ಪ್ರತಿಕೂಲಶ್ಚ ಕರ್ಮಾನುಷ್ಠಾನಲಕ್ಷಣಃ ಕರ್ಮಯೋಗಃ ಸಂಭವೇತಾಮ್, ತದಾ ತಯೋರ್ನಿಃಶ್ರೇಯಸಕರತ್ವೋಕ್ತಿಃ, ಕರ್ಮಯೋಗಸ್ಯ ಚ ಕರ್ಮಸಂನ್ಯಾಸಾತ್ ವಿಶಿಷ್ಟತ್ವಾಭಿಧಾನಮ್ ಇತ್ಯೇತದುಭಯಮ್ ಉಪಪದ್ಯೇತ । ಆತ್ಮವಿದಸ್ತು ಸಂನ್ಯಾಸಕರ್ಮಯೋಗಯೋಃ ಅಸಂಭವಾತ್ ತಯೋಃ ನಿಃಶ್ರೇಯಸಕರತ್ವಾಭಿಧಾನಂ ಸಂನ್ಯಾಸಾಚ್ಚ ಕರ್ಮಯೋಗೋ ವಿಶಿಷ್ಯತೇ ಇತಿ ಚ ಅನುಪಪನ್ನಮ್[2] ॥

(ಭಾಷ್ಯಾರ್ಥ)

ಉತ್ತರವಾಗಿ ಹೇಳಿರುವ ಮಾತಿನ ಅರ್ಥವನ್ನು ಸಮಾಲೋಚನೆಮಾಡುವದರಿಂದಲೂ ಪ್ರಶ್ನೆಯನ್ನು ಕೇಳಿರುವ (ಅರ್ಜುನನ) ಅಭಿಪ್ರಾಯವು ಹೀಗೆಯೇ (ಇದೆ) ಎಂದು ಗೊತ್ತಾಗುತ್ತದೆ. ಹೇಗೆಂದರೆ: ಸಂನ್ಯಾಸ, ಕರ್ಮಯೋಗ– (ಈ) ಎರಡೂ ಮುಕ್ತಿಗೆ ಕಾರಣವಾಗಿರುವವು, ಆದರೆ ಅವುಗಳಲ್ಲಿ ಕರ್ಮಯೋಗವು ಹೆಚ್ಚಿನದು (೫-೨) ಎಂದಲ್ಲವೆ, ಪ್ರತಿವಚನವು? ಇಲ್ಲಿ ಗೊತ್ತುಪಡಿಸಬೇಕಾಗಿರುವದೇನೆಂದರೆ, ಈ (ವಾಕ್ಯ)ದಲ್ಲಿ ಆತ್ಮಜ್ಞಾನಿಯು ಮಾಡಬೇಕಾದ ಸಂನ್ಯಾಸ, ಕರ್ಮಯೋಗ–ಇವೆರಡಕ್ಕೂ ಮುಕ್ತಿಯನ್ನುಂಟುಮಾಡುವದೆಂಬ ಪ್ರಯೋಜನವನ್ನು ಹೇಳಿ ಅವೆರಡರಲ್ಲಿಯೇ ಯಾವದೋ ಒಂದು ವಿಶೇಷಕಾರಣದಿಂದ ಕರ್ಮಯೋಗವು

---

1. 'ಆತ್ಮವಿದಃ' ಎಂದು ಮ॥ ಮೈ॥
2. ಈ ವಾಕ್ಯದ ಅನುವಾದದ ಟಿಪ್ಪಣಿಯನ್ನು ನೋಡಿರಿ.

ಕರ್ಮಸಂನ್ಯಾಸಕ್ಕಿಂತ ಹೆಚ್ಚಿನದೆಂದು ಹೇಳಿದೆಯೆ, ಅಥವಾ ಆತ್ಮನನ್ನು ಅರಿತುಕೊಳ್ಳದವನು ಮಾಡಬೇಕಾದ ಸಂನ್ಯಾಸಕರ್ಮಯೋಗಗಳನ್ನು ಕುರಿತು ಈ ಎರಡನ್ನೂ ಹೇಳಿರುತ್ತದೆಯೆ ?

(ಪ್ರಶ್ನೆ):—ಈ (ವಿಚಾರ)ದಿಂದ ಏನು (ಪ್ರಯೋಜನ)? ಆತ್ಮಜ್ಞಾನಿಯು ಮಾಡಬೇಕಾದ ಕರ್ಮಸಂನ್ಯಾಸಕರ್ಮಯೋಗಗಳು ನಿಃಶ್ರೇಯಸವನ್ನುಂಟು ಮಾಡುವವೆಂದೂ ಆದರೆ ಅವುಗಳಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವು ಹೆಚ್ಚಿನದೆಂದೂ ಹೇಳಿದ್ದರೇನು, ಆತ್ಮನನ್ನರಿತುಕೊಳ್ಳದವನು ಮಾಡಬೇಕಾದ ಸಂನ್ಯಾಸಕರ್ಮಯೋಗಗಳ ವಿಷಯದಲ್ಲಿ ಆ ಎರಡನ್ನೂ ಹೇಳಿದ್ದರೇನು ?

(ಉತ್ತರ) : ಇದಕ್ಕೆ (ಉತ್ತರವನ್ನು) ಹೇಳುತ್ತೇವೆ, (ಕೇಳಿ). ಆತ್ಮನನ್ನು ಬಲ್ಲವನು ಮಾಡಬೇಕಾದ ಸಂನ್ಯಾಸ, ಕರ್ಮಯೋಗ–ಇವುಗಳೇ ಸಂಭವಿಸುವದಿಲ್ಲವಾದ್ದರಿಂದ[1] ಅವುಗಳೆರಡೂ ಮುಕ್ತಿಗೆ ಕಾರಣವೆಂಬುದು, ಮತ್ತು ಆತನು ಮಾಡುವ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವು ಹೆಚ್ಚಿನದೆಂಬುದು–ಎಂಬೀ ಎರಡೂ ಯುಕ್ತವಾಗುವದಿಲ್ಲ. ಆತ್ಮನನ್ನರಿಯದಾತನಿಗೆ[2] ಕರ್ಮಸಂನ್ಯಾಸವೂ ಅದಕ್ಕೆ ವಿರುದ್ಧವಾದ ಕರ್ಮವನ್ನು ಮಾಡುವದೆಂಬ ಕರ್ಮಯೋಗವೂ ಹೊಂದುವದಾದರೆ ಅವೆರಡೂ ಮುಕ್ತಿಗೆ ಕಾರಣವೆಂಬುದು, ಕರ್ಮಯೋಗವು ಕರ್ಮಸಂನ್ಯಾಸಕ್ಕಿಂತ ಹೆಚ್ಚಿನದೆಂದು ಹೇಳುವದು–ಈ ಎರಡೂ ಯುಕ್ತವಾಗಬಹುದು (ಆದರೆ ಆತ್ಮಜ್ಞಾನಿಗೆ ಸಂನ್ಯಾಸಕರ್ಮಯೋಗಗಳೇ ಸಂಭವಿಸುವ ಹಾಗಿಲ್ಲವಾದ್ದರಿಂದ ಅವೆರಡೂ ನಿಃಶ್ರೇಯಸವನ್ನುಂಟುಮಾಡುವದೆಂದು ಹೇಳಿದ್ದೂ ಸಂನ್ಯಾಸಕ್ಕಿಂತ ಕರ್ಮಯೋಗವು ಹೆಚ್ಚಿನದೆಂಬುದೂ ಯುಕ್ತವಾಗುವದಿಲ್ಲ.)[3]

---

1. ಜ್ಞಾನವಾದಮೇಲೆ ಸಂನ್ಯಾಸ ಮತ್ತು ಕರ್ಮಯೋಗ_ಎಂಬ ಎರಡು ಮುಕ್ತಿಮಾರ್ಗಗಳು ಇರುವವೆಂದು ಈಚೆಗೆ ಕೆಲವರು ತೆಗೆದಿರುವ ಹೊಸ ಸಿದ್ಧಾಂತವು ಆಚಾರ್ಯರ ಕಾಲದ ಯಾವ ವೇದಾಂತಿಗಳಿಗೂ ಸಮ್ಮತವಿರಲಿಲ್ಲ. ಈ ವಿಷಯದಲ್ಲಿ ಪೀಠಿಕೆಯನ್ನು ನೋಡಿರಿ.

2. " ಆತ್ಮವಿದಃ " ಎಂಬ ಮ್ಯೆ|| ಪಾಠದಲ್ಲಿ ಎಲ್ಲವನ್ನೂ ಆತ್ಮಜ್ಞಾನಿಗೇ ಹೇಳಿದಂತೆ ಆಗುತ್ತದೆಯಾದ್ದರಿಂದ ಆ ಪಾಠವು ಸರಿಯಲ್ಲ.

3 ಈ ವಾಕ್ಯವು ಹೆಚ್ಚಿನಂದು ತೋರುತ್ತದೆ. ಒಂದೇ ಅರ್ಥದ ಎರಡು ವಾಕ್ಯಗಳು ಇಲ್ಲಿ ಅನವಶ್ಯಕವಾಗಿ ಬಂದಿರುತ್ತವೆ. ಮುಂದಿನ ಆಕ್ಷೇಪಕ್ಕೆ ಸಂಬಂಧವನ್ನು ತಿಳಿಸುವದಕ್ಕೆ ಈ ವಾಕ್ಯವನ್ನು ಮತ್ತೆ ಹೇಳಿಕೊಂಡಿರುವರೆಂದು ಹೇಗೋ ಕಷ್ಟದಿಂದ ಕಲ್ಪಿಸಬೇಕಾಗುತ್ತದೆ. ವ್ಯಾಖ್ಯಾನಕಾರರೂ ಈ ವಾಕ್ಯದ ಪ್ರತೀಕವನ್ನು ಹಿಡಿದಿಲ್ಲವೆಂಬುದು ಲಕ್ಷ್ಯದಲ್ಲಿಡತಕ್ಕದ್ದಾಗಿದೆ.

# ಜ್ಞಾನಿಗೆ ಕರ್ಮಯೋಗವೆಂಬುದೇ ಇಲ್ಲ

(ಭಾಷ್ಯ)

೩೧೬. ಅತ್ರಾಹ । ಕಿಮ್ ಆತ್ಮವಿದಃ ಸಂನ್ಯಾಸಕರ್ಮಯೋಗಯೋಃ ಉಭಯೋರಪಿ ಅಸಮ್ಭವಃ, ಆಹೋಸ್ವಿತ್ ಅನ್ಯತರಸ್ಯ ಅಸಮ್ಭವಃ? ಯದಾ ಚ ಅನ್ಯತರಸ್ಯ ಅಸಮ್ಭವಃ, ತದಾ ಕಿಂ ಕರ್ಮಸಂನ್ಯಾಸಸ್ಯ, ಉತ ಕರ್ಮಯೋಗಸ್ಯ ಇತಿ ? ಅಸಮ್ಭವೇ ಕಾರಣಂ ಚ ವಕ್ತವ್ಯಮ್ ಇತಿ । ಅತ್ರೋಚ್ಯತೇ । ಆತ್ಮವಿದೋ ನಿವೃತ್ತಮಿಥ್ಯಾಜ್ಞಾನತ್ವಾತ್ ವಿಪರ್ಯಯಜ್ಞಾನಮೂಲಸ್ಯ ಕರ್ಮಯೋಗಸ್ಯ ಅಸಂಭವಃ ಸ್ಯಾತ್ । ಜನ್ಮಾದಿಸರ್ವವಿಕ್ರಿಯಾರಹಿತತ್ವೇನ ನಿಷ್ಕ್ರಿಯಮ್ ಆತ್ಮಾನಮ್ ಆತ್ಮತ್ವೇನ ಯೋ ವೇತ್ತಿ ತಸ್ಯ ಆತ್ಮವಿದಃ ಸಮ್ಯಗ್ದರ್ಶನೇನ ಅಪಾಸ್ತಮಿಥ್ಯಾಜ್ಞಾನಸ್ಯ ನಿಷ್ಕ್ರಿಯಾತ್ಮಸ್ವರೂಪಾವಸ್ಥಾನಲಕ್ಷಣಂ ಸರ್ವಕರ್ಮಸಂನ್ಯಾಸಮ್ ಉಕ್ತ್ವಾ, ತದ್ವಿಪರೀತಸ್ಯ ಮಿಥ್ಯಾಜ್ಞಾನಮೂಲಕರ್ತೃತ್ವಾಭಿಮಾನಪುರಃಸರಸ್ಯ ಸಕ್ರಿಯಾತ್ಮಸ್ವರೂಪಾವಸ್ಥಾನರೂಪಸ್ಯ ಕರ್ಮಯೋಗಸ್ಯ ಇಹ ಶಾಸ್ತ್ರೇ ತತ್ರ ತತ್ರ ಆತ್ಮಸ್ವರೂಪನಿರೂಪಣಪ್ರದೇಶೇಷು ಸಮ್ಯಗ್ಜ್ಞಾನಮಿಥ್ಯಾಜ್ಞಾನತತ್ಕಾರ್ಯವಿರೋಧಾತ್ ಅಭಾವಃ ಪ್ರತಿಪಾದ್ಯತೇ ಯಸ್ಮಾತ್ ತಸ್ಮಾತ್ ಆತ್ಮವಿದಃ ನಿವೃತ್ತಮಿಥ್ಯಾಜ್ಞಾನಸ್ಯ ವಿಪರ್ಯಯಜ್ಞಾನಮೂಲಃ ಕರ್ಮಯೋಗೋ ನ ಸಮ್ಭವತಿ ಇತಿ ಯುಕ್ತಮುಕ್ತಂ ಸ್ಯಾತ್ ॥

(ಭಾಷ್ಯಾರ್ಥ)

(ಪ್ರಶ್ನೆ) —ಆತ್ಮಜ್ಞಾನಿಗೆ ಸಂನ್ಯಾಸ, ಕರ್ಮಯೋಗ-(ಈ) ಎರಡೂ ಸಂಭವಿಸುವದಿಲ್ಲವೋ, ಅಥವಾ (ಇವೆರಡರಲ್ಲಿ) ಒಂದು ಸಂಭವಿಸುವದಿಲ್ಲವೋ ? ಇವೆರಡರಲ್ಲಿ ಒಂದು ಸಂಭವಿಸುವದಿಲ್ಲ ಎನ್ನುವಾಗ, ಕರ್ಮಸಂನ್ಯಾಸವು (ಸಂಭವಿಸುವದಿಲ್ಲವೋ), ಇಲ್ಲವೆ ಕರ್ಮಯೋಗವು (ಸಂಭವಿಸುವದಿಲ್ಲವೋ)? (ಅದು) ಸಂಭವಿಸುವದಿಲ್ಲವೆಂಬುದಕ್ಕೆ ಕಾರಣವನ್ನೂ (ನೀವು) ಹೇಳಬೇಕಾಗುವದು.

(ಉತ್ತರ), - ಇದಕ್ಕೆ ಹೇಳುತ್ತೇವೆ. ಆತ್ಮಜ್ಞಾನಿಗೆ ತಪ್ಪುತಿಳಿವಳಿಕೆಯು ಹೋಗಿಬಿಟ್ಟಿರುವದರಿಂದ ಬೇರೆಯಾಗಿ ತಿಳಿದುಕೊಳ್ಳುವ ಜ್ಞಾನದ[1] ಕಾರಣದಿಂದಾಗುವ ಕರ್ಮಯೋಗವು ಸಂಭವಿಸುವದಿಲ್ಲವೆಂದಾಗುವದು. ಹುಟ್ಟುವದೇ ಮುಂತಾದ

1. ಮಿಥ್ಯಾಜ್ಞಾನ (ತಪ್ಪುತಿಳಿವಳಿಕೆ), ವಿಪರ್ಯಯಜ್ಞಾನ (ಬೇರೆಯಾಗಿ ತಿಳಿದುಕೊಳ್ಳುವದು)_ಇವೆರಡೂ ಒಂದೇ, ಆತ್ಮನಲ್ಲಿಲ್ಲದ ಕರ್ತೃತ್ವವನ್ನು ಆರೋಪಮಾಡಿಕೊಂಡಿರುವದೇ ಈ ಮಿಥ್ಯಾಜ್ಞಾನವು.

ಯಾವ ವಿಕಾರವೂ ಇಲ್ಲದ್ದರಿಂದ ನಿಷ್ಕ್ರಿಯನಾದ ಆತ್ಮನು ತಾನೆಂದು ಯಾವನು ಅರಿತುಕೊಂಡಿರುವನೋ ಆ ಆತ್ಮಜ್ಞಾನಿಗೆ ಸಮ್ಯಗ್ದರ್ಶನದಿಂದ ತಪ್ಪು ತಿಳಿವಳಿಕೆಯು ಹೋಗಿಬಿಟ್ಟಿರುವದರಿಂದ ನಿಷ್ಕ್ರಿಯನಾದ ಆತ್ಮಸ್ವರೂಪದಲ್ಲಿದ್ದುಬಿಡುವದೆಂಬ ಸರ್ವಕರ್ಮಸಂನ್ಯಾಸವನ್ನು[1] ಹೇಳಿ ಅವನಿಗಿಂತ ಬೇರೆಯಾಗಿ ತಪ್ಪುತಿಳಿವಳಿಕೆಯಿಂದಾಗಿರುವ ತಾನು ಕರ್ತೃ ಎಂಬ ಅಭಿಮಾನದಿಂದೊಡಗೂಡಿರುವ ಸಕ್ರಿಯನಾದ ಆತ್ಮನ ಸ್ವರೂಪದಲ್ಲಿರುವದೆಂಬ ಕರ್ಮಯೋಗವು–ಸರಿಯಾದ ತಿಳಿವಳಿಕೆ, ತಪ್ಪುತಿಳಿವಳಿಕೆ ಇವಕ್ಕೂ, ಇವುಗಳ ಕಾರ್ಯಗಳಿಗೂ ಒಂದಕ್ಕೊಂದಕ್ಕೆ ವಿರೋಧವಿರುವದರಿಂದ–(ಆತ್ಮಜ್ಞಾನಿಗೆ) ಇರಲಾರದೆಂದು ಈ (ಗೀತಾ) ಶಾಸ್ತ್ರದಲ್ಲಿ ಆತ್ಮಸ್ವರೂಪವನ್ನು ಗೊತ್ತುಮಾಡಿ ಹೇಳತಕ್ಕ ಬೇರೆಬೇರೆಯ ಕಡೆಗಳಲ್ಲಿ ತಿಳಿಸಿರುತ್ತದೆ. ಹೀಗಿರುವದರಿಂದ ತಪ್ಪುತಿಳಿವಳಿಕೆಯನ್ನು ತೊಲಗಿಸಿಕೊಂಡಿರುವ ಆತ್ಮಜ್ಞಾನಿಗೆ (ಆತ್ಮನನ್ನು) ಬೇರೆಯಾಗಿ ತಿಳಿದುಕೊಳ್ಳುವದರಿಂದುಂಟಾಗುವ ಕರ್ಮಯೋಗವು ಸಂಭವಿಸುವದಿಲ್ಲವೆಂದು ಹೇಳುವದು ಯುಕ್ತವಾಗುವದು.

(ಭಾಷ್ಯ)

೩೧೭. ಕೇಷು ಕೇಷು ಪುನರಾತ್ಮಸ್ವರೂಪನಿರೂಪಣಪ್ರದೇಶೇಷು ಆತ್ಮವಿದಃ ಕರ್ಮಾಭಾವಃ ಪ್ರತಿಪಾದ್ಯತೇ ಇತಿ? ಅತ್ರ ಉಚ್ಯತೇ–"ಅವಿನಾಶಿ ತು ತದ್ವಿದ್ಧಿ" (೨-೧೭) ಇತಿ ಪ್ರಕೃತ್ಯ "ಯ ಏನಂ ವೇತ್ತಿ ಹನ್ತಾರಮ್" (೨-೧೯), "ವೇದಾವಿನಾಶಿನಂ ನಿತ್ಯಮ್" (೨-೨೧)–ಇತ್ಯಾದೌ ತತ್ರ ತತ್ರ ಆತ್ಮವಿದಃ ಕರ್ಮಾಭಾವಃ ಉಚ್ಯತೇ ॥

(ಭಾಷ್ಯಾರ್ಥ)

(ಪ್ರಶ್ನೆ): --ಹಾಗಾದರೆ ಆತ್ಮಸ್ವರೂಪವನ್ನು ಗೊತ್ತುಮಾಡಿ ಹೇಳುವ ಯಾವ ಯಾವ ಕಡೆಗಳಲ್ಲಿ ಆತ್ಮಜ್ಞಾನಿಗೆ ಕರ್ಮವಿಲ್ಲವೆಂಬುದನ್ನು ತಿಳಿಸಿರುತ್ತದೆ.?

(ಉತ್ತರ):—ಇದಕ್ಕೆ (ಉತ್ತರವನ್ನು) ಹೇಳುತ್ತೇವೆ, (ಕೇಳಿ). "ಅದನ್ನು ಅವಿನಾಶಿಯೆಂದು ತಿಳಿದುಕೊ" (೨-೧೭) ಎಂದು ಪ್ರಾರಂಭಿಸಿ "ಈತನು ಕೊಲ್ಲು

---

1. ಇದೇ ಪರಮಾರ್ಥಸಂನ್ಯಾಸವು, ಜ್ಞಾನಿಯು ತೆಗೆದುಕೊಳ್ಳುವ ಸಂನ್ಯಾಸವೂ ಜ್ಞಾನಪರಿಪಾಕಕ್ಕಾಗುವದರಿಂದ ಅದನ್ನು ವಿದ್ವತ್ಸಂನ್ಯಾಸವೆಂದು ಕರೆಯುತ್ತಾರೆ. ಸೂ. ಭಾ. ೩-೪-೨೦. ಪೀಠಿಕೆಯನ್ನು ನೋಡಿ.

ವವನೆಂದು ಯಾವನು ತಿಳಿಯುತ್ತಾನೋ (ಅವನು ತಿಳಿಯನು) "[1] (೨-೧೯), " ಈತನು ನಾಶವಿಲ್ಲದವನೆಂದೂ ನಿತ್ಯನೆಂದೂ ಯಾವನು ತಿಳಿದಿರುವನೋ (ಅವನು ಯಾರನ್ನು ಹೇಗೆ ಕೊಲ್ಲುವನು ?) "[2] (೨-೨೧)-ಎಂದು ಮುಂತಾಗಿರುವ (ಸ್ಥಳಗಳಲ್ಲಿ) ಆತ್ಮಜ್ಞಾನಿಗೆ ಕರ್ಮವಿಲ್ಲವೆಂದು ಬೇರೆ ಬೇರೆಯ ಕಡೆಗಳಲ್ಲಿ ಹೇಳಿರುತ್ತದೆ.

## ಜ್ಞಾನಿಗೂ ಕರ್ಮವನ್ನು ಹೇಳಿದೆ ಎಂಬುದು ಸರಿಯಲ್ಲ

(ಭಾಷ್ಯ)

೩೧೮. ನನು ಚ ಕರ್ಮಯೋಗೋಽಪಿ ಆತ್ಮಸ್ವರೂಪನಿರೂಪಣಪ್ರದೇಶೇಷು ತತ್ರ ತತ್ರ ಪ್ರತಿಪಾದ್ಯತೇ ಏವ। ತದ್ ಯಥಾ " ತಸ್ಮಾದ್ ಯುಧ್ಯಸ್ವ ಭಾರತ " (೨-೧೮) " ಸ್ವಧರ್ಮಮಪಿ ಚಾವೇಕ್ಷ್ಯ " (೨-೩೧) " ಕರ್ಮಣ್ಯೇವಾಧಿಕಾರಸ್ತೇ " (೨-೪೭) ಇತ್ಯಾದೌ। ಅತಶ್ಚ ಕಥಮ್ ಆತ್ಮವಿದಃ ಕರ್ಮಯೋಗಸ್ಯ ಅಸಂಭವಃ ಸ್ಯಾತ್ ಇತಿ ? ಅತ್ರೋಚ್ಯತೇ। ಸಮ್ಯಗ್ಜ್ಞಾನಮಿಥ್ಯಾಜ್ಞಾನತತ್ಕಾರ್ಯವಿರೋಧಾತ್, " ಜ್ಞಾನಯೋಗೇನ ಸಾಙ್ಖ್ಯಾನಾಮ್ "(೩-೩)ಇತ್ಯನೇನ ಸಾಙ್ಖ್ಯಾನಾಮ್ ಆತ್ಮತತ್ತ್ವವಿದಾಮ್ ಅನಾತ್ಮವಿತ್ಕರ್ತೃಕಕರ್ಮಯೋಗನಿಷ್ಠಾತಃ ನಿಷ್ಕ್ರಿಯಾತ್ಮಸ್ವರೂಪಾವಸ್ಥಾನಲಕ್ಷಣಾಯಾಃ ಜ್ಞಾನಯೋಗನಿಷ್ಠಾಯಾಃ ಪೃಥಕ್ಕರಣಾತ್, ಕೃತಕೃತ್ಯತ್ವೇನ ಆತ್ಮವಿದಃ ಪ್ರಯೋಜನಾನ್ತರಾಭಾವಾತ್, " ತಸ್ಯ ಕಾರ್ಯಂ ನ ವಿದ್ಯತೇ " (೩-೧೭) ಇತಿ ಕರ್ತವ್ಯಾನ್ತರಾಭಾವವಚನಾಚ್ಚ। " ನ ಕರ್ಮಣಾಮನಾರಮ್ಭಾತ್ " (೩-೪) " ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ " (೫-೬) ಇತ್ಯಾದಿನಾ ಚ ಆತ್ಮಜ್ಞಾನಾಙ್ಗತ್ವೇನ ಕರ್ಮಯೋಗಸ್ಯ ವಿಧಾನಾತ್, " ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ " (೬-೩) ಇತ್ಯನೇನ ಚ ಉತ್ಪನ್ನಸಮ್ಯಗ್ದರ್ಶನಸ್ಯ ಕರ್ಮಯೋಗಾಭಾವವಚನಾತ್, " ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ " (೪-೨೧) ಇತಿ ಚ ಶರೀರಸ್ಥಿತಿಕಾರಣಾತಿರಿಕ್ತಸ್ಯ ಕರ್ಮಣೋ ನಿವಾರಣಾತ್, " ನೈವ ಕಿಂಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ " (೫-೮) ಇತ್ಯನೇನ ಚ ಶರೀರಸ್ಥಿತಿ

1. ಇದು ಅಜ್ಞಾನಿಗೆ ಕರ್ತೃತ್ವವೂ ಕರ್ಮವೂ ಉಂಟೆಂದು ಹೇಳುವದಕ್ಕೆ ಉದಾಹರಿಸಿರುವ ವ್ಯತಿರೇಕ ಸ್ಥಲ.

2. ಅವನಿಗೆ ಕೊಲ್ಲುವದೇ ಮುಂತಾದ ಯಾವ ಕ್ರಿಯೆಯೂ ಇಲ್ಲ ಎಂಬುದು ವಾಕ್ಯದ ಅರ್ಥ.

ಮಾತ್ರಪ್ರಯುಕ್ತೇಷ್ವಪಿ ದರ್ಶನಶ್ರವಣಾದಿಕರ್ಮಸು ಆತ್ಮಯಾಥಾತ್ಮ್ಯವಿದಃ "ನಾಹಂ ಕರೋಮಿ"[1] ಇತಿ ಪ್ರತ್ಯಯಸ್ಯ ಸಮಾಹಿತಚೇತಸ್ತಯಾ ಸದಾ ಕರ್ತವ್ಯತ್ವೋಪದೇಶಾತ್ । ಆತ್ಮತತ್ತ್ವವಿದಃ ಸಮ್ಯಗ್ದರ್ಶನವಿರುದ್ಧೋ ಮಿಥ್ಯಾಜ್ಞಾನಹೇತುಕಃ ಕರ್ಮಯೋಗಃ ಸ್ವಪ್ನೇಽಪಿ ನ ಸಂಭಾವಯಿತುಂ ಶಕ್ಯತೇ ಯಸ್ಮಾತ್ ತಸ್ಮಾತ್ ಅನಾತ್ಮವಿತ್ಕರ್ತೃಕಯೋರೇವ ಸಂನ್ಯಾಸಕರ್ಮಯೋಗಯೋಃ ನಿಃಶ್ರೇಯಸಕರತ್ವವಚನಮ್ ತದೀಯಾಚ್ಚ ಕರ್ಮಸಂನ್ಯಾಸಾತ್ ಪೂರ್ವೋಕ್ತಾತ್ಮವಿತ್ಕರ್ತೃಕಸರ್ವಕರ್ಮಸಂನ್ಯಾಸವಿಲಕ್ಷಣಾತ್ ಸತ್ಯೇವ ಕರ್ತೃತ್ವವಿಜ್ಞಾನೇ ಕರ್ಮೈಕದೇಶವಿಷಯಾತ್ ಯಮನಿಯಮಾದಿಸಹಿತತ್ವೇನ ಚ ದುರನುಷ್ಠೇಯತ್ವಾತ್ ಸುಕರತ್ವೇನ ಚ ಕರ್ಮಯೋಗಸ್ಯ ವಿಶಿಷ್ಟತ್ವಾಭಿಧಾನಮ್ ಇತ್ಯೇವಂ ಪ್ರತಿವಚನವಾಕ್ಯಾರ್ಥನಿರೂಪಣೇನಾಪಿ ಪೂರ್ವೋಕ್ತಃ ಪ್ರಷ್ಟುರಭಿಪ್ರಾಯಃ ನಿಶ್ಚೀಯತೇ ಇತಿ ಸ್ಥಿತಮ್ ॥

(ಭಾಷ್ಯಾರ್ಥ)

(ಆಕ್ಷೇಪ):- ಆತ್ಮಸ್ವರೂಪವನ್ನು ಗೊತ್ತುಪಡಿಸುವ ಕಡೆಗಳಲ್ಲಿ ಕರ್ಮಯೋಗವನ್ನೂ ಅಲ್ಲಲ್ಲಿ ಹೇಳಿಯೇ ಇರುತ್ತದೆಯಲ್ಲ! ಉದಾಹರಣೆಗೆ "ಆದ್ದರಿಂದ ಎಲೈ ಭಾರತನೆ, ಯುದ್ಧಮಾಡು" (೨-೧೮) ಸ್ವಧರ್ಮವನ್ನು ಲಕ್ಷ್ಯದಲ್ಲಿಟ್ಟಾದರೂ (ನೀನು ಎದೆಗುಂದಬಾರದು--೨-೩೧) "ನಿನಗೆ ಕರ್ಮದಲ್ಲಿಯೇ ಅಧಿಕಾರವು" (೨-೪೭)- ಮುಂತಾದ ಕಡೆಯಲ್ಲಿ (ಕರ್ಮವನ್ನು ಹೇಳಿಯೇ ಇದೆ). ಹೀಗಿರುವಲ್ಲಿ ಆತ್ಮಜ್ಞಾನಿಗೆ ಕರ್ಮಯೋಗವು ಸಂಭವಿಸುವದಿಲ್ಲವೆಂಬುದು ಹೇಗೆ?

(ಪರಿಹಾರ) — ಇದಕ್ಕೆ (ಪರಿಹಾರವನ್ನು) ಹೇಳುತ್ತೇವೆ. (ಕೇಳು) ಸರಿಯಾದ ತಿಳಿವಳಿಕೆಗೂ ತಪ್ಪು ತಿಳಿವಳಿಕೆಗೂ ಅವೆರಡರ ಕಾರ್ಯಗಳಿಗೂ (ಪರಸ್ಪರ) ವಿರೋಧವಿರುತ್ತದೆ. "ಜ್ಞಾನಯೋಗದಿಂದ ಸಾಂಖ್ಯರಿಗೂ (ಕರ್ಮಯೋಗದಿಂದ ಯೋಗಿಗಳಿಗೂ ನಿಷ್ಠೆಯನ್ನು ಹೇಳಿರುತ್ತೇನೆ)" (೩-೩) ಎಂಬ ವಾಕ್ಯದಲ್ಲಿ ಆತ್ಮತತ್ತ್ವವನ್ನು ಬಲ್ಲ ಸಾಂಖ್ಯರಿಗೆ ಆತ್ಮನನ್ನರಿಯದವರು ಮಾಡುವ ಕರ್ಮಯೋಗನಿಷ್ಠೆಗಿಂತ ನಿಷ್ಕ್ರಿಯನಾದ ಆತ್ಮನ ಸ್ವರೂಪದಲ್ಲಿದ್ದುಕೊಂಡಿರುವದೆಂಬ ಜ್ಞಾನಯೋಗನಿಷ್ಠೆಯನ್ನು ಬೇರ್ಪಡಿಸಿ ಹೇಳಿರುತ್ತದೆ. ಆತ್ಮಜ್ಞಾನಿಯು ಕೃತಕೃತ್ಯನಾಗಿರುವದರಿಂದ (ಅವನಿಗೆ) ಆಗಬೇಕಾದ ಮತ್ತೊಂದು ಪ್ರಯೋಜನವು (ಯಾವದೂ) ಇರುವದಿಲ್ಲ;

---

1. "ಕರೋಮಿ ಇತಿ ಪ್ರತ್ಯಯಸ್ಯ ಸಮಾಹಿತಚೇತಸ್ತಯಾ ಅಕರ್ತವ್ಯತ್ವೋಪದೇಶಾತ್" ಎಂಬ ಆ||ನ||ವಾ|| ಪಾಠಕ್ಕಿಂತ ಈ ಮ||ಮ್ಯೆ|| ಪಾಠವು ಮೇಲು.

"ಆತನಿಗೆ ಮಾಡತಕ್ಕದ್ದು ಏನೂ ಇರುವದಿಲ್ಲ" (೩-೧೭) ಎಂಬ ವಾಕ್ಯದಿಂದ ಬೇರೆಯ ಕರ್ತವ್ಯವೇ ಇರುವದಿಲ್ಲವೆಂದು ಹೇಳಿಯೂ ಇರುತ್ತದೆ. "ಕರ್ಮವನ್ನು ಪ್ರಾರಂಭಿಸದೆ ಇರುವದರಿಂದ (ಮನುಷ್ಯನಿಗೆ ನೈಷ್ಕರ್ಮ್ಯವು ದೊರಕುವದಿಲ್ಲ ೩-೪), "ಎಲೈ ಮಹಾಬಾಹುವೆ, ಸಂನ್ಯಾಸವಾದರೋ ಯೋಗವಿಲ್ಲದೆ ಸಿಕ್ಕುವದು ಕಷ್ಟ" (೫-೬)–ಮುಂತಾದ (ವಚನ)ದಿಂದ ಆತ್ಮಜ್ಞಾನಕ್ಕೆ ಕರ್ಮಯೋಗವು ಒಂದು ಅಂಗವೆಂದು ವಿಧಿಸಿರುತ್ತದೆ", "ಯೋಗಾರೂಢನಾದರೆ ಅವನಿಗೇ ಶಮವು ಕಾರಣವೆನಿಸುವದು" (೬-೩) ಎಂಬ ವಾಕ್ಯದಲ್ಲಿ ಸರಿಯಾದ ಜ್ಞಾನವುಂಟಾದವನಿಗೆ ಕರ್ಮಯೋಗವಿಲ್ಲವೆಂದೂ ಹೇಳಿರುತ್ತದೆ "ಬರಿಯ ಶಾರೀರಕರ್ಮವನ್ನು ಮಾಡುತ್ತಿರುವನಾದ್ದರಿಂದ ಅವನು ಕಿಲ್ಬಿಷವನ್ನು ಹೊಂದುವದಿಲ್ಲ" (೪-೨೧) ಎಂಬಲ್ಲಿ ಶರೀರವು ಇರುವವರೆಗೆ ಬೇಕಾದ ಕರ್ಮವನ್ನು ಬಿಟ್ಟರೆ ಬೇರೆಯ ಕರ್ಮವು (ಜ್ಞಾನಿಗೆ) ಇಲ್ಲವೆಂದು ಹೇಳಿರುತ್ತದೆ. "ತತ್ತ್ವವನ್ನರಿತುಕೊಂಡಿರುವವನು ನಾನು ಏನನ್ನೂ ಮಾಡುತ್ತಿಲ್ಲ ಎಂದೆಣಿಸಿಕೊಂಡಿರುವನು" (೫-೮) ಎಂಬೀ (ವಾಕ್ಯ)ದಲ್ಲಿ ಶರೀರವು ಇರುವವರೆಗೆ ಮಾಡುತ್ತಿರಬೇಕಾದ ನೋಡುವದು, ಕೇಳುವದು–ಮುಂತಾದ ಕೆಲಸಗಳಲ್ಲಿಕೂಡ ಆತ್ಮನ ನಿಜವನ್ನು ಅರಿತುಕೊಂಡಿರುವಾತನು "ನಾನು (ಏನನ್ನೂ) ಮಾಡುತ್ತಿಲ್ಲ" ಎಂಬ ಭಾವನೆಯನ್ನೇ ಚಿತ್ತಸಮಾಧಾನಪೂರ್ವಕನಾಗಿ ಯಾವಾಗಲೂ ಮಾಡುತ್ತಿರಬೇಕೆಂದು ತಿಳಿಸಿಕೊಟ್ಟಿರುವದರಿಂದಲೂ ಆತ್ಮತತ್ತ್ವವನ್ನು ಬಲ್ಲಾತನಿಗೆ ಸಮ್ಯಗ್ದರ್ಶನಕ್ಕೆ ವಿರುದ್ಧವಾದ ತಪ್ಪುತಿಳಿವಳಿಕೆ ಎಂಬ ಕಾರಣವುಳ್ಳ ಕರ್ಮಯೋಗವು ಇರಬಹುದೆಂದು ಕನಸಿನಲ್ಲಿಕೂಡ ಕಲ್ಪಿಸುವದಕ್ಕೆ ಆಗಲಾರದು. ಹೀಗಿರುವದರಿಂದ **ಆತ್ಮನನ್ನು ಅರಿಯುದವನು ಮಾಡಬೇಕಾದ ಸಂನ್ಯಾಸಕರ್ಮಗಳೇ ಮುಕ್ತಿಗೆ ಕಾರಣವೆಂದು (ಇಲ್ಲಿ) ಹೇಳಿದೆಯೆಂತಲೂ ಆತನ ಸಂನ್ಯಾಸವು ಹಿಂದೆ ಹೇಳಿರುವ ಆತ್ಮಜ್ಞಾನಿಯು ಮಾಡುವ ಸರ್ವಕರ್ಮಸಂನ್ಯಾಸಕ್ಕಿಂತ ಬೇರೆಯ ಸ್ವಭಾವದ್ದಾಗಿಯೂ ತಾನು ಕರ್ತೃವೆಂಬ ಅರಿವು ಇರುವಾಗಲೇ ಕೆಲವು ಕರ್ಮಗಳನ್ನು ಮಾತ್ರ ಬಿಡತಕ್ಕದ್ದಾಗಿಯೂ[1] ಯಮನಿಯಮಾದಿಗಳಿಂದೊಡಗೂಡಿರಬೇಕಾದದ್ದರಿಂದ ಮಾಡುವದಕ್ಕೆ ಕಷ್ಟವಾಗಿಯೂ[2] ಇರುವದರಿಂದ ಅದಕ್ಕಿಂತ ಮಾಡು**

1. ವಿವಿದಿಷಾಸಂನ್ಯಾಸಿಯು ಗೃಹಸ್ಥಾಶ್ರಮದ ಕರ್ಮಗಳನ್ನು ಮಾತ್ರ ಬಿಡುತ್ತಾನೆ; ಸಂನ್ಯಾಸಾಶ್ರಮದ ಕರ್ಮಗಳನ್ನು ಬಿಡುವದಿಲ್ಲ. ಲೌಕಿಕಕರ್ಮಗಳಂತೂ ಅವಶ್ಯವಾಗಿ ಅವನಿಗೆ ಇದ್ದೇ ಇರುತ್ತವೆ.

2. ಯೋಗಾಭ್ಯಾಸವು ಸಂನ್ಯಾಸಿಗೆ ಮುಖ್ಯ ಧರ್ಮ.

**ವದಕ್ಕೆ ಸುಲಭವಾಗಿರುವದರಿಂದ ಕರ್ಮಯೋಗವು ಹೆಚ್ಚಿನದೆಂದು ಹೇಳಿದೆ ಯೆಂತಲೂ (ನಿರ್ಣಯಿಸಬೇಕು).**

ಹೀಗೆ (ಶ್ರೀಕೃಷ್ಣನು ಹೇಳಿರುವ) ಉತ್ತರರೂಪವಾಗಿರುವ ವಾಕ್ಯದ ಅರ್ಥ ವನ್ನು ಗೊತ್ತುಪಡಿಸುವದರಿಂದಲೂ ಹಿಂದೆ (ನಾವು) ಹೇಳಿದ್ದೇ ಪ್ರಶ್ನೆಯನ್ನು ಕೇಳಿ ರುವ (ಅರ್ಜುನನ) ಅಭಿಪ್ರಾಯವೆಂದು ನಿಶ್ಚಯವಾಗುತ್ತದೆ ಎಂದು ಸಿದ್ಧವಾಯಿತು.

## ಶ್ಲೋಕದ ಸಂಬಂಧ

೩೧೯. "ಜ್ಯಾಯಸೀ ಚೇತ್ ಕರ್ಮಣಸ್ತೇ" (೩-೧) ಇತ್ಯತ್ರ ಜ್ಞಾನ ಕರ್ಮಣೋಃ ಸಹಾಸಮ್ಭವೇ 'ಯಚ್ಛ್ರೇಯ ಏತಯೋಸ್ತನ್ಮೇ ಬ್ರೂಹಿ' (೩-೨) ಇತ್ಯೇವಂ ಪೃಷ್ಟೋಽರ್ಜುನೇನ ಭಗವಾನ್ 'ಸಾಙ್ಖ್ಯಾನಾಂ ಸಂನ್ಯಾಸಿನಾಂ ಜ್ಞಾನ ಯೋಗೇನ ನಿಷ್ಠಾ ಕರ್ಮಯೋಗೇನ ಯೋಗಿನಾಂ ನಿಷ್ಠಾ ಪ್ರೋಕ್ತಾ' (೩-೩) ಇತಿ ನಿರ್ಣಯಂ ಚಕಾರ। 'ನ ಚ ಸಂನ್ಯಸನಾದೇವ ಕೇವಲಾತ್ ಸಿದ್ಧಿಂ ಸಮಧಿ ಗಚ್ಛತಿ' (೩-೪) ಇತಿ ವಚನಾತ್ ಜ್ಞಾನಸಹಿತಸ್ಯ ಸಿದ್ಧಿಸಾಧನತ್ವಮ್ ಇಷ್ಟಮ್। ಕರ್ಮಯೋಗಸ್ಯ ಚ। ವಿಧಾನಾತ್। ಜ್ಞಾನರಹಿತಸ್ಯ ಸಂನ್ಯಾಸಃ ಶ್ರೇಯಾನ್, ಕಿಂ ವಾ ಕರ್ಮಯೋಗಃ ಶ್ರೇಯಾನ್ ಇತ್ಯೇತಯೋರ್ವಿಶೇಷಬುಭುತ್ಸಯಾ ಅರ್ಜುನ ಉವಾಚ[1]–

(ಭಾಷ್ಯಾರ್ಥ)

"ಕರ್ಮಕ್ಕಿಂತ (ಜ್ಞಾನವು) ಹೆಚ್ಚೆಂದು ನಿನ್ನ (ಮತವಾದರೆ)" (೩-೧) ಎಂಬಲ್ಲಿ ಜ್ಞಾನಕರ್ಮಗಳೆರಡೂ ಒಟ್ಟಿಗೆ (ಒಬ್ಬನಲ್ಲಿ) ಇರುವಹಾಗಿಲ್ಲವಾದ್ದರಿಂದ 'ಇವೆ ರಡರಲ್ಲಿ ಯಾವದು ಉತ್ತಮವೋ ಅದನ್ನು ಹೇಳು' (೩-೨) ಎಂದು ಅರ್ಜುನನು ಕೇಳಲು ಭಗವಂತನು 'ಸಾಂಖ್ಯರಾದ ಸಂನ್ಯಾಸಿಗಳಿಗೆ ಜ್ಞಾನಯೋಗದಿಂದ ನಿಷ್ಠೆ ಯನ್ನೂ (ಕರ್ಮ)ಯೋಗಿಗಳಿಗೆ ಕರ್ಮಯೋಗದಿಂದ ನಿಷ್ಠೆಯನ್ನೂ (ನಾನು) ಹೇಳಿ ರುತ್ತೇನೆ" (೩-೩) ಎಂದು ನಿರ್ಣಯವನ್ನು ಮಾಡಿದನು "ಬರಿಯ ಸಂನ್ಯಾಸ ದಿಂದಲೇ ಸಿದ್ಧಿಯನ್ನು ಪಡೆಯುವದೂ ಇಲ್ಲ" (೩-೪)[2] ಎಂದು ಹೇಳಿರುವದರಿಂದ ಜ್ಞಾನದಿಂದ ಕೂಡಿದ (ಸಂನ್ಯಾಸವು) ಸಿದ್ಧಿಗೆ ಸಾಧನವಾಗಿರುವದೆಂದು ಹೇಳಿದಂತೆ

---

1. ಅರ್ಜುನ ಉವಾಚ ಎಂಬ ಮೂಲಕ್ಕೇ ಭಾಷ್ಯವನ್ನು ಸೇರಿಸಿಕೊಂಡಿರುತ್ತಾರೆ.

2. ಈ ವಾಕ್ಯದವರೆಗೆ ಭಾಷ್ಯಮೂಲದಲ್ಲಿ ಉದಾಹರಿಸಿರುವದು ಮೂರೂ ಶ್ಲೋಕದ ಅರ್ಥ ಮಾತ್ರ.

ಆಯಿತು.[1] ಕರ್ಮಯೋಗವನ್ನು ವಿಧಿಸಿರುವದರಿಂದ (ಅದೂ ಸಿದ್ಧಿಗೆ ಸಾಧನವಾಗಿರುವದೆಂದು ಹೇಳಿದಂತೆ ಆಯಿತು). ಜ್ಞಾನವಿಲ್ಲದವನಿಗೆ ಸಂನ್ಯಾಸವೇ ಒಳ್ಳೆಯದೊ, ಅಥವಾ ಕರ್ಮಯೋಗವೇ ಒಳ್ಳೆಯದೊ?[2]–ಎಂದು ಗೊತ್ತಾಗಿ ತಿಳಿಯಬೇಕೆಂದು ಅರ್ಜುನನಿಂತೆಂದನು :—

**ಅರ್ಜುನ ಉವಾಚ—**

**ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ ।**
**ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ ॥ ೧ ॥**

೧. ಅರ್ಜುನನಿಂತೆಂದನು :—ಕೃಷ್ಣನೆ, ಕರ್ಮಗಳ ಸಂನ್ಯಾಸವನ್ನೂ ಮತ್ತೆ ಯೋಗವನ್ನೂ ಹೊಗಳುತ್ತಿದ್ದೀಯೆ. ಇವೆರಡರಲ್ಲಿ ಯಾವದು ಒಳ್ಳೆಯದೋ ಅದನ್ನು ಸುನಿಶ್ಚಿತವಾಗಿ ನನಗೆ ಹೇಳು.

(ಭಾಷ್ಯ)

೩೨೦. ಸಂನ್ಯಾಸಂ ಪರಿತ್ಯಾಗಂ ಕರ್ಮಣಾಂ ಶಾಸ್ತ್ರೀಯಾಣಾಮ್ ಅನುಷ್ಠೇಯ[3] ವಿಶೇಷಾಣಾಂ ಶಂಸಸಿ ಪ್ರಶಂಸಸಿ[4] ಕಥಯಸಿ ಇತ್ಯೇತತ್ । ಪುನಃ ಯೋಗಂ ಚ ತೇಷಾಮೇವ ಅನುಷ್ಠಾನಮ್ ಅವಶ್ಯಕರ್ತವ್ಯತ್ವಂ ಶಂಸಸಿ । ಅತಃ ಮೇ ಕತರತ್ ಶ್ರೇಯಃ ಇತಿ ಸಂಶಯಃ । ಕಿಂ ಕರ್ಮಾನುಷ್ಠಾನಂ ಶ್ರೇಯಃ ಕಿಂ ವಾ ತದ್ಧಾನಮ್ ಇತಿ ? ಪ್ರಶಸ್ಯತರಂ ಚ ಅನುಷ್ಠೇಯಮ್ । ಅತಶ್ಚ ಯಚ್ಛ್ರೇಯಃ ಪ್ರಶಸ್ಯತರಮ್

---

1. ಈ ಜ್ಞಾನದ ಸಿದ್ಧಿಯನ್ನು ಸ್ಥಿತಪ್ರಜ್ಞನ ಲಕ್ಷಣವನ್ನು ತಿಳಿಸಿ ಎರಡನೆಯ ಅಧ್ಯಾಯದ ಕೊನೆಯಲ್ಲಿ ಹೇಳಿದೆ. ಸಂನ್ಯಾಸಿಯಾಗಿರುವ ಜ್ಞಾನಿಗೆ ಆಗುವ ಫಲವನ್ನು ಹಿಂದಿನ ಅಧ್ಯಾಯದಲ್ಲಿಯೂ ಹೇಳಿದೆ.

2. ಸಂನ್ಯಾಸವನ್ನು ಹೊಗಳಿ ಫಲವನ್ನು ಹೇಳಿರುವದು ಅದನ್ನು ವಿಧಾನಮಾಡುವದಕ್ಕೆ, ವಿಧಿಯು ಆತ್ಮಜ್ಞನಲ್ಲದವನಿಗೇ ಸಮಂಜಸವಾಗಿರುತ್ತದೆ ಆದ್ದರಿಂದ ಜ್ಞಾನಿಯಲ್ಲದವನಿಗೂ ಸಂನ್ಯಾಸವುಂಟೆಂದಾಯಿತು. ಆದರೆ ಕರ್ಮಯೋಗ, ಕರ್ಮಸಂನ್ಯಾಸ–ಇವೆರಡೂ ಒಂದೇ ಕಾಲದಲ್ಲಿರಲಾರವು. ಹಾಗಾದರೆ ಯಾವದು ಒಳ್ಳೆಯದು ?–ಎಂದು ಪ್ರಶ್ನೆ. ಈ ಪ್ರಶ್ನೆಯನ್ನು ಗೊತ್ತುಪಡಿಸುವದಕ್ಕೆಂದೇ ಭಾಷ್ಯಕಾರರು ವಿಚಾರವನ್ನು ಮಾಡಿರುವದು

3. “ಅನುಷ್ಠಾನವಿಶೇಷಾಣಾಮ್” ಶಿ॥ಅ॥

4. ಅ॥ಶಿ॥ಗು॥ಗಳಲ್ಲಿ ಈ ಮಾತಿಲ್ಲ.

ಏತಯೋಃ ಕರ್ಮಸಂನ್ಯಾಸಕರ್ಮಯೋಗಯೋಃ ಯದನುಷ್ಠಾನಾತ್ ಶ್ರೇಯೋಽವಾಪ್ತಿಃ ಮಮ ಸ್ಯಾತ್ ಇತಿ ಮನ್ಯಸೇ ತತ್ ಏಕಮ್ ಅನ್ಯತರತ್ ಸಹ ಏಕಪುರುಷಾನುಷ್ಠೇಯತ್ವಾಸಂಭವಾತ್, ಮೇ ಬ್ರೂಹಿ ಸುನಿಶ್ಚಿತಮ್ ಅಭಿಪ್ರೇತಂ ತವ ಇತಿ||

(ಭಾಷ್ಯಾರ್ಥ)

ಕರ್ಮಗಳ ಸಂನ್ಯಾಸವನ್ನು ಎಂದರೆ ಶಾಸ್ತ್ರದಲ್ಲಿ ಹೇಳಿರುವ[1] ಮಾಡಬೇಕಾದ (ಕರ್ಮ)ಗಳ ಬಿಟ್ಟುಬಿಡುವಿಕೆಯನ್ನೂ (ಶಂಸಸಿ=ಪ್ರಶಂಸಸಿ) ಹೊಗಳುತ್ತಿದ್ದೀಯೆ, ಹೇಳುತ್ತಿದ್ದೀಯೆ ಎಂದಭಿಪ್ರಾಯ. ಮತ್ತೆ ಅವುಗಳ ಯೋಗವನ್ನೇ. ಅನುಷ್ಠಾನವನ್ನೇ (ಅವುಗಳನ್ನೇ) ಅವಶ್ಯವಾಗಿ ಮಾಡಬೇಕೆಂದೂ ಹೇಳುತ್ತಿದ್ದೀಯೆ ಆದ್ದರಿಂದ ನನಗೆ (ಇವೆರಡರಲ್ಲಿ) ಯಾವದು ಒಳ್ಳೆಯದು ಎಂಬ ವಿಷಯಕ್ಕೆ ಸಂಶಯ (ವುಂಟಾಗಿರುತ್ತದೆ). ಕರ್ಮಗಳನ್ನು ಮಾಡುವದು ಮೇಲೋ, ಅವುಗಳನ್ನು ಕೈಬಿಡುವದು ಮೇಲೊ ?–ಎಂದು (ಸಂಶಯ ಇವೆರಡರಲ್ಲಿ) ಯಾವದು ಹೆಚ್ಚು ಒಳ್ಳೆಯದೋ ಅದನ್ನು ಮಾಡತಕ್ಕದ್ದು ಆದ್ದರಿಂದ ಇವೆರಡರಲ್ಲಿ ಎಂದರೆ ಕರ್ಮಸಂನ್ಯಾಸ, ಕರ್ಮಯೋಗ–ಇವುಗಳಲ್ಲಿ ಯಾವದು ಒಳ್ಳೆಯದೋ ಹೆಚ್ಚು ಮೇಲಾದದ್ದೋ. ಯಾವದನ್ನು ಮಾಡಿದರೆ ನನಗೆ ಶ್ರೇಯಸ್ಸಾಗುವದೆಂದು (ನಿನ್ನ) ಅಭಿಪ್ರಾಯವೋ, ಅದೊಂದನ್ನು (ಎರಡನ್ನೂ) ಒಬ್ಬ ಮನುಷ್ಯನೇ ಮಾಡುವಂತಿಲ್ಲವಾದ್ದರಿಂದ. ಎರಡರಲ್ಲೊಂದನ್ನು ಸುನಿಶ್ಚಿತವಾಗಿ, ನಿನಗೆ ಯಾವದು ಅಭಿಪ್ರೇತವಾಗಿರುವದೋ, ಹೇಳು

## ಆತ್ಮಜ್ಞನಲ್ಲದವನಿಗೆ ಕರ್ಮಯೋಗವೇ ಹೆಚ್ಚಿನದು

(ಭಾಷ್ಯ)

೨೨೧. ಸ್ವಾಭಿಪ್ರಾಯಮ್ ಆಚಕ್ಷಾಣಃ ನಿರ್ಣಯಾಯ ಶ್ರೀ ಭಗವಾನ್ ಉವಾಚ—

(ಭಾಷ್ಯಾರ್ಥ)

ತನ್ನ ಅಭಿಪ್ರಾಯವನ್ನು ಹೇಳಿ ನಿರ್ಣಯಮಾಡುವದಕ್ಕಾಗಿ ಶ್ರೀ ಭಗವಂತ ನಿಂತೆಂದನು :—

**ಶ್ರೀ ಭಗವಾನ್ ಉವಾಚ—**

**ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।**
**ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥**

---

1. ಇಲ್ಲಿ ಕರ್ಮಗಳೆಂದರೆ ಶಾಸ್ತ್ರದಲ್ಲಿ ಗೃಹಸ್ಥನಿಗೆ ವಿಧಿಸಿರುವ ಕರ್ಮಗಳು.

೨. ಭಗವಂತನಿಂತೆಂದನು :—ಸಂನ್ಯಾಸವೂ ಕರ್ಮಯೋಗವೂ (ಈ) ಎರಡೂ ನಿಃಶ್ರೇಯಸವನ್ನುಂಟುಮಾಡುವವು. ಆದರೆ ಅವೆರಡರಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವು ಹೆಚ್ಚಿನದು.

(ಭಾಷ್ಯ)

೩-೨. ಸಂನ್ಯಾಸಃ ಕರ್ಮಣಾಂ ಪರಿತ್ಯಾಗಃ ಕರ್ಮಯೋಗಶ್ಚ ತೇಷಾಮ್ ಅನುಷ್ಠಾನಮ್ । ತೌ ಉಭಾವಪಿ ನಿಃಶ್ರೇಯಸಕರೌ ನಿಃಶ್ರೇಯಸಂ ಮೋಕ್ಷಂ ಕುರ್ವಾತೇ ಜ್ಞಾನೋತ್ಪತ್ತಿಹೇತುತ್ವೇನ । ಉಭೌ ಯದ್ಯಪಿ ನಿಃಶ್ರೇಯಸಕರೌ ತಥಾಪಿ ತಯೋಸ್ತು ನಿಃಶ್ರೇಯಸಹೇತ್ವೋಃ ಕರ್ಮಸಂನ್ಯಾಸಾತ್ ಕೇವಲಾತ್ ಕರ್ಮಯೋಗೋ ವಿಶಿಷ್ಯತೇ ಇತಿ ಕರ್ಮಯೋಗಂ ಸ್ತೌತಿ ॥

(ಭಾಷ್ಯಾರ್ಥ)

ಸಂನ್ಯಾಸವು ಎಂದರೆ ಕರ್ಮಗಳನ್ನು ಬಿಡುವದು, ಮತ್ತು ಕರ್ಮಯೋಗವು ಎಂದರೆ ಅವುಗಳನ್ನು ಮಾಡುವದು-ಈ ಎರಡೂ ನಿಃಶ್ರೇಯಸಕರಗಳಾಗಿರುತ್ತವೆ, ನಿಃಶ್ರೇಯಸವನ್ನು ಎಂದರೆ ಜ್ಞಾನವುಂಟಾಗುವದಕ್ಕೆ ಕಾರಣವಾಗಿ[1] ಮೋಕ್ಷವನ್ನು ಉಂಟುಮಾಡುತ್ತವೆ. ಆದರೆ (ಈ) ಎರಡೂ (ಹೀಗೆ) ನಿಃಶ್ರೇಯಸಕರಗಳಾಗಿದ್ದರೂ ನಿಃಶ್ರೇಯಸಕ್ಕೆ ಕಾರಣವಾಗಿರುವ ಈ ಎರಡರಲ್ಲಿ ಬರಿಯ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವು ಹೆಚ್ಚಿನದು ಎಂದು ಕರ್ಮಯೋಗವನ್ನು ಹೊಗಳುತ್ತಿದ್ದಾನೆ.[2]

(ಭಾಷ್ಯ)

೩-೩. ಕಸ್ಮಾತ್ ಇತಿ ? ಆಹ—

(ಭಾಷ್ಯಾರ್ಥ)

ಅದೇಕೆ ? ಎಂದರೆ (ಭಗವಂತನು) ಹೇಳುತ್ತಾನೆ :—

**ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಙ್ಕ್ಷತಿ ।**
**ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬನ್ಧಾತ್ ಪ್ರಮುಚ್ಯತೇ ॥**

---

1. ಕರ್ಮಯೋಗವೂ ಸಂನ್ಯಾಸವೂ ಚಿತ್ತವನ್ನು ಆತ್ಮನ ಕಡೆಗೆ ತಿರುಗಿಸುವದರಿಂದ ಜ್ಞಾನವನ್ನುಂಟುಮಾಡುವದರ ಮೂಲಕ ಮುಕ್ತಿಗೆ ಕಾರಣವಾಗಿರುತ್ತವೆ.

2. ಕರ್ಮಯೋಗವನ್ನು ಹೊಗಳುವದಕ್ಕೆ ವಾಕ್ಯವು ಬಂದಿದೆ, ಸಂನ್ಯಾಸವು ಕಡಿಮೆಯೆನ್ನುವದಕ್ಕಲ್ಲ. ಪೀಠಿಕೆಯನ್ನು ನೋಡಿ.

೩. ಯಾವನು ದ್ವೇಷಿಸುವದಿಲ್ಲವೋ ಆಶಿಸುವದಿಲ್ಲವೋ ಅವನು ನಿತ್ಯಸಂನ್ಯಾಸಿ ಎಂದು ತಿಳಿಯತಕ್ಕದ್ದು. ಏಕೆಂದರೆ, ಎಲೈ ಮಹಾಬಾಹುವೆ, ನಿರ್ದ್ವಂದ್ವನಾದವನು ಸುಖವಾಗಿ ಬಂಧದಿಂದ ಮುಕ್ತನಾಗುತ್ತಾನೆ.

(ಭಾಷ್ಯ)

೩-೪. ಜ್ಞೇಯಃ ಜ್ಞಾತವ್ಯಃ ಸ ಕರ್ಮಯೋಗೀ ನಿತ್ಯಸಂನ್ಯಾಸೀ ಇತಿ ಯೋ ನ ದ್ವೇಷ್ಟಿ ಕಿಂಚಿತ್ ನ ಕಾಙ್ಕ್ಷತಿ ದುಃಖಂ ಸುಖಂ ವಾ ತತ್ಸಾಧನಂ ಚ [1] । ಏವಂ ವಿಧಃ ಯಃ ಕರ್ಮಣಿ ವರ್ತಮಾನೋ-ಪಿ ಸ ನಿತ್ಯಸಂನ್ಯಾಸೀ ಇತಿ ಜ್ಞಾತವ್ಯಃ ಇತ್ಯರ್ಥಃ । ನಿರ್ದ್ವಂದ್ವಃ ದ್ವಂದ್ವವರ್ಜಿತಃ ಹಿ ಯಸ್ಮಾತ್ ಮಹಾಬಾಹೋ ಸುಖಂ ಬನ್ಧಾತ್ ಅನಾಯಾಸೇನ ಪ್ರಮುಚ್ಯತೇ ॥

(ಭಾಷ್ಯಾರ್ಥ)

ಯಾವನು ಯಾವದನ್ನು ಹಗೆಮಾಡುವದಿಲ್ಲವೋ ಬಯಸುವದಿಲ್ಲವೋ ದುಃಖವನ್ನಾಗಲಿ ಸುಖವನ್ನಾಗಲಿ ಅವುಗಳಿಗೆ ಕಾರಣವಾಗಿರುವದನ್ನಾಗಲಿ (ಯಾವನು ಹಗೆಮಾಡದೆ ಬಯಸದೆ ಇರುವನೋ) ಆ ಕರ್ಮಯೋಗಿಯು ನಿತ್ಯಸಂನ್ಯಾಸಿ ಎಂದು ತಿಳಿಯತಕ್ಕದ್ದು, ಭಾವಿಸಬೇಕು ಯಾವನು ಈ ಬಗೆಯವನೋ ಅವನು ಕರ್ಮದಲ್ಲಿಯೇ ಇರುತ್ತಿದ್ದರೂ ನಿತ್ಯಸಂನ್ಯಾಸಿ ಎಂದು ತಿಳಿಯಬೇಕು [2] ಎಂದರ್ಥ ಏಕೆಂದರೆ (ಹಿ=ಯಸ್ಮಾತ್) ನಿರ್ದ್ವಂದ್ವನಾದವನು ದ್ವಂದ್ವಗಳಿಲ್ಲದವನು, ಎಲೈ ಮಹಾಬಾಹುವೆ, ಸುಖವಾಗಿ ಯಾವ ಆಯಾಸವೂ ಇಲ್ಲದೆ ಬಂಧದಿಂದ ಬಿಡುಗಡೆಯನ್ನು ಹೊಂದುತ್ತಾನೆ.

## ಸಾಂಖ್ಯಯೋಗಗಳಿಗೆ ಇರುವ ಸಂಬಂಧ

(ಭಾಷ್ಯ)

೩-೫. ಸಂನ್ಯಾಸಕರ್ಮಯೋಗಯೋಃ ಭಿನ್ನಪುರುಷಾನುಷ್ಠೇಯಯೋಃ ವಿರುದ್ಧಯೋಃ ಫಲೇ-ಪಿ ವಿರೋಧೋ ಯುಕ್ತಃ, ನ ತು ಉಭಯೋಃ ನಿಃಶ್ರೇಯಸಕರತ್ವಮೇವ ಇತಿ ಪ್ರಾಪ್ತೇ ಇದಮ್ ಉಚ್ಯತೇ—

---

1. "ದುಃಖಸುಖೇ ತತ್ಸಾಧನೇ ಚ" ಆ||ಗಿ||ಗು||ವಾ||

2. ಕರ್ಮಯೋಗಿಯನ್ನು ಸಂನ್ಯಾಸಿ ಎಂದು ಹೊಗಳಿರುವದರಿಂದ ಸಂನ್ಯಾಸದ ಹೆಚ್ಚುಗಾರಿಕೆಯು ಸ್ಪಷ್ಟವಾಗಿಯೇ ಇರುತ್ತದೆ.

(ಭಾಷ್ಯಾರ್ಥ)

ಸಂನ್ಯಾಸ, ಕರ್ಮಯೋಗ–ಇವು ಬೇರೆಬೇರೆಯ ಜನರು ಮಾಡತಕ್ಕವುಗಳು, (ಒಂದಕ್ಕೊಂದು) ವಿರುದ್ಧವಾಗಿರುತ್ತವೆ. (ಆದ್ದರಿಂದ) ಫಲದಲ್ಲಿಯೂ (ಪರಸ್ಪರ) ವಿರೋಧವು (ಇರುವದು) ಯುಕ್ತವಾಗಿರುತ್ತದೆಯೇ ಹೊರತು ಎರಡೂ ನಿಃಶ್ರೇಯಸ ವನ್ನುಂಟುಮಾಡುವವು ಎಂಬುದು (ನ್ಯಾಯ)ವಲ್ಲ–ಎಂಬ (ಆಕ್ಷೇಪ) ಬಂದರೆ (ಅದಕ್ಕೆ ಭಗವಂತನು) ಈ (ಉತ್ತರವನ್ನು) ಹೇಳುತ್ತಾನೆ:—

**ಸಾಙ್ಖ್ಯಯೋಗೌ ಪೃಥಗ್ ಬಾಲಾಃ ಪ್ರವದನ್ತಿ ನ ಪಣ್ಡಿತಾಃ ।**
**ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿನ್ದತೇ ಫಲಮ್ ॥ ೪ ॥**

೪ ಸಾಂಖ್ಯಯೋಗಗಳು ಬೇರೆಬೇರೆಯೆಂದು ಹುಡುಗರು ಹೇಳು ವರೇ ಹೊರತು ಪಂಡಿತರು (ಹೇಳ)ರು. (ಇವುಗಳ)ಲ್ಲಿ ಒಂದನ್ನೇ ಆಗಲಿ, ಚೆನ್ನಾಗಿ ಇಟ್ಟುಕೊಂಡಿರುವವನು ಎರಡರ ಫಲವನ್ನೂ ಪಡೆಯುತ್ತಾನೆ.

(ಭಾಷ್ಯ)

೩೨೬. ಸಾಙ್ಖ್ಯಯೋಗೌ ಪೃಥಕ್ ವಿರುದ್ಧಭಿನ್ನಫಲೌ ಬಾಲಾಃ ಪ್ರವದನ್ತಿ ನ ಪಣ್ಡಿತಾಃ । ಪಣ್ಡಿತಾಸ್ತು ಜ್ಞಾನಿನಃ ಏಕಂ ಫಲಮ್ ಅವಿರುದ್ಧಮ್ ಇಚ್ಛನ್ತಿ । ಕಥಮ್ ? ಏಕಮಪಿ ಸಾಙ್ಖ್ಯಯೋಗಯೋಃ ಸಮ್ಯಕ್ ಆಸ್ಥಿತಃ ಸಮ್ಯಕ್ ಅನುಷ್ಠಿತ ವಾನ್ ಇತ್ಯರ್ಥಃ । ಉಭಯೋಃ ವಿನ್ದತೇ ಫಲಮ್ । ಉಭಯೋಃ ತದೇವ ಹಿ ನಿಃಶ್ರೇಯಸಂ ಫಲಮ್ । ಅತಃ ನ ಫಲೇ ವಿರೋಧೋಽಸ್ತಿ ॥

(ಭಾಷ್ಯಾರ್ಥ)

ಸಾಂಖ್ಯಯೋಗಗಳು ಬೇರೆಬೇರೆ, ವಿರುದ್ಧವಾದ ಬೇರೆಬೇರೆಯ ಫಲವುಳ್ಳವು– ಎಂದು (ತಿಳಿಯದ) ಹುಡುಗರು ಹೇಳುತ್ತಾರೆಯೇ ಹೊರತು ಪಂಡಿತರು (ಹೇಳುವ) ದಿಲ್ಲ. ಆದರೆ ಪಂಡಿತರು ಎಂದರೆ ಜ್ಞಾನಿಗಳು (ಇವೆರಡಕ್ಕೂ) ಒಂದೇ ಫಲವು, (ಇವುಗಳಿಗೆ) ಯಾವ ವಿರೋಧವೂ ಇಲ್ಲ–ಎಂದು ಅಭಿಪ್ರಾಯಪಡುತ್ತಾರೆ. (ಅದು) ಹೇಗೆಂದರೆ, (ಈ) ಸಾಂಖ್ಯಯೋಗಗಳಲ್ಲಿ (ಯಾವದಾದರೂ) ಒಂದನ್ನು ಚೆನ್ನಾಗಿಟ್ಟು ಕೊಂಡಿದ್ದರೂ ಎಂದರೆ (ಯಾವದಾದರೊಂದನ್ನು) ಸರಿಯಾಗಿ ನಡೆಸುತ್ತಿದ್ದರೂ ಎಂದರ್ಥ; ಎರಡರ ಫಲವನ್ನೂ ಪಡೆಯುತ್ತಾನೆ. ಇವೆರಡಕ್ಕೂ ಫಲವು ಅದೇ ಮೋಕ್ಷವು; ಆದ್ದರಿಂದ ಫಲದಲ್ಲಿ (ಯಾವ) ವಿರೋಧವೂ ಇರುವದಿಲ್ಲ.

(ಭಾಷ್ಯ)

೩.೨೭ ನನು ಸಂನ್ಯಾಸಕರ್ಮಯೋಗಶಬ್ದೇನ ಪ್ರಸ್ತುತ್ಯ ಸಾಙ್ಖ್ಯಯೋಗಯೋಃ ಫಲೈಕತ್ವಂ ಕಥಮ್ ಇಹ ಅಪ್ರಕೃತಂ ಬ್ರವೀತಿ ? ನೈಷ ದೋಷಃ । ಯದ್ಯಪಿ ಅರ್ಜುನೇನ ಸಂನ್ಯಾಸಂ ಕರ್ಮಯೋಗಂ ಚ ಕೇವಲಮ್ ಅಭಿಪ್ರೇತ್ಯ ಪ್ರಶ್ನಃ ಕೃತಃ, ಭಗವಾಂಸ್ತು ತದಪರಿತ್ಯಾಗೇನೈವ ಸ್ವಾಭಿಪ್ರೇತಂ ಚ ವಿಶೇಷಂ ಸಂಯೋಜ್ಯ ಶಬ್ದಾನ್ತರವಾಚ್ಯತಯಾ ಪ್ರತಿವಚನಂ ದದೌ 'ಸಾಙ್ಖ್ಯಯೋಗೌ' ಇತಿ । ತಾವೇವ ಸಂನ್ಯಾಸಕರ್ಮಯೋಗೌ ಜ್ಞಾನತದುಪಾಯಸಮಬುದ್ಧಿತ್ವಾದಿಸಂಯುಕ್ತೌ ಸಾಙ್ಖ್ಯಯೋಗಶಬ್ದವಾಚ್ಯೌ ಇತಿ ಭಗವತೋ ಮತಮ್ । ಅತಃ ನ ಅಪ್ರಕೃತಪ್ರಕ್ರಿಯಾ ಇತಿ ॥

(ಭಾಷ್ಯಾರ್ಥ)

(ಆಕ್ಷೇಪ) —'ಸಂನ್ಯಾಸ', 'ಕರ್ಮಯೋಗ'—ಎಂಬ ಮಾತುಗಳಿಂದ ಪ್ರಾರಂಭಿಸಿ ಸಾಂಖ್ಯಯೋಗಗಳೆರಡಕ್ಕೂ ಒಂದೇ ಫಲವೆಂದು ಇಲ್ಲಿ ಪ್ರಕೃತವಲ್ಲದ್ದನ್ನು (ಭಗವಂತನು) ಹೇಳುತ್ತಾನಲ್ಲ, (ಇದು) ಹೇಗೆ (ಸರಿ) ?

(ಪರಿಹಾರ) —ಇದೇನೂ ತಪ್ಪಲ್ಲ. ಅರ್ಜುನನೇನೋ ಬರಿಯ ಸಂನ್ಯಾಸ, ಕರ್ಮಯೋಗ[1]—ಇವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಶ್ನೆಯನ್ನು ಮಾಡಿರುತ್ತಾನೆ. ಆದರೆ ಭಗವಂತನು ಅವನು ಕೇಳಿದ್ದನ್ನು ಬಿಡದೆ ತನಗೆ ಮನಸ್ಸಿನಲ್ಲಿರುವ ವಿಶೇಷವನ್ನೂ ಸೇರಿಸಿ (ಅವನ್ನೇ) ಸಾಂಖ್ಯಯೋಗಗಳು ಎಂದು ಬೇರೆ ಮಾತುಗಳಿಂದ ಕರೆದು ಉತ್ತರವನ್ನು ಕೊಟ್ಟಿರುತ್ತಾನೆ. ಅವೇ ಸಂನ್ಯಾಸಕರ್ಮಯೋಗಗಳೇ[2] ಜ್ಞಾನದಿಂದಲೂ ಅದಕ್ಕೆ ಸಾಧನವಾಗಿರುವ ಸಮಬುದ್ಧಿತ್ವವೇ ಮುಂತಾದದ್ದರಿಂದಲೂ ಕೂಡಿದರೆ **ಸಾಂಖ್ಯ, ಯೋಗ**—ಎಂಬ ಹೆಸರಿಗೆ ವಿಷಯವಾಗುವವು ಎಂದು ಭಗವಂತನ ಮತವು. ಆದ್ದರಿಂದ ಇಲ್ಲಿ ಪ್ರಕೃತವಲ್ಲದ್ದನ್ನೇನೂ ಪ್ರಾರಂಭಿಸಿರುವದಿಲ್ಲ.

(ಭಾಷ್ಯ)

೩.೨೮ ಏಕಸ್ಯಾಪಿ ಸಮ್ಯಗನುಷ್ಠಾನಾತ್ ಕಥಮ್ ಉಭಯೋಃ ಫಲಂ ವಿನ್ದತೇ ಇತಿ ? ಉಚ್ಯತೇ—

---

1. ಕರ್ಮಯೋಗವೆಂದರೆ ಕರ್ಮವನ್ನು ಮಾಡುವದು.

2. ಸಂನ್ಯಾಸಕ್ಕೆ ಎಂದರೆ ಕರ್ಮಗಳನ್ನು ತೊರೆದದ್ದಕ್ಕೆ ಜ್ಞಾನವೂ ಸೇರಿದರೆ ಸಾಂಖ್ಯಮಾರ್ಗವೆನಿಸುವದು ; ಕರ್ಮಯೋಗಕ್ಕೆ ಎಂದರೆ ಕರ್ಮವನ್ನು ಮಾಡುವದಕ್ಕೆ ಸಮತ್ವಬುದ್ಧಿ, ಈಶ್ವರಾರ್ಪಣ—ಮುಂತಾದವು ಸೇರಿದರೆ ಯೋಗವೆನಿಸುವದು ಎಂದು ಭಾವ. ಬರಿಯ ಕರ್ಮಕ್ಕಾಗಲಿ ಸಂನ್ಯಾಸಕ್ಕಾಗಲಿ ಇಲ್ಲಿ ಹೇಳಿರುವ ಫಲವಿಲ್ಲ.

(ಭಾಷ್ಯಾರ್ಥ)

ಒಂದನ್ನಾದರೂ ಚೆನ್ನಾಗಿ ನಡೆಸಿದರೆ ಎರಡರ ಫಲವನ್ನೂ ಪಡೆಯುವ ನೆಂಬುದು ಹೇಗೆ ?- ಎಂದರೆ ಹೇಳುತ್ತಾನೆ.—

**ಯತ್ ಸಾಙ್ಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।**
**ಏಕಂ ಸಾಙ್ಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥ ೫ ॥**

೫. ಸಾಂಖ್ಯರಿಗೆ ದೊರೆಯುವ ಸ್ಥಾನವು ಯಾವದೋ ಅದು ಯೋಗರಿಗೂ ದೊರೆಯುತ್ತದೆ. ಸಾಂಖ್ಯವನ್ನೂ ಯೋಗವನ್ನೂ ಒಂದೆಂದು ಯಾವನು ಕಂಡುಕೊಳ್ಳುವನೋ ಅವನೇ ಕಂಡವನು.

(ಭಾಷ್ಯ)

೩೨೯. ಯತ್ ಸಾಙ್ಖ್ಯೈಃ ಜ್ಞಾನನಿಷ್ಠೈಃ ಸಂನ್ಯಾಸಿಭಿಃ ಪ್ರಾಪ್ಯತೇ ಸ್ಥಾನಂ ಮೋಕ್ಷಾಖ್ಯಂ ತದ್ ಯೋಗೈರಪಿ ಜ್ಞಾನಪ್ರಾಪ್ತ್ಯುಪಾಯತ್ವೇನ ಈಶ್ವರೇ ಸಮರ್ಪ್ಯ ಕರ್ಮಾಣಿ ಆತ್ಮನಃ ಫಲಮ್ ಅನಭಿಸನ್ಧಾಯ ಅನುತಿಷ್ಠನ್ತಿ ಯೇ ತೇ ಯೋಗಾಃ ಯೋಗಿನಃ ತೈರಪಿ ಪರಮಾರ್ಥಜ್ಞಾನಸಂನ್ಯಾಸಪ್ರಾಪ್ತಿದ್ವಾರೇಣ ಗಮ್ಯತೇ ಇತ್ಯಭಿಪ್ರಾಯಃ । ಅತಃ ಏಕಂ ಸಾಙ್ಖ್ಯಂ ಚ ಯೋಗಂ ಚ ಯಃ ಪಶ್ಯತಿ ಫಲೈಕತ್ವಾತ್ ಸ ಪಶ್ಯತಿ ಸಮ್ಯಕ್ ಪಶ್ಯತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಸಾಂಖ್ಯರಿಗೆ ಎಂದರೆ ಜ್ಞಾನನಿಷ್ಠರಾದ ಸಂನ್ಯಾಸಿಗಳಿಗೆ ಮೋಕ್ಷವೆಂಬ ಯಾವ ಸ್ಥಾನವು ದೊರೆಯುವದೋ ಅದು ಯೋಗರಿಗೂ—ಜ್ಞಾನಪ್ರಾಪ್ತಿಗೆ (ಇದು) ಸಾಧನವೆಂದು ಈಶ್ವರನಿಗೆ ಕರ್ಮಗಳನ್ನು ಸಮರ್ಪಿಸಿ ತಮಗಾಗಿ ಫಲವನ್ನು ಬಯಸದೆ ಯಾರು (ಕರ್ಮವನ್ನು) ಮಾಡುತ್ತಿರುವರೋ ಅವರು ಯೋಗರು, ಎಂದರೆ ಯೋಗಿಗಳು ಅವರಿಗೂ—ಪರಮಾರ್ಥಜ್ಞಾನವನ್ನೂ ಸಂನ್ಯಾಸವನ್ನೂ ಪಡೆಯುವ ಮೂಲಕ ದೊರೆಯುತ್ತದೆ ಎಂದು ಅಭಿಪ್ರಾಯ. ಆದ್ದರಿಂದ ಇವೆರಡಕ್ಕೂ ಒಂದೇ ಫಲವಾಗಿರುವದರಿಂದ ಸಾಂಖ್ಯವನ್ನೂ ಯೋಗವನ್ನೂ ಒಂದೇ ಎಂದು ಯಾವನು ಕಂಡುಕೊಂಡಿರುವನೋ ಅವನೇ ಕಂಡವನು, ಸರಿಯಾಗಿ ತಿಳಿದವನು ಎಂದರ್ಥ.

(ಭಾಷ್ಯ)

೩೩೦. ಏವಂ ತರ್ಹಿ ಯೋಗಾತ್ ಸಂನ್ಯಾಸ ಏವ ವಿಶಿಷ್ಯತೇ । ಕಥಂ ತರ್ಹಿ ಇದಮುಕ್ತಮ್ " ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ "

(೫-೨) ಇತಿ। ಶೃಣು ತತ್ರ ಕಾರಣಮ್। ತ್ವಯಾ ಪೃಷ್ಟಂ ಕೇವಲಂ ಕರ್ಮಸಂನ್ಯಾಸಂ ಕರ್ಮಯೋಗಂ ಚ ಅಭಿಪ್ರೇತ್ಯ ತಯೋಃ ಅನ್ಯತರಃ ಕಃ ಶ್ರೇಯಾನ್? ಇತಿ। ತದನುರೂಪಂ ಪ್ರತಿವಚನಂ ಮಯೋಕ್ತಂ ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ಇತಿ ಜ್ಞಾನಮ್ ಅನಪೇಕ್ಷ್ಯ। ಜ್ಞಾನಾಪೇಕ್ಷಸ್ತು ಸಂನ್ಯಾಸಃ ಸಾಙ್ಖ್ಯಮ್ ಇತಿ ಮಯಾ ಅಭಿಪ್ರೇತಃ। ಪರಮಾರ್ಥಯೋಗಶ್ಚ ಸ ಏವ। ಯಸ್ತು ಕರ್ಮಯೋಗೋ ವೈದಿಕಃ ಸ ಚ ತಾದರ್ಥ್ಯಾತ್ ಯೋಗಃ ಸಂನ್ಯಾಸಃ ಇತಿ ಚ ಉಪಚರ್ಯತೇ। ಕಥಂ ತಾದರ್ಥ್ಯಮ್ ಇತಿ? ಉಚ್ಯತೇ—

(ಭಾಷ್ಯಾರ್ಥ)

(ಆಕ್ಷೇಪ):—ಹಾಗಾದರೆ ಯೋಗಕ್ಕಿಂತಲೂ ಸಂನ್ಯಾಸವೇ ಮೇಲು (ಎಂದಂತಾಯಿತು). ಹೀಗಿರುವಲ್ಲಿ "ಆದರೆ ಇವೆರಡರಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವು ಹೆಚ್ಚಿನದು" (೫-೨) ಎಂದು ಈ (ವಾಕ್ಯವನ್ನು) ಹೇಳಿದ್ದು ಹೇಗೆ (ಸರಿ)?

(ಪರಿಹಾರ):—ಅದಕ್ಕೆ ಕಾರಣವನ್ನು ಕೇಳು ನೀನು ಬರಿಯ ಸಂನ್ಯಾಸವನ್ನೂ ಕರ್ಮಯೋಗವನ್ನೂ ಮನಸ್ಸಿನಲ್ಲಿಟ್ಟುಕೊಂಡು ಅವೆರಡರಲ್ಲಿ ಒಂದಾದ ಯಾವದು ಒಳ್ಳೆಯದು?" ಎಂದು ಕೇಳಿದೆ. ಅದಕ್ಕೆ ಅನುಗುಣವಾಗಿ ನಾನು ಜ್ಞಾನವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆಯೇ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವೇ ಮೇಲೆಂದು ಉತ್ತರವನ್ನು ಹೇಳಿದೆನು. ಆದರೆ **ಜ್ಞಾನದಿಂದೊಡಗೂಡಿದ ಸಂನ್ಯಾಸವು 'ಸಾಂಖ್ಯವು' ಎಂದು ನನ್ನ ಅಭಿಪ್ರಾಯವು. ನಿಜವಾಗಿ ನೋಡಿದರೆ ಇದೇ ಯೋಗವೂ (ಆಗಿರುತ್ತದೆ). ವೇದದಲ್ಲಿ ವಿಧಿಸಿರುವ ಕರ್ಮಯೋಗವೋ ಎಂದರೆ, ಈ ಯೋಗಕ್ಕೆ ಕಾರಣವಾಗಿರುವದರಿಂದ ಅದನ್ನೂ ಯೋಗವೆಂದೂ ಸಂನ್ಯಾಸವೆಂದೂ[1] ಉಪಚಾರಕ್ಕೆ ಕರೆದಿರುತ್ತದೆ.**

(ಭಾಷ್ಯ)

೩೩೧. ಕಥಂ ತಾದರ್ಥ್ಯಮ್ ಇತಿ? ಉಚ್ಯತೇ—

---

1. ಕರ್ಮಯೋಗಿಯನ್ನು 'ನಿತ್ಯಸಂನ್ಯಾಸಿ' (೫-೩) ಎಂದು ಹೇಳಿದ್ದು ನಿಜವಾದ ಸಂನ್ಯಾಸಕ್ಕೆ ಕರ್ಮಯೋಗವು ಸಾಧನವೆಂಬ ಕಾರಣದಿಂದ; ಕರ್ಮಯೋಗವನ್ನು ಯೋಗವೆಂದು (೫-೪) ಪಡೆದಿರುವದು ಪರಮಾರ್ಥಯೋಗವಾದ ಜ್ಞಾನಕ್ಕೆ ಸಾಧನವೆಂಬ ಕಾರಣದಿಂದ.

(ಭಾಷ್ಯಾರ್ಥ)

ಈ (ಯೋಗಕ್ಕೆ ಕರ್ಮಯೋಗವು) ಕಾರಣವೆಂಬುದು ಹೇಗೆ? ಎಂದರೆ ಹೇಳುತ್ತೇನೆ, (ಕೇಳು) .—

**ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।**
**ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ ॥೬॥**

೬. ಆದರೆ, ಎಲೈ ಮಹಾಬಾಹುವೆ, ಸಂನ್ಯಾಸವು ಯೋಗವಿಲ್ಲದೆ ದೊರಕುವದು ಕಷ್ಟ, ಯೋಗದಿಂದ ಕೂಡಿರುವ ಮುನಿಯು ಬ್ರಹ್ಮವನ್ನು ಬೇಗನೆ ಪಡೆಯುತ್ತಾನೆ.

(ಭಾಷ್ಯ)

೩೩೨. ಸಂನ್ಯಾಸಸ್ತು ಪಾರಮಾರ್ಥಿಕಃ[1] ಹೇ ಮಹಾಬಾಹೋ ದುಃಖಮ್ ಆಪ್ತುಂ ಪ್ರಾಪ್ತುಮ್ ಅಯೋಗತಃ ಯೋಗೇನ ವಿನಾ । ಯೋಗಯುಕ್ತಃ ವೈದಿಕೇನ ಕರ್ಮಯೋಗೇನ ಈಶ್ವರಸಮರ್ಪಿತರೂಪೇಣ ಫಲನಿರಪೇಕ್ಷೇಣ ಯುಕ್ತಃ ಮುನಿಃ ಮನನಾತ್ ಈಶ್ವರಸ್ವರೂಪಸ್ಯ ಮುನಿಃ[2] ಬ್ರಹ್ಮ ಪರಮಾತ್ಮಜ್ಞಾನಲಕ್ಷಣತ್ವಾತ್ ಪ್ರಕೃತಃ ಸಂನ್ಯಾಸಃ 'ಬ್ರಹ್ಮ' ಉಚ್ಯತೇ । "ನ್ಯಾಸ ಇತಿ ಬ್ರಹ್ಮಾ ಬ್ರಹ್ಮಾ ಹಿ ಪರಃ" (ತೈ ನಾ ೭೮) ಇತಿ ಶ್ರುತೇಃ ಬ್ರಹ್ಮ ಪರಮಾರ್ಥಸಂನ್ಯಾಸಂ ಪರಮಾತ್ಮಜ್ಞಾನನಿಷ್ಠಾಲಕ್ಷಣಂ ನಚಿರೇಣ ಕ್ಷಿಪ್ರಮೇವ ಅಧಿಗಚ್ಛತಿ ಪ್ರಾಪ್ನೋತಿ । ಅತಃ ಮಯೋಕ್ತಮ್ "ಕರ್ಮಯೋಗೋ ವಿಶಿಷ್ಯತೇ" (೫-೨) ಇತಿ ॥

(ಭಾಷ್ಯಾರ್ಥ)

ಆದರೆ **ಪರಮಾರ್ಥವಾದ ಸಂನ್ಯಾಸವು,** ಎಲೈ ಮಹಾಬಾಹುವೆ, ಅಯೋಗದಿಂದ ಎಂದರೆ ಯೋಗವಿಲ್ಲದೆ ದೊರೆಯುವದು, ಸಿಕ್ಕುವದು, ಕಷ್ಟ. ಯೋಗಯುಕ್ತನಾದವನು ಎಂದರೆ ಫಲದಲ್ಲಿ ಆಸೆಯಿಲ್ಲದೆ ಈಶ್ವರನಿಗೆ ಅರ್ಪಣೆಮಾಡುವ ರೂಪದ ವೇದೋಕ್ತವಾದ ಕರ್ಮಯೋಗದಿಂದ ಕೂಡಿರುವ ಮುನಿಯು–ಈಶ್ವರಸ್ವರೂಪವನ್ನು ಮನನಮಾಡುತ್ತಿರುವದರಿಂದ (ಇವನು) ಮುನಿಯೆನಿಸುವನು. (ಅಂಥ ಮುನಿಯು)–ಬ್ರಹ್ಮವನ್ನು–(ಈ) ಪ್ರಕರಣದಲ್ಲಿ ಬಂದಿರುವ ಸಂನ್ಯಾಸವು ಪರಮಾತ್ಮ

---

1. ಈ ಮಾತು ನಿ|| ಗು|| ಗಳಲ್ಲಿಲ್ಲ.
2. ಈ ಮಾತು ಮ|| ಮೈ|| ಗಳಲ್ಲಿಲ್ಲ.

ಜ್ಞಾನರೂಪವಾಗಿರುವದರಿಂದ (ಇದು) ಬ್ರಹ್ಮವೆನಿಸುತ್ತದೆ "ನ್ಯಾಸವೆಂದರೆ ಬ್ರಹ್ಮನು ಬ್ರಹ್ಮನೇ ಹೆಚ್ಚಿನವನು" (ತೈ ನಾ. ೭೮) ಎಂಬ ಶ್ರುತಿಯು ಇದಕ್ಕೆ ಆಧಾರವು. (ಆದ್ದರಿಂದ) ಬ್ರಹ್ಮವನ್ನು ಎಂದರೆ ಪರಮಾತ್ಮಜ್ಞಾನನಿಷ್ಠೆಯ ರೂಪವಾಗಿರುವ ಪರಮಾರ್ಥಸಂನ್ಯಾಸವನ್ನು ತಡವಿಲ್ಲದೆ ಬೇಗನೆಯೇ ಪಡೆಯುತ್ತಾನೆ, ದೊರಕಿಸಿಕೊಳ್ಳುತ್ತಾನೆ ಆದ್ದರಿಂದ 'ಕರ್ಮಯೋಗವು ಹೆಚ್ಚಿನದು' ಎಂದು ನಾನು ಹೇಳಿದೆನು

## ಕರ್ಮಯೋಗಿಗಾಗಲಿ ಜ್ಞಾನಿಗಾಗಲಿ ಕರ್ಮದ ಲೇಪವಿಲ್ಲ

**ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇನ್ದ್ರಿಯಃ ।**
**ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥೭॥**

೭. ಯೋಗದಿಂದ ಕೂಡಿದವನು ವಿಶುದ್ಧಾತ್ಮನಾಗಿ ವಿಜಿತಾತ್ಮನಾಗಿ ಜಿತೇಂದ್ರಿಯನಾಗಿ ಸರ್ವಭೂತಗಳಿಗೂ ಆತ್ಮನಾಗಿರುವ ಆತ್ಮವುಳ್ಳವನಾಗಿ ಕರ್ಮವನ್ನು ಮಾಡುತ್ತಿದ್ದರೂ (ಅವನಿಗೆ) ಲೇಪವಾಗುವದಿಲ್ಲ.

(ಭಾಷ್ಯ)

೩೩೨ ಯದಾ ಪುನಃ ಅಯಂ ಸಮ್ಯಗ್ದರ್ಶನಪ್ರಾಪ್ತ್ಯುಪಾಯತ್ವೇನ ಯೋಗೇನ ಯುಕ್ತಃ ಯೋಗಯುಕ್ತಃ, ವಿಶುದ್ಧಾತ್ಮಾ ವಿಶುದ್ಧಸತ್ತ್ವಃ, ವಿಜಿತಾತ್ಮಾ ವಿಜಿತದೇಹಃ ಜಿತೇನ್ದ್ರಿಯಶ್ಚ ಸರ್ವಭೂತಾತ್ಮಭೂತಾತ್ಮಾ ಸರ್ವೇಷಾಂ ಬ್ರಹ್ಮಾದೀನಾಂ ಸ್ತಮ್ಬಪರ್ಯನ್ತಾನಾಂ ಭೂತಾನಾಮ್ ಆತ್ಮಭೂತಃ ಆತ್ಮಾ ಪ್ರತ್ಯಕ್ಚೇತನಃ ಯಸ್ಯ ಸ ಸರ್ವಭೂತಾತ್ಮಭೂತಾತ್ಮಾ ಸಮ್ಯಗ್ದರ್ಶೀ ಇತ್ಯರ್ಥಃ । ಸ ತತ್ರ ಏವಂ[1] ವರ್ತಮಾನಃ ಲೋಕಸಙ್ಗ್ರಹಾಯ ಕರ್ಮ ಕುರ್ವನ್ನಪಿ ನ ಲಿಪ್ಯತೇ ನ ಕರ್ಮಭಿರ್ಬಧ್ಯತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಆದರೆ ಯಾವಾಗ ಈತನು ಸರಿಯಾದ ಜ್ಞಾನಕ್ಕೆ ಸಾಧನವಾಗಿ ಯೋಗಯುಕ್ತನಾಗಿರುವನೋ ಎಂದರೆ ಯೋಗದಿಂದ ಕೂಡಿರುವನೋ, (ಆಗ) ವಿಶುದ್ಧಾತ್ಮನಾಗಿ ಎಂದರೆ ಸತ್ತ್ವವನ್ನು ಚೆನ್ನಾಗಿ ಶುದ್ಧಿಮಾಡಿಕೊಂಡು, ವಿಜಿತಾತ್ಮನಾಗಿ ದೇಹವನ್ನು ವಶದಲ್ಲಿಟ್ಟುಕೊಂಡು, ಜಿತೇಂದ್ರಿಯನೂ ಆಗಿ (ಎಂದರೆ ಇಂದ್ರಿಯಗಳನ್ನೂ ಗೆದ್ದು

1. 'ತತ್ರೈವ' ಮ॥ ಮೈ॥; ಅದನ್ನು ಅಲ್ಲಿಯೇ (ಆ ಆತ್ಮನಲ್ಲಿಯೇ) ಎಂದು ಕನ್ನಡಿಸಬೇಕು.

ಕೊಂಡು) ಸರ್ವಭೂತಾತ್ಮಭೂತಾತ್ಮನಾಗಿ–ಬ್ರಹ್ಮನಿಂದ ಹಿಡಿದು ಸ್ತಂಬದವರೆಗಿನ ಎಲ್ಲಾ ಭೂತಗಳಿಗೂ ಆತ್ಮನಾಗಿರುವವನೇ (ತನ್ನ) ಆತ್ಮನು, ಒಳಗಿನ ಚೇತನವು (ಎಂಬ ತಿಳಿವಳಿಕೆಯು) ಯಾವನಿಗಿರುವದೋ ಅವನು **ಸರ್ವಭೂತಾತ್ಮಭೂತಾತ್ಮನು**. (ಅಂಥವನಾಗಿ)–ಸರಿಯಾದ ಜ್ಞಾನವುಳ್ಳವನಾಗಿ ಎಂದರ್ಥ. ಅಲ್ಲಿ ಹೀಗೆ ಇರುವ ಆತನು ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿದ್ದರೂ (ಅವನಿಗೆ) ಲೇಪವಾಗುವದಿಲ್ಲ, ಅವನು ಕರ್ಮಗಳಿಗೆ ಕಟ್ಟುಬೀಳುವದಿಲ್ಲ ಎಂದರ್ಥ

(ಭಾಷ್ಯ)

೩೩೪. ನ ಚ ಅಸೌ ಪರಮಾರ್ಥತಃ ಕರೋತಿ ಇತ್ಯತಃ—

(ಭಾಷ್ಯಾರ್ಥ)

ನಿಜವಾಗಿ (ನೋಡಿದರೆ) ಇವನು (ಕರ್ಮವನ್ನು) ಮಾಡುವದೂ ಇಲ್ಲ. ಆದ್ದರಿಂದ—

**ನೈವ ಕಿಂಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।**
**ಪಶ್ಯಞ್ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್॥**
**ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ ನಿಮಿಷನ್ನಪಿ ।**
**ಇನ್ದ್ರಿಯಾಣೀನ್ದ್ರಿಯಾರ್ಥೇಷು ವರ್ತನ್ತ ಇತಿ ಧಾರಯನ್ ॥೯॥**

೮-೯. ಯುಕ್ತನಾದ ತತ್ತ್ವಜ್ಞಾನಿಯು (ತಾನು) ನೋಡುವಾಗಲೂ ಕೇಳುವಾಗಲೂ ಮುಟ್ಟುವಾಗಲೂ ಮೂಸುವಾಗಲೂ ತಿನ್ನುವಾಗಲೂ ನಡೆಯುವಾಗಲೂ ನಿದ್ರಿಸುವಾಗಲೂ ಉಸಿರುಬಿಡುವಾಗಲೂ ಮಾತಾಡುವಾಗಲೂ ಬಿಡುವಾಗಲೂ ತೆಗೆದುಕೊಳ್ಳುವಾಗಲೂ ಕಣ್ಣುಬಿಡುವಾಗಲೂ ಕಣ್ಣುಮುಚ್ಚುವಾಗಲೂ "ಇಂದ್ರಿಯಗಳು ಇಂದ್ರಿಯಾರ್ಥಗಳಲ್ಲಿ ತೊಡಗಿರುತ್ತವೆ, ನಾನು ಏನೂ ಮಾಡುತ್ತಿಲ್ಲ" ಎಂದು ತಿಳಿಯುಬೇಕು.

(ಭಾಷ್ಯ)

೩೩೫. ನೈವ ಕಿಂಚಿತ್ ಕರೋಮಿ ಇತಿ ಯುಕ್ತಃ ಸಮಾಹಿತಃ ಸನ್ ಮನ್ಯೇತ ಚಿನ್ತಯೇತ್ ತತ್ತ್ವವಿತ್ । ಆತ್ಮನೋ ಯಾಥಾತ್ಮ್ಯಂ ತತ್ತ್ವಂ ವೇತ್ತಿ ಇತಿ ತತ್ತ್ವವಿತ್ । ಪರಮಾರ್ಥದರ್ಶೀ ಇತ್ಯರ್ಥಃ । ಕದಾ ಕಥಂ ವಾ ತತ್ತ್ವಮ್ ಅವಧಾರಯನ್ ಮನ್ಯೇತ ಇತಿ? ಉಚ್ಯತೇ 'ಪಶ್ಯನ್' ಇತಿ । 'ಮನ್ಯೇತ

ಇತಿ ಪೂರ್ವೇಣ ಸಂಬನ್ಧಃ । ತಸ್ಯ[1] ಏವಂ ತತ್ತ್ವವಿದಃ ಸರ್ವಕಾರ್ಯಕರಣ ಚೇಷ್ಟಾಸು ಕರ್ಮಸು ಅಕರ್ಮೈವ ಪಶ್ಯತಃ ಸಮ್ಯಗ್ದರ್ಶಿನಃ ಸರ್ವಕರ್ಮಸಂನ್ಯಾಸೇ ಏವ ಅಧಿಕಾರಃ । ಕರ್ಮಣಃ ಅಭಾವದರ್ಶನಾತ್ । ನ ಹಿ ಮೃಗತೃಷ್ಣಿಕಾಯಾಮ್ ಉದಕಬುದ್ಧ್ಯಾ ಪಾನಾಯ ಪ್ರವೃತ್ತಃ ಉದಕಾಭಾವಜ್ಞಾನೇಽಪಿ ತತ್ರೈವ ಪಾನ ಪ್ರಯೋಜನಾಯ ಪ್ರವರ್ತತೇ ॥

(ಭಾಷ್ಯಾರ್ಥ)

ತತ್ತ್ವವಿದನು ಎಂದರೆ ಆತ್ಮನ ನಿಜವನ್ನು ಬಲ್ಲವನಾದ್ದರಿಂದ ತತ್ತ್ವಜ್ಞಾನಿ ಯೆನಿಸಿಕೊಂಡವನು, ಪರಮಾರ್ಥವನ್ನು ಕಂಡುಕೊಂಡಿರುವಾತನು ಎಂದರ್ಥ. (ಅಂಥವನು)' ನಾನು ಏನೂ ಮಾಡುತ್ತಲಿಲ್ಲ 'ಎಂದು ಯುಕ್ತನಾಗಿ ಎಂದರ ಸಮಾಹಿತ ನಾಗಿ[2] ತಿಳಿಯಬೇಕು, ಯೋಚಿಸಿಕೊಳ್ಳಬೇಕು. ಯಾವಾಗ ತತ್ತ್ವವನ್ನು ಹೇಗೆ ನಿಶ್ಚಯಿಸಿಕೊಂಡವನಾಗಿ (ಹೀಗೆಂದು) ತಿಳಿಯಬೇಕು? ಎಂದರೆ ಹೇಳುತ್ತಾನೆ. ನೋಡುವಾಗಲೂ ಇತ್ಯಾದಿ. ('ಪಶ್ಯನ್') ನೋಡುವಾಗಲೂ ಎಂಬುದೇ ಮುಂತಾದ ದ್ದನ್ನು 'ಮನ್ಯೇತ' ಎಂಬ ಹಿಂದಿನ ಮಾತಿಗೆ ಅನ್ವಯಿಸಿಕೊಳ್ಳಬೇಕು

ಹೀಗೆ ತತ್ತ್ವವನ್ನರಿತುಕೊಂಡಿರುವ ಸಕಲವಿಧವಾದ ದೇಹೇಂದ್ರಿಯಗಳ ವ್ಯಾಪಾರ(ರೂಪವಾಗಿರುವ) ಕರ್ಮಗಳಲ್ಲಿ ಅಕರ್ಮವನ್ನೇ ಕಾಣುತ್ತಿರುವ ಆ ಸರಿ ಯಾದ (ಆತ್ಮ) ಜ್ಞಾನವುಳ್ಳ ಆತನಿಗೆ ಸರ್ವಕರ್ಮಸಂನ್ಯಾಸದಲ್ಲಿಯೇ ಅಧಿಕಾರವು, ಏಕೆಂದರೆ (ಅವನು ತನಗೆ) ಕರ್ಮವೇ ಇಲ್ಲವೆಂಬುದನ್ನು ಕಂಡುಕೊಂಡಿರುತ್ತಾನೆ. ಬಿಸಿಲುಕುದುರೆಯಲ್ಲಿ ನೀರೆಂಬ ಬುದ್ಧಿಯಿಂದ (ಅದನ್ನು) ಕುಡಿಯುವದಕ್ಕೆ ಹೊರ ಟವನು ಅದು ನೀರಲ್ಲವೆಂಬ ಜ್ಞಾನವು ಉಂಟಾದ ಬಳಿಕವೂ (ನೀರು) ಕುಡಿಯುವ ದೆಂಬ ಪ್ರಯೋಜನವಾಗಬೇಕೆಂದು ಅದರಲ್ಲಿಯೇ ತೊಡಗಲಾರನಲ್ಲವೆ? (ಅದ ರಂತೆಯೇ ಇಲ್ಲಿಯೂ ತಿಳಿಯಬೇಕು).

(ಭಾಷ್ಯ)

೩೩೬. ಯಸ್ತು ಪುನಃ ಅತತ್ತ್ವವಿತ್, ಪ್ರವೃತ್ತಶ್ಚ ಕರ್ಮಯೋಗೇ—

---

1. "ಯಸ್ಯ........ಸಮ್ಯಗ್ದರ್ಶಿನಃ ತಸ್ಯ........" ಎಂಬ ಆ|| ಶಿ|| ಗು|| ವಾ|| ಪಾಠವು ಸರಿಯಲ್ಲ

2. ತತ್ತ್ವದಲ್ಲಿಯೇ ನೆಲೆನಿಂತು.

(ಭಾಷ್ಯಾರ್ಥ)

ಆದರೆ ಯಾವನು ತತ್ತ್ವವನ್ನು ಅರಿತುಕೊಂಡಿಲ್ಲವೋ ಕರ್ಮದಲ್ಲಿಯೂ ತೊಡಗಿರುವನೋ (ಅವನು)—

**ಬ್ರಹ್ಮಣ್ಯಾಧಾಯ ಕರ್ಮಾಣಿ ಸಙ್ಗಂ ತ್ಯಕ್ತ್ವಾ ಕರೋತಿ ಯಃ ।**
**ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಮ್ಭಸಾ ॥೧೦॥**

೧೦. ಬ್ರಹ್ಮದಲ್ಲಿ ಕರ್ಮಗಳನ್ನು ಇಟ್ಟು ಸಂಗವನ್ನು ಬಿಟ್ಟು ಯಾವಾತನು ಕರ್ಮವನ್ನು ಮಾಡುತ್ತಿರುವನೋ ಅವನಿಗೆ ತಾವರೆಯೆಲೆಗೆ ನೀರಿನ ಲೇಪವಿಲ್ಲದಿರುವಂತೆ ಪಾಪದ ಲೇಪವಾಗುವದಿಲ್ಲ.

(ಭಾಷ್ಯ)

೩೩೭. ಬ್ರಹ್ಮಣಿ ಈಶ್ವರೇ ಆಧಾಯ ನಿಕ್ಷಿಪ್ಯ ತದರ್ಥಂ ಕರೋಮಿ ಇತಿ ಭೃತ್ಯ ಇವ ಸ್ವಾಮ್ಯರ್ಥಂ ಸರ್ವಾಣಿ ಕರ್ಮಾಣಿ ಮೋಕ್ಷೇಽಪಿ ಫಲೇ ಸಙ್ಗಂ ತ್ಯಕ್ತ್ವಾ ಕರೋತಿ ಯಃ[1] ಲಿಪ್ಯತೇ ನ ಸ ಪಾಪೇನ ನ ಸಂಬಧ್ಯತೇ ಪದ್ಮಪತ್ರಮಿವ ಅಮ್ಭಸಾ ಉದಕೇನ । ಕೇವಲಂ ಸತ್ತ್ವಶುದ್ಧಿಮಾತ್ರಫಲಮೇವ ತಸ್ಯ ಕರ್ಮಣಃ[2] ಸ್ಯಾತ್ ॥

(ಭಾಷ್ಯಾರ್ಥ)

ಬ್ರಹ್ಮದಲ್ಲಿ ಎಂದರೆ ಈಶ್ವರನಲ್ಲಿ ಸಕಲ ಕರ್ಮಗಳನ್ನೂ ಇಟ್ಟು ಅವನಿಗಾಗಿ ಮಾಡುತ್ತಿದೇನೆಂದು ಧಣಿಗಾಗಿ ಕೆಲಸಮಾಡುವ ಆಳಿನಂತೆ **ಮೋಕ್ಷವೆಂಬ ಫಲದಲ್ಲಿಯೂ ಸಂಗವನ್ನು ಬಿಟ್ಟು**[3] ಯಾವನು (ಕರ್ಮಗಳನ್ನು) ಮಾಡುತ್ತಿರುವನೋ ಅವನಿಗೆ ಕಮಲದೆಲೆಗೆ ನೀರು ಅಂಟಿಕೊಳ್ಳದೆ ಇರುವ ಹಾಗೆ ಪಾಪವು ಅಂಟಿಕೊಳ್ಳದೆ ಇರುವದು. ಬರಿಯ ಸತ್ತ್ವಶುದ್ಧಿ ಎಂಬ ಫಲವೊಂದೇ ಅವನ ಕರ್ಮಕ್ಕೆ ಆಗುವದು.

(ಭಾಷ್ಯ)

೩೩೮. ಯಸ್ಮಾತ್—

(ಭಾಷ್ಯಾರ್ಥ)

ಏಕೆಂದರೆ :—

---

1. ‘ ಸರ್ವಕರ್ಮಾಣಿ ’ ಎಂದು ಅ॥ ಸ॥ ಗು॥ ವಾ॥ ಗಳಲ್ಲಿ ಹೆಚ್ಚಾಗಿದೆ.
2. ‘ ತತ್ಕರ್ಮಣಃ ’ ಮ॥ ಮೈ॥.
3. ಫಲವನ್ನು ಮೋಕ್ಷಕ್ಕಾಗಿ ಬಿಟ್ಟಿದ್ದೇನೆಂದು ತಿಳಿಯದೆ

**ಕಾಯೇನ ಮನಸಾ ಬುದ್ಧ್ಯಾ ಕೇವಲೈರಿನ್ದ್ರಿಯೈರಪಿ ।**
**ಯೋಗಿನಃ ಕರ್ಮ ಕುರ್ವನ್ತಿ ಸಙ್ಗಂ ತ್ಯಕ್ತ್ವಾತ್ಮಶುದ್ಧಯೇ ॥೧೧॥**

೧೧. ಕಾಯದಿಂದಲೂ ಮನಸ್ಸಿನಿಂದಲೂ ಬುದ್ಧಿಯಿಂದಲೂ ಕೇವಲ ಇಂದ್ರಿಯಗಳಿಂದಲೂ ಯೋಗಿಗಳು ಸಂಗವನ್ನು ಬಿಟ್ಟು ಆತ್ಮಶುದ್ಧಿಗಾಗಿ ಕರ್ಮವನ್ನು ಮಾಡುತ್ತಿರುವರು.

(ಭಾಷ್ಯ)

೩೩೯. ಕಾಯೇನ ದೇಹೇನ ಮನಸಾ ಬುದ್ಧ್ಯಾ ಚ ಕೇವಲೈಃ[1] ಮಮತ್ವವರ್ಜಿತೈಃ ‘ ಈಶ್ವರಾಯೈವ ಕರ್ಮ ಕರೋಮಿ ನ ಮಮ ಫಲಾಯ ’ ಇತಿ ಮಮತ್ವಬುದ್ಧಿಶೂನ್ಯೈಃ ಇನ್ದ್ರಿಯೈರಪಿ[2] । ಕೇವಲಶಬ್ದಃ ಕಾಯಾದಿಭಿರಪಿ ಪ್ರತ್ಯೇಕಂ ಸಂಬಧ್ಯತೇ ಸರ್ವವ್ಯಾಪಾರೇಷು ಮಮತಾವರ್ಜನಾಯ । ಯೋಗಿನಃ ಕರ್ಮಿಣಃ ಕರ್ಮ ಕುರ್ವನ್ತಿ ಸಙ್ಗಂ ತ್ಯಕ್ತ್ವಾ ಫಲವಿಷಯಮ್ ಆತ್ಮಶುದ್ಧಯೇ ಸತ್ತ್ವಶುದ್ಧಯೇ ಇತ್ಯರ್ಥಃ । ತಸ್ಮಾತ್ ತತ್ರೈವ ತವ ಅಧಿಕಾರಃ ಇತಿ ಕುರು ಕರ್ಮೈವ ॥

(ಭಾಷ್ಯಾರ್ಥ)

ಕಾಯದಿಂದಲೂ ಎಂದರೆ ದೇಹದಿಂದಲೂ ಮನಸ್ಸಿನಿಂದಲೂ ಬುದ್ಧಿಯಿಂದಲೂ ಕೇವಲ (ಇಂದ್ರಿಯಗಳಿಂದಲೂ) ಎಂದರೆ ತನ್ನದೆಂಬ ಬುದ್ಧಿಯಿಲ್ಲದ ‘ ಈಶ್ವರನಿಗಾಗಿಯೇ ಕರ್ಮವನ್ನು ಮಾಡುತ್ತಿದೇನೆ, ನನಗೆ ಫಲವಾಗಬೇಕೆಂದು (ಮಾಡುತ್ತ)ಲಿಲ್ಲ ’ ಎಂದು ನನ್ನದು ಎಂಬ ಬುದ್ಧಿಯಿಲ್ಲದೆ ಇಂದ್ರಿಯಗಳಿಂದಲೂ (ಎಂದರ್ಥ. ಇಲ್ಲಿರುವ) ಕೇವಲ ಎಂಬ ಮಾತು ಕಾಯವೇ ಮುಂತಾದವುಗಳಿಗೂ (ಬೇರೆಬೇರೆಯಾಗಿ) ಒಂದೊಂದಕ್ಕೂ ಸೇರಿಸಿಕೊಳ್ಳಬೇಕು, ಏಕೆಂದರೆ ಯಾವ ಕರ್ಮದಲ್ಲಿಯೂ (ಯೋಗಿಗಳಿಗೆ) ನನ್ನದೆಂಬ (ಬುದ್ಧಿಯ)ನ್ನು ಅಲ್ಲಗಳೆಯುವದಕ್ಕೇ (ಈ ವಾಕ್ಯವು ಬಂದಿರುತ್ತದೆ).[3] ಯೋಗಿಗಳು ಎಂದರೆ ಕರ್ಮಿಗಳು ಫಲವಿಷಯದ ಸಂಗವನ್ನು ಬಿಟ್ಟು ಆತ್ಮಶುದ್ಧಿಗಾಗಿ ಎಂದರೆ ಸತ್ತ್ವಶುದ್ಧಿಗಾಗಿ[4] ಕರ್ಮವನ್ನು ಮಾಡುತ್ತಿರುವರು

---

1. ‘ ಇನ್ದ್ರಿಯೈರಪಿ ’ ಎಂಬುದು ಇಲ್ಲಿ ಹೆಚ್ಚಾಗಿ ಮು॥ ಮೈ॥.

2. ‘ ಇನ್ದ್ರಿಯೈಃ ’ ಮು॥ ಮೈ॥.

3. ಆದ್ದರಿಂದ ಕೇವಲ ಕಾಯದಿಂದ, ಕೇವಲ ಮನಸ್ಸಿನಿಂದ, ಕೇವಲ ಬುದ್ಧಿಯಿಂದ—ಎಂದು ಅನ್ವಯಿಸಿಕೊಳ್ಳಬೇಕು.

4. ಆತ್ಮನು ಯಾವಾಗಲೂ ಶುದ್ಧನಾಗಿಯೇ ಇರುವದರಿಂದ ಅವನಿಗೆ ಶುದ್ಧಿ ಬೇಕಿಲ್ಲ, ಅಂತಃಕರಣಕ್ಕೆ ಬೇಕು.

ಎಂದರ್ಥ. ಆದ್ದರಿಂದ ಆದರಲ್ಲಿಯೇ ನಿನಗೆ ಅಧಿಕಾರವಾದ್ದರಿಂದ (ನೀನು) ಕರ್ಮವನ್ನೇ ಮಾಡು.

**ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾನ್ತಿಮಾಪ್ನೋತಿ ನೈಷ್ಠಿಕೀಮ್ ।**
**ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥ ೧೨ ॥**

೧೨. ಯುಕ್ತನಾದವನು ಕರ್ಮಫಲವನ್ನು ಬಿಟ್ಟು ನಿಷ್ಠೆಯ ಶಾಂತಿಯನ್ನು ಹೊಂದುವನು. ಯುಕ್ತನಲ್ಲದವನು ಕಾಮಕಾರದಿಂದ ಫಲದಲ್ಲಿ ಆಸಕ್ತನಾಗಿ ಕಟ್ಟುಬೀಳುತ್ತಾನೆ.

(ಭಾಷ್ಯ)

೩೪೦. ಯಸ್ಮಾಚ್ಚ ಯುಕ್ತಃ 'ಈಶ್ವರಾಯ ಕರ್ಮಾಣಿ ಕರೋಮಿ ನ ಮಮ ಫಲಾಯ' ಇತ್ಯೇವಂ ಸಮಾಹಿತಃ ಸನ್ ಕರ್ಮಫಲಂ ತ್ಯಕ್ತ್ವಾ ಪರಿತ್ಯಜ್ಯ ಶಾನ್ತಿಂ ಮೋಕ್ಷಾಖ್ಯಾಮ್ ಆಪ್ನೋತಿ ನೈಷ್ಠಿಕೀಂ ನಿಷ್ಠಾಯಾಂ ಭವಾಮ್ । ಸತ್ತ್ವಶುದ್ಧಿಜ್ಞಾನಪ್ರಾಪ್ತಿಸರ್ವಕರ್ಮಸಂನ್ಯಾಸಜ್ಞಾನನಿಷ್ಠಾಕ್ರಮೇಣ ಇತಿ ವಾಕ್ಯಶೇಷಃ । ಯಸ್ತು ಪುನಃ ಅಯುಕ್ತಃ ಅಸಮಾಹಿತಃ ಕಾಮಕಾರೇಣ ಕರಣಂ ಕಾರಃ ಕಾಮಸ್ಯ ಕಾರಃ ಕಾಮಕಾರಃ ತೇನ ಕಾಮಕಾರೇಣ ಕಾಮಪ್ರೇರಿತತಯಾ ಇತ್ಯರ್ಥಃ । 'ಮಮ ಫಲಾಯ ಇದಂ ಕರೋಮಿ ಕರ್ಮ' ಇತ್ಯೇವಂ ಫಲೇ ಸಕ್ತಃ ನಿಬಧ್ಯತೇ । ಅತಃ ತ್ವಂ ಯುಕ್ತೋ ಭವ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತೂ ಏಕೆಂದರೆ : ಯುಕ್ತನು ಎಂದರೆ ಈಶ್ವರನಿಗೋಸ್ಕರ ಕರ್ಮವನ್ನು ಮಾಡುತ್ತೇನೆ, ನನಗೆ ಫಲವಾಗಬೇಕೆಂದಲ್ಲ' ಎಂದೀ ಪರಿಯಲ್ಲಿ ಮನಸ್ಸಮಾಧಾನವನ್ನು ಹೊಂದಿದವನು, ಕರ್ಮಫಲವನ್ನು ಬಿಟ್ಟು, ಒಲ್ಲದೆ, ಶಾಂತಿಯನ್ನು ನೈಷ್ಠಿಕವಾದ ನಿಷ್ಠೆಯಿಂದ ಆಗುವ ಮೋಕ್ಷವೆಂಬ (ಶಾಂತಿಯನ್ನು) ಹೊಂದುವನು. **ಸತ್ತ್ವಶುದ್ಧಿ, ಜ್ಞಾನಪ್ರಾಪ್ತಿ, ಸರ್ವಕರ್ಮಸಂನ್ಯಾಸ, ಜ್ಞಾನನಿಷ್ಠೆ**–ಈ ಕ್ರಮದಿಂದ (ಶಾಂತಿಯನ್ನು ಹೊಂದುವನು) ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು

ಆದರೆ ಯಾವನು ಯುಕ್ತನಲ್ಲವೋ, (ಮೇಲೆ ಹೇಳಿದ) ಮನಸ್ಸಮಾಧಾನವಿಲ್ಲದವನೋ, ಅವನು **ಕಾಮಕಾರದಿಂದ**–ಕಾರವೆಂದರೆ ಮಾಡುವದು ; ಕಾಮವು ಮಾಡುವದು ಕಾಮಕಾರವು. ಆ ಕಾಮಕಾರದಿಂದ ಎಂದರೆ–ಕಾಮದಿಂದ ಪ್ರೇರಿತನಾಗಿರುವದರಿಂದ ಎಂದರ್ಥ. 'ನನಗೆ ಪ್ರಯೋಜನವಾಗುವದಕ್ಕಾಗಿ ಈ ಕರ್ಮ

ವನ್ನು ಮಾಡುತ್ತೇನೆ ’ ಎಂದೀ ಪರಿಯಲ್ಲಿ ಫಲದಲ್ಲಿ ಆಸಕ್ತನಾಗಿ (ಕರ್ಮಕ್ಕೆ) ಕಟ್ಟು ಬೀಳುತ್ತಾನೆ ಆದ್ದರಿಂದ ನೀನು ಯುಕ್ತನಾಗು ಎಂದರ್ಥ.

## ಜ್ಞಾನಿಗೆ ಯಾವ ಕರ್ಮವೂ ಇಲ್ಲ

೩೪೧. ಯಸ್ತು ಪರಮಾರ್ಥದರ್ಶೀ ಸಃ—

ಆದರೆ ಯಾವನು ಪರಮಾರ್ಥವನ್ನು ಕಂಡುಕೊಂಡಿರುವವನೋ ಅವನು :—

**ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।**
**ನವದ್ವಾರೇ ಪುರೇ ದೇಹೀ ನೈವ ಕುರ್ವನ್ ನ ಕಾರಯನ್ ॥ ೧೩ ॥**

೧೩. ಸರ್ವಕರ್ಮಗಳನ್ನೂ ಮನಸ್ಸಿನಿಂದ ಸಂನ್ಯಾಸಮಾಡಿ ವಶಿಯಾಗಿ ನವದ್ವಾರದ ಪುರದಲ್ಲಿ ದೇಹಿಯು (ಏನನ್ನೂ) ಮಾಡದೆಯೇ (ಏನನ್ನೂ) ಮಾಡಿಸದೆಯೇ, ಸುಖವಾಗಿ ಇರುತ್ತಿರುವನು.

(ಭಾಷ್ಯ)

೩೪೨ ಸರ್ವಾಣಿ ಕರ್ಮಾಣಿ ಸರ್ವಕರ್ಮಾಣಿ ಮನಸಾ[1] ಸಂನ್ಯಸ್ಯ ಪರಿತ್ಯಜ್ಯ । ನಿತ್ಯಂ ನೈಮಿತ್ತಿಕಂ ಕಾಮ್ಯಂ ಪ್ರತಿಷಿದ್ಧಂ ಚ ತಾನಿ ಸರ್ವಾಣಿ ಕರ್ಮಾಣಿ ಮನಸಾ ವಿವೇಕಬುದ್ಧ್ಯಾ ಕರ್ಮಾದೌ ಅಕರ್ಮಸಂದರ್ಶನೇನ ಸಂತ್ಯಜ್ಯ ಇತ್ಯರ್ಥಃ । ಆಸ್ತೇ ತಿಷ್ಠತಿ ಸುಖಮ್ । ತ್ಯಕ್ತವಾಙ್ಮನಃಕಾಯಚೇಷ್ಟಃ ನಿರಾಯಾಸಃ ಪ್ರಸನ್ನಚಿತ್ತಃ ಆತ್ಮನೋಽನ್ಯತ್ರ ನಿವೃತ್ತಸರ್ವಬಾಹ್ಯಪ್ರಯೋಜನಃ ಇತಿ ಸುಖಮ್ ಆಸ್ತೇ ಇತ್ಯುಚ್ಯತೇ । ವಶೀ ಜಿತೇನ್ದ್ರಿಯ ಇತ್ಯರ್ಥಃ । ಕ್ವ ಕಥಮ್ ಆಸ್ತೇ ಇತಿ ? ಆಹ–ನವದ್ವಾರೇ ಪುರೇ । ಸಪ್ತ ಶೀರ್ಷಣ್ಯಾನಿ ಆತ್ಮನಃ ಉಪಲಬ್ಧಿದ್ವಾರಾಣಿ ಅರ್ವಾಕ್ ದ್ವೇ ಮೂತ್ರಪುರೀಷವಿಸರ್ಗಾರ್ಥೇ । ತೈಃ ದ್ವಾರೈಃ ನವದ್ವಾರಂ ಪುರಮ್ ಉಚ್ಯತೇ ಶರೀರಮ್ । ಪುರಮಿವ ಪುರಮ್ ಆತ್ಮೈಕಸ್ವಾಮಿಕಮ್ । ತದರ್ಥಪ್ರಯೋಜನೈಶ್ಚ ಇನ್ದ್ರಿಯಮನೋಬುದ್ಧಿವಿಷಯೈಃ ಅನೇಕಫಲವಿಜ್ಞಾನಸ್ಯ ಉತ್ಪಾದಕೈಃ ಪೌರೈರಿವ ಅಧಿಷ್ಠಿತಮ್ । ತಸ್ಮಿನ್ ನವದ್ವಾರೇ ಪುರೇ ದೇಹೀ ಸರ್ವಂ ಕರ್ಮ ಸಂನ್ಯಸ್ಯ ಆಸ್ತೇ ॥

---

1. ಈ ಮಾತು ಆ॥ನಿ॥ಗು॥ಪಾ॥ಗಳಲ್ಲಿಲ್ಲ.

(ಭಾಷಾರ್ಥ)

ಸರ್ವಕರ್ಮಗಳನ್ನೂ ಮನಸ್ಸಿನಿಂದ ಸಂನ್ಯಾಸಮಾಡಿ, ಬಿಟ್ಟು ನಿತ್ಯ, ನೈಮಿತ್ತಿಕ, ಕಾಮ್ಯ, ಪ್ರತಿಷಿದ್ಧ-ಎಂಬ (ಕರ್ಮಗಳಿವೆಯಲ್ಲ), ಆ ಕರ್ಮಗಳೆಲ್ಲವನ್ನೂ[1] ಮನಸ್ಸಿನಿಂದ ಎಂದರೆ ವಿವೇಕಬುದ್ಧಿಯಿಂದ, ಕರ್ಮಾದಿಗಳಲ್ಲಿ ಅಕರ್ಮಾದಿಗಳನ್ನು ಕಾಣುವದರಿಂದ[2] ಕೈಬಿಟ್ಟು ಎಂದರ್ಥ. ಸುಖವಾಗಿ ಕೂತಿರುವನು, ಇದ್ದುಕೊಂಡಿರುವನು ವಾಕ್ಕು, ಮನಸ್ಸು, ಶರೀರ-ಇವುಗಳ ವ್ಯಾಪಾರವನ್ನೆಲ್ಲ ಬಿಟ್ಟು ಆಯಾಸವಿಲ್ಲದೆ ಚಿತ್ತವಲ್ಲಿ ಪ್ರಸನ್ನತೆಯನ್ನು ಹೊಂದಿ[3] ಆತ್ಮನನ್ನು ಬಿಟ್ಟು ಬೇರೆ ಕಡೆಯಲ್ಲಿ ಯಾವದೊಂದು ಹೊರಗಿನ ಪ್ರಯೋಜನವನ್ನೂ ಇಲ್ಲದೆ[4] (ಇರುವನೆಂದು ತಿಳಿಸುವದಕ್ಕೆ) 'ಸುಖವಾಗಿ ಇರುತ್ತಿರುವನು' ಎಂದು ಹೇಳಿರುತ್ತದೆ ವಶಿಯಾಗಿ ಎಂದರೆ ಇಂದ್ರಿಯಗಳನ್ನು ಗೆದ್ದು ಎಂದರ್ಥ. ಎಲ್ಲಿರುವನು, ಹೇಗೆ (ಇರುವನು)? ಎಂದರೆ ಹೇಳುತ್ತಾನೆ ನವದ್ವಾರದ ಪುರದಲ್ಲಿ ತಲೆಯಲ್ಲಿದ್ದುಕೊಂಡು ಆತ್ಮನಿಗೆ ಜ್ಞಾನಕ್ಕೆ ದ್ವಾರಗಳಾಗಿರುವವು ಏಳು, ಮೂತ್ರಪುರೀಷಗಳನ್ನು ಹೊರಕ್ಕೆ ಬಿಡುವದಕ್ಕೆ ಕೆಳಗಿರುವ ಎರಡು-ಈ (ಒಂಬತ್ತು) ದ್ವಾರಗಳಿಂದ ಶರೀರವು ನವದ್ವಾರದ ಪುರವೆನಿಸಿರುತ್ತದೆ ಇದು ಪುರದಂತೆ ಇರುವದರಿಂದ ಪುರವು. (ಹೇಗೆಂದರೆ), ಆತ್ಮನೊಬ್ಬನೇ ಇದಕ್ಕೆ ಒಡೆಯನು, ಅವನಿಗೆ ಪ್ರಯೋಜನವನ್ನುಂಟುಮಾಡುವವಾಗಿಯೂ ಅನೇಕ ಫಲದ ಅರಿವನ್ನುಂಟುಮಾಡುವವಾಗಿಯೂ ಇರುವ ಇಂದ್ರಿಯ, ಮನಸ್ಸು, ಬುದ್ಧಿ, ವಿಷಯ (?)-ಇವುಗಳು ಪುರದಲ್ಲಿರುವ ಪ್ರಜೆಗಳಂತೆ ಇದರಲ್ಲಿ ವಾಸಮಾಡುತ್ತಿರುವವು ಇಂಥ **ಒಂಬತ್ತು ಬಾಗಿಲಿನ ಪುರದಲ್ಲಿ**[5] ಈ ದೇಹಿಯು ಕರ್ಮವನ್ನೆಲ್ಲ ಸಂನ್ಯಾಸಮಾಡಿ ಇರುತ್ತಿರುವನು.

೩೪೩ ಕಿಂ ವಿಶೇಷಣೇನ? ಸರ್ವೋ ಹಿ ದೇಹೀ ಸಂನ್ಯಾಸೀ ಅಸಂನ್ಯಾಸೀ

---

1. ಇದರಲ್ಲಿ ಲೌಕಿಕಕರ್ಮಗಳೂ ಸೇರಿವೆ ಎಂಬುದು ಭಾಷ್ಯದಿಂದ ಮುಂದಿನ ಸ್ಪಷ್ಟ.

2. 'ಕರ್ಮಾದೌ ಅಕರ್ಮಾದಿಸಂದರ್ಶನೇನ' ಎಂದು ಮೂಲವು ಇರುವಂತೆ ಭಾವಿಸಿ ಕನ್ನಡಿಸಿದೆ ೪-೧೭ರ ಭಾಷ್ಯವನ್ನು ನೋಡಿ

3 ಯಾವ ಆಯಾಸವೂ ಇಲ್ಲದೆ ಸುಮ್ಮನಿರುವೆನೆಂದು ಭಾವಿಸುವ ಅಜ್ಞರಿಗೆ ಈ ನಿರಾಯಾಸಸ್ಥಿತಿಯ ಅರಿವು ಇರುವದಿಲ್ಲ.

4 ವಿಷಯಮಾತ್ರಯವನ್ನು ಬಿಟ್ಟು ಎಂದರ್ಥ

5 ಶರೀರವನ್ನು ಪುರವೆಂದು ಕರೆಯುವ ವೈದಿಕರೂಢಿಯನ್ನು ಕ. ೨-೨-೧ರಲ್ಲಿ ನೋಡಿ

ವಾ ದೇಹೇ ಏವ ಆಸ್ತೇ । ತತ್ರ ಅನರ್ಥಕಂ ವಿಶೇಷಣಮ್ ಇತಿ[1] । ಉಚ್ಯತೇ । ಯಸ್ತು ಅಜ್ಞಃ ದೇಹೀ ದೇಹೇನ್ದ್ರಿಯಸಙ್ಘಾತಮಾತ್ರಾತ್ಮದರ್ಶೀ ಸ ಸರ್ವೋ[2] 'ಗೇಹೇ ಭೂಮೌ ಆಸನೇ ವಾ ಆಸೇ' ಇತಿ ಮನ್ಯತೇ । ನ ಹಿ ದೇಹಮಾತ್ರಾತ್ಮ ದರ್ಶಿನಃ ಗೇಹೇ ಇವ ದೇಹೇ ಆಸೇ ಇತಿ ಪ್ರತ್ಯಯಃ ಸಂಭವತಿ । ದೇಹಾದಿಸಙ್ಘಾತ ವ್ಯತಿರಿಕ್ತಾತ್ಮದರ್ಶಿನಸ್ತು 'ದೇಹೇ ಆಸೇ' ಇತಿ ಪ್ರತ್ಯಯಃ ಉಪಪದ್ಯತೇ । ಪರ ಕರ್ಮಣಾಂ ಚ ಪರಸ್ಮಿನ್ ಆತ್ಮನಿ ಅವಿದ್ಯಯಾ ಅಧ್ಯಾರೋಪಿತಾನಾಂ ವಿದ್ಯಯಾ ವಿವೇಕಜ್ಞಾನೇನ ಮನಸಾ ಸಂನ್ಯಾಸ ಉಪಪದ್ಯತೇ । ಉತ್ಪನ್ನವಿವೇಕವಿಜ್ಞಾನಸ್ಯ ಸರ್ವಕರ್ಮಸಂನ್ಯಾಸಿನೋಽಪಿ ಗೇಹೇ ಇವ ದೇಹೇ ಏವ ನವದ್ವಾರೇ ಪುರೇ ಆಸನಂ ಪ್ರಾರಬ್ಧಫಲಕರ್ಮಸಂಸ್ಕಾರಶೇಷಾನುವೃತ್ತ್ಯಾ । ದೇಹೇ ಏವ ವಿಶೇಷವಿಜ್ಞಾನೋ ತ್ಪತ್ತೇಃ ದೇಹೇ ಏವ ಆಸ್ತೇ ಇತಿ ಅಸ್ತ್ಯೇವ ವಿಶೇಷಣಫಲಂ ವಿದ್ವದವಿದ್ವತ್ಪ್ರತ್ಯಯ ಭೇದಾಪೇಕ್ಷತ್ವಾತ್ ॥

(ಭಾಷ್ಯಾರ್ಥ)

(ಆಕ್ಷೇಪ) :—(ಸಂನ್ಯಾಸಿಯಾದ ದೇಹಿಯು ದೇಹದಲ್ಲಿರುವನು ಎಂಬ) ವಿಶೇಷಣದಿಂದ ಪ್ರಯೋಜನವೇನು? ದೇಹಿಯಾದವನು ಪ್ರತಿಯೊಬ್ಬನೂ (ಅವನು) ಸಂನ್ಯಾಸಿಯಾಗಿರಲಿ, ಸಂನ್ಯಾಸಿಯಲ್ಲದಿರಲಿ, ದೇಹದಲ್ಲಿಯೇ ಇರುತ್ತಾನೆ ಹೀಗಿರುವದರಿಂದ (ಸಂನ್ಯಾಸಿಯಾದ ಎಂಬ) ವಿಶೇಷಣವು ವ್ಯರ್ಥ

ಪರಿಹಾರ —ಇದಕ್ಕೆ (ಉತ್ತರವನ್ನು) ಹೇಳುತ್ತೇವೆ. ಯಾವನಾದರೆ ದೇಹೇಂದ್ರಿಯಗಳ ಗುಂಪೇ ತಾನೆಂದು ತಿಳಿದಿರುವ ಅಜ್ಞದೇಹಿಯೋ ಅವನು ಪ್ರತಿಯೊಬ್ಬನೂ 'ಮನೆಯಲ್ಲಿ, ನೆಲದ ಮೇಲೆ, ಅಥವಾ ಆಸನದ ಮೇಲೆ ಕೂತಿದ್ದೇನೆ' ಎಂದು ತಿಳಿದುಕೊಂಡಿರುತ್ತಾನೆ, ದೇಹವೇ ಆತ್ಮನೆಂದು ತಿಳಿದುಕೊಂಡಿರುವವನಿಗೆ ಮನೆಯಲ್ಲಿರುವಂತೆ 'ದೇಹದಲ್ಲಿರುತ್ತೇನೆ' ಎಂಬ ತಿಳಿವು ಉಂಟಾಗುವ ಹಾಗಿಲ್ಲ. ಆದರೆ ದೇಹವೇ ಮುಂತಾದವುಗಳ ಗುಂಪಿಗಿಂತ ಬೇರೆಯಾದ ಆತ್ಮನನ್ನು ಕಂಡುಕೊಂಡಿರುವವನಿಗೆ 'ದೇಹದಲ್ಲಿರುತ್ತೇನೆ' ಎಂಬ ಅರಿವು ಉಂಟಾಗಬಹುದು. ಬೇರೊಂದು ವಸ್ತುವಿನ ಕ್ರಿಯೆಗಳನ್ನು ಅದಕ್ಕಿಂತ ಬೇರೆಯಾಗಿರುವ ಆತ್ಮನಲ್ಲಿ ಅವಿದ್ಯೆಯಿಂದ ಆರೋಪಮಾಡುತ್ತಾರಷ್ಟೆ. ಇವುಗಳನ್ನು ವಿದ್ಯೆಯಿಂದ ಎಂದರೆ

---

1. ಈ ಮಾತು ಮ॥ಮೈ॥ಗಳಲ್ಲಿಲ್ಲ.
2 'ಸರ್ವೋಽಪಿ' ಮ॥ಮೈ॥ವಾ॥

ವಿವೇಕಜ್ಞಾನದಿಂದ[1] ಮನಸ್ಸಿನಲ್ಲಿ ಸಂನ್ಯಾಸಮಾಡುವದೆಂಬುದೂ (ಈ ಜ್ಞಾನಿಗೆ) ಹೊಂದುತ್ತದೆ.[2] ವಿವೇಕವಿಜ್ಞಾನವು ಉಂಟಾಗಿರುವ ಸರ್ವಕರ್ಮಸಂನ್ಯಾಸಿಯು ಕೂಡ ಮನೆಯಲ್ಲಿರುವಂತೆ ದೇಹವೆಂಬ ನವದ್ವಾರದ ಪುರದಲ್ಲಿರುವದೆಂಬುದು ಫಲವನ್ನುಂಟುಮಾಡಿರುವ ಕರ್ಮದ ಸಂಸ್ಕಾರವು ಉಳಿದುಕೊಂಡು ಬಂದಿರುವದರಿಂದ (ಹೊಂದುತ್ತದೆ). ದೇಹದಲ್ಲಿಯೇ (ಇವನಿಗೆ) ವಿಶೇಷಜ್ಞಾನವು ಉಂಟಾಗುವದರಿಂದ ದೇಹದಲ್ಲಿಯೇ (ಅವನು) ಇರುತ್ತಾನೆ (ಎನ್ನಬಹುದು)[3] ಆದ್ದರಿಂದ (ಸಂನ್ಯಾಸಿಯಾದವನು ದೇಹದಲ್ಲಿ ಇರುತ್ತಾನೆ) ಎಂಬ ವಿಶೇಷಣಕ್ಕೆ ಪ್ರಯೋಜನವು ಇದ್ದೇ ಇದೆ; ಏಕೆಂದರೆ ಜ್ಞಾನಿಯ ಮತ್ತು ಅಜ್ಞಾನಿಯ ಬೇರೆಬೇರೆಯ ಭಾವನೆಗಳನ್ನು ಅನುಸರಿಸಿ (ಹೀಗೆ ಹೇಳಿದ್ದಾಗಿರುತ್ತದೆ).

(ಭಾಷ್ಯ)

೩೪೪. ಯದ್ಯಪಿ ಕಾರ್ಯಕರಣಕರ್ಮಾಣಿ ಅವಿದ್ಯಯಾ ಆತ್ಮನಿ ಅಧ್ಯಾರೋಪಿತಾನಿ ಸಂನ್ಯಸ್ಯ ಆಸ್ತೇ ಇತ್ಯುಕ್ತಮ್[4] ತಥಾಪಿ[5] ಆತ್ಮಸಮವಾಯಿ ತು ಕರ್ತೃತ್ವಂ ಕಾರಯಿತೃತ್ವಂ ಚ ಸ್ಯಾತ್ ಇತ್ಯಾಶಙ್ಕ್ಯ ಆಹ ನೈವ ಕುರ್ವನ್ ಸ್ವಯಂ ನ ಚ ಕಾರ್ಯಕರಣಾನಿ ಕಾರಯನ್ ಕ್ರಿಯಾಸು ಪ್ರವರ್ತಯನ್ । ಕಿಂ ಯತ್ ತತ್ ಕರ್ತೃತ್ವಂ ಕಾರಯಿತೃತ್ವಂ ಚ ದೇಹಿನಃ ಸ್ವಾತ್ಮಸಮವಾಯಿ ಸತ್ ಸಂನ್ಯಾಸಾತ್ ನ ಸಂಭವತಿ ಯಥಾ ಗಚ್ಛತೋ ಗತಿಃ ಗಮನವ್ಯಾಪಾರಪರಿತ್ಯಾಗೇ ನ ಸ್ಯಾತ್ ತದ್ವತ್ । ಕಿಂ ವಾ ಸ್ವತ ಏವ ಆತ್ಮನೋ ನಾಸ್ತಿ ಇತಿ? ಅತ್ರೋಚ್ಯತೇ । ನಾಸ್ತಿ ಆತ್ಮನಃ ಸ್ವತಃ ಕರ್ತೃತ್ವಂ ಕಾರಯಿತೃತ್ವಂ ಚ[6] । ಉಕ್ತಂ ಹಿ 'ಅವಿಕಾರ್ಯೋಽಯ

---

1. 'ವಿದ್ಯೆ' ಎಂದರೆ ವಿವೇಕಜ್ಞಾನವು 'ಅವಿದ್ಯೆ' ಎಂದರೆ ಆತ್ಮಾನಾತ್ಮದ ವಿವೇಚನೆಯಿಲ್ಲದ ಕಲೆಬೆರಕೆಯ ತಿಳಿವು. ಭಾ. ಭಾ. ೩೮ನ್ನು ನೋಡಿ.

2. ಜ್ಞಾನಿಯು ಸರ್ವಕರ್ಮಸಂನ್ಯಾಸವನ್ನು ಮಾಡಿರುತ್ತಾನೆಂಬ ಬಗ್ಗೆ ಭಾ. ಭಾ. ೪೨೦ರಲ್ಲಿ ಈ ಶ್ಲೋಕಭಾಗಕ್ಕೆ ಮಾಡಿರುವ ವ್ಯಾಖ್ಯಾನವನ್ನು ನೋಡಿ.

3. ನಾನು ಯಾವ ಕರ್ಮವೂ ಇಲ್ಲದ ಆತ್ಮನು ಎಂಬ ವಿಶೇಷಜ್ಞಾನವು ಪ್ರಾರಬ್ಧಕರ್ಮದ ಸಂಸ್ಕಾರದಿಂದ ಉಳಿದುಕೊಂಡಿರುವ ದೇಹದಲ್ಲಿ ಉಂಟಾಗುವದರಿಂದ ನಾನು ದೇಹದಲ್ಲಿರುತ್ತೇನೆ ಎಂಬ ಭಾವನೆಯು ಜ್ಞಾನಿಗೆ ಆಗಬಹುದು ಎಂದರ್ಥ. ಜ್ಞಾನಿಗೆ ದೇಹವು ಮಿಥ್ಯೆ ಎಂಬ ಅರಿವೂ ಇರುತ್ತದೆ ಎಂಬುದನ್ನು ಮರೆಯಬಾರದು.

4. 'ಸಂನ್ಯಸ್ಯೇತಿ ತಥಾಪಿ' ಮು॥ ವ್ಯೈ॥

5. ಇದರ ಮುಂದೆ 'ಕೃತಸಂನ್ಯಾಸಸ್ಯ' ಎಂದು ಮು॥ ವ್ಯೈ॥ಗಳಲ್ಲಿ ಹೆಚ್ಚಾಗಿದೆ.

6. 'ವಾ' ಎಂದು ಮು॥ ವ್ಯೈ॥

ಮುಚ್ಯತೇ' (೨-೨೫) 'ಶರೀರಸ್ಥೋಽಪಿ ಕೌನ್ತೇಯ ನ ಕರೋತಿ ನ ಲಿಪ್ಯತೇ' (೧೩-೩೧) ಇತಿ। 'ಧ್ಯಾಯತೀವ ಲೇಲಾಯತೀವ' (ಬೃ. ೪-೩-೭) ಇತಿ ಚ ಶ್ರುತೇಃ॥

(ಭಾಷ್ಯಾರ್ಥ)

ದೇಹೇಂದ್ರಿಯಗಳ ಕರ್ಮಗಳು ಅವಿದ್ಯೆಯಿಂದ ಆತ್ಮನಲ್ಲಿ ಆರೋಪಿತವಾಗಿರುವದರಿಂದ (ಜ್ಞಾನಿಯು ಅವನ್ನು) ಸಂನ್ಯಾಸಮಾಡಿ ಇರುತ್ತಾನೆ–ಎಂದೇನೋ ಹೇಳಿರುತ್ತದೆಯಾದರೂ[1] ತನಗೆ ಸಂಬಂಧಪಟ್ಟಿರುವ ಕರ್ತೃತ್ವವೂ ಕಾರಯಿತೃತ್ವವೂ[2] (ಉಳಿದಿರ)ಬಹುದಲ್ಲ! ಎಂದು ಶಂಕಿಸಿ (ಅದಕ್ಕೆ ಪರಿಹಾರವನ್ನು) ಹೇಳುತ್ತಾನೆ; ತಾನೂ ಮಾಡದೆ ದೇಹೇಂದ್ರಿಯಗಳನ್ನೂ ಮಾಡಿಸದೆ, ಎಂದರೆ ಕ್ರಿಯೆಗಳಲ್ಲಿ ತೊಡಗಿಸದೆ ಇರುತ್ತಾನೆ (ಎಂದರ್ಥ) [3]

(ಪ್ರಶ್ನೆ)— ಆ ಕರ್ತೃತ್ವವೂ ಕಾರಯಿತೃತ್ವವೂ ಉಂಟಲ್ಲ, ಅದು ತನ್ನ ಆತ್ಮನಿಗೆ ಸಂಬಂಧಿಸಿಕೊಂಡಿದ್ದು–ಓಡಾಡುವವನ ಓಡಾಟವೆಂಬುದು ಓಡಾಡುವದೆಂಬ ಕೆಲಸವನ್ನು ಬಿಟ್ಟರೆ ಇಲ್ಲವಾಗುವಂತೆ–ಸಂನ್ಯಾಸದಿಂದ ಇಲ್ಲದೆ ಹೋಗುವದೊ, ಅಥವಾ ತಾನೇ ಆತ್ಮನಲ್ಲಿ ಇಲ್ಲವೊ? [4]

(ಉತ್ತರ) —ಇದಕ್ಕೆ (ಉತ್ತರವನ್ನು) ಹೇಳುತ್ತೇವೆ, (ಕೇಳಿ). **ಕರ್ತೃತ್ವವೂ ಕಾರಯಿತೃತ್ವವೂ ತಾನೇ ಆತ್ಮನಲ್ಲಿ ಇರುವದಿಲ್ಲ.** "ಈ (ಆತ್ಮನು) ಅವಿಕಾರಿ

---

1. ದೇಹಾದಿಗಳಲ್ಲಿರುವ ಕ್ರಿಯೆಯನ್ನು ತಪ್ಪು ತಿಳಿವಳಿಕೆಯಿಂದ ಆತ್ಮನಲ್ಲಿ ಆರೋಪಿಸುತ್ತಾರೆಂದು ನೈಯಾಯಿಕರೂ ಒಪ್ಪುತ್ತಾರೆ.

2. ದೇಹಾದಿಗಳ ಕೆಲಸವಿಲ್ಲದಿದ್ದರೂ ತಾನು ಮಾಡುವ ಕೆಲಸವಿರಬಹುದು– ಎಂದರ್ಥ. ನಿಜವಾಗಿ ಆತ್ಮನು ಕರ್ತೃ, ಅವನು ದೇಹಾದಿಗಳನ್ನುಪಯೋಗಿಸಿಕೊಂಡು ಕೆಲಸ ಮಾಡುತ್ತಾನೆ—ಎಂದೇಕೆ ಭಾವಿಸಬಾರದು ?

3 'ಸಂನ್ಯಾಸಮಾಡಿ ಇರುತ್ತಾನೆ' ಎಂಬಲ್ಲಿ ಮತ್ತೊಂದರ ಕ್ರಿಯೆಯು ಆತ್ಮನಲ್ಲಿಲ್ಲವೆಂದೂ 'ಮಾಡದೆ ಮಾಡಿಸದೆ' ಎಂಬಲ್ಲಿ ತನ್ನಲ್ಲಿಯೇ ಕ್ರಿಯೆಯಿಲ್ಲವೆಂದೂ ಅರ್ಥ ಮಾಡಿದರೆ ಪುನರುಕ್ತಿದೋಷವಿರುವದಿಲ್ಲ ಎಂದು ಭಾವ.

4. ಸಂನ್ಯಾಸವೆಂದರೆ ಕ್ರಿಯೆಯನ್ನು ಬಿಡುವದೋ, ಅಥವಾ ಕ್ರಿಯೆಯು ತನ್ನಲ್ಲಿಲ್ಲವೆಂದು ಮನಗಾಣುವದೋ ? ಎಂದು ಪ್ರಶ್ನೆ

ಎನಿಸುವನು" (೨-೨೫), "ಎಲೈ ಕೌಂತೇಯನೆ, ಶರೀರದಲ್ಲಿದ್ದರೂ (ಈ ಆತ್ಮನು) ಮಾಡುವದೂ ಇಲ್ಲ, ಲೇಪವನ್ನು ಹೊಂದುವದೂ ಇಲ್ಲ" (೧೩-೩೧) ಎಂದು ಗೀತೆಯಲ್ಲಿ) ಹೇಳಿರುತ್ತದೆಯಲ್ಲವೆ? "(ಆತ್ಮನು) ಯೋಚಿಸುತ್ತಿರುವಂತೆಯೂ ಚಲಿಸುತ್ತಿರುವಂತೆಯೂ (ಇರುವನು)" (ಬೃ. ೪-೩-೭) ಎಂಬ ಶ್ರುತಿಯೂ ಇದಕ್ಕೆ ಪ್ರಮಾಣವು.

## ಜ್ಞಾನಿಗೂ ಅಜ್ಞಾನಿಗೂ ಭೇದ

**ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।**
**ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥ ೧೪ ॥**

೧೪. ಪ್ರಭುವು ಜನರಿಗೆ ಕರ್ತೃತ್ವವನ್ನಾಗಲಿ ಕರ್ಮಗಳನ್ನಾಗಲಿ ಸೃಷ್ಟಿಸಿರುವದಿಲ್ಲ. ಕರ್ಮಫಲಸಂಯೋಗವನ್ನೂ (ಸೃಷ್ಟಿಸಿರುವದಿಲ್ಲ). ಅವರ ಸ್ವಭಾವವು ಕೆಲಸಮಾಡುತ್ತಿರುವದು.

(ಭಾಷ್ಯ)

೪೫. ಕಿಂ ಚ ನ ಕರ್ತೃತ್ವಂ ಸ್ವತಃ[1] 'ಕುರು' ಇತಿ ನಾಪಿ ಕರ್ಮಾಣಿ ರಥಘಟಪ್ರಾಸಾದಾದೀನಿ ಈಪ್ಸಿತತಮಾನಿ ಲೋಕಸ್ಯ ಸೃಜತಿ **ಉತ್ಪಾದಯತಿ** ಪ್ರಭುಃ ಆತ್ಮಾ । ನಾಪಿ ರಥಾದಿ ಕೃತವತಃ ತತ್ಫಲೇನ ಸಂಯೋಗಂ ನ ಕರ್ಮಫಲಸಂಯೋಗಮ್ । ಯದಿ ಕಿಂಚಿದಪಿ ಸ್ವತಃ ನ ಕರೋತಿ ನ ಕಾರಯತಿ ಚ ದೇಹೀ ಕಸ್ತರ್ಹಿ ಕುರ್ವನ್ ಕಾರಯಂಶ್ಚ ಪ್ರವರ್ತತೇ ಇತಿ? **ಉಚ್ಯತೇ** । ಸ್ವಭಾವಸ್ತು ಸ್ವೋ ಭಾವಃ ಸ್ವಭಾವಃ ಅವಿದ್ಯಾಲಕ್ಷಣಾ ಪ್ರಕೃತಿಃ ಮಾಯಾ ಪ್ರವರ್ತತೇ "ದೈವೀ ಹಿ" (೭-೧೪) ಇತ್ಯಾದಿನಾ ವಕ್ಷ್ಯಮಾಣಾ[2] ॥

(**ಭಾಷ್ಯಾರ್ಥ**)

ಮತ್ತು ಪ್ರಭುವು ಎಂದರೆ ಆತ್ಮನು 'ಮಾಡು' ಎಂದು ಸ್ವತಃ ಕರ್ತೃತ್ವವನ್ನಾಗಲಿ,[3] ಕರ್ಮಗಳನ್ನಾಗಲಿ ಎಂದರೆ ಬಂಡಿ, ಗಡಿಗೆ, ಉಪ್ಪರಿಗೆ—ಮುಂತಾದ ಅತ್ಯಂತ

---

1. 'ಸ್ವಯಮ್' ಮ॥ ಮೈ॥
2. ಈ ಮಾತು ಮ॥ ಮೈ॥ ಗಳಲ್ಲಿಲ್ಲ.
3. ಕರ್ತೃತ್ವ, ಕಾರಯಿತೃತ್ವ—ಎರಡನ್ನೂ ಇಲ್ಲಿ ತೆಗೆದುಕೊಳ್ಳಬೇಕು.

ವಾಗಿ ಬೇಕಾದ (ಕರ್ಮಗಳನ್ನಾಗಲಿ)[1] ಜನಕ್ಕೆ ಸೃಷ್ಟಿಸಿರುವದಿಲ್ಲ, ಉಂಟುಮಾಡಿರುವದಿಲ್ಲ. ಬಂಡಿಯೇ ಮುಂತಾದವುಗಳನ್ನು ಮಾಡಿದವನಿಗೆ ಅದರ ಫಲದೊಡನೆ ಸಂಬಂಧವನ್ನೂ ಸೃಷ್ಟಿಸಿರುವದಿಲ್ಲ[2], ಆದ್ದರಿಂದ ಕರ್ಮಫಲಸಂಯೋಗವನ್ನು (ಸೃಷ್ಟಿಸಿರುವದಿಲ್ಲ ಎಂದಿದೆ)

(ಪ್ರಶ್ನೆ) :—ದೇಹಿಯಾದವನು ತಾನೇ ಮಾಡುವದೂ ಇಲ್ಲ, ಮಾಡಿಸುವದೂ ಇಲ್ಲ–ಎಂಬುದೇ (ನಿಜ)ವಾದರೆ ಮಾಡುತ್ತಲೂ ಮಾಡಿಸುತ್ತಲೂ (ಕರ್ಮಗಳಲ್ಲಿ) ತೊಡಗಿರುವವರು ಯಾರು[3]?

(ಉತ್ತರ) :—ಹೇಳುತ್ತೇನೆ, (ಕೇಳು) ಆದರೆ **ಸ್ವಭಾವವು**–ಸ್ವಭಾವವೆಂದರೆ ತನ್ನ ಭಾವವು, ಅವಿದ್ಯಾಲಕ್ಷಣವಾದ ಪ್ರಕೃತಿಯು, ಮಾಯೆಯು "ದೈವೀ ಹಿ" (೭-೧೪) ಮುಂತಾದ (ಶ್ಲೋಕದಲ್ಲಿ) ಹೇಳಿರುವ (ಮಾಯೆಯು) ತೊಡಗುತ್ತಿರುವದು.[4]

**ನಾದತ್ತೇ ಕಸ್ಯಚಿತ್ ಪಾಪಂ ನ ಚೈವ ಸುಕೃತಂ ವಿಭುಃ ।**
**ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯನ್ತಿ ಜನ್ತವಃ ॥೧೫॥**

೧೫. ವಿಭುವು ಯಾವನೊಬ್ಬನ ಪಾಪವನ್ನಾಗಲಿ ಪುಣ್ಯವನ್ನಾಗಲಿ ತೆಗೆದುಕೊಳ್ಳುವದಿಲ್ಲ. ಅಜ್ಞಾನದಿಂದ ಜ್ಞಾನವು ಮುಚ್ಚಲ್ಪಟ್ಟಿರುವದು, ಆದ್ದರಿಂದ ಜೀವರುಗಳು ಮೋಹಗೊಳ್ಳುತ್ತಿರುವರು.

(ಭಾಷ್ಯ)

೩೪೬ ಪರಮಾರ್ಥತಸ್ತು ನಾದತ್ತೇ ನ[5] ಗೃಹ್ಣಾತಿ ಭಕ್ತಸ್ಯಾಪಿ ಕಸ್ಯಚಿತ್ ಪಾಪಂ ನ ಚೈವ ಆದತ್ತೇ ಸುಕೃತಂ ಭಕ್ತೈಃ ಪ್ರಯುಕ್ತಂ ವಿಭುಃ । ಕಿಮರ್ಥಂ ತರ್ಹಿ

---

1. ಕರ್ಮವೆಂದರೆ ಕ್ರಿಯೆ ಎಂದೂ ಅರ್ಥವಾಗಬಹುದು; ಆದರೆ ಕರ್ತೃತ್ವವಿಲ್ಲ–ಎಂಬ ಮಾತಿನಲ್ಲಿ ಕ್ರಿಯೆಯೂ ಸೇರಿರುವದರಿಂದ ಕರ್ತೃವಾದವನು ಕ್ರಿಯೆಯಿಂದ ಪಡೆಯಬೇಕಾದದ್ದನ್ನೇ ಇಲ್ಲಿ ಕರ್ಮವೆಂದಿದೆ.

2. ಈಶ್ವರನು ವ್ಯವಹಾರದೃಷ್ಟಿಯಿಂದ ಫಲವನ್ನು ಕೊಡುತ್ತಾನಾದರೂ ಪರಮಾರ್ಥವಾಗಿ ಕ್ರಿಯಾಕಾರಕಫಲಗಳೇ ಇಲ್ಲ. ಸೂ ಭಾ. ೨-೩-೪೦, ೪೧.

3. ಕ್ರಿಯಾಕಾರಕಫಲವ್ಯವಹಾರಕ್ಕೆ ಗತಿ ಏನು ?

4. ವ್ಯವಹಾರವು ಅವಿದ್ಯಕವೇ. ೨-೬೯.

5. 'ನ ಚ' ಎಂದು ಆ॥ ಶಿ॥ ಗು॥ ವಾ॥.

ಭಕ್ತೈಃ ಪೂಜಾದಿಲಕ್ಷಣಂ ಯಾಗದಾನಹೋಮಾದಿಕಂ ಚ ಸುಕೃತಂ ಪ್ರಯುಜ್ಯತೇ ಇತಿ ? ಆಹ । ಅಜ್ಞಾನೇನ ಆವೃತಂ ಜ್ಞಾನಂ ವಿವೇಕವಿಜ್ಞಾನಮ್ । ತೇನ ಮುಹ್ಯನ್ತಿ 'ಕರೋಮಿ ಕಾರಯಾಮಿ ಭೋಕ್ಷ್ಯೇ ಭೋಜಯಾಮಿ' ಇತ್ಯೇವಂ ಮೋಹಂ ಗಚ್ಛನ್ತಿ ಅವಿವೇಕಿನಃ ಸಂಸಾರಿಣೋ ಜನ್ತವಃ ॥

(ಭಾಷ್ಯಾರ್ಥ)

ಆದರೆ ನಿಜವಾಗಿ ನೋಡಿದರೆ ವಿಭುವು (ಎಂದರೆ ಈಶ್ವರನು) ಯಾವನೊಬ್ಬನ-ಭಕ್ತನೇ ಆಗಿದ್ದರೂ (ಅವನ ಪಾಪವನ್ನು ಸ್ವೀಕರಿಸುವದಿಲ್ಲ, ಭಕ್ತರಿಂದ ಮಾಡಲ್ಪಟ್ಟ ಪುಣ್ಯವನ್ನೂ ಸ್ವೀಕರಿಸುವದಿಲ್ಲ.[1] ಹಾಗಾದರೆ ಭಕ್ತರು ಪೂಜೆಯೇ ಮುಂತಾದ, ಮತ್ತು ಯಾಗ, ದಾನ, ಹೋಮ-ಮುಂತಾದ ಪುಣ್ಯ (ಕರ್ಮ)ವನ್ನು ಮಾಡುತ್ತಿರುವ ದೇಕೆ ? ಎಂದರೆ (ಭಗವಂತನು) ಹೇಳುತ್ತಾನೆ ಜ್ಞಾನವು ಎಂದರೆ ವಿವೇಕದ ಅರಿವು ಅಜ್ಞಾನದಿಂದ ಮರೆಯಾಗಿರುವದು , ಆದ್ದರಿಂದ " ಮಾಡುತ್ತೇನೆ, ಮಾಡಿಸುತ್ತೇನೆ, ಅನುಭವಿಸುತ್ತೇನೆ, ಅನುಭವಿಸುವಂತೆ ಮಾಡುತ್ತೇನೆ " ಎಂದು ಸಂಸಾರಿಗಳಾದ ಜೀವರುಗಳು ಮೋಹಗೊಳ್ಳುತ್ತಿರುವರು, ಮೋಹವನ್ನು ಹೊಂದುತ್ತಿರುವರು.[2]

**ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ ।**
**ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ ಪರಮ್ ॥೧೬॥**

೧೬. ಆದರೆ ಯಾರಿಗೆ ಆ ಆತ್ಮನ ಅಜ್ಞಾನವು ಜ್ಞಾನದಿಂದ ನಾಶವಾಗಿರುವದೋ, ಅವರಿಗೆ ಸೂರ್ಯನಂತೆ ಜ್ಞಾನವು ಆ ಪರ(ವಸ್ತು)ವನ್ನು ಬೆಳಗುವದು.

(ಭಾಷ್ಯ)

೩೪೭. ಜ್ಞಾನೇನ ತು ಯೇನ ಅಜ್ಞಾನೇನ ಆವೃತಾ ಮುಹ್ಯನ್ತಿ ಜನ್ತವಃ ತತ್ ಅಜ್ಞಾನಂ ಯೇಷಾಂ ಜನ್ತೂನಾಂ ವಿವೇಕಜ್ಞಾನೇನ ಆತ್ಮವಿಷಯೇಣ ನಾಶಿತಮ್ ಆತ್ಮನಃ ಭವತಿ, ತೇಷಾಮ್ ಆದಿತ್ಯವತ್ ಯಥಾ ಆದಿತ್ಯಃ ಸಮಸ್ತಂ ರೂಪಜಾತಮ್ ಅವಭಾಸಯತಿ ತದ್ವತ್ ಜ್ಞಾನಂ ಜ್ಞೇಯಂ ವಸ್ತು ಸರ್ವಂ ಪ್ರಕಾಶಯತಿ ತತ್ ಪರಂ ಪರಮಾರ್ಥತತ್ತ್ವಮ್ ॥

---

1 ವ್ಯವಹಾರದಲ್ಲಿ ಕಾಣುವ ಜೀವೇಶ್ವರಭೇದವೂ ಉಪಾಸ್ಯೋಪಾಸಕಭೇದವೂ ಪರಮಾರ್ಥವಲ್ಲ.

2. ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರವು ಪರಮಾರ್ಥವಲ್ಲ.

(ಭಾಷ್ಯಾರ್ಥ)

ಆದರೆ ಯಾವ ಅಜ್ಞಾನವು ಮುಸುಕಿದ ಜೀವರು ಮೋಹಗೊಳ್ಳುತ್ತಿರುವರೋ ಆ ಅಜ್ಞಾನವು ಯಾವ ಜೀವರಿಗೆ ಜ್ಞಾನದಿಂದ ಎಂದರೆ ಆತ್ಮವಿಷಯವಾದ ವಿವೇಕ ಜ್ಞಾನದಿಂದ[1] ನಾಶಮಾಡಲ್ಪಟ್ಟಿರುವದೋ ಅವರಿಗೆ ಸೂರ್ಯನಂತೆ, ಸೂರ್ಯನು ಹೇಗೆ ರೂಪಗಳನ್ನೆಲ್ಲ ತೋರಿಸಿ ಕೊಡುವನೋ ಅದರಂತೆ, ಜ್ಞಾನವು ಜ್ಞೇಯವಾದ ವಸ್ತುವನ್ನು ಆ ಹೆಚ್ಚಿನ ವಸ್ತುವನ್ನು ಪರಮಾರ್ಥತತ್ತ್ವವನ್ನು ಪೂರ್ಣವಾಗಿ ತಿಳಿಸಿ ಕೊಡುವದು.

## ಜ್ಞಾನಿಗಳ ವ್ಯವಹಾರ

(ಭಾಷ್ಯ)

೩೪೮. ಯತ್ ಪರಂ ಜ್ಞಾನಪ್ರಕಾಶಿತಮ್—

(ಭಾಷ್ಯಾರ್ಥ)

ಯಾವ ಪರವಸ್ತು ಜ್ಞಾನದಿಂದ ತಿಳಿಸಲ್ಪಡುವದೋ—

**ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।**
**ಗಚ್ಛನ್ತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥೧೭॥**

೧೭, ತದ್ಬುದ್ಧಿಗಳಾಗಿ ತದಾತ್ಮರಾಗಿ ತನ್ನಿಷ್ಠರಾಗಿ ತತ್ಪರಾಯಣರಾಗಿ ಜ್ಞಾನದಿಂದ ಕಲ್ಮಷವನ್ನೆಲ್ಲ ತೊಳೆದುಕೊಂಡು ಮತ್ತೆ ಹಿಂತಿರುಗದಿರುವಿಕೆಯನ್ನು ಪಡೆಯುತ್ತಾರೆ.

೩೪೯. ತಸ್ಮಿನ್ ಬ್ರಹ್ಮಣಿ ಗತಾ ಬುದ್ಧಿಃ ಯೇಷಾಂ ತೇ ತದ್ಬುದ್ಧಯಃ । ತದಾತ್ಮಾನಃ ತದೇವ ಪರಂ ಬ್ರಹ್ಮ ಆತ್ಮಾ ಯೇಷಾಂ ತೇ ತದಾತ್ಮಾನಃ । ತನ್ನಿಷ್ಠಾಃ ನಿಷ್ಠಾ ಅಭಿನಿವೇಶಃ, ತಾತ್ಪರ್ಯಮ್, ಸರ್ವಾಣಿ ಕರ್ಮಾಣಿ ಸಂನ್ಯಸ್ಯ ತಸ್ಮಿನ್ ಬ್ರಹ್ಮಣ್ಯೇವ ಅವಸ್ಥಾನಂ ಯೇಷಾಂ ತೇ ತನ್ನಿಷ್ಠಾಃ । ತತ್ಪರಾಯಣಾಶ್ಚ ತದೇವ ಪರಮ್ ಅಯನಂ ಪರಾ ಗತಿಃ ಯೇಷಾಂ ಭವತಿ ತೇ ತತ್ಪರಾಯಣಾಃ ಕೇವಲಾತ್ಮರತಯಃ[2] ಇತ್ಯರ್ಥಃ । ಯೇಷಾಂ ಜ್ಞಾನೇನ ನಾಶಿತಮ್ ಆತ್ಮನಃ ಅಜ್ಞಾನಂ ತೇ

---

1. ಆತ್ಮನೊಬ್ಬನೇ ಪರಮಾರ್ಥಸತ್ಯವೆಂಬ ವಿಜ್ಞಾನದಿಂದ.
2. 'ಕೇವಲಾತ್ಮರತಾಃ' ಮು॥ಮೈ॥

ಗಚ್ಛನ್ತಿ ಏವಂವಿಧಾಃ ಅಪುನರಾವೃತ್ತಿಮ್ ಅಪುನರ್ದೇಹಸಂಬನ್ಧಮ್ ಜ್ಞಾನನಿರ್ಧೂತಕಲ್ಮಷಾಃ ಯಥೋಕ್ತೇನ ಜ್ಞಾನೇನ ನಿರ್ಧೂತಃ ನಾಶಿತಃ ಕಲ್ಮಷಃ ಪಾಪಾದಿ ಸಂಸಾರಕಾರಣದೋಷಃ ಯೇಷಾಂ ತೇ ಜ್ಞಾನನಿರ್ಧೂತಕಲ್ಮಷಾಃ ಯತಯಃ ಇತ್ಯರ್ಥಃ ||

(ಭಾಷ್ಯಾರ್ಥ)

(ತದ್ಬುದ್ಧಿಗಳಾಗಿ)[1]: ಆ ಬ್ರಹ್ಮದಲ್ಲಿಯೇ ಇಟ್ಟ ಬುದ್ಧಿಯುಳ್ಳವರು ಯಾರೋ ಅವರು ತದ್ಬುದ್ಧಿಗಳು. ತದಾತ್ಮರಾಗಿ: ಆ ಪರಬ್ರಹ್ಮವೇ ತಮ್ಮ ಆತ್ಮನೆಂದು ಯಾರಿಗೆ (ಆಗಿರುವದೋ) ಅವರು ತದಾತ್ಮರು. ತನ್ನಿಷ್ಠರಾಗಿ: ನಿಷ್ಠೆ ಎಂದರೆ ಅಭಿಮಾನವು, ತಾತ್ಪರ್ಯವು, **ಕರ್ಮಗಳನ್ನೆಲ್ಲ ಸಂನ್ಯಾಸಮಾಡಿ ಬ್ರಹ್ಮದಲ್ಲಿಯೇ ನೆಲೆನಿಂತಿರುವದು ಯಾರಿಗೆ (ಇದೆಯೋ) ಅವರು ತನ್ನಿಷ್ಠರು.** ತತ್ಪರಾಯಣರಾಗಿ: ಅದೇ ಹೆಚ್ಚಿನ ಅಯನವು ಎಂದರೆ (ಎಲ್ಲಕ್ಕೂ) ಹೆಚ್ಚಿನ ಗತಿಯು ಯಾರಿಗೆ (ಆಗಿರುವದೋ) ಅವರು ತತ್ಪರಾಯಣರು. ಆತ್ಮನೊಬ್ಬನಲ್ಲಿಯೇ ರತಿಯುಳ್ಳವರಾಗಿ ಎಂದರ್ಥ. ಜ್ಞಾನನಿರ್ಧೂತಕಲ್ಮಷರು: ಯಾರಿಗೆ ಆತ್ಮನ ವಿಷಯವಾದ ಅಜ್ಞಾನವು ಮೇಲೆ ಹೇಳಿದ ಜ್ಞಾನದಿಂದ ನಾಶವಾಗಿರುವದೋ ಅವರು. ಈ ಪ್ರಕಾರದವರಾಗಿ[2] ಜ್ಞಾನದಿಂದ ಕಲ್ಮಷವನ್ನೆಲ್ಲ ತೊಳೆದುಕೊಂಡು, ಎಂದರೆ ಮೇಲೆ ಹೇಳಿದಂಥ ಜ್ಞಾನದಿಂದ ಪಾಪವೇ ಮುಂತಾದ ಸಂಸಾರಕ್ಕೆ ಕಾರಣವಾಗಿರುವ ದೋಷಗಳನ್ನು ತೊಲಗಿಸಿಕೊಂಡು ಜ್ಞಾನನಿರ್ಧೂತಕಲ್ಮಷರಾದ ಯತಿಗಳು ಮತ್ತೆ ಹಿಂತಿರುಗದಿರುವಿಕೆಯನ್ನು, ಎಂದರೆ ದೇಹದ ಸಂಬಂಧವಿಲ್ಲದ[3] (ಮೋಕ್ಷವನ್ನು) ಹೊಂದುವರು ಎಂದರ್ಥ.

(ಭಾಷ್ಯ)

೩೫೦. ಯೇಷಾಂ ಜ್ಞಾನೇನ ನಾಶಿತಮ್ ಆತ್ಮನಃ ಅಜ್ಞಾನಮ್, ತೇ ಪಣ್ಡಿತಾಃ ಕಥಂ ತತ್ತ್ವಂ ಪಶ್ಯನ್ತಿ ಇತಿ ? ಉಚ್ಯತೇ—

---

1. 'ತದ್ಬುದ್ಧಯಃ' ಎಂಬ ಮಾತು ಇಲ್ಲಿ ಇದ್ದಿರಬೇಕೆಂದು ತೋರುತ್ತದೆ.

2. ಜ್ಞಾನಿಗಳು ಹೀಗೆ ಇರುವರು; ಆದ್ದರಿಂದ ಜ್ಞಾನವು ಬೇಕೆನ್ನುವವರು ಈ ಸಾಧನಗಳನ್ನು ಮಾಡಬೇಕು.

3. ಈಗಲೂ ಪರಮಾರ್ಥವಾಗಿ ದೇಹದ ಸಂಬಂಧವಿಲ್ಲ. ೨-೧೮ನೆಯ ಶ್ಲೋಕದ ಭಾಷ್ಯವನ್ನು ನೋಡಿ.

(ಭಾಷ್ಯಾರ್ಥ)

ಯಾರಿಗೆ ಜ್ಞಾನದಿಂದ ಆತ್ಮವಿಷಯದ ಅಜ್ಞಾನವು ಹೋಗಿರುವದೋ, ಅಂಥ ಪಂಡಿತರು ತತ್ತ್ವವನ್ನು ಹೇಗೆ ಕಾಣುವರು? ಎಂದರೆ (ಭಗವಂತನು) ಹೇಳುತ್ತಾನೆ:—

**ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।**
**ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ ॥ ೧೮ ॥**

೧೮. ವಿದ್ಯಾವಿನಯಗಳಿಂದ ಕೂಡಿದ ಬ್ರಾಹ್ಮಣನಲ್ಲಿ, ಗೋವಿನಲ್ಲಿ, ಆನೆಯಲ್ಲಿ, ಮತ್ತು ಚಂಡಾಲನಲ್ಲಿ ಪಂಡಿತರು ಸಮದರ್ಶಿಗಳಾಗಿರುವರು.

(ಭಾಷ್ಯ)

೩೫೧. ವಿದ್ಯಾವಿನಯಸಂಪನ್ನೇ ವಿದ್ಯಾ ಚ ವಿನಯಶ್ಚ ವಿದ್ಯಾವಿನಯೌ । ವಿನಯಃ ಉಪಶಮಃ । ತಾಭ್ಯಾಂ ವಿದ್ಯಾವಿನಯಾಭ್ಯಾಂ[1] ಸಂಪನ್ನಃ ವಿದ್ಯಾವಿನಯಸಂಪನ್ನಃ । ವಿದ್ವಾನ್ ವಿನೀತಶ್ಚ ಯೋ ಬ್ರಾಹ್ಮಣಃ ತಸ್ಮಿನ್ ಬ್ರಾಹ್ಮಣೇ ಗವಿ ಹಸ್ತಿನಿ ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ । ವಿದ್ಯಾವಿನಯಸಂಪನ್ನೇ ಉತ್ತಮಸಂಸ್ಕಾರವತಿ[2] ಬ್ರಾಹ್ಮಣೇ ಸಾತ್ತ್ವಿಕೇ, ಮಧ್ಯಮಾಯಾಂ ಚ ರಾಜಸ್ಯಾಂ ಗವಿ ಸಂಸ್ಕಾರಹೀನಾಯಾಮ್, ಅತ್ಯನ್ತಮೇವ ಕೇವಲ ತಾಮಸೇ ಹಸ್ತ್ಯಾದೌ ಚ[3] । ಸತ್ತ್ವಾದಿಗುಣೈಃ ತಜ್ಜೈಶ್ಚ ಸಂಸ್ಕಾರೈಃ ತಥಾ ರಾಜಸೈಃ ತಥಾ ತಾಮಸೈಶ್ಚ ಸಂಸ್ಕಾರೈಃ ಅತ್ಯನ್ತಮೇವ ಅಸ್ಪೃಷ್ಟಂ[4] ಸಮಮ್ ಏಕಮ್ ಅವಿಕ್ರಿಯಂ ಬ್ರಹ್ಮ ದ್ರಷ್ಟುಂ ಶೀಲಂ ಯೇಷಾಂ ತೇ ಪಣ್ಡಿತಾಃ ಸಮದರ್ಶಿನಃ ॥

(ಭಾಷ್ಯಾರ್ಥ)

'ವಿದ್ಯಾವಿನಯಸಂಪನ್ನೇ' ಎಂಬಲ್ಲಿ ವಿದ್ಯೆಯೂ ವಿನಯಗಳೂ ವಿದ್ಯಾವಿನಯಗಳು, ವಿನಯವೆಂದರೆ ಉಪಶಾಂತಿಯು. ಆ ವಿದ್ಯಾವಿನಯಗಳಿಂದ ಕೂಡಿದವನು ವಿದ್ಯಾವಿನಯಸಂಪನ್ನನು. ವಿದ್ಯಾವಂತನೂ ಸರಿಯಾದ ನಡತೆಯುಳ್ಳವನೂ ಆಗಿ

---

1. ಈ ಮಾತು ಮ॥ ಮೈ॥ ಗಳಲ್ಲಿಲ್ಲ.
2. 'ಉತ್ತಮೇ ಸಂಸ್ಕಾರವತಿ' ಮ॥ಮೈ॥
3. ಮ॥ಮೈ॥ಗಳಲ್ಲಿ ಈ ಮಾತಿಲ್ಲ.
4. "ಅಸಂಸ್ಪೃಷ್ಟಮ್" ಮ॥ಮೈ॥ನಿ॥ಗು॥

ರುವ ಬ್ರಾಹ್ಮಣನಿರುತ್ತಾನಲ್ಲ, ಆ ಬ್ರಾಹ್ಮಣನಲ್ಲಿ, ಗೋವಿನಲ್ಲಿ, ಆನೆಯಲ್ಲಿ, ನಾಯಿಯಲ್ಲಿ ಮತ್ತು ಚಂಡಾಲನಲ್ಲಿ ಪಂಡಿತರು ಸಮದರ್ಶಿಗಳಾಗಿರುವರು ವಿದ್ಯಾವಿನಯಗಳಿಂದೊಡಗೂಡಿರುವ ಉತ್ತಮವಾದ ಸಂಸ್ಕಾರವುಳ್ಳ **ಸಾತ್ತ್ವಿಕನಾದ** ಬ್ರಾಹ್ಮಣನಲ್ಲಿಯೂ, ಸಂಸಾರವಿಲ್ಲದ ನಡುತರದ **ರಾಜಸವಾದ** ಗೋವಿನಲ್ಲಿಯೂ **ಅತ್ಯಂತ**ವಾಗಿ ಬರಿಯ **ತಾಮಸವೇ** ಆಗಿರುವ ಆನೆಯೇ ಮುಂತಾದ (ಪ್ರಾಣಿಗಳಲ್ಲಿ)ಯೂ (ಸಮದರ್ಶಿಗಳಾಗಿರುವರು) ಸತ್ತ್ವವೇ ಮುಂತಾದ ಗುಣಗಳಾಗಲಿ ಅವುಗಳಿಂದುಂಟಾಗುವ ಸಂಸ್ಕಾರಗಳಾಗಲಿ, ಹಾಗೂ ರಾಜಸ (ಸಂಸ್ಕಾರಗಳಾಗಲಿ) ತಾಮಸ ಸಂಸ್ಕಾರಗಳಾಗಲಿ ಒಂದಿಷ್ಟೂ ಸೋಕದೆ[1] ಇರುವ **ಸಮ**ವನ್ನು ಎಂದರೆ ಒಂದೇ ಆಗಿ **ಯಾವ ವಿಕಾರವೂ ಇಲ್ಲದೆ ಇರುವ** ಬ್ರಹ್ಮವನ್ನು ಕಾಣುವ ಸ್ವಭಾವವು **ಯಾವದೋ ಆ** ಪಂಡಿತರು ಸಮದರ್ಶಿಗಳಾಗಿರುವರು.

(ಭಾಷ್ಯ)

೩೫೨ ನನು ಅಭೋಜ್ಯಾನ್ನಾಸ್ತೇ ದೋಷವನ್ತಃ । "ಸಮಾಸಮಾಭ್ಯಾಂ ವಿಷಮಸಮೇ ಪೂಜಾತಃ" (ಗೌ. ಧ. ೨-೮-೨೦, ೧೭-೨೦) ಇತಿ ಸ್ಮೃತೇಃ । ನ ತೇ ದೋಷವನ್ತಃ । ಕಥಮ್ ?—

(ಭಾಷ್ಯಾರ್ಥ)

(ಆಕ್ಷೇಪ) :—ಅವರು ದೋಷವಂತರಾದ್ದರಿಂದ ಅವರ ಅನ್ನವನ್ನು ಊಟ ಮಾಡಬಾರದು. ಏಕೆಂದರೆ "ಸಮಾನರಾದವರನ್ನು ವಿಷಮವಾಗಿಯೂ ವಿಷಮರಾದವರನ್ನು ಸಮವಾಗಿಯೂ ಪೂಜಿಸುವದರಿಂದ (ಅಭೋಜ್ಯಾನ್ನನಾಗುವನು)" (ಗೌ.ಧ.) ಎಂದು ಸ್ಮೃತಿಯಲ್ಲಿದೆ

(ಸಮಾಧಾನ) —ಅವರು ದೋಷವಂತರಲ್ಲ ಹೇಗೆಂದರೆ —

**ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।**
**ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ ಬ್ರಹ್ಮಣಿ ತೇ ಸ್ಥಿತಾಃ ॥**

೧೯. ಯಾರ ಮನಸ್ಸು ಸಾಮ್ಯದಲ್ಲಿ ನಿಂತಿರುವದೋ ಅವರಿಂದ ಇಲ್ಲಿಯೇ ಸರ್ಗವು ಜಿತವಾಗಿರುತ್ತದೆ. ಬ್ರಹ್ಮವು ನಿರ್ದೋಷವಾಗಿಯೂ

---

1. ಬ್ರಹ್ಮವು ಮೂರು ಗುಣಗಳನ್ನೂ ಮೀರಿರುವದರಿಂದ ಅದರಲ್ಲಿ ಯಾವ ತಾರತಮ್ಯವೂ ಇಲ್ಲ. ಈ ವಿಷಯವನ್ನು ಮುಂದಿನ ಶ್ಲೋಕದಲ್ಲಿ ಸ್ಪಷ್ಟಪಡಿಸಿದೆ.

ಸಮವಾಗಿಯೂ ಇರುವದಲ್ಲವೆ? ಆದ್ದರಿಂದ ಅವರು ಬ್ರಹ್ಮದಲ್ಲಿಯೇ ಇರುತ್ತಿರುವರು.

(ಭಾಷ್ಯ)

೩೫೩ ಇಹೈವ ಜೀವದ್ಭಿರೇವ ತೈಃ ಸಮದರ್ಶಿಭಿಃ ಪಣ್ಡಿತೈಃ ಜಿತಃ ವಶೀಕೃತಃ ಸರ್ಗಃ ಜನ್ಮ ಯೇಷಾಂ ಸಾಮ್ಯೇ ಸರ್ವಭೂತೇಷು ಬ್ರಹ್ಮಣಿ[1] ಸಮಭಾವೇ ಸ್ಥಿತಂ ನಿಶ್ಚಲೀಭೂತಂ ಮನಃ ಅನ್ತಃಕರಣಮ್ । ನಿರ್ದೋಷಂ ಯದ್ಯಪಿ ದೋಷವತ್ಸು ಶ್ವಪಾಕಾದಿಷು ಮೂಢೈಃ ತದ್ದೋಷೈಃ ದೋಷವದಿವ ವಿಭಾವ್ಯತೇ ತಥಾಪಿ ತದ್ದೋಷೈಃ ಅಸ್ಪೃಷ್ಟಮ್[2] ಇತಿ ನಿರ್ದೋಷಂ ದೋಷವರ್ಜಿತಂ ಹಿ ಯಸ್ಮಾತ್ । ನಾಪಿ ಸ್ವಗುಣಭೇದಭಿನ್ನಮ್ । ನಿರ್ಗುಣತ್ವಾತ್ ಚೈತನ್ಯಸ್ಯ । ವಕ್ಷ್ಯತಿ ಚ ಭಗವಾನ್ ಇಚ್ಛಾದೀನಾಂ ಕ್ಷೇತ್ರಧರ್ಮತ್ವಮ್ (೧೩-೬) । "ಅನಾದಿತ್ವಾನ್ನಿರ್ಗುಣತ್ವಾತ್" (೧೩-೩೧) ಇತಿ ಚ । ನಾಪಿ ಅನ್ತ್ಯಾ ವಿಶೇಷಾಃ ಆತ್ಮನೋ ಭೇದಕಾಃ ಸನ್ತಿ । ಪ್ರತಿಶರೀರಂ ತೇಷಾಂ ಸತ್ತ್ವೇ ಪ್ರಮಾಣಾನುಪಪತ್ತೇಃ । ಅತಃ ಸಮಂ ಬ್ರಹ್ಮ ಏಕಂ ಚ । ತಸ್ಮಾದ್ ಬ್ರಹ್ಮಣ್ಯೇವ ತೇ ಸ್ಥಿತಾಃ । ತಸ್ಮಾತ್ ನ ದೋಷಗನ್ಧಮಾತ್ರಮಪಿ ತಾನ್ ಸ್ಪೃಶತಿ । ದೇಹಾದಿಸಙ್ಘಾತಾತ್ಮದರ್ಶನಾಭಾವಾತ್ ತೇಷಾಮ್ । ದೇಹಾದಿಸಙ್ಘಾತಾತ್ಮದರ್ಶನಾಭಿಮಾನವದ್ವಿಷಯಂ ತು ತತ್ ಸೂತ್ರಮ್ "ಸಮಾಸಮಾಭ್ಯಾಂ ವಿಷಮಸಮೇ ಪೂಜಾತಃ" (ಗೌ ಧ ೨-೮-೨೦) ಇತಿ ಪೂಜಾವಿಷಯತ್ವವಿಶೇಷಣಾತ್ । ದೃಶ್ಯತೇ ಹಿ ಬ್ರಹ್ಮವಿತ್ ಷಡಙ್ಗವಿತ್ ಚತುರ್ವೇದವಿತ್—ಇತಿ ಪೂಜಾದಾನಾದೌ ಗುಣವಿಶೇಷಸಮ್ಬನ್ಧಃ ಕಾರಣಮ್ । ಬ್ರಹ್ಮ ತು ಸರ್ವಗುಣ। ದೋಷಸಮ್ಬನ್ಧವರ್ಜಿತಮ್ ಇತ್ಯತಃ ಬ್ರಹ್ಮಣಿ ತೇ ಸ್ಥಿತಾಃ ಇತಿ ಯುಕ್ತಮ್ ಕರ್ಮವಿಷಯಂ ಚ "ಸಮಾಸಮಾಭ್ಯಾಮ್" (ಗೌ ಧ. ೨-೮-೨೦) ಇತ್ಯಾದಿ । ಇದಂ ತು ಸರ್ವಕರ್ಮಸಂನ್ಯಾಸವಿಷಯಂ ಪ್ರಸ್ತುತಂ "ಸರ್ವಕರ್ಮಾಣಿ ಮನಸಾ" (೫-೧೩) ಇತ್ಯಾರಭ್ಯ ಆ ಅಧ್ಯಾಯಪರಿಸಮಾಪ್ತೇಃ ॥

(ಭಾಷ್ಯಾರ್ಥ)

ಯಾರ ಮನಸ್ಸು ಎಂದರ ಅಂತಃಕರಣವು, ಸಾಮ್ಯದಲ್ಲಿ ಎಂದರೆ ಸಕಲಪ್ರಾಣಿಗಳಲ್ಲಿಯೂ ಇರುವ[3] ಬ್ರಹ್ಮದಲ್ಲಿ, ಸಮತ್ವದಲ್ಲಿ, ನಿಂತಿರುವದೋ ಅಲುಗಾಡದೆ

---

1. "ಬ್ರಹ್ಮಣಿ ಸರ್ವಭೂತೇಷು ಸಮಭಾವೇ" ಎಂದಿದ್ದರೆ ಇನ್ನೂ ಸ್ಪಷ್ಟವಾಗುತ್ತಿತ್ತು.
2 'ಅಸಂಸ್ಪೃಷ್ಟಮ್' ಮ॥ಮ್ಸೈ॥
3. ೧೩-೨೭ರ ಸೂಚನೆ.

ಇರುವದೋ ಆ ಸಮದರ್ಶಿಗಳಾದ ಪಂಡಿತರಿಂದ ಇಲ್ಲಿಯೇ ಬದುಕಿರುವಾಗಲೇ[1] ಸರ್ಗವು ಜನ್ಮವು ಜಿತವಾಗಿರುತ್ತದೆ ವಶಗೊಳಿಸಿಕೊಳ್ಳಲ್ಪಟ್ಟಿರುತ್ತದೆ. (ಹಿ) ಏಕೆಂದರೆ ದೋಷವುಳ್ಳ ಚಂಡಾಲನೇ ಮುಂತಾದವರಲ್ಲಿರುವ (ಬ್ರಹ್ಮವು) ಅವರ ದೋಷಗಳಿಂದ (ತಾನೂ) ದೋಷವುಳ್ಳದ್ದಾಗಿರುವದೆಂದು ಮೂಢರು ಎಣಿಸುತ್ತಾರಾದರೂ (ಆದರಲ್ಲಿ) ಆವರ ದೋಷಗಳ ಸೋಂಕು ಇರುವದಿಲ್ಲ. ಆದ್ದರಿಂದ (ಅದು) ನಿರ್ದೋಷವು, ಯಾವ ದೋಷವೂ ಇಲ್ಲದ್ದು (ಅದು) ತನ್ನಲ್ಲಿರುವ ಯಾವದಾದರೂ ಗುಣಗಳಿಂದ ಭಿನ್ನವಾಗಿರುವದೂ ಇಲ್ಲ. ಏಕೆಂದರೆ ಚೈತನ್ಯದಲ್ಲಿ ಯಾವ ಗುಣವೂ ಇರುವದಿಲ್ಲ.[2] ಇಚ್ಛೆಯೇ ಮುಂತಾದದ್ದು ಕ್ಷೇತ್ರದ ಧರ್ಮಗಳೆಂದು (ಭಗವಂತನು) ಮುಂದ (೧೩-೬) ಹೇಳಿಯೂ ಇರುತ್ತಾನೆ "ಅನಾದಿಯಾಗಿರುವದರಿಂದಲೂ ನಿರ್ಗುಣನಾಗಿರುವದರಿಂದಲೂ (ಪರಮಾತ್ಮನು ಶರೀರದಲ್ಲಿದ್ದರೂ ದೋಷದ ಸೋಂಕಿಲ್ಲದವನಾಗಿರುವನು ೧೩-೩೧) ಎಂದೂ ಹೇಳಿರುತ್ತಾನೆ. ಆತ್ಮನಲ್ಲಿ ಭೇದವನ್ನು ಏರ್ಪಡಿಸುವ **ಅಂತ್ಯ ವಿಶೇಷಗಳೂ** ಇರುವದಿಲ್ಲ, ಏಕೆಂದರೆ ಒಂದೊಂದು ಶರೀರದಲ್ಲಿಯೂ ಆ (ವಿಶೇಷಗಳು) ಇರುತ್ತವೆ ಎಂಬುದಕ್ಕೆ ಯಾವ ಪ್ರಮಾಣವೂ ಹೊಂದುವದಿಲ್ಲ[3] ಆದ್ದರಿಂದ ಬ್ರಹ್ಮವು ಸಮವಾಗಿರುತ್ತದೆ, ಎಂದರೆ ಒಂದೇ ಆಗಿರುತ್ತದೆ ಆದ್ದರಿಂದ ಅವರು ಬ್ರಹ್ಮದಲ್ಲಿಯೇ ಇರುತ್ತಿರುವರು.

---

1 ಜ್ಞಾನಿಗಳ ದೃಷ್ಟಿಯಲ್ಲಿ ಜನ್ಮವೆಂಬುದೇ ಇಲ್ಲ, ಎಲ್ಲವೂ ಜನ್ಮರಹಿತವಾದ ಬ್ರಹ್ಮವೇ ಆಗಿರುತ್ತದೆ ಆದ್ದರಿಂದ ಆವರು ಬದುಕಿರುವಾಗಲೇ ಜನ್ಮವನ್ನು ಗೆದ್ದವರು

2. ಯಾವ ದೋಷವೂ ಇಲ್ಲ ಎಂಬಲ್ಲಿ ಗುಣಗಳು ಉಂಟೆಂದು ಅರ್ಥವಲ್ಲ. ಗುಣವಾಗಲಿ ದೋಷವಾಗಲಿ ಯಾವದೂ ಇರುವದಿಲ್ಲ. ಚೈತನ್ಯರೂಪವಾಗಿರುವ ಬ್ರಹ್ಮವು ಎಲ್ಲವನ್ನೂ ವಿಷಯೀಕರಿಸಿಕೊಂಡು ಬೆಳಗುತ್ತಿರುವದರಿಂದ ವಿಷಯದ ಗುಣವಾಗಲಿ ದೋಷವಾಗಲಿ ಬ್ರಹ್ಮಕ್ಕೆ ತಗಲುವಂತಿಲ್ಲ.

3. ಪರಮಾಣು, ಆಕಾಶ, ಕಾಲ, ದಿಕ್ಕು, ಆತ್ಮ, ಮನಸ್ಸು—ಎಂಬ ನಿತ್ಯವಸ್ತುಗಳನ್ನು ಬೇರ್ಪಡಿಸಿ ತಿಳಿಸುವದಕ್ಕೆ ಅಂತ್ಯವಿಶೇಷವೆಂಬ ಪದಾರ್ಥವನ್ನು ವೈಶೇಷಿಕರು ಕಲ್ಪಿಸಿರುತ್ತಾರೆ. ಪರಮಾಣುಗಳೂ, ಆತ್ಮರೂ, ಮನಸ್ಸುಗಳೂ ಅನಂತವಾಗಿರುವದರಿಂದ ವಿಶೇಷಗಳೂ ಅನಂತವೆಂದು ಅವರ ಭಾವನೆ. ಆದರೆ ಆತ್ಮನು ಎಲ್ಲಾ ಶರೀರದಲ್ಲಿಯೂ ಒಬ್ಬನೇ ಎಂಬ ಶಾಸ್ತ್ರಕ್ಕೆ ಆ ಕಲ್ಪನೆ ವಿರುದ್ಧವಾಗಿದೆ. ಪ್ರತ್ಯಕ್ಷದಿಂದ ಆತ್ಮನಾಗಲಿ ವಿಶೇಷವಾಗಲಿ ತಿಳಿಯುಬರುವದಿಲ್ಲ. ಆತ್ಮರು ಅನೇಕರೆಂದು ಒಪ್ಪಿಕೊಂಡಹೊರತು ವಿಶೇಷಗಳನ್ನು ಅನುಮಾನದಿಂದಲೂ ಕಲ್ಪಿಸುವದಕ್ಕೆ ಆಗುವದಿಲ್ಲ. ಆದ್ದರಿಂದ ವಿಶೇಷಸಿದ್ಧಿಗೆ ಯಾವ ಪ್ರಮಾಣವೂ ಇಲ್ಲ.

ಆದ್ದರಿಂದ ದೋಷದ ಕಂಪು ಕೂಡ ಅವರನ್ನು ಸೋಂಕದು. ಏಕೆಂದರೆ ಅವರಿಗೆ ದೇಹವೇ ಮುಂತಾದವುಗಳ ಗುಂಪೇ ತಾವೆಂಬ ತಿಳಿವಳಿಕೆ ಇರುವದಿಲ್ಲ. "ಸಮಾಸಮಾಭ್ಯಾಮ್" (ಸಮಾಸಮರನ್ನು ವಿಷಮಸಮಭಾವದಿಂದ ಪೂಜಿಸುವದರಿಂದ ಅಭೋಜ್ಯಾನ್ನರಾಗುವರು) ಎಂಬ ಈ ಸೂತ್ರವಾದರೋ ದೇಹವೇ ಮುಂತಾದವುಗಳ ಗುಂಪೇ ತಾವೆಂದು (ತಿಳಿಯುವ) ಅಭಿಮಾನವುಳ್ಳವರ ವಿಷಯದಲ್ಲಿ (ಹೇಳಿದ್ದಾಗಿದೆ), ಏಕೆಂದರೆ (ಅದರಲ್ಲಿ) 'ಪೂಜಿಸುವದರಿಂದ' ಎಂಬ ಪೂಜಾವಿಷಯವಾದ ವಿಶೇಷಣವಿರುತ್ತದೆ[1] ಗೌರವಿಸುವದು, ದಾನಮಾಡುವದು ಮುಂತಾದ (ಸಂದರ್ಭ)ಲ್ಲಿ ಬ್ರಹ್ಮವನ್ನು ಬಲ್ಲವನು[2], ಆರು ಅಂಗಗಳನ್ನು ಬಲ್ಲವನು, ನಾಲ್ಕು ವೇದಗಗಳನ್ನೂ ಬಲ್ಲವನು-ಎಂದು ಬೇರ ಬೇರೆಯ ಗುಣದ ಸಂಬಂಧವು ಕಾರಣವೆಂದು ಕಂಡುಬಂದಿದೆಯಲ್ಲವೆ?[3] ಆದರೆ ಬ್ರಹ್ಮದಲ್ಲಿ ಯಾವ ಗುಣವಾಗಲಿ ದೋಷವಾಗಲಿ ಸೇರಿರುವದಿಲ್ಲ ಆದ್ದರಿಂದ ಅವರು[4] ಬ್ರಹ್ಮದಲ್ಲಿಯೇ ಇರುವರು ಎಂಬುದು ಯುಕ್ತವಾಗಿರುತ್ತದೆ[5] ಇದೂ ಅಲ್ಲದೆ "ಸಮಾಸಮಾಭ್ಯಾಮ್" (ಗೌ. ಧ. ೨-೮-೨೦) ಎಂದು ಮುಂತಾಗಿ (ಹೇಳಿರುವದು)ಕರ್ಮದ ವಿಷಯವಾಗಿ, (ಈಗ)ಪ್ರಸ್ತಾಪಿಸಿರುವ "ಸರ್ವ ಕರ್ಮಾಣಿ ಮನಸಾ" (೫-೧೩) ಎಂಬಲ್ಲಿಂದ ಹಿಡಿದು (ಈ) ಅಧ್ಯಾಯದ ಕೊನೆಯುವರೆಗೂ (ಹೇಳುತ್ತಿರುವ) ಈ (ಉಪದೇಶ) ವಾದರೋ ಸರ್ವಕರ್ಮಸಂನ್ಯಾಸದ ವಿಷಯವಾಗಿರುತ್ತದೆ.[6] (ಆದ್ದರಿಂದಲೂ ಹೀಗೆಂದು ತಿಳಿಯಬೇಕು.)

೩೫೪ ಯಸ್ಮಾತ್ ನಿರ್ದೋಷಂ ಸಮಂ ಬ್ರಹ್ಮ ಆತ್ಮಾ ತಸ್ಮಾತ್ :—

---

1. ಅದು ಜ್ಞಾನದ ವಿಷಯದ ಮಾತಲ್ಲ.

2. ಇಲ್ಲಿ ಬ್ರಹ್ಮವೆಂದರೆ ವೇದವು

3. ಒಂದು ವೇದವನ್ನು ಮಾತ್ರ ಬಲ್ಲವನಿಗಿಂತ ಆರು ಅಂಗಗಳೊಡನೆ ವೇದಾಧ್ಯಯನವನ್ನು ಮಾಡಿರುವಾತನು ಹೆಚ್ಚು ಗೌರವಕ್ಕೆ ಪಾತ್ರನು, ನಾಲ್ಕು ವೇದಗಳನ್ನು ಹಾಗೆ ಅಧ್ಯಯನ ಮಾಡಿರುವಾತನು ಇನ್ನೂ ಪೂಜ್ಯನು-ಎಂದೆಣಿಸಬೇಕೆಂದು ಶಾಸ್ತ್ರದಲ್ಲಿ ಹೇಳಿರುವದೂ ಶಿಷ್ಟರು ಹಾಗೆಯೇ ಮಾಡುವದೂ ಕಂಡುಬಂದಿದೆ.

4. ಸಮದರ್ಶಿಗಳು.

5. ಅದ್ವಿತೀಯವಾದ ಬ್ರಹ್ಮವನ್ನು ಬಲ್ಲವರು ಅದ್ವಿತೀಯರೂಪವಾಗಿಯೇ ಇರುತ್ತಾರೆ; ಆದ್ದರಿಂದ ಅವರಿಗೆ ದೋಷವೆಂಬ ಎರಡನೆಯ ವಸ್ತುವಿನ ಸೋಂಕಿರುವದಿಲ್ಲ.

6. ಕರ್ಮವಿಷಯದಲ್ಲಿ ಹೇಳಿರುವ ಉಪದೇಶವು ಕರ್ಮವನ್ನು ತ್ಯಜಿಸುವ ಸಂನ್ಯಾಸಿಗಳಿಗೆ ಎಂದಿಗೂ ಹೊಂದಲಾರದು.

ಸಮವಾಗಿರುವ ಬ್ರಹ್ಮವು ಎಂದರೆ ಆತ್ಮನು ನಿರ್ದೋಷವಾಗಿರುವದಷ್ಟೆ? ಆದ್ದರಿಂದ—

**ನ ಪ್ರಹೃಷ್ಯೇತ್ ಪ್ರಿಯಂ ಪ್ರಾಪ್ಯ ನೋದ್ವಿಜೇತ್ ಪ್ರಾಪ್ಯ ಚಾಪ್ರಿಯಮ್।**
**ಸ್ಥಿರಬುದ್ಧಿರಸಮ್ಮೂಢೋ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ ॥ ೨೦ ॥**
**ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿನ್ದತ್ಯಾತ್ಮನಿ ಯತ್ ಸುಖಮ್ ।**
**ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯ ಮಶ್ನುತೇ ॥ ೨೧ ॥**

೨೦-೨೧. ಪ್ರಿಯವಾದದ್ದನ್ನು ಪಡೆದರೆ ಹಿಗ್ಗಬಾರದು, ಅಪ್ರಿಯವಾದದ್ದನ್ನು ಪಡೆದರೆ ತಗ್ಗಬಾರದು; ಸ್ಥಿರಬುದ್ಧಿಯಾಗಿ ಅಸಂಮೂಢನಾಗಿ ಬ್ರಹ್ಮವನ್ನು ತಿಳಿದು ಬ್ರಹ್ಮದಲ್ಲಿಯೇ ಇರುವಾತನು, ಬಾಹ್ಯಸ್ಪರ್ಶಗಳಲ್ಲಿ ಅನಕ್ತಾತ್ಮನಾಗಿ ಸುಖವೆಂಬುದು ಯಾವದೋ ಅದನ್ನು ಆತ್ಮನಲ್ಲಿಯೇ ಪಡೆದುಕೊಳ್ಳುತ್ತಾನೆ. ಬ್ರಹ್ಮಯೋಗದಿಂದ ಕೂಡಿದ ಆತ್ಮವುಳ್ಳ ಆತನು ಅಕ್ಷಯವಾದ ಸುಖವನ್ನು ಹೊಂದುತ್ತಾನೆ.

(ಭಾಷ್ಯ)

೩೫೩ ನ ಪ್ರಹೃಷ್ಯೇತ್ ಪ್ರಹರ್ಷಂ ನ ಕುರ್ಯಾತ್ ಪ್ರಿಯಮ್ ಇಷ್ಟಂ ಪ್ರಾಪ್ಯ ಲಬ್ಧ್ವಾ । ನ ಉದ್ವಿಜೇತ್ ಪ್ರಾಪ್ಯ ಚ ಅಪ್ರಿಯಮ್ ಅನಿಷ್ಟಂ ಲಬ್ಧ್ವಾ । ದೇಹಮಾತ್ರಾತ್ಮದರ್ಶಿನಾಂ ಹಿ ಪ್ರಿಯಾಪ್ರಿಯಪ್ರಾಪ್ತೀ ಹರ್ಷವಿಷಾದೌ ಕುರ್ವಾತೇ[1] ನ ಕೇವಲಾತ್ಮದರ್ಶಿನಃ । ತಸ್ಯ ಪ್ರಿಯಾಪ್ರಿಯಪ್ರಾಪ್ತ್ಯಸಂಭವಾತ್ । ಕಿಂಚ ಸರ್ವಭೂತೇಷು ಏಕಃ ಸಮಃ ನಿರ್ದೋಷಃ ಆತ್ಮಾ ಇತಿ ಸ್ಥಿರಾ ನಿರ್ವಿಚಿಕಿತ್ಸಾ ಬುದ್ಧಿಃ ಯಸ್ಯ ಸಃ ಸ್ಥಿರಬುದ್ಧಿಃ ಅಸಂಮೂಢಃ ಸಂಮೋಹವರ್ಜಿತಶ್ಚ ಸ್ಯಾತ್ ಯಥೋಕ್ತ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ ಅಕರ್ಮಕೃತ್ ಸರ್ವಕರ್ಮಸಂನ್ಯಾಸೀ ಇತ್ಯರ್ಥಃ ॥

(ಭಾಷ್ಯಾರ್ಥ)

ಪ್ರಿಯವಾದದ್ದನ್ನು ಪಡೆದರೆ ತನಗೆ ಬೇಕಾದದ್ದು ಸಿಕ್ಕಿದರೆ ಹಿಗ್ಗಲಾರನು; ಅಪ್ರಿಯವಾದದ್ದನ್ನು ಪಡೆದರೆ, ಬೇಡವಾದದ್ದು ಒದಗಿದರ ತಗ್ಗಲಾರನು. ದೇಹವೇ ಆತ್ಮನೆಂದು ತಿಳಿದವರಿಗೇ, ಪ್ರಿಯಾಪ್ರಿಯಗಳು ಬಂದರೆ ಹಿಗ್ಗುತಗ್ಗುಗಳನ್ನುಂಟು ಮಾಡುವವೇ ಹೊರತು ಆತ್ಮನೊಬ್ಬನೇ (ಸತ್ಯವೆಂದು) ಕಂಡುಕೊಂಡಾತನಿಗೆ

1 'ಹರ್ಷವಿಷಾದಸ್ಥಾನೇ' ನಿ||ಗು||

(ಉಂಟು)ಮಾಡಲಾರವು. ಏಕೆಂದರೆ ಅವನಿಗೆ ಪ್ರಿಯಾಪ್ರಿಯಗಳು ಬಂದೊದಗುವ ಸಂಭವವೇ ಇರುವದಿಲ್ಲ.[1] ಮತ್ತು ಸಕಲ ಪ್ರಾಣಿಗಳಲ್ಲಿಯೂ ಸಮನಾಗಿಯೂ ದೋಷವಿಲ್ಲದವನಾಗಿಯೂ ಇರುವ ಒಬ್ಬನೇ ಆತ್ಮನಿರುವನೆಂದು ಸ್ಥಿರವಾದ ಯಾವ ಸಂಶಯವೂ ಇಲ್ಲದ ಬುದ್ಧಿಯುಳ್ಳವನು ಸ್ಥಿರಬುದ್ಧಿಯು, (ಅಂಥ ಸ್ಥಿರಬುದ್ಧಿಯಾಗಿ) ಅಸಂಮೂಢನಾಗಿ ಯಾವ ಮೋಹವೂ ಇಲ್ಲದವನಾಗಿರುತ್ತಾನೆ. ಮೇಲೆ ಹೇಳಿದಂಥ ಬ್ರಹ್ಮವನ್ನು ಅರಿತು ಬ್ರಹ್ಮದಲ್ಲಿ ನಿಂತಿರುವವನು, ಎಂದರೆ ಯಾವ ಕರ್ಮವನ್ನೂ ಮಾಡದ ಸರ್ವಕರ್ಮಸಂನ್ಯಾಸಿಯು (ಹೀಗಿ)ರುವನು ಎಂದರ್ಥ.

(ಭಾಷ್ಯ)

೩೫೬. ಕಿಂಚ ಬ್ರಹ್ಮಣಿ ಸ್ಥಿತಃ ಬಾಹ್ಯಸ್ಪರ್ಶೇಷು ಬಾಹ್ಯಾಶ್ಚ ತೇ ಸ್ಪರ್ಶಾಶ್ಚ ಬಾಹ್ಯಸ್ಪರ್ಶಾಃ । ಸ್ಪೃಶ್ಯನ್ತೇ ಇತಿ ಸ್ಪರ್ಶಾಃ ಶಬ್ದಾದಯಃ ವಿಷಯಾಃ । ತೇಷು ಬಾಹ್ಯಸ್ಪರ್ಶೇಷು ಅಸಕ್ತಃ ಆತ್ಮಾ ಅನ್ತಃಕರಣಮ್ ಯಸ್ಯ ಸೋಽಯಮ್ ಅಸಕ್ತಾತ್ಮಾ ವಿಷಯೇಷು ಪ್ರೀತಿವರ್ಜಿತಃ ಸನ್ ವಿನ್ದತಿ ಲಭತೇ, ಆತ್ಮನಿ ಯತ್ ಸುಖಂ ತತ್ ವಿನ್ದತಿ ಇತ್ಯೇತತ್ । ಸಃ ಬ್ರಹ್ಮಯೋಗಯುಕ್ತಾತ್ಮಾ ಬ್ರಹ್ಮಣಿ ಯೋಗಃ ಸಮಾಧಿಃ ಬ್ರಹ್ಮಯೋಗಃ ತೇನ ಬ್ರಹ್ಮಯೋಗೇನ ಯುಕ್ತಃ ಸಮಾಹಿತಃ ತಸ್ಮಿನ್ ವ್ಯಾಪೃತಃ ಆತ್ಮಾ ಅನ್ತಃಕರಣಂ ಯಸ್ಯ ಸಃ ಬ್ರಹ್ಮಯೋಗಯುಕ್ತಾತ್ಮಾ ಸುಖಮ್ ಅಕ್ಷಯ್ಯಮ್ ಅಶ್ನುತೇ ವ್ಯಾಪ್ನೋತಿ । ತಸ್ಮಾತ್ ಬಾಹ್ಯವಿಷಯಪ್ರೀತೇಃ ಕ್ಷಣಿಕಾಯಾಃ ಇನ್ದ್ರಿಯಾಣಿ ನಿವರ್ತಯೇತ್ ಆತ್ಮನಿ ಅಕ್ಷಯಸುಖಾರ್ಥೀ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು (ಹೀಗೆ) ಬ್ರಹ್ಮದಲ್ಲಿಯೇ ಇರುವಾತನು **ಬಾಹ್ಯಸ್ಪರ್ಶಗಳಲ್ಲಿ** ಹೊರಗಿರುವ ಸ್ಪರ್ಶಗಳು ಬಾಹ್ಯಸ್ಪರ್ಶಗಳೆನಿಸುವವು. (ಇಂದ್ರಿಯಗಳಿಂಧ) ಮುಟ್ಟಿ (ಅರಿಯ)ಬೇಕಾಗಿರುವದರಿಂದ ಶಬ್ದಾದಿಗಳಾದ ವಿಷಯಗಳು **ಸ್ಪರ್ಶ**ಗಳೆನಿಸಿರುವವು; ಆ ಬಾಹ್ಯಸ್ಪರ್ಶಗಳಲ್ಲಿ–ಆಸಕ್ತಿಯಿಲ್ಲದ ಆತ್ಮವು ಅಂತಃಕರಣವು ಇವನಿಗೆ ಇರುವದರಿಂದ ಇವನು ಅಸಕ್ತಾತ್ಮನು. (ಅಸಕ್ತಾತ್ಮನಾಗಿ), ವಿಷಯಗಳಲ್ಲಿ ಪ್ರೇಮವಿಲ್ಲದವನಾಗಿ 'ವಿನ್ದತಿ' ಪಡೆಯುತ್ತಾನೆ, ಸುಖವೆಂಬುದು ಯಾವದೋ ಅದನ್ನು ಆತ್ಮನಲ್ಲಿಯೇ ಪಡೆದುಕೊಳ್ಳುತ್ತಾನೆ ಎಂದರ್ಥ. ಆ ಬ್ರಹ್ಮಯೋಗಯುಕ್ತಾತ್ಮನು–ಬ್ರಹ್ಮದಲ್ಲಿ (ಮಾಡುವ) ಯೋಗವು, ಎಂದರೆ ಮನಸ್ಸನ್ನು ನಿಲ್ಲಿಸಿಕೊಳ್ಳುವದು, ಬ್ರಹ್ಮ

---

1. ಛಾ. ೬-೧೨-೧.

**ಯೋಗವು;** ಆ ಬ್ರಹ್ಮಯೋಗದಿಂದ ಯುಕ್ತವಾದ ಎಂದರೆ ನಿಂತಿರುವ ಅದರಲ್ಲಿಯೇ ಕೆಲಸಮಾಡುತ್ತಿರುವ ಅಂತಃಕರಣವುಳ್ಳ ಆತನು–ಅಕ್ಷಯವಾದ ಸುಖವನ್ನು ಹೊಂದುತ್ತಾನೆ. **ಆದ್ದರಿಂದ ಆತ್ಮನಲ್ಲಿರುವ ಅಕ್ಷಯಸುಖವನ್ನು ಬಯಸುವಾತನು ಹೊರಗಿನ ವಿಷಯಗಳಿಂದಾಗುವ ಕ್ಷಣಿಕಸುಖದಿಂದ ಇಂದ್ರಿಯಗಳನ್ನು ಹಿಮ್ಮೆಟ್ಟಿಸಿಕೊಳ್ಳಬೇಕು–ಎಂದರ್ಥ.**[1]

(ಭಾಷ್ಯ)

೩೫೭ ಇತಶ್ಚ ನಿವರ್ತಯೇತ್—

(ಭಾಷ್ಯಾರ್ಥ)

ಈ (ಕಾರಣ)ದಿಂದಲೂ (ಇಂದ್ರಿಯಗಳನ್ನು) ಹಿಮ್ಮೆಟ್ಟಿಸಿಕೊಳ್ಳಬೇಕು.—

**ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।**
**ಆದ್ಯನ್ತವನ್ತಃ ಕೌನ್ತೇಯ ನ ತೇಷು ರಮತೇ ಬುಧಃ ॥೨೨॥**

೨೨. ಎಲೈ ಕೌಂತೇಯನೆ, ಯಾವ ಭೋಗಗಳು ಸಂಸ್ಪರ್ಶದಿಂದ ಉಂಟಾಗುವವೋ ಅವು ದುಃಖಯೋನಿಗಳೇ (ಆಗಿರುವವು), ಆದ್ಯಂತವುಳ್ಳವುಗಳಾಗಿರುವವು. ತಿಳಿದವನು ಅವುಗಳಲ್ಲಿ ರತನಾಗಿರುವದಿಲ್ಲ.

(ಭಾಷ್ಯ)

೩೫೮. ಯೇ ಹಿ ಯಸ್ಮಾತ್ ಸಂಸ್ಪರ್ಶಜಾಃ ವಿಷಯೇನ್ದ್ರಿಯಸಂಸ್ಪರ್ಶೇಭ್ಯೋ ಜಾತಾಃ ಭೋಗಾಃ ಭುಕ್ತಯಃ ದುಃಖಯೋನಯ ಏವ ತೇ ಅವಿದ್ಯಾಕೃತತ್ವಾತ್ । ದೃಶ್ಯನ್ತೇ ಹಿ ಆಧ್ಯಾತ್ಮಿಕಾದೀನಿ ದುಃಖಾನಿ ತನ್ನಿಮಿತ್ತಾನ್ಯೇವ । ಯಥಾ ಇಹಲೋಕೇ ತಥಾ ಪರಲೋಕೇಽಪಿ ಇತಿ ಗಮ್ಯತೇ ಏವಶಬ್ದಾತ್ । ನ ಸಂಸಾರೇ ಸುಖಸ್ಯ ಗನ್ಧಮಾತ್ರಮಪಿ ಅಸ್ತಿ ಇತಿ ಬುದ್ಧ್ವಾ ವಿಷಯಮೃಗತೃಷ್ಣಿಕಾಯಾ ಇನ್ದ್ರಿಯಾಣಿ ನಿವರ್ತಯೇತ್ । ನ ಕೇವಲಂ ದುಃಖಯೋನಯ ಏವ ಆದ್ಯನ್ತವನ್ತಶ್ಚ । ಆದಿಃ ವಿಷಯೇನ್ದ್ರಿಯಸಂಯೋಗಃ ಭೋಗಾನಾಮ್। ಅನ್ತಶ್ಚ ತದ್ವಿಯೋಗ ಏವ ।

---

1. ಇಲ್ಲಿ ಬ್ರಹ್ಮನಿಷ್ಠನಾದ ತನ್ನ ಸ್ವರೂಪದಲ್ಲಿ ನೆಲೆನಿಂತಿರುವದರಿಂದಲೇ ಸುಖವನ್ನು ಪಡೆದುಕೊಳ್ಳುತ್ತಾನೆ ಎಂದಿರುವದು ಸಾಧಕರಾದವರು ವಿಷಯವೈರಾಗ್ಯದಿಂದ ಆತ್ಮಸುಖಕ್ಕಾಗಿ ಪ್ರಯತ್ನಿಸಬೇಕೆಂದು ತಿಳಿಸುವದಕ್ಕೆ ಎಂದು ಭಾವ.

ಅತಃ ಆದ್ಯನ್ತವನ್ತಃ ಅನಿತ್ಯಾಃ ಮಧ್ಯಕ್ಷಣಭಾವಿತ್ವಾತ್ ಇತ್ಯರ್ಥಃ । ಕೌನ್ತೇಯ ನ ತೇಷು ಭೋಗೇಷು ರಮತೇ ಬುಧಃ ವಿವೇಕೀ ಅವಗತಪರಮಾರ್ಥತತ್ತ್ವಃ । ಅತ್ಯನ್ತ ಮೂಢಾನಾಮೇವ ಹಿ ವಿಷಯೇಷು ರತಿಃ ದೃಶ್ಯತೇ ಯಥಾ[1] ಪಶುಪ್ರಭೃತೀನಾಮ್ ॥

(ಭಾಷ್ಯಾರ್ಥ)

(ಹಿ) ಏಕೆಂದರೆ ಯಾವ ಭೋಗಗಳು ಅನುಭವಗಳು ಸ್ಪರ್ಶದಿಂದ ಹುಟ್ಟಿರುವವೋ ಎಂದರೆ ವಿಷಯಗಳ ಮತ್ತು ಇಂದ್ರಿಯಗಳ ಸಂಬಂಧಗಳಿಂದ ಆಗುವವೋ ಅವು ದುಃಖಯೋನಿಗಳೇ ಆಗಿರುತ್ತವೆ ಏಕೆಂದರೆ (ಅವು) ಅವಿದ್ಯೆಯಿಂದ ಆಗಿರುತ್ತವೆ ಅವುಗಳಿಂದ ಆಧ್ಯಾತ್ಮಿಕವೇ ಮುಂತಾದ[2] ದುಃಖಗಳು ಆ ನಿಮಿತ್ತದಿಂದಲೇ (ಆಗುವದು) ಕಂಡುಬಂದಿದೆಯಲ್ಲವೆ? ಇಲ್ಲಿ (ಏವ) ಏ ಎಂಬ ಮಾತು ಇರುವದರಿಂದ ಈ ಲೋಕದಲ್ಲಿ ಹೇಗೆ (ಅವು ದುಃಖಕ್ಕೆ ಕಾರಣವಾಗಿರುವವೋ) ಅದರಂತೆ ಪರಲೋಕದಲ್ಲಿಯೂ (ಆಗಿರುವವು ಎಂದು ನಿಶ್ಚಯವಾಗುತ್ತದೆ).[3] ಸಂಸಾರದಲ್ಲಿ ಸುಖದ ವಾಸನೆಯುಕೂಡ ಇರುವದಿಲ್ಲವೆಂಬುದನ್ನು ತಿಳಿದುಕೊಂಡು ವಿಷಯವೆಂಬ ಬಿಸಿಲುಕುದುರೆಯಿಂದ ಇಂದ್ರಿಯಗಳನ್ನು ಹಿಂಜಗ್ಗಬೇಕು (ಅವು) ದುಃಖಕ್ಕೆ ಕಾರಣವಾಗಿರುವವು ಎಂಬುದಿಷ್ಟೇ ಅಲ್ಲ, ಆದ್ಯಂತವುಳ್ಳವೂ ಆಗಿರುತ್ತವೆ ಭೋಗಗಳಿಗೆ ಆದಿಯು ವಿಷಯಕ್ಕೂ ಇಂದ್ರಿಯಕ್ಕೂ ಆಗುವ ಸಂಯೋಗವು; ಮತ್ತು ಅಂತವೆಂದರೆ ಅವುಗಳು (ಒಂದನ್ನು ಬಿಟ್ಟುಒಂದು) ಅಗಲುವದೇ. ಆದ್ದರಿಂದ (ಅವು) ಆದ್ಯಂತವುಳ್ಳವು. ನಡುವೆ ಎಲ್ಲಿಯೋ ಒಂದು ಕ್ಷಣವಿರುವದರಿಂದ, ಅವು ಅನಿತ್ಯವಾಗಿರುವವು[4]–ಎಂದರ್ಥ, ಎಲೈ ಕೌಂತೇಯನೆ, ಆ ಭೋಗಗಳಲ್ಲಿ ಬುಧನು ಎಂದರೆ ವಿವೇಕಿಯು, ಪರಮಾರ್ಥವನ್ನು ಮನಗಂಡಿರುವವನು ರತನಾಗಿರುವದಿಲ್ಲ. **ಅತ್ಯಂತ ಮೂಢರಾದವರಿಗೆ ಮಾತ್ರ ಪಶುಗಳೇ ಮುಂತಾದವುಗಳಿಗಿರುವಂತೆ ವಿಷಯಗಳಲ್ಲಿ ಪ್ರೀತಿಯಿರುವದು ಕಂಡುಬರುತ್ತದೆಯಲ್ಲವೆ?**[5]

---

1. ಮ|| ಮೈ|| ಗಳ ಪಾಠವಿದು.

2 ಆಧ್ಯಾತ್ಮಿಕ-ಶರೀರದಲ್ಲಿ ಆಗುವ ದುಃಖ; ಆಧಿಭೌತಿಕ-ಹೊರಗಿನ ಪ್ರಾಣಿಗಳಿಂದಾಗುವ ದುಃಖ, ಆಧಿದೈವಿಕ-ಅಂತರಿಕ್ಷದ ಸಿಡಿಲು ಮುಂತಾದವುಗಳಿಂದಾಗುವ ದುಃಖ. ಇವು ಮೂರೂ ವಿಷಯೇಂದ್ರಿಯಗಳ ಸಂಬಂಧದಿಂದ ಆಗುವವು.

3. ಲೋಕಾಂತರಗಳಲ್ಲಿ ಇವುಗಳ ಸ್ವಭಾವವು ಮಾರ್ಪಡಲಾರದು.

4. ಅವು ಅಸತ್ಯವೂ ಆಗಿರುತ್ತವೆ. ಮಾಂ. ಕಾ. ೨-೬.

5. ಅಸತ್ಯವಾದ ಅನಿತ್ಯವಾದ ಭೋಗಗಳಲ್ಲಿ ಅವಿವೇಕಿಗಳಾದ ಪಶುಗಳಿಗೆ ರತಿಯಿರುವದು ಸ್ವಾಭಾವಿಕ; ಆದ್ದರಿಂದ ಭೋಗರತರಾದವರು ಮನುಷ್ಯರಾದರೂ ಪಶುಗಳಂತೆಯೇ ಇರುವರು.

(ಭಾಷ್ಯ)

೩೫೯. ಅಯಂ ಚ ಶ್ರೇಯೋಮಾರ್ಗಪ್ರತಿಪಕ್ಷೀ ಕಷ್ಟತಮೋ ದೋಷಃ ಸರ್ವಾನರ್ಥಪ್ರಾಪ್ತಿಹೇತುಃ, ದುರ್ನಿವಾರಶ್ಚ ಇತಿ ತತ್ಪರಿಹಾರೇ ಯತ್ನಾಧಿಕ್ಯಂ ಕರ್ತವ್ಯಮ್ [1] ಇತ್ಯಾಹ ಭಗವಾನ್—

(ಭಾಷ್ಯಾರ್ಥ)

ಮತ್ತು ಇದು ಮುಕ್ತಿಯ ಹಾದಿಗೆ ಅಡ್ಡಲಾಗಿರುವ ಬಹು ಕೆಟ್ಟ ದೋಷವು ; ಇದು ಸಕಲ ಅನರ್ಥಗಳು ಬಂದೊದಗುವದಕ್ಕೂ ಕಾರಣವು, ಇದನ್ನು ತಡೆಯುವದೂ ಕಷ್ಟ, ಆದ್ದರಿಂದ ಇದನ್ನು ಪರಿಹರಿಸಿಕೊಳ್ಳುವದಕ್ಕೆ ಹೆಚ್ಚಿನ ಯತ್ನವನ್ನು ಮಾಡಬೇಕು–ಎಂದು ಭಗವಂತನು (ಈ ಮಾತನ್ನು) ಹೇಳುತ್ತಿದಾನೆ :—

**ಶಕ್ನೋತೀಹೈವ ಯಃ ಸೋಢುಂ ಪ್ರಾಕ್ ಶರೀರವಿಮೋಕ್ಷಣಾತ್ ।**
**ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ ॥೨೩॥**

೨೩. ಶರೀರದಿಂದ ಬಿಡುಗಡೆಯಾಗುವವರೆಗೂ ಪೂರ್ವದಲ್ಲಿಯೇ ಯಾವಾತನು ಕಾಮಕ್ರೋಧಗಳಿಂದಾಗುವ ವೇಗವನ್ನು ಇಲ್ಲಿಯೇ ತಡೆದುಕೊಳ್ಳಲಾಪನೋ ಅವನು ಯುಕ್ತನು, ಆ ಮನುಷ್ಯನು ಸುಖಿಯು.

(ಭಾಷ್ಯ)

೩೬೦. ಶಕ್ನೋತಿ ಉತ್ಸಹತೇ ಇಹೈವ ಜೀವನ್ನೇವ ಯಃ ಸೋಢುಂ ಪ್ರಸಹಿತುಂ ಪ್ರಾಕ್ ಪೂರ್ವಂ ಶರೀರವಿಮೋಕ್ಷಣಾತ್ ಆ ಮರಣಾತ್ ಇತ್ಯರ್ಥಃ । ಮರಣಸೀಮಾಕರಣಂ ಜೀವತಃ ಅವಶ್ಯಂಭಾವೀ ಹಿ ಕಾಮಕ್ರೋಧೋದ್ಭವಃ ವೇಗಃ, ಅನನ್ತನಿಮಿತ್ತವಾನ್ ಹಿ ಸಃ ಇತಿ । ಯಾವತ್ ಮರಣಮ್, ತಾವತ್ ನ ವಿಸ್ರಮ್ಭಣೀಯಃ ಇತ್ಯರ್ಥಃ । ಕಾಮಃ ಇನ್ದ್ರಿಯಗೋಚರಪ್ರಾಪ್ತೇ ಇಷ್ಟೇ ವಿಷಯೇ ಶ್ರೂಯಮಾಣೇ ಸ್ಮರ್ಯಮಾಣೇ ವಾ ಅನುಭೂತೇ ಸುಖಹೇತೌ ಯಾ ಗರ್ಧಿಃ [2] ತೃಷ್ಣಾ ಸ ಕಾಮಃ । ಕ್ರೋಧಶ್ಚ ಆತ್ಮನಃ ಪ್ರತಿಕೂಲೇಷು ದುಃಖಹೇತುಷು ದೃಶ್ಯಮಾನೇಷು ಶ್ರೂಯಮಾಣೇಷು ಸ್ಮರ್ಯಮಾಣೇಷು ವಾ ಯೋ ದ್ವೇಷಃ ಸ ಕ್ರೋಧಃ। ತೌ ಕಾಮಕ್ರೋಧೌ ಉದ್ಭವಃ ಯಸ್ಯ ವೇಗಸ್ಯ ಸ ಕಾಮಕ್ರೋಧೋದ್ಭವೋ ವೇಗಃ ।

---

1. ' ಅಧಿಕತರೋ ಯತ್ನಃ ಕರ್ತವ್ಯಃ ' ಮು॥ ಮೈ॥
2. ಈ ಮಾತು ಮು॥ ಮೈ॥ ಗಳಲ್ಲಿಲ್ಲ.

ರೋಮಾಞ್ಚನಪ್ರಹೃಷ್ಟನೇತ್ರವದನಾದಿಲಿಙ್ಗಃ ಅನ್ತಃಕರಣಪ್ರಕ್ಷೋಭರೂಪಃ ಕಾಮೋದ್ಭವೋ ವೇಗಃ। ಗಾತ್ರಪ್ರಕಮ್ಪಪ್ರಸ್ವೇದಸನ್ದಷ್ಟೌಷ್ಟ[1] ಪುಟರಕ್ತನೇತ್ರಾದಿಲಿಙ್ಗಃ ಕ್ರೋಧೋದ್ಭವೋ ವೇಗಃ। ತಂ ಕಾಮಕ್ರೋಧೋದ್ಭವಂ ವೇಗಂ ಯ ಉತ್ಸಹತೇ ಪ್ರಸಹತೇ ಸೋಢುಂ ಪ್ರಸಹಿತುಂ ಸ ಯುಕ್ತಃ ಯೋಗೀ ಸುಖೀ ಚ ಇಹ ಲೋಕೇ ನರಃ ||

(ಭಾಷ್ಯಾರ್ಥ)

ಇಲ್ಲಿಯೇ ಎಂದರೆ ಬದುಕಿರುವಾಗಲೇ ಮೊದಲು ಮುಂಚೆಯೇ[2] ಶರೀರದಿಂದ ಬಿಡುವವರೆಗೂ ಮರಣವಾಗುವವರೆಗೂ[3] ಎಂದರ್ಥ (ಮರಣವಾಗುವವರೆಗೂ ಎಂದು) ಸಾವನ್ನೇ ಅವಧಿಯಾಗಿಟ್ಟುಕೊಂಡು (ಹೇಳಿರುವ)ದೇಕೆಂದರೆ **ಬದುಕಿರುವವನಿಗೆ ಕಾಮಕ್ರೋಧಗಳಿಂದಾಗುವ ವೇಗವು ಅವಶ್ಯವಾಗಿ ಆಗಿಯೇ ತೀರುವದು, ಏಕೆಂದರೆ ಅದಕ್ಕೆ ಲೆಕ್ಕವಿಲ್ಲದಷ್ಟು ಕಾರಣಗಳಿರುವವು.**-ಎಂಬ ಅಭಿಪ್ರಾಯದಿಂದ ಸಾಯುವವರೆಗೂ (ಇದನ್ನು) ನೆಚ್ಚಕೂಡದು ಎಂದರ್ಥ. ಕಾಮವೂ ತನಗೆ ಇಷ್ಟವಾದ ಸುಖಕ್ಕೆ ಕಾರಣವಾಗಿ ಹಿಂದೆ ಅನುಭವಿಸಿರುವ ವಿಷಯವು ಇಂದ್ರಿಯಕ್ಕೆ ಗೋಚರವಾದರೆ, ಅಥವಾ (ಅದರ ವಿಷಯವು) ಕಿವಿಗೆ ಬಿದ್ದರೆ, ಅಥವಾ (ಅದು) ನೆನಪಿಗೆ ಬಂದರೆ, ಯಾವ ಬಯಕೆಯು ಹಂಬಲಿಕೆಯು ಉಂಟಾಗುವದೋ ಅದು ಕಾಮವು, (ಅದೂ) ಮತ್ತು ಕ್ರೋಧವೂ-ತನಗೆ ಬೇಡದ ದುಃಖಕ್ಕೆ ಕಾರಣವಾದ ವಸ್ತುಗಳು ಕಣ್ಣಿಗೆ ಬಿದ್ದರೆ, ಕಿವಿಗೆ ಬಿದ್ದರೆ, ಅಥವಾ ನೆನಪಿಗೆ ಬಂದರೆ (ಅವುಗಳಲ್ಲಿ) ಯಾವ ಹಗೆತನವುಂಟಾಗುವದೋ ಅದು ಕ್ರೋಧವು, (ಅದೂ) (ಕಾಮವೂ ಕ್ರೋಧವೂ) ಕಾಮಕ್ರೋಧಗಳು ಯಾವ ವೇಗಕ್ಕೆ ಹುಟ್ಟುವ (ಕಾರಣ)ಗಳೋ ಅದು ಕಾಮಕ್ರೋಧೋದ್ಭವವೇಗವು. ಮೈಗೂದಲು ನೆಟ್ಟಗಾಗುವದು, ಅರಳಿದ ಕಣ್ಣು, ಮುಖ-ಮುಂತಾದ ಗುರುತುಗಳಿಂದ ಗೊತ್ತಾಗುವ ಅಂತಃಕರಣದ ಹೊಯ್ದಾಟವೇ **ಕಾಮೋದ್ಭವವೇಗವು** ಮೈ ನಡುಗುವದು, ಮೈ ಬೆವರುವದು, ತುಟಿ ಕಚ್ಚುವದು, ಕಣ್ಣು ಕೆಂಪೇರುವದು-ಮುಂತಾದ ಗುರುತುಗಳಿಂದ ಗೊತ್ತಾಗುವ (ಅಂತಃಕರಣದ ಹೊಯ್ದಾಟವೇ) **ಕ್ರೋಧೋದ್ಭವವೇಗವು**. ಆ ಕಾಮಕ್ರೋಧೋದ್ಭವವೇಗವನ್ನು ಯಾವಾತನು (ಬದುಕಿರುವಾಗಲೇ) ಸಹಿಸುವದಕ್ಕೆ ತಡೆದುಕೊಳ್ಳು

---

1. 'ಸಂದಷ್ಟೋಷ್ಠಪುರ' ಮ|| ಪ್ರೈ||
2 ವೇಗವು ಅನರ್ಥಕಾರಿಯಾಗುವ ಮೊದಲೇ.
3. ಕ. ೨-೩-೪ನ್ನು ನೋಡಿ.

ವದಕ್ಕೆ ಶಕ್ತನಾಗಿರುವನೋ ಬಲ್ಲವನಾಗಿರುವನೋ ಅವನು **ಯುಕ್ತನು,** ಯೋಗಿಯು, ಇಲ್ಲಿ ಎಂದರೆ ಈ ಲೋಕದಲ್ಲಿ ಅವನೇ ಸುಖಿಯಾದ ಮನುಷ್ಯನು.

(ಭಾಷ್ಯ)

೩೬೧. ಕಥಂಭೂತಶ್ಚ ಬ್ರಹ್ಮಣಿ ಸ್ಥಿತೋ ಬ್ರಹ್ಮ ಪ್ರಾಪ್ನೋತಿ ? ಇತ್ಯಾಹ ಭಗವಾನ್—

(ಭಾಷ್ಯಾರ್ಥ)

ಬ್ರಹ್ಮದಲ್ಲಿರುವಾತನು ಮತ್ತೂ ಹೇಗಿರುವವನಾಗಿ ಬ್ರಹ್ಮವನ್ನು ಪಡೆಯು ವನು ?–ಎಂದರೆ ಭಗವಂತನು ಹೇಳುತ್ತಾನೆ :—

**ಯೋಽನ್ತಃಸುಖೋಽನ್ತರಾರಾಮಸ್ತಥಾನ್ತರ್ಜ್ಯೋತಿರೇವ ಯಃ ।**
**ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥ ೨೪ ॥**

೨೪. ಯಾವನು ಅಂತಃಸುಖನಾಗಿರುವನೋ ಹಾಗೂ ಅಂತರಾರಾಮನಾಗಿರುವನೋ ಅಂತರ್ಜ್ಯೋತಿಯಾಗಿರುವನೋ ಆ ಯೋಗಿಯು ಬ್ರಹ್ಮಭೂತನಾಗಿ ಬ್ರಹ್ಮನಿರ್ವಾಣವನ್ನು ಪಡೆಯುವನು

(ಭಾಷ್ಯ)

೩೬೨. ಯಃ ಅನ್ತಃಸುಖಃ[1] ಅನ್ತಃ ಆತ್ಮನಿ ಸುಖಂ ಯಸ್ಯ ಸೋಽನ್ತಃಸುಖಃ । ತಥಾ ಅನ್ತರೇವ ಆತ್ಮನಿ ಆರಾಮಃ ಆರಮಣಮ್[2] ಕ್ರೀಡಾ ಯಸ್ಯ ಸಃ ಅನ್ತರಾರಾಮಃ । ತಥೈವ ಅನ್ತರೇವ ಆತ್ಮನ್ಯೇವ ಜ್ಯೋತಿಃ ಪ್ರಕಾಶಃ ಯಸ್ಯ ಸಃ ಅನ್ತರ್ಜ್ಯೋತಿರೇವ । ಯ ಈದೃಶಃ ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಣಿ ನಿರ್ವೃತಿಂ ಮೋಕ್ಷಮ್ ಇಹ ಜೀವನ್ನೇವ ಬ್ರಹ್ಮಭೂತಃ ಸನ್ ಅಧಿಗಚ್ಛತಿ ಪ್ರಾಪ್ನೋತಿ ॥

(ಭಾಷ್ಯಾರ್ಥ)

ಯಾವನು ಅಂತಃಸುಖನೋ-ಒಳಗೆ ಆತ್ಮನಲ್ಲಿಯೇ ಸುಖವುಳ್ಳವನು[3] ಅಂತಃಸುಖನು, (ಅಂಥವನೋ)- ಮತ್ತು ಒಳಗೇ ಎಂದರೆ ಆತ್ಮನಲ್ಲಿಯೇ ಆರಾಮವು

---

1. ಈ ಮಾತು ಮ॥ ವ್ಯಾ॥ ಗಳಲ್ಲಿಲ್ಲ.
2. ಈ ಮಾತು ನಿ॥ ಗು॥ ಗಳಲ್ಲಿಲ್ಲ.
3. ತೈ. ೨-೭ (ಭಾ. ಭಾ. ೧೮೫).

ಎಂದರೆ ರಮಿಸುತ್ತಿರುವದು, ಕ್ರೀಡೆಯು ಯಾವನಿಗಿರುವದೋ ಅವನು ಅಂತರಾರಾಮನು [1] (ಅಂಥವನೋ), ಅದರಂತೆಯೇ ಒಳಗೇ ಎಂದರೆ ಆತ್ಮನಲ್ಲಿಯೇ ಜ್ಯೋತಿಯು ಎಂದರೆ ಪ್ರಕಾಶವು ಯಾವನಿಗಿರುವದೋ ಅವರು ಅಂತರ್ಜ್ಯೋತಿಯು[2]: (ಅಂಥವನೇ) ಆಗಿರುವನೋ. ಯಾವನು ಇಂಥವನೋ ಆ ಯೋಗಿಯು **ಬ್ರಹ್ಮ ನಿರ್ವಾಣವನ್ನು** ಬ್ರಹ್ಮದಲ್ಲಿ (ಆಗುವ) ಸುಖವನ್ನು ಎಂದರೆ ಮೋಕ್ಷವನ್ನು ಇಲ್ಲಿ ಬದುಕಿರುವಾಗಲೇ ಬ್ರಹ್ಮವಾಗಿದ್ದವನಾಗಿ [3] ಪಡೆಯುವನು, ಸೇರಿಕೊಳ್ಳುವನು

**ಲಭನ್ತೇ ಬ್ರಹ್ಮನಿರ್ವಾಣಮೃಷಯಃ ಕ್ಷೀಣಕಲ್ಮಷಾಃ ।**
**ಛಿನ್ನದ್ವೈಧಾ ಯತಾತ್ಮಾನಃ ಸರ್ವಭೂತಹಿತೇ ರತಾಃ ॥ ೨೫ ॥**

೨೫. ಕ್ಷೀಣಕಲ್ಮಷರಾಗಿ ಛಿನ್ನದ್ವೈಧರಾಗಿ ಯತಾತ್ಮರಾಗಿಯೂ ಸರ್ವಭೂತಹಿತದಲ್ಲಿ ನಿರತರಾಗಿಯೂ ಇರುವ ಋಷಿಗಳು ಬ್ರಹ್ಮನಿರ್ವಾಣವನ್ನು ಪಡೆಯುವರು.

(ಭಾಷ್ಯ)

೩೬೩ ಕಿಂಚ ಲಭನ್ತೇ ಬ್ರಹ್ಮನಿರ್ವಾಣಂ ಮೋಕ್ಷಮ್ ಋಷಯಃ ಸಮ್ಯಗ್ದರ್ಶಿನಃ ಸಂನ್ಯಾಸಿನಃ ಕ್ಷೀಣಕಲ್ಮಷಾಃ ಕ್ಷೀಣಪಾಪಾಃ ನಿರ್ದೋಷಾಃ ಛಿನ್ನದ್ವೈಧಾಃ ಛಿನ್ನಸಂಶಯಾಃ ಯತಾತ್ಮಾನಃ ಸಂಯತೇನ್ದ್ರಿಯಾಃ ಸರ್ವಭೂತಹಿತೇ ರತಾಃ ಸರ್ವೇಷಾಂ ಭೂತಾನಾಂ ಹಿತೇ ಆನುಕೂಲ್ಯೇ ರತಾಃ ಅಹಿಂಸಕಾಃ ಇತ್ಯರ್ಥಃ ॥

**(ಭಾಷ್ಯಾರ್ಥ)**

ಮತ್ತು ಕ್ಷೀಣಕಲ್ಮಷರಾಗಿ ಎಂದರೆ ಪಾಪವು ಸವೆದವರಾಗಿ ನಿರ್ದೋಷರಾಗಿ ಛಿನ್ನದ್ವೈಧರಾಗಿ ಸಂಶಯಗಳ(ನ್ನೆಲ್ಲ) ಕತ್ತರಿಸಿಕೊಂಡವರಾಗಿ ಯತಾತ್ಮರಾಗಿಯೂ ಎಂದರೆ ಇಂದ್ರಿಯಗಳನ್ನು ಬಿಗಿಹಿಡಿದುಕೊಂಡವರಾಗಿ ಸರ್ವಭೂತಹಿತದಲ್ಲಿ ನಿರತರಾಗಿಯೂ ಎಂದರೆ ಎಲ್ಲಾ ಪ್ರಾಣಿಗಳಿಗೂ ಅನುಕೂಲವಾಗುವಂತೆ ಇರುವದರಲ್ಲಿ

---

1. ಛಾ. ೭-೨೫-೨೫-೨.
2. ಬೃ. ೪-೩-೬
3. ಸತ್ತಮೇಲೆ ಬ್ರಹ್ಮವನ್ನು ಸೇರುವನೆಂದು ಭಾವಿಸಕೂಡದು; ಸತ್ತ ಬಳಿಕ ಮತ್ತೆ ಹುಟ್ಟುವದಿಲ್ಲವೆಂಬ ಕಾರಣದಿಂದ ಬ್ರಹ್ಮನಿರ್ವಾಣವನ್ನು ಹೊಂದುವನು ಎಂದು ಹೇಳಿದೆ.

ನಿರತರಾಗಿರುವ ಋಷಿಗಳು ಅಹಿಂಸಕರು ಎಂದರ್ಥ. (ಇಂಥ) ಎಂದರೆ (ತತ್ತ್ವವನ್ನು) ಸರಿಯಾಗಿ ಕಂಡುಕೊಂಡಿರುವ ಸಂನ್ಯಾಸಿಗಳು ಬ್ರಹ್ಮನಿರ್ವಾಣವನ್ನು ಎಂದರೆ ಮೋಕ್ಷವನ್ನು ಪಡೆಯುವರು

**ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಮ್ ।**
**ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್ ॥ ೨೬ ॥**

೨೬. ಕಾಮಕ್ರೋಧವಿಯುಕ್ತರಾಗಿ ಯತಚಿತ್ತರಾಗಿರುವ ವಿದಿತಾತ್ಮರಾದ ಯತಿಗಳಿಗೆ ಎಲ್ಲೆಲ್ಲಿಯೂ ಬ್ರಹ್ಮನಿರ್ವಾಣವು ಇರುತ್ತದೆ.

(ಭಾಷ್ಯ)

೩೬೪. ಕಿಂಚ ಕಾಮಕ್ರೋಧವಿಯುಕ್ತಾನಾಂ ಕಾಮಶ್ಚ ಕ್ರೋಧಶ್ಚ ಕಾಮಕ್ರೋಧೌ ತಾಭ್ಯಾಂ ವಿಯುಕ್ತಾನಾಂ ಯತೀನಾಂ ಸಂನ್ಯಾಸಿನಾಂ ಯತಚೇತಸಾಂ ಸಂಯತಾನ್ತಃಕರಣಾನಾಮ್ ಅಭಿತಃ ಉಭಯತಃ ಜೀವತಾಂ ಮೃತಾನಾಂ ಚ ಬ್ರಹ್ಮನಿರ್ವಾಣಂ ಮೋಕ್ಷಃ ವರ್ತತೇ ವಿದಿತಾತ್ಮನಾಂ ವಿದಿತಃ ಜ್ಞಾತಃ ಆತ್ಮಾ ಯೇಷಾಂ ತೇ ವಿದಿತಾತ್ಮಾನಃ ತೇಷಾಂ ವಿದಿತಾತ್ಮನಾಮ್ । ಸಮ್ಯಗ್ದರ್ಶಿನಾಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಕಾಮಕ್ರೋಧವಿಯುಕ್ತರಾಗಿ ಆಸೆ, ಸಿಟ್ಟು-ಇವುಗಳೇ ಕಾಮಕ್ರೋಧಗಳು. ಇವೆರಡರಿಂದಲೂ ಬಿಡಲ್ಪಟ್ಟ ಯತಿಗಳಿಗೆ ಎಂದರೆ ಸಂನ್ಯಾಸಿಗಳಿಗೆ ಯತಚಿತ್ತರಾಗಿರುವ ಎಂದರೆ ಅಂತಃಕರಣವನ್ನು ವಶದಲ್ಲಿಟ್ಟುಕೊಂಡಿರುವ ವಿದಿತಾತ್ಮರಾದ ಎಂದರೆ ಆತ್ಮವನ್ನು ತಿಳಿದುಕೊಂಡಿರುವ ಸರಿಯಾದ ಜ್ಞಾನವುಳ್ಳ(ಯತಿಗಳಿಗೆ)ಎಂದರ್ಥ. **ಅಂಥವರಿಗೆ ಎಲ್ಲೆಲ್ಲಿಯೂ ಎಂದರೆ ಬದುಕಿರುವಾಗ, ಸತ್ತಬಳಿಕ=(ಹೀಗೆ) ಎರಡು ಕಡೆಯಲ್ಲಿಯೂ ಬ್ರಹ್ಮನಿರ್ವಾಣವು ಎಂದರೆ ಮೋಕ್ಷವು ಇದ್ದುಕೊಂಡಿರುವದು.**

## ಜ್ಞಾನಯೋಗಕ್ಕೆ ಧ್ಯಾನಯೋಗವು ಅಂತರಂಗಸಾಧನ

(ಭಾಷ್ಯ)

೩೬೫. ಸಮ್ಯಗ್ದರ್ಶನನಿಷ್ಠಾನಾಂ ಸಂನ್ಯಾಸಿನಾಂ ಸದ್ಯೋಮುಕ್ತಿಃ ಉಕ್ತಾ । ಕರ್ಮಯೋಗಶ್ಚ ಈಶ್ವರಾರ್ಪಿತಸರ್ವಭಾವೇನ ಈಶ್ವರೇ ಬ್ರಹ್ಮಣಿ ಆಧಾಯ ಕ್ರಿಯ

ಮಾಣಃ ಸತ್ತ್ವಶುದ್ಧಿಜ್ಞಾನಪ್ರಾಪ್ತಿಸರ್ವಕರ್ಮಸಂನ್ಯಾಸಕ್ರಮೇಣ ಮೋಕ್ಷಾಯ ಇತಿ ಭಗವಾನ್ ಪದೇ ಪದೇ ಅಬ್ರವೀತ್ ವಕ್ಷ್ಯತಿ ಚ । ಅಥ ಇದಾನೀಂ ಧ್ಯಾನಯೋಗಂ ಸಮ್ಯಗ್ದರ್ಶನಸ್ಯ ಅನ್ತರಙ್ಗಂ ವಿಸ್ತರೇಣ ವಕ್ಷ್ಯಾಮಿ ಇತಿ ತಸ್ಯ ಸೂತ್ರಸ್ಥಾನೀಯಾನ್ ಶ್ಲೋಕಾನ್ ಉಪದಿಶತಿ ಸ್ಮ—

(ಭಾಷ್ಯಾರ್ಥ)

**ಸರಿಯಾದ (ಆತ್ಮ)ದರ್ಶನದಲ್ಲಿಯೇ ನಿಂತಿರುವ ಸಂನ್ಯಾಸಿಗಳಿಗೆ ಕೂಡಲೆ ಮುಕ್ತಿಯಾಗುವದೆಂದು ಹೇಳಿದ್ದಾಯಿತು. ಮತ್ತು ಸರ್ವಭಾವಗಳನ್ನೂ ಈಶ್ವರನಾದ ಬ್ರಹ್ಮದಲ್ಲಿ ಅರ್ಪಣೆಮಾಡಿ ಕರ್ಮಯೋಗವನ್ನು ಮಾಡಿದರೆ ಸತ್ತ್ವಶುದ್ಧಿ, (ಅದರಿಂದ) ಜ್ಞಾನಪ್ರಾಪ್ತಿ, (ಅದರಿಂದ) ಸರ್ವಕರ್ಮಸಂನ್ಯಾಸ-(ಈ) ಕ್ರಮದಿಂದ (ಅದು) ಮೋಕ್ಷಕ್ಕೆ (ಕಾರಣ)ವಾಗಿರುವದು ಎಂದು ಭಗವಂತನು ಹೆಜ್ಜೆಹೆಜ್ಜೆಗೂ ಹೇಳಿರುತ್ತಾನೆ, ಮುಂದೆಯೂ ಹೇಳುತ್ತಾನೆ. ಇನ್ನು ಈಗ ಸರಿಯಾದ (ಆತ್ಮ)ದರ್ಶನಕ್ಕೆ ಅಂತರಂಗ(ಸಾಧನವಾದ) ಧ್ಯಾನಯೋಗವನ್ನು** ವಿಸ್ತಾರವಾಗಿ ಹೇಳುವೆನೆಂದು ಅದಕ್ಕೆ ಸೂತ್ರಗಳಂತಿರುವ ಶ್ಲೋಕಗಳನ್ನು ಹೇಳುತ್ತಾನೆ. -

**ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾನ್ತರೇ ಭ್ರುವೋಃ ।**
**ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯನ್ತರಚಾರಿಣೌ ॥ ೨೭ ॥**
**ಯತೇನ್ದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ ।**
**ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ ॥ ೨೮ ॥**

೨೭-೨೮. ಹೊರಗಿನ ಸ್ಪರ್ಶಗಳನ್ನು ಹೊರಚ್ಚುಮಾಡಿ ಕಣ್ಣನ್ನು ಹುಬ್ಬುಗಳ ನಡುವೆ ಇಟ್ಟು ಮೂಗಿನ ಒಳಗೆ ಸರಿದಾಡುವ ಪ್ರಾಣಾಪಾನಗಳನ್ನು ಸಮವಾಗಿ ಮಾಡಿಕೊಂಡು ಇಂದ್ರಿಯಮನೋಬುದ್ಧಿಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಮೋಕ್ಷಪರಾಯಣನಾಗಿ ಎಗತೇಚ್ಛಾಭಯಕ್ರೋಧನಾಗಿರುವ ಮುನಿಯು ಯಾವನೋ ಅವನು ಯಾವಾಗಲೂ ಮುಕ್ತನೇ.

(ಭಾಷ್ಯ)

೩೬೬. **ಸ್ಪರ್ಶಾನ್ ಶಬ್ದಾದೀನ್ ಕೃತ್ವಾ ಬಹಿಃ ಬಾಹ್ಯಾನ್ ಶ್ರೋತ್ರಾದಿದ್ವಾರೇಣ ಅನ್ತಃ ಬುದ್ಧೌ ಪ್ರವೇಶಿತಾಃ ಶಬ್ದಾದಯೋ ವಿಷಯಾಃ । ತಾನ್ ಅಚಿನ್ತ**

ಯತಃ ಶಬ್ದಾದಯಃ ಬಾಹ್ಯಾಃ ಬಹಿರೇವ ಕೃತಾ ಭವನ್ತಿ । ತಾನ್ ಏವಂ ಬಹಿಃ ಕೃತ್ವಾ ಚಕ್ಷುಶ್ಚೈವ ಅನ್ತರೇ ಭ್ರುವೋಃ । ಕೃತ್ವಾ ಇತಿ ಅನುಷಜ್ಯತೇ । ತಥಾ ಪ್ರಾಣಾಪಾನೌ ನಾಸಾಭ್ಯನ್ತರಚಾರಿಣೌ ಸಮೌ ಕೃತ್ವಾ । ಯತೇನ್ದ್ರಿಯಮನೋ ಬುದ್ಧಿಃ ಯತಾನಿ ಸಂಯತಾನಿ ಇನ್ದ್ರಿಯಾಣಿ ಮನಃ ಬುದ್ಧಿಶ್ಚ ಯಸ್ಯ ಸಃ ಯತೇನ್ದ್ರಿಯಮನೋಬುದ್ಧಿಃ । ಮನನಾತ್ ಮುನಿಃ ಸಂನ್ಯಾಸೀ । ಮೋಕ್ಷಪರಾಯಣಃ ಏವಂ ದೇಹಸಂಸ್ಥಾನಃ [1]ಮೋಕ್ಷಪರಾಯಣಃ ಮೋಕ್ಷ ಏವ ಪರಮ್ ಅಯನಂ ಪರಾ ಗತಿಃ ಯಸ್ಯ ಸೋಽಯಂ ಮೋಕ್ಷಪರಾಯಣಃ ಮುನಿರ್ಭವೇತ್ । ವಿಗತೇಚ್ಛಾಭಯ ಕ್ರೋಧಃ ಇಚ್ಛಾ ಚ ಭಯಂ ಚ ಕ್ರೋಧಶ್ಚ ಇಚ್ಛಾಭಯಕ್ರೋಧಾಃ । ತೇ ವಿಗತಾಃ ಯಸ್ಮಾತ್ ಸಃ ವಿಗತೇಚ್ಛಾಭಯಕ್ರೋಧಃ । ಯ ಏವಂ ವರ್ತತೇ ಸದಾ ಸಂನ್ಯಾಸೀ ಮುಕ್ತ ಏವ ಸಃ ನ ತಸ್ಯ ಮೋಕ್ಷಃ [2] ಅನ್ಯಃ ಕರ್ತವ್ಯಃ ಅಸ್ತಿ ॥

(ಭಾಷ್ಯಾರ್ಥ)

ಹೊರಗಿನ ಸ್ಪರ್ಶಗಳನ್ನು ಎಂದರೆ ಶಬ್ದಗಳನ್ನು ಹೊರಚಟ್ಟುಮಾಡಿ, ಕಿವಿಯೇ ಮುಂತಾದವುಗಳ ಮೂಲಕ ಒಳಗೆ ಬುದ್ಧಿಯಲ್ಲಿ ಹೊಗಿಸುವ ಶಬ್ದಾದಿಗಳೆಂಬ ವಿಷಯಗಳಿರುವವಷ್ಟೆ, ಅವುಗಳನ್ನು ಚಿಂತಿಸದೆ ಇದ್ದರೆ ಹೊರಚಟ್ಟುಮಾಡಿದಂತೆಯೇ ಆಯಿತು. ಅವುಗಳನ್ನು ಹೀಗೆ ಹೊರಚಟ್ಟುಮಾಡಿ, ಕಣ್ಣುಗಳನ್ನು ಹುಬ್ಬುಗಳ ನಡುವೆ (ಮಾಡಿ ಇಲ್ಲಿಯೂ) ಕೃತ್ವಾ ಎಂಬುದನ್ನು ಸೇರಿಸಿಕೊಳ್ಳಬೇಕು–ಮೂಗಿ ನೊಳಗೆ ಸರಿದಾಡುವ ಪ್ರಾಣಾಪಾನಗಳನ್ನು ಸಮನಾಗಿ ಮಾಡಿಕೊಂಡು, ಇಂದ್ರಿಯ ಮನೋಬುದ್ಧಿಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಇಂದ್ರಿಯಗಳನ್ನೂ ಮನಸ್ಸನ್ನೂ ಬುದ್ಧಿಯನ್ನೂ ವಶದಲ್ಲಿಟ್ಟುಕೊಂಡು ಯತೇಂದ್ರಿಯಮನೋಬುದ್ಧಿಯಾಗಿ, ಮುನಿ ಯಾಗಿ ಎಂದರೆ ಮನನಮಾಡುವ ಸಂನ್ಯಾಸಿಯಾಗಿ (ಎಂದರ್ಥ); ಮೋಕ್ಷಪರಾ ಯಣನಾಗಿ ಎಂದರೆ ಹೀಗೆ ದೇಹವನ್ನಿಟ್ಟುಕೊಂಡು ಮೋಕ್ಷವೇ ಹೆಚ್ಚಿನ ಗತಿ ಎಂದು ಯಾವನಿಗೆ ಆಗಿರುವದೋ ಆ ಇವನಿಗೆ ಮೋಕ್ಷಪರಾಯಣ(ವೆಂದು) ಹೆಸರು. (ಅಂಥ) ಮುನಿಯಾಗಬೇಕು. ವಿಗತೇಚ್ಛಾಭಯಕ್ರೋಧನು–ಆಸೆ, ಹೆದರಿಕೆ, ಸಿಟ್ಟು–ಇವು ಗಳು ಇಚ್ಛಾಭಯಕ್ರೋಧಗಳು ಇವು ಯಾವನನ್ನು ಬಿಟ್ಟು ತೊಲಗಿರುವವೋ ಅವನು ವಿಗತೇಚ್ಛಾಭಯಕ್ರೋಧನು. ಯಾವ ಸಂನ್ಯಾಸಿಯು ಯಾವಾಗಲೂ

---

1. 'ದೇಹಸಂಸ್ಥಾನಾತ್' ಮು॥ ಮೈ॥
2. 'ಮೋಕ್ಷಾಯ' ಮು॥ ಮೈ॥

ಹೀಗೆ ಇರುತ್ತಿರುವನೋ ಅವನು ಮುಕ್ತನೇ, ಅವನಿಗೆ ಮುಕ್ತಿಯನ್ನು ಮಾಡಿಕೊಳ್ಳಬೇಕಾದದ್ದು ಮತ್ತೊಂದು ಇರುವದಿಲ್ಲ.[1]

(ಭಾಷ್ಯ)

೩೬೨. ಏವಂ ಸಮಾಹಿತಚಿತ್ತೇನ ಕಿಂ ವಿಜ್ಞೇಯಮ್ ಇತಿ ? ಉಚ್ಯತೇ–

(ಭಾಷ್ಯಾರ್ಥ)

ಹೀಗೆ ಮನಸ್ಸನ್ನು ಸಮಾಧಿಯಲ್ಲಿಟ್ಟುಕೊಂಡವನು ತಿಳಿಯತಕ್ಕದ್ದು ಏನು?–ಎಂದರೆ (ಭಗವಂತನು) ಹೇಳುತ್ತಾನೆ.—

**ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಮ್ ।**
**ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾನ್ತಿಮೃಚ್ಛತಿ ॥೨೯॥**

೨೯. ನಾನು ಯಜ್ಞತಪಸ್ಸುಗಳ ಭೋಕ್ತೃವೂ ಸರ್ವಲೋಕಗಳಿಗೂ ಮಹೇಶ್ವರನೂ ಸರ್ವಭೂತಗಳಿಗೂ ಸುಹೃದನೂ (ಆಗಿರುವೆನೆಂದು) ಅರಿತುಕೊಂಡರೆ ಶಾಂತಿಯನ್ನು ಹೊಂದುತ್ತಾನೆ.

(ಭಾಷ್ಯ)

೩೬೩. **ಭೋಕ್ತಾರಂ** ಯಜ್ಞತಪಸಾಂ ಯಜ್ಞಾನಾಂ ತಪಸಾಂ ಚ ಕರ್ತೃರೂಪೇಣ ದೇವತಾರೂಪೇಣ ಚ ಸರ್ವಲೋಕಮಹೇಶ್ವರಂ ಸರ್ವೇಷಾಂ ಲೋಕಾನಾಂ ಮಹಾನ್ತಮ್ ಈಶ್ವರಂ ಸುಹೃದಂ ಸರ್ವಭೂತಾನಾಂ ಸರ್ವಪ್ರಾಣಿನಾಂ ಪ್ರತ್ಯುಪಕಾರನಿರಪೇಕ್ಷತಯಾ ಉಪಕಾರಿಣಂ ಸರ್ವಭೂತಾನಾಂ ಹೃದಯೇಶಯಂ ಸರ್ವಕರ್ಮಫಲಾಧ್ಯಕ್ಷಂ ಸರ್ವಪ್ರತ್ಯಯಸಾಕ್ಷಿಣಂ ಮಾಂ ನಾರಾಯಣಂ ಜ್ಞಾತ್ವಾ ಶಾನ್ತಿಂ ಸರ್ವಸಂಸಾರೋಪರತಿಮ್ ಋಚ್ಛತಿ ಪ್ರಾಪ್ನೋತಿ ॥

(ಭಾಷ್ಯಾರ್ಥ)

ಯಜ್ಞತಪಸ್ಸುಗಳ ಯಜ್ಞಗಳ ಮತ್ತು ತಪಸ್ಸುಗಳ–ಕರ್ತೃವಿನ ರೂಪದಿಂದಲೂ[2] ದೇವತೆಯ ರೂಪದಿಂದಲೂ[3]–ಭೋಕ್ತೃವೆಂದೂ ; ಸರ್ವಲೋಕಮಹೇ

1 ಈ ಸಾಧನಗಳುಳ್ಳವನು ಮುಕ್ತಿಗಾಗಿ ಮತ್ತೆ ಯಾವ ಸಾಧನವನ್ನೂ ಮಾಡಬೇಕಾದದ್ದಿರುವದಿಲ್ಲ.

2. ೪-೨೪, ೫-೧೪.

3. ೯-೨೪.

ಶ್ವರನೆಂದೂ, ಎಲ್ಲಾ ಲೋಕಗಳಿಗೂ ದೊಡ್ಡ ಈಶ್ವರನೆಂದೂ, ಸರ್ವಭೂತಗಳಿಗೂ ಸುಹೃದನೆಂದೂ ಎಲ್ಲಾ ಪ್ರಾಣಿಗಳಿಗೂ (ಯಾವ) ಪ್ರತ್ಯುಪಕಾರವನ್ನೂ ಬಯಸದೆ ಉಪಕಾರಿಯಾಗಿರುವನೆಂದೂ ಎಲ್ಲಾ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು, ಎಲ್ಲಾ ಕರ್ಮಗಳ ಫಲಕ್ಕೂ ಒಡೆಯನಾಗಿ ಎಲ್ಲಾ ಪ್ರತ್ಯಯಗಳಿಗೂ ಸಾಕ್ಷಿಯಾಗಿರುವವನೆಂದೂ[1] ನಾರಾಯಣನಾದ ನನ್ನನ್ನು ಅರಿತುಕೊಂಡರೆ ಶಾಂತಿಯನ್ನು ಎಂದರೆ ಸರ್ವಸಂಸಾರದಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ, ಪಡೆದುಕೊಳ್ಳುತ್ತಾನೆ.[2]

ಇತಿ ಶ್ರೀಮದ್ಭಗವದ್ಗೀತಾಭಾಷ್ಯೇ ಸಂನ್ಯಾಸಯೋಗೋ ನಾಮ ಪಞ್ಚಮೋಽಧ್ಯಾಯಃ

---

1. ೧೩-೨೨; ಈ. ಭಾ.ಭಾ. ೧೫; ಕೇ.ಭಾ.ಭಾ. ೫೩.

2. ಕರ್ಮಯೋಗದಿಂದಾಗುವ ಚಿತ್ತಶುದ್ಧಿಯೂ, ಆ ಶುದ್ಧವಾದ ಚಿತ್ತದ ಸಮಾಧಾನದಿಂದಾಗುವ ಜ್ಞಾನವೂ ಮೋಕ್ಷಕ್ಕೆ ಕಾರಣವಾಗುವವು ಎಂದು ಹೇಳಿದಂತೆ ಆಯಿತು.

# ಐದನೆಯ ಅಧ್ಯಾಯದ ಸಾರ

೧-೩ "ಕರ್ಮಗಳನ್ನು ಮಾಡಬೇಕೆಂದು ಒಮ್ಮೆ, ಬಿಡಬೇಕೆಂದು ಒಮ್ಮೆ, ಹೇಳುತ್ತಿರುವೆಯಲ್ಲ! ಇವೆರಡರಲ್ಲಿ ನನಗೆ ಯಾವದು ಶ್ರೇಯಃಸಾಧನವೋ ಹೇಳಿಬಿಡು" ಎಂದು ಅರ್ಜುನನು ಕೇಳಲು ಭಗವಂತನಿಂತೆಂದನು. "ಸಂನ್ಯಾಸವೂ ಕರ್ಮಯೋಗವೂ ಎರಡೂ ಮೋಕ್ಷಕ್ಕೆ ಬೇಕಾದದ್ದೇ. ಆದರೆ ಕರ್ಮವನ್ನು ಬಿಡುವದಕ್ಕಿಂತ ಮಾಡುವದೇ ಮೇಲು ಅದೇಕೆಂದರೆ ರಾಗದ್ವೇಷಗಳಿಲ್ಲದೆ ಕರ್ಮವನ್ನು ಮಾಡುವವನು ನಿತ್ಯಸಂನ್ಯಾಸಿಯು; ಅವನಿಗೆ ಬಂಧವು ಸುಲಭವಾಗಿ ಕಳಚಿಹೋಗುವದು

೪-೭. ಕರ್ಮಕ್ಕೆ ಸಮಬುದ್ಧಿಯೇ ಮುಂತಾದವೂ ಸೇರಿದರೆ ಅದಕ್ಕೆ 'ಯೋಗ' ವೆಂದು ಹೆಸರು; ಸಂನ್ಯಾಸಕ್ಕೆ ಜ್ಞಾನವೇ ಮುಂತಾದವು ಸೇರಿದರೆ 'ಸಾಂಖ್ಯ' ವೆಂದು ಹೆಸರು ಮೋಕ್ಷಕ್ಕೆ ಇವೆರಡೂ ಸ್ವತಂತ್ರವಾದ ಮಾರ್ಗಗಳಲ್ಲ, ಇವುಗಳಲ್ಲಿ ಯಾವದೊಂದನ್ನು ಚೆನ್ನಾಗಿ ನಡೆಸಿದರೂ ಎರಡಕ್ಕೂ ಫಲವಾದ ಮೋಕ್ಷವು ದೊರೆತೇ ದೊರೆಯುವದು. ಆದರೂ ನಿಜವಾದ ಸಂನ್ಯಾಸವೆಂಬುದು ಯೋಗವಿಲ್ಲದೆ ದಕ್ಕುವದಿಲ್ಲ, ಯೋಗದಿಂದ ಚಿತ್ತಶುದ್ಧಿಯನ್ನು ಪಡೆದವನು ಜಿತೇಂದ್ರಿಯನಾಗಿ ಜ್ಞಾನವನ್ನು ಪಡೆದು ನಿಷ್ಕರ್ಮವಾದ ಬ್ರಹ್ಮವನ್ನೇ ಪಡೆಯುವನು ಆದ್ದರಿಂದ ಕರ್ಮಯೋಗಿಗಾಗಲಿ ಜ್ಞಾನಿಗಾಗಲಿ ಕರ್ಮವು ಬಂಧಕವಾಗುವದಿಲ್ಲ.

೮-೧೨ 'ನಿಜವಾಗಿ ನೋಡಿದರೆ ಜ್ಞಾನಿಯು ಯಾವ ಕರ್ಮವನ್ನೂ ಮಾಡುವದಿಲ್ಲ. ವ್ಯವಹಾರದೃಷ್ಟಿಯಿಂದ ಮಾತ್ರವೇ ಅವನ ದೇಹದಲ್ಲಿ ನಡೆಯುವ ನೋಡುವದು, ಕೇಳುವದು ಮುಂತಾದ ವ್ಯಾಪಾರಗಳಿಗೆ ಕರ್ತೃವಾಗುವನು. ಅವನು 'ನಾನೇನೂ ಮಾಡುವದಿಲ್ಲ' ಎಂದು ಅರಿತಿರುವನು. ಇನ್ನು ಅವನಿಗೆ ಕರ್ಮಲೇಪವೆಂಬುದೆಲ್ಲಿಂದ ಬಂತು? ಕರ್ಮಯೋಗಿಯೋ ಎಂದರೆ ಅವನು ತಾನು ಮಾಡುವ ಕರ್ಮಗಳನ್ನೆಲ್ಲ ಈಶ್ವರನಲ್ಲಿ ಅರ್ಪಿಸಿ ಸಂಗರಹಿತನಾಗಿ ಮಾಡುತ್ತಿರುವದರಿಂದ ಅವನಿಗೂ ಕರ್ಮವು ಬಂಧಕವಾಗುವದಿಲ್ಲ, ಅವನ ಕರ್ಮಕ್ಕೆ ಚಿತ್ತಶುದ್ಧಿಯೊಂದೇ ಫಲವಾಗುವದು ಅದರಿಂದ ಜ್ಞಾನವಾಗಿ ಮುಕ್ತಿಯೂ ಆಗುವದು. ಕರ್ಮದ ಫಲದಲ್ಲಿ ಆಶೆಯುಳ್ಳವನು ಮಾತ್ರ ಸಂಸಾರಕ್ಕೆ ಕಟ್ಟುಬೀಳುತ್ತಾನೆ

೧೩-೧೫ "ಜ್ಞಾನಿಯಾದವನಿಗೆ ಕರ್ಮವೇ ಇರುವದಿಲ್ಲವೆಂದು ಹೇಳಿದೆನಲ್ಲವೆ? ಅವನ ಮನಃಸ್ಥಿತಿಯನ್ನು ಹೇಳುವೆನು ಕೇಳು ಉಳಿದವರ ಹಾಗೆ ಅವನು ತಾನು ದೇಹವೆಂದು ತಿಳಿದುಕೊಂಡಿರುವದಿಲ್ಲ; ತಾನು ಏನನ್ನೂ ಮಾಡದ, ಮತ್ತೊಬ್ಬರಿಂದ ಏನನ್ನೂ ಮಾಡಿಸದ ಅಸಂಗನಾದ ಆತ್ಮನೇ ಎಂದು ಅರಿತುಕೊಂಡಿರುತ್ತಾನೆ. ಆದ್ದರಿಂದ ಅವನೇ ಪರಮಾರ್ಥಸಂನ್ಯಾಸಿ, ಎಂದರೆ ಕರ್ಮಗಳನ್ನೆಲ್ಲ ನಿಜವಾಗಿ ಬಿಟ್ಟವನು. ನಿಜವಾಗಿ ಕರ್ತೃತ್ವವು ಯಾರಿಗೂ ಇರುವದೇ ಇಲ್ಲ; ಆದರೆ ಸ್ವಭಾವದಿಂದ ಅಜ್ಞರಾಗಿರುವ ಜನರು ತಾವು ಕರ್ಮವನ್ನುಮಾಡುವ ಸ್ವರೂಪದವರೆಂದು ಭಾವಿಸಿರುತ್ತಾರೆ ಪರಮಾರ್ಥದೃಷ್ಟಿಯಲ್ಲಿ ಕ್ರಿಯೆಯಿಲ್ಲ, ಕ್ರಿಯೆಗೆ ಸಾಧನವಾದ ದ್ರವ್ಯಗಳಿಲ್ಲ, ಅವುಗಳನ್ನು ಅರ್ಪಿಸುವದಕ್ಕೆ ಬೇಕಾದ ದೇವತೆಯೂ ಇಲ್ಲ ಇವೆಲ್ಲವೂ ನಿಷ್ಕರ್ಮವಾದ ಬ್ರಹ್ಮವೇ.

೧೬-೨೧ ಜ್ಞಾನಿಗಳು ಆತ್ಮನ ಸ್ವರೂಪವನ್ನರಿತುಕೊಂಡು ಅವನಲ್ಲಿಯೇ ನೆಟ್ಟ ಮನಸ್ಸುಳ್ಳವರಾಗಿರುವರು. ಅವರಿಗೆ ಆತ್ಮನಿಗಿಂತ ಹೆಚ್ಚಿನ ಪದಾರ್ಥವು ಯಾವದೂ ಇರುವದಿಲ್ಲ ಲೋಕದಲ್ಲಿ ಗುಣಗಳ ಭೇದದಿಂದ ತೋರುವ ಸಾತ್ತ್ವಿಕರಾಜಸತಾಮಸಜೀವರೆಲ್ಲ ಪರಬ್ರಹ್ಮ ರೂಪರಾಗಿಯೇ ತೋರುತ್ತಿರುವರು ಹೀಗೆ ಎಲ್ಲವನ್ನೂ ಒಂದೇ ಬಗೆಯಾಗಿ ಕಂಡದ್ದರಿಂದ ಹೆಚ್ಚಾದವರನ್ನು ಕಡಿಮೆಯಾಗಿ ಕಂಡ ದೋಷವಾಗಲಿ ಕಡಿಮೆಯವರನ್ನು ಮೇಲಕ್ಕೇರಿಸಿದ ದೋಷವಾಗಲಿ ಅವರಿಗೆ ತಟ್ಟುವದಿಲ್ಲ; ಏಕೆಂದರೆ ನಿರ್ದೋಷವಾದ ಬ್ರಹ್ಮವೇ ಸಕಲ ಜೀವರ ರೂಪದಿಂದಲೂ ತನ್ನ ರೂಪದಿಂದಲೂ ಇರುವದೆಂಬ ತತ್ತ್ವವನ್ನು ಅವರು ಕಂಡುಕೊಂಡಿರುವರು. ಇಂಥ ಜ್ಞಾನದಿಂದ ಕಂಡದ್ದೆಲ್ಲ ಬ್ರಹ್ಮವೇ ಆಗಿರುವದರಿಂದ ಅವರಿಗೆ ಪ್ರಿಯವಾದದ್ದನ್ನು ಕಂಡು ಹಿಗ್ಗುವ, ಅಥವಾ ಅಪ್ರಿಯವಾದದ್ದನ್ನು ಕಂಡು ತಗ್ಗುವ, ಸಂಭವವೇ ಇಲ್ಲ ಅವರಿಗೆ ಸುಖವೆಂದರೆ ಆತ್ಮನೇ; ಆ ಸುಖಕ್ಕೆ ನಾಶವೇ ಇಲ್ಲ

೨೨—೨೪ "ಆದ್ದರಿಂದ ಜಾಣನಾದವನು ವಿಷಯಗಳ ಸುಖವೆಲ್ಲ ದುಃಖಕ್ಕೆ ಕಾರಣವೆಂದರಿತು ಇಂದ್ರಿಯಗಳನ್ನು ವಿಷಯಗಳಿಂದ ಹಿಮ್ಮೆಟ್ಟಿಸಿಕೊಳ್ಳಬೇಕು; ಶರೀರವಿರುವವರೆಗೂ ಕಾಮಕ್ರೋಧಗಳ ಹುಯ್ಲಿಗೆ ಸಿಕ್ಕದಂತೆ ಎಚ್ಚರವಾಗಿರಬೇಕು ಯಾವನು ಹೀಗೆ ವಿಷಯಗಳಿಂದ ಮನಸ್ಸನ್ನು ಹಿಡಿದೆಳೆದು ಆತ್ಮನಲ್ಲಿಯೇ ಪ್ರೀತಿಯಿಟ್ಟು ಆತ್ಮನೇ ತನ್ನ ಬೆಳಕೆಂದೂ ಆತ್ಮನೇ ತನ್ನ ಸುಖವೆಂದೂ ನಂಬುವನೋ ಅವನು ಬದುಕಿರುವಾಗಲೇ ಬ್ರಹ್ಮವಾಗಿದ್ದು ಬಳಿಕ ಬ್ರಹ್ಮವನ್ನೇ ಹೊಂದುವನು.

೨೫—೨೬ "ಮುಕ್ತಿಯನ್ನು ಪಡೆಯಬೇಕೆಂಬವನು ಪಾಪವನ್ನೆಲ್ಲ ತೊಳೆದುಕೊಳ್ಳಬೇಕು; ವಿಚಾರದಿಂದ ಸಂಶಯಗಳನ್ನೆಲ್ಲ ತೊಲಗಿಸಿಕೊಳ್ಳಬೇಕು; ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರಬೇಕು; ಸಕಲ ಪ್ರಾಣಿಗಳಿಗೂ ಹಿತವನ್ನೇ ಕೋರುತ್ತಿರಬೇಕು ಕಾಮಕ್ರೋಧಗಳನ್ನು ಗೆದ್ದ ಇಂಥ ಆತ್ಮಜ್ಞಾನಿಗಳಿಗೆ ಈ ಲೋಕದಲ್ಲಿಯೂ ಮುಕ್ತಿಯೇ, ಪರಲೋಕದಲ್ಲಿಯೂ ಮುಕ್ತಿಯೇ

೨೭—೨೯. "ಇಂಥ ಜ್ಞಾನಕ್ಕೆ ಧ್ಯಾನಯೋಗವೇ ತೀರ ಹತ್ತಿರದ ಸಾಧನವು ಧ್ಯಾನಯೋಗಿಯು ಹೊರಗಿನ ವಿಷಯಗಳನ್ನು ಕುರಿತು ಚಿಂತಿಸದೆ, ಶರೀರವನ್ನು ಸ್ವಾಧೀನದಲ್ಲಿಟ್ಟುಕೊಂಡು, ಪ್ರಾಣಾಯಾಮವನ್ನು ಮಾಡುತ್ತಾ, ಇಂದ್ರಿಯಮನೋಬುದ್ಧಿಗಳನ್ನು ಹಿಡಿತದಲ್ಲಿಟ್ಟಿರಬೇಕು. ಹೀಗೆ ಧ್ಯಾನವನ್ನು ಮಾಡುತ್ತಿದ್ದರೆ 'ಪರಮಾತ್ಮನೇ ಯಜ್ಞಾದಿಕರ್ಮಗಳನ್ನು ಮಾಡುವವನು, ಕರ್ತೃರೂಪದಿಂದಲೂ ದೇವತಾರೂಪದಿಂದಲೂ ಅವನ್ನು ಅನುಭವಿಸುವವನು, ಎಲ್ಲಾ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ಕರ್ತೃತ್ವಭೋಕ್ತೃತ್ವಗಳಿಗೂ ಅರಿವುಗಳಿಗೂ ಸಾಕ್ಷಿಯಾಗಿರುವವನು—ಎಂಬ ಜ್ಞಾನವು ಹುಟ್ಟಿ ಶಾಂತಿಯುಂಟಾಗುತ್ತದೆ.

———

*

# ಆರನೆಯ ಅಧ್ಯಾಯ

## (ಧ್ಯಾ ನ ಯೋ ಗ)

## ಕರ್ಮಕ್ಕೂ ಧ್ಯಾನಕ್ಕೂ ಸಂಬಂಧ

(ಭಾಷ್ಯ)

೩೬೯. ಅತೀತಾನನ್ತರಾಧ್ಯಾಯಾನ್ತೇ ಧ್ಯಾನಯೋಗಸ್ಯ ಸಮ್ಯಗ್ದರ್ಶನಂ ಪ್ರತಿ ಅನ್ತರಙ್ಗಸ್ಯ ಸೂತ್ರಭೂತಾಃ ಶ್ಲೋಕಾಃ "ಸ್ಪರ್ಶಾನ್ ಕೃತ್ವಾ ಬಹಿಃ" (೫-೨೭) ಇತ್ಯಾದಯಃ ಉಪದಿಷ್ಟಾಃ । ತೇಷಾಂ ವೃತ್ತಿಸ್ಥಾನೀಯಃ ಅಯಂ ಷಷ್ಠಃ ಅಧ್ಯಾಯಃ ಆರಭ್ಯತೇ। ತತ್ರ ಧ್ಯಾನಯೋಗಸ್ಯ ಬಹಿರಙ್ಗಂ ಕರ್ಮ ಇತಿ ಯಾವದ್ ಧ್ಯಾನಯೋಗಾರೋಹಣಸಮರ್ಥಃ[1] ತಾವತ್ ಗೃಹಸ್ಥೇನ ಅಧಿಕೃತೇನ ಕರ್ತವ್ಯಂ ಕರ್ಮ ಇತ್ಯತಃ ತತ್ ಸ್ತೌತಿ—

(ಭಾಷ್ಯಾರ್ಥ)

ಇದರ ಹಿಂದಿನ ಅಧ್ಯಾಯದ ಕೊನೆಯಲ್ಲಿ ಸರಿಯಾದ (ಆತ್ಮ)ದರ್ಶನಕ್ಕೆ ತೀರ ಒಳಗಿನ (ಸಾಧನ)ವಾದ[2] ಧ್ಯಾನಯೋಗಕ್ಕೆ ಸೂತ್ರರೂಪವಾಗಿ 'ಸ್ಪರ್ಶಾನ್ ಕೃತ್ವಾ ಬಹಿಃ' (೫-೭) ಎಂಬುದೇ ಮುಂತಾದ ಶ್ಲೋಕಗಳನ್ನು ಹೇಳಿರುತ್ತದೆಯಷ್ಟೆ, ಅವುಗಳಿಗೆ ವೃತ್ತಿಯು[3] ಹಾಗಿರುವ ಈ ಆರನೆಯ ಅಧ್ಯಾಯವನ್ನು ಪ್ರಾರಂಭಿಸಿರುತ್ತದೆ ಅದರಲ್ಲಿಯೂ ಧ್ಯಾನಯೋಗಕ್ಕೆ ಕರ್ಮವು ಹೊರಗಿನ ಸಾಧನವಾಗಿರುವದರಿಂದ ಧ್ಯಾನಯೋಗವನ್ನು ಏರುವ ಶಕ್ತಿಯು ಬರುವವರೆಗೂ (ಕರ್ಮಕ್ಕೆ) ಅಧಿಕಾರಿಯಾಗಿರುವ ಗೃಹಸ್ಥನು ಕರ್ಮವನ್ನು ಮಾಡಲೇಬೇಕಾಗಿರುವದರಿಂದ ಅದನ್ನು (ಈಗ) ಹೊಗಳುತ್ತಾನೆ.

---

1. "ಧ್ಯಾನಯೋಗಾರೋಹಣಾಸಮರ್ಥಃ" ಅ||ನಿ||ಗು||

2. ಕರ್ಮಯೋಗದಿಂದ ವಿಷಯಸಂಪರ್ಕವನ್ನು ಬಿಟ್ಟಂತೆ ಆಗುತ್ತದೆ, ಅದರೆ ಧ್ಯಾನಯೋಗದಿಂದ ಆತ್ಮನನ್ನೇ ಚಿಂತಿಸುತ್ತಿರುವದರಿಂದ ಅದು ಆತ್ಮದರ್ಶನಕ್ಕೆ ಇನ್ನೂ ಹತ್ತಿರ.

3. ವಿವರಣೆಯ ಗ್ರಂಥ, ಭಾಷ್ಯ

# ಧ್ಯಾನಯೋಗವನ್ನು ಕರ್ಮಿಗೆ ಹೇಳಿಲ್ಲ

(ಭಾಷ್ಯ)

೩೭೦. ನನು ಕಿಮರ್ಥಂ ಧ್ಯಾನಯೋಗಾರೋಹಣಸೀಮಾಕರಣಮ್ ? ಯಾವತಾ ಅನುಷ್ಠೇಯಮೇವ ವಿಹಿತಂ ಕರ್ಮ ಯಾವಜ್ಜೀವಮ್ । ನ । " ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ " (೬-೩) ಇತಿ ವಿಶೇಷಣಾತ್, ಆರೂಢಸ್ಯ ಚ ಶಮೇನೈವ ಸಂಬನ್ಧಕರಣಾತ್। ಆರುರುಕ್ಷೋಃ ಆರೂಢಸ್ಯ ಚ ಶಮಃ ಕರ್ಮ ಚ ಉಭಯಂ ಕರ್ತವ್ಯತ್ವೇನ ಅಭಿಪ್ರೇತಂ ಚೇತ್ ಸ್ಯಾತ್ ತದಾ ಆರುರುಕ್ಷೋಃ ಆರೂಢಸ್ಯ ಚ ಇತಿ ಶಮಕರ್ಮವಿಷಯಭೇದೇನ ವಿಶೇಷಣಂ ವಿಭಾಗಕರಣಂ ಚ ಅನರ್ಥಕಂ ಸ್ಯಾತ್ ॥

(ಭಾಷ್ಯಾರ್ಥ)

(ಆಕ್ಷೇಪ) —(ಶಾಸ್ತ್ರದಲ್ಲಿ) ವಿಧಿಸಿರುವ ಕರ್ಮವನ್ನು ಬದುಕಿರುವವರೆಗೂ ಮಾಡಬೇಕಲ್ಲವೆ ? (ಹೀಗಿರುವಲ್ಲಿ) ' ಧ್ಯಾನಯೋಗವನ್ನು ಏರುವದಕ್ಕೆ ಆಗುವವರೆಗೆ' ಎಂದು ಅವಧಿಯನ್ನು ಇಡುವದೇತಕ್ಕೆ ?

(ಪರಿಹಾರ) .—ಹಾಗಲ್ಲ ಏಕೆಂದರೆ " ಯೋಗವನ್ನು ಏರಲೆಳಸುವವನಿಗೆ ಕರ್ಮವು ಕಾರಣವೆನಿಸುವದು " (೬-೩) ಎಂದು ವಿಶೇಷಣವನ್ನು ಹಾಕಿರುತ್ತದೆ, ಮತ್ತು (ಯೋಗವನ್ನು) ಏರಿರುವಾತನಿಗೆ ಶಮವೊಂದನ್ನೇ ಸಂಬಂಧಪಡಿಸಿರುತ್ತದೆ. (ಯೋಗವನ್ನು) ಏರಲೆಳಸುವವನೂ ಏರಿರುವವನೂ ಶಮವನ್ನೂ ಕರ್ಮವನ್ನೂ ಎರಡನ್ನೂ ಮಾಡತಕ್ಕದ್ದೆಂದು ಅಭಿಪ್ರಾಯವಿದ್ದರೆ ' ಆರುರುಕ್ಷುವಿಗೆ ', ' ಆರೂಢನಿಗೆ ' ಎಂದು ಕರ್ಮವೂ ಶಮವೂ ಬೇರೆಬೇರೆಯವರ ವಿಷಯವೆಂದು ವಿಶೇಷಣವನ್ನು ಕೊಟ್ಟಿರುವದೂ (ಅವೆರಡನ್ನೂ) ವಿಂಗಡಿಸಿ ಹೇಳಿರುವದೂ ವ್ಯರ್ಥವಾಗುವದು.

(ಭಾಷ್ಯ)

೩೭೧. ತತ್ರ ಆಶ್ರಮಿಣಾಂ ಕಶ್ಚಿತ್ ಯೋಗಮ್ ಆರುರುಕ್ಷುರ್ಭವತಿ, ಆರೂಢಶ್ಚ ಕಶ್ಚಿತ್, ಅನ್ಯೇ ನ ಆರುರುಕ್ಷವಃ ನ ಚ ಆರೂಢಾಃ । ತಾನ್ ಅಪೇಕ್ಷ್ಯ ' ಆರುರುಕ್ಷೋಃ ', ' ಆರೂಢಸ್ಯ ಚ ' ಇತಿ ವಿಶೇಷಣಂ ವಿಭಾಗಕರಣಂ ಚ ಉಪಪದ್ಯತೇ ಏವ ಇತಿ ಚೇತ್ । ನ । ' ತಸ್ಯೈವ ' ಇತಿ ವಚನಾತ್ । ಪುನಃ ಯೋಗಗ್ರಹಣಾಚ್ಚ ' ಯೋಗಾರೂಢಸ್ಯ ' ಇತಿ । ಯಃ ಆಸೀತ್ ಪೂರ್ವಂ ಯೋಗಮ್

ಆರುರುಕ್ಷುಃ, ತಸ್ಯೈವ ಆರೂಢಸ್ಯ ಶಮ ಏವ ಕರ್ತವ್ಯಃ ಕಾರಣಂ ಯೋಗಫಲಂ ಪ್ರತಿ ಉಚ್ಯತೇ ಇತಿ । ಅತಃ ನ ಯಾವಜ್ಜೀವಂ ಕರ್ತವ್ಯತ್ವಪ್ರಾಪ್ತಿಃ ಕಸ್ಯಚಿದಪಿ ಕರ್ಮಣಃ ||

(ಭಾಷ್ಯಾರ್ಥ)

(ಪೂರ್ವಪಕ್ಷಿ) :–(ಗೃಹಸ್ಥನ) ಆಶ್ರಮದಲ್ಲಿರುವವರೊಳಗೆ ಯಾವನೋ ಒಬ್ಬನು ಯೋಗವನ್ನು ಏರಲೆಳಸುವವನು, ಮತ್ತೊಬ್ಬನು ಏರಿದವನು–ಹೀಗೆ ಇರುತ್ತಾರೆ, ಉಳಿದವರು ಏರಲೆಳಸುವವರೂ ಅಲ್ಲ, ಏರಿದವರೂ ಅಲ್ಲ. ಆದ್ದರಿಂದ ಈ (ಮೂರನೆಯ ಗುಂಪಿನವರ) ದೃಷ್ಟಿಯಿಂದ (ಯೋಗವನ್ನು) 'ಏರಲೆಳಸುವವನಿಗೆ', 'ಏರಿದವನಿಗೆ' ಎಂದು ವಿಶೇಷಣವನ್ನು ಕೊಟ್ಟಿರುವದೂ (ಕರ್ಮಶಮಗಳನ್ನು) ವಿಂಗಡಿಸಿ ಹೇಳಿರುವದೂ ಹೊಂದಿಯೇ ಹೊಂದುತ್ತದೆಯಲ್ಲ! [1]

(ಸಿದ್ಧಾಂತಿ) :—ಹೊಂದುವದಿಲ್ಲ ಏಕೆಂದರೆ 'ಅವನಿಗೇ' (ಶಮವು ಕಾರಣ) ಎಂಬ ಮಾತನ್ನು (ಇಲ್ಲಿ ಉಪಯೋಗಿಸುತ್ತದೆ). ಯಾವನು ಮೊದಲು ಯೋಗವನ್ನು ಏರಲೆಳಸಿದ್ದನೋ ಅವನಿಗೇ ಏರಿದ ಬಳಿಕ ಯೋಗದ ಫಲಕ್ಕೆ ಶಮವನ್ನು ಮಾಡುವದು ಕಾರಣವಾಗಿರುತ್ತದೆ ಎಂದು (ಇಲ್ಲಿ) ಹೇಳಿರುತ್ತದೆ. "ಯೋಗಾರೂಢನಾದ (ಅವನಿಗೇ)" ಎಂದು ಮತ್ತೂ ಯೋಗವೆಂಬ ಮಾತನ್ನೇ ಉಪಯೋಗಿಸಿದೆ.[2] ಆದ್ದರಿಂದ ಯಾವ ಕರ್ಮವನ್ನೂ ಬದುಕಿರುವವರೆಗೆ ಮಾಡಬೇಕಾದದ್ದು ಇರುವದಿಲ್ಲ.[3]

(ಭಾಷ್ಯ)

೩೭೨. ಯೋಗವಿಭ್ರಷ್ಟವಚನಾಚ್ಚ । ಗೃಹಸ್ಥಸ್ಯ ಚೇತ್ ಕರ್ಮಿಣೋ ಯೋಗೋ ವಿಹಿತಃ ಷಷ್ಠೇ ಅಧ್ಯಾಯೇ ಸಃ ಯೋಗಭ್ರಷ್ಟೋಽಪಿ ಕರ್ಮಗತಿಂ

---

1. ಎಲ್ಲಾ ಆಶ್ರಮದವರಿಗೂ ಯೋಗದಲ್ಲಿ ಮತ್ತು ವೇದಾಂತದಲ್ಲಿ ಅಧಿಕಾರವಿರುವದೆಂದೂ ಯೋಗವನ್ನು ಮಾಡುವವರಿಗೆ ಮಾತ್ರ ಮೋಕ್ಷವು ದೊರೆಯುವದೆಂದೂ ಹೇಳುವ ವೃತ್ತಿಕಾರರ ಮತವಿದು.

2. ಆದ್ದರಿಂದ ಇದು ಮೂರನೆಯ ಪಂಗಡದವರ ದೃಷ್ಟಿಯಿಂದ ಅಲ್ಲ.

3. ಕರ್ಮಗಳನ್ನು ಸಾಯುವವರೆಗೂ ಮಾಡುತ್ತಿರಬೇಕೆಂಬ ಮೀಮಾಂಸಕರ ಪಕ್ಷವನ್ನೇ ವೃತ್ತಿಕಾರರು ಅನುಸರಿಸಿರುತ್ತಾರೆ. ಅದು ಸರಿಯಲ್ಲ.

ಕರ್ಮಫಲಂ ಪ್ರಾಪ್ನೋತಿ ಇತಿ ತಸ್ಯ ನಾಶಾಶಙ್ಕಾ ಅನುಪಪನ್ನಾ ಸ್ಯಾತ್ । ಅವಶ್ಯಂ ಹಿ ಕೃತಂ ಕರ್ಮ ಕಾಮ್ಯಂ ನಿತ್ಯಂ ವಾ ಮೋಕ್ಷಸ್ಯ ನಿತ್ಯತ್ವಾತ್ ಅನಾರಭ್ಯತ್ವೇ, ಸ್ವಂ ಫಲಮ್ ಆರಭತೇ ಏವ । ನಿತ್ಯಸ್ಯ ಚ ಕರ್ಮಣಃ ವೇದಪ್ರಮಾಣಾವ ಬುದ್ಧತ್ವಾತ್ ಫಲೇನ ಭವಿತವ್ಯಮ್ ಇತಿ ಅವೋಚಾಮ, ಅನ್ಯಥಾ ವೇದಸ್ಯ ಆನರ್ಥಕ್ಯಪ್ರಸಙ್ಗಾತ್ ಇತಿ । ನ ಚ ಕರ್ಮಣಿ ಸತಿ ಉಭಯವಿಭ್ರಷ್ಟವಚನಮ್ ಅರ್ಥವತ್ । ಕರ್ಮಣಃ ವಿಭ್ರಂಶಕಾರಣಾನುಪಪತ್ತೇಃ । ಕರ್ಮಕೃತಮ್ ಈಶ್ವರೇ ಸಂನ್ಯಸ್ಯ ಇತ್ಯತಃ ಕರ್ತರಿ ಕರ್ಮ ಫಲಂ ನಾರಭತೇ ಇತಿ ಚೇತ್ । ನ । ಈಶ್ವರೇ ಸಂನ್ಯಾಸಸ್ಯ ಅಧಿಕತರಫಲಹೇತುತ್ವೋಪಪತ್ತೇಃ । ಮೋಕ್ಷಾಯೈವ ಇತಿ ಚೇತ್ । ಸ್ವಕರ್ಮಣಾಂ ಕೃತಾನಾಮ್ ಈಶ್ವರೇ ನ್ಯಾಸಃ ಮೋಕ್ಷಾಯೈವ ನ ಫಲಾನ್ತರಾಯ ಯೋಗಸಹಿತಃ। ಯೋಗಾಚ್ಚ ವಿಭ್ರಷ್ಟಃ ಇತ್ಯತಃ ತಂ ಪ್ರತಿ ನಾಶಾಶಙ್ಕಾ ಯುಕ್ತೈವ ಇತಿ ಚೇತ್ । ನ । 'ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ' (೬-೧೦), 'ಬ್ರಹ್ಮಚಾರಿವ್ರತೇ ಸ್ಥಿತಃ' (೬-೧೪) ಇತಿ ಕರ್ಮಸಂನ್ಯಾಸವಿಧಾನಾತ್ । ನ ಚ ಅತ್ರ ಧ್ಯಾನಕಾಲೇ ಸ್ತ್ರೀಸಹಾಯತ್ವಾಶಙ್ಕಾ । ಯೇನ ಏಕಾಕಿತ್ವಂ ವಿಧೀಯತೇ । ನ ಚ ಗೃಹಸ್ಥಸ್ಯ 'ನಿರಾಶೀರಪರಿಗ್ರಹಃ' ಇತ್ಯಾದಿವಚನಮ್ ಅನುಕೂಲಮ್ । ಉಭಯವಿಭ್ರಷ್ಟಪ್ರಶ್ನಾನುಪಪತ್ತೇಶ್ಚ ॥

(ಭಾಷ್ಯಾರ್ಥ)

ಯೋಗಭ್ರಷ್ಟನ ಮಾತು (೬-೩೭) ಬಂದಿರುವದರಿಂದಲೂ (ಇದೇ ಸರಿಯಾದ ನಿರ್ಣಯವಾಗಿರುತ್ತದೆ. ಹೇಗೆಂದರೆ,) ಆರನೆಯ ಅಧ್ಯಾಯದಲ್ಲಿ ಕರ್ಮಿಯಾದ ಗೃಹಸ್ಥನಿಗೇ ಯೋಗವನ್ನು ವಿಧಿಸಿರುವದಾದರೆ, ಅವನು (ಒಂದು ವೇಳೆ) ಯೋಗದಿಂದ ಭ್ರಷ್ಟನಾದರೂ ಕರ್ಮಗತಿಯನ್ನು, ಕರ್ಮದ ಫಲವನ್ನು, ಪಡೆಯುತ್ತಾನಾದ್ದರಿಂದ "ಅವನು ನಾಶವಾಗುವದಿಲ್ಲವಷ್ಟೆ ?" (೬-೩೮) ಎಂದು (ಅರ್ಜುನನು) ಶಂಕೆಯನ್ನು ತೆಗೆದಿರುವದು ಸರಿಯಾಗುವದಿಲ್ಲ ಏಕೆಂದರೆ, ಕಾಮ್ಯವೇ ಆಗಲಿ, ನಿತ್ಯವೇ ಆಗಲಿ, ಮಾಡಿದ ಕರ್ಮವು ತನ್ನ ಫಲವನ್ನು ಅವಶ್ಯವಾಗಿ ಉಂಟುಮಾಡಿಯೇ ತೀರಬೇಕು. ಮೋಕ್ಷವಂತು ನಿತ್ಯವಾದ್ದರಿಂದ ಕರ್ಮದಿಂದ ಉಂಟಾಗುವ ಹಾಗಿಲ್ಲ.[1] ನಿತ್ಯಕರ್ಮವು ವೇದಪ್ರಮಾಣದಿಂದ ತಿಳಿಯಬಂದಿರುವದರಿಂದ ಅದಕ್ಕೂ ಫಲವು ಇದ್ದೇ ಇರಬೇಕು, ಹಾಗಿಲ್ಲದಿದ್ದರೆ ವೇದವೇ ವ್ಯರ್ಥವೆಂದಾ

---

1. ತೈ ಭಾ ಭಾ. ೮, ೭೧, ೭೩.

ದೀತು–ಎಂದು ಹಿಂದೆಯೇ (೪-೧೮ರಲ್ಲಿ) ಹೇಳಿರುತ್ತೇವೆ. (ಹೀಗೆ) ಕರ್ಮವು ಇರುತ್ತಿರುವಲ್ಲಿ "ಎರಡರಿಂದಲೂ ಭ್ರಷ್ಟನಾಗುವನೇನು ?" (೬-೩೮) ಎಂದು ಕೇಳಿರುವದೂ ಸರಿಯಾಗುವದಿಲ್ಲ, ಏಕೆಂದರೆ ಕರ್ಮದಿಂದ ಭ್ರಷ್ಟನಾಗುವದಕ್ಕೆ ಕಾರಣವೇನೂ ಇರುವದಿಲ್ಲ.

(ಪೂರ್ವಪಕ್ಷಿ) :— ಈಶ್ವರನಿಗೆ ಸಮರ್ಪಣೆಮಾಡಿ ಕರ್ಮವನ್ನು ಮಾಡಿರುವದರಿಂದ (ಹಾಗೆ) ಮಾಡಿದಾತನಿಗೆ (ನಿತ್ಯ)ಕರ್ಮದ ಫಲವು ಆಗಲಾರದು.

(ಸಿದ್ಧಾಂತಿ) :— ಹಾಗಲ್ಲ ಏಕೆಂದರೆ ಈಶ್ವರನಲ್ಲಿ ಸಮರ್ಪಿಸಿರುವದರಿಂದ ಇನ್ನೂ ಹೆಚ್ಚಿನ ಫಲಕ್ಕೆ (ಅದು) ಕಾರಣವಾಗಬೇಕಾಗುವದು

(ಪೂರ್ವಪಕ್ಷಿ) :— ಇದರಿಂದ ಮೋಕ್ಷವೇ ಆಗುವದು ಯೋಗಸಹಿತವಾಗಿ ಸ್ವಕರ್ಮವನ್ನು ಮಾಡಿ ಈಶ್ವರನಿಗೆ ಸಮರ್ಪಿಸಿದರೆ ಮೋಕ್ಷವೇ ಫಲವಾಗುವದೇ ಹೊರತು ಬೇರೆಯ ಫಲವಾಗುವದಿಲ್ಲ [1] (ಆ) ಯೋಗದಿಂದ ಭ್ರಷ್ಟನಾಗಿರುವನಾದ್ದರಿಂದ '(ಅವನು)ನಾಶವಾಗುವನೇನು ?–ಎಂದು ಅಂಥವನ ವಿಷಯದಲ್ಲಿ ಶಂಕೆಯನ್ನು ಮಾಡಿದ್ದು ಸರಿಯೇ.

(ಸಿದ್ಧಾಂತಿ) :— ಹಾಗಲ್ಲ ಏಕೆಂದರೆ "ಒಬ್ಬನೇ ಇದ್ದು ಚಿತ್ತಾತ್ಮಗಳನ್ನು ಬಿಗಿಹಿಡಿದುಕೊಂಡು, ಯಾವ ಆಶೆಯೂ ಇಲ್ಲದೆ, ತನ್ನದೆಂಬುದಿಲ್ಲದೆ" (೬-೧೦) "ಬ್ರಹ್ಮಚಾರಿವ್ರತದಲ್ಲಿದ್ದುಕೊಂಡು" (೬-೧೪) ಎಂದು ಕರ್ಮಸಂನ್ಯಾಸವನ್ನು ಇಲ್ಲಿ ವಿಧಿಸಿದೆ ಇಲ್ಲಿ ಧ್ಯಾನಮಾಡುವಾಗ ಹೆಂಡತಿಯು ಜೊತೆಯಲ್ಲಿರಬೇಕು ಎಂದು ಯೋಚಿಸುವದಕ್ಕೂ ಬರುವದಿಲ್ಲ, ಹಾಗಿದ್ದರೆ (ಅದನ್ನು ಬೇಡವೆನ್ನುವದಕ್ಕೆ) "ಒಬ್ಬನೇ ಇರಬೇಕು" ಎಂದು ವಿಧಿಸಿರುತ್ತದೆ (ಎನ್ನಬಹುದಾಗಿತ್ತು).[2] "ಆಶೆಯಿಲ್ಲದೆ," "ತನ್ನದೆಂಬುದಿಲ್ಲದೆ"–ಎಂಬುದೇ ಮುಂತಾದ ಮಾತೂ ಗೃಹಸ್ಥನಿಗೆ ಹೊಂದುವದಿಲ್ಲ "ಎರಡರಿಂದಲೂ ಭ್ರಷ್ಟನಾಗಿ (ಹಾಳಾಗುವನೇನು)?" ಎಂಬ ಪ್ರಶ್ನೆಯು ಹೊಂದುವದಿಲ್ಲವಾದ್ದರಿಂದಲೂ (ಇದು ಕರ್ಮಿಯ ವಿಷಯವಲ್ಲ).

---

1. ನೀವು ಹೇಳುವ ಹೆಚ್ಚಿನ ಫಲವೆಂಬುದೇ ಮೋಕ್ಷವೆಂದಾಗಲಿ ಎಂದು ಭಾವ. ವೃತ್ತಿಕಾರರು ಸಮುಚ್ಚಯವಾದಿಗಳು.

2. ಯೇನ ಎಂಬುದನ್ನು ಯತಃ ಎಂಬರ್ಥದ ಮಾತೆಂದು ಇಟ್ಟುಕೊಂಡರೆ ಒಬ್ಬನೇ ಇರಬೇಕು ಎಂದು ವಿಧಿಸಿರುವದರಿಂದ ಪತ್ನೀಸಮೇತನಿಗೆ ಇದು ವಿಧಿಸಿದೆ ಎನ್ನುವದಕ್ಕಾಗುವದಿಲ್ಲ ಎಂದೂ ಈ ವಾಕ್ಯಕ್ಕೆ ಅರ್ಥವನ್ನು ಮಾಡಬಹುದು.

# ಕರ್ಮಿಯನ್ನು ಯೋಗಿಯೆಂದು ಕರೆದಿರುವದೇಕೆ ?

(ಭಾಷ್ಯ)

೩೭೩. "ಅನಾಶ್ರಿತಃ" ಇತ್ಯನೇನ ಕರ್ಮಿಣ ಏವ ಸಂನ್ಯಾಸಿತ್ವಂ ಯೋಗಿತ್ವಂ ಚ ಉಕ್ತಮ್ । ಪ್ರತಿಷಿದ್ಧಂ ಚ ನಿರಗ್ನೇಃ ಅಕ್ರಿಯಸ್ಯ ಚ ಸಂನ್ಯಾಸಿತ್ವಂ ಯೋಗಿತ್ವಂ ಚ ಇತಿ ಚೇತ್ । ನ । ಧ್ಯಾನಯೋಗಂ ಪ್ರತಿ ಬಹಿರಙ್ಗಸ್ಯ ಸತಃ ಕರ್ಮಣಃ ಫಲಾಕಾಙ್ಕ್ಷಾಸಂನ್ಯಾಸಸ್ತುತಿಪರತ್ವಾತ್ । ನ ಕೇವಲಂ ನಿರಗ್ನಿಃ ಅಕ್ರಿಯ ಏವ ಸಂನ್ಯಾಸೀ ಯೋಗೀ ಚ, ಕಿಂ ತರ್ಹಿ, ಕರ್ಮ್ಯಪಿ । ಕರ್ಮಫಲಾಸಙ್ಗಂ ಸಂನ್ಯಸ್ಯ ಕರ್ಮಯೋಗಮನುತಿಷ್ಠನ್ ಸತ್ತ್ವಶುದ್ಧ್ಯರ್ಥಂ 'ಸ ಸಂನ್ಯಾಸೀ ಚ ಯೋಗೀ ಚ ಭವತಿ' ಇತಿ ಸ್ತೂಯತೇ । ನ ಚ ಏಕೇನ ವಾಕ್ಯೇನ ಕರ್ಮಫಲಾಸಙ್ಗಸಂನ್ಯಾಸಸ್ತುತಿಃ ಚತುರ್ಥಾಶ್ರಮಪ್ರತಿಷೇಧಶ್ಚ ಉಪಪದ್ಯತೇ । ನ ಚ ಪ್ರಸಿದ್ಧಂ ನಿರಗ್ನೇಃ ಅಕ್ರಿಯಸ್ಯ ಪರಮಾರ್ಥಸಂನ್ಯಾಸಿನಃ ಶ್ರುತಿಸ್ಮೃತಿಪುರಾಣೇತಿಹಾಸಯೋಗಶಾಸ್ತ್ರೇಷು ವಿಹಿತಂ ಸಂನ್ಯಾಸಿತ್ವಂ ಯೋಗಿತ್ವಂ ಚ ಪ್ರತಿಷೇಧತಿ ಭಗವಾನ್ । ಸ್ವವಚನವಿರೋಧಾಚ್ಚ । "ಸರ್ವಕರ್ಮಾಣಿ ಮನಸಾ ಸಂನ್ಯಸ್ಯ ನೈವ ಕುರ್ವನ್ ನ ಕಾರಯನ್ ಆಸ್ತೇ" (೫-೧೩), "ಮೌನೀ ಸನ್ತುಷ್ಟೋ ಯೇನ ಕೇನಚಿತ್ । ಅನಿಕೇತಃ ಸ್ಥಿರಮತಿಃ" (೧೨-೧೯), "ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಃಸ್ಪೃಹಃ" (೧-೭೧), "ಸರ್ವಾರಮ್ಭಪರಿತ್ಯಾಗೀ" (೧೨-೧೬)–ಇತಿ ಚ ತತ್ರ ತತ್ರ ಭಗವತಾ ಸ್ವವಚನಾನಿ ದರ್ಶಿತಾನಿ । ತೈರ್ವಿರುಧ್ಯೇತ ಚತುರ್ಥಾಶ್ರಮಪ್ರತಿಷೇಧಃ [1] । ತಸ್ಮಾತ್ ಮುನೇಃ ಯೋಗಮ್ ಆರುರುಕ್ಷೋಃ ಪ್ರತಿಪನ್ನಗಾರ್ಹಸ್ಥ್ಯಸ್ಯ ಅಗ್ನಿಹೋತ್ರಾದಿಕರ್ಮಫಲನಿರಪೇಕ್ಷಮ್ ಅನುಷ್ಠೀಯಮಾನಂ ಧ್ಯಾನಯೋಗಾರೋಹಣಸಾಧನತ್ವಂ ಸತ್ತ್ವಶುದ್ಧಿದ್ವಾರೇಣ ಪ್ರತಿಪದ್ಯತೇ ಇತಿ "ಸ ಸಂನ್ಯಾಸೀ ಚ ಯೋಗೀ ಚ" ಇತಿ ಸ್ತೂಯತೇ ॥

(ಭಾಷ್ಯಾರ್ಥ)

(ಆಕ್ಷೇಪ) :—"ಕರ್ಮಫಲವನ್ನು ಆಶ್ರಯಿಸದೆ" (೬-೧) ಎಂಬ (ಶ್ಲೋಕದಲ್ಲಿ) ಕರ್ಮಿಯೇ ಸಂನ್ಯಾಸಿಯೆಂದೂ ಯೋಗಿಯೆಂದೂ ಹೇಳಿರುವದಲ್ಲದೆ ಅಗ್ನಿಯಿಲ್ಲದವನೂ ಕರ್ಮವನ್ನು ಮಾಡದಿರುವಾತನೂ ಸಂನ್ಯಾಸಿಯೂ ಅಲ್ಲ, ಯೋಗಿಯೂ ಅಲ್ಲ–ಎಂದು ಹೇಳಿಯೂ ಇದೆಯಲ್ಲ '

---

1. "ಚತುರ್ಥಾಶ್ರಮವಿಪ್ರತಿಷೇಧಃ" ಪಾ॥ ಸ್ಯೈ॥

(ಪರಿಹಾರ) :—ಹಾಗಲ್ಲ ಏಕೆಂದರೆ ಧ್ಯಾನಯೋಗಕ್ಕೆ ಹೊರಗಿನ ಅಂಗವಾಗಿರುವ ಕರ್ಮದ ಫಲದ ಆಶೆಯನ್ನು ಬಿಡುವದನ್ನು ಹೊಗಳುವದರಲ್ಲಿ (ಈ ವಾಕ್ಯಕ್ಕೆ) ತಾತ್ಪರ್ಯವಿರುತ್ತದೆ. ಅಗ್ನಿಯಿಲ್ಲದೆ ಕರ್ಮವನ್ನು ಮಾಡದೆ ಇರುವಾತನು ಮಾತ್ರವೇ ಅಲ್ಲ, ಸಂನ್ಯಾಸಿಯೂ ಯೋಗಿಯೂ ಆಗಿರುವವನು, ಮತ್ತೇನೆಂದರೆ ಕರ್ಮಿಯೂ (ಆಗಿರುತ್ತಾನೆ). ಕರ್ಮದ ಫಲದ ಆಸಕ್ತಿಯನ್ನು ಬಿಟ್ಟು ಕರ್ಮಯೋಗವನ್ನು ಸತ್ತ್ವಶುದ್ಧಿಗಾಗಿ ಮಾಡುತ್ತಿದ್ದರೆ 'ಅವನು ಸಂನ್ಯಾಸಿಯೂ ಯೋಗಿಯೂ ಆಗಿರುತ್ತಾನೆ' ಎಂದು (ಇಲ್ಲಿ) ಹೊಗಳಿರುತ್ತದೆ. ಕರ್ಮಫಲದಲ್ಲಿ ಆಸಕ್ತಿಯನ್ನು ಬಿಡುವದನ್ನು ಹೊಗಳುವದು, ನಾಲ್ಕನೆಯ ಆಶ್ರಮ(ವಾದ ಸಂನ್ಯಾಸ)ವನ್ನು ಅಲ್ಲಗಳೆಯುವದು (ಈ ಎರಡೂ) ಒಂದೇ ವಾಕ್ಯಕ್ಕೆ ತಾತ್ಪರ್ಯವೆಂಬುದು ಸರಿಯಾಗಲಾರದು [1] **ಅಗ್ನಿಯಿಲ್ಲದವನೂ (ಯಾವ) ಕರ್ಮವೂ ಇಲ್ಲದವನೂ ಆಗಿರುವ ಪರಮಾರ್ಥಸಂನ್ಯಾಸಿಯು ಸಂನ್ಯಾಸಿಯೂ ಯೋಗಿಯೂ ಆಗಿರುವನೆಂದು ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ, ಯೋಗಶಾಸ್ತ್ರ– ಇವುಗಳಲ್ಲಿ** [2] **ಹೇಳಿದ್ದರೂ ಅದನ್ನು ಭಗವಂತನು ನಿರಾಕರಿಸುತ್ತಾನೆಂದು ಹೇಳುವದಕ್ಕೆ ಆಗುವದಿಲ್ಲ** ಮತ್ತು (ಹೀಗೆ ಹೇಳುವದು) ತನ್ನ ಮಾತಿಗೂ ವಿರೋಧವಾಗುವದು 'ಕರ್ಮಗಳನ್ನೆಲ್ಲ ಮನಸ್ಸಿನಿಂದ ಸಂನ್ಯಾಸ ಮಾಡಿ . . ಏನನ್ನೂ ಮಾಡದೆ ಏನನ್ನೂ ಮಾಡಿಸದೆ ಇರುತ್ತಿರುವನು" (೫-೧೩), ಮೌನಿಯಾಗಿ ಯಾವದೆಂದರೆ ಅದರಿಂದ ತೃಪ್ತನಾಗಿ, ಮನೆಯಿಲ್ಲದೆ, ಮನಸ್ಸನ್ನು ಸ್ಥಿರವಾಗಿಟ್ಟುಕೊಂಡು" (೧೨-೧೯), "ಯಾವ ಪುರುಷನು ಕಾಮಗಳನ್ನೆಲ್ಲ ಬಿಟ್ಟು, ಆಶೆಯಿಲ್ಲದೆ ಸಂಚರಿಸುತ್ತಿರುವನೋ" (೨-೭೧), "ಸರ್ವಕರ್ಮಗಳನ್ನೂ ಪರಿತ್ಯಾಗ ಮಾಡಿದವನು (ನನಗೆ ಪ್ರಿಯನು)" (೧೨-೧೬) ಎಂದು ಅಲ್ಲಲ್ಲಿ ಭಗವಂತನು ತನ್ನ ಅಭಿಪ್ರಾಯದ ಮಾತುಗಳನ್ನು (ಆಡಿ) ತೋರಿಸಿರುತ್ತಾನೆ. ನಾಲ್ಕನೆಯ ಆಶ್ರಮವನ್ನು ಅಲ್ಲಗಳೆಯುವದು ಅವುಗಳಿಗೆ ವಿರುದ್ಧವಾಗುವದು

ಆದ್ದರಿಂದ ಯೋಗವನ್ನು ಏರಲೆಳಸಿರುವ ಗೃಹಸ್ಥಾಶ್ರಮವನ್ನು ಹೊಂದಿರುವ ಮುನಿಗೆ ಫಲದ ಅಪೇಕ್ಷೆಯಿಲ್ಲದೆ ಅನುಷ್ಠಾನಮಾಡುವ ಅಗ್ನಿಹೋತ್ರವೇ ಮುಂತಾದ

---

1. ಒಂದೇ ವಾಕ್ಯವು ಎರಡು ವಿಷಯಗಳಲ್ಲಿ ಸಮಪ್ರಧಾನವಾಗಿ ತಾತ್ಪರ್ಯವುಳ್ಳದ್ದಾಗಿರಲಾರದು—ಎಂಬ ಮೀಮಾಂಸಾನ್ಯಾಯವನ್ನು ಇಲ್ಲಿ ಸೂಚಿಸಿದೆ.

2. ಬೃಹದಾರಣ್ಯಕ, ಜಾಬಾಲ-ಮುಂತಾದ ಶ್ರುತಿಗಳು, ಆಪಸ್ತಂಬ, ಮನು-ಮುಂತಾದ ಸ್ಮೃತಿಗಳು, ವಿಷ್ಣುಪುರಾಣವೇ ಮುಂತಾದ ಪುರಾಣಗಳು, ಪಾತಂಜಲಾದಿಯೋಗಶಾಸ್ತ್ರಗಳು— ಇವುಗಳಲ್ಲಿ ಸಂನ್ಯಾಸವನ್ನು ವಿಧಿಸಿದೆ.

ಕರ್ಮವು ಸತ್ತ್ವಶುದ್ಧಿಯ ಮೂಲಕವಾಗಿ ಧ್ಯಾನಯೋಗವನ್ನು ಏರುವವಕ್ಕೆ ಸಾಧನವಾಗಿರುತ್ತದೆ—ಎಂಬ ಕಾರಣದಿಂದ "ಅವನೇ ಸಂನ್ಯಾಸಿಯೂ ಯೋಗಿಯೂ (ಆಗಿರುತ್ತಾನೆ,)" ಎಂದು ಹೊಗಳಿರುತ್ತದೆ (ಎಂಬುದೇ ಸರಿ)

## ಕರ್ಮಫಲತ್ಯಾಗವು ಧ್ಯಾನಯೋಗಕ್ಕೆ ಸಾಧನ

**ಶ್ರೀ ಭಗವಾನ್ ಉವಾಚ—**

**ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।**
**ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥ ೧ ॥**

೧. ಶ್ರೀ ಭಗವಂತನು ಇಂತೆಂದನು —ಕರ್ಮಫಲವನ್ನು ಆಶ್ರಯಿಸದೆ ಮಾಡಬೇಕಾದ ಕರ್ಮವನ್ನು ಯಾವನು ಮಾಡುತ್ತಿರುವನೋ, ಅವನು ಸಂನ್ಯಾಸಿಯೂ ಯೋಗಿಯೂ (ಆಗಿರುತ್ತಾನೆ) , ಅಗ್ನಿಯಿಲ್ಲದವನೂ ಕರ್ಮಗಳಿಲ್ಲದವನೂ ಅಲ್ಲ.

(ಭಾಷ್ಯ)

೩೭೪. ಅನಾಶ್ರಿತಃ ನ ಆಶ್ರಿತಃ ಅನಾಶ್ರಿತಃ । ಕಿಮ್ ? ಕರ್ಮಫಲಂ ಕರ್ಮಣಃ ಫಲಂ ಕರ್ಮಫಲಂ ಯತ್ ತದನಾಶ್ರಿತಃ ಕರ್ಮಫಲತೃಷ್ಣಾರಹಿತಃ ಇತ್ಯರ್ಥಃ । ಯೋ ಹಿ ಕರ್ಮಫಲತೃಷ್ಣಾವಾನ್ ಸಃ ಕರ್ಮಫಲಮ್ ಆಶ್ರಿತೋ ಭವತಿ । ಅಯಂ ತು ತದ್ವಿಪರೀತಃ । ಅತಃ ಅನಾಶ್ರಿತಃ ಕರ್ಮಫಲಮ್ । ಏವಂಭೂತಃ ಸನ್ ಕಾರ್ಯಂ ಕರ್ತವ್ಯಂ ನಿತ್ಯಂ ಕಾಮ್ಯವಿಪರೀತಮ್ ಅಗ್ನಿಹೋತ್ರಾದಿಕಂ ಕರ್ಮ ಕರೋತಿ ನಿರ್ವರ್ತಯತಿ ಯಃ ಕಶ್ಚಿತ್[1] ಈದೃಶಃ ಕರ್ಮೀ ಕರ್ಮ್ಯಂತರೇಭ್ಯೋ ವಿಶಿಷ್ಯತೇ ಇತ್ಯೇವಮರ್ಥಮ್[2] ಆಹ–"ಸ ಸಂನ್ಯಾಸೀ ಚ ಯೋಗೀ ಚ" ಇತಿ । ಸಂನ್ಯಾಸಃ ಪರಿತ್ಯಾಗಃ ಸ ಯಸ್ಯ ಅಸ್ತಿ ಸ ಸಂನ್ಯಾಸೀ ಚ ಯೋಗೀ ಚ । ಯೋಗಃ ಚಿತ್ತಸಮಾಧಾನಂ ಸ ಯಸ್ಯ ಅಸ್ತಿ ಸ ಯೋಗೀ ಚ । ಇತ್ಯೇವಂಗುಣಸಂಪನ್ನಃ ಅಯಂ ಮನ್ತವ್ಯಃ । ನ ಕೇವಲಂ ನಿರಗ್ನಿಃ ಅಕ್ರಿಯ ಏವ ಸಂನ್ಯಾಸೀ ಯೋಗೀ ಚ ಇತಿ ಮನ್ತವ್ಯಃ । ನಿರ್ಗತಾ ಅಗ್ನಯಃ ಕರ್ಮಾಙ್ಗಭೂತಾ ಯಸ್ಮಾತ್ ಸಃ ನಿರಗ್ನಿಃ । ಅಕ್ರಿಯಶ್ಚ ಅನಗ್ನಿಸಾಧನಾ ಅಪಿ ಅವಿದ್ಯಮಾನಾಃ ಕ್ರಿಯಾಃ ತಪೋದಾನಾದಿಕಾಃ ಯಸ್ಯ ಅಸೌ ಅಕ್ರಿಯಃ ॥

1. 'ಈದೃಶಃ' ಇಷ್ಟೇ ಮ॥ ಮೈ॥
2. 'ಇತ್ಯೇತಮರ್ಥಮ್' ಮ॥ ಮೈ॥

(ಭಾಷ್ಯಾರ್ಥ)

'ಅನಾಶ್ರಿತಃ ಆಶ್ರಯಿಸದೆ ಇರುವವನು ಅನಾಶ್ರಿತನು; ಏನನ್ನು (ಆಶ್ರಯಿಸದಿರುವವನು)? ಎಂದರೆ ಕರ್ಮಫಲವನ್ನು. ಕರ್ಮದ ಫಲವು ಕರ್ಮಫಲವು; (ಇದು) ಯಾವದೋ ಅದನ್ನು ಆಶ್ರಯಿಸದೆ ಇರುವ ಎಂದರೆ ಕರ್ಮದ ಫಲದ ಬಯಕೆಯು ಇಲ್ಲದ ಎಂದರ್ಥ. ಯಾವನು ಕರ್ಮಫಲದಲ್ಲಿ ಬಯಕೆಯುಳ್ಳವನೋ ಅವನು ಕರ್ಮಫಲವನ್ನು ಆಶ್ರಯಿಸಿದವನಾಗಿರುತ್ತಾನೆ. ಇವನಾದರೋ ಅದಕ್ಕೆ ವಿರುದ್ಧವಾಗಿರುವನು, ಆದ್ದರಿಂದ ಕರ್ಮವನ್ನು ಆಶ್ರಯಿಸದೆ ಇರುವವನು. ಇಂಥವನಾಗಿ ಮಾಡಬೇಕಾದ ನಿತ್ಯ(ಕರ್ಮವನ್ನು) ಕಾಮ್ಯಕ್ಕೆ ಬೇರೆಯಾಗಿರುವ ಅಗ್ನಿಹೋತ್ರವೇ ಮುಂತಾದ ಕರ್ಮವನ್ನು ಯಾವನೇ ಆಗಲಿ ಮಾಡುತ್ತಿರುವನೋ, ಅನುಷ್ಠಾನಮಾಡುತ್ತಿರುವನೋ ಅಂಥ ಕರ್ಮಿಯು ಮಿಕ್ಕ ಕರ್ಮಿಗಳಿಗಿಂತ ಹೆಚ್ಚಿನವನೆಂದು ತಿಳಿಸುವದಕ್ಕೆ ಈ (ವಾಕ್ಯವನ್ನು ಭಗವಂತನು) ಹೇಳುತ್ತಾನೆ: ಅವನೇ ಸಂನ್ಯಾಸಿಯೂ ಯೋಗಿಯೂ (ಆಗಿರುತ್ತಾನೆ) **ಸಂನ್ಯಾಸವೆಂದರೆ** (ಕರ್ಮವನ್ನು) ಬಿಡುವದು, ಅದು ಯಾವನಿಗೆ ಇರುವದೋ ಅವನು ಸಂನ್ಯಾಸಿಯು. (ಸಂನ್ಯಾಸಿ)ಯೂ ಯೋಗಿಯೂ (ಆಗಿರುತ್ತಾನೆ) **ಯೋಗವೆಂದರೆ** ಚಿತ್ತವನ್ನು ಸಮಾಧಾನದಲ್ಲಿಟ್ಟುಕೊಂಡಿರುವದು, ಅದು ಯಾವನಿಗೆ ಇರುವದೋ ಅವನು ಯೋಗಿಯು (ಯೋಗಿಯೂ ಆಗಿರುತ್ತಾನೆ). ಇಂಥ ಗುಣವುಳ್ಳವನು ಎಂದು (ಅವನನ್ನು) ತಿಳಿಯಬೇಕು ಅಗ್ನಿಯಿಲ್ಲದವನೂ ಕರ್ಮಗಳಿಲ್ಲದವನೂ (ಆಗಿರುವವನು) ಮಾತ್ರ ಸಂನ್ಯಾಸಿಯೂ ಯೋಗಿಯೂ (ಆಗಿರುವ)ನೆಂದು ತಿಳಿಯಬಾರದು.[1] ಯಾವನಿಂದ ಕರ್ಮಕ್ಕೆ ಅಂಗವಾಗಿ (ಬೇಕಾಗಿರುವ) ಅಗ್ನಿಗಳು[2] ಹೊರಟುಹೋಗಿರುವವೋ ಅವನು ನಿರಗ್ನಿಯು. ಅಕ್ರಿಯಃ ಎಂಬಲ್ಲಿ ಅಗ್ನಿಯು ಇದ್ದು ಮಾಡಬೇಕಾಗಿರುವವಲ್ಲದ ತಪಸ್ಸು, ದಾನ-ಮುಂತಾದ[3] ಕ್ರಿಯೆಗಳೂ ಯಾವನಿಗೆ ಇರುವದಿಲ್ಲವೋ ಅವನು ಅಕ್ರಿಯನು. (ಅಂಥವನು ಮಾತ್ರ ಸಂನ್ಯಾಸಿಯೆಂದೂ ಯೋಗಿಯೆಂದೂ ತಿಳಿಯಬಾರದು.)

1. "ಆ ರಾಜನೇ ಪ್ರಜೆಗಳಿಗೆ ತಂದೆಯು" ಎಂಬಂತೆ ಈ ವಾಕ್ಯಕ್ಕೆ ಅರ್ಥವನ್ನು ಮಾಡಬೇಕೆಂದು ಭಾವ.

2 ಗಾರ್ಹಪತ್ಯ, ಆಹವನೀಯ, ಅನ್ವಾಹಾರ್ಯಪಚನ- ಮುಂತಾದ ಅಗ್ನಿಗಳು ಕರ್ಮಕ್ಕೆ ಬೇಕು.

3. ಜಪ, ಉಪವಾಸ, ದೇವರಪೂಜೆ_ಮುಂತಾದವುಗಳು.

(ಭಾಷ್ಯ)

೩೭೫. ನನು ಚ ನಿರಗ್ನೇಃ ಅಕ್ರಿಯಸ್ಯೈವ ಶ್ರುತಿಸ್ಮೃತಿಯೋಗಶಾಸ್ತ್ರೇಷು ಸಂನ್ಯಾಸಿತ್ವಂ ಯೋಗಿತ್ವಂ ಚ ಪ್ರಸಿದ್ಧಮ್ । ಕಥಮ್ ಇಹ ಸಾಗ್ನೇಃ ಸಕ್ರಿಯಸ್ಯ ಚ ಸಂನ್ಯಾಸಿತ್ವಂ ಯೋಗಿತ್ವಂ ಚ ಅಪ್ರಸಿದ್ಧಮ್ ಉಚ್ಯತೇ ಇತಿ ? ನೈಷ ದೋಷಃ ಕಯಾಚಿತ್ ಗುಣವೃತ್ತ್ಯಾ ಉಭಯಸ್ಯ ಸಂಪಿಪಾದಯಿಷಿತತ್ವಾತ್ । ತತ್ ಕಥಮ್ ? ಕರ್ಮಫಲಸಙ್ಕಲ್ಪಸಂನ್ಯಾಸಾತ್ ಸಂನ್ಯಾಸಿತ್ವಂ ಯೋಗಾಙ್ಗತ್ವೇನ ಚ ಕರ್ಮಾನುಷ್ಠಾನಾತ್ ಕರ್ಮಫಲಸಙ್ಕಲ್ಪಸ್ಯ ಚ ಚಿತ್ತವಿಕ್ಷೇಪಹೇತೋಃ ಪರಿತ್ಯಾಗಾತ್ ಯೋಗಿತ್ವಂ ಚ ಇತಿ ಗೌಣಮ್ ಉಭಯಮ್, ನ ಪುನಃ ಮುಖ್ಯಂ ಸಂನ್ಯಾಸಿತ್ವಂ ಯೋಗಿತ್ವಂ ಚ ಅಭಿಪ್ರೇತಮ್-ಇತ್ಯೇತಮ್ ಅರ್ಥಂ ದರ್ಶಯಿತುಮ್ ಆಹ[1]—

(ಭಾಷ್ಯಾರ್ಥ)

(ಆಕ್ಷೇಪ).—ಅಗ್ನಿಯಿಲ್ಲದವನೂ ಕರ್ಮಗಳಿಲ್ಲದವನೂ (ಆಗಿರು)ವವನೇ ಸಂನ್ಯಾಸಿಯು, ಯೋಗಿಯೂ (ಅವನೇ)-ಎಂದು ಶ್ರುತಿಗಳು, ಸ್ಮೃತಿಗಳು, ಯೋಗ ಶಾಸ್ತ್ರಗಳು- ಇವುಗಳಲ್ಲಿ ಪ್ರಸಿದ್ಧವಾಗಿರುತ್ತದೆ. ಹೀಗಿರುವಲ್ಲಿ ಅಗ್ನಿಯುಳ್ಳವನೂ ಕರ್ಮಸಹಿತನಾಗಿರುವವನೂ ಆಗಿರುವವನನ್ನು ಸಂನ್ಯಾಸಿಯೆಂದೂ ಯೋಗಿಯೆಂದೂ (ಶಾಸ್ತ್ರದಲ್ಲಿ) ಅಪ್ರಸಿದ್ಧವಾಗಿರುವ (ವಿಷಯವನ್ನು) ಹೇಳಿರುವದು ಹೇಗೆ (ಸರಿ) ?

(ಪರಿಹಾರ). ಇದು ತಪ್ಪಲ್ಲ ಏಕೆಂದರೆ ಒಂದಾನೊಂದು ಗೌಣವೃತ್ತಿಯಿಂದ ಈ ಎರಡನ್ನೂ (ಕರ್ಮಿಯಲ್ಲಿ) ಹೊಂದಿಸಿ ಹೇಳಬೇಕೆಂದು (ಇಲ್ಲಿ) ಹೊರಟಿರುತ್ತದೆ. ಅದು ಹೇಗೆಂದರೆ. ಕರ್ಮಫಲದ ಸಂಕಲ್ಪವನ್ನು ಬಿಡುವದರಿಂದ (ಕರ್ಮಿಯೂ) ಸಂನ್ಯಾಸಿಯು, ಯೋಗಕ್ಕೆ ಅಂಗವಾಗಿ[2] ಕರ್ಮವನ್ನು ಮಾಡುವದರಿಂದಲೂ ಚಿತ್ತವು ಹರಿದಾಡುವದಕ್ಕೆ ಕಾರಣವಾಗಿರುವ ಕರ್ಮಫಲದ ಸಂಕಲ್ಪವನ್ನು ಬಿಡುವದರಿಂದಲೂ (ಅವನೂ) ಯೋಗಿಯು **ಹೀಗೆ ಇವೆರಡೂ ಗೌಣವೇ ಹೊರತು ಮುಖ್ಯವಾದ ಸಂನ್ಯಾಸವನ್ನಾಗಲಿ ಯೋಗವನ್ನಾಗಲಿ (ಕರ್ಮಿಗೆ ಹೇಳಬೇಕೆಂಬ) ಅಭಿಪ್ರಾಯವೇನೂ** ಇರುವದಿಲ್ಲ-ಎಂಬೀ ಅರ್ಥವನ್ನು

---

1. "ಇತ್ಯೇತಮರ್ಥಂ ದರ್ಶಯಿತುಮ್ ಆಹ" ಎಂಬ ವಾಕ್ಯವು ಮೈ॥ದಲ್ಲಿ ಬಿಟ್ಟುಹೋಗಿದೆ.

2. ಧ್ಯಾನಯೋಗಕ್ಕೆ ಏರಬೇಕೆಂಬ ಉದ್ದೇಶದಿಂದ.

ತಿಳಿಸುವದಕ್ಕಾಗಿ (ಭಗವಂತನು ಈ ಮಾತನ್ನು) ಆಡಿರುತ್ತಾನೆ :—

**ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಣ್ಡವ ।**
**ನ ಹ್ಯಸಂನ್ಯಸ್ತಸಙ್ಕಲ್ಪೋ ಯೋಗೀ ಭವತಿ ಕಶ್ಚನ ॥ ೨ ॥**

೨. ಎಲೈ ಪಾಂಡವನೆ, ಯಾವದನ್ನು ಸಂನ್ಯಾಸವೆಂದು ಕರೆಯುವರೋ ಅದು ಯೋಗವೆಂದು ತಿಳಿ. ಏಕೆಂದರೆ ಸಂಕಲ್ಪವನ್ನು ಸಂನ್ಯಾಸ ಮಾಡದವನು ಯಾವನೂ ಯೋಗಿಯಾಗಲಾರನು.

(ಭಾಷ್ಯ)

೩೭೬ ಯಂ ಸರ್ವಕರ್ಮತತ್ಫಲಪರಿತ್ಯಾಗಲಕ್ಷಣಂ ಪರಮಾರ್ಥಸಂನ್ಯಾಸಂ ಸಂನ್ಯಾಸಮ್ ಇತಿ ಪ್ರಾಹುಃ ಶ್ರುತಿಸ್ಮೃತಿವಿದಃ, ಯೋಗಂ ಕರ್ಮಾನುಷ್ಠಾನಲಕ್ಷಣಂ ತಂ ಪರಮಾರ್ಥಸಂನ್ಯಾಸಂ ವಿದ್ಧಿ ಜಾನೀಹಿ ಹೇ ಪಾಣ್ಡವ । ಕರ್ಮಯೋಗಸ್ಯ ಪ್ರವೃತ್ತಿಲಕ್ಷಣಸ್ಯ ತದ್ವಿಪರೀತೇನ ನಿವೃತ್ತಿಲಕ್ಷಣೇನ ಪರಮಾರ್ಥಸಂನ್ಯಾಸೇನ ಕೀದೃಶಂ ಸಾಮಾನ್ಯಮ್ ಅಙ್ಗೀಕೃತ್ಯ ತದ್ಭಾವಃ ಉಚ್ಯತೇ ?–ಇತ್ಯಪೇಕ್ಷಾಯಾಮ್ ಇದಮ್ ಉಚ್ಯತೇ । ಅಸ್ತಿ ಹಿ ಪರಮಾರ್ಥಸಂನ್ಯಾಸೇನ ಸಾದೃಶ್ಯಂ ಕರ್ತೃದ್ವಾರಕಂ ಕರ್ಮಯೋಗಸ್ಯ । ಯೋ ಹಿ ಪರಮಾರ್ಥಸಂನ್ಯಾಸೀ ಸಃ ತ್ಯಕ್ತಸರ್ವಕರ್ಮಸಾಧನತಯಾ ಸರ್ವಕರ್ಮತತ್ಫಲವಿಷಯಂ ಸಙ್ಕಲ್ಪಂ ಪ್ರವೃತ್ತಿಹೇತುಕಾಮಕಾರಣಂ ಸಂನ್ಯಸ್ಯತಿ । ಅಯಮಪಿ ಕರ್ಮಯೋಗೀ ಕರ್ಮ ಕುರ್ವಾಣ ಏವ ಫಲವಿಷಯಂ ಸಙ್ಕಲ್ಪಂ ಸಂನ್ಯಸ್ಯತಿ ಇತ್ಯೇತಮ್ ಅರ್ಥಂ ದರ್ಶಯಿಷ್ಯನ್ ಆಹ–ನ ಹಿ ಯಸ್ಮಾತ್ ಅಸಂನ್ಯಸ್ತಸಙ್ಕಲ್ಪಃ ಅಸಂನ್ಯಸ್ತಃ ಅಪರಿತ್ಯಕ್ತಃ ಫಲವಿಷಯಃ ಸಙ್ಕಲ್ಪಃ[2] ಅಭಿಸನ್ಧಿಃ ಯೇನ ಸಃ ಅಸಂನ್ಯಸ್ತಸಙ್ಕಲ್ಪಃ ಕಶ್ಚನ ಕಶ್ಚಿದಪಿ ಕರ್ಮೀ ಯೋಗೀ ಸಮಾಧಾನವಾನ್ ಭವತಿ । ನ ಸಂಭವತಿ ಇತ್ಯರ್ಥಃ । ಫಲಸಙ್ಕಲ್ಪಸ್ಯ ಚಿತ್ತವಿಕ್ಷೇಪಹೇತುತ್ವಾತ್ । ತಸ್ಮಾತ್ ಯಃ ಕಶ್ಚನ ಕರ್ಮೀ ಸಂನ್ಯಸ್ತಫಲಸಙ್ಕಲ್ಪೋ ಭವೇತ್, ಸ ಯೋಗೀ ಸಮಾಧಾನವಾನ್ ಅವಿಕ್ಷಿಪ್ತಚಿತ್ತೋ ಭವೇತ್ । ಚಿತ್ತವಿಕ್ಷೇಪಹೇತೋಃ ಫಲಸಙ್ಕಲ್ಪಸ್ಯ ಸಂನ್ಯಸ್ತತ್ವಾತ್ ಇತ್ಯಭಿಪ್ರಾಯಃ ॥

---

1. ‘ ಶ್ರುತಿಸ್ಮೃತಿವಾದಾಃ ’ ಮು॥ಮೈ॥
2. ‘ ಫಲವಿಷಯಸಙ್ಕಲ್ಪಃ ’ ಮು॥ಮೈ॥

(ಭಾಷ್ಯಾರ್ಥ)

ಎಲೈ ಪಾಂಡವನೆ, ಎಲ್ಲಾ ಕರ್ಮಗಳನ್ನೂ ಅವುಗಳ ಫಲವನ್ನೂ ಬಿಡುವ ರೂಪವಾಗಿರುವ ಯಾವ **ಪರಮಾರ್ಥಸಂನ್ಯಾಸವನ್ನು**[1] ಶ್ರುತಿಸ್ಮೃತಿಗಳನ್ನು ಬಲ್ಲವರು ಸಂನ್ಯಾಸವೆಂದು ಕರೆಯುವರೋ ಆ ಪರಮಾರ್ಥಸಂನ್ಯಾಸವೆಂಬುದು ಕರ್ಮವನ್ನು ಮಾಡುವ ರೂಪದ ಯೋಗವೆಂದೇ ತಿಳಿ, ಅರಿತುಕೊ

ಪ್ರವೃತ್ತಿರೂಪವಾದ ಕರ್ಮಯೋಗಕ್ಕೂ ಅದಕ್ಕೆ ವಿರುದ್ಧವಾಗಿ ನಿವೃತ್ತಿಲಕ್ಷಣವಾಗಿರುವ ಪರಮಾರ್ಥಸಂನ್ಯಾಸಕ್ಕೂ ಎಂಥ ಹೋಲಿಕೆಯನ್ನು ಇಟ್ಟುಕೊಂಡು ಅದೇ ಇದೆಂದು ಹೇಳಿರುತ್ತದೆ?–ಎಂಬ ಶಂಕೆ ಉಂಟಾದರೆ (ಇದಕ್ಕೆ) ಹೇಳುವ (ಉತ್ತರ) ವಿದು: **ಕರ್ಮಯೋಗಕ್ಕೆ ಕರ್ತೃವಿನ ಮೂಲಕವಾಗಿ ಪರಮಾರ್ಥಸಂನ್ಯಾಸದ ಹೋಲಿಕೆಯು ಇದ್ದೇ ಇರುತ್ತದೆ ಹೇಗೆಂದರೆ, ಯಾವನು ಪರಮಾರ್ಥಸಂನ್ಯಾಸಿಯೋ ಅವನು ಸರ್ವಕರ್ಮಗಳನ್ನೂ (ಅವುಗಳ) ಸಾಧನಗಳನ್ನೂ**[2] **ಬಿಟ್ಟಿರುವದರಿಂದ ಎಲ್ಲಾ ಕರ್ಮಗಳ ಮತ್ತು ಅವುಗಳ ಫಲದ ವಿಷಯವಾದ ಸಂಕಲ್ಪವನ್ನು ಬಿಟ್ಟಿರುತ್ತಾನೆ; (ಆ ಸಂಕಲ್ಪವೇ) ಪ್ರವೃತ್ತಿಗೆ ಕಾರಣವಾದ ಕಾಮಕ್ಕೆ ಮೂಲವು ಈ ಕರ್ಮಯೋಗಿಯೂ ಕರ್ಮವನ್ನು ಮಾಡುತ್ತಲೇ ಇದ್ದರೂ ಫಲವಿಷಯಕವಾದ ಸಂಕಲ್ಪವನ್ನು ಬಿಟ್ಟಿರುತ್ತಾನೆ**[3]–ಎಂಬೀ ವಿಷಯವನ್ನು ತಿಳಿಸುವದಕ್ಕೆ (ಭಗವಂತನು ಈ ಮಾತನ್ನು) ಆಡಿರುತ್ತಾನೆ.—

(ಹಿ) ಏಕೆಂದರೆ ಸಂನ್ಯಸ್ತಸಂಕಲ್ಪನಲ್ಲದವನು ಎಂದರೆ ಫಲವಿಷಯವಾದ ಸಂಕಲ್ಪವನ್ನು ಎಂದರೆ ಹಂಬಲಿಕೆಯನ್ನು ಸಂನ್ಯಾಸಮಾಡದೆ ಇರುವ, ತ್ಯಾಗ ಮಾಡದೆ ಇರುವ ಯಾವನೂ ಯಾವ ಕರ್ಮಿಯೂ ಯೋಗಿಯಾಗಲಾರನು, (ಚಿತ್ತ) ಸಮಾಧಾನವುಳ್ಳವನಾಗಲಾರನು. (ಅವನು ಯೋಗಿಯಾಗುವ) ಸಂಭವವಿರುವದಿಲ್ಲ ಎಂದರ್ಥ, ಏಕೆಂದರೆ ಫಲವನ್ನು ಕುರಿತು ಸಂಕಲ್ಪವನ್ನು ಮಾಡುತ್ತಿರುವದು ಚಿತ್ತವು ಹರಿದಾಡುವದಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಯಾವ ಕರ್ಮಿಯಾದವನು ಫಲದ ಸಂಕಲ್ಪವನ್ನು ಬಿಡುವನಾಗುವನೋ ಅವನು ಯೋಗಿಯು, ಎಂದರೆ (ಚಿತ್ತ) ಸಮಾಧಾನವುಳ್ಳವನಾಗಿರುವನು, ಹರಿದಾಡದ ಚಿತ್ತವುಳ್ಳವನಾಗಿರುವನು, ಏಕೆಂದರೆ ಚಿತ್ತವು ಹರಿದಾಡುವದಕ್ಕೆ ಕಾರಣವಾದ ಫಲದ ಸಂಕಲ್ಪವನ್ನು (ಅವನು) ಬಿಟ್ಟಿರುತ್ತಾನೆ ಎಂದು ಅಭಿಪ್ರಾಯ.

---

1. ನಿಜವಾದ ಸಂನ್ಯಾಸವನ್ನು; ಸಂನ್ಯಾಸಶಬ್ದಕ್ಕೆ ಅದೇ ಮುಖ್ಯಾರ್ಥ.
2. ಅಗ್ನಿಹೋತ್ರಾದಿ ಕರ್ಮಗಳನ್ನೂ ಯಜ್ಞೋಪವೀತವೇ ಮುಂತಾದ ಸಾಧನಗಳನ್ನೂ.
3. ಬಿಡುವದಕ್ಕೆ ಯತ್ನಿಸುತ್ತಿರುತ್ತಾನೆ.

## ಯೋಗದ ಫಲಕ್ಕೆ ಉಪರತಿಯು ಸಾಧನ

(ಭಾಷ್ಯ)

೩೭೭. ಏವಂ ಪರಮಾರ್ಥಸಂನ್ಯಾಸಕರ್ಮಯೋಗಯೋಃ ಕರ್ತೃದ್ವಾರಕಂ ಸಂನ್ಯಾಸಸಾಮಾನ್ಯಮ್ ಅಪೇಕ್ಷ್ಯ "ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಣ್ಡವ" ಇತಿ ಕರ್ಮಯೋಗಸ್ಯ ಸ್ತುತ್ಯರ್ಥಂ ಸಂನ್ಯಾಸತ್ವಮ್ ಉಕ್ತಮ್ । ಧ್ಯಾನಯೋಗಸ್ಯ ಫಲನಿರಪೇಕ್ಷಃ ಕರ್ಮಯೋಗಃ ಬಹಿರಙ್ಗಂ ಸಾಧನಮ್ ಇತಿ ತಂ ಸಂನ್ಯಾಸತ್ವೇನ ಸ್ತುತ್ವಾ ಅಧುನಾ ಕರ್ಮಯೋಗಸ್ಯ ಧ್ಯಾನಯೋಗಸಾಧನತ್ವಂ ದರ್ಶಯತಿ–

(ಭಾಷ್ಯಾರ್ಥ)

ಹೀಗೆ ಪರಮಾರ್ಥಸಂನ್ಯಾಸಕ್ಕೂ ಕರ್ಮಯೋಗಕ್ಕೂ ಕರ್ತೃವಿನ ಮೂಲಕವಾಗಿ[1] (ಸಂಕಲ್ಪ)ಸಂನ್ಯಾಸವೆಂಬ ಹೋಲಿಕೆಯಿರುವದೆಂಬುದರ ಮೇಲೆ "ಯಾವದನ್ನು ಸಂನ್ಯಾಸವೆಂದು ಕರೆಯುವರೋ ಅದನ್ನು ಯೋಗವೆಂದು ತಿಳಿಯಯ್ಯ, ಪಾಂಡವನೆ" ಎಂದು ಕರ್ಮಯೋಗವನ್ನು ಹೊಗಳುವದಕ್ಕಾಗಿ (ಅದನ್ನು) ಸಂನ್ಯಾಸವೆಂದು ಕರೆದದ್ದಾಯಿತು. **ಧ್ಯಾನಯೋಗಕ್ಕೆ ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮಯೋಗವು ಬಹಿರಂಗಸಾಧನವು ಎಂಬ (ಕಾರಣದಿಂದ) ಅದನ್ನು ಸಂನ್ಯಾಸವೆಂದು ಹೊಗಳಿ[2] ಈಗ ಕರ್ಮಯೋಗವು ಧ್ಯಾನಯೋಗಕ್ಕೆ ಸಾಧನವೆಂಬುದನ್ನು ತಿಳಿಸುತ್ತಾನೆ —**

**ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।**
**ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥೩॥**

೩. ಯೋಗವನ್ನು ಏರಲೆಳಸುವ ಮುನಿಗೆ ಕರ್ಮವು ಕಾರಣವೆನಿಸುವದು, ಯೋಗಾರೂಢನಾದ ಅವನಿಗೇ ಶಮವು ಕಾರಣವೆನಿಸುವದು.

---

1. ಇಲ್ಲಿ ಪರಮಾರ್ಥಸಂನ್ಯಾಸವೆಂದರೆ ನಾಲ್ಕನೆಯ ಆಶ್ರಮವೆಂದಿಷ್ಟೇ ಅರ್ಥಮಾಡಿಕೊಂಡರೆ ಸಾಕು. ಜ್ಞಾನವೆಂದು ಅರ್ಥಮಾಡಬೇಕಾದದ್ದಿಲ್ಲ; ಏಕೆಂದರೆ ಜ್ಞಾನಿಗೆ ಕರ್ತೃತ್ವವೇ ಇರುವದಿಲ್ಲ.

2. ಕರ್ಮಯೋಗವನ್ನು ಫಲತ್ಯಾಗವೆಂಬ ಹೋಲಿಕೆಯಿಂದ ಸಂನ್ಯಾಸವೆಂದು ಹೊಗಳಿರುವದೇಕೆಂದರೆ ಅದನ್ನು ಧ್ಯಾನಯೋಗಿಯಾಗಬೇಕೆನ್ನುವವನು ಮಾಡಬೇಕು_ಎಂದು ವಿಧಿಸುವದಕ್ಕಾಗಿ. ವಿಹಿತವಾದದ್ದನ್ನೇ ಶಾಸ್ತ್ರದಲ್ಲಿ ಹೊಗಳುತ್ತದೆ.

(ಭಾಷ್ಯ)

೩೭೮. ಆರುರುಕ್ಷೋಃ ಆರೋಢುಮ್ ಇಚ್ಛತಃ, ಅನಾರೂಢಸ್ಯ ಧ್ಯಾನ ಯೋಗೇ ಅವಸ್ಥಾತುಮ್ ಅಶಕ್ತಸ್ಯೈವ ಇತ್ಯರ್ಥಃ । ಕಸ್ಯ ಆರುರುಕ್ಷೋಃ?[1] ಮುನೇಃ ಕರ್ಮಫಲಸಂನ್ಯಾಸಿನಃ ಇತ್ಯರ್ಥಃ । ಕಿಮ್ ಆರುರುಕ್ಷೋಃ ? ಯೋಗಮ್ । ಕರ್ಮ ಕಾರಣಂ ಸಾಧನಮ್ ಉಚ್ಯತೇ । ಯೋಗಾರೂಢಸ್ಯ ಪುನಃ ತಸ್ಯೈವ ಉಪಶಮಃ ಸರ್ವಕರ್ಮಭ್ಯಃ ನಿವೃತ್ತಿಃ ಕಾರಣಂ ಯೋಗಾರೂಢತ್ವಸ್ಯ[2] ಸಾಧನಮ್ ಉಚ್ಯತೇ ಇತ್ಯರ್ಥಃ । ಯಾವತ್ ಯಾವತ್ ಕರ್ಮಭ್ಯಃ ಉಪರಮತೇ ತಾವತ್ ತಾವತ್ ನಿರಾಯಾಸಸ್ಯ ಜಿತೇನ್ದ್ರಿಯಸ್ಯ ಚಿತ್ತಂ ಸಮಾಧೀಯತೇ । ತಥಾ ಸತಿ ಸ ಝಟಿತಿ ಯೋಗಾರೂಢೋ ಭವತಿ । ತಥಾ ಚ ಉಕ್ತಂ ವ್ಯಾಸೇನ–"ನೈತಾದೃಶಂ ಬ್ರಾಹ್ಮಣ ಸ್ಯಾಸ್ತಿ ವಿತ್ತಂ ಯಥೈಕತಾ ಸಮತಾ ಸತ್ಯತಾ ಚ । ಶೀಲಂ ಸ್ಥಿತಿರ್ದಣ್ಡನಿಧಾನ ಮಾರ್ಜವಂ ತತಸ್ತತಶ್ಚೋಪರಮಃ ಕ್ರಿಯಾಭ್ಯಃ"॥ (ಮೋ. ಧ ೧೭೫-೩೭) ಇತಿ॥

(ಭಾಷ್ಯಾರ್ಥ)

ಯೋಗವನ್ನೇರಲೆಳಸಿರುವವನಿಗೆ, ಎಂದರೆ (ಅದನ್ನು) ಹತ್ತಬೇಕೆಂದು ಇಚ್ಛಿಸುತ್ತಿರುವವನಿಗೆ, (ಇನ್ನೂ) ಏರದೆ ಇರುವವನಿಗೆ, ಧ್ಯಾನಯೋಗವನ್ನು ಏರುವದಕ್ಕೆ ಅಶಕ್ತನಾದವನಿಗೇ ಎಂದರ್ಥ. ಏರಲೆಳಸಿರುವ ಯಾರಿಗೆ? ಎಂದರೆ ಮುನಿಗೆ, ಕರ್ಮಫಲವನ್ನು ಸಂನ್ಯಾಸಮಾಡಿದವನಿಗೆ[3] ಎಂದರ್ಥ. ಏನನ್ನು ಏರಲೆಳ ಸುವವನಿಗೆ? ಯೋಗವನ್ನು (ಏರಲೆಳಸುವವನಿಗೆ). ಕರ್ಮವು ಕಾರಣವು, ಸಾಧನವು ಎನ್ನಿಸಿಕೊಳ್ಳುತ್ತದೆ. ಆದರೆ ಯೋಗಾರೂಢನಾಗಿರುವ ಅವನಿಗೇ[4] ಶಮವು, ಎಂದರೆ

---

1. 'ಕಸ್ಯ ತಸ್ಯ ಆರುರುಕ್ಷೋಃ?' ಆ॥ವಾ॥ಮ್ಯೆ॥ ಎಂಬ ಪಾಠಕ್ಕಿಂತ ಈ ನಿ॥ ಗು॥ ಪಾಠವು ಮೇಲು. 'ತಸ್ಯ ಆರುರುಕ್ಷೋಃ' ಮು॥

2. 'ಯೋಗಾರೂಢಸ್ಯ' ಆ॥ ವಾ॥ ಮ್ಯೆ॥

3 ಮುಂದೆ ಮುನಿಯಾಗುವನೆಂಬರ್ಥದಲ್ಲಿ ಕರ್ಮಯೋಗಿಯನ್ನು ಇಲ್ಲಿ ಮುನಿ ಯೆಂದು ಕರೆದಿರುತ್ತದೆ.

4. 'ತಸ್ಯ ಶಮ ಏವ' ಎಂದು ಅನ್ವಯವನ್ನು ತೋರಿಸಿರುವ ಆ॥ ವ್ಯಾಖ್ಯಾನವು ಭಾಷ್ಯವಿರುದ್ಧವೆಂದು ತೋರುತ್ತದೆ. ಭಾ.ಭಾ. ೪೭೧ ರಲ್ಲಿ ತಸ್ಯೈವ ಎಂಬುದರ ವಿವರಣೆಯನ್ನು ನೋಡಿ.

ಶಾಂತಿಯು, ಸರ್ವಕರ್ಮಗಳನ್ನೂ ಬಿಡುವದು[1], ಕಾರಣವು ಎಂದರೆ ಯೋಗಾರೂಢನಾಗುವದಕ್ಕೆ[2] ಸಾಧನವು ಎನಿಸುವದು. ಎಷ್ಟೆಷ್ಟು ಕರ್ಮಗಳನ್ನು ಬಿಡುವನೋ ಅಷ್ಟಷ್ಟು ಸುಲಭವಾಗಿ[3] ಜಿತೇಂದ್ರಿಯನಾಗುವದರಿಂದ ಚಿತ್ತವು ಸಮಾಧಾನವಾಗುವದು. ಹಾಗಾದರೆ ಅವನು ಬೇಗನೆ ಯೋಗಾರೂಢನಾಗುವನು. ಆದ್ದರಿಂದಲೇ ವ್ಯಾಸರು ಹೀಗೆಂದು ಹೇಳಿರುತ್ತಾರೆ –ನೈತಾದೃಶಂ ಬ್ರಾಹ್ಮಣಸ್ಯಾಸ್ತಿ ವಿತ್ತಂ ಯಥೈಕತಾ ಸಮತಾ ಸತ್ಯತಾ ಚ । ಶೀಲಂ ಸ್ಥಿತಿರ್ದಣ್ಡನಿಧಾನಮಾರ್ಜವಂ ತತಸ್ತತಶ್ಚೋಪರಮಃ ಕ್ರಿಯಾಭ್ಯಃ ॥ '' (ಮೋ. ಧ. ೧೭೫-೩೭). ಒಂಟಿಯಾಗಿರುವದು, (ಸರ್ವರಲ್ಲಿಯೂ) ಸಮಬುದ್ಧಿಯುಳ್ಳವನಾಗಿರುವದು, ಸತ್ಯವನ್ನು ನುಡಿಯುವದು, ಒಳ್ಳೆಯ ನಡತೆ, ಸ್ಥಿರಚಿತ್ತನಾಗಿರುವದು, ಹಿಂಸೆಮಾಡದೆ ಇರುವದು, ಸರಳತನ, ಕ್ರಿಯೆಗಳನ್ನು ಆಗಾಗಲೇ ಬಿಡುತ್ತಿರುವದು–ಇಂಥ ಧನವು ಬ್ರಾಹ್ಮಣನಿಗೆ ಮತ್ತೊಂದಿಲ್ಲ.

## ಯೋಗಾರೂಢನ ಲಕ್ಷಣ

(ಭಾಷ್ಯ)

೩೭೯. ಅಥ ಇದಾನೀಂ ಕದಾ ಯೋಗಾರೂಢೋ ಭವತಿ ಇತಿ? ಉಚ್ಯತೇ–

(ಭಾಷ್ಯಾರ್ಥ)

ಇನ್ನು ಯಾವಾಗ ಯೋಗಾರೂಢನಾಗುವನು ? ಎಂದರೆ (ಭಗವಂತನು) ಹೇಳುತ್ತಾನೆ :–

**ಯದಾ ಹಿ ನೇನ್ದ್ರಿಯಾರ್ಥೇಷು ನ ಕರ್ಮಸ್ವನುಷಜ್ಯತೇ ।**
**ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ ॥೪॥**

---

1. ಕರ್ಮವಾಸನೆಯೆಲ್ಲ ಅಳಿದರೇ ಮನಸ್ಸಿಗೆ ಶಾಂತಿಯಾಗುವದು

2. ' ಯೋಗಾರೂಢಸ್ಯ ' ಎಂಬ ಪಾಠದಲ್ಲಿ ಯೋಗಾರೂಢನಿಗೆ ಎಂದು ಪುನರುಕ್ತಿಯಾಗುತ್ತದೆ. ' ಯೋಗಾರೂಢತ್ವಸ್ಯ ' ಎಂಬ ಪಾಠದಲ್ಲಿ ' ಯೋಗಾರೂಢನಿಗೆ ಯೋಗಾರೂಢನಾಗುವದಕ್ಕೆ ' ಎಂದು ಅರ್ಥವಾಗುತ್ತದೆ, ಇಲ್ಲಿ ಯೋಗಾರೂಢನಿಗೆ ಎಂದರೆ ಧ್ಯಾನಯೋಗಿಗೆ ಯೋಗಾರೂಢನಾಗುವದಕ್ಕೆ ಎಂದರೆ ಧ್ಯಾನಯೋಗದ ಫಲವನ್ನು ಪಡೆದು ಪರಮಾರ್ಥಯೋಗವನ್ನು ಪಡೆಯುವದಕ್ಕೆ ಎಂದು ಅಭಿಪ್ರಾಯವನ್ನು ಕಲ್ಪಿಸಬೇಕು ಭಾ. ಭಾ. ೩೭೧ನ್ನು ನೋಡಿರಿ.

3. ಉದಾಹರಣೆಗೆ ಕಾಮ್ಯಕರ್ಮತ್ಯಾಗದಿಂದ ನಿತ್ಯಕರ್ಮವನ್ನು ಮಾತ್ರ ಮಾಡುವವನಿಗೆ ಆ ತ್ಯಾಗವಿಲ್ಲದವನಿಗಿಂತ ಹೆಚ್ಚಿನ ಸಮಾಧಾನವಿರುತ್ತದೆ.

೪. ಯಾವಾಗ ಇಂದ್ರಿಯಾರ್ಥಗಳಲ್ಲಾಗಲಿ ಕರ್ಮಗಳಲ್ಲಾಗಲಿ ಆಸಕ್ತಿಯುಳ್ಳವನಾಗಿರುವದಿಲ್ಲವೋ (ಯಾವಾಗ) ಸರ್ವಸಂಕಲ್ಪಸಂನ್ಯಾಸಿಯಾಗಿರುವನೋ ಆಗ ಯೋಗಾರೂಢನೆನಿಸುವನು.

(ಭಾಷ್ಯ)

೩೮೦ ಯದಾ ಸಮಾಧೀಯಮಾನಚಿತ್ತಃ ಯೋಗೀ ಹಿ ಇನ್ದ್ರಿಯಾರ್ಥೇಷು ಇನ್ದ್ರಿಯಾಣಾಮ್ ಅರ್ಥಾಃ ಶಬ್ದಾದಯಃ ತೇಷು ಇನ್ದ್ರಿಯಾರ್ಥೇಷು ಕರ್ಮಸು ಚ ನಿತ್ಯನೈಮಿತ್ತಿಕಕಾಮ್ಯಪ್ರತಿಷಿದ್ಧೇಷು ಪ್ರಯೋಜನಾಭಾವಬುದ್ಧ್ಯಾ ನಾನುಷಜ್ಯತೇ ಅನುಷಙ್ಗಂ ಕರ್ತವ್ಯತಾಬುದ್ಧಿಂ ನ ಕರೋತಿ ಇತ್ಯರ್ಥಃ । ಸರ್ವಸಙ್ಕಲ್ಪಸಂನ್ಯಾಸೀ ಸರ್ವಾನ್ ಸಙ್ಕಲ್ಪಾನ್ ಇಹಾಮುತ್ರಾರ್ಥಕಾಮಹೇತೂನ್ ಸಂನ್ಯಸಿತುಂ ಶೀಲಮ್ ಅಸ್ಯ ಇತಿ ಸರ್ವಸಙ್ಕಲ್ಪಸಂನ್ಯಾಸೀ ಯೋಗಾರೂಢಃ ಪ್ರಾಪ್ತಯೋಗಃ ಇತ್ಯೇತತ್ ತದಾ ತಸ್ಮಿನ್ ಕಾಲೇ ಉಚ್ಯತೇ ॥

(ಭಾಷ್ಯಾರ್ಥ)

ಯಾವಾಗ ಮನಸ್ಸನ್ನು ಸಮಾಧಾನಗೊಳಿಸಿಕೊಳ್ಳುತ್ತಿರುವ ಯೋಗಿಯು ಇಂದ್ರಿಯಾರ್ಥಗಳಲ್ಲಿ–ಇಂದ್ರಿಯಗಳ ಅರ್ಥಗಳು ಎಂದರೆ ಶಬ್ದವೇ ಮುಂತಾದ (ವಿಷಯ)ಗಳು, ಆ ಇಂದ್ರಿಯಾರ್ಥಗಳಲ್ಲಿ–ಮತ್ತು ನಿತ್ಯ, ನೈಮಿತ್ತಿಕ, ಕಾಮ್ಯ, ಪ್ರತಿಷಿದ್ಧ–ಎಂಬ ಕರ್ಮಗಳಲ್ಲಿ (ಅವುಗಳಿಂದ) ಯಾವ ಪ್ರಯೋಜನವೂ (ತನಗೆ ಆಗಬೇಕಾದದ್ದು) ಇಲ್ಲವೆಂಬ ಬುದ್ಧಿಯಿಂದ, (ಅವುಗಳಲ್ಲಿ) ಅನುಷಕ್ತನಾಗದೆ ಇರುವನೋ, ಅನುಷಂಗವನ್ನು ಎಂದರೆ (ಇವುಗಳು) ಮಾಡತಕ್ಕವು ಎಂಬ ಬುದ್ಧಿಯನ್ನು ಮಾಡದೆ ಇರುವನೋ ಎಂದರ್ಥ. (ಯಾವಾಗ) ಸರ್ವಸಂಕಲ್ಪಸಂನ್ಯಾಸಿ(ಯಾಗಿರುವನೋ) ಈ ಲೋಕದ ಮತ್ತು ಪರಲೋಕದ ವಿಷಯಗಳನ್ನು ಬಯಸುವದಕ್ಕೆ ಕಾರಣವಾಗಿರುವ ಎಲ್ಲಾ ಕಾಮಗಳನ್ನೂ ಸಂನ್ಯಾಸಮಾಡುವ ಸ್ವಭಾವದವನಾದ್ದರಿಂದ ಅವನು ಸರ್ವಸಂಕಲ್ಪಸಂನ್ಯಾಸಿಯು (ಯಾವಾಗ ಅಂಥವನಾಗುವನೋ) ಆಗ ಆ ಕಾಲದಲ್ಲಿ **ಯೋಗಾರೂಢನು**, ಯೋಗವನ್ನು ಪಡೆದುಕೊಂಡವನು [1], ಎನಿಸಿಕೊಳ್ಳುತ್ತಾನೆ.

---

1. ಯೋಗಸಿದ್ಧಿಯನ್ನು ಪಡೆದುಕೊಂಡವನು ಎಂದರ್ಥ. ಜ್ಞಾನವೇ ಯೋಗದ ಸಿದ್ಧಿಯು.

(ಭಾಷ್ಯ)

೩೮೧. "ಸರ್ವಸಂಕಲ್ಪಸಂನ್ಯಾಸೀ" ಇತಿ ವಚನಾತ್ ಸರ್ವಾಂಶ್ಚ ಕಾಮಾನ್ ಸರ್ವಾಣಿ ಚ ಕರ್ಮಾಣಿ ಸಂನ್ಯಸೇತ್ ಇತ್ಯರ್ಥಃ । ಸಙ್ಕಲ್ಪಮೂಲಾ ಹಿ ಸರ್ವೇ ಕಾಮಾಃ । "ಸಙ್ಕಲ್ಪಮೂಲಃ ಕಾಮೋ ವೈ ಯಜ್ಞಾಃ ಸಙ್ಕಲ್ಪ ಸಮ್ಭವಾಃ ।" (ಮನು. ೨-೩) "ಕಾಮ ಜಾನಾಮಿ ತೇ ಮೂಲಂ ಸಙ್ಕಲ್ಪಾತ್ ಕಿಲ ಜಾಯಸೇ । ನ ತ್ವಾಂ ಸಙ್ಕಲ್ಪಯಿಷ್ಯಾಮಿ ತೇನ ಮೇ[1] ನ ಭವಿಷ್ಯಸಿ ॥" (ಮೋ. ಧ. ೧೭೭-೨೫) ಇತ್ಯಾದಿಸ್ಮೃತೇಃ । ಸರ್ವಕಾಮಪರಿತ್ಯಾಗೇ ಚ ಸರ್ವಕರ್ಮಸಂನ್ಯಾಸಃ ಸಿದ್ಧೋ ಭವತಿ । "ಸ ಯಥಾಕಾಮೋ ಭವತಿ ತತ್ಕ್ರತುರ್ಭವತಿ ಯತ್ಕ್ರತುರ್ಭವತಿ ತತ್ಕರ್ಮ ಕುರುತೇ" (ಬೃ. ೪-೪-೫) ಇತ್ಯಾದಿಶ್ರುತಿಭ್ಯಃ । "ಯದ್ಯದ್ ಹಿ ಕುರುತೇ ಜನ್ತು[2]ಸ್ತತ್ತತ್ ಕಾಮಸ್ಯ ಚೇಷ್ಟಿತಮ್" (ಮನು. ೨-೪) ಇತ್ಯಾದಿಸ್ಮೃತಿಭ್ಯಶ್ಚ । ನ್ಯಾಯಾಚ್ಚ । ನ ಹಿ ಸರ್ವಸಙ್ಕಲ್ಪಸಂನ್ಯಾಸೇ ಕಶ್ಚಿತ್ ಸ್ಪನ್ದಿತುಮಪಿ ಶಕ್ತಃ । ತಸ್ಮಾತ್ "ಸರ್ವಸಙ್ಕಲ್ಪಸಂನ್ಯಾಸೀ" ಇತಿ ವಚನಾತ್ ಸರ್ವಾನ್ ಕಾಮಾನ್ ಸರ್ವಾಣಿ ಕರ್ಮಾಣಿ ಚ ತ್ಯಾಜಯತಿ ಭಗವಾನ್ ॥

(ಭಾಷ್ಯಾರ್ಥ)

"ಸರ್ವಸಂಕಲ್ಪಗಳನ್ನೂ ಸಂನ್ಯಾಸಮಾಡಿದವನಾಗಿ" ಎಂದದ್ದರಿಂದ ಸಕಲ ಕಾಮಗಳನ್ನೂ ಸಕಲ ಕರ್ಮಗಳನ್ನೂ ಬಿಡತಕ್ಕದ್ದೆಂದು ಅರ್ಥ(ವನ್ನು ಮಾಡಿ ಕೊಳ್ಳಬೇಕು). ಏಕೆಂದರೆ ಕಾಮಗಳಿಗೆಲ್ಲ ಸಂಕಲ್ಪವೇ ಮೂಲವು. "ಕಾಮಕ್ಕೆ ಸಂಕಲ್ಪವೇ ಮೂಲವು, ಸಂಕಲ್ಪದಿಂದಲೇ ಯಜ್ಞಗಳು ಹುಟ್ಟುವವು" (ಮನು. ೨-೩) "ಎಲೈ ಕಾಮವೇ, ನಿನ್ನಮೂಲವನ್ನು ಅರಿತುಕೊಂಡೆನು, ಸಂಕಲ್ಪದಿಂದಲ್ಲವೆ, ನೀನು ಹುಟ್ಟುವೆ? ಇನ್ನು ನಿನ್ನನ್ನು ಸಂಕಲ್ಪಿಸದೆ ಇರುವೆನು, ಅದರಿಂದ ನನಗೆ ನೀನು ಉಂಟಾಗಲೇ ಆರೆ." (ಮೋ.ಧ ೧೭೭-೨೫)–ಎಂದು ಮುಂತಾಗಿರುವ ಸ್ಮೃತಿಯು ಇದಕ್ಕೆ ಕಾರಣವು. ಎಲ್ಲಾಕಾಮಗಳನ್ನೂ ಬಿಟ್ಟರೇ ಸರ್ವಕರ್ಮಸಂನ್ಯಾಸವು ಸಿದ್ಧವಾಗುತ್ತದೆ "ಅವನು ಎಂಥ ಕಾಮವುಳ್ಳವನಾಗಿರುವನೋ ಅಂಥ ನಿಶ್ಚಯ ವುಳ್ಳವನಾಗಿರುವನು

---

1. ಈ ಶ್ಲೋಕದ ಉತ್ತರಾರ್ಧವು ಮ॥ ಪಾಠದಲ್ಲಿಲ್ಲ. ಭಾರತದಲ್ಲಿ "ಸಮೂಲೋ ನ ಭವಿಷ್ಯಸಿ" ಎಂದಿದೆ ; ಅದೇ ಮೈ॥ ಪಾಠ. 'ಬೇರು ಸಹಿತವಾಗಿ ನಾಶವಾಗುವೆ' ಎಂದು ಅದಕ್ಕೆ ಅರ್ಥ.

2. 'ಕರ್ಮ' ಎಂದು ಆ॥ನಿ॥ ಗು॥; ನಿ॥ ಮುದ್ರಿತಮನುಸ್ಮೃತಿಯಲ್ಲಿ 'ಕಿಂಚಿತ್' ಎದೆ.

ಎಂಥ ನಿಶ್ಚಯವುಳ್ಳವನಾಗಿರುವನೋ ಅಂಥ ಕರ್ಮವನ್ನು ಮಾಡುತ್ತಾನೆ" (ಬೃ. ೪-೪-೫) ಮುಂತಾದ ಶ್ರುತಿಗಳಿಂದಲೂ "ಜೀವನು ಏನೇನು ಮಾಡುತ್ತಾನೋ ಅದೆಲ್ಲವೂ ಕಾಮದ ಚೇಷ್ಟೆಯೇ" (ಮನು. ೨-೪) ಮುಂತಾದ ಸ್ಮೃತಿಗಳಿಂದಲೂ (ಇದು ಸಿದ್ಧವಾಗುತ್ತದೆ). ಇದಕ್ಕೆ ಯುಕ್ತಿಯೂ (ಹೊಂದುತ್ತದೆ). ಏಕೆಂದರೆ **ಸಂಕಲ್ಪಗಳನ್ನೆಲ್ಲ ಬಿಟ್ಟರೆ ಮನುಷ್ಯನು ಅಲುಗಾಡುವದುಕೂಡ ಆಗುವದಿಲ್ಲ.**[1] ಆದ್ದರಿಂದ **"ಸರ್ವಸಂಕಲ್ಪಗಳನ್ನೂ ಸಂನ್ಯಾಸಮಾಡಿದವನಾಗಿ" ಎಂಬ ಮಾತಿನಿಂದ ಸರ್ವಕಾಮಗಳನ್ನೂ ಸರ್ವಕರ್ಮಗಳನ್ನೂ ಬಿಟ್ಟುಬಿಡಬೇಕೆಂದೇ ಭಗವಂತನು ಹೇಳಿರುತ್ತಾನೆಂದು ಸಿದ್ಧವಾಯಿತು.**[2]

(ಭಾಷ್ಯ)

೩೮೨. ಯದಾ ಏವಂ ಯೋಗಾರೂಢಃ ತದಾ ತೇನ ಆತ್ಮಾ ಉದ್ಧೃತೋ ಭವತಿ ಸಂಸಾರಾತ್ ಅನರ್ಥಜಾತಾತ್[3] । ಅತಃ–

(ಭಾಷ್ಯಾರ್ಥ)

ಹೀಗೆ ಯಾವಾಗ ಯೋಗಾರೂಢನಾಗುವನೋ ಆಗ ಅನರ್ಥಗಳ ಗುಂಪಾದ ಸಂಸಾರದಿಂದ ತನ್ನನ್ನು ತಾನು ಬಿಡುಗಡೆಮಾಡಿಕೊಂಡಂತೆ ಆಗುವದು. ಆದ್ದರಿಂದ–

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।**
**ಆತ್ಮೈವ ಹ್ಯಾತ್ಮನೋ ಬನ್ಧುರಾತ್ಮೈವ ರಿಪುರಾತ್ಮನಃ ॥೫॥**

೫. ತನ್ನಿಂದ ತನ್ನನ್ನು ಉದ್ಧಾರಮಾಡಿಕೊಳ್ಳಬೇಕು, ತನ್ನನ್ನು ತಗ್ಗಿಸಿಕೊಳ್ಳಬಾರದು. ಏಕೆಂದರೆ ತನಗೆತಾನೇ ಬಂಧು, ತನಗೆ ತಾನೇ ರಿಪು.

(ಭಾಷ್ಯ)

೩೮೩ ಉದ್ಧರೇತ್ ಸಂಸಾರಸಾಗರೇ ನಿಮಗ್ನಮ್ ಆತ್ಮನಾ ಆತ್ಮಾನಂ ತತಃ

---

1. ಸಂಕಲ್ಪವಿಲ್ಲದೆ ನಡೆಯುವಂತೆ ತೋರುವ ಕ್ರಿಯೆಗಳೂ ಸಂಕಲ್ಪಶಕ್ತಿಯಿರುವ ಅವಸ್ಥೆಯಲ್ಲಿಯೇ ತೋರಿಕೊಳ್ಳುವವು, ಅದಿಲ್ಲದ ನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿ ತೋರಿಕೊಳ್ಳುವದಿಲ್ಲ.

2. ಆದ್ದರಿಂದ ಯೋಗಾರೂಢನಿಗೆ ಕರ್ಮವಿಲ್ಲ

3. 'ಅನರ್ಥವ್ರಾತಾತ್' ಮ॥ ಮೈ॥ ಪಾ॥

ಉತ್ ಊರ್ಧ್ವಂ ಹರೇತ್ ಉದ್ಧರೇತ್ ಯೋಗಾರೂಢತಾಮ್ ಆಪಾದಯೇತ್ । ನ ಆತ್ಮಾನಮ್ ಅವಸಾದಯೇತ್ ನ ಅಧೋ ಗಮಯೇತ್[1] ಆತ್ಮೈವ ಹಿ ಯಸ್ಮಾತ್ ಆತ್ಮನೋ ಬನ್ಧುಃ । ನ ಹಿ ಅನ್ಯಃ ಕಶ್ಚಿತ್ ಬನ್ಧುಃ ಯಃ ಸಂಸಾರಮುಕ್ತಯೇ ಭವತಿ. ಬನ್ಧುರಪಿ ತಾವತ್ ಮೋಕ್ಷಂ ಪ್ರತಿ ಪ್ರತಿಕೂಲ ಏವ ಸ್ನೇಹಾದಿಬನ್ಧನಾಯತನತ್ವಾತ್ । ತಸ್ಮಾತ್ ಯುಕ್ತಮ್ ಅವಧಾರಣಮ್ ಆತ್ಮೈವ ಹಿ ಆತ್ಮನೋ ಬನ್ಧುಃ ಇತಿ । ಆತ್ಮೈವ ರಿಪುಃ ಶತ್ರುಃ । ಯೋಽನ್ಯಃ ಅಪಕಾರೀ ಬಾಹ್ಯಃ ಶತ್ರುಃ ಸೋಽಪಿ ಆತ್ಮಪ್ರಯುಕ್ತ ಏವ ಇತಿ ಯುಕ್ತಮೇವ ಅವಧಾರಣಮ್ ಆತ್ಮೈವ ರಿಪುಃ ಆತ್ಮನಃ ಇತಿ ॥

(ಭಾಷ್ಯಾರ್ಥ)

ಸಂಸಾರವೆಂಬ ಕಡಲಿನಲ್ಲಿ ಮುಳುಗಿರುವ ತನ್ನನ್ನು ತನ್ನಿಂದಲೇ ಅದರಿಂದ ('ಉತ್') ಮೇಲಕ್ಕೆ ('ಹರೇತ್') ಹಿಡಿದೆತ್ತಿಕೊಳ್ಳಬೇಕು, ಎಂದರೆ ಯೋಗಾರೂಢನನ್ನಾಗಿ ಮಾಡಿಕೊಳ್ಳಬೇಕು[2] ಎಂದರ್ಥ. ತನ್ನನ್ನು ತಗ್ಗಿಸಿಕೊಳ್ಳಬಾರದು, ಕೆಳಕ್ಕೆ ದೂಡಿಕೊಳ್ಳಬಾರದು. ('ಹಿ') ಏಕೆಂದರೆ ತನಗೆ ತಾನೇ ಬಂಧು. ಸಂಸಾರದಿಂದ ಬಿಡುಗಡೆಮಾಡುವದಕ್ಕೆ ಮತ್ತೆ ಯಾವ ಬಂಧುವೂ ಇರುವದಿಲ್ಲ (ನಿಜವಾಗಿ ನೋಡಿದರೆ) ಬಂಧುವೆಂಬವನೂ ಪ್ರೇಮವೇ ಮುಂತಾದ ಬಂಧನಕ್ಕೆ ಸ್ಥಾನವಾಗಿರುವದರಿಂದ[3] ಮೋಕ್ಷಕ್ಕೆ ಪ್ರತಿಕೂಲನೇ (ಆಗಿರುತ್ತಾನೆ). ಆದ್ದರಿಂದ ತನಗೆ ತಾನೇ ಬಂಧು ಎಂದು ಒತ್ತಿ ಹೇಳಿರುವದು ನ್ಯಾಯವೇ ಆಗಿದೆ. (ತನಗೆ)[4] ತಾನೇ ರಿಪು, ಶತ್ರು; ತನಗೆ ಅಪಕಾರವನ್ನು ಮಾಡುವ ಬೇರೆ ಹೊರಗಿನ ಶತ್ರುವಿರುವನಲ್ಲ, ಅವನೂ ತನ್ನಿಂದಲೇ (ಶತ್ರುವಾಗಿ)ರುತ್ತಾನಾದ್ದರಿಂದ 'ತನಗೆ ತಾನೇ ರಿಪು' ಎಂದು ಒತ್ತಿ ಹೇಳಿರುವದು ನ್ಯಾಯವೇ ಆಗಿದೆ

(ಭಾಷ್ಯ)

೩೮೪. 'ಆತ್ಮೈವ ಬನ್ಧುಃ, ಆತ್ಮೈವ ರಿಪುಃ ಆತ್ಮನಃ' ಇತಿ ಉಕ್ತಮ್ ।

---

1. "ನಯೇತ್" ಎಂದು ಮೈ॥, "ನಾಧೋ ನಯೇತ್" ಆ॥

2 ಆತ್ಮದರ್ಶನವನ್ನು ಸಂಪಾದಿಸಿಕೊಂಡು ಸಂಸಾರಿರೂಪದಿಂದ ಮೇಲಕ್ಕೇರಬೇಕು ಎಂದರ್ಥ

3. ಮಮತೆಯೇ ಮುಂತಾದದ್ದನ್ನು ಬೆಳೆಯಿಸಿ ಬಂಧಿಸುವನಾದ್ದರಿಂದ ಅವನಿಗೆ 'ಬಂಧು' ಎಂಬ ಹೆಸರು ಅನ್ವರ್ಥವಾಗಿರುತ್ತದೆ ಎಂದು ಭಾವ

4 'ಆತ್ಮನಃ' ಎಂಬ ಮಾತು ಭಾಷ್ಯದಲ್ಲಿ ಬಿಟ್ಟುಹೋಗಿದೆ.

ತತ್ರ ಕಿಂಲಕ್ಷಣ ಆತ್ಮಾ ಆತ್ಮನೋ ಬನ್ಧುಃ, ಕಿಂಲಕ್ಷಣೋ ವಾ ಆತ್ಮಾ ಆತ್ಮನೋ ರಿಪುಃ ಇತಿ? ಉಚ್ಯತೇ–

(ಭಾಷ್ಯಾರ್ಥ)

'ತನಗೆ ತಾನೇ ಬಂಧು, ತಾನೇ ರಿಪು' ಎಂದು ಹೇಳಿದೆಯಷ್ಟೆ. ಇಲ್ಲಿ ಎಂಥವನು ತನಗೆ ತಾನೇ ಬಂಧು, ಮತ್ತು ಎಂಥವನು ತನಗೆ ತಾನೇ ರಿಪು? ಎಂದರೆ (ಭಗವಂತನು) ಹೇಳುತ್ತಾನೆ:–

**ಬನ್ಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ ।**
**ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥೬॥**

೬. ಯಾವನು ತನ್ನನ್ನು ತಾನೇ ಜಯಿಸಿಕೊಂಡಿರುವನೋ ಅವನು ತನಗೆ ತಾನೇ ಬಂಧು, ಆದರೆ ಅನಾತ್ಮನಾದವನು ತನಗೆ ತಾನೇ ಶತ್ರುವಿನಂತೆ ಇರುವನು.

(ಭಾಷ್ಯ)

ಇಲ್ಲಿ ಬನ್ಧುಃ ಆತ್ಮಾ ಆತ್ಮನಃ ತಸ್ಯ । ತಸ್ಯ ಆತ್ಮನಃ ಸ ಆತ್ಮಾ ಬನ್ಧುಃ ಯೇನ ಆತ್ಮನಾ ಆತ್ಮೈವ ಜಿತಃ ! ಆತ್ಮಾ ಕಾರ್ಯಕರಣಸಙ್ಘಾತಃ ಯೇನ ವಶೀಕೃತಃ । ಜಿತೇನ್ದ್ರಿಯಃ ಇತ್ಯರ್ಥಃ । ಅನಾತ್ಮನಸ್ತು ಅಜಿತಾತ್ಮನಸ್ತು ಶತ್ರುತ್ವೇ ಶತ್ರುಭಾವೇ ವರ್ತೇತ ಆತ್ಮೈವ ಶತ್ರುವತ್ । ಯಥಾ ಅನಾತ್ಮಾ ಶತ್ರುಃ ಆತ್ಮನಃ ಅಪಕಾರೀ ತಥಾ ಆತ್ಮಾ ಆತ್ಮನಃ ಅಪಕಾರೇ ವರ್ತೇತ ಇತ್ಯರ್ಥಃ ॥

(ಭಾಷ್ಯಾರ್ಥ)

'ಬನ್ಧುರಾತ್ಮಾತ್ಮನಸ್ತಸ್ಯ ... .(ಎಂಬಲ್ಲಿ ಅನ್ವಯವು ಹೇಗೆಂದರೆ) ಯಾವ ಆತ್ಮನಿಂದ ಆತ್ಮವೇ ಜಿತವಾಗಿರುವದೋ–ಆತ್ಮವೆಂದರೆ ಕಾರ್ಯಕರಣಗಳ ಗುಂಪು, (ಅದು) ಯಾವನಿಂದ ವಶಕ್ಕೆ ತರಲ್ಪಟ್ಟಿರುವದೋ (ಎಂದರೆ)–(ಯಾವನು) ಜಿತೇಂದ್ರಿಯನಾಗಿರುವನೋ ಎಂದರ್ಥ. ಅಂಥ ಆತ್ಮನಿಗೆ ಆ ಆತ್ಮನು ಬಂಧು.[1] ಆದರೆ

---

1. ಅಂಥ ತನಗೆ ತಾನೇ ಬಂಧು, ಆದ್ದರಿಂದ ತನ್ನ ಕಾರ್ಯಕರಣಗಳನ್ನು ಗೆದ್ದು ವಶದಲ್ಲಿಟ್ಟುಕೊಂಡು ತನಗೆ ತಾನೇ ಬಂಧುವಾಗಬೇಕು.

ಅನಾತ್ಮನಾದವನಿಗೋ, ತನ್ನನ್ನು ತಾನು ಜಯಿಸಿಕೊಂಡಿರದವನಿಗೋ ಎಂದರೆ, ಶತ್ರುತ್ವಕ್ಕೆ ಶತ್ರುವಿನಂತೆ ಇರುವದರಲ್ಲಿ, (ಆ) ಆತ್ಮನೇ ಶತ್ರುವಿನಂತೆ ಇರುವನು [1] ತನಗಿಂತ ಬೇರೆಯಾದ ಶತ್ರು ತನಗೆ ಹೇಗೆ ಅಪಕಾರಿಯಾಗಿರುವನೋ ಅದರಂತೆ ತಾನೇ ತನಗೆ ಅಪಕಾರಮಾಡುವದರಲ್ಲಿ ತೊಡಗುತ್ತಿರುವನು ಎಂದರ್ಥ.

**ಜಿತಾತ್ಮನಃ ಪ್ರಶಾನ್ತಸ್ಯ ಪರಮಾತ್ಮಾ ಸಮಾಹಿತಃ ।**
**ಶೀತೋಷ್ಣಸುಖದುಃಖೇಷು ತಥಾ ಮಾನಾಪಮಾನಯೋಃ ॥೭॥**
**ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇನ್ದ್ರಿಯಃ ।**
**ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಞ್ಚನಃ ॥೮॥**

೭-೮. ಜಿತಾತ್ಮನಾಗಿ ಪ್ರಶಾಂತನಾಗಿರುವವನಿಗಾದರೆ ಪರಮಾತ್ಮನು ಸಮಾಹಿತನಾಗಿರುವನು. ಶೀತೋಷ್ಣಸುಖದುಃಖಗಳಲ್ಲಿಯೂ ಮಾನಾಪಮಾನಗಳಲ್ಲಿಯೂ ಜ್ಞಾನವಿಜ್ಞಾನತೃಪ್ತಾತ್ಮನಾಗಿ ಕೂಟಸ್ಥನಾಗಿ ವಿಜಿತೇಂದ್ರಿಯನಾಗಿ ಮಣ್ಣಿನ ಹೆಂಟೆ, ಕಲ್ಲು, ಚಿನ್ನ–ಇವುಗಳಲ್ಲಿ ಸಮನಾಗಿರುವ ಯೋಗಿಯು ಯುಕ್ತನೆನಿಸುವನು.

(ಭಾಷ್ಯ)

೩೮೬. ಜಿತಾತ್ಮನಃ ಕಾರ್ಯಕರಣಸಙ್ಘಾತಃ ಆತ್ಮಾ ಜಿತಃ ಯೇನ ಸಃ ಜಿತಾತ್ಮಾ । ತಸ್ಯ ಜಿತಾತ್ಮನಃ । ಪ್ರಶಾನ್ತಸ್ಯ ಪ್ರಸನ್ನಾನ್ತಃಕರಣಸ್ಯ [2] ಸತಃ ಸಂನ್ಯಾಸಿನಃ । ಪರಮಾತ್ಮಾ ಸಮಾಹಿತಃ ಸಾಕ್ಷಾತ್ ಆತ್ಮಭಾವೇನ ವರ್ತತೇ ಇತ್ಯರ್ಥಃ । ಕಿಂಚ ಶೀತೋಷ್ಣಸುಖದುಃಖೇಷು ತಥಾ ಮಾನೇ ಅಪಮಾನೇ ಚ ಮಾನಾಪಮಾನಯೋಃ ಪೂಜಾಪರಿಭವಯೋಃ [3] (೭) ॥ ಜ್ಞಾನವಿಜ್ಞಾನತೃಪ್ತಾತ್ಮಾ ಜ್ಞಾನಂ ಶಾಸ್ತ್ರೋಕ್ತಪದಾರ್ಥಾನಾಂ ಪರಿಜ್ಞಾನಮ್, ವಿಜ್ಞಾನಂ ತು ಶಾಸ್ತ್ರತೋ

---

1. ಅಂಥ ತಾನೇ ತನಗೆ ಶತ್ರುವಾಗಿ ನಡೆಯುತ್ತಿರುವನು, ಆದ್ದರಿಂದ ಕಾರ್ಯಕರಣಗಳನ್ನು ಹರಿಯಬಿಟ್ಟು ತನಗೆ ತಾನೇ ಹಗೆಯಾಗಬಾರದು.

2. “ ಪ್ರಶಾನ್ತಸ್ಯ ಉಪಶಾನ್ತಸ್ಯ ’ ಎಂದು ಮ॥ ಮ್ಯೆ॥

3. ‘ ಸಮಃ ’ ಮ್ಯೆ॥ ; ‘ ಸಮಃ ಸ್ಯಾತ್ ’ ಮು॥ವಾ॥ಅ॥ ಇದು ‘ ಸಮಃ ಸ್ಯಾತ್ ’ ಇತಿ ಅಧ್ಯಾಹಾರಃ–ಎಂಬ ಆ॥ ವ್ಯಾಖ್ಯಾನವನ್ನು ನೋಡಿ ಯಾರೋ ಬರೆದುಕೊಂಡಿರಬೇಕೆಂದು ತೋರುತ್ತದೆ. ಧಿ॥ ಗು॥ ಗಳಲ್ಲಿ ನಾವು ಒಪ್ಪಿರುವಷ್ಟೇ ಇದೆ. ‘ ಮಾನಾವಮಾನಯೋಃ ’ ಎಂದು ಮ್ಯೆ॥ ಪಾಠದಲ್ಲಿರುವದು ರಾಮಾನುಜೀಯಪಾಠ.

ಜ್ಞಾತಾನಾಂ ತಥೈವ ಸ್ವಾನುಭವಕರಣಮ್ । ತಾಭ್ಯಾಂ ಜ್ಞಾನವಿಜ್ಞಾನಾಭ್ಯಾಂ ತೃಪ್ತಃ ಸಞ್ಜಾತಾಲಂಪ್ರತ್ಯಯಃ ಆತ್ಮಾ ಅನ್ತಃಕರಣಂ ಯಸ್ಯ ಸಃ ಜ್ಞಾನವಿಜ್ಞಾನ ತೃಪ್ತಾತ್ಮಾ । ಕೂಟಸ್ಥಃ ಅಪ್ರಕಮ್ಪ್ಯಃ ಭವತಿ ಇತ್ಯರ್ಥಃ । ವಿಜಿತೇನ್ದ್ರಿಯಶ್ಚ । ಯ ಈದೃಶಃ ಯುಕ್ತಃ ಸಮಾಹಿತ ಇತಿ ಸ ಉಚ್ಯತೇ ಕಥ್ಯತೇ ಯೋಗೀ[1] ಸಮಲೋಷ್ಟಾಶ್ಮಕಾಞ್ಚನಃ ॥೮॥

(ಭಾಷ್ಯಾರ್ಥ)

ಜಿತಾತ್ಮನಾಗಿ–ಕಾರ್ಯಕರಣಗಳ ಗುಂಪು ಎಂಬ ಆತ್ಮವನ್ನು ಯಾವನು ಗೆದ್ದುಕೊಂಡಿರುವನೋ ಅವನು ಜಿತಾತ್ಮನು. ಹಾಗೆ ಜಿತಾತ್ಮನಾಗಿ–ಪ್ರಶಾಂತನಾಗಿ ಪ್ರಸನ್ನವಾದ ಅಂತಃಕರಣವುಳ್ಳ ಸಂನ್ಯಾಸಿಗೆ ಪರಮಾತ್ಮನು ಸಮಾಹಿತನಾಗಿರುವನು, ಎಂದರೆ ನೇರಾಗಿ (ಅವನ) ಆತ್ಮನಾಗಿಯೇ ಇದ್ದುಕೊಂಡಿರುವನು ಎಂದರ್ಥ.

ಮತ್ತು ಶೀತ ಉಷ್ಣ, ಸುಖ ದುಃಖ, ಮಾನ ಅಪಮಾನ ಎಂದರೆ ಗೌರವಿಸುವದು ಅನಾದರಮಾಡುವದು–(ಮುಂತಾದ ದ್ವಂದ್ವಗಳು ಬಂದೊದಗಿದರೂ) ಅವುಗಳಲ್ಲಿ ಜ್ಞಾನವಿಜ್ಞಾನತೃಪ್ತಾತ್ಮನಾಗಿ– ಜ್ಞಾನವೆಂದರೆ ಶಾಸ್ತ್ರದಲ್ಲಿ ಹೇಳಿರುವ ಪದಾರ್ಥಗಳು (ಇಂಥವೆಂಬ) ತಿಳಿವಳಿಕೆ, ವಿಜ್ಞಾನವೆಂದರೆ ಶಾಸ್ತ್ರದಲ್ಲಿ (ಹೇಳಿರುವವೆಂದು) ತಿಳಿದುಕೊಂಡ (ಪದಾರ್ಥಗಳನ್ನು) ಹಾಗೆಯೇ ತನ್ನ ಅನುಭವಕ್ಕೆ ತಂದುಕೊಳ್ಳುವದು. ಈ–ಜ್ಞಾನವಿಜ್ಞಾನಗಳಿಂದ ತೃಪ್ತಿಹೊಂದಿರುವ, ಇಷ್ಟುಸಾಕು (ಇನ್ನು ತಿಳಿಯಬೇಕಾದದ್ದೇನೂ ಇಲ್ಲ) ಎಂಬ ತಿಳಿವನ್ನು ಹೊಂದಿರುವ ಆತ್ಮವು ಎಂದರೆ ಅಂತಃಕರಣವು ಯಾವನಿಗಿರುವದೋ ಅವನು ಜ್ಞಾನವಿಜ್ಞಾನತೃಪ್ತಾತ್ಮನು. (ಅಂಥವನಾಗಿ) ಕೂಟಸ್ಥನಾಗಿ (ಸ್ವಲ್ಪವೂ) ಅಲುಗಾಡದವನಾಗಿ[2] ಎಂದರ್ಥ. ಮತ್ತು ವಿಜಿತೇಂದ್ರಿಯನಾಗಿಯೂ (ಇರಬೇಕು). ಯಾವನು ಇಂಥವನೋ ಆ ಸಮಲೋಷ್ಟಾಶ್ಮಕಾಂಚನ

---

1. 'ಸಃ ಸಮಲೋಷ್ಟಾಶ್ಮಕಾಞ್ಚನಃ' ಎಂದೇ ಅಚ್ಚಿನ ಪುಸ್ತಕಗಳಲ್ಲಿದೆ; 'ಸಃ' ಹೆಚ್ಚೆಂದು ಬಿಟ್ಟುಬಿಟ್ಟಿದ್ದೇವೆ.

2. ದ್ವಂದ್ವಗಳಿಂದ ವಿಕಾರವನ್ನು ಹೊಂದದೆ, ಮನಸ್ಸನ್ನು ಒಂದೇ ಸ್ಥಿತಿಯಲ್ಲಿಟ್ಟುಕೊಂಡಿರುವವನಾಗಿ ಎಂದರ್ಥ.

ನಾಗಿರುವ ಯೋಗಿಯು 'ಯುಕ್ತನು'[1] ಎನಿಸಿಕೊಳ್ಳುತ್ತಾನೆ, ಎಂದು ಹೇಳಲ್ಪಡು ತ್ತಾನೆ.

**ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬನ್ಧುಷು ।**
**ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥೯॥**

೯. ಸುಹೃತ್ತು, ಮಿತ್ರ, ಅರಿ, ಉದಾಸೀನ, ಮಧ್ಯಸ್ಥ, ದ್ವೇಷ್ಯ, ಬಂಧು-ಇವರಲ್ಲಿಯೂ ಸಾಧುಗಳಲ್ಲಿಯೂ ಪಾಪಿಗಳಲ್ಲಿಯೂ ಸಮಬುದ್ಧಿಯಾಗಿರುವವನು ಹೆಚ್ಚಿನವನಾಗಿರುತ್ತಾನೆ.

(ಭಾಷ್ಯ)

೩೮೭ ಕಿಂಚ । ಸುಹೃದಿತ್ಯಾದಿಶ್ಲೋಕಾರ್ಧಮ್ ಏಕಂ ಪದಮ್। ಸುಹೃತ್ ಇತಿ ಪ್ರತ್ಯುಪಕಾರಮ್ ಅನಪೇಕ್ಷ್ಯ ಉಪಕರ್ತಾ । ಮಿತ್ರಂ ಸ್ನೇಹವಾನ್ । ಅರಿಃ ಶತ್ರುಃ । ಉದಾಸೀನಃ ನ ಕಸ್ಯಚಿತ್ ಪಕ್ಷಂ ಭಜತೇ । ಮಧ್ಯಸ್ಥಃ ಯೋ ವಿರುದ್ಧಯೋಃ ಉಭಯೋಃ ಹಿತೈಷೀ । ದ್ವೇಷ್ಯಃ ಆತ್ಮನೋಽಪ್ರಿಯಃ । ಬನ್ಧುಃ ಸಂಬನ್ಧೀ। ಇತ್ಯೇತೇಷು ಸಾಧುಷು ಶಾಸ್ತ್ರಾನುವರ್ತಿಷ್ವಪಿ ಚ ಪಾಪೇಷು ಪ್ರತಿಷಿದ್ಧಕಾರಿಷು ಸರ್ವೇಷು ಏತೇಷು ಸಮಬುದ್ಧಿಃ 'ಕಃ ಕಿಂಕರ್ಮಾ'[2] ಇತಿ ಅವ್ಯಾಪೃತಬುದ್ಧಿಃ[3] ಇತ್ಯರ್ಥಃ । ವಿಶಿಷ್ಯತೇ । 'ವಿಮುಚ್ಯತೇ'[4] ಇತಿ ವಾ ಪಾಠಾನ್ತರಮ್ । ಯೋಗಾರೂಢಾನಾಂ ಸರ್ವೇಷಾಮ್ ಅಯಮ್ ಉತ್ತಮಃ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು:–'ಸುಹೃತ್' ಮುಂತಾದ (ಈ) ಶ್ಲೋಕದ (ಮೊದಲನೆಯ) ಅರ್ಧವು ಒಂದೇ ಪದವು. (ಇಲ್ಲಿ) ಸುಹೃತ್ತು ಎಂದರೆ ಪ್ರತ್ಯುಪಕಾರವನ್ನು ಬಯಸದೆ ಉಪಕಾರವನ್ನು ಮಾಡುವವನು, ಮಿತ್ರನೆಂದರೆ ಸ್ನೇಹಿತನು, ಅರಿ ಎಂದರೆ ಶತ್ರು, ಉದಾಸೀನನು ಎಂದರೆ ಯಾರ ಪಕ್ಷವನ್ನೂ ವಹಿಸದವನು, ಮಧ್ಯಸ್ಥನು ಎಂದರೆ

---

1. ಯುಕ್ತನು ಎಂದರೆ ಯೋಗಸಿದ್ಧಿಯನ್ನು ಹೊಂದಿದವನು, ನಿಜವಾಗಿ ಯೋಗಾರೂಢನಾಗಿರುವವನು. ಜಿತೇಂದ್ರಿಯನಾಗಿ ಯೋಗಿಯಾದವನೇ ತನ್ನನ್ನು ತಾನು ಉದ್ಧಾರ ಮಾಡಿಕೊಂಡಂತೆ; ಆದ್ದರಿಂದ ಯುಕ್ತನಾಗುವದಕ್ಕೆ ಯತ್ನಿಸಬೇಕು ಎಂದು ವಾಕ್ಯಾರ್ಥ.

2. "ಕಃ ಕರ್ತಾ, ಕಿಂ ಕರ್ಮ" ಮ॥ ಮೈ॥

3 'ಅವ್ಯಾಕೃತಬುದ್ಧಿಃ' (?) ಮ॥

4. 'ಸ ಮುಚ್ಯತೇ' ಎಂಬ ಮ॥ ಪಾಠವು ಮತ್ತೆ ಯಾವ ಕೋಶದಲ್ಲಿಯೂ ಇಲ್ಲ.

(ಒಬ್ಬರಿಗೊಬ್ಬರು) ಆಗದೆ ಇರುವ ಇಬ್ಬರಿಗೂ ಹಿತವನ್ನು ಕೋರುವವನು, ದ್ವೇಷ್ಯನು ಎಂದರೆ ತನಗೆ ಪ್ರಿಯನಲ್ಲದೆ ಇರುವ (ಹಗೆ), ಬಂಧು ಎಂದರೆ ನೆಂಟನು. ಈ (ಸುಹೃತ್ತು ಮೊದಲಾದವರಲ್ಲಿಯೂ) ಸಾಧುಗಳಲ್ಲಿಯೂ ಎಂದರೆ ಶಾಸ್ತ್ರವನ್ನು ಅನುಸರಿಸಿ ನಡೆಯುವವರಲ್ಲಿಯೂ ಪಾಪಿಗಳಲ್ಲಿಯೂ ಎಂದರೆ (ಶಾಸ್ತ್ರದಲ್ಲಿ) ಬೇಡವೆಂದಿರುವ (ಕರ್ಮಗಳನ್ನು) ಮಾಡುತ್ತಿರುವವರಲ್ಲಿಯೂ 'ಯಾವನು ಏನು ಮಾಡುತ್ತಿರುವನು?' ಎಂದು ಮನಸ್ಸಿಗೆ ಹತ್ತಿಸಿಕೊಳ್ಳದೆ ಇರುವವನು ಎಂದರ್ಥ. (ಇಂಥವನು) ಹೆಚ್ಚಿನವನು. (ವಿಶಿಷ್ಯತೇ ಎಂಬುದಕ್ಕೆ ಬದಲು) 'ವಿಮುಚ್ಯತೇ' (ಮುಕ್ತನಾಗುವನು) ಎಂಬ ಮತ್ತೊಂದು ಪಾಠವೂ ಉಂಟು. ಯೋಗಾರೂಢರಲ್ಲೆಲ್ಲ ಇವನು ಉತ್ತಮನು ಎಂದರ್ಥ.[1]

## ಯೋಗವನ್ನು ಮಾಡುವ ಕ್ರಮ

(ಭಾಷ್ಯ)

೩೮೮. ಅತಃ ಏವಮ್ ಉತ್ತಮಫಲಪ್ರಾಪ್ತಯೇ—

(ಭಾಷ್ಯಾರ್ಥ)

ಆದ್ದರಿಂದ ಇಂಥ ಉತ್ತಮಫಲವು ದೊರಕುವದಕ್ಕಾಗಿ —

**ಯೋಗೀ ಯುಞ್ಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।**
**ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥೧೦॥**

೧೦. ಯೋಗಿಯಾದವನು ರಹಸ್ಯದಲ್ಲಿದ್ದುಕೊಂಡು ಆತ್ಮವನ್ನು ಸತತವಾಗಿ ಯೋಗದಲ್ಲಿಡಬೇಕು. ಏಕಾಕಿಯಾಗಿ ಯತಚಿತ್ತಾತ್ಮನಾಗಿ ನಿರಾಶಿಯಾಗಿ ಅಪರಿಗ್ರಹನಾಗಿ ಇರಬೇಕು

(ಭಾಷ್ಯ)

೩೮೯. ಯೋಗೀ ಧ್ಯಾಯೀ ಯುಞ್ಜೀತ ಸಮಾದಧ್ಯಾತ್ ಸತತಂ ಸರ್ವದಾ ಆತ್ಮಾನಮ್ ಅನ್ತಃಕರಣಂ ರಹಸಿ ಏಕಾನ್ತೇ ಗಿರಿಗುಹಾದೌ ಸ್ಥಿತಃ ಸನ್ ಏಕಾಕೀ ಅಸಹಾಯಃ । 'ರಹಸಿ ಸ್ಥಿತಃ', 'ಏಕಾಕೀ ಚ'–ಇತಿ ವಿಶೇಷಣಾತ್ ಸಂನ್ಯಾಸಂ ಕೃತ್ವಾ ಇತ್ಯರ್ಥಃ । ಯತಚಿತ್ತಾತ್ಮಾ ಚಿತ್ತಮ್ ಅನ್ತಃಕರಣಮ್

1. ಅವನೇ ನಿಜವಾದ ಯೋಗಾರೂಢನು.

ಆತ್ಮಾ ದೇಹಶ್ಚ ಸಂಯತೌ ಯಸ್ಯ ಸಃ ಯತಚಿತ್ತಾತ್ಮಾ ನಿರಾಶೀಃ ವಿಗತತೃಷ್ಣಃ[1] | ಅಪರಿಗ್ರಹಶ್ಚ ಪರಿಗ್ರಹರಹಿತಶ್ಚ ಇತ್ಯರ್ಥಃ | ಸಂನ್ಯಾಸಿತ್ವೇಽಪಿ ತ್ಯಕ್ತಸರ್ವಪರಿಗ್ರಹಃ ಸನ್ ಯುಞ್ಜೀತ ಇತ್ಯರ್ಥಃ ||

(ಭಾಷ್ಯಾರ್ಥ)

ಯೋಗಿಯು ಎಂದರೆ ಧ್ಯಾನಮಾಡುತ್ತಿರುವವನು, ಸತತವಾಗಿ ಯಾವಾಗಲೂ ರಹಸ್ಯದಲ್ಲಿ ಏಕಾಂತದಲ್ಲಿ ಬೆಟ್ಟದ ಗವಿಯೇ ಮುಂತಾದ[2] ಕಡೆಯಲ್ಲಿದ್ದುಕೊಂಡವನಾಗಿ ಆತ್ಮವನ್ನು ಎಂದರೆ ಅಂತಃಕರಣವನ್ನು ಯೋಗದಲ್ಲಿಡಬೇಕು, ಎಂದರೆ ಸಮಾಧಾನದಲ್ಲಿಡಬೇಕು. ಏಕಾಕಿಯಾಗಿ ಎಂದರೆ (ಮತ್ತೊಬ್ಬರು) ಜೊತೆಯಲ್ಲಿಲ್ಲದವನಾಗಿ (ಇರಬೇಕು) 'ರಹಸ್ಯದಲ್ಲಿರಬೇಕು ', ' ಏಕಾಕಿಯಾಗಿರಬೇಕು'– ಎಂದು ವಿಶೇಷಣವನ್ನು ಹಾಕಿರುವದರಿಂದ ಸಂನ್ಯಾಸವನ್ನು ಮಾಡಿರಬೇಕು ಎಂದರ್ಥ. ಯತಚಿತ್ತಾತ್ಮನಾಗಿ, ಚಿತ್ತವೆಂದರೆ ಅಂತಃಕರಣವು[3], ಆತ್ಮವೆಂದರೆ ದೇಹವು–(ಇವನ್ನು) ಬಿಗಿಹಿಡಿದುಕೊಂಡಿರುವವನು ಯತಚಿತ್ತಾತ್ಮನು (ಅಂಥವನಾಗಿರಬೇಕು). ನಿರಾಶೀಃ ಎಂದರೆ (ಯಾವದರ) ಬಯಕೆಯೂ ಇಲ್ಲದವನು ಅಪರಿಗ್ರಹನು ಎಂದರೆ ತನ್ನದೆಂಬುದು ಇಲ್ಲದವನು ಎಂದರ್ಥ, ಸಂನ್ಯಾಸಿಯಾಗಿರುವದರಲ್ಲಿಯೂ ತನ್ನದೆಂಬುದಿಲ್ಲದವನು. (ಇಂಥವ)ನಾಗಿ (ಮನಸ್ಸನ್ನು) ಯೋಗದಲ್ಲಿಡಬೇಕು ಎಂದರ್ಥ.

(ಭಾಷ್ಯ)

೩೯೦. ಅಥ ಇದಾನೀಂ ಯೋಗಂ ಯುಞ್ಜತಃ ಆಸನಾಹಾರವಿಹಾರಾದೀನಾಂ ಯೋಗಸಾಧನತ್ವೇನ ನಿಯಮೋ ವಕ್ತವ್ಯಃ, ಪ್ರಾಪ್ತಯೋಗಸ್ಯ ಲಕ್ಷಣಂ ತತ್ಫಲಾದಿ ಚ ಇತ್ಯತಃ ಆರಭ್ಯತೇ | ತತ್ರ ಆಸನಮೇವ ತಾವತ್ ಪ್ರಥಮಮ್ ಉಚ್ಯತೇ—

(ಭಾಷ್ಯಾರ್ಥ)

ಇನ್ನು ಈಗ ಯೋಗವನ್ನು ಮಾಡುತ್ತಿರುವವನಿಗೆ ಆಸನ, ಆಹಾರ, ಓಡಾಟ–ಮುಂತಾದವುಗಳು ಯೋಗಕ್ಕೆ ಸಾಧನವಾಗುವ(ಂತೆ ಅವುಗಳಿಗೆ) ನಿಯಮವನ್ನು

---

1. " ವೀತತೃಷ್ಣಃ " ಮ್ಯೆ||

2. ಶ್ವೇ. ೨-೧೦.

3 ಚಿತ್ತವೆಂಬ ವೃತ್ತಿಮಾತ್ರವಲ್ಲ ಎಂದು ಭಾವ. ಮನಸ್ಸು, ಬುದ್ಧಿ, ಚಿತ್ತ–ಇವು ಅಂತಃಕರಣಕ್ಕೂ ಹೆಸರು, ಅಂತಃಕರಣವೃತ್ತಿಗೂ ಹೆಸರು ; ಸಂದರ್ಭಾನುಸಾರವಾಗಿ ಅರ್ಥವನ್ನು ಗೊತ್ತುಪಡಿಸಿಕೊಳ್ಳಬೇಕು.

ಹೇಳಬೇಕಾಗಿದೆ. ಯೋಗವನ್ನು ಪಡೆದಾತನ ಲಕ್ಷಣವನ್ನೂ ಅದರ ಫಲವೇ ಮುಂತಾದದ್ದನ್ನೂ ಹೇಳಬೇಕಾಗಿದೆ. ಆದ್ದರಿಂದ (ಮುಂದಿನ ಗ್ರಂಥವನ್ನು) ಪ್ರಾರಂಭಿಸಿರುತ್ತದೆ ಇವುಗಳೊಳಗೆ ಮೊಟ್ಟಮೊದಲು ಆಸನವನ್ನೇ ಹೇಳಲಾಗುತ್ತದೆ.—

**ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।**
**ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಮ್ ॥೧೧॥**

೧೧. ಶುಚಿಯಾದ ಪ್ರದೇಶದಲ್ಲಿ ಅತಿಯಾಗಿ ಎತ್ತರವಲ್ಲದೆ, ಅತಿಯಾಗಿ ತಗ್ಗೂ ಅಲ್ಲದೆ ಬಟ್ಟೆ, ಚರ್ಮ, ಕುಶ-ಇವುಗಳನ್ನು (ಒಂದರ)ಮೇಲೆ (ಒಂದನ್ನು) ಹಾಕಿರುವ ಸ್ಥಿರವಾದ ಆಸನವನ್ನು ತನಗಾಗಿ ಹಾಕಿಕೊಂಡು—

(ಭಾಷ್ಯ)

೩೯೧. ಶುಚೌ ಶುದ್ಧೇ ವಿವಿಕ್ತೇ ಸ್ವಭಾವತಃ ಸಂಸ್ಕಾರತೋ ವಾ ದೇಶೇ ಸ್ಥಾನೇ ಪ್ರತಿಷ್ಠಾಪ್ಯ ಸ್ಥಿರಮ್ ಅಚಲಮ್ ಆತ್ಮನಃ ಆಸನಂ ನಾತ್ಯುಚ್ಛ್ರಿತಂ ನ ಅತೀವ ಉಚ್ಛ್ರಿತಂ ನಾಪಿ ಅತಿನೀಚಂ ತಚ್ಚ ಚೈಲಾಜಿನಕುಶೋತ್ತರಂ ಚೈಲಮ್ ಅಜಿನಂ ಕುಶಾಶ್ಚ ಉತ್ತರೇ ಯಸ್ಮಿನ್ ಆಸನೇ ತತ್ ಆಸನಂ ಚೈಲಾಜಿನಕುಶೋತ್ತರಮ್ । ಪಾಠಕ್ರಮಾತ್ ವಿಪರೀತಃ ಅತ್ರ ಕ್ರಮಃ ಚೈಲಾದೀನಾಮ್ ॥

(ಭಾಷ್ಯಾರ್ಥ)

ಶುಚಿಯಾದ ಸ್ವಭಾವದಿಂದಲಾಗಲಿ (ತಾನು) ಶುದ್ಧಿಗೊಳಿಸಿರುವದರಿಂದಲಾಗಲಿ ಶುದ್ಧವಾಗಿರುವ ಏಕಾಂತವಾದ ಪ್ರದೇಶದಲ್ಲಿ ಎಂದರೆ ಸ್ಥಲದಲ್ಲಿ ಸ್ಥಿರವಾದ, ತನ್ನ (ಶರೀರಕ್ಕೆ) ಆಸನವನ್ನು-'ನಾತ್ಯುಚ್ಛ್ರಿತಮ್' ಎಂದರೆ ಅತಿಯಾಗಿ ಎತ್ತರವಲ್ಲದ, ಹೆಚ್ಚು ತಗ್ಗೂ ಅಲ್ಲದ, ಅದೂ ಚೈಲಾಜಿನಕುಶೋತ್ತರವಾಗಿರುವ ಎಂದರೆ ಮೃದುವಾದ ಬಟ್ಟೆ, ಚರ್ಮ, ಕುಶಗಳು-ಇವುಗಳನ್ನು (ಒಂದರ) ಮೇಲೆ (ಒಂದನ್ನು) ಹಾಕಿರುವ (ಆಸನವನ್ನು ಹಾಕಿಕೊಂಡು ಎಂದರ್ಥ) ಇಲ್ಲಿ ಬಟ್ಟೆಯೇ ಮುಂತಾದವುಗಳನ್ನು ಹೇಳಿರುವ ಕ್ರಮಕ್ಕೆ ವಿರುದ್ಧವಾಗಿರುವ ಕ್ರಮವು[1] (ಆಸನಕ್ಕೆ ಇರಬೇಕು).

(ಭಾಷ್ಯ)

೩೯೨. ಪ್ರತಿಷ್ಠಾಪ್ಯ ಕಿಮ್ ?—

---

1. ಕುಶಗಳಮೇಲೆ ಚರ್ಮ, ಚರ್ಮದಮೇಲೆ ಬಟ್ಟೆ—ಈ ಕ್ರಮವು ಇರಬೇಕು.

(ಭಾಷ್ಯಾರ್ಥ)

(ಆಸನವನ್ನು ಹೀಗೆ) ಹಾಕಿಕೊಂಡು ಏನು (ಮಾಡಬೇಕು)? ಎಂದರೆ:—

**ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇನ್ದ್ರಿಯಕ್ರಿಯಃ ।**
**ಉಪವಿಶ್ಯಾಸನೇ ಯುಞ್ಜ್ಯಾತ್ ಯೋಗಮಾತ್ಮವಿಶುದ್ಧಯೇ ॥೧೨॥**

೧೨. ಆ ಆಸನದಲ್ಲಿ ಕುಳಿತುಕೊಂಡು, ಚಿತ್ತದ ಮತ್ತು ಇಂದ್ರಿಯಗಳ ಕ್ರಿಯೆಗಳನ್ನು ಬಿಗಿಹಿಡಿದುಕೊಂಡು ಆತ್ಮವಿಶುದ್ಧಿಗಾಗಿ ಯೋಗವನ್ನು ಮಾಡಬೇಕು.

(ಭಾಷ್ಯ)

೩೯೩. ತತ್ರ ತಸ್ಮಿನ್ ಆಸನೇ ಉಪವಿಶ್ಯ ಯೋಗಂ ಯುಞ್ಜ್ಯಾತ್। ಕಥಮ್? ಸರ್ವವಿಷಯೇಭ್ಯಃ ಉಪಸಂಹೃತ್ಯ ಏಕಾಗ್ರಂ ಮನಃ ಕೃತ್ವಾ ಯತಚಿತ್ತೇನ್ದ್ರಿಯಕ್ರಿಯಃ ಚಿತ್ತಂ ಚ ಇನ್ದ್ರಿಯಾಣಿ ಚ ಚಿತ್ತೇನ್ದ್ರಿಯಾಣಿ ತೇಷಾಂ ಕ್ರಿಯಾಃ ಸಂಯತಾ ಯಸ್ಯ ಸ ಯತಚಿತ್ತೇನ್ದ್ರಿಯಕ್ರಿಯಃ। ಸ ಕಿಮರ್ಥಂ ಯೋಗಂ ಯುಞ್ಜ್ಯಾತ್ ಇತಿ? ಆಹ–ಆತ್ಮವಿಶುದ್ಧಯೇ ಅನ್ತಃಕರಣಸ್ಯ ವಿಶುದ್ಧ್ಯರ್ಥಮ್ ಇತ್ಯೇತತ್ ॥

(ಭಾಷ್ಯಾರ್ಥ)

ಅಲ್ಲಿ ಆ ಆಸನದಲ್ಲಿ ಕುಳಿತುಕೊಂಡು ಯೋಗವನ್ನು ಮಾಡಬೇಕು ಹೇಗೆ? ಎಂದರೆ ಎಲ್ಲಾ ವಿಷಯಗಳಿಂದಲೂ ಹಿಂಜಗ್ಗಿ ಮನಸ್ಸನ್ನು ಏಕಾಗ್ರವಾಗಿ[1] ಮಾಡಿಕೊಂಡು ಯತಚಿತ್ತೇಂದ್ರಿಯನಾಗಿ; ಚಿತ್ತವೂ ಇಂದ್ರಿಯಗಳೂ ಚಿತ್ತೇಂದ್ರಿಯಗಳು. ಅವುಗಳು ಬಿಗಿಹಿಡಿಯಲ್ಪಟ್ಟವಾಗಿ ಯಾವನಿಗೆ ಇರುವವೋ ಅವನು ಯತಚಿತ್ತೇಂದ್ರಿಯನು. ಅಂಥವನಾಗಿ[2] ಅವನು ಏತಕ್ಕಾಗಿ ಯೋಗವನ್ನು ಮಾಡಬೇಕು? ಎಂದರೆ ಆತ್ಮವಿಶುದ್ಧಿಗಾಗಿ, ಅಂತಃಕರಣವು ಚೆನ್ನಾಗಿ ಶುದ್ಧಿಯಾಗುವದಕ್ಕಾಗಿ[3] ಎಂದರ್ಥ.

---

1. ಏಕಾಗ್ರತೆ ಎಂಬುದೊಂದು ಚಿತ್ತದ ಭೂಮಿಕೆ. ಯೋ. ಸೂ. ಭಾ. ೧-೧

2. ಇಂದ್ರಿಯಗಳು ಹೊರಕ್ಕೆ ಹರಿಯದಂತೆಯೂ ಚಿತ್ತವು ಒಳಗೇ ಸಂಕಲ್ಪವನ್ನು ಮಾಡುತ್ತಿರದಂತೆಯೂ ತಡೆದುಕೊಂಡು ಎಂದರ್ಥ.

3. ಕರ್ಮವು ಚಿತ್ತಕ್ಕೆ ನೈರ್ಮಲ್ಯವನ್ನು ಕೊಡುವದು, ಯೋಗವು ಸ್ಥೈರ್ಯವನ್ನು ಕೊಡುವದು. ಹೀಗೆ ಎರಡೂ ಅಂತಃಕರಣಶುದ್ಧಿಯನ್ನೇ ಉಂಟುಮಾಡುತ್ತವೆ.

(ಭಾಷ್ಯ)

೩೯೪. ಬಾಹ್ಯಮ್ ಆಸನಮ್ ಉಕ್ತಮ್ । ಅಧುನಾ ಶರೀರಸ್ಯ ಧಾರಣಂ ಕಥಮಿತಿ ? ಉಚ್ಯತೇ—

(ಭಾಷ್ಯಾರ್ಥ)

ಹೊರಗಿನ ಆಸನವನ್ನು ಹೇಳಿದ್ದಾಯಿತು. ಈಗ ಶರೀರವನ್ನು ಹೇಗೆ ಇಟ್ಟು ಕೊಳ್ಳಬೇಕು ? ಎಂಬುದನ್ನು (ಭಗವಂತನು) ಹೇಳುತ್ತಾನೆ —

**ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।**
**ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥ ೧೩ ॥**
**ಪ್ರಶಾನ್ತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ ।**
**ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥ ೧೪ ॥**

೧೩-೧೪. ಕಾಯಶಿರೋಗ್ರೀವವನ್ನು ಅಚಲವಾಗಿ ಇಟ್ಟುಕೊಂಡು ಸ್ಥಿರನಾಗಿ ತನ್ನ ಮೂಗಿನ ತುದಿಯನ್ನು ನೋಡುತ್ತಾ ದಿಕ್ಕುಗಳನ್ನು ನೋಡದೆ ಪ್ರಶಾಂತಾತ್ಮನಾಗಿ ಭಯವಿಲ್ಲದವನಾಗಿ ಬ್ರಹ್ಮಚಾರಿವ್ರತದಲ್ಲಿ ಇರುವವನಾಗಿ ಮನಸ್ಸನ್ನು ಸಂಯಮಮಾಡಿಕೊಂಡು ಮಚ್ಚಿತ್ತನಾಗಿ ಮತ್ಪರನಾಗಿ ಯುಕ್ತನಾಗಿ ಕುಳಿತಿರಬೇಕು.

(ಭಾಷ್ಯ)

೩೯೫. ಸಮಂ ಕಾಯಶಿರೋಗ್ರೀವಂ ಕಾಯಶ್ಚ ಶಿರಶ್ಚ ಗ್ರೀವಾ ಚ ಕಾಯಶಿರೋಗ್ರೀವಂ ತತ್ ಸಮಂ ಧಾರಯನ್ । ಅಚಲಂ ಚ । ಸಮಂ ಧಾರಯತಃ ಚಲನಂ ಸಂಭವತಿ । ಅತೋ ವಿಶಿನಷ್ಟಿ ಅಚಲಮ್ ಇತಿ । ಸ್ಥಿರಃ ಸ್ಥಿರೋ ಭೂತ್ವಾ ಇತ್ಯರ್ಥಃ । ಸ್ವಂ ನಾಸಿಕಾಗ್ರಂ ಸಂಪ್ರೇಕ್ಷ್ಯ ಸಮ್ಯಕ್ ಪ್ರೇಕ್ಷಣಂ ದರ್ಶನಂ ಕೃತ್ವಾ ಇವ ಇತಿ ಇವ ಶಬ್ದೋ ಲುಪ್ತೋ ದ್ರಷ್ಟವ್ಯಃ । ನ ಹಿ ಸ್ವನಾಸಿಕಾಗ್ರಸಂಪ್ರೇಕ್ಷಣಮ್ ಇಹ ವಿಧಿತ್ಸಿತಮ್, ಕಿಂ ತರ್ಹಿ, ಚಕ್ಷುಷೋಃ ದೃಷ್ಟಿಸಂನಿಪಾತಃ । ಸ ಚ ಅನ್ತಃಕರಣಸಮಾಧಾನಾಪೇಕ್ಷೋ ವಿವಕ್ಷಿತಃ । ಸ್ವನಾಸಿಕಾಗ್ರಸಂಪ್ರೇಕ್ಷಣಮೇವ ಚೇತ್ ವಿವಕ್ಷಿತಮ್, ಮನಃ ತತ್ರೈವ ಸಮಾಧೀಯೇತ । ನ ಆತ್ಮನಿ । ಆತ್ಮನಿ ಹಿ ಮನಸಃ ಸಮಾಧಾನಂ ವಕ್ಷ್ಯತಿ "ಆತ್ಮಸಂಸ್ಥಂ ಮನಃ ಕೃತ್ವಾ" (೬-೨೫) ಇತಿ । ತಸ್ಮಾತ್ ಇವಶಬ್ದಲೋಪೇನ ಅಕ್ಷ್ಣೋಃ ದೃಷ್ಟಿಸಂನಿಪಾತ ಏವ 'ಸಂಪ್ರೇಕ್ಷ್ಯ' ಇತ್ಯುಚ್ಯತೇ । ದಿಶಶ್ಚ

ಅನವಲೋಕಯನ್ ದಿಶಾಂ ಚ ಅವಲೋಕನಮ್ ಅನ್ತರಾ[1] ಅಕುರ್ವನ್ ಇತ್ಯೇತತ್||

(ಭಾಷ್ಯಾರ್ಥ)

ಕಾಯಶಿರೋಗ್ರೀವವನ್ನು-ಶರೀರ, ತಲೆ, ಕತ್ತು ಈ (ಮೂರೂ) ಕಾಯಶಿರೋಗ್ರೀವವು, ಅದನ್ನು-ಸಮವಾಗಿ ಇಟ್ಟುಕೊಂಡು[2] ಅಚಲವಾಗಿಯೂ (ಇಟ್ಟುಕೊಂಡು). ಸಮವಾಗಿ (ನೆಟ್ಟಗೆ) ಇಟ್ಟುಕೊಂಡರೂ ಅಲುಗಾಡಬಹುದು, ಆದ್ದರಿಂದ 'ಅಚಲವಾಗಿ' ಎಂದು ವಿಶೇಷಣವನ್ನು ಹಾಕಿರುತ್ತಾನೆ. ಸ್ಥಿರನಾಗಿ, ಸ್ಥಿರನಾಗಿದ್ದುಕೊಂಡು ಎಂದರ್ಥ ತನ್ನ ಮೂಗಿನ ತುದಿಯನ್ನು (ಸಂಪ್ರೇಕ್ಷ್ಯ) (ಸಂ) ಚೆನ್ನಾಗಿ (ಪ್ರೇಕ್ಷ್ಯ) ಪ್ರೇಕ್ಷಣವನ್ನು ನೋಡುವಿಕೆಯನ್ನು ಮಾಡುವವನಂತೆ ಎಂದು (ಇಲ್ಲಿ) ಅಂತೆ ಎಂಬ ಶಬ್ದವು ಲೋಪವಾಗಿದೆ ಎಂದು ಇಟ್ಟುಕೊಳ್ಳಬೇಕು ಏಕೆಂದರೆ ತನ್ನ ಮೂಗಿನ ತುದಿಯನ್ನು ಚೆನ್ನಾಗಿ ನೋಡುತ್ತಿರಬೇಕೆಂದು ಇಲ್ಲಿ ವಿಧಿಸುವದಕ್ಕೆ ಹೊರಟಿಲ್ಲ, ಮತ್ತೇನೆಂದರೆ ಕಣ್ಣುಗಳೆರಡರ ನೋಟವನ್ನೂ ಒಕ್ಕಡೆಗೆ ತಂದುಕೊಳ್ಳಬೇಕೆಂಬುದನ್ನೇ (ವಿಧಿಸುವದಕ್ಕೆ ಹೊರಟಿರುತ್ತದೆ) ಇದೂ ಅಂತಃಕರಣವನ್ನು ಸಮಾಧಾನಗೊಳಿಸುವದಕ್ಕೆಂದು (ತಿಳಿಸುವದೇ) ಇಲ್ಲಿ ತಾತ್ಪರ್ಯವು. ತನ್ನ ಮೂಗಿನ ತುದಿಯನ್ನೇ ಚೆನ್ನಾಗಿ ನೋಡುತ್ತಿರಬೇಕೆಂದು (ಇಲ್ಲ) ವಿಧಿಸುವದಕ್ಕೆ ಹೊರಟಿದೆಯೆನ್ನುವದಾದರೆ ಮನಸ್ಸು ಅದರಲ್ಲಿಯೇ ಸಮಾಹಿತವಾಗಿ (ನಿಲ್ಲ)ಬೇಕೆಂದು ಆದೀತೇ ಹೊರತು ಆತ್ಮನಲ್ಲಿ (ನಿಲ್ಲ)ಬೇಕೆಂದು ಆಗಲಾರದು (ಆದರೆ) ಆತ್ಮನಲ್ಲಿಯೇ ಮನಸ್ಸನ್ನು ಸಮಾಧಾನಗೊಳಿಸಬೇಕೆಂದು "ಆತ್ಮಸಂಸ್ಥಂ ಮನಃ ಕೃತ್ವಾ" (೬-೨೫) ಎಂಬಲ್ಲಿ ಮುಂದೆ ಹೇಳಿರುತ್ತದೆ. ಆದ್ದರಿಂದ ಇಲ್ಲಿ 'ಅಂತೆ' ಎಂಬ ಮಾತನ್ನು ಬಿಟ್ಟಿರುತ್ತದೆ (ಎಂದು ಇಟ್ಟುಕೊಂಡು) ಕಣ್ಣುಗಳೆರಡರ ನೋಟವನ್ನೂ ಒಕ್ಕಡೆಗೆ ತಂದುಕೊಳ್ಳಬೇಕೆಂಬುದನ್ನೇ "ಸಂಪ್ರೇಕ್ಷ್ಯ" ಎಂಬ (ಮಾತಿನಿಂದ) ಹೇಳಿದೆ (ಎಂದು ನಿಶ್ಚಯಿಸಬೇಕು). ದಿಕ್ಕುಗಳನ್ನೂ ನೋಡದೆ ಎಂದರೆ ದಿಕ್ಕುಗಳನ್ನೂ ನಡುನಡುವೆ ನೋಡುತ್ತಿರದೆ ಎಂದರ್ಥ.

(ಭಾಷ್ಯ)

೩೯೬. ಕಿಂಚ ಪ್ರಶಾನ್ತಾತ್ಮಾ ಪ್ರಕರ್ಷೇಣ ಶಾನ್ತಃ ಆತ್ಮಾ ಅನ್ತಃಕರಣಂ ಯಸ್ಯ ಸೋಽಯಂ ಪ್ರಶಾನ್ತಾತ್ಮಾ। ವಿಗತಭೀಃ ವಿಗತಭಯಃ। ಬ್ರಹ್ಮಚಾರಿವ್ರತೇ

---

1. ಈ ಮಾತು ಮು||ಮ್ಯ|| ಪಾಠದಲ್ಲಿಲ್ಲ. ವ್ಯಾಖ್ಯಾನದಲ್ಲಿರುವ ಮಾತನ್ನು ಯಾರೋ ಸೇರಿಸಿ ಬರೆದುಕೊಂಡಿರಬೇಕೆಂದು ಊಹಿಸುವದಕ್ಕೂ ಅವಕಾಶವಿದೆ.

2. ಶ್ಲೋ. ೨-೪.

ಸ್ಥಿತಃ ಬ್ರಹ್ಮಚಾರಿಣಃ ವ್ರತಂ ಬ್ರಹ್ಮಚಾರಿವ್ರತಮ್[1], ಬ್ರಹ್ಮಚರ್ಯಂ ಗುರುಶುಶ್ರೂಷಾ ಭಿಕ್ಷಾನ್ನಭುಕ್ತ್ಯಾದಿ[2] ತಸ್ಮಿನ್ ಸ್ಥಿತಃ ತದನುಷ್ಠಾತಾ ಭವೇತ್ ಇತ್ಯರ್ಥಃ । ಕಿಂಚ ಮನಃ ಸಂಯಮ್ಯ ಮನಸಃ ವೃತ್ತೀಃ ಉಪಸಂಹೃತ್ಯ ಇತ್ಯೇತತ್ । ಮಚ್ಚಿತ್ತಃ ಮಯಿ ಪರಮೇಶ್ವರೇ ಚಿತ್ತಂ ಯಸ್ಯ ಸೋಽಯಂ ಮಚ್ಚಿತ್ತಃ । ಯುಕ್ತಃ ಸಮಾಹಿತಃ ಸನ್ ಆಸೀತ ಉಪವಿಶೇತ್ । ಮತ್ಪರಃ ಅಹಂ ಪರಃ ಯಸ್ಯ ಸೋಽಯಂ ಮತ್ಪರಃ । ಭವತಿ ಕಶ್ಚಿತ್ ರಾಗೀ ಸ್ತ್ರೀಚಿತ್ತಃ ನ ತು ಸ್ತ್ರಿಯಮೇವ ಪರತ್ವೇನ ಗೃಹ್ಣಾತಿ ಕಿಂ ತರ್ಹಿ ರಾಜಾನಂ ಮಹಾದೇವಂ ವಾ । ಅಯಂ ತು ಮಚ್ಚಿತ್ತಃ ಮತ್ಪರಶ್ಚ ॥

(ಭಾಷ್ಯಾರ್ಥ)

ಮತ್ತು ಪ್ರಶಾಂತಾತ್ಮನಾಗಿ, ಹೆಚ್ಚಾಗಿ ಶಾಂತವಾಗಿರುವ ಆತ್ಮವು ಎಂದರೆ ಅಂತಃಕರಣವು ಯಾವನಿಗೆ ಇರುವದೋ ಅಂಥವನು ಪ್ರಶಾಂತಾತ್ಮನು. (ಅಂಥವನಾಗಿ) ವಿಗತಭೀಃ ಎಂದರೆ ಅಂಜಿಕೆಯನ್ನು ಕಳೆದುಕೊಂಡವನಾಗಿ. ಬ್ರಹ್ಮಚಾರಿವ್ರತದಲ್ಲಿರುವವನಾಗಿ ಬ್ರಹ್ಮಚಾರಿಯ ವ್ರತವೇ ಬ್ರಹ್ಮಚಾರಿವ್ರತವು, ಬ್ರಹ್ಮಚರ್ಯವು; ಗುರುಶುಶ್ರೂಷೆ, ಭಿಕ್ಷಾನ್ನಭೋಜನ ಮುಂತಾದದ್ದು, ಅದರಲ್ಲಿರುವವನಾಗಿ ಅದನ್ನು ಮಾಡುತ್ತಿರಬೇಕು ಎಂದರ್ಥ. ಮನಸ್ಸನ್ನು ಸಂಯಮಮಾಡಿಕೊಂಡು ಮನಸ್ಸಿನ ವೃತ್ತಿಗಳನ್ನು ಹಿಂದಕ್ಕೆಳೆದುಕೊಂಡು ಎಂದರ್ಥ. ಮಚ್ಚಿತ್ತನಾಗಿ ಎಂದರೆ ಪರಮೇಶ್ವರನಾದ ನನ್ನಲ್ಲಿ ಚಿತ್ತವು ಯಾವನಿಗಿರುವದೋ ಅಂಥವನು ಮಚ್ಚಿತ್ತನು[3], (ಅಂಥವನಾಗಿ). ಯುಕ್ತನಾಗಿ ಎಂದರೆ ಸಮಾಧಾನವುಳ್ಳವನಾಗಿ ಕುಳಿತಿರಬೇಕು, ಕೂತುಕೊಂಡಿರಬೇಕು. ಮತ್ಪರನಾಗಿರಬೇಕು. ಒಬ್ಬನು ಸ್ತ್ರೀಚಿತ್ತನಾಗಿರುತ್ತಾನೆ, ಆದರೆ (ಆ) ಸ್ತ್ರೀಯೇ ಎಲ್ಲಕ್ಕೂ ಹೆಚ್ಚೆಂದು ಭಾವಿಸಿರುವದಿಲ್ಲ, ರಾಜನೋ ಮಹಾದೇವನೋ (ಎಲ್ಲಕ್ಕೂ ಹೆಚ್ಚೆಂದು ಭಾವಿಸಿರುತ್ತಾನೆ.) ಆದರೆ ಈ (ಯೋಗಿಯೋ) ಎಂದರೆ ನನ್ನಲ್ಲಿಯೇ ಚಿತ್ತವುಳ್ಳವನಾಗಿ ನಾನೇ ಹೆಚ್ಚೆಂದು (ಭಾವಿಸಿರಬೇಕು)[4]

---

1. ಮ|| ಮ್ಯೆ|| ಪಾಠ.

2. ವಾ|| ಮ್ಯೆ|| ಪಾಠ; 'ಭೈಕ್ಷಭುಕ್ತ್ಯಾದಿ' ಮ||; 'ಭಿಕ್ಷಾಭುಕ್ತ್ಯಾದಿ' ಆ|| ನಿ|| ಗು||

3. ಚಿತ್ತವೃತ್ತಿಗಳನ್ನು ಸುಮ್ಮನೆ ತಡೆಯುವದಕ್ಕೆ ಆಗುವದಿಲ್ಲ; ಆದ್ದರಿಂದ ಪರಮಾತ್ಮವಿಷಯಕವಾದ ಚಿತ್ತವೃತ್ತಿಯನ್ನು ಸಂಪಾದಿಸಿಕೊಳ್ಳಬೇಕು.

4. ಪರಮೇಶ್ವರನ ಚಿಂತನೆಯಿಂದ ಮತ್ತೇನನ್ನಾದರೂ ಪಡೆದುಕೊಳ್ಳಬೇಕೆಂಬ ಆಸೆಯಿದ್ದರೆ ಅದು ಹೆಚ್ಚಿನ ಯೋಗವಲ್ಲ

(ಭಾಷ್ಯ)

೩೯೭. ಅಥ ಇದಾನೀಂ ಯೋಗಫಲಮ್ ಉಚ್ಯತೇ—

(ಭಾಷ್ಯಾರ್ಥ)

ಇನ್ನು ಈಗ ಯೋಗದ ಫಲವನ್ನು [1] ಹೇಳಲಾಗುತ್ತದೆ.—

**ಯುಞ್ಜನ್ನೇವಂ ಸದಾತ್ಮಾನಂ ಯೋಗೀ ನಿಯತಮಾನಸಃ ।**
**ಶಾನ್ತಿಂ ನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ ॥ ೧೫ ॥**

೧೫. ನಿಯತಮಾನಸನಾಗಿ ಹೀಗೆ ಯಾವಾಗಲೂ ಆತ್ಮವನ್ನು ಯೋಗದಲ್ಲಿಟ್ಟುಕೊಳ್ಳುವ ಯೋಗಿಯು ನಿರ್ವಾಣಪರಮವಾದ ನನ್ನಲ್ಲಿರುವ ಶಾಂತಿಯನ್ನು ಪಡೆಯುವನು.

(ಭಾಷ್ಯ)

೩೯೮. ಯುಞ್ಜನ್ ಸಮಾಧಾನಂ ಕುರ್ವನ್ । ಏವಂ ಯಥೋಕ್ತೇನ ವಿಧಾನೇನ ಸದಾ ಆತ್ಮಾನಂ ಯೋಗೀ ನಿಯತಮಾನಸಃ ನಿಯತಂ ಸಂಯತಂ ಮಾನಸಂ ಮನಃ ಯಸ್ಯ ಸೋಽಯಂ ನಿಯತಮಾನಸಃ । ಶಾನ್ತಿಮ್ ಉಪರತಿಂ ನಿರ್ವಾಣಪರಮಾಂ ನಿರ್ವಾಣಂ ಮೋಕ್ಷಃ ತತ್ ಪರಮಾ ನಿಷ್ಠಾ ಯಸ್ಯಾಃ ಶಾನ್ತೇಃ ಸಾ ನಿರ್ವಾಣಪರಮಾ ತಾಂ ನಿರ್ವಾಣಪರಮಾಂ ಮತ್ಸಂಸ್ಥಾಂ ಮದಧೀನಾಮ್ । ಅಧಿಗಚ್ಛತಿ ಪ್ರಾಪ್ನೋತಿ ॥

(ಭಾಷ್ಯಾರ್ಥ)

ಹೀಗೆ ಮೇಲೆ ಹೇಳಿದ ಬಗೆಯಿಂದ ಯಾವಾಗಲೂ (ತನ್ನ) ಆತ್ಮವನ್ನು [2] ಯೋಗದಲ್ಲಿಟ್ಟುಕೊಂಡಿರುವ ಸಮಾಧಾನಗೊಳಿಸಿಕೊಂಡಿರುವ, ನಿಯತಮಾನಸನಾದ ನಿಯತವಾದ ಬಿಗಿಹಿಡಿದ ಮಾನಸವು ಎಂದರೆ ಮನಸ್ಸು ಯಾವನಿಗಿರುವದೋ ಅಂಥವನು ನಿಯತಮಾನಸನು ಅಂಥ ಯೋಗಿಯು ನಿರ್ವಾಣಪರಮವಾದ–ನಿರ್ವಾಣವು ಎಂದರೆ ಮೋಕ್ಷವು; ಅದು ಯಾವ ಶಾಂತಿಗೆ ಕಡೆಯ ನಿಲ್ದಾಣವಾಗಿರುವದೋ ಅದು ನಿರ್ವಾಣಪರಮವಾದದ್ದು ಅಂಥ ನನ್ನಲ್ಲಿರುವ ಎಂದರೆ ನನ್ನ ವಶದಲ್ಲಿರುವ ಶಾಂತಿಯನ್ನು ಉಪರತಿಯನ್ನು ಪಡೆಯುವನು, ಹೊಂದುವನು.

1. ಜ್ಞಾನಪ್ರಾಪ್ತಿಯ ಮೂಲಕವಾಗಿ ಸಿಕ್ಕುವ ಫಲವನ್ನು ಎಂದರ್ಥ. ನೇರಾಗಿ ಸಿಕ್ಕುವ ಫಲವನ್ನು ೬-೧೨ರಲ್ಲಿ ಹೇಳಿದೆ.

2. ಮನಸ್ಸನ್ನು.

# ಯೋಗಕ್ಕೆ ಆಹಾರಾದಿಗಳ ನಿಯಮ

(ಭಾಷ್ಯ)

೩೯೯. ಇದಾನೀಂ ಯೋಗಿನಃ ಆಹಾರಾದಿನಿಯಮಃ ಉಚ್ಯತೇ—

(ಭಾಷ್ಯಾರ್ಥ)

ಈಗ ಯೋಗಿಗೆ ಆಹಾರವೇ ಮುಂತಾದದ್ದರ[1] ನಿಯಮವನ್ನು ಹೇಳುತ್ತಾನೆ:

**ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾನ್ತಮನಶ್ನತಃ ।**
**ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥ ೧೬ ॥**

೧೬. ಅತಿಯಾಗಿ ಊಟಮಾಡುವವನಿಗೆ ಯೋಗವಿಲ್ಲ, ನಿಯಮದಿಂದ ಊಟಮಾಡದೆ ಬಿಟ್ಟಿರುವವನಿಗೂ ಇಲ್ಲ. ಅತಿಯಾಗಿ ನಿದ್ರಿಸುವವನಿಗೆ ಇಲ್ಲ, ಎಚ್ಚತ್ತಿರುವವನಿಗೆ ಇಲ್ಲವೇ ಇಲ್ಲ.

(ಭಾಷ್ಯ)

೪೦೦ ನ ಅತ್ಯಶ್ನತಃ ಆತ್ಮಸಮ್ಮಿತಮ್ ಅನ್ನಪರಿಮಾಣಮ್ ಅತೀತ್ಯ ಅಶ್ನತಃ ಅತ್ಯಶ್ನತಃ ನ ಯೋಗಃ ಅಸ್ತಿ । ನ ಚ ಏಕಾನ್ತಮ್ ಅನಶ್ನತಃ ಯೋಗಃ ಅಸ್ತಿ । "ಯದು ಹ ವಾ ಆತ್ಮಸಮ್ಮಿತಮನ್ನಂ ತದವತಿ ತನ್ನ ಹಿನಸ್ತಿ ಯದ್ ಭೂಯೋ ಹಿನಸ್ತಿ ತದ್ಯತ್ ಕನೀಯೋಽನ್ನಂ ನ ತದವತಿ" (ಶ ಬ್ರಾ. ?)[2] ಇತಿ ಶ್ರುತೇಃ । ತಸ್ಮಾತ್ ಯೋಗೀ ನ ಆತ್ಮಸಮ್ಮಿತಾತ್ ಅನ್ನಾತ್ ಅಧಿಕಂ ನ್ಯೂನಂ ವಾ ಅಶ್ನೀಯಾತ್ । ಅಥವಾ ಯೋಗಿನಃ ಯೋಗಶಾಸ್ತ್ರೇ ಪಠಿಪಠಿತಾತ್ ಅನ್ನಪರಿಮಾಣಾತ್ ಅತಿಮಾತ್ರಮ್ ಅಶ್ನತಃ ಯೋಗಃ ನಾಸ್ತಿ । ಉಕ್ತಂ ಹಿ "ಅರ್ಧಂ ಸವ್ಯಞ್ಜನಾನ್ನಸ್ಯ ತೃತೀಯಮುದಕಸ್ಯ ಚ । ವಾಯೋಃ ಸಞ್ಚಾರಣಾರ್ಥಂ ತು ಚತುರ್ಥಮವಶೇಷಯೇತ್"[3] (?) ಇತ್ಯಾದಿ ಪರಿಮಾಣಮ್ । ತಥಾ ನ ಚ ಅತಿಸ್ವಪ್ನಶೀಲಸ್ಯ ಯೋಗಃ ಭವತಿ । ನೈವ ಚ ಅತಿಮಾತ್ರಂ ಜಾಗ್ರತಃ ಯೋಗಃ ಭವತಿ ಚ ಅರ್ಜುನ ॥

---

1. ನಿದ್ರೆ, ನಡೆನುಡಿ ಮುಂತಾದದ್ದರ.
2. ಇದು ಶತಪಥಬ್ರಾಹ್ಮಣದಲ್ಲಿದೆ ಎಂದು ಆ॥ ವ್ಯಾಖ್ಯಾನ.
3. ಈ ಸ್ಮೃತಿಯು ಎಲ್ಲಿಯದೆಂಬುದು ತಿಳಿಯದು.

(ಭಾಷ್ಯಾರ್ಥ)

ಅತ್ಯಶ್ನತಃ–ತನಗೆ ಎಷ್ಟು ಹೊಂದುವದೋ (ಆ) ಅನ್ನದ ಪರಿಮಾಣವನ್ನು (ಅತಿ) ಮೀರಿ ಊಟಮಾಡುವವನಾದ (ಅಶ್ನತಃ) ಅತ್ಯಾಶಿಗೆ–ಯೋಗವು (ದಕ್ಕು)ವದಿಲ್ಲ ನಿಯಮವಾಗಿ (ಆಹಾರವನ್ನು) ಉಣ್ಣದೆ ಬಿಟ್ಟಿರುವವನಿಗೂ ಯೋಗವು (ದಕ್ಕುವ)ದಿಲ್ಲ "ಯಾವ ಅನ್ನವು ತನಗೆ ಹೊಂದುವಷ್ಟಿರುವದೋ ಅದು (ತನ್ನನ್ನು) ಕಾಪಾಡುವದು, ಅದು ತೊಂದರೆಯನ್ನುಂಟುಮಾಡುವದಿಲ್ಲ, ಯಾವದು (ತನಗೆ ತಕ್ಕ ಅಳತೆಗಿಂತ) ಹೆಚ್ಚಾಗಿರುವದೋ ಅದು ತೊಂದರೆಯನ್ನುಂಟುಮಾಡುತ್ತದೆ; ಯಾವದು ಕಡಿಮೆಯಾಗಿರುವದೋ ಅದು ಕಾಪಾಡುವದಿಲ್ಲ" (ಶ. ಬ್ರಾ.) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು ಆದ್ದರಿಂದ ಯೋಗಿಯು ತನ್ನ ಅಳತೆಗಿಂತ ಹೆಚ್ಚಾಗಿ ಅಥವಾ ಕಡಿಮೆಯಾಗಿ ಊಟಮಾಡಬಾರದು.

ಅಥವಾ **ಯೋಗಶಾಸ್ತ್ರದಲ್ಲಿ** ಇಷ್ಟೆಂದು ಗೊತ್ತುಮಾಡಿರುವ ಅನ್ನದ ಪರಿಮಾಣಕ್ಕಿಂತ ಹೆಚ್ಚಾಗಿ ಊಟಮಾಡುವವನಿಗೆ ಯೋಗವು (ದಕ್ಕು)ವದಿಲ್ಲ (ಎಂದಾದರೂ ಅರ್ಥವನ್ನು ಮಾಡಬಹುದು) ಏಕೆಂದರೆ (ಯೋಗಶಾಸ್ತ್ರದಲ್ಲಿ) "ಅರ್ಧಂ ಸವ್ಯಞ್ಜನಾನ್ನಸ್ಯ ತೃತೀಯಮುದಕಸ್ಯ ಚ । ವಾಯೋಃ ಸಞ್ಚರಣಾರ್ಥಂ ತು ಚತುರ್ಥಮವಶೇಷಯೇತ್"॥ (ವ್ಯಂಜನಸಹಿತವಾದ ಅನ್ನಕ್ಕೆ ಅರ್ಧ, ನೀರಿಗಾಗಿ ಮೂರನೆಯ ಕಾಲುಭಾಗ–ಹೀಗೆ ಕೊಟ್ಟು ವಾಯುವಿನ ಸಂಚಾರಕ್ಕಾಗಿ ಇನ್ನು ನಾಲ್ಕನೆಯ ಅಂಶವನ್ನು ಉಳಿಸಿಕೊಳ್ಳಬೇಕು) ಎಂದು ಮುಂತಾಗಿ (ಆಹಾರದ) ಪರಿಣಾಮವನ್ನು ಹೇಳಿರುತ್ತದೆ.

ಇದರಂತೆ ಎಲೈ ಅರ್ಜುನನೆ, ಬಹಳವಾಗಿ ನಿದ್ರಿಸುವವನಿಗೂ ಯೋಗವು (ದಕ್ಕುವ)ದಿಲ್ಲ; ಅತಿಯಾಗಿ ಎಚ್ಚರವಾಗಿರುವವನಿಗೂ ಯೋಗವು (ದಕ್ಕುವ)ದೇ ಇಲ್ಲ.

(ಭಾಷ್ಯ)

೪೦೧. ಕಥಂ ಪುನಃ ಯೋಗಃ ಭವತಿ ಇತಿ? ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ ಹೇಗಿದ್ದರೆ ಯೋಗವು (ದಕ್ಕು)ವದು? ಎಂದರೆ ಹೇಳುತ್ತೇನೆ.—

**ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।**
**ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥ ೧೭ ॥**

೧೭. ಯುಕ್ತಾಹಾರವಿಹಾರನಾಗಿ, ಕರ್ಮಗಳಲ್ಲಿ ಯುಕ್ತಚೇಷ್ಟನಾಗಿ, ಯುಕ್ತಸ್ವಪ್ನಾವಬೋಧನಾಗಿ ಇರುವವನಿಗೆ ದುಃಖನಾಶಕವಾದ ಯೋಗವು ಉಂಟಾಗುವದು.

(ಭಾಷ್ಯ)

೪೦೨. ಯುಕ್ತಾಹಾರವಿಹಾರಸ್ಯ ಆಹ್ರಿಯತೇ ಇತಿ ಆಹಾರಃ ಅನ್ನಮ್, ವಿಹರಣಂ ವಿಹಾರಃ ಪಾದಕ್ರಮಃ । ತೌ ಯುಕ್ತೌ ನಿಯತಪರಿಮಾಣೌ ಯಸ್ಯ ಸಃ ಯುಕ್ತಾಹಾರವಿಹಾರಃ ತಸ್ಯ। ತಥಾ[1] ಯುಕ್ತಚೇಷ್ಟಸ್ಯ ಯುಕ್ತಾ ನಿಯತಾ ಚೇಷ್ಟಾ ಯಸ್ಯ ಕರ್ಮಸು ತಸ್ಯ । ತಥಾ ಯುಕ್ತಸ್ವಪ್ನಾವಬೋಧಸ್ಯ ಯುಕ್ತೌ ಸ್ವಪ್ನಶ್ಚ ಅವಬೋಧಶ್ಚ ತೌ ನಿಯತಕಾಲೌ ಯಸ್ಯ ತಸ್ಯ । ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ಯುಕ್ತಸ್ವಪ್ನಾವಬೋಧಸ್ಯ ಯೋಗಿನಃ ಯೋಗಃ ಭವತಿ ದುಃಖಹಾ । ದುಃಖಾನಿ ಸರ್ವಾಣಿ ಹನ್ತಿ ಇತಿ ದುಃಖಹಾ ಸರ್ವಸಂಸಾರದುಃಖಕ್ಷಯಕೃತ್ ಯೋಗೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಯುಕ್ತಾಹಾರವಿಹಾರನಾದವನಿಗೆ ಒಳಗೆ ತೆಗೆದುಕೊಳ್ಳಲ್ಪಡುತ್ತದೆಯಾದ್ದರಿಂದ ಅನ್ನವು ಆಹಾರವೆನಿಸುವದು , ವಿಹರಿಸುವದು ವಿಹಾರವು, ಹೆಜ್ಜೆಯನ್ನಿಟ್ಟು (ಓಡಾಡುವದು). ಇವೆರಡೂ ಯುಕ್ತವಾಗಿ ಎಂದರೆ ಗೊತ್ತಾದ ಪರಿಮಾಣದಲ್ಲಿ ಯಾವನಿಗಿರುವವೋ ಅವನು ಯುಕ್ತಾಹಾರವಿಹಾರನು , ಅಂಥವನಿಗೆ. ಹಾಗೂ ಕರ್ಮಗಳಲ್ಲಿ ಯುಕ್ತಚೇಷ್ಟನಾಗಿರುವವನಿಗೆ, ಯಾವನಿಗೆ ಚೇಷ್ಟೆಯು ಕರ್ಮಗಳಲ್ಲಿರುವ (ಪ್ರಯತ್ನವು) ಯುಕ್ತವಾಗಿರುವದೋ ಗೊತ್ತಾದ (ಪರಿಮಿತಿ)ಯುಳ್ಳದ್ದಾಗಿರುವದೋ ಅವನಿಗೆ. ಮತ್ತು ಯುಕ್ತಸ್ವಪ್ನಾವಬೋಧನಿಗೆ–ಕನಸೂ ಎಚ್ಚರವೂ (ಸ್ವಪ್ನಾವಬೋಧಗಳು) ಅವೆರಡೂ ಯುಕ್ತವಾಗಿ ಎಂದರೆ (ಇಂತಿಷ್ಟೆಂದು) ಗೊತ್ತಾಗಿರುವ ಕಾಲದಷ್ಟು ಯಾವನಿಗೆ ಇರುವವೋ ಅವನಿಗೆ ಹೀಗೆ ಯುಕ್ತಾಹಾರವಿಹಾರನಾಗಿ, ಕರ್ಮಗಳಲ್ಲಿ ಯುಕ್ತಚೇಷ್ಟನಾಗಿ, ಯುಕ್ತಸ್ವಪ್ನಾವಬೋಧನಾಗಿ ಇರುವ ಯೋಗಿಗೆ ದುಃಖನಾಶವಾದ ಯೋಗವುಂಟಾಗುವದು. ದುಃಖಗಳೆಲ್ಲವನ್ನೂ ನಾಶಮಾಡುವದರಿಂದ (ಹನ್ತಿ) ದುಃಖನಾಶಕವು (ದುಃಖಹಾ) ; ಇಂಥವನಿಗೆ ಸಂಸಾರದ ದುಃಖಗಳೆಲ್ಲವನ್ನೂ ನಾಶಗೊಳಿಸುವ ಯೋಗವು (ದಕ್ಕುವ)ದಾಗುತ್ತದೆ[1] ಎಂದರ್ಥ.

---

1. " ಯುಕ್ತಚೇಷ್ಟಸ್ಯ ತಥಾ ಅನ್ಯಾ ಚ ಯುಕ್ತಾ" ವ್ಯೈ॥ಪಾ॥

2. ಇಂಥವನಿಗೆ ಸಂಸಾರದ ದುಃಖಗಳೆಲ್ಲವನ್ನೂ ಯೋಗವು ನಾಶಗೊಳಿಸುತ್ತದೆ ಎಂದೂ ಕನ್ನಡಿಸಬಹುದು.

## ಯುಕ್ತನಾದದ್ದರ ಗುರುತು

(ಭಾಷ್ಯ)

೪೦೩. ಅಥ ಅಧುನಾ ಕದಾ ಯುಕ್ತೋ ಭವತಿ ಇತಿ? ಉಚ್ಯತೇ—

(ಭಾಷ್ಯಾರ್ಥ)

ಇನ್ನು ಯಾವಾಗ ಯುಕ್ತನಾಗುವನು ಎಂಬುದನ್ನು ಹೇಳುತ್ತೇನೆ :—

**ಯದಾ ವಿನಿಯತಂ ಚಿತ್ತಮಾತ್ಮನ್ಯೇವಾವತಿಷ್ಠತೇ ।**
**ನಿಃಸ್ಪೃಹಃ ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೇ ತದಾ ॥೧೮॥**

೧೮. ಯಾವಾಗ ವಿನಿಯತವಾದ ಚಿತ್ತವು ಆತ್ಮನಲ್ಲಿಯೇ ನಿಂತುಕೊಳ್ಳುವದೋ, (ಯಾವಾಗ) ಸರ್ವಕಾಮುಗಳಲ್ಲಿಯೂ ನಿಃಸ್ಪೃಹನಾಗುವನೋ, ಆಗ ಯುಕ್ತನೆನಿಸುವನು.

(ಭಾಷ್ಯ)

೪೦೪ ಯದಾ ವಿನಿಯತಂ ವಿಶೇಷೇಣ ನಿಯತಂ ಸಂಯತಮ್ ಏಕಾಗ್ರತಾಮ್ ಆಪನ್ನಂ ಚಿತ್ತಂ ಹಿತ್ವಾ ಬಾಹ್ಯಚಿನ್ತಾಮ್ ಆತ್ಮನ್ಯೇವ ಕೇವಲೇ ಅವತಿಷ್ಠತೇ ಸ್ವಾತ್ಮನಿ ಸ್ಥಿತಿಂ ಲಭತೇ ಇತ್ಯರ್ಥಃ । ನಿಃಸ್ಪೃಹಃ ಸರ್ವಕಾಮೇಭ್ಯಃ ನಿರ್ಗತಾ ದೃಷ್ಟಾದೃಷ್ಟವಿಷಯೇಭ್ಯಃ ಸ್ಪೃಹಾ ತೃಷ್ಣಾ ಯಸ್ಯ ಯೋಗಿನಃ ಸಃ ಯುಕ್ತಃ ಸಮಾಹಿತಃ ಇತಿ ಉಚ್ಯತೇ ತದಾ ತಸ್ಮಿನ್ ಕಾಲೇ[1] ॥

(ಭಾಷ್ಯಾರ್ಥ)

ಯಾವಾಗ ವಿನಿಯತವಾದ ಎಂದರೆ ವಿಶೇಷವಾಗಿ ನಿಯತವಾಗಿ ಬಿಗಿಹಿಡಿಯಲ್ಪಟ್ಟು ಏಕಾಗ್ರತೆಯನ್ನು ಹೊಂದಿದ ಚಿತ್ತವು ಹೊರಗಿನ ಯೋಚನೆಯನ್ನು ಬಿಟ್ಟು ಬರಿಯ ಆತ್ಮನಲ್ಲಿಯೇ ನಿಂತುಕೊಳ್ಳುವದೋ ತನ್ನ ಆತ್ಮನಲ್ಲಿಯೇ ನಿಲುಗಡೆಯನ್ನು ಪಡೆದುಕೊಳ್ಳುವದೋ ಎಂದರ್ಥ (ಯಾವಾಗ) ಸರ್ವಕಾಮುಗಳಲ್ಲಿಯೂ ನಿಃಸ್ಪೃಹನಾಗಿರುವನೋ, (ಈ ಲೋಕದಲ್ಲಿ) ಕಂಡಿರುವ ಮತ್ತು ಕಾಣದಿರುವ (ಪರ

---

1. ಈ ಮಾತು ಮ॥ಮೈ॥ಗಳಲ್ಲಿಲ್ಲ.

ಲೋಕದ) ವಿಷಯಗಳಿಂದ ಯಾವ ಯೋಗಿಯು ಸ್ಪೃಹೆಯು ಬಯಕೆಯು ತೊಲಗಿರುವದೋ, ಅವನು ಆಗ ಆ ಕಾಲದಲ್ಲಿ **ಯುಕ್ತನು** ಸಮಾಹಿತನು[1] ಎನಿಸಿಕೊಳ್ಳುತ್ತಾನೆ.

(ಭಾಷ್ಯ)

೪೦೫ **ತಸ್ಯ ಯೋಗಿನಃ ಸಮಾಹಿತಂ ಯತ್ ಚಿತ್ತಂ ತಸ್ಯ ಉಪಮಾ ಉಚ್ಯತೇ—**

(ಭಾಷ್ಯಾರ್ಥ)

ಸಮಾಧಿಯಲ್ಲಿರುವ ಆ ಯೋಗಿಯ ಚಿತ್ತವಿದೆಯಲ್ಲ, ಅದಕ್ಕೆ (ಒಂದು) ಹೋಲಿಕೆಯನ್ನು ಹೇಳುತ್ತೇನೆ :—

**ಯಥಾ ದೀಪೋ ನಿವಾತಸ್ಥೋ ನೇಙ್ಗತೇ ಸೋಪಮಾ ಸ್ಮೃತಾ ।**
**ಯೋಗಿನೋ ಯತಚಿತ್ತಸ್ಯ ಯುಞ್ಜತೋ ಯೋಗಮಾತ್ಮನಃ ॥೧೯॥**

೧೯. ನಿವಾತಸ್ಥವಾದ ದೀಪವು ಹೇಗೆ ಆಡುವದಿಲ್ಲವೋ ಆತ್ಮನ ಯೋಗವನ್ನು ಮಾಡುತ್ತಿರುವ ಯೋಗಿಯ ಯತಚಿತ್ತಕ್ಕೆ ಅದು ಉಪಮಾನವೆನಿಸುವದು.

(ಭಾಷ್ಯ)

೪೦೬. ಯಥಾ ದೀಪಃ ಪ್ರದೀಪಃ ನಿವಾತಸ್ಥಃ ನಿವಾತೇ ವಾತವರ್ಜಿತೇ ದೇಶೇ ಸ್ಥಿತಃ ನ ಇಙ್ಗತೇ ನ ಚಲತಿ ಸಾ ಉಪಮಾ ಉಪಮೀಯತೇ ಅನಯಾ ಇತಿ ಉಪಮಾ ಯೋಗಜ್ಞೈಃ ಚಿತ್ತಪ್ರಚಾರದರ್ಶಿಭಿಃ ಸ್ಮೃತಾ ಚಿನ್ತಿತಾ । ಯೋಗಿನಃ ಯತಚಿತ್ತಸ್ಯ ಸಂಯತಾನ್ತಃಕರಣಸ್ಯ ಯುಞ್ಜತಃ ಇತ್ಯರ್ಥಃ ॥

(ಭಾಷ್ಯಾರ್ಥ)

ನಿವಾತಸ್ಥವಾದ ನಿವಾತವಾದ ಎಂದರೆ ಗಾಳಿಯಿಲ್ಲದ ಕಡೆಯಲ್ಲಿ ಇರುವ ದೀಪವು ದೊಡ್ಡ ದೀಪವು ಹೇಗೆ ಆಡುವದಿಲ್ಲವೋ ಅಲುಗಾಡುವದಿಲ್ಲವೋ (ಹಾಗೆ) ಎಂಬ ಇದನ್ನೇ ಚಿತ್ತವೃತ್ತಿಗಳ (ಸ್ವಭಾವ)ವನ್ನು ಬಲ್ಲ ಯೋಗಿಗಳು ಆತ್ಮನ ಯೋಗ

---

1 ನಿಜವಾದ ಯೋಗಿಯು ಎಂದರ್ಥ. ಚಿತ್ತವು ಚಿತ್ತವಾಗಿ ಉಳಿದಿರುವವರೆಗೆ ನಿಜವಾದ ಸಮಾಧಿಯಿರುವದಿಲ್ಲ, ಆತ್ಮನೇ ಆಗಿಬಿಡಬೇಕು ಎಂದರ್ಥ ಮಾಂ.ಕಾ. ೩-೪೬.

ವನ್ನು[1] ಮಾಡುತ್ತಿರುವ ಸಮಾಧಿಯನ್ನು ಮಾಡುತ್ತಿರುವ ಎಂದರ್ಥ; (ಅಂಥ) ಯೋಗಿಯ ಯತಚಿತ್ತಕ್ಕೆ ಬಿಗಿಹಿಡಿದ[2] ಚಿತ್ತಕ್ಕೆ ಉಪಮೆಯು–ಇದಕ್ಕೆ ಹೋಲಿಸುವ ರಾದ್ದರಿಂದ (ಇದು) ಉಪಮೆಯು–(ಹೋಲಿಕೆಯು) ಎನ್ನುವರು, ಎಂದು ಭಾವಿಸುತ್ತಾರೆ.

(ಭಾಷ್ಯ)

೪೦೭. ಏವಂ ಯೋಗಾಭ್ಯಾಸಬಲಾತ್ ಏಕಾಗ್ರೀಭೂತಂ ನಿವಾತಪ್ರದೀಪಕಲ್ಪಂ ಸತ್—

(ಭಾಷ್ಯಾರ್ಥ)

ಹೀಗೆ ಯೋಗದ ಅಭ್ಯಾಸಬಲದಿಂದ ಏಕಾಗ್ರವಾಗಿ ಗಾಳಿಯಿಲ್ಲದ ಕಡೆ ಇರುವ ದೊಡ್ಡ ದೀಪದಂತೆ ಇರುವದಾಗಿ —

**ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।**
**ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥ ೨೦ ॥**
**ಸುಖಮಾತ್ಯನ್ತಿಕಂ ಯತ್ತದ್ಬುದ್ಧಿಗ್ರಾಹ್ಯಮತೀನ್ದ್ರಿಯಮ್ ।**
**ವೇತ್ತಿ ಯತ್ರ ನ ಚೈವಾಯಂ ಸ್ಥಿತಶ್ಚಲತಿ ತತ್ತ್ವತಃ ॥ ೨೧ ॥**
**ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।**
**ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥ ೨೨ ॥**
**ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂಜ್ಞಿತಮ್ ।**
**ಸ ನಿಶ್ಚಯೇನ ಯೋಕ್ತವ್ಯೋ ಯೋಗೋಽನಿರ್ವಿಣ್ಣಚೇತಸಾ ॥**

೨೦–೨೩. ಚಿತ್ತವು ಯೋಗಸೇವೆಯಿಂದ ನಿರುದ್ಧವಾಗಿ ಯಾವಾಗ ಸುಮ್ಮನಾಗುವದೋ, ಯಾವಾಗ ಆತ್ಮದಿಂದ ಆತ್ಮವನ್ನು ಕಂಡುಕೊಂಡು ತನ್ನಲ್ಲಿ ಸಂತುಷ್ಟನಾಗುವನೋ, ಬುದ್ಧಿಗ್ರಾಹ್ಯವಾದ ಅತೀಂದ್ರಿಯವಾದ ಆತ್ಯಂತಿಕವಾದ ಯಾವ ಸುಖವುಂಟೋ ಅದನ್ನು ಯಾವಾಗ ಅರಿತುಕೊಳ್ಳುವನೋ ಮತ್ತು ಯಾವಾಗ ನಿಂತು ತತ್ತ್ವದಿಂದ ಅಲುಗದೆ ಇರುವನೋ;

---

1 ಆತ್ಮವಿಷಯವಾದ ಯೋಗವನ್ನು, ಆತ್ಮನಲ್ಲಿಯೇ ಚಿತ್ತಸಮಾಧಾನವನ್ನು.

2. ಆತ್ಮಚಿಂತನೆಯಿಂದ ಬಿಗಿಹಿಡಿದ ಎಂದರ್ಥ; ಬಲಾತ್ಕಾರದಿಂದ ಬಿಗಿಹಿಡಿದ ಚಿತ್ತವಲ್ಲ.

ಯಾವ (ಲಾಭ)ವನ್ನು ಹೊಂದಿದ ಬಳಿಕ ಮಿಕ್ಕ ಲಾಭವನ್ನು ಅದಕ್ಕಿಂತ ಹೆಚ್ಚಿನದೆಂದು ಎಣಿಸುವದಿಲ್ಲವೋ, ಯಾವದರಲ್ಲಿ ನಿಂತವನಾಗಿ ಭಾರಿಯ ದುಃಖದಿಂದಲೂ ಇತ್ತ ಚಲಿಸದೆ ಇರುವನೋ ದುಃಖಸಂಯೋಗವಿಯೋಗ ವಾದ ಅದನ್ನು ಯೋಗಸಂಜ್ಞೆಯುಳ್ಳದ್ದು ಎಂದು ತಿಳಿಯಬೇಕು. ಆ ಯೋಗವನ್ನು ಅನಿರ್ವಿಣ್ಣವಾದ ಚೇತಸ್ಸಿನಿಂದ ಮಾಡುತ್ತಿರಬೇಕು.

(ಭಾಷ್ಯ)

೪೦೮. ಯತ್ರ ಯಸ್ಮಿನ್ ಕಾಲೇ ಉಪರಮತೇ ಚಿತ್ತಮ್ ಉಪರತಿಂ ಗಚ್ಛತಿ ನಿರುದ್ಧಂ[1] ಸರ್ವತೋಽನಿವಾರಿತಪ್ರಚಾರಂ ಯೋಗಸೇವಯಾ ಯೋಗಾನುಷ್ಠಾನೇನ ಯತ್ರ ಚೈವ ಯಸ್ಮಿಂಶ್ಚ ಕಾಲೇ ಆತ್ಮನಾ ಸಮಾಧಿಪರಿಶುದ್ಧೇನ ಅನ್ತಃಕರಣೇನ ಆತ್ಮಾನಂ ಪರಂ ಚೈತನ್ಯಂ ಜ್ಯೋತಿಃಸ್ವರೂಪಂ ಪಶ್ಯನ್ ಉಪಲಭಮಾನಃ ಸ್ವೇ ಏವ ಆತ್ಮನಿ ತುಷ್ಯತಿ ತುಷ್ಟಿಂ ಭಜತೇ ||

(ಭಾಷ್ಯಾರ್ಥ)

ಯಾವಾಗ ಎಂದರೆ ಯಾವ ಕಾಲದಲ್ಲಿ ಚಿತ್ತವು ಯೋಗಸೇವೆಯಿಂದ ಎಂದರೆ ಯೋಗವನ್ನು ಮಾಡುವದರಿಂದ ನಿರುದ್ಧವಾಗಿ ಎಂದರೆ ಯಾವ ಕಡೆಗೂ ಹರಿದಾಡ ದಂತೆ ತಡೆಗಟ್ಟಲ್ಪಟ್ಟು ಸುಮ್ಮನಾಗುವದೋ[2], ಮತ್ತು ಯಾವಾಗ ಎಂದರೆ ಯಾವ ಕಾಲದಲ್ಲಿ ಆತ್ಮದಿಂದ ಎಂದರೆ ಸಮಾಧಿಯಿಂದ ಪರಿಶುದ್ಧವಾದ ಅಂತಃಕರಣದಿಂದ ಆತ್ಮನನ್ನು ಎಂದರೆ (ಎಲ್ಲಕ್ಕೂ) ಹೆಚ್ಚಿನ ಪ್ರಕಾಶರೂಪವಾದ ಚೈತನ್ಯವನ್ನು ಕಂಡು ಕೊಂಡು ಅರಿತುಕೊಂಡು ತನ್ನ ಆತ್ಮನಲ್ಲಿಯೇ ಸಂತುಷ್ಟನಾಗುವನೋ, ತೃಪ್ತಿಯನ್ನು ಹೊಂದುವನೋ (೨೧);

(ಭಾಷ್ಯ)

೪೦೯ ಕಿಂಚ ಸುಖಮ್ ಆತ್ಯನ್ತಿಕಮ್ ಅತ್ಯನ್ತಮೇವ ಭವತಿ ಇತಿ ಆತ್ಯನ್ತಿ ಕಮ್ ಅನನ್ತಮ್ ಇತ್ಯರ್ಥಃ । ಯತ್ ತತ್ ಬುದ್ಧಿಗ್ರಾಹ್ಯಂ ಬುದ್ಧ್ಯೈವ ಇನ್ದ್ರಿಯನಿರಪೇಕ್ಷಯಾ ಗೃಹ್ಯತೇ ಇತಿ ಬುದ್ಧಿಗ್ರಾಹ್ಯಮ್ । ಅತೀನ್ದ್ರಿಯಮ್

---

1. 'ನಿವಾರಿತಂ' ಎಂದು ಹೆಚ್ಚಾಗಿ ಮ॥ಮೈ॥, 'ಯೋಗಸೇವಯಾ' ಎಂಬ ಮಾತು ಆದಮೇಲೆ ಸರ್ವತೋ ' ಇದೆ.

2. ಮನಸ್ಸು ಸುಮ್ಮನಾಗುವದೆಂದರೆ ಮನಸ್ಸಾಗಿ ಉಳಿದಿರುವದಲ್ಲ, ಆತ್ಮನೇ ಆಗಿ ಬಿಡುವದು.

ಇನ್ದ್ರಿಯಗೋಚರಾತೀತಮ್ ಅವಿಷಯಜನಿತಮ್ ಇತ್ಯರ್ಥಃ । ವೇತ್ತಿ ತತ್ ಈದೃಶಂ ಸುಖಮ್ ಅನುಭವತಿ। ಯತ್ರ ಯಸ್ಮಿನ್ ಕಾಲೇ ನ ಚೈವ ಅಯಂ ವಿದ್ವಾನ್ ಆತ್ಮಸ್ವರೂಪೇ ಸ್ಥಿತಃ ತಸ್ಮಾತ್ ನೈವ ಚಲತಿ ತತ್ತ್ವತಃ ತತ್ತ್ವಸ್ವರೂಪಾತ್ ನ ಪ್ರಚ್ಯವತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಬುದ್ಧಿಗ್ರಾಹ್ಯವಾದ-ಇಂದ್ರಿಯಗಳ ಅಪೇಕ್ಷೆಯಿಲ್ಲದಿರುವ ಬರಿಯ ಬುದ್ಧಿಯಿಂದಲೇ ತಿಳಿಯಬರುವದರಿಂದ (ಅದು) ಬುದ್ಧಿಗ್ರಾಹ್ಯವು. (ಅಂಥ)-ಅತೀಂದ್ರಿಯವಾದ ಇಂದ್ರಿಯಗಳಿಗೆ ಗೋಚರವಾಗಿರುವದನ್ನು ಮೀರಿರುವದಾದ ಎಂದರೆ ವಿಷಯದಿಂದ ಹುಟ್ಟುವದಲ್ಲದ ಎಂದರ್ಥ ಯಾವ ಆತ್ಯಂತಿಕವಾದ-ಕೊನೆಯವರೆಗೂ ಇರುವದರಿಂದ ಆತ್ಯಂತಿಕವೆನಿಸಿರುತ್ತದೆ-ಅಂತವಿಲ್ಲದ ಎಂದರ್ಥ. (ಇಂಥ) ಯಾವ ಸುಖವುಂಟೋ ಹೀಗಿರುವ ಆ ಸುಖವನ್ನು ಯಾವಾಗ ಎಂದರೆ ಯಾವ ಕಾಲದಲ್ಲಿ ಅರಿತುಕೊಳ್ಳುವನೋ[1], ಅನುಭವಿಸುತ್ತಿರುವನೋ, ಯಾವಾಗ ಎಂದರೆ ಯಾವ ಕಾಲದಲ್ಲಿ ಇವನು ಎಂದರೆ ಈ ಜ್ಞಾನಿಯು ಆತ್ಮಸ್ವರೂಪದಲ್ಲಿ ನಿಂತವನಾಗಿ ಆ ತತ್ತ್ವದಿಂದ ಇತ್ತ ಚಲಿಸದೆಯೇ ಇರುವನೋ ತತ್ತ್ವಸ್ವರೂಪದಿಂದ ಜಾರಿಬೀಳದೆ ಇರುವನೋ[2] ಎಂದರ್ಥ (೨೨),

(ಭಾಷ್ಯ)

೪೧೦ ಕಿಂಚ ಯಂ ಲಬ್ಧ್ವಾ ಯಮ್ ಆತ್ಮಲಾಭಂ ಲಬ್ಧ್ವಾ ಪ್ರಾಪ್ಯ ಚ ಅಪರಮ್ ಅನ್ಯತ್ ಲಾಭಂ ಲಾಭಾನ್ತರಂ ತತಃ ಅಧಿಕತರಮ್ ಅಸ್ತಿ ಇತಿ ನ ಮನ್ಯತೇ ನ ಚಿನ್ತಯತಿ । ಕಿಂಚ ಯಸ್ಮಿನ್ ಆತ್ಮತತ್ತ್ವೇ ಸ್ಥಿತಃ ದುಃಖೇನ ಶಸ್ತ್ರನಿಪಾತಾದಿಲಕ್ಷಣೇನ ಗುರುಣಾ ಮಹತಾಪಿ ನ ವಿಚಾಲ್ಯತೇ ॥

(ಭಾಷ್ಯಾರ್ಥ)

ಮತ್ತು ಯಾವದನ್ನು ಹೊಂದಿದಬಳಿಕ ಯಾವ ಆತ್ಮಲಾಭವನ್ನು ಹೊಂದಿ ಪಡೆದಬಳಿಕ ಮತ್ತೊಂದು ಬೇರೊಂದು ಲಾಭವನ್ನು ಅದಕ್ಕಿಂತ ಹೆಚ್ಚಿನದಾದ ಲಾಭಾಂತರವು ಇದೆ ಎಂದು ಎಣಿಸುವದಿಲ್ಲವೋ ಯೋಚಿಸಿಕೊಳ್ಳದೆ ಇರುವನೋ

---

1 ನೇರಾಗಿ ಕಂಡುಕೊಳ್ಳುವನೋ ಎಂದರ್ಥ. ಈ ಸುಖವು ಆತ್ಮರೂಪವಾಗಿಯೇ ಇರುತ್ತದೆ; ಆದ್ದರಿಂದಲೇ ನಿತ್ಯವಾಗಿದೆ ಮಾಂ ಕಾ. ಭಾ ೩-೪೬

2. ಮಾಂ. ಕಾ ಭಾ ೨-೩೮.

ಮತ್ತು ಯಾವದರಲ್ಲಿ (ಯಾವ) ಆತ್ಮತತ್ತ್ವದಲ್ಲಿ ನಿಂತವನಾಗಿರುವಾಗ ಕಿತ್ತಿಯ ಪೆಟ್ಟೇ ಮುಂತಾದದ್ದರಿಂದ ಆದ ಭಾರಿಯು ಬಲವಾದ ದುಃಖದಿಂದಕೂಡ ಇತ್ತ ಚಲಿಸದೆ ಇರುವನೋ (೨೨).

(ಭಾಷ್ಯ)

೪೧೧. "ಯತ್ರೋಪರಮತೇ" (೬-೨೦) ಇತ್ಯಾದ್ಯಾರಭ್ಯ ಯಾವದ್ಭಿರ್ವಿಶೇಷಣೈಃ ವಿಶಿಷ್ಟಃ ಆತ್ಮಾವಸ್ಥಾವಿಶೇಷೋ ಯೋಗಃ ಉಕ್ತಃ—

(ಭಾಷ್ಯಾರ್ಥ)

"ಯಾವಾಗ ಚಿತ್ತವು ಸುಮ್ಮನಾಗುವದೋ" (೬-೨೦) ಎಂದು ಮುಂತಾಗಿರುವ ಶ್ಲೋಕದಿಂದ ಹಿಡಿದು (ಇಲ್ಲಿಯ)ವರೆಗೆ ಎಷ್ಟು ವಿಶೇಷಣಗಳಿಂದ ಕೂಡಿರುವದೆಂದು ಅಂತಃಕರಣದ ಒಂದಾನೊಂದು ಅವಸ್ಥೆಯೆಂಬ ಯೋಗವನ್ನು ಹೇಳಿದೆನೋ-

**ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂಜ್ಞಿತಮ್ ।**
**ಸ ನಿಶ್ಚಯೇನ ಯೋಕ್ತವ್ಯೋ ಯೋಗೋಽನಿರ್ವಿಣ್ಣಚೇತಸಾ ॥ ೨೩ ॥**

೨೩. ದುಃಖಸಂಯೋಗವಿಯೋಗವಾದ ಇದನ್ನು ಯೋಗವೆಂಬ ಹೆಸರುಳ್ಳದ್ದೆಂದು ತಿಳಿಯಬೇಕು. ಈ ಯೋಗವನ್ನು ಅನಿರ್ವಿಣ್ಣವಾದ ಚೇತಸ್ಸಿನಿಂದ ಮಾಡತಕ್ಕದ್ದು.

(ಭಾಷ್ಯ)

೪೧೨ ತಂ ವಿದ್ಯಾತ್ ವಿಜಾನೀಯಾತ್ ದುಃಖಸಂಯೋಗವಿಯೋಗಂ ದುಃಖೈಃ ಸಂಯೋಗಃ ದುಃಖಸಂಯೋಗಃ ತೇನ ವಿಯೋಗಃ ದುಃಖಸಂಯೋಗವಿಯೋಗಃ ತಂ ದುಃಖಸಂಯೋಗವಿಯೋಗಂ ಯೋಗ ಇತ್ಯೇವ ಸಂಜ್ಞಿತಂ ವಿಪರೀತಲಕ್ಷಣೇನ ವಿದ್ಯಾತ್ ವಿಜಾನೀಯಾತ್ ಇತ್ಯರ್ಥಃ । ಯೋಗಫಲಮ್ ಉಪಸಂಹೃತ್ಯ ಪುನಃ ಅನ್ವಾರಮ್ಭೇಣ ಕರ್ತವ್ಯತಾ ಉಚ್ಯತೇ ನಿಶ್ಚಯಾನಿರ್ವೇದಯೋಃ ಯೋಗಸಾಧನತ್ವವಿಧಾನಾರ್ಥಮ್ । ಸ ಯಥೋಕ್ತಫಲಃ ಯೋಗಃ ನಿಶ್ಚಯೇನ ಅಧ್ಯವಸಾಯೇನ ಯೋಕ್ತವ್ಯಃ ಅನಿರ್ವಣ್ಣಚೇತಸಾ ನ ನಿರ್ವಿಣ್ಣಮ್ ಅನಿರ್ವಿಣ್ಣಮ್, ಕಿಂ ತತ್? ಚೇತಃ । ತೇನ ನಿರ್ವೇದರಹಿತೇನ ಚೇತಸಾ ಚಿತ್ತೇನ ಇತ್ಯರ್ಥಃ ॥

(ಭಾಷ್ಯಾರ್ಥ)

ದುಃಖಸಂಯೋಗವಿಯೋಗವಾದ–ದುಃಖಗಳ ಸಂಬಂಧವು ದುಃಖಸಂಯೋಗವು, ಆ (ಸಂಯೋಗದ) ಅಗಲುವಿಕೆಯೇ ದುಃಖಸಂಯೋಗವಿಯೋಗವು. ಈ ದುಃಖಸಂಯೋಗವಿಯೋಗವನ್ನು ವಿಪರೀತಲಕ್ಷಣೆಯಿಂದ **ಯೋಗವೆಂದೇ** ಹೆಸರುಳ್ಳದ್ದೆಂದು ತಿಳಿಯಬೇಕು, ಅರಿಯಬೇಕು. ಯೋಗದ ಫಲವನ್ನು ಉಪಸಂಹಾರಮಾಡಿ (ಈ ಶ್ಲೋಕದ ಉತ್ತರಾರ್ಧದಲ್ಲಿ) ಮತ್ತೆ (ಯೋಗವನ್ನು) ಮಾಡಬೇಕೆಂದು ಹೇಳುವದಕ್ಕೆ ಪ್ರಾರಂಭಿಸಿರುವದು ಏಕೆಂದರೆ ನಿಶ್ಚಯ, ಅನಿರ್ವೇದ[1] ಇವೆರಡೂ ಯೋಗಕ್ಕೆ ಸಾಧನಗಳೆಂದು ವಿಧಿಸುವದಕ್ಕೆ ಆಮೇಲೆ ಹೇಳಿರುವ ಯೋಗವನ್ನು ನಿಶ್ಚಯದಿಂದ ಎಂದರೆ ದೃಢಮನಸ್ಸಿನಿಂದ, ಅನಿರ್ವಿಣ್ಣವಾದ ಚೇತಸ್ಸಿನಿಂದ–ನಿರ್ವಿಣ್ಣವಲ್ಲದ್ದು ಅನಿರ್ವಿಣ್ಣ ; ಅದು ಯಾವದು ? ಎಂದರ ಚೇತಸ್ಸು. ಆ ಬೇಸರವಿಲ್ಲದ ಚಿತ್ತದಿಂದ ಎಂದರ್ಥ.

## ಯೋಗಕ್ಕೆ ಮಾಡಬೇಕಾದ ಪ್ರಯತ್ನ

**ಸಙ್ಕಲ್ಪಪ್ರಭವಾನ್ ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ ।**
**ಮನಸೈವೇನ್ದ್ರಿಯಗ್ರಾಮಂ ವಿನಿಯಮ್ಯ ಸಮನ್ತತಃ ॥೨೪॥**
**ಶನೈಃ ಶನೈರುಪರಮೇದ್ ಬುದ್ಧ್ಯಾ ಧೃತಿಗೃಹೀತಯಾ ।**
**ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್ ॥೨೫॥**

೨೪-೨೫. ಸಂಕಲ್ಪಪ್ರಭವಗಳಾದ ಕಾಮಗಳನ್ನು ಒಂದೂ ಉಳಿಯದಂತೆ ಎಲ್ಲವನ್ನೂ ಬಿಟ್ಟು ಮನಸ್ಸಿನಿಂದಲೇ ಇಂದ್ರಿಯಗ್ರಾಮವನ್ನು ಎಲ್ಲಾ ಕಡೆಯಿಂದಲೂ ನಿಯಮಕ್ಕೆ ತಂದುಕೊಂಡು ಧೃತಿಯಿಂದ ಹಿಡಿದ ಬುದ್ಧಿಯಿಂದ ಮೆಲ್ಲಮೆಲ್ಲನೆ ಹಿಂದಿರುಗಬೇಕು. ಮನಸ್ಸನ್ನು ಆತ್ಮಸಂಸ್ಥವಾಗಿ ಮಾಡಿಕೊಂಡು ಏನನ್ನೂ ಚಿಂತಿಸದಿರಬೇಕು.

(ಭಾಷ್ಯ)

೧೩. ಕಿಂಚ ಸಙ್ಕಲ್ಪಪ್ರಭವಾನ್[2] ಸಙ್ಕಲ್ಪಃ ಪ್ರಭವಃ ಯೇಷಾಂ ಕಾಮಾನಾಂ

1 ಯೋಗವನ್ನು ಸಾಧಿಸಿಯೇ ಬಿಡುವೆನೆಂಬ ನಿಶ್ಚಯವೂ ಇನ್ನೂ ಎಷ್ಟು ದಿನ ಸಾಧಿಸಬೇಕೋ ಎಂಬ ಬೇಸರವಿಲ್ಲದ ಅನಿರ್ವೇದವೂ ಅವಶ್ಯ

2. ‘ಕಾಮಾನ್’ ಎಂಬ ಗೀತಾಮೂಲದ ಮಾತು ಇಲ್ಲಿ ಭಾಷ್ಯದಲ್ಲಿದ್ದು ಬಿಟ್ಟು ಹೋಗಿರಬಹುದು.

ತೇ ಸಙ್ಕಲ್ಪಪ್ರಭವಾಃ ಕಾಮಾಃ ತಾನ್ ತ್ಯಕ್ತ್ವಾ ಪರಿತ್ಯಜ್ಯ ಸರ್ವಾನ್ ಅಶೇಷತಃ ನಿರ್ಲೇಪೇನ । ಕಿಂಚ ಮನಸೈವ ವಿವೇಕಯುಕ್ತೇನ ಇನ್ದ್ರಿಯಗ್ರಾಮಮ್ ಇನ್ದ್ರಿಯಸಮುದಾಯಂ ವಿನಿಯಮ್ಯ ನಿಯಮನಂ ಕೃತ್ವಾ ಸಮನ್ತತಃ ಸಮನ್ತಾತ್ ॥ ಶನೈಃ ಶನೈಃ ನ ಸಹಸಾ ಉಪರಮೇತ್ ಉಪರತಿಂ ಕುರ್ಯಾತ್ । ಕಯಾ? ಬುದ್ಧ್ಯಾ । ಕಿಂವಿಶಿಷ್ಟಯಾ? ಧೃತಿಗೃಹೀತಯಾ ಧೃತ್ಯಾ ಧೈರ್ಯೇಣ ಗೃಹೀತಯಾ ಧೃತಿಗೃಹೀತಯಾ ಧೈರ್ಯೇಣ ಯುಕ್ತಯಾ ಇತ್ಯರ್ಥಃ । ಆತ್ಮಸಂಸ್ಥಮ್ ಆತ್ಮನಿ ಸಂಸ್ಥಿತಮ್ "ಆತ್ಮೈವ ಸರ್ವಂ ನ ತತೋಽನ್ಯತ್ ಕಿಂಚಿತ್ ಅಸ್ತಿ" ಇತ್ಯೇವಮ್ ಆತ್ಮಸಂಸ್ಥಮ್ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್ । ಏಷ ಯೋಗಸ್ಯ ಪರಮೋಽವಧಿಃ[1] ॥

(ಭಾಷ್ಯಾರ್ಥ)

ಮತ್ತು ಸಂಕಲ್ಪಪ್ರಭವಗಳಾದಕಾಮುಗಳಿಗೆ ಸಂಕಲ್ಪವೇ ಕಾರಣವಾಗಿರುವದರಿಂದ ಅವು ಸಂಕಲ್ಪಪ್ರಭವಗಳು ಆ ಕಾಮುಗಳನ್ನು-ಒಂದೂ ಉಳಿಯದಂತೆ ಅವುಗಳ ಲೇಪವಿಲ್ಲದಂತೆ ತ್ಯಜಿಸಿ ಬಿಟ್ಟುಬಿಟ್ಟು ವಿವೇಕದಿಂದ ಕೂಡಿದ ಮನಸ್ಸಿನಿಂದಲೇ ಇಂದ್ರಿಯಗ್ರಾಮವನ್ನು ಎಂದರೆ ಇಂದ್ರಿಯಗಳ ಸಮೂಹವನ್ನು ಎಲ್ಲಾ ಕಡೆಯಿಂದಲೂ ಹಿಡಿದೆಳೆದುಕೊಂಡು[2] (೨೪) ಮೆಲ್ಲಮೆಲ್ಲಗೆ[3] ಹಿಂದಿರುಗಬೇಕು, ಹಿಮ್ಮೆಟ್ಟಬೇಕು. ಏತರ (ಸಹಾಯ)ದಿಂದ ? ಬುದ್ಧಿಯಿಂದ ಎಂಥ (ಬುದ್ಧಿ)ಯಿಂದ ? ಎಂದರೆ ಧೃತಿಯಿಂದ ಹಿಡಿದ ಬುದ್ಧಿಯಿಂದ, ಧೃತಿಯಿಂದ ಎಂದರೆ ಧೈರ್ಯದಿಂದ ಹಿಡಿಯಲ್ಪಟ್ಟಿರುವ ಧೃತಿಗೃಹೀತಬುದ್ಧಿಯಿಂದ, ಧೈರ್ಯದಿಂದ ಕೂಡಿರುವ ಬುದ್ಧಿಯಿಂದ ಎಂದರ್ಥ ಮನಸ್ಸನ್ನು ಆತ್ಮಸಂಸ್ಥವಾಗಿ ಮಾಡಿ-ಆತ್ಮಸಂಸ್ಥವೆಂದರೆ ಆತ್ಮನಲ್ಲಿ ಚೆನ್ನಾಗಿ ನಿಂತದ್ದು, "ಎಲ್ಲವೂ ಆತ್ಮನೇ, ಆ (ಆತ್ಮನಿ)ಗಿಂತ ಬೇರೆ ಯಾವದೊಂದೂ ಇರುವದಿಲ್ಲ" ಎಂದು--ಆತ್ಮನಲ್ಲಿಯೇ ನಿಂತಿರುವಂತೆ (ಮಾಡಿಕೊಂಡು)[4] ಏನನ್ನೂ ಮನಸ್ಸಿಗೆ ತಂದುಕೊಳ್ಳದೆ ಇರಬೇಕು– **ಇದು ಯೋಗಕ್ಕೆ** ಕೊನೆಯ ಅವಧಿಯು[5]

---

1. 'ವಿಧಿಃ' ಎಂಬ ಪಾಠಕ್ಕಿಂತ ಈ ಗೀ॥ ಮ॥ ಪಾಠವೇ ಮೇಲು.

2 ಇದೇ ಪ್ರತ್ಯಾಹಾರವು.

3. ವಾಕ್ಕು (ಮುಂತಾದ ಇಂದ್ರಿಯಗಳು), ಮನಸ್ಸು, ಬುದ್ಧಿ, ಜೀವಾತ್ಮ, ಪರಮಾತ್ಮ– ಈ ಕ್ರಮದಿಂದ ಎಂದರ್ಥ. ಸೂ.ಭಾ. ೧-೪-೧.

4 ವಿಷಯದ ಚಿಂತೆಯಾಗಲಿ ಅದರ ವಾಸನೆಯಾಗಲಿ ಉಳಿಯದಂತೆ ಆತ್ಮನಲ್ಲಿಯೇ ನಿಲ್ಲಿಸಿಕೊಂಡು ಎಂದರ್ಥ.

5. ಆತ್ಮನನ್ನು ಬಿಟ್ಟರೆ ಮತ್ತೆ ಯಾವದೂ ನಮ್ಮ ಮನಸ್ಸಿಗೆ ಹೊಳೆಯದಂತಾದರೆ ಅದೇ ಯೋಗದ ಕೊನೆಯ ಹಂತವು.

(ಭಾಷ್ಯ)

೪೧೪. ತತ್ರೈವಮ್ ಆತ್ಮಸಂಸ್ಥಂ ಮನಃ ಕರ್ತುಂ ಪ್ರವೃತ್ತಃ ಯೋಗೀ–

(ಭಾಷ್ಯಾರ್ಥ)

ಇಲ್ಲಿ ಹೀಗೆ ಮನಸ್ಸನ್ನು ಆತ್ಮನಲ್ಲಿ ನಿಲ್ಲುವಂತೆ ಮಾಡುವದಕ್ಕೆ ಹೊರಟಿರುವ ಯೋಗಿಯು—

**ಯತೋ ಯತೋ ನಿಶ್ಚರತಿ ಮನಶ್ಚಞ್ಚಲಮಸ್ಥಿರಮ್ ।**
**ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್ ॥೨೬॥**

೨೬. ಚಂಚಲವಾಗಿ ಅಸ್ಥಿರವಾಗಿರುವ ಮನಸ್ಸು ಯಾವಯಾವದರಿಂದ ಹೊರಕ್ಕೆ ಬರುವದೋ, ಅದರದರಿಂದ ಇದನ್ನು ಬಿಗಿಹಿಡಿದು ಆತ್ಮನಲ್ಲಿಯೇ (ಇಟ್ಟು) ಸ್ವಾಧೀನಪಡಿಸಿಕೊಳ್ಳಬೇಕು.

(ಭಾಷ್ಯ)

೪೧೫. ಯತೋ ಯತಃ ಯಸ್ಮಾತ್ ಯಸ್ಮಾತ್ ನಿಮಿತ್ತಾತ್ ಶಬ್ದಾದೇಃ ನಿಶ್ಚರತಿ ನಿರ್ಗಚ್ಛತಿ ಸ್ವಭಾವದೋಷಾತ್ [1] ಮನಃ ಚಞ್ಚಲಮ್ ಅತ್ಯರ್ಥಂ ಚಲಮ್ ಅತ ಏವ ಅಸ್ಥಿರಮ್, ತತಸ್ತತಃ ತಸ್ಮಾತ್ ತಸ್ಮಾತ್ ಶಬ್ದಾದೇಃ ನಿಮಿತ್ತಾತ್ ನಿಯಮ್ಯ ತತ ತತ್ ನಿಮಿತ್ತಂ [2] ಯಥಾತ್ಮ್ಯನಿರೂಪಣೇನ ಆಭಾಸೀಕೃತ್ಯ ವೈರಾಗ್ಯ ಭಾವನಯಾ ಚ ಏತತ್ ಮನಃ ಆತ್ಮನ್ಯೇವ ವಶಂ ನಯೇತ್ ಆತ್ಮವಶ್ಯತಾಮ್ ಆಪಾದಯೇತ್ । ಏವಂ ಯೋಗಾಭ್ಯಾಸಬಲಾತ್ ಯೋಗಿನಃ ಆತ್ಮನ್ಯೇವ ಪ್ರಶಾಮ್ಯತಿ ಮನಃ॥

(ಭಾಷ್ಯಾರ್ಥ)

ಸ್ವಭಾವದಿಂದ (ತನ್ನಲ್ಲಿರುವ) ದೋಷದಿಂದ, ಮನಸ್ಸು ಚಂಚಲವಾಗಿ (ರುತ್ತದೆ) ಎಂದರೆ ಬಹಳವಾಗಿ ಹರಿದಾಡುವದಾಗಿರುತ್ತದೆ, ಆದ್ದರಿಂದಲೇ ಅಸ್ಥಿರವಾಗಿರುತ್ತದೆ. (ಅದು) ಯಾವಯಾವದರಿಂದ ಎಂದರೆ ಯಾವ ಯಾವ ಶಬ್ದಾದಿ ರೂಪವಾದ ನಿಮಿತ್ತದಿಂದ ಹೊರಕ್ಕೆ ಬರುವದೋ ಹೊರಕ್ಕೆ ಹೊರಡುವದೋ ಅದರದರಿಂದ ಎಂದರೆ ಶಬ್ದವೇ ಮುಂತಾದ ಆಯಾ ನಿಮಿತ್ತದಿಂದ (ಇದನ್ನು) ಬಿಗಿಹಿಡಿದು,

---

1. 'ಸ್ವಾಭಾವಿಕದೋಷಾತ್' ಮು॥ ಮೈ॥
2. 'ನಿಮಿತ್ತಯಾಥಾತ್ಮ್ಯ' ಮು॥ ಮೈ॥

ಆಯಾ ನಿಮಿತ್ತವನ್ನು (ಅದರ) ನಿಜವನ್ನು ಪರೀಕ್ಷಿಸಿ[1] (ಗೊತ್ತುಪಡಿಸುವದರ) ಮೂಲಕ ಅದು ಬರಿಯ ತೋರಿಕೆಯೆಂದು ಗೊತ್ತುಪಡಿಸಿಕೊಂಡು ವೈರಾಗ್ಯವನ್ನು ಭಾವನೆಮಾಡುವದರಿಂದಲೂ ಈ ಮನಸ್ಸನ್ನು ಆತ್ಮನಲ್ಲಿಯೇ ವಶಮಾಡಿಕೊಳ್ಳಬೇಕು, ತನ್ನ ಅಧೀನವಾಗಿ(ರುವಂತೆ) ಮಾಡಿಕೊಳ್ಳಬೇಕು. ಹೀಗೆ ಯೋಗವನ್ನು **ಅಭ್ಯಾಸಮಾಡಿದ ಬಲದಿಂದ ಯೋಗಿಯ ಮನಸ್ಸು ಆತ್ಮನಲ್ಲಿಯೇ ಅಡಗುವದು.**

## ಯೋಗದ ಫಲ

**ಪ್ರಶಾನ್ತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಮ್ ।**
**ಉಪೈತಿ ಶಾನ್ತರಜಸಂ ಬ್ರಹ್ಮಭೂತಮಕಲ್ಮಷಮ್ ॥೨೭॥**

೨೭. ಪ್ರಶಾಂತಮನಸ್ಸಿನ, ಶಾಂತರಜನಾಗಿರುವ, ಅಕಲ್ಮಷನಾದ ಈ ಯೋಗಿಯನ್ನು ಉತ್ತಮಸುಖವು ಬಂದು ಸೇರುವದು.

(ಭಾಷ್ಯ)

೪೧೬. ಪ್ರಶಾನ್ತಮನಸಂ ಪ್ರಕರ್ಷೇಣ ಶಾನ್ತಂ ಮನಃ ಯಸ್ಯ ಸಃ ಪ್ರಶಾನ್ತಮನಾಃ ತಂ ಪ್ರಶಾನ್ತಮನಸಂ ಹಿ ಏನಂ ಯೋಗಿನಂ ಸುಖಮ್ ಉತ್ತಮಂ ನಿರತಿಶಯಮ್ ಉಪೈತಿ ಉಪಗಚ್ಛತಿ ಶಾನ್ತರಜಸಂ ಪ್ರಕ್ಷೀಣಮೋಹಾದಿಕ್ಲೇಶರಜಸಮ್ ಇತ್ಯರ್ಥಃ । ಬ್ರಹ್ಮಭೂತಂ ಜೀವನ್ಮುಕ್ತಂ 'ಬ್ರಹ್ಮೈವ ಸರ್ವಮ್' ಇತ್ಯೇವಂ ನಿಶ್ಚಯವನ್ತಂ ಬ್ರಹ್ಮಭೂತಮ್ ಅಕಲ್ಮಷಮ್ ಅಧರ್ಮಾದಿವರ್ಜಿತಮ್ ॥

ಪ್ರಶಾಂತಮನಸ್ಸಿನ ಚೆನ್ನಾಗಿ ಶಾಂತವಾದ ಮನಸ್ಸು ಯಾವನಿಗಿರುವದೋ ಅವನು ಪ್ರಶಾಂತಮನಸ್ಸಿನವನು. ಅಂಥ ಪ್ರಶಾಂತಮನಸ್ಸಿನವನಾದ, ಶಾಂತರಜನಾಗಿರುವ : (ರಜಸ್ಸು ಶಾಂತವಾಗಿರುವ) ಎಂದರೆ ಮೋಹವೇ ಮುಂತಾದ[2] **ಕ್ಲೇಶ**ಗಳ ಧೂಳು ಸಂಪೂರ್ಣವಾಗಿ ಹೋಗಿರುವವನು ಎಂದರ್ಥ ಬ್ರಹ್ಮವಾಗಿರುವ : **ಜೀವನ್ಮುಕ್ತನಾಗಿ** 'ಎಲ್ಲವೂ ಬ್ರಹ್ಮವೇ' ಎಂಬೀ ನಿಶ್ಚಯವುಳ್ಳವನು ಬ್ರಹ್ಮ

---

1. ಮಾಂ. ಕಾ. ೩-೪೩.
2. ರಾಗ, ದ್ವೇಷ–ಮುಂತಾದವು.

(ಭಾಷ್ಯಾರ್ಥ)

ಭೂತನು. (ಅಂಥ) ; ಅಕಲ್ಮಷನಾದ, ಅಧರ್ಮವೇ ಮುಂತಾದದ್ದು (ಸ್ವಲ್ಪವೂ) ಇಲ್ಲದವನು. (ಅಂಥ) ಈ ಯೋಗಿಯನ್ನು ಉತ್ತಮವಾದ ಮಿಗಿಲಿಲ್ಲದ ಸುಖವು ಬಂದು ಸೇರುವದು.

**ಯುಞ್ಜನ್ನೇವಂ ಸದಾತ್ಮಾನಂ ಯೋಗೀ ವಿಗತಕಲ್ಮಷಃ ।**
**ಸುಖೇನ ಬ್ರಹ್ಮಸಂಸ್ಪರ್ಶಮತ್ಯನ್ತಂ ಸುಖಮಶ್ನುತೇ ॥೨೮॥**

೨೮. ಹೀಗೆ ಯಾವಾಗಲೂ ತನ್ನನ್ನು ಯೋಗದಲ್ಲಿಟ್ಟುಕೊಂಡಿರುವದರಿಂದ ಯೋಗಿಯು ವಿಗತಕಲ್ಮಷನಾಗಿ ಬ್ರಹ್ಮಸಂಸ್ಪರ್ಶವೆಂಬ ಅತ್ಯಂತ ಸುಖವನ್ನು ಸುಖವಾಗಿ ಪಡೆಯುತ್ತಾನೆ.

(ಭಾಷ್ಯ)

೪೧೭. ಯುಞ್ಜನ್ ಏವಂ ಯಥೋಕ್ತೇನ ಕ್ರಮೇಣ ಯೋಗೀ ಯೋಗಾನ್ತರಾಯವರ್ಜಿತಃ ಸದಾ ಆತ್ಮಾನಂ ವಿಗತಕಲ್ಮಷಃ ವಿಗತಪಾಪಃ ಸುಖೇನ ಅನಾಯಾಸೇನ ಬ್ರಹ್ಮಸಂಸ್ಪರ್ಶಂ ಬ್ರಹ್ಮಣಾ ಪರೇಣ ಸಂಸ್ಪರ್ಶಃ ಯಸ್ಯ ತದ್ ಬ್ರಹ್ಮಸಂಸ್ಪರ್ಶಂ ಸುಖಮ್ ಅತ್ಯನ್ತಂ ಅನ್ತಮತೀತ್ಯ ವರ್ತತೇ ಇತಿ ಅತ್ಯನ್ತಮ್ ಉತ್ಕೃಷ್ಟಂ ನಿರತಿಶಯಮ್ ಅಶ್ನುತೇ ವ್ಯಾಪ್ನೋತಿ ॥

(ಭಾಷ್ಯಾರ್ಥ)

ಮೇಲೆ ಹೇಳಿದ ಕ್ರಮದಿಂದ ಯೋಗದ ಅಂತರಾಯಗಳು[1] ಯಾವವೂ ಇಲ್ಲದೆ ತನ್ನನ್ನು ಯೋಗದಲ್ಲಿಟ್ಟುಕೊಂಡಿರುವ ಯೋಗಿಯು ವಿಗತಕಲ್ಮಷನಾಗಿ ಪಾಪಗಳನ್ನು ತೊಲಗಿಸಿಕೊಂಡು ಬ್ರಹ್ಮಸಂಸ್ಪರ್ಶವೆಂಬ–ಪರಬ್ರಹ್ಮದ ಸಂಸ್ಪರ್ಶವು ಯಾವದಕ್ಕಿರುವದೋ ಅದು **ಬ್ರಹ್ಮಸಂಸ್ಪರ್ಶವು**[2] ಅಂಥ, ಅತ್ಯಂತವಾದ ಸುಖವನ್ನು ; ಅಂತವನ್ನು ಮೀರಿಯೂ ಇರುವದು ಅತ್ಯಂತವು, ಉತ್ಕೃಷ್ಟವಾದದ್ದು,

---

1. ವ್ಯಾಧಿ, ಅಲಸ್ಯ-ಮುಂತಾದ ಅಡ್ಡಿಗಳು. ಯೋ. ಸೂ. ೧-೩೦.

2. ಬ್ರಹ್ಮದ ಅಜ್ಞಾನದಿಂದ ಅದಕ್ಕೆ ದೂರವಾಗಿದ್ದವನು ಬ್ರಹ್ಮವೇ ತಾನೆಂದು ಅರಿತುಕೊಳ್ಳುವದೇ ಬ್ರಹ್ಮಸಂಸ್ಪರ್ಶವು ; ನಿಜವಾಗಿ ಇದರಲ್ಲಿ ಮುಟ್ಟಬೇಕಾದದ್ದು ಏನೂ ಇಲ್ಲವಾಗಿ ಇದನ್ನು ಅಸ್ಪರ್ಶಯೋಗವೆಂದೂ ಕರೆಯುತ್ತಾರೆ. ಮಾಂ. ಕಾ. ಭಾ. ೩-೨.

ಮಿಗಿಲಿಲ್ಲದ್ದು. (ಅಂಥ) ಸುಖವನ್ನು, ಸುಖದಿಂದ ಯಾವ ಆಯಾಸವೂ ಇಲ್ಲದೆ[1] (ಅಶ್ನುತೇ = ವ್ಯಾಪ್ನೋತಿ) ಪಡೆದುಕೊಳ್ಳುವನು.

(ಭಾಷ್ಯ)

೪೧೮. ಇದಾನೀಂ ಯೋಗಸ್ಯ ಯತ್ ಫಲಂ ಬಹ್ಮೈಕತ್ವದರ್ಶನಂ[2] ಸರ್ವ ಸಂಸಾರವಿಚ್ಛೇದಕಾರಣಂ ತತ್ ಪ್ರದರ್ಶ್ಯತೇ—

(ಭಾಷ್ಯಾರ್ಥ)

ಈಗ ಸಂಸಾರವೆಲ್ಲವೂ ನಾಶವಾಗುವದಕ್ಕೆ ಕಾರಣವಾಗಿರುವ ಯೋಗದ ಫಲ ವಾದ 'ಬ್ರಹ್ಮವು ಒಂದೇ'[3] ಎಂಬ ಜ್ಞಾನವಿದೆಯಲ್ಲ, ಅದನ್ನು ತಿಳಿಸಲಾಗುತ್ತದೆ:-

**ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।**
**ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥೨೯॥**

೨೯. ಆತ್ಮನನ್ನು ಸರ್ವಭೂತಸ್ಥನನ್ನಾಗಿಯೂ ಸರ್ವಭೂತಗಳನ್ನೂ ಆತ್ಮನಲ್ಲಿರುವವನ್ನಾಗಿಯೂ ಎಲ್ಲೆಲ್ಲಿಯೂ ಸಮದರ್ಶನನಾಗಿರುವ ಯೋಗ ಯುಕ್ತಾತ್ಮನು ಕಂಡುಕೊಳ್ಳುವನು.

(ಭಾಷ್ಯ)

೪೧೯. ಸರ್ವಭೂತಸ್ಥಂ ಸರ್ವೇಷು ಭೂತೇಷು ಸ್ಥಿತಂ ಸ್ವಮ್ ಆತ್ಮಾನಂ ಸರ್ವಭೂತಾನಿ ಚ ಆತ್ಮನಿ ಬ್ರಹ್ಮಾದೀನಿ ಸ್ತಮ್ಬಪರ್ಯನ್ತಾನಿ ಚ ಸರ್ವಭೂತಾನಿ ಏಕತಾಂ ಗತಾನಿ ಈಕ್ಷತೇ ಪಶ್ಯತಿ ಯೋಗಯುಕ್ತಾತ್ಮಾ ಸಮಾಹಿತಾನ್ತಃಕರಣಃ[4] ಸರ್ವತ್ರ ಸಮದರ್ಶನಃ ಸರ್ವೇಷು ಬ್ರಹ್ಮಾದಿಸ್ಥಾವರಾನ್ತೇಷು ವಿಷಮೇಷು ಸರ್ವ

---

1. ಸುಖವು ತನ್ನ ಸ್ವರೂಪವೇ ಆಗಿರುವದರಿಂದ ಸುಲಭವಾಗಿ ದೊರೆಯುತ್ತದೆ.

2. 'ಬ್ರಹ್ಮಾತ್ಮೈಕತ್ವದರ್ಶನಮ್' ಎಂದು ಮೂಲದಲ್ಲಿದ್ದು, 'ಬ್ರಹ್ಮೈಕತ್ವ ದರ್ಶನಮ್' ಎಂದು ಲೇಖಕರು ಬರೆದುಕೊಂಡಿರಬೇಕೆಂದು ತೋರುತ್ತದೆ. ಇದೇ ಭಾಷ್ಯದಲ್ಲಿ ಮುಂದೆ ಬ್ರಹ್ಮಾತ್ಮೈಕತ್ವ ಎಂದಿದೆ.

3. 'ಬ್ರಹ್ಮವೊಂದೇ ಇದೆಲ್ಲವೂ' ಎಂದರ್ಥ ; ಬ್ರಹ್ಮಾತ್ಮೈಕತ್ವದರ್ಶನ ಎಂಬ ಪಾಠ ದಲ್ಲಿ ಯಾವ ಕ್ಲೇಶವೂ ಇಲ್ಲ.

4. 'ಸನ್' ಮು|| ಮೈ|| ಗಳಲ್ಲಿ ಹೆಚ್ಚು.

ಭೂತೇಷು ಸಮಂ ನಿರ್ವಿಶೇಷಂ ಬ್ರಹ್ಮಾತ್ಮೈಕತ್ವವಿಷಯಂ ದರ್ಶನಂ ಜ್ಞಾನಂ ಯಸ್ಯ ಸಃ ಸರ್ವತ್ರಸಮದರ್ಶನಃ ||

(ಭಾಷ್ಯಾರ್ಥ)

ತನ್ನ ಆತ್ಮನನ್ನು ಸರ್ವಭೂತಸ್ಥನನ್ನಾಗಿಯೂ ಎಂದರೆ ಸಕಲ ಪ್ರಾಣಿಗಳಲ್ಲಿಯೂ ಇರುವವನನ್ನಾಗಿಯೂ ಸರ್ವಭೂತಗಳನ್ನೂ ಆತ್ಮನಲ್ಲಿ, ಎಂದರೆ ಬ್ರಹ್ಮಾದಿಯಾಗಿ ಸ್ತಂಬದವರೆಗಿನ ಸಕಲಪ್ರಾಣಿಗಳನ್ನೂ (ತನ್ನ)ಆತ್ಮನಲ್ಲಿ ಇರುವವನ್ನಾಗಿಯೂ ಯೋಗಯುಕ್ತಾತ್ಮನು ಎಂದರೆ ಅಂತಃಕರಣವನ್ನು ಸಮಾಧಿಯಲ್ಲಿರಿಸಿಕೊಂಡಿರುವವನು ಕಂಡುಕೊಳ್ಳುತ್ತಾನೆ, ನೋಡುತ್ತಿರುವನು. (ಅವನು) ಸರ್ವತ್ರಸಮದರ್ಶನನಾಗಿ-ಎಂದರೆ ಬ್ರಹ್ಮನಿಂದ ಹಿಡಿದು ಸ್ಥಾವರದವರೆಗಿನ ಒಂದಕ್ಕಿಂತ ಒಂದು ಹೆಚ್ಚುಕಡಿಮೆ ಇರುವ[1] ಸರ್ವಭೂತಗಳಲ್ಲಿಯೂ ಸಮವನ್ನು ಎಂದರೆ ನಿರ್ವಿಶೇಷವಾದ ಬ್ರಹ್ಮಾತ್ಮೈಕತ್ವವನ್ನೇ[2] ಕಾಣುವ ದರ್ಶನವು ಎಂದರೆ ಜ್ಞಾನವು ಯಾವನಿಗಿರುವದೋ ಅವನು ಸರ್ವತ್ರಸಮದರ್ಶನನು.

(ಭಾಷ್ಯ)

೪೨೦. ಏತಸ್ಯ ಆತ್ಮೈಕತ್ವದರ್ಶನಸ್ಯ ಫಲಮ್ ಉಚ್ಯತೇ—

(ಭಾಷ್ಯಾರ್ಥ)

ಈ ಆತ್ಮೈಕತ್ವದರ್ಶನದ ಫಲವನ್ನು ಹೇಳುತ್ತೇನೆ :—

**ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।**
**ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ||೩೦||**

೩೦. ಯಾವನು ನನ್ನನ್ನು ಎಲ್ಲೆಲ್ಲಿಯೂ ಕಾಣುವನೋ ಮತ್ತು ಎಲ್ಲವನ್ನೂ ನನ್ನಲ್ಲಿ ಕಾಣುವನೋ ಅವನಿಗೆ ನಾನು ಕಾಣದೆ ಹೋಗುವದಿಲ್ಲ, ಅವನೂ ನನಗೆ ಕಾಣದೆಹೋಗುವದಿಲ್ಲ.

೪೨೧ ಯಃ ಮಾಂ ಪಶ್ಯತಿ ವಾಸುದೇವಂ ಸರ್ವಸ್ಯ ಆತ್ಮಾನಂ ಸರ್ವತ್ರ ಸರ್ವೇಷು ಭೂತೇಷು, ಸರ್ವಂ ಚ ಬ್ರಹ್ಮಾದಿಭೂತಜಾತಂ ಮಯಿ ಸರ್ವಾತ್ಮನಿ

1. ಜ್ಞಾನಾಜ್ಞಾನಗಳಲ್ಲಿ, ಸುಖದುಃಖಗಳಲ್ಲಿ, ಧರ್ಮಾಧರ್ಮಗಳಲ್ಲಿ ಸರ್ವಭೂತಗಳೂ ತಾರತಮ್ಯವುಳ್ಳವುಗಳಾಗಿರುವವು.

2. ಎಲ್ಲಾ ಪ್ರಾಣಿಗಳ ಆತ್ಮನೂ ನಿರ್ವಿಶೇಷಬ್ರಹ್ಮವೇ ಎಂದು.

ಪಶ್ಯತಿ, ತಸ್ಯ ಏವಮ್ ಆತ್ಮೈಕತ್ವದರ್ಶಿನಃ ಅಹಮ್ ಈಶ್ವರಃ ನ ಪ್ರಣಶ್ಯಾಮಿ ನ ಪರೋಕ್ಷತಾಂ ಗಮಿಷ್ಯಾಮಿ। ಸ ಚ ಮೇ ನ ಪ್ರಣಶ್ಯತಿ ಸ ಚ ವಿದ್ವಾನ್ ಮಮ ವಾಸುದೇವಸ್ಯ ನ ಪ್ರಣಶ್ಯತಿ ನ ಪರೋಕ್ಷೋ ಭವತಿ। ತಸ್ಯ ಚ ಮಮ ಚ ಏಕಾತ್ಮಕತ್ವಾತ್। ಸ್ವಾತ್ಮಾ ಹಿ ನಾಮ ಆತ್ಮನಃ ಪ್ರಕಾಶ[1] ಏವ ಭವತಿ। ಯಸ್ಮಾಚ್ಚ ಅಹಮೇವ ಸರ್ವಾತ್ಮೈಕತ್ವದರ್ಶೀ ಇತ್ಯೇತತ್ [2]॥

(ಭಾಷ್ಯಾರ್ಥ)

ಯಾವನು ಪ್ರತಿಯೊಬ್ಬನ ಆತ್ಮನೂ ಆಗಿರುವ ವಾಸುದೇವನಾದ ನನ್ನನ್ನು ಎಲ್ಲೆಲ್ಲಿಯೂ ಎಂದರೆ ಎಲ್ಲಾ ಪ್ರಾಣಿಗಳಲ್ಲಿಯೂ ಕಾಣುವನೋ, ಮತ್ತು ಎಲ್ಲವನ್ನೂ ಎಂದರೆ ಬ್ರಹ್ಮನೇ ಮುಂತಾದ ಪ್ರಾಣಿಗಳ ಸಮೂಹವನ್ನು ಸರ್ವಾತ್ಮನಾದ ನನ್ನಲ್ಲಿ ಕಾಣುವನೋ; ಅವನಿಗೆ ಎಂದರೆ ಹೀಗೆ ಆತ್ಮನು ಒಬ್ಬನೇ ಎಂದು ಕಂಡುಕೊಳ್ಳುವವನಿಗೆ ಈಶ್ವರನಾದ ನಾನು ಕಾಣದೆ ಹೋಗುವದಿಲ್ಲ, (ಅವನಿಗೆ) ನಾನು ಪರೋಕ್ಷನಾಗುವದಿಲ್ಲ. ಅವನೂ ನನಗೆ ಕಾಣದೆ ಹೋಗುವದಿಲ್ಲ, ಆ ಜ್ಞಾನಿಯೂ ವಾಸುದೇವನಾದ ನನಗೆ ಕಾಣದೆ ಹೋಗುವದಿಲ್ಲ, ಪರೋಕ್ಷನಾಗುವದಿಲ್ಲ. ಏಕೆಂದರೆ ಅವನೂ ನಾನೂ ಒಂದೇ ಆತ್ಮದ ರೂಪದಲ್ಲಿರುತ್ತೇವೆ. ತನ್ನ ಆತ್ಮನೆಂಬವನು (ತನಗೆ) ತೋರಿಕೊಂಡೇ ಇರಬೇಕಲ್ಲವೆ?[3] ಮತ್ತು ಎಲ್ಲರ ಆತ್ಮನೂ ಒಬ್ಬನೇ ಎಂದು ತಿಳಿದುಕೊಂಡಿರುವವನು ನಾನೇ (ಆಗಿರುತ್ತಾನೆ); ಆದ್ದರಿಂದಲೂ (ನಾವು ಒಬ್ಬರಿಗೊಬ್ಬರು ಪರೋಕ್ಷವಾಗಿರುವದಿಲ್ಲ) ಎಂದು ಅಭಿಪ್ರಾಯ.

(ಭಾಷ್ಯ)

೪೨೨. ಪೂರ್ವಶ್ಲೋಕಾರ್ಥಂ ಸಮ್ಯಗ್ದರ್ಶನಮ್ ಅನೂದ್ಯ ತತ್ಫಲಂ ಮೋಕ್ಷೋಽಭಿಧೀಯತೇ—

(ಭಾಷ್ಯಾರ್ಥ)

ಹಿಂದಿನ ಶ್ಲೋಕದಲ್ಲಿ ಹೇಳಿರುವ (ಆತ್ಮನ) ಯಥಾರ್ಥಜ್ಞಾನವನ್ನು ಅನುವಾದಮಾಡಿಕೊಂಡು ಅದರ ಫಲವಾದ ಮೋಕ್ಷವನ್ನು ಇಲ್ಲಿ ತಿಳಿಸಲಾಗುತ್ತದೆ—

**ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ।**
**ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ॥೩೧॥**

---

1. ಇದು ಮ॥ ವ್ಯ॥ ಪಾಠ.
2. ಇಲ್ಲಿಯವರೆಗೆ ಈ ಶ್ಲೋಕಕ್ಕೆ ಸೇರಿದ ಭಾಷ್ಯವೆಂದು ಕಲ್ಪಿಸಿದೆ.
3. "ಆತ್ಮನಃ ಪ್ರಿಯ ಏವ ಭವತಿ" ಎಂಬ ಆ॥ ನಿ॥ ಮ॥ ಪಾಠವು ಸರಿಯಲ್ಲ. ಇಲ್ಲಿ ತಾನು ತನಗೆ ಪ್ರಿಯನಾಗಿರುವನೇಬುದನ್ನು ಹೇಳುವದಕ್ಕೆ ಹೊರಟಿಲ್ಲ.

೩೧. ಯಾವನು ಸರ್ವಭೂತಗಳಲ್ಲಿಯೂ ಇರುವ ನನ್ನನ್ನು ಏಕತ್ವವನ್ನು ಆಶ್ರಯಿಸಿ ಭಜಿಸುತ್ತಿರುವನೋ ಆ ಯೋಗಿಯು ಹೇಗೇ ಇದ್ದರೂ ನನ್ನಲ್ಲಿ ಇರುತ್ತಾನೆ.

(ಭಾಷ್ಯ)

೪೨೩. ಸರ್ವಥಾ ಸರ್ವಪ್ರಕಾರೈಃ ವರ್ತಮಾನೋಽಪಿ ಸಮ್ಯಗ್ದರ್ಶೀ ಯೋಗೀ ಮಯಿ ವೈಷ್ಣವೇ ಪರಮೇ ಪದೇ ವರ್ತತೇ। ನಿತ್ಯಮುಕ್ತ ಏವ ಸಃ, ನ **ಮೋಕ್ಷಂ ಪ್ರತಿ ಕೇನಚಿತ್ ಪ್ರತಿಬಧ್ಯತೇ ಇತ್ಯರ್ಥಃ ||**

(ಭಾಷ್ಯಾರ್ಥ)

ಸರಿಯಾಗಿ[1] (ಏಕತ್ವವನ್ನು) ಕಂಡುಕೊಂಡಿರುವ ಯೋಗಿಯು ಹೇಗೇ ಇರಲಿ, ಯಾವ ಯಾವ ಪ್ರಕಾರಗಳಿಂದ ಇರುತ್ತಿದ್ದರೂ[2] ನನ್ನಲ್ಲಿಯೇ **ವಿಷ್ಣುವಿನ ಪರಮಪದದಲ್ಲಿಯೇ** ಇರುವನು. ಅವನು ಎಂದೆಂದಿಗೂ ಮುಕ್ತನೇ, ಮೋಕ್ಷಕ್ಕೆ (ಅವನಿಗೆ) ಯಾವದೂ ಅಡ್ಡಿಯಿರುವದಿಲ್ಲ ಎಂದರ್ಥ.

**ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।**
**ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ||೩೨||**

೩೨. ಎಲೈ ಅರ್ಜುನನೆ, ಯಾವಾತನು ಎಲ್ಲೆಲ್ಲಿಯೂ ಸುಖವನ್ನಾಗಲಿ ದುಃಖವನ್ನಾಗಲಿ ಆತ್ಮೌಪಮ್ಯದಿಂದ ಸಮವಾಗಿ ಕಾಣುತ್ತಿರುವನೋ ಅವನೇ ಪರಮ ಯೋಗಿಯು.

(ಭಾಷ್ಯ)

೪೨೪. ಕಿಂಚ ಅನ್ಯತ್ । ಆತ್ಮೌಪಮ್ಯೇನ ಆತ್ಮಾ ಸ್ವಯಮೇವ । ಉಪಮೀಯತೇ ಅನಯಾ ಇತಿ ಉಪಮಾ ತಸ್ಯಾ ಉಪಮಾಯಾ ಭಾವಃ ಔಪಮ್ಯಮ್ ತೇನ ಆತ್ಮೌಪಮ್ಯೇನ । ಸರ್ವತ್ರ ಸರ್ವಭೂತೇಷು ಸಮಂ ತುಲ್ಯಂ ಪಶ್ಯತಿ ಯಃ ಅರ್ಜುನ । ಸ ಚ ಕಿಂ ಸಮಂ ಪಶ್ಯತಿ ಇತಿ ? ಉಚ್ಯತೇ । ಯಥಾ ಮಮ ಸುಖಮ್ ಇಷ್ಟಂ ತಥಾ ಸರ್ವಪ್ರಾಣಿನಾಂ ಸುಖಮ್ ಅನುಕೂಲಮ್ । ವಾಶಬ್ದಃ ಚಾರ್ಥೇ । ಯದಿ ವಾ ಯಚ್ಚ ದುಃಖಂ ಮಮ ಪ್ರತಿಕೂಲಮ್ ಅನಿಷ್ಟಂ ಯಥಾ ತಥಾ ಸರ್ವಪ್ರಾಣಿನಾಂ ದುಃಖಮ್ ಅನಿಷ್ಟಂ ಪ್ರತಿಕೂಲಮ್ ಇತ್ಯೇವಮ್ ಆತ್ಮೌಪಮ್ಯೇನ

---

1. ಈ ಶ್ಲೋಕದ ಪೂರ್ವಾರ್ಧದ ಭಾಷ್ಯವು ಅಚ್ಚಿನ ಪುಸ್ತಕಗಳಲ್ಲಿ ಕಾಣ ಬರುವದಿಲ್ಲ.
2. ಜನರ ದೃಷ್ಟಿಯಿಂದ ಹೇಗೆ ಇದ್ದರೂ ತನ್ನ ದೃಷ್ಟಿಯಿಂದ ಆತ್ಮಸ್ವರೂಪನೇ.
3. ' ಸ್ವಯಮೇವ ' ಆದ ಬಳಿಕ " ಉಪಮಾ ತದ್ಭಾವಃ ಔಪಮ್ಯಮ್ " ಎಂದಿಷ್ಟೇ ಮು|| ಮೈ||.

ಸುಖದುಃಖೇ ಅನುಕೂಲಪ್ರತಿಕೂಲೇ ತುಲ್ಯತಯಾ ಸರ್ವಭೂತೇಷು ಸಮಂ ಪಶ್ಯತಿ, ನ ಕಸ್ಯಚಿತ್ ಪ್ರತಿಕೂಲಮ್ ಆಚರತಿ । ಅಹಿಂಸಕಃ ಇತ್ಯರ್ಥಃ । ಯ ಏವಮ್ ಅಹಿಂಸಕಃ ಸಮ್ಯಗ್ದರ್ಶನನಿಷ್ಠಃ ಸ ಯೋಗೀ ಪರಮ ಉತ್ಕೃಷ್ಟಃ ಮತಃ ಅಭಿಪ್ರೇತಃ ಸರ್ವಯೋಗಿನಾಂ ಮಧ್ಯೇ ॥

(ಭಾಷ್ಯಾರ್ಥ)

ಇದೂ ಅಲ್ಲದೆ, ಆತ್ಮೌಪಮ್ಯದಿಂದ–ಇಲ್ಲಿ ಆತ್ಮನೆಂದರೆ ತಾನೇ, ಯಾವದಕ್ಕೆ ಹೋಲಿಸುತ್ತೇವೆಯೋ ಅದು ಉಪಮೆ, ಆ ಉಪಮೆಯ ಭಾವವು ಔಪಮ್ಯವು. ಅಂಥ ಆತ್ಮೌಪಮ್ಯದಿಂದ (ಎಂದರೆ ತನ್ನಂತೆಯೇ) ಎಲ್ಲೆಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಯಾವನು, ಎಲೈ ಅರ್ಜುನನೆ, ಸಮವಾಗಿ ಕಾಣುವನೋ, (ಅವನು) ಯಾವದನ್ನು ಸಮವಾಗಿ ಕಾಣುವನು ? ಎಂದರೆ ಹೇಳುತ್ತೇನೆ : " ಹೇಗೆ ನನಗೆ ಸುಖವು ಬೇಕಾಗಿರುವದೋ ಆದರಂತೆ ಎಲ್ಲಾ ಪ್ರಾಣಿಗಳಿಗೂ ಸುಖವು ಅನುಕೂಲವಾಗಿರುತ್ತದೆ. ಮತ್ತು–(ಯದಿ ವಾ) ಎಂಬಲ್ಲಿರುವ ವಾಶಬ್ದಕ್ಕೆ ಚ (ಮತ್ತು) ಎಂದರ್ಥ–ಯಾವ ದುಃಖವು ನನಗೆ ಹೇಗೆ ಪ್ರತಿಕೂಲವಾಗಿರುವದೋ, ಬೇಡವಾಗಿರುವದೋ, ಹಾಗೆಯೇ ಸರ್ವಪ್ರಾಣಿಗಳಿಗೂ ದುಃಖವು ಬೇಡ, ಪ್ರತಿಕೂಲವಾಗಿರುತ್ತದೆ" ಎಂದು ಹೀಗೆ ಆತ್ಮೌಪಮ್ಯದಿಂದ ಸುಖದುಃಖಗಳನ್ನು ಅನುಕೂಲವಾಗಿಯೂ ಪ್ರತಿಕೂಲವಾಗಿಯೂ ಸರ್ವಭೂತಗಳಿಗೂ ಇರುವವೆಂದು (ತನಗೆ) ಸಮವಾಗಿ ಕಾಣುವನೋ, ಯಾರೊಬ್ಬರಿಗೂ ಪ್ರತಿಕೂಲವಾದದ್ದನ್ನು ಮಾಡದೆ ಅಹಿಂಸಕನಾಗಿರುವನೋ[1] ಎಂದರ್ಥ. ಯಾವನು ಹೀಗೆ ಅಹಿಂಸಕನಾಗಿ ಸಮ್ಯಗ್ದರ್ಶನದಲ್ಲಿ ನೆಲೆನಿಂತಿರುವನೋ ಆ ಯೋಗಿಯು ಯೋಗಿಗಳಲ್ಲೆಲ್ಲ ಪರಮನು, ಹೆಚ್ಚಿನವನು ಎಂದು (ನನ್ನ) ಅಭಿಪ್ರಾಯವು.

## ಮನೋನಿಗ್ರಹಕ್ಕೆ ಸಾಧನ

(ಭಾಷ್ಯ)

೪೨೫. ಏತಸ್ಯ ಯಥೋಕ್ತಸ್ಯ ಸಮ್ಯಗ್ದರ್ಶನಲಕ್ಷಣಸ್ಯ[2] ಯೋಗಸ್ಯ ದುಃಖಸಂಪಾದ್ಯತಾಮ್ ಆಲಕ್ಷ್ಯ ಶುಶ್ರೂಷುಃ ಧ್ರುವಂ ತತ್ಪ್ರಾಪ್ತ್ಯುಪಾಯಮ್ ಅರ್ಜುನ ಉವಾಚ—

1. ಜ್ಞಾನಿಯಲ್ಲದವನೂ ಅಹಿಂಸಕನಾಗಿರಬಹುದಾದರೂ ಅಹಿಂಸೆಯು ಜ್ಞಾನಿಗೆ ಸ್ವಭಾವವು ; ಏಕೆಂದರೆ ಎಲ್ಲರ ಆತ್ಮನೂ ತಾನೆಂಬ ತಿಳಿವಳಿಕೆಯು ಆತನದು. ೧೮-೨೮
2. " ಸಮದರ್ಶನಲಕ್ಷಣಸ್ಯ " ಮ॥

(ಭಾಷ್ಯಾರ್ಥ)

ಈ ಮೇಲೆ ಹೇಳಿದ ಸಮ್ಯಗ್ದರ್ಶನವೆಂಬ ಯೋಗವನ್ನು ಪಡೆದುಕೊಳ್ಳುವದು ಕಷ್ಟವೆಂಬುದನ್ನು ಕಂಡು, ಅದನ್ನು ಪಡೆದುಕೊಳ್ಳುವದಕ್ಕೆ ನಿಶ್ಚಿತವಾಗಿರುವ ಉಪಾಯವನ್ನು ಕೇಳಿ ತಿಳಿದುಕೊಳ್ಳಬೇಕೆಂದು ಅರ್ಜುನನು ಇಂತೆಂದನು :—

**ಅರ್ಜುನ ಉವಾಚ—**

**ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂಧನ ।**
**ಏತಸ್ಯಾಹಂ ನ ಪಶ್ಯಾಮಿ ಚಞ್ಚಲತ್ವಾತ್ ಸ್ಥಿತಿಂ ಸ್ಥಿರಾಮ್ ॥ ೩೩ ॥**

೩೩. ಅರ್ಜುನನಿಂತೆಂದನು :—ಎಲೈ ಮಧುಸೂದನನೆ, ಸಾಮ್ಯವೆಂದು ನೀನು ಹೇಳಿದ ಯಾವ ಈ ಯೋಗವುಂಟೋ, ಚಂಚಲವಾಗಿರುವದರಿಂದ ಇದು ಸ್ಥಿರವಾಗಿರುವ (ಬಗೆಯನ್ನು) ನಾನು ಕಾಣೆನು.

(ಭಾಷ್ಯ)

೪೨೬. ಯಃ ಅಯಂ ಯೋಗಃ ತ್ವಯಾ ಪ್ರೋಕ್ತಃ ಸಾಮ್ಯೇನ ಸಮತ್ವೇನ ಹೇ ಮಧುಸೂದನ, ಏತಸ್ಯ ಯೋಗಸ್ಯ ಅಹಂ ನ ಪಶ್ಯಾಮಿ ನ ಉಪಲಭೇ ಚಞ್ಚಲತ್ವಾತ್ ಮನಸಃ । ಕಿಮ್ ? ಸ್ಥಿರಾಮ್ ಅಚಲಾಂ ಸ್ಥಿತಿಮ್ ॥

(ಭಾಷ್ಯಾರ್ಥ)

ಎಲೈ ಮಧುಸೂದನನೆ, ಸಾಮ್ಯವೆಂದು[1] ಸಮತೆಯ ರೂಪವೆಂದು ನೀನು ಯಾವ ಯೋಗವನ್ನು ಹೇಳಿದೆಯೋ ಈ ಯೋಗಕ್ಕೆ ನಾನು ಮನಸ್ಸು ಚಂಚಲವಾಗಿರುವದರಿಂದ ಕಾಣೆನು, ನನಗೆ ತೋರುವದಿಲ್ಲ. ಏನನ್ನು (ಕಾಣೆ) ? ಎಂದರೆ ಸ್ಥಿರವಾದ, ಅಲುಗಾಡದ, ಸ್ಥಿತಿಯನ್ನು (ಇರುವಿಕೆಯನ್ನು, ಕಾಣೆನು.)

**ಚಞ್ಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ ದೃಢಮ್ ।**
**ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್ ॥ ೩೪ ॥**

---

1. ಜ್ಞಾನವನ್ನೇ ‘ ಯೋಗ ’ ಎಂಬ ಶಬ್ದದಿಂದ ಅರ್ಜುನನು ಕೇಳಿರುತ್ತಾನೆಂಬ ಇಟ್ಟುಕೊಂಡರೆ ಎಲ್ಲೆಲ್ಲಿಯೂ ಸಮವಾಗಿರುವ ಬ್ರಹ್ಮವನ್ನು ಕಾಣುವದು ಕಷ್ಟವೆಂದು ಪ್ರಶ್ನೆಯ ಅಭಿಪ್ರಾಯವಾಗುತ್ತದೆ. ಧ್ಯಾನಯೋಗವನ್ನು ಕೇಳಿದಾನೆಂದು ಇಟ್ಟುಕೊಂಡರೆ ಬ್ರಹ್ಮದಲ್ಲಿಯೇ ನಿಂತಿರುವದೆಂಬ ಸಮತ್ವದ ವಿಷಯವಾಗಿ ಕೇಳಿರುತ್ತಾನೆಂದು ಅರ್ಥಮಾಡಬೇಕು. ಎರಡನೆಯ ಅರ್ಥವೇ ಸಾಕೆಂದು ತೋರುತ್ತದೆ.

೩೪. ಕೃಷ್ಣನೆ, ಮನಸ್ಸು ಚಂಚಲವಾದದ್ದು, ಪ್ರಮಾಥಿ, ಬಲವಾದದ್ದು, ದೃಢವಾದದ್ದು. ಅದರ ನಿಗ್ರಹವು ವಾಯುವಿನ (ನಿಗ್ರಹದಂತೆ) ಬಹಳ ಕಷ್ಟದಿಂದ ಮಾಡಬೇಕಾದದ್ದೆಂದು ನಾನು ತಿಳಿಯುವೆನು.

(ಭಾಷ್ಯ)

೪೨೭. ಪ್ರಸಿದ್ಧಮ್ ಏತತ್ । ಚಞ್ಚಲಂ ಹಿ ಮನಃ । 'ಕೃಷ್ಣ' ಇತಿ ಕೃಷತೇಃ ವಿಲೇಖನಾರ್ಥಸ್ಯ ರೂಪಮ್ । ಭಕ್ತಜನಪಾಪಾದಿದೋಷಾಕರ್ಷಣಾತ್ ಕೃಷ್ಣಃ[1] । ಹಿ ಯಸ್ಮಾತ್ ಮನಃ ಚಞ್ಚಲಮ್[2] । ನ ಕೇವಲಮ್ ಅತ್ಯರ್ಥಂ ಚಞ್ಚಲಮ್[3], ಪ್ರಮಾಥಿ ಚ ಪ್ರಮಥನಶೀಲಂ ಪ್ರಮಥ್ನಾತಿ ಶರೀರಮ್ ಇನ್ದ್ರಿಯಾಣಿ ಚ ವಿಕ್ಷಿಪತ್ ಸತ್ ಪರವಶೀಕರೋತಿ । ಕಿಂಚ ಬಲವತ್ ಪ್ರಬಲಂ ನ ಕೇನಚಿತ್ ನಿಯನ್ತುಂ ಶಕ್ಯಮ್ । ದುರ್ನಿವಾರತ್ವಾತ್ । ಕಿಂಚ ದೃಢಂ ತನ್ತುನಾಗವತ್ ಅಚ್ಛೇದ್ಯಮ್ । ತಸ್ಯ ಏವಂಭೂತಸ್ಯ ನಿಗ್ರಹಂ ನಿರೋಧಂ ಮನ್ಯೇ ವಾಯೋರಿವ (ಸುದುಷ್ಕರಮ್) । ಯಥಾ ವಾಯೋಃ ದುಷ್ಕರೋ ನಿಗ್ರಹಃ, ತತೋಽಪಿ ಮನಸೋ[4] ದುಷ್ಕರಂ ಮನ್ಯೇ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಇದು ಪ್ರಸಿದ್ಧವಾಗಿದೆ: 'ಮನಸ್ಸು ಚಂಚಲವಾಗಿದೆಯಲ್ಲವೆ ?' ಕೃಷ್ಣ ಎಂಬುದು ಎಳೆಯುವದು ಎಂಬರ್ಥದ ಕೃಷ್ ಧಾತುವಿನಿಂದ ಬಂದಿರುವ ರೂಪವು. ಭಕ್ತಜನರ ಪಾಪವೇ ಮುಂತಾದ ದೋಷಗಳನ್ನು ಎಳೆದುಹಾಕುವದರಿಂದ ಕೃಷ್ಣನೆಂದು ಹೆಸರು. (ಹಿ) ಏಕೆಂದರೆ ಮನಸ್ಸು ಚಂಚಲವಾಗಿದೆ. (ಇದು) ಬಹುವಾಗಿ ಚಂಚಲವಾಗಿರುವದೆಂಬುದೊಂದೇ ಅಲ್ಲ, ಪ್ರಮಾಥಿಯೂ ಆಗಿದೆ. (ಪ್ರಮಾಥಿ ಎಂದರೆ) ಕಡೆದುಹಾಕುವ ಸ್ವಭಾವವುಳ್ಳದ್ದು, ಕಡೆಯುತ್ತದೆ ಎಂದರೆ ಶರೀರವನ್ನೂ ಇಂದ್ರಿಯಗಳನ್ನೂ ವಿಕ್ಷೇಪಗೊಳಿಸುವದಾಗಿ ಪರವಶವಾಗಿ ಮಾಡುತ್ತದೆ. ಮತ್ತು ಬಲವಾಗಿರುತ್ತದೆ, (ಎಲ್ಲಕ್ಕಿಂತಲೂ) ಹೆಚ್ಚು ಬಲವಾಗಿರುತ್ತದೆ, ಯಾರಿಂದಲೂ (ಇದನ್ನು) ಆಳುವದಕ್ಕೆ ಆಗುವಂತಿಲ್ಲ; ಏಕೆಂದರೆ ಇದನ್ನು ತಡೆಯುವದಕ್ಕೆ ಆಗುವದೇ ಇಲ್ಲ. ಮತ್ತು (ಇದು) ಧೃಢವಾಗಿಯೂ ಇದೆ, ನಾಗಪಾಶದಂತೆ ಕತ್ತರಿಸು

---

1 'ತಸ್ಯ ಸಂಬುದ್ಧಿಃ ಹೇ ಕೃಷ್ಣ' ಎಂದು ಹೆಚ್ಚಾಗಿ ವಾ॥

2. ಈ ವಾಕ್ಯವು ನಿ॥ ಪಾಠದಲ್ಲಿಲ್ಲ

3. 'ಚಲಮ್' ಎಂದೇ ಮೊದಲು ಭಾಷ್ಯಕಾರರು ಬರೆದಿರಬಹುದೆಂದು ತೋರುತ್ತದೆ; ಭಾ.ಭಾ ೪-೧೫ ನೋಡಿ.

4. ಈ ಮಾತು ಮ॥ಮೈ॥ವಾ॥ಗಳಲ್ಲಿಲ್ಲ.

ವದಕ್ಕೆ ಆಗದಂತಿರುತ್ತದೆ. ಹೀಗಿರುವ ಈ (ಮನಸ್ಸಿನ) ನಿಗ್ರಹವು ಎಂದರೆ ತಡೆಗಟ್ಟುವದು ಗಾಳಿಯನ್ನು (ನಿಗ್ರಹಿಸುವಂತೆ ದುಷ್ಕರವಾಗಿರುತ್ತದೆ) ಹೇಗೆ ಗಾಳಿಯನ್ನು ತಡೆಗಟ್ಟುವದು ಕಷ್ಟವೋ (ಹಾಗೆ) ಮನಸ್ಸನ್ನು (ತಡೆಗಟ್ಟುವದು) ಅದಕ್ಕಿಂತಲೂ ಕಷ್ಟವೆಂದು ನಾನು ಭಾವಿಸುತ್ತೇನೆ ಎಂದು ಅಭಿಪ್ರಾಯ.

**ಶ್ರೀ ಭಗವಾನ್ ಉವಾಚ—**

**ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।**
**ಅಭ್ಯಾಸೇನ ತು ಕೌನ್ತೇಯ ವೈರಾಗ್ಯೇಣ ಚ ಗೃಹ್ಯತೇ ॥ ೩೫ ॥**

೩೫. ಶ್ರೀ ಭಗವಂತನಿಂತೆಂದನು:—ಎಲೈ ಮಹಾಬಾಹುವೆ, ಮನಸ್ಸು ನಿಗ್ರಹಿಸುವದಕ್ಕೆ ಕಷ್ಟವೆಂಬುದೂ (ಅದು) ಚಂಚಲವೆಂಬುದೂ ನಿಸ್ಸಂಶಯವು. ಆದರೆ, ಎಲೈ ಕೌಂತೇಯನೆ, ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಹಿಡಿತಕ್ಕೆ ಸಿಕ್ಕುತ್ತದೆ.

(ಭಾಷ್ಯ)

೪೩೮. ಶ್ರೀ ಭಗವಾನ್ ಉವಾಚ— ಏವಮೇತತ್[1] ಯಥಾ ಬ್ರವೀಷಿ । ಅಸಂಶಯಂ ನಾಸ್ತಿ ಸಂಶಯಃ ಮನೋ ದುರ್ನಿಗ್ರಹಂ ಚಲಮಿತ್ಯತ್ರ ಹೇ ಮಹಾಬಾಹೋ[2] ಕಿಂ ತು ಅಭ್ಯಾಸೇನ ತು ಅಭ್ಯಾಸೋ ನಾಮ ಚಿತ್ತಭೂಮೌ ಕಸ್ಯಾಂಚಿತ್ ಸಮಾನಪ್ರತ್ಯಯಾವೃತ್ತಿಶ್ಚಿತ್ತಸ್ಯ । ವೈರಾಗ್ಯೇಣ ವೈರಾಗ್ಯಂ ನಾಮ ದೃಷ್ಟಾದೃಷ್ಟೇಷ್ಟಭೋಗೇಷು[3] ದೋಷದರ್ಶನಾಭ್ಯಾಸಾತ್ ವೈತೃಷ್ಣ್ಯಮ್ ತೇನ ವೈರಾಗ್ಯೇಣ । ಗೃಹ್ಯತೇ ವಿಕ್ಷೇಪರೂಪಃ ಪ್ರಚಾರಶ್ಚಿತ್ತಸ್ಯ । ಏವಂ ತನ್ಮನಃ ಗೃಹ್ಯತೇ ನಿಗೃಹ್ಯತೇ ನಿರುಧ್ಯತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಶ್ರೀ ಭಗವಂತನು ಇಂತೆಂದನು: ಇದು ಹೀಗೆಯೇ, ನೀನು ಹೇಳಿದಂತೆಯೇ (ಸರಿ). ಎಲೈ ಮಹಾಬಾಹುವಾದ ಅರ್ಜುನನೆ, ಮನಸ್ಸು ನಿಗ್ರಹಿಸುವದಕ್ಕೆ ಕಷ್ಟವಾದದ್ದೆಂಬುದೂ (ಇದು) ಚಂಚಲವೆಂಬುದೂ ನಿಸ್ಸಂಶಯವು; ಇದರಲ್ಲಿ ಸಂಶಯ

1. ‹ ಏವಮೇವ ' ಮ॥
2. ಈ ಮಾತು ‹ ಮನೋ ' ಎಂಬುದರ ಹಿಂದೆ ಮೈ॥ ವಾ॥
3. ಇಷ್ಟ ಎಂಬ ಮಾತು ಮ॥ ಮೈ॥ಗಳಲ್ಲಿಲ್ಲ.

ವಿಲ್ಲ. ಆದರೆ ಅಭ್ಯಾಸದಿಂದಲೂ–ಅಭ್ಯಾಸವೆಂದರೆ ಒಂದಾನೊಂದು **ಚಿತ್ತಭೂಮಿಯಲ್ಲಿ**[1] ಒಂದೇ ಬಗೆಯಾದ ಚಿತ್ತವೃತ್ತಿಯನ್ನು ಆಡಿಸುತ್ತಿರುವದು. (ಆದರಿಂದಲೂ) ವೈರಾಗ್ಯದಿಂದಲೂ–**ವೈರಾಗ್ಯ**ವೆಂದರೆ (ಈ ಲೋಕದಲ್ಲಿ) ಕಂಡಿರುವ ಮತ್ತು ಕಾಣದ (ಪರಲೋಕದಲ್ಲಿ) ನಮಗೆ ಬೇಕೆನಿಸುವ ಭೋಗಗಳಲ್ಲಿ ದೋಷವನ್ನು ಕಾಣುವದನ್ನು ಅಭ್ಯಾಸಮಾಡಿಕೊಂಡದ್ದರಿಂದಾಗುವ ಬಯಕೆಯ ಅಭಾವವು. ಆ ವೈರಾಗ್ಯದಿಂದಲೂ –ಹಿಡಿತಕ್ಕೆ ಸಿಕ್ಕುವದು. ಹೀಗೆ ಆ ಮನಸ್ಸನ್ನು ಹಿಡಿಯಬಹುದು, ನಿಗ್ರಹಮಾಡಬಹುದು, ತಡೆಯಬಹುದು ಎಂದರ್ಥ.

**ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ ।**
**ವಶ್ಯಾತ್ಮನಾ ತು ಯತತಾ ಶಕ್ಯೋಽವಾಪ್ತುಮುಪಾಯತಃ || ೩೬ ||**

೩೬. ಅಸಂಯತಾತ್ಮನಿಗೆ ಯೋಗವು ದಕ್ಕುವದು ಕಷ್ಟವೆಂದು ನನ್ನ ಮತವು ; ಆದರೆ ವಶ್ಯಾತ್ಮನಾದವನು ಪ್ರಯತ್ನವನ್ನು ಮಾಡುತ್ತಿದ್ದರೆ ಉಪಾಯದಿಂದ ಅದನ್ನು ಪಡೆಯಬಹುದು.

(ಭಾಷ್ಯ)

ಅರ್ಜ ಯಃ ಪುನರಸಂಯತಾತ್ಮಾ ತೇನ[2]–ಅಸಂಯತಾತ್ಮನಾ ಅಭ್ಯಾಸವೈರಾಗ್ಯಾಭ್ಯಾಮ್ ಅಸಂಯತಃ ಆತ್ಮಾ ಅನ್ತಃಕರಣಮ್ ಯಸ್ಯ ಸೋಽಯಮ್ ಅಸಂಯತಾತ್ಮಾ ತೇನ ಅಸಂಯತಾತ್ಮನಾ ಯೋಗಃ ದುಷ್ಪ್ರಾಪಃ ದುಃಖೇನ ಪ್ರಾಪ್ಯತೇ[3] ಇತಿ ಮೇ ಮತಿಃ । ಯಸ್ತು ಪುನಃ ವಶ್ಯಾತ್ಮಾ ಅಭ್ಯಾಸವೈರಾಗ್ಯಾಭ್ಯಾಂ ವಶ್ಯತ್ವಮ್ ಆಪಾದಿತಃ ಮನಃ ಯಸ್ಯ ಸೋಽಯಂ ವಶ್ಯಾತ್ಮಾ ತೇನ ವಶ್ಯಾತ್ಮನಾ ತು ಯತತಾ ಭೂಯೋಽಪಿ ಪ್ರಯತ್ನಂ ಕುರ್ವತಾ ಶಕ್ಯಃ ಅವಾಪ್ತುಂ ಯೋಗಃ ಉಪಾಯತಃ ಯಥೋಕ್ತಾತ್ ಉಪಾಯಾತ್ ||

(ಭಾಷ್ಯಾರ್ಥ)

ಆದರೆ ಯಾವನು ಅಸಂಯತಾತ್ಮನೋ ಅವನಿಗೆ (ಹೇಗೆಂದರೆ)—ಅಸಂ

---

1 ಯೋಗಶಾಸ್ತ್ರದಲ್ಲಿ ಹೇಳಿರುವ ಕ್ಷಿಪ್ತ, ಮೂಢ, ವಿಕ್ಷಿಪ್ತ, ಏಕಾಗ್ರ–ಎಂಬವಲ್ಲ; ಉಪನಿಷತ್ತಿನಲ್ಲಿ ಹೇಳಿದ ವಾಕ್ಕು, ಮನಸ್ಸು–ಮುಂತಾದವುಗಳು. ೨೫ನೆಯ ಶ್ಲೋಕದ ಭಾಷ್ಯಾರ್ಥದ 'ಮೆಲ್ಲಮೆಲ್ಲಗೆ' ಎಂಬುದರ ಟಿಪ್ಪಣಿಯನ್ನು ನೋಡಿ.

2. ಇಲ್ಲಿಯವರೆಗಿನ ವಾಕ್ಯವು ಇಲ್ಲದಿದ್ದರೂ ಸಾಗುವಂತಿದೆ.

3. 'ದುಃಖಸಂಪ್ರಾಪ್ಯಃ' ಮ|| ಮೈ||

ಯತಾತ್ಮನಿಗೆ, ಅಭ್ಯಾಸವೈರಾಗ್ಯಗಳಿಂದ ಬಿಗಿಹಿಡಿಯದ ಅಂತಃಕರಣವು ಯಾವನಿಗಿರುವದೋ ಅಂಥವನು ಅಸಂಯತಾತ್ಮನು; ಆ ಅಸಂಯತಾತ್ಮನಿಗೆ, ಯೋಗವು ದುಷ್ಪ್ರಾಪವು ದಕ್ಕುವದು ಕಷ್ಟ ಎಂದು ನನ್ನ ಮತವು. ಯಾವನಾದರೆ ವಶ್ಯಾತ್ಮನಾಗಿರುವನೋ–ಅಭ್ಯಾಸವೈರಾಗ್ಯಗಳಿಂದ ಅಳವಿಗೆ ತಂದುಕೊಂಡಿರುವ ಆತ್ಮವು ಮನಸ್ಸು ಯಾವನಿಗಿರುವದೋ ಅಂಥವನು ವಶ್ಯಾತ್ಮನು, ಆ ವಶ್ಯಾತ್ಮನೋ ಎಂದರೆ–ಯತ್ನ ಮಾಡುತ್ತಿದ್ದರೆ ಮತ್ತೂ ಮತ್ತೂ ಪ್ರಯತ್ನವನ್ನು ಮಾಡುತ್ತಿದ್ದರೆ ಉಪಾಯದ ಮೂಲಕ ಎಂದರೆ ಮೇಲೆ ಹೇಳಿರುವ ಉಪಾಯದಿಂದ ಪಡೆದುಕೊಳ್ಳಬಹುದು.

## ಯೋಗಭ್ರಷ್ಟನ ಗತಿ

(ಭಾಷ್ಯ)

೪೩೦ ತತ್ರ ಯೋಗಾಭ್ಯಾನಾಙ್ಗೀಕರಣೇನ ಇಹಲೋಕಪರಲೋಕಪ್ರಾಪ್ತಿನಿಮಿತ್ತಾನಿ ಕರ್ಮಾಣಿ ಸಂನ್ಯಸ್ತಾನಿ। ಯೋಗಸಿದ್ಧಿಫಲಂ ಚ ಮೋಕ್ಷಸಾಧನಂ ನ ಪ್ರಾಪ್ತಮ್, ಇತಿ ಯೋಗೀ ಯೋಗಮಾರ್ಗಾತ್ ಮರಣಕಾಲೇ ಚಲಿತಚಿತ್ತಃ ಇತಿ ತಸ್ಯ ನಾಶಮ್ ಆಶಙ್ಕ್ಯ ಅರ್ಜುನ ಉವಾಚ—

(ಭಾಷ್ಯಾರ್ಥ)

ಇಲ್ಲಿ ಯೋಗಾಭ್ಯಾಸವನ್ನು ಸ್ವೀಕರಿಸಿ ಇಹಲೋಕವನ್ನೂ ಪರಲೋಕವನ್ನೂ ಪಡೆಯುವದಕ್ಕೆ ಕಾರಣವಾಗಿರುವ ಕರ್ಮಗಳನ್ನು ಸಂನ್ಯಾಸಮಾಡಿದ್ದಾಯಿತು, ಯೋಗಸಿದ್ಧಿಯ ಫಲವಾದ ಮೋಕ್ಷಕ್ಕೆ ಸಾಧನವೆನಿಸುವ ಸಮ್ಯಗ್ದರ್ಶನವು ದೊರೆಯಲೂ ಇಲ್ಲ–ಎಂಬ ಕಾರಣದಿಂದ ಯೋಗಿಯು ಸಾಯುವ ಕಾಲದಲ್ಲಿ ಯೋಗಮಾರ್ಗದಿಂದ ಚಿತ್ತದಲ್ಲಿ ಚಲಿಸಬಹುದಷ್ಟೆ. ಅಂಥವನು ಕೆಟ್ಟೇಹೋಗುವನೋ ಏನೋ ಎಂಬ ಶಂಕೆಯಿಂದ ಅರ್ಜುನನು (ಈ ಮುಂದಿನ ಪ್ರಶ್ನೆಯನ್ನು) ಕೇಳಿರುತ್ತಾನೆ.—

**ಅಯತಿಃ ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ।**
**ಅಪ್ರಾಪ್ಯ ಯೋಗಸಂಸಿದ್ಧಿಂ ಕಾಂ ಗತಿಂ ಕೃಷ್ಣ ಗಚ್ಛತಿ ॥ ೩೭ ॥**

೩೭. ಎಲೈ ಕೃಷ್ಣನೆ, ಪ್ರಯತ್ನವನ್ನು ಮಾಡದೆ ಶ್ರದ್ಧೆಯುಳ್ಳವನಾಗಿರುವವನಿಗೆ ಮನಸ್ಸು ಯೋಗವನ್ನು ಬಿಟ್ಟು ಚಲಿಸಿದರೆ ಯೋಗಸಂಸಿದ್ಧಿಯನ್ನು ಪಡೆಯದ ಅಂಥವನಿಗೆ ಯಾವ ಗತಿಯಾಗುವದು?

(ಭಾಷ್ಯ)

೪೩೧, ಅಯತಿಃ ಅಪ್ರಯತ್ನವಾನ್ ಯೋಗಮಾರ್ಗೇ ಶ್ರದ್ಧಯಾ ಆಸ್ತಿಕ್ಯ ಬುದ್ಧ್ಯಾ ಚ ಉಪೇತಃ ಅನ್ತಕಾಲೇ ಚ ಯೋಗಾತ್ ಚಲಿತಂ ಮಾನಸಂ ಮನಃ ಯಸ್ಯ ಸಃ ಚಲಿತಮಾನಸಃ ಭ್ರಷ್ಟಸ್ಮೃತಿಃ ಸಃ ಅಪ್ರಾಪ್ಯ ಯೋಗಸಂಸಿದ್ಧಿಂ ಯೋಗ ಫಲಂ ಸಮ್ಯಗ್ದರ್ಶನಂ ಕಾಂ ಗತಿಂ ಹೇ ಕೃಷ್ಣ ಗಚ್ಛತಿ ?

(ಭಾಷ್ಯಾರ್ಥ)

ಅಯತಿಯು ಎಂದರೆ (ಸರಿಯಾಗಿ) ಪ್ರಯತ್ನವನ್ನು ಮಾಡದೆ (ಇರುವವನೂ ಆದರೆ) ಯೋಗಮಾರ್ಗದಲ್ಲಿ ಶ್ರದ್ಧೆಯುಳ್ಳವನೂ ಎಂದರೆ ಆಸ್ತಿಕ್ಯಬುದ್ಧಿಯುಳ್ಳವನೂ ಆಗಿ ಮರಣಕಾಲದಲ್ಲಿ ಯೋಗವನ್ನು ಬಿಟ್ಟು ಮಾನಸವು ಎಂದರೆ ಮನಸ್ಸು ಚಲಿತ ವಾದ ಚಲಿತಮಾನಸನೂ ಎಂದರೆ (ಯೋಗದ) ನೆನಪು ತಪ್ಪಿಹೋದವನೂ (ಆಗಿರು ವನಲ್ಲ), ಅವನು ಯೋಗಸಂಸಿದ್ಧಿಯನ್ನು ಎಂದರೆ ಯೋಗದ ಫಲವಾದ ಸಮ್ಯ ಗ್ದರ್ಶನವನ್ನು ಪಡೆಯದ (ಇರುವದರಿಂದ) ಯಾವ ಗತಿಯನ್ನು ಹೊಂದುತ್ತಾನೆ ?

**ಕಚ್ಚಿನ್ನೋಭಯವಿಭ್ರಷ್ಟಶ್ಛಿನ್ನಾಭ್ರಮಿವ ನಶ್ಯತಿ ।**
**ಅಪ್ರತಿಷ್ಠೋ ಮಹಾಬಾಹೋ ವಿಮೂಢೋ ಬ್ರಹ್ಮಣಃ ಪಥಿ ॥೩೮॥**

೩೮. ಉಭಯವಿಭ್ರಷ್ಟನಾಗಿ ಬ್ರಹ್ಮದ ದಾರಿಯಲ್ಲಿ ದಿಕ್ಕು ತೋಚದೆ ಚೂರಾದ ಮೋಡದಂತೆ ಅಪ್ರತಿಷ್ಠನಾಗಿ ಕೆಟ್ಟುಹೋಗುವದಿಲ್ಲ ವಷ್ಟೆ ?

(ಭಾಷ್ಯ)

೪೩೨. ಕಚ್ಚಿತ್ ಕಿಂ ನ ಉಭಯವಿಭ್ರಷ್ಟಃ ಕರ್ಮಮಾರ್ಗಾತ್ ಯೋಗ ಮಾರ್ಗಾಚ್ಚ ವಿಭ್ರಷ್ಟಃ ಸನ್ ಛಿನ್ನಾಭ್ರಮಿವ ನಶ್ಯತಿ ಕಿಂ ವಾ ನ ನಶ್ಯತಿ[1] ? ಅಪ್ರ ತಿಷ್ಠಃ ನಿರಾಶ್ರಯಃ ಹೇ ಮಹಾಬಾಹೋ ವಿಮೂಢಃ ಸನ್ ಬ್ರಹ್ಮಣಃ ಪಥಿ ಬ್ರಹ್ಮ ಪ್ರಾಪ್ತಿಮಾರ್ಗೇ ॥

(ಭಾಷ್ಯಾರ್ಥ)

ಕರ್ಮಮಾರ್ಗ, ಯೋಗಮಾರ್ಗ–ಇವೆರಡೂ ತಪ್ಪಿದವನಾಗಿ, ಎಲೈ ಮಹಾ ಬಾಹುವೆ, ಚೂರಾಗಿ (ಹೊರಬಿದ್ದ) ಮೋಡದಂತೆ ಅಪ್ರತಿಷ್ಠನಾಗಿ (ಯಾವ) ಆಸರೆಯೂ ಇಲ್ಲದೆ ಬ್ರಹ್ಮದ ದಾರಿಯಲ್ಲಿ ಎಂದರೆ ಬ್ರಹ್ಮವನ್ನು ಪಡೆಯುವ ಮಾರ್ಗದಲ್ಲಿ

---

1. "ನಶ್ಯತಿ ಕಿಮ್ ?" ಮ॥; 'ನಶ್ಯತಿ' ಮೈ॥

ದಿಕ್ಕು ತೋಚದೆ (ಅವನು) ಕೆಟ್ಟುಹೋಗುವದಿಲ್ಲವಷ್ಟೆ? (ಕೆಟ್ಟುಹೋಗುವನೊ, ಕೆಟ್ಟುಹೋಗುವದಿಲ್ಲವೊ?)[1]

**ಏತನ್ಮೇ ಸಂಶಯಂ ಕೃಷ್ಣ ಚ್ಛೇತ್ತುಮರ್ಹಸ್ಯಶೇಷತಃ ।**
**ತ್ವದನ್ಯಃ ಸಂಶಯಸ್ಯಾಸ್ಯ ಚ್ಛೇತ್ತಾ ನ ಹ್ಯುಪಪದ್ಯತೇ ॥ ೩೯ ॥**

೩೯, ಎಲೈ ಕೃಷ್ಣನೆ, ಈ ನನ್ನ ಸಂಶಯವನ್ನು ಒಂದಿಷ್ಟೂ ಉಳಿಯದಂತೆ (ನೀನು) ಕತ್ತರಿಸಬೇಕು. ಏಕೆಂದರೆ ನಿನ್ನನ್ನು ಬಿಟ್ಟರೆ ಮತ್ತೆ ಯಾರೂ ಈ ಸಂಶಯವನ್ನು ಕತ್ತರಿಸುವವರಿಲ್ಲ.

(ಭಾಷ್ಯ)

೪೩೩ ಏತತ್[2] ಮೇ ಮಮ ಸಂಶಯಂ ಕೃಷ್ಣ ಛೇತ್ತುಮ್ ಅಪನೇತುಮ್ ಅರ್ಹಸಿ ಅಶೇಷತಃ । ತ್ವದನ್ಯಃ ತತ್ತ್ವೋಽನ್ಯಃ ಋಷಿಃ ದೇವೋ ವಾ ಛೇತ್ತಾ ನಾಶಯಿತಾ ಸಂಶಯಸ್ಯ ಅಸ್ಯ ನ ಹಿ ಯಸ್ಮಾತ್ ಉಪಪದ್ಯತೇ ನ ಸಂಭವತಿ । ಅತಃ ತ್ವಮೇವ ಛೇತ್ತುಮ್ ಅರ್ಹಸಿ ಇತ್ಯರ್ಥಃ ॥

(ಭಾಷ್ಯಾರ್ಥ)

ಎಲೈ ಕೃಷ್ಣನೆ, ಈ ನನ್ನ ಸಂಶಯವನ್ನು ಒಂದಿಷ್ಟೂ ಉಳಿಯದಂತೆ ನೀನು ಕತ್ತರಿಸಬೇಕು, ಕಳೆಯಬೇಕು. ಏಕೆಂದರೆ ನಿನಗಿಂತ ಬೇರೆಯವನು ನಿನ್ನನ್ನು ಬಿಟ್ಟು ಮತ್ತೊಬ್ಬನು (ಯಾವ) ಋಷಿಯಾಗಲಿ ದೇವತೆಯಾಗಲಿ ಈ ಸಂಶಯವನ್ನು ಕತ್ತರಿಸುವವನು ಹೋಗಲಾಡಿಸುವವನು ಹೊಂದುವಹಾಗಿಲ್ಲ, ಇರುವಂತಿಲ್ಲ. ಆದ್ದರಿಂದ ನೀನೇ (ಇದನ್ನು) ಕತ್ತರಿಸಬೇಕು ಎಂದರ್ಥ.

**ಶ್ರೀ ಭಗವಾನ್ ಉವಾಚ—**

**ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।**
**ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ ॥ ೪೦ ॥**

---

1. 'ಕಿಂ ವಾ ನ ನಶ್ಯತಿ' ಎಂಬ ಪಾಠಕ್ಕೆ ಅರ್ಥವಿದು; ಇದಿಲ್ಲದಿದ್ದರೂ ಸಾಗುತ್ತದೆ.

2. ಸಂಶಯಕ್ಕೆ ವಿಶೇಷಣವಾದ್ದರಿಂದ 'ಏತಂ' ಎಂದಿರಬೇಕು. ಇದೇ ಶಂಕರಾಚಾರ್ಯರ ಪಾಠವೋ ಅಲ್ಲವೋ ತಿಳಿಯದು.

೪೦. ಶ್ರೀ ಭಗವಂತನಿಂತೆಂದನು :—ಪಾರ್ಥನೆ, ಈ ಲೋಕದಲ್ಲಾಗಲಿ, ಪರಲೋಕದಲ್ಲಾಗಲಿ, ಅವನಿಗೆ ವಿನಾಶವಿರುವದಿಲ್ಲ. ಅಪ್ಪ, ಕಲ್ಯಾಣವನ್ನು ಮಾಡಿದವನು ಯಾವನೂ ದುರ್ಗತಿಯನ್ನು ಹೊಂದಲೇ ಆರನು.

(ಭಾಷ್ಯ)

೪೩೪ ಹೇ ಪಾರ್ಥ ನೈವ ಇಹ ಲೋಕೇ ನ ಅಮುತ್ರ ಪರಸ್ಮಿನ್ ವಾ ಲೋಕೇ ವಿನಾಶಃ ತಸ್ಯ ವಿದ್ಯತೇ ನಾಸ್ತಿ। ನಾಶೋ ನಾಮ ಪೂರ್ವಸ್ಮಾತ್ ಹೀನಜನ್ಮಪ್ರಾಪ್ತಿಃ। ಸಃ ಯೋಗಭ್ರಷ್ಟಸ್ಯ ನಾಸ್ತಿ । ನ ಹಿ ಯಸ್ಮಾತ್ ಕಲ್ಯಾಣಕೃತ್ ಶುಭಕೃತ್ ಕಶ್ಚಿತ್ ದುರ್ಗತಿಂ ಕುತ್ಸಿತಾಂ ಗತಿಂ ಹೇ ತಾತ । ತನೋತಿ ಆತ್ಮಾನಂ ಪುತ್ರರೂಪೇಣ ಇತಿ ಪಿತಾ ತಾತ ಉಚ್ಯತೇ । ಪಿತೈವ ಪುತ್ರಃ ಇತಿ ಪುತ್ರೋಽಪಿ ತಾತ ಉಚ್ಯತೇ । ಶಿಷ್ಯೋಽಪಿ ಪುತ್ರವತ್ ಇತಿ ಅಪುತ್ರೋಽಪಿ [1] ತಾತ ಉಚ್ಯತೇ । ನ [2] ಗಚ್ಛತಿ ॥

(ಭಾಷ್ಯಾರ್ಥ)

ಎಲೈ ಪಾರ್ಥನೆ, ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಅವನಿಗೆ ನಾಶವು ಇಲ್ಲವೇ ಇಲ್ಲ, ಇರುವದಿಲ್ಲ. **ನಾಶ** ಎಂದರೆ ಮೊದಲಿನ (ಜನ್ಮಕ್ಕಿಂತ) ಕೀಳಾದ ಜನ್ಮವನ್ನು ಹೊಂದುವದು , ಅದು ಯೋಗಭ್ರಷ್ಟನಿಗೆ ಇರುವದಿಲ್ಲ. ಏಕೆಂದರೆ ಅಪ್ಪ, ಕಲ್ಯಾಣವನ್ನು ಮಾಡಿದವನು ಎಂದರೆ ಒಳ್ಳೆಯದನ್ನು [3] ಮಾಡಿದವನು ಯಾವನೂ ದುರ್ಗತಿಯನ್ನು ಕೆಟ್ಟಗತಿಯನ್ನು ಹೊಂದಲೇ ಆರನು. (ಗೀತಾಮೂಲದಲ್ಲಿ)ರುವ ತಾತ (ಎಂಬ ಮಾತಿಗೆ ತಂದೆ ಎಂದರ್ಥ). ತನ್ನನ್ನು ಪುತ್ರರೂಪದಿಂದ ಉಂಟುಮಾಡಿಕೊಳ್ಳುತ್ತಾನೆ ಆದ್ದರಿಂದ ತಂದೆಗೆ ತಾತ ಎಂದು ಹೆಸರು ; ತಂದೆಯೇ

---

1 “ಶಿಷ್ಯೋಽಪಿ ಪುತ್ರ ಉಚ್ಯತೇ” ಅ॥ವಾ॥ ; “ಶಿಷ್ಯೋಽಪಿ ಪುತ್ರತುಲ್ಯ ಉಚ್ಯತೇ” ಪ॥ ಈಗ ನಾವು ಕೊಟ್ಟಿರುವದು ಮ॥ಮೈ॥ಗು॥

2. “ಯತೋ ನ ಗಚ್ಛತಿ” ಅ॥ನಿ॥ವಾ॥ ; ‘ಗಚ್ಛತಿ” ಮೈ॥ಗು॥ ‘ಗಚ್ಛತಿ’ ಎಂದಿಷ್ಟೇ ಇರುವ ಮೈ॥ದಲ್ಲಿ ‘ನ ಹಿ’ ಎಂಬುದರ ಬದಲು ಹಿ ಎಂದಿದೆ.

3. ಪುಣ್ಯಕರ್ಮವನ್ನು ಎಂದರ್ಥ. ಯೋಗವು ಅಗ್ನಿಹೋತ್ರಾದಿಗಳಂತೆ ಕರ್ಮವಲ್ಲದಿದ್ದರೂ ಶಾಸ್ತ್ರೋಕ್ತವಾಗಿರುವದರಿಂದ ಇದೂ ಪುಣ್ಯಕರ್ಮವೆನಿಸುತ್ತದೆ. ಆದ್ದರಿಂದಲೇ ಮುಂದಿನ ಶ್ಲೋಕದ ಭಾಷ್ಯದಲ್ಲಿ ಯೋಗಿಗೆ ಅಶ್ವಮೇಧಾದಿಗಳನ್ನು ಮಾಡಿದವರಿಗೆ ಆಗುವ ಗತಿಯು ದೊರಕುವದೆಂದು ಹೇಳಿರುವದು.

ಮಗನಾದ್ದರಿಂದ ಮಗನನ್ನೂ ತಾತ ಎನ್ನುವರು. ಶಿಷ್ಯನೂ ಮಗನಂತೆ ಆದ್ದರಿಂದ ಮಗನಲ್ಲದಿದ್ದರೂ (ಅವನೂ) ತಾತ ಎನಿಸುತ್ತಾನೆ.[1]

(ಭಾಷ್ಯ)

೪೩೫. ಕಿಂ ತು ಅಸ್ಯ ಭವತಿ?

(ಭಾಷ್ಯಾರ್ಥ)

(ಹಾಗಾದರೆ) ಅವನಿಗೆ ಮತ್ತೇನು (ಗತಿ) ಆಗುವದು? ಎಂದರೆ:—

**ಪ್ರಾಪ್ಯ ಪುಣ್ಯಕೃತಾಂ ಲೋಕಾನುಷಿತ್ವಾ ಶಾಶ್ವತೀಃ ಸಮಾಃ ।**
**ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥**

೪೧. ಪುಣ್ಯಕಾರಿಗಳ ಲೋಕಗಳನ್ನು ಪಡೆದು ಶಾಶ್ವತವಾಗಿ (ಬಹು) ವರ್ಷಗಳು (ಅಲ್ಲಿ) ವಾಸವಾಗಿದ್ದು ಶುಚಿಗಳೂ ಶ್ರೀಮಂತರೂ ಆಗಿರುವವರ ಕುಲದಲ್ಲಿ ಯೋಗಭ್ರಷ್ಟನು ಜನಿಸುವನು.

(ಭಾಷ್ಯ)

೪೩೬. ಯೋಗಮಾರ್ಗೇ ಪ್ರವೃತ್ತಃ ಸಂನ್ಯಾಸೀ ಸಾಮರ್ಥ್ಯಾತ್ ಪ್ರಾಪ್ಯ ಗತ್ವಾ ಪುಣ್ಯಕೃತಾಮ್ ಅಶ್ವಮೇಧಾದಿಯಾಜಿನಾಂ ಲೋಕಾನ್ ತತ್ರ ಚ ಉಷಿತ್ವಾ ವಾಸಮ್ ಅನುಭೂಯ ಶಾಶ್ವತೀಃ ನಿತ್ಯಾಃ ಸಮಾಃ ಸಂವತ್ಸರಾನ್ ತದ್ಭೋಗಕ್ಷಯೇ ಶುಚೀನಾಂ ಯಥೋಕ್ತಕಾರಿಣಾಂ ಶ್ರೀಮತಾಂ ವಿಭೂತಿಮತಾಂ ಗೇಹೇ ಗೃಹೇ ಯೋಗಭ್ರಷ್ಟಃ ಅಭಿಜಾಯತೇ ॥

(ಭಾಷ್ಯಾರ್ಥ)

ಯೋಗಮಾರ್ಗದಲ್ಲಿ ಹೊರಟಿರುವವನು—ಸಂನ್ಯಾಸಿಯು ಎಂದು (ಪ್ರಶ್ನ) ಸಾಮರ್ಥ್ಯದಿಂದ (ಗೊತ್ತಾಗುತ್ತದೆ)[2] ಅಶ್ವಮೇಧವೇ ಮುಂತಾದ ಯಾಗಗಳನ್ನು ಮಾಡುವ ಪುಣ್ಯವಂತರು (ಪಡೆಯುವ) ಲೋಕಗಳನ್ನು ಪಡೆದು ಅಲ್ಲಿ ಶಾಶ್ವತವಾಗಿ, ನಿತ್ಯವಾಗಿ (ಬಹು) ವರ್ಷಗಳವರೆಗೆ (ಸುಖವಾಗಿ) ವಾಸಮಾಡಿಕೊಂಡಿದ್ದು ಅಲ್ಲಿಯ

---

1. ಆದ್ದರಿಂದ ಶ್ರೀ ಕೃಷ್ಣನು ಅರ್ಜುನನನ್ನು ಪುತ್ರಭಾವದಿಂದ ತಾತ ಎಂದು ಕರೆರುತ್ತಾನೆ ಎಂದು ಭಾವ.

2. ಈ ಅಧ್ಯಾಯದ ಸಂಬಂಧಭಾಷ್ಯದಲ್ಲಿ ಇದನ್ನು ನಿರ್ಣಯಿಸಲಾಗಿದೆ.

ಭೋಗವು ಸವೆಯುಲಾಗಿ ಶುಚಿಗಳಾಗಿಯೂ ಎಂದರೆ (ಶಾಸ್ತ್ರದಲ್ಲಿ) ಹೇಳಿದಂತೆ ಆಚರಿಸುವವರಾಗಿಯೂ[1] ಶ್ರೀಮಂತರಾಗಿಯೂ ಎಂದರೆ ವಿಭವವುಳ್ಳವರಾಗಿಯೂ ಇರುವವರ ಮನೆಯಲ್ಲಿ ಯೋಗಭ್ರಷ್ಟನಾದವನು ಹುಟ್ಟುತ್ತಾನೆ

**ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್ ।**
**ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಮ್ ॥ ೪೨ ॥**

೪೨. ಅಥವಾ ಧೀಮಂತರಾದ ಯೋಗಿಗಳ ಕುಲದಲ್ಲಿಯೇ (ಅವನು) ಹುಟ್ಟುವನು. ಇದೇ–ಇಂಥ ಜನ್ಮವೆಂಬುದೇ–ಲೋಕದಲ್ಲಿ ದುರ್ಲಭತರವಾದದ್ದು.

(ಭಾಷ್ಯ)

೪೩೭. ಅಥವಾ ಶ್ರೀಮತಾಂ ಕುಲಾತ್ ಅನ್ಯಸ್ಮಿನ್ ಯೋಗಿನಾಮೇವ ದರಿದ್ರಾಣಾಂ ಕುಲೇ ಭವತಿ ಜಾಯತೇ ಧೀಮತಾಂ ಬುದ್ಧಿಮತಾಮ್ । ಏತದ್ ಹಿ ಜನ್ಮ ಯತ್ ದರಿದ್ರಾಣಾಂ ಯೋಗಿನಾಂ ಕುಲೇ ದುರ್ಲಭತರಂ ದುಃಖಲಭ್ಯತರಂ[2] ಪೂರ್ವಮ್ ಅಪೇಕ್ಷ್ಯ ಲೋಕೇ ಜನ್ಮ ಯತ್ ಈದೃಶಂ ಯಥೋಕ್ತವಿಶೇಷಣೇ ಕುಲೇ ॥

(ಭಾಷ್ಯಾರ್ಥ)

ಹಾಗಿಲ್ಲದಿದ್ದರೆ ಶ್ರೀಮಂತರ ಮನೆಗಿಂತ ಬೇರೆಯಾದ ಯೋಗಿಗಳಾಗಿರುವ ಧೀಮಂತರಾಗಿರುವ ಜ್ಞಾನಿಗಳಾಗಿರುವ ಬಡವರ ಮನೆಯಲ್ಲಿಯೇ (ಅವನು) ಆಗುತ್ತಾನೆ, ಹುಟ್ಟುತ್ತಾನೆ. ದರಿದ್ರರಾದ ಯೋಗಿಗಳ ಮನೆಯಲ್ಲಿ ಹುಟ್ಟುವದೆಂಬ ಇದೇ, (ಹೇಳಿದ ಜನ್ಮ) ಕ್ಕಿಂತ, ಈ ಹೇಳಿದ ವಿಶೇಷಣಗಳಿಂದ ಕೂಡಿದ ಕುಲದಲ್ಲಿ ಹುಟ್ಟುವದೇ ಹೆಚ್ಚು ದುರ್ಲಭವಾದದ್ದು.[3]

**ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಮ್ ।**
**ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನನ್ದನ ॥ ೪೩ ॥**

೪೩. ಎಲೈ ಕುರುನಂದನನೆ, ಅಲ್ಲಿ ಪೂರ್ವದೇಹದಲ್ಲಾಗಿದ್ದ ಆ ಬುದ್ಧಿಸಂಯೋಗವನ್ನು ಪಡೆದುಕೊಳ್ಳುತ್ತಾನೆ. ಅದರಿಂದ ಸಂಸಿದ್ಧಿಗಾಗಿ ಬಹುವಾಗಿ ಯತ್ನವನ್ನು ಮಾಡುವನು.

---

1. ಇವರಿಗೆ ಪಾಪವು ಕ್ಷಯವಾಗಿರುವದರಿಂದ ಇವರು ಶುಚಿಯಾಗಿರುತ್ತಾರೆ.
2. 'ದುಃಖೇನ ಲಭ್ಯತರಮ್' ಎ||
3. ಹಿಂದೆ ಮಾಡಿದ ಯೋಗವು ಬಲವಾಗಿದ್ದರೆ ಮಾತ್ರ ದೊರಕತಕ್ಕದ್ದು.

(ಭಾಷ್ಯ)

೪೩೮. ಯಸ್ಮಾತ್[1] ತತ್ರ ಯೋಗಿನಾಂ ಕುಲೇ ತಂ ಬುದ್ಧಿಸಂಯೋಗಂ ಬುದ್ಧ್ಯಾ ಸಂಯೋಗಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಂ ಪೂರ್ವಸ್ಮಿನ್ ದೇಹೇ ಭವಂ ಪೌರ್ವದೇಹಿಕಮ್ । ಯತತೇ ಚ ಪ್ರಯತ್ನಂ ಕರೋತಿ ಚ ತತಃ ತಸ್ಮಾತ್ ಪೂರ್ವಕೃತಾತ್ ಸಂಸ್ಕಾರಾತ್ ಭೂಯಃ ಬಹುತರಂ ಸಂಸಿದ್ಧೌ ಸಂಸಿದ್ಧಿನಿಮಿತ್ತಂ ಹೇ ಕುರುನನ್ದನ ॥

(ಭಾಷ್ಯಾರ್ಥ)

ಏಕೆಂದರೆ[2], ಎಲೈ ಕುರುನಂದನನೆ, ಆ ಯೋಗಿಗಳ ಕುಲದಲ್ಲಿ ಹಿಂದಿನ (ಜನ್ಮದ) ದೇಹದಲ್ಲಿದ್ದದ್ದು ಪೌರ್ವದೇಹಿಕವು, (ಆ) ಪೌರ್ವದೇಹಿಕವಾದ ಬುದ್ಧಿಸಂಯೋಗವನ್ನು–(ಯೋಗ)ಬುದ್ಧಿಯ ಸಂಬಂಧವು ಬುದ್ಧಿಸಂಯೋಗವು. (ಆ) ಬುದ್ಧಿಸಂಯೋಗವನ್ನು–ಪಡೆದುಕೊಳ್ಳುತ್ತಾನೆ ಅದರಿಂದ ಎಂದರೆ ಆ ಹಿಂದೆ ಮಾಡಿದ್ದರ ಸಂಸ್ಕಾರದಿಂದ (ಭೂಯಃ) ಇನ್ನೂ ಬಹುವಾಗಿ ಸಂಸಿದ್ಧಿಗಾಗಿ (ಯೋಗ) ಸಂಸಿದ್ಧಿಯ ಕಾರಣದಿಂದ[3] ಪ್ರಯತ್ನವನ್ನು ಮಾಡುತ್ತಾನೆ.

(ಭಾಷ್ಯ)

೪೩೯. ಕಥಂ ಪೂರ್ವಬುದ್ಧಿಸಂಯೋಗಃ ಇತಿ ? ತದುಚ್ಯತೇ[4]—

(ಭಾಷ್ಯಾರ್ಥ)

ಹಿಂದಿನ ದೇಹದಲ್ಲಿದ್ದ ಬುದ್ಧಿಯ ಸಂಬಂಧವಾಗುವದು ಹೇಗೆ? ಎಂದರೆ ಅದನ್ನು ಹೇಳುತ್ತೇನೆ :—

**ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ ।**
**ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ ॥ ೪೪ ॥**

---

1. ‘ ಯಸ್ಮಾಚ್ಚ ’ ಎಂಬ ಮ॥ಮೈ॥ಗಳಲ್ಲಿ ‘ ಚ ’ ಹೆಚ್ಚು.
2. ಅದೇಕೆ ದುರ್ಲಭವೆಂದರೆ ಎಂದರ್ಥ. ಯೋಗದ ಫಲವಾಗಿ ಶ್ರೀಮಂತರ ಮನೆಯಲ್ಲಿ ಭೋಗವು ದೊರೆಯುವದಕ್ಕಿಂತ ಯೋಗಿಗಳ ಮನೆಯಲ್ಲಿ ಯೋಗಾಭ್ಯಾಸದ ನೆನಪು ಸಿಕ್ಕುವದು ಹೆಚ್ಚಿನದು ಎಂಬುದನ್ನು ಇಲ್ಲಿ ತಿಳಿಸುತ್ತದೆ ಎಂದು ಭಾವ.
3. ಯೋಗವು ಪಕ್ವವಾಗಿ ಜ್ಞಾನವನ್ನು ಪಡೆದುಕೊಳ್ಳುವದಕ್ಕಾಗಿ.
4. ಈ ಅವತರಣಿಕೆಯು ಮ॥ಮೈ॥ಗಳಲ್ಲಿಲ್ಲ.

೪೪. ಅದೇ ಪೂರ್ವಾಭ್ಯಾಸದಿಂದ ಅವಶನಾಗಿಯೇ ಅವನು ಎಳೆಯಲ್ಪಡುತ್ತಾನೆ. ಯೋಗದ ಜಿಜ್ಞಾಸುವಾಗಿದ್ದರೂ ಶಬ್ದಬ್ರಹ್ಮವನ್ನು ಮೀರುತ್ತಾನೆ.

(ಭಾಷ್ಯ)

೪೪೦. ಯಃ ಪೂರ್ವಜನ್ಮನಿ ಕೃತಃ ಅಭ್ಯಾಸಃ ಸ ಪೂರ್ವಾಭ್ಯಾಸಃ ತೇನೈವ ಬಲವತಾ ಹ್ರಿಯತೇ ಸಂಸಿದ್ಧೌ ಹಿ ಯಸ್ಮಾತ್ ಅವಶೋಽಪಿ ಸ ಯೋಗಭ್ರಷ್ಟಃ । ನ ಕೃತಂ ಚೇತ್ ಯೋಗಾಭ್ಯಾಸಜಾತ್ ಸಂಸ್ಕಾರಾತ್ ಬಲವತ್ತರಮ್ ಅಧರ್ಮಲಕ್ಷಣಂ ಕರ್ಮ[1] ತದಾ ಯೋಗಾಭ್ಯಾಸಜನಿತೇನ ಸಂಸ್ಕಾರೇಣ ಹ್ರಿಯತೇ । ಅಧರ್ಮಶ್ಚೇತ್ ಬಲವತ್ತರಃ ಕೃತಃ ತೇನ ಯೋಗಜೋಽಪಿ ಸಂಸ್ಕಾರಃ ಅಭಿಭೂಯತೇ ಏವ । ತತ್ಕ್ಷಯೇ ತು ಯೋಗಜಃ ಸಂಸ್ಕಾರಃ ಸ್ವಯಮೇವ ಕಾರ್ಯಮ್ ಆರಭತೇ । ನ ದೀರ್ಘಕಾಲಸ್ಥಸ್ಯಾಪಿ ವಿನಾಶಸ್ತಸ್ಯಾಸ್ತಿ ಇತ್ಯರ್ಥಃ । ಅತಃ ಜಿಜ್ಞಾಸುರಪಿ ಯೋಗಸ್ಯ ಸ್ವರೂಪಂ ಜ್ಞಾತುಮಿಚ್ಛನ್ನಪಿ ಯೋಗಮಾರ್ಗೇ ಪ್ರವೃತ್ತಃ, ಸಂನ್ಯಾಸೀ ಯೋಗಭ್ರಷ್ಟಃ ಸಾಮರ್ಥ್ಯಾತ್, ಸೋಽಪಿ ಶಬ್ದಬ್ರಹ್ಮ ವೇದೋಕ್ತಕರ್ಮಾನುಷ್ಠಾನಫಲಮ್ ಅತಿವರ್ತತೇ ಅತಿಕ್ರಾಮತಿ ಅಪಾಕರಿಷ್ಯತಿ । ಕಿಮುತ ಬುದ್ಧ್ವಾ ಯೋ ಯೋಗಂ ತನ್ನಿಷ್ಠಃ ಅಭ್ಯಾಸಂ ಕುರ್ಯಾತ್ ॥

(ಭಾಷ್ಯಾರ್ಥ)

ಹಿಂದಿನ ಜನ್ಮದಲ್ಲಿ ಮಾಡಿರುವ ಅಭ್ಯಾಸವಿದೆಯಲ್ಲ, ಅದೇ ಪೂರ್ವಾಭ್ಯಾಸವು. ಅದೇ ಬಲವಾಗಿದ್ದರೆ ಆ ಯೋಗಭ್ರಷ್ಟನು ತಾನು ಬೇಡವೆಂದರೂ ಅದರಿಂದಲೇ ಸಂಸಿದ್ಧಿಯಾಗುವ ಕಡೆಗೆ ಎಳೆಯಲ್ಪಡುತ್ತಾನೆ. (ಹಿ) ಹೀಗಿರುವದರಿಂದ (ಇದು ಹೆಚ್ಚಿನ ಜನ್ಮವೆಂದು ಹೇಳಿದ್ದು). **ಯೋಗಾಭ್ಯಾಸದಿಂದಾಗಿರುವ ಸಂಸ್ಕಾರಕ್ಕಿಂತ ಹೆಚ್ಚು ಬಲವಾದ ಅಧರ್ಮರೂಪವಾದ ಕರ್ಮವನ್ನು ಮಾಡದೆ ಇದ್ದರೆ, ಆ ಪಕ್ಷದಲ್ಲಿ ಯೋಗಾಭ್ಯಾಸದಿಂದುಂಟಾದ ಸಂಸ್ಕಾರದಿಂದ ಎಳೆಯಲ್ಪಡುತ್ತಾನೆ. ಮಾಡಿದ ಅಧರ್ಮವು (ಇದಕ್ಕಿಂತ) ಹೆಚ್ಚು ಬಲವಾಗಿದ್ದರೆ, ಅದರಿಂದ ಯೋಗದಿಂದಾಗಿರುವ ಸಂಸ್ಕಾರವೂ ಕುಗ್ಗಿಯೇ ಕುಗ್ಗುವದು; ಆದರೆ ಆ ಅಧರ್ಮವು ಕ್ಷಯವಾದರೆ ಯೋಗದಿಂದುಂಟಾಗಿದ್ದ ಸಂಸ್ಕಾರವು**

---

1. ಇಲ್ಲಿ "ತೇನ ಕೃತಂ ಚೇತ್ ಯೋಗಾಭ್ಯಾಸಜಾತ್ ಸಂಸ್ಕಾರಾತ್ ಬಲವತ್ತರಂ ಧರ್ಮಾದಿಲಕ್ಷಣಂ ಕರ್ಮ" ಎಂದು ಮ॥ಮೈ॥ ; ಇಲ್ಲಿ ಕೊಟ್ಟಿರುವದು ಅ॥ನಿ॥ವಾ॥ ಪಾಠ ; 'ತೇನ ನ ಕೃತಂ ಚೇತ್....' ಎಂದು ಗು॥. ನಾವು ಅಂಗೀಕರಿಸುವ ಪಾಠದಲ್ಲಿ ಅಧರ್ಮಾದಿ ಲಕ್ಷಣಂ' ಎಂಬಲ್ಲಿ ಆದಿ ಹೆಚ್ಚೆಂದು ಬಿಟ್ಟಿದೆ.

ಕಾನೇ (ತನ್ನ) ಕಾರ್ಯವನ್ನು ಮಾಡುವದು.[1] ಅದು ಎಷ್ಟೇ ದೀರ್ಘಕಾಲ ಧ್ದಾಗಿರಲಿ ಅದು ನಾಶವಾಗುವದಿಲ್ಲ–ಎಂದರ್ಥ.[2]

ಆದ್ದರಿಂದ ಯೋಗದ ಜಿಜ್ಞಾಸುವೇ ಆಗಿರಲಿ, ಎಂದರ (ಅದರ) ಸ್ವರೂಪವನ್ನು ತಿಳಿಯಬೇಕೆಂದು (ಕುತೂಹಲಮಾತ್ರದಿಂದ) ಕಾಲಿಟ್ಟಿರಲಿ, ಅಂಥ ಯೋಗಭ್ರಷ್ಟನಾದ ಸಂನ್ಯಾಸಿಯು–(ಇದು ಸಂನ್ಯಾಸಿಯ ವಿಷಯವೆಂಬುದು) ವಾಕ್ಯಸಾಮರ್ಥ್ಯದಿಂದಲೇ (ಗೊತ್ತಾಗುತ್ತದೆ)–ಶಬ್ದಬ್ರಹ್ಮವನ್ನು ಮೀರುತ್ತಾನೆ, ಎಂದರೆ ವೇದದಲ್ಲಿ ಹೇಳಿರುವ ಕರ್ಮಗಳ ಫಲವನ್ನು ತಿರಸ್ಕರಿಸುವನು. (ಹೀಗಿರುವಲ್ಲಿ) ಯಾವನು ಯೋಗವನ್ನು (ಸರಿಯಾಗಿ) ಅರಿತುಕೊಂಡು ಅದರಲ್ಲಿಯೇ ನಿಷ್ಠೆಯಿಂದ ಅಭ್ಯಾಸವನ್ನು ಮಾಡುತ್ತಾನೋ (ಅವನು ಕರ್ಮಫಲವನ್ನು ಮೀರುವನೆಂಬುದನ್ನು) ಹೇಳತಕ್ಕದ್ದೇನಿದೆ?

## ಯೋಗಿಯ ಹೆಚ್ಚುಗಾರಿಕೆ

(ಭಾಷ್ಯಾರ್ಥ)

೪೪೧. ಕುತಶ್ಚ ಯೋಗಿತ್ವಂ ಶ್ರೇಯಃ ಇತಿ? ಉಚ್ಯತೇ—

(ಭಾಷ್ಯಾರ್ಥ)

ಯೋಗಿಯಾಗಿರುವದು ಒಳ್ಳೆಯದೆಂಬುದಕ್ಕೆ ಮತ್ತೂ ಒಂದು ಕಾರಣವೇನೆಂದರೆ –

**ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ।**
**ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್ ॥ ೪೫ ॥**

೪೫. ಪ್ರಯತ್ನದಿಂದ ಅಭ್ಯಾಸಮಾಡುವ ಯೋಗಿಯಾದರೋ ಸಂಶುದ್ಧಕಿಲ್ಬಿಷನಾಗಿ ಅನೇಕಜನ್ಮಸಂಸಿದ್ಧನಾಗಿ ಇದರಿಂದ ಗತಿಯನ್ನು ಹೊಂದುವನು.

(ಭಾಷ್ಯ)

೪೪೨. ಪ್ರಯತ್ನಾತ್[1] ಯತಮಾನಃ ತು ಅಧಿಕಂ[2] ಯತಮಾನಃ ಇತ್ಯರ್ಥಃ

---

1. ಪ್ರತಿಬಂಧಕದಿಂದಲೇ ಯೋಗವು ಫಲವನ್ನು ಕೊಡದೆ ಇರುತ್ತದೆ; ಅಭ್ಯಾಸವು ಬಲವಾದರೆ ಪ್ರತಿಬಂಧವನ್ನು ಪರಿಹರಿಸಿಕೊಳ್ಳಬಲ್ಲದು.

2. ಜ್ಞಾನಕ್ಕಾಗಿ ಮಾಡುವ ಪ್ರಯತ್ನಕ್ಕೆ ಅಡ್ಡಿಯಿದ್ದರೆ ಜನ್ಮಾಂತರದಲ್ಲಾದರೂ ಫಲವನ್ನು ಕೊಡುತ್ತದೆ. ಸೂ. ಭಾ. ೩-೪-೫೧ ಮುಂಚಿನ ಶ್ಲೋಕವನ್ನೂ ಅದರ ಭಾಷ್ಯವನ್ನೂ ನೋಡಿ.

ತತ್ರ ಯೋಗೀ ವಿದ್ವಾನ್ ಸಂಶುದ್ಧಕಿಲ್ಬಿಷಃ ವಿಶುದ್ಧಕಿಲ್ಬಿಷಃ[3] ಸಂಶುದ್ಧಪಾಪಃ ಅನೇಕಜನ್ಮಸಂಸಿದ್ಧಃ ಅನೇಕೇಷು ಜನ್ಮಸು ಕಿಂಚಿತ್ ಕಿಂಚಿತ್ ಸಂಸ್ಕಾರಜಾತಮ್ ಉಪಚಿತ್ಯ ತೇನ ಉಪಚಿತೇನ ಅನೇಕಜನ್ಮಕೃತೇನ ಸಂಸಿದ್ಧಃ ಅನೇಕಜನ್ಮಸಂಸಿದ್ಧಃ ತತಃ ಲಬ್ಧಸಮ್ಯಗ್ದರ್ಶನಃ ಸನ್ ಯಾತಿ ಪರಾಂ ಪ್ರಕೃಷ್ಟಾಂ ಗತಿಮ್ ||

(ಭಾಷ್ಯಾರ್ಥ)

ಆದರೆ ಪ್ರಯತ್ನದಿಂದ (ಯತಮಾನಃ) ಬಲವಾಗಿ (ಪಟ್ಟುಹಿಡಿದು) ಅಭ್ಯಾಸ ಮಾಡುತ್ತಿರುವ ಎಂದರ್ಥ. ಅಂಥ ಯೋಗಿಯು ಎಂದರೆ ಜ್ಞಾನಿಯು ಸಂಶುದ್ಧ ಕಿಲ್ಬಿಷನಾಗಿ ಕಿಲ್ಬಿಷವನ್ನು ಶುದ್ಧಿಗೊಳಿಸಿಕೊಂಡು ಪಾಪಗಳನ್ನು ಪರಿಶುದ್ಧಿಮಾಡಿಕೊಂಡು ಅನೇಕ ಜನ್ಮಸಂಸಿದ್ಧನಾಗಿ–ಅನೇಕ ಜನ್ಮಗಳಲ್ಲಿ ಸ್ವಲ್ಪಸ್ವಲ್ಪವಾಗಿ ಸಂಸ್ಕಾರ ಸಮೂಹವನ್ನು ಕೂಡಿಹಾಕಿಕೊಂಡು, ಹಾಗೆ ಅನೇಕ ಜನ್ಮಗಳಲ್ಲಿ ಕೂಡಿಹಾಕಿಕೊಂಡಿರುವ (ಸಂಸ್ಕಾರಗಳಿಂದ) ಸಂಸಿದ್ಧನಾಗಿ–ಅನೇಕ ಜನ್ಮಸಂಸಿದ್ಧನಾಗಿ–ಅದರಿಂದ ಸಮ್ಯಗ್ದರ್ಶನವನ್ನು ಪಡೆದುಕೊಂಡವನಾಗಿ ಪರವಾದ ಹೆಚ್ಚಿನ ಗತಿಯನ್ನು ಹೊಂದುವನು.

**ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।**
**ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ||**

೪೬. ತಪಸ್ವಿಗಳಿಗಿಂತಲೂ ಯೋಗಿಯು ಹೆಚ್ಚಿನವನು, ಜ್ಞಾನಿಗಳಿಗಿಂತಲೂ ಹೆಚ್ಚಿನವನೆಂದು (ನನ್ನ) ಮತವು. ಯೋಗಿಯು ಕರ್ಮಿಗಳಿಗಿಂತಲೂ ಹೆಚ್ಚಿನವನು. ಆದ್ದರಿಂದ ಎಲೈ ಅರ್ಜುನನೆ, ಯೋಗಿಯಾಗು.

(ಭಾಷ್ಯ)

೪೪೩. ಯಸ್ಮಾದೇವಂ ತಸ್ಮಾತ್ ತಪಸ್ವಿಭ್ಯಃ ಅಧಿಕಃ ಯೋಗೀ । ಜ್ಞಾನಿಭ್ಯೋಽಪಿ । ಜ್ಞಾನಮ್ ಅತ್ರ ಶಾಸ್ತ್ರಾರ್ಥಪಾಂಡಿತ್ಯಮ್ ತದ್ವದ್ಭ್ಯೋಽಪಿ ಮತಃ ಜ್ಞಾತಃ ಅಧಿಕಃ ಶ್ರೇಷ್ಠಃ ಇತಿ । ಕರ್ಮಿಭ್ಯಃ । ಅಗ್ನಿಹೋತ್ರಾದಿ ಕರ್ಮ ತದ್ವದ್ಭ್ಯಃ ಅಧಿಕಃ ಯೋಗೀ ವಿಶಿಷ್ಟಃ ಯಸ್ಮಾತ್ ತಸ್ಮಾತ್ ಯೋಗೀ ಭವ ಅರ್ಜುನ ||

(ಭಾಷ್ಯಾರ್ಥ)

ಹೀಗಿರುವದರಿಂದ ಯೋಗಿಯು ತಪಸ್ವಿಗಳಿಗಿಂತಲೂ ಹೆಚ್ಚಿನವನು, ಜ್ಞಾನಿ

---

1. 'ಪ್ರಯತನಾತ್' ಎಂದು ಇದರ ಮುಂದೆ ಮೈ|| ಮ|| ; ಮ||[1] ಪಾಠದಲ್ಲಿ ಯತಮಾನಸ್ತು ಎಂದಿದೆ.

2. 'ಅಧಿಕತರಂ' ಮೈ|| ಗು||

3. ಈ ಮಾತು ಕೆಲವು ಪಾಠಗಳಲ್ಲಿಲ್ಲ.

ಗಳಿಗಿಂತಲೂ (ಹೆಚ್ಚಿನವನು). ಇಲ್ಲಿ ಜ್ಞಾನವೆಂದರೆ ಶಾಸ್ತ್ರಾರ್ಥವನ್ನು ತಿಳಿದಿರುವದು.[1] ಅದನ್ನುಳ್ಳವರಿಗಿಂತಲೂ ಹೆಚ್ಚಿನವನು, ಶ್ರೇಷ್ಠನು ಎಂದು (ನನ್ನ) ಮತವು ಅಭಿಪ್ರಾಯವು. ಕರ್ಮಿಗಳಿಗಿಂತಲೂ (ಹೆಚ್ಚಿನವನು). ಅಗ್ನಿಹೋತ್ರವೇ ಮುಂತಾದದ್ದು ಕರ್ಮವು. ಅದನ್ನು ಮಾಡುವವರಿಗಿಂತಲೂ[2] ಹೆಚ್ಚಿನವನು, ಶ್ರೇಷ್ಠನು ಹೀಗಿರುವದರಿಂದ ಅರ್ಜುನನೆ, ಯೋಗಿಯಾಗು.

**ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾ ।**
**ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ**

೪೭. ಯೋಗಿಗಳಲ್ಲೆಲ್ಲ ನನ್ನಲ್ಲಿರುವ ಅಂತರಾತ್ಮದಿಂದ ಕೂಡಿ ಯಾವನು ಶ್ರದ್ಧಾವಂತನಾಗಿ ಭಜಿಸುವನೋ ಅವನು ಯುಕ್ತತಮನೆಂದು ನನ್ನ ಮತವು.

(ಭಾಷ್ಯ)

೪೪೩. ಯೋಗಿನಾಮಪಿ ಸರ್ವೇಷಾಂ ರುದ್ರಾದಿತ್ಯಾದಿಧ್ಯಾನಪರಾಣಾಂ[3] ಮಧ್ಯೇ ಮದ್ಗತೇನ ಮಯಿ ವಾಸುದೇವೇ ಸಮಾಹಿತೇನ ಅನ್ತರಾತ್ಮನಾ ಅನ್ತಃಕರಣೇನ ಶ್ರದ್ಧಾವಾನ್ ಶ್ರದ್ದಧಾನಃ ಸನ್ ಭಜತೇ ಸೇವತೇ ಯಃ ಮಾಂ ಸಃ ಮೇ ಮಮ ಯುಕ್ತತಮಃ ಅತಿಶಯೇನ ಯುಕ್ತಃ ಮತಃ ಅಭಿಪ್ರೇತಃ ಇತಿ ॥

(ಭಾಷ್ಯಾರ್ಥ)

ರುದ್ರ, ಆದಿತ್ಯ-ಮುಂತಾದ (ದೇವತೆಗಳನ್ನು) ಧ್ಯಾನಮಾಡುವದರಲ್ಲಿ ನಿರತರಾಗಿರುವ ಯೋಗಿಗಳಲ್ಲೆಲ್ಲ **ವಾಸುದೇವ**ನಾದ[1] ನನ್ನಲ್ಲಿಯೇ ಅಂತರಾತ್ಮವನ್ನು ಎಂದರೆ ಅಂತಃಕರಣವನ್ನು ನಿಲ್ಲಿಸಿ ಶ್ರದ್ಧಾವಂತನಾಗಿ ಶ್ರದ್ಧೆಯನ್ನು ಮಾಡುವವನಾಗಿ ಯಾವಾತನು ನನ್ನನ್ನು ಭಜಿಸುತ್ತಿರುವನೋ ಸೇವಿಸುತ್ತಿರುವನೋ ಅವನು (ಮೇ = ಮಮ) ನನಗೆ ಯುಕ್ತತಮನು ಹೆಚ್ಚಿನ ಯುಕ್ತನು ಎಂದು (ನನ್ನ) ಮತವು ಅಭಿಪ್ರಾಯವು

ಇತಿ ಶ್ರೀಮದ್ಭಗವದ್ಗೀತಾಭಾಷ್ಯೇ ಧ್ಯಾನಯೋಗೋ ನಾಮ ಷಷ್ಠೋಽಧ್ಯಾಯಃ

---

1 ಯೋಗಿಯು ನನ್ನನ್ನು ಭಜಿಸುತ್ತಿರುವನೆಂದು ಮುಂದಿನ ಶ್ಲೋಕದಲ್ಲಿಯೂ ಅದರಿಂದ ಜ್ಞಾನವಾಗುವದೆಂದು ಮುಂದಿನ ಅಧ್ಯಾಯದಲ್ಲಿಯೂ ಹೇಳಿರುವದರಿಂದ ಜ್ಞಾನವೆಂದರೆ ಶಾಸ್ತ್ರಾರ್ಥದ ತಿಳಿವಳಿಕೆ ಎಂದೇ ಅರ್ಥವನ್ನು ಮಾಡಬೇಕು,

2. ಕರ್ಮಿಗಳಿಗಿಂತಲೂ ಹೆಚ್ಚೆಂದದ್ದರಿಂದ ಯೋಗಿಗೆ ಕರ್ಮವಿಲ್ಲವೆಂದಾಯಿತು.

3 'ರುದ್ರಾದಿತ್ಯಾದಿಪರಾಯಣಾಮ್' ಮೈ ॥; 'ಪರಾಯಣಾನಾಮ್' ಮು॥

# ಆರನೆಯ ಅಧ್ಯಾಯದ ಸಾರ

೧-೩. ಶ್ರೀಕೃಷ್ಣನು ಹೇಳಿದ್ದೇನೆಂದರೆ :—ಎಲೈ ಅರ್ಜುನನೆ, ಕರ್ಮಫಲವನ್ನು ಬಯಸದೆ ನಿತ್ಯಕರ್ಮವನ್ನು ಮಾಡುತ್ತಿರುವವನೇ ಸಂನ್ಯಾಸಿಯು, ಅವನೇ ಯೋಗಿಯು ; ಗಾರ್ಹಪತ್ಯವೇ ಮುಂತಾದ ಅಗ್ನಿಗಳನ್ನೂ ಅಗ್ನಿಗಳನ್ನು ಬಯಸದ ತಪಸ್ಸು, ದಾನ_ಮುಂತಾದ ಕ್ರಿಯೆಗಳನ್ನೂ ಬಿಟ್ಟವನು ಮಾತ್ರ ಸಂನ್ಯಾಸಿಯೆಂದೂ ಯೋಗಿಯೆಂದೂ ತಿಳಿಯಬೇಡ. ಸಂಕಲ್ಪಗಳನ್ನು ಬಿಡದವನು ಯಾವನೂ ಸಂನ್ಯಾಸಿಯಾಗಲಾರನಾದ್ದರಿಂದ ಫಲತ್ಯಾಗಪೂರ್ವಕ ವಾಗಿ ಮಾಡುವ ಕರ್ಮವು ಸಂನ್ಯಾಸವೆಂದೇ ತಿಳಿಯಬೇಕು. ಧ್ಯಾನಯೋಗಕ್ಕೆ ತಕ್ಕ ಯೋಗ್ಯತೆ ಯನ್ನು ಸಂಪಾದಿಸಬೇಕೆನ್ನುವವನಿಗೆ ಕರ್ಮವೇ ಸಾಧನವು ; ಧ್ಯಾನಯೋಗಕ್ಕೆ ತಕ್ಕವನಾದ ಮೇಲೆ ನಿಜವಾಗಿ ಯೋಗಾರೂಢನೆನ್ನಿಸಿಕೊಳ್ಳುವದಕ್ಕೆ ಸಂನ್ಯಾಸವೇ ಸಾಧನವು.

೪-೯. ಶಬ್ದಸ್ಪರ್ಶಾದಿವಿಷಯಗಳಲ್ಲಾಗಲಿ ನಿತ್ಯನೈಮಿತ್ತಿಕಾದಿಕರ್ಮಗಳಲ್ಲಾಗಲಿ ಸಂಗ ವುಂಟಾಗದಂತೆ ಸರ್ವಸಂಕಲ್ಪಗಳನ್ನು ಬಿಟ್ಟವನು ಯೋಗಾರೂಢನೆನಿಸುವನು. ವಿವೇಕಿ ಯಾದವನು ಹೇಗಾದರೂ ಮಾಡಿ ಯೋಗಾರೂಢನಾಗಿ ಸಂಸಾರದ ಅನರ್ಥದಿಂದ ತನ್ನನ್ನು ತಾನು ಉದ್ಧಾರಮಾಡಿಕೊಳ್ಳಬೇಕು, ಇಲ್ಲದಿದ್ದರೆ ತನಗೆತಾನೇ ಅಧಿಕಾರವನ್ನು ಮಾಡಿಕೊಂಡವ ನಾಗುವನು. ದೇಹೇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ಶಾಸ್ತ್ರಜ್ಞಾನವನ್ನೂ ಅದರಂತೆ ಅನುಭವವನ್ನೂ ಹೊಂದಿ ಹೊರಗೆ ಕಾಣುವ ವಿಷಯಗಳಲ್ಲಿಯೂ ಜನರಲ್ಲಿಯೂ ಸಮಬುದ್ಧಿ ಯುಳ್ಳವನಾಗಿ ಮನಸ್ಸಿನಲ್ಲಿ ಏರುಪೇರಿಲ್ಲದವನೇ ಯೋಗಾರೂಢನು, ಯುಕ್ತನು.

೧೦-೧೬. ಇಂಥ ಉತ್ತಮಸ್ಥಿತಿಯನ್ನು ಹೊಂದುವದಕ್ಕಾಗಿ ರಹಸ್ಯದಲ್ಲಿ ಒಬ್ಬನೇ ಇದ್ದುಕೊಂಡು ದೇಹೇಂದ್ರಿಯಮನಸ್ಸುಗಳನ್ನು ಹಿಡಿತದಲ್ಲಿಟ್ಟುಕೊಂಡು ಯೋಗವನ್ನು ಮಾಡು ತ್ತಿರಬೇಕು. ಶುಚಿಯಾದ ಸ್ಥಳದಲ್ಲಿ ಸ್ಥಿರವಾದ ಆಸನವನ್ನು ಅಳವಡಿಸಿಕೊಂಡು ಶರೀರವನ್ನು ನೆಟ್ಟಗೆ ನಿಲ್ಲಿಸಿಕೊಂಡು ಆತ್ಮನಲ್ಲಿಯೇ ಮನಸ್ಸನ್ನು ಇರಿಸಿಕೊಂಡಿರಬೇಕು, ಪರಮಾತ್ಮನನ್ನೇ ತತ್ಪರತೆಯಿಂದ ಚಿಂತಿಸುತ್ತಿರಬೇಕು. ಹೀಗೆ ಯಾವಾಗಲೂ ಯೋಗವನ್ನು ಮಾಡುತ್ತಿರುವವ ನಿಗೆ ಯೋಗಫಲವಾದ ಪರಮಶಾಂತಿಯು ದೊರಕುತ್ತದೆ. ಸಾಧಕನಾಗಿರುವವನು ಆಹಾರ ವಿಹಾರಗಳಲ್ಲಿಯೂ ಎಚ್ಚರನಿದ್ರೆಗಳಲ್ಲಿಯೂ ಮಿತವಾಗಿರುವ ನಿಯಮವನ್ನು ಅನುಸರಿಸು ತ್ತಿದ್ದರೆ ಯೋಗವು ಫಲಕಾರಿಯಾಗುವದು.

೧೮-೨೬. ಯುಕ್ತನಾದವನಿಗೆ ಚಿತ್ತವು ಆತ್ಮನಲ್ಲಿಯೇ ನಿಂತುಬಿಟ್ಟಿರುತ್ತದೆ. ಆತ್ಮ ದರ್ಶನದಿಂದ ಅವನ ಮನಸ್ಸು ತೃಪ್ತವಾಗಿರುವದು. “ಬ್ರಹ್ಮಾನಂದವನ್ನು ಕಂಡುಕೊಂಡಿರುವ ಈತನು ತತ್ತ್ವವನ್ನು ಬಿಟ್ಟು ಅತ್ತಿತ್ತ ಸರಿಯುವದಿಲ್ಲ ; ಅದಕ್ಕಿಂತ ಹೆಚ್ಚಿನ ಲಾಭವೊಂದಿರುವ ದೆಂದು ಎಣಿಸುವದಿಲ್ಲ ; ಹೊರಗಿನ ಎಂಥ ದುಃಖದಿಂದಲೂ ಅಲುಗಾಡದೆ ಇರುವನು. ನಿಶ್ಚಯವಾದ ಮನಸ್ಸಿನಿಂದ ಬೇಸರವಿಲ್ಲದೆ ಪ್ರಯತ್ನಮಾಡುತ್ತಾ ಸಕಲ ಕಾಮಗಳನ್ನೂ ತೊರೆದು

ಅಯಾ ವಿಷಯಗಳಿಂದ ಇಂದ್ರಿಯಗಳನ್ನು ಜಗ್ಗಿ ಆತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸುವದಕ್ಕೆ ಹವಣಿಸುತ್ತಿರುವವನು ಮಾತ್ರ ಈ ಸ್ಥಿತಿಯನ್ನು ಪಡೆಯುವನು.

೨೭-೩೨. ಯೋಗವು ಸಿದ್ಧಿಯಾದರೆ ಉತ್ತಮವಾದ ಸುಖವು ವಶವಾಗುವದು, ಬ್ರಹ್ಮವನ್ನು ಮುಟ್ಟಿದಂತಾಗುವದು ; "ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳಲ್ಲಿ ಒಬ್ಬ ಪರಮಾತ್ಮನೇ ಇರುವನು, ಅವನೇ ನಾನು" ಎಂಬ ಉತ್ತಮವಾದ ಜ್ಞಾನವು ಬರುವದು. ವ್ಯವಹಾರದಲ್ಲಿ ಸರ್ವಪ್ರಾಣಿಗಳಿಗೂ ತನ್ನಂತೆಯೇ ಸುಖವು ಬೇಕು, ದುಃಖವು ಬೇಡ ಎಂಬುದು ಮನದಟ್ಟಾಗಿ ಎಲ್ಲರಲ್ಲಿಯೂ ಸಮಬುದ್ಧಿಯು ಏರ್ಪಡುವದು.

೩೩-೩೬. "ಮನಸ್ಸು ಅತಿಚಂಚಲವಾಗಿರುವದರಿಂದ ಅದನ್ನು ಹರಿದಾಡದಂತೆ ಆತ್ಮನಲ್ಲಿಯೇ ನಿಲ್ಲಿಸಿಕೊಳ್ಳುವದು ಗಾಳಿಯನ್ನು ಹಿಡಿದು ನಿಲ್ಲಿಸುವ ಪ್ರಯತ್ನದಂತೆ ದುಷ್ಕರವಲ್ಲವೆ?" ಎಂದು ಅರ್ಜುನನು ಕೇಳಿದ್ದಕ್ಕೆ ಭಗವಂತನು ಕೊಟ್ಟ ಉತ್ತರವಿದು. ಮನಸ್ಸನ್ನು ಬಿಗಿಹಿಡಿಯುವದು ಕಷ್ಟವೇ ಸರಿ ; ಆದರೆ ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಅದನ್ನು ವಶಪಡಿಸಿಕೊಳ್ಳಬಹುದು.

೩೭-೪೫. "ಯೋಗವನ್ನು ಮಾಡುತ್ತಿರುವವನಿಗೆ ಪೂರ ಸಿದ್ಧಿಯಾಗುವದರೊಳಗೆ ಅವನಿಗೆ ಮರಣವು ಬಂದೊದಗಿದರೆ, ಆಗ ಚಿತ್ತವು ಕದಲಿ ಯೋಗಭ್ರಷ್ಟನಾಗಬಹುದು. ಈ ಮೊದಲೇ ಯೋಗಿಯು ಕರ್ಮಸಂನ್ಯಾಸವನ್ನು ಮಾಡಿಬಿಟ್ಟಿರುವದರಿಂದ, ಕರ್ಮದ ಫಲವೂ ಇಲ್ಲವೆ, ಯೋಗವು ಸಿದ್ಧಿಯಾಗದಿರುವದರಿಂದ ಜ್ಞಾನವೂ ಪ್ರಾಪ್ತವಾಗದೆ, ಅವನು ಮುಂಗಾಣದೆ ಹೋಗುವನಲ್ಲವೆ? ಅವನಿಗೆ ಎಂಥ ಗತಿಯಾಗುವದು?" ಎಂಬ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ಹೇಳಿದ ಉತ್ತರವೇನೆಂದರೆ. ಅಂಥ ಯೋಗಿಗೆ ಇಹದಲ್ಲಿ ಯೋಗದ ಅಭ್ಯಾಸದಿಂದ ಆಗಿರುವ ಸುಖವುಂಟು, ಪರದಲ್ಲಿ ಪುಣ್ಯಕರ್ಮಗಳನ್ನು ಮಾಡಿದವರಿಗೆ ಸಿಕ್ಕುವ ಉತ್ತಮಲೋಕಗಳು ದೊರೆಯುವವು. ಮತ್ತೆ ಅವನು ಹುಟ್ಟುವಾಗ ಶುಚಿಯಾಗಿರುವ ಶ್ರೀಮಂತರ ಮನೆಯಲ್ಲಿ ಹುಟ್ಟಿ ಸುಖವನ್ನು ಅನುಭವಿಸುವನು ಅಥವಾ ಯೋಗಾಭ್ಯಾಸದ ಸಂಸ್ಕಾರವು ಬಲವಾಗಿದ್ದರೆ ಒಳ್ಳೆಯ ವಿವೇಕಿಗಳಾದ ಯೋಗಿಗಳ ಮನೆಯಲ್ಲಿಯೇ ಜನಿಸಿ ಹಿಂದಿನ ಸಂಸ್ಕಾರದಿಂದಲೇ ಯೋಗವನ್ನು ಅಭ್ಯಾಸಮಾಡಿ ಯೋಗಮಾರ್ಗದಲ್ಲಿ ಮುಂದುವರಿಯುತ್ತಾ ತಕ್ಕಷ್ಟು ಪ್ರಯತ್ನವು ಆಳವಟ್ಟ ಬಳಿಕ ಮುಂದಿನ ಜನ್ಮದಲ್ಲಿ ಯೋಗಸಿದ್ಧಿಯನ್ನೂ ಹೊಂದಿ ಪರಗತಿಯನ್ನೈದುವನು.

೪೬-೪೭. ಯೋಗಿಯಾದವನು ತಪಸ್ವಿಗಳಿಗಿಂತಲೂ ಹೆಚ್ಚಿನವನು, ಶಾಸ್ತ್ರಜ್ಞಾನವುಳ್ಳವರಿಗಿಂತಲೂ ಹೆಚ್ಚಿನವನು, ಕರ್ಮಿಗಳಿಗಿಂತಲೂ ಹೆಚ್ಚಿನವನು. ಆದ್ದರಿಂದ ಅರ್ಜುನನೆ, ನೀನು ಯೋಗಿಯಾಗುವದಕ್ಕೆ ಪ್ರಯತ್ನಿಸು ಅದರಲ್ಲಿಯೂ ವಾಸುದೇವನಾದ ನನ್ನನ್ನೇ ಶ್ರದ್ಧೆಯಿಂದ ಭಜಿಸುವ ಯೋಗಿಯಾಗುವದಕ್ಕೆ ಯತ್ನಿಸು ; ಏಕೆಂದರೆ ಯೋಗಿಗಳಲ್ಲೆಲ್ಲ ನನ್ನ ಭಕ್ತನೇ ಹೆಚ್ಚಿನ ಯೋಗಿಯು.

# ಏಳನೆಯ ಅಧ್ಯಾಯ

## (ವಿ ಜ್ಞಾ ನ ಯೋ ೯ ಗ)

## ಪರಮಾತ್ಮತತ್ತ್ವಜ್ಞಾನದ ಹೆಚ್ಚಿಗೆ

೪೪೫. "**ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾ। ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ।**" (೬-೪೭) ಇತಿ ಪ್ರಶ್ನಬೀಜಮ್ ಉಪನ್ಯಸ್ಯ ಸ್ವಯಮೇವ ಈದೃಶಂ ಮದೀಯಂ ತತ್ತ್ವಮ್, ಏವಂ ಮದ್ಗತಾನ್ತರಾತ್ಮಾ ಸ್ಯಾತ್ ಇತ್ಯೇತದ್ ವಿವಕ್ಷುಃ ಶ್ರೀ ಭಗವಾನ್ **ಉವಾಚ**—

(ಭಾಷ್ಯಾರ್ಥ)

"ಯೋಗಿಗಳಲ್ಲೆಲ್ಲ ನನ್ನಲ್ಲಿಯೇ ಅಂತರಾತ್ಮವನ್ನಿಟ್ಟು ಶ್ರದ್ಧೆಯಿಂದ ಯಾವಾತನು ಭಜಿಸುತ್ತಿರುವನೋ ಅವನೇ ಹೆಚ್ಚಿನ ಯೋಗಿಯೆಂದು ನನ್ನ ಮತವು" (೬-೪೭) ಎಂದು ಪ್ರಶ್ನೆಗೆ ಅವಕಾಶವನ್ನು (ಕಲ್ಪಿಸಿ)ಕೊಟ್ಟು "ನನ್ನ ತತ್ತ್ವವೆಂದರೆ ಇಂಥದ್ದು, ನನ್ನಲ್ಲಿಯೇ ಅಂತರಾತ್ಮವನ್ನಿಟ್ಟವನಾಗುವದು ಹೀಗೆ" ಎಂಬುದನ್ನು ತಿಳಿಸಬೇಕೆಂದು ಭಗವಂತನು ತಾನೇ ಇಂತೆಂದನು —

**ಶ್ರೀ ಭಗವಾನ್ ಉವಾಚ—**

**ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಞ್ಜನ್ ಮದಾಶ್ರಯಃ।**
**ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥೧॥**

೧. ಪಾರ್ಥನೆ, ನನ್ನಲ್ಲಿಯೇ ಆಸಕ್ತವಾದ ಮನಸ್ಸಿನಿಂದ ನನ್ನನ್ನೇ ಆಶ್ರಯಿಸಿದವನಾಗಿ ಯೋಗವನ್ನು ಮಾಡುತ್ತಾ ಸಂಶಯವಿಲ್ಲದಂತೆ ಸಮಗ್ರವಾಗಿ ನನ್ನನ್ನು ನೀನು ಹೇಗೆ ತಿಳಿದುಕೊಳ್ಳಬಹುದೋ ಅದನ್ನು ಕೇಳು.

(ಭಾಷ್ಯ)

೪೪೬. ಮಯಿ ವಕ್ಷ್ಯಮಾಣವಿಶೇಷಣೇ ಪರಮೇಶ್ವರೇ ಆಸಕ್ತಂ ಮನಃ ಯಸ್ಯ, ಸಃ ಮಯ್ಯಾಸಕ್ತಮನಾಃ ಹೇ ಪಾರ್ಥ ಯೋಗಂ ಯುಞ್ಜನ್ ಮನಃಸಮಾಧಾನಂ ಕುರ್ವನ್ ಮದಾಶ್ರಯಃ ಅಹಮೇವ ಪರಮೇಶ್ವರಃ ಆಶ್ರಯಃ ಯಸ್ಯ ಸ

ಮದಾಶ್ರಯಃ । ಯೋ ಹಿ ಕಶ್ಚಿತ್[1] ಪುರುಷಾರ್ಥೇನ ಕೇನಚಿತ್ ಅರ್ಥೀ ಭವತಿ[2] ಸಃ ತತ್ಸಾಧನಂ ಕರ್ಮ ಅಗ್ನಿಹೋತ್ರಾದಿ ತಪಃ ದಾನಂ ವಾ ಕಿಂಚಿತ್ ಆಶ್ರಯಂ ಪ್ರತಿಪದ್ಯತೇ ಅಯಂ ತು ಯೋಗೀ ಮಾಮೇವ ಆಶ್ರಯಂ ಪ್ರತಿಪದ್ಯತೇ ಹಿತ್ವಾ ಅನ್ಯತ್ ಸಾಧನಾನ್ತರಂ ಮಯ್ಯೇವ ಆಸಕ್ತಮನಾ ಭವತಿ । ಯಸ್ತ್ವಮ್ ಏವಂ ಭೂತಃ ಸನ್ ಅಸಂಶಯಂ ಸಮಗ್ರಂ ಸಮಸ್ತಂ ವಿಭೂತಿಬಲಶಕ್ತ್ಯೈಶ್ವರ್ಯಾದಿಗುಣ ಸಂಪನ್ನಂ ಮಾಂ ಯಥಾ ಯೇನ ಪ್ರಕಾರೇಣ ಜ್ಞಾಸ್ಯಸಿ ಸಂಶಯಮನ್ತರೇಣ ಏವ ಮೇವ ಭಗವಾನ್ ಇತಿ ತತ್ ಶೃಣು ಉಚ್ಯಮಾನಂ ಮಯಾ ॥

(ಭಾಷ್ಯಾರ್ಥ)

ನನ್ನಲ್ಲಿಯೇ ಎಂದರೆ ಮುಂದೆ ಹೇಳುವ ವಿಶೇಷಣಗಳಿಂದ ಕೂಡಿದ[3] ಪರಮೇಶ್ವರನಲ್ಲಿಯೇ ಆಸಕ್ತಿಯುಳ್ಳ ಮನಸ್ಸಿನಿಂದ ಕೂಡಿದವನಾಗಿರುವವನನ್ನು 'ಮಯ್ಯಾಸಕ್ತಮನಾಃ' ಎಂದರೆ; (ಅಂಥವನಾಗಿ) ಎಲೈ ಪಾರ್ಥನೆ, ಮದಾಶ್ರಯನಾಗಿ ಪರಮೇಶ್ವರನಾದ ನಾನೇ ಯಾವನಿಗೆ ಆಶ್ರಯವೋ ಅವನು ಮದಾಶ್ರಯನು. ಯಾವನೊಬ್ಬನು ಯಾವದಾದರೊಂದು ಪುರುಷಾರ್ಥವನ್ನು ಬಯಸುವವನಾಗಿರುವನೋ ಅವನು ಅದಕ್ಕೆ ಸಾಧನವಾದ ಅಗ್ನಿಹೋತ್ರವೇ ಮುಂತಾದ ಕರ್ಮವನ್ನೋ ತಪಸ್ಸನ್ನೋ ದಾನವನ್ನೋ ಯಾವದಾದರೊಂದನ್ನು ಆಶ್ರಯವನ್ನಾಗಿ ಹೊಂದಿರುತ್ತಾನೆ ಆದರೆ ಈ ಯೋಗಿಯು ನನ್ನನ್ನೇ ಅಂಥ ಆಶ್ರಯವೆಂದು ಹೊಂದಿರುತ್ತಾನೆ,[4] ಬೇರೊಂದು ಸಾಧನವನ್ನು ಒಲ್ಲದೆ ನನ್ನಲ್ಲಿಯೇ ಆಸಕ್ತಿಯಿಟ್ಟ ಮನಸ್ಸಿನವನಾಗಿರುತ್ತಾನೆ. (ಅರ್ಜುನನೆ), ಈ ನೀನು ಇಂಥವನಾಗಿ ಯೋಗವನ್ನು ಮಾಡುತ್ತಾ ಮನಸ್ಸನ್ನು ಸಮಾಧಾನಗೊಳಿಸುತ್ತಾ ಸಂಶಯವಿಲ್ಲದೆ ನನ್ನನ್ನು ಸಮಗ್ರವಾಗಿ ಎಂದರೆ **ವಿಭೂತಿ, ಬಲ, ಶಕ್ತಿ, ಐಶ್ವರ್ಯ ಮುಂತಾದ ಗುಣಸಂಪತ್ತಿಯುಳ್ಳ ನನ್ನನ್ನು** ಪೂರ್ಣವಾಗಿ,[5] ಹೇಗೆ ಎಂದರೆ ಯಾವ ಪ್ರಕಾರದಿಂದ, "ಭಗವಂತನು

1, ಈ ಮಾತು ಮು॥ ವ್ಯಾ॥ಗಳಲ್ಲಿಲ್ಲ.

2. ಮು॥ ವ್ಯಾ॥ಗಳಲ್ಲಿಲ್ಲ.

3. ಜಗತ್ತಿನ ಜನ್ಮಾದಿಗಳಿಗೆ ಕಾರಣನಾಗಿ ತ್ರಿಗುಣಾತೀತನಾಗಿ, ಜಗತ್ತಿಗೆಲ್ಲ ಆಧಾರನಾಗಿ, ಜಗತ್ತಿನಲ್ಲಿರುವ ಸಾರರೂಪವಾದ ವಸ್ತುಗಳೆಲ್ಲವೂ ತನ್ನ ವಿಭೂತಿಗಳಾಗಿ ಉಳ್ಳ.

4. ಪರಮಾತ್ಮನನ್ನೇ ಯೋಗಸಿದ್ಧಿಗೆ ಆಶ್ರಯವಾಗಿಟ್ಟುಕೊಂಡಿರುತ್ತಾನೆ. ಪರಮಾತ್ಮನೇ ಸಾಧನ, ಪರಮಾತ್ಮನೇ ಫಲ-ಎಂದರ್ಥ.

5. ಸಗುಣನಿರ್ಗುಣರೂಪಗಳೆರಡರಿಂದ ಕೂಡಿ.

ಹೀಗೆಯೇ ಇರುವನು" ಎಂದು (ಯಾವ) ಸಂಶಯವೂ ಇಲ್ಲದೆ ತಿಳಿದುಕೊಳ್ಳುವೆಯೋ ಅದನ್ನು ನಾನು ಹೇಳುವೆನು ಕೇಳು.

**ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।**
**ಯಜ್ಜ್ಞಾತ್ವಾ ನೇಹ ಭೂಯೋಽನ್ಯಜ್ಜ್ಞಾತವ್ಯಮವಶಿಷ್ಯತೇ ॥೨॥**

೨. ವಿಜ್ಞಾನದಿಂಡೊಡಗೂಡಿದ ಜ್ಞಾನವನ್ನು ನಿನಗೆ ನಾನು ನಾನು ಸ್ವಲ್ಪವೂ ಉಳಿಯದಂತೆ ಹೇಳುವೆನು. ಅದನ್ನು ತಿಳಿದರೆ ಇಲ್ಲಿ ಮತ್ತೆ ತಿಳಿಯಬೇಕಾದದ್ದು ಉಳಿಯುವದಿಲ್ಲ.

(ಭಾಷ್ಯ)

೪೪೭. **ತಚ್ಚ** ಮದ್ವಿಷಯಂ **ಜ್ಞಾನಂ ತೇ** ತುಭ್ಯಮ್ **ಅಹಂ ವಿಜ್ಞಾನಸಹಿತಂ** ಸ್ವಾನುಭವಯುಕ್ತಮ್ **ಇದಂ ವಕ್ಷ್ಯಾಮಿ** ಕಥಯಿಷ್ಯಾಮಿ **ಅಶೇಷತಃ** ಕಾರ್ತ್ಸ್ನ್ಯೇನ । ತತ್ ಜ್ಞಾನಂ ವಿವಕ್ಷಿತಂ ಸ್ತೌತಿ ಶ್ರೋತುಃ ಅಭಿಮುಖೀಕರಣಾಯ। **ಯತ್ ಜ್ಞಾತ್ವಾ** ಯತ್ ಜ್ಞಾನಂ ಜ್ಞಾತ್ವಾ **ನ ಇಹ ಭೂಯಃ** ಪುನಃ **ಅನ್ಯತ್ ಜ್ಞಾತವ್ಯಂ** ಪುರುಷಾರ್ಥಸಾಧನಮ್ **ಅವಶಿಷ್ಯತೇ** ನ ಅವಶಿಷ್ಟಂ ಭವತಿ ಇತಿ । ಮತ್ತತ್ತ್ವಜ್ಞಃ ಯಃ ಸ ಸರ್ವಜ್ಞೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಆ ನನ್ನ ವಿಷಯವಾದ ಜ್ಞಾನವನ್ನು ನಿನಗೆ (ತೇ=ತುಭ್ಯಮ್) **ವಿಜ್ಞಾನದೊಡನೆ** ಎಂದರ ತನ್ನ ಅನುಭವದಿಂದ ಕೂಡಿದ (**ಜ್ಞಾನವನ್ನು**)[1] ಸ್ವಲ್ಪವೂ ಉಳಿಯದಂತೆ ಸಂಪೂರ್ಣವಾಗಿ ಹೇಳುವೆನು, ತಿಳಿಸುವೆನು. (ತಾನು) ಹೇಳಬೇಕೆಂದಿರುವ ಆ ಜ್ಞಾನವನ್ನು ಕೇಳುವ(ಅರ್ಜುನನನ್ನು) ತನ್ನ ಕಡೆಗೆ ತಿರುಗಿಸಿಕೊಳ್ಳುವದಕ್ಕಾಗಿ ಹೊಗಳುತ್ತಾನೆ, ಯಾವದನ್ನು ತಿಳಿದುಕೊಂಡರೆ ಎಂದರೆ ಯಾವ (ಆ) ಜ್ಞಾನವನ್ನು ತಿಳಿದುಕೊಂಡರೆ ಇಲ್ಲಿ ಮತ್ತೆ ಇನ್ನೂ ಬೇರೆಯಾಗಿ ತಿಳಿದುಕೊಳ್ಳಬೇಕಾದ ಪುರುಷಾರ್ಥಸಾಧನವು ಉಳಿಯುವದಿಲ್ಲ, ಮಿಕ್ಕಿರುವದಿಲ್ಲ, ಎಂದು (ಹೊಗ

---

1. ಜ್ಞಾನವೆಂದರೆ ಶಾಸ್ತ್ರಾರ್ಥಜ್ಞಾನ, ವಿಜ್ಞಾನವೆಂದರೆ ಸ್ವಾನುಭವ_ಎಂದು ೪-೪೧ರ ಭಾಷ್ಯದಲ್ಲಿ ಹೇಳಿರುವದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಮುಂ.ಭಾ. ೨-೨-೮ (ಭಾ. ಭಾ. ೮೧); ಛಾ. ಭಾ. ೮-೬-೭; ಬೃ. ಭಾ. ೧-೪-೭.

ಳಿರುತ್ತಾನೆ). ನನ್ನ ತತ್ತ್ವವನ್ನು ಯಾವನು ತಿಳಿದವನೋ ಅವನು ಎಲ್ಲವನ್ನೂ ತಿಳಿದವನಾಗುವನು ಎಂದರ್ಥ.[1]

(ಭಾಷ್ಯ)

೪೪೮. ಅತಃ ವಿಶಿಷ್ಟಫಲತ್ವಾತ್ ದುರ್ಲಭಂ ಜ್ಞಾನಮ್ । ಕಥಮ್ ಇತಿ? ಉಚ್ಯತೇ—

(ಭಾಷ್ಯಾರ್ಥ)

ಆದ್ದರಿಂದ (ಹೀಗೆ) ಅಸಾಧಾರಣಫಲವುಳ್ಳದ್ದಾದ್ದರಿಂದ (ಆ) ಜ್ಞಾನವು ದೊರೆಯುವದು ಕಷ್ಟ. ಹೇಗೆ? ಎಂದರೆ ಹೇಳುತ್ತೇನೆ:—

**ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿ ಸಿದ್ಧಯೇ ।**
**ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥ ೩ ॥**

೩. ಸಾವಿರ ಮನುಷ್ಯರಲ್ಲಿ ಯಾವನೋ ಒಬ್ಬನು ಸಿದ್ಧಿಗಾಗಿ ಯತ್ನವನ್ನು ಮಾಡುತ್ತಾನೆ. ಯತ್ನವನ್ನು ಮಾಡುವ ಸಿದ್ಧರಲ್ಲಿಯೂ ಯಾವನೋ ಒಬ್ಬನು ನನ್ನನ್ನು ಸರಿಯಾಗಿ ತಿಳಿದುಕೊಳ್ಳುತ್ತಾನೆ.

(ಭಾಷ್ಯ)

೪೪೯. ಮನುಷ್ಯಾಣಾಂ ಮಧ್ಯೇ ಸಹಸ್ರೇಷು ಅನೇಕೇಷು ಕಶ್ಚಿತ್ ಯತತಿ ಪ್ರಯತ್ನಂ ಕರೋತಿ ಸಿದ್ಧಯೇ ಸಿದ್ಧ್ಯರ್ಥಮ್ । ತೇಷಾಂ ಯತತಾಮಪಿ ಸಿದ್ಧಾನಾಮ್—ಸಿದ್ಧಾ ಏವ ಹಿ ತೇ ಯೇ ಮೋಕ್ಷಾಯ ಯತನ್ತೇ ತೇಷಾಂ—ಕಶ್ಚಿದೇವ ಮಾಂ ವೇತ್ತಿ ತತ್ತ್ವತಃ ಯಥಾವತ್ ॥

(ಭಾಷ್ಯಾರ್ಥ)

ಮನುಷ್ಯರಲ್ಲಿ ಸಾವಿರದೊಳಗೆ ಎಂದರೆ ಅನೇಕರೊಳಗೆ ಯಾವನೋ ಒಬ್ಬನು ಸಿದ್ಧಿಗಾಗಿ ಎಂದರೆ (ತನಗೆ) ಸಿದ್ಧಿಯಾಗಬೇಕೆಂದು ಯತ್ನಮಾಡುತ್ತಾನೆ, ಪ್ರಯತ್ನವನ್ನು ಮಾಡುತ್ತಾನೆ. ಹಾಗೆ ಯತ್ನಿಸುವ ಸಿದ್ಧರಲ್ಲಿಯೂ—ಯಾರು ಮೋಕ್ಷಕ್ಕಾಗಿ ಯತ್ನಿಸುತ್ತಿರುವರೋ ಅವರು ಸಿದ್ಧರೇ ತಾನೆ?[2] ಆ (ಸಿದ್ಧರೊಳಗೂ)—ಯಾವನೋ ಒಬ್ಬನು ನನ್ನನ್ನು ಸರಿಯಾಗಿ ಎಂದರೆ ಹೇಗೆ ಇರುವೆನೋ ಹಾಗೆ ತಿಳಿದುಕೊಳ್ಳುವನು.

---

1. ಮುಂ. ಭಾ. ೧-೧-೩; ಛಾ. ಭಾ. ೬-೧-೩. ಆತ್ಮನಲ್ಲಿಯೇ ಎಲ್ಲವೂ ಕಲ್ಪಿತವಾಗಿರುವದರಿಂದ ಆತ್ಮನೇ ಅದೆಲ್ಲದರ ತತ್ತ್ವ; ಅದನ್ನು ತಿಳಿದರೇ ಸರ್ವಜ್ಞನು.

2. ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆಯನ್ನು ಪಡೆದುಕೊಂಡವರನ್ನೇ ಇಲ್ಲಿ ಸಿದ್ಧರೆಂದು ಕರೆದಿದೆ ಎಂದು ಭಾವ. ೧೮-೫೦ನೆಯ ಶ್ಲೋಕದ ಅವತರಣಿಕೆಯನ್ನೂ ಭಾಷ್ಯವನ್ನೂ ನೋಡಿ.

# ಭಗವಂತನ ತತ್ತ್ವ

(ಭಾಷ್ಯ)

೪೫೦. ಶ್ರೋತಾರಂ ಪ್ರರೋಚನೇನ ಅಭಿಮುಖೀಕೃತ್ಯ ಆಹ—

(ಭಾಷ್ಯಾರ್ಥ)

(ಜ್ಞಾನದಲ್ಲಿ) ರುಚಿಹುಟ್ಟಿಸುವದರ ಮೂಲಕ ಕೇಳುವ (ಅರ್ಜುನನನ್ನು) ತನ್ನ ಕಡೆಗೆ ಎಳೆದುಕೊಂಡು (ಭಗವಂತನು ಈ ಮಾತನ್ನು) ಹೇಳುತ್ತಾನೆ:—

**ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।**
**ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥ ೪ ॥**

೪. ಭೂಮಿ, ಅಪ್ಪು, ಅನಲ, ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಕಾರ–ಹೀಗೆ ಈ ನನ್ನ ಪ್ರಕೃತಿಯು ಎಂಟು ವಿಧವಾಗಿ ಭಿನ್ನವಾಗಿರುತ್ತದೆ.

(ಭಾಷ್ಯ)

೪೫೧ ಭೂಮಿಃ ಇತಿ ಪೃಥಿವೀತನ್ಮಾತ್ರಮ್ ಉಚ್ಯತೇ, ನ ಸ್ಥೂಲಾ । "ಭಿನ್ನಾ ಪ್ರಕೃತಿರಷ್ಟಧಾ" ಇತಿ ವಚನಾತ್ । ತಥಾ ಅಬಾದಯೋಽಪಿ ತನ್ಮಾತ್ರಾಣ್ಯೇವ ಉಚ್ಯನ್ತೇ । ಆಪಃ ಅನಲಃ ವಾಯುಃ ಖಮ್ । ಮನಃ ಇತಿ ಮನಸಃ ಕಾರಣಮ್ ಅಹಂಕಾರೋ ಗೃಹ್ಯತೇ । ಬುದ್ಧಿಃ ಇತಿ ಅಹಂಕಾರಕಾರಣಂ ಮಹತ್ತತ್ತ್ವಮ್ । ಅಹಂಕಾರಃ ಇತಿ ಅವಿದ್ಯಾಸಂಯುಕ್ತಮ್ ಅವ್ಯಕ್ತಮ್ । ಯಥಾ ವಿಷಸಂಯುಕ್ತಮ್ ಅನ್ನಂ ವಿಷಮ್ ಇತಿ ಉಚ್ಯತೇ, ಏವಮ್ ಅಹಂಕಾರವಾಸನಾವತ್ ಅವ್ಯಕ್ತಂ ಮೂಲಕಾರಣಮ್ ಅಹಂಕಾರ ಇತಿ ಉಚ್ಯತೇ । ಪ್ರವರ್ತಕತ್ವಾತ್ ಅಹಂಕಾರಸ್ಯ । ಅಹಂಕಾರ ಏವ ಹಿ ಸರ್ವಸ್ಯ ಪ್ರವೃತ್ತಿಬೀಜಂ ದೃಷ್ಟಂ ಲೋಕೇ । ಇತಿ ಇಯಂ ಯಥೋಕ್ತಾ ಪ್ರಕೃತಿಃ ಮೇ ಮಮ ಐಶ್ವರೀ ಮಾಯಾಶಕ್ತಿಃ ಅಷ್ಟಧಾ ಭಿನ್ನಾ ಭೇದಮ್ ಆಗತಾ ॥

(ಭಾಷ್ಯಾರ್ಥ)

**ಭೂಮಿ** ಎಂದರೆ **ಪೃಥಿವೀತನ್ಮಾತ್ರೆ**, ಸ್ಥೂಲಭೂತವಲ್ಲ[1] "ಪ್ರಕೃತಿಯು

---

1. ಐದು ಭೂತಗಳೂ ಒಂದರಲ್ಲೊಂದು ಬೆರೆತಿರುವಾಗ ಸ್ಥೂಲಭೂತಗಳೆನಿಸುವವು; ಆಯಾ ಭೂತವು ಮಾತ್ರ ಇರುವದು ತನ್ಮಾತ್ರೆ.

ಎಂಟು ಬಗೆಯಾಗಿರುವದು" ಎಂದು ಇಲ್ಲಿ ಹೇಳಿರುವದರಿಂದ (ಹೀಗೆಂದು ನಿಶ್ಚಿತವಾಗುತ್ತದೆ).[1] ಇದರಂತೆ ಅಪ್ಪು ಮುಂತಾದವುಗಳೆಂದು ಹೇಳಿರುವದೂ ತನ್ಮಾತ್ರೆಗಳನ್ನೇ. **ಅಪ್ಪು, ತೇಜಸ್ಸು, ವಾಯು, ಆಕಾಶ**[2]-(ಎಂದೂ) 'ಮನಸ್ಸು' ಎಂದರೆ ಇಲ್ಲಿ ಮನಸ್ಸಿಗೆ ಕಾರಣವಾದ **ಅಹಂಕಾರವನ್ನು** ತೆಗೆದುಕೊಳ್ಳಬೇಕು; 'ಬುದ್ಧಿ' ಎಂಬ ಮಾತಿನಿಂದ ಅಹಂಕಾರಕ್ಕೆ ಕಾರಣವಾದ **ಮಹತ್ತತ್ತ್ವ**(ವನ್ನು ತೆಗೆದುಕೊಳ್ಳಬೇಕು) 'ಅಹಂಕಾರ' ಎಂಬ ಮಾತಿನಿಂದ ಅವಿದ್ಯಾಸಂಯುಕ್ತವಾದ[3] **ಅವ್ಯಕ್ತವು**.[4] ಹೇಗೆ ವಿಷವು ಬೆರೆದಿರುವ ಅನ್ನವನ್ನು 'ವಿಷ' ಎನ್ನುವರೋ ಹೀಗೆಯೇ ಅಹಂಕಾರವಾಸನೆಯಿಂದ ಕೂಡಿರುವ ಅವ್ಯಕ್ತವನ್ನು ಅಹಂಕಾರ ಎಂದು ಇಲ್ಲಿ ಕರೆದಿರುತ್ತದೆ ಏಕೆಂದರೆ ಅಹಂಕಾರವು ಪ್ರವರ್ತಕವಾಗಿರುತ್ತದೆ.[5] ಅಹಂಕಾರವೇ ಅಲ್ಲವೆ, ಎಲ್ಲಕ್ಕೂ ಪ್ರವೃತ್ತಿಗೆ ಕಾರಣವೆಂದು ಲೋಕದಲ್ಲಿ ಕಂಡುಬಂದಿರುವದು? ಹೀಗೆ (ಮೇ=ಮಮ) ನನ್ನ ಪ್ರಕೃತಿಯು[6] ಈಶ್ವರನಾದ (ನನ್ನ) ಮಾಯೆಯು, ಶಕ್ತಿಯು ಎಂಟು ಬಗೆಯಾಗಿ ಬೇರ್ಪಟ್ಟಿರುವದು, (ಎಂಟು) ಭೇದಗಳಾಗಿರುವದು.

**ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।**
**ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥**

೫. ಇದು ಕೀಳು (ಪ್ರಕೃತಿಯು). ಇದಕ್ಕಿಂತ ಬೇರೆಯಾಗಿರುವ ನನ್ನ ಹೆಚ್ಚಿನ ಪ್ರಕೃತಿಯನ್ನು (ಹೇಳುವೆನು) ತಿಳಿದುಕೊ. ಎಲೈ ಮಹಾ

---

1. ಸ್ಥೂಲಭೂತಗಳು ವಿಕಾರವಾಗಿರುತ್ತವೆ; ತನ್ಮಾತ್ರೆಗಳಂತೆ ಪ್ರಕೃತಿಗಳಲ್ಲ.

2. ಇವು ಐದೂ ತನ್ಮಾತ್ರೆಗಳು.

3. ಅಹಂಕಾರವಾಸನೆಯನ್ನೇ ಇಲ್ಲಿ ಅವಿದ್ಯೆಯೆಂದು ಕರೆದಿದೆ. ಏಕೆಂದರೆ ನಾನು ನನ್ನದು ಎಂದು ತಿಳಿಯುವದೇ ಅವಿದ್ಯೆ

4. ಜಗತ್ತಿನ ಮೂಲಕಾರಣವು.

5 ಇದರಂತೆ ಅವ್ಯಕ್ತವು ಮಿಕ್ಕೆಲ್ಲದಕ್ಕೂ ಪ್ರವರ್ತಕವು, ಎಂದರೆ ಕಾರಣವು.

6 ಅವ್ಯಕ್ತ, ಮಹತ್ತು, ಅಹಂಕಾರ, ತನ್ಮಾತ್ರೆಗಳು—ಈ ಎಂಟೂ ಪ್ರಕೃತಿಗಳು ಎಂದು ಸಾಂಖ್ಯರು ಹೇಳುತ್ತಾರೆ. ಅವ್ಯಕ್ತವು ತ್ರಿಗುಣಾತ್ಮಕವಾಗಿರುತ್ತದೆ, ಅದಕ್ಕೆ ಬೇರೊಂದು ಕಾರಣವಿಲ್ಲ; ಆದರೆ ಅವ್ಯಕ್ತವು ಮಹತ್ತಿಗೆ, ಮಹತ್ತು ಅಹಂಕಾರಕ್ಕೆ, ಅಹಂಕಾರವು ತನ್ಮಾತ್ರೆಗಳಿಗೆ, ಪ್ರಕೃತಿಗಳು—ಎಂದು ಸಾಂಖ್ಯರ ಮತ. ಈ ಎಂಟು ಪ್ರಕೃತಿಗಳೂ ಸಾಂಖ್ಯರು ಹೇಳುವಂತೆ ಸ್ವತಂತ್ರವಾಗಿ ಕಾರಣವಲ್ಲ; ಅವ್ಯಕ್ತವೆಂಬುದು ಅವ್ಯಾಕೃತ. ಮಾಯಾ ಮುಂತಾದ ಹೆಸರುಗಳ ಈಶ್ವರಶಕ್ತಿ—ಎಂಬುದು ವೇದಾಂತಿಗಳ ಮತ. ಸೂ. ಭಾ. ೧-೪-೩.

ಬಾಹುವೆ, (ಅದು) ಜೀವನಾಗಿದ್ದುಕೊಂಡಿರುವದು, ಆದರಿಂದ ಈ ಜಗತ್ತು ಧರಿಸಲ್ಪಟ್ಟಿರುವದು.

(ಭಾಷ್ಯ)

೪೫೨. ಅಪರಾ ನ ಪರಾ ನಿಕೃಷ್ಟಾ ಅಶುದ್ಧಾ ಅನರ್ಥಕರೀ ಸಂಸಾರಬನ್ಧನಾತ್ಮಿಕಾ ಇಯಮ್ । ಇತಃ ಅಸ್ಯಾ ಯಥೋಕ್ತಾಯಾಃ ತು ಅನ್ಯಾಂ ವಿಶುದ್ಧಾಂ ಪ್ರಕೃತಿಂ ಮಮ ಆತ್ಮಭೂತಾಂ ವಿದ್ಧಿ ಮೇ ಪರಾಂ ಪ್ರಕೃಷ್ಟಾಂ ಜೀವಭೂತಾಂ ಕ್ಷೇತ್ರಜ್ಞಲಕ್ಷಣಾಂ ಪ್ರಾಣಧಾರಣನಿಮಿತ್ತಭೂತಾಮ್ ಹೇ ಮಹಾಬಾಹೋ ಯಯಾ ಪ್ರಕೃತ್ಯಾ ಇದಂ ಧಾರ್ಯತೇ ಜಗತ್ ಅನ್ತಃಪ್ರವಿಷ್ಟಯಾ ॥

(ಭಾಷ್ಯಾರ್ಥ)

ಇದು ಅಪರಪ್ರಕೃತಿ, ಹೆಚ್ಚಿನದಲ್ಲದ, ಕೀಳಾದ, ಅಶುದ್ಧವಾದ, ಅನರ್ಥವನ್ನುಂಟುಮಾಡುವ, ಸಂಸಾರಬಂಧನರೂಪವಾದ (ಪ್ರಕೃತಿ[1] ಈ ನಾನು) ಮೇಲೆ ಹೇಳಿರುವ (ಪ್ರಕೃತಿ)ಗಿಂತ ಬೇರೆಯಾಗಿರುವ ವಿಶುದ್ಧವಾಗಿ, ನನ್ನ ಆತ್ಮನಾಗಿರುವ[2] ಪರ (ಪ್ರಕೃತಿಯನ್ನು), ಹೆಚ್ಚಿನ (ಪ್ರಕೃತಿಯನ್ನು) ಜೀವವಾಗಿರುವ ಎಂದರೆ **ಕ್ಷೇತ್ರಜ್ಞಸ್ವರೂಪವಾಗಿ** ಪ್ರಾಣಧಾರಣಕ್ಕೆ ಕಾರಣವಾಗಿರುವ[3] (ಪ್ರಕೃತಿಯನ್ನು) ಎಲೈ ಮಹಾಬಾಹುವೆ, (ಹೇಳುವೆನು) ತಿಳಿದುಕೊ. (ತನ್ನ) ಒಳಹೊಕ್ಕಿರುವ[4] ಆ ಪ್ರಕೃತಿಯಿಂದ ಈ ಜಗತ್ತು ಧರಿಸಲ್ಪಟ್ಟಿರುವದು.

**ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।**
**ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥ ೬ ॥**

೬. ಸರ್ವಭೂತಗಳೂ ಇವುಗಳಿಂದ ಉಂಟಾಗುವವೆಂದು ನಿಶ್ಚಯಿಸು. ನಾನು (ಈ) ಜಗತ್ತಿಗೆಲ್ಲ ಪ್ರಭವನೂ ಪ್ರಲಯನೂ ಆಗಿರುವೆನು.

---

1 ಅವಿದ್ಯಾಕಲ್ಪಿತವಾದ ಈ ಜಡಪ್ರಕೃತಿಯ ಅಭಿಮಾನದಿಂದಲೇ ಜೀವರು ಸಂಸಾರಬಂಧಕ್ಕೆ ಸಿಕ್ಕಿಬಿದ್ದಿರುತ್ತಾರೆ. ಸೂ ಭಾ ೧-೪-೩.

2. ಜಡಶಕ್ತಿಯು ಆತ್ಮನೆಂದಾಗಲಿ, ಆತ್ಮನಿಗಿಂತ ಭಿನ್ನವೆಂದಾಗಲಿ ಹೇಳುವದಕ್ಕೆ ಬಾರದ ಅನಿರ್ವಚನೀಯವು ಸೂ ಭಾ ೧-೪-೩, ೨-೧-೧೪ ಆದರೆ ಜೀವನು ಆತ್ಮನೇ. ಸೂ ಭಾ ೨-೩-೧೬

3 ಜೀವ-ಪ್ರಾಣಧಾರಣೇ ಎಂಬ ಧಾತುವಿನಿಂದ ಜೀವಶಬ್ದವು ಹುಟ್ಟಿದೆ

4 ಪರಮಾತ್ಮನೇ ಜೀವರೂಪದಿಂದ ಒಳಹೊಕ್ಕು ಜಗತ್ತಿನ ನಾಮರೂಪಗಳನ್ನು ಬಿಂಗಡವಾಗಿ ಇಟ್ಟಿರುತ್ತಾನೆಂಮ ಶ್ರುತಿ ಛಾಂ ೬-೩-೨ ಆದ್ದರಿಂದ ಜೀವರೂಪವಾಗುವ ಚಿತ್ಪ್ರಕೃತಿಯು ನಾಮರೂಪವಾಗುವ ಜಡಪ್ರಕೃತಿಗಿಂತ ವಿಲಕ್ಷಣವಾದದ್ದು ಛಾಂ. ೬-೧೪-೧.

(ಭಾಷ್ಯ)

೪೫೩. ಏತದ್ಯೋನೀನಿ ಏತೇ ಪರಾಪರೇ ಕ್ಷೇತ್ರಕ್ಷೇತ್ರಜ್ಞಲಕ್ಷಣೇ ಪ್ರಕೃತೀ ಯೋನಿಃ ಯೇಷಾಂ ಭೂತಾನಾಂ ತಾನಿ ಏತದ್ಯೋನೀನಿ ಭೂತಾನಿ ಸರ್ವಾಣಿ ಇತಿ ಏವಮ್ ಉಪಧಾರಯ ಜಾನೀಹಿ । ಯಸ್ಮಾತ್ ಮಮ ಪ್ರಕೃತೀ ಯೋನಿಃ ಕಾರಣಂ ಸರ್ವಭೂತಾನಾಮ್ ಅತಃ ಅಹಂ ಕೃತ್ಸ್ನಸ್ಯ ಸಮಸ್ತಸ್ಯ ಜಗತಃ ಪ್ರಭವಃ ಉತ್ಪತ್ತಿಃ ಪ್ರಲಯಃ ವಿನಾಶಃ ತಥಾ । ಪ್ರಕೃತಿದ್ವಯದ್ವಾರೇಣ ಅಹಂ ಸರ್ವಜ್ಞಃ ಈಶ್ವರಃ ಜಗತಃ ಕಾರಣಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಸರ್ವ ಭೂತಗಳೂ ಏತದ್ಯೋನಿಗಳು-(ಏತತ್ ಎಂದರೆ) ಈ ಕ್ಷೇತ್ರಕ್ಷೇತ್ರಜ್ಞ ರೂಪವಾಗಿರುವ ಪ್ರಕೃತಿಗಳು ಭೂತಗಳಿಗೆ ಯೋನಿಯಾಗಿರುವದರಿಂದ ಅವು ಏತದ್ಯೋನಿಗಳು-ಎಂದು ಹೀಗೆಂದು ನಿಶ್ಚಯಿಸು, ತಿಳಿದುಕೊ ನನ್ನ ಪ್ರಕೃಗಳೆರಡೂ ಸರ್ವಭೂತಗಳಿಗೂ ಯೋನಿ ಎಂದರೆ ಕಾರಣವಾಗಿರುವವಷ್ಟೆ. ಆದ್ದರಿಂದ ನಾನು (ಈ) ಇಡಿಯ ಜಗತ್ತಿಗೆ ಪ್ರಭವನು ಎಂದರೆ ಹುಟ್ಟು, ಮತ್ತು ಪ್ರಲಯನು ಎಂದರೆ ನಾಶವು. (ಈ) ಎರಡು ಪ್ರಕೃತಿಗಳ ಮೂಲಕವಾಗಿ ಸರ್ವಜ್ಞನಾದ ಈಶ್ವರನಾದ ನಾನು ಜಗತ್ತಿಗೆ ಕಾರಣನು [1] ಎಂದರ್ಥ.

**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।**
**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥ ೭ ॥**

೭. ಧನಂಜಯನೆ, ನನಗಿಂತ ಇನ್ನೂ ಹೆಚ್ಚಿನ ಮತ್ತೊಂದು ಯಾವದೂ ಇರುವದಿಲ್ಲ. ಇದೆಲ್ಲವೂ ನನ್ನಲ್ಲಿ ದಾರದಲ್ಲಿ ರತ್ನಗಳ ಗುಂಪುಗಳಂತೆ ಪೋಣಿಸಲ್ಪಟ್ಟಿರುತ್ತದೆ.

(ಭಾಷ್ಯ)

೪೫೪. ಯತಃ ತಸ್ಮಾತ್ [2] ಮತ್ತಃ ಪರಮೇಶ್ವರಾತ್ ಪರತರಮ್ ಅನ್ಯತ್ ಕಾರಣಾನ್ತರಂ ಕಿಂಚಿತ್ ನಾಸ್ತಿ ನ ವಿದ್ಯತೇ । ಅಹಮೇವ ಜಗತ್ಕಾರಣಮ್

---

1. ಪ್ರಕೃತಿಗಳು ನನಗಿಂತ ಭಿನ್ನವಲ್ಲ, ಅವುಗಳ ನಿಜವು ನಾನೇ; ಆದ್ದರಿಂದ ನಾನೇ ಜಗತ್ಕಾರಣನು. ಸೂ. ಭಾ. ೨-೧-೧೪. ಸಮಸ್ತ ಜಗತ್ತಿಗೂ ಕಾರಣನಾಗಿರುವದರಿಂದ ಅದರ ಸ್ವರೂಪವನ್ನರಿಯುವ ಚೇತನನಾಗಿರಬೇಕು; ಆದ್ದರಿಂದ ಸರ್ವಜ್ಞನಾಗಿರಬೇಕು ಸೂ. ಭಾ ೧-೧-೨.

2. ' ಯಸ್ಮಾದೇವಂ ತಸ್ಮಾತ್ ' ಮು॥ ಮೈ॥

ಇತ್ಯರ್ಥಃ । ಹೇ ಧನಞ್ಜಯ । ಯಸ್ಮಾತ್ ಏವಮ್ ತಸ್ಮಾತ್ ಮಯಿ ಪರಮೇಶ್ವರೇ[1] ಸರ್ವಮ್[2] ಇದಂ ಜಗತ್ ಪ್ರೋತಮ್ ಅನುಸ್ಯೂತಮ್, ಅನುಗತಮ್, ಗ್ರಥಿತಮ್ ಇತ್ಯರ್ಥಃ । ದೀರ್ಘತನ್ತುಷು ಪಟವತ್[3] ಸೂತ್ರೇ ಚ ಮಣಿಗಣಾ ಇವ ॥

(ಭಾಷ್ಯಾರ್ಥ)

ಹೀಗಿರುವ ಕಾರಣ ಪರಮೇಶ್ವರನಾದ ನನಗಿಂತ ಹೆಚ್ಚಿನ ಬೇರೊಂದು ಕಾರಣಾಂತರವು ಯಾವದೂ ಇರುವದಿಲ್ಲ[4], ಇಲ್ಲ ನಾನೇ ಜಗತ್ಕಾರಣವು ಎಲೈ ಧನಂಜಯನೆ, ಹೀಗಿರುವದಷ್ಟೆ, ಆದ್ದರಿಂದ ಪರಮೇಶ್ವರನಾದ ನನ್ನಲ್ಲಿ ಈ ಜಗತ್ತೆಲ್ಲವೂ ಪೋಣಿಸಲ್ಪಟ್ಟಿರುವದು, ಹೆಣೆಯಲ್ಪಟ್ಟಿರುವದು ಅನುಸರಿಸಲ್ಪಟ್ಟು, ಕಟ್ಟಲ್ಪಟ್ಟಿರುವದು ಎಂದರ್ಥ. ನೂಲುಬಟ್ಟೆಗಳ ಉದ್ದನೆಯ ನೂಲುಗಳಲ್ಲಿ ಬಟ್ಟೆಯಂತೆಯೂ,[5] ದಾರದಲ್ಲಿ ರತ್ನಗಳ ಗುಂಪುಗಳಂತೆಯೂ (ಪೋಣಿಸಲ್ಪಟ್ಟಿರುತ್ತದೆ) ಎಂದರ್ಥ.

## ಭಗವಂತನ ವಿಭೂತಿಗಳು

(ಭಾಷ್ಯ)

೪೫೫. ಕೇನ ಕೇನ ಧರ್ಮೇಣ ವಿಶಿಷ್ಟೇ ತ್ವಯಿ ಸರ್ವಮಿದಂ ಪ್ರೋತಮ್ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಯಾವ ಯಾವ ಧರ್ಮದಿಂದ ಕೂಡಿರುವ ನಿನ್ನಲ್ಲಿ ಇದೆಲ್ಲವೂ ಪೋಣಿಕೆಯಾಗಿರುವದು ? ಎಂದರೆ (ಭಗವಂತನು) ಹೇಳುತ್ತಾನೆ :—

**ರಸೋಽಹಮಪ್ಸು ಕೌನ್ತೇಯ ಪ್ರಭಾಸ್ಮಿ ಶಶಿಸೂರ್ಯಯೋಃ ।**
**ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥ ೮ ॥**

---

1 ಮು॥ ಮೈ॥ಗಳಲ್ಲಿಲ್ಲ.

2. ಈ ಮಾತಿಗಿಂತ ಮುಂಚೆ 'ಸರ್ವಾಣಿ ಭೂತಾನಿ' ಎಂಬ ಮಾತುಗಳು ಬೇಕಿಲ್ಲವೆಂದು ತೋರುತ್ತದೆ; ಅಚ್ಚಿನ ಪುಸ್ತಕಗಳಲ್ಲೇನೋ ಇವೆ

3. "ದೀರ್ಘಪಟತನ್ತುವತ್" ಎಂಬ ಮು॥ ಪಾಠಕ್ಕಿಂತ ಇದೇ ಉತ್ತಮ.

4 ಪರಮಾತ್ಮನಿಗಿಂತಲೂ ಹೆಚ್ಚಿನ ಕಾರಣವೊಂದು ಇದೆ ಎಂದು ತಿಳಿಯಬಾರದು. ಸೂ ಭಾ ೨-೩-೯, ೩-೨-೩೧.

5. ದಾರದಲ್ಲಿ ರತ್ನಗಳಂತೆ ಎಂದರೆ ಎರಡೂ ಬೇರೆಬೇರೆಯೆಂದು ಭ್ರಾಂತಿಯುಂಟಾಗಬಹುದು; ಅದು ವಿವಕ್ಷಿತವಲ್ಲವೆಂದು ತಿಳಿಸುವದಕ್ಕೆ ಈ ದೃಷ್ಟಾಂತವನ್ನು ಕೊಟ್ಟಿದೆ.

೮. ನಾನು ಅಪ್ಪಿನಲ್ಲಿ ರಸವು; ಎಲೈ ಕೌಂತೇಯನೆ, ಚಂದ್ರ ಸೂರ್ಯರುಗಳಲ್ಲಿ ಪ್ರಭೆಯಾಗಿರುವೆನು. ಸರ್ವವೇದಗಳಲ್ಲಿ ಪ್ರಣವವು, ಆಕಾಶದಲ್ಲಿ ಶಬ್ದವು, ಜನರಲ್ಲಿ ಪೌರುಷವು.

(ಭಾಷ್ಯ)

೪೫೬. ರಸಃ ಅಹಮ್ ಅಪಾಂ ಯಃ ಸಾರಃ ಸ ರಸಃ। ತಸ್ಮಿನ್ ರಸಭೂತೇ ಮಯಿ ಆಪಃ ಪ್ರೋತಾಃ ಇತ್ಯರ್ಥಃ। ಏವಂ ಸರ್ವತ್ರ। ಯಥಾ ಅಹಮ್ ಅಪ್ಸು ರಸಃ ಏವಂ ಪ್ರಭಾ ಅಸ್ಮಿ ಶಶಿಸೂರ್ಯಯೋಃ। ಪ್ರಣವಃ ಓಂಕಾರಃ ಸರ್ವವೇದೇಷು ತಸ್ಮಿನ್ ಪ್ರಣವಭೂತೇ ಮಯಿ ಸರ್ವೇ ವೇದಾಃ ಪ್ರೋತಾಃ। ತಥಾ ಖೇ ಆಕಾಶೇ ಶಬ್ದಃ ಸಾರಭೂತಃ। ತಸ್ಮಿನ್ ಮಯಿ ಖಂ ಪ್ರೋತಮ್। ತಥಾ ಪೌರುಷಂ ಪುರುಷಸ್ಯ ಭಾವಃ ಪೌರುಷಮ್ ಯತಃ ಪುಂಬುದ್ಧಿಃ ನೃಷು[1]। ತಸ್ಮಿನ್ ಮಯಿ ಪುರುಷಾಃ ಪ್ರೋತಾಃ ॥

(ಭಾಷ್ಯಾರ್ಥ)

ರಸವು ನಾನು. ಅಪ್ಪಿನಲ್ಲಿ ಸಾರವಿದೆಯಲ್ಲ, ಅದು ರಸವು. ಆ ರಸರೂಪನಾಗಿರುವ ನನ್ನಲ್ಲಿ ಅಪ್ಪು ಪೋಣಿಕೆಯಾಗಿರುತ್ತದೆ ಎಂದರ್ಥ ಹೀಗೆಯೇ (ಮಿಕ್ಕ) ಎಲ್ಲಾ ಕಡೆಯಲ್ಲಿಯೂ ತಿಳಿಯಬೇಕು. ಹೇಗೆ ನಾನು ಅಪ್ಪಿನಲ್ಲಿ ರಸವೋ ಹಾಗೆಯೇ ಚಂದ್ರಸೂರ್ಯರುಗಳಲ್ಲಿ ಪ್ರಭೆಯಾಗಿರುವೆನು. ಸರ್ವವೇದಗಳಲ್ಲಿಯೂ ಪ್ರಣವವು, ಎಂದರೆ ಓಂಕಾರವು, ಹಾಗೆಯೇ (ಖೇ) ಆಕಾಶದಲ್ಲಿ ಸಾರವಾಗಿರುವ ಶಬ್ದವು, ಆ (ಶಬ್ದರೂಪನಾದ) ನನ್ನಲ್ಲಿ ಆಕಾಶವು ಪೋಣಿಕೆಯಾಗಿರುವದು ಇದರಂತೆ ಪೌರುಷವು ಎಂದರೆ ಪುರುಷನ ಭಾವವು; ಅದು ಇರುವದರಿಂದ ಜನರ (ವಿಷಯದ)ಲ್ಲಿ ಪುರುಷನೆಂಬ ಬುದ್ಧಿಯುಂಟಾಗುತ್ತಿರುವದು. ಆ (ಪೌರುಷರೂಪನಾದ ನನ್ನಲ್ಲಿ) ಪುರುಷರು ಪೋಣಿಕೆಯಾಗಿರುವರು

**ಪುಣ್ಯೋ ಗನ್ಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ।**
**ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥ ೯ ॥**

೯. ಪೃಥಿವಿಯಲ್ಲಿ ಪುಣ್ಯಗಂಧವೂ ವಿಭಾವಸುವಿನಲ್ಲಿ ತೇಜಸ್ಸೂ ಆಗಿರುವೆನು. ಸರ್ವಭೂತಗಳಲ್ಲಿ ಜೀವನವೂ ತಪಸ್ವಿಗಳಲ್ಲಿ ತಪಸ್ಸೂ ಆಗಿರುವೆನು.

---

1. ಈ ಎರಡು ಮಾತುಗಳ ಬದಲು "ಪುಂಸ್ತ್ವಮ್"–ಮು॥

(ಭಾಷ್ಯ)

೪೫೭. ಪುಣ್ಯಃ ಸುರಭಿಃ ಗನ್ಧಃ ಪೃಥಿವ್ಯಾಂ ಚ ಅಹಮ್ । ತಸ್ಮಿನ್ ಮಯಿ ಗನ್ಧಭೂತೇ ಪೃಥಿವೀ ಪ್ರೋತಾ । ಪುಣ್ಯತ್ವಂ ಗನ್ಧಸ್ಯ ಸ್ವಭಾವತ ಏವ ಪೃಥಿವ್ಯಾಂ ದರ್ಶಿತಮ್ ಅಬಾದಿಷು ರಸಾದೇಃ ಪುಣ್ಯತ್ವೋಪಲಕ್ಷಣಾರ್ಥಮ್ । ಅಪುಣ್ಯತ್ವಂ ತು ಗನ್ಧಾದೀನಾಮ್ ಅವಿದ್ಯಾಧರ್ಮಾದ್ಯಪೇಕ್ಷಂ ಸಂಸಾರಿಣಾಂ ಭೂತವಿಶೇಷಸಂಸರ್ಗನಿಮಿತ್ತಂ ಭವತಿ। ತೇಜಶ್ಚ ದೀಪ್ತಿಶ್ಚ ಅಸ್ಮಿ ವಿಭಾವಸೌ ಅಗ್ನೌ । ತಥಾ ಜೀವನಂ ಸರ್ವಭೂತೇಷು। ಯೇನ ಜೀವನ್ತಿ ಸರ್ವಾಣಿ ಭೂತಾನಿ ತತ್ ಜೀವನಮ್ । ತಪಶ್ಚ ಅಸ್ಮಿ ತಪಸ್ವಿಷು ತಸ್ಮಿನ್ ತಪಸಿ ಮಯಿ ತಪಸ್ವಿನಃ ಪ್ರೋತಾಃ ॥

(ಭಾಷ್ಯಾರ್ಥ)

ಪೃಥಿವಿಯಲ್ಲಿ ಪುಣ್ಯವಾದ ಎಂದರೆ ಪರಿಮಳವಾದ ಗಂಧವು ನಾನು. ಆ ಸುಗಂಧರೂಪನಾದ ನನ್ನಲ್ಲಿ ಪೃಥಿವಿಯು ಪೋಣಿಕೆಯಾಗಿರುವದು. **ಪೃಥಿವಿಯಲ್ಲಿ ಸ್ವಭಾವದಿಂದಲೇ ಇರುವ ಗಂಧದ ಒಳ್ಳೆಯತನವನ್ನು ಹೇಳಿರುವದು ಅಪ್ಪು ಮುಂತಾದವುಗಳಲ್ಲಿಯೂ ರಸವೇ ಮುಂತಾದದ್ದು ಒಳ್ಳೆಯದೇ ಎಂದು ತಿಳಿಸುವ ಗುರುತಾಗಿ. ಗಂಧವೇ ಮುಂತಾದದ್ದು ಕೆಟ್ಟದ್ದಾಗಿರುವದೆಂಬುದೋ ಎಂದರೆ ಅವಿದ್ಯೆ, ಅಧರ್ಮ–ಮುಂತಾದ ಕಾರಣದಿಂದ ಒಂದೊಂದು ಭೂತದ ಸಂಬಂಧನಿಮಿತ್ತದಿಂದ ಸಂಸಾರಿಗಳಿಗೆ ಆಗಿರುತ್ತದೆ**[1]. ವಿಭಾವಸುವಿನಲ್ಲಿ ಎಂದರೆ ಅಗ್ನಿಯಲ್ಲಿ ತೇಜಸ್ಸೂ ಎಂದರೆ ಬೆಳಕೂ ಆಗಿರುವೆನು. ಹಾಗೆಯೇ ಸರ್ವಭೂತಗಳಲ್ಲಿಯೂ ಜೀವನವೂ (ಆಗಿರುವೆನು). ಏತರಿಂದ ಸರ್ವಪ್ರಾಣಿಗಳೂ ಬದುಕಿರುವವೋ ಅದು ಜೀವನವು. ತಪಸ್ವಿಗಳಲ್ಲ ತಪಸ್ಸೂ ಆಗಿರುವೆನು, ಆ ತಪಸ್ಸಾಗಿರುವ ನನ್ನಲ್ಲಿ ತಪಸ್ವಿಗಳು ಪೋಣಿಕೆಯಾಗಿರುವರು.

**ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಮ್ ।**
**ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ॥ ೧೦ ॥**

೧೦. ಪಾರ್ಥನೆ, ಸರ್ವಭೂತಗಳಿಗೂ ಸನಾತನವಾದ ಬೀಜವು ನಾನು ಎಂದು ತಿಳಿ. ಬುದ್ಧಿವಂತರ ಬುದ್ಧಿಯಾಗಿರುವೆನು, ತೇಜಸ್ವಿಗಳ ತೇಜಸ್ಸು ನಾನು.

---

1. ಛಾ. ಭಾ. ೩-೧೪-೨ ; ಬೃ. ೧-೩-೩.

(ಭಾಷ್ಯ)

೪೫೮ ಬೀಜಂ ಪ್ರರೋಹಕಾರಣಂ ಮಾಂ ವಿದ್ಧಿ ಸರ್ವಭೂತಾನಾಂ ಹೇ ಪಾರ್ಥ ಸನಾತನಂ ಚಿರನ್ತನಮ್ । ಕಿಂಚ ಬುದ್ಧಿಃ ವಿವೇಕಶಕ್ತಿಃ ಅನ್ತಃಕರಣಸ್ಯ ಬುದ್ಧಿಮತಾಂ ವಿವೇಕಶಕ್ತಿಮತಾಮ್ ಅಸ್ಮಿ । ತೇಜಃ ಪ್ರಾಗಲ್ಭ್ಯಂ ತದ್ವತಾಂ ತೇಜಸ್ವಿನಾಮ್ ಅಹಮ್ ॥

(ಭಾಷ್ಯಾರ್ಥ)

ಎಲ್ಲಾ ಭೂತಗಳಿಗೂ ಹುಟ್ಟಿ ಬೆಳೆಯುವದಕ್ಕೆ ಸನಾತನವಾದ ಶಾಶ್ವತವಾದ ಬೀಜವು ಕಾರಣವು ನಾನೆಂದು, ಎಲೈ ಪಾರ್ಥನೆ, ತಿಳಿದುಕೊ ಮತ್ತು ಬುದ್ಧಿವಂತರ ಎಂದರೆ ವಿವೇಕಶಕ್ತಿಯುಳ್ಳವರ ಬುದ್ಧಿಯು ಎಂದರೆ ಅಂತಃಕರಣದ ವಿವೇಕಶಕ್ತಿಯಾಗಿರುವೆನು. ತೇಜಸ್ಸು ಎಂದರೆ ಧೈರ್ಯವು ; ಅದನ್ನುಳ್ಳ ತೇಜಸ್ವಿಗಳ (ತೇಜಸ್ಸು) ನಾನು.

**ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಮ್ ।**
**ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥ ೧೧ ॥**

೧೧. ನಾನು ಬಲವಂತರಲ್ಲಿರುವ ಕಾಮರಾಗವಿವರ್ಜಿತವಾದ ಬಲವು. ಎಲೈ ಭರತರ್ಷಭನೆ, ಭೂತಗಳಲ್ಲಿರುವ ಧರ್ಮಾವಿರುದ್ಧವಾದ ಕಾಮವಾಗಿರುವೆನು.

(ಭಾಷ್ಯ)

೪೫೯. ಬಲಂ ಸಾಮರ್ಥ್ಯಮ್ ಓಜಃ ಬಲವತಾಮ್ ಅಹಮ್ । ತಚ್ಚ ಬಲಂ ಕಾಮರಾಗವಿವರ್ಜಿತಮ್ । ಕಾಮಶ್ಚ ರಾಗಶ್ಚ ಕಾಮರಾಗೌ । ಕಾಮಃ ತೃಷ್ಣಾ ಅಸಂನಿಕೃಷ್ಟೇಷು ವಿಷಯೇಷು । ರಾಗಃ ರಞ್ಜನಾ ಪ್ರಾಪ್ತೇಷು ವಿಷಯೇಷು । ತಾಭ್ಯಾಂ ಕಾಮರಾಗಾಭ್ಯಾಂ ವಿವರ್ಜಿತಂ ದೇಹಾದಿಧಾರಣಮಾತ್ರಾರ್ಥಂ[1] ಬಲಂ ಸತ್ತ್ವಮ್ ಅಹಮ್ ಅಸ್ಮಿ । ನ ತು ಯತ್ ಸಂಸಾರಿಣಾಂ ತೃಷ್ಣಾರಾಗಕಾರಣಮ್ । ಕಿಂಚ ಧರ್ಮಾವಿರುದ್ಧಃ ಧರ್ಮೇಣ ಶಾಸ್ತ್ರಾರ್ಥೇನ ಅವಿರುದ್ಧಃ ಯಃ ಪ್ರಾಣಿಷು ಭೂತೇಷು[2] ಕಾಮಃ ಯಥಾ ದೇಹಧಾರಣಮಾತ್ರಾದ್ಯರ್ಥಃ ಅಶನಪಾನಾದಿವಿಷಯಃ, ಸ ಕಾಮಃ ಅಸ್ಮಿ ಹೇ ಭರತರ್ಷಭ ॥

---

1. ಇಲ್ಲಿರುವ ‘ ಆದಿ ’ ಎಂಬ ಮಾತಿಗೆ ಏನು ಅರ್ಥವೋ ತಿಳಿಯದು. ವ್ಯಾಖ್ಯಾನದಲ್ಲಿಯೂ ಇದರ ವಿಷಯವಿಲ್ಲ.

2 ‘ ಭೂತೇಷು ಪ್ರಾಣಿಷು ’ ಎಂದಿರಬೇಕೆಂದು ತೋರುತ್ತದೆ

(ಭಾಷ್ಯಾರ್ಥ)

ಬಲವೆಂದರೆ ಸಾಮರ್ಥ್ಯವು, ಜೋರು, ಬಲವಂತರಲ್ಲಿರುವ (ಆ ಬಲವು) ನಾನು. ಮತ್ತು ಆ ಬಲವು ಕಾಮರಾಗವಿವರ್ಜಿತವಾದದ್ದು ; ಕಾಮವೂ ರಾಗವೂ ಕಾಮರಾಗಗಳು–(ಇಲ್ಲಿ) ಕಾಮವೆಂದರೆ (ತನ್ನ) ಹತ್ತಿರವಿಲ್ಲದ ವಿಷಯಗಳಲ್ಲಿರುವ ಬಯಕೆ, ರಾಗವೆಂದರೆ ಒದಗಿದ ವಿಷಯಗಳಲ್ಲಿ (ಮನಸ್ಸು) ಆಡುತ್ತಿರುವದು–ಆ ಕಾಮರಾಗಗಳೆರಡರಿಂದಲೂ ರಹಿತವಾಗಿರುವ ದೇಹವನ್ನು ಧರಿಸಿರುವ ಮಟ್ಟಿಗೆ ಬೇಕಾಗುವ ಬಲವೇ ಶಕ್ತಿಯೇ ನಾನು. ಆದರೆ ಸಂಸಾರಿಗಳಿಗೆ ಬಯಕೆಗೂ ರಾಗಕ್ಕೂ ಕಾರಣವಾಗಿರುವ (ಬಲ)ವಲ್ಲ ಮತ್ತು ಧರ್ಮವಿರುದ್ಧವಲ್ಲದ ಧರ್ಮಕ್ಕೆ ಎಂದರೆ ಶಾಸ್ತ್ರಾರ್ಥಕ್ಕೆ ವಿರುದ್ಧವಲ್ಲದೆ ಭೂತಗಳಲ್ಲಿ ಎಂದರೆ ಪ್ರಾಣಿಗಳಲ್ಲಿ ಇರುವದಲ್ಲ–ಉದಾಹರಣೆಗೆ ದೇಹವನ್ನು ಧರಿಸಿರುವಮಟ್ಟಿಗೆ ಬೇಕಾದದ್ದು ಮುಂತಾದ್ದಕ್ಕಾಗಿ (ಉಂಟಾಗುವ) ಕಾಮವಿದೆಯಲ್ಲ–ಆ ಕಾಮವೂ ಎಲೈ ಭರತಶ್ರೇಷ್ಠನೆ, (ನಾನು) ಆಗಿರುವೆನು.

**ಯೇ ಚೈವ ಸಾತ್ತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ ।**
**ಮತ್ತ ಏವೇತಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ ॥೧೨॥**

೧೨. ಸಾತ್ತ್ವಿಕವಾಗಿರುವ ಭಾವಗಳು ಯಾವವು ಇರುವವೋ ಮತ್ತು ರಾಜಸವಾದ ತಾಮಸವಾದ ಭಾವಗಳು ಯಾವವು ಇರುವವೋ ಅವು ನನ್ನಿಂದಲೇ ಆಗಿರುವವೆಂದು ತಿಳಿ. ಆದರೆ ನಾನು ಅವುಗಳಲ್ಲಿರುವದಿಲ್ಲ, ಅವು ನನ್ನಲ್ಲಿರುವವು.

(ಭಾಷ್ಯ)

೪೬೦. ಕಿಂಚ ಯೇ ಚೈವ ಸಾತ್ತ್ವಿಕಾ ಸತ್ತ್ವನಿರ್ವೃತ್ತಾಃ ಭಾವಾಃ ಪದಾರ್ಥಾಃ ರಾಜಸಾಃ ರಜೋನಿರ್ವೃತ್ತಾಃ ತಾಮಸಾಃ ತಮೋನಿರ್ವೃತ್ತಾಶ್ಚ । ಯೇ ಕೇಚಿತ್ ಪ್ರಾಣಿನಾಂ ಸ್ವಕರ್ಮವಶಾತ್ ಜಾಯನ್ತೇ ಭಾವಾಃ ತಾನ್ ಮತ್ತ ಏವ ಜಾಯಮಾನಾನ್ ಇತ್ಯೇವಂ ವಿದ್ಧಿ ಸಮಸ್ತಾನೇವ[1] । ಯದ್ಯಪಿ ತೇ ಮತ್ತೋ ಜಾಯನ್ತೇ ತಥಾಪಿ ನ ತ್ವಹಂ ತೇಷು ತದಧೀನಃ ತದ್ವಶಃ ಯಥಾ ಸಂಸಾರಿಣಃ । ತೇ ಪುನಃ ಮಯಿ ಮದ್ವಶಾಃ ಮದಧೀನಾಃ ॥

---

1. "ಸರ್ವಾನ್ ಸಮಸ್ತಾನೇವ" ಎಂಬ ಪಾಠದಲ್ಲಿ ಸರ್ವಾನ್ ಅಥವಾ ಸಮಸ್ತಾನ್ ಎಂಬ ಮಾತು ಹೆಚ್ಚು; ಮ॥ ಮೈ॥ ಪಾಠಗಳನ್ನು ಅನುಸರಿಸಿ ಸಮಸ್ತಾನ್ ಎಂದು ಬರೆದುಕೊಂಡಿದೆ.

(ಭಾಷ್ಯಾರ್ಥ)

ಮತ್ತು ಸಾತ್ತ್ವಿಕವಾದ ಎಂದರೆ ಸತ್ತ್ವಗುಣದಿಂದಾಗಿರುವ[1] ಯಾವ ಭಾವಗಳು ಪದಾರ್ಥಗಳು ಇರುವವೋ, ರಾಜಸವಾದ ಎಂದರೆ ರಜೋಗುಣದಿಂದಾಗಿರುವ ಮತ್ತು ತಾಮಸವಾದ ಎಂದರೆ ತಮೋಗುಣದಿಂದಾಗಿರುವ (ಭಾವಗಳು ಯಾವವಿರುವವೋ), ಯಾವ ಯಾವ ಭಾವಗಳು ಪ್ರಾಣಿಗಳಿಗೆ ತಮ್ಮ ತಮ್ಮ ಕರ್ಮವಶದಿಂದ ಉಂಟಾಗುತ್ತಿರುವವೋ ಅವುಗಳೆಲ್ಲವೂ ನನ್ನಿಂದಲೇ ಆಗಿರುವವೆಂದು ತಿಳಿದುಕೊ. **ಅವು ನನ್ನಿಂದಲೇ ಆಗಿರುವವಾದರೂ ನಾನು ಮಾತ್ರ ಅವುಗಳಲ್ಲಿಲ್ಲ[2], ಸಂಸಾರಿಗಳಂತೆ ಅವುಗಳ ಅಧೀನನಾಗಿ ಅವುಗಳ ವಶನಾಗಿರುವದಿಲ್ಲ. ಅವುಗಳು ಮಾತ್ರ ನನ್ನಲ್ಲಿರುತ್ತವೆ, ನನ್ನ ವಶವಾಗಿ ನನ್ನ ಅಧೀನವಾಗಿರುತ್ತವೆ.**

## ಮಾಯೆಯೇ ಜ್ಞಾನಕ್ಕೆ ಅಡ್ಡಿ

(ಭಾಷ್ಯ)

೪೬೧ ಏವಂಭೂತಮಪಿ ಪರಮೇಶ್ವರಂ ನಿತ್ಯಶುದ್ಧಬುದ್ಧಮುಕ್ತಸ್ವಭಾವಂ ಸರ್ವಭೂತಾತ್ಮಾನಂ ನಿರ್ಗುಣಂ ಸಂಸಾರದೋಷಬೀಜಪ್ರದಾಹಾಯ[3] ಮಾಂ ನಾಭಿಜಾನಾತಿ ಜಗತ್ ಇತಿ ಅನುಕ್ರೋಶಂ ದರ್ಶಯತಿ ಭಗವಾನ್[4] । ತಚ್ಚ ಕಿಂನಿಮಿತ್ತಂ ಜಗತೋಽಜ್ಞಾನಮ್ ಇತಿ? ಉಚ್ಯತೇ—

(ಭಾಷ್ಯಾರ್ಥ)

(ನಾನು) ಹೀಗಿದ್ದರೂ[5] ಪರಮೇಶ್ವರನಾದ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಸರ್ವಭೂತಗಳಿಗೂ ಆತ್ಮನಾಗಿರುವ ನಿರ್ಗುಣನಾದ ನನ್ನನ್ನು ಸಂಸಾರದ

---

1. ತ್ರಿಗುಣಗಳ ವಿಚಾರವಾಗಿ ೧೪ನೆಯ ಅಧ್ಯಾಯವನ್ನು ನೋಡಿರಿ.

2. ಪರಮಾತ್ಮನು ಸರ್ವವ್ಯಾಪಕನಾದ್ದರಿಂದ ಅವುಗಳಲ್ಲಿಲ್ಲ ಎಂಬ ಮಾತಿಗೆ ಅಕ್ಷರಾರ್ಥವನ್ನು ಮಾಡುವದಕ್ಕೆ ಬರುವದಿಲ್ಲ ಸಂಸಾರಿಗಳು ಗುಣತ್ರಯವಶರಾಗಿರುವಂತೆ ಇಲ್ಲ ಎಂದೇ ಅರ್ಥ.

3. ‘ಪ್ರದಾಹಕಾರಣಮ್’ ಅ|| ನಿ|| ಗು|| ಮ||

4. ಇಲ್ಲಿಯವರೆಗಿನ ಗ್ರಂಥವು ಹಿಂದಿನ ಶ್ಲೋಕಕ್ಕೇ ಸೇರಿದ್ದೆಂದೇ ಭಾವಿಸುವದು ಯುಕ್ತ. ವ್ಯಾಖ್ಯಾನಕಾರರು ಈ ಶ್ಲೋಕಕ್ಕೇ ಸೇರಿಸಿರುತ್ತಾರೆ.

5. ಅನಾತ್ಮಕ್ಕಿಂತ ಬೇರೆಯಾಗಿ ಅದನ್ನು ವಶದಲ್ಲಿಟ್ಟುಕೊಂಡಿರುವವನಾದರೂ.

ದೋಷಗಳಿಗೆ ಬೀಜವನ್ನು ಸುಡುವದಕ್ಕೆ ಅರಿತುಕೊಳ್ಳದೆ ಇರುವದಲ್ಲ, (ಈ) ಜಗತ್ತು !–ಎಂದು ಭಗವಂತನು ಮರುಕವನ್ನು ತೋರಿಸುತ್ತಿದಾನೆ.[1] ಈ ಜಗತ್ತಿನ ಅಜ್ಞಾನಕ್ಕಾದರೂ ಕಾರಣವೇನು ?[2] ಎಂದರೆ (ಭಗವಂತನು ಈಗ) ಹೇಳುತ್ತಾನೆ :—

**ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।**
**ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥೧೩॥**

೧೩. ಗುಣಮಯವಾದ ಈ ಮೂರು ಭಾವಗಳಿಂದ ಈ ಜಗತ್ತೆಲ್ಲವೂ ಮೋಹಿತವಾಗಿ ಇವುಗಳಿಗಿಂತ ಬೇರೆಯಾಗಿ ಅವ್ಯಯನಾಗಿರುವ ನನ್ನನ್ನು ಗೊತ್ತುಮಾಡಿಕೊಳ್ಳದೆ ಇರುವದು.

(ಭಾಷ್ಯ)

೪೬೨ ತ್ರಿಭಿಃ ಗುಣಮಯೈಃ ಗುಣವಿಕಾರೈಃ ರಾಗದ್ವೇಷಮೋಹಾದಿಪ್ರಕಾರೈಃ ಭಾವೈಃ ಪದಾರ್ಥೈಃ ಏಭಿಃ ಯಥೋಕ್ತೈಃ ಸರ್ವಮ್ ಇದಂ ಪ್ರಾಣಿಜಾತಂ ಜಗತ್ ಮೋಹಿತಮ್ ಅವಿವೇಕಿತಾಮ್ ಆಪಾದಿತಂ ಸತ್ ನ ಅಭಿಜಾನಾತಿ ಮಾಮ್ ಏಭ್ಯಃ ಯಥೋಕ್ತೇಭ್ಯಃ ಗುಣೇಭ್ಯಃ ಪರಂ ವ್ಯತಿರಿಕ್ತಂ ವಿಲಕ್ಷಣಂ ಚ ಅವ್ಯಯಂ ವ್ಯಯರಹಿತಂ ಜನ್ಮಾದಿಸರ್ವಭಾವವಿಕಾರವರ್ಜಿತಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಈ ಮೂರು ಗುಣಮಯವಾದ ಎಂದರೆ ಗುಣಗಳ ಕಾರ್ಯವಾಗಿರುವ ರಾಗ, ದ್ವೇಷ, ಮೋಹ–ಮುಂತಾದ ಪ್ರಕಾರದ ಮೇಲೆ ಹೇಳಿದ ಈ ಪದಾರ್ಥಗಳಿಂದ ಈ ಪ್ರಾಣಿಸಮೂಹವೆಂಬ ಜಗತ್ತೆಲ್ಲವೂ ಮೋಹಿತವಾಗಿ ಎಂದರೆ ಅವಿವೇಕಿತ್ವವನ್ನು ಹೊಂದಿರುವದಾಗಿ ಮೇಲೆ ಹೇಳಿದ ಈ ಗುಣಗಳಿಗಿಂತ ಬೇರೆಯಾಗಿ ಅವುಗಳು ಅಲ್ಲದವನಾಗಿ ಬೇರೊಂದು ಸ್ವಭಾವದವನಾಗಿ ಅವ್ಯಯನಾಗಿರುವ, ವ್ಯಯರಹಿತನಾಗಿರುವ, ಎಂದರೆ ಹುಟ್ಟುವದೇ ಮುಂತಾದ ಭಾವವಿಕಾರಗಳಿಲ್ಲದ ಎಂದರ್ಥ ಇಂಥ ನನ್ನನ್ನು ಅರಿಯದೆ ಇರುವರು.[3]

---

1. ನಾನು ಅವುಗಳಲ್ಲಿಲ್ಲ, ಅವುಗಳು ನನ್ನಲ್ಲಿವೆ–ಎಂದು ಹೇಳುವದರಲ್ಲಿಯೇ ಈ ಮರುಕದ ಸೂಚನೆಯಿದೆ.

2 ಜ್ಞಾನವಾಗದಿರುವದಕ್ಕೆ ಕಾರಣವೇನು ? ಅದಕ್ಕೆ ಅಡ್ಡಿಯಾಗುವದು ?

3. ಗುಣಮಯವಾದ ಭಾವಗಳೇ ತತ್ತ್ವಜ್ಞಾನಕ್ಕೆ ಅಡ್ಡಿ ಎಂದರ್ಥ.

(ಭಾಷ್ಯ)

೪೭೩. ಕಥಂ ಪುನಃ ದೈವೀಮ್ ಏತಾಂ ತ್ರಿಗುಣಾತ್ಮಿಕಾಂ ವೈಷ್ಣವೀಂ ಮಾಯಾಮ್ ಅತಿಕ್ರಾಮನ್ತಿ ಇತಿ ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ ಈ ಮೂರುಗುಣಗಳ ರೂಪವಾಗಿರುವ ದೈವವಾದ ವೈಷ್ಣವ ಮಾಯೆಯನ್ನು ಹೇಗೆ ದಾಟುವರು ? ಎಂದರೆ (ಭಗವಂತನು) ಹೇಳುತ್ತಾನೆ.

**ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।**
**ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥೧೪॥**

೧೪. ಈ ಗುಣಮಯವಾದ ನನ್ನ ದೈವಮಾಯೆಯು ದಾಟಲ ಶಕ್ಯವು. ನನ್ನನ್ನೇ ಯಾರು ಸೇರುವರೋ ಅವರು ಈ ಮಾಯೆಯನ್ನು ದಾಟುವರು.

(ಭಾಷ್ಯ)

೪೭೪. ದೈವೀ ದೇವಸ್ಯ ಮಮ ಈಶ್ವರಸ್ಯ ವಿಷ್ಣೋಃ ಸ್ವಭೂತಾ[1] ಹಿ ಯಸ್ಮಾತ್ ಏಷಾ ಯಥೋಕ್ತಾ ಗುಣಮಯೀ ಮಮ ಮಾಯಾ ದುರತ್ಯಯಾ ದುಃಖೇನ ಅತ್ಯಯಃ ಅತಿಕ್ರಮಣಂ ಯಸ್ಯಾಃ ಸಾ ದುರತ್ಯಯಾ । ತತ್ರ ಏವಂ ಸತಿ ಸರ್ವಧರ್ಮಾನ್ ಪರಿತ್ಯಜ್ಯ ಮಾಮೇವ ಮಾಯಾವಿನಂ ಸ್ವಾತ್ಮಭೂತಂ ಸರ್ವಾತ್ಮನಾ ಯೇ ಪ್ರಪದ್ಯನ್ತೇ ತೇ ಮಾಯಾಮ್ ಏತಾಂ ಸರ್ವಭೂತಮೋಹಿನೀಂ ತರನ್ತಿ ಅತಿಕ್ರಾಮನ್ತಿ । ಸಂಸಾರಬನ್ಧನಾತ್ ಮುಚ್ಯನ್ತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಈ ಮೇಲೆ ಹೇಳಿದ ಗುಣಮಯವಾದ ನನ್ನ ಮಾಯೆಯು, ದೈವ[2] (ಮಾಯೆಯು), ದೇವನಾದ ಈಶ್ವರನಾದ ವಿಷ್ಣುವೆಂಬ ನನ್ನ ಸ್ವಾಧೀನವಾಗಿರುವ (ಮಾಯೆಯು) ದುರತ್ಯಯವಾದದ್ದು, ಇದನ್ನು ದಾಟುವದು (ಬಲು) ಕಷ್ಟವಾಗಿರುವದರಿಂದ ದುರತ್ಯಯವು. ಇದು ಹೀಗಿರುವದರಿಂದ ಯಾರು ಸರ್ವಧರ್ಮಗಳನ್ನೂ ಪರಿ

---

1. 'ಸ್ವಭಾವಭೂತಾ' ಮು॥ ಮೈ॥ ವಾ॥ ಎಂಬ ಪಾಠಕ್ಕಿಂತ ಇದೇ ಮೇಲು.
2. ಶ್ಲೋ, ೧-೩ ; ೪-೯, ೧೦.

ತ್ಯಾಗಮಾಡಿ[1] ತಮ್ಮ ಆತ್ಮನೇ ಆಗಿರುವ ಮಾಯಾವಿಯಾದ[2] ನನ್ನನ್ನೇ ಸರ್ವಪ್ರಕಾರದಿಂದಲೂ (ಶರಣು) ಹೊಂದುವರೋ ಅವರು ಸಕಲ ಭೂತಗಳನ್ನೂ ಮರುಳುಗೊಳಿಸುತ್ತಿರುವ ಈ ಮಾಯೆಯನ್ನು ದಾಟುವರು, ಮೀರುವರು; ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುವರು ಎಂದರ್ಥ.

(ಭಾಷ್ಯ)

೪೬೫. ಯದಿ ತ್ವಾಂ ಪ್ರಪನ್ನಾಃ ಮಾಯಾಮ್ ಏತಾಂ ತರನ್ತಿ, ಕಸ್ಮಾತ್ ತ್ವಾಮೇವ ಸರ್ವೇ ನ ಪ್ರಪದ್ಯನ್ತೇ ಇತಿ? ಉಚ್ಯತೇ—

(ಭಾಷ್ಯಾರ್ಥ)

ನಿನ್ನನ್ನು ಶರಣು ಹೊಂದಿದವರು ಈ ಮಾಯೆಯನ್ನು ದಾಟುತ್ತಾರಾದರೆ ಏತಕ್ಕೆ ನಿನ್ನನ್ನೇ ಎಲ್ಲರೂ (ಶರಣು) ಹೊಂದುವದಿಲ್ಲ? ಎಂದರೆ (ಭಗವಂತನು) ಹೇಳುತ್ತಾನೆ :—

**ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯನ್ತೇ ನರಾಧಮಾಃ ।**
**ಮಾಯಯಾಪಹೃತಜ್ಞಾನಾ ಆಸುರಂ ಭಾವಮಾಶ್ರಿತಾಃ ॥ ೧೫ ॥**

೧೫. ದುಷ್ಕೃತಿಗಳೂ ಮೂಢರೂ ಆದ ನರಾಧಮರು ನನ್ನನ್ನು (ಶರಣು) ಹೊಂದುವದಿಲ್ಲ. (ಅವರು) ಮಾಯೆಯಿಂದ ಅಪಹರಿಸಲ್ಪಟ್ಟ ಜ್ಞಾನವುಳ್ಳವರು, ಆಸುರಭಾವವನ್ನು ಆಶ್ರಯಿಸಿರುವವರು

(ಭಾಷ್ಯ)

೪೬೬. ನ ಮಾಂ ಪರಮೇಶ್ವರಂ ನಾರಾಯಣಂ ದುಷ್ಕೃತಿನಃ ಪಾಪಕಾರಿಣಃ ಮೂಢಾಃ ಪ್ರಪದ್ಯನ್ತೇ ನರಾಧಮಾಃ ನರಾಣಾಂ ಮಧ್ಯೇ ಅಧಮಾಃ ನಿಕೃಷ್ಟಾಃ । ತೇ ಚ ಮಾಯಯಾ ಅಪಹೃತಜ್ಞಾನಾಃ ಸಂಮುಷಿತಜ್ಞಾನಾಃ ಆಸುರಂ ಭಾವಂ ಹಿಂಸಾನೃತಾದಿಲಕ್ಷಣಮ್ ಆಶ್ರಿತಾಃ ॥

---

1. ೧೮–೬೬ರ ಅರ್ಥವು 'ಪ್ರಪದ್ಯನ್ತೇ" ಎಂಬದರ ಅರ್ಥದಲ್ಲಿ ಅಡಕವಾಗಿದೆ ಎಂದು ಭಾವ.

2. ಮಾಯೆಯನ್ನು ಹರಡಿ ತಾನು ಇದ್ದಂತೆಯೇ ಇರುವ ಮಾಯಗಾರನಂತೆ, ಆತ್ಮನು ಗುಣಮಯವಾದ ಮಾಯೆಯನ್ನು ಹರಡಿ ತಾನು ಈಗಲೂ ನಮ್ಮಗಳ ಆತ್ಮನೇ ಆಗಿರುತ್ತಾನೆ. ಅವನೇ ನಮ್ಮ ಆತ್ಮನೆಂದು ನಂಬಿ ಶರಣುಹೊಂದಿದವರನ್ನು ಈ ಮಾಯೆಯು ಕಾಡುವದಿಲ್ಲ. ಮಾಂ. ಕಾ. ೧–೭ರ ಭಾಷ್ಯದಲ್ಲಿ 'ಮಾಯಾಸರೂಪಾ' ಎಂಬದರ ಭಾಷ್ಯವನ್ನು ನೋಡಿ.

(ಭಾಷ್ಯಾರ್ಥ)

ನನ್ನನ್ನು ಪರಮೇಶ್ವರನಾದ **ನಾರಾಯಣನನ್ನು** ದುಷ್ಕೃತಿಗಳೂ ಪಾಪವನ್ನು ಮಾಡಿರುವ ಮೂಢರೂ ಆದ ನರಾಧಮರು ಮನುಷ್ಯರೊಳಗೆ ಅಧಮರಾದವರು ಕೀಳಾದವರು, (ಶರಣು) ಹೊಂದುವದಿಲ್ಲ. ಏಕೆಂದರೆ[1] ಅವರು ಮಾಯೆಯಿಂದ ಅಪಹರಿಸಲ್ಪಟ್ಟ ಜ್ಞಾನವುಳ್ಳವರಾಗಿ ಜ್ಞಾನವನ್ನು ಕಳೆದುಕೊಂಡು ಹಿಂಸೆ, ಸುಳ್ಳಾಡುವದು–ಮುಂತಾದ ರೂಪದ **ಆಸುರಭಾವವನ್ನು**[2] ಆಶ್ರಯಿಸಿರುವರು.

## ಜ್ಞಾನಿಯು ಪರಮಾತ್ಮನನ್ನೇ ಹೊಂದಿರುವನು

(ಭಾಷ್ಯ)

೪೬೭. ಯೇ ಪುನಃ ನರೋತ್ತಮಾಃ ಪುಣ್ಯಕರ್ಮಾಣಃ—

(ಭಾಷ್ಯಾರ್ಥ)

ಆದರೆ ಯಾರು ಪುಣ್ಯಕರ್ಮಗಳನ್ನು ಮಾಡಿರುವ ಉತ್ತಮ ಪುರುಷರೋ (ಅಂಥ)—

**ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋಽರ್ಜುನ ।**
**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥**

೧೬. ಅರ್ಜುನನೆ, ನಾಲ್ಕು ಬಗೆಯ ಸುಕೃತಿಗಳಾದ ಜನರು ನನ್ನನ್ನು ಭಜಿಸುವರು ; ಭರತರ್ಷಭನೆ, ಆರ್ತನು, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ (ಇವರೇ ಆ ನಾಲ್ಕು ಬಗೆಯುವರು).

(ಭಾಷ್ಯ)

೪೬೮. ಚತುರ್ವಿಧಾಃ ಚತುಃಪ್ರಕಾರಾಃ ಭಜನ್ತೇ ಸೇವನ್ತೇ ಮಾಂ ಜನಾಃ ಸುಕೃತಿನಃ ಪುಣ್ಯಕರ್ಮಾಣಃ ಹೇ ಅರ್ಜುನ । ಆರ್ತಃ ಆರ್ತಿಪರಿಗೃಹೀತಃ ತಸ್ಕರವ್ಯಾಘ್ರರೋಗಾದಿನಾ ಅಭಿಭೂತಃ ಆಪನ್ನಃ । ಜಿಜ್ಞಾಸುಃ ಭಗವತ್ತತ್ತ್ವಂ[3] ಜ್ಞಾತುಮ್ ಇಚ್ಛತಿ ಯಃ । ಅರ್ಥಾರ್ಥೀ ಧನಕಾಮಃ । ಜ್ಞಾನೀ ವಿಷ್ಣೋಃ ತತ್ತ್ವವಿಚ್ಚ ಹೇ ಭರತರ್ಷಭ ॥

---

1. ಇಲ್ಲಿ ಚ ಎಂಬುದು ಹೇತುವನ್ನು ಹೇಳುವದೆಂದು ಇಟ್ಟುಕೊಂಡಿದೆ.
2. ಈ ಸ್ವಭಾವವನ್ನು ೧೬ನೆಯ ಅಧ್ಯಾಯದಲ್ಲಿ ವಿವರಿಸಿರುತ್ತದೆ.
3. ‘ ಭಗವನ್ತಮ್ ’ ಮ॥

(ಭಾಷ್ಯಾರ್ಥ)

ಚತುರ್ವಿಧರಾದ ನಾಲ್ಕು ಬಗೆಯ ಸುಕೃತಿಗಳಾದ ಪುಣ್ಯಕರ್ಮಗಳನ್ನು ಮಾಡಿರುವ ಜನರು, ಎಲೈ ಅರ್ಜುನನೆ, ನನ್ನನ್ನು ಭಜಿಸುವರು, ಸೇವಿಸುವರು. (ಅವರು ಯಾರೆಂದರೆ): **ಆರ್ತನು** ಸಂಕಟಕ್ಕೆ ಸಿಕ್ಕಿರುವವನು, ಕಳ್ಳರು, ಹುಲಿ, ರೋಗ-ಮುಂತಾದವುಗಳ ಬಲುಮೆಯಿಂದ ಆಪತ್ತಿನಲ್ಲಿರುವವನು; **ಜಿಜ್ಞಾಸು** ಎಂದರೆ ಭಗವಂತನ ತತ್ತ್ವವನ್ನು ತಿಳಿದುಕೊಳ್ಳುವದಕ್ಕೆ ಇಚ್ಛಿಸುತ್ತಿರುವವನಲ್ಲ, ಅವನು; **ಅರ್ಥಾರ್ಥಿ** ಎಂದರೆ ಧನವನ್ನು ಬಯಸುವವನು; **ಜ್ಞಾನಿ** ಎಂದರೆ ವಿಷ್ಣುವಿನ ತತ್ತ್ವವನ್ನು ಬಲ್ಲವನು. ಎಲೈ ಭರತಶ್ರೇಷ್ಠನೆ, (ಇವರೇ ಆ ನಾಲ್ಕು ಬಗೆಯವರು.)

**ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।**
**ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥**

೧೭. ಅವರಲ್ಲಿ ನಿತ್ಯಯುಕ್ತನಾಗಿಯೂ ಏಕಭಕ್ತಿಯಾಗಿಯೂ ಇರುವ ಜ್ಞಾನಿಯು ಹೆಚ್ಚಿನವನು; ಏಕೆಂದರೆ ನಾನು ಜ್ಞಾನಿಗೆ ಬಹಳ ಪ್ರಿಯನಾಗಿರುವೆನು, ಅವನೂ ನನಗೆ ಪ್ರಿಯನಾಗಿರುವನು.

(ಭಾಷ್ಯ)

೪೬೯ ತೇಷಾಂ ಚತುರ್ಣಾಂ ಮಧ್ಯೇ ಜ್ಞಾನೀ[1] ತತ್ತ್ವವಿತ್ತ್ವಾತ್ ನಿತ್ಯಯುಕ್ತೋ ಭವತಿ । ಏಕಭಕ್ತಿಶ್ಚ ಅನ್ಯಸ್ಯ ಭಜನೀಯಸ್ಯ ಅದರ್ಶನಾತ್ । ಅತಃ ಸಃ ಏಕಭಕ್ತಿಃ । ವಿಶಿಷ್ಯತೇ ವಿಶೇಷಮ್ ಆಧಿಕ್ಯಮ್ ಆಪದ್ಯತೇ ಅತಿರಿಚ್ಯತೇ ಇತ್ಯರ್ಥಃ । ಪ್ರಿಯಃ ಹಿ ಯಸ್ಮಾತ್ ಅಹಮ್ ಆತ್ಮಾ ಜ್ಞಾನಿನಃ, ಅತಃ ತಸ್ಯ ಅಹಮ್ ಅತ್ಯರ್ಥಂ ಪ್ರಿಯಃ । ಪ್ರಸಿದ್ಧಂ ಹಿ ಲೋಕೇ ಆತ್ಮಾ ಪ್ರಿಯೋ ಭವತಿ ಇತಿ । ತಸ್ಮಾತ್ ಜ್ಞಾನಿನಃ ಆತ್ಮತ್ವಾತ್ ವಾಸುದೇವಃ ಪ್ರಿಯೋ ಭವತಿ ಇತ್ಯರ್ಥಃ । ಸ ಚ ಜ್ಞಾನೀ ಮಮ ವಾಸುದೇವಸ್ಯ ಆತ್ಮೈವ ಇತಿ ಮಮ ಅತ್ಯರ್ಥಂ ಪ್ರಿಯಃ ॥

(ಭಾಷ್ಯಾರ್ಥ)

ಆ ನಾಲ್ವರೊಳಗೆ ಜ್ಞಾನಿಯು ತತ್ತ್ವವನ್ನು ಬಲ್ಲವನಾಗಿರುವದರಿಂದ ಯಾವಾಗಲೂ ಯುಕ್ತನಾಗಿರುತ್ತಾನೆ[2] ಏಕಭಕ್ತಿಯೂ (ಆಗಿರುತ್ತಾನೆ), ಏಕೆಂದರೆ (ಅವ

---

1. ಇಲ್ಲಿ 'ತತ್ತ್ವವಿತ್' ಎಂಬ ಮಾತು ಅ॥ ನಿ॥ ಗು॥ ವಾ॥ ಗಳಲ್ಲಿ ಹೆಚ್ಚಾಗಿದೆ.

2. ಸಮಾಹಿತಚಿತ್ತನಾಗಿರುತ್ತಾನೆ; ತತ್ತ್ವವನ್ನರಿಯದ ಯಾವ ಯೋಗಿಗೂ ಪೂರ್ಣವಾದ ಸಮಾಧಿಯಿರುವದಿಲ್ಲ.

ನಿಗೆ) ಭಜನೆಗೆ ತಕ್ಕ ಮತ್ತೊಬ್ಬನು (ಯಾವನೂ) ಕಾಣುವದಿಲ್ಲ. ಆದ್ದರಿಂದ ಆ ಏಕಭಕ್ತಿಯು[1], (ವಿಶಿಷ್ಯತೇ) ವಿಶೇಷವನ್ನು ಹೆಚ್ಚಿಗೆಯನ್ನು ಹೊಂದಿರುತ್ತಾನೆ, ಮಿಕ್ಕವರೆಲ್ಲರನ್ನೂ ಮೀರಿರುತ್ತಾನೆ ಎಂದರ್ಥ. (ನಾನು) ಪ್ರಿಯನಷ್ಟೆ: ನಾನು ಜ್ಞಾನಿಗೆ ಆತ್ಮನಷ್ಟೆ; ಆದ್ದರಿಂದ ಅವನಿಗೆ ನಾನು ಬಹಳ ಪ್ರಿಯನು. (ತನ್ನ) ಆತ್ಮನು (ತನಗೆ) ಪ್ರಿಯನಾಗಿರುವನೆಂದು ಲೋಕದಲ್ಲಿ ಪ್ರಸಿದ್ಧವಲ್ಲವೆ?[2] ಆದ್ದರಿಂದ ಜ್ಞಾನಿಗೆ ಆತ್ಮನಾಗಿರುವದರಿಂದ **ವಾಸುದೇವನು** ಪ್ರಿಯನಾಗಿರುವನು ಎಂದರ್ಥ. ಮತ್ತು ಆ ಜ್ಞಾನಿಯೂ ವಾಸುದೇವನಾದ ನನಗೆ ಆತ್ಮನೇ, ಆದ್ದರಿಂದ ನನಗೆ ಬಹಳ ಪ್ರಿಯನಾಗಿರುವನು.

(ಭಾಷ್ಯ)

೪೭೦. ನ ತರ್ಹಿ ಆರ್ತಾದಯಸ್ತ್ರಯಃ ವಾಸುದೇವಸ್ಯ ಪ್ರಿಯಾಃ । ನ । ಕಿಂ ತರ್ಹಿ?—

(ಭಾಷ್ಯಾರ್ಥ)

(ಆಕ್ಷೇಪ).—ಹಾಗಾದರೆ ಆತ್ಮನೇ ಮುಂತಾದ ಮೂರು ಜನರು ವಾಸುದೇವನಿಗೆ ಪ್ರಿಯವಲ್ಲವೆಂದಾಯಿತು.

(ಪರಿಹಾರ).—ಹಾಗಲ್ಲ. ಮತ್ತೇನೆಂದರೆ:—

**ಉದಾರಾಃ ಸರ್ವ ಏವೈತೇ ಜ್ಞಾನೀತ್ವಾತ್ಮೈವ ಮೇ ಮತಮ್ ।**
**ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್ ॥**

೧೮. ಇವರೆಲ್ಲರೂ ಉದಾರರೇ, ಆದರೆ ಜ್ಞಾನಿಯು ನನ್ನ ಆತ್ಮನೇ ಎಂಬುದು (ನನ್ನ) ಮತವು. ಏಕೆಂದರೆ ಆತನು ಯುಕ್ತಾತ್ಮನಾಗಿ ನಾನೇ ಉತ್ತಮ ಗತಿಯೆಂದು ನನ್ನನ್ನು ಆಶ್ರಯಿಸಿರುವನು.

(ಭಾಷ್ಯ)

೪೭೧. ಉದಾರಾಃ ಉತ್ಕೃಷ್ಟಾಃ ಸರ್ವೇ ಏವ ಏತೇ ತ್ರಯೋಽಪಿ ಮಮ ಪ್ರಿಯಾ ಏವ ಇತ್ಯರ್ಥಃ । ನ ಹಿ ಕಶ್ಚಿತ್ ಮದ್ಭಕ್ತಃ ಮಮ ವಾಸುದೇವಸ್ಯ ಅಪ್ರಿಯಃ

1. ಮತ್ತೊಬ್ಬರಲ್ಲಿ ಭಕ್ತಿಯಿಲ್ಲದೆ, ಭಕ್ತಿ ಮಾಡುವದಕ್ಕೆ ಮತ್ತೊಬ್ಬರನ್ನು ಕಾಣದೆ ಇರುವವನು.

2. ಬೃ. ೨-೪-೫.

ಭವತಿ। ಜ್ಞಾನೀ ತು ಅತ್ಯರ್ಥಂ ಪ್ರಿಯಃ ಭವತಿ ಇತಿ ವಿಶೇಷಃ। ತತ್ ಕಸ್ಮಾತ್ ಇತಿ ? ಅತ ಆಹ–ಜ್ಞಾನೀ ತು ಆತ್ಮೈವ ನ ಅನ್ಯಃ ಮತ್ತಃ ಇತಿ ಮೇ ಮಮ ಮತಂ ನಿಶ್ಚಯಃ। ಆಸ್ಥಿತಃ ಆರೋಢುಂ ಪ್ರವೃತ್ತಃ ಸ ಜ್ಞಾನೀ ಹಿ ಯಸ್ಮಾತ್ " ಅಹಮೇವ ಭಗವಾನ್ ವಾಸುದೇವಃ, ನಾನ್ಯೋಽಸ್ಮಿ " ಇತ್ಯೇವಂ ಯುಕ್ತಾತ್ಮಾ ಸಮಾಹಿತ ಚಿತ್ತಃ ಸನ್ ಮಾಮೇವ ಪರಂ ಬ್ರಹ್ಮ ಗನ್ತವ್ಯಮ್ ಅನುತ್ತಮಾಂ ಗತಿಮ್ ಗನ್ತುಂ ಪ್ರವೃತ್ತಃ ಇತ್ಯರ್ಥಃ ॥

(ಭಾಷ್ಯಾರ್ಥ)

ಇವರೆಲ್ಲರೂ (ಈ) ಮೂರು ಬಗೆಯವರೂ ಉದಾರರೇ, ಮೇಲುಗೈಯಾದವರೇ, ನನಗೆ ಪ್ರಿಯರೇ ಎಂದರ್ಥ. ಏಕೆಂದರೆ ನನ್ನ ಭಕ್ತನಾದವನು ಯಾವನೂ **ವಾಸುದೇವನಾದ** ನನಗೆ ಪ್ರಿಯನಲ್ಲದೆ ಹೋಗುವದಿಲ್ಲ ; ಆದರೆ ಜ್ಞಾನಿಯು ಅತ್ಯಂತವಾಗಿ ಪ್ರಿಯನಾಗಿರುವನು ಎಂಬುದು (ಅವನಲ್ಲಿ) ವಿಶೇಷವು ಅದೇಕೆ ? ಎಂದರೆ ಅದಕ್ಕೆ (ಭಗವಂತನು) ಹೇಳುತ್ತಾನೆ. ಆದರೆ ಜ್ಞಾನಿಯು (ನನ್ನ) ಆತ್ಮನೇ, ನನಗಿಂತ ಬೇರೆಯಲ್ಲ ಎಂದು (ಮೇ = ಮಮ) ನನ್ನ ಮತವು, ನಿಶ್ಚಯವು. (ಹಿ) ಏಕೆಂದರೆ ಆ ಜ್ಞಾನಿಯು " ನಾನೇ ಭಗವಂತನಾದ ವಾಸುದೇವನು, ನಾನು ಬೇರೆಯಲ್ಲ" ಹೀಗೆಂದು ಯುಕ್ತಾತ್ಮನಾಗಿ ಎಂದರೆ ಚಿತ್ತಸಮಾಧಾನವನ್ನು ಹೊಂದಿದವನಾಗಿ ಪರಬ್ರಹ್ಮವಾದ ನನ್ನನ್ನೇ "ಹೋಗಿ ಸೇರಬೇಕಾದದ್ದು, ಹೆಚ್ಚಿನ ಗತಿಯು"–ಎಂದು (ಆಸ್ಥಿತಃ) ಏರುವದಕ್ಕೆ ಹೊರಟಿರುತ್ತಾನೆ, ಹೋಗಿ (ಸೇರು)ವದಕ್ಕೆ ಪ್ರವರ್ತಿಸಿರುತ್ತಾನೆ ಎಂದರ್ಥ.

(ಭಾಷ್ಯ)

೪೭೨. ಜ್ಞಾನೀ ಪುನರಪಿ ಸ್ತೂಯತೇ—

(ಭಾಷ್ಯಾರ್ಥ)

(ಮುಂದಿನ ಶ್ಲೋಕದಲ್ಲಿ) ಜ್ಞಾನಿಯನ್ನು ಮತ್ತೂ ಹೊಗಳಿರುತ್ತದೆ:—

**ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ ।**
**ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ ೧೯ ॥**

೧೯. ಬಹುಜನ್ಮಗಳ ಕೊನೆಯಲ್ಲಿ ಜ್ಞಾನವುಳ್ಳವನಾಗಿ ‘ ವಾಸುದೇವನೇ ಸರ್ವವು ’ ಎಂದು ನನ್ನನ್ನು ಹೊಂದುತ್ತಾನೆ. ಅಂಥ ಮಹಾತ್ಮನು ಸಿಕ್ಕುವದು ಕಷ್ಟ.

(ಭಾಷ್ಯ)

೭೩ ಬಹೂನಾಂ ಜನ್ಮನಾಂ ಜ್ಞಾನಾರ್ಥಸಂಸ್ಕಾರಾಶ್ರಯಾಣಾಮ್ ಅನ್ತೇ ಸಮಾಪ್ತೌ ಜ್ಞಾನವಾನ್ ಪ್ರಾಪ್ತಪರಿಪಾಕಜ್ಞಾನಃ ಮಾಂ ವಾಸುದೇವಂ ಪ್ರತ್ಯಗಾತ್ಮಾನಂ[1] ಪ್ರಪದ್ಯತೇ । ಕಥಮ್ ? "ವಾಸುದೇವಃ ಸರ್ವಮ್" ಇತಿ । ಯ ಏವಂ ಸರ್ವಾತ್ಮಾನಂ ಮಾಂ ನಾರಾಯಣಂ[2] ಪ್ರತಿಪದ್ಯತೇ[3] ಸ ಮಹಾತ್ಮಾ ನ ತತ್ಸಮಃ ಅನ್ಯೋಽಸ್ತಿ । ಅಧಿಕೋ ವಾ । ಅತಃ ಸುದುರ್ಲಭಃ । "ಮನುಷ್ಯಾಣಾಂ ಸಹಸ್ರೇಷು" (೭-೩) ಇತಿ ಹಿ[4] ಉಕ್ತಮ್॥

(ಭಾಷ್ಯಾರ್ಥ)

ಜ್ಞಾನಕ್ಕಾಗಿ (ಮಾಡುವ ಪ್ರಯತ್ನಗಳ) ಸಂಸ್ಕಾರಕ್ಕೆ ಆಶ್ರಯವಾಗಿರುವ[5] ಬಹು ಜನ್ಮಗಳ ಕೊನೆಯಲ್ಲಿ ಪರಿಪಾಕವನ್ನು ಹೊಂದಿದ ಜ್ಞಾನವುಳ್ಳವನಾಗಿ **ವಾಸುದೇವನೆಂಬ** ತನ್ನೊಳಗಿನ ಆತ್ಮನಾದ ನನ್ನನ್ನು ಬಂದು ಸೇರುತ್ತಾನೆ[6] ಹೇಗೆ? ಎಂದರೆ "ವಾಸುದೇವನೇ ಇದೆಲ್ಲವೂ" ಎಂದು ; ಯಾವನು ಹೀಗೆಂದು ಎಲ್ಲರ ಆತ್ಮನಾಗಿರುವ **ನಾರಾಯಣನಾದ** ನನ್ನನ್ನು ತಿಳಿದುಕೊಳ್ಳುವನೋ ಅವನು ಮಹಾತ್ಮನು, ಅವನಿಗೆ ಸಮನಾದವನಾಗಲಿ (ಅವನಿಗಿಂತ) ಹೆಚ್ಚಿನವನಾಗಲಿ ಇರುವದಿಲ್ಲ ಆದ್ದರಿಂದ (ಅಂಥವನು) ಸಿಕ್ಕುವದು ಬಲು ಕಷ್ಟ. "ಸಾವಿರ ಮನುಷ್ಯರಲ್ಲಿ (ಯಾವನೋ ಒಬ್ಬನು ಪ್ರಯತ್ನಮಾಡುತ್ತಾನೆ)" (೭-೩) ಎಂದಲ್ಲವೆ, ಹಿಂದೆ ಹೇಳಿತ್ತು?

## ಕಾಮಿಗಳು ಮಾಡುವ ಅನ್ಯದೇವತೆಯ ಪೂಜೆ

(ಭಾಷ್ಯ)

೪೭೪. "ಆತ್ಮೈವ ಸರ್ವಂ[7] ವಾಸುದೇವಃ" ಇತ್ಯೇವಮ್ ಅಪ್ರತಿಪತ್ತೌ ಕಾರಣಮ್ ಉಚ್ಯತೇ—

1. ಈ ಮಾತಾದ ಬಳಿಕ 'ಪ್ರತ್ಯಕ್ಷತಃ' ಎಂದು ಹೆಚ್ಚಾಗಿ ಸಿ॥ ಗು॥ ವಾ॥ ಅ॥
2. ಸಿ॥ ಗು॥ಗಳಲ್ಲಿಲ್ಲ.
3. ಇಲ್ಲಿಯೂ ಮೊದಲು 'ಪ್ರಪದ್ಯತೇ' ಎಂದಿತ್ತೋ ಇಲ್ಲವೋ ಹೇಳುವದಕ್ಕೆ ಬರುವಂತಿಲ್ಲ.
4. ಮು॥ವ್ಯೈ॥ವಾ॥
5. ೬-೪೫ರ ಭಾಷ್ಯವನ್ನು ನೋಡಿ.
6. ಅಜ್ಞಾನದಿಂದ ದೂರವಾಗಿದ್ದವನು ಜ್ಞಾನದಿಂದ ಸೇರಿದವನಂತೆ ಆಗುತ್ತಾನೆ.
7. ಈ ಸಿ॥ಗು॥ ಪಾಠವೇ 'ಸರ್ವಃ' ಎಂಬ ಪಾಠಕ್ಕಿಂತ ಮೇಲು.

(ಭಾಷ್ಯಾರ್ಥ)

"ಆತ್ಮನಾದ ವಾಸುದೇವನನೇ ಇದೆಲ್ಲವೂ" ಎಂದು ತಿಳಿದುಕೊಳ್ಳದಿರುವದಕ್ಕೆ ಕಾರಣವೇನೆಂದರೆ (ಭಗವಂತನು) ಹೇಳುತ್ತಾನೆ: -

**ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯನ್ತೇಽನ್ಯದೇವತಾಃ ।**
**ತಂ ತಂ ನಿಯಮಮಾಸ್ಥಾಯ ಪ್ರಕೃತ್ಯಾ ನಿಯತಾಃ ಸ್ವಯಾ ॥**

೨೦. ಆಯಾ ಕಾಮಗಳಿಂದ ಅಪಹೃತವಾದ ಜ್ಞಾನವುಳ್ಳವರು ತಮ್ಮ ಪ್ರಕೃತಿಯಿಂದ ನಿಯತರಾಗಿ ಆಯಾ ನಿಯಮವನ್ನು ಅನುಸರಿಸಿ ಬೇರೆ ದೇವತೆಗಳನ್ನು (ಶರಣು) ಹೊಗುತ್ತಾರೆ.

(ಭಾಷ್ಯ)

೪೭೫. ಕಾಮೈಃ ತೈಃ ತೈಃ ಪುತ್ರಪಶುಸ್ವರ್ಗಾದಿವಿಷಯೈಃ ಹೃತಜ್ಞಾನಾಃ ಅಪಹೃತವಿವೇಕವಿಜ್ಞಾನಾಃ ಪ್ರಪದ್ಯನ್ತೇ ಅನ್ಯದೇವತಾಃ ಪ್ರಾಪ್ನುವನ್ತಿ ವಾಸುದೇವಾತ್ ಆತ್ಮನಃ ಅನ್ಯಾ ದೇವತಾಃ । ತಂ ತಂ ನಿಯಮಮ್ ದೇವತಾರಾಧನೇ ಪ್ರಸಿದ್ಧಃ ಯೋ ಯೋ ನಿಯಮಃ ತಂ ತಮ್ ಆಸ್ಥಾಯ ಆಶ್ರಿತ್ಯ ಪ್ರಕೃತ್ಯಾ ಸ್ವಭಾವೇನ ಜನ್ಮಾನ್ತರಾರ್ಜಿತಸಂಸ್ಕಾರವಿಶೇಷೇಣ ನಿಯತಾಃ ನಿಯಮಿತಾಃ ಸ್ವಯಾ ಆತ್ಮೀಯಯಾ ॥

(ಭಾಷ್ಯಾರ್ಥ)

ಮಕ್ಕಳು, ಪಶುಗಳು, ಸ್ವರ್ಗ-ಮುಂತಾದ[1] ವಿಷಯಗಳ ಆಯಾ ಕಾಮಗಳಿಂದ ಹೃತಜ್ಞಾನರಾಗಿ ಎಂದರೆ ವಿವೇಕರೂಪವಾದ ವಿಜ್ಞಾನವನ್ನು ಕಳೆದುಕೊಂಡು ಬೇರೆಯ ದೇವತೆಗಳನ್ನು, ಎಂದರೆ ತಮ್ಮ ಆತ್ಮನಾದ ವಾಸುದೇವನಿಗಿಂತ ಬೇರೆಯಾದ ದೇವತೆಗಳನ್ನು (ಶರಣು) ಹೊಗುವರು, ಬಂದು ಸೇರುವರು. ಆಯಾ ನಿಯಮವನ್ನು ದೇವತೆಗಳನ್ನು ಆರಾಧಿಸುವದಕ್ಕೆ ಯಾವ ಯಾವ ನಿಯಮವು[2] (ಶಾಸ್ತ್ರದಲ್ಲಿ) ಪ್ರಸಿದ್ಧವಾಗಿರುವದೋ ಆಯಾ (ನಿಯಮವನ್ನು) ಅನುಸರಿಸಿ ಆಶ್ರಯಿಸಿಕೊಂಡು ಪ್ರಕೃತಿಯಿಂದ ಹಿಂದಿನ ಜನ್ಮಗಳಲ್ಲಿ ಸಂಪಾದಿಸಿಕೊಂಡಿರುವ ಆಯಾಸಂಸ್ಕಾರವೆಂಬ ಸ್ವಭಾವದಿಂದ ನಿಯತರಾಗಿ (ಅದರ) ಕಟ್ಟಿಗೆ ಸಿಕ್ಕಿಬಿದ್ದು (ಬೇರೆ ದೇವತೆಗಳ ಆರಾಧನೆಗೆ ಹೋಗುವರು).[3]

---

1. ಪುತ್ರಪೌತ್ರರು, ಬ್ರಹ್ಮವರ್ಚಸ್ಸು, ಹಣ, ಕೀರ್ತಿ-ಮುಂತಾದ.
2. ಜಪ, ಉಪವಾಸ-ಮುಂತಾದದ್ದು.
3. ಈ ಅರ್ಥವು ೪-೧೨ರಲ್ಲಿ ಸೂಚಿತವಾಗಿತ್ತು.

**ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।**
**ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥ ೨೧ ॥**

೨೧. ಯಾವ ಯಾವನು ಯಾವ ಯಾವ ತನುವನ್ನು ಭಕ್ತನಾಗಿ ಶ್ರದ್ಧೆಯಿಂದ ಅರ್ಚಿಸುವದಕ್ಕೆ ಇಚ್ಛಿಸುತ್ತಾನೋ ಅವನವನಿಗೆ ಆಯಾ ಅಚಲವಾದ ಶ್ರದ್ಧೆಯನ್ನೇ ನಾನು ಉಂಟುಮಾಡುವೆನು.

(ಭಾಷ್ಯ)

೪೭೬. ತೇಷಾಂ ಚ, ಕಾಮಿನಾಂ ಯೋ ಯಃ ಕಾಮೀ ಯಾಂ ಯಾಂ ದೇವತಾತನುಂ[1] ಶ್ರದ್ಧಯಾ ಸಂಯುಕ್ತಃ ಭಕ್ತಶ್ಚ ಸನ್ ಅರ್ಚಿತುಂ ಪೂಜಯಿತುಮ್ ಇಚ್ಛತಿ ತಸ್ಯ ತಸ್ಯ ಕಾಮಿನಃ ಅಚಲಾಂ ಸ್ಥಿರಾಂ ಶ್ರದ್ಧಾಂ ತಾಮೇವ ವಿದಧಾಮಿ ಯಯೈವ ಪೂರ್ವಂ ಪ್ರವೃತ್ತಃ ಸ್ವಭಾವತಃ[2] ॥

(ಭಾಷ್ಯಾರ್ಥ)

ಮತ್ತು ಈ ಕಾಮಿಗಳಲ್ಲಿ ಯಾವ ಯಾವ ಕಾಮಿಯು ಯಾವ ಯಾವ ದೇವತೆಯ ಮೂರ್ತಿಯನ್ನು[3] ಶ್ರದ್ಧೆಯಿಂದ ಕೂಡಿ ಭಕ್ತನೂ ಆಗಿ ಅರ್ಚಿಸುವದಕ್ಕೆ ಪೂಜಿಸುವದಕ್ಕೆ ಇಚ್ಛಿಸುತ್ತಾನೋ ಆಯಾ ಕಾಮಿಗೆ ಅಚಲವಾದ ನೆಲೆನಿಂತ ಶ್ರದ್ಧೆಯನ್ನು ಆ ಶ್ರದ್ಧೆಯನ್ನೇ-ಯಾವ ಶ್ರದ್ಧೆಯಿಂದ ಮೊದಲು ಸ್ವಭಾವದಿಂದ ಹೊರಟಿದ್ದನೋ (ಅದನ್ನೇ)-ನಾನು ಉಂಟುಮಾಡುವೆನು (ನಿಲ್ಲಿಸಿಕೊಡುವೆನು).

(ಭಾಷ್ಯ)

೪೭೭. ಯೋ ಯಾಂ[4] ದೇವತಾತನುಂ ಶ್ರದ್ಧಯಾ ಅರ್ಚಿತುಮ್ ಇಚ್ಛತಿ—

---

1. "ತನೂವಮ್" ಎಂದು ಮ॥ ವ್ಯೆ ; ಮುಂದಿನ ಶ್ಲೋಕಭಾಷ್ಯದ ಅವತರಣಿಕೆಯಲ್ಲಿಯೂ ಹೀಗೆಯೇ.

2. ಇಲ್ಲಿಯವರೆಗಿನ ಭಾಷ್ಯವು ಈ ಶ್ಲೋಕಕ್ಕೇ ಸೇರಿದ್ದೆಂದು ಇಟ್ಟುಕೊಂಡಿದೆ. ಮುದ್ರಿತ ಪುಸ್ತಕಗಳಲ್ಲಿ ಇದರ ಸ್ವಲ್ಪಭಾಗವು ಮುಂದಕ್ಕೆ ಸೇರಿದೆ.

3. ದೇವತೆಗಳಿಗೆ ಶರೀರವುಂಟು. ಯಾಗದ ಹವಿಸ್ಸುಗಳನ್ನು ಅವರು ಭೋಗಿಸುವರು, ಅವರಿಗೆ ಅಣಿಮಾದಿಶಕ್ತಿಗಳುಂಟು, ಅವರು ಪ್ರಸನ್ನರಾದರೆ ಭಕ್ತರಿಗೆ ಫಲವನ್ನು ಕೊಡುವರು ಎಂದು ಸೂ. ಭಾ. ೧-೩-೨೬ರಿಂದ ೩೩ರವರೆಗಿನ ಗ್ರಂಥದಲ್ಲಿ ನಿರ್ಣಯಿಸಿರುತ್ತದೆ.

4. "ಯೋ ಯೋ ಯಾಂ ಯಾಮ್" ಮ॥ವ್ಯ॥ "ಯೋ ಯಃ ಕಾಮೀ ಯಾಂ ಯಾಮ್" ವಾ॥ ಗು॥

(ಭಾಷ್ಯಾರ್ಥ)

(ಹೀಗೆ) ಯಾವನು ಯಾವ ದೇವತಾಮೂರ್ತಿಯನ್ನು ಶ್ರದ್ಧೆಯಿಂದ ಅರ್ಚಿಸುವದಕ್ಕೆ ಇಚ್ಛಿಸುತ್ತಾನೋ—

**ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾ ರಾಧನಮೀಹತೇ ।**
**ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿ ತಾನ್ ॥**

೨೨. ಅವನು ಆ ಶ್ರದ್ಧೆಯಿಂದ ಕೂಡಿದವನಾಗಿ ಆ (ಮೂರ್ತಿಯ) ರಾಧನೆಯನ್ನು (ಮಾಡುವದಕ್ಕೆ) ಪ್ರಯತ್ನಿಸುತ್ತಾನೆ, ಮತ್ತು ಅದರಿಂದ ನನ್ನಿಂದಲೇ ಉಂಟುಮಾಡಲ್ಪಟ್ಟ ಆ ಕಾಮುಗಳನ್ನು ಪಡೆದುಕೊಳ್ಳುತ್ತಾನೆ.

(ಭಾಷ್ಯ)

೪೭೯. ಸಃ ತಯಾ ಮದ್ವಿಹಿತಯಾ ಶ್ರದ್ಧಯಾ ಯುಕ್ತಃ ಸನ್ ತಸ್ಯಾಃ ದೇವತಾತನ್ವಾಃ ರಾಧನಮ್ ಆರಾಧನಮ್ ಈಹತೇ ಚೇಷ್ಟತೇ । ಲಭತೇ ಚ ತತಃ ತಸ್ಯಾ ಆರಾಧಿತಾಯಾ ದೇವತಾತನ್ವಾಃ ಕಾಮಾನ್ ಈಪ್ಸಿತಾನ್ ಮಯೈವ ಪರಮೇಶ್ವರೇಣ ಸರ್ವಜ್ಞೇನ ಕರ್ಮಫಲವಿಭಾಗಜ್ಞತಯಾ ವಿಹಿತಾನ್ ನಿರ್ಮಿತಾನ್ ತಾನ್ ಹಿ ಯಸ್ಮಾತ್ ತೇ ಭಗವತಾ ವಿಹಿತಾಃ ಕಾಮಾಃ ತಸ್ಮಾತ್ ತಾನ್ ಅವಶ್ಯಂ ಲಭತೇ ಇತ್ಯರ್ಥಃ । 'ಹಿತಾನ್' ಇತಿ ಪದಚ್ಛೇದೇ ಹಿತತ್ವಂ ಕಾಮಾನಾಮ್ ಉಪಚರಿತಂ ಕಲ್ಪ್ಯಮ್ । ನ ಹಿ ಕಾಮಾಃ ಹಿತಾಃ ಕಸ್ಯಚಿತ್ ॥

(ಭಾಷ್ಯಾರ್ಥ)

ಅವನು ನನ್ನಿಂದ ಆಗಿರುವ[1] ಆ ಶ್ರದ್ಧೆಯಿಂದ ಕೂಡಿದವನಾಗಿ ಆ ದೇವತಾಮೂರ್ತಿಯ ರಾಧನೆಯನ್ನು ಎಂದರೆ ಆರಾಧನೆಯನ್ನು (ಮಾಡುವದಕ್ಕೆ) ಪ್ರಯತ್ನಿಸುತ್ತಾನೆ. ಆ ಕೆಲಸವನ್ನು ಮಾಡುತ್ತಾನೆ ಮತ್ತು ಅದರಿಂದ ಎಂದರೆ ಹಾಗೆ ಆರಾಧಿಸಿದ ಆ ದೇವತಾಮೂರ್ತಿಯಿಂದ ಸರ್ವಜ್ಞನೂ ಪರಮೇಶ್ವರನೂ ಆದ ನಾನು ಕರ್ಮಫಲಗಳ ವಿಂಗಡವನ್ನು ಬಲ್ಲವನಾದ್ದರಿಂದ ನನ್ನಿಂದಲೇ[2] ವಿಹಿತವಾದ ಎಂದರೆ ನಿರ್ಮಿತವಾದ ಆ ಇಷ್ಟವಾದ ಕಾಮುಗಳನ್ನು ಪಡೆದುಕೊಳ್ಳುತ್ತಾನೆ.

---

1. ಪರಮೇಶ್ವರನಿಂದಲೇ ಶ್ರದ್ಧೆಯೇ ಮುಂತಾದ ಭಾವಗಳೆಲ್ಲವೂ ಉಂಟಾಗುವವು. ೭-೧೨, ೧೦-೪

2. ಕರ್ಮವು ಜಡವಾದ್ದರಿಂದಲೂ ನಶ್ವರವಾದ್ದರಿಂದಲೂ ಫಲವನ್ನು ಕೊಡಲಾರದು ; ಆದ್ದರಿಂದ ಈಶ್ವರನೇ ಫಲವನ್ನು ಕೊಡುವವನು ಸೂ. ಭಾ. ೩-೨-೩೮ರಿಂದ ೪೧. ದೇವತೆಗಳಿಗೂ ಕರ್ತವ್ಯ ಕರ್ಮವನ್ನು ನಿರ್ಮಿಸುವವನು ಈಶ್ವರನೇ. ಈ. ಭಾ. ೮ (ಭಾ. ಭಾ. ೧೭).

**ಆ ಫಲಗಳನ್ನು ಭಗವಂತನೇ ಉಂಟುಮಾಡುವದರಿಂದ ಅವನ್ನು ಅವಶ್ಯವಾಗಿ ಪಡೆದೇ ತೀರುವನು ಎಂದರ್ಥ** "ಹಿತಾನ್" ಎಂದು ಪದಚ್ಛೇದ ಮಾಡಿದರೆ ಕಾಮಗಳನ್ನು ಹಿತ (ವೆಂದು ಹೇಳಿರುವದು) ಉಪಚಾರಕ್ಕೆ [1] ಎಂದು ಕಲ್ಪಿಸಬೇಕು. ಏಕೆಂದರೆ ಕಾಮಗಳು ಯಾರೊಬ್ಬರಿಗೂ (ನಿಜವಾಗಿ) ಹಿತವಾಗಿರುವದೇ ಇಲ್ಲ.

(ಭಾಷ್ಯ)

೪೭೯. ಯಸ್ಮಾತ್ ಅನ್ತವತ್ಸಾಧನವ್ಯಾಪಾರಾ ಅವಿವೇಕಿನಃ ಕಾಮಿನಶ್ಚ ತೇ ಅತಃ—

(ಭಾಷ್ಯಾರ್ಥ)

ಅವಿವೇಕಿಗಳೂ ಕಾಮಿಗಳೂ ಆಗಿ (ಸ್ವಲ್ಪ ಕಾಲದಲ್ಲಿಯೇ) ಕೊನೆಗಾಣುವ (ಫಲವುಳ್ಳ) ಸಾಧನವನ್ನೇ ಅವರು ಮಾಡುತ್ತಿರುವದರಿಂದ—

**ಅನ್ತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಮ್ ।**
**ದೇವಾನ್ ದೇವಯಜೋ ಯಾನ್ತಿ ಮದ್ಭಕ್ತಾ ಯಾನ್ತಿ ಮಾಮಪಿ ॥**

೨೩. ಆದರೆ ಅವರಿಗೆ ಆಗುವ ಫಲವು ಅಂತವುಳ್ಳದ್ದು, ಅದು ಅಲ್ಪಮೇಧಸ್ಸಿನವರಿಗೆ ಆಗುತ್ತದೆ. ದೇವತೆಗಳನ್ನು ಪೂಜಿಸುವವರು ದೇವತೆಗಳನ್ನು ಸೇರುವರು, ನನ್ನ ಭಕ್ತರು ನನ್ನನ್ನೂ ಸೇರುವರು.

(ಭಾಷ್ಯ)

೪೮೦. ಅನ್ತವತ್ ವಿನಾಶಿ ತು ಫಲಂ ತೇಷಾಂ ತತ್ ಭವತಿ ಅಲ್ಪಮೇಧಸಾಮ್ ಅಲ್ಪಪ್ರಜ್ಞಾನಾಮ್ (ದೇವಾನ್ ದೇವಯಜಃ ಯಾನ್ತಿ) [2] । ದೇವಾನ್ ಯಜನ್ತೇ ಇತಿ ದೇವಯಜಃ ತೇ ದೇವಾನ್ ಯಾನ್ತಿ। ಮದ್ಭಕ್ತಾಃ ಯಾನ್ತಿ ಮಾಮಪಿ। ಏವಂ ಸಮಾನೇ ಪಿ ಆಯಾಸೇ ಮಾಮೇವ ನ ಪ್ರಪದ್ಯನ್ತೇ [3] ಅನನ್ತಫಲಾಯ ಅಹೋ ಖಲು ಕಷ್ಟಂ [4] ವರ್ತತೇ ! ಇತಿ ಅನುಕ್ರೋಶಂ ದರ್ಶಯತಿ ಭಗವಾನ್ ॥

---

1. ಗೌಣಾರ್ಥದಲ್ಲಿ ಎಂದರ್ಥ ಅವರ ದೃಷ್ಟಿಯಿಂದ ಹಿತವೆಂದು ತೋರುವದರಿಂದ ಹಿತವೆಂದಿದೆ ಎಂದು ಭಾವ.
2. ಕಂಸದಲ್ಲಿರುವ ಭಾಗವು ಮ॥ ಮೈ॥ಗಳಲ್ಲಿಲ್ಲ. ಇಲ್ಲದಿದ್ದರೂ ಆಗುತ್ತದೆ.
3. 'ಪ್ರತಿಪದ್ಯನ್ತೇ' ಮ॥ ಮೈ॥
4. "ಕಷ್ಟತರಮ್" ಮ॥ ಮೈ॥

(ಭಾಷ್ಯಾರ್ಥ)

ಆದರೆ ಅವರಿಗೆ ಆಗುವ ಫಲವು ಅಂತವುಳ್ಳದ್ದು ನಾಶವಾಗತಕ್ಕದ್ದು [1] ; ಅದು ಅಲ್ಪಮೇಧಸ್ಸಿನವರಿಗೆ ಅಲ್ಪಬುದ್ಧಿಯುಳ್ಳವರಿಗೆ ಆಗುತ್ತದೆ. "ದೇವಾನ್ ದೇವಯಜಃ ಯಾನ್ತಿ" ಎಂಬಲ್ಲಿ ದೇವತೆಗಳನ್ನು ಪೂಜಿಸುವವರು ದೇವಯಾಜಿಗಳು ; ಅವರು ದೇವತೆಗಳನ್ನು ಸೇರುವರು. [2] ನನ್ನ ಭಕ್ತರು ನನ್ನನ್ನು ಸೇರುವರು. ಹೀಗೆ ಶ್ರಮವು **(ಎರಡರಲ್ಲಿಯೂ) ಸಮವಾಗಿದ್ದರೂ [3] ನನ್ನನ್ನು (ಶರಣು) ಹೊಂದಿ ಅನಂತ ಫಲವನ್ನು ಪಡೆದುಕೊಳ್ಳದೆ ಇರುವರಲ್ಲ! ಇದು ಎಂಥ ಶೋಚನೀಯವಾದ ವಿಷಯ!—ಎಂದು ಭಗವಂತನು ಮರುಕವನ್ನು ತೋರಿಸುತ್ತಿದ್ದಾನೆ.**

## ಅಜ್ಞರಿಗೆ ಪರಮಾತ್ಮತತ್ತ್ವವು ಗೋಚರಿಸದೆ ಇರಲು ಕಾರಣ

(ಭಾಷ್ಯ)

೪೮೧. ಕಿಂನಿಮಿತ್ತಂ ಮಾಮೇವ ನ ಪ್ರಪದ್ಯನ್ತೇ ಇತಿ ? ಉಚ್ಯತೇ —

(ಭಾಷ್ಯಾರ್ಥ)

(ಅವರು) ನನ್ನನ್ನೇ (ಶರಣು) ಹೊಂದದೆ ಇರಲು ಕಾರಣವೇನೆಂದರೆ ಹೇಳುತ್ತೇನೆ (ಕೇಳು) :—

**ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯನ್ತೇ ಮಾಮಬುದ್ಧಯಃ ||**
**ಪರಂ ಭಾವಮಜಾನನ್ತೋ ಮಮಾವ್ಯಯಮನುತ್ತಮಮ್ || ೨೪ ||**

೨೪. ಅವ್ಯಕ್ತನಾಗಿದ್ದು ವ್ಯಕ್ತಿಯನ್ನು ಹೊಂದಿದನೆಂದು ಅಬುದ್ಧಿಗಳಾದವರು ನನ್ನನ್ನು ಎಣಿಸುವರು. (ಅವರು) ಅವ್ಯಯವಾಗಿರುವ ನನ ಅನುತ್ತಮವಾದ ಪರಭಾವವನ್ನು ಅರಿಯರು.

(ಭಾಷ್ಯ)

೪೮೨. ಅವ್ಯಕ್ತಮ್ ಅಪ್ರಕಾಶಂ ವ್ಯಕ್ತಿಮ್ ಆಪನ್ನಂ ಪ್ರಕಾಶಂ ಗತಮ್

---

1. ಮುಂ. ೧-೨-೭,೮ ; ಬೃ. ೪-೪-೬.
2. ಬೃ. ೪-೧-೨.
3. ಪರಮಾತ್ಮನ ಉಪಾಸನೆಗೂ ದೇವತೋಪಾಸನೆಗೆ ಬೇಕಾಗುವಷ್ಟೇ ಶ್ರಮ, ಹೆಚ್ಚಿಲ್ಲ.

ಇದಾನೀಂ ಮನ್ಯನ್ತೇ ಮಾಂ ನಿತ್ಯಪ್ರಸಿದ್ಧಮ್ ಈಶ್ವರಮಪಿ ಸನ್ತಮ್ ಅಬುದ್ಧಯಃ ಅವಿವೇಕಿನಃ ಪರಂ ಭಾವಂ ಪರಮಾತ್ಮಸ್ವರೂಪಮ್ ಅಜಾನನ್ತಃ ಅವಿವೇಕಿನಃ ಮಮ ಅವ್ಯಯಂ ವ್ಯಯರಹಿತಮ್ ಅನುತ್ತಮಂ ನಿರತಿಶಯಂ ಮದೀಯಂ ಭಾವಮ್ ಅಜಾನನ್ತಃ ಮನ್ಯನ್ತೇ ಇತ್ಯರ್ಥಃ ||

(ಭಾಷ್ಯಾರ್ಥ)

ಅವ್ಯಕ್ತನಾಗಿದ್ದು (ಮೊದಲು) ತೋರಿಕೊಳ್ಳದೆ ಇದ್ದು ಈಗ ವ್ಯಕ್ತಿಯನ್ನು ಹೊಂದಿದನು, ತೋರಿಕೊಂಡನು ಎಂದು–ನಿತ್ಯಪ್ರಸಿದ್ಧನಾಗಿರುವ ಈಶ್ವರನಾಗಿದ್ದರೂ ಹೀಗೆಂದು–ಅಬುದ್ಧಿಗಳಾದವರು ಅವಿವೇಕಿಗಳು ಎಣಿಸುವರು. (ಆ) ಅವಿವೇಕಿಗಳು ನನ್ನ ಅವ್ಯಯವಾದ ವ್ಯಯವಿಲ್ಲದ ಅನುತ್ತಮವಾದ ಮಿಗಿಲಿಲ್ಲದ ಪರಭಾವವನ್ನು[1] ಪರಮಾತ್ಮಸ್ವರೂಪವೆಂಬ ನನ್ನ ಸ್ವರೂಪವನ್ನು ಅರಿತುಕೊಳ್ಳಲಾರದೆ (ಹೀಗೆ) ಎಣಿಸುವರು ಎಂದರ್ಥ.

(ಭಾಷ್ಯ)

೪೮೩. ತದೀಯಮ್ ಅಜ್ಞಾನಂ ಕಿಂನಿಮಿತ್ತಮ್ ಇತಿ? ಉಚ್ಯತೇ–

(ಭಾಷ್ಯಾರ್ಥ)

ಅವರು (ನನ್ನ ಸ್ವರೂಪವನ್ನು) ಅರಿಯದೆ ಇರಲು ನಿಮಿತ್ತವೇನೆಂದರೆ[2] ಹೇಳುತ್ತೇನೆ :—

**ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ ।**
**ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್ ॥**

೨೫. ಯೋಗಮಾಯಾಸಮಾವೃತನಾದ ನಾನು ಎಲ್ಲರಿಗೂ ಪ್ರಕಾಶನಲ್ಲ. ಈ ಮೂಢಜನವು ಅಜನೂ ಅವ್ಯಯನೂ ಆಗಿರುವ ನನ್ನನ್ನು ಅರಿಯದು.

---

1. ಪರಮಾತ್ಮನು ತನ್ನ ಸ್ವರೂಪದಲ್ಲಿಯೇ ಇರುತ್ತಿದ್ದರೂ ಅವನ ಅವತಾರದ ದೇಹವನ್ನು ಕಂಡು ಅವನೂ ತಮ್ಮಂತೆ ಸಂಸಾರಿಯೆಂದೇ ಭಾವಿಸುವರು ಎಂದರ್ಥ. ೯-೧೧ ನೋಡಿ.

2. ಹಿಂದೆ ೭-೧೪ರಲ್ಲಿ ತ್ರಿಗುಣಾತ್ಮಕಮಾಯೆಯೇ ಪರಮಾತ್ಮನನ್ನು ಯಥಾವತ್ತಾಗಿ ಅರಿತುಕೊಳ್ಳದಿರುವದಕ್ಕೆ ಕಾರಣವೆಂದು ಹೇಳಿತ್ತು. ಈಗ ಪರಮಾತ್ಮನ ಅವತಾರದ ನಿಜವನ್ನು ಕಂಡುಕೊಳ್ಳದಿರುವದಕ್ಕೂ ಅದೇ ಕಾರಣವೆಂದು ಹೇಳಿದೆ.

(ಭಾಷ್ಯ)

೪೮೪. ನ ಅಹಂ ಪ್ರಕಾಶಃ ಸರ್ವಸ್ಯ ಲೋಕಸ್ಯ । ಕೇಷಾಂಚಿದೇವ ಮದ್ಭಕ್ತಾನಾಂ ಪ್ರಕಾಶಃ ಅಹಮ್ ಇತ್ಯಭಿಪ್ರಾಯಃ । ಯೋಗಮಾಯಾಸಮಾವೃತಃ ಯೋಗಃ ಗುಣಾನಾಂ ಯುಕ್ತಿಃ ಘಟನಮ್ ಸೈವ ಮಾಯಾ ಯೋಗಮಾಯಾ [1] ತಯಾ ಯೋಗಮಾಯಯಾ ಸಮಾವೃತಃ ಸಞ್ಛನ್ನಃ ಇತ್ಯರ್ಥಃ । ಅತ ಏವ ಮೂಢಃ ಲೋಕಃ ಅಯಂ ನ ಅಭಿಜಾನಾತಿ ಮಾಮ್ ಅಜಮ್ ಅವ್ಯಯಮ್ । ಯಯಾ ಯೋಗಮಾಯಯಾ ಸಮಾವೃತಂ ಮಾಂ ಲೋಕಃ ನ ಅಭಿಜಾನಾತಿ ನಾಸೌ ಯೋಗಮಾಯಾ ಮದೀಯಾ ಸತೀ ಮಮ ಈಶ್ವರಸ್ಯ ಮಾಯಾವಿನಃ ಜ್ಞಾನಂ ಪ್ರತಿಬಧ್ನಾತಿ ಯಥಾ ಅನ್ಯಸ್ಯಾಪಿ ಮಾಯಾವಿನಃ ಮಾಯಾಜ್ಞಾನಮ್, ತದ್ವತ್ ॥

(ಭಾಷ್ಯಾರ್ಥ)

ನಾನು ಎಲ್ಲಾ ಜನರಿಗೂ ಪ್ರಕಾಶನಲ್ಲ, ನನ್ನ ಭಕ್ತರಾಗಿರುವ ಕೆಲವರಿಗೆ ಮಾತ್ರ ಪ್ರಕಾಶನಾಗಿರುವೆನು ಎಂದು ಅಭಿಪ್ರಾಯ. (ಏಕೆಂದರೆ) ಯೋಗಮಾಯಾ ಸಮಾವೃತನಾಗಿರುತ್ತೇನೆ. ಯೋಗವೆಂದರೆ ಗುಣಗಳ ಯೋಜನೆ ಸೇರಿಸುವಿಕೆ, ಅದೇ ಮಾಯೆಯಾದ್ದರಿಂದ ಯೋಗಮಾಯೆ (ಎನಿಸುತ್ತದೆ). ಆ ಯೋಗಮಾಯೆಯಿಂದ ಸಮಾವೃತನಾಗಿರುವೆನು, ಎಂದರೆ ಮುಸುಕಿಟ್ಟುಕೊಂಡಿರುವೆನು ಎಂದರ್ಥ. ಆದ್ದರಿಂದಲೇ ಮೂಢವಾದ ಈ ಜನವು ಜನ್ಮವಿಲ್ಲದವನೂ ನಾಶವಿಲ್ಲದವನೂ ಆದ ನನ್ನನ್ನು ಗೊತ್ತುಪಡಿಸಿಕೊಳ್ಳಲಾಗದೆ ಇರುವದು [2].

**ಯಾವ ಯೋಗಮಾಯೆಯಿಂದ ಮುಸುಕಿಟ್ಟುಕೊಂಡಿರುವ ನನ್ನನ್ನು ಜನವು (ಗೊತ್ತುಪಡಿಸಿ) ಅರಿತುಕೊಳ್ಳಲಾರದೆ ಇರುವದೋ ಈ ಯೋಗಮಾಯೆಯು ನನ್ನದಾದ್ದರಿಂದ [3] ಮಾಯಾವಿಯಾದ ಈಶ್ವರನಾದ ನನ್ನ ಜ್ಞಾನಕ್ಕೆ ಅಡ್ಡಿಯಾಗಿರುವದಿಲ್ಲ ; ಬೇರೆಯ (ಲೌಕಿಕ) ಮಾಯಾವಿಯು**

---

1. " ಅಥವಾ ಭಗವತಶ್ಚಿತ್ತಸಮಾಧಾನಂ ಯೋಗಃ ತತ್ಕೃತಾ ಮಾಯಾ ಯೋಗಮಾಯಾ " ಎಂಬ ಮ|| ಪಾಠವು ಅಪ್ರಕೃತವೆಂದು ಬಿಟ್ಟಿದೆ.

2. ದೇಹದ ಜನನಮರಣಗಳಿಂದ ನನಗೆ ಜನ್ಮಮರಣಗಳಿರುವವೆಂದು ಬಗೆಯುವರು.

3. ನನ್ನ ಅಧೀನವಾಗಿರುವದರಿಂದ ; ನನ್ನನ್ನು ಬಿಟ್ಟು ಸ್ವತಂತ್ರವಾದ ಇರವು ಇಲ್ಲದ್ದಾದ್ದರಿಂದ.

ಮಾಯೆಯೂ ಹೇಗೆ (ಅವನ) ಜ್ಞಾನಕ್ಕೆ ಅಡ್ಡಿಯಾಗಿರುವದಿಲ್ಲವೋ, ಅದರಂತೆ.[1]

**ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ ।**
**ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ ॥ ೨೬ ॥**

೨೬. ಅರ್ಜುನನೆ, ನಾನು ಸಮತೀತವಾದ ವರ್ತಮಾನವಾಗಿರುವ ಭವಿಷ್ಯವಾದ ಭೂತಗಳನ್ನೂ ಬಲ್ಲೆನು ; ಆದರೆ ನನ್ನನ್ನು ಯಾವನೊಬ್ಬನೂ ಅರಿಯನು.

(ಭಾಷ್ಯ)

೪೮೫. ಯತ ಏವಮ್ ಅತಃ ಅಹಂ ತು ವೇದ ಜಾನೇ ಸಮತೀತಾನಿ ಸಮತಿಕ್ರಾನ್ತಾನಿ ಭೂತಾನಿ ವರ್ತಮಾನಾನಿ ಚ ಅರ್ಜುನ । ಭವಿಷ್ಯಾಣಿ ಚ ಭೂತಾನಿ ವೇದ ಅಹಮ್ । ಮಾಂ ತು ವೇದ ನ ಕಶ್ಚನ ಮದ್ಭಕ್ತಂ ಮಚ್ಛರಣಮ್ ಏಕಂ ಮುಕ್ತ್ವಾ । ಮತ್ತತ್ತ್ವವೇದನಾಭಾವಾದೇವ ನ ಮಾಂ ಭಜತೇ ।

(ಭಾಷ್ಯಾರ್ಥ)

ಹೀಗಿರುವದರಿಂದ, ಎಲೈ ಅರ್ಜುನನೆ, ನಾನಾದರೋ ಸಮತೀತವಾದ ಹಿಂದೆ ಆಗಿಹೋಗಿರುವ ಭೂತಗಳನ್ನೂ ಈಗ ಇರುವ (ಭೂತಗಳನ್ನೂ) ಬಲ್ಲೆನು, ಅರಿತಿರುವೆನು. ಮುಂದೆ ಹುಟ್ಟುವ ಭೂತಗಳನ್ನೂ ನಾನು ಬಲ್ಲೆನು. ಆದರೆ ನನ್ನನ್ನು ಯಾರೂ–ನನ್ನನ್ನು ಶರಣುಹೊಂದಿರುವ ನನ್ನ ಭಕ್ತನೊಬ್ಬನನ್ನು ಬಿಟ್ಟರೆ (ಮತ್ತೆ ಯಾರೂ)–ಅರಿಯರು.[2] (ಹೀಗೆ) ನನ್ನ ನಿಜವನ್ನು ಅರಿಯದ್ದರಿಂದಲೇ ನನ್ನನ್ನು ಭಜಿಸುವದಿಲ್ಲ.

(ಭಾಷ್ಯ)

೪೮೬. ಕೇನ ಪುನಃ ಮತ್ತತ್ತ್ವವೇದನಪ್ರತಿಬನ್ಧೇನ ಪ್ರತಿಬದ್ಧಾನಿ ಸನ್ತಿ ಜಾಯಮಾನಾನಿ ಸರ್ವಭೂತಾನಿ ಮಾಂ ನ ವಿದನ್ತಿ[3] ? ಇತ್ಯಪೇಕ್ಷಾಯಾಮ್ ಇದಮ್ ಆಹ—

---

1. ಕಣ್ಣುಕಟ್ಟಿಗೆ ಒಳಗಾದವರೇ ಮಾಯೆಯನ್ನು ಸತ್ಯವೆಂದು ಬಗೆಯುವವರು, ಮಾಯಾವಿಯಲ್ಲ ; ಇದರಂತೆ ಜೀವರ ಜ್ಞಾನಕ್ಕೆ ಮಾತ್ರ ಗುಣಾತ್ಮಕಮಾಯೆಯು ಅಡ್ಡಿಯಾಗಿರುತ್ತದೆ, ಈಶ್ವರನ ಜ್ಞಾನಕ್ಕಲ್ಲ ೪-೫ರ ಭಾಷ್ಯವನ್ನು ನೋಡಿ.

2. ಶ್ಲೋ. ೭-೧೮. ಭಕ್ತನು ಮಾತ್ರ ಆತ್ಮನೇ ಆಗಿರುವ ಪರಮೇಶ್ವರನನ್ನು ಇದ್ದಂತೆ ಅರಿತುಕೊಂಡಿರುತ್ತಾನೆ.

3. 'ವಿನ್ದನ್ತಿ' ಮೈ॥ ; 'ವಿಜಾನನ್ತಿ' ಮ॥

(ಭಾಷ್ಯಾರ್ಥ)

ನನ್ನ ತತ್ತ್ವವನ್ನು ತಿಳಿಯುವದಕ್ಕೆ ಯಾವ ಅಡಚಣೆಯಿರುವದರಿಂದ ಅಡ್ಡಿಯಾಗಿ ಹುಟ್ಟುವ ಪ್ರಾಣಿಗಳು ಯಾವವೂ ನನ್ನನ್ನು ತಿಳಿಯದೆ ಇರುವವು ?-ಎಂದು ಕೇಳಬಹುದು. ಆದಕ್ಕೆ ಹೇಳುತ್ತೇನೆ :—

**ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।**
**ಸರ್ವಭೂತಾನಿ ಸಮ್ಮೋಹಂ ಸರ್ಗೇ ಯಾನ್ತಿ ಪರಂತಪ ॥ ೨೭ ॥**

೨೭. ಎಲೈ ಭಾರತನೆ, ಪರಂತಪನೆ, ಇಚ್ಛಾದ್ವೇಷಗಳಿಂದ ಎದ್ದುಕೊಂಡಿರುವ ದ್ವಂದ್ವಮೋಹದಿಂದ ಸರ್ವಭೂತಗಳೂ ಸರ್ಗದಲ್ಲಿ ಸಮ್ಮೋಹವನ್ನು ಹೊಂದುವವು.

(ಭಾಷ್ಯ)

೪೮೭. ಇಚ್ಛಾದ್ವೇಷಸಮುತ್ಥೇನ ಇಚ್ಛಾ ಚ ದ್ವೇಷಶ್ಚ ಇಚ್ಛಾದ್ವೇಷೌ ತಾಭ್ಯಾಂ ಸಮುತ್ತಿಷ್ಠತಿ ಇತಿ ಇಚ್ಛಾದ್ವೇಷಸಮುತ್ಥಃ । ತೇನ ಇಚ್ಛಾದ್ವೇಷಸಮುತ್ಥೇನ। ಕೇನ? ಇತಿ ವಿಶೇಷಾಪೇಕ್ಷಾಯಾಮ್ [1] ಇದಮ್ ಆಹ–ದ್ವಂದ್ವಮೋಹೇನ। ದ್ವಂದ್ವನಿಮಿತ್ತಃ ಮೋಹಃ ದ್ವಂದ್ವಮೋಹಃ ತೇನ। ತೌ ಏವ ಇಚ್ಛಾದ್ವೇಷೌ ಶೀತೋಷ್ಣವತ್ ಪರಸ್ಪರವಿರುದ್ಧೌ ಸುಖದುಃಖತದ್ಧೇತುವಿಷಯೌ ಯಥಾಕಾಲಂ ಸರ್ವಭೂತೈಃ ಸಂಬಧ್ಯಮಾನೌ ದ್ವಂದ್ವಶಬ್ದೇನ ಅಭಿಧೀಯೇತೇ। ತತ್ರ ಯದಾ ಇಚ್ಛಾದ್ವೇಷೌ ಸುಖದುಃಖತದ್ಧೇತುಸಂಪ್ರಾಪ್ತ್ಯಾ ಲಬ್ಧಾತ್ಮಕೌ ಭವತಃ ತದಾ ತೌ ಸರ್ವಭೂತಾನಾಂ ಪ್ರಜ್ಞಾಯಾಃ ಸ್ವವಶಾಪಾದನದ್ವಾರೇಣ ಪರಮಾರ್ಥಾತ್ಮತತ್ತ್ವವಿಷಯಜ್ಞಾನೋತ್ಪತ್ತಿಪ್ರತಿಬನ್ಧಕಾರಣಂ ಮೋಹಂ ಜನಯತಃ । ನ ಹಿ ಇಚ್ಛಾದ್ವೇಷವಶೀಕೃತಚಿತ್ತಸ್ಯ ಯಥಾಭೂತಾರ್ಥವಿಷಯಜ್ಞಾನಮ್ ಉತ್ಪದ್ಯತೇ ಬಹಿರಪಿ। ಕಿಮು ವಕ್ತವ್ಯಂ ತಾಭ್ಯಾಮ್ ಆವಿಷ್ಟಬುದ್ಧೇಃ ಸಂಮೂಢಸ್ಯ ಪ್ರತ್ಯಗಾತ್ಮನಿ ಬಹುಪ್ರತಿಬನ್ಧೇ ಜ್ಞಾನಂ ನೋತ್ಪದ್ಯತೇ ಇತಿ। ಅತಃ ತೇನ ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ಭರತಾನ್ವಯಜ ಸರ್ವಭೂತಾನಿ ಸಂಮೋಹಿತಾನಿ ಸನ್ತಿ ಸಂಮೋಹಂ ಸಂಮೂಢತಾಂ ಸರ್ಗೇ ಜನ್ಮನಿ। ಉತ್ಪತ್ತಿಕಾಲೇ ಇತ್ಯೇತತ್ । ಯಾನ್ತಿ ಗಚ್ಛನ್ತಿ। ಹೇ ಪರಂತಪ।

---

1. " ವಿಶೇಷ್ಯಾಪೇಕ್ಷಾಯಾಮ್ " ಋ॥

ಮೋಹವಶಾನ್ಯೇವ ಸರ್ವಭೂತಾನಿ ಜಾಯಮಾನಾನಿ ಜಾಯನ್ತೇ ಇತ್ಯಭಿಪ್ರಾಯಃ। ಯತ ಏವಮ್ ಅತಃ ತೇನ ದ್ವಂದ್ವಮೋಹೇನ ಪ್ರತಿಬದ್ಧಪ್ರಜ್ಞಾನಾನಿ ಸರ್ವಭೂತಾನಿ ಸಂಮೋಹಿತಾನಿ ಮಾಮ್ ಆತ್ಮಭೂತಂ ನ ಜಾನನ್ತಿ। ಅತ ಏವ ಆತ್ಮಭಾವೇನ ಮಾಂ ನ ಭಜನ್ತೇ ॥

(ಭಾಷ್ಯಾರ್ಥ)

ಇಚ್ಛಾದ್ವೇಷಸಮುತ್ಥವಾದ-ಇಚ್ಛೆಯೂ ದ್ವೇಷವೂ ಇಚ್ಛಾದ್ವೇಷಗಳು, ಅವುಗಳಿಂದ ಎದ್ದುಕೊಂಡಿರುವದರಿಂದ ಇಚ್ಛಾದ್ವೇಷಸಮುತ್ಥವೆನಿಸುವದು-ಅಂಥ, ಇಚ್ಛಾದ್ವೇಷಸಮುತ್ಥವಾದ. (ಅದು) ಯಾವದು? ಎಂದು (ಪದಾರ್ಥ) ವಿಶೇಷವನ್ನು ಕೇಳಿದರೆ (ಭಗವಂತನು) ಇದನ್ನು ಹೇಳುತ್ತಾನೆ: ದ್ವಂದ್ವಮೋಹದಿಂದ ದ್ವಂದ್ವವೆಂಬ ನಿಮಿತ್ತದಿಂದ ಆಗುವ ಮೋಹವು ದ್ವಂದ್ವಮೋಹವು, ಅದರಿಂದ. ಅದೇ ಇಚ್ಛಾದ್ವೇಷಗಳೇ ಶೀತೋಷ್ಣಗಳಂತೆ ಒಂದಕ್ಕೊಂದು ವಿರುದ್ಧವಾಗಿದ್ದುಕೊಂಡು ಸುಖದುಃಖಗಳ ಮತ್ತು ಅವುಗಳಿಗೆ ಕಾರಣವಾಗಿರುವ (ವಸ್ತುವಿನ) ವಿಷಯದಲ್ಲಿ ಆಯಾಕಾಲದಲ್ಲಿ ಸರ್ವಪ್ರಾಣಿಗಳಿಗೂ ಉಂಟಾಗುವಾಗ[1] (ಅವನ್ನು) 'ದ್ವಂದ್ವ' ಎಂಬ ಹೆಸರಿನಿಂದ ಕರೆಯುತ್ತಾರೆ **ಹೀಗಿರುವದರಿಂದ ಸುಖದುಃಖ, ಅವುಗಳಿಗೆ ಕಾರಣವಾಗಿರುವ (ವಸ್ತು) ಇವುಗಳು ಬಂದೊದಗಿದಾಗ ಇಚ್ಛೆ, ದ್ವೇಷ-ಇವುಗಳು ಯಾವಾಗ ಉಂಟಾಗುವವೋ ಆಗ ಅವು ಯಾವ ಪ್ರಾಣಿಗಳ ತಿಳಿವಳಿಕೆಯನ್ನಾದರೂ ತನ್ನ ವಶಕ್ಕೆ ತೆಗೆದುಕೊಂಡು ಪರಮಾರ್ಥವಾಗಿರುವ ಆತ್ಮತತ್ತ್ವದ ವಿಷಯವಾದ ಜ್ಞಾನವು ಉಂಟಾಗುವದಕ್ಕೆ ಅಡ್ಡಿಯನ್ನುಂಟುಮಾಡುವ ಕಾರಣವಾದ ಮೋಹವನ್ನು ಹುಟ್ಟಿಸುವವು.**[2] ಏಕೆಂದರೆ ಇಚ್ಛಾದ್ವೇಷಗಳ ವಶವಾಗಿರುವ ಚಿತ್ತವುಳ್ಳವನಿಗೆ ಹೊರಗಿನ (ವಸ್ತುವಿನ)ಲ್ಲಿ ಕೂಡ ವಿಷಯವು ಇದ್ದಂತೆ ಅದರ ಜ್ಞಾನವು ಉಂಟಾಗುವದಾಗಿಲ್ಲ. ಹೀಗಿರುವಲ್ಲಿ ಅವೆರಡೂ ಹೊಕ್ಕು ಹಿಡಿದುಕೊಂಡಿರುವ ಬುದ್ಧಿಯುಳ್ಳವನಾಗಿ

---

1. ಒಂದೇ ವಸ್ತು ಬೇರೆಬೇರೆಯ ಕಾಲಗಳಲ್ಲಿ ಸುಖಕ್ಕೂ ದುಃಖಕ್ಕೂ ಕಾರಣವಾಗಿರುತ್ತದೆ. ಸುಖಕ್ಕೆ ಕಾರಣವಾದಾಗ ಅದರಲ್ಲಿ ಇಚ್ಛೆಯೂ ದುಃಖಕ್ಕೆ ಕಾರಣವಾದಾಗ ದ್ವೇಷವೂ ಉಂಟಾಗುವವು.

2. ಸುಖದುಃಖಗಳಿಂದ ಇಚ್ಛಾದ್ವೇಷಗಳು ಉಂಟಾಗುವವು; ಆ ಇಚ್ಛಾದ್ವೇಷಗಳಿಗೆ ವಶರಾದವರಿಗೆ ತಮಗೆ ಅನುಕೂಲವಾಗುವಂತೆ ವಸ್ತುವನ್ನು ಭಾವಿಸುವ ಮೋಹವು ಉಂಟಾಗುವದು. ಈ ಮೋಹವೆಂಬ ತಪ್ಪುತಿಳಿವಳಿಕೆಯೇ ತತ್ತ್ವಜ್ಞಾನಕ್ಕೆ ಅಡ್ಡಿ.

ಸಂಪೂರ್ಣವಾಗಿ ಮೂಢನಾಗಿರುವವನಿಗೆ ಎಷ್ಟೋ ಅಡ್ಡಿಗಳುಳ್ಳ[1] ಪ್ರತ್ಯಗಾತ್ಮನ ವಿಷಯದಲ್ಲಿ ಜ್ಞಾನವು ಉಂಟಾಗಲಾರದೆಂದು ಹೇಳುವದೇನಿದೆ?

ಆದ್ದರಿಂದ ಈ ಇಚ್ಛಾದ್ವೇಷಗಳಿಂದ ಎದ್ದುಕೊಂಡಿರುವ ದ್ವಂದ್ವಮೋಹದಿಂದ, ಎಲೈ ಭಾರತನೆ, ಭರತವಂಶೋತ್ಪನ್ನನೆ, ಸರ್ವಭೂತಗಳೂ ಏನೂ ತೋಚದೆ, ಸಂಮೋಹವನ್ನು ಎಂದರೆ ಸಂಪೂರ್ಣವಾಗಿ ಮೂಢರಾಗುವಿಕೆಯನ್ನು ಸರ್ಗದಲ್ಲಿ ಎಂದರೆ ಜನ್ಮದಲ್ಲಿಯೇ ಹುಟ್ಟುವ ಕಾಲದಲ್ಲಿಯೇ ಎಂದರ್ಥ; ಹೊಂದುವವು, ಪಡೆದುಕೊಳ್ಳುವವು. ಎಲೈ ಪರಂತಪನೆ, ಎಲ್ಲಾ ಪ್ರಾಣಿಗಳೂ ಹುಟ್ಟುವಾಗ ಮೋಹಕ್ಕೆ ವಶವಾಗಿಯೇ ಹುಟ್ಟುತ್ತಿರುವವು[2] ಎಂದು ಅಭಿಪ್ರಾಯ. ಹೀಗಿರುತ್ತದೆಯಷ್ಟೆ, ಆದಕಾರಣ ಆ ದ್ವಂದ್ವಮೋಹದಿಂದ ಜ್ಞಾನಕ್ಕೆ ಅಡ್ಡಿಯಾಗಿ ನಾನು ತಮ್ಮ ಆತ್ಮನೇ (ಆಗಿದ್ದರೂ) ಅರಿತುಕೊಳ್ಳದೆ ಇರುವವು. ಆದ್ದರಿಂದಲೇ ನಾನು ತಮ್ಮ ಆತ್ಮನೇ ಎಂಬ ಭಾವದಿಂದ ನನ್ನನ್ನು ಭಜಿಸದೆ ಇರುವರು.

## ಪುಣ್ಯವಂತರು ಭಗವಂತನನ್ನು ಭಜಿಸುವರು

(ಭಾಷ್ಯ)

೪೮೮. ಕೇ ಪುನಃ ಅನೇನ ದ್ವಂದ್ವಮೋಹೇನ ನಿರ್ಮುಕ್ತಾಃ ಸನ್ತಃ ತ್ವಾಂ[3] ವಿದಿತ್ವಾ ಯಥಾಶಾಸ್ತ್ರಮ್ ಆತ್ಮಭಾವೇನ ಭಜನ್ತೇ? ಇತ್ಯಪೇಕ್ಷಿತಮ್ ಅರ್ಥಂ ದರ್ಶಯಿತುಮ್[4] ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ ಯಾರು ಈ ದ್ವಂದ್ವಮೋಹದಿಂದ ಬಿಡುಗಡೆಯನ್ನು ಹೊಂದಿ ನಿನ್ನನ್ನು ಶಾಸ್ತ್ರದಲ್ಲಿ ಹೇಳಿರುವಂತೆ ಅರಿತುಕೊಂಡು (ನೀನು) ತಮ್ಮ ಆತ್ಮನೇ ಎಂಬ ಭಾವದಿಂದ ಭಜಿಸುವರು?–ಎಂದು ಕೇಳಿದರೆ (ಈ) ವಿಷಯವನ್ನು ತಿಳಿಸುವದಕ್ಕೆ (ಭಗವಂತನು) ಹೇಳುತ್ತಾನೆ:—

---

1. ಮೋಹವು ಉಂಟಾಗದೆ ಇದ್ದರೂ ಆತ್ಮತತ್ತ್ವವು ಸೂಕ್ಷ್ಮವಾಗಿರುವದರಿಂದಲೂ ಏತರ್ಕ್ಯ ವಿಷಯವಲ್ಲದಿರುವದರಿಂದಲೂ ಅದರ ಜ್ಞಾನವುಂಟಾಗುವದು ಕಷ್ಟವೇ.

2. ಇಚ್ಛಾದ್ವೇಷಗಳ ವಾಸನೆಯು ಸ್ವಾಭಾವಿಕವಾಗಿಯೇ ಎಲ್ಲಾ ಪ್ರಾಣಿಗಳಲ್ಲಿಯೂ ಇದ್ದುಕೊಂಡಿರುತ್ತದೆ.

3. 'ಸಮ್ಯಗ್ ವಿದಿತ್ವಾ' ಮ||

4. 'ದರ್ಶಯಿತುಮ್ ಆಹ' ಮ||

**ಯೇಷಾಂ ತ್ವನ್ತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।**
**ತೇ ದ್ವಂದ್ವಮೋಹನಿರ್ಮುಕ್ತಾ ಭಜನ್ತೇ ಮಾಂ ದೃಢವ್ರತಾಃ ॥**

೨೮. ಆದರೆ ಪುಣ್ಯಕರ್ಮರಾದ ಯಾವ ಜನರಿಗೆ ಪಾಪವು ಅಂತಗತವಾಗಿರುವದೋ ಅವರು ದ್ವಂದ್ವಮೋಹದಿಂದ ಬಿಡುಗಡೆಹೊಂದಿ ನನ್ನನ್ನು ದೃಢವ್ರತರಾಗಿ ಭಜಿಸುವರು.

(ಭಾಷ್ಯ)

೪೮೯. ಯೇಷಾಂ ತು ಪುನಃ ಅನ್ತಗತಂ ಸಮಾಪ್ತಪ್ರಾಯಂ ಕ್ಷೀಣಂ ಪಾಪಂ ಜನಾನಾಂ ಪುಣ್ಯಕರ್ಮಣಾಂ ಪುಣ್ಯಂ ಕರ್ಮ ಸತ್ತ್ವಶುದ್ಧಿಕಾರಣಂ ವಿದ್ಯತೇ[1] ಯೇಷಾಂ ತೇ ಪುಣ್ಯಕರ್ಮಾಣಃ ತೇಷಾಂ ಪುಣ್ಯಕರ್ಮಣಾಂ ತೇ ದ್ವಂದ್ವಮೋಹನಿರ್ಮುಕ್ತಾಃ ಯಥೋಕ್ತೇನ ದ್ವಂದ್ವಮೋಹೇನ ನಿರ್ಮುಕ್ತಾಃ ಭಜನ್ತೇ ಮಾಂ ಪರಮಾತ್ಮಾನಂ ದೃಢವ್ರತಾಃ । ಏವಮೇವ ಪರಮಾರ್ಥತತ್ತ್ವಂ ನಾನ್ಯಥಾ ಇತ್ಯೇವಂ ಸರ್ವಪರಿತ್ಯಾಗವ್ರತೇನ ನಿಶ್ಚಿತವಿಜ್ಞಾನಾಃ ದೃಢವ್ರತಾ ಉಚ್ಯನ್ತೇ ॥

(ಭಾಷ್ಯಾರ್ಥ)

ಆದರೆ ಯಾವ ಪುಣ್ಯಕರ್ಮರಾದ–ಸತ್ತ್ವಶುದ್ಧಿಗೆ ಕಾರಣವಾಗಿರುವ ಪುಣ್ಯಕರ್ಮವು ಯಾರಿಗಿರುವದೋ ಅವರು ಪುಣ್ಯಕರ್ಮರು. ಅಂಥ ಪುಣ್ಯಕರ್ಮರಾದ–ಜನರಿಗೆ ಪಾಪವು ಅಂತಗತವಾಗಿರುವದೋ ಮುಗಿದಂತೆ ಆಗಿರುವದೋ ಸವೆದಿರುವದೋ ಅವರು ದ್ವಂದ್ವಮೋಹನಿರ್ಮುಕ್ತರಾಗಿ ಎಂದರೆ ಹಿಂದೆ ಹೇಳಿರುವ ದ್ವಂದ್ವಮೋಹದಿಂದ ಬಿಡುಗಡೆಯನ್ನು ಹೊಂದಿದವರಾಗಿ ಪರಮಾತ್ಮನಾದ ನನ್ನನ್ನು ದೃಢವ್ರತರಾಗಿ ಭಜಿಸುವರು. ಪರಮಾರ್ಥತತ್ತ್ವವು ಹೀಗೆಯೇ, ಬೇರೆಯಿಲ್ಲ–ಎಂದೀಪರಿಯಾಗಿ ಎಲ್ಲವನ್ನೂ ಬಿಡಬೇಕೆಂಬ ವ್ರತದಿಂದ ನಿಶ್ಚಯಿಸಿಕೊಂಡಿರುವ ತಿಳಿವಳಿಕೆಯುಳ್ಳವರನ್ನು '**ದೃಢವ್ರತರು**' ಎಂದು ಕರೆದಿದೆ.

(ಭಾಷ್ಯ)

೪೯೦. ತೇ ಕಿಮರ್ಥಂ ಭಜನ್ತೇ ಇತಿ? ಉಚ್ಯತೇ—

(ಭಾಷ್ಯಾರ್ಥ)

ಅವರು ಏತಕ್ಕಾಗಿ ಭಜಿಸುವರು? ಎಂದರೆ (ಭಗವಂತನು) ಹೇಳುತ್ತಾನೆ :—

---

1. ಮ॥ವ್ಯ॥ ; ಅ॥ನಿ॥ಗು॥ವಾ॥ಗಳಲ್ಲಿ "ಪುಣ್ಯಂ ಕರ್ಮ ಯೇಷಾಂ ಸತ್ತ್ವಶುದ್ಧಿಕಾರಣಂ ವಿದ್ಯತೇ" ಎಂದಿದೆ.

ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತನ್ತಿ ಯೇ ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಮ್ ॥
ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ ।
ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತಚೇತಸಃ ॥೩೦॥

೨೯–೩೦　ಜರಾಮರಣಮೋಕ್ಷಕ್ಕಾಗಿ ನನ್ನನ್ನು ಆಶ್ರಯಿಸಿ ಯಾರು ಪ್ರಯತ್ನವನ್ನು ಮಾಡುತ್ತಿರುವರೋ ಅವರು, ಆ ಬ್ರಹ್ಮವನ್ನೂ ಸಂಪೂರ್ಣವಾದ ಅಧ್ಯಾತ್ಮವನ್ನೂ ಅಖಿಲವಾದ ಕರ್ಮವನ್ನೂ ಯಾರು ತಿಳಿದುಕೊಳ್ಳುವರೋ ಯುಕ್ತಚೇತಸರಾದ ಅವರು ಪ್ರಯಾಣಕಾಲದಲ್ಲಿಯೂ ನನ್ನನ್ನು ತಿಳಿದುಕೊಳ್ಳುವರು.

(ಭಾಷ್ಯ)

೪೯೧. ಜರಾಮರಣಮೋಕ್ಷಾಯ ಜರಾಮರಣಯೋಃ ಮೋಕ್ಷಾರ್ಥಂ ಮಾಂ ಪರಮೇಶ್ವರಮ್ ಆಶ್ರಿತ್ಯ ಮತ್ಸಮಾಹಿತಚಿತ್ತಾಃ ಸನ್ತಃ ಯತನ್ತಿ ಪ್ರಯತನ್ತೇ ಯೇ ತೇ ಯದ್ ಬ್ರಹ್ಮ ಪರಂ ತದ್ ವಿದುಃ । ಕೃತ್ಸ್ನಂ ಸಮಸ್ತಮ್ ಅಧ್ಯಾತ್ಮಂ ಪ್ರತ್ಯಗಾತ್ಮವಿಷಯಂ ವಸ್ತು ತದ್ ವಿದುಃ । ಕರ್ಮ ಚ ಅಖಿಲಂ ಸಮಸ್ತಂ ವಿದುಃ ॥

(ಭಾಷ್ಯಾರ್ಥ)

ಜರಾಮರಣಮೋಕ್ಷಕ್ಕಾಗಿ ಎಂದರೆ ಮುಪ್ಪುಸಾವುಗಳನ್ನು ತಪ್ಪಿಸಿಕೊಳ್ಳುವದಕ್ಕಾಗಿ, ಪರಮೇಶ್ವರನಾದ ನನ್ನನ್ನು ಆಶ್ರಯಿಸಿ ನನ್ನಲ್ಲಿಯೇ ಚಿತ್ತವನ್ನು ಸಮಾಧಾನಗೊಳಿಸಿ (ನಿಲ್ಲಿಸಿ)ಕೊಂಡು (ಯತನ್ತಿ - ಪ್ರಯತನ್ತೇ) ಯಾರು ಪ್ರಯತ್ನಿಸುತ್ತಿರುವರೋ ಅವರು ಆ ಪರಬ್ರಹ್ಮವೆಂಬುದಿದೆಯಲ್ಲ, ಅದನ್ನು ಅರಿತುಕೊಳ್ಳುವರು. ಅಧ್ಯಾತ್ಮವನ್ನು ಎಂದರೆ ಪ್ರತ್ಯಗಾತ್ಮವಿಷಯವಾದ ವಸ್ತುವನ್ನೂ ಸಂಪೂರ್ಣವಾಗಿ[1] ಎಲ್ಲವನ್ನೂ ಅರಿತುಕೊಳ್ಳುವರು. ಅಖಿಲವಾದ ಸಮಸ್ತವಾದ ಕರ್ಮವನ್ನೂ ಅರಿತುಕೊಳ್ಳುವರು.

(ಭಾಷ್ಯ)

೪೯೨. ಸಾಧಿಭೂತಾಧಿದೈವಮ್–ಅಧಿಭೂತಂ ಚ ಅಧಿದೈವಂ ಚ ಅಧಿಭೂತಾಧಿದೈವಮ್ । ಸಹ ಅಧಿಭೂತಾಧಿದೈವೇನ ವರ್ತತೇ ಇತಿ ಸಾಧಿಭೂತಾಧಿ

1. ‘ಕೃತ್ಸ್ನಮ್’ ಎಂಬುದನ್ನು ಬ್ರಹ್ಮಕ್ಕೆ ವಿಶೇಷಣವಾಗಿ ಮಾಡಿದರೆ ಪರಾಪರರೂಪವಾದ ಎಂದು ಅರ್ಥವನ್ನು ಮಾಡಬೇಕಾಗುವದು. ಅಧ್ಯಾತ್ಮಕ್ಕೆ ವಿಶೇಷಣವೆಂದು ಭಾವಿಸದರೆ ಸಂಸಾರಿತ್ವವನ್ನೇ ಅಲ್ಲದೆ ಪರಬ್ರಹ್ಮಸ್ವರೂಪವನ್ನೂ ಅರಿಯುವರು ಎಂದು ಅರ್ಥ.

ದೈವಂ ಚ ಮಾಂ ಯೇ ವಿದುಃ । ಸಾಧಿಯಜ್ಞಂ ಚ ಸಹ ಅಧಿಯಜ್ಞೇನ ಸಾಧಿಯಜ್ಞಂ ಯೇ ವಿದುಃ । ಪ್ರಯಾಣಕಾಲೇ ಮರಣಕಾಲೇಽಪಿ ಚ ಮಾಂ ತೇ ವಿದುಃ ಯುಕ್ತಚೇತಸಃ ಸಮಾಹಿತಚಿತ್ತಾ ಇತಿ ॥

(ಭಾಷ್ಯಾರ್ಥ)

ಸಾಧಿಭೂತಾಧಿದೈವನಾದ–ಅಧಿಭೂತವೂ ಅಧಿದೈವವೂ ಅಧಿಭೂತಾಧಿದೈವವು; ಅಧಿಭೂತಾಧಿದೈವದೊಡನೆ ಇರುವವನು ಸಾಧಿಭೂತಾಧಿದೈವನು. (ಅಂಥ)–ನನ್ನನ್ನು ಯಾರು ತಿಳಿದುಕೊಳ್ಳುವರೋ ಅಧಿಯಜ್ಞದೊಡನೆ ಇರುವದರಿಂದ ಸಾಧಿಯಜ್ಞನಾದ ನನ್ನನ್ನು ಯಾರು ತಿಳಿದುಕೊಳ್ಳುವರೋ, ಅವರು ಪ್ರಯಾಣಕಾಲದಲ್ಲಿಯೂ ಎಂದರೆ ಸಾಯುವಕಾಲದಲ್ಲಿ ಕೂಡ ಯುಕ್ತಚೇತಸರಾಗಿ ಎಂದರೆ ಚಿತ್ತವನ್ನು ಸಮಾಧಾನಗೊಳಿಸಿಕೊಂಡು ನನ್ನನ್ನು ತಿಳಿದುಕೊಳ್ಳುವರು [1]

ಇತಿ ಶ್ರೀಮದ್ಭಗವದ್ಗೀತಾಭಾಷ್ಯೇ ವಿಜ್ಞಾನಯೋಗೋ ನಾಮ ಸಪ್ತಮೋಽಧ್ಯಾಯಃ

---

1. ಇಲ್ಲಿ ಹೇಳಿರುವದೆಲ್ಲ ಉಪಾಸನೆಯ ವಿಷಯ ; ಇದು ಮುಂದಿನ ಅಧ್ಯಾಯದಲ್ಲಿ ಸ್ಪಷ್ಟವಾಗುವದು.

# ಏಳನೆಯ ಅಧ್ಯಾಯದ ಸಾರ

೧-೩ ಶ್ರೀಕೃಷ್ಣನು ಹೇಳಿದ್ದು :—" ಎಲೈ ಅರ್ಜುನನೆ, ನನ್ನನ್ನೇ ಆಶ್ರಯಿಸಿ ನನ್ನನ್ನೇ ಧ್ಯಾನಿಸುತ್ತಿದ್ದರೆ ನನ್ನ ತತ್ತ್ವವನ್ನು ನಿಶ್ಚಿತವಾಗಿ ಪೂರ ತಿಳಿದುಕೊಳ್ಳಬಹುದು, ಅನುಭವಕ್ಕೆ ತಂದುಕೊಳ್ಳಲೂ ಬಹುದು ಇದನ್ನು ತಿಳಿದರೆ ಎಲ್ಲವನ್ನೂ ತಿಳಿದುಕೊಂಡಂತಾಗುವದು.

೪-೧೨. "ಪೃಥ್ವಿ, ಅಪ್ಪು-ಮುಂತಾದ ಸೂಕ್ಷ್ಮಭೂತಗಳು ಐದು, ಅಹಂಕಾರ, ಮಹತ್ತು, ಅವ್ಯಕ್ತ-ಎಂದು ನನ್ನ ಕೀಳಾದ ಜಡಪ್ರಕೃತಿಯು ಎಂಟು ಬಗೆಯಾಗಿರುವದು. ಜೀವರೂಪವಾಗಿರುವ ನನ್ನ ಹೆಚ್ಚಿನ ಪ್ರಕೃತಿಯು ಜಗತ್ತೆಲ್ಲವನ್ನೂ ಧರಿಸಿರುತ್ತದೆ. ಈ ಪ್ರಕೃತಿಗಳಮೂಲಕವೇ ನಾನು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾಗಿರುವೆನು ಪ್ರತಿಯೊಂದು ವಸ್ತುವಿನಲ್ಲಿಯೂ ಸಾರಭೂತವಾಗಿರುವದನ್ನು ನಾನೆಂದೇ ತಿಳಿ; ಸತ್ತ್ವ ರಜಸ್ತಮೋಗುಣಗಳಿಂದಾಗಿರುವ ಪದಾರ್ಥಗಳೆಲ್ಲವೂ ನನ್ನನ್ನೇ ಆಶ್ರಯಿಸಿರುವವು, ನಾನು ಅವುಗಳಲ್ಲಿ ಯಾವದನ್ನೂ ಆಶ್ರಯಿಸಿರುವದಿಲ್ಲ.

೧೩-೧೯. "ಗುಣಮಯವಾದ ಮಾಯೆಯಿಂದ ಮೋಹಿತರಾಗಿರುವವರಿಗೆ ನನ್ನ ತತ್ತ್ವವು ನಿಲುಕುವದಿಲ್ಲ. ನನ್ನನ್ನೇ ಶರಣುಹೊಕ್ಕವರು ಈ ಮಾಯೆಯನ್ನು ದಾಟುವರು, ಆದರೆ ಅಸುರಸಂಪತ್ತಿನ ಪಾಪಿಗಳು ನನ್ನನ್ನು ಭಜಿಸುವದಿಲ್ಲ ಆರ್ತ, ಜಿಜ್ಞಾಸು, ಅರ್ಥಾರ್ಥಿ; ಜ್ಞಾನಿ ಎಂಬ ನಾಲ್ಕು ಬಗೆಯ ಜನಗಳು ನನ್ನನ್ನು ಭಜಿಸುವರು. ಇವರೆಲ್ಲರೂ ನನಗೆ ಬೇಕಾದವರೇ. ಆದರೂ ಜ್ಞಾನಿಯು ನನ್ನ ಆತ್ಮನೇ ಆಗಿರುವದರಿಂದ ನನಗೆ ಅತ್ಯಂತ ಪ್ರಿಯನಾಗಿರುತ್ತಾನೆ ಅಂಥ ಜ್ಞಾನಿಯಾಗುವದು ಮಹಾ ಪುಣ್ಯರಾಶಿಯ ಫಲವು

೨೦-೨೩. ನನ್ನನ್ನು ಸೇವಿಸುವದರಲ್ಲಿಯೂ ಇತರ ದೇವತೆಗಳನ್ನು ಸೇವಿಸುವದರಲ್ಲಿಯೂ ಸಮವಾದ ಆಯಾಸವಿರುತ್ತಿದ್ದರೂ ಕಾಮಿಗಳಾದವರು ದೇವತೆಗಳನ್ನೇ ಭಜಿಸುತ್ತಾರೆ ಅಂಥವರಿಗೆ ಆಯಾ ದೇವತಾಮೂರ್ತಿಗಳಲ್ಲಿಯೇ ಭಕ್ತಿಯುಂಟಾಗುವಂತೆ ಮಾಡಿ ಅವರು ಕೋರುವ ಕಾಮಗಳನ್ನೂ ಆ ದೇವತೆಗಳ ಮೂಲಕ ನಾನೇ ಪೂರ್ತಿಗೊಳಿಸುವೆನು ಆದರೆ ಆ ಫಲವು ಬೇಗನೆ ನಾಶವಾಗುವದು ಆದರೂ ಮೂಢರಿಗೆ ಆ ಫಲವೇ ಬೇಕಾಗಿರುತ್ತದೆ.

೨೪-೨೭ ಬುದ್ಧಿಹೀನರಾದವರು ನನ್ನನ್ನು ಹಿಂದೆ ಇಲ್ಲದೆ ಇದ್ದು ಈಚೆಗೆ ಹುಟ್ಟಿದವನೆಂದು ಎಣಿಸುವರು ಗುಣಮಯವಾದ ಮಾಯೆಗೆ ಮರುಳಾಗಿರುವ ಆ ಜನರಿಗೆ ನಾನು ಅಜನೂ ಅವ್ಯಯನೂ ಆಗಿರುವೆನೆಂಬುದು ತಿಳಿಯದು ನಾನು ಮೂರು ಕಾಲದ ಆಗುಹೋಗುಗಳನ್ನೂ ಬಲ್ಲೆನು; ಆದರೆ ನನ್ನನ್ನು ಮಾತ್ರ ಯಾರೂ ಅರಿತುಕೊಳ್ಳಲಾರರು. ಏಕೆಂದರೆ ಜೀವರುಗಳೆಲ್ಲ ಸಾಮಾನ್ಯವಾಗಿ ಇಚ್ಛಾದ್ವೇಷಗಳ ವಾಸನೆಯಿಂದ ಕೂಡಿಕೊಂಡೇ ಹುಟ್ಟಿರುತ್ತಾರೆ; ಅವರಿಗೆ ಅದರಿಂದುಂಟಾದ ಮೋಹವು ತತ್ತ್ವಜ್ಞಾನವುಂಟಾಗುವದಕ್ಕೆ ತಡೆಯಾಗಿರುತ್ತದೆ.

೨೮-೩೦. ಆದರೆ ಯಾರು ಹೇರಳವಾಗಿ ಪುಣ್ಯಕರ್ಮಗಳನ್ನುಮಾಡಿ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡಿರುವರೋ ಅವರು ಈ ದ್ವಂದ್ವಮೋಹಕ್ಕೆ ಸಿಕ್ಕಿಕೊಳ್ಳದೆ ನನ್ನನ್ನು ಭಜಿಸಿ ಮುಪ್ಪುಸಾವುಗಳನ್ನು ದಾಟಿಸುವ ಬ್ರಹ್ಮತತ್ತ್ವವನ್ನೂ ಪ್ರತ್ಯಗಾತ್ಮತತ್ತ್ವವನ್ನೂ, ಕರ್ಮತತ್ತ್ವವನ್ನೂ ಚೆನ್ನಾಗಿ ತಿಳಿದುಕೊಳ್ಳುವರು. ಅಧಿಭೂತ, ಅಧಿದೈವ ಅಧಿಯಜ್ಞ-ಇವುಗಳಿಂದ ಕೂಡಿದ ನನ್ನನ್ನು ಯಾರು ತಿಳಿದುಕೊಂಡಿರುವರೋ ಅಂಥವರು ಮರಣಕಾಲದಲ್ಲಿಯೂ ನನ್ನನ್ನು ಸಮಾಹಿತಚಿತ್ತರಾಗಿ ಧ್ಯಾನಿಸಬಲ್ಲವರಾಗಿರುತ್ತಾರೆ.

# ಎಂಟನೆಯ ಅಧ್ಯಾಯ

## (ಅ ಭ್ಯಾ ಸ ಯೋ ಗ)

## ಅರ್ಜುನನ ಪ್ರಶ್ನೆ, ಭಗವಂತನ ಉತ್ತರ

(ಭಾಷ್ಯ)

೪೯೩. "ತೇ ಬ್ರಹ್ಮ ತದ್ ವಿದುಃ ಕೃತ್ಸ್ನಮ್" (೭-೨೯) ಇತ್ಯಾದಿನಾ ಭಗವತಾ ಅರ್ಜುನಸ್ಯ ಪ್ರಶ್ನಬೀಜಾನಿ ಉಪದಿಷ್ಟಾನಿ । ಅತಃ ತತ್ಪ್ರಶ್ನಾರ್ಥಮ್ ಅರ್ಜುನ ಉವಾಚ—

(ಭಾಷ್ಯಾರ್ಥ)

"ಅವರು ಆ ಬ್ರಹ್ಮವನ್ನೂ ಸಂಪೂರ್ಣವಾದ (ಅಧ್ಯಾತ್ಮವನ್ನೂ ಅಖಿಲವಾದ ಕರ್ಮವನ್ನೂ) ಅರಿತುಕೊಳ್ಳುವರು" (೭-೨೯) ಎಂದು ಮುಂತಾಗಿ ಪ್ರಶ್ನೆಗೆ ಅವಕಾಶ ವನ್ನು ಕೊಡುವ ಮಾತುಗಳನ್ನು ಭಗವಂತನು ಅರ್ಜುನನಿಗೆ ಹೇಳಿರುತ್ತಾನಷ್ಟೆ. ಆದ್ದರಿಂದ ಅವುಗಳನ್ನು (ಕುರಿತು) ಕೇಳುವದಕ್ಕಾಗಿ ಅರ್ಜುನನಿಂತೆಂದನು :—

**ಅರ್ಜುನ ಉವಾಚ—**

**ಕಿಂ ತದ್ ಬ್ರಹ್ಮ ಕಿಮಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ ।**
**ಅಧಿಭೂತಂ ಚ ಕಿಂ ಪ್ರೋಕ್ತಮಧಿದೈವಂ ಕಿಮುಚ್ಯತೇ ॥ ೧ ॥**
**ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ ಮಧುಸೂದನ ।**
**ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ ॥ ೨ ॥**

೧-೨. ಅರ್ಜುನನಿಂತೆಂದನು :—ಎಲೈ ಪುರುಷೋತ್ತಮನೆ, ಆ ಬ್ರಹ್ಮವೆಂಬುದು ಯಾವದು? ಕರ್ಮವು ಯಾವದು? ಅಧಿಭೂತವೆಂದು ಹೇಳಿದ್ದು ಯಾವದು? ಅಧಿದೈವವೆಂಬುದು ಯಾವದು? ಎಲೈ ಮಧು ಸೂದನನೆ, ಈ ದೇಹದಲ್ಲಿ ಅಧಿಯಜ್ಞನಾಗಿರುವವನು ಯಾರು? (ಅವನು) ಹೇಗೆ (ಅಧಿಯಜ್ಞನು)? ಮರಣಕಾಲದಲ್ಲಿ ಮನಸ್ಸನ್ನು ಬಿಗಿಯ ಹಿಡಿದು ಕೊಂಡು (ಜನರು) ನಿನ್ನನ್ನು ಹೇಗೆ ಅರಿತುಕೊಳ್ಳಬೇಕು?[1]

---

1. ಚಿಂತನೆಮಾಡಬೇಕು.

(ಭಾಷ್ಯ)

೪೯೪. ಏಷಾಂ ಪ್ರಶ್ನಾನಾಂ ಯಥಾಕ್ರಮಂ ನಿರ್ಣಯಾಯ ಶ್ರೀ ಭಗವಾನ್ ಉವಾಚ—

(ಭಾಷ್ಯಾರ್ಥ)

ಈ ಪ್ರಶ್ನೆಗಳಿಗೆ ಕ್ರಮಕ್ಕೆ ಅನುಸಾರವಾಗಿ (ಒಂದೊಂದಾಗಿ) ಉತ್ತರ ಹೇಳುವದಕ್ಕಾಗಿ ಶ್ರೀ ಭಗವಂತನಿಂತೆಂದನು :—

**ಶ್ರೀ ಭಗವಾನ್ ಉವಾಚ—**

**ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।**
**ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ ॥ ೩ ॥**

೩. ಶ್ರೀ ಭಗವಂತನಿಂತೆಂದನು :—ಪರಮವಾದ ಅಕ್ಷರವೇ ಬ್ರಹ್ಮವು; ಸ್ವಭಾವವು ಅಧ್ಯಾತ್ಮವೆನಿಸುವದು; ಭೂತಭಾವೋದ್ಭವಕರವಾದ ವಿಸರ್ಗವು ಕರ್ಮವೆಂಬ ಹೆಸರುಳ್ಳದ್ದು.

(ಭಾಷ್ಯ)

೪೯೫. ಅಕ್ಷರಂ ನ ಕ್ಷರತಿ ಇತಿ ಅಕ್ಷರಂ ಪರಮಾತ್ಮಾ । "ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ"[1] (ಬೃ ೩-೮-೯) ಇತಿ ಶ್ರುತೇಃ । ಓಂಕಾರಸ್ಯ ಚ "ಓಮಿತ್ಯೇಕಾಕ್ಷರಂ ಬ್ರಹ್ಮ" (೮-೧೩) ಇತಿ ಪರೇಣ ವಿಶೇಷಣಾತ್ ಅಗ್ರಹಣಮ್ । ಪರಮಮ್ ಇತಿ ಚ ನಿರತಿಶಯೇ ಬ್ರಹ್ಮಣಿ ಅಕ್ಷರೇ ಉಪಪನ್ನತರಂ ವಿಶೇಷಣಮ್ । ತಸ್ಯೈವ ಪರಸ್ಯ ಬ್ರಹ್ಮಣಃ ಪ್ರತಿದೇಹಂ ಪ್ರತ್ಯಗಾತ್ಮಭಾವಃ ಸ್ವಭಾವಃ ಸ್ವೋ ಭಾವಃ ಅಧ್ಯಾತ್ಮಮ್ ಉಚ್ಯತೇ । ಆತ್ಮಾನಂ ದೇಹಮ್ ಅಧಿಕೃತ್ಯ ಪ್ರತ್ಯಗಾತ್ಮತಯಾ ಪ್ರವೃತ್ತಂ ಪರಮಾರ್ಥಬ್ರಹ್ಮಾವಸಾನಂ ವಸ್ತುಸ್ವಭಾವಃ ಅಧ್ಯಾತ್ಮಮ್ ಇತಿ ಉಚ್ಯತೇ ಅಧ್ಯಾತ್ಮಶಬ್ದೇನ ಅಭಿಧೀಯತೇ । ಭೂತಭಾವೋದ್ಭವಕರಃ ಭೂತಾನಾಂ ಭಾವಃ ಭೂತಭಾವಃ, ತಸ್ಯ ಉದ್ಭವಃ ಭೂತಭಾವೋದ್ಭವಃ, ತಂ ಕರೋತಿ ಇತಿ ಭೂತಭಾವೋದ್ಭವಕರಃ । ಭೂತವಸ್ತೂತ್ಪತ್ತಿಕರಃ ಇತ್ಯರ್ಥಃ । ವಿಸರ್ಗಃ ವಿಸರ್ಜನಂ ದೇವತೋದ್ದೇಶೇನ ಚರುಪುರೋಡಾಶಾದೇಃ ದ್ರವ್ಯಸ್ಯ ಪರಿತ್ಯಾಗಃ । ಸ ಏಷ ವಿಸರ್ಗಲಕ್ಷಣಃ ಯಜ್ಞಃ ಕರ್ಮಸಂಜ್ಞಿತಃ ಕರ್ಮಶಬ್ದಿತಃ ಇತ್ಯೇತತ್ । ಏತಸ್ಮಾತ್ ಹಿ ಬೀಜಭೂತಾತ್ ವೃಷ್ಟ್ಯಾದಿಕ್ರಮೇಣ ಸ್ಥಾವರಜಙ್ಗಮಾನಿ ಭೂತಾನಿ ಉದ್ಭವನ್ತಿ ॥

1 ಈ ಶ್ರುತಿಯು ಮ॥ ಪಾಠದಲ್ಲಿ 'ತಿಷ್ಠತಃ' ಎಂಬವರೆಗೂ ಇದೆ.

(ಭಾಷ್ಯಾರ್ಥ)

ಅಕ್ಷರವೆಂದರೆ ನಾಶವಿಲ್ಲದ್ದರಿಂದ ಅಕ್ಷರನೆನಿಸಿರುವ ಪರಮಾತ್ಮನು “ ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ” (ಎಲೌ ಗಾರ್ಗಿಯೆ, ಈ ಅಕ್ಷರದ ಅಪ್ಪಣೆಯಿಂದಲೇ ಭೂವ್ಯ್ಯಂತರಿಕ್ಷಗಳು ಅಲುಗಾಡದೆ ನಿಂತಿರುವವು ಬೃ ೩-೮-೯) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. (ಇಲ್ಲಿ ಅಕ್ಷರವೆಂದರೆ) ಓಂಕಾರವನ್ನು ತೆಗೆದುಕೊಳ್ಳಬಾರದು, ಏಕೆಂದರೆ ‘ ಓಮಿತ್ಯೇಕಾಕ್ಷರಂ ಬ್ರಹ್ಮ’ (ಓಂ ಎಂಬ ಒಂದು ಅಕ್ಷರದ ಬ್ರಹ್ಮವನ್ನು) ಎಂದು (ಅದನ್ನು) ಮುಂದೆ ಬೇರೆಯಾಗಿ ಹೇಳಿರುತ್ತದೆ. “ ಪರಮಂ” ಎಂಬ ವಿಶೇಷಣವು ಮಿಗಿಲಿಲ್ಲದ ಬ್ರಹ್ಮನೆಂಬ ಅಕ್ಷರಕ್ಕೇ ಹೆಚ್ಚು ಹೊಂದುತ್ತದೆ.[1]

ಈ ಹೆಚ್ಚಿನ ಬ್ರಹ್ಮಕ್ಕೇ ಒಂದೊಂದು ದೇಹದಲ್ಲಿಯೂ ಪ್ರತ್ಯಗಾತ್ಮನಾಗಿರುವ **ಸ್ವಭಾವವು**, ಎಂದರೆ ಅದರ ಭಾವವು, ಅಧ್ಯಾತ್ಮವೆನಿಸುತ್ತದೆ. **ಆತ್ಮವನ್ನು ಎಂದರೆ ದೇಹವನ್ನು ಆಧಾರವಾಗಿ ಮಾಡಿಕೊಂಡು[2] ಪ್ರತ್ಯಗಾತ್ಮನಾಗಿ ತೋರಿಕೊಂಡು ಪರಮಾರ್ಥವಾದ ಬ್ರಹ್ಮವೇ ಎಂದು ಕೊನೆಯಲ್ಲಿ ನಿಶ್ಚಿತವಾಗುವ[3] ವಸ್ತುಸ್ವಭಾವವೇ ಅಧ್ಯಾತ್ಮವೆನಿಸುತ್ತದೆ**, ಅಧ್ಯಾತ್ಮ ಎಂಬ ಶಬ್ದದಿಂದ ಕರೆಯಲ್ಪಡುತ್ತದೆ.

ಭೂತಭಾವೋದ್ಭವಕರವಾದ–ಭೂತಭಾವ ಎಂದರೆ ಪ್ರಾಣಿಗಳಾಗಿ ಇರುವದು[4], ಅದರ ಉದ್ಭವವು ಭೂತಭಾವೋದ್ಭವವು; ಅದನ್ನುಂಟುಮಾಡುವದರಿಂದ ಭೂತಭಾವೋದ್ಭವಕರವು–ಎಂದರೆ ಪ್ರಾಣಿಗಳ ರೂಪದ ವಸ್ತುಗಳನ್ನು ಉಂಟುಮಾಡುತ್ತಿರುವ ಎಂದರ್ಥ. (ಇಂಥ)–ವಿಸರ್ಗವು ಎಂದರೆ ಬಿಡುವಿಕೆಯು, ದೇವತೆಗಳಿಗಾಗಿ ಚರು, ಪುರೋಡಾಶ[5]–ಮುಂತಾದ ದ್ರವ್ಯವನ್ನು (ಹೋಮಕಾಲದಲ್ಲಿ) ಹಾಕುವದೆಂಬ

---

1. ಓಂಕಾರವೂ ಬ್ರಹ್ಮ ; ಆದರೆ ಪರಮಾತ್ಮವಸ್ತುವೇ ಪರಮ ಬ್ರಹ್ಮವು.

2. ದೇಹವು ಆತ್ಮನಿಗೆ ಆಧಾರವಲ್ಲದಿದ್ದರೂ ದೇಹದಲ್ಲಿ ಆತ್ಮನು ಇದಾನೆ ಎಂದು ತೋರುವದನ್ನು ಅನುಸರಿಸಿ ಆಧಾರವೆಂದಿದೆ.

3. ಈಗ ಜೀವನಾಗಿ ತೋರುವ ತತ್ತ್ವವೇ ಬ್ರಹ್ಮವೆಂದು ಶಾಸ್ತ್ರದ ಉಪದೇಶದಿಂದ ನಿಶ್ಚಯವಾಗುವದರಿಂದ ಇದು ಬ್ರಹ್ಮದ ಸ್ವಭಾವವು. ೪-೨೫ರ ಭಾಷ್ಯದಲ್ಲಿ ಯಜ್ಞವೆಂಬ ಮಾತಿನ ವ್ಯಾಖ್ಯಾನವನ್ನು ನೋಡಿ.

4. ಭೂತಭಾವ ಎಂಬಲ್ಲಿ ಭಾವ ಎಂದರೆ ಉತ್ಪತ್ತಿ ಎಂದು ಅರ್ಥವನ್ನು ಮಾಡಿದರೆ ಪುನರುಕ್ತಿಯಾಗುವದರಿಂದ ಹೀಗೆ ಅರ್ಥವನ್ನು ಮಾಡಿದೆ.

5. ಹಾಲಿನಲ್ಲಿ, ತುಪ್ಪದಲ್ಲಿ, ಅಥವಾ ನೀರಿನಲ್ಲಿ ಬೇಯಿಸಿದ ಧಾನ್ಯವು ಚರು ; ಅಕ್ಕಿಯ ಹಿಟ್ಟಿನಿಂದ ಮಾಡಿ ಹೋಮಮಾಡುವ ರೊಟ್ಟಿಯು ಪುರೋಡಾಶವು.

ಯಜ್ಞವು ಕರ್ಮಸಂಜ್ಞಿತವಾಗಿರುತ್ತದೆ ಎಂದರೆ ಕರ್ಮವೆಂಬ ಮಾತಿನಿಂದ ಹೇಳಲ್ಪಡುತ್ತದೆ ಎಂದರ್ಥ ಈ (ಯಜ್ಞ) ಬೀಜವಾಗಿರುವ (ಕರ್ಮ)ದಿಂದಲೇ ಅಲ್ಲವೆ, ವೃಷ್ಟಿಯೇ ಮುಂತಾದ ಕ್ರಮದಿಂದ ಸ್ಥಾವರಜಂಗಮಗಳಾದ ಪ್ರಾಣಿಗಳು ಉಂಟಾಗುವವು ?[1]

**ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಮ್ ।**
**ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂ ವರ ॥ ೪ ॥**

೪. ಅಧಿಭೂತವೆಂದರೆ ಕ್ಷರವಾದ ಭಾವವು; ಮತ್ತು ಪುರುಷನು ಅಧಿದೈವತವು. ದೇಹಧಾರಿಗಳಲ್ಲಿ ಶ್ರೇಷ್ಠನೆ, ಈ ದೇಹದಲ್ಲಿರುವ ಅಧಿಯಜ್ಞನು ನಾನೇ.

(ಭಾಷ್ಯ)

೪೯೬. ಅಧಿಭೂತಂ[2] ಪ್ರಾಣಿಜಾತಮ್ ಅಧಿಕೃತ್ಯ ಭವತಿ ಇತಿ । ಕೋಽಸೌ? ಕ್ಷರಃ ಕ್ಷರತಿ ಇತಿ ಕ್ಷರಃ ವಿನಾಶೀ ಭಾವಃ ಯತ್ಕಿಂಚಿತ್ ಜನಿಮತ್ ವಸ್ತು ಇತ್ಯರ್ಥಃ । ಪುರುಷಃ[3] ಪೂರ್ಣಮ್ ಅನೇನ ಸರ್ವಮ್ ಇತಿ ಪುರಿ ಶಯನಾದ್ ವಾ ಪುರುಷಃ । ಆದಿತ್ಯಾನ್ತರ್ಗತೋ ಹಿರಣ್ಯಗರ್ಭಃ ಸರ್ವಪ್ರಾಣಿಕರಣಾನಾಮ್ ಅನುಗ್ರಾಹಕಃ ಸಃ ಅಧಿದೈವತಮ್ । ಅಧಿಯಜ್ಞಃ ಸರ್ವಯಜ್ಞಾಭಿಮಾನಿನೀ ವಿಷ್ಣ್ವಾಖ್ಯಾ ದೇವತಾ "ಯಜ್ಞೋ ವೈ ವಿಷ್ಣುಃ" (ತೈ ಸಂ ೧-೭-೪) ಇತಿ ಶ್ರುತೇಃ । ಸ ಹಿ ವಿಷ್ಣುಃ ಅಹಮೇವ । ಅತ್ರ ಅಸ್ಮಿನ್ ದೇಹೇ ಯೋ ಯಜ್ಞಃ ತಸ್ಯ ಅಹಮ್ ಅಧಿಯಜ್ಞಃ । ಯಜ್ಞೋ ಹಿ ದೇಹನಿರ್ವರ್ತ್ಯತ್ವೇನ ದೇಹಸಮವಾಯೀ ಇತಿ ದೇಹಾಧಿಕರಣೋ ಭವತಿ । ದೇಹಭೃತಾಂ ವರ ॥

(ಭಾಷ್ಯಾರ್ಥ)

ಅಧಿಭೂತ ಎಂದರೆ (ಭೂತಗಳನ್ನು) ಪ್ರಾಣಿಸಮೂಹವನ್ನು ಆಧಾರಮಾಡಿಕೊಂಡು ಇರುವದು. ಅದು ಯಾವದು? ಎಂದರೆ ಕ್ಷರವಾದ–ಕ್ಷರವೆಂದರೆ ಕ್ಷಯಿಸುವ, ನಾಶವಾಗುವ ಸ್ವಭಾವದ–ಭಾವವು, ಹುಟ್ಟುವ ಯಾವದೇ ವಸ್ತುವಾಗಲಿ

---

1. ೩-೧೪
2. ಇಲ್ಲಿ ಭೂತಾನಿ ಅಥವಾ ಭೂತವರ್ ಎಂಬ ಮಾತು ಬಿಟ್ಟುಹೋಗಿದೆ ಎಂದು ತೋರುತ್ತದೆ.
3. ಇಲ್ಲಿ ಚ ಎಂಬ ಮಾತು ಬಿಟ್ಟುಹೋಗಿದೆ.

(ಅದು)[1] ಎಂದರ್ಥ. **ಪುರುಷನು**–ಇವನಿಂದ ಎಲ್ಲವೂ ತುಂಬಿಕೊಂಡಿರುವದರಿಂದ[2] ಅಥವಾ ಪುರದಲ್ಲಿದ್ದುಕೊಂಡಿರುವದರಿಂದ[3] (ಇವನು) ಪುರುಷನು–ಎಂದರೆ ಆದಿತ್ಯನಲ್ಲಿ ಒಳಗೆ ಇರುವ ಸರ್ವಪ್ರಾಣಿಗಳ ಕರಣಗಳಿಗೂ ಅನುಗ್ರಾಹಕನಾಗಿರುವ **ಹಿರಣ್ಯ ಗರ್ಭನು**[4]; ಅವನು **ಅಧಿದೈವತವು.** ಅಧಿಯಜ್ಞನು ಎಂದರೆ ಯಜ್ಞಗಳಿಗೆಲ್ಲ ಅಭಿಮಾನಿಯಾದ ವಿಷ್ಣು ಎಂಬ ಹೆಸರಿನ ದೇವತೆ. "ಯಜ್ಞೋ ವೈ ವಿಷ್ಣುಃ" ಯಜ್ಞವೇ ವಿಷ್ಣು ಎಂಬ (ತೈ. ಸಂ. ೧-೭-೪) ಶ್ರುತಿಯು ಇದಕ್ಕೆ ಪ್ರಮಾಣವು. ಆ ವಿಷ್ಣುವು ನಾನೇ. ಇಲ್ಲಿ ಈ ದೇಹದಲ್ಲಿ ಯಜ್ಞವಿರುವದಷ್ಟೆ. ಅದರ (ಸಂಬಂಧಿಯು) ನಾನು, (ಆದ್ದರಿಂದ) **ಅಧಿಯಜ್ಞನು.** ಯಜ್ಞವು ದೇಹದಿಂದ ಆಗ ತಕ್ಕದ್ದಾಗಿರುವದರಿಂದ ದೇಹಕ್ಕೆ ಸಂಬಂಧಪಟ್ಟದ್ದಾಗಿದೆ ಎಂಬುದರಮೇಲೆ ದೇಹವು ಇದಕ್ಕೆ ಆಶ್ರಯವಾಯಿತು. (ಆದ್ದರಿಂದ 'ಈ ದೇಹದಲ್ಲಿ' ಎಂದು ಹೇಳಿರುತ್ತದೆ). ದೇಹಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನೆ, (ಈ ದೇಹದಲ್ಲಿ ನಾನೇ ಅಧಿಯಜ್ಞನು).

**ಅನ್ತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಮ್ ।**
**ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥೫॥**

೫. ಮತ್ತು ಕಡೆಯ ಕಾಲದಲ್ಲಿ ನನ್ನನ್ನೇ ಸ್ಮರಿಸುತ್ತಾ ಕಳೇಬರವನ್ನು ಬಿಟ್ಟು ಯಾವನು ಪ್ರಯಾಣಮಾಡುವನೋ ಅವನು ನನ್ನ ಭಾವವನ್ನು ಹೊಂದುವನು. ಇದರಲ್ಲಿ ಸಂಶಯವಿಲ್ಲ.

(ಭಾಷ್ಯ)

೪೯೭. ಅನ್ತಕಾಲೇ ಮರಣಕಾಲೇ ಚ[5] ಮಾಮೇವ ಪರಮೇಶ್ವರಂ ವಿಷ್ಣುಂ ಸ್ಮರನ್ ಮುಕ್ತ್ವಾ ಕಲೇವರಂ ಶರೀರಂ ಯಃ ಪ್ರಯಾತಿ ಗಚ್ಛತಿ ಸಃ ಮದ್ಭಾವಂ ವೈಷ್ಣವಂ ತತ್ತ್ವಂ ಯಾತಿ । ನಾಸ್ತಿ ನ ವಿದ್ಯತೇ ಅತ್ರ ಅಸ್ಮಿನ್ ಅರ್ಥೇ ಸಂಶಯಃ ಯಾತಿ ವಾ ನ ವಾ ಇತಿ ॥

---

1. ಪ್ರಾಣಿಗಳ ಶರೀರಭಾಗವು; ೧೩ನೆಯ ಅಧ್ಯಾಯದಲ್ಲಿ ಕ್ಷೇತ್ರವೆಂದೂ, ೧೫ನೆಯ ಅಧ್ಯಾಯದಲ್ಲಿ ಕ್ಷರವೆಂದೂ ಕರೆದಿರುವದು.
2. ಸಮಷ್ಟಿರೂಪದಿಂದ ಎಲ್ಲವನ್ನೂ ತುಂಬಿಕೊಂಡಿರುವದರಿಂದ.
3. ಶರೀರದಲ್ಲಿ ಕರಣಾತ್ಮಕನಾಗಿರುವದರಿಂದ.
4. ಬೃ. ೩-೩-೩.
5. ಮ॥ಮೈ॥ ಪಾಠ; ಆ॥ಸ॥ಗಳಲ್ಲಿ ಅನ್ತಕಾಲೇ ಚ ಮರಣಕಾಲೇ ಎಂದಿದೆ.

ಮತ್ತು ಕಡೆಯ ಕಾಲದಲ್ಲಿ ಎಂದರೆ ಸಾಯುವ ಕಾಲದಲ್ಲಿ ನನ್ನನ್ನೇ ಪರಮೇಶ್ವರನಾದ ವಿಷ್ಣುವನ್ನೇ ನೆನಸಿಕೊಳ್ಳುತ್ತಾ ಕಳೇಬರವನ್ನು ಎಂದರೆ ಶರೀರವನ್ನು ಬಿಟ್ಟು ಯಾವನು ಪ್ರಯಾಣಮಾಡುವನೋ ತೆರಳುವನೋ ಅವನು ನನ್ನ ಸ್ವರೂಪವನ್ನು ಎಂದರೆ ವೈಷ್ಣವತತ್ತ್ವವನ್ನೇ ಹೊಂದುವನು ಇದರಲ್ಲಿ ಈ ವಿಷಯದಲ್ಲಿ, ಹೊಂದುವನೋ ಇಲ್ಲವೋ ಎಂಬ ಸಂಶಯವಿರುವದಿಲ್ಲ.

## ಮರಣಕಾಲದ ನೆನಪಿಗಾಗಿ ಅಭ್ಯಾಸ

(ಭಾಷ್ಯ)

೪೯೮. ನ ಮದ್ವಿಷಯ ಏವಾಯಂ ನಿಯಮಃ । ಕಿಂ ತರ್ಹಿ ? --

(ಭಾಷ್ಯಾರ್ಥ)

ಈ ನಿಯಮವು ನನ್ನ ವಿಷಯದಲ್ಲಿ ಮಾತ್ರವಲ್ಲ, ಮತ್ತೇನೆಂದರೆ :—

**ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯನ್ತೇ ಕಲೇವರಮ್ ।**
**ತಂ ತಮೇವೈತಿ ಕೌನ್ತೇಯ ಸದಾ ತದ್ಭಾವಭಾವಿತಃ ॥ ೬ ॥**

೬. ಎಲೈ ಕೌಂತೇಯನೆ, ಯಾವ ಯಾವ ಭಾವವನ್ನು, ಯಾವಾಗಲೂ ತದ್ಭಾವಭಾವಿತನಾಗಿ, ಕೊನೆಯಲ್ಲಿ ಸ್ಮರಿಸಿಕೊಳ್ಳುತ್ತಾ ಕಳೇಬರವನ್ನು ಬಿಡುವನೋ, ಅದದನ್ನೇ ಹೊಂದುವನು.

(ಭಾಷ್ಯ)

೪೯೯. ಯಂ ಯಂ ವಾ ಅಪಿ ಯಂ ಯಂ[1] ಭಾವಂ ದೇವತಾವಿಶೇಷಂ ಸ್ಮರನ್ ಚಿನ್ತಯನ್ ತ್ಯಜತಿ ಪರಿತ್ಯಜತಿ ಅನ್ತೇ ಅನ್ತಕಾಲೇ ಪ್ರಾಣವಿಯೋಗಕಾಲೇ ಕಲೇವರಂ ಶರೀರಂ ತಂ ತಮೇವ ಸ್ಮೃತಂ ಭಾವಮೇವ ಏತಿ ನಾನ್ಯಂ ಕೌನ್ತೇಯ ಸದಾ ಸರ್ವದಾ ತದ್ಭಾವಭಾವಿತಃ ತಸ್ಮಿನ್ ಭಾವಃ ತದ್ಭಾವಃ ಸಃ ಭಾವಿತಃ ಸ್ಮರ್ಯಮಾಣತಯಾ ಅಭ್ಯಸ್ತಃ ಯೇನ ಸಃ ತದ್ಭಾವಭಾವಿತಃ ಸನ್ ॥

---

1. 'ಯಂ ಯಂ' ಎಂಬ ಮಾತುಗಳಿಲ್ಲದಿದ್ದರೂ ಸಾಗುತ್ತಿತ್ತು.

(ಭಾಷ್ಯಾರ್ಥ)

ಯಾವ ಯಾವದನ್ನೇ ಆಗಲಿ ಯಾವ ಯಾವ ಭಾವವನ್ನು ಎಂದರೆ ಗೊತ್ತಾದ ದೇವತೆಯನ್ನು ಸ್ಮರಿಸುತ್ತಾ ನೆನಸಿಕೊಳ್ಳುತ್ತಾ ಕೊನೆಯಲ್ಲಿ ಎಂದರೆ ಕೊನೆಯ ಕಾಲದಲ್ಲಿ, ಪ್ರಾಣವು ಬಿಟ್ಟಗಲುವ ಕಾಲದಲ್ಲಿ, ಕಳೇಬರವನ್ನು ಎಂದರೆ ಶರೀರವನ್ನು ಬಿಡುವನೋ ಬಿಟ್ಟುಬಿಡುವನೋ ಅದದನ್ನೇ (ಆ) ನೆನಸುತ್ತಿದ್ದ (ದೇವತಾ) ಭಾವವನ್ನೇ ಹೊಂದುವನು ಬೇರೆ ಒಂದನ್ನು ಹೊಂದುವದಿಲ್ಲ ಎಲೈ ಕೌಂತೇಯನೆ, ಯಾವಾಗಲೂ ಎಲ್ಲಾ ಕಾಲದಲ್ಲಿಯೂ ತದ್ಭಾವಭಾವಿತನಾಗಿ-ಅದರಲ್ಲಿಯೇ ಇರುವ ಭಾವವು ತದ್ಭಾವವು, ಅದನ್ನು ನೆನಸಿಕೊಳ್ಳಬೇಕೆಂದು ಯಾವನು (ಯಾವಾಗಲೂ) ಅಭ್ಯಾಸ ಮಾಡಿರುವನೋ (ಅವನು) ತದ್ಭಾವಭಾವಿತನಾಗಿ (ಅದವನ್ನೇ ಹೊಂದುವನು).

(ಭಾಷ್ಯ)

೫೦೦ ಯಸ್ಮಾತ್ ಏವಮ್ ಅನ್ತ್ಯಾ ಭಾವನಾ ದೇಹಾನ್ತರಪ್ರಾಪ್ತೌ ಕಾರಣಮ್—

(ಭಾಷ್ಯಾರ್ಥ)

ಹೀಗೆ ಕಡೆಯ ಭಾವನೆಯು ಮತ್ತೊಂದು ದೇಹವನ್ನು ಹೊಂದುವದಕ್ಕೆ ಕಾರಣವಾಗಿರುವದಷ್ಟೆ[1]; ಆದಕಾರಣ :—

**ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।**
**ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಃ ॥ ೭ ॥**

೭. ಆದ್ದರಿಂದ ಸರ್ವಕಾಲಗಳಲ್ಲಿಯೂ ನನ್ನನ್ನು ಸ್ಮರಿಸುತ್ತಿರು, ಯುದ್ಧವನ್ನೂ ಮಾಡು. ನನ್ನಲ್ಲಿ ಅರ್ಪಿಸಿದ ಮನೋಬುದ್ಧಿಯಾಗಿ ನನ್ನನ್ನೇ ಸೇರುವೆ, ಸಂಶಯವಿಲ್ಲ.

(ಭಾಷ್ಯ)

೫೦೧. ತಸ್ಮಾತ್ ಸರ್ವೇಷು ಕಾಲೇಷು ಮಾಮ್ ಅನುಸ್ಮರ ಯಥಾಶಾಸ್ತ್ರಮ್, ಯುಧ್ಯ ಚ ಯುದ್ಧಂ ಚ ಸ್ವಧರ್ಮಂ ಕುರು । ಮಯಿ ವಾಸುದೇವೇ

---

1. ಇಲ್ಲಿ ಜ್ಞಾನಕರ್ಮಸಮುಚ್ಚಯವಿಲ್ಲ ಎಂದು ಆ॥ ವ್ಯಾಖ್ಯಾನ ; ಆದರೆ ಸ್ವಧರ್ಮವನ್ನೂ ಮಾಡುತ್ತಾ ಅದನ್ನು ಭಗವದರ್ಪಣೆಮಾಡುತ್ತಾ ಅವನನ್ನೇ ಚಿಂತಿಸುತ್ತಿರು ಎಂಬುದರಲ್ಲಿ ವಿರೋಧವೇನೂ ಇಲ್ಲ.

ಅರ್ಪಿತೇ ಮನೋಬುದ್ಧೀ ಯಸ್ಯ ಸತ್ವಂ ಮಯ್ಯರ್ಪಿತಮನೋಬುದ್ಧಿಃ ಸನ್ ಮಾಮೇವ ಯಥಾಸ್ಮೃತಮ್ ಏಷ್ಯಸಿ ಆಗಮಿಷ್ಯಸಿ । ಅಸಂಶಯಃ ನ ಸಂಶಯಃ ಅತ್ರ ವಿದ್ಯತೇ ॥

(ಭಾಷ್ಯಾರ್ಥ)

ಆದ್ದರಿಂದ ಎಲ್ಲಾ ಕಾಲಗಳಲ್ಲಿಯೂ ಶಾಸ್ತ್ರದಲ್ಲಿ ಹೇಳಿರುವಂತೆ ನನ್ನನ್ನು ಸ್ಮರಿಸುತ್ತಿರು. ಮತ್ತು ಯುದ್ಧಮಾಡು, ಸ್ವಧರ್ಮವಾದ ಯುದ್ಧವನ್ನು ಮಾಡು. 'ಮಯ್ಯರ್ಪಿತಮನೋಬುದ್ಧಿಃ' ವಾಸುದೇವನಾದ ನನ್ನಲ್ಲಿ ಅರ್ಪಿಸಿರುವ ಮನಸ್ಸು, ಬುದ್ಧಿ-ಇವುಗಳನ್ನುಳ್ಳವನಾಗಿ ನೀನು ಸ್ಮರಣೆಗೆ ಅನುಸಾರವಾಗಿ ನನ್ನನ್ನೇ ಹೊಂದುವೆ. ಬಂದು ಸೇರುವೆ. ಅಸಂಶಯವು, ಎಂದರ ಇದರಲ್ಲಿ ಸಂಶಯವು ಇರುವದಿಲ್ಲ.

## ಅಭ್ಯಾಸಯೋಗದ ಫಲ

**ಅಭ್ಯಾಸಯೋಗಯುಕ್ತೇನ ಚೇತಸಾ ನಾನ್ಯಗಾಮಿನಾ ।**
**ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿನ್ತಯನ್ ॥ ೮ ॥**

೮. ಎಲೈ ಪಾರ್ಥನೆ, ಅಭ್ಯಾಸಯೋಗಯುಕ್ತವಾದ ಅನನ್ಯಗಾಮಿಯಾದ ಚೇತಸ್ಸಿನಿಂದ ಅನುಚಿಂತನೆಮಾಡುತ್ತಿರುವವನು ದಿವ್ಯನಾದ ಪರಮಪುರುಷನನ್ನು ಹೊಂದುವನು.

(ಭಾಷ್ಯ)

೫೦೨. ಕಿಂಚ ಅಭ್ಯಾಸಯೋಗಯುಕ್ತೇನ ಮಯಿ ಚಿತ್ತಸಮರ್ಪಣವಿಷಯಭೂತೇ ಏಕಸ್ಮಿನ್ ತುಲ್ಯಪ್ರತ್ಯಯಾವೃತ್ತಿಲಕ್ಷಣಃ ವಿಲಕ್ಷಣಪ್ರತ್ಯಯಾನನ್ತರಿತಃ ಅಭ್ಯಾಸಃ। ಸ ಚ ಅಭ್ಯಾಸಃ[1] ಯೋಗಃ ತೇನ ಯುಕ್ತಂ ತತ್ರೈವ ವ್ಯಾಪೃತಂ ಯೋಗಿನಃ ಚೇತಃ ತೇನ ಚೇತಸಾ ನಾನ್ಯಗಾಮಿನಾ ನಾನ್ಯತ್ರ ವಿಷಯಾನ್ತರೇ ಗನ್ತುಂ ಶೀಲಮ್ ಅಸ್ಯ ಇತಿ ನಾನ್ಯಗಾಮಿ ತೇನ ನಾನ್ಯಗಾಮಿನಾ । ಪರಮಂ ನಿರತಿಶಯಂ ಪುರುಷಂ ದಿವ್ಯಂ ದಿವಿ ಸೂರ್ಯಮಣ್ಡಲೇ ಭವಂ ಯಾತಿ ಗಚ್ಛತಿ ಹೇ ಪಾರ್ಥ ಅನುಚಿನ್ತಯನ್ ಶಾಸ್ತ್ರಾಚಾರ್ಯೋಪದೇಶಮನುಧ್ಯಾಯನ್ ಇತ್ಯೇತತ್ ॥

---

1. "ಸ ಚ ಅಸೌ" ಮೈ॥

(ಭಾಷ್ಯಾರ್ಥ)

ಮತ್ತು ಅಭ್ಯಾಸಯೋಗಯುಕ್ತವಾದ-**ಚಿತ್ತವನ್ನು ಸಮರ್ಪಿಸುವದಕ್ಕೆ ವಿಷಯನಾಗಿರುವ ನನ್ನೊಬ್ಬನಲ್ಲಿಯೇ ಒಂದೇ ಬಗೆಯ ಪ್ರತ್ಯಯವನ್ನು ಆವೃತ್ತಿಮಾಡುತ್ತಿರುವದೇ, ಬೇರೆಯ ಬಗೆಯ ಪ್ರತ್ಯಯಗಳನ್ನು ನಡುವೆ ಬರಗೊಡದಿರುವದೇ, ಅಭ್ಯಾಸವು.**[1] ಈ ಅಭ್ಯಾಸವೇ ಯೋಗವು, ಅದರಿಂದ ಯುಕ್ತವಾಗಿರುವದು, ಎಂದರೆ ಯೋಗಿಯ ಚಿತ್ತವು ಕೆಲಸಮಾಡುತ್ತಿರುವದು ಅಂಥ **ಚಿತ್ತದಿಂದ,** ಅನನ್ಯಗಾಮಿಯಾದ ಎಂದರೆ ಮತ್ತೊಂದು ಕಡೆಯಲ್ಲಿ ಮತ್ತೊಂದು ವಿಷಯದಲ್ಲಿ ಹರಿಯುವ ಸ್ವಭಾವವಿಲ್ಲದ, ಅಂಥ ಅನನ್ಯಗಾಮಿಯಾದ (**ಚಿತ್ತದಿಂದ) ಅನುಚಿಂತನೆಮಾಡುತ್ತಿರುವವನು** ಶಾಸ್ತ್ರದ ಮತ್ತು ಆಚಾರ್ಯರ ಉಪದೇಶಕ್ಕೆ ಅನುಸಾರವಾಗಿ **ಧ್ಯಾನಮಾಡುತ್ತಿರುವವನು** ದಿವ್ಯನಾದ ದಿವದಲ್ಲಿ ಎಂದರೆ ಸೂರ್ಯಮಂಡಲದಲ್ಲಿ ಇರುವ ಪರಮನಾದ ಮಿಗಿಲಿಲ್ಲದ ಪುರುಷನನ್ನು ಹೊಂದುವನು, ಹೋಗಿ ಸೇರುವನು

(ಭಾಷ್ಯ)

೫೦೩. ಕಿಂವಿಶಿಷ್ಟಂ ಚ ಪುರುಷಂ ಯಾತಿ ಇತಿ? ಉಚ್ಯತೇ—

(ಭಾಷ್ಯಾರ್ಥ)

ಮತ್ತು ಎಂಥ ಪುರುಷನನ್ನು ಹೊಂದುವನು? ಎಂದರೆ ಹೇಳುತ್ತಾನೆ:—

**ಕವಿಂ ಪುರಾಣಮನುಶಾಸಿತಾರ-**
**ಮಣೋರಣೀಯಾಂಸಮನುಸ್ಮರೇದ್ಯಃ ।**
**ಸರ್ವಸ್ಯ ಧಾತಾರಮಚಿನ್ತ್ಯರೂಪ-**
**ಮಾದಿತ್ಯವರ್ಣಂ ತಮಸಃ ಪರಸ್ತಾತ್ ॥ ೯ ॥**

೯. ಕವಿಯೂ ಪುರಾಣನೂ ಅನುಶಾಸಿತನೂ ಅಣುವಿಗಿಂತ ಅಣುವಾಗಿರುವವನೂ ಎಲ್ಲಕ್ಕೂ ಧಾತೃವೂ ಅಚಿಂತ್ಯರೂಪನೂ ಆದಿತ್ಯವರ್ಣನೂ ತಮಸ್ಸಿನ ಆಚೆಯಿರುವವನೂ ಆಗಿರುವ (ಪರಮಪುರುಷನನ್ನು) ಯಾವನು ಅನುಸ್ಮರಣೆಮಾಡುತ್ತಿರುವನೋ (ಅವನು ಆ ಪುರುಷನನ್ನು ಹೊಂದುವನು).

---

1. ಮುಂದೆ ೧೨-೯ರಲ್ಲಿ ಈ ಶಬ್ದದ ವ್ಯಾಖ್ಯಾನವನ್ನೂ ೧೨-೩ರಲ್ಲಿ 'ಉಪಾಸನಮ್' ಎಂಬುದರ ವಿವರಣೆಯನ್ನೂ ನೋಡಿ.

(ಭಾಷ್ಯ)

೫೨೪. ಕವಿಂ ಕ್ರಾನ್ತದರ್ಶಿನಂ ಸರ್ವಜ್ಞಮ್ । ಪುರಾಣಂ ಚಿರನ್ತನಮ್ । ಅನುಶಾಸಿತಾರಮ್ ಸರ್ವಸ್ಯ ಜಗತಃ ಪ್ರಶಾಸಿತಾರಮ್ । ಅಣೋಃ ಸೂಕ್ಷ್ಮಾತ್ ಅಪಿ ಅಣೀಯಾಂಸಂ ಸೂಕ್ಷ್ಮತರಂ ಅನುಸ್ಮರೇತ್ ಅನುಚಿನ್ತಯೇತ್ ಯಃ ಕಶ್ಚಿತ್ ಸರ್ವಸ್ಯ ಕರ್ಮಫಲಜಾತಸ್ಯ ಧಾತಾರಂ ವಿಧಾತಾರಂ ವಿಚಿತ್ರತಯಾ ಪ್ರಾಣಿಭ್ಯಃ ವಿಭಕ್ತಾರಮ್। ಅಚಿನ್ತ್ಯರೂಪಮ್ ನಾಸ್ಯ ರೂಪಂ ನಿಯತಂ ವಿದ್ಯಮಾನಮಪಿ ಕೇನಚಿತ್ ಚಿನ್ತಯಿತುಂ ಶಕ್ಯತೇ ಇತಿ ಅಚಿನ್ತ್ಯರೂಪಮ್ । ಆದಿತ್ಯವರ್ಣಮ್ ಆದಿತ್ಯಸ್ಯೇವ ನಿತ್ಯಚೈತನ್ಯಪ್ರಕಾಶೋ ವರ್ಣಃ ಯಸ್ಯ ತಮ್ ಆದಿತ್ಯವರ್ಣಮ್ । ತಮಸಃ ಪರಸ್ತಾತ್ ಅಜ್ಞಾನಲಕ್ಷಣಾತ್ ಮೋಹಾನ್ಧಕಾರಾತ್ ಪರಂ ತಮ್[1] "ಅನುಚಿನ್ತಯನ್ ಯಾತಿ" (೮) ಇತಿ ಪೂರ್ವೇಣ ಸಂಬನ್ಧಃ ॥

(ಭಾಷ್ಯಾರ್ಥ)

ಕವಿ ಎಂದರೆ ಆಚೆಗಿರುವದನ್ನು ನೋಡುವ[2], ಸರ್ವಜ್ಞನು ಪುರಾಣನು ಎಂದರೆ ಬಹುಕಾಲದಿಂದ ಇರುವ (ಅನಾದಿಪುರುಷನು). ಅನುಶಾಸಿತನು ಎಂದರೆ ಜಗತ್ತೆಲ್ಲವನ್ನೂ ಕಟ್ಟಪ್ಪಣೆಯಲ್ಲಿಟ್ಟುಕೊಂಡಿರುವವನು. ಅಣುವಿಗಿಂತಲೂ ಅಣು ಎಂದರೆ ಸೂಕ್ಷ್ಮವಾಗಿರುವದಕ್ಕಿಂತಲೂ ಹೆಚ್ಚು ಸೂಕ್ಷ್ಮವಾಗಿರುವವನು. ಇಂಥ ಪುರುಷನನ್ನು ಯಾವನು ಅನುಸ್ಮರಿಸುತ್ತಿರುವನೋ ಅನುಚಿಂತನೆಮಾಡುತ್ತಿರುವನೋ (ಎಂದರ್ಥ). ಎಲ್ಲಕ್ಕೂ ಎಂದರೆ ಕರ್ಮಫಲಸಮೂಹಕ್ಕೆಲ್ಲ ಧಾತೃ ಎಂದರೆ ವಿಧಾನಮಾಡುವವನು, ಬಗೆಬಗೆಯಾಗಿ ಪ್ರಾಣಿಗಳಿಗೆ ವಿಂಗಡಿಸಿಕೊಡುತ್ತಿರುವವನು (ಎಂದರ್ಥ). ಅಚಿಂತ್ಯರೂಪನು ಎಂದರೆ ಇವನಿಗೆ ರೂಪವು ಒಂದೇ ತೆರನಾಗಿದ್ದರೂ ಯಾರಿಂದಲೂ ಅದನ್ನು ಚಿಂತಿಸುವದು ಶಕ್ಯವಿಲ್ಲವಾದ್ದರಿಂದ[3] ಅಚಿಂತ್ಯರೂಪನು. ಆದಿತ್ಯವರ್ಣನು. ಸೂರ್ಯನಿಗೆ (ಸ್ವಭಾವದಿಂದಿರುವ ಬೆಳಕಿನಂತೆ) ನಿತ್ಯವಾಗಿರುವ ಚೈತನ್ಯದ ಬೆಳಕೆಂಬ ವರ್ಣವು ಯಾವನಿಗೆ ಇರುವದೋ ಅವನು ಆದಿತ್ಯವರ್ಣನು. ತಮಸ್ಸಿನ ಆಚೆ ಇರುವವನು, ಎಂದರೆ ಅಜ್ಞಾನವೆಂಬ ಮೋಹದ

---

1. 'ಪರತಃ ಸ್ಥಿತಂ ತಮ್' ವಾ॥

2. ದೇಶಕಾಲಗಳ ವ್ಯವಧಾನವಿರುವದನ್ನೂ ಅವುಗಳನ್ನು ಮೀರಿರುವದನ್ನೂ ತಿಳಿಯಬಲ್ಲವನು ಈ. ಭಾ. ೮ ರಲ್ಲಿ 'ಕವಿಃ' ಎಂಬುದರ ವಿವರವನ್ನು ನೋಡಿ

3. ಶಾಸ್ತ್ರಾಚಾರ್ಯರ ಉಪದೇಶವಿಲ್ಲದವರಿಗೆ ಶಕ್ಯನಲ್ಲವೆಂದು ಭಾವ; ಏಕೆಂದರೆ ಪರಮಪುರುಷನನ್ನು ಚಿಂತಿಸಬೇಕೆಂದು ವಿಧಾನಮಾಡುವುದಕ್ಕೇ ಈ ಗ್ರಂಥಭಾಗವು ಹೊರಟಿದೆ.

ಕರ್ತೃಲೆಗಿಂತ ಆಚೆಗೆ ಇರುವವನು. ಇಂಥ "(ಪರಮಪುರುಷನನ್ನು) ಅನುಚಿಂತಿಸು ತ್ತಿರುವವನು (ಅವನನ್ನು) ಹೊಂದುವನು" (೮) ಎಂದು ಹಿಂದಿನ (ಶ್ಲೋಕದ ವಾಕ್ಯಕ್ಕೆ ಇದನ್ನು) ಸಂಬಂಧಿಸಿಕೊಳ್ಳಬೇಕು.

ಪ್ರಯಾಣಕಾಲೇ ಮನಸಾಚಲೇನ
ಭಕ್ತ್ಯಾ ಯುಕ್ತೋ ಯೋಗಬಲೇನ ಚೈವ ।
ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್
ಸ ತಂ ಪರಂ ಪುರುಷಮುಪೈತಿ ದಿವ್ಯಮ್ ॥೧೦॥

೧೦. ಪ್ರಯಾಣಕಾಲದಲ್ಲಿ ಅಚಲವಾದ ಮನಸ್ಸಿನಿಂದ ಭಕ್ತಿಯಿಂದಲೂ ಯೋಗಬಲದಿಂದಲೂ ಕೂಡಿದವನಾಗಿ ಹುಬ್ಬುಗಳ ನಡುವೆ ಪ್ರಾಣವನ್ನು ಚೆನ್ನಾಗಿ ಇಟ್ಟು ಅವನು ಆ ದಿವ್ಯನಾದ ಪುರುಷನನ್ನು ಹೊಂದುವನು.

(ಭಾಷ್ಯ)

೫೦೫. ಕಿಂಚ ಪ್ರಯಾಣಕಾಲೇ ಮರಣಕಾಲೇ ಮನಸಾ ಅಚಲೇನ ಚಲನವರ್ಜಿತೇನ ಭಕ್ತ್ಯಾ ಯುಕ್ತಃ ಭಜನಂ ಭಕ್ತಿಃ ತಯಾ ಯುಕ್ತಃ ಯೋಗಬಲೇನ ಚೈವ ಯೋಗಸ್ಯ ಬಲಂ ಯೋಗಬಲಂ ಸಮಾಧಿಜಸಂಸ್ಕಾರಪ್ರಚಯಜನಿತಚಿತ್ತಸ್ಥೈರ್ಯಲಕ್ಷಣಂ[1] ಯೋಗಬಲಂ ತೇನ ಚ ಯುಕ್ತಃ ಇತ್ಯರ್ಥಃ। ಪೂರ್ವಂ ಹೃದಯಪುಣ್ಡರೀಕೇ ವಶೀಕೃತ್ಯ ಚಿತ್ತಂ ತತ ಊರ್ಧ್ವಗಾಮಿನ್ಯಾ ನಾಡ್ಯಾ ಭೂಮಿಜಯಕ್ರಮೇಣ ಭ್ರುವೋಃ ಮಧ್ಯೇ ಪ್ರಾಣಮ್ ಆವೇಶ್ಯ ಸ್ಥಾಪಯಿತ್ವಾ ಸಮ್ಯಕ್ ಅಪ್ರಮತ್ತಃ ಸನ್ ಸ ಏವಂವಿದ್ವಾನ್ ಯೋಗೀ "ಕವಿಂ ಪುರಾಣಮ್" (೮-೯) ಇತ್ಯಾದಿಲಕ್ಷಣಂ ತಂ ಪರಂ ಪುರುಷಮ್ ಉಪೈತಿ ಪ್ರತಿಪದ್ಯತೇ ದಿವ್ಯಂ ದ್ಯೋತನಾತ್ಮಕಮ್ ॥

(ಭಾಷ್ಯಾರ್ಥ)

ಮತ್ತು ಪ್ರಯಾಣಕಾಲದಲ್ಲಿ ಎಂದರೆ ಸಾಯುವ ಕಾಲದಲ್ಲಿ ಅಚಲವಾದ ಎಂದರೆ ಅಲುಗಾಡದೆ ಇರುವ ಮನಸ್ಸಿನಿಂದ ಭಕ್ತಿಯಿಂದ-ಭಕ್ತಿ ಎಂದರೆ ಭಜಿಸುವದು; ಅದರಿಂದ-ಕೂಡಿ ಮತ್ತು ಯೋಗಬಲದಿಂದಲೂ-ಯೋಗದ ಬಲವು ಯೋಗ

---

1. "ಸಮಾಧಿಜಸಂಸ್ಕಾರಜನಿತಂ ಚಿತ್ತಸ್ಥೈರ್ಯಲಕ್ಷಣಮ್" ಮ॥ ಮ್ಯೆ॥

ಬಲವು ; **ಸಮಾಧಿಯಿಂದುಂಟಾದ ಸಂಸ್ಕಾರವು ಬಲವಾಗುವದರಿಂದುಂಟಾದ ಚಿತ್ತದ ಸ್ಥಿರತೆಯು ರೂಪವಾದದ್ದೇ ಯೋಗಬಲವೆಂಬುದು.** ಅದರಿಂದಲೂ-ಕೂಡಿ ಎಂದರ್ಥ. ಮೊದಲು ಹೃದಯಕಮಲದಲ್ಲಿ ಚಿತ್ತವನ್ನು ಅಳವಡಿಸಿಕೊಂಡು ಆಮೇಲೆ ಮೇಲಕ್ಕೆ ಹೋಗುವ (ಸುಷುಮ್ನೆ ಎಂಬ) ನಾಡಿಯಿಂದ ಒಂದೊಂದಾಗಿ ಭೂಮಿಕೆಗಳನ್ನು ಗೆದ್ದುಕೊಂಡು[1] (ಆ) ಕ್ರಮದಿಂದ ಹುಬ್ಬುಗಳ ನಡುವೆ ಪ್ರಾಣವನ್ನು ಚೆನ್ನಾಗಿ ನಿಲ್ಲಿಸಿಕೊಂಡು[2] ಸ್ವಲ್ಪವೂ ಎಚ್ಚರಿಕೆತಪ್ಪದವನಾಗಿ ಅವನು ಎಂದರೆ ಈ ರೀತಿಯಲ್ಲಿ ಧ್ಯಾನಮಾಡುವ ಯೋಗಿಯು "ಕವಿಂ ಪುರಾಣಮ್" ಎಂದು ಮುಂತಾಗಿ (ಹೇಳಿರುವ) ಲಕ್ಷಣವುಳ್ಳ ಆ ದಿವ್ಯನಾದ ಪ್ರಕಾಶಸ್ವರೂಪನಾದ ಪರಮಪುರುಷನನ್ನು ಹೊಂದುವನು.

## ಉಪಾಸನೆಗೆ ಓಂಕಾರದ ಸಹಾಯ

(ಭಾಷ್ಯ)

೫೨೬. ಪುನರಪಿ[3] ವಕ್ಷ್ಯಮಾಣೇನ ಉಪಾಯೇನ ಪ್ರತಿಪಿತ್ಸಿತಸ್ಯ ಬ್ರಹ್ಮಣಃ ವೇದವಿದ್ವದನಾದಿವಿಶೇಷಣವಿಶೇಷ್ಯಸ್ಯ ಅಭಿಧಾನಂ ಕರೋತಿ ಭಗವಾನ್-

(ಭಾಷ್ಯಾರ್ಥ)

ಮುಂದೆ ಹೇಳುವ ಉಪಾಯದಿಂದ ಪಡೆಯಬೇಕಾಗಿರುವ ಬ್ರಹ್ಮವು ವೇದವನ್ನು ಬಲ್ಲವರು ತಿಳಿಸುತ್ತಾರೆಂಬುದೇ ಮುಂತಾದ ವಿಶೇಷಣಗಳಿಂದ ಕೂಡಿರುವದೆಂದು ಭಗವಂತನು ಮತ್ತೂ[4] ಹೇಳುತ್ತಿದಾನೆ :—

---

1 ಕ್ರಮಕ್ರಮವಾಗಿ ಭೂಮಿಜಯವನ್ನು ಮಾಡಿಕೊಳ್ಳುತ್ತಾ ಸಂಯಮದಲ್ಲಿ ಮುಂದುವರಿಯಬೇಕೆಂದು ಯೋಗಸೂತ್ರ (೩-೬) ರಲ್ಲಿ ಹೇಳಿರುತ್ತದೆ. ಆದರೆ ಅಲ್ಲಿ ವ್ಯಾಖ್ಯಾನಕಾರರು ಹೇಳಿರುವ ಸವಿತರ್ಕಸಮಾಧಿಯೇ ಮುಂತಾದ ಭೂಮಿಕೆಗಳು ಆಚಾರ್ಯರಿಗೆ ಇಷ್ಟವೆಂದು ಹೇಳುವದಕ್ಕೆ ಯಾವ ಆಧಾರವೂ ಭಾಷ್ಯದಲ್ಲಿ ಕಾಣುವದಿಲ್ಲ. ಸುಷುಮ್ನಾನಾಡಿಯ ವಿಷಯಕ್ಕೆ ತೈ. ಭಾ. ಭಾ. ೪೨ ನ್ನು ನೋಡಿ.

2. ಸಂಯಮವನ್ನು ಮಾಡಿಕೊಂಡು.

3. ಈ ವಾಕ್ಯದ ಹಿಂದೆ "ಯೋಗಮಾರ್ಗಾನುಗಮನೇನೈವ ಬ್ರಹ್ಮವಿದ್ಯಾಮನ್ತರೇಣಾಪಿ ಬ್ರಹ್ಮ ಆಪ್ಯತೇ ಇತ್ಯೇವಂ ಪ್ರಾಪ್ತೇ ಇದಮ್ ಉಚ್ಯತೇ" ಎಂಬ ವಾಕ್ಯವೊಂದು ಸಿ|| ಗು|| ಗಳಲ್ಲಿ ಹೆಚ್ಚಾಗಿದೆ.

4. ಹಿಂದೆ ಹೇಳಿದ ಪರಮಪುರುಷಚಿಂತನೆಗೆ ಈ ವಿಶೇಷಣಗಳನ್ನೂ ಓಂಕಾರವೆಂಬ ಉಪಾಯವನ್ನೂ ಸೇರಿಸಿಕೊಳ್ಳಬೇಕೆಂದು ಭಾವ.

ಯದಕ್ಷರಂ ವೇದವಿದೋ ವದನ್ತಿ
ವಿಶನ್ತಿ ಯದ್ಯತಯೋ ವೀತರಾಗಾಃ ।
ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ
ತತ್ತೇ ಪದಂ ಸಙ್ಗ್ರಹೇಣ ಪ್ರವಕ್ಷ್ಯೇ ॥೧೧॥

೧೧. ಯಾವ ಅಕ್ಷರವನ್ನು ವೇದವಿದರು ತಿಳಿಸುವರೋ, ವೀತರಾಗರಾದ ಯತಿಗಳು ಯಾವದನ್ನು ಪ್ರವೇಶಿಸುವರೋ, ಯಾವದನ್ನು ಬಯಸಿದವರಾಗಿ ಬ್ರಹ್ಮಚರ್ಯವನ್ನು ಆಚರಿಸುವರೋ ಆ ಪದವನ್ನು ನಿನಗೆ ಸಂಗ್ರಹದಿಂದ ಹೇಳುವೆನು.

(ಭಾಷ್ಯ)

೫೦೭. ಯತ್ ಅಕ್ಷರಂ ನ ಕ್ಷರತಿ ಇತಿ ಅಕ್ಷರಮ್ ಅವಿನಾಶಿ ವೇದವಿದಃ ವೇದಾರ್ಥಜ್ಞಾಃ ವದನ್ತಿ " ಏತದ್ವೈ[1] ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದನ್ತಿ " (ಬೃ. ೩-೮- ) ಇತಿ ಶ್ರುತೇಃ । ಸರ್ವವಿಶೇಷನಿವರ್ತಕತ್ವೇನ ಅಭಿವದನ್ತಿ " ಅಸ್ಥೂಲಮನಣು " (ಬೃ. ೩-೮-೮) ಇತ್ಯಾದಿ । ಕಿಂಚ ವಿಶನ್ತಿ ಪ್ರವಿಶನ್ತಿ ಸಮ್ಯಗ್ದರ್ಶನಪ್ರಾಪ್ತೌ ಸತ್ಯಾಂ ಯತ್ ಯತಯಃ ಯತನಶೀಲಾಃ ಸಂನ್ಯಾಸಿನಃ ವೀತರಾಗಾಃ ವೀತಃ ವಿಗತಃ ರಾಗಃ ಯೇಭ್ಯಃ ತೇ ವೀತರಾಗಾಃ । ಯಚ್ಚ ಅಕ್ಷರಮ್ ಇಚ್ಛನ್ತಃ । 'ಜ್ಞಾತುಮ್' ಇತಿ ವಾಕ್ಯಶೇಷಃ । ಬ್ರಹ್ಮಚರ್ಯಂ ಗುರೌ ಚರನ್ತಿ ಆಚರನ್ತಿ **ತತ್ ತೇ ಪದಂ**[2] ತತ್ ಅಕ್ಷರಾಖ್ಯಂ ಪದಂ ಪದನೀಯಂ ತೇ ತುಭ್ಯಂ ಸಙ್ಗ್ರಹೇಣ ಸಙ್ಗ್ರಹಃ ಸಙ್ಕ್ಷೇಪಃ ತೇನ ಸಙ್ಕ್ಷೇಪೇಣ ಪ್ರವಕ್ಷ್ಯೇ ಕಥಯಿಷ್ಯಾಮಿ ॥

(ಭಾಷ್ಯಾರ್ಥ)

ಯಾವ ಅಕ್ಷರವನ್ನು-ನಾಶವಾಗುವದಿಲ್ಲವಾದ್ದರಿಂದ (ಬ್ರಹ್ಮವು ಅಕ್ಷರವು)-ಅವಿನಾಶಿಯಾದ (ಬ್ರಹ್ಮವನ್ನು) ವೇದವಿದರು ಎಂದರೆ ವೇದಾರ್ಥವನ್ನು ಬಲ್ಲವರು ಹೇಳುವರೋ-" ಎಲೌ ಗಾರ್ಗಿಯೆ, ಆ ಈ ಅಕ್ಷರವನ್ನೇ ಬ್ರಾಹ್ಮಣರು ಹೇಳುವರು " (ಬೃ. ೩-೮-೮) ಎಂಬ ಶ್ರುತಿಯು (ವೇದವಿದರು ಹೇಳುವರು ಎಂಬುದಕ್ಕೆ)ಪ್ರಮಾಣವು.

---

1. " ತದ್ವಾ ಏತದಕ್ಷರಮ್.... ..." ಎಂಬ ಆ|| ನಿ|| ಗು|| ವಾ|| ಪಾಠವು ಮಾಧ್ಯಂದಿನ ಪಾಠವಿರಬಹುದು ; ನಾವು ಕೊಟ್ಟಿರುವದು ಮ|| ಮೈ||.

2. 'ತತ್ ತೇ ಪದಂ' ಎಂಬ ಮೂರು ಮಾತುಗಳು ಮೂಲದಲ್ಲಿಲ್ಲದಿದ್ದರೂ ಸಾಗುತ್ತದೆ.

(ಹೇಳುವರೋ) ಎಂದರೆ ಅದು ಯಾವ ವಿಶೇಷವೂ ಇಲ್ಲದ್ದು, 'ಸ್ಥೂಲವಲ್ಲ, ಅಣುವಲ್ಲ' ಎಂದು ಮುಂತಾಗಿ ಹೇಳುವರೋ[1]; ಮತ್ತು ವೀತರಾಗರಾದ-ವೀತ ಎಂದರೆ ಹೋಗಿರುವ ರಾಗವು ಯಾರದೋ (ಯಾರನ್ನು ರಾಗವು ಬಿಟ್ಟುಹೋಗಿರುವದೋ) ಅವರು ವೀತರಾಗರು; ಅಂಥ ಯತಿಗಳು, ಪ್ರಯತ್ನವನ್ನು ಮಾಡುವ ಸಂನ್ಯಾಸಿಗಳು, ಸಮ್ಯಗ್ದರ್ಶನವನ್ನು ಪಡೆದುಕೊಂಡಾಗ ಯಾವದನ್ನು ಹೊಗುವರೋ ಪ್ರವೇಶಿಸುವರೋ ಮತ್ತು ಯಾವ ಅಕ್ಷರವನ್ನು ಬಯಸಿ-(ಇಲ್ಲಿ) 'ತಿಳಿದುಕೊಳ್ಳಬೇಕೆಂದು (ಬಯಸಿ)' ಎಂದು ವಾಕ್ಯಶೇಷವನ್ನು (ಕಲ್ಪಿಸಿಕೊಳ್ಳಬೇಕು)-ಗುರುವಿನ ಬಳಿಯಲ್ಲಿ ಬ್ರಹ್ಮಚರ್ಯವನ್ನು ಆಚರಿಸುವರೋ, ಆ ಪದವನ್ನು ಆ ಅಕ್ಷರವೆಂಬ ಪದವನ್ನು ಎಂದರೆ ಸೇರಬೇಕಾದ (ಸ್ಥಾನವನ್ನು) ನಿನಗೆ (ತೇ= ತುಭ್ಯಮ್), ಸಂಗ್ರಹದಿಂದ-ಸಂಗ್ರಹವೆಂದರೆ ಸಂಕ್ಷೇಪವು; ಅದರಿಂದ (ಎಂದರೆ)-ಸ್ವಲ್ಪದರಲ್ಲಿ ತಿಳಿಸುವೆನು ಹೇಳುವೆನು.[2]

(ಭಾಷ್ಯ)

೫೦೮. "ಸ ಯೋ ಹ ವೈ ತದ್ ಭಗವನ್ ಮನುಷ್ಯೇಷು ಪ್ರಾಯಣಾನ್ತಮೋಂಕಾರಮಭಿಧ್ಯಾಯೀತ ಕತಮಂ ವಾವ ಸ ತೇನ ಲೋಕಂ ಜಯತೀತಿ। ತಸ್ಮೈ ಸ ಹೋವಾಚ ಏತದ್ವೈ ಸತ್ಯಕಾಮ ಪರಂ ಚಾಪರಂ ಚ ಬ್ರಹ್ಮ ಯದೋಂಕಾರಃ" (ಪ್ರ. ೫-೧, ೨) ಇತ್ಯುಪಕ್ರಮ್ಯ "ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ ..... .ಸ ಸಾಮಭಿರುನ್ನೀಯತೇ ಬ್ರಹ್ಮಲೋಕಮ್"[3]-(ಪ್ರ. ೫-೫) ಇತ್ಯಾದಿನಾ ವಚನೇನ "ಅನ್ಯತ್ರ ಧರ್ಮಾದನ್ಯತ್ರಾಧರ್ಮಾತ್" (ಕ. ೧-೨-೧೪) ಇತಿ ಚೋಪಕ್ರಮ್ಯ "ಸರ್ವೇ ವೇದಾ ಯತ್ಪದಮಾಮನನ್ತಿ ತಪಾಂಸಿ ಸರ್ವಾಣಿ ಚ ಯದ್ವದನ್ತಿ। ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ ತತ್ತೇ ಪದಂ ಸಙ್ಗ್ರಹೇಣ ಬ್ರವೀಮ್ಯೋಮಿತ್ಯೇತತ್" (ಕ. ೧-೨-೧೫) ಇತ್ಯಾದಿಭಿಶ್ಚ ವಚನೈಃ ಪರಸ್ಯ ಬ್ರಹ್ಮಣಃ ವಾಚಕರೂಪೇಣ ಪ್ರತಿಮಾವತ್ ಪ್ರತೀಕರೂಪೇಣ ವಾ ಪರಬ್ರಹ್ಮಪ್ರತಿಪತ್ತಿಸಾಧನತ್ವೇನ ಮನ್ದಮಧ್ಯಮಬುದ್ಧೀನಾಂ ವಿವಕ್ಷಿತಸ್ಯ ಓಂಕಾರಸ್ಯ ಉಪಾಸನಂ ಕಾಲಾನ್ತರೇ ಮುಕ್ತಿಫಲಮ್ ಉಕ್ತಂ ಯತ್ ತದೇವ ಇಹಾಪಿ "ಕವಿಂ ಪುರಾಣಮನುಶಾಸಿತಾರಮ್" (೮-೯),

---

1. ಈ ಉಪಾಸನೆಗೆ ಪರಬ್ರಹ್ಮಪ್ರಾಪ್ತಿಯೇ ಫಲ.
2. ಇದೇ ಮುಂದಿನ ಶ್ಲೋಕದಲ್ಲಿ ಹೇಳಿರುವ ಓಂಕಾರವು
3. ಈ ವಾಕ್ಯವು ನಿ|| ಗು|| ಗಳಲ್ಲಿಲ್ಲ.

"ಯದಕ್ಷರಂ ವೇದವಿದೋ ವದನ್ತಿ" (೮-೧೧), ಇತಿ ಚ ಉಪನ್ಯಸ್ತಸ್ಯ ಪರಸ್ಯ ಬ್ರಹ್ಮಣಃ ಪೂರ್ವೋಕ್ತರೂಪೇಣ ಪ್ರತಿಪತ್ತ್ಯುಪಾಯಭೂತಸ್ಯ ಓಂಕಾರಸ್ಯ ಕಾಲಾನ್ತರಮುಕ್ತಿಫಲಮ್ ಉಪಾಸನಂ ಯೋಗಧಾರಣಾಸಹಿತಂ ವಕ್ತವ್ಯಮ್, ಪ್ರಸಕ್ತಾನುಪ್ರಸಕ್ತಂ ಚ ಯತ್ ಕಿಂಚಿತ್, ಇತ್ಯೇವಮರ್ಥಂ ಉತ್ತರೋ ಗ್ರನ್ಥಃ ಆರಭ್ಯತೇ—

(ಭಾಷ್ಯಾರ್ಥ)

"ಭಗವಂತನೆ, ಮನುಷ್ಯರಲ್ಲಿ ಯಾವಾತನು ಹಾಗೆ ಸಾಯುವವರೆಗೂ ಓಂಕಾರವನ್ನು ಧ್ಯಾನಮಾಡುತ್ತಿರುವನೋ ಅವನು ಅದರಿಂದ ಯಾವ ಲೋಕವನ್ನು ಗೆದ್ದುಕೊಳ್ಳುವನು ?'' ಎಂದು (ಕೇಳಿದ) ಆತನನ್ನು ಕುರಿತು ಆ (ಪಿಪ್ಪಲಾದ) ನಿಂತೆಂದನು : "ಎಲೈ ಸತ್ಯಕಾಮನೆ, ಈ ಓಂಕಾರವೇ ಪರ(ಬ್ರಹ್ಮವು) ಮತ್ತು ಅಪರ ಬ್ರಹ್ಮವು" (ಪ್ರ ೫-೧-೨) ಎಂದು ಉಪಕ್ರಮಿಸಿ "ಯಾವಾತನಾದರೆ ಮೂರು ಮಾತ್ರೆಗಳಿಂದಲೂ ಕೂಡಿ ಓಂ ಎಂಬೀ ಅಕ್ಷರದಿಂದಲೇ ಈ ಪರಮಪುರುಷನನ್ನು ಧ್ಯಾನಮಾಡುತ್ತಿರುವನೋ ಅವನು ಸಾಮುಗಳಿಂದ ಬ್ರಹ್ಮಲೋಕಕ್ಕೆ ಒಯ್ಯಲ್ಪಡುವನು'' (ಪ್ರ. ೫-೫) ಎಂದು ಮುಂತಾಗಿರುವ (ಪ್ರಶ್ನೋಪನಿಷತ್ತಿನ) ವಚನದಿಂದಲೂ "ಧರ್ಮಕ್ಕಿಂತ ಬೇರೆಯಾಗಿ ಅಧರ್ಮಕ್ಕಿಂತ ಬೇರೆಯಾಗಿ (ಇರುವ ಯಾವದನ್ನು ನೀನು ಬಲ್ಲೆಯೋ ಅದನ್ನು ಹೇಳು)" (ಕ. ೧-೨-೧೪) ಎಂದು ಉಪಕ್ರಮಿಸಿ "ವೇದಗಳೆಲ್ಲವೂ ಯಾವ ಪದವನ್ನು ತಿಳಿಸುತ್ತಿವೆಯೋ, ತಪಸ್ಸುಗಳೆಲ್ಲವೂ ಯಾವದನ್ನು ತಿಳಸುತ್ತಿವೆಯೋ, ಯಾವದನ್ನು ಬಯಸಿ ಬ್ರಹ್ಮಚರ್ಯವನ್ನು ಆಚರಿಸುವರೋ, ಆ ಪದವನ್ನು ನಿನಗೆ ಸಂಗ್ರಹವಾಗಿ ಹೇಳುತ್ತೇನೆ : ಓಂ ಎಂಬುದೇ ಇದು" (ಕ. ೧-೨-೧೫) ಎಂಬುದೇ ಮುಂತಾದ ವಚನಗಳಿಂದಲೂ ಪರಬ್ರಹ್ಮಕ್ಕೆ ವಾಚಕವಾಗಿಯೋ[1] ಪ್ರತಿಮೆಯಂತೆ ಪ್ರತೀಕವಾಗಿಯೋ[2] ಪರಬ್ರಹ್ಮವನ್ನು ಪಡೆಯುವದಕ್ಕೆ ಸಾಧನವೆಂದು ಕೀಳ್ತರದ (ಬುದ್ಧಿಯುವರಿಗೂ) ನಡುತರದ ಬುದ್ಧಿಯುವರಿಗೂ ಹೇಳಬೇಕೆಂಬ ಉದ್ದೇಶದಿಂದ ಕಾಲಾಂತರದಲ್ಲಿ ಮುಕ್ತಿಯನ್ನು ಕೊಡುವ ಓಂಕಾರದ ಉಪಾಸನೆಯನ್ನು (ಶ್ರುತಿಯಲ್ಲಿ) ಹೇಳಿದೆಯಷ್ಟೆ, ಅದನ್ನೇ[1] ಇಲ್ಲಿ "ಕವಿಂ ಪುರಾಣಮ್'' (೮-೯), "ಯದ

1. ವಾಚಕವೆಂದರೆ ಅದನ್ನು ತಿಳಿಸುವ ಶಬ್ದ, ಪ್ರತೀಕವೆಂದರೆ ಅದರ ಬದಲಾಗಿ ಪ್ರತಿನಿಧಿಯಾಗಿರುವದು.

2. ಶ್ರುತಿಯಲ್ಲಿ ಹೇಳಿರುವ ಕ್ರಮಮುಕ್ತಿಯ ಸಾಧನವನ್ನೇ ಇಲ್ಲಿ ಹೇಳಿದೆ ಎಂದು ಭಾವ. ಓಂಕಾರದ ಉಪಾಸನೆಯಿಂದ ಪರಬ್ರಹ್ಮದ ಜ್ಞಾನವೇ ಆಗಿ ಕ್ರಮಮುಕ್ತಿಯಾಗುವದೆಂಬುದಕ್ಕೆ ಸೂ. ಭಾ. ೧-೩-೧೩ ನ್ನು ನೋಡಿ.

ಕ್ಷರಂ ವೇದವಿದೋ ವದನ್ತಿ" (೮-೧೧) ಎಂದೂ ಉಪಕ್ರಮಿಸಿ ಹೇಳಿರುವ ಪರಬ್ರಹ್ಮವನ್ನು ಪಡೆಯುವುದಕ್ಕೆ ಮೇಲೆ ಹೇಳಿದ ರೀತಿಯಿಂದ[1] ಸಾಧನವಾಗಿರುವ ಓಂಕಾರವನ್ನು ಉಪಾಸನೆಮಾಡಿದರೆ ಕಾಲಾಂತರದಲ್ಲಿ ಮುಕ್ತಿಯುಂಟೆಂದು[2] ಅದನ್ನು ಯೋಗಧಾರಣೆಯ ಸಮೇತವಾಗಿ ಹೇಳಬೇಕಾಗಿರುವದರಿಂದಲೂ ಪ್ರಸಕ್ತವಾಗಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನೂ ಕೆಲವು ವಿಷಯಗಳನ್ನೂ ಪ್ರಸಕ್ತಿಯಿಂದ (ಹೇಳಬೇಕಾಗಿರುವದರಿಂದಲೂ) ಮುಂದಿನ ಗ್ರಂಥವನ್ನು ಪ್ರಾರಂಭಿಸಿರುತ್ತದೆ.

**ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।**
**ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಮ್॥**
**ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ ।**
**ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್ ॥**

೧೨-೧೩. ಸರ್ವದ್ವಾರಗಳನ್ನೂ ಸಂಯಮಮಾಡಿಕೊಂಡು ಮನಸ್ಸನ್ನು ಹೃದಯದಲ್ಲಿ ನಿರೋಧಿಸಿ ತನ್ನ ಪ್ರಾಣವನ್ನು ಮೇಲ್ದಲೆಯಲ್ಲಿಟ್ಟುಕೊಂಡು ಯೋಗಧಾರಣೆಯನ್ನು ಅವಲಂಬಿಸಿ ಓಂ ಎಂಬ ಏಕಾಕ್ಷರದ ಬ್ರಹ್ಮವನ್ನು ಹೇಳಿಕೊಳ್ಳುತ್ತಾ ನನ್ನನ್ನು ಅನುಸ್ಮರಣೆಮಾಡುತ್ತಾ ಯಾವಾತನು ದೇಹವನ್ನು ಬಿಟ್ಟು ಪ್ರಯಾಣಮಾಡುವನೋ ಅವನು ಪರಮಗತಿಯನ್ನೈದುವನು.

(ಭಾಷ್ಯ)

೫೨೯. **ಸರ್ವದ್ವಾರಾಣಿ ಸರ್ವಾಣಿ ಚ ತಾನಿ ದ್ವಾರಾಣಿ ಚ**[3] **ಉಪಲಬ್ಧೌ ತಾನಿ ಸರ್ವಾಣಿ ಸಂಯಮ್ಯ ಸಂಯಮನಂ ಕೃತ್ವಾ ಮನಃ ಹೃದಿ ಹೃದಯ**

---

1. ಮಂದಬುದ್ಧಿಯವರಿಗೆ ಪ್ರತೀಕವಾಗಿಯೂ ಮಧ್ಯಮಬುದ್ಧಿಯವರಿಗೆ ವಾಚಕವಾಗಿಯೂ ಎಂದರ್ಥ; ಉತ್ತಮಬುದ್ಧಿಯುಳ್ಳವರಿಗೆ ಓಂಕಾರವೇ ಪರಮಾತ್ಮನು. ಮಾಂ. ಭಾ. ೧೨.

2. ಅದ್ವಿತೀಯಬ್ರಹ್ಮಜ್ಞಾನದಿಂದ ಜೀವನ್ಮುಕ್ತಿ (೬-೨೭ ಭಾ. ಭಾ. ೪೧೬) ಅಥವಾ ಸದ್ಯೋಮುಕ್ತಿ (೮-೧೪ ಭಾ. ಭಾ ೫೩೦) ಆಗುವಂತೆ ಉಪಾಸನೆಯಿಂದ ಕ್ರಮಮುಕ್ತಿಯಾಗುತ್ತದೆ.

3. ಇವಾದ ಬಳಿಕ ಸರ್ವದ್ವಾರಾಣಿ ಎಂಬುದು ಹೆಚ್ಚಾಗಿದೆ. ಅ॥ ನಿ॥ ಗು॥ ವಾ॥

ಪುಣ್ಡರೀಕೇ ನಿರುಧ್ಯ ನಿರೋಧಂ ಕೃತ್ವಾ ನಿಷ್ಪ್ರಚಾರಮ್ ಆಪಾದ್ಯ ತತ್ರ ವಶೀಕೃತೇನ ಮನಸಾ ಹೃದಯಾತ್ ಊರ್ಧ್ವಗಾಮಿನ್ಯಾ ನಾಡ್ಯಾ ಊರ್ಧ್ವಮ್ ಆರುಹ್ಯ ಮೂರ್ಧ್ನಿ ಆಧಾಯ ಆತ್ಮನಃ ಪ್ರಾಣಮ್ ಆಸ್ಥಿತಃ ಪ್ರವೃತ್ತೋ ಯೋಗಧಾರಣಾಂ ಧಾರಯಿತುಮ್ —

(ಭಾಷ್ಯಾರ್ಥ)

ಸರ್ವದ್ವಾರಗಳನ್ನೂ-ಸರ್ವವಾದ ದ್ವಾರಗಳು, ಅರಿಯುವದಕ್ಕೆ (ಬಾಗಿಲುಗಳಾಗಿರುವ ಇಂದ್ರಿಯಗಳು), ಅವುಗಳೆಲ್ಲವನ್ನೂ-ಸಂಯಮಮಾಡಿಕೊಂಡು ಬಿಗಿಹಿಡಿದುಕೊಂಡು ಮನಸ್ಸನ್ನು ಹೃದಯದಲ್ಲಿ ಎಂದರೆ ಹೃದಯಕಮಲದಲ್ಲಿ ನಿರೋಧಿಸಿ ನಿರೋಧವನ್ನು ಮಾಡಿ ಯಾವ ವೃತ್ತಿಯೂ ಇಲ್ಲದಂತೆ ಮಾಡಿಕೊಂಡು, ಅಲ್ಲಿ ವಶಗೊಳಿಸಿಕೊಂಡ ಮನಸ್ಸಿನ ಮೂಲಕ ಹೃದಯದಿಂದ ಮೇಲಕ್ಕೆ ಹೋಗಿರುವ (ಸುಷುಮ್ನಾ) ನಾಡಿಯಿಂದ ಮೇಲಕ್ಕೆ ಏರಿ ತನ್ನ ಪ್ರಾಣವನ್ನು ಮೇಲ್ದಲೆಯಲ್ಲಿಟ್ಟು[1] ಯೋಗಧಾರಣೆಯನ್ನು[2] ಅವಲಂಬಿಸಿ, ಎಂದರೆ (ಅದನ್ನು) ಮಾಡುವದಕ್ಕೆ ಹೊರಟವನಾಗಿ—

(ಭಾಷ್ಯ)

೫೧೦. ತತ್ರೈವ ಚ ಧಾರಯನ್ ಓಮಿತಿ ಏಕಾಕ್ಷರಂ ಬ್ರಹ್ಮ ಬ್ರಹ್ಮಣಃ ಅಭಿಧಾನಭೂತಮ್ ಓಂಕಾರಂ ವ್ಯಾಹರನ್ ಉಚ್ಚಾರಯನ್ ತದರ್ಥಭೂತಂ ಮಾಮ್ ಈಶ್ವರಮ್ ಅನುಸ್ಮರನ್ ಅನುಚಿನ್ತಯನ್ ಯಃ ಪ್ರಯಾತಿ ಮ್ರಿಯತೇ ಸಂತ್ಯಜನ್[3] ಪರಿತ್ಯಜನ್ ದೇಹಮ್ । 'ತ್ಯಜನ್ ದೇಹಮ್' ಇತಿ ಪ್ರಯಾಣವಿಶೇಷಣಾರ್ಥಮ್ ದೇಹತ್ಯಾಗೇನ ಪ್ರಯಾಣಮ್ ಆತ್ಮನಃ ನ ಸ್ವರೂಪನಾಶೇನ ಇತ್ಯರ್ಥಃ । । ಸ ಏವಂ ತ್ಯಜನ್ ಯಾತಿ ಗಚ್ಛತಿ ಪರಮಾಂ ಪ್ರಕೃಷ್ಟಾಂ ಗತಿಮ್ ॥

---

1. ಇಲ್ಲಿ ಹೇಳಿರುವ ಕ್ರಮವನ್ನೇ ೧೦ನೆಯ ಶ್ಲೋಕದಲ್ಲಿ ವಿವರಿಸಿರುವದರಿಂದ ಭೂಮಿಜಯಕ್ರಮವೆಂದರೆ ಹೃದಯ, ಹುಬ್ಬುಗಳ ನಡುವೆ, ಮೂರ್ಧಪ್ರದೇಶ— ಈ ಸ್ಥಲಗಳಲ್ಲಿ ಕ್ರಮಕ್ರಮವಾಗಿ ಪ್ರಾಣಧಾರಣೆಯನ್ನು ಮಾಡುವದು ಎಂದು ಅರ್ಥಮಾಡಬೇಕಾಗುತ್ತದೆ. ಹೃದಯವೇ ಮುಂತಾದ ಸ್ಥಾನಗಳಲ್ಲಿ ಭೂಮಿಯೇ ಮುಂತಾದ ಪಂಚಭೂತಗಳನ್ನು ಜಯಿಸವದೆಂದು ಆ॥ ವ್ಯಾಖ್ಯಾನದಲ್ಲಿ ಹೇಳಿರುವದಕ್ಕೆ ಶ್ವೇ ೨-೧೨ ಆಧಾರವಾಗಿರಬಹುದು

2. ಚಿತ್ತವನ್ನು ಅಲ್ಲಿಯೇ ಇಟ್ಟುಕೊಂಡು. ಯೋ. ಸೂ. ೩-೧.

3. ಈ ಮಾತು ಇಲ್ಲದಿದ್ದರೂ ಸಾಗುತ್ತದೆ.

(ಭಾಷ್ಯಾರ್ಥ)

ಅಲ್ಲಿಯೇ (ಅದನ್ನು) ಹಿಡಿದಿಟ್ಟುಕೊಂಡು "ಓಂ" ಎಂಬ ಒಂದಕ್ಷರದ ಬ್ರಹ್ಮವನ್ನು ಎಂದರೆ ಬ್ರಹ್ಮದ ಹೆಸರಾದ ಓಂಕಾರವನ್ನು[1] ಹೇಳಿಕೊಳ್ಳುತ್ತಾ ಉಚ್ಚರಿಸುತ್ತಾ ಅದಕ್ಕೆ ಅರ್ಥವಾಗಿರುವ ಈಶ್ವರನಾದ ನನ್ನನ್ನು ಅನುಸ್ಮರಣೆಮಾಡುತ್ತಾ ಅನುಚಿಂತನೆಮಾಡುತ್ತಾ[2] ಯಾವಾತನು ಪ್ರಯಾಣಮಾಡುವನೋ ಎಂದರೆ ಸಾಯುವನೋ, ದೇಹವನ್ನು ಬಿಟ್ಟು (ಪ್ರಯಾಣಮಾಡುವನೋ)–'ತ್ಯಜನ್ ದೇಹಮ್' (ದೇಹವನ್ನು ಬಿಟ್ಟು ಎಂಬುದು ಇಲ್ಲಿ) ಪ್ರಯಾಣಕ್ಕೆ ವಿಶೇಷಣವಾಗಿ ಹೇಳಿದೆ. ಆತ್ಮನಿಗೆ ದೇಹತ್ಯಾಗದಿಂದಲೇ ಮರಣವೇ ಹೊರತು ಸ್ವರೂಪದ ನಾಶದಿಂದಲ್ಲ ಎಂದರ್ಥ[3]–ಅವನು ಹೀಗೆ ದೇಹವನ್ನು ಬಿಟ್ಟವನು ಪರಮುಗತಿಯನ್ನು ಉತ್ತಮವಾದ (ಗತಿಯನ್ನು) ಐದುವನು.

## ಪರಮಾತ್ಮನನ್ನು ಪಡೆದವರಿಗೆ ಮತ್ತೆ ಸಂಸಾರವಿಲ್ಲ

**ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।**
**ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥೧೪॥**

೧೪. ಅನನ್ಯಚೇತಸ್ಕನಾಗಿ ಸತತವಾಗಿ ಯಾವನು ನಿತ್ಯವಾಗಿ ನನ್ನನ್ನು ಸ್ಮರಿಸುತ್ತಿರುವನೋ ಆ ನಿತ್ಯಯುಕ್ತನಾದ ಯೋಗಿಗೆ, ಎಲೈ ಪಾರ್ಥನೆ, ನಾನು ಸುಲಭನು.

(ಭಾಷ್ಯ)

೫೧೧. ಕಿಂಚ ಅನನ್ಯಚೇತಾಃ ನ ಅನ್ಯವಿಷಯೇ ಚೇತಃ ಯಸ್ಯ ಸಃ ಅಯಮ್ ಅನನ್ಯಚೇತಾಃ ಯೋಗೀ ಸತತಂ ಸರ್ವದಾ ಯೋ ಮಾಂ ಪರಮೇಶ್ವರಂ ಸ್ಮರತಿ ನಿತ್ಯಶಃ । 'ಸತತಮ್' ಇತಿ ನೈರನ್ತರ್ಯಮ್ ಉಚ್ಯತೇ, 'ನಿತ್ಯಶಃ' ಇತಿ ದೀರ್ಘಕಾಲತ್ವಮ್ ಉಚ್ಯತೇ । ನ ಷಣ್ಮಾಸಂ ಸಂವತ್ಸರಂ ವಾ ಕಿಂ ತರ್ಹಿ ಯಾವಜ್ಜೀವಂ ನೈರನ್ತರ್ಯೇಣ ಯಃ ಮಾಂ ಸ್ಮರತಿ ಇತ್ಯರ್ಥಃ । ತಸ್ಯ ಯೋಗಿನಃ

1. ಓಂಕಾರವನ್ನು ವಾಚಕವಾಗಿಯೇ ಮುಖ್ಯವಾಗಿ ಹೇಳಿದೆ; ಪ್ರತೀಕೋಪಾಸನೆಯು ಮಂದಾಧಿಕಾರಿಗಳಿಗೆ ಮಾತ್ರ.

2. ಗುರುಗಳೂ ಶಾಸ್ತ್ರವೂ ಹೇಳಿರುವಂತೆ ಧ್ಯಾನಿಸುತ್ತಾ ಎಂದರ್ಥ.

3. ಪ್ರಯಾಣವೆಂದರೇ ಸಾವು; ಆದ್ದರಿಂದ ಪುನರುಕ್ತಿಯಾಗದೆ ಇರುವದಕ್ಕೆ ಹೀಗೆ ಅರ್ಥಮಾಡಬೇಕು.

ಅಹಂ ಸುಲಭಃ ಸುಖೇನ ಲಭ್ಯಃ ಹೇ ಪಾರ್ಥ ನಿತ್ಯಯುಕ್ತಸ್ಯ ಸದಾ ಸಮಾಹಿತ ಚಿತ್ತಸ್ಯ ಯೋಗಿನಃ । ಯತ ಏವಮ್ ಅತಃ ಅನನ್ಯಚೇತಾಃ ಸನ್ ಮಯಿ ಸದಾ ಸಮಾಹಿತೋ ಭವೇತ್ ॥

(ಭಾಷ್ಯಾರ್ಥ)

ಅನನ್ಯಚೇತಸ್ಕನಾಗಿ–ಮತ್ತೊಂದರ ವಿಷಯದಲ್ಲಿ ಚಿತ್ತವು ಯಾವನಿಗೆ ಇರುವದಿಲ್ಲವೋ ಅಂಥವನು ಅನನ್ಯಚೇತಸ್ಕನಾದ ಯೋಗಿಯು. (ಅಂಥವನಾಗಿ)–ಸತತವಾಗಿ ಯಾವಾಗಲೂ (ಎಡೆಬಿಡದೆ) ನಿತ್ಯವಾಗಿ ಪರಮೇಶ್ವರನಾದ ನನ್ನನ್ನು ಯಾವನು ಸ್ಮರಿಸುತ್ತಿರುವನೋ. (ಇಲ್ಲಿ) 'ಸತತವಾಗಿ' ಎಂಬ ಮಾತಿನಿಂದ ಎಡೆಬಿಡದೆ ಎಂಬರ್ಥವನ್ನು ಹೇಳಿದೆ. ನಿತ್ಯವಾಗಿ ಎಂಬ ಮಾತಿನಿಂದ ದೀರ್ಘಕಾಲದವರೆಗೆ ಎಂಬ ಅರ್ಥವನ್ನು ಹೇಳಿದೆ[1] ಆರು ತಿಂಗಳೋ ಒಂದು ವರ್ಷವೋ ಅಲ್ಲ, ಬದುಕಿರುವವರೆಗೂ[2] ಎಡೆಬಿಡದೆ ಯಾವನು ನನ್ನನ್ನು ಸ್ಮರಿಸುತ್ತಿರುವನೋ ಎಂದರ್ಥ. ಅಂಥ ಯೋಗಿಗೆ ನಾನು ಸುಲಭನು, ನಿತ್ಯಯುಕ್ತನಾಗಿರುವ ಯಾವಾಗಲೂ ಚಿತ್ತವನ್ನು ನೆಲೆನಿಲ್ಲಿಸಿಕೊಂಡಿರುವ (ಆ) ಯೋಗಿಗೆ ಸುಖದಿಂದ ದೊರಕುವೆನು. ಹೀಗಿರುವದರಿಂದ ಮತ್ತೊಂದರಲ್ಲಿ ಚಿತ್ತವಿಡದೆ ನನ್ನಲ್ಲಿಯೇ ಯಾವಾಗಲೂ (ಮನಸ್ಸನ್ನು) ನಿಲ್ಲಿಸಿಕೊಂಡಿರಬೇಕು.

(ಭಾಷ್ಯ)

೫೧೨. ತವ ಸೌಲಭ್ಯೇನ ಕಿಂ ಸ್ಯಾತ್ ಇತಿ? ಉಚ್ಯತೇ । ಶೃಣು ತತ್ ಮಮ ಸೌಲಭ್ಯೇನ ಯದ್ ಭವತಿ—

(ಭಾಷ್ಯಾರ್ಥ)

ನೀನು ಸುಲಭನಾಗುವದರಿಂದ ಏನಾಗುವದು ? ಎಂದರೆ ನಾನು ಸುಲಭವಾಗಿ ದೊರಕುವದರಿಂದ ಏನು ಆಗುತ್ತದೆಯೋ (ಹೇಳುವೆನು) ಅದನ್ನು ಕೇಳು .—

**ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಮ್ ।**
**ನಾಪ್ನುವನ್ತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ ॥೧೫॥**

---

1. ಬಹುಕಾಲ, ಎಡೆಬಿಡದೆ, ಬ್ರಹ್ಮಚರ್ಯವೇ ಮುಂತಾದ ಸಾಧನಗಳಿಂದ ಕೂಡಿಯೇ ಸಾಧನಮಾಡಬೇಕು. ಯೋ. ಸೂ. ೧-೧೪.

2. ಸೂ. ಭಾ. ೪-೧-೧೨.

೧೫. ನನ್ನನ್ನು ಸೇರಿ ಪರಮಸಂಸಿದ್ಧಿಯನ್ನು ಪಡೆದುಕೊಂಡ ಮಹಾತ್ಮರು ದುಃಖಕ್ಕೆ ನೆಲೆಯೂ ಅಶಾಶ್ವತವೂ ಆಗಿರುವ ಪುನರ್ಜನ್ಮವನ್ನು ಪಡೆಯುವದಿಲ್ಲ.

(ಭಾಷ್ಯ)

೫೧೩. ಮಾಮ್ ಉಪೇತ್ಯ ಮಾಮ್ ಈಶ್ವರಮ್ ಉಪೇತ್ಯ ಮದ್ಭಾವಮ್ ಆಪದ್ಯ ಪುನರ್ಜನ್ಮ ಪುನರುತ್ಪತ್ತಿಂ ನ ಆಪ್ನುವನ್ತಿ ನ ಪ್ರಾಪ್ನುವನ್ತಿ । ಕಿಂವಿಶಿಷ್ಟಂ ಪುನರ್ಜನ್ಮ ನ ಪ್ರಾಪ್ನುವನ್ತಿ ಇತಿ? ತದ್ವಿಶೇಷಣಮ್ ಆಹ- ದುಃಖಾಲಯಂ ದುಃಖಾನಾಮ್ ಆಧ್ಯಾತ್ಮಿಕಾದೀನಾಮ್ ಆಲಯಮ್ ಆಶ್ರಯಮ್ ಆಲೀಯನ್ತೇ ಅಸ್ಮಿನ್ [1] ದುಃಖಾನಿ ಇತಿ ದುಃಖಾಲಯಂ ಜನ್ಮ । ನ ಕೇವಲಂ ದುಃಖಾಲಯಮ್ ಅಶಾಶ್ವತಮ್ ಅನವಸ್ಥಿತಸ್ವರೂಪಂ ಚ । ನ ಆಪ್ನುವನ್ತಿ ಈದೃಶಂ ಪುನರ್ಜನ್ಮ ಮಹಾತ್ಮಾನಃ ಯತಯಃ ಸಂಸಿದ್ಧಿಂ ಮೋಕ್ಷಾಖ್ಯಾಂ ಪರಮಾಂ ಪ್ರಕೃಷ್ಟಾಂ ಗತಾಃ ಪ್ರಾಪ್ತಾಃ । ಯೇ ಪುನಃ ಮಾಂ ನ ಪ್ರಾಪ್ನುವನ್ತಿ, ತೇ ಪುನಃ ಆವರ್ತನ್ತೇ ॥

(ಭಾಷ್ಯಾರ್ಥ)

ಈಶ್ವರನಾದ ನನ್ನನ್ನು ಸೇರಿದರೆ ನನ್ನ ಸ್ವರೂಪವನ್ನು ಪಡೆದರೆ ಪುನರ್ಜನ್ಮವನ್ನು ಮರುಹುಟ್ಟನ್ನು ಪಡೆಯುವದಿಲ್ಲ, ಹೊಂದುವದಿಲ್ಲ. ಎಂಥ ಪುನರ್ಜನ್ಮವನ್ನು ಹೊಂದುವದಿಲ್ಲ? ಎಂದರೆ ಅದಕ್ಕೆ ವಿಶೇಷಣವನ್ನು (ಭಗವಂತನು) ಹೇಳುತ್ತಾನೆ; ದುಃಖಾಲಯವಾದದ್ದು ಅಧ್ಯಾತ್ಮಿಕವೇ ಮುಂತಾದ ದುಃಖಗಳಿಗೆ ಆಶ್ರಯವಾದದ್ದು ಅದರಲ್ಲಿ ದುಃಖಗಳು ನೆಲಸಿರುವದರಿಂದ ಜನ್ಮವು ದುಃಖಾಲಯವು (ಜನ್ಮವು) ದುಃಖಾಲಯವೆಂಬುದಿಷ್ಟೇ ಅಲ್ಲ, ಅಶಾಶ್ವತವಾದದ್ದೂ ಇದ್ದಂತೆ ಇರದೆ ಇರುವ ಸ್ವರೂಪವುಳ್ಳದ್ದೂ (ಆಗಿರುತ್ತದೆ) ಇಂಥ ಪುನರ್ಜನ್ಮವನ್ನು ಮೋಕ್ಷವೆಂಬ ಪರಮವಾದ ಹೆಚ್ಚಿನ ಸಂಸಿದ್ಧಿಯನ್ನು ಪಡೆದುಕೊಂಡಿರುವ ಹೊಂದಿರುವ ಮಹಾತ್ಮರು ಯತಿಗಳು ಹೊಂದುವದಿಲ್ಲ ಆದರೆ ಯಾರು ನನ್ನನ್ನು ಪಡೆಯುವದಿಲ್ಲವೋ ಅವರು ಮತ್ತೂ (ಈ ಸಂಸಾರಕ್ಕೆ) ಮರಳಿ ಬರುತ್ತಾರೆ.

---

1. ಯಸ್ಮಿನ್ ಎಂಬ ಮುದ್ರಿತಪಾಠಕ್ಕಿಂತ ಇದು ಉತ್ತಮ.

## ಯಾವ ಲೋಕಕ್ಕೆ ಹೋದರೂ ಸಂಸಾರವು ತಪ್ಪಿದ್ದಲ್ಲ

(ಭಾಷ್ಯ)

೫೧೪. ಕಿಂ ಪುನಃ ತ್ವತ್ತೋಽನ್ಯತ್ ಪ್ರಾಪ್ತಾಃ ಪುನರಾವರ್ತನ್ತೇ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಹಾಗಾದರೆ ನಿನ್ನನ್ನು ಬಿಟ್ಟು ಮತ್ತೇನನ್ನಾದರೂ ಪಡೆದವರು ಮತ್ತೂ (ಸಂಸಾರಕ್ಕೆ) ಬರುವರೇನು ?[1] ಎಂದರೆ (ಭಗವಂತನು) ಹೇಳುತ್ತಾನೆ :—

**ಆ ಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।**
**ಮಾಮುಪೇತ್ಯ ತು ಕೌನ್ತೇಯ ಪುನರ್ಜನ್ಮ ನ ವಿದ್ಯತೇ ॥ ೧೬ ॥**

೧೬. ಅರ್ಜುನನೆ, ಬ್ರಹ್ಮಭುವನದವರೆಗಿನ ಲೋಕಗಳು ಪುನರಾವೃತ್ತಿಯುಳ್ಳವುಗಳು. ಆದರೆ, ಕೌಂತೇಯನೆ, ನನ್ನನ್ನು ಸೇರಿದರೆ ಪುನರ್ಜನ್ಮವಿಲ್ಲ.

(ಭಾಷ್ಯ)

೫೧೫. ಆ ಬ್ರಹ್ಮಭುವನಾತ್ ಭವನ್ತಿ ಅಸ್ಮಿನ್ ಭೂತಾನಿ ಇತಿ ಭುವನಮ್ । ಬ್ರಹ್ಮಣಃ[2] ಭುವನಮ್ ಬ್ರಹ್ಮ ಭುವನಮ್ । ಬ್ರಹ್ಮಲೋಕಃ ಇತ್ಯರ್ಥಃ । ಆ ಬ್ರಹ್ಮ ಭುವನಾತ್ ಸಹ, ಬ್ರಹ್ಮಭುವನೇನ ಲೋಕಾಃ ಸರ್ವೇ ಪುನರಾವರ್ತಿನಃ ಪುನರಾವರ್ತನಸ್ವಭಾವಾಃ ಹೇ ಅರ್ಜುನ । ಮಾಮ್ ಉಪೇತ್ಯ ತು ಕೌನ್ತೇಯ ಪುನರ್ಜನ್ಮ ಪುನರುತ್ಪತ್ತಿಃ ನ ವಿದ್ಯತೇ ॥

(ಭಾಷ್ಯಾರ್ಥ)

ಎಲೈ ಅರ್ಜುನನೆ, ಬ್ರಹ್ಮಭುವನದವರೆಗಿನ–ಭೂತಗಳು ಅದರಲ್ಲಿ ಇರುತ್ತವೆಯಾದ್ದರಿಂದ ಭುವನವೆಂದು (ಹೆಸರು), ಬ್ರಹ್ಮನ ಭುವನವು ಬ್ರಹ್ಮಭುವನವು,

---

1. " ಸೋಮಮಪಾನವನ್ನು ಮಾಡಿ ಅಮೃತರಾದೆವು " ಎಂದು ಮುಂತಾಗಿರುವ ಶ್ರುತಿಯನ್ನು ನೋಡಿದರೆ ಸ್ವರ್ಗವನ್ನು ಪಡೆದವರೂ ಸಂಸಾರಕ್ಕೆ ಮರಳುವದಿಲ್ಲವೆಂದು ತೋರುವದಲ್ಲ !–ಎಂದು ಪ್ರಶ್ನೆಯ ಭಾವ

2. ಈ ಮಾತು ಅ॥ಸಿ॥ಗು॥ಗಳಲ್ಲಿ ಬಿಟ್ಟುಹೋಗಿದೆ.

ಎಂದರೆ ಬ್ರಹ್ಮಲೋಕವು ಎಂದರ್ಥ. (ಅಂಥ) ಬ್ರಹ್ಮಭುವನದವರೆಗಿನ-**ಬ್ರಹ್ಮಭುವನವನ್ನೂ ಸೇರಿಸಿಕೊಂಡು**[1] **ಎಲ್ಲಾ ಲೋಕಗಳೂ ಪುನರಾವೃತ್ತಿಯುಳ್ಳವುಗಳು** ಮತ್ತೆ (ಈ ಲೋಕಕ್ಕೆ) ಮರಳಿಸುವಂಥ ಸ್ವಭಾವವುಳ್ಳವೇ (ಆಗಿವೆ) ಆದರೆ ಎಲೈ ಕೌಂತೇಯನೆ, ನನ್ನನ್ನು ಸೇರಿದರೆ ಪುನರ್ಜನ್ಮವು ಮತ್ತೆ ಹುಟ್ಟುವದೆಂಬುದು ಇರುವದಿಲ್ಲ.

(ಭಾಷ್ಯ)

೫೧೬. ಬ್ರಹ್ಮಲೋಕಸಹಿತಾಃ ಲೋಕಾಃ ಕಸ್ಮಾತ್ ಪುನರಾವರ್ತಿನಃ ? ಕಾಲಪರಿಚ್ಛಿನ್ನತ್ವಾತ್ । ಕಥಮ್ ?—

(ಭಾಷ್ಯಾರ್ಥ)

ಬ್ರಹ್ಮಲೋಕವೂ ಸೇರಿ (ಎಲ್ಲಾ) ಲೋಕಗಳೂ ಮತ್ತೆ (ಸಂಸಾರಕ್ಕೆ) ಮರಳಿಸುವವೆಂಬುದೇಕೆ ? ಎಂದರೆ ಕಾಲಕ್ಕೆ ಕಟ್ಟುಬಿದ್ದಿರುವದರಿಂದ. ಅದು ಹೇಗೆ ? ಎಂದರೆ :—

**ಸಹಸ್ರಯುಗಪರ್ಯನ್ತಮಹರ್ಯದ್ ಬ್ರಹ್ಮಣೋ ವಿದುಃ ।**
**ರಾತ್ರಿಂ ಯುಗಸಹಸ್ರಾನ್ತಾಂ ತೇಽಹೋರಾತ್ರವಿದೋ ಜನಾಃ ॥೧೭॥**

೧೭. ಆಹೋರಾತ್ರವನ್ನು ಬಲ್ಲ ಆ ಜನರು ಬ್ರಹ್ಮನ ಹಗಲು ಸಾವಿರ ಯುಗಗಳವರೆಗೆ ಇರುವದೆಂಬುದನ್ನೂ ರಾತ್ರಿಯು ಯುಗಸಹಸ್ರದವರೆಗೆ ಇರುವದೆಂಬುದನ್ನೂ ಬಲ್ಲರು.

(ಭಾಷ್ಯ)

೫೧೭. ಸಹಸ್ರಯುಗಪರ್ಯನ್ತಂ ಸಹಸ್ರಾಣಿ ಯುಗಾನಿ ಪರ್ಯನ್ತಃ ಪರ್ಯವಸಾನಂ ಯಸ್ಯ ಅಹ್ನಃ ತತ್ ಅಹಃ ಸಹಸ್ರಯುಗಪರ್ಯನ್ತಂ ಬ್ರಹ್ಮಣಃ ಪ್ರಜಾಪತೇಃ ವಿರಾಜಃ ವಿದುಃ । ರಾತ್ರಿಮ್ ಅಪಿ ಯುಗಸಹಸ್ರಕಾಲಾನ್ತಾಮ್ ಅಹಃ ಪರಿಮಾಣಾಮೇವ । ಕೇ ವಿದುರಿತಿ ? ಆಹ–ತೇ ಅಹೋರಾತ್ರವಿದಃ ಕಾಲಸಙ್ಖ್ಯಾವಿದಃ ಜನಾಃ ಇತ್ಯರ್ಥಃ । ಯತಃ ಏವಂ ಕಾಲಪರಿಚ್ಛಿನ್ನಾಃ ತೇ ಅತಃ ಪುನರಾವರ್ತಿನಃ ಲೋಕಾಃ ॥

---

1. ಬ್ರಹ್ಮಲೋಕದಲ್ಲಿ ಜ್ಞಾನವಾಗದಿದ್ದರೆ ಈ ಕಲ್ಪವಾಗುತ್ತಲೂ ಮತ್ತೆ ಪುನರ್ಜನ್ಮವಾಗುತ್ತದೆ. ಛಾ. ಭಾ. ೮-೧೫-೧, ಬೃ. ಭಾ. ೬-೨-೧೫.

(ಭಾಷ್ಯಾರ್ಥ)

ಬ್ರಹ್ಮನ ಎಂದರೆ ಪ್ರಜಾಪತಿಯ ವಿರಾಟ್ಪುರುಷನ ಹಗಲನ್ನು ಸಹಸ್ರಯುಗ ಪರ್ಯಂತವೆಂದು–ಸಾವಿರ ಯುಗಗಳು ಆದಕ್ಕೆ ಪರ್ಯಂತವು ಎಂದರೆ ಕೊನೆ, ಆದ್ದರಿಂದ ಸಹಸ್ರಯುಗಪರ್ಯಂತವು–ಎಂಬುದನ್ನೂ ರಾತ್ರಿಯನ್ನೂ (ಅದು) ಯುಗಸಹಸ್ರದಷ್ಟು ಕಾಲದಲ್ಲಿಯೇ ಕೊನೆ(ಗಾಣತಕ್ಕದ್ದೆಂಬುದನ್ನು) ಅದೂ ಹಗಲ ನಷ್ಟೇ ಪರಿಮಾಣವುಳ್ಳದ್ದೆಂದು ಬಲ್ಲರು ಯಾರು ಬಲ್ಲರು? ಎಂದರೆ (ಭಗವಂತನು) ಹೇಳುತ್ತಾನೆ. ಆ ಅಹೋರಾತ್ರವನ್ನು ಬಲ್ಲ ಎಂದರೆ ಕಾಲದ ಲೆಕ್ಕವನ್ನು ಬಲ್ಲ ಜನರು (ಬಲ್ಲರು) ಎಂದರ್ಥ.

ಹೀಗೆ ಆ (ಲೋಕಗಳು) ಕಾಲಕ್ಕೆ ಕಟ್ಟುಬಿದ್ದಿರುವದರಿಂದ ಆ ಕಾರಣ ದಿಂದಲೇ ಮತ್ತೆ (ಸಂಸಾರಕ್ಕೆ) ಮರಳಿಸುವ ಸ್ವಭಾವದವುಗಳಾಗಿವೆ ಎಂದರ್ಥ.

(ಭಾಷ್ಯ)

೫೧೮. ಪ್ರಜಾಪತೇಃ ಅಹನಿ ಯದ್ ಭವತಿ ರಾತ್ರೌ ಚ ತತ್ ಉಚ್ಯತೇ—

(ಭಾಷ್ಯಾರ್ಥ)

ಪ್ರಜಾಪತಿಯ ಹಗಲಿನಲ್ಲಿ ಏನಾಗುತ್ತದೆ, ಮತ್ತು ರಾತ್ರಿಯಲ್ಲಿ (ಏನಾಗು ತ್ತದೆ?) ಎಂಬುದನ್ನು (ಭಗವಂತನು) ಹೇಳುತ್ತಾನೆ:—

**ಅವ್ಯಕ್ತಾದ್ ವ್ಯಕ್ತಯಃ ಸರ್ವಾಃ ಪ್ರಭವನ್ತ್ಯಹರಾಗಮೇ ।**
**ರಾತ್ರ್ಯಾಗಮೇ ಪ್ರಲೀಯನ್ತೇ ತತ್ರೈವಾವ್ಯಕ್ತಸಂಜ್ಞಕೇ ॥ ೧೮ ॥**

೧೮. ಅಹರಾಗಮದಲ್ಲಿ ಸರ್ವವ್ಯಕ್ತಿಗಳೂ ಅವ್ಯಕ್ತದಿಂದ ಉಂಟಾ ಗುತ್ತವೆ, ರಾತ್ರ್ಯಾಗಮದಲ್ಲಿ ಅವ್ಯಕ್ತವೆಂಬ ಹೆಸರಿನ ಅದರಲ್ಲಿಯೇ ಪ್ರಲಯವಾಗುತ್ತವೆ.

(ಭಾಷ್ಯ)

೫೧೯. ಅವ್ಯಕ್ತಾತ್–ಅವ್ಯಕ್ತಂ ಪ್ರಜಾಪತೇಃ[1] ಸ್ವಾಪಾವಸ್ಥಾ ತಸ್ಮಾತ್ ಅವ್ಯಕ್ತಾತ್ ವ್ಯಕ್ತಯಃ ವ್ಯಜ್ಯನ್ತೇ ಇತಿ ವ್ಯಕ್ತಯಃ ಸ್ಥಾವರಜಙ್ಗಮಲಕ್ಷಣಾಃ ಸರ್ವಾಃ ಪ್ರಜಾಃ ಪ್ರಭವನ್ತಿ ಅಭಿವ್ಯಜ್ಯನ್ತೇ ಅಹ್ನಃ ಆಗಮಃ ಅಹರಾಗಮಃ ತಸ್ಮಿನ್

1. 'ಸ್ವಪತಃ' ಎಂದು ಹೆಚ್ಚಾಗಿ ಮ॥ ಮೈ॥

ಅಹರಾಗಮೇ ಕಾಲೇ ಬ್ರಹ್ಮಣಃ ಪ್ರಬೋಧಕಾಲೇ। ತಥಾ ರಾತ್ರ್ಯಾಗಮೇ ಬ್ರಹ್ಮಣಃ ಸ್ವಾಪಕಾಲೇ ಪ್ರಲೀಯನ್ತೇ ಸರ್ವಾಃ ವ್ಯಕ್ತಯಃ ತತ್ರೈವ ಪೂರ್ವೋಕ್ತೇ ಅವ್ಯಕ್ತ ಸಂಜ್ಞಕೇ ||

(ಭಾಷ್ಯಾರ್ಥ)

ಅವ್ಯಕ್ತದಿಂದ–ಅವ್ಯಕ್ತವೆಂದರೆ ಪ್ರಜಾಪತಿಯ ನಿದ್ರಾವಸ್ಥೆ[1], ಆ ಅವ್ಯಕ್ತದಿಂದ ವ್ಯಕ್ತಿಗಳು, ಹೊರತೋರಿಕೊಳ್ಳುವದರಿಂದ ವ್ಯಕ್ತಿಗಳೆನಿಸಿಕೊಂಡಿರುವ ಸ್ಥಾವರ ಜಂಗಮರೂಪವಾದ ಪ್ರಜೆಗಳೆಲ್ಲ ಅಹರಾಗಮುದಲ್ಲಿ–ಹಗಲು ಬರುವುದೇ ಅಹ ರಾಗಮವು ; ಆ ಅಹರಾಗಮುದ ಕಾಲದಲ್ಲಿ–ಎಂದರೆ ಬ್ರಹ್ಮನ ಎಚ್ಚರದ ಕಾಲದಲ್ಲಿ ಉಂಟಾಗುತ್ತವೆ, ತೋರಿಕೊಳ್ಳುತ್ತವೆ. ಹಾಗೂ ರಾತ್ರಿಯ ಆಗಮುದಲ್ಲಿ ಎಂದರೆ ಬ್ರಹ್ಮನ ನಿದ್ರೆಯ ಕಾಲದಲ್ಲಿ ವ್ಯಕ್ತಿಗಳೆಲ್ಲ ಹಿಂದೆ ಹೇಳಿರುವ ಅವ್ಯಕ್ತವೆಂಬ ಆ (ಅವಸ್ಥೆಯಲ್ಲಿಯೇ) ಅಡಗಿಕೊಳ್ಳುತ್ತವೆ.

(ಭಾಷ್ಯ)

೫೨೦. ಅಕೃತಾಭ್ಯಾಗಮಕೃತವಿಪ್ರಣಾಶದೋಷಪರಿಹಾರಾರ್ಥಮ್ । ಬನ್ಧಮೋಕ್ಷ[2] ಶಾಸ್ತ್ರಪ್ರವೃತ್ತಿಸಾಫಲ್ಯಪ್ರದರ್ಶನಾರ್ಥಮ್ । ಅವಿದ್ಯಾದಿಕ್ಲೇಶಮೂಲ ಕರ್ಮಾಶಯವಶಾಚ್ಚ ಅವಶಃ ಭೂತಗ್ರಾಮಃ ಭೂತ್ವಾ ಭೂತ್ವಾ ಪ್ರಲೀಯತೇ ಇತ್ಯತಃ ಸಂಸಾರೇ ವೈರಾಗ್ಯಪ್ರದರ್ಶನಾರ್ಥಂ ಚ ಇದಮ್ ಆಹ—

(ಭಾಷ್ಯಾರ್ಥ)

**ಮಾಡದೆ ಇರುವ (ಕರ್ಮದ ಫಲವು) ಉಂಟಾಗುವದು, ಮಾಡಿದ (ಕರ್ಮದ ಫಲವು) ನಾಶವಾಗುವದು–ಎಂಬ ದೋಷಗಳನ್ನು[3] ಪರಿಹರಿಸುವದಕ್ಕೂ ಬಂಧಮೋಕ್ಷಗಳನ್ನು (ತಿಳಿಸುವ) ಶಾಸ್ತ್ರವು ಹೊರಟಿರುವದು ಸಾರ್ಥಕವೆಂದು[4] ತೋರಿಸುವದಕ್ಕಾಗಿಯೂ ಅವಿದ್ಯೆಯೇ ಮುಂತಾದ**

---

1 ಮನು. ೧-೫೨

2 " ವಿಧಿನಿಷೇಧಬನ್ಧಮೋಕ್ಷ " ಮ॥

3 ಕರ್ಮವನ್ನು ಮಾಡಿದ ಪ್ರಾಣಿಗಳು ಲಯವೇ ಆಗಿಬಿಟ್ಟು ಸೃಷ್ಟಿಕಾಲದಲ್ಲಿ ಹೊಸ ಪ್ರಾಣಿಗಳೇ ಹುಟ್ಟಿದರೆ ಈ ದೋಷಗಳು ಬರುತ್ತವೆ

4. ಜ್ಞಾನವುಂಟಾಗುವವರೆಗೂ ಅವಿದ್ಯಾಕೃತವಾದ ಬಂಧವು ಹೋಗುವದಿಲ್ಲ, ಪ್ರಲಯವಾದರೂ ಬಂಧವು ಅವ್ಯಕ್ತವಾಗಿರುತ್ತದೆ–ಎಂಬ ಪಕ್ಷದಲ್ಲಿ ಮಾತ್ರ ಶಾಸ್ತ್ರಪ್ರವೃತ್ತಿಯು ಸಾರ್ಥಕವಾಗುತ್ತದೆ

5 ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ-ಇವು ಕ್ಲೇಶಗಳು ಯೋ ಸೂ ೨-೩

ಕ್ಲೇಶಗಳಿಂದಾಗಿರುವ ಕರ್ಮಾಶಯದ[1] ದೆಸೆಯಿಂದ ಪರತಂತ್ರವಾಗಿ ಪ್ರಾಣಿಗಳ ಸಮುದಾಯವು ಹುಟ್ಟಿಹುಟ್ಟಿ ಪ್ರಲಯವಾಗುತ್ತಿರುವದು ಎಂಬ ಕಾರಣದಿಂದ ಸಂಸಾರದಲ್ಲಿ ವೈರಾಗ್ಯವನ್ನು ತೋರಿಸಿಕೊಡುವದಕ್ಕಾಗಿಯೂ[2] (ಭಗವಂತನು) ಇದನ್ನು ಹೇಳುತ್ತಿದಾನೆ :—

ಭೂತಗ್ರಾಮಃ ಸ ಏವಾಯಂ ಭೂತ್ವಾಭೂತ್ವಾ ಪ್ರಲೀಯತೇ ।
ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ ॥ ೧೯ ॥

೧೯. ಎಲೈ ಪಾರ್ಥನೆ, ಅದೇ ಈ ಭೂತಗ್ರಾಮವು (ಮತ್ತೆಮತ್ತೆ) ಉಂಟಾಗಿ ಉಂಟಾಗಿ ರಾತ್ರಿಯು ಬರುತ್ತಲೂ ಅವಶವಾಗಿ ಪ್ರಲಯವಾಗುತ್ತಿರುವದು, ಹಗಲು ಬರುತ್ತಲೂ ಉಂಟಾಗುತ್ತಿರುವದು

(ಭಾಷ್ಯ)

೫೨೧ ಭೂತಗ್ರಾಮಃ ಭೂತಸಮುದಾಯಃ ಸ್ಥಾವರಜಙ್ಗಮಲಕ್ಷಣಃ ಯಃ ಪೂರ್ವಸ್ಮಿನ್ ಕಲ್ಪೇ ಆಸೀತ್ ಸ ಏವ ಅಯಂ ನಾನ್ಯಃ ಭೂತ್ವಾ ಭೂತ್ವಾ ಅಹರಾಗಮೇ ಪ್ರಲೀಯತೇ ಪುನಃ ಪುನಃ ರಾತ್ರ್ಯಾಗಮೇ ಅಹ್ನಃ ಕ್ಷಯೇ ಅವಶಃ ಅಸ್ವತನ್ತ್ರ ಏವ ಹೇ ಪಾರ್ಥ ಪ್ರಭವತಿ ಜಾಯತೇ ಅವಶ ಏವ ಅಹರಾಗಮೇ ॥

(ಭಾಷ್ಯಾರ್ಥ)

ಭೂತಗ್ರಾಮವು ಎಂದರೆ ಸ್ಥಾವರಜಂಗಮರೂಪವಾದ ಪ್ರಾಣಿಗಳ ಸಮುದಾಯವು ಹಿಂದಿನ ಕಲ್ಪದಲ್ಲಿ ಯಾವದಿತ್ತೋ ಅದೇ ಈ (ಭೂತಸಮುದಾಯವು), ಮತ್ತೊಂದಲ್ಲ (ಅದೇ) ಹಗಲು ಬರುತ್ತಲೂ ಉಂಟಾಗಿ ಉಂಟಾಗಿ[3] ಮತ್ತೆ ಮತ್ತೆ ಹಗಲು ಸವೆದು ರಾತ್ರಿಯು ಬರುತ್ತಲೂ. ಎಲೈ ಪಾರ್ಥನೆ, ಅವಶವಾಗಿಯೇ ಎಂದರೆ (ತನ್ನ) ಸ್ವಾತಂತ್ರ್ಯವೇನೂ ಇಲ್ಲದೆಯೇ ಅಡಗುತ್ತಿರುತ್ತದೆ ; ಅವಶವಾಗಿಯೇ ಉಂಟಾಗುತ್ತಿರುತ್ತದೆ, ಹುಟ್ಟುತ್ತಿರುತ್ತದೆ.

---

1 ಕ್ಲೇಶಗಳಿಂದ ಕರ್ಮಾಶಯವುಂಟಾಗುವದು. ಯೋ ಸೂ. ೨-೧೨

2. ಮತ್ತೆ ಮತ್ತೆ ಹುಟ್ಟಿ ಸಾಯುತ್ತಿರುವದು ಸಂಸಾರವೆಂದರೆ ಅದರಲ್ಲಿ ವೈರಾಗ್ಯವುಂಟಾಗುತ್ತದೆ.

3. ಸಂಸಾರವು ಅನಾದಿಯಾದ್ದರಿಂದ ಮತ್ತೆ ಮತ್ತೆ ಉಂಟಾಗಿ ಎಂದರ್ಥ. ಸೂ. ಭಾ. ೧-೪-೪೦, ೨-೧-೩೬.

## ಪರಮಪದವು ಅವ್ಯಕ್ತಕ್ಕಿಂತ ವಿಲಕ್ಷಣವಾದದ್ದು

೫೨೨. ಯತ್ ಉಪನ್ಯಸ್ತಮ್ ಅಕ್ಷರಮ್, ತಸ್ಯ ಪ್ರಾಪ್ತ್ಯುಪಾಯೋ ನಿರ್ದಿಷ್ಟಃ "ಓಮಿತ್ಯೇಕಾಕ್ಷರಂ ಬ್ರಹ್ಮ" (೮-೧೩) ಇತ್ಯಾದಿನಾ । ಅಥ ಇದಾನೀಮ್ ಅಕ್ಷರಸ್ಯೈವ ಸ್ವರೂಪನಿರ್ದಿದಿಕ್ಷಯಾ ಇದಮ್ ಉಚ್ಯತೇ ಅನೇನ ಯೋಗಮಾರ್ಗೇಣ ಇದಂ ಗನ್ತವ್ಯಮ್ ಇತಿ—

(ಭಾಷ್ಯಾರ್ಥ)

ಹಿಂದೆ[1] ಅಕ್ಷರ' ಎಂದು ಹೇಳಿತ್ತಲ್ಲ, ಅದನ್ನು ಪಡೆಯುವದಕ್ಕೆ "ಓಮಿತ್ಯೇಕಾಕ್ಷರಂ ಬ್ರಹ್ಮ'' (ಓಂ ಎಂಬ ಒಂದಕ್ಷರದ ಬ್ರಹ್ಮವನ್ನು ಉಚ್ಚರಿಸುತ್ತಾ) ಎಂದು ಮುಂತಾಗಿ (೮-೧೩) ಸಾಧನವನ್ನು ಹೇಳಿದ್ದಾಯಿತು. ಇನ್ನು ಈಗ ಈ ಯೋಗಮಾರ್ಗದಿಂದ[2] ಪಡೆಯತಕ್ಕದ್ದು ಇದು ಎಂದು ಅಕ್ಷರ(ಬ್ರಹ್ಮದ) ಸ್ವರೂಪವನ್ನೇ ತಿಳಿಸಿಕೊಡುವದಕ್ಕಾಗಿ ಇದನ್ನು (ಭಗವಂತನು) ಹೇಳುತ್ತಾನೆ.—

**ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ ಸನಾತನಃ ॥**
**ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥ ೨೦ ॥**

೨೦. ಆದರೆ ಆ ಅವ್ಯಕ್ತಕ್ಕಿಂತಲೂ ಅವ್ಯಕ್ತವಾಗಿರುವ ಬೇರೆ ಯಾವ ಅನ್ಯವಾದ ಸನಾತನವಾದ ಭಾವವು ಯಾವದೋ ಅದು ಸರ್ವಭೂತಗಳೂ ನಾಶವಾದರೂ ನಾಶವಾಗುವದಿಲ್ಲ.

(ಭಾಷ್ಯ)

೫೨೩. ಪರಃ ವ್ಯತಿರಿಕ್ತಃ ಭಿನ್ನಃ । ಕುತಃ ? ಕಸ್ಮಾತ್ ಪೂರ್ವೋಕ್ತಾತ್ ತುಶಬ್ದಃ ಅಕ್ಷರಸ್ಯ ವಿವಕ್ಷಿತಸ್ಯ ಅವ್ಯಕ್ತಾತ್ ವೈಲಕ್ಷಣ್ಯವಿಶೇಷಣಾರ್ಥಃ । ಭಾವಃ ಅಕ್ಷರಾಖ್ಯಂ ಪರಂ ಬ್ರಹ್ಮ । ವ್ಯತಿರಿಕ್ತತ್ವೇ ಸತ್ಯಪಿ ಸಾಲಕ್ಷಣ್ಯಪ್ರಸಙ್ಗೋಽಸ್ತಿ ಇತಿ ತದ್ವಿನಿವೃತ್ತ್ಯರ್ಥಮ್ ಆಹ ಅನ್ಯಃ ಇತಿ । ಅನ್ಯಃ ವಿಲಕ್ಷಣಃ । ಸ ಚ ಅವ್ಯಕ್ತಃ ಅನಿನ್ದ್ರಿಯಗೋಚರಃ । 'ಪರಸ್ತಸ್ಮಾತ್' ಇತ್ಯುಕ್ತಮ್ । ಕಸ್ಮಾತ್ ಪುನಃ ಪರಃ ? ಪೂರ್ವೋಕ್ತಾತ್ ಭೂತಗ್ರಾಮಬೀಜಭೂತಾತ್ ಅವಿದ್ಯಾಲಕ್ಷಣಾತ್

---

1. ೮-೩ರಲ್ಲಿ

2. ಓಂ ಎಂಬ ಅಕ್ಷರವನ್ನು ಉಚ್ಚರಿಸುತ್ತಾ ನಾಡೀಮಾರ್ಗದಿಂದ ಬ್ರಹ್ಮವನ್ನು ಪಡೆಯುವ ಸಾಧನದಿಂದ.

ಅವ್ಯಕ್ತಾತ್ ಅನ್ಯಃ ವಿಲಕ್ಷಣಃ ಭಾವಃ ಇತ್ಯಭಿಪ್ರಾಯಃ । ಸನಾತನಃ ಚಿರನ್ತನಃ । ಯಃ ಸ ಭಾವಃ ಸರ್ವೇಷು ಭೂತೇಷು ಬ್ರಹ್ಮಾದಿಷು ನಶ್ಯತ್ಸು ನ ವಿನಶ್ಯತಿ ॥

(ಭಾಷ್ಯಾರ್ಥ)

ಪರವೆಂದರೆ ವ್ಯತಿರಿಕ್ತವಾದದ್ದು ಬೇರೆಯಾದದ್ದು. ಯಾವದಕ್ಕಿಂತ (ಬೇರೆ)? ಎಂದರೆ ಹಿಂದೆ ಹೇಳಿರುವ (ಅವ್ಯಕ್ತಕ್ಕಿಂತ). ತು (ಆದರೆ) ಎಂಬ ಮಾತು (ಇಲ್ಲಿ) ಹೇಳಬೇಕೆಂದಿರುವ ಅಕ್ಷರ (ಬ್ರಹ್ಮವು) ಅವ್ಯಕ್ತಕ್ಕಿಂತ ವಿಲಕ್ಷಣವಾದದ್ದು ಎಂಬ ವಿಶೇಷಣವನ್ನು (ಹೇಳುವದಕ್ಕೆ) ಬಂದದ್ದು. ಭಾವವು ಎಂದರೆ ಅಕ್ಷರವೆಂಬ ಪರಬ್ರಹ್ಮ (ವಸ್ತು). ಬೇರೆಯಾಗಿದ್ದರೂ ಅದೇ ಜಾತಿಯುದಾಗಿರಬಹುದು[1]. ಆದ್ದರಿಂದ ಅದನ್ನು ಅಲ್ಲವೆನ್ನುವದಕ್ಕಾಗಿ 'ಅನ್ಯ' ಎಂದಿದೆ. ಅನ್ಯವಾದ ಎಂದರೆ ಬೇರೆಯ ಬಗೆಯಾದ (ಎಂದರ್ಥ) ಅದು ಅವ್ಯಕ್ತವಾಗಿಯೂ ಇರುತ್ತದೆ, ಇಂದ್ರಿಯಗಳಿಗೆ ಗೋಚರವಲ್ಲದೆಯೂ ಇದೆ "ಅದಕ್ಕಿಂತ ಬೇರೆ" ಎಂದಿದೆಯಲ್ಲ, ಹಾಗಾದರೆ ಯಾವದಕ್ಕಿಂತ ಬೇರ? ಎಂದರೆ ಅವಿದ್ಯಾಲಕ್ಷಣವಾದ[2] ಅವ್ಯಕ್ತವು ಭೂತಗ್ರಾಮಕ್ಕೆ ಬೀಜಭೂತವಾಗಿರುವದೆಂದು ಹಿಂದೆ[3] ಹೇಳಿತ್ತಷ್ಟೆ; ಅದಕ್ಕಿಂತ ಅನ್ಯವಾದ ವಿಲಕ್ಷಣವಾದ ಭಾವವು ಎಂದು ಅಭಿಪ್ರಾಯ[4] ಸನಾತನವಾದದ್ದು ಎಂದರೆ ಎಂದಿನಿಂದಲೂ ಇದ್ದುಕೊಂಡಿರುವದು. ಅಂಥ ಈ ಭಾವವು ಬ್ರಹ್ಮನೇ ಮುಂತಾದ ಸಕಲ ಪ್ರಾಣಿಗಳೂ ನಾಶವಾದರೂ ನಾಶವಾಗುವದಿಲ್ಲ.[5]

---

1. ಒಂದೇ ಜಾತಿಯ ಎರಡು ವಸ್ತುಗಳೂ ಒಂದಕ್ಕಿಂತ ಒಂದು ಬೇರೆಯಾಗಿರುತ್ತವೆ; ಆದರಂತೆ ಅವ್ಯಕ್ತಕ್ಕಿಂತ ಬೇರಯಾದ ಬ್ರಹ್ಮವೂ ಅದರಂಥನ್ನೇ ಆಗಿರಬಹುದೆಂದಾಗುವಹು.

2. ಅವ್ಯಕ್ತವು ಅವಿದ್ಯಾಲಕ್ಷಣ, ತಪ್ಪುತಿಳಿವಳಿಕೆಗೆ ತೋರತಕ್ಕದ್ದು, ಎಂದು ಭಾಷ್ಯದಲ್ಲಿ ಮತ್ತೆ ಮತ್ತೆ ಹೇಳಿದೆ ೯-೯, ೯-೧೦ರ ಭಾಷ್ಯವನ್ನೂ ಸೂ ಭಾ. ೧-೪-೩, ೧೪ನ್ನೂ ನೋಡಿ.

3. ೮-೧೦, ೧೯ರಲ್ಲಿ. ಭೂತಗ್ರಾಮವು ವ್ಯಕ್ತ, ಅದಕ್ಕೆ ಬೀಜವಾಗಿರುವ ಅವ್ಯಾಕೃತವು ಅವ್ಯಕ್ತ, ಬ್ರಹ್ಮವು ಅದಕ್ಕಿಂತ ವಿಲಕ್ಷಣವಾದ ಅವ್ಯಕ್ತ.

4. ಅವ್ಯಾಕೃತವು ಬ್ರಹ್ಮಕ್ಕಿಂತ ಬೇರೆ ಎಂದಾಗಲಿ ಬೇರೆಯಲ್ಲವೆಂದಾಗಲಿ ಹೇಳುವದಕ್ಕೆ ಬಾರದ ಅನಿರ್ವಚನೀಯವಾದ್ದರಿಂದ ಅವ್ಯಕ್ತ; ಬ್ರಹ್ಮವು ಅದಕ್ಕಿಂತ ತೀರ ವಿಲಕ್ಷಣವಾದ ಚಿನ್ಮಾತ್ರವಾದ ಅವ್ಯಕ್ತ. ಸೂ. ಭಾ. ೧-೪-೩, ಮುಂ. ಭಾ. ೨-೧-೨ ಭಾ. ಭಾ. ೫೨, ೫೫.

5. ಅವ್ಯಾಕೃತವಾದ ಅವ್ಯಕ್ತವು ಕಾಲದಲ್ಲಿ ನಾಶವಾಗುವದಿಲ್ಲವಾದರೂ ಬಾಧಿತವಾಗುತ್ತದೆ, ಬ್ರಹ್ಮವು ಹಾಗಲ್ಲ.

**ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂ ಗತಿಮ್ ।**
**ಯಂ ಪ್ರಾಪ್ಯ ನ ನಿವರ್ತನ್ತೇ ತದ್ಧಾಮ ಪರಮಂ ಮಮ ॥ ೨೧ ॥**

೨೧. ಅಕ್ಷರವೆಂದು (ಯಾವ) ಅವ್ಯಕ್ತವು ಉಕ್ತವಾಗಿದೆಯೋ ಅದನ್ನು ಪರಮ ಗತಿ ಎನ್ನುವರು. ಅದನ್ನು ಸೇರಿದರೆ ಹಿಂತಿರುಗುವದಿಲ್ಲ ಅದೇ ನನ್ನ ಪರಮ ಧಾಮವು.

(ಭಾಷ್ಯ)

೫೨೪. ಯೋ ಸೌ ಅವ್ಯಕ್ತಃ ಅಕ್ಷರಃ ಇತ್ಯುಕ್ತಃ ತಮೇವ ಅಕ್ಷರಸಂಜ್ಞಕಮ್ ಅವ್ಯಕ್ತಂ ಭಾವಮ್ ಆಹುಃ ಪರಮಾಂ ಪ್ರಕೃಷ್ಟಾಂ ಗತಿಮ್ । ಯಂ ಭಾವಂ ಪ್ರಾಪ್ಯ ಗತ್ವಾ ನ ನಿವರ್ತನ್ತೇ ಸಂಸಾರಾಯ ತದ್ ಧಾಮ ಸ್ಥಾನಂ ಪರಮಂ ಪ್ರಕೃಷ್ಟಂ ಮಮ ವಿಷ್ಣೋಃ ಪರಮಂ ಪದಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಅಕ್ಷರವೆಂದು ಯಾವ ಈ ಅವ್ಯಕ್ತವು ಉಕ್ತವಾಗಿದೆಯೋ ಅದೇ ಅಕ್ಷರವೆಂಬ ಹೆಸರಿನ ಅವ್ಯಕ್ತಭಾವವನ್ನು ಪರಮವಾದ ಹೆಚ್ಚಿನದಾದ ಗತಿ ಎನ್ನುವರು. ಆ ಭಾವವನ್ನು ಸೇರಿದರೆ ಹೋಗಿ ಪಡೆದುಕೊಂಡರೆ ಸಂಸಾರಕ್ಕೆ ಮತ್ತೆ ಬರುವದಿಲ್ಲ, ಅದೇ ನನ್ನ ಪರಮವಾದ ಹೆಚ್ಚಿನ ಧಾಮವು ಸ್ಥಾನವು, ವಿಷ್ಣುವಾದ ನನ್ನ ಪರಮ ಪದವು ಎಂದರ್ಥ.[1]

## ಪರಮಪುರುಷನ ಪ್ರಾಪ್ತಿಗೆ ಭಕ್ತಿಯೇ ಸಾಧನ

(ಭಾಷ್ಯ)

೫೨೫. ತಲ್ಲಬ್ಧೇಃ ಉಪಾಯಃ ಉಚ್ಯತೇ—

(ಭಾಷ್ಯಾರ್ಥ)

ಅದನ್ನು ಪಡೆದುಕೊಳ್ಳುವದಕ್ಕೆ ಸಾಧನವನ್ನು ಹೇಳುತ್ತಾನೆ :—

**ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।**
**ಯಸ್ಯಾನ್ತಃಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್ ॥ ೨೨ ॥**

---

1. ಕ. ೧-೩-೯ ಸೂಚನೆ.

೨೨. ಪಾರ್ಥನೆ, ಆ ಪರ ಪುರುಷನು ಅನನ್ಯವಾದ ಭಕ್ತಿಯಿಂದ ಲಭ್ಯನಾಗಿರುತ್ತಾನೆ. ಭೂತಗಳು ಆತನ ಒಳಗೇ ಇರುವವು, ಆತನಿಂದಲೇ ಇದೆಲ್ಲವೂ ವ್ಯಾಪ್ತವಾಗಿರುವದು.

(ಭಾಷ್ಯ)

೫೨೬. ಪುರುಷಃ ಪುರಿಶಯನಾತ್ ಪೂರ್ಣತ್ವಾದ್ ವಾ ಸ ಪರಃ ಪಾರ್ಥ । ಪರಃ ನಿರತಿಶಯಃ ಯಸ್ಮಾತ್ ಪುರುಷಾತ್ ನ ಪರಂ ಕಿಂಚಿತ್ । ಸ ಭಕ್ತ್ಯಾ ಲಭ್ಯಃ ತು ಜ್ಞಾನಲಕ್ಷಣಯಾ ಅನನ್ಯಯಾ ಆತ್ಮವಿಷಯಯಾ । ಯಸ್ಯ ಪುರುಷಸ್ಯ ಅನ್ತಃಸ್ಥಾನಿ ಮಧ್ಯಸ್ಥಾನಿ ಭೂತಾನಿ ಕಾರ್ಯಭೂತಾನಿ । ಕಾರ್ಯಂ ಹಿ ಕಾರಣಸ್ಯ ಅನ್ತರ್ವರ್ತಿ ಭವತಿ । ಯೇನ ಪುರುಷೇಣ ಸರ್ವಮ್ ಇದಂ ಜಗತ್ ತತಂ ವ್ಯಾಪ್ತಮ್ ಆಕಾಶೇನೇವ ಘಟಾದಿ ॥

(ಭಾಷ್ಯಾರ್ಥ)

ಪುರದಲ್ಲಿ ಇರುವದರಿಂದಲೋ ಎಲ್ಲವನ್ನೂ ತುಂಬಿಕೊಂಡಿರುವದರಿಂದಲೋ ಪುರುಷನೆನಿಸಿಕೊಂಡಿರುವ ಆತನು ಪರನು (ಹೆಚ್ಚಿನವನು), ಏಕೆಂದರೆ (ಆ) ಪುರುಷನಿಗಿಂತ ಮತ್ತೆ ಯಾವದೂ ಹೆಚ್ಚಿನದು ಇರುವದಿಲ್ಲ. ಆ **(ಹೆಚ್ಚಿನ ಪುರುಷನು) ಅನನ್ಯನಾದ ಎಂದರೆ ಆತ್ಮವಿಷಯವಾದ**[2] **ಜ್ಞಾನವೆಂಬ ರೂಪದ ಭಕ್ತಿಯಿಂದ ಲಭ್ಯನಾಗಿರುವನು.**[3] ಆ ಪುರುಷನ ಒಳಗೆ ಅವನಲ್ಲಿಯೇ ಕಾರ್ಯ **ರೂಪವಾಗಿರುವ ಭೂತಗಳೆಲ್ಲವೂ ಇರುವವು, ಏಕೆಂದರೆ ಕಾರ್ಯವು ಕಾರಣ**

---

1 ಕ ೧-೩-೧೧ರ ಸೂಚನೆ.

2. ಅನ್ಯವಿಷಯವನ್ನು ಬಿಟ್ಟು ಎಂದರೆ ತನ್ನ ಸ್ವರೂಪವಾದ ಆತ್ಮನನ್ನೇ ಬೇಕೆಂದು ಬಯಸುತ್ತಿರಬೇಕು ಎಂದರ್ಥವಾಗುವದು. ಆತ್ಮಪ್ರೇಮವೇ ಆತ್ಮಪ್ರಾಪ್ತಿಗೆ ಮುಖ್ಯ ಸಾಧನವೆಂಬುದನ್ನು ಮು ೩-೨-೩, ಕ ೧-೨-೨೩, ಬೃ. ೪-೪-೬, ೪-೪-೨೧ ಮುಂತಾದ ಶ್ರುತಿಗಳಲ್ಲಿ ಹೇಳಿದೆ.

3. ಜ್ಞಾನಿಯೇ ಹೆಚ್ಚಿನ ಭಕ್ತನೆಂದು ೭-೧೭ರಲ್ಲಿ ಹೇಳಿರುವದರ ಪರಾಮರ್ಶವಿದು. ಯೋಗವು ಪ್ರಕೃತವಾಗಿರುವದರಿಂದ ಅವರಿಗೂ ಆತ್ಮಭಾವದ ಚಿಂತನೆ ಬೇಕೆಂದು ಹೇಳಿದಂತೆ ಆಯಿತು.

ದೊಳಗೇ ಇರುತ್ತದೆ.[1] ಗಡಿಗೆಯೇ ಮುಂತಾದದ್ದು ಆಕಾಶದಿಂದ ವ್ಯಾಪ್ತವಾಗಿರುವಂತೆ[2] ಆ ಪುರುಷನಿಂದ ಈ ಜಗತ್ತೆಲ್ಲವೂ ತತವಾಗಿರುತ್ತದೆ, ವ್ಯಾಪ್ತವಾಗಿರುತ್ತದೆ.

## ಯೋಗಿಗಳಿಗೂ ಕರ್ಮಿಗಳಿಗೂ ಆಗುವ ಶುಕ್ಲಕೃಷ್ಣಗತಿಗಳು

(ಭಾಷ್ಯ)

೫೨೭. ಪ್ರಕೃತಾನಾಂ ಯೋಗಿನಾಂ ಪ್ರಣವಾವೇಶಿತಬ್ರಹ್ಮಬುದ್ಧೀನಾಂ ಕಾಲಾನ್ತರಮುಕ್ತಿಭಾಜಾಂ ಬ್ರಹ್ಮಪ್ರತಿಪತ್ತಯೇ ಉತ್ತರೋ ಮಾರ್ಗೋ ವಕ್ತವ್ಯಃ ಇತಿ ಯತ್ರ ಕಾಲೇ ಇತ್ಯಾದಿ ವಿವಕ್ಷಿತಾರ್ಥಸಮರ್ಪಣಾರ್ಥಮ್ ಉಚ್ಯತೇ । ಆವೃತ್ತಿಮಾರ್ಗೋಪನ್ಯಾಸಃ ಇತರಮಾರ್ಗಸ್ತುತ್ಯರ್ಥಃ[3] —

(ಭಾಷ್ಯಾರ್ಥ)

ಪ್ರಣವದಲ್ಲಿ ಬ್ರಹ್ಮಬುದ್ಧಿಯನ್ನಿಟ್ಟವರಾಗಿಯೂ[4] ಕಾಲಾಂತರದಲ್ಲಿ ಮುಕ್ತಿಯನ್ನು ಪಡೆಯತಕ್ಕವರಾಗಿಯೂ ಇರುವ ಯೋಗಿಗಳ ವಿಷಯವಷ್ಟೆ, ಪ್ರಕೃತವಾಗಿರುವದು, ಅವರಿಗೆ ಬ್ರಹ್ಮವನ್ನು ಪಡೆಯುವದಕ್ಕೆ ಉತ್ತರಮಾರ್ಗವನ್ನು ಹೇಳಬೇಕಾಗಿರುತ್ತದೆಯಾದ್ದರಿಂದ ವಿವಕ್ಷಿತವಾದ ವಿಷಯವನ್ನು ತಿಳಿಸುವದಕ್ಕಾಗಿ[5] "ಯತ್ರ ಕಾಲೇ" ಮುಂತಾದ ಗ್ರಂಥವನ್ನು ಹೇಳಿರುತ್ತದೆ. ಹಿಂತಿರುಗುವ ಮಾರ್ಗವನ್ನೂ ಹೇಳಿರುವದು ಇನ್ನೊಂದು ಮಾರ್ಗವನ್ನು[6] ಹೊಗಳುವದಕ್ಕೆ.

**ಯತ್ರ ಕಾಲೇ ತ್ವನಾವೃತ್ತಿಮಾವೃತ್ತಿಂ ಚೈವ ಯೋಗಿನಃ ।**
**ಪ್ರಯಾತಾ ಯಾನ್ತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥ ೨೩ ॥**

---

1. ಕಾರಣದಲ್ಲಿ ಕಾರ್ಯವು ಅಡಕವಾಗಿರುತ್ತದೆ, ಅದನ್ನು ಬಿಟ್ಟು ಸ್ವತಂತ್ರವಾಗಿರಲಾರದು.

2. ಆಕಾಶವೇ ಎಲ್ಲಕ್ಕೂ ಕಾರಣವಾಗಿರುವದರಿಂದ ಘಟದ ಒಳಗೆ, ಹೊರಗೆ, ಸ್ವರೂಪದಲ್ಲಿ-ಎಲ್ಲಾ ಕಡೆಯಲ್ಲಿಯೂ ತುಂಬಿಕೊಂಡಿರುತ್ತದೆ. ಅದರಂತೆ.

3. "ಉತ್ತರಮಾರ್ಗಸ್ತುತ್ಯರ್ಥಃ" ಪಾ॥

4. ಅಥವಾ ಬ್ರಹ್ಮದ ವಾಚಕವೆಂದು ಚಿಂತಿಸುವವರಾಗಿಯೂ ಎಂದು ಸೇರಿಸಿಕೊಳ್ಳಬೇಕು. ೮-೧೨ರ ಅವತರಣಿಕೆ (ಭಾ ಭಾ ೫೦೮)ಯನ್ನು ನೋಡಿ

5. ಪರಮಾತ್ಮನನ್ನು ಪಡೆದ ಯೋಗಿಗಳಿಗೆ ಪುನರ್ಜನ್ಮವಿಲ್ಲವೆಂದು ತಿಳಿಸುವದಕ್ಕೆ

6. ಮತ್ತೆ ಸಂಸಾರಕ್ಕೆ ತೆರಳದ ಉತ್ತರಮಾರ್ಗವನ್ನು.

೨೩. ಎಲೈ ಭರತರ್ಷಭನೆ, ಯಾವ ಕಾಲದಲ್ಲಿ ಪ್ರಯಾಣ ಮಾಡುವ ಯೋಗಿಗಳು ಅನಾವೃತ್ತಿಯನ್ನೂ ಆವೃತ್ತಿಯನ್ನೂ ಹೊಂದುವರೋ ಆ ಕಾಲವನ್ನು ಹೇಳುವೆನು.

(ಭಾಷ್ಯ)

೫೨೮. ಯತ್ರ ಕಾಲೇ ' ಪ್ರಯಾತಾಃ ' ಇತಿ ವ್ಯವಹಿತೇನ ಸಂಬನ್ಧಃ। ಯತ್ರ ಯಸ್ಮಿನ್ ಕಾಲೇ ತು ಅನಾವೃತ್ತಿಮ್ ಅಪುನರ್ಜನ್ಮ ಆವೃತ್ತಿಂ ತದ್ವಿಪರೀತಾಂ ಚೈವ । ' ಯೋಗಿನಃ ' ಇತಿ ಯೋಗಿನಃ ಕರ್ಮಿಣಶ್ಚ ಉಚ್ಯನ್ತೇ । ಕರ್ಮಿಣಸ್ತು ಗುಣತಃ " ಕರ್ಮಯೋಗೇನ ಯೋಗಿನಾಮ್ " (೩-೩) ಇತಿ ವಿಶೇಷಣಾತ್ ಯೋಗಿನಃ। ಯತ್ರ ಕಾಲೇ ಪ್ರಯಾತಾಃ ಮೃತಾಃ ಯೋಗಿನಃ ಅನಾವೃತ್ತಿಂ ಯಾನ್ತಿ ಯತ್ರ ಕಾಲೇ ಚ ಪ್ರಯಾತಾ ಆವೃತ್ತಿಂ ಯಾನ್ತಿ । ತಂ ಕಾಲಂ ವಕ್ಷ್ಯಾಮಿ ಭರತರ್ಷಭ ||

(ಭಾಷ್ಯಾರ್ಥ)

" ಯತ್ರ ಕಾಲೇ " ಎಂಬುದನ್ನು " ಪ್ರಯಾತಾಃ '' ಎಂಬ (ಉತ್ತರಾರ್ಧದಲ್ಲಿ) ದೂರವಾಗಿರುವ (ಮಾತಿಗೆ) ಸಂಬಂಧಿಸಿಕೊಳ್ಳಬೇಕು ಯಾವ ಕಾಲದಲ್ಲಿ ಯಾದರೆ ಅನಾವೃತ್ತಿಯನ್ನೂ ಎಂದರೆ ಪುನರ್ಜನ್ಮವಿಲ್ಲದಿರುವಿಕೆಯನ್ನೂ ಆವೃತ್ತಿಯನ್ನೂ ಎಂದರೆ ಅದಕ್ಕೆ ವಿರುದ್ಧವಾಗಿ ಪುನರ್ಜನ್ಮವನ್ನೂ ಯೋಗಿಗಳು–**(ಇಲ್ಲಿ) ಯೋಗಿಗಳೆಂಬ ಮಾತನ್ನು** (ನಿಜವಾದ) **ಯೋಗಿಗಳಿಗೂ ಕರ್ಮಿಗಳಿಗೂ ಕೂಡ ಉಪಯೋಗಿಸಿರುತ್ತದೆ. ಕರ್ಮಿಗಳನ್ನು ಯೋಗಿಗಳೆಂದಿರುವದು ಮಾತ್ರ ಉಪಚಾರಕ್ಕೆ**, " ಕರ್ಮಯೋಗದಿಂದ ಯೋಗಿಗಳಿಗೆ (ನಿಷ್ಠೆ) " (೨-೩) (ಎಂಬಲ್ಲಿ ಯೋಗಿಗಳೆಂಬ) ವಿಶೇಷಣವನ್ನು ಉಪಯೋಗಿಸಿರುವದರಿಂದ (ಅವರೂ) ಯೋಗಿಗಳೆನಿಸಿರುತ್ತಾರೆ ಯಾವ ಕಾಲದಲ್ಲಿ ಪ್ರಯಾಣಮಾಡಿದ ಮೃತರಾದ ಯೋಗಿಗಳು ಅನಾವೃತ್ತಿಯನ್ನು ಹೊಂದುವರೋ ಮತ್ತು ಯಾವ ಕಾಲದಲ್ಲಿ ಮೃತರಾದವರು ಆವೃತ್ತಿಯನ್ನು ಹೊಂದುವರೋ, ಭರತರ್ಷಭನೆ, ಆ ಕಾಲವನ್ನು ಹೇಳುವೆನು.

(ಭಾಷ್ಯ)

೫೨೯. ತಂ ಕಾಲಮ್ ಆಹ—

(ಭಾಷ್ಯಾರ್ಥ)

ಆ ಕಾಲವನ್ನು ಹೇಳುತ್ತಾನೆ.—

**ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಮ್ ।**
**ತತ್ರ ಪ್ರಯಾತಾ ಗಚ್ಛನ್ತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥ ೨೪ ॥**

೨೪. ಅಗ್ನಿ, ಜ್ಯೋತಿ, ಅಹಸ್ಸು, ಶುಕ್ಲ (ಪಕ್ಷ), ಉತ್ತರಾಯಣ-ಎಂಬ ಆರು ಮಾಸಗಳು-ಇವರಲ್ಲಿ ಪ್ರಯಾಣಮಾಡಿದ ಬ್ರಹ್ಮವಿದರಾದ ಜನರು ಬ್ರಹ್ಮವನ್ನು ಸೇರುತ್ತಾರೆ.

(ಭಾಷ್ಯ)

೫೩೦. ಅಗ್ನಿಃ ಕಾಲಾಭಿಮಾನಿನೀ ದೇವತಾ । ತಥಾ ಜ್ಯೋತಿರಪಿ ದೇವತೈವ ಕಾಲಾಭಿಮಾನಿನೀ । ಅಥವಾ ಅಗ್ನಿಜ್ಯೋತಿಷೀ ಯಥಾಶ್ರುತೇ ಏವ ದೇವತೇ । ಭೂಯಸಾ ತು ನಿರ್ದೇಶಃ ‘ಯತ್ರ ಕಾಲೇ’ । ‘ತಂ ಕಾಲಮ್’ ಇತಿ । ಆಮ್ರವಣವತ್ । ತಥಾ ಅಹರ್ದೇವತಾ ಅಹರಭಿಮಾನಿನೀ । ಶುಕ್ಲಃ ಶುಕ್ಲಪಕ್ಷದೇವತಾ । ಷಣ್ಮಾಸಾ ಉತ್ತರಾಯಣಮ್ । ತತ್ರಾಪಿ ದೇವತೈವ ಮಾರ್ಗಭೂತಾ ಇತಿ ಸ್ಥಿತಃ ಅನ್ಯತ್ರ ನ್ಯಾಯಃ । ತತ್ರ ತಸ್ಮಿನ್ ಮಾರ್ಗೇ ಪ್ರಯಾತಾ ಮೃತಾಃ ಗಚ್ಛನ್ತಿ ಬ್ರಹ್ಮ ಬ್ರಹ್ಮವಿದಃ ಬ್ರಹ್ಮೋಪಾಸಕಾಃ ಬ್ರಹ್ಮೋಪಾಸನಪರಾಃ ಜನಾಃ । ‘ಕ್ರಮೇಣ’ ಇತಿ ವಾಕ್ಯಶೇಷಃ । ನ ಹಿ ಸದ್ಯೋಮುಕ್ತಿಭಾಜಾಂ ಸಮ್ಯಗ್ದರ್ಶನನಿಷ್ಠಾನಾಂ ಗತಿಃ ಆಗತಿರ್ವಾ ಕ್ವಚಿತ್ ಅಸ್ತಿ । ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ” (ಬೃ. ೪-೪-೬) ಇತಿ ಶ್ರುತೇಃ ಬ್ರಹ್ಮಸಂಲೀನಪ್ರಾಣಾ (ಏವ ತೇ)[1] ಬ್ರಹ್ಮಮಯಾ ಬ್ರಹ್ಮಭೂತಾ ಏವ ತೇ[2] ॥

(ಭಾಷ್ಯಾರ್ಥ)

ಅಗ್ನಿ ಎಂಬುದು (ಒಂದು) ಕಾಲಾಭಿಮಾನಿಯಾದ ದೇವತೆ, ಜ್ಯೋತಿ ಎಂಬುದೂ ಹಾಗೆಯೇ ಕಾಲಾಭಿಮಾನಿಯಾದ ದೇವತೆಯೇ. ಅಥವಾ ಅಗ್ನಿ, ಜ್ಯೋತಿ-ಎಂಬಿವು ಆಯಾ ದೇವತೆಗಳೇ. “ಯಾವ ಕಾಲದಲ್ಲಿ” “ಆ ಕಾಲವನ್ನು” ಎಂದು (ಹಿಂದಿನ ಶ್ಲೋಕದಲ್ಲಿ) ಹೇಳಿರುವದು ಬಹು (ದೇವತೆಗಳು ಕಾಲಾಭಿಮಾನಿಗಳಾಗಿರುವದರಿಂದ) ‘ಮಾವಿನ ತೋಟ’ ಎಂಬ (ಪ್ರಯೋಗ)ದಂತೆ (ಎಂದು) ತಿಳಿ

---

1 ಮುದ್ರಿತಪುಸ್ತಕಗಳಲ್ಲಿದ್ದರೂ ಈ ಮಾತುಗಳು ಬೇಕಿಲ್ಲ.

2. “ಕ್ವಚಿತ್ ಅಸ್ತಿ” ಎಂಬಲ್ಲಿಂದ ಇಲ್ಲಿಯವರೆಗಿನ ಭಾಗವು ಮು॥ ಮೈ ಗಳಲ್ಲಿಲ್ಲ; ನಿ॥ ಗು॥ ಗಳಲ್ಲಿ “ಕ್ರಮೇಣ ತು ಗಚ್ಛನ್ತಿ ಬ್ರಹ್ಮ ಬ್ರಹ್ಮವಿದೋ ಜನಾಃ” ಎಂದಿರುವದು ಹೆಚ್ಚೇ ಆಗಿದೆ.

ಯಬೇಕು)[1] ಇದರಂತೆ ಅಹಸ್ಸು ಎಂಬುದೂ ಹಗಲಿಗೆ ಅಭಿಮಾನಿಯಾದ ದೇವತೆ, ಶುಕ್ಲವೆಂಬುದು ಶುಕ್ಲಪಕ್ಷದೇವತೆ. ಉತ್ತರಾಯಣದ ಆರು ಮಾಸಗಳು ಎಂಬಲ್ಲಿಯೂ ಮಾರ್ಗದಲ್ಲಿರುವ ದೇವತೆಯೇ (ವಿವಕ್ಷಿತವಾಗಿರುತ್ತದೆ). ಈ (ಶ್ಲೋಕಕ್ಕೆ ಹೀಗೆ ಅರ್ಥವನ್ನು ಮಾಡುವದು) ನ್ಯಾಯವೆಂಬುದನ್ನು ಮತ್ತೊಂದು ಕಡೆಯಲ್ಲಿ ಸಿದ್ಧಮಾಡಲಾಗಿರುತ್ತದೆ[2] ಇದರಲ್ಲಿ ಎಂದರೆ ಈ ಮಾರ್ಗದಲ್ಲಿ ಪ್ರಯಾಣಮಾಡಿದ ಮೃತರಾದ ಬ್ರಹ್ಮವಿದರಾದ ಬ್ರಹ್ಮೋಪಾಸಕರಾದ ಬ್ರಹ್ಮೋಪಾಸನೆಯಲ್ಲಿಯೇ ತಾತ್ಪರ್ಯವನ್ನಿಟ್ಟುಕೊಂಡಿರುವ ಜನರು ಬ್ರಹ್ಮವನ್ನು ಸೇರುತ್ತಾರೆ.

(ಬ್ರಹ್ಮವನ್ನು ಸೇರುತ್ತಾರೆ) ಎಂಬ ವಾಕ್ಯಕ್ಕೆ "**ಕ್ರಮವಾಗಿ (ಸೇರುತ್ತಾರೆ)" ಎಂದು ಸೇರಿಸಿಕೊಳ್ಳಬೇಕು ಏಕೆಂದರೆ ಸದ್ಯೋಮುಕ್ತಿಯನ್ನು[3] ಹೊಂದುವವರಾದ ಸಮ್ಯಗ್ದರ್ಶನನಿಷ್ಠರಿಗೆ ಎಲ್ಲಿಗಾದರೂ ಹೋಗುವದಾಗಲಿ ಮತ್ತೆ ಬರುವದಾಗಲಿ ಇರುವದಿಲ್ಲ** 'ಆತನ ಪ್ರಾಣಗಳು (ದೇಹವನ್ನು ಬಿಟ್ಟು) ಮೇಲಕ್ಕೆ ಹೊರಡುವದಿಲ್ಲ.'' (ಬೃ. ೪-೪-೬) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಅವರು ಬ್ರಹ್ಮದಲ್ಲಿಯೇ ಅಡಗಿಹೋಗಿರುವ ಪ್ರಾಣವುಳ್ಳವರು, ಬ್ರಹ್ಮಮಯರಾಗಿ ಬ್ರಹ್ಮವೇ ಆಗಿರುತ್ತಾರೆ. ಅಲ್ಲವೆ ?

**ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ ।**
**ತತ್ರ ಚಾನ್ದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ ॥**

೨೫. ಧೂಮ, ರಾತ್ರಿ, ಕೃಷ್ಣ (ಪಕ್ಷ), ದಕ್ಷಿಣಾಯನದ ಆರು ಮಾಸಗಳು–ಇದರಲ್ಲಿ (ಪ್ರಯಾಣಮಾಡಿದ) ಯೋಗಿಯು ಚಂದ್ರನ ಜ್ಯೋತಿಯನ್ನು ಸೇರಿ ಮರಳಿ ಬರುತ್ತಾನೆ.

(ಭಾಷ್ಯ)

೫೩೧ ಧೂಮಃ ರಾತ್ರಿಃ ಧೂಮಾಭಿಮಾನಿನೀ ರಾತ್ರ್ಯಭಿಮಾನಿನೀ ಚ

---

1. ಮಾವಿನ ಮರಗಳು ಹೆಚ್ಚಾಗಿರುವ ತೋಟವನ್ನು "ಮಾವಿನ ತೋಟ" ಎಂದು ಕರೆಯುವಂತೆ ಕಾಲಾಭಿಮಾನಿದೇವತೆಗಳು ಹೆಚ್ಚಾಗಿರುವದರಿಂದ "ಯಾವ ಕಾಲದಲ್ಲಿ" ಎಂದಿದೆ ಎಂದರ್ಥ.

2. ಸೂ. ಭಾ. ೪-೩-೪, ೫ ; ೪-೨-೨೧.

3. ಸದ್ಯೋಮುಕ್ತಿ ಎಂದರೂ ಜೀವನ್ಮುಕ್ತಿ ಎಂದರೂ ಒಂದೇ ; ಇದೇ ಮುಖ್ಯ ಮುಕ್ತಿ.

ದೇವತಾ । ತಥಾ ಕೃಷ್ಣಃ ಕೃಷ್ಣಪಕ್ಷದೇವತಾ । ಷಣ್ಮಾಸಾ ದಕ್ಷಿಣಾಯನಮ್ ಇತಿ ಚ ಪೂರ್ವವತ್ ದೇವತೈವ । ತತ್ರ ಚನ್ದ್ರಮಸಿ ಭವಂ ಚಾನ್ದ್ರಮಾಸಂ ಜ್ಯೋತಿಃ ಫಲಮ್ ಇಷ್ಟಾದಿಕಾರೀ ಯೋಗೀ ಕರ್ಮೀ ಪ್ರಾಪ್ಯ ಭುಕ್ತ್ವಾ ತತ್ಕ್ಷಯಾತ್ ಇಹ ಪುನಃ ನಿವರ್ತನ್ತೇ ॥

(ಭಾಷ್ಯಾರ್ಥ)

ಧೂಮ, ರಾತ್ರಿ–ಎಂದರೆ ಹೊಗೆಯ ಅಭಿಮಾನಿಯಾದ ಮತ್ತು ರಾತ್ರಿಯ ಅಭಿಮಾನಿಯಾದ ದೇವತೆ ಇದರಂತೆ ಕೃಷ್ಣವೆಂದರೆ ಕೃಷ್ಣಪಕ್ಷದೇವತೆ. "ದಕ್ಷಿಣಾಯನದ ಆರು ಮಾಸಗಳು" ಎಂದರೂ ಹಿಂದೆ ಹೇಳಿರುವಂತೆ (ಅಭಿಮಾನ) ದೇವತೆಯೇ, ಇಷ್ಟವೇ ಮುಂತಾದ[1] ಕರ್ಮವನ್ನು ಮಾಡುವ ಯೋಗಿಯು ಎಂದರೆ ಕರ್ಮಿಯು (ಆ ಮಾರ್ಗದಲ್ಲಿ ಹೋಗಿ) ಚಾಂದ್ರಮಾಸವಾದ ಎಂದರೆ ಚಂದ್ರನಲ್ಲಿರುವ ಜ್ಯೋತಿಯನ್ನು ನೇರಿ ಅನುಭವಿಸಿ ಅದು ಸವೆಯಲು ಈ ಲೋಕಕ್ಕೆ ಮರಳಿ ಬರುತ್ತಾನೆ.

**ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಃ ಶಾಶ್ವತೇ ಮತೇ ।**
**ಏಕಯಾ ಯಾತ್ಯನಾವೃತ್ತಿಮನ್ಯಯಾವರ್ತತೇ ಪುನಃ ॥ ೨೬ ॥**

೨೬. ಶುಕ್ಲಕೃಷ್ಣಗಳೆಂಬ ಈ ಎರಡು ಗತಿಗಳು ಜಗತ್ತಿಗೆ ಶಾಶ್ವತವಾಗಿರುತ್ತವೆ. (ಇವುಗಳಲ್ಲಿ) ಒಂದರಿಂದ (ಹೋದವನು) ಅನಾವೃತ್ತಿಯನ್ನು ಹೊಂದುವನು, (ಆದರೆ) ಮತ್ತೊಂದರಿಂದ (ಹೋದವನು) ಮರಳಿ ಬರುವನು.

(ಭಾಷ್ಯ)

೫೩೨. ಶುಕ್ಲಪಕ್ಷೇ ಶುಕ್ಲಾ ಚ ಕೃಷ್ಣಾ ಚ ಶುಕ್ಲಕೃಷ್ಣೇ । ಜ್ಞಾನಪ್ರಕಾಶಕತ್ವಾತ್ ಶುಕ್ಲಾ ತದಭಾವಾತ್ ಕೃಷ್ಣಾ । ಏತೇ ಶುಕ್ಲಕೃಷ್ಣೇ ಹಿ ಗತೀ 'ಜಗತಃ' ಇತಿ ಅಧಿಕೃತಾನಾಂ ಜ್ಞಾನಕರ್ಮಣೋಃ ನ ಜಗತಃ ಸರ್ವಸ್ಯೈವ ಏತೇ ಗತೀ ಸಮ್ಭವತಃ । ಶಾಶ್ವತೇ ನಿತ್ಯೇ ಸಂಸಾರಸ್ಯ ನಿತ್ಯತ್ವಾತ್ ಮತೇ ಅಭಿಪ್ರೇತೇ । ತತ್ರ ಏಕಯಾ ಶುಕ್ಲಯಾ ಯಾತಿ ಅನಾವೃತ್ತಿಮ್ ಅನ್ಯಯಾ ಇತರಯಾ ಆವರ್ತತೇ ಪುನಃ ಭೂಯಃ ॥

---

1. ಛಾಂ. ೫-೧೦-೩. ಪ್ರ. ೧-೯.

(ಭಾಷ್ಯಾರ್ಥ)

ಶುಕ್ಲಕೃಷ್ಣಗಳೆಂಬ–ಶುಕ್ಲವೂ ಕೃಷ್ಣವೂ ಶುಕ್ಲಕೃಷ್ಣಗಳು–ಜ್ಞಾನವನ್ನು ತೋರಿಸಿ ಕೊಡುವದರಿಂದ[1] (ಮೊದಲನೆಯದಕ್ಕೆ) **ಶುಕ್ಲ**ವೆಂದು (ಹೆಸರು), ಅದಿಲ್ಲದಿರುವದರಿಂದ (ಎರಡನೆಯದಕ್ಕೆ) **ಕೃಷ್ಣ**ವೆಂದು ಹೆಸರು ಈ ಶುಕ್ಲಕೃಷ್ಣಗಳೆಂಬ–ಎರಡು ಗತಿಗಳೂ ಜಗತ್ತಿಗೆ-(ಇಲ್ಲಿ ಜಗತ್ತಿಗೆ) ಎಂದರೆ ಜ್ಞಾನಕರ್ಮಗಳಲ್ಲಿ[2] ಅಧಿಕಾರವಂತರಾದವರಿಗೆ, ಇಡಿಯ ಜಗತ್ತಿಗೇ ಈ ಗತಿಗಳು ಎಂಬುದು ಆಗುವಹಾಗಿಲ್ಲ.[3] ಸಂಸಾರವು ನಿತ್ಯವಾಗಿರುವದರಿಂದ[4] (ಇವೂ) ಶಾಶ್ವತವಾಗಿವೆ, ನಿತ್ಯವಾಗಿವೆ ಎನಿಸಿಕೊಂಡಿರುತ್ತವೆ. ಇವುಗಳಲ್ಲಿ ಒಂದರಿಂದ ಎಂದರೆ (ಮೊದಲನೆಯದಾದ) ಶುಕ್ಲ(ಮಾರ್ಗದ ಗತಿ)ಯಿಂದ ಅನಾವೃತ್ತಿಯನ್ನು ಹೊಂದುವನು, ಮತ್ತೊಂದರಿಂದ ಇನ್ನೊಂದಾದ (ಕೃಷ್ಣಗತಿ)ಯಿಂಪ ಮರಳಿ ಬರುವನು

## ಯೋಗಿಯ ಹೆಚ್ಚುಗಾರಿಕೆ

**ನೈತೇ ಸೃತೀ ಪಾರ್ಥ ಜಾನನ್ ಯೋಗೀ ಮುಹ್ಯತಿ ಕಶ್ಚನ ।**
**ತಸ್ಮಾತ್ ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ ॥**

೨೭ ಎಲೈ ಪಾರ್ಥನೆ, ಈ ಎರಡು ಸೃತಿಗಳನ್ನು (ಸರಿಯಾಗಿ) ತಿಳಿದುಕೊಂಡ ಯಾವ ಯೋಗಿಯೂ ಮೋಹಿತನಾಗುವದಿಲ್ಲ. ಆದ್ದರಿಂದ ಅರ್ಜುನನೆ, ಸರ್ವಕಾಲಗಳಲ್ಲಿಯೂ ಯೋಗಯುಕ್ತನಾಗಿರು.

(ಭಾಷ್ಯ)

೫೩೩. ನ ಏತೇ ಯಥೋಕ್ತೇ ಸೃತೀ ಮಾರ್ಗೌ ಪಾರ್ಥ ಜಾನನ್

---

1. ಉಪಾಸಕನಿಗೆ ಗತಿಚಿಂತನೆಯೂ ಅವಶ್ಯವಾಗಿರುವದರಿಂದ ಆ ಗತಿಚಿಂತನೆಯ ಮಹಿಮೆಯಿಂದ ಅವನು ಸುಷುಮ್ನಾಮಾರ್ಗದಿಂದ ಹೊರಟು ಶುಕ್ಲಗತಿಯನ್ನು ಪಡೆಯುತ್ತಾನೆ. ಸೂ. ಭಾ. ೪-೨-೧೭.

2. ಉಪಾಸನಾಕರ್ಮಗಳಲ್ಲಿ ಎಂದರ್ಥ; ಏಕೆಂದರೆ ತತ್ತ್ವಜ್ಞಾನಿಗಳಿಗೆ ಎಲ್ಲಿಗೂ ಗತಿಯೇ ಇಲ್ಲ. ಅವನು ಜೀವನ್ಮುಕ್ತನು.

3. ನಿಷಿದ್ಧಾಚಾರಿಗಳಿಗೆ ಈ ಎರಡರಲ್ಲಿ ಒಂದೂ ಇಲ್ಲ, ಜ್ಞಾನಿಗಳಿಗೆ ಯಾವ ಗತಿಯೂ ಆಗಲಾರದು. ಆದ್ದರಿಂದ ಈ ಗತಿಗಳು ಎಲ್ಲರಿಗೂ ಅಲ್ಲ.

4. ಸಂಸಾರವು ಮಿಥ್ಯವಾದರೂ ನಿತ್ಯವಾಗಿರುತ್ತದೆ; ಕರ್ಮವೂ ಫಲವೂ ನಿತ್ಯವಾಗಿಹುತ್ತವೆ.

ಸಂಸಾರಾಯ ಏಕಾ ಅನ್ಯಾ ಮೋಕ್ಷಾಯ ಚ ಇತಿ, ಯೋಗೀ ನ ಮುಹ್ಯತಿ ಕಶ್ಚನ ಕಶ್ಚಿದಪಿ। ತಸ್ಮಾತ್ ಸರ್ವೇಷು ಕಾಲೇಷು ಯೋಗಯುಕ್ತಃ ಸಮಾಹಿತಃ ಭವ ಅರ್ಜುನ ||

(ಭಾಷ್ಯಾರ್ಥ)

ಎಲೈ ಪಾರ್ಥನೆ, ಮೇಲೆ ಹೇಳಿರುವ ಎರಡು ಸೃತಿಗಳನ್ನೂ ಎಂದರೆ ಮಾರ್ಗಗಳನ್ನೂ-ಒಂದರಿಂದ ಸಂಸಾರಫಲವೂ ಮತ್ತೊಂದರಿಂದ ಮೋಕ್ಷವೂ ಆಗುವದೆಂದು ತಿಳಿದುಕೊಂಡಿರುವ ಯಾವ ಯೋಗಿಯೂ ಯಾವನೊಬ್ಬನೂ ಮೋಹಿತನಾಗುವದಿಲ್ಲ[1]. ಆದ್ದರಿಂದ ಸರ್ವಕಾಲಗಳಲ್ಲಿಯೂ ಯೋಗಯುಕ್ತನಾಗಿರು, ಅರ್ಜುನನೆ, ಸಮಾಹಿತನಾಗಿರು.

(ಭಾಷ್ಯ)

೫೩೪. ಶೃಣು ತಸ್ಯ ಯೋಗಸ್ಯ ಮಾಹಾತ್ಮ್ಯಮ್—

(ಭಾಷ್ಯಾರ್ಥ)

ಈ ಯೋಗದ ಹೆಚ್ಚುಗಾರಿಕೆಯನ್ನು ಹೇಳುವೆನು ಕೇಳು.-

**ವೇದೇಷು ಯಜ್ಞೇಷು ತಪಸ್ಸು ಚೈವ**
**ದಾನೇಷು ಯತ್ ಪುಣ್ಯಫಲಂ ಪ್ರದಿಷ್ಟಮ್ ।**
**ಅತ್ಯೇತಿ ತತ್ಸರ್ವಮಿದಂ ವಿದಿತ್ವಾ**
**ಯೋಗೀ ಪರಂ ಸ್ಥಾನಮುಪೈತಿ ಚಾದ್ಯಮ್ || ೨೮ ||**

೨೮. ವೇದಗಳಲ್ಲಿಯೂ ಯಜ್ಞಗಳಲ್ಲಿಯೂ ತಪಸ್ಸುಗಳಲ್ಲಿಯೂ ದಾನಗಳಲ್ಲಿಯೂ ಯಾವ ಪುಣ್ಯಫಲವು ಉಂಟಾಗುವದೆಂದು ತಿಳಿಸಿದೆಯೋ ಅದೆಲ್ಲವನ್ನೂ ಇದನ್ನು ತಿಳಿದ ಯೋಗಿಯು ಮೀರುವನು, ಮತ್ತು ಆದ್ಯವಾದ ಹೆಚ್ಚಿನ ಸ್ಥಾನವನ್ನು ಸೇರುವನು.

(ಭಾಷ್ಯ)

೫೩೫. ವೇದೇಷು ಸಮ್ಯಕ್ ಅಧೀತೇಷು, ಯಜ್ಞೇಷು ಚ ಸಾದ್ಗುಣ್ಯೇನ ಅನುಷ್ಠಿತೇಷು ತಪಃಸು ಚ ಸುತಪ್ತೇಷು ದಾನೇಷು ಚ ಸಮ್ಯಕ್ ದತ್ತೇಷು ಏತೇಷು

---

1. ಸೂ. ಭಾ. ೪-೨-೧೭.

ಯತ್ ಪುಣ್ಯಫಲಂ ಪ್ರದಿಷ್ಟಂ ಶಾಸ್ತ್ರೇಣ ಅತ್ಯೇತಿ ಅತೀತ್ಯ ಗಚ್ಛತಿ ತತ್ ಸರ್ವಂ ಫಲಜಾತಮ್ ಇದಂ ವಿದಿತ್ವಾ ಸಪ್ತಪ್ರಶ್ನನಿರ್ಣಯದ್ವಾರೇಣ ಉಕ್ತಮ್ ಅರ್ಥಂ ಸಮ್ಯಕ್ ಅವಧಾರ್ಯ ಅನುಷ್ಠಾಯ ಯೋಗೀ ಪರಂ ಪ್ರಕೃಷ್ಟಮ್ ಐಶ್ವರಂ ಸ್ಥಾನಮ್ ಉಪೈತಿ ಚ ಪ್ರತಿಪದ್ಯತೇ ಆದ್ಯಮ್ ಆದೌ ಭವಂ ಕಾರಣಂ ಬ್ರಹ್ಮ ಇತ್ಯರ್ಥಃ

(ಭಾಷ್ಯಾರ್ಥ)

ಸರಿಯಾಗಿ ಅಧ್ಯಯನಮಾಡಿದ ವೇದಗಳಲ್ಲಿಯೂ, ಸದ್ಗುಣದಿಂದ ಕೂಡಿ ಅನುಷ್ಠಾನಮಾಡಿದ ಯಜ್ಞಗಳಲ್ಲಿಯೂ ಸರಿಯಾಗಿ ಮಾಡಿದ ತಪಸ್ಸುಗಳಲ್ಲಿಯೂ ಸರಿಯಾಗಿ ಕೊಟ್ಟ ದಾನಗಳಲ್ಲಿಯೂ ಯಾವ ಪುಣ್ಯಫಲವು (ಆಗುವದೆಂದು) ಶಾಸ್ತ್ರದಲ್ಲಿ ತಿಳಿಸಿದೆಯೋ ಆ ಫಲಸಮೂಹವನ್ನೆಲ್ಲ ಈ ಏಳು ಪ್ರಶ್ನೆಗಳಿಗೆ ಉತ್ತರವಾಗಿ ಹೇಳಿರುವ ವಿಷಯವನ್ನು ತಿಳಿದುಕೊಂಡು ಚೆನ್ನಾಗಿ ನಿಶ್ಚಯಿಸಿಕೊಂಡು (ಅದರಂತೆ) ಅನುಷ್ಠಾನಮಾಡಿದ ಯೋಗಿಯು ಮೀರುವನು, ಅದೆಲ್ಲವನ್ನೂ ದಾಟಿಹೋಗುವನು ಪರವಾದ ಎಂದರೆ ಹೆಚ್ಚಿನ ಈಶ್ವರನ ಸ್ಥಾನವನ್ನು, ಆದ್ಯವಾದ (ಸ್ಥಾನವನ್ನು) ಎಂದರೆ ಕಾರಣಬ್ರಹ್ಮವನ್ನು ನೇರುವನು ಎಂದರ್ಥ.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀ ಗೋವಿನ್ದಭಗವತ್ಪೂಜ್ಯಪಾದಶಿಷ್ಯಸ್ಯ
ಶ್ರೀಮಚ್ಛಂಕರಭಗವತಃ ಕೃತೌ ಶ್ರೀಮದ್ಭಗವದ್ಗೀತಾಭಾಷ್ಯೇ
ಅಷ್ಟಮೋಽಧ್ಯಾಯಃ ||

# ಎಂಟನೆಯ ಅಧ್ಯಾಯದ ಸಾರ

೧. ಅರ್ಜುನನು 'ಎಲೈ ಶ್ರೀಕೃಷ್ಣನೆ, ಬ್ರಹ್ಮವೆಂದರೇನು? ಅಧ್ಯಾತ್ಮವೆಂದರೆ ಯಾವದು? ಕರ್ಮವೆಂದರೆ ಯಾವದು? ಅಧಿಭೂತ, ಅಧಿದೈವ, ಅಧಿಯಜ್ಞ-ಇವುಗಳು ಯಾವವು? ಮರಣಕಾಲದಲ್ಲಿ ನಿನ್ನನ್ನು ಹೇಗೆ ಚಿಂತಿಸಬೇಕು?' ಎಂದು ಕೇಳಲು ಭಗವಂತನು ಹೀಗೆಂದು ಉತ್ತರವನ್ನು ಹೇಳಿದನು.

೨-೫ ಎಲ್ಲಕ್ಕೂ ಹೆಚ್ಚಿನ ಅಕ್ಷರವೇ ಬ್ರಹ್ಮವು; ಒಬ್ಬೊಬ್ಬರಲ್ಲಿಯೂ ಜೀವನಾಗಿ ತೋರಿಕೊಳ್ಳುವ ಅದರ ಸ್ವಭಾವವೇ ಅಧ್ಯಾತ್ಮವು, ಪ್ರಾಣಿಗಳ ಉತ್ಪತ್ತಿಗೆ ಹೇತುವಾಗಿರುವ ಶಾಸ್ತ್ರೋಕ್ತವಾದ ಹೋಮವೇ ಕರ್ಮವು, ನಾಶವಾಗುವ ಪ್ರಾಣಿಗಳೇ ಅಧಿಭೂತವು, ಸರ್ವರ ಕರಣಗಳಿಗೂ ಅನುಗ್ರಾಹಕನಾಗಿರುವ ಆದಿತ್ಯಾಂತರ್ಗತಪುರುಷನಾದ ಹಿರಣ್ಯಗರ್ಭನೇ ಅಧಿದೈವವು ದೇಹದಿಂದ ಮಾಡುವ ಯಜ್ಞಕ್ಕೆ ಅಭಿಮಾನಿಯಾದ ನಾನೇ ಅಧಿಯಜ್ಞವು ಮರಣಕಾಲದಲ್ಲಿ ನನ್ನನ್ನೇ ಚಿಂತಿಸುತ್ತಾ ದೇಹವನ್ನು ಬಿಡುವವರು ನನ್ನನ್ನೇ ಸೇರುವರು

೬-೭. "ಮನುಷ್ಯನು ಸಾಯುವ ಕಾಲದಲ್ಲಿ ಯಾವದರ ಚಿಂತೆಯಿಂದೊಡಗೂಡಿರುವನೋ ಅಂಥ ಜನ್ಮವನ್ನು ಹೊಂದುವನು. ಜೀವಿತಕಾಲದಲ್ಲಿ ಯಾವ ಭಾವವು ಯಾವಾಗಲೂ ಮನಸ್ಸಿನಲ್ಲಿ ಆಡುತ್ತಿರುವದೋ ಆ ಬಗೆಯ ಚಿಂತೆಯೇ ಮರಣಕಾಲದಲ್ಲಿಯೂ ಬರುವದು. ಆದ್ದರಿಂದ ಯಾವಾಗಲೂ ನನ್ನನ್ನೇ ಚಿಂತಿಸುತ್ತಿರು, ಹಾಗಾದರೆ ಕೊನೆಗೆ ನನ್ನನ್ನೇ ನಿಶ್ಚಯವಾಗಿ ಪಡೆಯುವೆ.

೮-೧೩ ಹೀಗೆ ಯಾವಾಗಲೂ ನನ್ನ ಚಿಂತೆಯನ್ನು ಅಭ್ಯಾಸಮಾಡುತ್ತಿರುವ ಯೋಗಿಯು ಮನಸ್ಸನ್ನು ಬಿಗಿಹಿಡಿದು, ಭಕ್ತಿಯಿಂದ ಕೂಡಿ, ಪ್ರಾಣವನ್ನು ಕ್ರಮಕ್ರಮವಾಗಿ ಮೇಲುಮೇಲಿನ ಭೂಮಿಕೆಯಲ್ಲಿ ನಿಲ್ಲಿಸಿಕೊಳ್ಳುತ್ತಾ ಮೇಲ್ದಲೆಗೆ ತಂದುಕೊಂಡು ಓಂಕಾರದ ಮೂಲಕ ಶಾಸ್ತ್ರೋಕ್ತವಿಶೇಷಣಗಳಿಂದ ಕೂಡಿರುವ ನನ್ನನ್ನು ಧ್ಯಾನಮಾಡುತ್ತಿರುವವನಿಗೆ ಉತ್ತಮಗತಿಯಾಗುವದು.

೧೪-೧೯ "ಹೀಗೆ ನಿತ್ಯಾಭ್ಯಾಸದಿಂದ ನನ್ನನ್ನು ಪಡೆದವರು ಮರಳಿ ಸಂಸಾರದುಃಖವನ್ನು ಅನುಭವಿಸುವದಿಲ್ಲ; ಮಿಕ್ಕವರು ಯಾವ ಲೋಕವನ್ನೇ ಪಡೆಯಲಿ, ಸಂಸಾರಕ್ಕೆ ಸಿಕ್ಕಿ ಬಿದ್ದೇ ಬೀಳುವರು, ಏಕೆಂದರೆ ಆ ಲೋಕಗಳೆಲ್ಲ ಕಾಲಕ್ಕೆ ಕಟ್ಟುಬಿದ್ದಿರುವದರಿಂದ ಶಾಶ್ವತವಾದ ಸುಖವನ್ನು ಕೊಡಲಾರವು ಬ್ರಹ್ಮನಿಗೆ ಹಗಲಾದರೆ ಪ್ರಾಣಿಗಳೆಲ್ಲ ಸೃಷ್ಟಿಯಾಗುವವು, ರಾತ್ರಿಯಾದರೆ ಅವನಲ್ಲಿಯೇ ಅಡಗಿಕೊಳ್ಳುವವು. ಯಾವ ಪ್ರಾಣಿಗಳಿಗೂ ಸಂಸಾರದಿಂದ ಬಿಡುಗಡೆಯಿಲ್ಲ

೨೦-೨೨ ಆದರೆ ಅಕ್ಷರನೆಂಬ ಹೆಸರಿನ ಪರಮಾತ್ಮನು ಸಕಲಕ್ಕೂ ಬೀಜವಾಗಿರುವ ಬ್ರಹ್ಮನ ನಿದ್ರಾವಸ್ಥೆಯಾದ ಅವ್ಯಕ್ತಕ್ಕಿಂತಲೂ ಅವ್ಯಕ್ತನಾಗಿರುತ್ತಾನೆ ಅವನು ಕಾಲಕ್ಕೆ ಕಟ್ಟುಬಿದ್ದವನಲ್ಲ ಅನನ್ಯಭಕ್ತಿಯಿಂದ ಅವನನ್ನು ಉಪಾಸನೆಮಾಡಿ ಕ್ರಮಮುಕ್ತಿಯನು ಪಡೆದವರು ಸಂಸಾರವನ್ನು ದಾಟುವರು.

೨೩-೨೮. ‘‘ ಕರ್ಮಿಗಳು ಸತ್ತಮೇಲೆ ಕೃಷ್ಣಮಾರ್ಗದಿಂದ ಚಂದ್ರಲೋಕಕ್ಕೆ ಹೋಗಿ ತಾವು ಮಾಡಿದ ಪುಣ್ಯದ ಫಲವನ್ನು ಅನುಭವಿಸಿದ ಬಳಿಕ ಮತ್ತೂ ಸಂಸಾರಕ್ಕೆ ತಿರುಗುವರು. ಪರಮಾತ್ಮನ ಉಪಾಸಕರು ಮಾತ್ರ ಶುಕ್ಲಮಾರ್ಗದಿಂದ ಹೋಗಿ ಕ್ರಮಮುಕ್ತಿಯನ್ನು ಪಡೆದು ಪರಮಾತ್ಮನನ್ನು ಸೇರಿಕೊಳ್ಳುವರು. ಹೀಗೆ ಕರ್ಮಕ್ಕೂ ಪರಮಾತ್ಮನ ಉಪಾಸನೆಗೂ ಹೆಚ್ಚಿನ ಅಂತರವಿರುವದು ವೇದಾಧ್ಯಯನ, ಯಜ್ಞ. ದಾನ, ತಪಸ್ಸು-ಈ ಕರ್ಮಗಳಲ್ಲಿ ಯಾವದನ್ನು ಎಷ್ಟು ಚೆನ್ನಾಗಿ ಮಾಡಿದರೂ ಅಂತ್ಯಕಾಲದಲ್ಲಿ ಮಾಡಿದ ಪರಮಾತ್ಮಧ್ಯಾನದಿಂದ ಆಗುವ ಫಲವು ಸಿಕ್ಕಲಾರದು. ಆದ್ದರಿಂದ ನೀನು ಇಂಥ ಉಪಾಸನೆಯನ್ನು ಮಾಡುವ ಯೋಗಿಯಾಗುವದಕ್ಕೆ ಪ್ರಯತ್ನಿಸು.’’

ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು

# ಅಧ್ಯಾತ್ಮಪ್ರಕಾಶ ಕಾರ್ಯಾಲಯ

## ಹೊಳೆನರಸೀಪುರ.

(ಸ್ಥಾಪಿತವಾದದ್ದು ೧೯೨೦)

ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಹೆಚ್ಚಿನ

ಆದರವನ್ನುಂಟುಮಾಡಬೇಕೆಂಬ **ಉದ್ದೇಶವುಳ್ಳ** ಈ ಸಂಸ್ಥೆಯು

೧. ಕನ್ನಡ, ಸಂಸ್ಕೃತ, ಇಂಗ್ಲಿಷು ಭಾಷೆಗಳಲ್ಲಿ **ಅನೇಕಗ್ರಂಥಗಳನ್ನು ಪ್ರಕಟಿಸಿರುತ್ತದೆ.** ಇವುಗಳಲ್ಲಿ ಭಾಷ್ಯ, ಟಿಪ್ಪಣಿ, ಪರಿಶಿಷ್ಟ-ಮುಂತಾದವುಗಳೊಡನೆ ಹೊರಕ್ಕೆ ಬಂದಿರುವ ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ-ಇವೂ ಸೇರಿವೆ.

**ಈಗ ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲೆಗೆ ಸೇರಿದಂತೆ ಶ್ರೀಶಂಕರಾಚಾರ್ಯರವರ ಎಲ್ಲಾ ಗ್ರಂಥರತ್ನಗಳನ್ನೂ ಸಮೂಲವಾಗಿ ಟಿಪ್ಪಣಿ ಮುಂತಾದ ಸೌಕರ್ಯಗಳೊಡನೆ ಕನ್ನಡಿಸಿ ಒಂದೊಂದಾಗಿ ಬೆಳಕಿಗೆ ಹಿಡಿಯುತ್ತಲಿದೆ.**

೨. ಅಧ್ಯಾತ್ಮಸಂಬಂಧವಾದ **ಗ್ರಂಥಕಾಲಕ್ಷೇಪ, ಉಪನ್ಯಾಸಗಳು, ಪುರಾಣಶ್ರವಣ, ಅನುಷ್ಠಾನ, ಉತ್ಸವಗಳು**-ಇವುಗಳನ್ನು ಏರ್ಪಡಿಸುತ್ತಿದೆ.

**ಪ್ರತಿದಿನವೂ** ಗ್ರಂಥಕಾಲಕ್ಷೇಪವಾಗುತ್ತಿರುತ್ತದೆ, ಪುರಾಣಶ್ರವಣವಾಗುತ್ತಿರುತ್ತದೆ; **ಪ್ರತಿಭಾನುವಾರವೂ** ಉಪನ್ಯಾಸಗಳು ಆಗುತ್ತಿರುವವು, **ಪ್ರತಿವರ್ಷವೂ** ಕೆಲವು ಅನುಷ್ಠಾನಗಳನ್ನು ಏರ್ಪಡಿಸಲಾಗುತ್ತಿದೆ, **ಶಂಕರಸಪ್ತಾಹವೆಂಬ** ತತ್ತ್ವಪ್ರಚಾರಣೆಯ ಉತ್ಸವವು ಈಗ ಹದಿನಾರು ವರ್ಷಗಳಿಂದ **ವರ್ಷಕ್ಕೊಂದು ಸಲ** ಕರ್ಣಾಟಕದ ಬೇರೆ ಬೇರೆಯ ಸ್ಥಳಗಳಲ್ಲಿ ನಡೆಯುತ್ತಿದೆ ಹಲವು ವಿದ್ವಾಂಸರುಗಳೂ ವೈದಿಕಶಿಖಾಮಣಿಗಳೂ ಈ ಕಾರ್ಯಗಳಲ್ಲಿ ಭಾಗವನ್ನು ವಹಿಸುತ್ತಿರುವರು.

೩. ಜನರ ಉಪಯೋಗಕ್ಕೆ ಒಂದು **ಅಧ್ಯಾತ್ಮಪುಸ್ತಕಭಂಡಾರವನ್ನೂ** ಒಂದು **ವಾಚನಾಲಯವನ್ನೂ** ಇಟ್ಟುಕೊಂಡಿದೆ.

ಪುಸ್ತಕಭಂಡಾರದಲ್ಲಿ ಕನ್ನಡ, ಸಂಸ್ಕೃತ, ಇಂಗ್ಲಿಷು, ಹಿಂದಿ-ಮುಂತಾದ ಭಾಷೆಗಳ ಅಧ್ಯಾತ್ಮಗ್ರಂಥಗಳು ಇರುತ್ತವೆ ಕಾರ್ಯಾಲಯದಲ್ಲಿ ಬಂದು ಇವುಗಳನ್ನು ಓದುವವರಿಗೆ ಸೌಕರ್ಯವನ್ನು ಕಲ್ಪಿಸುವೆವು.

೪ **ಅಧ್ಯಾತ್ಮವಿದ್ಯಾನಿಲಯವೊಂದನ್ನು** ಸ್ಥಾಪಿಸಿದೆ. ಇಲ್ಲಿ ಐದು ವರ್ಷಗಳ ಪಾಠಕ್ರಮವನ್ನು ಏರ್ಪಡಿಸಿದೆ. ವೇದಾಂತದ **ಸಿದ್ಧಾಂತತ್ರಯಗಳಲ್ಲಿಯೂ** ಪ್ರಪಂಚದ **ಬೇರೆಬೇರೆಯ ಮತಾಚಾರ್ಯರುಗಳ ಜೀವನಚರಿತ್ರೆ, ಉಪದೇಶಗಳು,** ಮತ್ತು **ಪರಮಾರ್ಥಸಾಧನಕ್ರಮ**- ಇವುಗಳ ವಿಷಯದಲ್ಲಿಯೂ **ಶಿಕ್ಷಣವನ್ನು ಕೊಡಿಸಲಾಗುವದು.**

ಯೋಗ್ಯರಾದ ವಿದ್ಯಾರ್ಥಿಗಳಿಗೆ ಊಟಕ್ಕೂ ವಸತಿಗೂ ಏರ್ಪಡಿಸಲಾಗುವದು.

೫. **ಕಾರ್ಯಾಲಯದ ಕಟ್ಟಡವು** ಸಿದ್ಧವಾಗಬೇಕಾಗಿದೆ. ಈಗ್ಗೆ ಒಂದು ಕುಟೀರವನ್ನೂ ಅಡಿಗೆಯ ಮನೆ, ಸ್ನಾನದ ಮನೆ- ಇವುಗಳನ್ನೂ ಕಟ್ಟಿಸಿದೆ. ಒಂದು ಭಾವಿಯನ್ನೂ ತೋಡಿಸಿದೆ.

ಸಭಾಂಗಣಕ್ಕೆ ಕಬ್ಬಿಣದ ತೊಲೆಗಳನ್ನು ತರಿಸಿಟ್ಟಿದೆ. ಉದಾರಮಹಾಶಯರುಗಳು

ನೀತಿಮತಬೋಧೆಯ ತರಗತಿಗಳು-ಮುಂತಾದ ಕಾರ್ಯಗಳಿಗೆ ಕಟ್ಟಡವು ಬೇಗನೆ ನಿರ್ಮಾಣ ವಾಗುವದು ಆವಶ್ಯಕವಾಗಿರುತ್ತದೆ.

೬. **ಅಧ್ಯಾತ್ಮಪ್ರಕಾಶವೆಂಬ ಮಾಸಪತ್ರಿಕೆಯು** ಹದಿನೈದು ವರ್ಷಗಳಿಂದ ನಡೆದು ಮುದ್ರಣಾಲಯದ ಸೌಕರ್ಯವಿಲ್ಲದೆ ಸದ್ಯಕ್ಕೆ ನಿಂತಿರುತ್ತದೆ. ಇದನ್ನು ಇಷ್ಟರಲ್ಲಿಯೇ ಮತ್ತೆ ಬೆಳಕಿಗೆ ಹಿಡಿಯಲಾಗುವದು

೭. ಅಧ್ಯಾತ್ಮವಿಚಾರದ **ಧರ್ಮಾರ್ಥವಾಙ್ಮಯದ ಕರಪತ್ರಗಳು** ಹಲವನ್ನು ಜನರಲ್ಲಿ ಹಂಚಲಾಗಿದೆ.

೮. ಇಲ್ಲಿ ನಡೆಯುವ ಕೆಲಸವು ಧರ್ಮಾರ್ಥವಾಗಿರುತ್ತದೆ ಬಂದ ಹಣವೆಲ್ಲ ಧಾರ್ಮಿಕಕಾರ್ಯಕ್ಕೇ ವಿನಿಯೋಗವಾಗುತ್ತಿದೆ. ಆಯವ್ಯಯಗಳ ಲೆಕ್ಕವನ್ನು ಬರೆಯಿಸಿ ಇಟ್ಟಿದೆ.

## ಜನರು ಮಾಡಬಹುದಾದ ಸಹಾಯ

(ಅ) **ಪುಸ್ತಕಪ್ರಕಟನೆಗೆ:** ೨೫೦ ರೂ ಅಥವಾ ಹೆಚ್ಚಾಗಿ ಕೊಟ್ಟವರನ್ನು **ಆಶ್ರಯದಾತ**ರೆಂದೂ ೧೦೦ ರೂ. ಅಥವಾ ಹೆಚ್ಚಾಗಿ ಕೊಟ್ಟವರನ್ನು **ಮಹಾಪೋಷಕ**ರೆಂದೂ ೫೦ ರೂ. ಅಥವಾ ಹೆಚ್ಚಿಗೆ ಕೊಟ್ಟವರನ್ನು **ಪೋಷಕ**ರೆಂದೂ ಕರೆಯುವೆವು ಪೋಷಕರೂ ಮಹಾಪೋಷಕರೂ ಇಷ್ಟಪಟ್ಟರೆ ತಾವು ಕೊಡುವಷ್ಟು ಹಣದ ಬೆಲೆಯ ಗ್ರಂಥಗಳನ್ನು ಕಾರ್ಯಾಲಯದಿಂದ ಪಡೆದುಕೊಳ್ಳಬಹುದು. ಆಶ್ರಯದಾತರಿಗೆ ನಮ್ಮ ಗ್ರಂಥಗಳನ್ನೆಲ್ಲ ಕಾಣಿಕೆಯಾಗಿ ಸಮರ್ಪಿಸುವೆವು.

(ಬ) **ಕಟ್ಟಡಕ್ಕೆ:** ೫೦೦೦ ರೂ ಗೆ ಕಡಿಮೆಯಿಲ್ಲದೆಕೊಟ್ಟವರನ್ನು **ಮಹಾಶ್ರಯದಾತ**ರೆಂದೂ ೩೦೦೦ ರೂ ಕೊಟ್ಟವರನ್ನು **ಆಶ್ರಯದಾತ**ರೆಂದೂ ೧೫೦೦ ರೂ ಕೊಟ್ಟವರನ್ನು **ಮಹಾಪೋಷಕ**ರೆಂದೂ ೭೫೦ ರೂ. ಗಳನ್ನು ಕೊಟ್ಟವರನ್ನು **ಪೋಷಕ**ರೆಂದೂ ೧೦೦ ರೂ. ಕೊಟ್ಟವರನ್ನು **ಪ್ರೋತ್ಸಾಹಕ**ರೆಂದೂ ಸಂಭಾವಿಸಲಾಗುವದು. ಸಹಾಯ ದ್ರವ್ಯವನ್ನು ಒಂದು ರಿಜಿಸ್ಟರಿನಲ್ಲಿ ಕ್ರಮವಾಗಿ ಬರೆದಿಟ್ಟಿರುತ್ತದೆ.

## ಕೃತಜ್ಞತಾ ಪ್ರದರ್ಶನ

ಮುಂದೆ ತೋರಿಸಿರುವ ಆಶ್ರಯದಾತರುಗಳು ಮತ್ತು ಪೋಷಕರ ಪಟ್ಟಿಯಲ್ಲಿ ಮುಖ್ಯವಾಗಿ ಕಾರ್ಯಾಲಯದ ಪ್ರಕಟನೆಗಳಿಗೆ ಅಥವಾ ಪತ್ರಿಕೆಗೆ ಪ್ರೋತ್ಸಾಹವನ್ನು ಕೊಟ್ಟವರು, ಪುಸ್ತಕಭಂಡಾರಕ್ಕೆ ಪುಸ್ತಕಗಳನ್ನು ಕೊಟ್ಟವರು, ಕಾರ್ಯಾಲಯಕ್ಕೆ ನೆಲಗಟ್ಟನ್ನು ದಾನಮಾಡಿರುವವರು– ಇವರ ಹೆಸರನ್ನು ಮಟ್ಟಿಗೆ ಸೇರಿಸಿರುತ್ತದೆ. ಕಾರ್ಯಾಲಯದ ಕಟ್ಟಡಕ್ಕೆ ಧನಸಹಾಯಮಾಡಿರುವವರ ಹೆಸರನ್ನು ಬೇರೆಯಾಗಿ ಸಿದ್ಧವಾಗುವ ವರದಿಯಲ್ಲಿ ಪ್ರಕಟಿಸಲಾಗುವದು.

ಕಟ್ಟಡ, ವಿದ್ಯಾಲಯ, ಪುಸ್ತಕಪ್ರಕಟನೆ, ಪುಸ್ತಕಭಂಡಾರ, ಮಾಸಪತ್ರಿಕೆ, ಧರ್ಮಾರ್ಥವಾಙ್ಮಯ– ಇವುಗಳಲ್ಲಿ ಯಾವದೊಂದಕ್ಕೆ ಕಳುಹಿಸುವ ಸಹಾಯ ಧನವನ್ನೂ ಅದು ಎಷ್ಟೇ ಅಲ್ಪವಾಗಿದ್ದರೂ ಮಾಸಪತ್ರಿಕೆಯಲ್ಲಿ ಪ್ರಕಟಿಸಿ ಒಂದು ರಿಜಿಸ್ಟರಿನಲ್ಲಿ ಬರೆದಿಟ್ಟಿರುತ್ತದೆ. ಕಾರ್ಯಾಲಯಕ್ಕೆ ಹಣವನ್ನು ಕಳುಹಿಸುವವರು ತಮ್ಮ ಸಹಾಯವನ್ನು ಯಾವ ಭಾಗಕ್ಕೆ ಉಪಯೋಗಿಸಬೇಕೆಂಬುದನ್ನು ದಯವಿಟ್ಟು ತಿಳಿಸಬೇಕಾಗಿ ಕೋರಿದೆ. ಅನಿರ್ದಿಷ್ಟವಾಗಿ ಬರುವ ಹಣವನ್ನು ಕಾರ್ಯಾಲಯದ ಅಧ್ಯಕ್ಷರು ಸೂಕ್ತವೆಂದು ತೋರುವ ನಿಧಿಗೆ ಉಪಯೋಗಿಸುವರು.

## ಕಾರ್ಯಾಲಯದ ಆಶ್ರಯದಾತರುಗಳು*

೧ ರಾಜಧರ್ಮಪ್ರಸಕ್ತ ಏ ಆರ್. ನಾಗೇಶ್ವರ ಅಯ್ಯರ್‌ರವರು, ಬಿ.ಎ..ಬಿ.ಎಲ್.,
ರಿಟೈರ್ಡ್ ಹೈಕೋರ್ಟು ಜಡ್ಜ್, ಬೆಂಗಳೂರು ಸಿಟಿ.
೨ ಶ್ರೀಯುತ ಬಿ ನಂಜುಂಡಯ್ಯನವರು, ಬಿ ಎ ,ಬಿ ಎಲ್., ಅಡ್ವೊಕೇಟ್,
ಬೆಂಗಳೂರು ಸಿಟಿ.
೩. ,, ಪಿ. ಎನ್. ನರಸಿಂಹಯ್ಯನವರು, ಪ್ಲೀಡರ್, ಹೊಳೆನರಸೀಪುರ.
೪. ,, ಗರಡಿ ರಾಚಪ್ಪನವರು, ಬೆಂಗಳೂರು.
೫ ,, ಅರಕಲಗೂಡು ಶ್ರೀಕಂಠಯ್ಯನವರು, ಪ್ಲೀಡರ್, ಹೊಳೆನರಸೀಪುರ.
೬. ,, ವೈ.ಎಸ್. ಹಿರಿಯಣ್ಣಯ್ಯನವರು, ಗ॥ಕಂಟ್ರಾಕ್ಟರ್,ಬೆಂಗಳೂರು.
೭. ,, ಪಿ.ಎಸ್. ಸೂರ್ಯನಾರಾಣಪ್ಪನವರು, ಸರ್ವೆಯರ್, ಬೆಂಗಳೂರು.
೮. ,, ಎಚ್. ವಿ ರಂಗರಾವ್, ಜಮಿಾನ್‌ದಾರರು, ಹೊಳಲುಕೆರೆ.
೯. ದಿವಂಗತ ಆರ್. ಎಸ್. ಶ್ರೀನಿವಾಸಯ್ಯನವರು, ಪ್ಲೀಡರ್, ಹೊಳೆನರಸೀಪುರ.

### ಮಹಾಪೋಷಕರುಗಳು

೧. ಶ್ರೀಯುತ ಕೆ. ಶ್ರೀಕಂಠಯ್ಯನವರು, ಮೇಜರ್ ಸ್ಟಾಟಿಸ್ಟಿಕಲ್ ಆಫೀಸರ್,
ಬಂಗಾಳ ನಾಗಪುರ ರೈಲ್ವೆ, ಕಲಕತ್ತ.
೨. ,, ಆರ್. ರಾಮಸ್ವಾಮಯ್ಯನವರು, ಪ್ಲೀಡರ್, ಹೊಳೆನರಸೀಪುರ.
೩. ,, ದಿವಂಗತ ಕೆ ನಾರಾಯಣಸ್ವಾಮಿ, ಬಿ.ಇ., ಅ॥ ಇಂಜನಿಯರ್.

### ಪೋಷಕರುಗಳು

೧. ಆಸ್ಥಾನಮಹಾವಿದ್ವಾನ್ ವೈ ಚಂದ್ರಶೇಖರಶಾಸ್ತ್ರಿಗಳವರು, ಮೈಸೂರು.
೨ ಆಸ್ಥಾನವಿದ್ವಾನ್ ಬ್ರ॥ ಶ್ರೀ ಎಸ್ ವಿಠಲಶಾಸ್ತ್ರಿಗಳು, ವೇದಾಂತಶಿರೋಮಣಿ,
ವೇದಾಂತವಿಶಾರದ, ವಿದ್ಯಾವಾಚಸ್ಪತಿ, ಮೈಸೂರು.
೩. ವೇ॥ ಡಿ. ನಂಜುಂಡಶಾಸ್ತ್ರಿಗಳು, ದೊಡ್ಡಹೆಜ್ಜಾಜಿ, ದೊಡ್ಡಬಳ್ಳಾಪುರ ತಾ॥
೪. ಶ್ರೀಯುತ ಗುರುಮೂರ್ತಪ್ಪನವರು, ನಾಟಕಮಂಡಲಿ.
೫. ,, ಎಸ್ ಎ. ವೆಂಕಟಸುಬ್ಬಯ್ಯನವರು, ರಿ॥ ಕನ್ನಡ ಪಂಡಿತರು,
ಹರಪನಹಳ್ಳಿ, ಬಳ್ಳಾರಿ.
೬. ,, ಓಂಕಾರಪ್ಪ ವೀರಭದ್ರಪ್ಪ, ಅರಳಿಕಟ್ಟೆ, ಇಲಕಲ್ಲ, ಬಿಜಾಪುರ.
೭. ಶ್ರೀಗುರುಶುಕಾಚಾರ್ಯ ಆಶ್ರಮ, ಮಾಟಲದಿಣ್ಣೆ
ರಾಯಚೂರು ಜಿಲ್ಲಾ, ಹೈದರಾಬಾದ್ ದಖನ್.
೮. ಶ್ರೀಯುತ ಎಸ್ ವಿ ಗಣಪತಿ, ಎ.ಎಮ್.ಐ.ಇ.ಇ.,
ಕನ್ಸಲ್ಟಿಂಗ್ ಇಂಜನಿಯರ್, ಮದರಾಸ್.
೯. ,, ಧರ್ಮಪಾಲಯ್ಯನವರು, ಮಂಗಳೂರು.
೧೦. ,, ಬಿ. ಹೆಚ್. ಮುನಿಸ್ವಾಮಿರಾವ್, ಬೆಂಗಳೂರು.
೧೧. ,, ಕೃಷ್ಣಗೌಡ ಹನುಮಂತಗೌಡ ಆದಪ್ಪಗೌಡರು, ಹುಲುಕೋಟಿ.
೧೨. ಶ್ರೀಮತಿ ಸರೋಜಮ್ಮನವರು, ಹೊಳೆನರಸೀಪುರ.

---

* ದಾವಣಗೆರೆಯ ಪ್ರಸಿದ್ಧ ಅರಳಿವ್ಯಾಪಾರಿಗಳಾಗಿದ್ದ ಕೈಲಾಸವಾಸಿ ಮಾಗಾನಹಳ್ಳಿ ದೊಡ್ಡಬಸಪ್ಪನವರು ಕಾರ್ಯಾಲಯಕ್ಕೆ ಬೀಜಭೂತವಾಗಿ ಮೊಟ್ಟಮೊದಲು ಆಶ್ರಯಧನವನ್ನು ಕೊಟ್ಟರು

* ಹಿಂದಿನ ಬೆಲೆಪಟ್ಟಿಗಳೆಲ್ಲ ರದ್ದಾಗಿವೆ — ಜೂಲೈ ೧೯೪೬ *

**ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ದೊರಕುವ**

# ಅಗ್ಗವಾದ ಮೇಲ್ತರದ ಗ್ರಂಥಗಳ ಬೆಲೆಪಟ್ಟಿ

## ಅಧ್ಯಾತ್ಮ ಗ್ರಂಥಾವಳಿ

### ಉಪನಿಷತ್ತುಗಳು

(ಸಂಸ್ಕೃತಮೂಲ, ಅರ್ಥ, ಶಂಕರಭಾಷ್ಯಾನುವಾದ, ಟಿಪ್ಪಣಿ, ಸಾರ, ಕ್ಲಿಷ್ಟಪದಗಳ ಅರ್ಥ, ವಿಷಯವಿವೇಚಕಪೀಠಿಕೆ-ಮುಂತಾದ ವಿವರಗಳೊಡನೆ)

| ಪುಸ್ತಕ | ಬೆಲೆ ರೂ. ಆ. ಪೈ. | ಅಂ. ಹಾ. ರೂ. ಆ. ಪೈ. |
|---|---|---|
| ೧. ಈಶಾವಾಸ್ಯೋಪನಿಷತ್ತು (ಸಂಹಿತೋಪನಿಷತ್ತು) | ೦ ೬–೦ | ೦–೦–೯ |
| ೨. ಕೇನೋಪನಿಷತ್ತು (ತಲವಕಾರೋಪನಿಷತ್ತು) | ೦–೯–೦ | ೦–೧–೩ |
| ೩. ಕಠೋಪನಿಷತ್ತು (ಕಾಠಕೋಪನಿಷತ್ತು) | ೧–೨–೦ | ೦–೧–೯ |
| ೪. ಮುಂಡಕೋಪನಿಷತ್ತು | ೦–೧೨–೦ | ೦–೧–೩ |
| ೫. ಈಶ ಮತ್ತು ಮುಂಡಕ | ೧–೪–೦ | ೦–೧–೯ |
| ೬. ಪ್ರಶ್ನೋಪನಿಷತ್ತು | ೧–೮–೦ | ೦–೧–೯ |
| ೭. ಮಾಂಡೂಕ್ಯೋಪನಿಷತ್ತು (ಆಗಮಪ್ರಕರಣಸಹಿತ) | (ಪ್ರತಿಗಳು ಮುಗಿದಿವೆ) | |
| ೮. ಅಲಾತಶಾಂತಿಪ್ರಕರಣ (ಸಾದ) | ೧–೨–೦ | ೦–೧–೯ |
| ೯. ,, (ದಪ್ಪರಟ್ಟು) | ೧–೪–೦ | ೦–೧ ೯ |

### ಭಗವದ್ಗೀತೆ

| | | |
|---|---|---|
| ೧೦. ಗೀತೆ ಮೂಲ (ಪಾರಾಯಣಕ್ಕೆ) | (ಪ್ರತಿಗಳು ಮುಗಿದಿವೆ) | |
| ೧೧. ಗೀತೆ ಸಾರ್ಥ (ಕ್ಯಾಲಿಕೊ) | ೦–೮–೦ | ೦–೨–೩ |
| ೧೨. ಗೀತೆ ಸಭಾಷ್ಯ (ಅರ್ಧ ಕ್ಯಾಲಿಕೊ) | (ಪ್ರತಿಗಳು ಮುಗಿದಿವೆ) | |
| ,, ೪ರಿಂದ ೧೨ ಅಧ್ಯಾಯಗಳು | ೨ ೧೨–೦ | ೦–೩–೩ |
| ೧೩. ಗೀತೆ ಸಭಾಷ್ಯ (ಪೂರಕ್ಯಾಲಿಕೊ) | (ಪ್ರತಿಗಳು ಮುಗಿದಿವೆ) | |
| ೧೪. ಗೀತೆ ಸಭಾಷ್ಯ (೧೩ನೆಯ ಅಧ್ಯಾಯದಿಂದ ಕೊನೆಯವರೆಗೆ) | ೩–೦–೦ | ೦–೩–೩ |

### ಬ್ರಹ್ಮಸೂತ್ರ

| | | |
|---|---|---|
| ೧೫. ಬ್ರಹ್ಮಸೂತ್ರ ಸಭಾಷ್ಯ (ಅಧಿಕರಣ ೫ ಪೂರ) ಅರ್ಧಕ್ಯಾಲಿಕೊ | (ಪ್ರತಿಗಳು ಮುಗಿದಿವೆ) | |
| ೧೬. ,, ಪೂರಕ್ಯಾಲಿಕೊ | ೪–೮–೦ | ೦–೬–೦ |
| ೧೭. ,, ಉತ್ತಮಪ್ರತಿ | ೭–೦–೦ | ೦–೧೦–೦ |

ಅಂ. ಹಾ. ಆಯಾ ಪುಸ್ತಕದ ಸುಮಾರು ಅಂಚೆಹಾಸಲು.

**ಮ್ಯಾನೇಜರ್, ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ.**

## ಪ್ರಸ್ಥಾನತ್ರಯ ವಿವರಣೆ

| ಪುಸ್ತಕ | ಬೆಲೆ ರೂ.ಆ.ಪೈ. | ಅಂ. ಹಾ. ರೂ.ಆ.ಪೈ. |
|---|---|---|
| ೧೮. ಕೇನೋಪನ್ಯಾಸಮಂಜರಿ | ೦-೬-೦ | ೦-೧-೩ |
| ೧೯. ಮುಂಡಕೋಪನ್ಯಾಸಮಂಜರಿ | ೦-೧೦-೦ | ೦-೧-೩ |
| ೨೦. ಕೇನೋಪನ್ಯಾಸ ಮತ್ತು ಮುಂಡಕೋಪನ್ಯಾಸಮಂಜರಿ | ೧-೦-೦ | ೦-೧-೬ |
| ೨೧. ವೇದಾಂತದರ್ಶನ (ಬ್ರಹ್ಮಸೂತ್ರದ ಮೊದಲನೆಯ ಪರಿಚಯ) | ೦-೫-೦ | ೦-೦-೯ |

## ಪ್ರಕರಣಗಳು

| | | |
|---|---|---|
| ೨೨ ಉಪದೇಶಸಾಹಸ್ರಿ ಗದ್ಯಭಾಗ (ಸಾಧಾರಣ) | ೧-೦-೦ | ೦-೧-೯ |
| ೨೩ ಉಪದೇಶಸಾಹಸ್ರಿ ಗದ್ಯ (ಅರ್ಧಕ್ಯಾಲಿಕೊ) | ೧-೪-೦ | ೦-೨-೩ |
| ೨೪. ಉಪದೇಶಸಾಹಸ್ರಿ ಪದ್ಯ (ಅರ್ಧಕ್ಯಾಲಿಕೊ) | ೧-೮-೦ | ೦-೨-೯ |
| ೨೫. ಉಪದೇಶಸಾಹಸ್ರಿ ಪದ್ಯ (ಪೂರಕ್ಯಾಲಿಕೊ) | ೨-೦-೦ | ೦-೬-೦ |
| ೨೬ ಪರಮಾರ್ಥಚಿಂತಾಮಣಿ (ಅರ್ಧಕ್ಯಾಲಿಕೊ) | (ಪ್ರತಿಗಳು ಮುಗಿದಿವೆ) | |
| ೨೭ ಪರಮಾರ್ಥಚಿಂತಾಮಣಿ (ಪೂರಕ್ಯಾಲಿಕೊ) | ೪-೪-೦ | ೦-೬-೦ |
| ೨೮. ಉಪನಿಷತ್ತುಗಳ ಮೊದಲನೆಯ ಪರಿಚಯ | ೦-೬-೦ | ೦-೧-೩ |
| ೨೯. ಶಂಕರಸಿದ್ಧಾಂತ (ಸಾಧಾರಣ) | ೦-೮-೦ | ೦-೧-೩ |
| ೩೦ ಶಂಕರಸಿದ್ಧಾಂತ (ದಪ್ಪರಟ್ಟು) | ೦-೧೦-೦ | ೦-೧-೯ |
| ೩೧. ವೇದಾಂತಬಾಲಬೋಧೆ (ಪ್ರಾತಃಸ್ಮರಣಸ್ತೋತ್ರವಿವರಣ) | ೦-೫-೦ | ೦-೦-೯ |
| ೩೨. ವೇದಾಂತಪ್ರವೇಶಿಕೆ (ಅದ್ವೈತಪಂಚರತ್ನದ ವಿವರಣ) | ೦-೬-೦ | ೦-೦-೯ |
| ೩೩ ಲಕ್ಷ್ಮೀನರಸಿಂಹಪಂಚರತ್ನ (ಅರ್ಥವಿವರಣಸಹಿತ) | ೦-೪-೦ | ೦-೦-೯ |
| ೩೪. ಮೋಹಮುದ್ಗರ (ಭಜಗೋವಿಂದಸ್ತೋತ್ರ) | ೦-೧-೬ | ೦-೦-೯ |
| ೩೫. ಸವಾರ್ತಿಕಪಂಚೀಕರಣ (ಸಾರ್ಥ) | ೦-೬-೦ | ೦-೦-೯ |
| ೩೬. ಆತ್ಮಬೋಧೆ (ಭಾವಾರ್ಥ, ಟಿಪ್ಪಣಿ, ಪರಿಶಿಷ್ಟ) | ೦-೩-೦ | ೦-೦-೯ |
| ೩೭. ದೃಗ್ದೃಶ್ಯವಿವೇಕ (ಅರ್ಥವಿವರಣೆಗಳೊಡನೆ) | ೦-೩-೦ | ೦-೦-೯ |
| ೩೮. ವಾಕ್ಯವೃತ್ತಿ (ಮೂಲ, ಅರ್ಥ ಟಿಪ್ಪಣಿ, ಪರಿಶಿಷ್ಟಸಹಿತ) | ೦-೪-೦ | ೦-೦-೯ |
| ೩೯. ಸ್ವಾತ್ಮಪ್ರಕಾಶಿಕೆ ( ,, ,, ) | ೦-೩-೦ | ೦-೦-೯ |
| ೪೦. ಶಂಕರಮಹಾಮನನ | ೦-೨-೬ | ೦-೦-೯ |
| ೪೧. ವೇದಾಂತಡಿಂಡಿಮ (ಭಾವಾರ್ಥಸಹಿತ) | ೦-೪-೦ | ೦-೦-೯ |
| ೪೨. ಅಪರೋಕ್ಷಾನುಭೂತಿ (ಭಾವಾರ್ಥ, ವಿವರಣಸಹಿತ) | ೦-೧೨-೦ | ೦-೧-೯ |
| ೪೩. ಅಪರೋಕ್ಷಾನುಭೂತಿ (ದಪ್ಪರಟ್ಟು) | ೦-೧೫-೦ | ೦-೨-೩ |
| ೪೪. ಆತ್ಮವಿದ್ಯಾವಿಲಾಸ (ಭಾವಾರ್ಥಸಹಿತ) | ೦-೪-೬ | ೦-೦-೯ |
| ೪೫ ಶ್ರೀರಾಮಹೃದಯ (ಅರ್ಥ-ಸಾರಸಹಿತ) | ೦-೧-೬ | ೦-೦-೯ |
| ೪೬. ಅಧ್ಯಾತ್ಮವೆಂದರೇನು ? | ೦-೧-೬ | ೦-೦-೯ |
| ೪೭. ವೇದಾಂತವಿಚಾರದ ಇತಿಹಾಸ | ೧-೧೨-೦ | ೦-೨-೯ |

ಪುಸ್ತಕಕ್ಕೆ ಮೊಬಲಗು ಕಳುಹಿಸುವವರು ಮರೆಯದೆ ಅಂಚೆಯ ಹಾಸಲನ್ನೂ ಸೇರಿಸಿ ಕಳುಹಿಸಬೇಕು.

**ಮ್ಯಾನೇಜರ್, ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ.**

## ಪ್ರಕರಣಗಳು

| ಪುಸ್ತಕ | ಬೆಲೆ<br>ರೂ ಆ ಪೈ | ಅಂ ಹಾ.<br>ರೂ ಆ ಪೈ |
|---|---|---|
| ೪೮. ಸದ್ಗುರುವಿನ ಅನುಗ್ರಹ | ೦-೨-೦ | ೦-೦-೯ |
| ೪೯. ಸರ್ವೇಷ್ಟಸಿದ್ಧಿ (ತಿದ್ದಿದ ೨ನೆಯ ಸಂಸ್ಕರಣ) | ೦-೬-೦ | ೦-೦-೯ |

## ಸ್ತೋತ್ರ, ಪದ, ಪದ್ಯ.

| | | |
|---|---|---|
| ೫೦ ವಾಗ್ದೇವೀಸ್ತೋತ್ರ (ಭಜನೆಗೆ) | (ಪ್ರತಿಗಳು ಮುಗಿದಿವೆ) | |
| ೫೧ ಗಣೇಶಾಷ್ಟಕ (ಭಾವಾರ್ಥವಿವರಣೆಗಳೊಡನೆ) | ೦-೩-೦ | ೦-೦-೯ |
| ೫೨. ಭಗವಚ್ಛರಣಸ್ತೋತ್ರ (ಭಾವಾರ್ಥವಿವರಣಗಳೊಡನೆ) | ೦-೫-೦ | ೦-೦-೯ |
| ೫೩. ಹರಿಶರಣಾಷ್ಟಕ (ಭಾವಾರ್ಥವಿವರಗಳೊಡನೆ) | ೦-೨-೦ | ೦-೦-೯ |
| ೫೪. ಮುಕುಂದಮಾಲಾಸ್ತೋತ್ರ (ಭಾವಾರ್ಥಸಹಿತ) | ೦-೨-೬ | ೦-೦-೯ |
| ೫೫ ಭೀಷ್ಮಸ್ತವರಾಜ (ಅರ್ಥವಿವರಣೆಗಳ ಸಮೇತ) | ೦-೪-೦ | ೦-೦-೯ |
| ೫೬. ಶ್ರೀರಾಮಗೀತಾ (ಅರ್ಥವಿವರಣೆಗಳ ಸಹಿತ) | ೦-೩-೦ | ೦-೦-೯ |
| ೫೭. ಶಿವನಾಮಷ್ಟೋತ್ತರಶತಕ (ಅರ್ಥವಿವರಣೆಗಳೊಡನೆ) | ೦-೪-೦ | ೦-೦-೯ |
| ೫೮. ಶಿವಕವಚ (ಅರ್ಥವಿವರಣಗಳೊಡನೆ) | ೦-೪-೬ | ೦-೦-೯ |
| ೫೯. ಗುರುಭಕ್ತಿಸಾರ (ಕುಸುಮಷಟ್ಪದಿ, ಟಿಪ್ಪಣಿಸಹಿತ) | ೦-೫-೦ | ೦-೦-೯ |
| ೬೦. ಅಧ್ಯಾತ್ಮಗೀತಾವಳಿ (ಹಾಡು, ಕೀರ್ತನೆ) | ೦-೪-೦ | ೦-೦-೯ |
| ೬೧. ಚಿದಾನಂದರಗಳೆ (ಟಿಪ್ಪಣಿಸಹಿತ) | ೦-೨-೦ | ೦-೦-೯ |
| ೬೨. ಚಿದಾನಂದಸವಾಯಿ (ಟಿಪ್ಪಣಿಸಹಿತ) | ೦-೪-೦ | ೦-೦-೯ |

## ಕಥೆಗಳು

| | | |
|---|---|---|
| ೬೩. ವೇದಾಂತಕಥಾವಳಿ (ತಿದ್ದಿದ ೨ನೆಯ ಸಂಸ್ಕರಣ) | ೦-೫-೦ | ೦-೦-೯ |
| ೬೪. ವಿಲಕ್ಷಣಮೌನಿ (ಸಂಭಾಷಣೆ) | ೦-೨-೬ | ೦-೦-೯ |
| ೬೫ ಲಕ್ಷಣಶಾಸ್ತ್ರ ಉರುಫ್ ಹಸೇ(ತರ್ಕವೇದಾಂತಗಳ ಸಂಬಂಧ) | ೦-೨-೬ | ೦-೦-೯ |
| ೬೬. ಸಮುದ್ರಮಥನ (ರಹಸ್ಯಾರ್ಥದೊಡನೆ) | ೦-೫-೦ | ೦-೦-೯ |

## ಶ್ರೀವಿವೇಕಾನಂದಸ್ವಾಮಿಗಳ ಉಪನ್ಯಾಸಗಳು

| | | |
|---|---|---|
| ೬೭. ವಿಶ್ವಧರ್ಮಸಮ್ಮೇಳನದಲ್ಲಿ (ಚಿಕಾಗೊ) | ೦-೫-೬ | ೦-೧-೩ |
| ೬೮. ವೇದಾಂತೋಪನ್ಯಾಸಗಳು (ನ್ಯೂಯಾರ್ಕ್) | ೦-೮-೦ | ೦-೧-೩ |
| ೬೯. ವೇದಾಂತೋಪನ್ಯಾಸಗಳು (ಅವಶಿಷ್ಟ) | (ಪ್ರತಿಗಳು ಮುಗಿದಿವೆ) | |
| ೭೦. ಜ್ಞಾನಯೋಗ (೧ನೆಯ ಭಾಗ) | ೦-೧೦-೦ | ೦-೧-೩ |
| ೭೧. ಜ್ಞಾನಯೋಗ (೨ನೆಯ ಭಾಗ) | ೦-೧೦-೦ | ೦-೧-೯ |
| ೭೨. ಭಕ್ತಿಯೋಗ (ಮರಿಹಾಳೆ) | ೦-೧೦-೦ | ೦-೧-೯ |
| ೭೩. ಭಕ್ತಿಯೋಗ (ದಪ್ಪರಟ್ಟು) | ೦-೧೪-೦ | ೦-೨-೩ |

ಅಂ ಹಾ= ಸುಮಾರು ಅಂಚೆಹಾಸಲು. ಗ್ರಂಥಗಳಿಗೆಲ್ಲ ಅಂಚೆಯ ಹಾಸಲು ಪ್ರತ್ಯೇಕ.

---

**ಮ್ಯಾನೇಜರ್, ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ.**

**All Previous Price Lists Cancelled — July 1946**

## ಇತರ ಪುಸ್ತಕಗಳು

| | | | |
|---|---|---|---|
| ೭೪ | ಧಮ್ಮಪದ (ಬುದ್ಧಗೀತೆ) | ೦-೧೨-೦ | ೦-೧-೯ |
| ೭೫. | ತತ್ತ್ವಸಮಾಸ (ಸಾಂಖ್ಯಸೂತ್ರಗಳ ವಿವರಣ) | ೦-೪-೬ | ೦-೧-೯ |
| ೭೬. | ಅಧ್ಯಾತ್ಮಸೂಕ್ತಿಮಂಜರಿ ಶ್ರೀಶಿವಾನಂದಸರಸ್ವತೀಕೃತ, ಭಾಗ ೧ | ೦-೭-೦ | ೦-೧-೯ |
| ೭೭. | ಅಧ್ಯಾತ್ಮಸೂಕ್ತಿಮಂಜರಿ (ದಪ್ಪರಟ್ಟು) | ೦-೯-೨ | ೦-೨-೯ |
| ೭೮. | ಅಧ್ಯಾತ್ಮಸೂಕ್ತಿಮಂಜರಿ ಭಾಗ ೨ | ೦-೮-೦ | ೦-೨-೩ |

## संस्कृत

| | | | |
|---|---|---|---|
| ७९. | मूलाविद्यानिरास· (श्रीशंकरहृदयम्) | २-८-० | ०-४-० |
| ८० | ,, पूर्णकयालिको | ४-४-० | ०-६-० |
| ८१ | ईशावास्योपनिषत् (शांकरभाष्यसहिता) सुब्रह्मण्यशर्मविरचित टिप्पणीसमेता | ०-७-० | ०-०-९ |
| ८२. | वेदान्तडिण्डिम· (भावबोधिनीसहित:) | ०-८-० | ०-०-९ |

## English

| | | | | | | | |
|---|---|---|---|---|---|---|---|
| 83 | **Words of Wisdom** By Sri Swami Rajeswaranandaji WRAPPER EDN | 0 | 14 | 0 | 0 | 1 | 6 |
| 84· | , CALICO EDN. | 1 | 8 | 0 | 0 | 6 | 0 |
| 85 | **Narada's Aphorisms on Bhakti·** With Translation and Notes | 0 | 5 | 0 | 0 | 0 | 9 |
| 86 | **Avasthatraya or the Unique Method of Vedanta:** | 0 | 4 | 0 | 0 | 0 | 9 |
| 87 | **Minor Works of Sri Sankaracharya.** | 0 | 10 | 0 | 0 | 1 | 3 |
| 88 | **Vedanta or the Science of Reality;** By K. A Krishnaswamy Iyer B A. | 12 | 0 | 0 | 0 | 10 | 0 |

## ಇತರ ಗ್ರಂಥಗಳು

| | | | |
|---|---|---|---|
| ೧. | ಅದ್ವೈತಸಿದ್ಧಾಂತ | ೦-೧-೦ | ೦-೦-೯ |
| ೨. | ಜಿಜ್ಞಾಸುಗಳ ತೊಡಕು | ೦-೪-೨ | ೦-೦-೯ |

ಗ್ರಂಥಗಳಿಗೆ ಅಂಚೆಹಾಸಲನ್ನೂ ರಿಜಿಸ್ಟ್ರೇಷನ್ ಖರ್ಚು ೩ ಆ. ಯನ್ನೂ ಸೇರಿಸಿ ಕಳುಹಿಸಬೇಕು. ನೀವು ಕೇಳುವ ರಟ್ಟಿನ ಪುಸ್ತಕವಿಲ್ಲದಿದ್ದರೆ ಬೇರೆಯ ರಟ್ಟಿನ ಪುಸ್ತಕಗಳನ್ನು ಕಳುಹಿಸಬೇಕೆ, ಬೇಡವೆ ? ತಪ್ಪದೆ ತಿಳಿಸಿರಿ. ವಿಳಾಸವನ್ನು ಹೆಸರು, ಊರು, ಪೋಸ್ಟಾಫೀಸು, ತಾಲ್ಲೂಕು, ಜಿಲ್ಲೆ ಇವುಗಳನ್ನು ಹುಟ್ಟಕ್ಷರದಲ್ಲಿ ಸ್ಪಷ್ಟವಾಗಿ ಬರೆಯಿರಿ.

POSTAGE & REGISTRATION EXTRA

# THE ADHYATMA PRAKASHA OFFICE,

HOLENARSIPUR, Mysore Railway, (*INDIA*).

ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.

# ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಈ ಗ್ರಂಥರತ್ನಮಾಲೆಯಲ್ಲಿ ಕೆಳಗೆ ಕಂಡ ಅಮೂಲ್ಯವಾದ ಗ್ರಂಥಗಳು ಒಂದೊಂದಾಗಿ ಪ್ರಕಟವಾಗುವವು. ಇವುಗಳಲ್ಲಿ ಪ್ರತಿಯೊಂದರಲ್ಲಿಯೂ **ಸಂಸ್ಕೃತಮೂಲ,** (ಉಪನಿಷತ್ತಿನ, ಗೀತೆಯ, ಮತ್ತು ಶ್ರೀ ಶಂಕರಾಚಾರ್ಯರವರ ಭಾಷ್ಯಾದಿಗಳು ಕನ್ನಡ ಅಕ್ಷರದಲ್ಲಿ) ಕನ್ನಡದ **ಅನುವಾದ, ಟಿಪ್ಪಣಿ, ಗ್ರಂಥದ ಸಾರ, ವಿಮರ್ಶಾತ್ಮಕ ಪೀಠಿಕೆ, ಪಾರಿಭಾಷಿಕ ಶಬ್ದಗಳ** ಅರ್ಥವನ್ನು ತಿಳಿಸುವ **ಶಬ್ದಾನುಕ್ರಮಣಿಕೆ**–ಮುಂತಾದ ಹಲವು ಸೌಕರ್ಯವಿಶೇಷಗಳಿರುವವು.

## ಉಪನಿಷದ್ಭಾಷ್ಯಗಳು

೧. **ಈಶ, ಕೇನ, ಕಠ:** ಈ ಉಪನಿಷತ್ತುಗಳ ಭಾಷ್ಯ ಬೆಲೆ ೫ರೂ ಅಂ.ಹಾ. ೯ಆಣೆ.

೨. **ಮುಂಡಕ, ಪ್ರಶ್ನ, ಮತ್ತು ಮಾಂಡೂಕ್ಯ ಭಾಷ್ಯ** ಶ್ರೀ ಗೌಡಪಾದರವರ ಕಾರಿಕೆಯ ನಾಲ್ಕು ಪ್ರಕರಣಗಳ ಸಹಿತ. (ಅಚ್ಚಿನಲ್ಲಿದೆ)

೩. **ಐತರೇಯ, ತೈತ್ತಿರೀಯ:** ಇವುಗಳ ಭಾಷ್ಯ ಬೆಲೆ ೫ರೂ ಅಂ ಹಾ ೯ಆಣೆ

೪. **ಬೃಹದಾರಣ್ಯಕ:** ಇದರ ಎರಡು ಅಧ್ಯಾಯಗಳ ಭಾಷ್ಯ

೫. **ಬೃಹದಾರಣ್ಯಕ:** ಮೂರರಿಂದ ಆರರವರೆಗಿನ ಅಧ್ಯಾಯಗಳ ಭಾಷ್ಯ

೬. **ಛಾಂದೋಗ್ಯ:** ಇದರ ನಾಲ್ಕು ಅಧ್ಯಾಯಗಳ ಭಾಷ್ಯ

೭ **ಛಾಂದೋಗ್ಯ:** ಐದರಿಂದ ಎಂಟು ಅಧ್ಯಾಯಗಳ ಭಾಷ್ಯ

೮. **ಶ್ವೇತಾಶ್ವತರ, ನೃಸಿಂಹತಾಪನೀಯ:**

## ಭಗವದ್ಗೀತಾ ಭಾಷ್ಯ

೯. **ಭಗವದ್ಗೀತೆ:** ಅಧ್ಯಾಯಗಳು ೧ರಿಂದ ೮ರ ವರೆಗಿನ ಭಾಷ್ಯ ಬೆಲೆ ೫ರೂ. ಅಂ.ಹಾ. ೯ಆಣೆ

೧೦. **ಭಗವದ್ಗೀತೆ:** ಅಧ್ಯಾಯಗಳು ೯ರಿಂದ ೧೮ರ ವರೆಗಿನ ಭಾಷ್ಯ

## ಬ್ರಹ್ಮಸೂತ್ರ ಭಾಷ್ಯ

೧೧. **ಬ್ರಹ್ಮಸೂತ್ರ:** ಎರಡನೆಯ ಅಧ್ಯಾಯ ಎರಡನೆಯ ಪಾದದವರೆಗಿನ ಭಾಷ್ಯ

೧೨. **ಬ್ರಹ್ಮಸೂತ್ರ:** ಎರಡನೆಯ ಅಧ್ಯಾಯ ಎರಡನೆಯ ಪಾದದಿಂದ ಪೂರ್ತಿ ಭಾಷ್ಯ

**ಪ್ರಕರಣಗ್ರಂಥಗಳು:** ಉಪದೇಶಸಾಹಸ್ರಿ, ಅಪರೋಕ್ಷಾನುಭೂತಿ, ಮುಂತಾದವುಗಳು. [ಗ್ರಂಥಗಳ ಸಂಪುಟಗಳು, ಬೆಲೆ, ಪ್ರಕಟನೆಯ ಅನುಕ್ರಮ–ಮುಂತಾದವುಗಳ ವಿವರವನ್ನು ಕಾರ್ಯಾಲಯಕ್ಕೆ ಬರೆದು ತಿಳಿದುಕೊಳ್ಳಿರಿ.]

**ಹೆಚ್ಚು ತಿಳುವಳಿಕೆ ಸಿಕ್ಕುವ ವಿಳಾಸ:—**

**ಮ್ಯಾನೇಜರ್, ಅಧ್ಯಾತ್ಮಪ್ರಕಾಶ ಕಾರ್ಯಾಲಯ,**

**ಹೊಳೆನರಸೀಪುರ.**